ದಾವೀದನ ಜೀವಿತ



ದಾವೀದನ ಜೀವಿತ



ದಾವೀದನ ಬಗ್ಗೆ
ಪಾಸ್ಟರ್ ರಸ್ಸಲ್ಲರ ಲೇಖನಿಯಿಂದ
ಬಂದಂಥ ಒಂದು ಲೇಖನ ಸಂಗ್ರಹ

ಸತ್ಯವೇದ ವಿದ್ಯಾರ್ಥಿಗಳ
ಒಂದು ಪ್ರಕಟಣೆ

2ನೇ ಆವೃತ್ತಿ
ಜೂನ್ 2020
ಮುದ್ರಣ ಹಾಗು ವಿತರಣೆ
ಶಿಕಾಗೋ ಸತ್ಯವೇದ ವಿಧ್ಯಾರ್ಥಿಗಳ
ಸಾಹಿತ್ಯ ವಿತರಣಾ ಸೇವೆ
www.chicagobible.org

ಸತ್ಯವೇದ ಸಂಗತಿಗಳ ಅನುಕ್ರಮ ವಿವರಣೆಯ ಅಧ್ಯಯನಕ್ಕೆ ಸಹಾಯಕವಾಗುವಂತೆ ಈ ಪುಸ್ತಕವನ್ನು ವಿನ್ಯಾಸಗೊಳಿಸಲಾಗಿದೆ. ಸೂಕ್ತವಾದ ವಿವರಣೆಗಳಿಗೆ ಹೊಂದುವಂತಾಗಲು ಕೆಲವೊಂದು ರೀಪ್ರಿಂಟ್ ಲೇಖನಗಳನ್ನು ವಿಭಾಗಿಸಲಾಗಿದೆ. ಈ ಲೇಖನಗಳು ಮುಂದುವರಿಯಲ್ಪಟ್ಟವುಗಳೆಂದು ಉಲ್ಲೇಖಿಸಲ್ಪಟ್ಟಿದೆ

ಮುಖ ಪುಟ : ಜೆರಾರ್ಡ್ ವಾನ್ ಹೋನ್‌ತೊರ್ಟ್ಸ್ ರಚನೆಯ ಕಿನ್ನರಿ ಭಾರಿಸುತ್ತಿರುವ ಅರಸನಾದ ದಾವೀದನು.
ಹಿಂಬದಿ ಪುಟ : ಹಾರೊಲ್ಡ್ ಕೋಪ್ಪಿಂಗ್ ಚಿತ್ರಿಸಿದ 'ಕುರುಬ ಬಾಲಕ'

1ನೇ ಆವೃತ್ತಿ
ಜೂನ್ 2026
ಸತ್ಯವೇದ ವಿದ್ಯಾರ್ಥಿಗಳು
ಬೆಂಗಳೂರು.

ಹೆಚ್ಚಿನ ವಿವರ / ಪ್ರತಿಗಳಿಗಾಗಿ ಸಂಪರ್ಕಿಸಿರಿ :
1. ಜೆ. ಜಯಪ್ರಸಾದ್
9535096517
2. ನಂಜಪ್ಪ
9945331112
3. ಪಿಡಿಎಫ್ ಪ್ರತಿಗಳು
https://dawnbiblestudents.com ನಲ್ಲಿ ಲಭ್ಯವಿದೆ.

ವಿಷಯಗಳ ಪಟ್ಟಿ

ಪುಟ

ದಾವೀದನ ಕೀರ್ತನೆಯನ್ನು ಆತನ ಜೀವಿತಕ್ಕೆ ಹೊಂದಿಸಿರುವಿಕೆ viii

1ನೇ ಮತ್ತು 2ನೇ ಸಮುವೇಲನ ಪುಸ್ತಕದ ಮೇಲ್ನೋಟ ಹಾಗೂ ಕಾಲಘಟ್ಟ ix

1ನೇ ಮತ್ತು 2ನೇ ಸಮುವೇಲನ ಗ್ರಂಥದ ಪಕ್ಷಿನೋಟ x

ಅಭಿಷಕ್ತ ರಾಜನಾದ ದಾವೀದನು 1
ರೀಪ್ರಿಂಟ್ ಪುಟ 1901

ಅಭಿಷಕ್ತ ರಾಜನಾದ ದಾವೀದನು 3
ರೀಪ್ರಿಂಟ್ಸ್ ಪುಟ 5656 (ಮತ್ತು ರೀಪ್ರಿಂಟ್ಸ್ 3225)

ಆಧುನಿಕ ದೈತ್ಯರ ಮೇಲಿನ ವಿಜಯ 8
ರೀಪ್ರಿಂಟ್ಸ್ ಪುಟ 5662

ದಾವೀದ ಮತ್ತು ಗೊಲ್ಯಾತನು 10
ರೀಪ್ರಿಂಟ್ಸ್ ಪುಟ 1902

ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು 11
ರೀಪ್ರಿಂಟ್ಸ್ ಪುಟ 3230

ಗೆಲುವು ಬಲಶಾಲಿಗಳಿಗಲ್ಲ 15
ರೀಪ್ರಿಂಟ್ಸ್ ಪುಟ 4216

ಆಪತ್ಕಾಲದ ಮಿತ್ರನೇ ನಿಜವಾದ ಮಿತ್ರನು 22
ರೀಪ್ರಿಂಟ್ಸ್ 4223

ದೃಢವಾದ ವಿಭಿನ್ನ ಸುಗುಣಗಳು 27
ರೀಪ್ರಿಂಟ್ಸ್ ಪುಟ 3231

ಅಸೂಯೆ ಹಾಗು ಕೊಲೆಗಡುಕತನದ ಆತ್ಮ 31
ರೀಪ್ರಿಂಟ್ಸ್ ಪುಟ 4218

ಹಿಂಸೆಗೊಳಗಾದವನೊಬ್ಬನ ನಂಬಿಕೆ 36
ರೀಪ್ರಿಂಟ್ಸ್ ಪುಟ 5662

ಆಪತ್ತಿನಲ್ಲಾಗುವ ಮಿತ್ರನೇ ಒಬ್ಬ ನಿಜವಾದ ಮಿತ್ರ 39
ರೀಪ್ರಿಂಟ್ಸ್ ಪುಟ 5664

ದಾವೀದ ಮತ್ತು ಯೋನಾತಾನರು 42
ರೀಪ್ರಿಂಟ್ಸ್ ಪುಟ 1907

ಮೊದಲನೇ ತಿಂಗಳಿನ ಪಸ್ಕ ಹಬ್ಬವು 45
ರೀಪ್ರಿಂಟ್ಸ್ ಪುಟ 4127 (ಆಯ್ದುಕೊಂಡ ಭಾಗ)

ವಿಷಯಗಳ ಪಟ್ಟಿ

ಪುಟ

ಒಂದು ಗಮನಾರ್ಹ ಸ್ನೇಹ 45
ರೀಪ್ರಿಂಟ್ಸ್ ಪುಟ 3232

ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ 49
ರೀಪ್ರಿಂಟ್ಸ್ 4225

ಒಳ್ಳೆಯತನದಿಂದ ಕೆಟ್ಟತನವನ್ನು ಜಯಿಸುವದು 55
ರೀಪ್ರಿಂಟ್ ಪುಟ 3238

"ನನ್ನ ಅಭಿಷಕ್ತರನ್ನು ಮುಟ್ಟಬಾರದು" 60
ರೀಪ್ರಿಂಟ್ಸ್ ಪುಟ 5672

ಅರಸನಾದ ಸೌಲನ ಅಂತಿಮ ಯುದ್ಧ 64
ರೀಪ್ರಿಂಟ್ಸ್ ಪುಟ 5673

ಆತ್ಮಿಕವಾದವು ಪರಿಶೀಲಿಸಲ್ಪಟ್ಟದ್ದು 68
ರೀಪ್ರಿಂಟ್ಸ್ ಪುಟ 754

ಅರಸನಾದ ಸೌಲನು ಮೃತರೊಂದಿಗೆ ಮಾತನಾಡಿದ್ದನೇ? 72
ಹಾರ್ವೆಸ್ಟ್ ಗ್ಲೀನಿಂಗ್ 727

"ಕಠಿಣ ಕಾಲಗಳು ಬರುವವು" 74
ರೀಪ್ರಿಂಟ್ಸ್ 4976 (ಆಯಲ್ಪಟ್ಟದ್ದು)

ಆತ್ಮಿಕವಾದದ ಬಗ್ಗೆ ಸತ್ಯವೇದವು ಹೇಳುವದೇನು? 75
ರೀಪ್ರಿಂಟ್ಸ್ 2171 (ಆರಿಸಲ್ಪಟ್ಟದ್ದು)

ಆಧ್ಯಾತ್ಮಿಕವಾದ 80
ರೀಪ್ರಿಂಟ್ಸ್ ಪುಟ 196 (ಆಯಲ್ಪಟ್ಟದ್ದು)

ದೊಡ್ಡ ಅವಕಾಶಗಳ ದುರ್ಬಳಕೆ 82
ರೀಪ್ರಿಂಟ್ಸ್ 3240

ಅರಸನಾದ ಸೌಲನ ಅಪಮಾನಕರ ಅಂತ್ಯ 84
ರೀಪ್ರಿಂಟ್ಸ್ ಪುಟ 4234

ಆರ್ಮೆಗಿದ್ದೋನ್ ಯುದ್ಧ 88
ಸತ್ಯವೇದಾಧ್ಯಯನ ಗ್ರಂಥ 4, ಪುಟ 1 (ಆರಿಸಲ್ಪಟ್ಟದ್ದು)

ಆಪತ್ತಿನಲ್ಲಾಗುವ ಮಿತ್ರನೇ ನಿಜವಾದ ಮಿತ್ರನು 89
ರೀಪ್ರಿಂಟ್ಸ್ ಪುಟ 4224 (ಆರಿಸಲಾದುದು)

ಯೆಹೂದದ ಅರಸನಾದ ದಾವೀದನು 90
ರೀಪ್ರಿಂಟ್ಸ್ ಪುಟ 1996

ವಿಷಯಗಳ ಪಟ್ಟಿ

ಪುಟ

ದಾವೀದನು ಅರಸುತನವನ್ನು ಗಳಿಸಿಕೊಂಡದ್ದು 93
ರೀಪ್ರಿಂಟ್ಸ್ ಪುಟ 4235

ಇಸ್ರಾಯೇಲ್ಯರೆಲ್ಲರ ಮೇಲಿನ ಅರಸನಾದ ದಾವೀದನು 98
ರೀಪ್ರಿಂಟ್ಸ್ ಪುಟ 2001

ಸೌಲ–ದಾವೀದರ ಬಗ್ಗೆ ಪುನರಾವಲೋಕನ 100
ರೀಪ್ರಿಂಟ್ ಪುಟ 4255

ಮಂಜೂಷವು ಯೆರೂಸಲೇಮಿಗೆ ತರಲಾದುದು 104
ರೀಪ್ರಿಂಟ್ಸ್ ಪುಟ 2002

ದೇವಾನುಗ್ರಹವನ್ನು ಸೂಕ್ತವಾಗಿ ಬಯಸುವದು 107
ರೀಪ್ರಿಂಟ್ಸ್ ಪುಟ 3252

ಮಂಜೂಷವನ್ನು ಯೆರೂಸಲೇಮಿನಲ್ಲಿ ನೆಲೆಗೊಳಿಸಿದ್ದು 112
ರೀಪ್ರಿಂಟ್ಸ್ ಪುಟ 4258

ದಾವೀದ ನಗರಿ – ದೇವ ನಗರಿ 118
ರೀಪ್ರಿಂಟ್ಸ್ ಪುಟ 5679

ದಾವೀದನಿಗಾದ ದೇವರ ವಾಗ್ದಾನಗಳು 122
ರೀಪ್ರಿಂಟ್ಸ್ ಪುಟ 2010

ಕೃಪಾಪೂರ್ಣವಾದ ದೇವಕರೆ 124
ರೀಪ್ರಿಂಟ್ಸ್ ಪುಟ 1364ರಿಂದ ಆಯಲ್ಪಟ್ಟದ್ದು

ದಾವೀದನೊಡನೆಯ ಒಡಂಬಡಿಕೆ 125
ರೀಪ್ರಿಂಟ್ಸ್ ಪುಟ 3258

ದಾವೀದನ ಕರುಣೆ 128
ರೀಪ್ರಿಂಟ್ಸ್ ಪುಟ 2010

ದಾವೀದ ಯೋನಾತಾನರು 130
ರೀಪ್ರಿಂಟ್ಸ್ ಪುಟ 1907ರಿಂದ ಆಯ್ದ ಭಾಗವು

ದಾವಿದನ ಗೆಲುವುಗಳು 130
ರೀಪ್ರಿಂಟ್ಸ್ ಪುಟ 2015

ದಾವಿದನ ಗೆಲುವುಗಳು 133
ರೀಪ್ರಿಂಟ್ಸ್ ಪುಟ 2015

ವಿಷಯಗಳ ಪಟ್ಟಿ

ಪುಟ

ದಾವೀದನ ಪಾಪದರಿಕೆ ಹಾಗು ಕ್ಷಮಾದಾನ 134
ರೀಪ್ರಿಂಟ್ಸ್ ಪುಟ 2016

"ಆ ಮನುಷ್ಯನು ನೀನೇ!" 139
ರೀಪ್ರಿಂಟ್ಸ್ ಪುಟ 5681

ಅರಸನಾದ ದಾವೀದನ ಪಶ್ಚಾತಾಪ 143
ರೀಪ್ರಿಂಟ್ಸ್ ಪುಟ 3253

ದೇವರ ಕ್ಷಮಾಪೂರ್ಣ ಪ್ರೀತಿಯಲ್ಲಿನ ಆನಂದಗಳು 149
ರೀಪ್ರಿಂಟ್ಸ್ ಪುಟ 3260

ಪಶ್ಚಾತಾಪಪಟ್ಟವನ ಪ್ರಾರ್ಥನೆ 154
ರೀಪ್ರಿಂಟ್ಸ್ ಪುಟ 1397

ಅಬ್ಷಾಲೋಮನ ದಂಗೆ 157
ರೀಪ್ರಿಂಟ್ಸ್ ಪುಟ 2024

ಅಬ್ಷಾಲೋಮನ ಅವಮಾನಕರವಾದ ನಂಬಿಕೆದ್ರೋಹ 160
ರೀಪ್ರಿಂಟ್ಸ್ ಪುಟ 3261

ಹೆಮ್ಮೆ ಕೃತಜ್ಞತಾಹೀನತೆ ಕಪಟ ಬಂಡಾಯ 163
ರೀಪ್ರಿಂಟ್ಸ್ ಪುಟ 4275

ಕೃತಜ್ಞತಾಹೀನನೂ ದಂಗೆಕೋರನೂ ಆದ ಅಬ್ಷಾಲೋಮನು 168
ರೀಪ್ರಿಂಟ್ಸ್ ಪುಟ 5700

ಅಬ್ಷಾಲೋಮನ ಪರಾಭವ ಹಾಗು ಮರಣ 171
ರೀಪ್ರಿಂಟ್ಸ್ ಪುಟ 2025

"ಅಬ್ಷಾಲೋಮನೇ, ಓ ನನ್ನ ಮಗನೇ, ನನ್ನ ಮಗನೇ" 172
ರೀಪ್ರಿಂಟ್ಸ್ ಪುಟ 3267

ರಾಜದ್ರೋಹಕ್ಕೆ ಪ್ರತಿಯಾದ ಪ್ರೀತಿ 174
ರೀಪ್ರಿಂಟ್ಸ್ ಪುಟ 4277

ಅರಸನಾದ ನನ್ನನ್ನು ತಿರಿಗಿ ಅರಮನೆಗೆ ಕರಕೊಂಡು ಹೋಗುವದರಲ್ಲಿ ನೀವು ಹಿಂದುಳಿದಿರುವದೇಕೆ? 179
ರೀಪ್ರಿಂಟ್ಸ್ ಪುಟ 1690

ದೇವರ ಕಡೆಗಿನ ದಾವೀದನ ಕೃತಜ್ಞತಾಭಾವ 181
ರೀಪ್ರಿಂಟ್ಸ್ ಪುಟ 2031

ವಿಷಯಗಳ ಪಟ್ಟಿ

ಪುಟ

ಪಾಪಗಳೆಲ್ಲವುಗಳ ಕ್ಷಮಿಸುವಿಕೆಯು **184**
5105 ಮತ್ತು ಪ್ರಶ್ನೆ ಪುಸ್ತಕ 281

ಪಾಪ: ದಾವೀದನು ಜನಗಣತಿ ಮಾಡಿದಂಥದ್ದು **185**
ಪ್ರಶ್ನೆ ಪುಸ್ತಕ 832

ದೇವರ ಮಂದಿರದ ಮೇಲಿನ ದಾವೀದನ ಪ್ರೀತಿ **186**
ರೀಪ್ರಿಂಟ್ಸ್ ಪುಟ 2030

ಇಸ್ರಾಯೇಲ್ಯರ ಅರಸನಾದ ಸೊಲೊಮೋನನು **189**
ರೀಪ್ರಿಂಟ್ಸ್ ಪುಟ 5701

ಸಮಾಧಾನದ ಪ್ರಭುವಿನ ಆರಂಭೋತ್ಸವ **191**
ರೀಪ್ರಿಂಟ್ಸ್ ಪುಟ 4286

ಅಭಿಷಕ್ತ ದೊರೆಯಾದ ಸೊಲೊಮೋನನು **195**
ರೀಪ್ರಿಂಟ್ಸ್ ಪುಟ 2045

ದಾವೀದನ ಮಗನೂ ಮತ್ತು ದಾವೀದನ ಒಡೆಯನೂ **198**
ಸತ್ಯವೇದಾಧ್ಯಯನ ಗ್ರಂಥ 6 [ನೂತನ ಸೃಷ್ಟಿ] ಪುಟ 129

ದಾವೀದನು ಮತ್ತು ಗೊಲ್ಯಾತನು (ಆರಿಸಲ್ಪಟ್ಟದ್ದು) **202**
– ಮಾರ್ಟಿನ್ ಮಿಚೆಲ್

ದಾವೀದನ ಜೀವಿತದ ಘಟನೆಗಳನ್ನು ಆತನು ರಚಿಸಿದ ಕೀರ್ತನೆಗಳೊಂದಿಗೆ ಮಾಡಿರುವ ಹೊಂದಾಣಿಕೆ

ಸತ್ಯವೇದ ಘಟನೆಗಳು	ಕೀರ್ತನೆಗಳು	ಕೀರ್ತನೆಯನ್ನು ರಚಿಸಿರುವ ಸಂಭಾವ್ಯ ಸಂದರ್ಭಗಳು
1 ಸಮು. 16:11–19	8, 19, 23, 29	ಸೃಷ್ಟಿ ಹಾಗೂ ನಿಸರ್ಗದ ಬಗ್ಗೆ ದಾವೀದನ ಕುರುಬ ಜೀವಿತದ ಆದಿಭಾಗದ ರಚನೆ
1 ಸಮು. 17:4–51	9	ಗೊಲ್ಯಾತನ ಮೇಲಿನ ವಿಜಯದ ಬಗ್ಗೆ
1 ಸಮು. 19:11–17	59	ಸೌಲನು ತನ್ನ ಮನೆಯಲ್ಲಿ ದಾವೀದನ ಜೀವವನ್ನು ತೆಗೆಯಲು ಯತ್ನಿಸಿದುದು
1 ಸಮು. 20	11	ದಾವೀದನು ಸೌಲನ ಬಳಿಯಿಂದ ಓಡಿಹೋಗಲು ಸಲಹೆಯನ್ನು ಪಡೆದ ಬಗ್ಗೆ
1 ಸಮು. 21:10–15	34, 56	ದಾವೀದನು ಗತ್ ಊರಿನ ಅರಸನಾದ ಆಕೀಷನ ಎದುರಿನಲ್ಲಿ.
1 ಸಮು. 21:1–7; 22:9–23	52	ದಾವೀದನು ಅಭಿಮೆಲೇಕನ ಬಳಿಗೆ ಬಂದುದರ ಬಗ್ಗೆ ದೋಎಗನು ಸೌಲನಿಗೆ ಹೇಳಿದುದರ ಬಗ್ಗೆ
1 ಸಮು. 22:1	142	ಅದುಲ್ಲಾಮನ ಗುಹೆ ಇಲ್ಲವೇ ಏನ್ಗೇದಿಯಲ್ಲಿ ದಾವೀದನು ಮಾಡಿದ ಪ್ರಾರ್ಥನೆಯ ಬಗ್ಗೆ
1 ಸಮು. 22:5, 23	63	ಯೂದಾಯದ ಮತ್ತು ಜೀಫ್ ಅರಣ್ಯದಲ್ಲಿ ದೇಶಭ್ರಷ್ಟನಾಗಿ ಅಲೆದಾಡಿದ ಬಗ್ಗೆ.
1 ಸಮು. 23:7–13; 23	7, 31, 64, 109	ದಾವೀದನನ್ನು ಸೌಲನು ಹಿಂಸಿಸಿದ ಬಗ್ಗೆ
1 ಸಮು. 23:19–28	54	ಜೀಫ್ಯರು ದಾವೀದನಿಗೆ ಮಾಡಿದ ದ್ರೋಹ
1 ಸಮು. 24:3–22	35, 57, 58	ಸೌಲನನ್ನು ಕೊಲ್ಲಲು ದಾವೀದನ ನಿರಾಕರಣೆ
1 ಸಮು. 27:1–2	16, 17	ದಾವೀದನಿಗೆ ಸೌಲನಿಂದಾದ ಹಿಂಸೆ
2 ಸಮು. 5:3–5	118	ಇಸ್ರಾಯೇಲ್ಯರೆಲ್ಲರ ಮೇಲೆ ಅರಸನಾಗಿ ಮಾಡಲ್ಪಟ್ಟಾಗ
2 ಸಮು. 5:7–10	2	ಯೆರೂಸಲೇಮನ್ನು ಪಡಕೊಂಡು ಫಿಲಿಷ್ಟಿಯರೊಡನೆ ಆನಂತರ ನಡೆಸಿದ ಯುದ್ಧಗಳು
2 ಸಮು. 6:5–19	15, 68, 132	ಯೆರೂಸಲೇಮಿಗೆ ಮಂಜೂಷ ಪೆಟ್ಟಿಗೆಯನ್ನು ತಂದುದರ ಬಗ್ಗೆ
2 ಪೂರ್ವ. 16:7–38	24, 96, 105, 106	ಮಂಜೂಷವನ್ನು ಓಬೆದ್–ಎದೋಮನ ಮನೆಯಿಂದ ತಂದ ಬಗ್ಗೆ
2 ಸಮು. 8:3; 13; 10:6, 16	60	ಎದೋಮ್ಯರು ಮತ್ತು ಆರಾಮ್ಯರ ಮೇಲಿನ ವಿಜಯ
2 ಸಮು. 10:6–8, 19	20, 21	ಅಮ್ಮೋನ್ಯರು ಮತ್ತು ಆರಾಮ್ಯರೊಡನೆ ಮಾಡುವ ಯುದ್ಧದ ಬಗ್ಗೆ ಮಾಡಿದ ಪ್ರಾರ್ಥನೆ
2 ಸಮು. 12:1–14	51	ದಾವೀದನು ತಾನು ನಡೆಸಿದ ವ್ಯಭಿಚಾರದ ಬಗ್ಗೆ ಮಾಡಿದ ಪಾಪದ ಅರಿಕೆ ಹಾಗು ಮಾನಸಾಂತರ
2 ಸಮು. 12:1–14	32, 33, 103	ದಾವೀದನು ಮಾಡಿದ ವ್ಯಭಿಚಾರಕ್ಕೆ ದೊರೆತ ಕ್ಷಮಾಪಣೆಯ ಬಗ್ಗೆ


ಸತ್ಯವೇದ ಘಟನೆಗಳು	ಕೀರ್ತನೆಗಳು	ಕೀರ್ತನೆಯನ್ನು ರಚಿಸಿರುವ ಸಂಭಾವ್ಯ ಸಂದರ್ಭಗಳು
2 ಸಮು 15:13–17, 23–31	3, 4, 5, 42, 43	ಅಬ್ಷಾಲೋಮನ ಬಳಿಯಿಂದ ದಾವೀದನ ಪಲಾಯನ
2 ಸಮು 15:13–17, 23–31	55, 62	ಅಬ್ಷಾಲೋಮನ ಬಳಿಯಿಂದ ಓಡಿಹೋದ ಸಮಯದಲ್ಲಿ
2 ಸಮು 22	18, 144	ತನ್ನ ಶತ್ರುಗಳ ಬಾಧೆಯಿಂದ ಬಿಡುಗಡೆಯಾದುದರ ಬಗ್ಗೆ
2 ಸಮು 24:15–17	91	ದೇವದೂತನು ಉಂಟುಮಾಡಿದ ಕೀಟಬಾಧೆಯನ್ನು ತಡೆದುದರ ಬಗ್ಗೆ
2 ಸಮು 24:18–25	30	ಆರೌನನ ಕಣವನ್ನು (ದೇವಾಲಯಕ್ಕೆ) ಪ್ರತಿಷ್ಠಿಸಿದ ಬಗ್ಗೆ
1 ಅರಸು 1:30;2:1–4	72	ಸೊಲೊಮೋನನು ಅರಸನಾಗಿ ದಾವೀದನಿಂದ ಅಂತಿಮವಾಗಿ ಪಡಕೊಂಡ ಕಾರ್ಯಭಾರದ ಬಗ್ಗೆ

ಮೊದಲನೇ ಸಮುವೇಲ ಗ್ರಂಥದ ಒಂದು ಮೇಲ್ನೋಟ

ಕೇಂದ್ರಬಿಂದು	ಸಮುವೇಲನು		ಸೌಲನು		
ಉಲ್ಲೇಖ	1:1 ---------- 4:1 ---------- 8:1 ---------- 13:1 --------- 15:10 ----- 31:13				
ವಿಭಾಗ	ನಾಯಕತ್ವದ 1ನೇ ವರ್ಗಾವಣೆ ಏಲಿ–ಸಮುವೇಲ	ಸಮುವೇಲನ ನ್ಯಾಯಾಧೀಶತ್ವ	ನಾಯಕತ್ವದ 2ನೇ ವರ್ಗಾವಣೆ ಸಮುವೇಲ–ಸೌಲ	ಸೌಲನ ಆಳ್ವಿಕೆ	ನಾಯಕತ್ವದ 3ನೇ ವರ್ಗಾವಣೆ ಸೌಲ–ದಾವೀದ
ವಿಷಯ	ನ್ಯಾಯಾಧಿಪತಿಗಳ ಅವನತಿ		ಅರಸರುಗಳ ಏಳುವಿಕೆ		
	ಏಲಿ	ಸಮುವೇಲ	ಸೌಲ		ದಾವೀದ
ಸ್ಥಾನ	ಕಾನಾನ್				
ಕಾಲಾವಧಿ	99 ವರುಷಗಳು				

2 ಸಮುವೇಲನ ಒಂದು ಮೇಲ್ನೋಟ

ಕೇಂದ್ರಬಿಂದು	ದಾವೀದನ ವಿಜಯಗಳು			ದಾವೀದನ ಅಪರಾಧ	ದಾವೀದನ ಸಂಕಷ್ಟಗಳು	
ಉಲ್ಲೇಖ	1:1 ------ 6:1 --------- 8:1 -------- 11:1 ---------- 12:1 ------- 13:37 ----- 24:25					
ವಿಭಾಗ	ರಾಜಕೀಯ ಸಫಲತೆಗಳು	ಆತ್ಮಿಕ ಸಫಲತೆಗಳು	ಸೈನ್ಯದ ಯಶಸ್ಸುಗಳು	ವ್ಯಭಿಚಾರದ ಪಾಪಗಳು ಮತ್ತು ಕೊಲೆ	ದಾವೀದನ ಮನೆಯಲ್ಲಿನ ಸಂಕಷ್ಟಗಳು	ರಾಜ್ಯದಲ್ಲಿನ ಸಂಕಷ್ಟಗಳು
ವಿಷಯ	ಯಶಸ್ಸು			ಪಾಪ	ವೈಫಲ್ಯ	
	ವಿಧೇಯತೆ			ಅವಿಧೇಯತೆ	ನ್ಯಾಯತೀರ್ಪು	
ಸ್ಥಾನ	ದಾವೀದನು ಹೆಬ್ರೋನಿನಲ್ಲಿ	ದಾವೀದನು ಯೆರೂಸಲೇಮಿನಲ್ಲಿ				
ಕಾಲಾವಧಿ	7½ ವರುಷಗಳು	33½ ವರುಷಗಳು				



ದಾವೀದನು ಯಾವುವೇ ಒಬ್ಬ ಮಹಾ ಪುರುಷನಿಗಿಂತಲೂ (ಮೋಶೆ, ಎಲೀಯ, ಪೌಲರಿಗಿಂತಲೂ)
ಒಂದು ದೊಡ್ಡ ಪ್ರಮಾಣದಲ್ಲಿನ ವಿಶಿಷ್ಟವೂ ಹಾಗೂ ಗಮನಾರ್ಹವೂ ಆದ ಗುಣಲಕ್ಷಣಗಳನ್ನು
ಪ್ರಸ್ತುತಿಪಡಿಸುತ್ತಾನೆ; .... ದಾಖಲಾತಿಗಳಲ್ಲಿ ಅತಿ ವಿಶಾಲವಾದ ಗುಣಲಕ್ಷಣಗಳನ್ನು.... ಅಂದರೆ
ಓರ್ವ ಕುರುಬ, ಸೈನಿಕ, ಆಸ್ಥಾನಿಕ, ಪ್ರಸಿದ್ಧನಾದ ಮಿತ್ರ,
ಅಲೆಮಾರಿ, ಆಕ್ರಮಣಕಾರಿ, ಸುಲಿಗೆಕೋರ, ಸೇನಾಧಿಪತಿ, ಅರಸ, ರಾಜತಾಂತ್ರಿಕ,
ದೇಶಭ್ರಷ್ಟ, ಯಾಜಕ, ಪ್ರವಾದಿ, ಭಕ್ತ, ಅಪರಾಧಿ, ಪಶ್ಚಾತಾಪಿ, ಈ ಯಾವುದರಲ್ಲಿಯೂ ಸ್ವಲ್ಪವೂ
ಕಡಿಮೆಯಿಲ್ಲದವನು. ಆತನ ಗುಣಸ್ವಭಾವವು ಅನೇಕ ತಂತಿಗಳುಳ್ಳ ಒಂದು ಕಿನ್ನರಿಯಂತಿತ್ತು.
ಸೀ. ರೀಡ್ – ರೀಪ್ರಿಂಟ್ಸ್ ಪುಟ 4223

ದಾವೀದನೆಂಬ ಹೆಸರು "ಪ್ರಿಯನು" ಎಂಬುದನ್ನು ಸೂಚಿಸುತ್ತದೆ, ಅಲ್ಲದೆ ಇದು
ನಮ್ಮ ಕರ್ತನೂ ಹಾಗೂ ಗುರುವೂ ಆಗಿರುವಾತನಿಗೂ ವಿಶೇಷವಾಗಿ ಅನ್ವಯವಾಗುತ್ತದೆ, ಈತನ
ವಿಷಯವಾಗಿ "ಈತನು ನನ್ನ ಪ್ರಿಯನಾಗಿರುವ ಮಗನು" ಎಂದು ಯೆಹೋವನಿಂದ ಹೇಳಲ್ಪಟ್ಟಿತ್ತು,
ಹೀಗೆಯೇ ಇದು ಆತನ ದೇಹದ ಅಂಗಗಳಾಗಿರುವವರೆಲ್ಲರಿಗೂ ಅನ್ವಯವಾಗುತ್ತದೆ, ಇವರಲ್ಲಿನ
ಪ್ರತಿಯೊಬ್ಬನೂ ಪ್ರಿಯನಾಗಿರಬೇಕು, ಇಲ್ಲವಾದಲ್ಲಿ ಅವನು ಒಬ್ಬ ಅಂಗವಾಗಿ ಅಂಗೀಕರಿಸಲ್ಪಡಲು
ಸಾಧ್ಯವಾಗದು. ಇಂಥವರ ವಿಷಯವಾಗಿ ಶಿರಸ್ಸಾಗಿರುವಾತನು ಹೇಳುವದು: "ತಂದೆಯು ತಾನೇ
ನಿಮ್ಮನ್ನು ಪ್ರೀತಿಸುವನು" ಎಂಬದು. ಅಲ್ಲದೆ ಮತ್ತೆ ಹೇಳುವದೇನಂದರೆ–ಆತನು ನಮ್ಮನ್ನು ಪ್ರೀತಿಸಿದಂತೆ
ನಾವೂ ಒಬ್ಬರನ್ನೊಬ್ಬರು ಪ್ರೀತಿಸಬೇಕು. ಕರ್ತನಿಂದ ಈ ಅಭಿಷೇಕವನ್ನು ಪಡಕೊಂಡವರು ಅಂತಿಮವಾಗಿ
ಈ ದಾವೀದನ ಅಥವಾ ಪ್ರಿಯನ ಗುಣಸ್ವಭಾವವುಳ್ಳವರಾಗಬೇಕೆಂಬುದು ಅತಿಶಯವೇನಲ್ಲ.
ಪ್ರೀತಿಭಾವವು ಅವರಲ್ಲಿರಬೇಕು–ಅಂದರೆ ಕರ್ತನ ಮೇಲಿನ ಪ್ರೀತಿ, ಒಬ್ಬರ ಮೇಲೆ ಒಬ್ಬರಿಗಿರುವ
ಪ್ರೀತಿಯಿರಬೇಕು, ಇಲ್ಲವಾದಲ್ಲಿ ಅವರು ಆತನವರಾಗಲಾರು.
– ರೀಪ್ರಿಂಟ್ಸ್ ಪುಟ 3225

ಈತನು [ದಾವೀದನು]–ದೇವರು ತನ್ನನ್ನು ಇಸ್ರಾಯೇಲ್ಯರ ಮೇಲೆ ಅರಸನನ್ನಾಗಿ ಸ್ಥಾಪಿಸಿದ್ದಾನೆಂಬುದನ್ನು
ಅಲ್ಲದೆ ಕರ್ತನು ತನ್ನ ಜನರಾದ ಇಸ್ರಾಯೇಲ್ಯರ ಸಲುವಾಗಿ ತನ್ನನ್ನು ಉನ್ನತ ಸ್ಥಿತಿಗೆ ತಂದಿದ್ದಾನೆಂಬುದನ್ನು ಗ್ರಹಿಸಿಕೊಂಡಿದ್ದನು.
ಇದರಂತೆಯೇ ಸಭೆಯನ್ನು ಆದುಕೊಂಡದ್ದರಲ್ಲಿ ಇಲ್ಲವೇ ಆಯ್ಕೆಮಾಡಿಕೊಂಡದ್ದರಲ್ಲಿ ದೇವರಿಗೂ ಒಂದು ಉದ್ದೇಶವಿದೆ
ಎಂಬುದನ್ನು ನಾವೂ ಸಹ ನೆನಪಿನಲ್ಲಿಡಬೇಕು. ಹೀಗಾಗಿಯೇ ಅಪೋಸ್ತಲನು
ಹೇಳಿರುವದು–"ನಾವು ದೇವರು [ಒಂದು ಉದ್ದೇಶಕ್ಕಾಗಿ] ಆರಿಸಿಕೊಂಡ ಒಂದು ಸಾಧನ" ವೆಂಬದು.
ಈ ಅಂಶವು ನಮ್ಮನ್ನು ಬಹು ದೀನರನ್ನಾಗಿ ಮಾಡಿ, ದೇವರಿಗೆ ಬಹು ಸನಿಹರೂ ಆಗಿರುವಂತೆ ಮಾಡಲಿ.
"ಭೂಲೋಕದ ಎಲ್ಲಾ ಕುಲಗಳಿಗೆ" ನ್ಯಾಯತೀರಿಸಿ ಅವರನ್ನು ಉನ್ನತಸ್ಥಿತಿಗೆ ತರುವಂಥ ಈ ಆಳ್ವಿಕೆಗೆ ನಮ್ಮನ್ನು ಅರ್ಹರನ್ನಾಗಿ
ಸಿದ್ಧಗೊಳಿಸಲು ಅಗತ್ಯವಾದ ಪಾಠಗಳನ್ನು ಕಲಿತುಕೊಳ್ಳಲು ನಾವು ಶ್ರಮಿಸೋಣ.
– ರೀಪ್ರಿಂಟ್ಸ್ ಪುಟ 4255

ಇಂಥಾ ಗುರಿಯುಳ್ಳದ್ದಾದ ಈ ಅಧ್ಯಯನವು ಒಂದು ಆಶೀರ್ವಾದಕರವಾಗಿರಲಿ

ಅಭಿಷಕ್ತ ಅರಸನಾದ ದಾವೀದನು

ರೀಪ್ರಿಂಟ್ಸ್ ಪುಟ 1901

1 ಸಮುವೇಲ 16:1–3

"ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ" – 1 ಸಮುವೇಲ 16:7

ದಾವೀದನನ್ನು ಇಸ್ರಾಯೇಲ್ಯರ ಮೇಲೆ ಆಳ್ವಿಕೆಮಾಡಲು ಆರಿಸಿಕೊಂಡದ್ದರಲ್ಲಿ ದೇವರು ಆ ಜನರ ಮತ್ತು ಆ ಕಾಲದ ಅಗತ್ಯತೆಗಳಿಗೆ ಸರಿಹೊಂದುವನನ್ನು ಆರಿಸಿಕೊಂಡದ್ದು ಮಾತ್ರವಲ್ಲದೆ ಸುವಾರ್ತಾ ಯುಗದಲ್ಲಿ ಆದುಕೊಳ್ಳಲ್ಪಡುವ ಶಿರಸ್ಸು ಹಾಗು ದೇಹದಿಂದ ಕೂಡಿರುವ ಕ್ರಿಸ್ತನನ್ನು ಹಾಗು ದೇವರ ರಾಜ್ಯದಲ್ಲಿ ಸಿಂಹಾಸನದಲ್ಲಿ ಕುಳಿತುಕೊಳ್ಳಲು ಅಭಿಷೇಕಿಸಲ್ಪಡು – ವವರನ್ನು ಸಮರ್ಪಕವಾಗಿ ಮುನ್ಸೂಚಿಸುವವರನ್ನು ಆರಿಸಿಕೊಂಡಿರುವನು. ಈ ದೃಷ್ಟಿಯಿಂದ ಸ್ವರ್ಣಖಚಿತವಾದ ಪಠ್ಯಭಾಗವು ಅಪೋಸ್ತಲನಾದ ಪೌಲನ ಈ ಹೇಳಿಕೆಯನ್ನು ನಮಗೆ ಒತ್ತಾಯಪೂರ್ವಕವಾಗಿ ನೆನಪಿಸುತ್ತದೆ: (1 ಕೊರಿಂಥ 1:26–29) "ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂಬುದನ್ನು ಆಲೋಚಿಸಿರಿ. ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳು ಅನೇಕರಿಲ್ಲ, ಅಧಿಕಾರಿಗಳೂ ಅನೇಕರಿಲ್ಲ, ಕಲೀನರೂ ಅನೇಕರಿಲ್ಲ. ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವರನ್ನೂ ಆರಿಸಿಕೊಂಡದ್ದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ. ಹೀಗಿರಲು ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ."

ದೇವರು ಈ ಕಾಲದಲ್ಲಿ [ಸುವಾರ್ತಾಯುಗದಲ್ಲಿ] ದಾವೀದನಲ್ಲಿದ್ದ ಅದೇ ಗುಣಲಕ್ಷಣಗಳನ್ನು ದೇವರ ರಾಜ್ಯಕ್ಕಾಗಿ ಅಭಿಷೇಕಹೊಂದಲು ಕರೆಯಲ್ಪಡುವವರಲ್ಲಿ ಈಗ ಎದುರು ನೋಡುತ್ತಿರುವನು. ಆತನು ಇವನಲ್ಲಿ [ದಾವೀದನಲ್ಲಿ] ನಂಬಿಕೆ ಸಾತ್ವಿಕತ್ವ ಧೈರ್ಯ ಶಕ್ತಿ ಹಾಗು ಪ್ರೀತಿಪೂರ್ಣ ವಿಧೇಯತೆಯನ್ನು ಕಂಡುಕೊಂಡಿದ್ದನು. ಆದರೂ ಇವನು ಯುವಪ್ರಾಯದವ–ನಾಗಿದ್ದು ತಾನು ಕರೆಯಲ್ಪಟ್ಟ ಉನ್ನತವಾದ ಕಾರ್ಯಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಇನ್ನೂ ಅನುಭವವಿಲ್ಲದವನೂ ಮತ್ತು ತರಬೇತಿಯಿಲ್ಲದವನೂ ಹಾಗೂ ಕೌಶಲ್ಯವಿಲ್ಲದವನೂ ಆಗಿದ್ದನು. ಈಗ ಇಲ್ಲಿ ಹೇಳಿದಂಥ ಸ್ಥಿತಿಯು ಮನುಷ್ಯರ ಎಣಿಕೆಯಲ್ಲಿ ಜಯಿಸಲಾರದಂಥ ಅಡಚಣೆಯಾಗಿದ್ದರೂ ದೇವರ ಎಣಿಕೆಯಲ್ಲಿ ಇದು ಅಡಚಣೆಯಾಗಿರಲಿಲ್ಲ; ಯಾಕಂದರೆ ದೇವರು ತಾನು ಕರೆದವರನ್ನು ತನ್ನ ಆತ್ಮದ ಮೂಲಕವಾಗಿ ಪ್ರೇರೇಪಿಸಲು ಹಾಗು ತನ್ನ ಬಲದ ಮೂಲಕವಾಗಿ ಅವರನ್ನು ಸಜ್ಜುಗೊಳಿಸಲು ಸಮರ್ಥನಾಗಿರುವನು. ಹೀಗೆಯೇ ಆತನು ದಾವೀದನಲ್ಲಿಯೂ ನಡೆಸಿದ್ದನು ಹಾಗು ಆತನು ಕ್ರಿಸ್ತನೊಡನೆಯೂ ಅಂದರೆ ನಮ್ಮ ಕರ್ತನಾದ ಯೇಸುವಿನಲ್ಲಿಯೂ ಮತ್ತು ಆತನ ದೇಹವಾಗಿರುವ ಸಭೆಯಲ್ಲಿಯೂ ನಡೆಸುವನು. ದಾವೀದನ ಕೀರ್ತನೆಗಳಲ್ಲಿ ಆತನ ವಿಶಿಷ್ಟ ಗುಣಲಕ್ಷಣಗಳನ್ನು ಬಹು ಸ್ಪಷ್ಟವಾಗಿ ತೋರಿಸಿ ಕೊಟ್ಟಿರುವನು; ಕೆಲವು ಸಮಯಗಳಲ್ಲಿ ನಮಗೆ ಶಿರಸ್ಸಾಗಿರುವ ಯೇಸುವಿನ ವ್ಯಕ್ತಿತ್ವದ ಸಂಬಧದಲ್ಲಿಯೂ ಅಲ್ಲದೆ ಕೆಲವು ಸಮಯಗಳಲ್ಲಿ ಕ್ರಿಸ್ತನ ಸಂಪೂರ್ಣವಾದ ದೇಹದ ಸಂಬಂಧದಲ್ಲಿಯೂ ತೋರಿಸಿಕೊಟ್ಟಿರುವನು. ದೃಷ್ಟಾಂತವಾಗಿ "ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ; ನನ್ನ ಅಂಗಿಗೋಸ್ಕರ ಚೀಟುಹಾಕುತ್ತಾರೆ" ಎಂದು ಹೇಳುವಾಗ ಈ ಉಲ್ಲೇಖವು ನಮ್ಮ ಶಿರಸ್ಸಾಗಿರುವಾತನಿಗೆ ಮಾತ್ರ ಅನ್ವಯವಾಗುತ್ತದೆ; ಬೇರೊಂದು ಸಂಗತಿಯಲ್ಲಿ ಅಂದರೆ ಕೀರ್ತನೆ 23ರಲ್ಲಿ ಇದು ಸಂಪೂರ್ಣವಾದ [ಆತನ] ದೇಹಕ್ಕೆ ಅನ್ವಯವಾಗುವದು; ದೇವರಾದ ಯೆಹೋವನು [ಅದರ] ಕುರುಬನಾಗಿರುವನು.

ಕರ್ತನ ಅಭಿಷಕ್ತರು ನಡೆಸುವ ಮಹಾ ಕಾರ್ಯವನ್ನು ಸೂಚಿಸಲು ದಾವೀದನ ಹಾಗು ಸೊಲೊಮೋನರ ಎರಡು ಆಳ್ವಿಕೆಗಳ ಅಗತ್ಯವಿರುವದು. ದಾವೀದನ ಆಳ್ವಿಕೆಯು ಶರೀರದಲ್ಲಿರುವ ಸಭೆಯ ಸಂಗತಿಯನ್ನು ಸೂಚಿಸುವಲ್ಲಿ ಸೊಲೊಮೋನನ ಆಳ್ವಿಕೆಯು ತನ್ನ ವೈರಿಗಳೆಲ್ಲರಿಂದ ಬಿಡುಗಡೆಯಾಗಿ ವಿಶ್ರಾಂತಿ ಸ್ಥಿತಿಗೆ ಸೇರಿ ಮಹಿಮೆಹೊಂದಿದ ಸಭೆಯ ಸಂಗತಿಯನ್ನು ಸೂಚಿಸುವದು.

ದಾವೀದನು ಅಭಿಷೇಕವಾದಾಗ ಕೇವಲ ಒಬ್ಬ ಯೌವನಸ್ಥ ನಾಗಿದ್ದನು. ಹೀಗಿದ್ದರೂ ತನ್ನ ಜೀವಿತದ ಅಮೂಲ್ಯವಾದ ವಸಂತಕಾಲವನ್ನು "ಕಾಡು ಗೋಧಿನ್ನು" ಬಿತ್ತುವದರಲ್ಲಿ (ಅಂದರೆ ಯೌವ್ವನದಲ್ಲಿ ಅವಿವೇಕ ಹಾಗೂ ಅಪಾಯಕಾರಿ ಕಾರ್ಯಗಳನ್ನು ನಡೆಸುವದರಲ್ಲಿ) ಕಾಲವನ್ನು ಹರಣ ಮಾಡಿದವರಲ್ಲಿ ಇವನು ಒಬ್ಬನಾಗಿರಲಿಲ್ಲ. ಇವನು ವಾಗ್ದಾನವೆಂಬ ಹೂವಿನ ಮೊಗ್ಗಿನಂತಿದ್ದು ಒಬ್ಬ ಘನವಂತನಾದ ಯೌವನಸ್ಥನಾಗಿ ಸಾತ್ವಿಕನೂ ಸಭ್ಯನೂ ನಯವಿನಯವುಳ್ಳವನೂ ನಂಬಿಗಸ್ತನೂ ಕರ್ತವ್ಯದ ವಿಷಯದಲ್ಲಿ ಧೈರ್ಯಶಾಲಿಯೂ, ಅಪಾಯವನ್ನು ಎದುರಿಸುವ ಅಲ್ಲದೆ ಯಾವುದೇ ಕಾರ್ಯದಲ್ಲಿ, ವಿಶೇಷವಾಗಿ ದೇವರ ಉದ್ದೇಶಗಳ ವಿಷಯಗಳಲ್ಲಿ ಇಲ್ಲವೇ ದೇವಜನರಿಗೆ ಸಂಕಷ್ಟಗಳು ಉಂಟಾದಾಗ ಬಹು ಎದೆಗಾರಿಕೆಯನ್ನು ತೋರಿಸುವವನೂ, ಕಷ್ಟಸಹಿಷ್ಣುವೂ ಆಗಿದ್ದನು. ಈತನಲ್ಲಿ ಈ ಬೆಳ್ಳಿಯಂತಿರುವ ಗುಣದ ಮುದ್ರೆಗಳನ್ನು ಕಂಡವನಾಗಿಯೇ ದೇವರು ಈತನನ್ನು ಉನ್ನತವಾದ ಸೇವೆಗೆ ಕರೆದಿದ್ದನು. ಹೀಗೆಯೇ ಸುವಾರ್ತಾ ಯುಗದ ಪರ್ಯಂತರವಾಗಿ ದೇವರು ಇದಕ್ಕೆ ಸಮನಾದ ಗುಣಗಳುಳ್ಳ ಒಂದು ವರ್ಗವನ್ನು ಕರೆದು ಅದಕ್ಕೆ ತನ್ನ ಆತ್ಮನಿಂದ

ಅಭಿಷೇಕಮಾಡುತ್ತಿರುವನು. ಅವರು ದೇವರು ಅಭಿಷೇಕಮಾಡಿದ ಅರಸುಗಳಾಗಿರುವರು; ಆದರೆ ದಾವೀದನಂತೆ ಇವರ ರಾಜ್ಯವು ಸ್ಥಾಪಿತವಾಗಿರುವದಿಲ್ಲ: ದಾವೀದನ ವಿಷಯದಲ್ಲಿದ್ದಂತೆ ಇವರೂ ಎಲ್ಲಾ ಸಮಯದಲ್ಲಿಯೂ ಎಲ್ಲಾ ಕಡೆಯಿಂದಲೂ ವೈರಿಗಳಿಂದ ಸುತ್ತುವರೆಯಲ್ಪಟ್ಟವರಾಗಿ ಇವರ ಇಡೀ ಶಾರೀರಿಕ–ಜೀವಿತವು ದಾವೀದನಲ್ಲಿದ್ದಂತೆ ಒಂದು ಸತತವಾದ ಹೋರಾಟವಾಗಿರುವದು. ದಾವೀದನಂತೆ ಇವರೂ ಸಹ ದೇವರ ಆಲಯವು ಕಟ್ಟಲ್ಪಡುವದನ್ನು ಅದರಲ್ಲಿ ಲೋಕದವರೆಲ್ಲರೂ ಬಂದು ಆರಾಧಿಸುವಂತಾಗುವಂಥ ಬಯಕೆಯನ್ನು ತಮ್ಮ ಹೃದಯಗಳಲ್ಲಿ ಇಟ್ಟುಕೊಂಡಿರುವರು. ಆದರೆ ದಾವಿದನಿಗೆ ಛಾಯಾರೂಪದ ದೇವಾಲಯವು ಕಟ್ಟಲ್ಪಡುವದನ್ನು ನಿರಾಕರಿಸಲ್ಪಟ್ಟಂತೆಯೇ ಶರೀರದಲ್ಲಿರುವ ಸಭೆಗೆ ಈ ಸೌಭಾಗ್ಯವು ಅನುಗ್ರಹಿಸಲ್ಪಟ್ಟಿರುವದಿಲ್ಲ, ಆದರೆ ಇದು ಸೊಲೊಮೋನನಿಗೆ ಕಾದಿರಿಸಲಾಗಿದ್ದು ಅವನಿಗೆ ದೇವರಿಂದ ಶಾಂತಿ ಸಮಾಧಾನ ಸಮೃದ್ಧಿಗಳನ್ನು ನೀಡಲಾಗಿದ್ದು, ಇದು ಮಹಿಮಾ ಪದವಿಗೆ ಸೇರಿದ ಸಭೆಯ ಆಳ್ವಿಕೆಗೆ ಒಂದು ಸಮರ್ಪಕವಾದ ಸಂಕೇತವಾಗಿರುವದು. – 1 ಪೂರ್ವ. 22:7–9. ಆದರೆ ದೇವಾಲಯದ ಕಟ್ಟುವಿಕೆಯನ್ನು ದಾವೀದನಿಗೆ ನಿರಾಕರಿಸಲ್ಪಟ್ಟಿದ್ದರೂ ಅದರ ಕಟ್ಟುವಿಕೆಗಾಗಿ ಸಾಮಾಗ್ರಿಗಳನ್ನು ಸಂಗ್ರಹಿಸಿಡಲು ಅನುಮತಿ ನೀಡಲಾಗಿತ್ತು. ಹೀಗೆಯೇ ಶರೀರದಲ್ಲಿರುವ ಸಭೆಯು ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಉದಯಕಾಲದಲ್ಲಿ ಸೊಲೊಮೋನನ ದೇವಾಲಯ ದಂತೆಯೇ ಸುತ್ತಿಗೆಯ ಶಬ್ಧವಿಲ್ಲದೆಯೇ [ಆಲಯದ] ಸಾಮಾಗ್ರಿಗಳನ್ನು ಜೋಡಿಸುವಂತಾಗಲು ಈಗ ಅದರ ಸಿದ್ದತೆಗಳನ್ನು ಮಾಡುತ್ತಿರುವರು. ಹೀಗಾಗಿ ದಾವೀದನು ನಡೆಸಿದ ಯುದ್ಧಗಳು ಶಿರಸ್ಸುದೇಹಗಳಿಂದ ಕೂಡಿದ ಇಡೀ ಸಭೆಯು ಇಹ ಲೋಕದ ಪ್ರಭುತ್ವಗಳ ಹಾಗು ಎಲ್ಲಾ ಕಡೆಯಿಂದಲೂ ವಿರೋಧಿಸುವ ಅಂಧಕಾರದ ಶಕ್ತಿಗಳ ಮೇಲೆ ತನ್ನ ಶಾರೀರಿಕ ಜೀವಿತದ ಅಂತ್ಯದವರೆಗೂ ನಡೆಸುವ ಹೋರಾಟಗಳಿಗೆ ಸಂಕೇತವಾಗಿರುವದು; ಹೀಗಾಗಿ ಈಕೆಯು [ಸಭೆಯು] ಅರಸರಾಗಿ ಆಳ್ವಿಕೆಮಾಡುವ ಕಾರ್ಯಸ್ಥಾಕ್ಕೆ ಅಭಿಷೇಕಿಸಲ್ಪಟ್ಟಾಗ್ಯೂ ತನ್ನ ಮರಣದ ದಿನದ ವರೆಗೂ ಎಂದೂ ಅಧಿಕಾರ ಸಮಾಧಾನ ಹಾಗು ಸುರಕ್ಷತೆಗಳ ಸಂಬಂಧದಲ್ಲಿ ಸ್ಥಾಪಿತಳಾಗಿರಲಿಲ್ಲ. ತೆರೆಯ ಈಚಿನ ಭಾಗದ ಈಕೆಯ ಕಾರ್ಯಭಾರವು ಒಂದು ಒಳ್ಳೆಯ ಹೋರಾಟವನ್ನು ಮಾಡಲು ಹಾಗು ಆಸಕ್ತಿಯಿಂದ ಶ್ರಮಪೂರ್ವಕವಾಗಿ ದೇವಾಲಯ ಕಟ್ಟಡದ ಸಾಮಾಗ್ರಿಗಳನ್ನು ಸಂಗ್ರಹಿಸಿಟ್ಟು ಆ ಮಹಿಮೆಯುಳ್ಳ ದೇವಾಲಯಕ್ಕಾಗಿ ಜೀವವುಳ್ಳ ಕಲ್ಲುಗಳನ್ನು ಸಿದ್ದಪಡಿಸಿ ಅಂತ್ಯದಲ್ಲಿ ಲೋಕದವರೆಲ್ಲರೂ ಆರಾಧಿಸಲು ಕರೆಯಲ್ಪಡುವಂಥದ್ದಾಗಿರುವದು.

ದೇಹವೆಂಬ ತೆರೆಯ ಆಚೆಕಡೆಯಲ್ಲಿ ಇದೇ ಅಭಿಷಕ್ತರ ಗುಂಪು [ಅಂದರೆ ಈ ಸುವಾರ್ತಾ ಯುಗದಲ್ಲಿ ನಂಬಿಗಸ್ತರಾಗಿ ಜಯಶಾಲಿಗಳಾದವರೆಲ್ಲರೂ] ಸೊಲೊವೋನನ ವೈಭವಯುತವಾದ ಆಳ್ವಿಕೆಯಲ್ಲಿ ಮುನ್ಸೂಚಿತವಾಗಿದ್ದ ಮಹಿಮೆಯುಳ್ಳ ಆಳ್ವಿಕೆಯಲ್ಲಿ ಸೇರುವರು –"ಅವರಿಗೆ ವಿಶ್ರಾಂತಿಯಾಗುವದು; ಅವರ ಸುಕೃತ್ಯಗಳು ಅವರೊಂದಿಗೆ ಬರುವವು." (ಪ್ರಕಟನೆ 14:13) ಅಲ್ಲದೆ ದೇವರ ಆಲಯವು ಎಬ್ಬಿಸಲ್ಪಟ್ಟು ಅಂದಚಂದವಾಗಿ ಹೊಳೆಯುವದು ಹಾಗು ಅದರ ಮೂಲಕವಾಗಿ ಭೂಲೋಕದ ಎಲ್ಲಾ ಜನಾಂಗದವರು ಆಶೀರ್ವದಿಸಲ್ಪಡುವರು; ಈ ಆಶೀರ್ವಾದವು ಸಲೊಮೋನನ ಆಳ್ವಿಕೆಯಲ್ಲಿ ಇಸ್ರಾಯೇಲ್ಯರು ಸಮಾಧಾನ ಸಂಮೃದ್ಧಿಗಳಿಂದ ಹೇರಳವಾಗಿ ಆಶೀರ್ವದಿಸಲ್ಪಟ್ಟದ್ದಕ್ಕೆ ಛಾಯೆಯಾಗಿರುವದು.

ಈ ಮಹಿಮಾ ಪದವಿಯ ನಿರೀಕ್ಷೆ ಹೊಂದಿರುವವರೆಲ್ಲರೂ ನಮ್ಮ ಮುಂದಿನ ಸುವರ್ಣಮಯ ಪತ್ಯಭಾಗದ ವಾಕ್ಯಗಳನ್ನ ನೆನಪಿನಲ್ಲಿಟ್ಟುಕೊಳ್ಳಲಿ: "ಯೆಹೋವನು ಹೃದಯವನ್ನೇ ನೋಡುವವನಾಗಿದ್ದಾನೆ." ಆತನು ತನ್ನ ರಾಜ್ಯದಲ್ಲಿ ಹಿಂಹಾಸನದ ಮೇಲೆ ಕುಳಿತುಕೊಳ್ಳಲು ಯಾರು ಯೋಗ್ಯರೆಂಬುದನ್ನೂ ಅಲ್ಲದೆ ತಾನು ಎದುರುನೋಡುತ್ತಿರುವ ಗುಣಸ್ವಭಾವಗಳನ್ನು ನಮಗೆ ಬಹು ಸ್ವಷ್ಟವಾಗಿ ತೋರಿಸುವಂಥವರನ್ನು ಕಾಣಲು ಮುಂದಾಗಿದ್ದಾನೆ. ಹೀಗಾಗಿ ನಾವು ನಮ್ಮ ಹೃದಯಗಳು (ನಮ್ಮ ಚಿತ್ತ, ಸಂಕಲ್ಪ, ಉದ್ದೇಶ, ಮತ್ತು ಪರಿಶ್ರಮಗಳು) ಎಂಥಾ ನಿಷ್ಠೆ ನಂಬಿಗಸ್ತಿಕೆ ಮತ್ತು ವಿದೇಯತೆಯ ಸ್ಥಿತಿಯಲ್ಲಿರಬೇಕೆಂದರೆ ಅದು ಎಲ್ಲವನ್ನೂ ನೋಡುವಾತನ ಪರಿಶೀಲನಾ ದೃಷ್ಟಿಗೆ ಸಮ್ಮತಿಸುವಂತದ್ದಾಗಿರಬೇಕು. ಇದೇ ಸಮಯದಲ್ಲಿ ನಮ್ಮ ಪ್ರೋತ್ಸಾಹದ ಸಲುವಾಗಿ ನಾವು ನೆನಪಿಡಬೇಕಾದುದೇನಂದರೆ ಛಾಯಾರೂಪವಾದ ದಾವೀದನ ಸಂಗತಿಯಲ್ಲಿದ್ದಂತೆ ನಾವು ನಂಬಿಗಸ್ತರಾದಲ್ಲಿ ಯಾವುದೇ ನಮ್ಮ ಜನ್ಮದ ಸ್ಥಿತಿ ಅಥವಾ ಅಂತಸ್ತು ಇಲ್ಲವೇ ಸನ್ನಿವೇಶಗಳೂ ನಾವು ದೇವರಿಂದ ಅಂಗೀಕರಿಸಲ್ಪಡುವದಕ್ಕಾಗಿ ಇಲ್ಲವೇ ಮುಂದೆ ಕ್ರಿಸ್ತನೊಡನೆ ನಾವು ಉತನ್ನ ಸ್ಥಾನಕ್ಕೆ ಏರಿಸಲ್ಪಡುವದಕ್ಕೆ ಅಡ್ಡಿಪಡಿಸಲಾರದೆಂಬದು.

*****

ಅಭಿಷಕ್ತ ಅರಸನಾದ ದಾವೀದನು

ರೀಪ್ರಿಂಟ್ಸ್ ಪುಟ 5656 (ಮತ್ತು ರೀಪ್ರಿಂಟ್ಸ್ 3225)

1 ಸಮುವೇಲ 15:4–13

"ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ" – 1 ಸಮುವೇಲ 16:7

ಅರಸನಾದ ಸೌಲನು ಅವಿಧೇಯತೆಯ ಕಾರಣದಿಂದ ತಿರಸ್ಕೃತನಾದುದರ ಅರ್ಥವು ಕೇವಲ ಆತನು ಸಿಂಹಾಸನದಿಂದ ತೆಗೆದುಹಾಕಲ್ಪಡುವದು ಮಾತ್ರವಲ್ಲದೆ ಆತನ ಮಕ್ಕಳು ಅದರಲ್ಲಿ ಅತನಿಗೆ ಉತ್ತರಾಧಿಕಾರಿಗಳು ಆಗಬಾರದೆಂಬದೂ ಆಗಿತ್ತು. ಅದಲ್ಲದೆ ಇದು ಇಸ್ರಾಯೇಲ್ಯರಲ್ಲಿ ಆಳ್ವಿಕೆ ಮಾಡುವದಕ್ಕೂ ಸಿಂಹಾಸದಲ್ಲಿ ಯೆಹೋವನನ್ನು ಪ್ರತಿನಿಧಿಸುವದಕ್ಕಾಗಿ ಇನ್ನೊಂದು ಕುಲದಿಂದ ಮತ್ತೊಬ್ಬ ಪುರುಷನನ್ನು ಆಯ್ಕೆ ಮಾಡುವದೂ ಆಗಿತ್ತು. ಯೆಹೋವನ ಆಯ್ಕೆಯು ದಾವೀದನಾಗಿದ್ದು ಈತನ ವಿಷಯವಾಗಿ ಪ್ರವಾದಿಯಾದ ಸಮುವೇಲನು ಪರೋಕ್ಷವಾಗಿ ಹೀಗೆ ಉಲ್ಲೇಖಿಸಿ ಹೇಳಿದ್ದನು: "...ನೀನು (ಅರಸನಾದ ಸೌಲನು) ಯೆಹೋವನ ಆಜ್ಞೆಯನ್ನು ಕೈಕೊಳ್ಳದೆ ಹೋದುದರಿಂದ ಆತನು ತನಗೆ ಒಪ್ಪುವ ಬೇರೊಬ್ಬ ಪುರುಷನನ್ನು ತನ್ನ ಪ್ರಜೆಯ ಮೇಲೆ ಪ್ರಭುವಾಗಿ ನೇಮಿಸಿದ್ದಾನೆ..." – 1 ಸಮುವೇಲ 13:14

ನಮ್ಮ ಇಂದಿನ ಅಧ್ಯಯನದಲ್ಲಿನ ಘಟನೆಗಳು ನಡೆಯುತ್ತಿದ್ದ ಕಾಲದಲ್ಲಿ ದಾವೀದನು ಸುಮಾರು ಇಪ್ಪತ್ತು ವರುಷದವನಾಗಿದ್ದನು; ಪರಿಣಾಮವಾಗಿ ಪ್ರವಾದಿಯ ಮಾತುಗಳು ಸುಮಾರು ದಾವೀದನು ಹುಟ್ಟಿದ ಸಮಯದಲ್ಲಿ ಹೇಳಲ್ಪಟ್ಟಂಥವುಗಳು ಆಗಿರಬೇಕು. ಹೀಗೆ ನಾವು ದೇವರ ಭವಿಷ್ಯತ್‌ಜ್ಞಾನದ ಬಗ್ಗೆ ಹಾಗು ಆತನು ತನ್ನ ಸೇವೆಯಲ್ಲಿ ವಿಶೇಷವಾಗಿ ಬಳಸಿಕೊಳ್ಳುವಂಥವನ ವಿಷಯವಾಗಿ ಆತನ ಯೋಜನೆಯ ಸಂಬಂಧದಲ್ಲಿ ಮೊತ್ತೊಂದು ನಿದರ್ಶನವನ್ನು ಪಡೆದಿರುವೆವು. ಇದೇ ರೀತಿಯಲ್ಲಿ ಯಾಕೋಬನ ವಿಷಯವಾದ ದೇವರ ಆಯ್ಕೆಯು ಆತನು ಹುಟ್ಟುವದಕ್ಕೆ ಮೊದಲೇ ಪ್ರಕಟಿಸಲ್ಪಟ್ಟಿತ್ತು; ಮತ್ತು ಹೀಗೆಯೇ ಅಪೋಸ್ತಲನಾದ ಪೌಲನು ಹುಟ್ಟುವ ಮೊದಲೇ ಆದುಕೊಳ್ಳಲ್ಪಟ್ಟಿದ್ದನು. ಈ ಪ್ರಕಟನೆಯ ಸಂಬಂಧದಲ್ಲಿ ದೇವರ ಆಯ್ಕೆಯ ಬಗ್ಗೆ ಇರುವ ಯಾವುದೇ ತಪ್ಪು ಅಭಿಪ್ರಾಯದಿಂದ ನಮ್ಮನ್ನು ಪ್ರತ್ಯೇಕಿಸಿಕೊಂಡು ಇವರಲ್ಲಿ ಯಾರೂ ನಿತ್ಯಜೀವ ಹೊಂದುವದಕ್ಕಾಗಿ ಆಯಲ್ಪಡಲಿಲ್ಲವೆಂದೂ ಆದರೆ ಇವರಲ್ಲಿ ಪ್ರತಿಯೊಬ್ಬನು ಇಲ್ಲವೇ ಎಲ್ಲರೂ ಒಂದು ವಿಶೇಷವಾದ ಸೇವೆಗೆ ಆಯಲ್ಪಟ್ಟು ಅದಕ್ಕೆ ಅರ್ಹರಾಗಿ ಮಾಡಲ್ಪಟ್ಟಿದ್ದರೆಂಬುದನ್ನು ಗಮನಿಸುವವರಾಗೋಣ.

ಇದು ನಮಗೆ ಸಲಹೆ ಮಾಡುವದೇನಂದರೆ, ಒಬ್ಬ ಮನುಷ್ಯನು ತನ್ನ ಸಹಜ ಗುಣಸ್ವಭಾವದ ಸಂಬಂಧದಲ್ಲಿ ತಾನು ಹುಟ್ಟುವ ಮೊದಲೇ ತಂದೆತಾಯಿಗಳ ಪ್ರಭಾವು ಪರಿಣಾಮ ಬೀರಿರುವ ಸಾಧ್ಯತೆಯಿರುತ್ತದೆಂಬದು. ಹೇಗೂ ಅತನಿಗೆ ಇನ್ನೂ ಒಂದು ಸಂಕಲ್ಪಶಕ್ತಿ ಇರುವದು; ಮತ್ತು ಅದು ಆತನಿಗೆ ಹುಟ್ಟಿನಿಂದಾದ ಅನುಕೂಲಕರವಾದ ಬಳುವಳಿಯಾಗಿದ್ದು ಅದು ಆತನೊಂದಿಗಿದ್ದು ತಾನು ದೇವರ ಮಾರ್ಗದಲ್ಲಿ ನಡೆಯ ಬೇಕೇ ಇಲ್ಲವೇ ಎಂಬುದನ್ನೂ, ಹಾಗಿದ್ದಲ್ಲಿ ಎಷ್ಟರ ಮಟ್ಟಿಗೆ ತಾನು ಅದಕ್ಕೆ ವಿಧೇಯನಾಗಬೇಕೆಂಬುದರ ಬಗ್ಗೆ ತೀರ್ಮಾನ ತೆಗೆದು-ಕೊಳ್ಳುವಂತೆ, ಸಂಕಲ್ಪಮಾಡುವಂತೆ ನಡೆಸುತ್ತದೆ. ಈ ಸಂಕಲ್ಪದ ವಿಷಯಲ್ಲಿ ಒತ್ತಾಯ ಇರುವದಿಲ್ಲ; ಯಾಕಂದರೆ ದೇವರು ಬಯಸುವದು ತನ್ನನ್ನು ಹೃದಯಪೂರ್ವಕವಾಗಿಯೂ ಮನಃಪೂರ್ವಕವಾಗಿಯೂ ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ ಆರಾಧಿಸುವಂಥವರನ್ನು.

ದಾವೀದನ ಮುತ್ತಜ್ಜಿಯು ಅನ್ಯಜನಾಂಗದವಳಾದ ರೂತಳು ಆಗಿದ್ದು, ಈಕೆಯು ದಾವೀದನಿಗೆ ಚಿರಪರಿಚಿತವಾಗಿದ್ದ ಹೊಲದಲ್ಲಿ ಹಕ್ಕಲಾಯ್ದಿದ್ದಳು. ಆತನ ಮುತ್ತಜ್ಜನ ಹೆಸರು ಬೋವಜನೆಂಬದಾಗಿದ್ದು ಈತನ ಚರಿತ್ರೆಯ ಒಂದು ಪುಟವು ರೂತಳ ಪುಸ್ತಕದಲ್ಲಿ ದಾಖಲಾಗಿರುವದು. ಬೋವಜನಂತೆಯೇ ಇಷಯನೂ ಬೇತ್ಲೆಹೇಮ್ ಪಟ್ಟಣದ ಹಿರಿಯಲ್ಲಿ ಒಬ್ಬನಾಗಿದ್ದು ಘನವಂತನೂ ಸಂಭಾವಿತನೂ ಆಗಿ ಗೌರವಿಸಲ್ಪಟ್ಟಿರುವದು ನಿಸಂದೇಹವಾಗಿತ್ತು. ಆತನ ತಾಯಿಯು ದೇವರ ಸೇವಕಳೆಂದು ಎರಡು ಸಾರಿ ತಿಳಿಸಿರುವನೆಂಬುದನ್ನು ಹೊರತುಪಡಿಸಿದರೆ ಆಕೆಯ ಬಗ್ಗೆ ನಮಗೇನೂ ತಿಳಿದಿರುವದಿಲ್ಲ.

ಸಮುವೇಲನ ನಂಬಿಗಸ್ತಿಕೆಯು ಪರೀಕ್ಷಿಸಲ್ಪಟ್ಟದ್ದು

ಪ್ರವಾದಿಯಾದ ಸಮುವೇಲನು ಅರಸನಾದ ಸೌಲನಿಗಾಗಿ ದಃಖಪಟ್ಟು ದೇವರಿಗೆ ಪ್ರಾರ್ಥಿಸಿದ್ದನು; ಅಲ್ಲದೆ ಯಾವ ಈ ಮನುಷ್ಯನಿಂದ ದೊಡ್ಡ ಸಂಗತಿಗಳನ್ನು ನಿರೀಕ್ಷಿಸಿ ಇಂಥವನ ಮಾರ್ಗದರ್ಶನದಿಂದ ಇಸ್ರಾಯೇಲ್ಯರ ದೊಡ್ಡ ಪ್ರಮಾಣದ ಅಭ್ಯುದಯವನ್ನು ಅಪೇಕ್ಷಿಸಿದ್ದನೋ ಅಂಥವನು ನಿರಾಕೃತನಾಗಿ ಬಂದುದರ ಬಗ್ಗೆ ಆತನಿಗೆ ನಿರಾಶೆಯಾದದ್ದು ಸ್ಪಷ್ಟವಾಗಿತ್ತು. ಒಬ್ಬ ಹೊಸ ಅರಸನನ್ನು ಪ್ರತಿಷ್ಠಾಪಿಸುವದರಿಂದ ಒಂದು ಆಂತರಿಕ ಯುದ್ಧವು ಪರಿಣಮಿಸಬಹುದೆಂದು, ಭೀಕರ ಅಶುಭವು ಸಂಭವಿಸುವ ವಾಸ್ತವಾಂಶವು ಪ್ರವಾದಿಯ ಮನಸ್ಸನ್ನು ಕದಡಿತ್ತು. ಸೌಲನು ತಾನು ಬಹು ನಮ್ರತೆಯಿಂದಲೂ ದೈವಿಕ ಏರ್ಪಾಟಿಗೆ ವಿಧೇಯನಾಗಿಯೂ ಸ್ವೀಕರಿಸಿದ ರಾಜದಂಡವನ್ನು ಸುಲಭವಾಗಿ ಒಪ್ಪಿಸಿಕೊಡಲಾರನೆಂಬದು ಆತನಿಗೆ ತಿಳಿದಿತ್ತು. ಪ್ರವಾದಿಯ ಮನೋನೇತ್ರವು ಅಂತರಿಕ ಕಲಹವು ಸಂಭವವಿಸಿ ಅದು ದೇಶವನ್ನು ಛಿದ್ರವಾಗಿಸಿ ಮಹಾ ಸಂಕಷ್ಟವನ್ನು ಉಂಟುಮಾಡುವ

ಸಾಧ್ಯತೆಯಿರುವದೆಂಬುದನ್ನು ಕಂಡಿತ್ತು. ಆತನು ಸರ್ವಶಕ್ತನಾದ ದೇವರ ಜ್ಞಾನದಲ್ಲಿ ಹಾಗು ಬಲದಲ್ಲಿ ಹೆಚ್ಚಾದ ಭರವಸೆಯನ್ನು ಇಡಬೇಕಾಗಿತ್ತು; ಆದರೆ ಈತನಿಗಿದ್ದ ತೊಂದರೆಯು ಹೆಚ್ಚುಕಡಿಮೆ ಈ ದಿನದಲ್ಲಿಯೂ ದೇವಜನರನ್ನು ಕಾಡುವಂಥದ್ದೇ ಆಗಿತ್ತು.

ನಮ್ಮ ಹೃದಯಗಳಿಗಾಗಿ ಇರುವ ಪಾಠವೇನಂದರೆ ದೇವರು ತನ್ನ ಸಂಗತಿಗಳನ್ನು ನಿಭಾಯಿಸುವನೆಂಬುವ ವಿಷಯದಲ್ಲಿ ನಾವು ದೃಢವಾದ ಭರವಸೆಯುಳ್ಳವರಾಗಿರಬೇಕೆಂದೂ; ಆತನಿರುವ ಸುಳಿವು ನಮಗೆ ದೊರಕಲು ಸಾಧ್ಯವಿಲ್ಲದೇ ಇರುವಲ್ಲಿಯೂ ನಾವು ಆತನಲ್ಲಿ ಭರವಸೆಯುಳ್ಳವರಾಗಿಯೇ ಇದ್ದು ಆತನ ಆಜ್ಞಾಪನೆಗಳಿಗೆ ವಿಧೇಯರಾಗಿರಬೇಕೆಂದೂ; ಅಲ್ಲದೆ ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲಕರವಾಗಿ ಮಾರ್ಪಡಿಸಲಾಗುತ್ತದೆಂಬುದನ್ನು ತಿಳಿದವರಾಗಿ ಆತನ ಸಂಕಲ್ಪಗಳು ಕಾರ್ಯಗತಗೊಳ್ಳುವ ಬಗ್ಗೆ ದುಃಖಿಸುವ ಬದಲು ನಾವು ಸಂತೋಷಪಡಬೇಕೆಂಬುದೇ. ದೇವರೊಂದಿಗೆ ಹೊಂದಾಣಿಕೆಯಿಂದ ಇರುವವರೆಲ್ಲರ ಪರವಾಗಿ ಎಲ್ಲಾ ಕಾರ್ಯಗಳು ಅಂತಿಮವಾಗಿ ಆಶೀರ್ವಾದವನ್ನು ಉಂಟು – ಮಾಡುತ್ತವೆ; ಅಂದರೆ ಅದು ಈಗಿನ ಕಾಲದಲ್ಲಿ ಅಲ್ಲದಿದ್ದರೂ ಮುಂದಿನ ಜೀವಿತಕ್ಕೆ ಆಶೀರ್ವಾದಕರಗಳಾಗುತ್ತವೆ.

ದಾವೀದನನ್ನು ಅಭಿಷೇಕಿಸ ಸಲುವಾಗಿ ಕಳುಹಿಸಲ್ಪಟ್ಟಾಗ ಪ್ರವಾದಿಯಾದ ಸಮುವೇಲನು ಹೆದರಿಕೆಯನ್ನು ತೋರ್ಪಡಿಸಿದ್ದನು; ಆತನ ನಡತೆಯಲ್ಲಿ ಬೇರೆಡೆ ಎಲ್ಲಿಯೂ ಅದನ್ನು ಗಮನಿಸಲಾಗಂಥದ್ದು. ದೇವರ ಆಜ್ಞೆಯನ್ನು ಪಾಲಿಸುವಲ್ಲಿ ಆತನು ಹಿಂಜರಿಯಲಿಲ್ಲ; ಆದರೆ ಹೀಗೆ ಮಾಡುವದರಿಂದ ಅದು ತನ್ನ ಜೀವಕ್ಕೆ ಅಪಾಯವನ್ನು ಉಂಟುಮಾಡುವದೆಂಬುದನ್ನು ಆತನು ಸ್ಪಷ್ಟವಾಗಿ ಗ್ರಹಿಸಿಕೊಂಡಿದ್ದಾಗಿ ಹೇಳಿದ್ದನು. ಅದೇನಂದರೆ ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಅಭಿಷೇಕಿಸಿದ್ದೇಯಾದಲ್ಲಿ ಸೌಲನು ಅವನನ್ನು ದೇಶದ್ರೋಹಿಯೆಂದು ಹೇಳಿ ಆತನನ್ನು ಕೊಲ್ಲುವನೆಂಬದು. ಈ ಸಂಗತಿಯನ್ನು ಒಂದೇ ಸಾರಿ ಗೊತ್ತಾಗುವಂತೆ ಮಾಡುವದು ತನ್ನ ಉದ್ದೇಶವಲ್ಲವೆಂಬುದನ್ನು ದೇವರು ಆತನಿಗೆ ಸ್ಪಷ್ಟಪಡಿಸಿ ತಾನು ಬೇತ್ಲೆಹೇಮಿಗೆ ಹೋಗಲು ಮತ್ತು ಅಲ್ಲಿ ಒಂದು ಯಜ್ಞವನ್ನು ಅರ್ಪಿಸಿ ಆ ಸಂದರ್ಭದಲ್ಲಿಯೇ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಸಿಂಹಾಸನವನ್ನು ಹತ್ತುವಂಥವನನ್ನು ಕಂಡುಕೊಂಡು ಅವನನ್ನು ಅಭಿಷೇಕಿಸಿ ಮುಂದೆ ಸೂಕ್ತ ಸಮಯದಲ್ಲಿ ಈ ಸಂಗತಿಯನ್ನು ಬಹಿರಂಗಪಡಿಸುವಂತೆ ಆಜ್ಞಾಪಿಸಿದ್ದನು. ಆ ಸಮಯದಲ್ಲಿ ಆತನು ಕೇವಲ ಆರಂಭಿಕ ಕಾರ್ಯವನ್ನು ನೆರವೇರಿಸುವಂಥವನಾಗಿದ್ದು, ಆಗ ದಾವೀದನ ತಂದೆ ಹಾಗು ಸಹೋದರರು ಅದನ್ನು ಗ್ರಹಿಸಿಕೊಳ್ಳಲಾಗದೆ ಬಹುಶಃ ಈ ಅಭಿಷೇಕದ ಅರ್ಥವು ದೇವರು ಈತನನ್ನು ಪ್ರವಾದಿ ಮಂಡಲಿಗೆ ಒಬ್ಬ ಸದಸ್ಯನಾಗಿ ನಿಶ್ಚಯಮಾಡುವದೋ ಇಲ್ಲವೇ ಈ ವಿಧವಾದ ಬೇರೆ ಯಾವುದೋ ಒಂದು ವಿಶೇಷ ಕಾರ್ಯ ನಿರ್ವಹಿಸಲು ಆಶೀರ್ವಾದ ನೀಡುವದೋ ಅಥವಾ ಕಾರ್ಯಭಾರ ವಹಿಸಿಕೊಡುವದೋ ಆಗಿರಬಹುದೆಂದು ಅವರು ಯೋಚಿಸುವಂತೆ ಮಾಡಿತ್ತು. ಹೇಗೂ ಪ್ರವಾದಿಯು ಈ ಅಭಿಷೇಕದ ಅರ್ಥವೇನೆಂಬುದನ್ನು ತಾನು ಸೌಲನ್ನು ಇಸ್ರಾಯೇಲಿನ ಅರಸನ ಕಾರ್ಯಸ್ಥಾನಕ್ಕೆ ಗುಪ್ತವಾಗಿ ಅಭಿಷೇಕಿಸಿ ಅದನ್ನು ಆತನಿಗೆ ತಿಳಿಸಿದ ರೀತಿಯಲ್ಲಿಯೇ ದಾವೀದನಿಗೂ ಇದನ್ನು ಗುಪ್ತವಾಗಿ ತಿಳಿಸಿ ಹೇಳಿರುವ ಸಂಭವವು ಅಧಿಕವಾಗಿತ್ತು.

ಅರಸನ ವಿಷಯವಾಗಿ ದೇವರ ಆಯ್ಕೆ

ನಮ್ಮ ಅಧ್ಯಯನವು ಪ್ರವಾದಿಯಾದ ಸಮುವೇಲನು ಬೇತ್ಲೆಹೇಮಿಗೆ ಆಗಮಿಸಿದ ಸಮಯಕ್ಕೆ ಆರಂಭವಾಗುತ್ತದೆ. ಹಿರಿಯರು ಭಯದಲ್ಲಿದ್ದರು, ಆತನ ಉಪಸ್ಥಿತಿಯು ತಮ್ಮಿಂದಲೋ ಅಥವಾ ತಮ್ಮ ಜೊತೆಯಲ್ಲಿರುವ ಪ್ರಜೆಗಳಿಂದಲೋ ಯಾವುದೋ ಪಾಪವು ನಡೆದಿರಬಹುದೆಂದೂ ಆ ಕಾರಣಕ್ಕಾಗಿ ತಮ್ಮನ್ನು ಗದರಿಸಿ ಶಿಕ್ಷಿಸಲು ದೇವರು ಆತನನ್ನು ಕಳುಹಿಸಿದ್ದಾನೆಂಬದು ಅವರ ಆಲೋಚನೆಯಾಗಿತ್ತು. ಆದುದರಿಂದ ಆತನು ಬಂದಿರುವದು ಸಮಾಧಾನದಿಂದಲೋ ಅಂದರೆ ಆತನ ಉಪಸ್ಥಿತಿಯು ಅರ್ಥವು ಒಂದು ಆಶೀರ್ವಾದಕರವಾಗಿರುವದೋ ಇಲ್ಲವೇ ಒಂದು ಶಿಕ್ಷೆಯನ್ನು ವಿಧಿಸಲೆಂದೋ ಎಂದು ವಿಚಾರಿಸಿದ್ದರು. ತನ್ನ ಕಾರ್ಯಭಾರವು ಸಮಾಧಾನಕರವಾಗಿರುವದೆಂದು ಅಂದರೆ ದೇವರಿಗೆ ಒಂದು ಯಜ್ಞವನ್ನು ಅರ್ಪಿಸಲೆಂಬದನ್ನು ಅವರು ಕೇಳಿದಾಗ ಅವರ ಭಯವು ಇಳಿದಿತ್ತು.

ಇದಕ್ಕೆ ಕೆಲವು ಸಮಯಗಳ ಹಿಂದೆ ಒಡಂಬಡಿಕೆಯ ಮಂಜೂಷ ಪೆಟ್ಟಿಯು ಫಿಲಿಷ್ಟಿಯರ ವಶವಾಗಿತ್ತು. ಹೀಗಾಗಿ ದೇವದರ್ಶನ ಗುಡಾರದಲ್ಲಿನ ಆರಾಧನೆಗಳು ನಿಂತುಹೋಗಿದ್ದು ಇನ್ನೂ ಅವು ಮರುಸ್ಥಾಪನೆಗೊಂಡಿರಲಿಲ್ಲ ಮತ್ತು ಈ ಕಾರಣಕ್ಕಾಗಿ ಯಜ್ಞಾರ್ಪಣೆಗಳು ದೇವರು ವಿಶೇಷವಾಗಿ ನೇಮಿಸಿದ ಸೇವಕರಿಂದ ಮಾಡಲ್ಪಡುತ್ತಿದ್ದವು. ಬೇತ್ಲೆಹೇಮಿನ ಜನರಿಗೆ ಆದ ಆಜ್ಞಾಪನೆ ಯಾವುದೆಂದರೆ ಈ ಯಜ್ಞಾರ್ಪಣೆಯು ಆಶೀರ್ವಾದದಲ್ಲಿ ಪಾಲುತೆಗೆದುಕೊಳ್ಳಬೇಕೆಂದಿದ್ದಲ್ಲಿ ಅವರು ತಮ್ಮನ್ನು ಶುದ್ಧೀಕರಿಸಿಕೊಳ್ಳಬೇಕೆಂಬುದು. ಅವರು ಸ್ನಾನವನ್ನು ಮಾಡಿಕೊಂಡು ಶುದ್ಧವಾದ ಉಡುಪುಗಳನ್ನು ಧರಿಸಿದವರಾಗಿ ದೇವರ ಸಮೀಪಕ್ಕೆ ಹೃದಯಪೂರ್ವಕಾಗಿ ಬರಬೇಕೆಂಬುದನ್ನು ಇದು ಸೂಚಿಸುತ್ತಿತ್ತು. ಹೀಗೆ ಇದು ಕ್ರೈಸ್ತಸಭೆಯು ಈ ಸುವಾರ್ತಾಯುಗದಲ್ಲಿ ಪಡಕೊಳ್ಳಲಿರುವ ನೀತಿನಿರ್ಣಯ ಹಾಗು ಶುದ್ಧೀಕರಣಗಳನ್ನು ಛಾಯಾರೂಪವಾಗಿ ಸೂಚಿಸುತ್ತಿತ್ತು.

ದೇವರು ಆದುಕೊಂಡಿರುವ ಮನುಷ್ಯನು ಯಾರು ಆಗಿರಬಹುದೆಂದೂ ಅವನಿಗೆ ಈ ಕಾರ್ಯಸ್ಥಾನಕ್ಕಾಗಿ ಅಭಿಷೇಕಿಸಿ ಅದರ ಸಿದ್ಧತೆಗಾಗಿ ದೇವಾಶೀರ್ವಾದವನ್ನು ನೀಡುವ ಉದ್ದೇಶದಿಂದ ಪ್ರವಾದಿಯು ಬಹಿರಂಗವಾಗಿ ತೋರ್ಪಡಿಸದೆಯೇ ಇಷಯನ ಕುಟುಂಬದವರ ಬಗ್ಗೆ ವಿಚಾರಣೆ ಮಾಡಿದ್ದನೆಂಬದು ಕಾಣಬರುತ್ತದೆ. ಇಷಯನು ತನ್ನ ಹಿರಿಯ ಮಗನಾದ ಎಲೀಯಾಬನು ಮೊದಲುಗೊಂಡು ತನ್ನ ಮಕ್ಕಳನ್ನು ಅವರ ಹುಟ್ಟಿನ ಕ್ರಮವಾಗಿ ಪ್ರವಾದಿಗೆ ಸೂಕ್ತವಾಗಿ ಪರಿಚಯ

ಮಾಡಿಕೊಟ್ಟನು. ಇವನು [ಎಲೀಯಾಬನು] ಆಕಾರದಲ್ಲಿಯೂ ನೋಟದಲ್ಲಿಯೂ ಸುಂದರನಾಗಿದ್ದುದರಿಂದ ಇವನೇ ದೇವರು ಆದುಕೊಂಡವನೆಂದು ಸಹಜವಾಗಿಯೇ ಭಾವಿಸಿದ್ದನು; ಆದರೆ ಈ ವಿಷಯದಲ್ಲಿ ದೇವರ ಆದೇಶಕ್ಕಾಗಿ ಎದುರುನೋಡಿದಾಗ ಅವನಿಗೆ ಪ್ರತಿಕ್ರಿಯೆ ದೊರೆಯಿತು; ಅದು ಯಾವ ಬಗೆಯಲ್ಲಿ ಎಂಬದು ನಮಗೆ ತಿಳಿದಿರುವದಿಲ್ಲ; ಇದೇ ನಮ್ಮ ಈ ಅಧ್ಯಯನದ ಸುವರ್ಣಮಯ ಪಠ್ಯಭಾಗವಾಗಿರುವದು.

ಮಾನುಷ್ಯ ದೃಷ್ಟಿಕೋನದಿಂದ ಅಂದರೆ ನೋಟ ವಯಸ್ಸು ಸಾಮರ್ಥ್ಯ ಮುಂತಾದ ನಿಟ್ಟಿನಿಂದ ತೀರ್ಮಾನಿಸಿದಾಗ ಎಲೀಯಾಬನು ಇಷಯನ ಕುಟುಂಬದಲ್ಲಿ ಆ ಜನಾಂಗದವರ ಮೇಲೆ ಅರಸನಾಗಲು ಬಹು ಸೂಕ್ತನಾದ ವ್ಯಕ್ತಿಯಾಗಿದ್ದನು; ಆದರೆ ದೇವರ ದೃಷ್ಟಿಯಲ್ಲಿ ಹೀಗಿರಲಿಲ್ಲ. ದೇವರು ಹೃದಯವನ್ನು ನೋಡುವವನಾಗಿದ್ದು ತನ್ನ ಹೃದಯಕ್ಕೆ ಬಹುವಾಗಿ ಒಪ್ಪುವ–ವನಾದ ದಾವೀದನನ್ನು ಆಗಲೇ ಆರಿಸಿಕೊಂಡಿದ್ದನು, ಆದರೂ ಆ ಸಮಯದಲ್ಲಿ ಅವನು ವಯಸ್ಸಿನಲ್ಲಿ ಚಿಕ್ಕವನಾಗಿದ್ದುದರಿಂದ ಅವನು ಭೋಜನಕೂಟದಲ್ಲಿ ಭಾಗವಹಿಸುವದು ಉಚಿತವಲ್ಲ–ವೆಂದು ಅವನ ತಂದೆಯು ಭಾವಿಸಿದ್ದನು. ಇಷಯನ ಮಕ್ಕಳಲ್ಲಿ ಒಬ್ಬರಾದಂತೆ ಒಬ್ಬರು ಕಾಣಿಸಿಕೊಳ್ಳುತ್ತಿರುವಾಗ ಯಾವನನ್ನು ಅಭಿಷೇಕಮಾಡಬೇಕೆಂಬುದರ ಬಗ್ಗೆ ದೇವರಾತ್ಮನ ಸೂಚನೆ–ಯನ್ನು ಕಂಡುಕೊಳ್ಳಲಿಲ್ಲ. ಆಗ ಆತನು "ನಿನ್ನ ಮಕ್ಕಳೆಲ್ಲಾ ಇಷ್ಟೆ ಮಂದಿಯೋ?" ಎಂದು ವಿಚಾರಣೆಮಾಡಿದ್ದನು. ಇಷಯನು ತನಗೆ ಮತ್ತೊಬ್ಬ ಹುಡುಗನಿರುವನೆಂಬುದನ್ನು ಕೂಡಲೇ ಜ್ಞಾಪಿಸಿಕೊಂಡನು; ಆತನ ಕಿರಿಯ ಮಗನು ತನ್ನ ಕುರಿಗಳೊಂದಿಗೆ ಹೊಲದಲ್ಲಿರಲು, ಅವನಿಗಾಗಿ ಹೇಳಿಕಳುಹಿಸಿದನು.

ನಿಜರೂಪದ ದೇವಾಭಿಷಕ್ತರು

ನಮ್ಮ ಸ್ವರ್ಣಮಯ ಪಠ್ಯಭಾಗವು ಕ್ರೈಸ್ತರೆಲ್ಲರಿಗೆ ಸುವಾರ್ತಾ ಯುಗದಲ್ಲಿನ ಉನ್ನತ [ಸ್ಥಾನದ] ಕರೆಯ ಸಂಬಂಧದಲ್ಲಿ ಆಕರ್ಷಣಕಾರಿಯಾಗಿರುವದು; ಅಲ್ಲದೆ ವರುಷಗಳು ಕಳೆದಂತೆ ನಮ್ಮ ಜೀವಿತಾನುಭವವು ಇದು ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯವಾಗುವದೆಂಬುದನ್ನು ತೋರಿಸಿಕೊಡುವದು. ಕರ್ತನ ಸಂದೇಶವಾಹಕರಾಗಿ ನಾವು ಸಹ ಪವಿತ್ರಾತ್ಮವೆಂಬ ಆನಂದ ತೈಲದಿಂದ ಅಭಿಷೇಕಿಸಲ್ಪಟ್ಟು ದೇವರು ಸ್ಥಾಪಿಸಲಿರುವ ಆ ರಾಜ್ಯದಲ್ಲಿ ಯಾಜಕರಾಗಿ ಆಳ್ವಿಕೆಮಾಡುವವ–ರನ್ನು ಕಂಡುಕೊಳ್ಳಲು ಯತ್ನಿಸುವವರಾಗಿದ್ದೇವೆ; ಆ ರಾಜ್ಯವು ಈಗಿನ ಎಲ್ಲಾ ರಾಜ್ಯಗಳನ್ನು ಹಿಂದಕ್ಕೆ ಹಾಕುವದು. ನಮಗೂ ಸಹ ಪ್ರವಾದಿಯಾದ ಸಮುವೇಲನಂತೆ ಇಂದಿನ ವ್ಯವಸ್ಥಾಪನೆಗಳ ಉತ್ತರಾಧಿಕಾರಿಗಳು ಆಗಲಿರುವವರನ್ನು ಅಭಿಷೇಕಿಸುವ ಕಾರ್ಯದಲ್ಲಿ ಮುಂದುವರೆಯಲು ಅಂಜಿಕೆಯಾಗುವದೆಂದು ಭಾವಿಸಬಹುದು. ಈಗ ಪ್ರಗತಿಯಲ್ಲಿರುವ, ದೇವರು ಆರಿಸಿಕೊಳ್ಳುತ್ತಿರುವವರಿಗೆ ಮುದ್ರೆಯನ್ನು ಒತ್ತುವ ಕಾರ್ಯವು ಗುಪ್ತವಾಗಿ ನಡೆಯುತ್ತಿರುವ ಒಂದು ಕಾರ್ಯವೆಂದೂ ಲೋಕವು ಅದನ್ನು ಗ್ರಹಿಸಲಾರದೆಂದೂ ನಾವು ಅರಿತುಕೊಂಡಿಲ್ಲವೇ. ನಿಜವಾಗಿಯೂ ಪವಿತ್ರಾತ್ಮನಿಂದಾಗುವ ಅಭಿಷೇಕವೆಂಬ ಮುದ್ರೆಯನ್ನು ಒತ್ತುತ್ತಿರುವ ಸಂಗತಿಯು ಅದನ್ನು ಹೊಂದಿದವವರಾಗಿ ದಾವೀದನ ವರ್ಗಕ್ಕೆ ಸೇರಿದವರೆಲ್ಲರಿಗೇ ಹೊರತು ಬೇರೆ ಯಾರಿಗೂ ಇದು ಅರ್ಥವಾಗುವದಿಲ್ಲ.

ದಾವೀದನು ಎಂಬ ಹೆಸರು ಪ್ರಿಯನು ಎಂಬುದನ್ನು ಸೂಚಿಸುತ್ತದೆ; ಅಲ್ಲದೆ "ಈತನು ಪ್ರಿಯನಾಗಿರುವ ನನ್ನ ಮಗನು" ಎಂದು ಯೆಹೋವನಿಂದ ಹೇಳಲ್ಪಟ್ಟಂಥದ್ದು ನಮ್ಮ ಕರ್ತನೂ ಗುರುವೂ ಆಗಿರುವವನಿಗೆ ವಿಶೇಷವಾಗಿ ಅನ್ವಯವಾಗುವ ರೀತಿಯಲ್ಲಿಯೇ ಆತನ ದೇಹದ ಅಂಗಗಳಾಗಿರುವವರೆಲ್ಲರಿಗೂ ಅನ್ವಯವಾಗುವದು; ಇವರಲ್ಲಿ ಪ್ರತಿಯೊಬ್ಬನೂ ಪ್ರಿಯನಾಗಿ–ರಬೇಕು, ಇಲ್ಲವಾದಲ್ಲಿ ಅವನು [ದೇಹದ ಒಂದು ಅಂಗವಾಗಿ] ಸದಸ್ಯನಾಗುವದಕ್ಕೆ ಅಂಗೀಕಾರವಾಗುವದಿಲ್ಲ. ಇಂಥವರ ವಿಷಯವಾಗಿ ಶಿರಸ್ಸಾಗಿರುವಾತನು ಹೇಳಿರುವದೇನಂದರೆ: "ತಂದೆಯು ತಾನೇ ನಿಮ್ಮನ್ನು ಪ್ರೀತಿಸುವನು" ಎಂಬದು; ಮತ್ತೆ ಆತನು ಹೇಳಿರುವದು–ಆತನು ನಮ್ಮನ್ನು ಪ್ರೀತಿಸಿದ ಹಾಗೆಯೇ ನಾವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದು. ಕರ್ತನಿಂದಾದ ಈ ಅಭಿಷೇಕವನ್ನು ಹೊಂದಿದವರೆಲ್ಲರೂ ಅಂತಿಮವಾಗಿ ಈ ದಾವೀದನ ಅಥವಾ ಪ್ರಿಯನ ಗುಣಗಳನ್ನು ಹೊಂದಿರುವರೆಂಬದು ಅತಿಶಯೋಕ್ತಿಯೇನಲ್ಲ. ಪ್ರೀತಿಯ ಭಾವ [ಅತ್ಮ] ಅಂದರೆ ಕರ್ತನಿಗಾಗಿರುವ ಪ್ರೀತಿ ಮತ್ತು ಒಬ್ಬರ ಮೇಲೆ ಒಬ್ಬರಿಗಿರುವ ಪ್ರೀತಿಯು ಅವರಲ್ಲಿ ಇರಬೇಕು; ಇಲ್ಲದಿದ್ದಲ್ಲಿ ಅವರು ಆತನಿಗೆ ಸೇರಿದವರಾಗಿರುವದಿಲ್ಲ.

ಕರ್ತನಿಂದ ಅಭಿಷೇಕಿಸಲ್ಪಟ್ಟಂಥವರನ್ನು ಅಂದರೆ ಅಂತಿಮವಾಗಿ [ಕ್ರಿಸ್ತನ] ಸಾವಿರ ವರುಷದ ಮಹಿಮೆಯುಳ್ಳ ರಾಜ್ಯದಲ್ಲಿ ಆಳ್ವಿಕೆಮಾಡಿ ಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವಂಥ ನಿಜರೂಪದಲ್ಲಿನ ದಾವೀದನನ್ನು ಕಂಡುಕೊಳ್ಳುವ ಸಂಬಂಧದಲ್ಲಿ ನಾವು ಗಮನಿಸುವದೇನಂದರೆ ದಾವೀದನು ಈ ಕಾರ್ಯಕ್ಕೆ ಮಹತ್ವವಿಲ್ಲದವನೆಂದು ಅವನ ಅಣ್ಣಂದಿರು ಪರಿಗಣಿಸಿದಂತೆಯೇ ಈ ಕಾರ್ಯಕ್ಕೆ ಕರ್ತನು ಆಯ್ಕೆಮಾಡಿ ಅವರನ್ನು ಪರಲೋಕದ ತನ್ನ ರಾಜ್ಯಕ್ಕಾಗಿ ಅಭಿಷೇಕಿಸುತ್ತಿರುವವರ ಸಂಗತಿಯೂ ಸಹ ಇರುವದೆಂಬದೇ. ನಮ್ಮ ಕರ್ತನಾದ ಯೇಸುವು ತನ್ನ ಅಣ್ಣತಮ್ಮಂದಿರಿಂದ ಅಲ್ಪನೆಂದು ಪರಿಗಣಿಸಲ್ಪಟ್ಟಿದ್ದನು, ಅಲ್ಲದೆ ಈತನೇ ದೇವರಿಂದ ಅಭಿಷೇಕಿಸಲ್ಪಟ್ಟವನೆಂದು ಸೂಚಿಸಲ್ಪಟ್ಟಾಗ ಆತನ ಜನರು ತಮ್ಮ ಮುಖವನ್ನು ಆತನಿಂದ ಓರೆಮಾಡಿಕೊಂಡಿದ್ದರು, ಅಂದರೆ ಆತನನ್ನು ಅಸಡ್ಡೆಮಾಡಿ ಕೀಳಾಗಿ ನೋಡಿದ್ದರು, ಅಲ್ಲದೆ "ಒಣನೆಲದೊಳಗೆ ಬೇರಿನಿಂದ ಹೊರಡುವ ಚಿಗುರು" ಎಂದು ಸೂಚಿಸಲ್ಪಟ್ಟಾತನು ಯಾವ ವಿಶೇಷವೂ ಅಥವಾ ಮಹಿಮೆಯೂ ಹೊಂದಿರದಂಥ ನಿರೀಕ್ಷಾರಹಿತನು ಎಂದು ಪರಿಗಣಿಸಲ್ಪಟ್ಟಿದ್ದನು. ಆತನ ದೇಹದ ಅಂಗಗಳಾದ ಆಯಲ್ಪಟ್ಟ ಸಭೆಯವರ ಸ್ಥಿತಿಯೂ ಇದೇ ರೀತಿಯಲ್ಲಿ ಇರುವದು. ಅವರೂ ಸಹ ಮನುಷ್ಯರಿಂದ ಅಸಡ್ಡೆಮಾಡಲ್ಪಟ್ಟವರೂ ತಿರಸ್ಕೃತರೂ ಆಗಿರುವರು; ಇಂಥವರ ವಿಷಯವಾಗಿಯೇ ಅಪೋಸ್ತಲನು ಪ್ರಕಟಮಾಡಿ ಹೀಗೆ ಹೇಳಿರುವದು–ನಾವು ಕ್ರಿಸ್ತನ ನಿಮಿತ್ತವಾಗಿಯೂ, ಸತ್ಯದ ನಿಮಿತ್ತವಾಗಿಯೂ "ಲೋಕದ ಕಸವೋ ಎಲ್ಲಾದರ ಹೊಲಸೋ ಎಂಬಂತೆ ಆಗಿದ್ದೇವೆ" – 1 ಕೊರಿಂಥ 4:13

ಯಾರು ಹೃದಯವನ್ನು ತಿಳಿಯಬಲ್ಲವರು?

ಮತ್ತೆ ಆತನು ಪ್ರಕಟಮಾಡಿ ಹೇಳಿರುವದು, "ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಂಥವರನ್ನು ಕರೆದನೆಂದು ಆಲೋಚಿಸಿರಿ. ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳು ಅನೇಕರಿಲ್ಲ, ಅಧಿಕಾರಿಗಳೂ ಅನೇಕರಿಲ್ಲ, ಕುಲೀನರೂ ಅನೇಕರಿಲ್ಲ." ಯಾಕೋಬನು ಕೇಳುವದು–"ನನ್ನ ಪ್ರಿಯ ಸಹೋದರರೇ, ಕೇಳಿರಿ, ದೇವರು ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ಆದುಕೊಂಡು ಅವರು ನಂಬಿಕೆಯಲ್ಲಿ ಐಶ್ವರ್ಯವಂತರಾಗಿಯೂ ತನ್ನನ್ನು ಪ್ರೀತಿಸುವವರಿಗೆ ತಾನು ವಾಗ್ದಾನಮಾಡಿದ ರಾಜ್ಯಕ್ಕೆ ಬಾಧ್ಯರಾಗಿಯೂ ಇರಬೇಕೆಂದು ನೇಮಿಸಲಿಲ್ಲವೋ" ದೇವರು ಆದುಕೊಳ್ಳುವ ವಿಷಯಗಳಿಗೆ ಸಂಬಂಧಿಸಿದ ಅಂದರೆ ಮನುಷ್ಯರಿಂದ ಶ್ರೇಷ್ಠವೆಂದು ಎಣಿಸಲ್ಪಡದಂಥಾ ಈ ತತ್ವವು ಹಾಗೂ ಮನುಷ್ಯರ ದೃಷ್ಟಿಯಲ್ಲಿ ಶ್ರೇಷ್ಠವೆಂದು ಎಣಿಸಲ್ಪಡುವಂಥವುಗಳನ್ನು ನಿಷ್ಪ್ರಯೋಜನವಾಗ ಮಾಡಿರುವಂಥ ವಿಷಯಗಳನ್ನು ಸುವಾರ್ತಾಯುಗದ ಪರ್ಯಂತರವಾಗಿ ಗಮನಿಸಬಹುದು. ಅನೇಕ ಸಾರಿ ಪ್ರವಾದಿಯಾದ ಸಮುವೇಲನಂತೆ ನಾವು ದೇವರ ರಾಜ್ಯದಲ್ಲಿ ಒಂದು ಸ್ಥಾನವನ್ನು ಪಡೆಯಲು ಅರ್ಹರಂತೆ ಕಾಣುವ ಮನುಷ್ಯರನ್ನು ಕಂಡುಕೊಳ್ಳುವಾಗ ಮಾನವ ದೃಷ್ಟಿಯಲ್ಲಿ ಸಾಮಾಜಿಕವಾಗಿ ಬೌದ್ಧಿಕವಾಗಿ ನೈತಿಕವಾಗಿ ವಿದ್ಯಾಭ್ಯಾಸದಲ್ಲಿ ಶ್ರೇಷ್ಠರಾದಂಥ ಇವರನ್ನು ನೋಡಿ ಕರ್ತನು ಇದನ್ನು ಅನುಮೋದಿಸಿ ಇವರಿಗೆ ದೇವರು ಖಂಡಿತವಾಗಿಯೂ ಆನಂದ ತೈಲದಿಂದ ಅಭಿಷೇಕಮಾಡಿ ಇವರಿಗೆ ದೇವರ ರಾಜ್ಯದ ಸಂಬಂಧವಾದ ಸತ್ಯಾರ್ಥಗಳನ್ನು ತಿಳಿದುಕೊಳ್ಳಲು ಅನುಗ್ರಹಿಸುವನೆಂದು ಅಪೇಕ್ಷಿಸಿರುತ್ತೇವಲ್ಲವೇ, ಆದರೆ ಆನಂತರದಲ್ಲಿ ನಾವು ಇದನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವವೆಂದೂ, ದೇವರು ಮನುಷರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ ಎಂಬ ಅಂಶದ ಬಗ್ಗೆ ಮತ್ತೊಂದು ಪಾಠವನ್ನು ಕಲಿತಿದ್ದೇವೆಂಬುದು ತಿಳಿದುಬರುತ್ತದೆ.

ನಾವು ಹೃದಯವನ್ನು ತಿಳಿದುಕೊಳ್ಳಲು ಅಸಮರ್ಥರು ಎಂಬುದನ್ನು ಒಪ್ಪಿಕೊಳ್ಳುತ್ತೇವೆ; ಆದರೆ ಇಂಥಾ ಸಂಗತಿಗಳಲ್ಲಿ ದೇವರ ನಿರ್ಣಯಗಳನ್ನು ಅಂಗೀಕರಿಸಿಕೊಳ್ಳುವದರಲ್ಲಿ ಪೂರ್ಣ ತೃಪ್ತರಾಗಿ ಆನಂತರ ಒಂದು ನಿಗದಿತ ಕಾಲದಲ್ಲಿ ಈಗಿನ ಜೀವಿತದ ಮರ್ಮಗಳೆಲ್ಲವುಗಳು ಬಹಿರಂಗಗೊಳಿಸಲ್ಪಟ್ಟಾಗ ದೇವರ ಆಯ್ಕೆಯ ಸಂಬಧವಾದ ವಿಷಯಗಳನ್ನು ನಾವು ಈಗ ತಿಳಿದಿರುವುದಕ್ಕಿಂತಲೂ ಹೆಚ್ಚು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಮರ್ಥರಾಗುತ್ತೇವೆ.

ಆಗ ನಮಗೆ ಕರ್ತನು ಅಂಗೀಕರಿಸಲ್ಪಟ್ಟವರ ಹೃದಯಗಳು ಹಾಗು ಹೊರಗಿನ ತೋರಿಕೆಯಲ್ಲಿ ನಮ್ರರಾಗಿ ದೇವರ ರಾಜ್ಯದ ಕರೆಯುವಿಕೆಯ ವಿಷಯದಲ್ಲಿ ಕರ್ತನು ಅಷ್ಟು ವಿಶೇಷವಾಗಿ ಪರಿಗಣಿಸದಂಥವರ ಬಗ್ಗೆ ಇರುವ ವ್ಯತ್ಯಾಸಗಳನ್ನು ಕಾಣಲು ಶಕ್ತರಾಗುತ್ತೇವೆ. ಈ ಮಧ್ಯೆ–"ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ಹೌದು, ತಂದೆಯೇ ಹೀಗೆ ಮಾಡುವದೇ ಒಳ್ಳೆಯದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ." ಎಂದು ನಮ್ಮ ಪ್ರಿಯ ವಿಮೋಚಕನು ವ್ಯಕ್ತಪಡಿಸಿ ಹೇಳಿದ ಮಾತಿನಲ್ಲಿ ಭರವಸವಿಟ್ಟು ಆತನ ತೀರ್ಮಾನಗಳನ್ನು ಅಂಗೀಕರಿಸಿಕೊಂಡವರಾಗಿ ಕಾದುಕೊಂಡಿರಬೇಕಾಗುತ್ತದೆ.

ದೈವಿಕ ವಿಧಾನಗಳ ವಿಷಯವಾಗಿ ತಿಳುವಳಿಕೆ ಹೊಂದಿದವರಾದ ನಾವು–ಯಾರು ಬಹು ಅಲ್ಪಸ್ಥಿತಿಯುಳ್ಳವರಾಗಿ ಕುಲಹೀನರು ಅಥವಾ ಅನಕ್ಷರಸ್ತರೂ ಆಗಿದ್ದು ಶುದ್ಧತೆಯುಳ್ಳವರಾಗಿ ದೇವರ ಬಗ್ಗೆ ನಿಷ್ಠಾವಂತ ಹೃದಯ ಹೊಂದಿರುವದರ ಸಾಕ್ಷ್ಯಾಧಾರಗಳನ್ನು ನೀಡುವವರು ಅಲ್ಲದೆ "ಕೇಳುವ ಕಿವಿಯನ್ನು" ಹೊಂದಿ ಅವರಿಗೆ ದೇವರು ತನ್ನ ಆತ್ಮನ ಅಭಿಷೇಕವನ್ನು ನೀಡಿರುವಂತೆ ತೋರುತ್ತದೋ ಅಂಥವರನ್ನು ನಾವು ಅಸಡ್ಡೆಮಾಡುವಂತಿಲ್ಲ. ಬದಲಾಗಿ ನಮಗೆ ಅವಕಾಶ ದೊರೆತಂತೆಲ್ಲಾ ದೇವರ ಸಂದೇಶವನ್ನು ಎಲ್ಲರಿಗೂ ಪ್ರಕಟಿಸುವಂಥವರಾಗಿ ಯಾರ ಮೇಲೆ ದೇವರ ಅನುಗ್ರಹವು ವಿಶೇಷವಾಗಿ ತೋರ್ಪಡಲಾಗುತ್ತದೋ ಅಂಥವರ ವಿಷಯದಲ್ಲಿ ಅವರ ಲೌಕಿಕ ಸನ್ನಿವೇಶ ಮುಂತಾದವುಗಳ ಬಗ್ಗೆ ಲಕ್ಷಿಸದೆ ಅವರೊಂದಿಗೆ ಸಂತೋಷಿಸುವಂಥವರಾಗಬೇಕು. ("ತನ್ನವರು ಯಾರೆಂಬದನ್ನು ದೇವರು ಬಲ್ಲವನಾಗಿದ್ದಾನೆ"); ನಮ್ಮ ಕರ್ತನೂ ಗುರುವೂ ಆಗಿರುವಾತನ ರಾಯಭಾರಿಗಳೂ ಪ್ರತಿನಿಧಿಗಳೂ ಆಗಿರುವವರಾಗಿ ನಾವು ಇಂಥವರನ್ನು ಗುರುತಿಸಿಕೊಂಡು ಅವರನ್ನು ಸನ್ಮಾನಿಸಿ ಅವರೊಂದಿಗೆ ಸಹಕರಿಸುವಂಥದ್ದು ನಮ್ಮ ಸಂಗತಿಯಾಗಿರಬೇಕು.

ಅನೇಕ ಸಾರಿ ನಾವು ದೇವ ಜನರ ಒಂದು ಸಭೆಯಲ್ಲಿ ಕೆಲವರು ಪೂರ್ವಭಾವಿಯಾಗಿ ನೋಡಲು ಒಳ್ಳೆಯ ವ್ಯಕ್ತಿತ್ವವಿಲ್ಲದಂತೆ ಕಾಣುವವರೂ, ಕೆಲವರು ಒಳ್ಳೆಯ ವಿದ್ಯಾಭ್ಯಾಸವಿಲ್ಲವರೂ ಅಥವಾ ನಯನಾಜೋಕಿಲ್ಲದವರೂ, ಕುಲಹೀನರು ಆಗಿದ್ದಂತೆ ಕಂಡುಬಂದಾಗ್ಯೂ ಅವರಲ್ಲಿ ಕರ್ತನಿಂದಾದ ಅಭಿಷೇಕದ ಕುರುಹುಗಳುಳ್ಳವರಾಗಿ ತಮ್ಮ ಮುಖಗಳಲ್ಲಿ ಸತ್ಯದ ಜ್ಯೋತಿಯ ಹೊಳಪನ್ನು ಹೊಂದಿ ಸತ್ಯದ ಮೇಲಿನ ಭರವಸೆ ಹಾಗು ನಿರೀಕ್ಷೆಗಳಿಂದ ಪ್ರೇರಿತರಾಗಿರುವುದು ಅಲ್ಲದೆ ಆಂಧಕಾರದ ದೊರೆತನದಿಂದ ದೇವರ ಪ್ರಿಯ ಕುಮಾರನ ರಾಜ್ಯಕ್ಕೆ ಸೇರಿ ಮಾರ್ಪಟ್ಟಿರುವಂಥದನ್ನು ತಮ್ಮ ಜೀವಿತದಲ್ಲಿ ತೋರ್ಪಡಿಸುವವರನ್ನು ಕಾಣುವಾಗ ನಾವು ಆಗಾಗ್ಗೆ ಆಲೋಚಿಸುವದೇನಂದರೆ ಕರ್ತನು ತನ್ನ ಮದಲಗಿತ್ತಿಯನ್ನು ಕಂಡುಕೊಳ್ಳಲು ನಮ್ಮನ್ನು ಕಳುಹಿಸಿಕೊಟ್ಟಿದ್ದೇಯಾದಲ್ಲಿ ನಾವು ತಿಳಿಯದೆ ಕೆಲವು ಕರ್ತನ ಉತ್ಕೃಷ್ಟ ಆಭರಣಗಳಂತಿರುವವರನ್ನು ಬಿಟ್ಟುಬಿಟ್ಟು ಕರ್ತನು ಅನರ್ಹರೆಂದು ನಿರಾಕರಿಸಲ್ಪಟ್ಟಂಥವರನ್ನು ಆಯ್ಕೆಮಾಡಿರುತ್ತಿದ್ದೆವೆಂಬುದೇ, ಕಾರಣ ನಾವು ಹೃದಯವನ್ನು ತಿಳುಕೊಳ್ಳಲು ಅಸಮರ್ಥರಾಗಿದ್ದೇವೆ. ಈ ಅಂಶವು ನಮ್ಮನ್ನು ಬಹು ದೀನರೂ ವಿನಯವುಳ್ಳವರೂ ಹಾಗು ಎಲ್ಲರ ಬಗ್ಗೆ ನಮ್ರತೆಯುವುಳ್ಳವರೂ ಆಗಿರುವಂತೆ ಮಾಡಬೇಕು ಮತ್ತು ಕರ್ತನಲ್ಲಿ ಬಹು ಭರವಸೆಯುಳ್ಳವರೂ ಆತನ ಸೇವಕರಾಗಿ ನಮ್ಮ ಸೇವಾಪರಿಶ್ರಮಗಳಲ್ಲಿ

ಆತನ ನಡೆಸುವಿಕೆಯನ್ನು ಎದುರುನೋಡುವ ಪ್ರವೃತ್ತಿಯುಳ್ಳವರೂ–ಅಂದರೆ ದಾವೀದನನ್ನು ಅಭಿಷೇಕಿಸುವ ಸಂಬಂಧದಲ್ಲಿ ಸಮುವೇಲನು ದೇವರನ್ನು ಎದುರುನೋಡಿದಂತೆಯೇ ನಾವು ಸಹ ಆಗಿರಬೇಕು.

ಸಾವಿರ ವರುಷದ [ಆಳ್ವಿಕೆಯ] ಒಂದು ಚಿತ್ರಣ

"ಅವನು ಬರುವವರೆಗೂ ನಾವು ಊಟಕ್ಕೆ ಕೂತುಕೊಳ್ಳಬಾರದು" ಎಂಬ ಸಮುವೇಲನ ಈ ಮಾತುಗಳು ಅವರು ಭಾಗವಹಿಸಲಿರುವ ಔತಣಕೂಟದ ಬಗ್ಗೆ ಉಲ್ಲೇಖಿಸುತ್ತದೆ. ಆಗಿನ ಪದ್ಧತಿಯೇನಂದರೆ ಯಜ್ಞಾರ್ಪಣೆಯನ್ನು ಮಾಡಿದ ನಂತರ ಅಲ್ಲಿರುವಂಥ ಶುದ್ಧೀಕರಿಸಿಕೊಳ್ಳಲ್ಪಟ್ಟವರೂ ಹಾಗೂ ಆ ಯಜ್ಞಾರ್ಪಣೆಯಲ್ಲಿ ಪಾಲುತೆಗೆದುಕೊಳ್ಳುವಂಥ ಆತ್ಮಿಕಭಾವವುಳ್ಳವರು ಆ ಔತಣದಲ್ಲಿ ಭಾಗವಹಿಸಲು ಅಂದರೆ ಆ ಮಾಂಸವನ್ನು ಭೋಜನಮಾಡುವದರ ಮೂಲಕವಾಗಿ ಕರ್ತನ ಅನ್ಯೋನ್ಯತೆಯಲ್ಲಿ ಸಂಭ್ರಮಿಸಬಹುದಾಗಿತ್ತೆಂಬದು. ದಾವೀದನು ಆಗಮಿಸುವವರೆಗೆ ನಾವು ಆರಂಭಿಸಬಾರದೆಂದು ಪ್ರವಾದಿಯು ಹೇಳಿದ್ದು ಈ ಔತಣಕೂಟದ ವಿಷಯವಾಗಿಯೇ. ನಿಜವಾಗಿಯೂ ಕರ್ತನಿಂದ ಅಭಿಷೇಕಹೊಂದಿದ ಕಾರಣದಿಂದಲೇ ಅಲ್ಲಿ ಕೂಡಿಬಂದಿದ್ದವರಲ್ಲಿ ಈತನು [ದಾವೀದನು] ಬಹು ಮುಖ್ಯವಾದ ವ್ಯಕ್ತಿಯಾಗಿದ್ದನು.

ಬಹುಶಃ ಇಲ್ಲಿಯೂ ಸಹ ದೈವಿಕ ಯೋಜನೆಯಲ್ಲಿ ಕರ್ತನಿಂದಾಗುವ ಅಭಿಷೇಕದ ಸಂಬಂಧವಾಗಿ ಒಂದು ಚಿತ್ರಣವಿರುವದನ್ನು ಕಾಣಲು ನಮಗೆ ಸಾಧ್ಯ. ಭೂಲೋಕದ ಮನುಕುಲದವರೆಲ್ಲರಿಗೂ ಮೃಷ್ಟಾನ್ನ ಭೋಜನದ ಒಂದು ಔತಣಕೂಟವನ್ನು ಸಿದ್ದಪಡಿಸಲಾಗಿರುವದು. ಆದರೆ ನೀತಿನಿರ್ಣಯ ಹಾಗು ಶುದ್ಧೀಕರಣ ಪ್ರತಿಷ್ಠೆಯ ಸಂಬಂಧದ ಯಜ್ಞಪಶುವು ಕೊಲ್ಲಲ್ಪಟ್ಟ ನಂತರವೇ ಆ ಔತಣಕೂಟದಲ್ಲಿ ಭಾಗವಹಿಸಲು ಸಾಧ್ಯವಾಗುವದು. ಇದಕ್ಕಿಂತಲೂ ಹೆಚ್ಚಾಗಿ, ಅಭಿಷೇಕ ಹೊಂದಲಿರುವ ವ್ಯಕ್ತಿಯು ಬಂದು ಅಭಿಷೇಕವನ್ನು ಹೊಂದುವವರೆಗೂ ಔತಣಕೂಟವು ಆರಂಭವಾಗಲು ಸಾಧ್ಯವಿರುವುದಿಲ್ಲ. ಅಭಿಷೇಕಿಸಲ್ಪಡುವ ಕಾರ್ಯವು ಸಭೆಯ ಶಿರಸ್ಸಾಗಿರುವ ನಮ್ಮ ಕರ್ತನಲ್ಲಿ ಆರಂಭವಾಗಿದ್ದು ಸುವಾರ್ತಾಯುಗ ಪರ್ಯಂತರವಾಗಿ ಅದು ಸಭೆಯೆಂಬ ಆತನ ದೇಹದ ಅಂಗಗಳಾದವರ ಮೇಲೆ ಹರಿದುಬರುತ್ತಿರುವದು. ಯಜ್ಞಪಶುವು ಕೊಲ್ಲಲ್ಪಟ್ಟಿರುವದು; ಮತ್ತು ನಾವು ಕ್ರಿಸ್ತನ [ದೇಹದ] ಅಂಗಗಳಾಗಿ ಆ ಯಜ್ಞಾರ್ಪಣೆಯಲ್ಲಿ ಭಾಗವಹಿಸುತ್ತಿರುವೆವು. ಶೀಘ್ರದಲ್ಲೇ ಈ ಸಂಗತಿಯೆಲ್ಲವೂ ಪೂರ್ಣಗೊಳ್ಳುವದು; ಆನಂತರದಲ್ಲಿ, ಕರ್ತನಿಂದ ಅಭಿಷೇಕಹೊಂದಿದವರು ಮೃಷ್ಟಾನ್ನ ಭೋಜನದ ಔತಣಕೂಟವನ್ನು ಆರಂಭಿಸುವರು; ಶಿರಸ್ಸು–ದೇಹದಿಂದ ಕೂಡಿದ ಅಭಿಷಕ್ತರೇ ನಿಜರೂಪದ ಆ ಮಹಾ ಔತಣಕೂಟದಲ್ಲಿ ಪ್ರಮುಖರಾಗಿರುವರು.

ದೇವಾಶೀರ್ವಾದ ಬಲಶಕ್ತಿಗಳು ಕೆಲವೊಂದು ವಿಧದಲ್ಲಿ ದಾವೀದನ ಅಭೀಷೇಕವನ್ನು ಅನುಸರಿಸಿಕೊಂಡು ಬಂದಿದ್ದವು–ಅದು ಕೇವಲ ಹೇಗೆಂಬುದನ್ನು ನಾವು ಗ್ರಹಿಸಲಾರೆವು; ಯಾಕಂದರೆ ಆಗ ಆತ್ಮನು ತೋರ್ಪಡಿಸಿಕೊಳ್ಳುವಂಥದ್ದು ಪಂಚಾಶತ್ತಮ ದಿನದ ನಂತರದಲ್ಲಿ ಸಭೆಯ ಸಂಬಂಧದಲ್ಲಿ ನಡೆದಂತೆ ಇರುವದಿಲ್ಲ. (ಯೋಹಾನ 7:39). ಹೇಗೂ ಕೆಲವೊಂದು ವಿಧದಲ್ಲಿ ದೇವರ ಆಶೀರ್ವಾದ ಬಲಶಕ್ತಿಗಳು ದಾವೀದನೊಂದಿಗೆ ಇದ್ದು, ಇವು ಆತನು ಜ್ಞಾನವಿವೇಕ ಮುಂತಾದವುಗಳಲ್ಲಿ ವೃದ್ಧಿಯಾಗಲು ಸಮರ್ಥನಾಗುವಂತೆ ಮಾಡಿ ಆತನು ಅಭಿಷೇಕಿಸಲ್ಪಟ್ಟ ಕಾರ್ಯಸ್ಥಾನದ ಕರ್ತವ್ಯಗಳನ್ನು ನಿರ್ವಹಿಸುವದಕ್ಕೆ ಸಿದ್ದನಾಗುವಂತೆ ನಡೆಸಿದ್ದವು. ಇದರಲ್ಲಿರುವ ನಿಜರೂಪವನ್ನು ಅಂದರೆ ಸಭೆಯು ಕರ್ತನಿಂದ ಅಂಗೀಕರಿಸಲ್ಪಟ್ಟ ಸಮಯದ ನಂತರದಲ್ಲಿ ಹೊಂದಿದ ಅಭಿಷೇಕದ ಬಗ್ಗೆ ನಾವು ಪರಿಗಣನೆಗೆ ತೆಗೆದುಕೊಳ್ಳಬಹುದಲ್ಲವೇ? ನಮ್ಮದು ಭೌತಿಕವಾದ, ಇಲ್ಲವೇ ಶರೀರ ಸಂಬಂಧವಾದ, ಗುಣಲಕ್ಷಣಗಳ ಸಂಬಂಧ – ವಾದ, ಆಶೀವಾದಗಳನ್ನು ಕೊಂಡುತರುವಂಥ ಅಭಿಷೇಕವಲ್ಲ... ಅದು ನಾವು ಹೊಸ ಸೃಷ್ಟಿಗಳಾಗಿ ಅಭಿಷೇಕಿಸಲ್ಪಡುವಂಥಾಗಿದ್ದು ಆ ಮೂಲಕವಾಗಿ ನಾವು ಕೃಪೆಯಲ್ಲಿ ಜ್ಞಾನದಲ್ಲಿ ಹಾಗು ಪ್ರೀತಿಯಲ್ಲಿ ವೃದ್ಧಿಯಾಗಿ, ಅಂತ್ಯದಲ್ಲಿ ಅದು ಪುನರುತ್ಥಾನದ ಮೂಲಕವಾಗಿ ಪರಿಪೂರ್ಣತೆಯನ್ನು ಪಡೆದು ನಮಗೆ ಶಿರಸ್ಸಾಗಿರುವಂಥ ಕರ್ತನೂ ಹಾಗು ಗುರುವೂ ಆಗಿರುವಾತನೊಡನೆ ಸಿಂಹಾಸನಕ್ಕೆ ಬರುವಂಥದ್ದಾಗಿರುವದು.

*****

ಆಧುನಿಕ ದೈತ್ಯರ ಮೇಲಿನ ವಿಜಯ

ರೀಪ್ರಿಂಟ್ಸ್ ಪುಟ 5662

1 ಸಮುವೇಲ 17:1–54

ಸತ್ಯವೇದದಲ್ಲಿ ತಿಳಿಸಲಾದ ಮೊದಲ ದೈತ್ಯರು ಯಾರಂದರೆ ಆದಿಕಾಂಡ 6ನೇ ಅಧ್ಯಾಯದಲ್ಲಿ ಲಿಖಿತವಾಗಿ–ರುವಂತೆ ಅವರು ಮನುಷ್ಯಜಾತಿಯ ತಾಯಿಯನ್ನು ಪಡೆದಿದ್ದಾಗ್ಯೂ ಅವರ ತಂದೆಗಳು ಮಾನವರೂಪ ತಳೆದಿದ್ದಂಥ ಬಿದ್ದುಹೋದ ದೇವದೂತರಾಗಿದ್ದರು. ಹೇಗೂ ಇವರೆಲ್ಲರೂ ನೋಹನ ದಿನದಲ್ಲಿ ಸಂಭವಿಸಿದ ಜಲಪ್ರಳಯದಲ್ಲಿ ನಾಶವಾಗಿದ್ದರು. ಆನಂತರದಲ್ಲಿ ಕಾಲ ಕಾಲಕ್ಕೆ ಮಾನವ ದೇಹಿಗಳಾದ ದೈತ್ಯರು ಆಸ್ಯಸೀಮೆಯಲ್ಲಿ ಕಂಡುಬಂದಿದ್ದರು. ಬಾಷಾನಿನ ಅರಸನಾದ ಓಗನು ಹದಿಮೂರು ಅಡಿ ಉದ್ದದ್ದ ಮಂಚದ ಹಾಸಿಗೆಯನ್ನು ಹೊಂದಿದ್ದನು. ಕಾನಾನ್ ದೇಶವನ್ನು ಸಂಚರಿಸಿ ಬಂದ ಗೂಢಾಚಾರರು ತಾವು ಗತ್ ಊರಿನಲ್ಲಿ ಅನಾಕ್ಯನ ಮಕ್ಕಳಾದ ಗೊಲಿಯಾತನೆಂಬ ದೈತ್ಯಪುರುಷನನ್ನು ಕಂಡಿದ್ದಾಗಿ ತಮ್ಮ ವರದಿಯಲ್ಲಿ ತಿಳಿಸಿದ್ದರು. ದಾವೀದನು ಸಂಹಾರಮಾಡಿದ ಗತ್ ಊರಿನವನಾದ ಗೊಲಿಯಾತನು ಈ ಸಂತತಿಯಲ್ಲಿ ಬಂದವನಾಗಿರುವ ಸಂಭವವಿತ್ತು.

ನಾವು ಈಚಿನ ಸಮಯಗಳಲ್ಲಿ ಸಹ ದೈತ್ಯರುಗಳನ್ನು ಹೊಂದಿರುತ್ತೇವೆ; ಬೈರ್ನೆ ಎಂಬ ಒಬ್ಬ ಐರಿಷ್ ದೇಶದ ಮನುಷ್ಯನು ಎಂಟು ಅಡಿ ನಾಲ್ಕು ಅಂಗುಲ ಎತ್ತರದವನಾಗಿರುವನು; ಮಿಡ್ಲ್‌ಟನ್ ಎಂಬ ಒಬ್ಬ ಇಂಗ್ಲೀಷ್ ದೇಶದ ಮನುಷ್ಯನು ಒಂಭತ್ತು ಅಡಿ ಮೂರು ಅಂಗುಲ ಎತ್ತರದವನಾಗಿರುವನು; ಲುಸ್ಕಿನ್ ಎಂಬ ರಷ್ಯಾ ದೇಶದ ಮನುಷ್ಯನು ಎಂಟು ಅಡಿ ಐದು ಅಂಗುಲ ಎತ್ತರವುಳ್ಳವನಾಗಿರುವನು; ಚಾಂಗ್ ಎಂಬ ಚೀನಾ ದೇಶದ ಮನುಷ್ಯನು ಏಳು ಅಡಿ ಎಂಟು ಅಂಗುಲ ಎತ್ತರದವನಾಗಿರುವನು. ಗಬ್ಬರಾಸ್ ಎಂಬುವನು ಒಂಭತ್ತು ಅಡಿ ಒಂಭತ್ತು ಅಂಗುಲ ಎತ್ತರದವನಾಗಿದ್ದನೆಂದು ಪ್ಲೈನಿ ಎಂಬುವವನು ಪ್ರಕಟಮಾಡಿ ಹೇಳಿದ್ದನು. ಆದುದರಿಂದ ದಾವೀದ ಮತ್ತು ಗೊಲ್ಯಾತರ ಕಥೆಯನ್ನು ನಾವು ತಳ್ಳಿಹಾಕಲು ಅವಕಾಶವಿರುವದಿಲ್ಲ.

ದಾವೀದನು, ಇಪ್ಪತ್ತು ವರುಷದ ಒಬ್ಬ ಯೌವನಸ್ಥನಾ–ಗಿರುವ ಸಂಭವವಿದ್ದು, ಇಸ್ರಾಯೇಲ್ಯರ ಸೇನೆಯನ್ನು ಭೇಟಿಮಾಡಿದ್ದನು; ಅದರಲ್ಲಿ ಆತನ ಮೂವರು ಮಂದಿ ಅಣ್ಣಂದಿರು ಸೈನಿಕರಾಗಿದ್ದು ಅವರ ಪೋಷಣೆಗಾಗಿ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಬಂದಿದ್ದನು. ಇಸ್ರಾಯೇಲ್ ಸೈನಿಕರು ಪಶ್ಚಿಮ ದಿಕ್ಕಿನಿಂದ ಆಕ್ರಮಣಮಾಡಿದ್ದ ಫಿಲಿಷ್ಟಿಯರ ಸೈನ್ಯವನ್ನು ಎದುರಿಸುತ್ತಿರುವದನ್ನು ಕಂಡು ತಾನು ಆಶ್ಚರ್ಯಗೊಂಡಿದ್ದನು. ಅವರು ಯುದ್ಧಮಾಡುತ್ತಿರಲಿಲ್ಲ; ಒಬ್ಬನು ಮತ್ತೊಬ್ಬನ ವಿಷಯದಲ್ಲಿ ಭಯಪಡುತ್ತಿದ್ದುದು ಸ್ಪಷ್ಟವಾಗಿತ್ತು. ಪ್ರತಿ ದಿನ ಬೆಳಿಗ್ಗೆ ಫಿಲಿಷ್ಟಿಯರಲ್ಲಿ ಒಬ್ಬ ವೀರನು ಆಕಾರಬಲದಲ್ಲಿ ದೈತ್ಯನಾಗಿದ್ದು ಇನ್ನೂರ ಇಪ್ಪತ್ತು ಪೌಂಡುಗಳ ತೂಕದ ತಾಮ್ರದ ಯುದ್ಧಾಯುಧಗಳನ್ನು ಧರಿಸಿಕೊಂಡವನಾಗಿ ಇಪ್ಪತ್ತ ಐದು ಪೌಂಡು ತೂಕದ ತುದಿಯುಳ್ಳ ಹಾಗು ಮೂರು ಇಂಚುಗಳಷ್ಟು ಅಗಲವಾದ ಹಿಡಿಯುಳ್ಳ ತನ್ನ ಈಟಿಯನ್ನು ಝಳಪಿಸುತ್ತಿದ್ದನು. ಅವನು ಇಸ್ರಾಯೇಲ್ಯರನ್ನು ಅವಹೇಳನ ಮಾಡಿ ಒಬ್ಬ ವ್ಯಕ್ತಿಯೊಡನೆ ಮಾಡುವ ಹೋರಾಟವು ಯುದ್ಧವನ್ನು ನಿರ್ಣಯಿಸುವದೆಂದು ಸಾರಿ ಹೇಳುತ್ತಿದ್ದನು. ಕೇವಲ ಅವನು ಇಸ್ರಾಯೇಲ್ಯರನ್ನು ನಿಂದಿಸುವದು ಮಾತ್ರವಲ್ಲದೆ ಅವರ ದೇವರನ್ನು ಸಹ ನಿಂದಿಸುತ್ತಿದ್ದನು.

ಆ ಸವಾಲನ್ನು ಅಂಗೀಕರಿಸಲು ಒಬ್ಬನೂ ಇಲ್ಲದೆ ಅಷ್ಟು ಸುದೀರ್ಘವಾಗಿ ಇದು ಮುಂದುವರೆಯುತ್ತಿದ್ದುದಕ್ಕೆ ಯೌವನಸ್ಥನಾದ ದಾವೀದನು ವಿಸ್ಮಯಪಟ್ಟಿದ್ದನು. ಸತ್ಯದೇವರನ್ನು ನಂಬುವವರಲ್ಲಿ ಒಬ್ಬನಾಗಿ ಆತನು ದೇವರು ತನ್ನ ಜನಾಂಗದವರೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯ ಬಗ್ಗೆ ಮನಗೊಂಡವನಾಗಿದ್ದನು. ಸರ್ವಶಕ್ತನಾದ ದೇವರಲ್ಲಿದ್ದ ಆತನ ನಂಬಿಕೆಯು ಎಂಥದ್ದೆಂದರೆ ಆತನು ದೇವರ ವಾಗ್ದಾನಗಳನ್ನು ಅಂತರಾರ್ಥ ಸಹಿತವಾಗಿ ಅಂಗೀಕರಿಸಿಕೊಂಡಿದ್ದನು. ತನ್ನ ಸಹೋದರರಲ್ಲಿಯೂ ಹಾಗು ತನ್ನ ಸ್ವದೇಶದವರಲ್ಲಿಯೂ ನಂಬಿಕೆಯಿಲ್ಲದ್ದಕ್ಕೆ ಅಚ್ಚರಿಗೊಂಡಿದ್ದನು. ದೇವರ ವಾಗ್ದಾನಗಳ ಬೆಂಬಲದಿಂದಾಗಿ ಸ್ವತಃ ತಾನೇ ಆ ಗೊಲ್ಯಾತನನ್ನು ಎದುರುಗೋಳ್ಳಲು ಧೈರ್ಯದಿಂದ ಹೋಗುವದಾಗಿ ತಿಳಿಸಿದ್ದನು.

ಶತ್ರುವು ಹಾಕಿದ ಸವಾಲನ್ನು ಎದುರಿಸುವವನಿಗೆ ದೊಡ್ಡ ಗೌರವ ಉಂಟಾಗುವದೆಂದು ಇಸ್ರಾಯೇಲಿನ ಅರಸನಾದ ಸೌಲನು ಪ್ರಕಟಪಡಿಸಿದ್ದನು. ಯೌವನಸ್ಥನಾದ ದಾವೀದನು ಆತನ ಎದುರಿಗೆ ತರಲ್ಪಟ್ಟಿದ್ದನು; ಆದರೆ ಒಬ್ಬ ರಣವೀರನೊಡನೆ ಹೋರಾಡಲು ತೆಳ್ಳನೆಯ ಕಟ್ಟುಮಸ್ತಿನ ಯುವಕನು ದೈತ್ಯಶಕ್ತಿಯುಳ್ಳ ಗೊಲ್ಯಾತನಿಗೆ ಸರಿಸಾಟಿಯಾಗಲಾರನೆಂದೂ ಆತನ ಈಟಿಯ ಒಂದೇ ಒಡೆತವು ಇವನನ್ನು ಸಂಹಾರ ಮಾಡುವದೆಂಬದಕ್ಕೆ ಅರಸನು ಕಳವಳಪಟ್ಟಿದ್ದನು. ಆಗ ಯೌವನಸ್ಥನು ತನ್ನ ಉದ್ದೇಶವನ್ನು ಸಮರ್ಥಿಸಿಕೊಂಡಿದ್ದನು. ತನ್ನ ತಂದೆಯ ಕುರಿಗಳ ಪಾಲಕನಾಗಿ ತಾನು ಆಗಿಂದಾಗ್ಗೆ ಅವುಗಳನ್ನು ಹಿಂಹ ಹಾಗು ಕರಡಿಯ ಬಾಯಿಂದಲೂ ಪಂಜದಿಂದಲೂ ಬಿಡಿಸುತ್ತಿದ್ದುದ್ದನ್ನು ಅವನು ಪ್ರಟಕಮಾಡಿ ಹೇಳಿದ್ದನು. ಆತನಿಗೆ ಧೈರ್ಯವಿತ್ತು, ಅಲ್ಲದೆ ಎಲ್ಲಾದಕ್ಕೂ ಮಿಗಿಲಾಗಿ ಆತನಿಗೆ ದೇವರಲ್ಲಿ ನಂಬಿಕೆಯಿತ್ತು. ದೇವರು ತನ್ನ ಹಿಂದಿನ ದೈನಂದಿನ ಕರ್ತವ್ಯ ನಿರ್ವಹಣೆಯಲ್ಲಿ ಆಶೀರ್ವದಿಸಿ–ದಂತೆಯೇ ಆ ಗಳಿಗೆಯ ಕರ್ತವ್ಯದಲ್ಲಿ ಜಯಗಳಿಸಲು ಅಂದರೆ ಆ ದೈತ್ಯನ ಉದ್ಧಟತನವನ್ನೂ ಅಲ್ಲದೆ ಆತನು ಯೆಹೋವನಿಗೆ ಮಾಡಿದ ನಿಂದನೆಯನ್ನು ಮೆಟ್ಟಿಹಾಕಲು ಆತನಿಗೆ ಬಲವನ್ನು ನೀಡುವವನಾದ್ದನು.

ಅರಸನು ಪ್ರಭಾವಿತನಾಗಿದ್ದನು. ಆತನು ದಾವೀದನಿಗೆ ತನ್ನ ಆಯುಧಗಳನ್ನು ಅಂದರೆ ಇಸ್ರಾಯೇಲಿನಲ್ಲೇ ಅತ್ಯುತ್ತಮವಾದುದನ್ನು ಎರವಲಾಗಿ ಕೊಡುವನಾಗಿದ್ದನು. ಆದರೆ ಅವುಗಳನ್ನು ಹೊರಲು ಪ್ರಯತ್ನಿಸಿದ ನಂತರ ಯುವಕನಾದ ದಾವೀದನು ಕೃತಜ್ಞತಾಪೂರ್ವಕವಾಗಿ ನಿರಾಕರಿಸಿದ್ದನು. ಇಂಥ ಶಸ್ತ್ರಾಸ್ತ್ರಗಳು ಆತನಿಗೆ ರೂಢಿಯಾಗಿರಲಿಲ್ಲ, ಇದರಿಂದ ಹೊರತಾಗಿರುವದು ಅವನಿಗೆ ಉತ್ತಮವಾಗಿತ್ತು. ಆತನು ಕೇವಲ ತನಗೆ ರೂಢಿಯಾಗಿದ್ದ ತನ್ನ ಕುರುಬರ ದೊಣ್ಣೆಯನ್ನು ಮತ್ತು ತನ್ನ ಕವಣೆಯನ್ನು ತನ್ನೊಡನೆ ತೆಗೆದುಕೊಂಡನು. ಫಿಲಿಷ್ಟಿಯರಿದ್ದ ಸ್ಥಳಕ್ಕೆ ದಾಟಿಹೋಗಿ ಆತನು ಹೋರಾಟ ಮಾಡುವ ಸಲುವಾಗಿ ಹಳ್ಳದಿಂದ ನುಣುಪಾದ ಐದು ಕಲ್ಲುಗಳನ್ನು ತೆಗೆದುಕೊಂಡನು. ಈ ಲಘುವಾದ ಶಸ್ತ್ರಾಸ್ತ್ರಗಳು ದೇವಾಶೀರ್ವಾದದೊಂದಿಗಿರಲು ಅವು ಸಾಕಾಗಿದ್ದವು; ಯಾಕಂದರೆ ಆತನಿಗೆ ಒಂದೇ ಒಂದು ಕಲ್ಲನ್ನು ಉಪಯೋಗಿಸುವದು ಅವಶ್ಯವಾಗಿತ್ತು.

ಆ ದೈತ್ಯನು ರೋಷಗೊಂಡು–"ನೀನು ಕೋಲು ಹಿಡಿದು ನನ್ನ ಬಳಿಗೆ ಬರುವದೇನು? ನಾನು ನಾಯಿಯೋ" ಎಂದು ಹೇಳಿದ್ದನು. ಸಂಪ್ರದಾಯವು ಹೇಳುವ ಪ್ರಕಾರ ಈ ಹುಡುಗನು ಹತ್ತಿರ ಬರುತ್ತಿದ್ದಂತೆ ದೈತ್ಯನು ತನ್ನ ತಲೆಯನ್ನು ಹಿಂದಕ್ಕೆ ಸರಿಸಿಕೊಂಡು ನಗಾಡಿದ್ದನು. ಆತನ ಶಿರಸ್ತ್ರಾಣವು ಕೆಳಗೆ ಬಿದ್ದಿತ್ತು; ನಿಖರ ಗುರಿಕಾರನಾಗಿದ್ದ ಹಾಗೂ ತಾನು ನಿಂದಿಸಿದ, ಎದುರಾಳಿಯ ಮುಂದೆ ಆತನು ರಕ್ಷಣಾರಹಿತನಾಗಿ ನಿಂತಿದ್ದನು. ಆ ದಿನಗಳಲ್ಲಿ ಸಮಾಚಾರ ಪತ್ರಿಕೆಗಳಾಗಲೀ ಸಾರ್ವಜನಿಕ ಗ್ರಂಥಾಲಯಗಳಾಗಲಿ ಇರಲಿಲ್ಲ; ಹೀಗಾದರೂ ಕಾಳಗದಲ್ಲಿ ಕವಣೆಯ ಕಲ್ಲು ಎಂಥಾ ಶಕ್ತಿಶಾಲಿಯೆಂಬದು ಆತನಿಗೆ ತಿಳಿದಿರಲಿಲ್ಲ; ಅನೇಕ ಸಾರಿ ನುರಿತ ಕೈಯಲ್ಲಿ ಅವು ಈ ದಿನದ ಬಂದೂಕುಗಳ ಪ್ರಕಾರವೇ ಬಹು ಪರಿಣಾಮಕಾರಿಯಾಗಿದ್ದವು. ಆ ದೈತ್ಯನು ಸ್ತಬ್ಧನಾಗಿದ್ದನು, ತನ್ನ ಆಯುಧವಾಹಕನು ಪಲಾಯನ ಮಾಡಿದ್ದನು; ಹಾಗು ಯೌವನಸ್ಥನಾದ ದಾವೀದನು ಶೀಘ್ರವಾಗಿ ಅವನನ್ನು ನಿರ್ಜೀವಗೊಳಿಸಿ ಆತನ ಶಸ್ತ್ರವನ್ನು ವಿಜಯದ ಒಂದು ಸ್ಮಾರಕವಾಗಿ ತೆಗೆದುಕೊಂಡನು. ಫಿಲಿಷ್ಟಿಯರು ವಿಸ್ಮಯಗೊಂಡು ದಿಗ್ಭ್ರಾಂತರಾಗಿ ಓಡಿಹೋಗಿದ್ದರು, ಇಸ್ರಾಯೇಲ್ಯರು ಅವರನ್ನು ಅವರ ಕೋಟೆಕೊತ್ತಲುಗಳ ಪಟ್ಟಣದವರೆಗೂ ಹಿಂದಟ್ಟಿ ಹೋಗಿದ್ದರು.

ಆಧುನಿಕ ದೈತ್ಯರನ್ನು ಹೇಗೆ ಎದುರಿಸುವದು

ಯೇಸುವಿನ ಮರಣವನ್ನು ಅನುಸರಿಸಿಕೊಂಡು ಒಂದು ಹೊಸ ದೈವಿಕ ವ್ಯವಸ್ಥಾಕ್ರಮದ ಸಂಗತಿಗಳು ಪ್ರವೇಶಮಾಡಿದ್ದವು. ದೇವರಲ್ಲಿ ನಂಬಿಕೆಯುಳ್ಳವರಿಗೆ ಗೆಲ್ಲಲು ಇನ್ನೂ ಹೋರಾಟಗಳಿದ್ದವು, ಆದರೆ ಅದು ಲೌಕಿಕ ಸಂಬಂದವಾದ ಆಯುಧಗಳಿಂದ ಮಾಡುವಂಥದ್ದಾಗಿರಲಿಲ್ಲ. ಹೀಗಾದರೂ, ಅವರ ಗೆಲುವು ದಾವೀದನಿಗೆ ಅನುಕೂಲಕರವಾಗಿ ಕಾರ್ಯವೆಸಗಿದ ಗೆಲುವಿನ ತತ್ವವನ್ನೇ ಆಧರಿಸಿತ್ತು. ಅದು ದೇವರ ಮೇಲಿನ ನಂಬಿಕೆಯ ಮೂಲದಲ್ಲಿತ್ತು; ಅಂದರೆ ಅದು ಅವರ ಹೋರಾಟದ ಧ್ಯೇಯೋದ್ದೇಶಗಳು ದೇವರಿಂದ ಮನ್ನಣೆ ಪಡೆದಿರುವದು ಎಂಬುದನ್ನು ಅರಿತುಕೊಂಡಿರುವಂಥದ್ದೇ. ಅವರ ನಂಬಿಕೆಗೆ ಸೂಕ್ತವಾದ ಒಂದು ಧೈರ್ಯ ಅಂದರೆ ದಾವೀದನ ವಿಷಯದಲ್ಲಿದ್ದ ಹಾಗೆಯೇ ಅಲ್ಪಬಲದ ಶತ್ರುಗಳ ಮೇಲಿನ ಹಿಂದಿನ ಗೆಲುವುಗಳ ಮೂಲಕ ಹಂತಹಂತವಾಗಿ ವೃದ್ಧಿಯಾಗುತ್ತಾ ಬಂದ ಒಂದು ನಂಬಿಕೆ; ಅದು ನಾವು ಎದುರಿಸಬಹುದಾದ ಅತಿ ಭಯಾನಕ ದೈತ್ಯರೊಡನೆ ಹೋರಾಡಲು ಧೈರ್ಯಸ್ಥೈರ್ಯ ನೀಡುವ ಸಲುವಾದ ಸಹಾಯಗಳಾಗಿರುವವು.

ಇದನ್ನು ನೆನಪಿಸಿಕೊಂಡವನಾಗಿ ಪ್ರತಿಯೊಬ್ಬ ಕ್ರೈಸ್ತನು ದಿನನಿತ್ಯವೂ ತನ್ನ ಸಣ್ಣಪುಟ್ಟ ಬಲಹೀನತೆ ದೌರ್ಬಲ್ಯಗಳನ್ನು ಜಯಿಸಲು ಜಾಗರೂಕನಾಗಿರಬೇಕು; ಅಂದರೆ ಸ್ವಾರ್ಥ ಕ್ರೋಧ ದ್ವೇಷ ಅಸೂಯೆ ದುರ್ಭಾಷೆ ಇವುಗಳ ಮೇಲೆ ಜಯಶಾಲಿಯಾಗಬೇಕು. ಇವುಗಳ ಮೇಲೆ ಪಡೆದ ಯಶಸ್ಸು ಮತ್ತು ಇವುಗಳನ್ನು ಜಯಿಸಲು ದೊರೆತ ದೇವರ ಸಹಾಯ ಸಂಬಂಧವಾಗಿ ಲಭಿಸಿದ ಅನುಭವಗಳು ಅತಿ ದೊಡ್ಡ ಪರಿಶೋಧನೆಗಳ ಮೇಲೆ ಭವ್ಯವಾಗಿ ವಿಜಯಹೊಂದಲು ಹಂತ ಹಂತವಾಗಿ ಸಿದ್ಧಪಡಿಸುವದು.

"ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು." ಎಂಬ ಈ ದೈವ ವಾಗ್ದಾನದ ಬಗ್ಗೆ ನಾವು ಕಲಿತುಕೊಂಡಾಗ ಅದು ನಮಗೆ ದೇವರು ಕರೆದ ತನ್ನ ಸಭೆಗೆ ನೀಡಲಿರುವ ಆ ಮಹಾ ಗೌರವಕ್ಕೆ ಯೋಗ್ಯರಾಗುವ ಸಲುವಾಗಿ ನಾವು ಒಂದು ಮಹಾ ವಿಜಯವನ್ನು ಪಡೆಯಬೇಕಾಗುವದೆಂಬ ಆಲೋಚನೆಯನ್ನು ನಮಗೆ ನೀಡುತ್ತದೆ. ಅಲ್ಲದೆ ಈ ವಿಜಯವು ಯಾವಾಗಲೂ ಬಲಶಾಲಿಗಳಿಗೆ ಆಗಿರದೆ ಅದು ದೇವರು ಆಶೀರ್ವದಿಸುವಂಥವರಿಗೆ ಆಗುವದು ಎಂಬುದನ್ನು ನಾವು ಕಲಿತುಕೊಳ್ಳಲು ಹರ್ಷವುಳ್ಳವರಾಗಿದ್ದೇವೆ. ದೇವರು ಅನುಮೋದಿಸಿ ಬಹುಮಾನ ಮಾಡಲಿರುವಂಥ ಹೋರಾಟವು ಮಿತ್ರರ ಅಥವಾ ನೆರೆಯವರೊಂದಿಗೆ ಆಲ್ಲದಿದ್ದರೂ, ಅವು ಎಷ್ಟೇ ಅಸಮಂಜಸವಾಗಿ ಇರಬಹುದಾದರೂ–ಅದು ಅನೀತಿಗೆ ವಿರುದ್ಧವಾಗಿಯೂ, ಪಾಪಕ್ಕೆ ವಿರುದ್ಧವಾಗಿಯೂ, ದೈವೀಕ ನಿಯಮವು ವಿರೋಧಿಸುವಂಥ ಪ್ರತಿಯೊಂದು ಸಂಗತಿಗಳಿಗೆ ವಿರುದ್ಧವಾಗಿಯೂ ಇರುತ್ತದೆ. ಮೊಟ್ಟಮೊದಲಾಗಿ ಈ ಹೋರಾಟ ವಿಜಯಗಳು ನಮ್ಮ ಹೃದಯ ಮನಸ್ಸುಗಳಿಗೆ ಸಂಬಂಧಿಸುವಂಥವುಗಳಾಗಿದ್ದು ಮತ್ತು ಎರಡನೆಯದಾಗಿ ಅದು ದೇವರ ಅನುಗ್ರಹಗಳು ಸೂಚಿಸುವ ಬಹಿರಂಗವಾದ ಕೆಟ್ಟತನಗಳಿಗೆ ವಿರೋಧವಾಗಿಯೂ ಅಲ್ಲದೆ ಸಾರ್ವಜನಿಕ ಮತ್ತು ನಾಗರಿಕ ಸಂಬಂಧದ ನೈತಿಕತೆಗಳನ್ನು ಬೆಂಬಲಿಸುವ ಪರವಾಗಿಯೂ ಇರುವದು.

ಶತಮಾನಗಳಿಂದ ದೇವ ಜನರನ್ನು ಕಾಡುತ್ತಿರುವ ಪಾಪ ಮತ್ತು ಅಧರ್ಮವೆಂಬ ಮಹಾ ದೈತ್ಯನನ್ನು ಕೇವಲ ಒಂದು ನಿಗದಿತ ಕಾಲದಲ್ಲಿ ನಿಜರೂಪದ ದಾವೀದನ ಮೂಲಕವಾಗಿ

ಹತವಾಡಲಾಗುವದೆಂಬದನ್ನು ಹೇಗೂ ನಾವು ಮರೆಯುವಂತಿಲ್ಲ. ದಾವೀದನು ಎಂಬ ಹೆಸರು ಪ್ರಿಯನು ಎಂಬುದನ್ನು ಸೂಚಿಸುತ್ತದೆ. ಶಿರಸ್ಸಾದ ಯೇಸು ಹಾಗು ಆತನ ದೇಹವಾದ ಸಭೆಯು ನಿಜರೂಪದ ಪ್ರಿಯನಾಗಿರುವ ಕ್ರಿಸ್ತನು. ಶೀಘ್ರದಲ್ಲಿಯೇ ಸತ್ಯವೆಂಬ ಒಂದು ಕವಣೆಯ ಕಲ್ಲು ಮಹಾ ವಿರೋಧಿಯನ್ನು ಹೊಡೆದುರುಳಿಸಲಿರುವದು; ಹಾಗು ನಿಜರೂಪದ ದಾವೀದನು ಲೋಕವನ್ನು ಉನ್ನತಕ್ಕೆ ಏರಿಸಿ ಅದನ್ನು ಆಶೀರ್ವದಿಸಲಿರುವ ಸಾವಿರ ವರುಷದ ಆಳ್ವಿಕೆಯನ್ನು ಆರಂಭಿಸುವನು. ಈ ದಾವೀದನ ವರ್ಗದ ಸದಸ್ಯರಾಗಿರುವ ನಾವು ಜಯಶಾಲಿಯ ಮನೋಭಾವವನ್ನು ಪಡೆದು ಇದಕ್ಕೆ ಬೆಂಬಲಿತವಾಗಿರುವ ನಂಬಿಕೆ ಹಾಗು ದೇವರ ವಾಗ್ದಾನ ಮತ್ತು ಬಲದ ಮೇಲೆ ಭರವಸವುಳ್ಳವರಾಗಿರಬೇಕು.

*****

ದಾವೀದ ಮತ್ತು ಗೊಲ್ಯಾತನು

ರೀಪ್ರಿಂಟ್ಸ್ ಪುಟ 1902

1 ಸಮುವೇಲ 17:38–51

"ಯುದ್ಧಫಲವು ಯೆಹೋವನ ಕೈಯಲ್ಲಿದೆ." – 1 ಸಮುಯೇಲ 17:47

ಕ್ರೈಸ್ತನಿಗೆ ಈ ನಿರೂಪಣೆಯು ಮೂಲಕವಾಗಿ ಕಲೆಹಾಕಲಿರುವ ಪಾಠವು ಸಂಕ್ಷೇಪವಾಗಿ "ಯುದ್ಧಫಲವು ಯೆಹೋವನ ಕೈಯಲ್ಲಿದೆ." ಎಂಬ ಈ ಸುವರ್ಣಮಯ ಪಠ್ಯಭಾಗದಲ್ಲಿ ಅಡಕವಾಗಿದೆ. ಇದನ್ನು ಅವನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡು ದೇವರು ಒದಗಿಸುವ ಬಲದಲ್ಲಿ ಅಂದರೆ ದಾವೀದನನ್ನು ವಿಭಿನ್ನತೆಯುಳ್ಳವನಾಗಿ ಮಾಡಿದ ನಂಬಿಕೆ ಎದೆಗಾರಿಕೆ ಮತ್ತು ಸಾಹಸ ಇವುಗಳನ್ನು ಅನುಸರಿಸುವವರಾಗಿ ದಿನವೂ ಮಹಾ ಅಂಧಕಾರದ ದೊರೆತನದೊಡನೆ ಹೋರಾಟ ಮಾಡಲು ಹೊರಡುವಂಥವನಾಗಲಿ. ಆಗ ಯಾವ ಶತ್ರುವೂ ಆತನ ಎದುರಿನಲ್ಲಿ ನಿಲ್ಲಲಾರನು. "ಲೋಕವನ್ನು ಜಯಿಸುವಂಥದ್ದು ನಂಬಿಕೆಯೇ." "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ." ಇಲ್ಲವೇ ನಮ್ಮ ಪರವಾಗಿ ಆತನ ಮಧ್ಯಸ್ಥಿಕೆಯನ್ನು ಪಡಕೊಳ್ಳುವದು ಅಸಾಧ್ಯವಾಗುವದು.

ನಂಬಿಕೆಯನ್ನು ಪಡಕೊಂಡ ನಂತರ ನಮಗೆ ಲೌಕಿಕ ಆಯುಧಗಳ ಅಗತ್ಯವಿರುವದಿಲ್ಲ, ಅಲ್ಲದೆ ಯಾವ ಮಾನವ ಸಂಶೋಧಿತ ಆಯುಧಗಳು ನಮಗೆ ಯಾವ ಉಪಯೋಗಕ್ಕೂ ಬರುವದಿಲ್ಲ; ಆದರೆ ತರಬೇತು ಹೊಂದಿದ ಪ್ರಾಯೋಗಿಕವಾದ ನಂಬಿಕೆಯು ದಾವೀದನ ಕವಣೆ ಹಾಗು ನುಣುಪು ಕಲ್ಲುಗಳು ಮಾಡಿದಂಥ ಮಹಾ ಅದ್ಭುತಗಳನ್ನು ನಡೆಸಲು ಸಾಧ್ಯ. ಕವಣೆ ಹಾಗು ಕಲ್ಲುಗಳು ದಾವೀದನಿಗೆ ತರಬೇತಿಲ್ಲದ ಆಯುಧಗಳಾಗಿರಲಿಲ್ಲ. ಆತನು ಅವುಗಳೊಡನೆ ಸತತವಾಗಿ ಅಭ್ಯಾಸಮಾಡುವವನಾಗಿದ್ದು ಅವನು ಹೀಗೆ ಅವುಗಳನ್ನು ಬಳಸುವಂಥ ಕೌಶಲ್ಯ ಹಾಗು ಆತ್ಮವಿಶ್ವಾಸಗಳನ್ನು ಪಡೆದಿದ್ದನು. ಹೀಗೆಯೇ ಕ್ರೈಸ್ತನು ಜೀವಿತದ ಸಣ್ಣಸಣ್ಣ ವಿಷಯಗಳ ಸಂಬಂಧವಾಗಿ ದೇವರ ಮೇಲೆ ಆತುಕೊಳ್ಳುವದನ್ನು ಸತತವಾಗಿ ಅಭ್ಯಾಸಮಾಡಿಕೊಳ್ಳಬೇಕು, ಆನಂತರ ದೈತ್ಯಾಕಾರದ ಪರಿಶೋಧನೆಗಳು ಬಂದಾಗ ತಾನು ಅಭ್ಯಾಸಿಸಿಕೊಂಡಿದ್ದ ನಂಬಿಕೆಯು ಅವುಗಳನ್ನು ಜಯಿಸಲು ಪೂರ್ಣಶಕ್ತವಾಗಿರುವದು. ಪರಿಶೋಧನೆಯು ತೀವ್ರವಾದಷ್ಟೂ ನಂಬಿಕೆಯ ಮೂಲಕವಾದ ವಿಜಯವು ಬಹು ಭವ್ಯವಾಗಿರುವದಲ್ಲದೆ ಇದರ ಅಭ್ಯಾಸದ ಮೂಲಕವಾಗಿ ದೊರಕುವಂಥ ಗುಣಸ್ವಭಾವಗಳ ಬಲವು ಬಹು ವಿಶೇಷವಾಗಿರುವದು. ನಿಸ್ಸಂದೇಹವಾಗಿಯೂ ದಾವೀದನಿಗೆ ಸಿಂಹ ಮತ್ತು ಕರಡಿಯೊಂದಿಗೆ ನಡೆಸಿದ ತನ್ನ ಹಿಂದಿನ ಹೋರಾಟಗಳು ಹಾಗು ಆಗ ಅದರ ಮೇಲೆ ದೇವರು ದಯಪಾಲಿಸಿದ ಗೆಲುವುಗಳು ಆತನಿಗೆ ಗೊಲ್ಯಾತನ ಬಲವನ್ನು ಪ್ರತಿರೋಧಿಸುವಂಥಾ ಎದೆಗಾರಿಕೆಯನ್ನು ತಂದುಕೊಟ್ಟಿತ್ತು. ಹೀಗೆಯೇ ನಾವು ನಡೆಸುವ ಪ್ರತಿಯೊಂದು ಹೋರಾಟವು ಹಾಗು ದೇವರ ಮೇಲಿನ ನಂಬಿಕೆಯ ಮೂಲಕವಾಗಿ ಪಡೆಯುವ ಪ್ರತಿಯೊಂದು ಗೆಲುವುಗಳು ಮುಂದಿನ ಹೋರಾಟಗಳಿಗೆ ಬಲವನ್ನು ವೃದ್ಧಿಮಾಡಿ ನಮ್ಮ ಅಂತಿಮ ವಿಜಯವನ್ನು ಬಹುವಾಗಿ ಖಚಿತಪಡಿಸುವದು.

*****

ನಮಗಿರುವ ಸಾಮರ್ಥ್ಯವು ದೇವರಿಂದಲೇ ಬಂದದ್ದು

ರೀಪ್ರಿಂಟ್ಸ್ ಪುಟ 3230

1 ಸಮುವೇಲ 17:38-39

ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? – ರೋಮಾ 8:31

ಇಸ್ರಾಯೇಲ್ಯರು ಕಾನಾನ್ ದೇಶವನ್ನು ವಶಪಡಿಸಿಕೊಂಡ ಕಾಲದಲ್ಲಿ ಫಿಲಿಷ್ಟಿಯರು ಕಾನಾನ್ ದೇಶದ ಮುಂಭಾಗದ ಕರಾವಳಿಯ ಪ್ರದೇಶವನ್ನು ಒಂದು ಗಣನೀಯ ಪ್ರಮಾಣದಲ್ಲಿ ಆಕ್ರಮಿಸಿಕೊಂಡಿದ್ದು, ಅವರ ಹಕ್ಕುಬಾಧ್ಯತೆಗಳನ್ನು ಇಸ್ರಾಯೇಲ್ಯರು ಮಾನ್ಯಮಾಡಿದಂತೆ ತೋರುತ್ತದೆ; ಯಾಕಂದರೆ ದೇಶವನ್ನು ವಶಡಿಸಿಕೊಳ್ಳುವ ಮೊದಲು ಅದಕ್ಕೆ ಚೀಟು ಹಾಕಿ ವಿಭಾಗಿಸಿಕೊಂಡಾಗ ಫಿಲಿಷ್ಟಿಯರು ಆಕ್ರಮಿಸಿಕೊಂಡಿದ್ದ ಪ್ರದೇಶ–ವನ್ನು ದೇವರು ತಮಗೆ ಮಾನ್ಯವಾಗಿ ನೀಡಿದ ಪ್ರದೇಶದಲ್ಲಿ ಅಡಕಮಾಡಿರಲಿಲ್ಲ. ನಿಜವಾಗಿಯೂ ದೇವರು ಈ ಪ್ರಬಲ ಜನಾಂಗವನ್ನು ತಾನು ಆದುಕೊಂಡ ಜನವು ಅಪನಂಬಿಗಸ್ತರಾ–ದಾಗ ಅದನ್ನು ಒಂದಕ್ಕಿಂತಲೂ ಹೆಚ್ಚು ಸಾರಿ ಶಿಕ್ಷಾದಂಡವಾಗಿ ಬಳಸಿಕೊಂಡಿರುವದು ನಮಗೆ ನೆನಪಿರುವದು. ಹೀಗೆಯೇ ಸಂಸೋನನ ಕಾಲದಲ್ಲಿ ಫಿಲಿಷ್ಟಿಯರು ಇಸ್ರಾಯೇಲ್ಯರಿಗೆ ಒಡೆಯರಾಗಿದ್ದು, ಸಂಸೋನನು ಫಿಲಿಷ್ಟಿಯರ ನೊಗವನ್ನು ಕಳಚಿಹಾಕುವ ಒಂದು ಸಾಧನವಾಗಿ ದೇವರಿಂದ ಬಳಕೆಮಾಡಲ್ಪಟ್ಟಿದ್ದನು; ಈ ಕೆಲಸವು ಸಂಸೋನನಿಂದ ಪ್ರಾರಂಭವಾದಾಗ್ಯೂ ಪ್ರವಾದಿಯಾದ ಸಮುವೇಲನ ದಿವಸಗಳ ವರೆಗೂ ಅದು ಪೂರ್ಣಗೊಂಡಿರಲಿಲ್ಲ. – 1 ಸಮುವೇಲ 14.


ನಮ್ಮ ಪಾಠವು ಇಸ್ರಾಯೇಲ್ಯರ ಗಡಿಪ್ರದೇಶಕ್ಕೆ ಫಿಲಿಷ್ಟಿಯರಿಂದ ಮತ್ತೊಂದು ಅತಿಕ್ರಮಣವಾದದ್ದನ್ನು ತೋರಿಸಿಕೊಡುತ್ತದೆ, ಆ ಸಮಯದಲ್ಲಿ ಸೌಲನು ಅರಸನಾಗಿದ್ದನು. ಈಗಾಗಲೇ ದಾವೀದನು ಗೌಪ್ಯವಾಗಿ ಅಭಿಷೇಕಿಸಲ್ಪಟ್ಟಿದ್ದು ಅವನನ್ನು ಸೌಲನ ಉತ್ತರಾಧಿಕಾರಿಯೆಂದು ಬಹಿರಂಗವಾಗಿ ಘೋಷಣೆ ಮಾಡಿರಲಿಲ್ಲ. ಫಿಲಿಷ್ಟಿಯರ ಸೇನೆಯು ಇಸ್ರಾಯೇಲ್ಯರ ಪ್ರದೇಶದಲ್ಲಿ ಗಣನೀಯ ಪ್ರಮಾಣದಲ್ಲಿನ ದೂರಕ್ಕೆ ಮುಂದುವರಿದು ಬಂದಿದ್ದು ಅದರ ದೊಡ್ಡ ಪರ್ವತ ಪ್ರದೇಶವನ್ನು ತಲುಪಿತ್ತು; ಅಲ್ಲಿ ಅವರನ್ನು ಎದುರುಗೊಳ್ಳಲು ಸೌಲನು ಇಸ್ರಾಯೇಲ್ಯರ ಸೇನೆಯನ್ನು ಒಟ್ಟುಗೂಡಿಸಿದ್ದನು. ಈ ಎರಡು ಸೈನ್ಯಗಳ ನಡುವೆ ಒಂದು ಕಣಿವೆಯಿತ್ತು ಮತ್ತು ಈ ಕಣಿವೆಯ ಮಧ್ಯದಲ್ಲಿನ ಪರ್ವತದ ಬಂಡೆಯಲ್ಲಿ ಒಂದು ಝರಿಯಿಂದ ಕತ್ತರಿಸಲ್ಪಟ್ಟಿದ್ದ ಹತ್ತು ಅಡಿ ಆಳದ ಕಂದಕವಿತ್ತು. ಆ ದಿನದಲ್ಲಿ ನಡೆಯುವ ಒಂದು ಸಾಮಾನ್ಯ ರೀತಿಯ ಯುದ್ಧಕ್ಕೆ ಈ ಸ್ಥಳವು ಅನುಕೂಲಕರವಾಗಿತ್ತು. ಆ ಸೈನ್ಯಗಳಲ್ಲಿ ಯಾವದೂ ಈ ಆಳವಾದ ಝರಿಯ ದಡವನ್ನು ದಾಟಿ ತನ್ನ ವಿರೋಧಿಯನ್ನು ಎದುರಿಸುವ ಪ್ರಯತ್ನವನ್ನು ಮಾಡಲು ಕುತೂಹಲವುಳ್ಳದ್ದಾಗಿರುವಂತೆ ಕಂಡುಬರಲಿಲ್ಲ, ಕಾರಣ ಇಂಥಾ ಪರಿಸ್ಥಿತಿಯು ಆಕ್ರಮಣಮಾಡುವ ಗುಂಪಿಗೆ ಬಹುವಾಗಿ ಅನಾನುಕೂಲ–ಕರವಾಗಿರುವದು. ಅಲ್ಲದೆ ಇಸ್ರಾಯೇಲ್ಯರ ಅರಸನು ತನ್ನ ಜೊತೆ ಇಸ್ರಾಯೇಲ್ಯರಲ್ಲಿ ಹೆಗಲೂ ತಲೆಯೂ ಕಾಣುವಷ್ಟು ಉನ್ನತನಾಗಿರುವುದನ್ನು ತಿಳಿದ ಫಿಲಿಷ್ಟಿಯರು ಆತನಿಗೆ ಎದುರಾಳಿಯಾಗಿ ಒಬ್ಬ ದೈತ್ಯನಾದ ಗೊಲ್ಯಾತನನ್ನು ನಿಲ್ಲಿಸಿದ್ದರು; ಗೊಲ್ಯಾತನು ಇನ್ನೂ ಉನ್ನತನಾಗಿ ಹತ್ತು ಅಡಿ ಎತ್ತರವುಳ್ಳವನೂ ಕಟ್ಟುಮಸ್ತಾದವನೂ ಆಗಿರುವಂಥದ್ದು ಆತನ ಯುದ್ಧಾಯುಧ ಈಟಿ ಹಾಗು ಖಡ್ಗ ಇವುಗಳ ತೂಕದ ಮೂಲಕವಾಗಿ ಸೂಚಿತವಾಗಿತ್ತು. ಹಾಕಲ್ಪಟ್ಟ ಸವಾಲು ಏನಂದರೆ ಹಲವಾರು ವರುಷಗಳಿಂದ ಇರುವ ಈ ಎರಡು ಜನಾಂಗಗಳ ನಡುವಿನ ವ್ಯಾಜ್ಯವು ಸಾಧಾರಣವಾದ ಯುದ್ಧದ ಮೂಲಕವಾಗಿ ಬಗೆಹರಿಸಿಕೊಳ್ಳದೆ ಅದು ಈ ಫಿಲಿಷ್ಟಿಯ ದೈತ್ಯನ ಹಾಗು ಈತನನ್ನು ಎದುರಿಸಲು ಇಸ್ರಾಯೇಲ್ಯರಲ್ಲಿ ವಿಶೇಷ ಸಾಮರ್ಥ್ಯವುಳ್ಳವನ ನಡುವಿನ ದ್ವಂದ್ವ ಯುದ್ಧದ ಮೂಲಕವಾಗಿರಬೇಕೆಂಬದೇ. ಇಂಥಾ ಇಸ್ರಾಯೇಲ್ಯನು ನಿಸ್ಸಂದೇಹವಾಗಿ ಅರಸನಾದ ಸೌಲನೇ ಆಗಿರುತ್ತಿದ್ದನು.

ನಾಲ್ವತ್ತು ದಿನಗಳ ಪರ್ಯಂತರ ಪ್ರತಿ ಬೆಳಿಗ್ಗೆಯಲ್ಲಿ ಈ ಸವಾಲನ್ನು ಹಾಕಲಾಗುತ್ತಿದ್ದು ಇಸ್ರಾಯೇಲ್ಯರ ಅರಸನು ಹಾಗು ಆತನ ರಣಶೂರರ ಮುಖ್ಯಸ್ಥರು ಈ ದೈತ್ಯನ ವಿಷಯದಲ್ಲಿ ಅಂಜಿದವರಾಗಿ ಆ ಸವಾಲಿಗೆ ಸ್ಪಂದಿಸಲಾಗದೆಂದು ಕಾರ್ಯತಃ ಅರಿಕೆಮಾಡಿದ್ದರು. ಈ ಸಂದರ್ಭದಲ್ಲಿಯೇ ಇಪ್ಪತ್ತೊಂದು ವರುಷದ ಯುವಕನಾದ ದಾವೀದನು ಇಸ್ರಾಯೇಲ್ಯರ ಸೇನೆಯಲ್ಲಿದ್ದ ತನ್ನ ಸಹೋದರರು ಹೇಗಿರುವರೆಂದೂ ಅವರಿಗೆ ಮನೆಯಿಂದ ಕೆಲವು ಆಹಾರ ಪದಾರ್ಥಗಳನ್ನು ಕೊಂಡೊಯ್ಯಲು ಹಾಗು ಯೆಹೋವನ ಸೇನೆಯು ಹೇಗೆ ಮುನ್ನಡೆಯಲ್ಲಿದೆ ಎಂಬುದರ ಬಗ್ಗೆ ಸಂದೇಶವನ್ನು ತೆಗೆದುಕೊಂಡು ಬರಲು ತನ್ನ ತಂದೆಯಿಂದ ಕಳುಹಿಸಲ್ಪಟ್ಟಿದ್ದನು. ದಾವೀದನ ಕೆಲವು ದೋಷಬಲಹೀನತೆಗಳನ್ನು ಉಲ್ಲೇಖಿಸಿ ಆತನು ಸ್ವತಃ ದೇವರಲ್ಲಿದ್ದ ಮನಸ್ಸನ್ನು ಹೊಂದಿದವನು ಎಂಬ ಸತ್ಯವೇದದ ಹೇಳಿಕೆಯ ಬಗ್ಗೆ ಅವಿಶ್ವಾಸಿಗಳು ದೇವಜನರನ್ನು ಮರಳುಮಾಡುವಂಥ ಸಂಭವವಿರುವದು; ಆದರೆ ಈ ಪಾಠದಲ್ಲಿ ದೇವರು ಬಹುವಾಗಿ ಪ್ರಸಂಶಿಸಿದ ದಾವೀದನ ಗುಣವಿಶೇಷಗಳನ್ನು ನಾವು ಸ್ಪಷ್ಟವಾಗಿ ಕಾಣುವೆವು. ಇಂಥಾ ಗುಣವಿಶೇಷಗಳನ್ನು ಹೊಂದಿ ಅದನ್ನು ತೋರ್ಪಡಿಸುವಂಥ ಪ್ರತಿಯೊಬ್ಬನನ್ನು ದೇವರು ಹೀಗೆಯೇ ನಿರಂತರವೂ ಪ್ರಸಂಶಸಿಸುವನು. ದೇವರು ದಾವೀದನಲ್ಲಿ ಪ್ರಸಂಶಿಸಿದ ಗುಣಸ್ವಭಾವವು ಯಾವದಂದರೆ ಆತನ ನಂಬಿಕೆಯೇ–ಇದೇ ಗುಣಸ್ವಭಾವದ ಸಂಬಂಧದಲ್ಲಿ ದೇವರು ಅಬ್ರಹಾಮನನ್ನು ಹಾಗು ಹಿಂದಿನ ಎಲ್ಲಾ ನಂಬಿಗಸ್ತರನ್ನು ಪ್ರಸಂಶಿಸಿದ್ದನು. "ದೇವರಿಗೆ ಮೆಚ್ಚಿಕೆಯಾಗಿದ್ದರೆಂಬ ಸಾಕ್ಷಿಯನ್ನು" ಹೊಂದಿದವರೆಲ್ಲರ ಬಗ್ಗೆ ಬರೆಯಲ್ಪಟ್ಟಿರುವದೇನಂದರೆ ನಂಬಿಕೆಯ ಮೂಲಕವಾಗಿ ಅವರು ಹೀಗೆ ಮಾಡಿದರು ಹಾಗೆ ಮಾಡಿದರು ಎಂಬದೇ. "ಆ ನಂಬಿಕೆ ಅವರ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತ್ತು." – ಗಲಾತ್ಯ 3:6.

ದೇವರಲ್ಲಿದ್ದ ದಾವೀದನ ನಂಬಿಕೆಯು ವಿಶೇಷವಾಗಿದ್ದು, ಅವನು ಸೇನೆಯ ಬಳಿಗೆ ಬಂದಾಗ–ಆ ಫಿಲಿಷ್ಟಿಯನು ಇಸ್ರಾಯೇಲ್ಯರ ಮತ್ತು ಅವರ ದೇವರಿಗೆ ವಿರೋಧವಾಗಿ ನಾಲ್ವತ್ತು ದಿನಗಳಿಂದ ಸವಾಲು ಎಸಗಿ ಕೊಚ್ಚಿಕೊಳ್ಳುತ್ತಿದ್ದುದು ಹಾಗು ತನ್ನ ಜನಾಂಗದವರಲ್ಲಿ ಯಾರಿಗೂ ಈ ಸವಾಲನ್ನು ಅಂಗೀಕರಿಸಲು ದೇವರಲ್ಲಿ ಸಾಕಷ್ಟು ನಂಬಿಕೆಯಿಲ್ಲದಿರುವದು ತಿಳಿದುಬಂದಾಗ ದಾವೀದನಿಗೆ ಆಶ್ಚರ್ಯವಾಗಿತ್ತು. ಆ ಕೂಡಲೇ ಆತನು ತಾನು ಈ ಸವಾಲನ್ನು ಅಂಗೀಕರಿಸಿಕೊಳ್ಳುವದಾಗಿಯೂ ತನ್ನನ್ನು ಕಾರ್ಯಕ್ಕೆ ನೇಮಿಸುವ ಸಲುವಾಗಿ ಅರಸನ ಬಳಿಗೆ ಕರಕೊಂಡು ಹೋಗಬೇಕೆಂಬದಾಗಿಯೂ ಪ್ರಸ್ತಾಪಿಸಿದನು. ಆತನ [ದಾವೀದನ] ಬಗ್ಗೆ ಅರಸನಿಗೆ ತಿಳಿಸಿದವರು–ಆತನು ಬಲಶಾಲಿಯೂ ಶೌರ್ಯವುಳ್ಳವನೂ ಆಗಿರುವನೆಂದು ಹೇಳಿದ್ದರು, ಆದರೂ ಸೌಲನು ದಾವೀದನನ್ನು ನೋಡಿದಾಗ ಇವನು ಒಬ್ಬ ಯುವಕನಾಗಿದ್ದು ಶಾರೀರಿಕವಾಗಿ ಆ ದೈತ್ಯನಿಗೆ ಸರಿಗಟ್ಟಲಾರ–ನೆಂಬುದನ್ನು ಗ್ರಹಿಸಿಕೊಂಡಿದ್ದನು. ಹೇಗೂ ಈತನೊಬ್ಬನೇ ಆ ಸಂದರ್ಭಕ್ಕೆ ಎದ್ದುಬಂದ ವಿಜೇತನಾಗಿದ್ದು, ಇಸ್ರಾಯೇಲ್ಯರನ್ನು ಬಡಾಯಿಕೊಚ್ಚುತ್ತಿದ್ದ ಆ ಅನ್ಯಧರ್ಮಿಯಿಂದ ಬಿಡಿಸಲು ಯೆಹೋವನ ಕೈಯಲ್ಲಿರುವ ಸಾಧನವಾಗಿ ತನ್ನ ಯಶಸ್ಸಿನ ಬಗ್ಗೆ ಪೂರ್ಣ ವಿಶ್ವಾಸವುಳ್ಳವನಾಗಿದ್ದನು. ಸೌಲನು ಕಡೆಯಲ್ಲಿ ಒಪ್ಪಿಗೆ ಸೂಚಿಸಿ ಇಸ್ರಾಯೆಲ್ಯರ ಈ ಶ್ರೇಷ್ಠ ವಿಜೇತನಿಗೆ ತನ್ನ ಯುದ್ಧಾಯುಧಗಳನ್ನು ಎರವಲಾಗಿ ಕೊಡುವ ಪ್ರಸ್ತಾವನೆ ಮಾಡಿದ್ದನು; ಆದರೆ ಈ ಯುದ್ಧಾಸ್ತ್ರಗಳನ್ನು ತೊಟ್ಟುಕೊಂಡಾಗ ಇವು ತನಗೆ ಸೂಕ್ತವಾಗಿ ಹೊಂದಲಾಗವೆಂದು ದಾವೀದನಿಗೆ ಕಂಡುಬಂದಿತ್ತು. ಇಂಥಾ ಯುದ್ಧೋಪಕರಣಗಳನ್ನು ಆಯಾಸವಿಲ್ಲದೆ ಪ್ರಯೋಜನಕಾರಿಯಾಗಿ ಹೇಗೆ ಬಳಸ–ಬಹುದೆಂಬುದನ್ನು ಕಲಿತುಕೊಳ್ಳಲು ಗಣನೀಯವಾದ ಕಾಲಾವಧಿಯ ಅಗತ್ಯವಿರಲಾಗಿ ದಾವೀದನು ತನ್ನ ಎಂದಿನ ಕುರುಬರ ವಸ್ತ್ರವನ್ನು ತೊಟ್ಟು ಕೇವಲ ಕುರುಬರ ದೊಣ್ಣೆ ಮತ್ತು ಕವಣೆ, ನುಣುಪು ಕಲ್ಲುಗಳಗನ್ನು ಒಳಗೊಂಡ ಚರ್ಮದ ಚೀಲವನ್ನು ತೆಗೆದುಕೊಂಡು ಹೋಗಲು ನಿರ್ಧರಿಸಿದನು. ಈ ಕಲ್ಲುಗಳನ್ನು ಅವನು ಒರತೆಯ ಹಳ್ಳವನ್ನು ದಾಟುವಾಗ ಅದರ ದಡದಿಂದ ಆರಿಸಿತೆಗೆದುಕೊಂಡಿದ್ದನು.

ಗೊಲ್ಯಾತನು ತನ್ನೊಡನೆ ಯುದ್ಧಮಾಡಲು ಕೆಂಬಣ್ಣದ ಯುವಕನು ಒಂದು ದೊಣ್ಣೆಯೊಡನೆ ಸಮೀಪಿಸುತ್ತಿರುವದನ್ನು ನೊಡಿದಾಗ ಅವನಿಗೆ ತನ್ನ ಸ್ವಂತ ಕಣ್ಣುಗಳನ್ನೇ ನಂಬಲು ಸಾಧ್ಯವಾಗಲಿಲ್ಲ; ಕಾರಣ ಅಲ್ಲಿ ಆತನು ಕವಣೆಯನ್ನು ಗಮನಿಸದಿರುವ ಸಂಭವವಿತ್ತು. ಆತನು ರೋಷಗೊಂಡು ಶ್ರೇಷ್ಠನೂ ಪರಾಕ್ರಮಿಯೂ ಬಲಶಾಲಿಯೂ ಪೂರ್ಣ ಶಸ್ತ್ರಸಜ್ಜಿತನೂ ಆದವನನ್ನು ಒಂದು ದೊಣ್ಣೆಯಿಂದ ಆಕ್ರಮಣಮಾಡಲು ನಾನೇನು ನಾಯಿಯಂತೆ ಭಾವಿಸಲ್ಪಟ್ಟಿರುವೆನೋ ಎಂದು ವಿಚಾರಿಸಿದ್ದಲ್ಲದೆ ದಾವೀದನನ್ನು ತನ್ನ ದೇವರುಗಳ ಹೆಸರಿನಲ್ಲಿ ಶಪಿಸಿ ತಾನು ಅವನನ್ನು ಶೀಘ್ರವಾಗಿ ತುಂಡರಿಸಿ ಆತನ ಮಾಂಸವನ್ನು ಪಕ್ಷಿಗಳಿಗೆ ಕೊಡುತ್ತೇನೆಂದು ಸಾರಿ ಹೇಳಿದನು.

ದಾವೀದನ ಪ್ರತ್ಯುತ್ತರವು ಆಪತ್ತು–ಆಪಾಯಗಳನ್ನೆಲ್ಲಾ ಒಳಗೊಂಡಿರುವ ಅಲ್ಲಿನ ಸಂದರ್ಭದ ಬಗ್ಗೆ ತನಗೆ ಮನವರಿಕೆ–



ಯಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿತ್ತು. ತನ್ನ ಎದುರಾಳಿಯು ಖಡ್ಗ ಬರ್ಜಿ ಭಲ್ಲೆಗಳಿಂದ ಸುಸಜ್ಜಿತನಾ–ಗಿದ್ದನೆಂಬುದು ಆತನಿಗೆ ಅರಿವಾಗಿತ್ತು. ತಾನು ದೇವರು ದಯಪಾಲಿಸಿರುವ ಶಕ್ತಿಸಾಮರ್ಥ್ಯದಲ್ಲಿ ದೃಢವಾಗಿದ್ದು ಅಂದರೆ ದೇವರು ಆ ಹೋರಾಟದ ಬಗ್ಗೆ ನಿರ್ಣಯಿಸುವನಾಗಿ ತನಗೆ ಜಯವನ್ನು ಅನುಗ್ರಹಿಸಿ ತನ್ನ ಜನರನ್ನು ಅವರ ಎಲ್ಲಾ ವೈರಿಗಳಿಂದ ಬಿಡಿಸಲು ಸಮರ್ಥನಾಗಿರುವನೆಂಬ ನಂಬಿಕೆಯಲ್ಲಿ ದೃಢವಾಗಿದ್ದು ತಾನು ಆ ಕಾಳಗವನ್ನು ಸಮೀಪಿಸುತ್ತಿರುವದಾಗಿ ಆತನೇ ಹೇಳಿದ್ದನು. ಅಲ್ಲಿನ ವಾಸ್ತಾವಾಂಶವನ್ನು ದಾವೀದನು ಚೆನ್ನಾಗಿ ಪರಿಗಣನೆಮಾಡಿ ಅಲ್ಲಿ ಎರಡು ಸೈನ್ಯಗಳ ನಡುವೆ–ಯಾಗಲಿ, ಎರಡು ಪುರುಷರ ನಡುವೆಯಾಗಲಿ ಸಂಭವಿಸುತ್ತಿರುವ ಸಂಗತಿಯಲ್ಲದೆ ಅದು ಇಸ್ರಾಯೆಲ್ಯರ ದೇವರ ಹಾಗು ಫಿಲಿಷ್ಟಿಯರ ಸುಳ್ಳು ದೇವರುಗಳ ನಡುವೆ ಸಂಭವಿಸುತ್ತಿರುವ ಸಂಗತಿಯೆಂಬು–ದನ್ನು ಗಮನಿಸಿಕೊಂಡಿದ್ದನು. ಈ ಘಟನೆ ಸಂಭವಿಸುವದಕ್ಕೆ ಇಪ್ಪತ್ತು ವರುಷಗಳ ಹಿಂದಿನಿಂದಲೇ ಇಸ್ರಾಯೇಲ್ಯರೆಲ್ಲರಲ್ಲಿ ದೇವರ ಮೇಲಣ ನಂಬಿಕೆಯು ವೃದ್ಧಿಯಾಗುತ್ತಾ ಬಂದಿರುವದು ನಿಸ್ಸಂದೇಹವಾಗಿತ್ತು. ತಮ್ಮ ಪಾಪಗಳು ಹಾಗು ವಿಗ್ರಹಾರಾಧನೆಗಳ ನಿಮಿತ್ತವಾಗಿ ಶಿಕ್ಷಿಸಲ್ಪಟ್ಟವರಾಗಿ ದೇವರ ಬಳಿಗೆ ಹಿಂದಿರುಗಿರಲು ತಾವು ದೇವಜನರಾಗಿರುವ ಕಾರಣಕ್ಕಾಗಿ ದೇವರ ಅನುಗ್ರಹವು ಈಗ ತಮ್ಮೊಡನೆ ಇರುವದೆಂಬುದನ್ನು ಕ್ರಮೇಣ ಕಲಿತುಕೊಂಡಿದ್ದರು; ಆದರೆ ದಾವೀದನಿಗೆ ದೇವರಲ್ಲಿನ ನಂಬಿಕೆಯು ಸಾಮಾನ್ಯವಾಗಿ ಇರುವದಕ್ಕಿಂದಲೂ ಹೆಚ್ಚಿನ ಮಟ್ಟದಲ್ಲಿತ್ತು. ಆ ರಾಜ್ಯಕ್ಕೆ ತಾನು ಸೌಲನ ಉತ್ತರಾಧಿಕಾರಿಯಾಗಿ ಅಭಿಷೇಕಿಸಲ್ಪಟ್ಟದ್ದು ನಿಸ್ಸಂದೇಹವಾಗಿ ಇಸ್ರಾಯೇಲ್ಯರ ರಾಜ್ಯವು ಮುಂದುವರಿಯಲಿರುವದು ದೇವರ ಚಿತ್ತವಾಗಿರುವದೆಂಬ ಭರವಸೆಯನ್ನು ನೀಡಿತ್ತು ಅಲ್ಲದೆ ಸೌಲನು ದೇವರ ಆಜ್ಞೆಗಳನ್ನು

ಉಲ್ಲಂಘನೆ ಮಾಡಿದಾಗ್ಯೂ ದೇವರ ಅನುಗ್ರಹವು ಒಂದು ಜನಾಂಗವಾಗಿ ಅವರೊಡನೆ ಇತ್ತೆಂಬುದನ್ನು ನಾವು ಹಿಂದಿನ ಪಾಠದಲ್ಲಿ ಗಮನಿಸಿದ್ದೇವೆ.

ಯೆಹೂದ್ಯಲ್ಲಿ ಒಂದು ಸಂಪ್ರದಾಯವಿದ್ದು ಮತ್ತು ಅದರ ಪ್ರಕಾರ ಗೊಲ್ಯಾತನು ಯುದ್ಧಾಯುಧ ರಹಿತನಾದ ತನ್ನ ಎದುರಾಳಿಯನ್ನು ನೋಡಿ ತಲೆಯನ್ನು ಹಿಂದಕ್ಕೆ ಎತ್ತಿಕೊಂಡು ನಗುವಾಗ ದಾವೀದನ ಕವಣೆಯ ಕಲ್ಲು ಆತನ ಹಣೆಗೆ ಹೊಕ್ಕಿತ್ತು. ಆ ಕಾಲದ ಶಿರಸ್ತ್ರಾಣವು ಮಧ್ಯಯುಗದಲ್ಲಿನ ಹೆಚ್ಚುಕಡಿಮೆ ಪೂರ್ಣವಾಗಿ ಮುಚ್ಚಿಕೊಳ್ಳದಿದ್ದು ಕುತ್ತಿಗೆ ಮತ್ತು ತಲೆಯ ಒಂದು ಭಾಗವು ಸಾಧಾರಣವಾಗಿ ತೆರೆಯಲ್ಪಟ್ಟಿರುತ್ತಿತ್ತು, ಹೀಗಾಗಿ ಗೊಲ್ಯಾತನು ನಗುತ್ತಿರುವವನಾಗಿ ತನ್ನ ತಲೆಯನ್ನು ಹಿಂದಕ್ಕೆ ಎಳೆದುಕೊಳ್ಳದಿದ್ದರೂ ದಾವೀದನ ಕಲ್ಲು ಆತನ ಹಣೆಯ ಸೂಕ್ಷ್ಮಭಾಗದಲ್ಲಿ ಒಳಹೊಕ್ಕಿತ್ತು. ಇಲ್ಲವೇ ಇದು ಒಂದು ಅದ್ಭುತವೆಂದು ಎಣಿಸಲು ದಾವೀದ ಗುರಿಗಾರಿಕೆಯು ಬಹು ಅಸಾಧಾರಣವಾದ್ದಾಗಿದ್ದೇನೂ ಅಗಿರಲಿಲ್ಲ. ದಾವೀದನ ಕುಲದವರಲ್ಲಿ ಅನೇಕರು ಕವಣೆಕಲ್ಲುಗಳು ಕೂದಲಿನೆಳೆಯಷ್ಟು ನಿಖರವಾಗಿ ಎಸೆಯುತ್ತಿದ್ದರೆಂಬ ಸತ್ಯವೇದದಲ್ಲಿನ ದಾಖಲೆಗಳನ್ನು ನಾವು ಹೊಂದಿರುವೆವು. (ನ್ಯಾಯಸ್ಥಾಪಕರು 20:16) ಕ್ಸೆನೊಫೊನ್ ಎಂಬುವವರು ಕೆಲವು ಪರ್ಷಿಯಾ ದೇಶದ ಕವಣೆಕಾರರ ನೈಪುಣ್ಯತೆಯ ಬಗ್ಗೆ ಉಲ್ಲೇಖಿಸಿರುವರು ಅಲ್ಲದೆ ಲಿವೀ ಎಂಬುವರು ಹೇಳಿರುವದೇನಂದರೆ ಕವಣೆಕಾರರು ಎಷ್ಟು ನಿಪುಣರಾಗಿದ್ದರೆಂದರೆ ಅವರು ಒಂದು ಕಲ್ಲನ್ನು ದೂರದಿಂದ ಒಂದು ಸಾಧಾರಣವಾದ ಹೂವಿನ ಸಿಂಬೆಯ ಅಥವಾ ಹೂವಿನ ಕಿರೀಟದ ಮೂಲಕವಾಗಿ ತೂರಿಹೋಗುವಂತೆ ಮಾಡುತ್ತಿದ್ದ–ರೆಂಬದು ಅಲ್ಲದೆ ಅವರು ತಮ್ಮ ಎದುರಾಳಿಯ ಮುಖಕ್ಕೆ ಹೊಡೆಯುವದು ಮಾತ್ರವಲ್ಲದೆ ಮುಖದ ಯಾವ ಭಾಗವನ್ನಾರೂ ಆರಿಸಿಕೊಂಡು ಅದಕ್ಕೆ ಹೊಡೆಯುತ್ತಿದ್ದರೆಂಬದು.

ಈ ಸಣ್ಣ ಘಟನೆಯನ್ನು ಒಂದು ಛಾಯಾರೂಪವೆಂದು ಕರೆಯಲು ನಮಗೆ ಸಾಧ್ಯವಾಗದಿದ್ದರೂ ಇದರಲ್ಲಿ ಒಂದು ಸಾಂಕೇತಿಕ ಅರ್ಥವಿರುವದನ್ನು ಹಾಗು ನಿಜರೂಪದ ದಾವೀದನಿಗೆ ಅಂದರೆ ಪ್ರಿಯನಾದವನಿಗೆ–[ಶಿರಸ್ಸು ಹಾಗು ದೇಹವನ್ನು ಒಳಗೊಂಡ] ಕ್ರಿಸ್ತನಿಗೆ ಆತ್ಮಿಕವಾದ ಒಂದು ಪಾಠ–ವಿರುವದನ್ನು ನಾವು ಕಾಣುವೆವು. ಗೊಲ್ಯಾತನು ಆ ಮಹಾ ಎದುರಾಳಿಯಾದ ಸೈತಾನನಿಗೆ ಮತ್ತು ಆತನ ಯಾವುದೇ ವಿವಾದಗಳ ಪರವಾಗಿರುವವರೆಲ್ಲರಿಗೆ ಅಂದರೆ ಪ್ರತಿಷ್ಠಿತರಾದ ದೇವಜನರನ್ನು ಪಾಪ ಇಲ್ಲವೇ ತಪ್ಪಾದವುಗಳ ದಾಸತ್ವಕ್ಕೆ ಸಿಕ್ಕಿಸಲು ಪರಿಶ್ರಮಿಸುತ್ತಿರುವ ಎಲ್ಲರಿಗೆ ಸಮರ್ಪಕವಾಗಿ ಚಿತ್ರೀಕರಿತನಾಗಿರುವನು. ನಿಜರೂಪದ ದಾವೀದನು (ಪ್ರಿಯನು) ದೇವರ ಮತ್ತು ಸತ್ಯದ ಹಾಗು ನೀತಿಯನ್ನು ಪ್ರೀತಿಸುವವರೆಲ್ಲರ ಸಲುವಾಗಿ ದಿಗ್ವಿಜಯ ಹೊಂದುವವರೆಗೂ ಇಹಲೋಕದ ಅಧಿಪತಿಯಾದ ಸೈತಾನನು ಯಾರೂ ತನ್ನ ಅತ್ಯುನ್ನತ ಅಧಿಕಾರವನ್ನು ಪ್ರಶ್ನಿಸಲು ಇಚ್ಛಿಸುವದಾಗಲೀ ಅಥವಾ ಅದಕ್ಕೆ ಸಾಮರ್ಥ್ಯವುಳ್ಳವರಾಗಲೀ ಆಗಿರುವದನ್ನು ಕಂಡುಕೊಂಡಿರಲಿಲ್ಲ. ದಾವೀದನು ನನ್ನ ಜನರನ್ನು ಬಿಡಿಸುವ ಸಲುವಾಗಿ ತನ್ನ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಂಡಿದ್ದಂತೆಯೇ ನಮ್ಮ ಕರ್ತನಾದ ಯೇಸುವು ನಿಜರೂಪದ ಇಸ್ರಾಯೇಲ್ಯರನ್ನು ಬಿಡುಗಡೆ ಮಾಡುವ ಸಲುವಾಗಿ ತನ್ನ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಂಡಿದ್ದು ಮಾತ್ರವಲ್ಲದೆ ಅದನ್ನು ಯಜ್ಞವನ್ನಾಗಿ ಅರ್ಪಿಸಿಕೊಂಡಿದ್ದನು; ದಾವಿದನು ತಾನು ಅಭಿಷೇಕಿಸಲ್ಪಟ್ಟ ತರುವಾಯ ಸಿಂಹವನ್ನು ಎದುರಿಸಿದ್ದಂತೆಯೇ ಯೇಸುವು ತಾನು ಯೋರ್ದಾನಿನಲ್ಲಿ ಪವಿತ್ರಾತ್ಮನಿಂದ ಅಭಿಷೇಕ ಹೊಂದಿದ ನಂತರ ಆತ್ಮನಿಂದ ಅರಣ್ಯಕ್ಕೆ ನಡೆಸಲ್ಪಟ್ಟು ಅಲ್ಲಿ ಎದುರಾಳಿಯೊಡನೆ ಒಂದು ದೊಡ್ಡ ಹೋರಾಟವನ್ನು ಎದುರಿಸಿದ್ದನು. ಆತನು ದೇವರ ವಾಕ್ಯದ ಮೂಲಕವಾಗಿ ಅಂದರೆ ಸೈತಾನನ್ನು ನಿರುತ್ತರಗೊಳಿಸುವ ಸಲುವಾಗಿ ಅತನ ಪ್ರತಿಯೊಂದು ಪ್ರಸ್ತಾವನೆಯನ್ನು 'ಎಂದು ಬರೆದದೆ' ಎಂಬ ಮಾತಿನಿಂದ ಉತ್ತರಿಸುವ ಮೂಲಕವಾಗಿ ಆತನನ್ನು [ಸೈತಾನನನ್ನು] ಜಯಿಸಿದ್ದನು. ಅಪೋಸ್ತಲನು ವಿವರಿಸಿ ಹೇಳಿರುವದು ಈ ಉದ್ದೇಶಕ್ಕಾಗಿಯೇ ಕ್ರಿಸ್ತನು ಮರಣವೆಂಬ ದಾಸತ್ವವನ್ನು ಹಾಗು ಮರಣದ ಮೇಲೆ ಅಧಿಕಾರವನ್ನು ಹೊಂದಿರುವಾತನನ್ನು ಅಂದರೆ ಸೈತಾನನನ್ನು ನಾಶಗೊಳಿಸುವ ಸಲುವಾಗಿ ಪ್ರತ್ಯಕ್ಷನಾಗಿದ್ದನು. ಅಂತ್ಯದಲ್ಲಿ ದೇವಜನರೆಲ್ಲರನ್ನು ಬಿಡುಗಡೆಮಾಡುವನು. –ಇಬ್ರಿಯ. 2:14

ದಾವೀದನ ದಿಗ್ವಿಜಯವು ಕೆಲವೊಂದು ವಿಧದಲ್ಲಿ ದೇವಜನರೆಲ್ಲರೂ ತೊಡಗಿಸಿಕೊಳ್ಳಬೇಕಿರುವ ಹೋರಾಟದ ಬಗ್ಗೆ ಒಂದು ನಿದರ್ಶನವನ್ನು ನೀಡುತ್ತದೆ. ಗೊಲ್ಯಾತ ಹಾಗು ಆತನಿಗೆ ಬೆಂಗಾವಲಾಗಿರುವ ಸೇನೆಯು ದೇವರು ಹಾಗು ನೀತಿಸತ್ಯತೆಗಳನ್ನು ವಿರೋಧಿಸುವ ಅಲ್ಲದೆ ನಮಗೂ ಹಾಗು ದೇವಜನರೆಲ್ಲರಿಗೂ ಸವಾಲನ್ನೊಡ್ಡುವ ಹಲವಾರು ಬಗೆಯ ವೈರಿಗಳ ವಿಷಯವಾಗಿ ನಮ್ಮ ಮನಸ್ಸಿಗೆ ಒಂದು ಒಳ್ಳೆಯ ನಿದರ್ಶನವನ್ನು ನೀಡುವದು.

(1) ಇಂದು ಸಂಶಯ ಹಾಗು ಸಂದೇಹವಾದಿಗಳ ದಂಡು ಅಪನಂಬಿಕೆಯೆಂಬ ಮಹಾ ದೈತ್ಯನಿಂದ ನಡೆಸಲ್ಪಡುತ್ತಿದ್ದು ಅದರ ಗಾತ್ರ ಶಸ್ತ್ರಾಸ್ತ್ರ ಖಡ್ಗ ಮತ್ತು ಗುರಾಣಿ ಇವುಗಳು ಕ್ರಿಸ್ತನ ದೇಹವಾದ ದಾವೀದನ ವರ್ಗದವರನ್ನು ಹೊರತುಪಡಿಸಿ ನಾಮಾಂಕಿತ ಕ್ರೈಸ್ತಸಾಮ್ರಾಜ್ಯದ ಸೇನೆಗಳೆಲ್ಲರ ಮೇಲೆ ತೂಗಾಡುತ್ತಿರುವದು. ಈ ದೈತ್ಯನು ವಿಕಾಸವಾದವಾಗಿದ್ದು ಆತನ ಆಯುಧವಾಹಕನು ಉನ್ನತ ವಿಮರ್ಶಕರು [ಹೈಯರ್ ಕ್ರಿಟಿಸಿಸಮ್] ಎಂಬುವರೇ. ಇಸ್ರಾಯೇಲ್ ದೇವರ ಲಿಖಿತ ಪ್ರಮಾಣಗಳು ಹಾಗು ವಾಗ್ದಾನ–ಗಳು ಅಸಡ್ಡೆಮಾಡಲ್ಪಟ್ಟಿದ್ದು, ಮತ್ತು ಇದರ ರಕ್ಷಣಾರ್ಥವಾಗಿ ನಿಂತಿರುವ ದಾವೀದನ ವರ್ಗವು ತಿರಸ್ಕಾರದಿಂದ ಕಾಣಲಾ–ಗುತ್ತಿರುವದಲ್ಲದೆ ಸತ್ಯವೆಂಬ ಹಳ್ಳದಿಂದ ತರಲ್ಪಟ್ಟ ಅವರ ಕವಣೆಕಲ್ಲುಗಳನ್ನು ಅವಮಾನಿಸಲಾಗಿರುವದು. ಆದರೆ ಹೀಗೆ ತಪ್ಪಾಗಿ ಕರೆಯಲಾಗುತ್ತಿರುವ ವಿಜ್ಞಾನವೆಂಬದು ತನ್ನ ವಿಷಯವಾಗಿ ಕೊಚ್ಚಿಕೊಳ್ಳುತ್ತಿದ್ದು ಇದು ಎಷ್ಟು ದೊಡ್ಡ ಪ್ರಭಾವ ಬೀರುತ್ತಿರುವದೆಂದರೆ ಇದನ್ನು ವಿರೋಧಿಸಲು ಯಾರೂ ಆಲೋಚಿಸದಂತಾಗಿರುವದು; ಹೀಗಿದ್ದರೂ ಇದು ತನ್ನ ನಿರ್ಣಾಯಕವಾದ ಪತನಕ್ಕೆ ಕೊಂಡೊಯ್ಯುವಂಥ ಹೋರಾಟವನ್ನು ಎದುರುಗೊಳ್ಳುತ್ತಿರುವದು. ದಾವಿದನೂ ಪ್ರಿಯನೂ ಆಗಿರುವ ದೇವಾಭಿಷಕ್ತರ ಎದುರಿನಲ್ಲಿ ಇದು ಬಿದ್ದುಹೋಗುವದು–ಅಲ್ಲದೆ ಇವರದೇ ಆದ ಸತ್ಯವೆಂಬ ಖಡ್ಗವು ನೂತನ ಕಾಲದ ಉದಯದಲ್ಲಿ ಇದರ ಅಂತ್ಯವನ್ನು ಪೂರ್ಣಗೊಳಿಸುವದು; ಅದೇ ಸಮಯದಲ್ಲಿ ತಪ್ಪುಗಳೆಂಬ

ದಂಡು ಪಲಾಯನಮಾಡುವದು ಹಾಗು ಆರಿಸಲ್ಪಟ್ಟವರಾದ ಕ್ರಿಸ್ತನ ದೇಹವಾದವರೊಡನೆ ದೇವಜನರಲ್ಲಿ ಹಲವರು ಈ ಬಿಡುಗಡೆಗಳ ಮೂಲಕವಾಗಿ ಆಶೀರ್ವದಿಸಲ್ಪಡುವರು.

(2) ಗೊಲ್ಯಾತನು ಲೌಕೀಕತೆಯೆಂಬ ಸೇನೆಯ ಬೆಂಬಲ ಪಡೆದಿರುವ ಹೆಮ್ಮೆಯನ್ನು ಸೂಕ್ತವಾಗಿ ಪ್ರತಿನಿಧಿಸುವನು. ನೂತನ ಸೃಷ್ಟಿಗಳಿಗೆ ಇರುವ ಕಠಿಣವಾದ ಅಗ್ನಿಪರೀಕ್ಷೆಗಳಲ್ಲಿ ಒಂದು–– ಹೆಮ್ಮೆಯ ನೇತ್ರದಲ್ಲಿರುವ ಲೌಕೀಕ ಮನೋಭಾವದ ಮೇಲಿನ ಪ್ರೀತಿ. ಲೌಕೀಕ ಹೆಮ್ಮೆಯು ದೇವರಲ್ಲಿನ ವಿಶ್ವಾಸಕ್ಕೆ ಮತ್ತು ಆತನಿಗೆ ತೋರಿಸಲಾಗುವ ವಿಧೇತೆಗಳಿಗೆ ಸವಾಲನ್ನು ಒಡ್ಡುತ್ತಿದ್ದು ಕೇವಲ ದೃಡವಾದ ಎದೆಗಾರಿಕೆಯುಳ್ಳವರಿಗೆ ಹಾಗು ದೇವರ ಮೇಲೆ ಪೂರ್ಣವಾಗಿ ವಿಶ್ವಾಸವುಳ್ಳವರಿಗೆ ಈ ದೈತ್ಯನನ್ನು ಗೆಲ್ಲಲು ಸಾಧ್ಯ. ಈ ಗೆಲುವು ಪರಿಪೂರ್ಣವಾಗಿರುವದೂ ಸಹ ಅವಶ್ಯ; ಅಂದರೆ ಹೆಮ್ಮೆಯನ್ನು ಸಂಪೂರ್ಣವಾಗಿ ಅಧೀನಮಾಡಿಕೊಂಡು ಅದನ್ನು ನಿರ್ನಾಮಗೊಳಿಸಬೇಕು; ಹೀಗಾಗಿ ಇನ್ನೆಂದಿಗೂ ಅದು ಮತ್ತೆ ಎದ್ದುಬಂದು ನಮ್ಮನ್ನು ನಾಶಪಡಿಸಲು ಸಾಧ್ಯವಾಗದು. ಅದು ಒಂದು ವೈಯುಕ್ತಿಕವಾದ ಹೋರಾಟವಾಗಿದ್ದು ಈ ದೈತ್ಯನನ್ನು ಎದುರಿಸಲು ಕೇವಲ ಸೂಕ್ತವಾದ ಅಸ್ತ್ರವೆಂದರೆ ಅದು ಹಳ್ಳದ ನುಣುಪು ಕಲ್ಲುಗಳು ಅಂದರೆ ದೇವರ ವಾಕ್ಯಸಂದೇಶಗಳು; ಇವು ನಮಗೆ ದೇವರ ದೃಷ್ಟಿಯಲ್ಲಿ ಮೆಚ್ಚಿಕೆಯಾದವುಗಳೂ ಹಾಗು ಅಂಗೀಕರಿಸಲ್ಪಡುವಂಥವುಗಳೂ ಆಗಿದ್ದು ಅವು ನಮಗೆ ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಹಾಗು ತನ್ನನ್ನು ಹೆಚ್ಚಿಸಿಕೊಳ್ಳುವನು ತಗ್ಗಿಸಲ್ಪಡುವನು ಎಂಬುದನ್ನು ತೋರಿಸಿಕೊಡುತ್ತವೆ. ಕವಿಯು ಇದನ್ನು ಹೀಗೆ ವ್ಯಕ್ತಪಡಿಸಿರುವನು:–"ಬಡಾಯಿಕೊಚ್ಚುವಿಕೆಯು ಕೊನೆಗೊಳ್ಳುವದೆಲ್ಲಿಯೋ ಅಲ್ಲಿ ನೈಜ ಘನತೆಯು ಆರಂಭವಾಗುವದು."

(3) ದೇವಜನರಿಗೆ ಕೆಲವೊಮ್ಮೆ ಸವಾಲೊಡ್ಡುವ ಮತ್ತೊಬ್ಬ ದೈತ್ಯನೆಂದರೆ ಅದು ಅಂಜಿಕೆ ಮತ್ತು ಅವಿಶ್ವಾಸ. ದೇವರನ್ನು ತಮ್ಮ ಹಿಂದಿನ ಅನುಭವಗಳ ಮೂಲಕವಾಗಿ ತಿಳಿದುಕೊಳ್ಳುವದನ್ನು ಕಲಿತವರಾಗಿ ಆತನ ಇರುವಿಕೆಯ ಸುಳಿವು ಇಲ್ಲದಿರುವಾಗಲೂ ಆತನ ಮೇಲೆ ಭರವಸೆಯುಳ್ಳವರನ್ನು ಹೊರತುಪಡಿಸಿದರೆ ಇತರರ ಮೇಲೆ ಅಂಜಿಕೆಯ ಪ್ರಭಾವವು ನಿಜವಾಗಿಯೂ ಗಾಢವೂ ಗಂಭೀರವೂ ಹಾಗೂ ಭೀಕರವೂ ಆಗಿರುವದು. ಹೆದರಿಕೆ ಹಾಗು ನಿರಾಶೆಯೆಂಬ ದೈತ್ಯನನ್ನು–"ಎಂದು ಬರೆದದೆ" ಎಂಬ ಹಳ್ಳದ ನುಣುಪುಕಲ್ಲಿನ ಮೂಲಕವಾಗಿ ಎದುರುಗೊಳ್ಳಬೇಕು. ನಂಬಿಕೆಯೆಂಬ ಕವಣೆಯಿಂದ ವಾಗ್ದಾನಪೂರಿತವಾದ ವಾಕ್ಯವನ್ನು ಎಂಥಾ ರಭಸದಿಂದ ತಿರುಗಿಸಬೇಕೆಂದರೆ ಅದು ಆ ವಿರೋಧಿಯನ್ನು ಹತಮಾಡಿ ಆತನ ಹಿಡಿತದಿಂದ ನಮ್ಮನ್ನು ಬಿಡಿಸುವಂಥದ್ದಾಗಬೇಕು.

(4) ದೇವಜನರ ಮೇಲೆ ಹಲ್ಲೆಮಾಡುವ ಮತ್ತೊಬ್ಬ ದೈತ್ಯನೆಂದರೆ ಅದು [ಕ್ರೈಸ್ತರಲ್ಲಿರುವ] ಪಂಗಡವಾದೀ ಪ್ರಭಾವ; ಆದರೂ ಈ ಪ್ರಸ್ತುತ ಕಾಲದಲ್ಲಿ ಕೇವಲ ಕ್ರಿಸ್ತನ ದೇಹವಾದ ದಾವೀದನ ವರ್ಗದವರು ಮಾತ್ರ ಈ ದೈತ್ಯನನ್ನು ಜಯಿಸಲು ಸಾಧ್ಯ. ಅದೆಷ್ಟು ಬಲಶಾಲಿಯೂ, ವೈಭವಯುತವೂ, ಸುಸಜ್ಜಿತವೂ ಪ್ರಭಾವಶಾಲಿಯೂ ಆಗಿರುವನು ಈ ದೈತ್ಯನು; ದೇವರ ಸತ್ಯ ಮಕ್ಕಳನ್ನು ಬೆದರಿಸಲು ಈತನ ಬಲಾಧಿಕಾರಗಳನ್ನು ಒಂದು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದ್ದು, ಹೀಗಾಗಿ ಅವರ ಜೀವಿತಕಾಲವೆಲ್ಲವೂ ದಾಸತ್ವಕ್ಕೆ ಒಳಗಾಗಿ ಕ್ರಿಸ್ತನಿಂದಾಗುವ ನಿಜವಾದ ಸ್ವಾತಂತ್ರ್ಯವನ್ನು ಪಡಕೊಳ್ಳುವಲ್ಲಿ ಅವರು ವಿಫಲರಾಗುತ್ತಿರುವರು. ಈ ದೈತ್ಯನನ್ನು ಎದುರಿಸಿ ಅವನನ್ನು ಯಶಸ್ವಿಯಾಗಿ ಪ್ರತಿರೋಧಿಸಲು ಅಲ್ಲದೆ ಆತನ [ಗೊಲ್ಯಾತನ] ಹಾಗೆ ಬಡಾಯಿ ಮಾತುಗಳಿಂದ ಸಂಪೂರ್ಣವಾಗಿ ಸುಸಜ್ಜಿತನಾಗಿ ಬಹು ವ್ಯಾಪಕವಾಗಿಯೂ ದೃಢವಾಗಿಯೂ ವ್ಯವಸ್ಥಿತವಾಗಿಯೂ ಇದ್ದು ಲೌಕೀಕಾಧಿಕಾರ ಪ್ರಭಾವಗಳಿಂದ ಹಾಗೂ ಬಹಿಷ್ಕಾರ ಹಾಕುವ ಅವಕಾಶಗಳನ್ನು ಪಡಕೊಂಡು ಸುವ್ಯವಸ್ಥಿತವಾಗಿ ಸಜ್ಜಾಗಿರುವ ಇದರ ಮೇಲೆ ಯಶಸ್ಸನ್ನು ಸಾಧಿಸಲು ಅಂದರೆ ಕೇವಲ ಚಿಕ್ಕ ಹಿಂಡಾಗಿ ಜಯಶಾಲಿಗಳೂ ಕ್ರಿಸ್ತನ ದೇಹವೂ ಆಗಿ ಪ್ರಿಯನೂ ದಾವೀದನ ವರ್ಗವೂ ಆಗಿರುವಂಥವರಲ್ಲಿ ಕಂಡುಬರುವಂಥ ಮಹಾ ಕೃಪಾದಾನದ ಅಗತ್ಯತೆಯಿರುವದು. ಹೀಗೆ ಕೇವಲ ದೇವರ ವಾಕ್ಯದಿಂದ ಸನ್ನದ್ಧರಾಗಿ, ಆತನ ಕೋಲು ಹಾಗು ದೊಣ್ಣೆಯ ಮೇಲೆ ಭರವಸೆಯನ್ನಿಟ್ಟವರಾಗಿ, ದಾವೀದನು ಆ ಫಿಲಿಷ್ಟಿಯನಿಗೆ ಉತ್ತರಿಸಿದಂತೆ ನಾವು ಈ ಭೀಕರ ಪಂಗಡವಾದೀ ಮನೋಭಾವವನ್ನು ಪ್ರತಿರೋಧಿಸಲು ಸೂಕ್ತ ಧೈರ್ಯವುಳ್ಳವರಾಗಿರಬಹುದು. "ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿದಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವ ದೇವರ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ."

ನಾವೆಲ್ಲರೂ ದಾವೀನದಲ್ಲಿದ್ದ ಸಾಧುತ್ವ ದೈನ್ಯತೆಗಳನ್ನು ನೆನಪಿನಲ್ಲಿಟ್ಟುಕೊಂಡವರಾಗಿ ಆತನ ನಡವಳಿಕೆಯು ಸಂಪೂರ್ಣವಾಗಿ ಬಡಾಯಿ ರಹಿತವಾಗಿತ್ತೆಂಬುದನ್ನು ಗಮನಿಸುವವರಾಗೋಣ, ಅಲ್ಲದೆ ನಾವು ಇದನ್ನು ನಕಲುಮಾಡಿಕೊಳ್ಳಬೇಕು. ಆತನಲ್ಲಿದ್ದಂತೆಯೇ ನಮ್ಮ ಭರವಸೆವಿಶ್ವಾಸಗಳು ದೇವರಲ್ಲಿರಬೇಕು, ನಮ್ಮ ಮೇಲೆಯಲ್ಲ.

ಯಾವಾತನಿಂದ ದಾವೀದನು ಮಾರಣಾಂತಿಕ ಹೊಡೆತದ ಗುರಿಯನ್ನಿಡಲು ಕಲಿತುಕೊಂಡಿದ್ದನೋ,

ಅವನು ಗೋಲ್ಯಾತನೊಡನೆ ಕಾದಾಡಿ ಆ ಗಿತ್ತೀಯನನ್ನು ನೆಲಕ್ಕುರುಳಿಸಿದ್ದಾಗ,

ಯಾವ ಕತ್ತಿಯಾಗಲೀ ಇಲ್ಲವೇ ಈಟಿಯನ್ನಾಗಲೀ ಆ ಯವನಸ್ಥನು ತೆಗೆದುಕೊಳ್ಳಲಿಲ್ಲ,

ಆದರೆ ಹಳ್ಳದ ಒಂದು ನುಣುಪು ಕಲ್ಲನ್ನು ಆರಿಸಿಕೊಂಡಿದ್ದನು.

ಆತನನ್ನು ಹೋರಾಡಲು ಕಳುಹಿಸಿದ್ದು ಇಸ್ರಾಯೇಲ್ಯರ ದೇವರೂ ಅರಸನೂ ಆಗಿದ್ದು,

ಅವನಿಗೆ ಕವಣೆಯನ್ನೆಸೆಯುವ ಬಲವನ್ನು ಅಲ್ಲದೆ ಸರಿಯಾಗಿ ಗುರಿಯಿಡುವ ಕೌಶಲ್ಯವನ್ನು ನೀಡಿದ್ದನು.

ನಿತ್ರಾಣರಾದ ಭಕ್ತರೇ, ನಿಮ್ಮ ಬಲವು ದೀರ್ಘಕಾಲ ಉಳಿಯುವದು

ಯಾಕಂದರೆ ಯೌವನಸ್ಥನಾದ ದಾವೀದನ ದೇವರು ನಿಮ್ಮವನು. – ಕಾಪರ್

ಗೆಲುವು ಬಲಶಾಲಿಗಳಿಗಲ್ಲ

ರೀಪ್ರಿಂಟ್ಸ್ ಪುಟ 4216

1 ಸಮುವೇಲ 17:38-49

"ಯೆಹೋವನನ್ನು ಆಶ್ರಯಿಸಿ [ಭರವಸಮಾಡಿ] ಕೊಂಡಿದ್ದೇನೆ." – ಕೀರ್ತನೆ 11:1

ದಾವೀದನು ಅಭಿಷೇಕಿಸಲ್ಪಟ್ಟು ಬಹು ಕಾಲವಾಗುವದಕ್ಕೆ ಮೊದಲೇ ಆತನು ಅತಿ ಗಮನಾರ್ಹವಾದ ಒಂದು ಯುದ್ಧದಲ್ಲಿನ ವೀರಪುರುಷನಾಗಿದ್ದನು. ಪಾಲೆಸ್ತೀನ ದೇಶದ ಕಡಲ ತೀರದಲ್ಲಿ ವಾಸಿಸುತ್ತಿದ್ದ ಫಿಲಿಷ್ಟಿಯರು ಬಹು ಮುಂಚಿತ ಕಾಲದಿಂದಲೂ ಇಸ್ರಾಯೇಲ್ಯರ ವೈರಿಗಳಾಗಿದ್ದು, ನಾವು ಈಗಾಗಲೇ ನೋಡಿರುವಂತೆ, ಸೌಲನ ಕಿರೀಟಧಾರಣೆಯ ಸಮಯದಲ್ಲಿ ಅವರು ಇಸ್ರಾಯೆಲ್ಯರ ಮೇಲೆ ಆಧಿಪತ್ಯವನ್ನು ಹೊಂದಿದ್ದರು. ಆನಂತರದಲ್ಲಿ ಸೌಲನು ಪಡೆದ ಗೆಲುವು ಸಂಪೂರ್ಣವಾಗಿರದೆ ಫಿಲಿಷ್ಟಿಯರು ಆಗಲೂ ಗತ್ ಊರು ಹಾಗು ಇಸ್ರಾಯೇಲ್ಯರಿಗೆ ನೀಡಲಾದ ದೇಶದಲ್ಲಿ ಗಣನೀಯವಾದ ಭೂಪ್ರದೇಶವನ್ನು ಆಕ್ರಮಿಸಿಕೊಂಡಿದ್ದರು. ಗತ್ ಊರಿನಲ್ಲಿ ಗೊಲ್ಯಾತನು ವಾಸಿಸಿದ್ದು, ಅವನು ಒಬ್ಬ ದೈತ್ಯರ ಅಥವಾ ಅನಾಕ್ಯರ ವಂಶಸ್ಥನಾಗಿದ್ದನು. ಇವರು ಕಾಣಿಸಿಕೊಂಡದ್ದು ವಾಗ್ದತ್ತ ದೇಶವನ್ನು ಪ್ರವೇಶಿಸ ಸಲುವಾಗಿ ಇಸ್ರಾಯೇಲ್ಯರು ಮೊದಲ ಸ್ಥಳದಲ್ಲಿ ತಂಗಿದ್ದಾಗ ಅವರ ಗೂಢಾಚಾರರಿಗೆ ದಿಗಿಲು ಹುಟ್ಟಿಸಿತ್ತು. ಗೊಲ್ಯಾತನು ಒಬ್ಬ ಫಿಲಿಷ್ಟಿಯನಾಗಿದ್ದುದು ಹೀಗಾಗಿ ಹುಟ್ಟಿನಿಂದಾಗಿರದೆ, ಹಲವಾರು ಜನಾಂಗದವರು [ಬಂದು ನೆಲೆಸಿದ್ದ ಕಾರಣದಿಂದ] ಅಮೇರಿಕನ್ನರಾಗಿದ್ದಂತೆ ಅದು ಈ ದೇಶೀಕರಿಸಿಕೊಂಡ ಕಾರಣದಿಂದಾಗಿತ್ತು. ಗೊಲ್ಯಾತನು ತನ್ನ ಜೀವಮಾನದ ಅತ್ಯುತ್ತಮ ಕಾಲದಲ್ಲಿದ್ದವನಾಗಿ ತನ್ನ ಬಲಗಾತ್ರಗಳ ಬಗ್ಗೆ ಹೆಮ್ಮೆಯುಳ್ಳವನಾಗಿದ್ದನು. ಫಿಲಿಷ್ಟಿಯರು ಸಹ ಜಾಗ್ರತೆಯುಳ್ಳವರಾಗಿ ಈ ವೀರನಾಯಕನ ಮೂಲಕವಾಗಿ ಇಸ್ರಾಯೇಲ್ಯರ ಮೇಲೆ ಮತ್ತೊಂದು ಗೆಲುವು ಸಾಧಿಸಬಹುದೆಂದು ಯೋಚಿಸಿದ್ದರು. ಪರಿಣಾಮವಾಗಿ ಅವರು ಒಂದು ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಯೆರೂಸಲೇಮಿನ ಪಶ್ಚಿಮೋತ್ತರ ಭಾಗದ ಮೂಲಕವಾಗಿ ಮುನ್ನಡೆದ್ದಿದ್ದರು. ಅರಸನಾದ ಸೌಲನು ವಾಸ್ತವಾಂಶವನ್ನು ಅರಿತವನಾಗಿ ಅವರನ್ನು ಎದುರಿಸಲು ಒಂದು ಸೇನೆಯನ್ನು ಜಮಾವಣೆ ಮಾಡಿದ್ದನು. ಎರಡೂ ಸೇನೆಗಳು ಏಲಾ ತಗ್ಗಿನ ಇಳಿಜಾರಿನಲ್ಲಿ ಮುಖಾಮುಖಿಯಾಗಿದ್ದವು. ಎದುರಾಳಿ ಸೇನಾಬಲಗಳು ಬಹುತೇಕ ಸಮಬಲವುಳ್ಳವುಗಳಾಗಿದ್ದು ಅವೆರಡೂ ಪರಸ್ಪರ ಆಕ್ರಮಣಮಾಡುವ ಆಸಕ್ತಿಹೊಂದಿರಲಿಲ್ಲ. ಫಿಲಿಷ್ಟಿಯರು, ಆಗಲೇ ಚರಿತ್ರೆಯಲ್ಲಿ ಪ್ರಚಲಿತವಾದ ಒಂದು ಮಾರ್ಗೋಪಾಯವನ್ನು ಅನುಸರಿಸುವವರಾಗಿ, ಒಂದು ವ್ಯಕ್ತಿಗತವಾದ ಇಬ್ಬರ ಹೋರಾಟದ ಮೂಲಕವಾಗಿ ಸಂಗತಿಯನ್ನು ಬಗೆಹರಿಸಿಕೊಂಡು ಎರಡೂ ಸೇನೆಗಳ ನಡುವಿನ ಯುದ್ಧವನ್ನು ತಪ್ಪಿಸುವ ಪ್ರಸ್ತಾಪಮಾಡಿದ್ದರು. ಅವರು ಗೊಲ್ಯಾತನನ್ನು ತಮ್ಮ ರಣವೀರನನ್ನಾಗಿ ಕಳುಹಿಸಿಕೊಟ್ಟು ಇಸ್ರಾಯೇಲ್ಯರಿಗೆ ಈತನನ್ನು ಎದುರಿಸುವ ಸಾಹಸಮಾಡಲು ಹೇಳಿದ್ದರು. ಇದೇ ರೀತಿಯಲ್ಲಿ ಕ್ರಿಸ್ತಪೂರ್ವ 667ರಲ್ಲಿ ರೋಮನ್ನರ ಹಾಗೂ ಅಲ್ಬೇನಿಯರ ಮಧ್ಯೆ ನಡೆದ ಯುದ್ಧದಲ್ಲಿ ಮೂವರು ರೋಮಾಯರ [ಹೊರಾಟ್ಟಿ] ಹಾಗು ಮೂವರು ಅಲ್ಬೇನಿಯರ [ಕ್ಯೂರಾಟ್ಟಿ] ಪರಸ್ಪರವಾದ ಮಾರಣಾಂತಿಕ ಹೋರಾಟದಲ್ಲಿ ತೊಡಗಿಸಿಕೊಳ್ಳುವದರ ಮೂಲಕವಾಗಿ ಯುದ್ಧವನ್ನು ತೀರ್ಮಾನಿಸಿಕೊಂಡಿದ್ದರು. ರೋಮಾಯರಲ್ಲಿ ಒಬ್ಬನು ಬದುಕುಳಿದ ಕಾರಣದಿಂದಾಗಿ ಗೆಲುವು ರೋಮಾಯರಿಗೆ ಬಂದಿತ್ತು. ನಂತರದಲ್ಲಿ ಹೀಗೆಯೇ ಸ್ಕಾಟ್‌ಲೆಂಡಿನಲ್ಲಿ ಪರಸ್ಪರ ಎರಡು ಸೈನ್ಯಗಳ ಮಧ್ಯೆ ನಡೆದ ಯುದ್ಧದಲ್ಲಿ ಸರ್ ಹೆನ್ರಿ ಡೀ ಬೊನ್-ಹಾಮ್ ಇವರು ರಾಬರ್ಟ್ ಬ್ರೂಸ್ ಇವರೊಂದಿಗೆ ಹೋರಾಡಿದ್ದರು.

ಗೊಲ್ಯಾತನು ನಿಜವಾಗಿಯೂ ಒಬ್ಬ ದೈತ್ಯನಾಗಿದ್ದನು. ಆತನ 6 ಮೊಳ ಹಾಗು 1 ಗೇಣಿನ ಎತ್ತರವು 16 ಅಂಗುಲವನ್ನು ಒಳಗೊಂಡ ಮೊಳದ ಪ್ರಮಾಣದಲ್ಲಿ ಅಳೆದಾಗ ಅದು ಎಂಟು ಅಡಿ ಎಂಟು ಅಂಗುಲವಾಗುವದು ಅಥವಾ 18 ಅಂಗುಲದ ಪರಿಮಾಣದ ಮೂಲಕವಾಗಿ ಅಳೆದಲ್ಲಿ ಅದು 9 ಅಡಿ 9 ಅಂಗುಲವಾಗುತ್ತದೆ. ಒಂದು ಮೊಳದ ಉದ್ದವು ಮನುಷ್ಯನ ತೋಳಿನ ಮೊಣಕೈನಿಂದ ಬೆರಳಿನ ತುದಿಯವರೆಗಿನ ಉದ್ದಕ್ಕೆ ಸಮನಾಗಿರುವದು; ಒಂದು ಗೇಣು ಎಂಬುದು ಅರ್ಧ ಮೊಳದ ಉದ್ದವನ್ನು ಒಳಗೊಂಡಿರುತ್ತದೆ. ಬ್ರಿಟಾನಿಕ ವಿಶ್ವಕೋಶವು ಹಲವಾರು ದೈತ್ಯರ ಬಗ್ಗೆ ಉಲ್ಲೇಖಿಸುತ್ತದೆ: ಒಬ್ಬನು ಸ್ಕಾಟಲೆಂಡಿನವನಾಗಿದ್ದು ಅವನ ಎತ್ತರವು 8 ಅಡಿ 3 ಅಂಗುಲವಾಗಿರುವದು; ಮತ್ತೊಬ್ಬನು 9 ಅಡಿಯ ಅರಬೀಯನು; ಐರಿಷ್ ದೇಶದ ಚಾರ್ಲ್ಸ್ ಬಿರ್ನೆ ಎಂಬವನು 8 ಅಡಿ 4 ಅಂಗುಲ ಎತ್ತರದವನಾಗಿದ್ದನು; ಪ್ಯಾಟ್ರಿಕ್ ಕಾಟರ್ ಎಂಬುವನು 8 ಅಡಿ 7-3/4 ಅಂಗುಲದವನು; ರಷ್ಯಾದೇಶದ ಒಬ್ಬ ದೈತ್ಯನು 9 ಅಡಿ 8 ಅಂಗುಲದವನು. ಹೀಗಾಗಿ ಗೊಲ್ಯಾತನ ಚರಿತ್ರೆಯ ಬಗ್ಗೆ ಯಾವ ಅಸಾಧ್ಯತೆಯೂ ಅಸಂಭವವೂ ಇರುವದಿಲ್ಲ. ಆ ದೈತ್ಯನು ಸಶಸ್ತ್ರಧಾರಿಯಾಗಿದ್ದು ಅಕ್ಷರಶಃ ಜಯಿಸಲು ಅಸಾಧ್ಯ-ವುಳ್ಳವನಾಗಿದ್ದನು.

ಇಸ್ರಾಯೇಲ್ಯರು ಹಾಗು ಇಸ್ರಾಯೇಲ್ಯರ ದೇವರು ಶಪಿಸಲ್ಪಟ್ಟದ್ದು

ಆ ಕಾಲದಲ್ಲಿ ಪ್ರತಿಯೊಂದು ಜನಾಂಗವೂ ಒಂದು ಧಾರ್ಮಿಕ ಪದ್ಧತಿಯನ್ನು ಹಿಡಿದುಕೊಂಡಿದ್ದು ಅವರ ಉನ್ನತಿ ಪ್ರಭಾವಗಳು ತಮ್ಮ ದೇವರ ಅಥವಾ ದೇವರುಗಳ ಅನುಗ್ರಹವೆಂದು ದೊಡ್ಡದಾಗಿ ಪ್ರಸಂಶಿಸುತ್ತಿದ್ದರು. ಗೊಲ್ಯಾತನು ನಾಲ್ವತ್ತು ದಿನಗಳು ಉಜ್ವಲವಾದ ತನ್ನ ಬಟ್ಟೆಗಳನ್ನು ತೊಟ್ಟವನಾಗಿ

ಹೊಳೆಯುವ ಆಯುಧಗಳನ್ನು ಧರಿಸಿಕೊಂಡು ಇಸ್ರಾಯೇಲ್ ಜನರನ್ನು ಮತ್ತು ಆ ಸಂದರ್ಭದಲ್ಲಿ ಅವರು ಆರಾಧಿಸುತ್ತಿದ್ದ ದೇವರನ್ನು ದೊಡ್ಡ ಸ್ವರದಿಂದ ಕೂಗುತ್ತಾ ಶಪಿಸುತ್ತಿದ್ದನು; ಹೀಗೆ ಅವರಿಗೆ ಅವಮಾನಪಡಿಸಿ ಅವರನ್ನು ಒಂದು ಅಸಮವಾದ ಸ್ಪರ್ಧೆಗೆ ದೂಡುವಂತಾಗಲು ಯತ್ನಿಸುತ್ತಿದ್ದನು ಅಲ್ಲದೆ ತಾನು ಜಯಶಾಲಿಯಾಗುವದು ಖಂಡಿತವೆಂದು ಅವನಿಗೆ ಅನ್ನಿಸಿತ್ತು. ಯಾವ ಇಸ್ರಾಯೇಲ್ಯನಾದರೂ ಆಗ ಪ್ರಚಲಿತವಾಗಿದ್ದ ಷರತ್ತುಗಳ ಅನುಸಾರ ಖಡ್ಗ ಬರ್ಜಿ ಭಲ್ಲೆಗಳನ್ನು ಹೊಂದಿರುವ ಒಬ್ಬ ದೈತ್ಯನೊಡನೆ ಹೋರಾಟವಾಡುವ ಹುಚ್ಚುಸಾಹಸಕ್ಕೆ ಕೈಹಾಕಲಾರನೆಂಬುದಕ್ಕೆ ನಾವು ಆಶ್ಚರ್ಯಪಡಲು ಸಾಧ್ಯವಿಲ್ಲ. ಸಾಧಾರಣವಾಗಿ ಯಾವನಾದರೂ ಆ ಶತೃವಿನ ದಯೆಯಲ್ಲಿರುವ ಒಂದು ಮಗುವಿನಂತಾಗುವನು.

ಇಷಯನು ಬೇತ್ಲೆಹೇಮಿನಲ್ಲಿ ಶತೃಗಳ ಪಾಳ್ಯದಿಂದ ಕೇವಲ 20 ಮೈಲುಗಳ ದೂರದಲ್ಲಿದ್ದು ನಾಲ್ವತ್ತನೆಯ ದಿನದಲ್ಲಿ ದಾವೀದನನ್ನು ಸವಿತಿನಿಸು ಹಾಗು ಶುಭ ಸಂದೇಶಗಳೊಡನೆ ಸೌಲನ ಸೈನ್ಯದಲ್ಲಿದ್ದ ತನ್ನ ಮೂವರು ಅಣ್ಣಂದಿರ ಬಳಿಗೆ ಯುದ್ಧ ಸಂಗತಿಗಳ ಪ್ರಗತಿಯ ಬಗ್ಗೆ ಸಂದೇಶಗಳನ್ನು ಹಿಂತರುವ ಸಲುವಾಗಿ ಕಳುಹಿಸಿದ್ದನು. ಕೆಂಬಣ್ಣದ ಯುವಕನಾದ ಕುರುಬ ದಾವೀದನು ಯುದ್ಧಗಳ ವಿಷಯವಾಗಿ ಯಾವ ತಿಳುವಳಿಕೆಯೂ ಇಲ್ಲದವನಾಗಿ ಅಲ್ಲಿಗೆ ಬಂದು ಅಲ್ಲಿ ಸವಾಲು ಹಾಕುತ್ತಿದ್ದವನನ್ನು ಮತ್ತು ಇಸ್ರಾಯೇಲ್ಯರ ದೇವರು ಆ ಅನ್ಯಜಾತಿಯವನಿಂದ ನಿಂದಿಸಲ್ಪಡುತ್ತಿದ್ದನ್ನು ಕಂಡು ವಿಸ್ಮಯಪಟ್ಟಿದ್ದನು. ದಾವೀದನು ತನ್ನ ಕುರಿಗಳನ್ನು ಕಾಯುವದರಲ್ಲಿಯೂ ಹಾಗು ಅವುಗಳನ್ನು ಕಾಡುಮೃಗಗಳಿಂದ ಸಂರಕ್ಷಿಸುವದಲ್ಲಿಯೂ ಅನುಭವವುಳ್ಳವನಾಗಿದ್ದು ಅವನು ಸಹಜವಾಗಿ ಧೈರ್ಯವುಳ್ಳವನೂ ಭಯವಿಲ್ಲದವನೂ ಆಗಿದ್ದನು. ಅದೂ ಅಲ್ಲದೆ ಅವನು ದೇವರಲ್ಲಿನ ಭಯಭಕ್ತಿಯ ಹಾಗು ನಂಬಿಕೆಯ ವಿಷಯದಲ್ಲಿ ಚೆನ್ನಾಗಿ ಬೆಳೆದಿದ್ದನೆಂಬದು ಸ್ಪಷ್ಟವಾಗಿತ್ತು. ಗೊಲ್ಯಾತನು ಮಾಡಿದ ಇಸ್ರಾಯೇಲ್ ದೇವರ ನಿಂದನೆಯು ಅವನನ್ನು ಬಹು ಬಲವಾಗಿ ತಟ್ಟಿತ್ತು. ಅವನು ಇಸ್ರಾಯೇಲ್ಯರಲ್ಲಿ ಯಾರೂ ದೇವರ ಹೆಸರಿನಲ್ಲಿ ಈ ಯುದ್ಧಕ್ಕೆ ಕೈಹಾಕದಿರಲು ಕಾರಣವೇನೆಂಬುದನ್ನು ಆ ಕಾರ್ಯವನ್ನು ತಾನು ಮಾಡುವದಾಗಿ ತನ್ನ ಇಂಗಿತವನ್ನು ಒಳಪಡಿಸಿಕೊಂಡವನಾಗಿ ವಿಚಾರಣೆಮಾಡಿದ್ದನು. ಅವನು ಸಂಪರ್ಕಿಸಿದವರಲ್ಲಿ ಅನೇಕರು ಅವನಲ್ಲಿನ ನಂಬಿಕೆ ಹಾಗು ಉತ್ಸುಕತೆಯ ಬಗ್ಗೆ ಪ್ರಭಾವಿತರಾಗಿದ್ದರು. ಆದರೆ ತನ್ನ ಸ್ವಂತ ಅಣ್ಣಂದಿರು ಪ್ರಸಂಶೆಮಾಡದವರಾಗಿ ಅವನಿಗೆ ಗೇಲಿಮಾಡಿದ್ದರು. ಹೇಗೂ ಈ ಸಂಗತಿಯು ಬಾಯಿಂದ ಬಾಯಿಗೆ ವಿಸ್ತರಿಸಿಕೊಂಡು ಅದು ಅರಸನಾದ ಸೌಲನ ಕಿವಿಯವರೆಗೂ ತಲುಪಿದ್ದು ಅವನು ದಾವೀದನಿಗಾಗಿ ಕರೆಕಳುಹಿಸಿದ್ದನು.

ಅರಸನು ಕೆಲವು ವರುಷಗಳಿಂದಲೂ ದೇವಾನುಗ್ರಹ–ದಿಂದ ಹೊರಗೆ ಉಳಿದಿದ್ದರೂ ದೇವರ ಬಲದಲ್ಲಿ ನಂಬಿಕೆಯಿಡಲು ಅವನಿಗೆ ಸಕಾರಣಗಳಿದ್ದು ಅವು ಈಗಾಗಲೇ ಆತನ ಸ್ವಂತ ಅನುಭವದ ಮೂಲಕವಾಗಿ ತೋರ್ಪಡಲಾಗಿತ್ತು. ದಾವೀದನ ಈ ಪ್ರಸ್ತಾವನೆಯು ತನಗಿರುವ ಒಂದೇ ನಿರೀಕ್ಷೆಯಾಗಿದ್ದು ಅದು ದೇವರಿಂದ ಉಂಟಾಗಿರಬಹುದೇನೋ ಎಂಬುದರ ಬಗ್ಗೆ ತನ್ನನ್ನು ತಾನು ಪ್ರಶ್ನಿಸಿಕೊಂಡದ್ದು ಸ್ಪಷ್ಟವಾಗಿತ್ತು. ದಾವೀದನು ಒಂದು ಸಿಂಹವನ್ನು ಸೀಳಿಹಾಕಿದ್ದ ವಿಷಯವನ್ನು ಮತ್ತೊಂದು ಸಮಯದಲ್ಲಿ ತನ್ನ ಹಿಂಡನ್ನು ರಕ್ಷಿಸುವ ಸಲುವಾಗಿ ಒಂದು ಕರಡಿಯನ್ನು ಕೊಂದಿದ್ದರಲ್ಲಿ ತೋರ್ಪಡಲಾದ ತನ್ನ ಶೌರ್ಯದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ ಹೇಳಿದ್ದನು. ಅರಸನು ಆ ಯುವಕನನ್ನು ಆತನ ಶೌರ್ಯವನ್ನು ಆತನ ನಂಬಿಕೆಯನ್ನು ಶ್ಲಾಘಿಸುವವನಾಗಿ ಅವನು ಆ ದೈತ್ಯನೊಡನೆ ಯುದ್ಧಮಾಡಲು ತನ್ನ ಒಪ್ಪಿಗೆಯನ್ನು ಕೊಟ್ಟಿದ್ದನು; ಇಂಥಾ ಅಸಮನಾದ ದೈಹಿಕ ಸಾಮರ್ಥ್ಯದ ಎದುರಿನಲ್ಲಿಯೂ ದೇವರು ನಿಸ್ಸಂದೇಹವಾಗಿಯೂ ತನ್ನ ಜನರಿಗೆ ಯಶಸ್ಸನ್ನು ಅನುಗ್ರಹಿಸುವನೆಂಬುದಾಗಿ ಅರಸನು ಭರವಸೆಯುಳ್ಳವನಾಗಿದ್ದನು. ಸೌಲನು ಉತ್ತಮವಾದ ಆಯುಧಗಳನ್ನು, ಸಹಜವಾಗಿಯೇ ಸಮಸ್ತ ಇಸ್ರಾಯೇಲ್ಯರಲ್ಲಿ ಇರುವದಕ್ಕಿಂತಲೂ ಅತ್ಯುತ್ತಮವಾದ ಆಯುಧಗಳನ್ನು, ಹೊಂದಿದವನಾಗಿದ್ದು ದಾವೀದನು ಅವುಗಳನ್ನು ಉಪಯೋಗಿಸ ಬಹುದೆಂದು ಸೂಚಿಸಿದ್ದನು. ಆದರೆ ದಾವೀದನು ಅದನ್ನು ತೊಟ್ಟುಕೊಂಡು ನೋಡಿದಾಗ ತನಗೆ ಅದು ಮುಜುಗರ–ವೆನ್ನಿಸಲಾಗಿ ತಾನು ಅವುಗಳು ತೊಟ್ಟುಕೊಳ್ಳುವದಕ್ಕಿಂದಲೂ ಇಲ್ಲದಿರುವದೇ ಉತ್ತಮವೆಂದು ಹೇಳಿದನು. ಅವನು ತನ್ನದೇ ಆದ ರೀತಿಯಲ್ಲಿ ಕೇವಲ ಕರುಬರ ದೊಣ್ಣೆಯನ್ನ ಹಿಡಿದುಕೊಂಡು ಅದರೊಂದಿಗೆ ಕವಣೆಯನ್ನೂ ಕುರುಬರು ಧರಿಸುವ ಚೀಲವನ್ನು ಇಟ್ಟುಕೊಂಡು ಗೊಲ್ಯಾತನನ್ನು ಎದುರಿಸಲು ನಡೆದಿದ್ದನು. ತನ್ನ ಕವಣೆಗೆ ಬಳಸುವ ಐದು ನುಣುಪುಕಲ್ಲುಗಳನ್ನು ಆರಿಸಿ–ಕೊಂಡವನಾಗಿ ಆ ದೈತ್ಯನನ್ನು ಸಮೀಪಿಸಿದ್ದನು, ಆಗ್ಗೆ ಆ ದೈತ್ಯನೂ ಎಂದಿನಂತೆ ಇಸ್ರಾಯೇಲ್ಯರನ್ನು ಬೆದರಿಸಲು ಮುಂದೆ ಬಂದಿದ್ದನು.

ಆ ಹೋರಾಟದ ಕಥೆಯನ್ನು ಶೀಘ್ರವಾಗಿ ಹೇಳಲಾಗಿತ್ತು. ಆ ಫಿಲಿಷ್ಟಿಯನು ಶಸ್ತ್ರಸಜ್ಜಿತನಲ್ಲದ ಒಬ್ಬ ಹುಡುಗನೊಡನೆ ಕಾದಾಡಬೇಕೆಂದು ಕೇಳಿಕೊಂಡಾಗ ಅವನು ರೋಷಗೊಂಡು ದಾವೀದನನ್ನು ತನ್ನ ದೇವರುಗಳ ಹೆಸರಿನಲ್ಲಿ ಶಪಿಸುವವನಾಗಿ–"ಇಲ್ಲಿ ಬಾ; ನಿನ್ನ ಮಾಂಸವನ್ನು ಮೃಗಪಕ್ಷಿಗಳಿಗೆ ಹಂಚಿಕೊಡುತ್ತೇನೆ" ಅಂದನು. ದಾವೀದನ ಉತ್ತರವು ವಿಶಿಷ್ಟವಾಗಿದ್ದು ಅದು ಪೂರ್ಣವಾಗಿ ದೇವರಲ್ಲಿನ ನಂಬಿಕೆಯಾಗಿ ಇದು ಆತನ ಜೀವಮಾನದಲ್ಲಿ ಆರಂಭದಿಂದ ಅಂತ್ಯದವರೆಗೂ ಗುರುತುಹೊಂದಿತ್ತು; ಅಲ್ಲದೆ ಈ ಕಾರಣದಿಂದಲೇ ದೇವರು ಅವನನ್ನು ತಾನು ಒಪ್ಪುವ ಮನುಷ್ಯನು ಅಥವಾ ತನ್ನಲ್ಲಿದ್ದಂಥಾ ಹೃದಯವುಳ್ಳಾತನೆಂದು ಹೇಳಿದ್ದನು. ಆತನು ಗೊಲ್ಯಾತನಿಗೆ–"ನೀನು ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸುವಂಥ ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು; ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದುಹಾಕಿ ಫಿಲಿಷ್ಟಿಯ ಸೈನ್ಯದ ಶವಗಳನ್ನು ಮೃಗಪಕ್ಷಿಗಳಿಗೆ ಹಂಚಿಕೊಡುವೆನು. ಇದರಿಂದ ಇಸ್ರಾಯೇಲ್ಯ–ರೊಳಗೆ ದೇವರಿರುತ್ತಾನೆಂಬದು ಭೂಲೋಕದವರಿಗೆಲ್ಲಾ ತಿಳಿದು

ಬರುವದು; ಯೆಹೋವನು ಈಟಿ ಕತ್ತಿಗಳಿಲ್ಲದೆ ರಕ್ಷಿಸಬಲ್ಲನೆಂಬದು ಇಲ್ಲಿ ಕೂಡಿರುವವರಿಗೆಲ್ಲಾ ಗೊತ್ತಾಗುವದು; ಯಾಕಂದರೆ ಯುದ್ಧಫಲವು ಯೆಹೋವನ ಕೈಯಲ್ಲಿದೆ; ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು." ಹೀಗೆ ಈ ವಿವಾದವು–ದೇವರು, ಆತನ ಜನರು, ಹಾಗು ಆತನ ಶತ್ರುಗಳ ಮಧ್ಯದಲ್ಲಿ ನಡೆದಂಥದ್ದೆಂದು ಫಿಲಿಷ್ಟಿಯರು ಹಾಗು ಇಸ್ರಾಯೇಲ್ಯರಿಂದ ಕಾಣಲಾಗಿತ್ತು. ದಾವೀದನು ಅವಸರವಾಗಿ ಮುಂದರಿದು ತನ್ನ ಮೊದಲ ಕಲ್ಲನ್ನು ಎಸೆದನು, ಇದು ಆ ದೈತ್ಯನ ಹಣೆಯಲ್ಲಿ ಹೊಕ್ಕಿ ಅವನನ್ನು ಪ್ರಜ್ಞಾಹೀನನಾಗಿ ಬೀಳುವಂತೆ ಮಾಡಿತ್ತು. ದಾವೀದನು ಗೊಲ್ಯಾತನ ಖಡ್ಗದಿಂದಲೇ ಅವನ ತಲೆಯನ್ನು ಕಡಿಯುವದರ ಮೂಲಕವಾಗಿ ನೇರವಾಗಿ ಹೋರಾಟವನ್ನು ಮುಗಿಸಿದ್ದನು; ಆಗ ಇಸ್ರಾಯೇಲ್ಯರಲ್ಲಿ ಅವರ ನಂಬಿಕೆಯು ಪುನಶ್ಚೇತನಗೊಂಡು ಫಿಲಿಷ್ಟಿಯರ ಮೇಲೆ ಆಕ್ರಮಣಮಾಡಿದ್ದರು, ಪಿಲಿಷ್ಟಿಯರ ಧೈರ್ಯವು ಪಲಾಯನ ಮಾಡಿತ್ತು.

ಇಲ್ಲಿ ಭಾವಿಸಿರುವದೇನಂದರೆ ಗೊಲ್ಯಾತನು ಆ ದಿನಗಳಲ್ಲಿ ಸಾಮಾನ್ಯವಾಗಿದ್ದಂಥ ಮುಂಭಾಗವು ಚಲಿಸಬಲ್ಲಂಥ ಒಂದು ಶಿರಸ್ತ್ರಾಣವನ್ನು ಧರಿಸಿದ್ದನೆಂದೂ ಮತ್ತು ಅವನು ತನಗೆ ವಿರೋಧವಾಗಿ ಬರುತ್ತಿದ್ದ ಯುವಕನನ್ನು ನೋಡಿ ನಕ್ಕಿದ್ದನು; ಅಲ್ಲದೆ ಹೀಗೆ ಮಾಡುವಾಗ ತನ್ನ ತಲೆಯನ್ನು ಹಿಂದಕ್ಕೆ ಎತ್ತಿಕೊಂಡಿದ್ದಾಗ ಅದು ಆತನ ಶಿರಸ್ತ್ರಾಣದ ಮುಂಭಾಗವು ತೆರೆದುಕೊಂಡು ಆತನ ಹಣೆಯು ಕಾಣುವಂತೆಮಾಡಿತ್ತೆಂಬದು. ಇತರರು ಭಾವಿಸಿರುವದೇನಂದರೆ ಅವನು [ಗೊಲ್ಯಾತನು] ತನ್ನ ಭುಜಗಳ ನಡುವೆ ಒರೆಯಲ್ಲಿದ್ದ ತನ್ನ ಈಟಿಗಾಗಿ ತಲೆಯನ್ನು ಹಿಂದೆ ಚಾಚಿದ್ದನೆಂದೂ ಹೀಗೆ ಈಟಿಗಾಗಿ ಹಿಂದೆ ಚಾಚಿದಾಗ ಆತನ ಶಿರಸ್ತ್ರಾಣವು ಸರಿಯಾದ ಸಮಯದಲ್ಲಿ ತೆರೆದುಕೊಂಡಿದ್ದು ದಾವೀದನ ಕಲ್ಲನ್ನು ಒಳಗೆ ಸೇರಿಸಿಕೊಂಡಿತ್ತೆಂಬದು. ಹೇಗೂ ಈ ಸಂಗತಿಯು ಸಂಭವಿಸಿದ್ದು, ದೇವಾನುಗ್ರಹವು ಈ ಸಂಗತಿಯನ್ನು ಸಂಪೂರ್ಣವಾಗಿ ಮೇಲ್ವಿಚಾರಣೆ ನಡೆಸಿ ಯಶಸ್ಸನ್ನು ತಂದು–ಕೊಟ್ಟಿತ್ತೆಂಬುದನ್ನು ಸೂಕ್ತವಾಗಿ ಗ್ರಹಿಸಿಕೊಳ್ಳುವಲ್ಲಿ ದಾವೀದನು ಸಫಲನಾಗಿದ್ದನೆಂಬುದರಲ್ಲಿ ನಮಗೆ ಸಂದೇಹವಿಲ್ಲ. ಇಲ್ಲವೆ ಆ ದಿನಗಳಲ್ಲಿ ಇಂಥಾ ಗುರಿಗಾರಿಕೆಯು ಅಸಾಧಾರಣವೇನೂ ಅಗಿರಲಿಲ್ಲ ಯಾಕಂದರೆ ಇನ್ನೊಂದು ಸಂದರ್ಭದಲ್ಲಿ ಬೆನ್ಯಾಮೀನ್ ಕುಲದ 700 ಮಂದಿ "ಕೂದಲೆಳೆಯಷ್ಟು ಗುರಿತಪ್ಪದೆ" ಕವಣೆಯ ಕಲ್ಲನ್ನು ಎಸೆಯುತ್ತಿದ್ದರೆಂಬದನ್ನು ನಾವು ಓದುತ್ತೇವೆ. – ನ್ಯಾಯಸ್ಥಾಪಕರು 20:16

ಕ್ರೈಸ್ತರ ಎದುರಾಳಿ ಹಾಗು ಸಂಘರ್ಷ

ಈಗಿನ ಸಮಯದ "ನೂತನ ಸೃಷ್ಟಿಯು" ಹಳೆಯ ಕಾಲದ ಈ ದೃಷ್ಟಾಂತದ ಮೂಲಕವಾಗಿ ಯಾವ ಪಾಠವನ್ನು ತೆಗೆದುಕೊಳ್ಳಬಹುದು? ಪ್ರಿಯನು ಎಂಬ ಹೆಸರನ್ನು ಸೂಚಿಸುವ ದಾವೀದನು ಹಲವಾರು ವಿಧಗಳಲ್ಲಿ ಶಿರಸ್ಸು ದೇಹಗಳಿಂದ ಕೂಡಿದ ಕ್ರಿಸ್ತನ ಛಾಯಾರೂಪವಾಗಿರುವನು. ಗೊಲ್ಯಾತನೊಡನೆ ಆದ ಆತನ ಅನುಭವವು ಮೊಟ್ಟ ಮೊದಲನೆಯದಾಗಿ ನಾಲ್ವತ್ತು ದಿನಗಳ ಪರ್ಯಂತರ ಅರಣ್ಯದಲ್ಲಿ ದೇವ ವಿರೋಧಿಯೊಡನೆ ನಡೆದ ನಮ್ಮ ಕರ್ತನ ಹೋರಾಟವನ್ನು ಸೂಕ್ತವಾಗಿ ನಿದರ್ಶಿಸುತ್ತದೆ. ಆ ಸನ್ನಿವೇಶದಲ್ಲಿ ಸೈತಾನನ ಮೇಲಿನ ನಮ್ಮ ಕರ್ತನ ಗೆಲುವು, ತಂದೆಯ ವಿಷಯವಾಗಿ ಹಾಗು ತನಗೆ ವಹಿಸ–ಲಾದ ಕಾರ್ಯಭಾರದ ವಿಷಯವಾಗಿರುವ ತನ್ನ ನಿಷ್ಠೆ, ತನ್ನ ಸ್ವಾರ್ಥತ್ಯಾಗ ಇವುಗಳು ದೇವರೊಡನೆ ಹಾಗು ಆತನ ಏರ್ಪಾಟುಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಬಯಸು–ತ್ತಿರುವ ಮನುಕುಲದವರೆಲ್ಲರ ಗೆಲುವೆಂಬ ಅರ್ಥಕೊಡುತ್ತದೆ. "ಧೈರ್ಯವಾಗಿರಿ, ಲೋಕವನ್ನು ಜಯಿಸಿದ್ದೇನೆ." ಎಂದು ಆತನು ಸಾರಿ ಹೇಳಿಲ್ಲವೇ? ಇಹ ಲೋಕದ ಅಧಿಪತಿಯಾದ ಸೈತಾನನನ್ನು ಜಯಿಸುವ ಸಮಯದಲ್ಲಿ ಆತನು ದುಷ್ಟ ಸೇನೆಗಳೆಲ್ಲರ ಹಾಗು ಪಾಪಕ್ಕೆ ದಾಸರಾದವರೆಲ್ಲರ ಮೇಲೆ ಅದೇ ವಿಧವಾದ ಗೆಲುವು ಸಾಧಿಸಿದ್ದನು. ಆತನು ದೇವರಿಗೆ ಮತ್ತು ಆತನ ಒಡಂಬಡಿಕೆಯ ಹಾಗು ಹೊಣೆಗಾರಿಕೆಯ ಸಂಬಂಧದಲ್ಲಿ ನಂಬಿಗಸ್ತನಾಗಿ ನಿಂತು ದೇವವಿರೋಧಿಗೆ ಸತ್ಯವೆಂಬ ಅಂದರೆ "ಎಂದು ಬರೆದದೆ" ಎಂಬ ನುಣುಪುಕಲ್ಲನ್ನು ಬೀಸಿಹೊಡೆದಿದ್ದನು. ಗೊಲಿಯಾತನು ದಾವೀದನ ಎದುರಿನಲ್ಲಿ ಹೇಗೆ ಬಿದ್ದುಹೋಗಿದ್ದನೋ ಹಾಗೆಯೇ ಸೈತಾನನು ನಮ್ಮ ಕರ್ತನಿಂದ ಪೂರ್ಣವಾಗಿ ಪರಾಭವ ಹೊಂದುವನು. ಕರ್ತನು ಪ್ರಕಟಿಸಿದ್ದು–"ಸೈತಾನನು [ಸಿಡಿಲಿನಂತೆ] ಬೀಳುವದನ್ನು ನಾನು ಕಂಡೆನು." ತನ್ನ ಗೆಲುವಿನ ಫಲವಾಗಿ ಆತನು ಮತ್ತೆ–"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟದೆ." ಎಂದು ಹೇಳಿ ಇದೇ ರೀತಿಯಲ್ಲಿ ತನ್ನ ಬಲದ ಮೂಲಕವಾಗಿ ಹೋರಾಟಮಾಡಿ ಜಯಶಾಲಿಗಳಾಗಿ ಹೊರಬಂದು ಅಂತಿಮವಾಗಿ "ಭೂಲೋಕದ ಕುಲಗಳೆಲ್ಲವನ್ನು ಆಶೀರ್ವದಿಸುವ" ಸಲುವಾಗಿರುವ ತನ್ನ ರಾಜ್ಯದಲ್ಲಿ ತನ್ನೊಡನೆ ಪಾಲನ್ನು ಹೊಂದುವವರಾಗುವಂತೆ ತನ್ನ ಶಿಷ್ಯರನ್ನು ಕಳುಹಿಸಿಕೊಟ್ಟಿದ್ದನು.

ಮಹಿಮೆಯುಳ್ಳ ಸಭೆಯಾಗಿ ರಚಿತವಾಗುವ ನಂಬಿಗಸ್ತ – ರಾದ ಕರ್ತನ ಶಿಷ್ಯರ ವಿಷಯವಾಗಿ ಬರೆದಿರುವದೇನಂದರೆ ಅವರು ಆತನು [ಕರ್ತನು] ಮಾದರಿಯನ್ನು ತೋರಿಸಿರುವ ಪ್ರಕಾರ ಅತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂಬದೇ. ಇದು ಆತನ ವಿಷಯದಲ್ಲಿ ಇದ್ದಂತೆಯೇ, ಪಾಪದ ಹಾಗು ಇದರ ಮಹಾ ಪ್ರತಿನಿಧಿ ಹಾಗು ನಾಯಕನಾಗಿರುವ ಸೈತಾನನು ಮತ್ತು ಆತನ ಪರವಾಗಿ ನಿಂತಿರುವ ಮರಳುಗೊಂಡಿರುವರೆಲ್ಲರ ವಿರುದ್ಧವಾಗಿ ಹೋರಾಡುವದೆನ್ನುವ ಅರ್ಥಕೊಡುತ್ತದೆ. "ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ ಆಕಾಶಮಂಡಲದಲ್ಲಿರುವ ದುರಾತ್ಮ ಸೇನೆಗಳ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ." ಎಂದು ಹೇಳುವಾಗ ಅಪೋಸ್ತಲನು ಇದನ್ನು ತಿಳಿಸುವದಿಲ್ಲವೇ? (ಎಫೆಸ 6:12) ನಮ್ಮ ವಿರೋಧಿಯು ಸೈತಾನನಾಗಿದ್ದು ಅವನ ಎದುರಿನಲ್ಲಿ ನಾವು ನಿಜವಾಗಿಯೂ ಅಶಕ್ತರು. ಅಪೋಸ್ತಲನು ಇವನನ್ನು ಕುಯುಕ್ತಿಯುಳ್ಳ ವೈರಿಯೆಂದು ಕರೆದಿದ್ದು ನಮ್ಮ ಕರ್ತನು ನಮಗೆ ಪ್ರಾರ್ಥಿಸುವದನ್ನು ಕಲಿಸುವಾಗ–"ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ [ಅಂದರೆ ಕೆಡುಕನಿಂದ] ತಪ್ಪಿಸು" ಎಂದು ಹೇಳಿರುವನು. ಹೀಗಾಗಿ ದಾವೀದನ ವಿಷಯದಲ್ಲಿದ್ದಂತೆಯೇ ನಮಗೆ ದೇವರ ಸಹಾಯದ ಅಗತ್ಯವಿರುವದು ಬಹು ಸ್ಪಷ್ಟ.

"ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ"

ಕ್ರಿಸ್ತನ ದೇಹದ ಅಂಗಗಳಾಗಲು ಕರ್ತನಿಂದ ಅಂಗೀರಿಸ–ಲ್ಪಟ್ಟು ಪರೀಕ್ಷಾವಧಿಯಲ್ಲಿರುವವರೆಲ್ಲರೂ ಮುಂಚಿತವಾಗಿಯೇ ಅಭಿಷೇಕಿಸಲ್ಪಟ್ಟವರಾಗಿ ದೈವಾಧಿಕಾರ ಹಾಗು ಮಾರ್ಗದರ್ಶನಕ್ಕೆ ಒಳಪಟ್ಟಿರುವರು. ದಾವೀದನ ವಿಷಯದಲ್ಲಿ ಆತನಿಗೆ ಸಿಂಹದೊಂದಿಗೆ, ಕರಡಿಯೊಂದಿಗೆ ಆದ ಅನುಭವದಂತೆಯೇ ಇವರೂ ಸಹ ಸಾಧಾರಣವಾಗಿ ದುಷ್ಟತನದ ವಿರುದ್ಧವಾಗಿ ಹೋರಾಡಿದವರಾಗಿ ಪಡೆದಂಥ ಆ ಅನುಭವಗಳು ದೇವಾನುಗ್ರಹದ ಮೂಲಕವಾಗಿ ಕೇವಲ ದೊಡ್ಡ ಹೋರಾಟಕ್ಕೆ ಅಂದರೆ ದೇವವಿರೋಧಿ ಹಾಗು ನಮ್ಮ ಹಾನಿಗಾಗಿ ಕಲ್ಪಿಸಿರುವ ಆತನ ಅನೇಕ ಸಾಧನಸಲಕರಣೆಗಳ ವಿರುದ್ಧವಾಗಿ ನಡೆಸುವ ಹೋರಾಟಕ್ಕೆ ನಮ್ಮನ್ನು ಸಿದ್ಧಗೊಳಿಸುವದಾಗಿರುವದು. ಇಂಥಾ ಒಂದು ಹೋರಾಟದ ಸಂಬಂಧವಾಗಿ ನಮಗೆ ಸಹಜವಾಗಿ ಬರುವಂಥ ಆಲೋಚನೆಯೆಂದರೆ–ನಾವು ನಮ್ಮ ಎದುರಾಳಿಯು ತೊಟ್ಟಿರುವ ಆಯುಧಗಳಿಗೆ ಸಮನಾದಂಥ ಅಂದರೆ ಸೌಲನು ದಾವೀದನಿಗೆ ಕೊಡಲು ಒಪ್ಪಿಕೊಂಡ ತನ್ನ ಯುದ್ಧಾಯುಧಗಳಿಗೆ ಸಮನಾದಂಥವುಗಳನ್ನು ಧರಿಸಿಕೊಳ್ಳಬೇಕಿರುವದೆಂಬುದೇ. ಹೇಗೂ ಗೆಲುವು ಎನ್ನುವದು ಲೌಕೀಕ ರೀತಿಯಿಂದ ಪಡೆಯಲು ಅಸಾಧ್ಯವೆಂಬುದನ್ನು ಕರ್ತನ ಜನರಲ್ಲಿ ಪ್ರತಿಯೊಬ್ಬನೂ ಕಲಿತುಕೊಳ್ಳಬೇಕಿರುವದು. ಕೆಟ್ಟತನದ ಮೂಲಕವಾಗಿ ಕೆಟ್ಟತನವನ್ನು, ತಪ್ಪಾದವುಗಳ ಮೂಲಕವಾಗಿ ತಪ್ಪಾದವುಗಳನ್ನು, ಹೊಗಳಿಕೆಯ ಮೂಲಕವಾಗಿ ಹೊಗಳಿಕೆಯನ್ನು, ನಿಂದನೆಯ ಮೂಲಕವಾಗಿ ನಿಂದನೆಯನ್ನು, ಹಗೆತನದ ಮೂಲಕವಾಗಿ ಹಗೆತನ, ಮುಂತಾದವುಗಳ ವಿರೋಧವಾಗಿ ಹೋರಾಡಲು ನಮಗೆ ಸಾಧ್ಯವಾಗದು. ಹಾಗೇನಾದರೂ ನಾವು ಮಾಡಿದಲ್ಲಿ ಯುದ್ಧವನ್ನು ಕಳಕೊಳ್ಳವುದು ಖಚಿತ. ದಾವೀದನಂತೆ ನಾವು ಅನುಸರಿಸುವ ವಿಧಾನವೂ ಪೂರ್ಣವಾಗಿ ಕರ್ತನನ್ನು ಆತುಕೊಂಡವರಾಗಿ ಸತ್ಯವೆಂಬ ಕಲ್ಲಿನಿಂದ ಕವಣೆಯನ್ನು ಉಪಯೋಗಿಸುವದಾಗಿರಬೇಕು. ಈ ವಿಧಾನದಿಂದ ನಾವು ಜಯಿಸದಿದ್ದಲ್ಲಿ ನಮಗೆ ಜಯಿಸಲು ಸಾಧ್ಯವೇ ಆಗುವದಿಲ್ಲ. ಇಂಥವುಗಳ ವಿರುದ್ಧವಾಗಿ ಹೋರಾಡುವದಕ್ಕೆ ಅಂದರೆ ಇಹಲೋಕದ ಅಂಧಕಾರಾಧಿಪತಿ ಹಾಗೂ ಪಾಪವೆಂಬ ಸೇನೆಗಳ ವಿರುದ್ಧವಾದ ಇಂತಹ ಒಂದು ಅಸಮನಾದ ಹೋರಾಟವನ್ನು ಮಾಡುವದಕ್ಕೆ ಯಾರು ಸಮರ್ಥರು? ತನ್ನಲ್ಲಿ ತಾನೇ ಭರವಸೆಯನ್ನು ಇಟ್ಟುಕೊಳ್ಳುವಂಥವನು ಬುದ್ಧಿಹೀನನೇ ಖಂಡಿತ; ಹೀಗಿರುವದರಿಂದ ಅಪೋಸ್ತಲನು ಹೇಳಿದಂತೆ ನಾವು ದೇವರ ಮೇಲೆ ನಮ್ಮ ಭರವಸೆಯನ್ನು ಇಟ್ಟುಕೊಳ್ಳಬೇಕು; ನಾವು ಆತನಿಗೆ ನಿಷ್ಠೆಯುಳ್ಳವರಾದಲ್ಲಿ ಗೆಲುವು ನಮ್ಮದಾಗಿರುವದು, ನಾವೇನಾ–ದರೂ ಎಚ್ಚರಿಕೆಯಿಲ್ಲದವರಾಗಿಯೋ ಅಥವಾ ಅಪನಂಬಿಗಸ್ತ–ರಾಗಿಯೋ ಆಗಿದ್ದಲ್ಲಿ ನಾವು ದಾವೀದನ ವರ್ಗದವರು ಅಂದರೆ ಕ್ರಿಸ್ತನ ಮಹಿಮೆಯುಳ್ಳ ದೇಹದವರಾಗುವದಿಲ್ಲ. ಹೀಗಾದ ಪಕ್ಷದಲ್ಲಿ ನಾವು ಆತನೊಂದಿಗೆ ಎಂದಿಗೂ ಆಳ್ವಿಕೆಮಾಡಲಾರೆವು. ಅಭಿಷೇಕಹೊಂದಿದ ದಾವೀದನೂ ಸಹ ತಾನು ಏನಾದರೂ ಸೌಲನ ಆಯುಧದೊಂದಿಗೆ ಹೋರಾಟಮಾಡಿದ್ದೇ ಆದಲ್ಲಿ ಅತನು ಸಿಂಹಾಸನವನ್ನು ತಲುಪುತ್ತಿರಲಿಲ್ಲ.

ಶಾರೀರಭಾವದ ಕೃತ್ಯಗಳು ಹಾಗು ಸೈತಾನನ ಕೃತ್ಯಗಳು

ನಾವು ಹೋರಾಡಬೇಕಿರುವ ಶಾರೀರಿಕ ನ್ಯೂನ್ಯತೆಗಳು ನಿಜವಾಗಿಯೂ ಸೈತಾನನ ಕೃತ್ಯಗಳಾಗಿರುವವು, ಯಾಕಂದರೆ ಆತನು ಏದೇನಿನಲ್ಲಿ ನಮ್ಮ ಆದಿ ತಂದೆತಾಯಿಗಳ ಪತನವನ್ನು ಆ ಮೂಲಕವಾಗಿ ನಮ್ಮ ಸಮಸ್ತ ಮಾನವಕುಲವನ್ನು ಪಾಪಮರಣವೆಂಬ ಸ್ಥಿತಿಗೆ ಬೀಳುವದನ್ನು ನೆರವೇರಿಸಿದ್ದನಲ್ಲವೇ? ನಾವು ನಮ್ಮನ್ನು ಪ್ರೀತಿಸಿ ತನ್ನ ಅಮೂಲ್ಯವಾದ ರಕ್ತದಿಂದ ಕೊಂಡುಕೊಂಡಾತನ ಮೂಲಕವಾಗಿ ಕಾಪಾಡಲ್ಪಡದ ಹೊರತು ನಾವು ಮಾಡುವ ಹೋರಾಟವು ವ್ಯರ್ಥವಾಗುವದು. ಆದರೆ ಪಾರಂಪರ್ಯವಾಗಿ ಬಂದ ಈ ಶಾರೀರಿಕ ನ್ಯೂನ್ಯತೆಯ ಜೊತೆಗೆ ನಾವು ಈ ಎದುರಾಳಿಯ ಸಕ್ರೀಯ ವಿರೋಧಕೃತ್ಯಗಳನ್ನೂ ಎದುರಿಸಬೇಕು. ಅಂದರೆ ಆತನು ನಮಗೆ ಬರಮಾಡುವ ಪರಿಶೋಧನೆಗಳು ಮಾತ್ರವಲ್ಲದೆ ಆತನು ಮಾನವಕುಲದವ ಮೂಲಕವಾಗಿ ಸಾಧಾರಣವಾಗಿ ಮಾಡುವ ಒಳಸಂಚುಗಳ ವಿರುದ್ಧವಾಗಿಯೂ ಹೋರಾಡಬೇಕಿರುವದು, ಯಾಕಂದರೆ ಆತನು [ಸೈತಾನನು] ನಿಜವಾಗಿಯೂ "ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮ [ವಾಗಿದ್ದಾನೆ]." [ಇಂಗ್ಲೀಷ್ ಪಾಠಾಂತರ: ಆತನು ಅವಿಧೇಯ ಮಕ್ಕಳ ಹೃದಯದಲ್ಲಿ ಕಾರ್ಯ ನಡೆಸುವವನು] ಅವರು ಸಂಖ್ಯೆಯಲ್ಲಿ ವಿಧೇಯರಾದ ಮಕ್ಕಳಿಗಿಂತ ಬಹು ಅಧಿಕವಾಗಿರುವರು. ಹೀಗಾಗಿ ನಮ್ಮ ಮೇಲೆ ಆಕ್ರಮಣಮಾಡುವವರು ಅನೇಕ ವಿಧದವರು ಆಗಿರುವರು. ನಮ್ಮ ಮೇಲೆ ಅವರು ಮಾಡುವ ಅನೇಕ ಆಕ್ರಮಣಗಳಲ್ಲಿ ನಮ್ಮ ಹೃದಯಮನಸ್ಸುಗಳು ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿ ಎಷ್ಟೇ ವಿರೋಧವಾಗಿದ್ದರೂ, ಕನಿಷ್ಠ ಪಕ್ಷದಲ್ಲಿ [ಪರಿಪೂರ್ಣತೆಯಿಂದ] ಬಿದ್ದುಹೋಗಿರುವ ನಮ್ಮ ಶಾರೀರಾಧೀನ ಸ್ವಭಾವದ ಸಹಾನುಭೂತಿಯನ್ನು ಪಡೆದವರಾಗಿರುವರು.

ಈ ಮಹಾ ವೈರಿಯ ಮತ್ತು ಆತನು ಪ್ರತಿ ನಿತ್ಯವೂ ನಾವು ತಾಳಿಕೊಳ್ಳುವ ಸಲುವಾಗಿ ನಮ್ಮ ಮೇಲೆ ಹೇರುವ ಸಕಲ ವಿಧವಾದ ಪ್ರಭಾವ ಪ್ರಾಭಲ್ಯಗಳ ಒಂದು ದೃಶ್ಯವನ್ನು ಪಡೆಯಲು ಅಪೋಸ್ತಲರು ನಮಗೆ ಸಹಾಯ ಮಾಡಿರುವರು. ಅವನು ಸಾರಾಂಶವಾಗಿ ಹೀಗೆ ಹೇಳಿದ್ದಾನೆ: ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಅವು ಯಾವವೆಂದರೆ–ಜಾರತ್ವ ಬಂಡುತನ ನಾಚಿಕೆಗೇಡಿತನ ವಿಗ್ರಹಾರಾಧನೆ ಮಾಟ ಹಗೆತನ ಜಗಳ ಹೊಟ್ಟೆಕಿಚ್ಚು ಸಿಟ್ಟು ಕಕ್ಷಭೇದ ಭಿನ್ನಮತ ಮತ್ಸರ ಕೊಲೆಗಡುಕತನ (ತನ್ನ ಸಹೋದರನನ್ನು ಹಗೆ ಮಾಡುವವನು ಒಬ್ಬ ಕೊಲೆಗಾರನು) ಕುಡಿಕತನ (ಅಕ್ಷರಶಃ ಹಾಗು ಸಾಂಕೇತಿಕವಾದ ಲೌಕೀಕ ಹಾಗು ಬಾಬಿಲೋನ್ ಮನೋಭಾವಗಳೆಂಬ ಅಮಲು) ದುಂದೌತನ ಇಂಥವುಗಳೇ. ಇವುಗಳ ವಿಷಯದಲ್ಲಿ–ಇಂಥ ಕಾರ್ಯಗಳನ್ನು ನಡೆಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ. – ಗಲಾತ್ಯ 5:19–21

"ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ"

ಈ ಪಟ್ಟಿಯಲ್ಲಿರುವದನ್ನು ಅಂದರೆ ನಾವು ಹೋರಾಟ ಮಾಡಬೇಕಿರುವ ಗೊಲ್ಯಾತರನ್ನು ಅವಲೋಕಿಸಿ ನೋಡಿರಿ! ಒಬ್ಬನಲ್ಲಿರುವ ವಿಶೇಷ ಬಲಹೀನತೆಗಳು ಮತ್ತೊಬ್ಬನಲ್ಲಿರುವ ವಿಶೇಷ ಬಲಹೀನತೆಗಳೇ ಆಗಿರಬೇಕಿಲ್ಲ, ಆದರೆ ಇಲ್ಲಿ ಅಪೋಸ್ತಲನು ಒದಗಿಸಿರುವ ಪಟ್ಟಿಯಲ್ಲಿ ಪ್ರತಿಷ್ಠಿತರಾದ ದೇವಜನರಲ್ಲಿ ಪ್ರತಿಯೊಬ್ಬನ ಅಂದರೆ ಶಿರಸ್ಸು ದೇಹದಿಂದ ಕೂಡಿದ ಕ್ರಿಸ್ತನೆಂಬ ದಾವೀದನ ವರ್ಗಕ್ಕೆ ಸೇರಿದವನೂ ಪ್ರಿಯನೂ ಆಗಿರುವ ಪ್ರತಿಯೊಬ್ಬನ ಶಾರೀರಿಕ ಬಲಹೀನತೆಯ ಅಂಶಗಳನ್ನು ಖಂಡಿತವಾಗಿಯೂ ಒಳಗೊಂಡಿರುತ್ತದೆ. ಹೊಸ ಸೃಷ್ಟಿಗಳಾಗಿ ಅಂದರೆ ರಾಜರೂ ಹಾಗು ಯಾಜಕರೂ ಆಗಿ ಮುಂಬರಲಿರುವ ಮಹಿಮೆಯನ್ನು ಪಡೆಯುವದಕ್ಕೆ ಅಭಿಷೇಕವನ್ನು ಹೊಂದುವ–ರೆಲ್ಲರಿಗೂ ತಮ್ಮ ಶರೀರಭಾವದಲ್ಲಿ ಹೋರಾಟ ಮಾಡಲು ಒಬ್ಬ ಗೊಲ್ಯಾತನಿರುತ್ತಾನೆ, ಅಲ್ಲದೆ ಅದು ಕಡೆಯ ತನಕ ಮಾಡುವ ಒಂದು ಹೋರಾಟವಾಗಿರುವದು! ಹಳೆಯ ಸ್ವಭಾವ ಇಲ್ಲವೇ ಹೊಸ ಸ್ವಭಾವ ಇವುಗಳಲ್ಲಿ ಒಂದು ಸಾಯಬೇಕು. ಹೇಳಿರುವದೇನಂದರೆ – ಆದುದರಿಂದ ನಿಮ್ಮಲ್ಲಿರುವ ಭೂಸಂಬಂಧದ ಭಾವಗಳನ್ನು – ಅಂದರೆ ನಮ್ಮ ಶರೀರಭಾವದಲ್ಲಿರುವ ಕೆಟ್ಟವುಗಳನ್ನು ಸಾಯಿಸಿರಿ ಎಂದು ಅಪೋಸ್ತಲನು ಈ ಸಂಬಂಧದಲ್ಲಿ ಪ್ರಬೋಧಿಸಿ ಹೇಳಿರುವನು. ಗೊಲ್ಯಾತನಿಗಾದಂತೆ ಅದು ಕೊಲ್ಲಲ್ಪಡಬೇಕು ಅಂದರೆ ತಲೆಹೊಯ್ಯಲ್ಪಡಬೇಕು; ಆದರೆ ನಾವು ಕರ್ತನ ಹೆಸರಿನಲ್ಲಿ ಅದನ್ನು ಸತ್ಯವೆಂಬ ನುಣುಪುಕಲ್ಲಿನಿಂದ ಹೊಡೆಯುವದರ ಮೂಲಕವಾಗಿ ಗೆಲುವು ಪಡೆಯುವವರೆಗೂ ಭೂಸಂಬಂಧದ ಭಾವವನ್ನು, ಶರೀರಭಾವ ಮತ್ತು ಅದರ ಪ್ರಭಾವಗಳನ್ನು ಸಂಪೂರ್ಣವಾಗಿ ತೆಗೆದುಹಾಕಲು ಸಾಧ್ಯವಾಗದು.

ನಾವು ಮೇಲೆ ಹೇಳಿರುವ ಶರೀರಭಾವದ ಕೃತ್ಯಗಳು ಹಾಗು ಸೈತಾನನ ಕೃತ್ಯಗಳ ಪಟ್ಟಿಯ ಮೇಲೆ ದೃಷ್ಟಿ ಹಾಯಿಸಿದಾಗ–ಅವೆಲ್ಲವೂ ಸ್ವಾರ್ಥಭಾವದಲ್ಲಿ ಬೇರೂರಿರು–ವದನ್ನು ನಾವು ಕಂಡುಕೊಳ್ಳುತ್ತೇವೆ; ಅಲ್ಲದೆ ಹೊಸ ಸೃಷ್ಟಿಯಾಗಿ ನಮಗೆ ಮಾದರಿಯಾಗಿರುವ ನಮ್ಮ ಕರ್ತನನ್ನು ದೃಷ್ಟಿಸಿದಾಗ, ಇದಕ್ಕೆ ತದ್ವಿರುದ್ಧವಾಗಿ, ಪವಿತ್ರಾತ್ಮನ ಫಲಗಳು ಹಾಗು ಕೃಪಾವರಗಗಳೆಲ್ಲವೂ ಪ್ರೀತಿಯಲ್ಲಿ ಕೇಂದ್ರೀಕೃತವಾಗಿರುವದನ್ನು ಕಂಡುಕೊಳ್ಳುತ್ತೇವೆ. ಆದುದರಿಂದ ಹೊಸ ಸೃಷ್ಟಿಯು ನೆಲೆಯೂರಿ ಪ್ರೀತಿಯಲ್ಲಿ ಬೆಳೆದು ವೃದ್ಧಿಯಾಗುವಷ್ಟರ ಪ್ರಮಾಣದಲ್ಲಿ ಹಳೆಯ ಸ್ವಭಾವವು ತನ್ನ ಸ್ವಾರ್ಥಭಾವದೊಡನೆ ಅಳಿದುಹೋಗುವದು.

ಈ ವಿಷಯದಲ್ಲಿ ನಾವು ತಪ್ಪಾಗಿ ವಿಚಾರಮಾಡಲು ಪ್ರವೃತ್ತರಾಗಿ ಅಪೋಸ್ತಲನೊಂದಿಗೆ ಕೂಡಿ ಹೀಗೆ ಹೇಳಬಹುದು: ದೇವರಾತ್ಮಾನುಸಾರವಾಗಿ ಆರಂಭಿಸಿ ಈಗ ಬಹಿರಾಚಾರಗಳಿಂದ [ಶರೀರಭಾವದ ಕೃತ್ಯಗಳ ಮೂಲಕವಾಗಿ] ಸಿದ್ಧಿಗೆ ಬರಬೇಕೆಂದಿದ್ದೀರಾ? ನಾವು ಹೇಳಬಹುದಾದುದೇನಂದರೆ ಖಂಡಿತವಾಗಿಯೂ ಪವಿತ್ರಾತ್ಮನಿಂದ ಹುಟ್ಟಿದವಾಗಿ [ಅಂದರೆ ಅಂಕುರಿಸಲ್ಪಟ್ಟಿದವರಾಗಿ] ಶರೀರಭಾವದ ಪ್ರವೃತ್ತಿ ಮತ್ತು ಅದರ ಅಭಿಲಾಷೆಗಳಿಗೆ ನಿಜವಾಗಿಯೂ ತಮ್ಮನ್ನು ಸತ್ತವರಂತೆ ಎಣಿಸಿಕೊಂಡವರಲ್ಲಿ ಖಂಡಿತವಾಗಿಯೂ ಯಾರೂ ಎಂದೂ ಮತ್ತೆ ದೇವ ವಿರೋಧಿಯ ಅಧೀನಕ್ಕೊಳಗಾಗಿ ಆತನ [ಆತ್ಮ] ಮನೋಭಾವ ಮತ್ತು ಆತನ ಕೃತ್ಯಗಳಲ್ಲಿ ಭಾಗಿಗಳಾಗುವದು ಸಾಧ್ಯವಿಲ್ಲವೆಂಬದು!

ಇದು ಒಂದು ತಪ್ಪಾದ ಅಭಿಪ್ರಾಯ! ಕರ್ತನ ನಿಜವಾದ ಮಕ್ಕಳಲ್ಲಿ ಕೆಲವರಿಗೇ ಹೀಗೆ ಜಯಿಸಲು ಸಾಧ್ಯ. ನಿಜವಾಗಿಯೂ ಸ್ವಾರ್ಥಭಾವದಿಂದ ಸಂಪೂರ್ಣವಾಗಿ ಜಯಿಸಲ್ಪಟ್ಟವರಾಗಿದ್ದಲ್ಲಿ ಅದು ಹೊಸ ಸೃಷ್ಟಿಯ ಮರಣವೆಂದೂ ಹೀಗಾಗಿ ಅದು ಎರಡನೇ ಮರಣವೆಂದೂ ಅರ್ಥಬರುವದು. ನೂತನ ಸ್ವಭಾವದಿಂದ ಎರಡನೇ ಮರಣಕ್ಕೆ ಹೋಗುವ ದಾರಿಯು ಒಂದು ಬಹು ಉದ್ದವೆನ್ನುವ ಅಗತ್ಯವಿರುವದಿಲ್ಲ, ಆದರೆ ಅದನ್ನು ಕೇವಲ ಒಂದು ಹೆಜ್ಜೆಯ ಮೂಲಕವಾಗಿ ತೆಗೆದುಕೊಳ್ಳಲು ಸಾಧ್ಯವೆಂದು ನಂಬುವದಕ್ಕೆ ನಮಗೆ ಕಾರಣವಿರುವದಿಲ್ಲ. ನಾವು ನೆನಪಿನಲ್ಲಿ ಇಡಬೇಕಾದುದೇನಂದರೆ ನೂತನ ಸ್ವಭಾವವು ಪ್ರಸ್ತುತ ಕಾಲದ ವರೆಗೂ, ನಮಗೆ ಪುನರುತ್ಥಾನದಲ್ಲಿ ಉಂಟಾಗುವ ಮಾರ್ಪಾಟಿನವರೆಗೂ ಅದು ಕರ್ತನು, ಆತನ ನೀತಿ, ಆತನ ಪ್ರೀತಿ ಇವುಗಳೊಂದಿಗೆ ಹೊಂದಾಣಿಕೆಯಲ್ಲಿರುವ ಹೊಸ ಮನೋಸಂಕಲ್ಪ, ಹೊಸ ಮನೋಪ್ರವೃತ್ತಿಯಾಗಿದೆ. ಅಪೋಸ್ತಲನು ಮಾಡಿರುವ ಸಲಹೆಯ ಪ್ರಕಾರ ನಾವು ಈ ನೂತನ ಸ್ವಭಾವವನ್ನು ಮಣ್ಣಿನ ಒಂದು ಮಡಿಕೆಯಲ್ಲಿ ಹೊಂದಿದವರಾಗಿದ್ದು ನೂತನ ಸ್ವಭಾವವು ಇದನ್ನು ತನ್ನ ಅಧೀನತೆ ಹಾಗು ನಿಯಂತ್ರಣದಲ್ಲಿ ಇಟ್ಟುಕೊಳ್ಳದ ಹೊರತು ಈ ಮಣ್ಣಿನ ಮಡಿಕೆಯು ಕಾರ್ಯತಃ ಎಂದಿನಂತೆ ತನ್ನ ಮೊದಲಿನ ದೋಷನ್ಯೂನ್ಯತೆಗಳು ಹಾಗು [ಪರಿಪೂರ್ಣತೆಯಿಂದ] ಬಿದ್ದುಹೋಗಿರುವ ಪ್ರವೃತ್ತಿಗಳನ್ನು ಹೊಂದಿದ್ದು ಅವು ಎಂದಿನಂತೆ ಈಗಲೂ ಶಕ್ತಿಯುತವಾಗಿ ಕಾರ್ಯಪ್ರವೃತ್ತವಾಗಿರುತ್ತವೆಂಬುದನ್ನು ನಾವು ನೆನಪಿನಲ್ಲಿಟ್ಟು–ಕೊಳ್ಳಬೇಕಿರುವದು; ಆದರೆ ಈ ಶರೀರಾಧೀನತೆ ಹಾಗು ಅದರ ನಿಯಂತ್ರಣಗಳನ್ನು ಒಂದು ಕ್ಷಣವೇನಾದರೂ ಕಳಚಿಬಿಟ್ಟದ್ದೇ ಆದಲ್ಲಿ ಅದರ ಪರಿಣಾಮವು ಹಳೇ ಸ್ವಭಾವವನ್ನು ಎಚ್ಚರಪಡಿಸಿ, ಅದಕ್ಕೆ ಮರುಜೀವಕೊಟ್ಟಂತಾಗುವದು. ಅಲ್ಲದೆ ಆ ಸನ್ನಿವೇಶವನ್ನು ಪೂರ್ಣವಾಗಿ ಅರಿತುಕೊಂಡವನಾಗಿ ನಮ್ಮ ವಿರೋಧಿಯು ತನ್ನ ಅಧಿಕಾರವೆಲ್ಲವನ್ನು ಬಳಸಿಕೊಂಡು ನಮ್ಮನ್ನು ಅಜಾಗರೂಕ–ರನ್ನಾಗಿಸಿ ನಮ್ಮೆದುರಿಗೆ ಬಿಳುಪನ್ನು ಕಪ್ಪಾಗಿಯೂ ಮತ್ತು ಕಪ್ಪನ್ನು ಬಿಳುಪಾಗಿಯೂ ಕಾಣುವಂತೆ ಸಹ ಮಾಡಿ ನಮ್ಮ ತೀರ್ಮಾನಗಳನ್ನು ತಿರುಚುವನು. ಕರ್ತನು ಬಹು ಕೃಪಾಪೂರ್ಣನಾಗಿ ನಮ್ಮ ಶಕ್ತಿಗೆ ಮೀರಿದ ಶೋಧನೆಗಳಿಂದ ನಮ್ಮನ್ನು ತಪ್ಪಿಸಿ ಕಾಪಾಡುವನು. ಹೀಗಾಗಿ ಎಲ್ಲಾ ಸಮಯ–ಗಳಲ್ಲಿಯೂ ನಾವು ಜಯಶಾಲಿಗಳಾಗಿರಲು ಸಾಧ್ಯವಾಗುವದು, ಅದು ನಮ್ಮ ನೂತನ ಸೃಷ್ಟಿಯ ಬಾಲ್ಯಾವಸ್ಥೆಯಲ್ಲಿ ಮಾತ್ರವಲ್ಲದೆ ಅದರ ಮುಂದಿನ ಬೆಳೆವಣಿಗೆಯ ಅವಸ್ಥೆಯಲ್ಲಿಯೂ ಸಹ ಜಯಶಾಲಿಗಳಾಗಿರಲು ಸಾಧ್ಯವಾಗಿಸುವದು; ಆದರೆ ನಾವು ಆತ್ಮಿಕ ಪ್ರೌಢಾವಸ್ಥೆಯನ್ನು ತಲುಪುವವರೆಗೂ ಪರಿಶೋಧನೆಗಳು ಬಹು ತೀವ್ರವಾಗುತ್ತಾ, ಬಹು ನಿರ್ಣಾಯಕವಾಗುತ್ತಾ ಬರುವಂತೆ

ಬಿಡಲಾಗುವದು; ಅಲ್ಲದೆ ನಾವು ಇದನ್ನು ಆಕ್ಷೇಪಿಸಲು ಸಾಧ್ಯವಾಗದು; ಇದನ್ನೇ ನಾವು ಸ್ಪಷ್ಟವಾಗಿ ಎದುರು ನೋಡಬೇಕಿರುವದು.

ಅಪೋಸ್ತಲನು ಈ ರೀತಿಯ ಮನೋಭಿಪ್ರಾಯವನ್ನು ಅನುಸರಿಸುವವನಾಗಿ ಪ್ರಕಟಮಾಡಿ ಹೇಳಿರುವದು, "ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ." ಅವನು ಮತ್ತೆ ಹೇಳುವದು: "...ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ" – ಅಂದರೆ ನಿಮ್ಮ ಭೂಸಂಬಂಧವಾದ ಆಕಾಂಕ್ಷೆ ಮನೋಸಂಕಲ್ಪ ಮುಂತಾದವುಗಳೆಲ್ಲವೂ ನಮ್ಮಲ್ಲಿ ಮತ್ಸರ ಹಗೆತನ ಸಿಟ್ಟು ಜಗಳ ಇವುಗಳೆಡೆಗೆ ನಡೆಸುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಇವುಗಳನ್ನು ಸಾಯಿಸಬೇಕು. ನಿಮ್ಮ ಆಲೋಚನೆ ನಡೆ ನುಡಿಗಳೆಲ್ಲವುಗಳ ಮೇಲೆ ನೂತನ ಸ್ವಭಾವವು ಸಂಪೂರ್ಣ–ವಾಗಿ ಪ್ರಭಾವ ಬೀರಿ ಅವುಗಳನ್ನು ಹತೋಟಿಯಲ್ಲಿಟ್ಟು–ಕೊಳ್ಳುವಂತೆ ಎಡೆಮಾಡಿಕೊಡಿ. ಮತ್ತು ಈ ನಿಟ್ಟಿನಲ್ಲಿ ಎಚ್ಚರವಾಗಿರಿ; ನಿಮ್ಮ ಆಲೋಚನೆಗಳ ಬಗ್ಗೆ ಜಾಗರೂಕರಾಗಿರಿ, ನಿಮ್ಮ ಮಾತುಗಳ ಬಗ್ಗೆ ಜಾಗರೂಕರಾಗಿರಿ, ನಿಮ್ಮ ನಡತೆಯ ಬಗ್ಗೆ ಜಾಗರೂಕರಾಗಿರಿ. ಅನೇಕರಿಗೆ ತಮ್ಮ ನಡತೆಯ ಬಗ್ಗೆ ಎಚ್ಚರಿಕೆಯಿಂದಿರಲು ಸಾಧ್ಯವಿದ್ದಾಗ್ಯೂ ಅವರಿಗೆ ತಮ್ಮ ಆಲೋಚನೆ ಮತ್ತು ತಮ್ಮ ನುಡಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳನ್ನು ಸರಿಯಾಗಿ ತೂಗಿನೋಡುವದು ಅವರಿಗೆ ಕಷ್ಟಕರವಾಗುವದು. ನಿಜವಾಗಿಯೂ ಅಪೋಸ್ತಲನು ತಿಳಿಸುವದೇನಂದರೆ ಹೃದಯದಿಂದ ಹೊರಡುವದು ಅಸೂಯೆ ಸಿಟ್ಟು ದುರ್ಭಾಷೆ ಚಾಡಿಕೊರತನ ಜಗಳ ಭಿನ್ನಾಭಿಪ್ರಾಯ; ಇವುಗಳು ಹೃದಯದಲ್ಲಿ ಇರದಿದ್ದಲ್ಲಿ ಬಾಯಿಯು ಇವುಗಳನ್ನು ಉಚ್ಚರಿಸಲಾಗದು, ಯಾಕಂದರೆ ಹೃದಯದಲ್ಲಿ ತುಂಬಿರುವದೇ ಬಾಯಿಂದ ಹೊರಡುವದು.

"ನಾಲಿಗೆಯೂ ಕಿಚ್ಚೇ....ಅಧರ್ಮಲೋಕ ರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟಿದೆ."

ಅಯ್ಯೋ, ಹೌದು! ನಮ್ಮ ಮಾತುಗಳೇ ನಮಗೆ ತೀರ್ಪು ಮಾಡುತ್ತವೆ; ಒಡೆಯನು ಪ್ರಕಟಿಸಿ ಹೇಳಿರುವಂತೆ "ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪು ಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ" ಪ್ರವಾದಿಯು ಹೀಗೆ ಹೇಳಿರುವಲ್ಲಿ ಆಶ್ಚರ್ಯವಿಲ್ಲ: "ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು [ಕಾವಲಿರಿ–ಸುವೆನು]." ಕಾವಲಿರಿಸುವದರ ಸ್ಪಷ್ಟವಾದ ಅರ್ಥವೇನಂದರೆ ನಾವು ಯಾರ ಬಗ್ಗೆಯೂ ಕೆಟ್ಟ ಮಾತುಗಳನ್ನು ಹೇಳದಂತೆ ನಾವು ನುಡಿಯುವ ಪ್ರತಿಯೊಂದು ವಿಷಯದ [ಮಾತಿನ] ಬಗ್ಗೆ ವಿಶೇಷವಾಗಿ ವಿವೇಚನೆ ಮಾಡುವದನ್ನು ಅಭ್ಯಾಸಿಸಬೇಕೆಂಬದು; ನಾವು ನುಡಿಯುವ ಕೆಟ್ಟಮಾತುಗಳು ಕರ್ತನಿಗೂ ಆತನ ದ್ಯೇಯೋದ್ದೇಶಗಳಿಗೂ ಯಾವ ಅಗತ್ಯವೂ ಇರುವದಿಲ್ಲ; ಆತನು ನಮ್ಮ ಪರವಾಗಿ ಮಾಡಿದ ಏರ್ಪಾಡುಗಳಲ್ಲಿ ಒಂದನ್ನೂ ಉಲ್ಲಂಘನೆಯಾಗದ ರೀತಿಯಲ್ಲಿ ಕರ್ತನು ತನ್ನ ಉದ್ದೇಶ–ಗಳೆಲ್ಲವನ್ನು ನೆರವೇರಿಸಲು ಪರಿಪೂರ್ಣವಾಗಿ ಸಮರ್ಥ–ನಾಗಿರುವನು. ಆತನೇನಾದರೂ ಗೊಂದಲಮಯ ಸ್ಥಿತಿಯನ್ನು ಕ್ರಮಕ್ಕೆ ತರುವಷ್ಟು ವಿವೇಕವುಳ್ಳವನಲ್ಲದಿದ್ದಲ್ಲಿ ನಾವು ಕರ್ತನ ಹಾಗು ಆತನ ಕಾರ್ಯಭಾರಗಳಲ್ಲಿ, ಆತನ ವಾಕ್ಯದಲ್ಲಿ ನೀಡಲಾದ ಸೂಚನೆಗಳ ಅನುಸರಣೆ ಮಾಡುವದನ್ನು ಹೊರತುಪಡಿಸಿ, ಮಧ್ಯಪ್ರವೇಶಿಸಲು ಖಂಡಿತವಾಗಿಯೂ ನಮ್ಮಲ್ಲಿ ಸಾಕಷ್ಟು ವಿವೇಕವಿಲ್ಲದಾಗಿದ್ದು ಹಾಗೆ ಏನಾದರೂ ಮಾಡಿದಲ್ಲಿ ಅದು ನಮ್ಮ ವಿಷಯದಲ್ಲಿ ಒಂದು ದೊಡ್ಡ ಒಣಪ್ರತಿಷ್ಠೆಯ ಕಾರ್ಯವೆಂದು ಎಣಿಸಲ್ಪಡುವದು. ಈ ಮುಂದಿನದು ನಮಗೆ ನೀಡಲಾದ ಅಧಿಕಾರವಾಗಿರಲಿ: ಆತನು ನಮಗೆ ನುಡಿಯಲು ಸೂಚಿಸಿದಾಗ ನಾವು ನುಡಿಯುವವರಾಗೋಣ; ನಾವು ಸುಮ್ಮನಿರಬೇಕೆಂದು ಆತನು ಸೂಚಿಸಿದಾಗ ನಾವು ಸುಮ್ಮನೆ ಇರೋಣ. ಬೇರೆ ಯಾವ ಒಂದು ವಿಧಾನವೂ ಸುರಕ್ಷಿತವಾದುದ್ದಲ್ಲ.

ಅಪೋಸ್ತಲನು ಹೀಗೆ ಸಾರಿ ಹೇಳಿರುವನು: "ನಾಲಿಗೆಯು ...ತಾನೇ ನರಕದಿಂದ ಬೆಂಕಿ ಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಹಚ್ಚುತ್ತದೆ." (ಯಾಕೋಬ 3:6) ಇನ್ನೊಂದು ಮಾತಿನಲ್ಲಿ ಹೇಳುವದಾದರೆ ನಾಲಿಗೆಯನ್ನು ಕೆಡುಕುಮಾಡಲು ಹೊತ್ತಿಸುವ ಬೆಂಕಿಯು ಎರಡನೇ ಮರಣಕ್ಕೆ ಸಂಬಂಧಿಸಿದ ಒಂದು ಕಿಡಿಯಾಗಿರುವದು, ಯಾಕಂದರೆ ಎಲ್ಲಾ ವಿಧವಾದ ಕೋಪ ಹಗೆತನ ಅಸೂಯೆ ದ್ವೇಷ ಜಗಳ ದುರ್ಭಾಷೆ ಚಾಡಿಕೋರತನ ಇವೆಲ್ಲವೂ ಶರೀರಭಾವದ ಹಾಗು ಪಿಶಾಚನ ಕೃತ್ಯಗಳಾಗಿದ್ದು ಇವು ಎರಡನೇ ಮರಣದ ಕಡೆಗೆ ನಡೆಸುವ ಪ್ರವೃತಿಯುಳ್ಳವುಗಳಾಗಿರುತ್ತವೆ. ಇವುಗಳನ್ನು ಪಟ್ಟಿಮಾಡುವವ–ನಾಗಿ ಅಪೋಸ್ತಲನು ಹೇಳಿರುವದು: "ಇಂಥ ಕಾರ್ಯಗಳನ್ನು ನಡೆಸುವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲ..." (ಗಲಾತ್ಯ 5:21) ಇಂಥಾ ಕೃತ್ಯಗಳನ್ನು ಮಾಡುವವರು ಅವರು ಈ ಕೆಟ್ಟ ದಾರಿಯಲ್ಲಿ ಮುಂದುವರಿದದ್ದೇ ಆದಲ್ಲಿ ಅವರು ದೇವರ ರಾಜ್ಯದಲ್ಲಿ ಪಾಲನ್ನು ಹೊಂದಲು ವಿಫಲರಾಗುವದು ಮಾತ್ರವಲ್ಲದೆ ಯಾರಿಂದಲೂ ಎಣಿಸಲಾಗದ ಮಹಾಸಮೂಹ–ದಲ್ಲಿಯೂ ಪಾಲುಗಾರರಾಗಲು ವಿಫಲರಾಗಿ ನರಕ [ಗೆಹನ್ನ] ಅಂದರೆ ಎರಡನೆ ಮರಣದಲ್ಲಿ ತಮ್ಮ ಪಾಲನ್ನು ಪಡೆಯುವರು. ಇದೇನೂ ನಾವು ಮಾಡುವ ಉತ್ಪ್ರೇಕ್ಷೆಯ ಬೋಧನೆಯಲ್ಲ; ಇದು ಭಕ್ತರಾದ ಪೇತ್ರನ ಯಾಕೋಬ್ಯರ ಸ್ಪಷ್ಟ ಸಾಕ್ಷಿಪ್ರಮಾಣಗಳಾಗಿದ್ದವು. ಇದು ಈ ಸುವಾರ್ತಾಯುಗದ ಹಾಗು ವಿಶೇಷ ಪರಿಶೋಧನೆ–ಯಲ್ಲಿರುವ ಕ್ರೈಸ್ತಸಭೆಯ ನಿಯಮಾವಳಿಗಳು ಮಾತ್ರವಲ್ಲದೆ ಇದೇ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿನ ನಿಯಮಾವಳಿಗಳೂ ಆಗಿರುವವು; ಯಾರು ಸೈತಾನನ ಕೃತ್ಯಗಳಿಗೆ ವಿರುದ್ಧವಾಗಿರುವ ಪ್ರೀತಿ ಸಂಬಂಧದ ನಿಯಮಗಳಿಗೆ ಹೊಂದಾಣಿಕೆ ಮಾಡಿಕೊಳ್ಳು–ವದಿಲ್ಲವೋ ಅವರು ಪಾಪದ ಹಾಗೂ ಸೈತಾನನ ಸೇವಕರೆಂದು ಪರಿಗಣಿಸಲ್ಪಟ್ಟು ಬೆಂಕಿಯ ಕೆರೆಯಲ್ಲಿ ಅಂದರೆ ಎರಡನೇ ಮರಣದಲ್ಲಿ ತಮ್ಮ ಪಾಲನ್ನು ಹೊಂದುವರು. – ಪ್ರಕಟನೆ 20:14

ನಾಲಿಗೆಯು ಪ್ರಪಂಚವೆಂಬ ಚಕ್ರಕ್ಕೆ ಬೆಂಕಿಯನ್ನು ಹೊತ್ತಿಸುವದೆಂದು ಅಪೋಸ್ತಲನು ಹೇಳುವಾಗ ತಾನು ಅಪೋಸ್ತಲನಾದ ಪೇತ್ರನು ಪ್ರಸ್ತಾಪಿಸಿರುವ ಸಾಂಕೇತಿಕವಾದ ಭೂಮ್ಯಾಕಾಶಗಳು ಖಂಡಿತವಾಗಿಯೂ ಸುಟ್ಟುಹೋಗುವದೆಂಬ

ಒಂದು ಸತ್ಯಾಂಶವನ್ನು ಪೂರ್ಣವಾಗಿ ಅನುಸರಿಸುವನಾಗಿ ಇದನ್ನು ವ್ಯಕ್ತಪಡಿಸಿರುವನೆಂಬದು ನಮ್ಮ ನಂಬಿಕೆ. ಚಿಕ್ಕ ಅಂಗವಾದ ನಾಲಿಗೆಯು ಹೀಗೆ ಭೂಚಕ್ರಕ್ಕೆ ಬೆಂಕಿಯನ್ನು ಹಚ್ಚುತ್ತಾ ಕ್ರಮೇಣ ಮಹಾ ಭೀಕರವಾದ ಅರಾಜಕತ್ವವನ್ನು ಉಂಟುಮಾಡಿ ಆ ಮೂಲಕವಾಗಿ ಈಗಿನ ವ್ಯವಸ್ಥಾಕ್ರಮಗಳೆಲ್ಲವೂ ಬಿದ್ದು ಹೋಗುವಂತೆ ಮಾಡಿ ಇಡೀ ಆಕಾಶದ ಕೆಳಗೆ ದೇವರ ರಾಜ್ಯವು ಸ್ಥಾಪನೆಗೊಳ್ಳುವ ದಾರಿಯನ್ನು ಸಿದ್ಧಪಡಿಸುವದು. ಯಾರಾರು ಕೇಳುವ ಕಿವಿಯುಳ್ಳವರೋ ಅವರಿಗೆ ಕೆಟ್ಟ ನಾಲಿಗೆಗಳು ಅಪೋಸ್ತಲನು ಚಿತ್ರಿಸಿರುವಂಥ ದೊಡ್ಡ ಕಿಚ್ಚನ್ನು ಹೊತ್ತಿಸುವ ದಾರಿಯಲ್ಲಿ ಶೀಘ್ರವಾಗಿ ಸಾಗುತ್ತಿರುವದನ್ನು ಈಗಾಗಲೇ ಗ್ರಹಿಸಿಕೊಳ್ಳಲು ಸಾಧ್ಯ. ಕ್ರೈಸ್ತಸಭೆ ರಾಜ್ಯಪ್ರಭುತ್ವ ಆರ್ಥಿಕ ಹಾಗು ರಾಜಕೀಯ ವಲಯಗಳಲ್ಲಿ ಭಾವೋದ್ರೇಕಗಳು ತಲೆದೂರುತ್ತಿರುವವು. ಸ್ವಾರ್ಥಭಾವವು ಹೆಚ್ಚು ಹೆಚ್ಚಾಗಿ ಹಿಡಿತವನ್ನು ಸಾಧಿಸುತ್ತಾ ಸತ್ಯವೇದವು ಸಾರಿಹೇಳಿರುವಂತೆ ಕ್ರಮೇಣವಾಗಿ ಹೊರಗೆ ಹೋಗುವವನಿಗೂ ಅಥವಾ ಒಳಗೆ ಬರುವವನಿಗೂ ನೆಮ್ಮದಿಯೇ ಇಲ್ಲದಂತಾಗಿ ಒಬ್ಬರ ಮೇಲೊಬ್ಬರು ಕೈಯೆತ್ತುವರು (ಅಥವಾ ಪ್ರತಿಯೊಬ್ಬನ ಕೈ ತನ್ನ ನೆರೆಯವನಿಗೆ ವಿರೋಧವಾಗಿ ಎತ್ತಲ್ಪಟ್ಟಿರುವದು).

ಹೀಗೆ ನಾಲಿಗೆಯು ಪ್ರಪಂಚವೆಂಬ ಚಕ್ರದಲ್ಲಿರುವ ಹೆಸರಿನ ಕ್ರೈಸ್ತಸಭೆ ಹಾಗು ಲೋಕದಲ್ಲಿರುವ ಸಾಮಾಜಿಕ ವ್ಯವಸ್ಥೆಗೆ ಬೆಂಕಿಯನ್ನು ಹಚ್ಚುವದಾದರೆ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಜೀವಸ್ವರೂಪನಾದ ದೇವರ ಸಭೆಯು ಇಂಥಾ ಪರಿಶೋಧನೆಗಳಿಂದ ಹೊರತಾಗಿರುವದೆಂದು ನಾವು ಭಾವಿಸಿಕೊಳ್ಳಬಹುದೇ ಅಲ್ಲದೆ ಈ ಪರಿಶೋಧನೆಗಳು ಪ್ರಪಂಚಕ್ಕೆ ಸಂಭವಿಸುವದಕ್ಕಿಂತಲೂ ಕಡಿಮೆ ನಿರ್ಣಾಯಕವಾಗಿರುವದೆಂದು ನಾವು ಕಲ್ಪಿಸಿಕೊಳ್ಳಬಹುದೇ? ಖಂಡಿತವಾಗಿಯೂ ಇಲ್ಲ! ನ್ಯಾಯವಿಚಾರಣೆಯು ದೇವರ ಮನೆಯಲ್ಲಿಯೇ ಆರಂಭವಾಗಿ ಅದು ಹೆಸರಿಗಾಗಿರುವ ದೇವರ ಮನೆಗೆ ಹಾಗು ಲೋಕಕ್ಕೆ ವಿಸ್ತರಿಸಿಕೊಳ್ಳುವದೆಂಬುದನ್ನು ನಾವು ನಿರೀಕ್ಷಿಸಬೇಕಿರುವದು. ನಮ್ಮಲ್ಲಿ ಪ್ರತಿಯೊಬ್ಬನೂ ಅಕ್ರಮವುಳ್ಳ ಅಂಗದ [ನಾಲಿಗೆಯ] ವಿಷಯದಲ್ಲಿ ಎಚ್ಚೆತ್ತುಕೊಂಡವನಾಗಿ ಕರ್ತನ ಚಿತ್ತಕ್ಕೆ ತನ್ನದನ್ನು ಸಂಪೂರ್ಣವಾಗಿ ಅಧೀನಮಾಡಿಕೊಳ್ಳುದು ಸೂಕ್ತವಾಗಿರುವದು; ಹೀಗಾಗಿ ನಾವು ಕೇವಲ ಭಕ್ತಿವೃದ್ಧಿಯನ್ನು ಉಂಟುಮಾಡುವ ವಿಷಯಗಳ ಬಗ್ಗೆ ಮಾತಾಡಿಕೊಳ್ಳುವವರಾಗಿ; ಯಾರ ಬಗ್ಗೆಯೂ ನಾವು ಕೆಟ್ಟದ್ದನ್ನು ನುಡಿಯದವರಾಗಿದ್ದು; ದೇವರನ್ನು ಹರಸಿ ಸ್ತುತಿಸುವಂಥ ನಮ್ಮ ನಾಲಿಗೆಗಳನ್ನು ಕರ್ತನ ಧ್ಯೇಯೋದ್ದೇಶಗಳು ಆಶೀರ್ವದಿತವಾಗಿ ಸಹಾಯಹೊಂದಿ ಏಳಿಗೆಗೆ ಬಂದು ಬಲಗೊಳ್ಳುವ ಸಲುವಾಗಿ ನಾವು ಬಳಸಿಕೊಳ್ಳಬೇಕು.

ಆದರೆ ಹೃದಯದಲ್ಲಿ ತುಂಬಿರುವದೇ ಬಾಯಿಂದ ಹೊರಡುವ ಕಾರಣ ನಾವು ನಮ್ಮ ಹೃದಯಗಳನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು, ಇವುಗಳು ಸಹಜವಾಗಿ ವಂಚಿಸುವ ಪ್ರವೃತ್ತಿಯುಳ್ಳದೆಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು; ನಾವು ಕೆಟ್ಟದನ್ನು ಒಳ್ಳೆಯದೆಂದು ಭಾವಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು; ಅಲ್ಲದೆ ನಾವು ಮತ್ತೊಬ್ಬರ ಬಗ್ಗೆ ಕೆಟ್ಟ ಸಂಗತಿಗಳನ್ನು ಪ್ರಚುರಪಡಿಸದವರಾಗಿ ಹಾಗು ಮತ್ತೊಬ್ಬರನ್ನು ಧೂಷಿಸದವರನ್ನಾಗಿ ಮಾಡಿಕೊಂಡು ಒಳ್ಳೆಯದನ್ನು ಪ್ರಚುರಗೊಳಿಸುವವರಾಗಬೇಕು. ಇದು ದೇವವಿರೋಧಿಯ ಒಂದು ತಂತ್ರಗಾರಿಕೆಯಾಗಿರುವದು ಅಲ್ಲದೆ ಅಪೋಸ್ತಲನು ಹೇಳಿರುವದು, "ನಾವು ಆತನ ಯೋಚನೆಗಳನ್ನು ಬಲ್ಲವರಲ್ಲವಲ್ಲಾ." ನಾವು ಹಿಂದೆಂದಿಗಿಂತಲೂ ಹೆಚ್ಚು ಜಾಗ್ರತೆಯುಳ್ಳವರಾಗಿ ನಮ್ಮ ಉದ್ದೇಶಗಳನ್ನು ಪರಿಶೀಲಿಸುವವರಾಗೋಣ, ಇದು ಮಾತ್ರವಲ್ಲದೆ, ಒಳ್ಳೆಯ ಉದ್ದೇಶಗಳನ್ನು ಕಂಡುಕೊಂಡ ನಂತರ ನಮ್ಮ ಕಾರ್ಯವಿಧಾನವನ್ನು ಪರಿಶೀಲನೆಮಾಡಿ ಅವೆಲ್ಲವುಗಳನ್ನು ದೇವರ ವಾಕ್ಯಕ್ಕೆ ಸರಿಹೊಂದಿಸಿಕೊಳ್ಳುವವರಾಗೋಣ. ಆತನು ನಮ್ಮನ್ನು ಪ್ರೀತಿಸಿದ ಮೇರೆಗೆ ನಾವು ಒಬ್ಬರನ್ನೊಬ್ಬರು ಪ್ರಾಣಕೊಡುವಷ್ಟು ಪ್ರೀತಿಸಬೇಕೆಂಬ ಆತನ ಆದೇಶವನ್ನು ವಿಶೇಷವಾಗಿ ನೆನೆಯುವರಾಗೋಣ. ಹೀಗಾಗಿ ನಾವು ಆತನ ವಾಕ್ಯಗಳಿಗೆ ಲಕ್ಷ್ಯಕೊಟ್ಟು ಆತನಿಗೆ ವಿಧೇಯರಾಗಿ ಆತನ ವಾಕ್ಯದಲ್ಲಿ ನಮಗೆ ನೀಡಿರುವ ಆತನ ಕಾರ್ಯವಿಧಾನಗಳ ರೂಪರೇಷೆಗಳನ್ನು ಮರೆಯದಿರೋಣ. ಮತ್ತಾಯ 18:15–17.

ಸ್ವಯಂ–ಪರೀಕ್ಷೆ

ನಾನು ಕ್ರೂಜೆಯ ಸೈನಿಕನಾಗಿದ್ದು
ಯಜ್ಞದ ಕುರಿಯಾದಾತನ ಹಿಂಬಾಲಕನಾಗಿದ್ದೇನೋ?
ಅಲ್ಲದೆ ಆತನ ಧ್ಯೇಯೋದ್ದೇಶ ನನ್ನದಾಗಿಸಲು ಅಂಜುವೆನೋ,
ಇಲ್ಲವೇ ಆತನ ಹೆಸರನ್ನು ಹೇಳಲು ನಾಚಿಕೆಯೋ?

ನನಗೆ ಎದುರಿಸಲು ವೈರಿಗಳಿಲ್ಲವೇ?
ನಾನು ಪ್ರವಾಹಕ್ಕೆ ತಡೆಹಾಕಬೇಕೇ?
ವ್ಯರ್ಥ ಲೋಕವು ಕೃಪಾ ಸ್ನೇಹವೋ
ದೇವರೆಡೆಗೆ ನಾನು ತೆರಳಲು ಸಹಾಯಕವೋ

ನನಗೆ ಪರದೈಸನ್ನು ಪಡೆದುಕೊಳ್ಳುವದು
ಹೂವಿನ ಹಾಸಿಗೆಯಷ್ಟು ಸುಲಭವೇ,
ಇತರರು ಬಹುಮಾನ ಪಡೆಯಲು
ಕಠಿಣ ಸಮುದ್ರದಲ್ಲಿ ಯಾನಮಾಡುತ್ತಿರುವಲ್ಲಿ?

ನಾನು ಆಳುವಂತಾಗಲು ಹೊರಾಟವು ಖಂಡಿತ
ನನ್ನ ಧೈರ್ಯವನ್ನು ಹೆಚ್ಚಿಸು ಕರ್ತನೇ
ನಾನು ಕಷ್ಟ ತಾಳಿ ನೋವು ಸಹಿಸಲು
ನಿನ್ನ ವಾಕ್ಯದ ಆಧಾರ ನೀಡು

ನಿನ್ನ ಸುಪ್ರಸಿದ್ಧ ದಿನವು ಉದಯಿಸಿದಾಗ
ಅಲ್ಲದೆ ನಿನ್ನ ಭಕ್ತರೆಲ್ಲರೂ ಶೋಭಿಸುವಲ್ಲಿ
ಹಾಗು ಜಯಧ್ವನಿಯು ಮುಗಿಲು ಮುಟ್ಟಲು
ನಿನ್ನದಾಗಿರಲಿ, ಕರ್ತನೇ, ಮಹಿಮೆಯು,

ಆಪತ್ಕಾಲದ ಮಿತ್ರನೇ ನಿಜವಾದ ಮಿತ್ರನು

ರೀಪ್ರಿಂಟ್ಸ್ 4223

1 ಸಮುವೇಲ 18

"ಮಿತ್ರನ ಪ್ರೀತಿಯು ನಿರಂತರ; ಸಹೋದರನ ಜನ್ಮವು ಆಪತ್ತಿನಲ್ಲಿ ಸಾರ್ಥಕ" – ಜ್ಞಾನೋಕ್ತಿ 17:17

ಯೋನಾತಾನನು ಮತ್ತು ದಾವೀದನ ನಡುವೆ ಇದ್ದ ಪ್ರೀತಿಗಿಂತಲೂ ಹೆಚ್ಚು ಹೃದಯಸ್ಪರ್ಶಿಯಾದ ವೃತ್ತಾಂತವು ಚರಿತ್ರೆಯ ದಾಖಲೆಗಳಲ್ಲಿ ಮತ್ತೊಂದಿಲ್ಲ. ಹಲವಾರು ವಿಧದಲ್ಲಿ ಅವರು ಸಂಪೂರ್ಣವಾಗಿ ವಿಭಿನ್ನ ವ್ಯಕ್ತಿತ್ವವುಳ್ಳವರಾದರೂ ಇಬ್ಬರೂ ಘನತೆಗೌರವವುಳ್ಳ ಗುಣಸ್ವಭಾವದವರಾಗಿದ್ದು ಒಬ್ಬರನ್ನೊಬ್ಬರು ಗಾಢವಾಗಿ ತೀವ್ರವಾಗಿ, ಪ್ರೀತಿಸುವಷ್ಟು ಸಮರ್ಥರಾಗಿದ್ದರು. ದಾವೀದನು ಅಧಿಕವಾಗಿ ಬಹುಮುಖ ಪ್ರತಿಭೆಯುಳ್ಳವನಾಗಿದ್ದು ದಾಖಲೆಗಳ ಪ್ರಕಾರ ಆತನದು ಬಹು ಗುಣವಿಶಾಲತೆಯ ವ್ಯಕ್ತಿತ್ವವಾಗಿತ್ತು; ಚಾರ್ಲ್ಸ್ ರೀಡ್ ಎನ್ನುವವರು ಹೀಗೆ ಹೇಳಿರುವರು:–

"ಲಿಖಿತವಾದ ಪ್ರವಿತ್ರ ಶಾಸನದಲ್ಲಿ ಮೋಶೆ, ಎಲೀಯ ಮತ್ತು ಪೌಲ; ಲೋಕ ಚರಿತ್ರೆಯಲ್ಲಿ ಸೊಲೋನ್ ಅಲೆಕ್ಸಾಂಡರ್ ಸೀಸರ್ ಕಾರ್ಲೆಮ್ಯಾಗ್ನೆ ನೆಪೋಲಿಯನ್ ಮತ್ತು ಇತರರು ದಾವೀದನನ್ನು ಒಂದು ಗುಣಲಕ್ಷಣ ಇಲ್ಲವೇ ಮತ್ತೊಂದರಲ್ಲಿ ಮೀರಿದ್ದರು. ಆದರೆ ದಾವೀದನು ಈ ಎಲ್ಲಾ ಮಹಾ ಪುರುಷರಿಗಿಂತಲೂ ಒಂದು ದೊಡ್ಡ ಸಂಖ್ಯೆಯಲ್ಲಿನ ವೈವಿದ್ಯ–ಮಯವಾದ ಆಕರ್ಶಕ ಗುಣಲಕ್ಷಣಗಳನ್ನು ಪ್ರದರ್ಶಿಸಿರುವನು; ಈ ಕಾರಣಕ್ಕಾಗಿಯೇ ನಾನು ಅವನನ್ನು ದಾಖಲೆಗಳಲ್ಲಿಯೇ ಅತಿ ಮನೋವಿಶಾಲತೆಯುಳ್ಳ ಗುಣಸ್ವಭಾವದವನೆಂಬ ಶೈಲಿಯಲ್ಲಿ ಹೇಳಿರುವೆನು – ಅಂದರೆ ಅವನು ಒಬ್ಬ ಕುರುಬ, ಒಬ್ಬ ಸೈನಿಕ, ಒಬ್ಬ ಆಸ್ಥಾನಿಕ, ಸುಪ್ರಸಿದ್ಧನಾದ ಒಬ್ಬ ಮಿತ್ರ, ಒಬ್ಬ ಅಲೆಮಾರಿ, ಒಬ್ಬ ಸೆರೆಹಿಡಿಯುವವನು, ಒಬ್ಬ ಕೊಳ್ಳೆಗಾರ, ಒಬ್ಬ ಸೇನಾಧಿಕಾರಿ, ಒಬ್ಬ ಅರಸ, ಒಬ್ಬ ರಾಜತಾಂತ್ರಿಕ, ಒಬ್ಬ ದೇಶಭ್ರಷ್ಟ, ಒಬ್ಬ ಯಾಜಕ, ಒಬ್ಬ ಪ್ರವಾದಿ, ಒಬ್ಬ ಭಕ್ತ, ಒಬ್ಬ ಅಪರಾಧಿ, ಒಬ್ಬ ಪಶ್ಚಾತಾಪಿ. ಅಲ್ಲದೆ ಇವೆಲ್ಲವೂ ಅರೆಪ್ರಮಾಣದಲ್ಲೇನೂ ಇರಲಿಲ್ಲ. ಆವನ ಗುಣಸ್ವಭಾವವು ಅನೇಕ ತಂತಿಗಳುಳ್ಳ ಒಂದು ಕಿನ್ನರಿಯಾಗಿತ್ತು."

ಅರಸನಾದ ಸೌಲನ ಮಗನೂ ಇಸ್ರಾಯೇಲ್ ಸಿಂಹಾಸನಕ್ಕೆ ಸ್ಪಷ್ಟ ಬಾಧ್ಯಸ್ಥನೂ ಆಗಿದ್ದ ಯೋನಾತಾನನೂ ಸಹ ಘನವಂತಿಕೆಯುಳ್ಳವನಾಗಿದ್ದನು. ಅವನು ಒಬ್ಬ ನಂಬಿಗಸ್ತ ಮಗನಾಗಿದ್ದು ಆತನಿಗೆ ಮಾತ್ರವೇ ತನ್ನ ತಂದೆಯಾದ ಸೌಲನನ್ನು ಆವನ ನಿರಾಶಾದಾಯಕ ಸಮಯಗಳಲ್ಲಿ ಆವನನ್ನು ಸಂತೈಸಲು ಸಾಧ್ಯವಿತ್ತು. ಅವನು ತನ್ನನ್ನು ಒಬ್ಬ ಸಮರ್ಥ ಯುದ್ಧವೀರನಾಗಿ ತೋರಿಸಿಕೊಂಡವನಾಗಿ ದೇವರಲ್ಲಿ ದೊಡ್ಡ ನಂಬಿಕೆಯನ್ನು ಪ್ರದರ್ಶಿಸಿದ್ದನು; ಅಲ್ಲದೆ ಆತನ ಧಾರ್ಮಿಕ ಮನೋಭಾವವು ದಾವೀನದಷ್ಟೇ ಸಂಪೂರ್ಣವಾಗಿ ಅಭಿವೃದ್ಧಿಯಾಗಿದ್ದುದು ಸ್ಪಷ್ಟವಾಗಿತ್ತು. ದೇವರ ಕಡೆಗಿರುವ ಪ್ರಮಾಣಿಕತೆ ಮತ್ತು ಶ್ರದ್ಧಾನಿಷ್ಠೆ ಹಾಗು ಭಯಭಕ್ತಿಯ ಅಂಶಗಳು ತಮ್ಮಲ್ಲಿರುವದನ್ನು ಈ ಇಬ್ಬರು ಪುರುಷರೂ ಕಂಡುಕೊಂಡದ್ದು ಸ್ಪಷ್ಟವಾಗಿದ್ದು ಅದು ಅವರ ಭವ್ಯ ಸ್ನೇಹದ ಮೂಲಕವಾಗಿ ರೂಪುಗೊಂಡಿದ್ದು ಇವು ಬಹು ಸಹಜವಾಗಿಯೇ ಅವರಿಬ್ಬರ ಹೃದಯಗಳನ್ನು ಪ್ರೀತಿಯೆಂಬ ಒಂದು ಅದ್ಭುತ ಸ್ನೇಹಬಂಧದಲ್ಲಿ ಬೆಸೆದುಕೊಳ್ಳುವಂತೆಮಾಡಿತ್ತು. ಸಂಪೂರ್ಣ ವಿವರಣೆಯ ಪ್ರಕಾರ ನಿಜವಾಗಿಯೂ ಯೋನಾತಾನನು ಈ ಇಬ್ಬರು ಮಹನೀಯರುಗಳಲ್ಲಿ ಬಹು ವಿಶಾಲತೆಯುಳ್ಳವನಂತೆ ಕಂಡುಬಂದಿದ್ದು ಆತನ ಪ್ರೀತಿಯು ಬಹು ವಿಶೇಷವಾಗಿತ್ತು. ಲೋಕದಲ್ಲಿ ಪ್ರೀತಿಯು ಪ್ರಮುಖ ಅಂಶವಾಗಿರಲು ಈ ಕಾರಣದಿಂದಲೇ ಯೋನಾತಾನನ್ನು ಲೋಕದಲ್ಲಿಯೇ ಅತಿ ಗುಣವಂತನೆಂದು ಪರಿಗಣಿಸಬಹುದು; ಯಾಕಂದರೆ ಆತನು ಬಹು ಹೆಚ್ಚಾಗಿ ಪ್ರೀತಿಸಿದಂಥದ್ದು ತನ್ನ ಸ್ವಂತ ಹಿತಾಸಕ್ತಿಗಳಿಗೆ ವಿರುದ್ಧವಾಗಿತ್ತು.

ತನ್ನ ಪ್ರತಿಸ್ಪರ್ಧಿಯ ಪರವಾದ ಗಾಢಸ್ನೇಹ

ಆಗಾಗ್ಗೆ ಸ್ನೇಹಸಂಬಂಧಗಳು ಉದ್ಭವಿಸುವಂಥದ್ದು ಪರಸ್ಪರ ಪ್ರಸಂಶೆಯ ಮೇಲೆ ಆಧಾರಗೊಂಡಿದ್ದು ಅದು ಅನೇಕಸಾರಿ ಒಂದು ಪ್ರಮಾಣದಲ್ಲಿ ಸ್ವಾರ್ಥತೆಗೆ ಸಹಕರಿಸುವ ಸಲುವಾಗಿರುವದು. ಆದರೆ ನಾವು ಈಗ ಪರಿಗಣನೆಮಾಡುತ್ತಿರುವ ಸಂಗತಿಯಲ್ಲಿ ಸ್ವಾರ್ಥವು ಸ್ನೇಹಸಂಬಂಧಕ್ಕೆ ವಿರುದ್ಧವಾಗಿ ಕಾರ್ಯವೆಸಗುವದು; ಹೀಗಾಗಿ ಇದು ನಿಸ್ವಾರ್ಥ ಪ್ರೀತಿಗೆ ಒಂದು ಮಾದರಿಯಾಗಿರುವದು. ದಾವೀದನಿಗೆ ಬಂದ ಪ್ರತಿಯೊಂದು ಯಶಸ್ಸು ಗೌರವಗಳು ಆತನನ್ನು ಒಬ್ಬ ಜನಪ್ರಿಯ ಆರಾಧ್ಯವ್ಯಕ್ತಿಯ ಸ್ಥಾನಕ್ಕೆ ಏರಿಸಿದ್ದು, ಯೋನಾತನನು ಒಂದು ಗಣನೀಯ ಪ್ರಮಾಣದಲ್ಲಿ ಆ ಸ್ಥಾನವನ್ನು ಪಡಕೊಂಡಿದ್ದನು. ದಾವೀದನ ಪ್ರತಿಯೊಂದು ಪ್ರಗತಿಯು ಆತನನ್ನು ಜನರು ಯೋನಾತನನಿಗೆ ಬದಲಾಗಿ ಸೌಲನ ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸುವದಕ್ಕೆ ಸಿದ್ಧಮಾಡಿತ್ತು. ಅರಸನು ಇದನ್ನು ನೋಡಿದ್ದನು; ಯೋನಾತಾನನೂ ಸಹ; ಆದರೆ ಇದರಿಂದ ಅವರಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗಿತ್ತು. ಅರಸನಿಗೆ ಅದು ಅಸೂಯೆ ಕೋಪವನ್ನು ಬರುವಂತೆ ಮಾಡಿತ್ತು; ಇದಕ್ಕೆ ವಿರುದ್ಧವಾಗಿ ಯೋನಾತಾನನು ತನ್ನ ಪ್ರತಿಸ್ಪರ್ಧಿಯನ್ನು ಪ್ರೀತಿಸಿದ್ದನು, ಅಲ್ಲದೆ ಅವರ ಮೊದಲ ಭೇಟಿಯಲ್ಲಿಯೇ ಈತನು ದಾವೀದನಿಗೆ ತನ್ನ ಆಯುಧ ಮತ್ತು ಅರಮನೆಯ ಆಸ್ಥಾನದ ವಸ್ತ್ರಗಳನ್ನು ಕೊಟ್ಟಿದ್ದನು. (1 ಸಮು. 18:4) ನಾವು ಓದುವದು: "ಯೋನಾತಾನನ ಪ್ರಾಣವು ದಾವೀದನ ಪ್ರಾಣದೊಡನೆ ಒಂದಾಯಿತು;" ಅವರ ಸ್ವಭಾವಗಳು ಹಾಸುಹೊಕ್ಕಾಗಿ ಹೆಣೆದುಕೊಂಡು ಮಿಶ್ರಿತವಾಗಿದ್ದು–ಇದು ಒಂದು ಅತಿ ಶುದ್ಧವೂ

ಯಥಾರ್ಥವೂ ಆದ ಪ್ರೀತಿಯ ಒಂದು ಸೊಗಸಾದ ವರ್ಣನೆಯಾಗಿರುವದು. ಅಲೆಕ್ಸಾಂಡರ್ ವೈಟ್ ಎಂಬವರು ಹೇಳಿರುವದು:

"ನಾನು 'ಯೋನಾತಾನನು ದಾವೀದನನ್ನು ತನ್ನ ಪ್ರಾಣದಂತೆ ಪ್ರೀತಿಸಿದ್ದನು' ಎಂದು ಒಂದೇ ಒಂದು ಸಾರಿ ಓದಿದ್ದರೆ ಇದನ್ನು ನಾನು ಉತ್ಪ್ರೇಕ್ಷೆ ಎಂದು ಮುಂದೆ ಸಾಗುತ್ತಿದ್ದೆನು ....ಆದರೆ ನಾನು ಪುನಃ ಉಳಿದ ಕಥೆಯನ್ನು ಓದಿದಾಗ ನಾನೇ ಸ್ವತಃ ಆ ಪವಿತ್ರ ಬರಹಗಾರನಿಗೆ ಹೀಗೆ ಹೇಳಿದಂತೆ ನನಗೆ ಕಂಡುಬಂದಿತ್ತು: 'ಇಗೋ, ಈ ಎಲ್ಲಾದರಲ್ಲಿ ನೀನು ಸರಳವಾಗಿಯೇ ಹೇಳಿರುತ್ತೀ, ಉತ್ಪ್ರೇಕ್ಷೆ ಇರುವದಿಲ್ಲ.'

ಪ್ರೀತಿಪೂರ್ಣ ಸ್ನೇಹದ ಮೂಲ

ಸ್ನೇಹಮಯ ಪ್ರೀತಿಯು ಒಂದು ಅದ್ಭುತವೇನಲ್ಲ, ಆದರೆ ಕೆಲವು ಸಂಯೋಜನೆಯ ಖಚಿತ ಫಲವಾಗಿರುವದು. ನಾವು ಪ್ರೀತಿಸುವವನು ನಮ್ಮಂತೆಯೇ ಇರಬೇಕೆಂಬ ಅಗತ್ಯವಿರುವದಿಲ್ಲ, ಆದರೆ ನಿಜವಾಗಿಯೂ ನಾವು ಮೆಚ್ಚುವ ಗುಣಲಕ್ಷಣಗಳಿದ್ದು ನಮ್ಮ ಮನಸ್ಸೆಳೆಯುವ ಯಾರೇ ಆಗಿರುವನು, ಆದರೆ [ಅದನ್ನು ಅವನು] ಬಹು ದೃಡವಾಗಿ ಹೊಂದದೇ ಇರಬಹುದು. ಹೇಗೂ ಕತ್ತಲೆಯು ಬೆಳಕನ್ನು ಎಂದೂ ಪ್ರೀತಿಸುವದಿಲ್ಲ; ಬೆಳಕು ಎಂದೂ ಕತ್ತಲೆಯನ್ನು ಪ್ರೀತಿಮಾಡುವದಿಲ್ಲ. ಹೀಗಾಗಿ ಒಂದು ಶ್ರೇಷ್ಠ ಮಟ್ಟದ ಸ್ನೇಹಪೂರ್ಣ ಪ್ರೀತಿಗೆ ಸ್ನೇಹಿತರಿಬ್ಬರಲ್ಲಿಯೂ, ವಿವಿಧ ಪ್ರಮಾಣಗಳಲ್ಲಿಯಾದರೂ, ಉತ್ಕೃಷ್ಟ ಆದರ್ಶಗಳು, ಉನ್ನತವಾದ ಆಕಾಂಕ್ಷೆಗಳಿರಬೇಕು. ಪ್ರತಿಯೊಬ್ಬನು ಮತ್ತೊಬ್ಬನಲ್ಲಿ ವಿಶೇಷವೆಂದು ಎಣಿಸುವಂಥ ಸಂಗತಿಗಳನ್ನು ಕಾಣುವಂತವನಾಗಿ, ಅವುಗಳನ್ನು ಎದುರು ನೋಡುವವನಾಗಬೇಕು. ಆದರೂ ಸರ್ವಶಕ್ತನ ವಿಷಯದಲ್ಲಿ ಇದು ನಿಜವಾಗಿರಲು ಸಾಧ್ಯವಿಲ್ಲ; ನಮಗಾಗಿರುವ ಆತನ [ದೇವರ] ಪ್ರೀತಿಯು ಸಹಾನುಭೂತಿಯುಳ್ಳದ್ದಾಗಿದ್ದು, ಮುಖ್ಯವಾಗಿ ಅದು ತನ್ನ ಗುಣಗಳ ಮಟ್ಟವನ್ನು ತಲುಪಲು ನಾವು ಮಾಡುವ ಪರಿಶ್ರಮದ ಪ್ರಮಾಣದಲ್ಲಿರುವದು. ಯೋನಾತಾನನ ವಿಷಯದಲ್ಲಿ ದೇವರ ಕಡೆಗಿರುವ ತನ್ನ ಭಯಭಕ್ತಿಯು ತನ್ನ ಪ್ರತಿಸ್ಪರ್ಧಿಯ ಬಗ್ಗೆ ತನಗಿರುವ ಭಾವನೆಯನ್ನು ತಡೆಯುವದರಲ್ಲಿ ಬಹುವಾಗಿ ಕಾರ್ಯವೆಸಗಿದ್ದು ಹಾಗು ಅದು ತನ್ನ ಪ್ರತಿಸ್ಪರ್ಧಿಯನ್ನು ಪ್ರಸಂಶಿಸಲು ಆತನನ್ನು ಪ್ರೇರೇಪಿಸಿತ್ತೆಂಬುದನ್ನು ನಾವು ಸಹ ಖಚಿತಮಾಡಿಕೊಳ್ಳಬಹುದು. ದೇವರ ಚಿತ್ತ ಹಾಗು ಆತನ ಮುನ್ನೇರ್ಪಾಟಿನ ಬಗ್ಗೆ ಇರುವ ಇಂಥಾ ಒಂದು ಪ್ರಸಂಶೆಯು ಎಲ್ಲಾ ಗೆಳೆತನಗಳಿಗೆ ಸಹಾಯಕವಾಗಿದ್ದು ಎಲ್ಲಾ ವಿಧವಾದ ಪ್ರತಿಸ್ಪರ್ಧಿಭಾವನೆಗಳಿಗೆ ತಡೆಯನ್ನುಂಟುಮಾಡುವದಲ್ಲದೆ ಸಾಧಾರಣವಾಗಿ ಪ್ರತಿಯೊಂದು ಕ್ರಿಸ್ತೀಯ ಗುಣಗಳನ್ನು ಅಭಿವೃದ್ಧಿಗೊಳಿಸಲು ಇದು ಅಮೂಲ್ಯವಾದುದೆಂಬುದನ್ನು ಯಾರು ತಾನೇ ಒಪ್ಪಿಕೊಳ್ಳಲಾರರು? ಪರಲೋಕದಲ್ಲಿರುವ ನಮ್ಮ ತಂದೆಯು ತನ್ನ ಜನರ ಆಗುಹೋಗುಗಳ ವಿಷಯದಲ್ಲಿ ಸೂತ್ರಧಾರಿಯಾಗಿರುವನೆಂಬುದನ್ನು ತಿಳಿದುಕೊಳ್ಳುವ ನಿಟ್ಟಿನಲ್ಲಿ ಇದು ಅದೆಂಥಾ ಮಹತ್ವವುಳ್ಳದ್ದಾಗಿರುವದು! ಇದು ನಮ್ಮ ಹೃದಯಗಳಲ್ಲಿ ಅದೆಂಥಾ ನೆಮ್ಮದಿಯನ್ನು ಬರಮಾಡುವದು! ಇತರರ ಬಗ್ಗೆ ಎಂಥಾ ಸಾತ್ವಿಕತೆ ನಯವಿನಯ ಕರುಣೆ ಹಾಗು ಪ್ರೀತಿ ಇವುಗಳನ್ನು ತೋರಲು ನಮ್ಮನ್ನು ಪ್ರೇರೇಪಿಸುವದು ಇದು; ಅವರ ಜೊತೆಯಲ್ಲಿ ನಾವೂ ದೇವರ ಪರಿಪಾಲನೆಗೆ ಒಳಪಟ್ಟಿರುವೆವೆಂಬುದನ್ನು ಇಬ್ಬರೂ ಗ್ರಹಿಸಿಕೊಳ್ಳುವಂತೆ ಮಾಡುವದು; ನಾವು ದೇವರ ಚಿತ್ತಕ್ಕೆ ಪೂರ್ಣವಾಗಿ ಅಧೀನವಾದಂಥ ಹೃದಯಗಳನ್ನು ಪಡೆದವರಾಗಿ ನಮ್ಮಲ್ಲಿ ದೇವರ ಚಿತ್ತವು ನೆರವೇರುವ ಸಲುವಾಗಿ ನಮ್ಮ ಇಲ್ಲವೇ ಇತರರ ಸ್ವಂತ ಪ್ರಾಪಂಚಿಕ ಹಿತಾಸಕ್ತಿಗಳನ್ನು ಅಲಕ್ಷ್ಯ–ಮಾಡುವಂಥ ಬಯಕೆಯನ್ನು ನಮ್ಮಲ್ಲಿ ಇದು ಉಂಟು ಮಾಡುವದು.

ಇದು ಯೋನಾತಾನನ ಪ್ರೀತಿಗೆ ಒಳ್ಳೆಯ ಆಧಾರವಾಗಿ–ತ್ತೆಂಬದರಲ್ಲಿ ಸಂದೇಹವೇನಿಲ್ಲ. ಕರ್ತನ ಜನರ ನಡುವೆ ಸರಿಯಾದ ಪ್ರೀತಿ ಅಭಿವೃದ್ಧಿಯಾಗುವಂತಾಗಲು ಇದೇ ಫಲವತ್ತಾದ ನೆಲಗಟ್ಟಿಂಬುದು ನಿಸ್ಸಂದೇಹ. ನಾವು ನಮ್ಮ ಪೂರ್ಣ ಹೃದಯ ಮನಸ್ಸು ಪ್ರಾಣ ಹಾಗು ಶಕ್ತಿಯಿಂದ ಪ್ರೀತಿಮಾಡುವ ಮೊದಲು ನಮ್ಮ ನೆರೆಯವನನ್ನು ನಮ್ಮಂತೆಯೇ ಪ್ರೀತಿಮಾಡಿ ದೇವಾನುಗ್ರಹದಲ್ಲಿರುವ ಸಮೃದ್ಧವಾದ ಕೃಪಾವರಗಳು ನಮ್ಮಲ್ಲಿರುವಂತೆಯೇ ಅವನಲ್ಲಿಯೂ ಇರಬೇಕೆಂಬುದನ್ನು ಬಯಸಲು ನಾವು ಸಿದ್ಧವಾಗಿರಬೇಕು. ಇದಕ್ಕೂ ಮಿಗಿಲಾಗಿ, ಕರ್ತನು ತನ್ನ ಹಿಂಬಾಲಕರ ಮುಂದೆ ಒಂದು ಹೊಸ ಆಜ್ಞೆಯಾಗಿ ನೇಮಿಸಿದಂಥ ಈ ಪ್ರೀತಿಯನ್ನು ನಾವು ಯಾವ ಪ್ರಮಾಣದಲ್ಲಿಯೇ ಆಗಲಿ ಸಮೀಪಿಸುವಂತಾಗಲು ಸಾಧ್ಯಮಾಡಿ–ಕೊಳ್ಳುವಕ್ಕೆ ಮೊದಲು ನಾವು ದೇವರ ಮೇಲಿರುವ ಉತ್ಕೃಷ್ಟವಾದ ಪ್ರೀತಿಯನ್ನು ಹೊಂದಿರುವದು ಅವಶ್ಯವಾಗುವದು. ಅದೇನಂದರೆ, "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು..." ಎಂಬದೇ. ಯೋನಾತಾನನ ಪ್ರೀತಿಯು ಈ ಕ್ರಿಸ್ತೀಯ ಪ್ರೀತಿಗೆ, ತನ್ನ ನೆರೆಯವನು ದೇವಾಶೀರ್ವಾದವನ್ನು ಹೊಂದುವದನ್ನು ಕಾಣಲು ಹರ್ಷಿಸುವಷ್ಟು ಮಟ್ಟಿಗೆ [ತನ್ನ ನೆರೆಯವನನ್ನು] ಪ್ರೀತಿಸುವಂಥ ಸ್ವಾರ್ಥತ್ಯಾಗದ ಪ್ರೀತಿಗೆ ಸಾದೃಶ್ಯವಾಗಿದೆ; ಅಂದರೆ ಅದು ತನ್ನ ಸ್ವಂತ ಗೌರವ ಪ್ರತಿಷ್ಠೆ ರಾಜಾಧಿಕಾರಗಳಿಗೆ ನಷ್ಟವುಂಟಾಗುತ್ತಿದ್ದರೂ ನಿಲ್ಲದ [ನೆರೆಯವನ ಮೇಲಿನ] ಪ್ರೀತಿಗೆ ಸಾದೃಶ್ಯವಾಗಿರುವದು. ಆಹಾ, ಇಂಥಾ ಒಂದು ಪ್ರೀತಿಯು ನೂತನ ಸೃಷ್ಟಿಯ ಹೃದಯದಲ್ಲಿ ಹೆಚ್ಚು ಹೆಚ್ಚಾಗಿ ವ್ಯಾಪಿಸುವಂತಾಗಲಿ! ಇಂಥದಕ್ಕಾಗಿಯೇ ಅಪೋಸ್ತಲನು ಹೇಳಿರುವದು–ಕರ್ತನು ಮುಂದಾಗಿ ಮಾಡಿದ ಏರ್ಪಾಟಿನ ಪ್ರಕಾರ "ಹೀನಸ್ಥಿತಿಯಲ್ಲಿರುವ ಸಹೋದರನು ತಾನು ಉತ್ತಮ ಸ್ಥಿತಿಗೆ ಬಂದನೆಂದು ಉಲ್ಲಾಸಪಡಲಿ; ಐಶ್ವರ್ಯವಂತನಾದ ಸಹೋದರನು ತಾನು ಹೀನಸ್ಥಿತಿಗೆ ಬಂದನೆಂದು ಉಲ್ಲಾಸಪಡಲಿ."

ದಾವೀದ ಯೋನಾತಾನರ ಒಂದು ಸ್ನೇಹಬಂಧ

ಯೋನಾತನ ಹಾಗು ದಾವೀದರ ನಡುವಿನ ಪ್ರೀತಿಬಂಧವನ್ನು ಕರ್ತನ ಜನರಾದ ನಮ್ಮಲ್ಲಿ ಪ್ರಚುರಪಡಿಸಲು ಒಂದು ಸಮಾಜವನ್ನು ಸ್ಥಾಪಿಸುವ ಅಗತ್ಯತೆಯು ನಮಗಿರುವದಿಲ್ಲ. ಇದಕ್ಕಿಂತಲೂ ಒಂದು ಹೆಚ್ಚಿನದಾದ ಪ್ರೀತಿಯನ್ನು ರೂಢಿಸಿಕೊಳ್ಳುವ ಸಲುವಾದ ಸಂಸ್ಥೆಯು ನಮಗೊಂದುಂಟು. ಈ ಸಂಸ್ಥೆಯ ಶಿರಸ್ಸು, ಮುಖ್ಯಸ್ಥನು ಮತ್ತು, ಕೇಂದ್ರ ಬಿಂಧುವು ನಮ್ಮ ಕರ್ತನಾದ ಯೇಸು ಕ್ರಿಸ್ತನು. ಈತನು ನಮಗೆ ಉತ್ಕೃಷ್ಟವಾದ ಪ್ರೀತಿಯ ಪರಿಕಲ್ಪನೆಯನ್ನು ಹಾಗು ಅದನ್ನು ಅಭ್ಯಾಸಿಸುವ ಬಗ್ಗೆ ಪ್ರಬೋಧಿಸಿರುವದು ಮಾತ್ರವಲ್ಲದೆ ಇದನ್ನು ತನ್ನ ಮಿತ್ರರರ ಸಹಿತವಾಗಿ ತನ್ನ ಶತೃಗಳ ಸಲುವಾಗಿಯೂ ಪ್ರಾಣಕೊಟ್ಟದ್ದರಲ್ಲಿ ತಾನು ಇದರ ಒಂದು ನಿದರ್ಶನವನ್ನು ಸಹ ನೀಡಿರುವನು. "ಪ್ರಾಣವನ್ನೇ ತನ್ನ ಸ್ನೇಹಿತನಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ." ಈ ಪ್ರೀತಿಶ್ರೇಷ್ಠನಾದ ನಮ್ಮ ಕರ್ತನಾದ ಯೇಸು ಕ್ರಿಸ್ತನು [ತನ್ನನ್ನು] ಪ್ರೀತಿಸುವಂಥವರ ಒಂದು ಸಮಾಜವನ್ನು ಸಂಘಟನೆಮಾಡಿದ್ದು, ತನ್ನ ಶಿಲುಬೆಯನ್ನು ತೆಗೆದುಕೊಂದು ತನ್ನನ್ನು ಹಿಂಬಾಲಿಸಲು ಹಾಗು ಸಹೋದರರಿಗಾಗಿ ತಮ್ಮ ಪ್ರಾಣವನ್ನು ಕೊಡಲು ಇಚ್ಛಿಸುವಂತಹ ತನ್ನ ಶಿಷ್ಯರನ್ನು ಆಧರಿಸಿ ಅದರಲ್ಲಿನ ಸದಸ್ಯತ್ವವನ್ನು ಏರ್ಪಡಿಸಿರುವನು.

ಯಾರು ಆ ನಾಯಕನಿಗೆ ನಂಬಿಗಸ್ತರಾಗುವಂಥಾ ಪ್ರತಿಷ್ಠೆಯುಳ್ಳವರಾಗಿವರೋ, ಯಾರು ಆ ಪ್ರೀತಿಯ ಆತ್ಮನಿಗೆ ನಂಬಿಗಸ್ತಿಕೆಯಳ್ಳವರಾಗಿದ್ದು, ಅಭಿಷೇಕಿಸಲ್ಪಟ್ಟ ಆ ದೇಹದ ಅಂಗಗಳಾಗಿ ಒಬ್ಬರಿಗೊಬ್ಬರು ನಂಬಿಗಸ್ತರಾಗಿರುವರೋ ಕೇವಲ ಇವರು ಮಾತ್ರವೇ ಈ ಪ್ರತ್ಯೇಕವಾದ ಸಮಾಜಕ್ಕೆ–ಅಂದರೆ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಜೀವಸ್ವರೂಪನಾದ ದೇವರ ಸಭೆಗೆ ಸದಸ್ಯರಾಗಿ ಪ್ರವೇಶ ಪಡೆಯುವರು. ಇದಕ್ಕೂ ಮಿಗಿಲಾಗಿ, ನಮ್ಮ ಸಮಾಜದ ಸಂಸ್ಥಾಪಕನು ನಮಗೆ ಹೇಳಿರುವದೇನಂದರೆ ತಾನು ದ್ರಾಕ್ಷೇಬಳ್ಳಿ ಮತ್ತು ನಾವು ಅದರ ಕೊಂಬೆಗಳಾಗಿದ್ದು ಪ್ರೀತಿಫಲವನ್ನು ಕೊಡದಿರುವ ಪ್ರತಿಯೊಂದು ಕೊಂಬೆಯನ್ನು ದ್ರಾಕ್ಷೆಬಳ್ಳಿಯಿಂದ ಕತ್ತರಿಸಿಹಾಕಿ ಆಶೀರ್ವಾದ ಭರಿತವಾದ ಸಭೆಯ ಸದಸ್ಯತ್ವದಿಂದ ತೆಗೆದುಹಾಕುವನೆಂಬದು. ಆತನು ಮುಂದುವರಿದು ನಮಗೆ ಭರವಸೆ ನೀಡಿ ಹೇಳಿರುವದೇನಂದರೆ ನಿಜವಾದ ದ್ರಾಕ್ಷೇಬಳ್ಳಿಯೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಬಗ್ಗೆ ನಮಗಿರುವ ನಂಬಿಗಸ್ತಿಕೆಯು ಆ ದಿವ್ಯತೋಟಗಾರನು ಮಾಡುವ ಶುದ್ಧೀಕರಣ ಕುಡಿಕತ್ತರಿಸುವಿಕೆಗಳಿಗೆ ಒಳಗಾಗುವಂತೆ ಮಾಡುವದು; ಹೀಗಾಗಿ ಆತನು ನಮ್ಮಲ್ಲಿ ದ್ರಾಕ್ಷೇಫಲಗಳು, ಅಂದರೆ ಪವಿತ್ರಾತ್ಮನ ಫಲಗಳಾದ ಸಾಧುತ್ವ ನಯವಿನಯ ಸಹೋದರಸ್ನೇಹ ಪ್ರೀತಿ ಇವುಗಳು ಹೆಚ್ಚುಹೆಚ್ಚು ಅಭಿವೃದ್ಧಿಯಾಗಿ ಈ ಕೃಪಾವರಗಳು ನಮ್ಮಲ್ಲಿ ಅಧಿಕಗೊಂಡು; ಆ ಮೂಲಕವಾಗಿ ತಂದೆಗೆ ಮಹಿಮೆಯುಂಟಾಗಿ ನಾವು "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲು ಹೊಂದಲು" ನಮ್ಮನ್ನು ಸಿದ್ಧಮಾಡುವದು.

ಹೀಗಾಗಿ ನಾವು ಹೊಸ ಸೃಷ್ಟಿಯ ಸದಸ್ಯರುಗಳಾಗಿ ಕ್ರಿಸ್ತನ ಶಿಷ್ಯರಂತೆ ಆತನೊಡನೆ ಐಕ್ಯವಾಗಿದ್ದಲ್ಲಿ ನಾವು ಆಗಲೇ ಇಂಥಾ ಒಂದು ಸಮಾಜದ ಸದಸ್ಯರುಗಳಾಗಿರಲು ನಮಗೆ ವಿಶೇಷ ಸಂಘದ ಅಗತ್ಯವಿರುವದಿಲ್ಲವೆಂಬುದನ್ನು ನಾವು ನೋಡುತ್ತೇವೆ.

ಪ್ರೀತಿಯನ್ನು ಹೇಗೆ ಅಭಿವೃದ್ಧಿಗೊಳಿಸಬಹುದು



ದಾವೀದನು ಒಬ್ಬ ಸ್ನೇಹಿತನು – ಲೈಫ್‌ವೇ ಸಂಗ್ರಹ

ನಾವು ನೋಡಿರುವಂತೆ ದಾವೀದನು ಈ ಇಬ್ಬರಲ್ಲಿ ಕಿರಿಯವನಾಗಿ ಸಹಜವಾಗಿಯೇ ಒಂದು ಗಾಢವಾದ ಉದಾರ ಗುಣವನ್ನು ಹೊಂದಿದವನಾಗಿದ್ದು, ತನಗೆ ತೀವ್ರವಾಗಿ ಪ್ರೀತಿಸುವ ಸಾಮರ್ಥ್ಯವಿದ್ದರೂ ಅದನ್ನು ಅಭಿವೃದ್ಧಿಪಡಿಸಿಕೊಳ್ಳಲು ಆತನಿಗೆ ಸಮಯದ ಅಗತ್ಯವಿರುವದು ಸ್ಪಷ್ಟವಾಗಿತ್ತು. ಅಲ್ಲದೆ ನಾವು ಗ್ರಹಿಸಿಕೊಂಡಿರುವಂತೆ ದಾವೀದನ ಮೇಲಿನ ಯೋನಾತಾನನ ಪ್ರೀತಿಯು ಮೊದಲು ಪ್ರಜ್ವಲಿಸಿ ಹೆಚ್ಚು ಗಾಢವಾಗಿ ದಾವೀದನ ಪ್ರೀತಿಯಿಂದ ಪ್ರತಿಯಾಗಿ ಸೆಳೆಯಲ್ಪಟ್ಟು ಯೋನಾತಾನು ಆತನನ್ನು ಪ್ರೀತಿಸಿದ್ದನು; ಅದು ದೇವರು ಮೊದಲು ನಮ್ಮನ್ನು ಪ್ರೀತಿಸಿರಲು ಆನಂತರದಲ್ಲಿ ನಮ್ಮ ಪ್ರೀತಿಯು ಆತನ ಕಡೆಗೆ ತೋರ್ಪಟ್ಟು ಅಧಿಕಗೊಂಡಿದ್ದ ಬಗೆಯಲ್ಲಿಯೇ ಇತ್ತು. ನಮ್ಮ ಪಾಠವು ಯೋನಾತಾನನು ಹೇಗೆ ಅರಸನು ಹಾಗು ದಾವೀದನ ನಡುವೆ ಇದ್ದ ಶಾಂತಿಯನ್ನು ಕಾಪಾಡಲು ಪ್ರಯತ್ನಿಸುತ್ತಿದ್ದನೆಂಬುದನ್ನು ತಿಳಿಸುತ್ತದೆ. ಆದರೆ ತನ್ನ ತಂದೆಯು ತನ್ನ ಮಿತ್ರನನ್ನು ಕೊಲ್ಲುವ ಉದ್ದೇಶವುಳ್ಳನಾಗಿರುವದನ್ನು ಕಂಡುಕೊಂಡವನಾಗಿ ದಾವೀದನು ಅರಸನ ಹತ್ತಿರದಲ್ಲಿ ಎಲ್ಲಿದ್ದರೂ ಅವನಿಗೆ ಅದು

ಸುರಕ್ಷಿತವಲ್ಲದಂಥ ಸಂಗತಿಗಳು ಸಂಭವಿಸಿರಲು ಯೋನಾತಾನನು ದಾವೀದನಿಗೆ ಮುನ್ನೆಚ್ಚರಿಕೆ ನೀಡುವಂಥ ಸಂದರ್ಭವನ್ನು ಕಂಡುಕೊಂಡಿದ್ದನು. ಈ ಎಚ್ಚರಿಕೆಯು ಮುಂದಾಗಿ ಏರ್ಪಾಟು ಮಾಡಿಕೊಂಡಿದ್ದಂತೆಯೇ ಅರಮನೆಗೆ ದೂರದಲ್ಲಿದ್ದ ಒಂದು ಹೊಲದಲ್ಲಿ ನೀಡಲಾಗಿತ್ತು. ದಾವೀದನು ಒಂದು ದೊಡ್ಡ ಬಂಡೆಯ ಹಿಂದೆ ಅಡಗಿಕೊಂಡಿದ್ದನು. ಯೋನಾತಾನನು ಒಂದು ನೆಪವಾಗಿ ಬಾಣಹೊಡೆಯುವ ಅಭ್ಯಾಸಮಾಡಲು ಒಬ್ಬ ಹುಡುಗನೊಂದಿಗೆ ಆ ಬಾಣವನ್ನು ಹಿಂದೆ ತರುವ ಸಲುವಾಗಿ ಕರೆದುಕೊಂಡು ಹೋಗಿದ್ದನು. ಹೇಗೂ ಆತನ ನಿಜವಾದ ಕಾರ್ಯಭಾರವು ದಾವೀದನು ಅಲ್ಲಿಂದ ಓಡಿಹೋಗಬೇಕೋ ಇಲ್ಲವೇ ಬೇಡವೋ ಎಂಬುದನ್ನು ಸಲಹೆ ಮಾಡುವ ಸಲುವಾಗಿತ್ತು. ಬಾಣಗಳ ಸಮೀಪಕ್ಕೆ ತೆರಳಲು "ಬೇಗ ಹೋಗು, ನಿಲ್ಲಬೇಡ" ಎಂದು ಅವನು ಆ ಹುಡುಗನಿಗೆ ಹೇಳಿದ ಮಾತುಗಳು ಬಾಣಗಳ ವಿಷಯದಲ್ಲಿ ಸೂಕ್ತವಾಗಿದ್ದರೂ ವಾಸ್ತವದಲ್ಲಿ ಇದು ದಾವೀದನಿಗೆ ಆ ಸನ್ನಿವೇಶದ ತೀವ್ರತೆಯನ್ನು ತಿಳಿಸುವ ಉದ್ದೇಶಕ್ಕಾಗಿತ್ತು. ಆನಂತರ ಯೋನಾತಾನನು ಆ ಹುಡುಗನನ್ನು ಆಯುಧದೊಡನೆ ಅರಮನೆಗೆ ಕಳುಹಿಸಿ ತಾನು ಕೆಲವು ಕ್ಷಣಗಳನ್ನು ತನ್ನ ಮಿತ್ರನೊಡನೆ ಇರುವ ಅಪಾಯದ ಸ್ಥಿತಿಯನ್ನು ಎದುರಿಸಬೇಕೆಂದು ನಿರ್ಧರಿಸಿಕೊಂಡನು. ಈ ಸಮಯಕ್ಕೆ ದಾವೀದನು ಯೋನಾತಾನನ ಪ್ರೀತಿಯ ಆಳವನ್ನು ಅರಿತುಕೊಳ್ಳುತ್ತಿದ್ದನು. ಅದು ಅನೇಕ ವಿಧದಲ್ಲಿ ಸಾಬೀತು ಗೊಂಡಿದ್ದು ಈಗ ಕಡೆಯದಾಗಿ ದಾವೀದನನ್ನು ಕಾಪಾಡುವ ಇಚ್ಛೆಯಲ್ಲಿ ವ್ಯಕ್ತವಾಗಿದ್ದು ಅದು ತನ್ನ ತಂದೆಯು ದಾವೀದನಿಗೆ ಪ್ರತಿಕಾರವಾಡಲು ಬಿಟ್ಟುಕೊಡುವದು ತನ್ನ ಸ್ವಂತ ಹಿತಾಸಕ್ತಿಗಾಗಿಯೇ ಇತ್ತು. ಇದು ಭಕ್ತರಲ್ಲಿರುವದನ್ನು ಹೊರತು ಪಡಿಸಿದಲ್ಲಿ ಇಂಥಾ ಒಂದು ಪ್ರೀತಿಯು ವಿರಳವಾಗಿ ಕಂಡುಬರುತ್ತದೆ. ಅಯ್ಯೋ, ಭಕ್ತರಲ್ಲಿಯೂ ಇದು ಬಹುವಾಗಿ ಅನುಭವಕ್ಕೆ ಬಂದಿರುವದಿಲ್ಲವೆಂದು ಹೇಳುವದಕ್ಕೆ ನಮಗೆ ಅಂಜಿಕೆಯಾಗುತ್ತದೆ. ಹೀಗಿದ್ದರೂ ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನನ್ನು ನಾವು ಕಂಡುಕೊಂಡಾಗ ಆತನ ವಿರಳವಾದ ಈ ಒಂದು ಗುಣದ ಕಾರಣಕ್ಕಾಗಿ ಅವನನ್ನು ಶ್ಲಾಘನೆಮಾಡುವದು ನಮಗೆ ಹೆಚ್ಚು ಸೂಕ್ತವಾಗುವದು.

ಈ ಭೇಟಿಯ ಸಮಯದಲ್ಲಿ ದಾವೀದನು, ಪೌರಾತ್ಯದ ಒಂದು ಪದ್ಧತಿಯ ಪ್ರಕಾರ, ದೀನತೆ ಹಾಗು ಪ್ರಸಂಶೆಯನ್ನು ವ್ಯಕ್ತಪಡಿಸುವವನಾಗಿ ಮೂರುಸಾರಿ ನೆಲದವರೆಗೆ ಬೊಗ್ಗಿ ಸಾಷ್ಟಾಂಗ ವಂದನೆಮಾಡಿದ್ದನು. ಮಿತ್ರರಿಬ್ಬರು ಪರಸ್ಪರ ಮುದ್ದಿಟ್ಟು ಒಬ್ಬರ ಬಗ್ಗೆ ಮತ್ತೊಬ್ಬರು ಬಹು ಕಣ್ಣೀರು ಸುರಿಸಿದ್ದರು. ಈ ಇಬ್ಬರಲ್ಲಿ ದಾವೀದನು ಅಧಿಕವಾಗಿ ದುಃಖಪಟ್ಟಂತೆ ಕಡೆಯಲ್ಲಿ ಕಂಡುಬಂದಿತ್ತು. ದೇವರಲ್ಲಿ ಭರವಸವುಳ್ಳವನಾಗಿದ್ದು ದಾವೀದನು ಒಬ್ಬ ಬಹಿಷ್ಕೃತನಾಗಿ ಅಂದರೆ ದೇಶಭ್ರಷ್ಟನಾಗಿ ಮನೆಯನ್ನು ತೊರೆದು ಹೋಗುತ್ತಿದ್ದನು. ತನ್ನ ಪ್ರಿಯ ಮಿತ್ರನಾದ ಯೋನಾತಾನನ ಒಡನಾಟವನ್ನು ಕಳೆದುಕೊಳ್ಳುವದು ಮಾತ್ರವಲ್ಲದೆ ಅರಸನ ವಿರೋಧದ ದೆಸೆಯಿಂದ ಹಾಗು ಪರಿಸ್ಥಿಯ ಕಾರಣಕ್ಕಾಗಿ ತಾನು ಒಂದು ಬಗೆಯ ದರೋಡೆಗಾರನಾಗಬೇಕಾಗಿ ಬಂದು, ತನ್ನ ಸ್ವಜನರಲ್ಲಿ ಅನೇಕರಿಂದ ದೇಶದ್ರೋಹಿಯೆಂದು ಪರಿಗಣಿಸಲ್ಪಡುವನಿದ್ದನು. ಅನಂತರ ಯೋನಾತಾನನು ಹೀಗೆ ಹೇಳಿದ್ದನು– "ಸಮಾಧಾನದಿಂದ ಹೋಗು; ಯೆಹೋವನ ಹೆಸರಿನಲ್ಲಿ ಆಣೆಯಿಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವಲ್ಲಾ; ಆತನೇ ನನಗೂ ನಿನಗೂ ನನ್ನ ಸಂತಾನಕ್ಕೂ ನಿನ್ನ ಸಂತಾನಕ್ಕೂ ಸದಾ ಸಂಬಂಧಸಾಕ್ಷಿಯಾಗಿರಲಿ." ಅವರು ಒಬ್ಬರನ್ನೊಬ್ಬರು ಅಗಲಿದ್ದರು, ದಾಖಲೆಯ ಪ್ರಕಾರ ಒಂದು ಇಲ್ಲವೇ ಎರಡು ವರುಷಗಳ ನಂತರ ಸೌಲನು ದಾವೀದನನ್ನು ಹಿಂದಟ್ಟುವ ಸಮಯದಲ್ಲಿ ಒಂದು ಸಾರಿ ಸಂಧಿಸಿದ್ದನ್ನು ಹೊರತುಪಡಿಸಿದಲ್ಲಿ ಅವರು ಎಂದೂ ಸಂಧಿಸಿರಲಿಲ್ಲ. ಆನಂತರದಲ್ಲಿ ಯೋನಾತಾನನು ತನ್ನ ಮಿತ್ರನ ಬಳಿಗೆ ಮತ್ತೊಂದು ಸಾರಿ ಹೋಗಿ ಆವನನ್ನು ಸಂತೈಸಿ "ದೇವರಲ್ಲಿ ಅವನನ್ನು ಬಲಪಡಿಸಿದ್ದನು." – 1 ಸಮುವೇಲ 23:16

ಯೋನಾತಾನನು ಮತ್ತು ಆತನ ಪ್ರೀತಿಯ ಬಗ್ಗೆ ದಾವೀದನ ಅಭಿಪ್ರಾಯದ ಒಂದು ತುಣುಕನ್ನು "ಬಿಲ್ಲೆಂಬ ಒಂದು ಶೋಕಗೀತದಲ್ಲಿ" ನೀಡಲಾಗಿರುವದು. ಅದು ತನ್ನ ಸ್ನೇಹಿತನಾದ ಯೋನಾತಾನನ ಮರಣವಾದಾಗ ದಾವೀದನು ಮನಕರಗುವಂತೆ ರೋಧಿಸುತ್ತಾ ಹೇಳಲಾಗಿರುವದು. ಆತನು ಉದ್ಗಾರವಾಗಿ ಹೀಗೆ ಹೇಳಿರುವನು, "ಯೋನಾತಾನನೇ, ನನ್ನ ಸಹೋದರನೇ, ನಿನಗೋಸ್ಕರ ನನ್ನಲ್ಲಿ ಬಹು ಸಂಕಟವಾಗಿದೆ; ನೀನು ನನಗೆ ಬಹು ಮನೋಹರನಾಗಿದ್ದೀ. ನನ್ನ ಮೇಲಿದ್ದ ನಿನ್ನ ಪ್ರೀತಿಯು ಆಶ್ಚರ್ಯಕರವಾದದ್ದೇ ಸರಿ; ಅದು ಸತಿಪ್ರೇಮಕ್ಕಿಂತ ಶ್ರೇಷ್ಠವಾದದ್ದು." ಆದರೆ ಪ್ರಿಯ ಮಿತ್ರರೇ ಇದಕ್ಕಿಂತಲೂ ಅದ್ಭುತವಾದ ಪ್ರೀತಿಯ ಬಗ್ಗೆ ತಿಳಿದಿದ್ದು, ಅದನ್ನು ಕೆಲವು ಸಾರಿ ಹೀಗೆ ಹಾಡುತ್ತೇವೆ:

"ಯೇಸುವಿನ ಪ್ರೀತಿಯು, ಎಲ್ಲವೂ ದೈವಿಕವಾಗಿದ್ದು,
ತುಂಬುವದು ಹಂಬಲಿಸುವ ನನ್ನ ಹೃದಯವ."

ಪ್ರೀತಿಯು ಪ್ರೀತಿಯನ್ನು ಹುಟ್ಟಿಸುತ್ತದೆ; ಮತ್ತು ಶಾಸ್ತ್ರವಚನವು ನಮಗೆ ಹೇಳುವದು ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿ– ಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ. ಹೀಗೆ ಯೇಸುವಿನ ಪ್ರೀತಿಯು ನಮ್ಮನ್ನು ಆಕರ್ಶಿಸಿದ್ದು ಇದಕ್ಕೆ ಪ್ರತಿಯಾಗಿ ನಮ್ಮ ಪ್ರೀತಿಯು [ಯೇಸುವಿನ ಕಡೆಗೆ] ಸೆಳೆಯಲ್ಪಟ್ಟಿರುವದು. ಮತ್ತು ಕ್ರಮೇಣ ನಾವು ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಪ್ರೀತಿ ಹಾಗು ಕ್ರಿಸ್ತನ ಪ್ರೀತಿಯ ಆಳ ಎತ್ತರ ಉದ್ದ ಅಗಲಗಳು ಮನವರಿಕೆಮಾಡಿಕೊಂಡಂತೆಲ್ಲಾ ಅವರ ಕಡೆಗೆ ನಮ್ಮ ಪ್ರೀತಿಯು ಅಧಿಕಗೊಂಡು ಸಮೃದ್ಧವಾಗುತ್ತದೆ. ಅಲ್ಲದೆ ಇದು ಹೆಚ್ಚುತ್ತಾ ಬಂದಂತೆಲ್ಲಾ ನಾವು ದೇವರಂತಾಗಿ ಇದಕ್ಕೆ ಸರಿಹೊಂದುವ ಪ್ರೀತಿಯು ನಮ್ಮಿಂದ ಹೊರಟು ನಮ್ಮನ್ನು ಪ್ರೀತಿಸದ ಇತರರನ್ನು ಸಹ ಪ್ರೀತಿಸುವಂತೆ ಮಾಡುವದು; ಹಾಗು ಅವರ ಮೇಲಿನ ನಮ್ಮ ಪ್ರೀತಿಯು ಪ್ರತಿಯಾಗಿ ಕೆಲವರಲ್ಲಿರುವ ಪ್ರೀತಿಯನ್ನು ಉತ್ತೇಜಿಸುವದು. ಹಾಗು ಲೌಕೀಕಭಾವಕ್ಕೆ, ಲೋಕದ ಮೇಲಿನ ಪ್ರೀತಿಗೆ, ಲೋಕದಲ್ಲಿನ ಸ್ವಾರ್ಥಭಾವಕ್ಕೆ ವಿರುದ್ಧವಾಗಿರುವ ಇದರ ತತ್ವವನ್ನು ಹೆಚ್ಚು ಮನವರಿಕೆಮಾಡಿಕೊಳ್ಳುವಂತೆ

ನಡೆಸುವದು. ಹೀಗಿರಲು ನಾವು ಈ ದೈವಿಕ ಗುಣವನ್ನು ಬೆಳೆಸಿಕೊಳ್ಳಲು ಪರಿಶ್ರಮಿಸೋಣ. ಶಾಸ್ತ್ರವಚನಗಳು ಪ್ರಕಟಮಾಡುವಂತೆ ಪ್ರೀತಿಯು ಲೋಕದಲ್ಲಿ ಪ್ರಾಮುಖ್ಯವಾದ ವಿಷಯವೆಂಬುದನ್ನು ಗಮನಿಸುವದು ಮಾತ್ರವಲ್ಲದೆ ಇದೇ ದೈವೀಕ ಗುಣಲಕ್ಷಣದ ತಿರುಳಾಗಿದ್ದು, ಲೋಕದಲ್ಲಿ ಪ್ರೀತಿಯೆಂಬ ಈ ಒಂದು ಶಬ್ಧವೇ ಧರ್ಮಶಾಸ್ತ್ರದ ತಿರುಳಾಗಿದ್ದು ಅದನ್ನು ನೆರವೇರಿಸುವಂಥದ್ದಾಗಿರುವದು. ಹೀಗಿರಲು ಈ ಗುಣವನ್ನು ಅಭ್ಯಾಸಿಸುವ ಮೂಲಕವಾಗಿಯೇ ನಾವು ಕರೆಯಲ್ಪಟ್ಟ ಮಹಿಮೆಯುಳ್ಳ ಸ್ಥಿತಿಗೆ ತಲುಪಲು ನಮ್ಮನ್ನು ಸಾಧ್ಯವಾಗಿಸು–ವದೆಂಬುದನ್ನು ನಾವು ನೆನಪಿನಲ್ಲಿಡೋಣ, ಈ ಸ್ಥಾನವನ್ನು ಪಡಕೊಳ್ಳುವ ಸಲುವಾಗಿಯೇ ನಾವು ಕರ್ತನ ಕೃಪೆಯಿಂದ ಕರೆಯಲ್ಪಟ್ಟು ಆಯಲ್ಪಡುವದನ್ನು ದೃಢಪಡಿಸಿಕೊಳ್ಳುತ್ತಿರುವದು.

ಶಾಸ್ತ್ರವಚನದಲ್ಲಿ ವೈವಿಧ್ಯತೆಗಳನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿರುವದು; ಅಲ್ಲದೆ ಯೋನಾತಾನನ ಈ ಪ್ರೀತಿಯನ್ನು, ತಂದೆಯ ಹಾಗು ಮಗನ ಪ್ರೀತಿಯನ್ನು ಅನುಸರಣೆಮಾಡಲು ಯೋಗ್ಯವೆಂದು ಪ್ರಸ್ತುತಪಡಿಸಲಾಗಿದ್ದು, ಯೂದನ ವಿಷಯವಾಗಿ ನಮ್ಮ ಕರ್ತನು ಕೀರ್ತನಾಗ್ರಂಥದಲ್ಲಿ ಹೀಗೆ ಸೂಚಿಸುವದರ ಮೂಲಕವಾಗಿ ಮತ್ತೊಂದು ಬಗೆಯ ಗುಣವನ್ನು ಸಹ ಚಿತ್ರಿಸಲಾಗಿರುವದು: "ನಾನು ಯಾವನನ್ನು ನಂಬಿದ್ದೆನೋ ಯಾವನು ನನ್ನ ಮನೆಯಲ್ಲಿ ಅನ್ನಪಾನಗಳನ್ನು ತೆಗೆದುಕೊಂಡನೋ ಅಂಥಾ ಆಪ್ತ ಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ." (ಕೀರ್ತನೆ 41:9) ಪ್ರೀತಿಯೆಂಬ ಈ ಬುಗ್ಗೆಯಿಂದಲೇ ಹೊರಟು ಬರುವಂಥ ಈ ಪ್ರೀತಿಭಾವವನ್ನು, ನಮ್ಮ ಸ್ನೇಹಭಾವವನ್ನು, ನಾವು ಹೊಂದಿಕೊಳ್ಳುವಂತೆ ನಾವು ನೋಡಿಕೊಳ್ಳೋಣ; ಯಾಕಂದರೆ ದೇವರು ಪ್ರೀತಿಸ್ವರೂಪಿ. ಅಪೋಸ್ತಲರು ಪ್ರಕಟಮಾಡಿ ಹೇಳಿರುವಂತೆ ಕೇವಲ ಎರಡು [ಪ್ರೀತಿಯ] ವಿಶೇಷವಾದ ಮೂಲಗಳು ಇರುವದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳೋಣ: "ಊಟೆಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರಡುವದುಂಟೇ?... ಹಾಗೆಯೇ ಉಪ್ಪು ನೀರಿನ ಬಾವಿಯಿಂದ ಸಿಹಿನೀರು ಬರುವದಿಲ್ಲ." (ಯಾಕೋಬ 3:11) ಆದುದರಿಂದ ಒಬ್ಬ ಮಿತ್ರನಿಗೆ, ಒಬ್ಬ ಸಹೋದರನಿಗೆ ಮಾಡುವ ನಂಬಿಕೆ ದ್ರೋಹವು ಯಾವುದೇ ಅರ್ಥದಲ್ಲಿ ಪ್ರೀತಿಯ ಭಾವಕ್ಕೆ ಸಂಬಂಧಿಸಿರುವದಿಲ್ಲವೆಂಬುದನ್ನೂ ಆದರೆ ಅದಕ್ಕೆ ವಿರುದ್ಧವಾಗಿರುತ್ತದೆಂಬುದನ್ನು ನಮ್ಮ ಹೃದಯಗಳಲ್ಲಿ ತೀರ್ಮಾನಿಸಿಕೊಳ್ಳೋಣ. ಸಿಹಿ ನೀರಿನ ಒಂದು ಬುಗ್ಗೆಯು, ಶುದ್ಧವಾದ ಒಂದು ಬುಗ್ಗೆಯು, ಪ್ರೀತಿಯೆಂಬ ಬುಗ್ಗೆಯು ಹಗೆತನ ಮತ್ಸರ ಅಸೂಯೆ ಭಿನ್ನಾಭಿಪ್ರಾಯ ಕಲಹವೆಂಬ ಕಹಿ ನೀರನ್ನು ಕೊಡುವದಿಲ್ಲವೆಂಬುದನ್ನು ನೆನಪಿನಲ್ಲಿಡೋಣ. ಇಂಥಾ ಒಂದು ಕೆಟ್ಟತನವೆಂಬ ಝರಿಯು ಬೇರೊಂದು ಮೂಲದಿಂದ, ಬೇರೊಂದು ಬುಗ್ಗೆಯಿಂದ ಅಂದರೆ ದೇವರಿಗೂ ಮನುಷ್ಯರಿಗೂ ಶತ್ರುವಾಗಿರುವವನಿಂದ ಬರುವಂಥ–ದೆಂಬುದನ್ನು ನಾವು ಗುರುತಿಸಿಕೊಳ್ಳಬೇಕು. ಹೀಗಾಗಿ ಈ ಗುಣಲಕ್ಷಣಗಳನ್ನು ಶಾಸ್ತ್ರವಚನಗಳಲ್ಲಿ ಶರೀರದ ಹಾಗು ಸೈತಾನನ ಕೃತ್ಯಗಳೆಂದು ವರ್ಣಿಸಲಾಗಿರುವದು. ನಾವು ಮತ್ತೂ ನೆನಪಿನಲ್ಲಿಡಬೇಕೇನಂದರೆ ಪ್ರೀತಿ ಮತ್ತು ಸ್ನೇಹ ಮನೋಭಾವ ಗಳಿಂದ ದ್ವೇಷ ಹಗೆತನಗಳಿಗೆ ಪೂರ್ಣವಾಗಿ ತಿರುಗಿಕೊಳ್ಳು–ವಂಥದ್ದು ತ್ವರಿತವಾಗಿ ಸಂಭವಿಸುವಂಥ ಸಂಗತಿಯಲ್ಲವೆಂದೂ, ಅದು ಹಂತಹಂತವಾಗಿ ನಡೆಯುವಂಥಾ ಒಂದು ಸಂಗತಿಯೆಂಬುದು. ಯೂದನ ವಿಷಯದಲ್ಲಿ ಅದು ಹಂತಹಂತವಾಗಿ ನಡೆದಂಥ ದಾರಿತಪ್ಪುವಿಕೆಯೆಂಬುದನ್ನು ನಾವು ನೋಡುತ್ತೇವೆ; ಇತರರಿಗೆ ಕರ್ತನಿಂದ ಗೌರವವು ಅನುಗ್ರಹಿಸೋಣವಾಗುತ್ತಿದ್ದ ಕಾರಣ ಮೊದಲಿಗೆ ಅದು ಕೇವಲ ಆತನ ಗುಣಗುಟ್ಟುವಿಕೆಯಾಗಿದ್ದರೂ, ಆ ಗುಣಗುಟ್ಟುವಿಕೆಯ ಮನೋಭಾವವು ಹೆಚ್ಚಾಗುತ್ತಾ ಬಂದು ಒಂದು ವಾರದಲ್ಲಿಯೇ ತನ್ನ ಮಿತ್ರರ ಮಿತ್ರನನ್ನು ಹಿಡುಕೊಡುವದರಲ್ಲಿ ಆನಂದಿಸು–ವವರೆಗೆ ಮುಂದುವರೆದಿತ್ತು. ಆ ಮಿತ್ರನು ಯೂದನಿಗೋಸ್ಕರವೂ ಸಹ ಪ್ರಾಣಕೊಡುವವನಿದ್ದನು. ನಾವು ಸಹಜವಾಗಿಯೇ ದುಷ್ಟತ್ವ ಹಾಗು ಸ್ವಾರ್ಥದಿಂದ ಹೊರಟುಬಂದ ಕುಡಿಗಳಾಗಿದ್ದು, ಅದನ್ನು ಪರಿಪೂರ್ಣತೆಯಿಂದ ಬಿದ್ದುಹೋದುದರ ಮೂಲಕವಾಗಿ ಪಾರಂಪರ್ಯವಾಗಿ ಸೈತಾನನಿಂದ ಸ್ವೀಕರಿಸಿಕೊಂಡಿರುತ್ತೇವೆ; ಹೀಗಾಗಿ ನಮಗೆ ಇಂಥಾ ದುಷ್ಟತನದ ಮೂಲವನ್ನು ಬೇರುಸಹಿತವಾಗಿ ಕಿತ್ತುಹಾಕಲು ಸತತವಾಗಿ ಮುಂಜಾಗ್ರತೆ–ಯುಳ್ಳವರಾಗಿರುವ ಹಾಗು ಪ್ರೀತಿಯೆಂಬ ಕುಡಿ ಸಸ್ಯವನ್ನು ಸತತವಾಗಿ ಬೆಳೆಸುವ ಅಗತ್ಯವಿರುವದು; ಹೀಗಾಗಿ ಅದರ ಸುವಾಸನೆಯು ನಮ್ಮ ಇಡೀ ಜೀವಿತವನ್ನು ತುಂಬಿಕೊಂಡಂತಾಗಿ ನಮ್ಮನ್ನು ಪ್ರೀತಿಸ್ವರೂಪನ ಹಾಗು ಮಿತ್ರರಲ್ಲಿ ದಿವ್ಯಮಿತ್ರನಾದವನ ಸಹವಾಸ ಮಾಡುವದಕ್ಕೆ ನಮ್ಮನ್ನು ಸಿದ್ಧಗೊಳಿಸುವದು.

ನಮ್ಮ ಸ್ವರ್ಣಮಯ ಪಥ್ಯಭಾಗ

ಮಿತ್ರನ ಪ್ರೀತಿಯು ನಿರಂತರವೆಂದು ಜ್ಞಾನಿಯು ನುಡಿದಿರುವದು ಸಮರ್ಪಕವಾಗಿರುವದು. ತನ್ನ ಸ್ವಂತ ಅನುಕೂಲಕ್ಕೆಂದು ಭಾವಿಸಿ ಕೇವಲ ಒಂದು ಸಮಯದಲ್ಲಿ ಮಾತ್ರ ಪ್ರೀತಿಸುವವನು ಪ್ರೀತಿಯನ್ನು ಬಲ್ಲವನಲ್ಲ. ಒಬ್ಬನು ಕೇವಲ ಸಮೃದ್ಧಿಯು ಸಮಯದಲ್ಲಿ ಮಾತ್ರ ಪ್ರೀತಿಸುವ ಸಹೋದರನಾಗಿದ್ದು ಅವನ ಸ್ನೇಹಪ್ರೀತಿಯು ಹಿಂಸೆ ವಿಪತ್ತಿನ ಸಮಯದಲ್ಲಿ ಸೊರಗಿಹೋಗುವದೋ ಅವನು ಪ್ರೀತಿಯ ನಿಜಾರ್ಥವನ್ನು ಎಂದೂ ತಿಳಿಯದವನಾಗಿದ್ದು, ಅವನು ಕೇವಲ ಒಂದು ವಿಧವಾದ ಸ್ವಾರ್ಥ ಅಂದರೆ ಲೋಕದಲ್ಲಿನ ಪ್ರೀತಿಯನ್ನು ಮಾತ್ರ ತಿಳಿದಿರುವನು.

ದೇವರು ನಮ್ಮ ಮೇಲೆ ತನ್ನ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದು ಅದು ಸ್ವಾರ್ಥದ ಮೂಲಕವಾಗಿ ಅಲ್ಲವೆಂದೂ ಅದರೆ ಅದು ಔದಾರ್ಯಪೂರ್ವಕವಾಗಿ ತಾನು ದೊಡ್ಡ ಬೆಲೆಯನ್ನು ನೀಡಿ ನಮ್ಮನ್ನು ಸೆರೆಯಿಂದ ಬಿಡಿಸಿ ನಮಗೆ ಮಕ್ಕಳಾಗುವಂಥ ಸೌಭಾಗ್ಯವನ್ನು ಅನುಗ್ರಹಿಸಿ ತೋರಿಸಿರುವನು; ಹೀಗೆ ನಿಜವಾದ ಪ್ರೀತಿಯು ತ್ಯಾಗಮಾಡಲು ಇಚ್ಛಿಸುವಂಥದ್ದಾಗಿರುವದು. ಹೀಗಿರಲು ನಮ್ಮ ಇತರರ ಮೇಲಿನ, ಕರ್ತನಿಗಾಗಿರುವ, ಸಹೋದರಿಗಾಗಿರುವ, ನಮ್ಮ ಕುಟುಂಬಗಳಿಗಾಗಿರುವ, ನಮ್ಮ ನೆರೆಯವರಿಗಾಗಿರುವ, ನಮ್ಮ ವೈರಿಗಳಿಗಾಗಿಯೂ ಸಹ ಇರುವ ನಮ್ಮ ಪ್ರೀತಿಯೆಂಬುದು ಅವರ ಹಿತಾಸಕ್ತಿಗಾಗಿ ಅವರ ಅತ್ಯುತ್ತಮ

ಕ್ಷೇಮಾಭಿವೃದ್ಧಿಗಾಗಿ ನಮ್ಮನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳಲು ಇಚ್ಛಿಸುವದೆಂಬುದನ್ನು ತೀರ್ಮಾನಿಸಿಕೊಳ್ಳೋಣ. ನಾವೇನಾ–ದರೂ ಕರ್ತನ ಧ್ಯೇಯೋದ್ದೇಶಗಳ ಸಲುವಾಗಿ ಏನನ್ನೂ ತ್ಯಾಗಮಾಡದೆ ಇರುವವರಾಗಿ ಕಂಡುಬಂದಲ್ಲಿ ಆಗ ನಾವು ಕರ್ತನನ್ನು ಪ್ರೀತಿಸುವವರೆಂದು ಹೇಳಿ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳದೇ ಇರೋಣ. ನಮಗೆ ಕಷ್ಟವನ್ನು ಸಹಿಸಿಕೊಳ್ಳಲು, ನಮ್ಮ ಸಹೋದರರ ಹಾಗು ನಮ್ಮ ಇತರ ಪ್ರಿಯರ ಹಿತದೃಷ್ಟಿಯಿಂದ ತ್ಯಾಗಮಾಡಲು ಮನಸಿಲ್ಲವೆಂಬದು ನಮಗೆ ಕಂಡುಬಂದಲ್ಲಿ ಅದನ್ನು ನಾವು ಪ್ರೀತಿಯೆಂದು ಕರೆಯುವಂಥ ತಪ್ಪುಮಾಡದಿರೋಣ. ನಮ್ಮ ವೈರಿಗಳಿಗೆ ಅವರು ಕೊರತೆಯಲ್ಲಿದ್ದಾಗ ಅವರಿಗೆ ಸಹ ಕರುಣೆ ತೋರಿಸಲು ನಮಗೆ ಮನಸ್ಸಿಲ್ಲವೆಂಬುದು ನಮಗೆ ಕಂಡುಬಂದಲ್ಲಿ ನಾವು ತಪ್ಪುಮಾಡದೆ ಇರೋಣ; ಯಾಕಂದರೆ ನಮ್ಮ ಕರ್ತನು ಹೇಳಿರುವ ಪ್ರಕಾರ ಪರೋಪಕಾರ ಕರುಣೆ ತನ್ನನ್ನು ತಾನು ನಿರಾಕರಿಸಿಕೊಳ್ಳುವ ಒಂದು ಮಾರ್ಗವು ಮಾತ್ರವೇ ಪ್ರೀತಿಯುಳ್ಳ ಹೃದಯದ ಸೂಚಿಯಾಗಿರುವದು. ಇಂಥಾ ಪ್ರೀತಿಪೂರ್ಣ ಹೃದಯವು ದೇವರ ರಾಜ್ಯದಲ್ಲಿ ಒಂದು ಸ್ಥಾನವನ್ನು ಪಡೆಯಲು ಪ್ರಾಮುಖ್ಯವಾದುದು ಎಂಬುದನ್ನು ನಾವು ಒಂದು ಸಾರಿ ಕಂಡಬಂದದ್ದೇಯಾದಲ್ಲಿ, ಇದು ನಮ್ಮನ್ನು ಈ ರೀತಿಯ ಒಂದು ಗುಣವನ್ನು ಪಡಕೊಳ್ಳಲು ಎರಡರಷ್ಟು ಪ್ರಾಮಾಣಿಕರಾಗಿ ಶ್ರಮಿಸುವಂತೆ ಮಾಡುತ್ತದೆ. ಇನ್ನೂ ಮುಂದುವರೆದು ಹೇಳುವದಾದರೆ, ಯಾವಾತನೇ ಆಗಲಿ ಅಥವಾ ಯಾವಾಕೆಯೇ ಆಗಲಿ ಈಗಿನ ಕಾಲದಲ್ಲಿ [ಸುವಾರ್ತಾಯುಗದಲ್ಲಿ] ಇಲ್ಲವೇ ಮುಂದೆ ಬರುವ ಕಾಲದಲ್ಲಿ [ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ] ಪ್ರೀತಿಪೂರ್ಣವಾದ ಹೃದಯವನ್ನು ಪಡೆಯದಿದ್ದಲ್ಲಿ ಅಂಥವರಿಗೆ ಎಂದಿಗೂ ನಿತ್ಯಜೀವವನ್ನು ಪಡೆಯಲಾಗದು ಎಂಬುದು ನಮಗೆ ಕಂಡುಬಂದಲ್ಲಿ ಇದು ನಿಜವಾಗಿಯೂ ಪ್ರಾಮುಖ್ಯವಾದ ಸಂಗತಿಯೆಂದೂ, ನಾವುಗಳು ಹೌದು ಎಲ್ಲರೂ ಪಡೆದುಕೊಂಡು ಅಭಿವೃದ್ಧಿಮಾಡಿಕೊಳ್ಳುವಂಥಾ ಸಂಗತಿ–ಯೆಂಬುದನ್ನು ಅರಿತವರಾಗಿ ಎಚ್ಚೆತ್ತುಕೊಳ್ಳಲು ನಮಗೆ ಸಹಾಯಮಾಡುತ್ತದೆ.

ಕ್ಯಾನನ್ ಫರ್ರಾರ್ ಇವರ ಶ್ರದ್ಧಾಪೂರ್ವಕ ಮಾತುಗಳನ್ನು ಗಮನಿಸಿ: "ನನ್ನ ಸಹೋದರರೇ, ಪ್ರತಿಯೊಂದು ಮಾನವ ಗುಣಸ್ವಭಾವಗಳಲ್ಲಿನ ಒಳ್ಳೆಯತನ ಹಾಗು ಸೊಬಗನ್ನು ಕಾಣುವಂಥಾ ಪ್ರೀತಿಯು ಮಾನವನ ಗುಣಗಳಲ್ಲಿ ಒಳ್ಳೇತನ ಹಾಗು ಅದರ ಸೊಬಗು ಉಂಟಾಗಲು ನೆರವಾಗುವದು. ಪ್ರೀತಿಸುವಂಥವರಿಗೆ ತಮ್ಮ ಪ್ರೇಮಾನುರಾಗ ಗುಣಗಳ ಮಹಿಮಾ ಪರಿವರ್ತನೆಯಲ್ಲಿ ನಡೆಯುತ್ತಿರುವ ಒಬ್ಬ ಸಾಮಾನ್ಯ ವ್ಯಕ್ತಿಯೂ ಸಹ ಒಬ್ಬ ಮಾನವ ಜೀವಿಯೇ. ಒಬ್ಬ ವ್ಯಕ್ತಿಯು ನಿರುತ್ಸಾಹಿಯೆಂದು ನೀನು ಭಾವಿಸುವಿ. ಏಕೆಂದರೆ ನೀನು ನಿರುತ್ಸಾಹಿ. ದೇವದೂತನ್ನೊಬ್ಬನು ನಿನ್ನೊಂದಿಗೆ ಇದ್ದಾಗ್ಯೂ ಅದು ನಿನಗೆ ತಿಳಿದಿರುವದಿಲ್ಲ; ಅಲ್ಲದೆ ನಾನು ಭಾವಿಸುವದು–ಅಸೂಯೆ ಸ್ವಪ್ರತಿಷ್ಠೆ ತುಂಬಿದವನಿಗೆ ಒಬ್ಬ ದೇವದೂತನೂ ಬಹು ನಿರುತ್ಸಾಹಿಯೇ; ಪ್ರತಿ ಮಾನವ ಜೀವಿಯು ಮುತ್ತುರತ್ನಗಳಿಂದ ತುಂಬಿದ ಒಂದು ಗುಹೆಯಂತಿರುವನು. ಅದರ ಬಿರುಕಿನಲ್ಲಿ ಸುಮ್ಮನೆ ಕಣ್ಣುಹಾಯಿಸುವವನಿಗೆ ಎಲ್ಲವೂ ಕತ್ತಲಾಗಿ ಕಂಡುಬರಲು ವಿಷಾಧದಿಂದ ಅದನ್ನು ಮರೆಯಲಾಗುವದು. ಆದರೆ ಬೆಳಕು ಅದರೊಳಗೆ ಹಾಯಲ್ಪಡಲಿ; ದೀಪದ ಪಂಜನ್ನು ಅದರ ಗೋಡೆಗಳ ಎತ್ತರದವರೆಗೂ ಎತ್ತಿಹಿಡಿಯಿರಿ; ದೇವರ ಸೂರ್ಯರಶ್ಮಿಯು ಅದರೊಳಗೆ ಬೀಳುವಂತಾಗಿ ಅದರ ಬಿರುಕುಗಳಲ್ಲಿ ತುಂಬಿಕೊಳ್ಳಲಿ; ಆಗ ಇಗೋ, ಅದರಲ್ಲಿನ ಹರಳು ಹಾಗು ಕೆನ್ನೇರಳೆ ಬಣ್ಣದ ರತ್ನಗಳು ಹೊಳೆಯಲಾರಂಭಿಸಿ ಪ್ರತಿಯೊಂದು ಹರಳುಗಳಲ್ಲಿ ಸಂಚಲನವಾಗಿ ಪ್ರಬಲವಾದ ಹೊಳಪು ಉಂಟಾಗಿ ಅವುಗಳದೇ ಆದ ಗುಣಗಳ ಆವಿಷ್ಕಾರ – ವಾಗುವದು. ಪ್ರಾಣಾತ್ಮಗಳು ನಿನ್ನ ಎದುರಿಗೆ ಹೊಳೆಯದಿದ್ದರೆ ಅದಕ್ಕೆ ಕಾರಣ ನೀನು ಅದರೊಳಗೆ ಬೆಳಕನ್ನು ಹಾಯಿಸಿ ಅದನ್ನು ಪ್ರಜ್ವಲಿಸುವಂತೆ ಮಾಡುತ್ತಿಲ್ಲ. ಜ್ವಾಲೆಯಿಲ್ಲದೆ, ಹೊಗೆಯಾಡುವ, ಕೆಲಸಕ್ಕೆ ಭಾರದ, ಅಹಂಕಾರ ಹಗೆತನವೆಂಬ ನಿನ್ನ ದೀಪದ ಪಂಜನ್ನು ಎಸೆದುಬಿಡು; ಪ್ರೀತಿಯೆಂಬ ಜ್ಯೋತಿಯನ್ನು ಅವರ ಕಡೆಗೆ ಎತ್ತಿಹಿಡಿ, ಆಗ ಇಗೊ ಅವುಗಳಲ್ಲಿ ಬೆಳಕು ಉದ್ಭವಿಸಿ ಹೊಳೆಯಲಾರಂಭಿಸುವವು; ಹೌದು ಕಲ್ಪನೆಗೆ ಮೀರಿದ ವಿಜೃಂಬಣೆಯಿಂದ ಪ್ರಜ್ವಲಿಸಿ ಉರಿಯುವದು."

"ಈ ಮಿಥ್ಯೆಯನ್ನು ಪ್ರಸರಿಸುತ್ತಿದ್ದವನು ಮಿತ್ರನೋ ಇಲ್ಲವೇ ಶತ್ರುವೋ?
ಇಲ್ಲ, ಎಳೆಯರು ಬಿಟ್ಟು ಇನ್ನಾರು ಪ್ರಶ್ನಿಸುವರು
ಇಂಥಾ ಬುದ್ಧಿವಂತಿಕೆಯಲ್ಲಿ?
ಇವರು ನನ್ನ ಅತಿ ಸುಪರಿಚಿತ ಶತ್ರುಗಳೇ ಆಗಿದ್ದರು."

*****

ದೃಢವಾದ ವಿಭಿನ್ನ ಸುಗುಣಗಳು

ರೀಪ್ರಿಂಟ್ಸ್ ಪುಟ 3231

1 ಸಮುವೇಲ 18:5–16

"ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು." – ಕೀರ್ತನೆ 46:1

ಸೌಲ ದಾವೀದರಿಬ್ಬರೂ ದೃಢವಾದ ಗುಣಗಳುಳ್ಳ ಮನುಷ್ಯರಾಗಿದ್ದರು; ಆದರೆ ಎರಡನೆಯವನು ಕರ್ತನನ್ನು ಆತನ ನಡಿಸುವಿಕೆಯನ್ನು ಅಂಗೀಕರಿಸಿಕೊಂಡವನಾಗಿದ್ದು ನಂಬಿಕೆಯ ಮೂಲಕವಾಗಿ ಆತನನ್ನು ಹಿಂಬಾಲಿಸಲು ಪ್ರಯತ್ನಿಸುತ್ತಿರುವಲ್ಲಿ ಆ ಮೊದಲನೆಯವನು ದೇವರ ವಾಕ್ಯವನ್ನು, ಬುದ್ಧಿವಾದವನ್ನು ಅಲಕ್ಷ್ಯಮಾಡಿ ತನ್ನ ಸ್ವಂತ ವ್ಯವಹಾರಗಳನ್ನು ತಾನೇ ನಿಭಾಯಿಸಲು ಆರಂಭಿಸಿದ್ದನು; ಇಬ್ಬರ ವಿಷಯಗಳಲ್ಲಿಯೂ ಫಲಿತಾಂಶವು ಕಾಣಲಾಗಿತ್ತು: ಸೌಲನು ಅವಮಾನಕರವಾದ ಒಂದು ಅಂತ್ಯವನ್ನು ಕಂಡಿದ್ದನು. ದಾವೀದನು ಏಳಿಗೆಯಾಗಿ ತನ್ನ ಕಾಲಕ್ಕೆ ಮೀರಿದ ಒಂದು ಜ್ಞಾನವುಳ್ಳ ದೃಢವಾದ ಗುಣಗಳನ್ನು

ಪ್ರದರ್ಶಿಸಿದ್ದನು. ಈ ಸಂಬಂಧದಲ್ಲಿ ನಾವು ದಾವೀದನಲ್ಲಿದ್ದ ಎಚ್ಚರಚಿತ್ತ ಹಾಗು ಕರ್ತನ ಕಡೆಗಿದ್ದ ತನ್ನ ವಿಧೇಯತೆಗಳು ಕೆಲವು ವರುಷಗಳವರೆಗೆ ಆತನನ್ನು ಸಿಂಹಾಸನದಿಂದ ಹೊರಗೆ ಉಳಿಯುವಂತೆ ಮಾಡಿದ್ದು, ಅವು ಕಷ್ಟಕರವಾದ ಏಕಾಂತತೆಯ ಹಾಗು ಅಲೆದಾಟದ ವರುಷಗಳಾಗಿದ್ದವು; ಆದರೆ ಆತನು ಲೌಕೀಕ ವಿಧಾನಗಳನ್ನು ಅನುಸರಿಸಿದ್ದಲ್ಲಿ ಅವು ಹೊರಗಿನ ತೋರಿಕೆಯ ಪ್ರಕಾರ ಒಂದು ದೊಡ್ಡದಾದ ರೀತಿಯಲ್ಲಿ ಏಳಿಗೆ ಹೊಂದುವಂತೆ ಆತನನ್ನು ನಡೆಸುತ್ತಿತ್ತು ಎಂಬುದನ್ನು ನಾವು ಮರೆಯುವಂತಿಲ್ಲವಷ್ಟೆ. ಹೀಗಿದ್ದರೂ ನಾವು ಮತ್ತೂ ನೆನಪಿನಲ್ಲಿಡ ಬೇಕಾದುದು ಏನಂದರೆ ಇಸ್ರಾಯೇಲ್ ಜನಾಂಗವನ್ನು ಯೆಹೋವನು ತಾನು ಆದುಕೊಂಡ ಸ್ವಕೀಯ ಜನರನ್ನಾಗಿ ಮಾಡಿಕೊಂಡಿದ್ದು, ಆತನು ಅವರೊಡನೆ ಬಳಕೆಯಲ್ಲಿದ್ದು ಅವರು ಅನುಸರಿಸುತ್ತಿದ್ದ ಮಾರ್ಗಗಳ ಬಗ್ಗೆ ಮೇಲ್ವಿಚಾರಣೆ ಮಾಡುವ–ವನಾಗಿ ಅವರನ್ನು ಆಳ್ವಿಕೆಮಾಡುವವರು ಯಾರೆಂಬುದನ್ನು ಆತನೇ ನಿರ್ಧರಿಸುತ್ತಿದ್ದನೆಂಬದೇ. ಇಲ್ಲವೇ ದೇವರ ಏರ್ಪಾಟುಗಳು ಹಾಗು ನಿಯಮವಿಧಿಗಳ ಸಂಬಂಧದಲ್ಲಿ ಯೆಹೂದ್ಯರ ಕಾಲಗಳಿಗೂ ಹಾಗು ಈ ಕ್ರೈಸ್ತರ ಇಲ್ಲವೇ ಸುವಾರ್ತಾಯುಗದಲ್ಲಿನ ಬೇರೆ ವಿಧವಾದ ನಿಯಮವಿಧಿಗಳೂ ಹಾಗು ಪ್ರೀತಿ ಸಂಬಂಧವಾದ ಆಜ್ಞೆಗಳ, ತಾಳ್ಮೆಯಿಂದ ಸಹಿಸಿಕೊಳ್ಳವ ಅಲ್ಲದೆ ಶಾರೀರಿಕ ಸಂಬಂಧದ ಹೋರಾಟಗಳಿಗೆ ಬದಲಾಗಿ ಆತ್ಮಿಕ ಸಂಬಂಧದ ವಿಷಯಗಳಲ್ಲಿ ದೊಡ್ಡ ವ್ಯತ್ಯಾಸ–ವಿರುತ್ತದೆಂಬುದನ್ನು ಸಹ ನಾವು ಮರೆಯುವಂತಿಲ್ಲ. ಯಾರು ದಾವೀದನ ಹಾಗು ಯೆಹೂದ್ಯರ ಕಾಲದ ಇತರ ನಂಬಿಗಸ್ತರ ಮಾರ್ಗವು ಕ್ರಿಸ್ತನ ದೇಹವಾಗಿರುವ ಸಭೆಗೆ ಮಾದರಿಯೆಂದು ಪರಿಗಣಿಸುವರೋ ಅವರು ಆ ಮೂಲಕವಾಗಿ ಇದರ ಸಂಬಂಧವಾಗಿರುವ ದೇವರ ವಾಕ್ಯದಲ್ಲಿನ ಸಂಗತಿಯನ್ನು ಸಂಪೂರ್ಣವಾಗಿ ಅಪಾರ್ಥಮಾಡಿಕೊಂಡಿರುವರು. ಅವರ ಮನಸ್ಸಿಗೆ ದಾವೀದನ ಯುದ್ಧಗಳು ಮತ್ತು ವಿಜಯಗಳು ಹಾಗು ಕೊಲೆಗಳು ನಿಜರೂಪದ ದಾವೀದನಾಗಿ ಪ್ರಿಯನೂ ಆಗಿರುವ ಅಂದರೆ ಶಿರಸ್ಸೂ ಹಾಗು ದೇಹದಿಂದ ಕೂಡಿದ ಕ್ರಿಸ್ತನು ಮಾಡುವ ಆತ್ಮಿಕ ಹೋರಾಟಗಳಿಗೆ ಮತ್ತು ವಿಜಯಗಳಿಗೆ ಚಿತ್ರಣ ರೂಪದ ನಿದರ್ಶನವಾಗಿರುವದು.

ಹೀಗಿದ್ದರೂ ಪ್ರವಾದಿಯಾದ ಸಮುವೇಲನ ಮೂಲಕವಾಗಿ ದೇವರು ಸೌಲನಿಗೆ ರಾಜ್ಯವನ್ನು ತನ್ನ ಕುಟುಂಬದವರಿಂದ ತೆಗೆಯಲ್ಪಟ್ಟು ತನಗಿಂತಲೂ ಹೆಚ್ಚು ಭರವಸೆಗೆ, ದೇವರೊಡನೆ ಹೆಚ್ಚು ನಂಬಿಗಸ್ತಿಕೆ ಹೊಂದಿರಲು ಯೋಗ್ಯನಾದ ಒಬ್ಬ ನೆರೆಯವನಿಗೆ ಕೊಡಬೇಕಾಗುವದೆಂದು ಆಗಲೇ ತಿಳಿಸಲಾಗಿದ್ದು ಕೆಲವು ಗಣನೀಯವಾದ ಕಾಲದ ವರೆಗೆ ರಾಜ್ಯವು ಆತನು ಕೈಯಲ್ಲಿ ಉಳಿದಿರುವಂತೆ ಬಿಡಬಹುದೆಂಬು – ದನ್ನು ಗ್ರಹಿಸಿಕೊಳ್ಳುವಂತೆ ಮಾಡಲಾಗಿತ್ತು. ಹೀಗಾಗಿ ಒಬ್ಬನು ಪ್ರಖ್ಯಾತಿಗೆ ಬಂದು ಕಡೆಯಲ್ಲಿ ತನಗೆ ಉತ್ತರಾಧಿಕಾರಿಯಾಗ–ಬೇಕಿರುವದನ್ನು ಸೌಲನು ಎಚ್ಚರಿಕೆಯಿಂದ ಎದುರು ನೋಡುತ್ತಿದ್ದನೆಂಬುದನ್ನು ನಾವು ಭಾವಿಸಿಕೊಳ್ಳಬಹುದು; ಆದರೂ ದಾವೀದನು ಆಗಲೇ ಈ ಸ್ಥಾನಕ್ಕೆ ಅಭಿಷೇಕ–ಮಾಡಲ್ಪಟ್ಟಿರುವದನ್ನು ಸೌಲನು ಗ್ರಹಿಸಿಕೊಂಡಿದ್ದನೆಂದು ಯೋಚಿಸುವದಕ್ಕೆ ನಮಗೆ ಕಾರಣವಿರುವದಿಲ್ಲ; ಯಾಕಂದರೆ ದಾವೀದನ ಅಭಿಷೇಕವನ್ನು ಗುಪ್ತವಾಗಿಡಲಾಗಿತ್ತು.

ಸೌಲನು ದಾವೀದನ ಶೌರ್ಯಜಾಣ್ಮೆಗಳ ಬಗ್ಗೆ ಪ್ರಸಂಶೆಯುಳ್ಳವನಾದಾಗ್ಯೂ ಆತನ ಘನವಂತಿಕೆಯ ವಿಧಾನವು ಜನರ ದೃಷ್ಟಿಯಲ್ಲಿ ಪ್ರಸಿದ್ಧಿಯನ್ನು ತಂದಿದ್ದ ಕಾರಣ ತಾನು ಆತನ ಬಗ್ಗೆ ಅಸೂಯೆವುಳ್ಳವನಾಗಿದ್ದನು. ದಾವೀದನನ್ನು ತನಗಿಂತಲೂ ಹೆಚ್ಚಿನ ರೀತಿಯಲ್ಲಿ ಸ್ತುತಿಸಿ ಹಾಡಿದ್ದನ್ನು ಆತನು ಕೇಳಿದ್ದರಿಂದ ಈ ಅಸೂಯೆಯು ಅಧಿಕಗೊಂಡಿತ್ತು. ಅಸೂಯೆಯು ಯಾವಾಗಲೂ ಒಂದು ಕೆಟ್ಟ ಸ್ವಭಾವವಾಗಿದ್ದು ಅದರಲ್ಲಿ ಕರ್ತನ ಆತ್ಮವಾದ ಪವಿತ್ರಾತ್ಮನ ಯಾವ ಅಂಶವೂ ಇರದಿದ್ದು ಅದು ದುರಾತ್ಮದ ಒಂದು ಪ್ರಬಲವಾದ ಅಂಶವಾಗಿರುವದು. ಹಗೆತನ ಮತ್ಸರ ಹೊಟ್ಟೆಕಿಚ್ಚು ಹೋರಾಟ ಬಿನ್ನಾಭಿಪ್ರಾಯಗಳು ಶರೀರಭಾವದ ಹಾಗು ಸೈತಾನನ ಕೃತ್ಯಗಳಾಗಿದ್ದು ಇವೆಲ್ಲವೂ ಅಸೂಯೆಗೆ ನಿಕಟವಾಗಿ ಸಂಬಂಧಿಸಿರುವದಲ್ಲದೆ ಅನೇಕ ವೇಳೆ ಅದು ಇದರಿಂದಲೇ ಉದ್ಭವಿಸುವದು. ಸೌಲನು ತನ್ನ ಮನಸ್ಸಿಗೆ ಬಂದಿದ್ದ ಅಸೂಯೆಪೂರ್ಣವಾದ ಸಲಹೆಯನ್ನು ಎದುರಿಸುವವನಾಗಿ ತನ್ನ ಮನಸ್ಸನ್ನು ಎಲ್ಲಾ ವ್ಯಕ್ತಿತ್ವಗಳಿಗಿಂತಲೂ ಉನ್ನತಕ್ಕೆ ಏರಿಸಿಕೊಂಡು ಅತಿ ಪ್ರಾಮಾಣಿಕನಾಗಿ, ಹೃದಯಪೂರ್ವಕವಾಗಿ ತನ್ನ ಯುವ ಸೇನಾಪತಿಯ ಹೊಗಳುವಿಕೆಯಲ್ಲಿ ಆನಂದಿಸಲು ಅದನ್ನು ಬಿಡಬೇಕಿತ್ತು. ನಿಸ್ಸಂದೇಹವಾಗಿ ತಾನು ರಾಜ್ಯಾಧಿಕಾರವನ್ನು ಬಿಟ್ಟುಕೊಡಬೇಕೆಂಬ ದೇವರ ಪ್ರಕಟನೆಯನ್ನು ನೆನಪು ಮಾಡಿಕೊಳ್ಳುತ್ತಿದ್ದ ಈ ಅಂಶದ ಒಂದು ಭಾಗವು ಅಂದಿನಿಂದ ಅಸೂಯೆಯ ಕಣ್ಣುಗಳಿಂದ ದಾವೀದನನ್ನು ನೋಡುವಂತೆ ಮಾಡಿತ್ತು.

ಅಸೂಯೆಯು ಪ್ರತಿಯೊಬ್ಬ ಕ್ರೈಸ್ತನನ್ನು ಎದುರಿಸುತ್ತಿರುವ ದೊಡ್ಡ ವೈರಿಗಳಲ್ಲಿ ಒಂದು. ಅದನ್ನು ದೇವರ, ಮನುಷ್ಯರ ಹಾಗು ಎಲ್ಲಾ ಒಳ್ಳೆ ತತ್ವಗಳಿಗೂ ವೈರಿಯೆಂದು ಪರಿಗಣಿಸಿ ಆ ಕ್ಷಣದಲ್ಲೇ ಅದನ್ನು ಸಂಹರಿಸಬೇಕು; ಅಲ್ಲದೆ ಅದರ ಇರುವಿಕೆಯು ಒಂದು ಕ್ಷಣವಾದರೂ ನಮ್ಮ ಹೃದಯಗಳನ್ನು ಮಲಿನಮಾಡಿದ್ದಲ್ಲಿ ಆ ಪ್ರಮಾಣದಲ್ಲಿಯೇ ಪವಿತ್ರತೆಯ ಹಾಗು ಪ್ರೀತಿಯ ಆತ್ಮದ ಮೂಲಕವಾಗಿ ಶುದ್ಧೀಕರಿಸಿಕೊಳ್ಳುವ ಸಲುವಾಗಿ ಬೇಡಿ–ಕೊಳ್ಳಬೇಕು. ಅಸೂಯೆಯು ಒಂದು ಕ್ರೂರ ದೈತ್ಯನಾಗಿರುವದು ಮಾತ್ರವಲ್ಲದೆ ವಿಷಪೂರಿತವಾದ ಅವನ ಕೋರೆಹಲ್ಲುಗಳು ಇತರರಿಗೆ ನೋವು ಸಂಕಟಗಳನ್ನು ಬಲವಂತವಾಗಿ ಹೇರುವದರ ಸಹಿತವಾಗಿ ವ್ಯಥೆಯನ್ನೂ ಉಂಟುಮಾಡಿ ಕಡೆಯಲ್ಲಿ ಅವನಿಗೆ ನೆಲೆಮಾಡಿಕೊಟ್ಟವರನ್ನು ಸಂಹಾರ ಮಾಡುವದು. ಅಸೂಯೆಯು ಅಲೋಚಿಸುವದರ ಮೂಲಕವಾದ ಪಾಪವಾಗಿರುವದು, ಅಲೋಚಿಸುವದರ ಮೂಲಕವಾದ ದುಷ್ಟತನವಾಗಿದ್ದು, ಅದು ತ್ವರಿತವಾಗಿ ಪಾಪ ದುಷ್ಟತನಗಳನ್ನು ಕೃತ್ಯದಲ್ಲಿ ವ್ಯಕ್ತಪಡಿಸಿ ಪರಿಣಾಮವಾಗಿ ಅದು ಮನುಷ್ಯರನ್ನು ಅಶುದ್ಧಗೊಳಿಸುವ ಸಂಭವವಿರುವದು. ಮನಸ್ಸು ಒಂದು ಸಾರಿ ಅಸೂಯೆಯಿಂದ ವಿಷಭರಿತವಾದಲ್ಲಿ ಅದನ್ನು ಸಂಪೂರ್ಣವಾಗಿ ಶುದ್ಧೀಕರಿಸುವದು ಬಹು ಕಷ್ಟಕರವಾದ ಸಂಗತಿಯಾಗಿದ್ದು ಅತಿ ಶೀಘ್ರದಲ್ಲಿ ಎಲ್ಲವನ್ನೂ ತನ್ನ ಪರಿಸರಕ್ಕೆ ಎಳಕೊಂಡು ತನ್ನ ನಿಜವಾದ ಬಣ್ಣ

[ರೂಪ] ಮತ್ತು ಗುಣಲಕ್ಷಣಗಳು ಅದರಲ್ಲಿ ಕಂಡುಬರುವಂತೆ ಮಾಡುವದು. ಈ ಪಾಪವನ್ನು ಬೆಳೆಯ ಮಾಡಿ ಅದು ಪೂರ್ಣಗೊಂಡಾಗ ಅದನ್ನು ಬೇರು ಸಹಿತ ಕಿತ್ತುಹಾಕಿ ಜಯಿಸದಿದ್ದಲ್ಲಿ, ಅದು ಮರಣವನ್ನು ಉಂಟುಮಾಡುವದು. ಕರ್ತನ ಹಿಂಬಾಲಕರೆಲ್ಲರೂ ಈ ಪಾಪದ ಬಗ್ಗೆ ಎಚ್ಚರಿಕೆ–ಯುಳ್ಳವರಾಗಿರಬೇಕು; ಅಲ್ಲದೆ ದೇವರು ತನಗೆ ಬಾಯಿಯನ್ನಾಗಿ ಮಾಡಿಕೊಂಡು ಗೌರವಿಸಲ್ಪಡುವವರು ಹಾಗು ಯಾವುದೇ ಸಾಮರ್ಥ್ಯಹೊಂದಿರುವ ಆತನ ಸೇವಕರು ಇವರಿಗಿಂತ ಬೇರೆ ಯಾರಿಗೂ ಇದಕ್ಕಿಂತಲೂ ಹೆಚ್ಚಿನ ಎಚ್ಚರಿಕೆಯು ಅಗತ್ಯವಿರುವದಿಲ್ಲ. ದಾವೀದನು ಮತ್ತು ಸೌಲನು ಇಂಥಾ ಒಂದು ಉನ್ನತ ಸ್ಥಾನದಲ್ಲಿ ಇಲ್ಲದೆ ಇರುತ್ತಿದ್ದಲ್ಲಿ ಇವರಿಗೆ ಅಸೂಯೆ ಪೈಪೋಟಿ ಹಾಗು ಹಗೆತನ ಇವುಗಳನ್ನು ಹೋಲಿಸಿ ನೋಡಿದಲ್ಲಿ ಅವರಿಗೆ ಅಸಾಧ್ಯವಾಗಿರುತ್ತಿದ್ದವು.

ಇಂಥಾ ಸಂದರ್ಭದಲ್ಲಿ (ವಚನ 10ರಲ್ಲಿ ಬರೆದಿರುವಂತೆ) ಸೌಲನು ಒಂದು ದುರಾತ್ಮನಿಂದ ಅಂದರೆ ಒಂದು ದುಷ್ಟ ಪ್ರವೃತ್ತಿಯಿಂದ ಪೀಡಿತನಾಗಿದ್ದನೆಂಬುದನ್ನು ಓದಲು ನಮಗೆ ಆಶ್ಚರ್ಯವಾಗಬೇಕಿಲ್ಲ. ಬಹುಶಃ ಈ ಭಾಷಾಶೈಲಿಯನ್ನು ಒಂದು ದುರಾತ್ಮ ಅಂದರೆ [ಅವಿಧೇಯವಾದ] ಬಿದ್ದುಹೋಗಿರುವ ಆತ್ಮವು, ಒಂದು ದೆವ್ವವು ಆತನನ್ನು ಬಾಧಿಸಿತ್ತೆಂದು ಅರ್ಥಬರುವಂತೆ ಗ್ರಹಿಸಿಕೊಳ್ಳಬೇಕಿರುವದು. ನಮಗೆ ಖಂಡಿತವಾಗಿ ತಿಳಿದಿರುವದೇನಂದರೆ ಪ್ರೀತಿ ತಾಳ್ಮೆ ಸಂತೋಷ ಸಮಾಧಾನಗಳು ಪವಿತ್ರಾತ್ಮನಲ್ಲಿ ಅಡಕವಾಗಿರುವ ಮೂಲಾಂಶಗಳಾಗಿರುವ ಅಂದರೆ ದೇವರ ಪ್ರವೃತ್ತಿಯ ಹಾಗೆಯೇ ಹಗೆತನ ಅಸೂಯೆಗಳು ಒಂದು ದುರಾತ್ಮ ಅಥವಾ "ದೇವರಿಂದ ದೂರವಾದ" ಪ್ರವೃತ್ತಿ



ದಾವೀದನನ್ನು ಕೊಲ್ಲಲು ಸೌಲನು ಯತ್ನಸುತ್ತಿರುವುದು

ಅಂದರೆ ದೇವರಿಗೆ ಹೊರತಾದ, ದೇವರಿಗೆ ವಿರುದ್ಧ–ವಾದುದೆಂಬದೇ. ಸೌಲನನ್ನು ವಶಪಡಿಸಿಕೊಂಡಿರುವ ಇಂಥಾ ಒಂದು ದುರಾತ್ಮವು, ದೇವರಿಂದ ದೂರವಾಗಿರುವ ಒಂದು ಆತ್ಮ ಅಥವಾ ಆತನು [ದೇವರು] ಮಾನ್ಯಮಾಡದಂಥ ಯಾವುದೇ ಆಗಿರುವದೆಂಬುದನ್ನು ನಾವು ಗುರುತಿಸಿ–ಕೊಳ್ಳುವದು ಮಾತ್ರವಲ್ಲದೆ ನಾವು ಮತ್ತೂ ಕಲ್ಪಿಸಿಕೊಳ್ಳುವ–ದೇನಂದರೆ ಸೌಲನು ದೇವರಿಂದ ಅಭಿಷಕ್ತನಾದ ಪ್ರತಿನಿಧಿ–ಯಾಗಿ ಇಸ್ರಾಯೇಲ್ಯರ ಸಿಂಹಾಸನದಲ್ಲಿರುವ ಕಾರಣ ಕನಿಷ್ಠ ಪಕ್ಷದಲ್ಲಿ ದೇವಾನುಮತಿಯಿಲ್ಲದೇ ದುರಾತ್ಮವು ಆತನನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಿರುವದಿಲ್ಲವೆಂಬದು.

ಪೂರ್ವದಲ್ಲಿನ ಪರಿಶುದ್ಧ ಜನರು ಪವಿತ್ರಾತ್ಮ ಪ್ರೇರಿತರಾಗಿ ದೇವರು ಮಾಡಿದ ದೋಷಾರೋಪಣೆಯ ವಿಷಯಗಳ ಬಗ್ಗೆ ನುಡಿದಿರುವ ಅಥವಾ ಬರೆದಿರುವ ಹಾಗೆಯೇ ಜನರು ಹಿಂದಿನ ಕಾಲದಲ್ಲಿ ಅಥವಾ ಕೆಲವು ಸಾರಿ ಈ ದಿವಸದಲ್ಲಿಯೂ ದುರಾತ್ಮ ಪ್ರೇರಿತರಾಗಿ ತಪ್ಪಾದ ಸಂಗತಿಗಳ ವಿಷಯವಾಗಿ ಮಾತಾಡುವದನ್ನು ಅಥವಾ ಬರೆಯುವದನ್ನು ಮಾಡುತ್ತಿರುವರು. ಈ ವಚನದಲ್ಲಿ **"ಪ್ರವಾದಿಸಿದರು"** ಎಂಬ ಶಬ್ದದಲ್ಲಿ ಒಳಗೊಂಡಿರುವ ಅಭಿಪ್ರಾಯವು ಇದೇ. ಸೌಲನು ಕೈಯಲ್ಲಿ ತನ್ನ ಈಟಿಯನ್ನು ಹಿಡಿದಿರುವಾಗ ಅವಿವೇಕದ ವಿಷಯಗಳನ್ನು, ಅಸಂಬದ್ಧ ವಿಷಯಗಳನ್ನು, ಮೂರ್ಖತನದಿಂದ ನುಡಿದಿದ್ದನು. ದುರಾತ್ಮವು ಆತನ ಮೇಲೆ ಬಂದಿದ್ದು ಅದು ಆ ಈಟಿಯನ್ನು ತನ್ನ ನಂಬಿಗಸ್ತನೂ ದೀನನೂ ಆದ ಯುವ ಸೇನಾಧಿಪತಿಗೆ ಹಿಂಸೆಕೊಡುವ ಸಲುವಾಗಿ ತನಗೆ ಮಿತ್ರನಂತೆಯೂ ಸಹಪಾಟಿಯಂತೆಯೂ ಇರುವವನು ಸೌಲನಲ್ಲಿದ್ದ ಖಿನ್ನತೆಯನ್ನು ಹೋಗಲಾಡಿಸ ಸಲುವಾಗಿ ಕಿನ್ನರಿಯನ್ನು ಭಾರಿಸುವಾಗ ಆತನಿಗೆ ಈಟಿಯನ್ನು ಎಸೆಯಲು ಮುಂದಾ–ಗುವಂತೆ ನಡೆಸಿತ್ತು. **"ಎಸೆ"** ಎಂಬ (ವಚನ 11ರಲ್ಲಿನ) ಶಬ್ದವು ಮೂಲಭಾಷೆಯಲ್ಲಿ ಕೇವಲ ಒಂದು ಚಲನೆ ಮಾಡುವ ಸಲುವಾಗಿ ಹಿಡಿದಿರುವದು ಎಂಬದಕ್ಕಿಂತಲೂ ಪ್ರಬಲ–ವಾದುದನ್ನು ಸೂಚಿಸುವದಾದರೂ, ನಂತರ ಆತನು ನಿಜದಲ್ಲಿ ಆ ಯುದ್ಧಾಸ್ತ್ರವನ್ನು ಎಸೆದಿದ್ದನು – 1 ಸಮುವೇಲ 19:10

ದಾವೀದನು ಬಹು ದೈರ್ಯಶಾಲಿಯೂ ಹೆದರಿಕೆ–ಯಿಲ್ಲದವನಾಗಿ ತೋರಿಬಂದಿದ್ದು, ಸೌಲನು ತನ್ನ ಖಿನ್ನತೆಯಲ್ಲಿದ್ದಾಗ ಆತನ ಪ್ರಭಾವಾಧಿಕಾರಗಳಿಗೆ ದಾವೀದನು ತನ್ನನ್ನು ಮತ್ತೆ ಮತ್ತೆ ಗುರಿಮಾಡಿಕೊಳ್ಳುತ್ತಿದ್ದನು. ದಾವೀದನ ಹೆದರಿಕೆಯ ಬಗ್ಗೆ ಯಾವ ಪ್ರಸ್ತಾವನೆಯೂ ಇರುವದಿಲ್ಲ, ಯಾಕಂದರೆ ತಾನು [ಅಪಾಯದಿಂದ] ತಪ್ಪಿಸಿಕೊಳ್ಳುವಂಥದ್ದು ಸಮಯೋಚಿತವೂ ಕರ್ತವ್ಯವೂ ಆಗಿರುವದೆಂದು ಆತನಿಗೆ ಅನ್ನಿಸಿತೆಂದು ತೋರಿದಾಗ್ಯೂ ತನ್ನನ್ನು ಕಾಪಾಡುವ ಸಲುವಾದ ದೇವರ ಬಲಾಧಿಕಾರಗಳನ್ನು ಹಾಗು ನಿಗದಿತ ಸಮಯದಲ್ಲಿ ಅರಸನಾಗಲು ಅಭಿಷೇಕಿಸಲ್ಪಟ್ಟಿರುವದನ್ನು ಸತತವಾಗಿ ತನ್ನ ನೆನಪಿನಲ್ಲಿಟ್ಟುಕೊಂಡಿದ್ದಂತೆ ತೋರುತ್ತದೆ. ಇಂಥಾ ನಂಬಿಗಸ್ತಿಕೆ ಹಾಗು ಧೈರ್ಯವು ನಿಜರೂಪದ ದಾವೀದ ವರ್ಗದ ಸದಸ್ಯರೆಲ್ಲರಿಗೆ ಒಂದು ಒಳ್ಳೆಯ

ಪಾಠವನ್ನು ತೋರಿಸಿಕೊಡುತ್ತದೆ. ಯಾವದೂ ಯಾವ ರೀತಿಯಲ್ಲಿಯೂ ನಮಗೆ ಕೇಡು ಮಾಡುವದಿಲ್ಲ. ನಮ್ಮ ಶಾರೀರಿಕ ಹಿತಾಸಕ್ತಿ ಅಥವಾ ಸೌಕರ್ಯಗಳು ಇಲ್ಲವೇ ನಡಾವಳಿ ರೀತಿಯ ವಿಷಯಗಳಲ್ಲಿ ಸಮಸ್ಯೆಗಳು ತಲೆದೂರಬಹುದು. ಆದರೆ ನಾವು ಶಾರೀರಿಕ ಸ್ವಭಾವದವರಲ್ಲ ಆತ್ಮಿಕ ಸ್ವಭಾವದವರು ಎಂಬುದನ್ನೂ ಅಲ್ಲದೆ ನೂತನ ಸೃಷ್ಟಿಗಳಾದ ನಮಗೆ ಕರ್ತನು ತನ್ನ ನಿಗದಿತ ಸಮಯದಲ್ಲಿ ದೇವರ ರಾಜ್ಯವನ್ನು ವಾಗ್ದಾನಮಾಡಿರುವನು ಎಂಬುದನ್ನು ನಾವು ನೆನಪು ಮಾಡಿಕೊಂಡಾಗ ನಮಗೆ ಯಾವ ಬಾಹ್ಯ ಪ್ರಭಾವಗಳು ನಮ್ಮ ನಿಜವಾದ ಹಿತಾಸಕ್ತಿಗಳಿಗೆ, ಆತ್ಮಿಕ ಹಿತಾಸಕ್ತಿಗಳಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಾಗದು ಇಲ್ಲವೆ ಕರ್ತನು ತನ್ನ ನಂಬಿಗಸ್ತರಿಗೆ ವಾಗ್ದಾನ ಮಾಡಿರುವ ರಾಜ್ಯ ಮಹಿಮೆಗಳನ್ನು ಪಡಕೊಳ್ಳಲು ಅಡ್ಡಿಮಾಡಲಾರವೆಂಬುದನ್ನು ಅರಿತುಕೊಳ್ಳಲು ಸಾಧ್ಯ. ಕೇವಲ ಕರ್ತನಲ್ಲಿ ನಮಗಿರುವ ಭರವಸೆಯನ್ನು ಕಳಕೊಂಡಾಗ ಮತ್ತು ನಮ್ಮ ಅಪನಂಬಿಗಸ್ತಿಕೆಗಳು ಮಾತ್ರ ನಮ್ಮನ್ನು ಆತನ ಪ್ರೀತಿ ಮತ್ತು ವಾಗ್ದಾನಗಳಿಂದ ಬೇರ್ಪಡಿಸಲು ಸಾಧ್ಯ.

ದಾವಿದನ ಮೇಲಿದ್ದ ಸೌಲನ ಅಸೂಯೆಯು ಆತನ ಮೇಲೆ ತನಗಿದ್ದ ಭಯದ ಮೇಲೆ ಆಧಾರಗೊಂಡಿತ್ತು. ಸಿಂಹದ ಮೇಲೆ ಆಕ್ರಮಣಮಾಡಿದ್ದ ನಿರ್ಭಯಸ್ಥನಾದ ಈ ಯುವಕನ ಮೇಲಿನ ತನ್ನ ಹಗೆತನ ಹಾಗು ವಿರೋಧಗಳು ಎಲ್ಲರಿಗೂ ಎದ್ದುಕಾಣುವಂತೆ ತೋರ್ಪಡುತ್ತಿರುವಾಗ ಇವನು ತನ್ನನ್ನು ಉಳಿಸಬಲ್ಲನೇ ಎಂದು ಸೌಲನು ಆಗಾಗ್ಗೆ ಆಶ್ಚರ್ಯಪಡುತ್ತಿದ್ದುದು ನಿಸ್ಸಂದೇಹ. ದೇವರು ದಾವೀದನೊಂದಿಗೆ ಇದ್ದುದನ್ನು ಹಾಗು ಆತನು ತನ್ನಲ್ಲಿ ಇಲ್ಲದಿದ್ದುದನ್ನು ಸೌಲನು ಗ್ರಹಿಸಿಕೊಂಡಿದ್ದನು. ಅರಮನೆಯಲ್ಲಿ ದಾವೀದನ ಇರುವಿಕೆಯು ಬೇಸರಿಕೆಯನ್ನುಂಟು ಮಾಡಿತ್ತು; ಅಲ್ಲದೆ ಆತನನ್ನು ನಿರ್ಲಕ್ಷಿಸುವದು ಸಾಧ್ಯವಾಗದೇ ಇದ್ದುದರಿಂದ ಆತನನ್ನು ಸೈನ್ಯದಲ್ಲಿ ಸೇರಿಸಿ ರಾಜ್ಯಭಾರದ ಸಂಬಂಧದಲ್ಲಿ ಹಲವಾರು ಕಾರ್ಯಭಾರವನ್ನು ವಹಿಸಿದ್ದು, ಹಾಗಾಗಿ ದಾವೀದನಿಂದ ಕೆಲವು ಅಚಾತುರ್ಯವುಂಟಾಗಿ ಅದು ಆತನ ಜನಪ್ರಿಯತೆಯನ್ನು ಅತನಿಗೆ ವಿರೋಧವಾಗಿ ತಿರುಗುವಂತಾಗಲು ಒಂದು ಸಂದರ್ಭ ಉಂಟಾಗುವದೆಂಬದನ್ನು ಸೌಲನು ನಿರೀಕ್ಷಿಸುತ್ತಿದ್ದುದು ಸ್ಪಷ್ಟವಾಗಿತ್ತು. ಬಹುಶಃ ಕೆಲವು ಆಕ್ರಮಣ–ಸುಲಿಗೆಗಳಲ್ಲಿ ದಾವೀದನು ಘಾಸಿಹೊಂದುವದನ್ನು ಇಲ್ಲವೇ ಕೊಲ್ಲಲ್ಪಡುವದನ್ನು ಸಹ ನಿರೀಕ್ಷಿಸುತ್ತಿದ್ದಿರಬಹುದು. ಆದರೆ ಅಪೋಸ್ತಲನು ವಿವರಿಸಿ ಹೇಳಿರುವಂತೆ, ಕರ್ತನ ಆತ್ಮವು 'ಶಿಕ್ಷಣದ [ಸ್ವಸ್ಥಚಿತ್ತತೆಯ] ಆತ್ಮವಾಗಿರುವದು'. ಅಲ್ಲದೆ ದಾವೀದನು ಕರ್ತನಲ್ಲಿ ಭರವಸವಿಟ್ಟು ಆ ಭರವಸೆಯ ಮೂಲಕವಾಗಿ ಮಾರ್ಗದರ್ಶನ ಪಡೆದಷ್ಟರ ಪ್ರಮಾಣದಲ್ಲಿ ಆತನು ವಿವೇಕದಿಂದ ತನ್ನ ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿ ಜನರ ಮನ್ನಣೆಯನ್ನು ಗಳಿಸಿಕೊಂಡಿದ್ದನು; ಇದು ಎಲ್ಲಕ್ಕೂ ಮಿಗಿಲಾಗಿ ಸೌಲನಲ್ಲಿ [ದಾವೀದನ ಬಗ್ಗೆ] ಹೆದರಿಕೆ ಹಾಗು ಭಯ ಮಿಶ್ರಿತವಾದ ಗೌರವವನ್ನು ಉಂಟುಮಾಡಿತ್ತು.

ಈ ಪಾಠವು ಕೆಲವು ವಿಧದಲ್ಲಿ ಕರ್ತನ ಪ್ರತಿಷ್ಠಿತ ಜನರು ಹಾಗು ಈಗಿನ ಕಾಲದ ಲೋಕದವರ ನಡುವಿನ ಸಂಬಂಧದ ಬಗ್ಗೆ ದೃಷ್ಟಾಂತವನ್ನು ನೀಡುತ್ತದೆ. ಲೋಕದವರು ಪ್ರಭಾವಾದಿ–ಕಾರಗಳನ್ನು ಹೊಂದಿದಾಗ್ಯೂ ದೇವಾನುಗ್ರಹವು ಇನ್ನೂ ತಮ್ಮೊಂದಿಗೆ ಇರುವದಿಲ್ಲವೆಂಬ ಅಂಶದ ಬಗ್ಗೆ; ದೈವಿಕ ಕಾರ್ಯವಿಧಿಯ ಪ್ರಕಾರ ಕಾಲವ್ಯವಸ್ಥೆಯಲ್ಲಿ ಒಂದು ಬದಲಾವಣೆ ಸನ್ನಿಹಿತವಾಗುವದರಲ್ಲಿದ್ದು; ಲವೋದೊಕಿಯ ಹಂತದಲ್ಲಿರುವ ಸಭೆಯು ದೇವರಿಗೆ ಬಾಯಂತಿರುವಂಥದ್ದು ರದ್ದುಮಾಡಲ್ಪಟ್ಟು ಅದನ್ನು [ದೇವರು ತನ್ನ] ಬಾಯಿಂದ ಕಾರಬೇಕಿದ್ದು, ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳು ಅಥವಾ ಕುಲೀನರು ಇಲ್ಲವೆ ಘನವಂತರು ಅನೇಕರಿಲ್ಲದಂಥ ನಂಬಿಗಸ್ತರಾದ ಚಿಕ್ಕ ಹಿಂಡು ಆ ರಾಜ್ಯದ ಬಾಧ್ಯತೆಯನ್ನು ಅದರಲ್ಲಿನ ಪ್ರಭಾವಾಧಿಕಾರಗಳೆಲ್ಲವುಗಳ ಸಹಿತವಾಗಿ ಪಡಕೊಳ್ಳುವದರ ಬಗ್ಗೆ ಅವರು ಅರಿತುಕೊಳ್ಳಬೇಕಿರುವದು. ಅಭಿಷಕ್ತ ವರ್ಗವು ನಿಜವಾಗಿಯೂ ತಮ್ಮ ಮಧ್ಯದಲ್ಲಿರುವದನ್ನು ಮತ್ತು ಅನುದಿನವೂ ತಮ್ಮೊಂದಿಗೆ ಬೆರೆಯುತ್ತಿರುವಂಥದ್ದನ್ನು ಅವರು ಗ್ರಹಿಸಿಕೊಂಡಿರುವದಿಲ್ಲ. ಹೇಗೂ ತಮ್ಮಲ್ಲಿರುವದಕ್ಕಿಂತಲೂ ಅಧಿಕವಾದ ಕರ್ತನ ಆತ್ಮವನ್ನು ಹೊಂದಿರುವವರ ಬಗ್ಗೆ ಅವರು ಅಸೂಯೆವುಳ್ಳವರಾಗಿ, ತಾವು ಹೊಂದಿರುವದಕ್ಕಿಂತಲೂ ಹೆಚ್ಚು ಶುದ್ಧತೆಯುಳ್ಳದ್ದನ್ನು ಉತ್ತಮವಾದಂಥದ್ದನ್ನು ಹಾಗು ಉತ್ಕೃಷ್ಟವಾದುದನ್ನು ಅವರು ಹಗೆ ಮಾಡುತ್ತಿರುವರು. ಕೆಲವೊಂದು ಸಮಯದಲ್ಲಿ ಅವರ ಅಸೂಯೆಯು ಕೊಲೆ ಮಾಡುವಷ್ಟರ ಮಟ್ಟಿಗೂ ಅವರನ್ನು ನಡೆಸಿರುವದು; ಆದರೆ ಅವರು ದಾವೀದನ ವರ್ಗದವರ ಬಗ್ಗೆ ಹೆದರಿಕೆಯುಳ್ಳವರಾಗಿ ಅವರನ್ನು ಹಗೆಮಾಡಲು ಕಾರಣ ಕರ್ತನೊಂದಿಗೆ ಅವರಿಗಿರುವ ನಿಕಟವಾದ ಸಂಬಂಧದ ಹಾಗು ಕರ್ತನ ಆಶೀರ್ವಾದವು ಅವರ ಹೃದಯಗಳಲ್ಲಿ ಮತ್ತು ಜೀವಿತಗಳಲ್ಲಿ ತೋರ್ಪಡಲಾಗುತ್ತಿರುವದೇ. ಇಂಥಾ ಒಂದು ಪರಿಸ್ಥಿತಿಯು ಯೆಹೂದ್ಯರ ಕಾಲದ ಅಂತ್ಯದಲ್ಲಿ ಇರುವದೆಂದು ನಮ್ಮ ಕರ್ತನು ಉಲ್ಲೇಖಿಸಿರುವನು; ನಿಶ್ಚಯವಾಗಿಯೂ ಇದು ಈ ಸುವಾರ್ತಾಯುಗದ ಅಂತ್ಯದಲ್ಲಿನ ಸಂಗತಿಗಳಿಗೆ ಒಂದು ಛಾಯೆಯಾಗಿರುವದು. ಆ ಕಾಲದಲ್ಲಿನ ಧಾರ್ಮಿಕ ನಿಷ್ಠೆಯುಳ್ಳ ಜನರ ವಿಷಯವಾಗಿ ಆತನು ಹೀಗೆ ಹೇಳಿರುವನು: "ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವದಿಲ್ಲ. ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ; ಆದರೆ ಸತ್ಯವನ್ನು ಅನುಸರಿಸಿ ನಡೆಯುವವನು ತಾನು ದೇವರಿಂದ ನಡಿಸಿಕೊಂಡು ತನ್ನ ಕೃತ್ಯಗಳನ್ನು ಮಾಡಿದ್ದೇನೆಂದು ತೋರಿಬರುವಂತೆ ಬೆಳಕಿಗೆ ಬರುತ್ತಾನೆ." ಹೀಗೆ ದಾವೀದ ಹಾಗು ಸೌಲನ ನಡುವೆ ಅಲ್ಲದೆ ಕರ್ತನ ಮೊದಲನೇ ಬರುವಿಕೆಯಲ್ಲಿ ಸಹ ಕತ್ತಲೆಯನ್ನು ಪ್ರೀತಿಸುವವರ ಹಾಗು ಬೆಳಕನ್ನು ಪ್ರೀತಿಸುವವರ ನಡುವೆ ಒಂದು ಪ್ರತ್ಯೇಕಿಸುವಿಕೆ ಮಾಡಲ್ಪಟ್ಟಿತ್ತು. ಇದರಂತೆಯೇ ಪ್ರೀತಿಯನ್ನು ಅಂದರೆ ಸತ್ಯವನ್ನು ಪ್ರೀತಿಸುವವರ ಮತ್ತು ಪವಿತ್ರಾತ್ಮನಿಂದ ನಡೆಸಲ್ಪಡುವವರ ಹಾಗು ವಿಭಿನ್ನ ಮನಸ್ಸನ್ನು ಅಥವಾ ಪ್ರವೃತ್ತಿಯನ್ನು ಹೊಂದಿರುವವರ ನಡುವೆ ಒಂದು ಬೇರ್ಪಡಿಸುವಿಕೆಯು ತ್ವರಿತವಾಗಿ ನಡೆಸಲ್ಪಡುತ್ತಿರುವದು.

ನಮ್ಮ ಸ್ವರ್ಣಮಯ ಪಠ್ಯಭಾಗವನ್ನು ಕರ್ತನ ನಂಬಿಗಸ್ತ ಜನರು ಒಂದು ಆದರಣಾದಾಯಕ ಹಾಗು ಪೋಷಣಾಕಾರಕ ಶಕ್ತಿಯಾಗಿ ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಇದು ಹೊಸ ಒಡಂಬಡಿಕೆಯಲ್ಲಿರುವ ಅಪೋಸ್ತಲನ ಈ ಮುಂದಿನ ಮಾತುಗಳಿಗೆ ಪೂರ್ಣವಾಗಿ ಸಾಮರಸ್ಯದಲ್ಲಿರುವುದು: "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ..."

ಅಸೂಯೆ ಹಾಗು ಕೊಲೆಗಡುಕತನದ ಆತ್ಮ

ರೀಪ್ರಿಂಟ್ಸ್ ಪುಟ 4218

1 ಸಮುವೇಲ 18:6–16

"ಯೆಹೋವ ದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಾ" – ಕೀರ್ತನೆ 84:11

ಈ ಪಾಠವು ಕರ್ತನೊಂದಿಗೆ ಮತ್ತು ಆತನು ಮಾಡಿರುವ ಏರ್ಪಾಡುಗಳೊಂದಿಗೆ ಹೊಂದಾಣಿಕೆಯಲ್ಲಿರುವ ಒಂದು ಆತ್ಮ ಅಥವಾ ಮನೋಭಾವ ಹಾಗು ಆತನೊಂದಿಗೆ ಹೊಂದಾಣಿಕೆ–ಯಿಲ್ಲದಿರುವ ಒಂದು ಆತ್ಮ ಅಥವಾ ಮನೋಭಾವಗಳ ನಡುವೆ ಇರುವ ವ್ಯತ್ಯಾಸವನ್ನು ನಮಗೆ ಸಮರ್ಥನೆ ನೀಡಿ ತೋರಿಸುತ್ತದೆ. ಮೊದಲನೇಯದು ನಮ್ಮ ಹಿಂದಿನ ಪಾಠದಲ್ಲಿ ವರ್ಣಿಸಿರುವಂತೆ, ಅರಸನ ಸ್ಥಾನಕ್ಕೆ ಗುಪ್ತವಾಗಿ ಅಭಿಷೇಕಿಸಲ್ಪಟ್ಟು ನಂತರದಲ್ಲಿ ಗೊಲ್ಯಾತನ ಮೇಲೆ ಪಡೆದ ವಿಜಯದ ಮೂಲಕವಾಗಿ ಪ್ರಾಮುಖ್ಯತೆಗೆ ಬಂದವನಾದ ಕುರುಬ ಹುಡುಗನಾದ ದಾವೀದನಲ್ಲಿ ಇದು ಪ್ರದರ್ಶಿತವಾಗಿರುವದು. ಸೌಲನ ವಿಷಯದಲ್ಲಿ ದಾಖಲೆಯಲ್ಲಿರುವದೇನಂದರೆ ಆತನಿಗೆ ಒಂದು ದುಷ್ಟ ಅಥವಾ ಕೆಡುಕಿನ ಆತ್ಮವು ಆತನನ್ನು ಹಿಡಿದುಕೊಂಡಿತ್ತೆಂಬದು. ಪ್ರತಿಯಾಗಿ ತನಗೆ ಅಭಿಷೇಕವಾದ ಸಮಯದಿಂದ ಕರ್ತನ ಆತ್ಮವು ದಾವೀದನೊಡನೆ ಇತ್ತೆಂದು ಹೇಳಲಾಗಿರುವದು. ಪುರಾತನ ಕಾಲದಲ್ಲಿ ಕರ್ತನ ಆತ್ಮನಿಂದಾದ ಆಶೀರ್ವಾದಗಳಿಗೂ ಸುವಾರ್ತಾಯುಗದ ಪರ್ಯಂತರವಾಗಿ ಪವಿತ್ರಾತ್ಮನ ಅಭಿಷೇಕವಾಗುವ, ಪವಿತ್ರಾತ್ಮನಿಂದ ಹುಟ್ಟುವದರ [ಅಂಕುರಿಸಲ್ಪಡುವ], ಪವಿತ್ರಾತ್ಮನಿಂದ ಮಕ್ಕಳಾಗಿ ಮುದ್ರಿತ–ವಾಗುವದರ, ಮೂಲಕವಾಗಿ ದೇವಜನರಿಗಾಗುವ ಇದಕ್ಕೂ ಹೆಚ್ಚಿನ ಆಶೀರ್ವಾದಕರ ಅನುಭವಗಳ ಬಗ್ಗೆ ನಮ್ಮ ಮನಸ್ಸಿನಲ್ಲಿ ಗೊಂದಲಪಡುವಂತಿಲ್ಲ. ನಿಸ್ಸಂದೇಹವಾಗಿಯೂ ಆ [ಹಿಂದಿನ] ಕಾಲದಲ್ಲಿ ಕರ್ತನ ಆತ್ಮನನ್ನು ಹೊಂದಿದವರ ಅನುಭವಗಳ ಮತ್ತು ಅದನ್ನು ಈಗ ಹೊಂದುತ್ತಿರುವವರ ಅನುಭವಗಳ ನಡುವೆ ಹೆಚ್ಚು ಸಮಾನತೆಗಳಿರುವವು; ಆದರೆ "ಮಕ್ಕಳ ಮನೆತನದವರಾಗಿ" ಈಗ ನಾವು ಅನುಭವಿಸು–ವಂಥವುಗಳು ಹಿಂದೆ "ಸೇವಕರ ಮನೆತನದವರ", ನಾವು ನೆನಸುವ, ಯಾವ ಅನುಭವಗಳಿಗಿಂತಲೂ ಬಹು ಮಿಗಿಲಾಗಿ–ರುವದು: ಯಾಕಂದರೆ ಪವಿತ್ರಾತ್ಮನು ಒಬ್ಬ ಸಹಾಯಕನಾಗಿ [ಸಂತೈಸುವವನಾಗಿ] ಮತ್ತು ಸತ್ಯಕ್ಕೆ ನಡೆಸುವವನಾಗಿ ಅಲ್ಲದೆ ನೂತನ ಸೃಷ್ಟಿಯ ಮುದ್ರೆಯನ್ನಾಗಿ ಆಗ ನೀಡಲಾಗಿರಲಿಲ್ಲ, ಕಾರಣ ಯೇಸುವು ಆಗ ಮಹಿಮಾ ಪದವಿಗೆ ಸೇರಿರಲಿಲ್ಲ. ಹೀಗಾಗಿ ಪಂಚಾಶತ್ತಮದಿನದಂದು ನೀಡಲಾದ ಆಶೀರ್ವಾದವು ಮತ್ತು ಅಂದಿನಿಂದ ಸಭೆಯು ಅನುಭವಿಸುತ್ತಿರು–ವಂಥದ್ದು ಕರ್ತನು ಮದಲಗಿತ್ತಿಯ ವರ್ಗಕ್ಕೆ ನೀಡಲಾಗಿರುವ ವಿಶಿಷ್ಟವಾದ ಆಶೀರ್ವಾದವಾಗಿದ್ದು ಅದು ಅವರ ಸಹಾಯಕನು [ಒಬ್ಬ ವಕೀಲನಂತೆ] ಅವರ ಪರವಾಗಿ ದೇವರ ಸನ್ನಿಧಾನದಲ್ಲಿ ತನ್ನ ಸ್ವಂತ ಯಜ್ಞದ ಫಲದೊಂದಿಗೆ ಪ್ರವೇಶಿಸಿರುವ ಕಾರಣದಿಂದ ಸಾಧ್ಯವಾಗಿರುವದು.

"ಸೇವಕರ ಮನತನದವರಿಗೆ" ಎಷ್ಟರ ಪ್ರಮಾಣದಲ್ಲಿ ಪವಿತ್ರಾತ್ಮವು ಅನಗ್ರಹಿಸಲಾಗಿರುವದೋ ಅದು ಅಗತ್ಯವಾಗಿ ನಯವಿನಯವುಳ್ಳ, ದೇವರೊಂದಿಗೆ ಅನ್ಯೋನ್ಯತೆಯುಳ್ಳ, ಆತನ ಚಿತ್ತವನ್ನು ನೆರವೇರಿಸಲು ಬಯಸುವ ಮತ್ತು ಆತನೊಡನೆ ಸಮಾಧಾನದಿಂದಿರುವ ಆತ್ಮವಾಗಿರುವದು. ಈ ಪ್ರಮಾಣದಲ್ಲಿ ಅದು ಸ್ವಸ್ಥಚಿತ್ತತೆಯ ಆತ್ಮವಾಗಿದ್ದು, ಇದನ್ನು ಹೊಂದಿದವರ ನರದೌರ್ಬಲ್ಯ ಮೂಲಕವಾದ ಸಿಡುಕು ಮತ್ತು ಆಯಾಸವನ್ನು ಬಹುವಾಗಿ ಶಮನಗೊಳಿಸುವದು. ಸಹಜವಾಗಿ ಆತನಿಗಿರುವ ಪರಿಶೋಧನೆ ಹಾಗು ನಿರಾಶೆಯ ಸಮಯಗಳಲ್ಲಿ ಉಂಟಾಗುವ ನಿಶ್ಯಕ್ತಿ ನಿರುತ್ಸಾಹಗಳನ್ನು ಬಹುವಾಗಿ ಶಮನಗೊಳಿಸುವದು. ಸೌಲನ ವಿಷಯದಲ್ಲಿ ಒಂದು ದುರಾತ್ಮವು ಆತನಲ್ಲಿ ಪ್ರವೇಶಿಸಿತ್ತೆಂದು ಹೇಳಲಾಗಿರುವದು. ಇದು ಆತನು ಪಿಶಾಚನ ವಶವಾದನೆಂಬ ಅರ್ಥವನ್ನು ಕೊಡುವದೆನ್ನುವ ಅಗತ್ಯವಿರುವದಿಲ್ಲ; ಆದರೆ ನಿಜವಾಗಿಯೂ ಇದು ಒಂದು ಕೆಟ್ಟ ಮನಸ್ಸು, ಒಂದು ಅಡ್ಡದಾರಿ ಹಿಡಿದ ಮನಸ್ಸು ಅಥವಾ ಪ್ರವೃತ್ತಿ, ಒಂದು ಅಸಂತೋಷದ ಅಥವಾ ಖಿನ್ನ ಮನಸ್ಸು ಇವುಗಳು ಆತನು ಹಿಂದೆ ಆನಂದಿಸುತ್ತಿದ್ದ ವಿಶ್ರಾಂತಿಪೂರ್ಣ ಸಮಾದಾನದ ಭರವಸೆಯುಳ್ಳ ಮನಸ್ಸಿನ ಸ್ಥಾನವನ್ನು ಆಕ್ರಮಿಸಿಕೊಂಡಿದ್ದವು.

ಯೆಹೋವನಿಂದ ಕಳುಹಿಸಲ್ಪಟ್ಟ ಒಂದು ದುರಾತ್ಮ

ಆದರೆ ದೇವರಿಂದ ಕಳುಹಿಸಲ್ಪಟ್ಟ ಒಂದು ದುರಾತ್ಮವು ಸೌಲನ ಮೇಲೆ ಬಂದು ಆತನು ಮನೆಯ ಮಧ್ಯದಲ್ಲಿ ಪ್ರವಾದಿಸಿದ್ದನೆಂದು ನಾವು ಓದುವೆವು. ಇದು ಬಹುತೇಕ ಒಂದು ಪೀಡನೆ ಅಥವಾ ಡಾ. ಮೆರ್ರಿನ್‌ರವರು ಬಿಬ್ಲಿಯೋಥೆಕ ಸಾಕ್ರ ಎಂಬ ಗ್ರಂಥದಲ್ಲಿ ಸಲಹೆಮಾಡಿರುವಂತೆ ಸೌಲನಿಗೆ ಮಾನಸಿಕವಾದ ಮೂರ್ಛೆರೋಗ ಇತ್ತೆಂಬದು; ಆತನು ಹೇಳಿರುವದು–ಮೂರ್ಛೆರೋಗವು ಬೌದ್ಧಿಕ ಸಾಮರ್ಥ್ಯಕ್ಕೆ ಸಂಬಂಧಿದಂಥ ಆರೋಗ್ಯಕರವಾದ ಬೆಳವಣಿಗೆ ಹಾಗು ಅಭಿವೃದ್ಧಿ ಇವುಗಳ ಜೊತೆ ಉಳಿದುಕೊಂಡಿರಬಹುದು. ಅಲ್ಲದೆ ಒಂದು ಉನ್ನತ ಮಟ್ಟದ ಬುದ್ಧಿಶಕ್ತಿಯು ಮತ್ತು ಪ್ರತಿಭೆಯು ಸಹ ಇದರೊಂದಿಗೆ ಕೂಡಿರಲೂಬಹುದು. ಜೂಲಿಯಸ್ ಸೀಸರ್, ಅಗಸ್ಟಸ್ ಸೀಸರ್, ನೆಪೋಲಿಯನ್, ಪೆಟ್ರಾರ್ಕ್, ಮೊಹಮ್ಮದ್, ಮೊಲೀರಿ, ಹ್ಯಾಂಡೆಲ್ ಅಲ್ಲದೆ ಇತರ ಹಲವು ಮಹಾಪುರುಷರು ಮೂರ್ಛಾರೋಗಿಗಳಾಗಿದ್ದರು. ಕೆಲವು ವಿಶಿಷ್ಟತೆಗಳಿರುವದು ಈ ಎಲ್ಲಾ ಮೂರ್ಛಾರೋಗಿಗಳಲ್ಲಿ ಸಾಮಾನ್ಯವಾಗಿದ್ದು ಅವು ಇವರ ಗುಣಸ್ವಭಾವಗಳ ಮೇಲೆ ಪ್ರಭಾವ ಬೀರಿದ್ದವು; ಅವು ಯಾವುವೆಂದರೆ ಕೋಪದಿಂದ ಕುಪಿತನಾಗಿ ಉದ್ರೇಕಗೊಳ್ಳು–ವಂಥದು; ಕೆಲವೊಂದು ಸನ್ನಿವೇಶಗಳಲ್ಲಿ ಅತ್ಯುನ್ನತ ಮಟ್ಟದಲ್ಲಿ ಉದ್ರೇಕವನ್ನು ಪ್ರದರ್ಶಿಸಿ ಮತ್ತೆ ಒಂದು ಜಡತ್ವ ತುಂಬಿದ

ಮೂರ್ಛೆಗೆ ಜಾರಿ ಬೀಳುವದು. ಈ ಸ್ಥಿತಿಯಲ್ಲಿ ಅನೇಕ ಅಪರಾಧ ಕೃತ್ಯಗಳು ನಡೆದಿರುವದು.

ನಾವು ಗ್ರಹಿಸಲಾಗದ ಅಂಶವೆಂದರೆ ಕರ್ತನಿಂದ ಕಳುಹಿಸಲ್ಪಟ್ಟ ಈ ದುರಾತ್ಮವೆಂದರೆ ಕರ್ತನು ಸೌಲನ ಮೇಲೆ ಈ ಕೆಟ್ಟ ಪ್ರಭಾವವನ್ನು ಪ್ರಯೋಗಿಸಿದ್ದನೆಂಬದು; ಆದರೆ ನಾವು ಅರ್ಥಮಾಡಿಕೊಳ್ಳುವದೇನಂದರೆ "ಯಿಂದ" ಎಂಬ ಶಬ್ಧವು ಸಂಪೂರ್ಣವಾಗಿ ಬೇರೊಂದು ಅರ್ಥದಲ್ಲಿ ತೆಗೆದುಕೊಂಡಿದ್ದು ಇದು "ಅದು ಅಲ್ಲ" ಎನ್ನುವಂಥದು "ಕರ್ತನಿಂದ [ಹೊರತಾದ] ಒಂದು ದುರಾತ್ಮವು ಸೌಲನ ಮೇಲಿತ್ತು" ಎಂಬುದಕ್ಕೆ ವಿರುದ್ಧವಾಗಿ ಗ್ರಹಿಸಿಕೊಂಡಿರುತ್ತೇವೆ. ಕೋಪ ಹಗೆತನ ದ್ವೇಷ ಮತ್ತು ಹೋರಾಟಗಳು ಶರೀರಭಾವದ ಹಾಗು ಸೈತಾನನ ಕೃತ್ಯಗಳು ಎಂದು ಅಪೋಸ್ತಲನು ನಮಗೆ ತಿಳಿಸಿರುವನು, ಹೀಗಾಗಿ ಸೌಲನಾಗಲಿ ಇಲ್ಲವೇ ಇನ್ನು ಯಾರೇ ಆದರೂ ಯಾವ ಮಟ್ಟದಲ್ಲಿಯೇ ಆಗಲೀ ಸೈತಾನನ ಈ ಕೃತ್ಯದ ಬಗ್ಗೆ ಸಹಾನುಭೂತಿ ಹೊಂದಿದವರಾದಲ್ಲಿ ಅಷ್ಟರ ಮಟ್ಟಿಗೆ ದುರಾತ್ಮನಿಂದ, ದುಷ್ಟ ಪ್ರವೃತ್ತಿಯಿಂದ, ಸೈತಾನನ ಮನೋಭಾವದಿಂದ, ನಿಯಂತ್ರಿಸಲ್ಪಡುವರು; ಅಲ್ಲದೆ ವಾಸ್ತವದಲ್ಲಿ ಹೇಳುವದಾದರೆ ಯಾರು ಬುದ್ಧಿಪೂರ್ವಕವಾಗಿ ಸೈತಾನನ ಮನೋಭಾವದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವರೋ ಅಂಥವರು ತಮ್ಮನ್ನು ದುರಾತ್ಮವು ಆವರಿಸಿಕೊಳ್ಳುವಂತಾಗಿ ಅದು ತಮ್ಮೊಳಗೆ ಪ್ರವೇಶಿಸುವಂತೆ ಮಾಡಿಕೊಳ್ಳುವರು.

ನಿಸ್ಸಂದೇಹವಾಗಿಯೂ ಸತ್ಯವಾಗಿರುವಂಥದ್ದೇನಂದರೆ ಯಾವ ವ್ಯಕ್ತಿಗಳ ಮನಸ್ಸುಗಳು ನೀತಿಸತ್ಯತೆಗಳ ವಿಷಯದಲ್ಲಿ ಸಹಾನುಭೂತಿಯುಳ್ಳದ್ದಾಗಿರುವದೋ ಅಷ್ಟರ ಪ್ರಮಾಣದಲ್ಲಿ ದುರಾತ್ಮವು ಪ್ರವೇಶಿಸದಂತೆ ಕಾಪಾಡುವ ರಕ್ಷಣಾಕರವಾದ ಪ್ರಭಾವದಿಂದ ಅವರು ಆವರಿಸಲ್ಪಡುವರೆಂಬದು. ಸತ್ಯವೇದವು ತಿಳಿಸಿರುವಂಥದ್ದು ಹೀಗಿರುವದು–ದೇವದೂತರುಗಳು ರಕ್ಷಣೆಯನ್ನು ಬಾಧ್ಯವಾಗಿ ಹೊಂದಲಿರುವವರಿಗೆ ಸೇವೆಮಾಡುವ ಆತ್ಮಗಳೆಂಬದು ಹಾಗು "ಯೆಹೋವನ ಭಯಭಕ್ತಿಯುಳ್ಳವರ ಸುತ್ತಲು ಆತನ ದೂತನು ದಂಡಿಳಿಸಿ ಕಾವಲಾಗಿದ್ದು ಕಾಪಾಡುತ್ತಾನೆ." (ಇಬ್ರೀಯ 1:14; ಕೀರ್ತನೆ 34:7) ಆದರೆ ದೇವರಲ್ಲಿನ ಭಯಭಕ್ತಿಯಿಂದ ಯಾವುದೇ ವಿಧವಾದ ನಿರ್ಗಮನಕ್ಕೆ, ನೀತಿಸತ್ಯತೆಗಳ ಪರವಾದ ನಿಷ್ಠೆಯಿಂದ ಯಾವುದೇ ನಿರ್ಗಮನಕ್ಕೆ ಸಮಾನವಾಗಿ ಬರುವದು ದೇವದೂತರ ಮೂಲಕವಾದ ಪವಿತ್ರತೆಯುಳ್ಳ ರಕ್ಷಣಾಪ್ರಭಾವದಿಂದ ಪ್ರತ್ಯೇಕಿಸಲ್ಪಡುವಂಥದ್ದು, ಇದರ ಪರಿಣಾಮವಾಗಿ ಇಂಥವರ ಒಳಗೆ ಪ್ರವೇಶಿಸಿ ಅವರನ್ನು ಹೆಚ್ಚು ತೀಕ್ಷ್ಣವಾಗಿ ಮಲಿನಗೊಳಿಸಲು ಯಾವಾಗಲೂ ಸಿದ್ಧವಿರುವ ಬಿದ್ದುಹೋದ ದೇವದೂತರ ಹಾನಿಕರವಾದ ಪ್ರಭಾವಗಳಿಗೆ ಅವರ ಹೃದಯ ಮನಸ್ಸುಗಳು ತೆರೆದುಕೊಳ್ಳುವವು. ಇದರ ಒಂದು ಪಾಠವು ನಮ್ಮ ಕರ್ತನ ಸಾಮ್ಯದಿಂದ ಸಮರ್ಥಿಸಲ್ಪಟ್ಟಿರುವಂತೆ ತೊರುವದು. ಅದೇನಂದರೆ ಒಬ್ಬ ಮನುಷ್ಯನಿಂದ ದೆವ್ವವು ಹೊರಡಿಸಲ್ಪಟ್ಟು ಆತನ ಹೃದಯವು ಗುಡಿಸಲ್ಪಟ್ಟು ಅಲಂಕರಿಸಲಾದ ನಂತರ ಅದು ತನ್ನ ಆತ್ಮವನ್ನು ಕಾಯುವ ಒಳ್ಳೆಯ ಕುರುಬನನ್ನು ಸ್ವೀಕರಿಸಲ್ಪಡದೇ ಕೇವಲ ತನ್ನ ಸ್ವಂತ ಬಲದಿಂದ ನೀತಿಯ ಪರವಾಗಿ ನಿಂತುಕೊಂಡಿರಲು ಮೊದಲಿಗಿಂತಲೂ ಇನ್ನೂ ಹೆಚ್ಚು ಕೆಟ್ಟದಾದ ಏಳು ದೆವ್ವಗಳಿಂದ ಹಲ್ಲೆಗೊಳಗಾಗುವನು, ಹೀಗಾಗಿ ಅವನ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವದು – ಲೂಕ 11:24–25.

ಹೀಗಿತ್ತು ಸೌಲನ ಸಂಗತಿ; ಒಬ್ಬ ಪ್ರಾಕೃತ ಮನುಷ್ಯನಾಗಿ ಆತನಲ್ಲಿ ಕೆಲವು ಘನವಂತಿಕೆಯ ಗುಣಗಳಿದ್ದುದು ಸ್ಪಷ್ಟವಾಗಿತ್ತು; ಈ ಕಾರಣದಿಂದ ಸಮುವೇಲನು ಆತನನ್ನು ಪ್ರೀತಿಸಿದ್ದನು; ಆದರೆ ತನ್ನನ್ನು ಸಂಪೂರ್ಣವಾಗಿ ದೇವರಿಗೆ ಪ್ರತಿಷ್ಠಿಸಿಕೊಳ್ಳಲು ವಿಫಲನಾಗಿ ಆತನು ತನ್ನ ಸ್ವಂತ ಇಚ್ಛೆಯಿಂದ, ಒಂದು ಸ್ವಾರ್ಥ ಮನೋಭಾವದಿಂದ, ಸತತವಾಗಿ ಆವರಿಸಲ್ಪಟ್ಟವನಾಗಿದ್ದು, ಇವು ದೇವರಿಗೆ ಸಂತೃಪ್ತಿಯಿಂದ ಸೇವೆಮಾಡಲು ಅವನನ್ನು ಅಡ್ಡಿಪಡಿಸಿದ್ದವು. ಇದರ ಫಲವಾಗಿ ದೇವರ ವಿಶೇಷ ರಕ್ಷಣೆ ಹಾಗು ಸಹಾಯಗಳನ್ನು ಸದುಪಯೋಗಮಾಡಿಕೊಳ್ಳಲು ಅವನಿಗೆ ಆಗಿರಲಿಲ್ಲ, ಹಾಗು ಇದಕ್ಕೆ ಸರಿ ಹೊಂದುವಂತೆ ಸ್ವಾರ್ಥ ಮನೋಭಾವವು ಬೆಳೆದುಬಂದಿತ್ತು. ನಮ್ಮ ಪಾಠದಲ್ಲಿ ನಾವು ನೋಡಿದ್ದೇನಂದರೆ [ಸೌಲನ] ತನ್ನ ಜೀವನದ ವ್ಯವಹಾರಗಳಲ್ಲಿ ದೇವರ ಚಿತ್ತ ನೆರವೇರಬೇಕೆಂಬುದನ್ನು ಬಯಸುವದಕ್ಕೆ ಬದಲಾಗಿ ಸ್ವಾರ್ಥ ಹಾಗು ಸ್ವೇಚ್ಛಾ ಮನೋಭಾವಗಳು ಆತನ ಹೃದಯದಲ್ಲಿ ಉನ್ನತವಾಗಿ ಬೆಳೆದುಕೊಂಡಿದ್ದವೆಂಬದು. ಹೃದಯದ ಈ ಸ್ಥಿತಿಯು ತೋರ್ಪಡಲು ಕೇವಲ ಒಂದು ಅವಕಾಶದ ಅಗತ್ಯವಿದ್ದು ಈ ಅವಕಾಶವು ದಾವೀದನ ಸಂಬಂಧದಲ್ಲಿ ಒದಗಿ ಬಂದಿತ್ತು. ಗೊಲ್ಯಾತನೊಡನೆ ನಡೆಸಿದ ಸಾಹಸಕೃತ್ಯದ ನಂತರ ದಾವೀದನ ಪ್ರಸಿದ್ಧಿಯು ಇಸ್ರಾಯೇಲಿನ ಊರುಗಳಲ್ಲೆಲ್ಲಾ ಬಹುವಾಗಿ ಹಬ್ಬಿಕೊಂಡಿತು. ಆ ಕಥೆಯಲ್ಲಿ ಮುಂದೆ ತಿಳಿಸಿರುವಂತೆ ಆತನು ಸೈನ್ಯಸಮೇತವಾಗಿ ಫಿಲಿಷ್ಟಿಯರೊಂದಿಗೆ ಯುದ್ಧನಡೆಸಿ ವಿಜಯವು ಲಭಿಸಿದಾಗ ಆ ಕಾಲದ ಪದ್ಧತಿಯಂತೆ ಆತನ ಕೀರ್ತಿಯನ್ನು ಹೆಂಗಸರು ಮತ್ತು ಮಕ್ಕಳು ಹಾಡಿಕೊಂಡಾಡಿದ್ದರು; ಜಯಶಾಲಿಗಳಾಗಿ ಹಿಂದಿರುಗಿ ಬರುತ್ತಿದ್ದ ಯುದ್ಧವೀರರನ್ನು ಅನೇಕ ಪಟ್ಟಣದ ಬಾಗಲಿನ ಬಳಿಯಲ್ಲಿ ಅವರು ಹೀಗೆ ಅಭಿನಂಧಿಸುತ್ತಿದ್ದರು. ಒಂದು ಗೀತೆಯು ಹಂತಹಂತವಾಗಿ ಪ್ರಸರಿಸಿಕೊಂಡಿದ್ದು ಅದರ ಪಲ್ಲವಿಯು ಹೀಗಿತ್ತು: "ಸೌಲನು ಸಾವಿರ ಗಟ್ಟಲೆಯಾಗಿ ಕೊಂದನು; ದಾವೀದನು ಹತ್ತು ಸಾವಿರ ಗಟ್ಟಲೆಯಾಗಿ ಕೊಂದನು."

ಈ ಸ್ಥಿತಿಯಲ್ಲಿ ಸೌಲನ ಸ್ಥಾನದಲ್ಲಿದ್ದು ತಪ್ಪನ್ನು ಎಸಗದೇ, ಇಂಥಾ ಗೌರವವು ಅರಸನನ್ನು ಸಂಪೂರ್ಣವಾಗಿ ಕಾಂತಿಹೀನನಾಗಿ ಮಾಡಿದ ಆ ಸಂದರ್ಭದ ವೀರ ಯುವಕನ ಬಗ್ಗೆ ಅಸೂಯೆಯಿಲ್ಲದೆ ಇರುವಂತಾಗಲು ಬಹು ವಿಶಾಲವಾದ ಒಂದು ಶಕ್ತಿಸಾಮರ್ಥ್ಯವುಳ್ಳ ಮನುಷ್ಯನು ಬೇಕಾಗುತ್ತಿತ್ತು. ಆದರೆ ಅರಸನಾದ ಸೌಲನ ಅಥವಾ ಇತರರ ಸಹಜ ಮನೋಪ್ರವೃತ್ತಿ ಏನೇ ಇದ್ದರೂ ಸೂಕ್ತವಾದ ನಡವಳಿಕೆ ಏನೆಂಬುದರ ಬಗ್ಗೆ ಸಂದೇಹಪಡಲು ಸಾಧ್ಯವಾಗದು. ತನ್ನ ವೀರಾದರ್ಶನದ ಮೂಲಕವಾಗಿ ಇಡೀ ದೇಶಕ್ಕೆ ಆಶೀರ್ವಾದ ಉಂಟುಮಾಡಿದ ಯುವ ದೇಶಭಕ್ತನನ್ನು ಸನ್ಮಾನಿಸುವದರಲ್ಲಿ ಸೌಲನು ಸಂತೋಷಿಸಿ

ಉಲ್ಲಾಸಪಡಬೇಕಿತ್ತು. ಹೀಗೆ ಮಾಡುವದರ ಮೂಲಕವಾಗಿ ಸ್ವಸ್ಥಚಿತ್ತತೆಯ ಮನೋಭಾವು ವ್ಯಕ್ತವಾಗುವಂತಾಗಿ ಇದರಿಂದ ಸೌಲನಿಗೆ ಮಿತಿಮೀರಿದ ಗೌರವ ಉಂಟಾಗುತ್ತಿತ್ತು. ಆದರೆ ಇದು ಆತನ ಮೇಲೆ ಪ್ರತಿಕೂಲವಾದ ಪರಿಣಾಮ ಬೀರಿತ್ತೆಂಬುದರಲ್ಲಿ ನಮಗೆ ಆಶ್ಚರ್ಯವಾಗದು. ಇಂಥಾ ಸಂಗತಿಗಳ ಬಗ್ಗೆ ಲೋಕದಲ್ಲಿ ಸಾಮಾನ್ಯವಾಗಿರುವದು ಸ್ವಾರ್ಥ ಹಾಗು ಹೆಮ್ಮೆಯ ಮನೋಭಾವವೆಂಬದು ನಮಗೆ ತಿಳಿದಿರುವದು. ಸೌಲನು ಕೋಪ ಮತ್ಸರದಿಂದ ತುಂಬಿದವನಾಗಿ ಅಂದಿನಿಂದ ದಾವೀದನನ್ನು ಅಸೂಯೆಯಿಂದ ನೋಡುತ್ತಿದ್ದನು. ಆತನನ್ನು ಒಬ್ಬ ಪ್ರತಿಸ್ಪರ್ಧಿಯನ್ನಾಗಿ ಗುರುತಿಸಿಕೊಂಡಿದ್ದನು. ದಾವೀದನು ನಿಜವಾದ ಒಬ್ಬ ದೇವರ ಸೇವಕನೆಂಬುದನ್ನೂ ಅಲ್ಲದೆ ದೇವರ ಆಶೀರ್ವಾದವು ಅವನ ಮೇಲೆ ಇರುವದೆಂಬುದನ್ನೂ ಸಹ ಸೌಲನು ಗ್ರಹಿಸಿಕೊಂಡಿದ್ದನು. ಯೋನಾತಾನನು ಪ್ರತಿಯಾಗಿ ವಿಭಿನ್ನ ರೀತಿಯ ಮನಸ್ಸಿನವನಾಗಿದ್ದು ದಾವೀದನನ್ನು ಹೆಚ್ಚುಹೆಚ್ಚಾಗಿ ಪ್ರೀತಿಸಿದ್ದನು, ಈ ನಿಖರವಾದ ಗುಣಲಕ್ಷಣದ ಕಾರಣದಿಂದಲೇ ಆತನ ತಂದೆಯು ದಾವೀದನನ್ನು ಹಗೆಮಾಡುವಂತೆ ನಡೆಸಿತ್ತು.

ಆತ್ಮಿಕ ಇಸ್ರಾಯೇಲ್ಯರಿಗೆ ಇರುವ ಪಾಠ

ಅಭಿಷಕ್ತನಾದ ದಾವೀದನು ಸಭೆಯನ್ನು ಅಂದರೆ ಕರ್ತನಿಂದ ಅಭಿಷೇಕಿಸಲ್ಪಟ್ಟವರನ್ನು ಪ್ರತಿನಿಧಿಸುವನೆಂದೂ, ಅವರು ಕ್ರಮೇಣ ತಮ್ಮ ಶಿರಸ್ಸಾದ ಯೇಸುವಿನೊಡನೆ ಲೋಕ ಸಾಮ್ರಾಜ್ಯದ ಸಿಂಹಾಸನವನ್ನು ಏರಿದವರಾಗಿ ಮನುಕುಲವನ್ನು ಆಶೀರ್ವದಿಸಿ ಅವರನ್ನು ಉನ್ನತಸ್ಥಾನಕ್ಕೆ ತಂದು ಅವರೆಲ್ಲರನ್ನು ಸೈತಾನನು ಹೇರಿದ ನೊಗದಿಂದ, ಪಾಪಮರಣದಿಂದ ಬಿಡುಗಡೆ ಮಾಡುವರೆಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡವರಾಗಿ, ಈ ಪಾಠದ ಸಾರಾಂಶವನ್ನು ಬಹು ಸೂಕ್ತವಾಗಿ ನಾವು ಈ ವರ್ಗಕ್ಕೆ ಅನ್ವಯಮಾಡಬಹುದು. ಕೆಡುಕನ ಮೇಲಿನ, ತಮ್ಮ ಸ್ವಂತ ಶರೀರದಲ್ಲಿರುವ ಪಾಪದ ಮೇಲಿನ ಅವರ ವಿಜಯವು, ಮತ್ತು ಅವರು ಸಾಧಾರಣವಾಗಿ ನಡೆಸುವ ನಂಬಿಕೆಯ ಪರವಾದ ಒಳ್ಳೆಯ ಹೋರಾಟವು ಯೋನಾತಾನನ ವರ್ಗದ ಕೆಲವರ ಮನ್ನಣೆಯನ್ನು ದೇವರ ವಾಕ್ಯದಲ್ಲಿನ "ಅಮೂಲ್ಯವೂ ಉತ್ಕೃಷ್ಟವೂ ಆದ ವಾಗ್ದಾನದ" ಮೂಲಕವಾದ ಆದರಣೆಯ ಸಹಿತವಾಗಿ ಹೊಂದುವರು. (2 ಪೇತ್ರ 1:4) ಆದರೆ ಪಾಪದ ಮೇಲಿನ ಈ ವಿಜಯಗಳು ಈ ವರ್ಗಕ್ಕೆ ಲೋಕದವರ ಪ್ರೀತಿಯನ್ನು ದೊರಕಿಸಿಕೊಡುವದಿಲ್ಲ, ಕರ್ತನ ಆತ್ಮವನ್ನು ಹೊಂದದೆ ಇದ್ದು ಸ್ವಾರ್ಥ ಮನೋಭಾವವುಳ್ಳ ಅಂದರೆ ಸೌಲನಲ್ಲಿ ಸೂಚಿತವಾದ ಆತ್ಮವುಳ್ಳವರ ಪ್ರೀತಿಯನ್ನು ದೊರಕಿಸಿ ಕೊಡುವದಿಲ್ಲ. ಈ ಸ್ಥಿತಿಯಲ್ಲಿರುವರ ಬಗ್ಗೆ ಕರ್ತನು ಮುನ್ನೆಚ್ಚರಿಕೆ ನೀಡಿ ಹೀಗೆ ಹೇಳಿರುವನು–"ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷವಾಡಿತ್ತೆಂದು ತಿಳುಕೊಳ್ಳಿರಿ." ಆತನು ನಮಗೆ ಹೇಳಿರುವದೇನಂದರೆ ನಾವು ಬೆಳಕಿನ ಮಕ್ಕಳಾಗಿದ್ದೇವೆಂದೂ ನಮ್ಮ ಬೆಳಕು ಜನರ ಮುಂದೆ ಪ್ರಕಾಶಿಸುವಂತೆಮಾಡಬೇಕೆಂದೂ ಅಲ್ಲದೆ ನಾವು ಇದನ್ನು ಮಾಡುವದರಲ್ಲಿ ನಂಬಿಗಸ್ತರಾಗಿರುವಷ್ಟರ ಪ್ರಮಾಣದಲ್ಲಿ ಕತ್ತಲಿನ ಮಕ್ಕಳ ವಿರೋಧವನ್ನು ನಮ್ಮ ಮೇಲೆ ಬರಮಾಡುವದು; ಯಾಕಂದರೆ ಕತ್ತಲಿನ ಮಕ್ಕಳು ಬೆಳಕಿಗಿಂತ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿಸುವರು, ನೀತಿಗಿಂತ ಹೆಚ್ಚಾಗಿ ಪಾಪವನ್ನು ಪ್ರೀತಿಸುವರು, ಪ್ರೀತಿಗಿಂತಲೂ ನಿಜವಾಗಿ ಸ್ವಾರ್ಥವನ್ನು ಆಶಿಸುವರು.

ಬಹುಶಃ ಸೌಲನು ಈಗ ಹೆಸರಿನ ಕ್ರೈಸ್ತಸಭೆಯ ವ್ಯವಸ್ಥೆಯಲ್ಲಿದ್ದವರಾಗಿ ರಾಜ್ಯಾಡಳಿತವನ್ನು ನಡೆಸುತ್ತಿದ್ದು ಅದರ ಮೇಲೆ ಪ್ರಭಾವಬೀರುತ್ತಿರುವ ಹೆಸರಿನ ದೇವರ ರಾಜ್ಯದವರನ್ನು ಸಹ ಪ್ರತಿನಿಧಿಸುವನು. ಮನುಷ್ಯರಲ್ಲಿ ಯಾವ ಪದವಿ ಬಿರುದುಗಳನ್ನು ಪಡೆಯದಿದ್ದು, ಮನುಷ್ಯರಿಂದ ಅಭಿಷೇಕಿಸಲ್ಪಡದವರಾಗಿ, ಇಲ್ಲವೇ ಮನುಷ್ಯರಲ್ಲಿ ಮಾನ್ಯತೆಯಿಲ್ಲದೇ ಇರುವಂಥವರು ಕರ್ತನ ಆಶೀರ್ವಾದವನ್ನು ಹೊಂದುತ್ತಿರುವದನ್ನು ಇವರು ಗ್ರಹಿಸುವಾಗ ಅವರ ಯಶಸ್ಸಿನ ಬಗ್ಗೆ ಅಸೂಯೆವುಳ್ಳವರಾಗಿರುವರು; ಪ್ರಸ್ತುತಕಾಲದ ಸತ್ಯವು ಲೋಕದಲ್ಲಿ ಪ್ರಸರಿಸಿ ಏಳಿಗೆಯಾಗುತ್ತಿರುವದು ಬಾಬೇಲಿನ ಸಂಸ್ಥೆಗಳಿಗೆ ನಿಶ್ಚಯವಾಗಿ ಮಾರಕವಾಗುವದೆಂಬುದನ್ನು ಅವರು ಗ್ರಹಿಸುತ್ತಿರುವರು. ಸತ್ಯಕ್ಕೆ ಸಿಗುತ್ತಿರುವ ಪ್ರತಿ ಯಶಸ್ಸು, ದೇವಾನುಗ್ರಹವು ಇದರ ಕಡೆಗೆ ಬರುತ್ತಿರುವದರ ಪ್ರತಿಯೊಂದು ಸಾಕ್ಷ್ಯಾಧಾರ, ಇವುಗಳು ಅವರಲ್ಲಿ ರೋಷ ಪ್ರತಿಭಟನೆ ಹಗೆತನ ಅಸೂಯೆ ಕಲಹ ಮುಂತಾದವುಗಳಿಂದ ಕೂಡಿದ ದುರಾತ್ಮವು ಹುಟ್ಟಿಕೊಳ್ಳುವಂತೆ ಮಾಡುತ್ತಿರುವದಾಗಿ ತೋರುವದು; ಇವು "ಶರೀರಭಾವದ ಹಾಗು ಸೈತಾನನ ಕೃತ್ಯಗಳಾಗಿರುವವು."

ಸೌಲನು ದುಷ್ಪ್ರಭಾವಕ್ಕೆ ಒಳಗಾಗಿ ಪ್ರವಾದಿಸಿದಂಥದ್ದು ಹಿಂದಿನ ಕಾಲದಲ್ಲಿ ಹಲವು ಸಾರಿ ಪ್ರಯೋಗಿಸಲಾದ ದುರಾತ್ಮ ಶಕ್ತಿಗೆ ಸಂಪೂರ್ಣವಾಗಿ ಹೋಲಿಕೆಯಲ್ಲಿರುವಂತೆ ತೋರುತ್ತದೆ. ಅಲ್ಲದೆ ಹತ್ತಿರದ ಭವಿಷ್ಯತ್ತಿನಲ್ಲಿ ಬಾಬೇಲು ತೋರ್ಪಡಿಸುವ ಅಧಿಕಾರದ ಬಗ್ಗೆ ಹೇಳಿರುವದೇನಂದರೆ ಮೃಗದ ಪ್ರತಿರೂಪವು ಸ್ವಲ್ಪ ಕಾಲದಲ್ಲೇ ಎಷ್ಟರ ಮಟ್ಟಿಗೆ ಜೀವಪಡೆಯುವದೆಂದರೆ ಅದು ತನ್ನನ್ನು ವಿರೋಧಿಸುವವರೆಲ್ಲರ ಮೇಲೆ ಆಕಾಶದಿಂದ ಬೆಂಕಿಯನ್ನು ಬೀಳುವಂತೆ ಮಾಡುವದೆಂಬುದು; ಹೇಗಂದರೆ ಅದು ಸ್ಪಷ್ಟವಾಗಿ ತನ್ನೊಡನೆ ಸಹಾನುಭೂತಿ ಸಮ್ಮತಿಯನ್ನು ಹೊಂದದೆ ಇರುವವರ ಮೇಲೆ ಕರ್ತನ ಹೆಸರಿನ ಮತ್ತು ಅಧಿಕಾರದ ಮೇಲೆ ಸರ್ವಶಕ್ತನ ಮೂಲಕವಾದ ಶಾಪ ಪ್ರತೀಕಾರದ ರೋಷಾಗ್ನಿಯನ್ನು ಉಚ್ಚರಿಸಿ ವ್ಯಕ್ತಪಡಿಸುವದು. ಸೌಲನು ದಾವೀದನ ಮೇಲೆ ಎರಡು ಸಾರಿ ತನ್ನ ಈಟಿಯನ್ನು ಎಸೆದಿದ್ದಂತೆ ಅದು ಬಿರುಸು ನುಡಿ, ತಪ್ಪು ವರದಿ, ಅವಹೇಳನವೆಂಬ ಈಟಿಯ ಮೂಲಕವಾಗಿ ನಮ್ಮನ್ನು ಸಂಹರಿಸಲು ಸಹ ಅದು ಪ್ರಯತ್ನಿಸಬಹುದು. ಆದರೆ ದಾವೀದನಿಗೆ ಈಟಿಯಿಂದ ಏಟುಬೀಳದೆ ಇದ್ದ ಪ್ರಕಾರವೇ, ನಮಗೆ ಶಾರೀರಿಕವಾಗಿ ಕರ್ತನು ಯಾವುದನ್ನಾದರೂ ಬರವಾಡಿದಾಗ್ಯೂ, ಹೊಸ ಸೃಷ್ಟಿಗಳಾಗಿ ನಾವು ಹಾನಿಗೊಳಗಾಗಲಾರೆವು. ಆತನ ಅಭಿಷಕ್ತರಿಗೆ–ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ

ಕಾರ್ಯಗಳು ಅನುಕೂಲವಾಗುತ್ತದೆ." ಆತನ ವಾಕ್ಯವೆಂದರೆ– "ನಾನು ಅಭಿಷೇಕಿಸಿದವರನ್ನು ಮುಟ್ಟಬಾರದು, ನನ್ನ ಪ್ರವಾದಿಗಳಿಗೆ ಯಾವ ಕೇಡನ್ನೂ ಮಾಡಬಾರದು" ಮತ್ತೆ ಆತನು ಹೇಳಿರುವದು "ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ." ಆಂದರೆ ಯಾವದೂ ನಿಮ್ಮ ನಿಜವಾದ, ಉತ್ಕೃಷ್ಟವಾದ ಹಿತಾಸಕ್ತಿಗಳಿಗೆ ಹಾನಿಮಾಡುವದಿಲ್ಲವೆಂಬದು.

"ಮತ್ಸರವು ಪಾತಾಳದಷ್ಟು ಕ್ರೂರ"

ಜ್ಞಾನಿಯ ಈ ಮಾತುಗಳು ಅನೇಕ ಶತಮಾನಗಳಿಂದ ಲೋಕದವರ ಅನುಭವಗಳ ಮೂಲಕವಾಗಿ ಸತ್ಯಪೂರ್ಣವಾದ– ವುಗಳೆಂದು ರುಜುವಾತುಪಡಿಸಿರುತ್ತವೆ. ಮತ್ಸರವು ಪ್ರೀತಿಯಿಂದ ಹುಟ್ಟಿದ ಶಿಶುವೆಂದು ಹೇಳಲ್ಪಟ್ಟಿರುವದು. ಆದರೂ ತಂದೆತಾಯಿಗಳು ಈ ಶಿಶುವನ್ನು ಉಸಿರುಕಟ್ಟಿಸಿ ಸಂಹರಿಸಲು ತ್ವರೆಪಡದಿದ್ದಲ್ಲಿ ಅದು ತಂದೆತಾಯಿಗಳನ್ನು ವಿಷಪೂರಿತರನ್ನಾಗಿ ಮಾಡುವವರೆಗೂ ವಿಶ್ರಮಿಸಲಾರದು."

ನೂತನ ಸೃಷ್ಟಿಗಳಿಗಿರುವ ಪಾಠವೆಂದರೆ ಮತ್ಸರ, ಅಸೂಯೆ, ದ್ವೇಷ, ಕಲಹದ ವಿರುದ್ಧ ವಿಶೇಷವಾಗಿ ಎಚ್ಚರದಿಂದಿರಬೇಕೆಂಬದು. "ಆಯಲ್ಪಟ್ಟವರ" ಅಂತಿಮ ಪರೀಕ್ಷೆಯು ಬಹುವಾಗಿ ಈ ವಿಧದಲ್ಲಿರುತ್ತದೆಂಬುದರಲ್ಲಿ ಸಂದೇಹವಿಲ್ಲ. "ಅದರ ಮುಂದೆ ನಿಲ್ಲುವದಕ್ಕೆ ಯಾರು ಶಕ್ತರು" ಎಂಬುದೇ ಒಂದು ಸಮಸ್ಯೆಯಾಗಿರುವದು. ಹೀಗಾಗಿ ಅದು ಕರ್ತನ, ಹಾಗು ನೀತಿಸತ್ಯತೆಯ ಪರವಾಗಿ ಅಂದರೆ ದೇವರ ಹಾಗು ಸಹೋದರ ಪ್ರೀತಿಯ ಪರವಾಗಿ ನಿಲ್ಲುವಂಥವರನ್ನು ಆಕರ್ಷಿಸುತ್ತಿರುವದು. ನಾವು ನಿಜವಾಗಿಯೂ ನಮ್ಮ ಜೀವಿತಗಳನ್ನು ಪ್ರತಿಷ್ಠಿಸಿಕೊಂಡದ್ದೇಯಾದಲ್ಲಿ ಅಂದರೆ ನಮ್ಮ ಜೀವಿತಗಳನ್ನು ಕರ್ತನ ಸೇವೆಗೆ, ಹಾಗು ಆತನ ಸತ್ಯತೆಗೆ, ಅಲ್ಲದೆ ಸಹೋದರ ಸೇವೆಗೆ ಮುಡುಪಾಗಿ ಇಟ್ಟುಕೊಂಡದ್ದೇಯಾದಲ್ಲಿ ಪ್ರೀತಿ ನಂಬಿಗಸ್ತಿಕೆಗಳನ್ನು ತೋರ್ಪಡಿಸುವದಲ್ಲದೆ ಮತ್ತೆ ಯಾವ ಅರ್ಥವನ್ನೂ ಕೊಡಲಾರದು! ಯಾವುದೇ ಕಹಿಬೇರು, ಕಟುವಾದ ಮಾತುಗಳು, ಯಾವುದೇ ಅಸೂಯೆಯುಳ್ಳ ಆಲೋಚನೆಗಳು ನಮ್ಮ ಹೃದಯದಲ್ಲಿ ಪ್ರವೇಶಿದ್ದಾದಲ್ಲಿ ಅದು ಯಾವ ಸಹೋದರ ಇಲ್ಲವೇ ಸಹೋದರಿಯ ಕಡೆಗೆ ತಿರುಗಿಸಲ್ಪಟ್ಟಿರುವದೋ ಅವರನ್ನು ಮಲಿನಗೊಳಿಸುವದು ಮಾತ್ರವಲ್ಲದೆ ನಮ್ಮ ಹೃದಯ– ಗಳನ್ನೂ ವಿಷಪೂರಿತವನ್ನಾಗಿಸಿ ಆ ಮೂಲಕವಾಗಿ ಪ್ರೀತಿಯ ಮನೋಭಾವವನ್ನು ಕರ್ತನ ಆತ್ಮವನ್ನು ನಾಶಮಾಡುವದೂ ಖಂಡಿತ; ಅಲ್ಲದೆ ನಮ್ಮಿಂದ ಹೊರಡುವ ಕರ್ತನಿಂದ ದೂರವಾದ ಈ ದುರಾತ್ಮವು ಕ್ರಿಸ್ತನ ದೇಹವಾಗಿರುವ ಅನೇಕ ಮಂದಿಯನ್ನು ಕಲುಷಿತಗೊಳಿಸಿ ಅಪವಿತ್ರರನ್ನಾಗಿ ಮಾಡುವ ಸಾಧ್ಯತೆಯಿರುವದು. ಹೀಗಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ಎಷ್ಟರ ಮಟ್ಟಿನ ಎಚ್ಚರಿಕೆ ವಹಿಸಲು ಬದ್ಧರಾಗಿದ್ದೇವೆ; ನಮ್ಮ ಆಲೋಚನೆ, ನಮ್ಮ ಆಸಕ್ತಿ, ನಮ್ಮ ಉದ್ದೇಶಗಳೆಲ್ಲವನ್ನೂ ವಿಶ್ಲೇಷಣೆಮಾಡಿ ಅವುಗಳನ್ನು ಹೇಗೆ ನಮ್ಮ ಕರ್ತನು ಸೂಚಿಸಿರುವ ಮಟ್ಟಿಗೆ ಪ್ರೀತಿ ಸಂಬಂಧವಾದ ಆಜ್ಞೆಯೊಂದಿಗೆ ಸಂಪೂರ್ಣವಾಗಿ ಹೊಂದಾಣಿಸಿ – ಕೊಳ್ಳಬೇಕಿರುವದು; ನಮ್ಮ ಕರ್ತನು ಹೇಳಿರುವದೇನಂದರೆ– "ನಾನು ನಿನಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ." ಅಂದರೆ ಪರಸ್ಪರ ಹಿತಾಸಕ್ತಿ ಕ್ಷೇಮ ಗೌರವಗಳ ಸಂಬಂಧವಾಗಿ ಪ್ರಾಣಕೊಡಲು ಇಚ್ಛೈಯುಳ್ಳವರಾಗಿರಬೇಕು!

ಇದಕ್ಕೆ ಪ್ರತಿಯಾಗಿ ದಾವೀದನಲ್ಲಿದ್ದ ಕರ್ತನ ಆತ್ಮವು ಆತನನ್ನು ತನ್ನ ವೈರಿಗಳ ಕಡೆಗೆ ಸಾಧುವೂ ಕರುಣೆಯೂ ಔದಾರ್ಯವೂ ಉಳ್ಳವನಾಗಿರುವಂತೆ ಮಾಡಿತ್ತು. ಸೌಲನು ರೌದ್ರಾವೇಶದಿಂದ ತನ್ನ ಕಡೆಗೆ ಈಟಿಯನ್ನು ಎಸೆದಾಗ ದಾವೀದನು ನಿಜವಾಗಿಯೂ ಅರಸನ ಸನ್ನಿಧಿಯಿಂದ ಓಡಿಹೋಗಿದ್ದನು; ಅಲ್ಲದೆ ಕರ್ತನಲ್ಲಿನ ಹಾಗೂ ಆತನು ಮಾಡಿದ ದೈವಾನುಗ್ರಹದ ಮೇಲಿನ ನಂಬಿಕೆಗಿಂತ ಕಡಿಮೆಯಾದ್ದು ಯಾವದೂ ದಾವೀದನನ್ನು ಅರಸನ ಸಂಗೀತಗಾರನಾಗಿ ತನ್ನ ಹೃದಯದ ಹಾಗು ತನ್ನ ಸ್ವರದ ಸುಮಧುರ ಸಂಗೀತದ ಮೂಲಕವಾಗಿ ಸೌಲನನ್ನು ಹರ್ಷಗೊಳಿಸಿ ಆತನಲ್ಲಿದ್ದ ವ್ಯಾಕುಲತೆಯನ್ನು ಹೊರದೂಡುವವನಾಗಿ ಆತನ ಸೇವೆಯಲ್ಲಿ ಮುಂದುವರೆಯಲು ಆತನನ್ನು ಸಶಕ್ತನನ್ನಾಗಿ ಮಾಡಿತ್ತೆಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು. ನಮ್ಮನ್ನು ವಿರೋಧಿಸುವವರ ಬಗ್ಗೆ ನಮ್ಮ ಮನೋಭಾವವು ಇಂಥದ್ದೇ ಆಗಿರಬೇಕು. ನಮ್ಮ ಕಡೆಗೆ ದುಷ್ಟ ವಿಧಾನವನ್ನು ಅನುಸರಿಸುವ ಸಹಜವಾದ ಪ್ರವೃತ್ತಿಯೇನಂದರೆ ಇದಕ್ಕೆ ಪ್ರತಿಯಾಗಿ ಪ್ರತಿಕಾರ ಮನೋಭಾವವನ್ನು ಕೆರಳಿಸಿ ಕೇಡಿಗೆ ಪ್ರತಿಯಾಗಿ ಕೇಡನ್ನು, ನಿಂದನೆಗೆ ಪ್ರತಿಯಾಗಿ ನಿಂದನೆಯನ್ನು, ದೋಷಾರೋಪಣೆಗೆ ಪ್ರತಿಯಾಗಿ ದೋಷಾರೋಪಣೆಯನ್ನು ಮಾಡುವಂತೆ ನಡೆಸುವದೆಂಬದು. ಇಂಥಾ ಒಂದು ವಿಧಾನದಿಂದಾಗುವ ಪ್ರತಿಫಲವು ನಮ್ಮ ವಿರೋಧಿಗಳಿಗೆ ಹಾನಿಯನ್ನುಂಟುಮಾಡುವ ಸಾಧ್ಯತೆಯಿರುವದರ ಸಹಿತವಾಗಿ. ನಮ್ಮನ್ನೂ ಹಾನಿಗೊಳಿಸು ವದು. ದಾವೀದನ ವಿಧಾನವು ಸೂಕ್ತವಾಗಿತ್ತು; ಆತನು ದೇವರನ್ನು ಕಾದುಕೊಂಡಿದ್ದು, ಅತನು ದೇವಾನುಗ್ರಹಕ್ಕೆ ತನ್ನನ್ನು ಒಪ್ಪಿಸಿಕೊಟ್ಟಿದ್ದನು. ಆತನ ಹಾಗು ನಮ್ಮ ಎಣಿಕೆಯ ಪ್ರಕಾರ ದೇವಜ್ಞಾನಕ್ಕೆ ಅಸಂಗತವಾದುದನ್ನು ತಪ್ಪಿಸುವ ದೇವರಶಕ್ತಿಗೆ ಹೊರತಾಗಿ ಯಾವ ಸಂಗತಿಯೂ ಸಂಭವಿಸಲಾಗದು. ಹೀಗಾಗಿ ಈ ಪರೀಕ್ಷಾರ್ಥವಾದ ಅನುಭವಗಳು ದಾವೀದನಿಗೆ ದೊಡ್ಡ ರೀತಿಯ ಗುಣಾಭಿವೃದ್ಧಿಗೊಳಿಸಿ, ಹಾಗು ಆತನ ಹೃದಯವನ್ನು ಬಲಪಡಿಸಿ ದೇವರ ಚಿತ್ತಕ್ಕೆ ಹೊಂದಾಣಿಸಿಕೊಳ್ಳುವ ಉದ್ದೇಶವುಳ್ಳದ್ದಾಗಿದ್ದವು.

ದೈವನೇಮಿತ ಬದಲಾವಣೆಗಳ ಅಂಗೀಕಾರ

ಸೌಲನು ಅನೇಕ ವಿಧಗಳ ಮೂಲಕವಾಗಿ ದಾವೀದನಲ್ಲಿ ಪ್ರತಿಕಾರ ಮನೋಭಾವ ಉಂಟಾಗಲು ಯತ್ನಿಸಿದ್ದನು; ಆತನನ್ನು ಕೊಲ್ಲಲು ಎರಡು ಸಾರಿ ಪ್ರಯತ್ನಿಸಿದ್ದಲ್ಲದೆ ಯಾವನು ಗೊಲ್ಯಾತನ ಮೇಲೆ ಜಯಹೊಂದುವನೋ ಅವನು ತನ್ನ ಅಳಿಯನಾಗುವನು ಎಂದು ಆತನು ಬಹಿರಂಗವಾಗಿ ಮಾಡಿದ ವಾಗ್ದಾನದ ಒಂದು ಅಂಶವನ್ನು ಹಿಂದಕ್ಕೆ ತೆಗೆದುಕೊಂಡಿದ್ದನು. ಸೌಲನು ಅನುಸರಿಸಿದ

ಮಾರ್ಗವು ಆ ಕಾಲದವರೆಗೂ ಅದೆಷ್ಟು ಅವಿವೇಕ ತುಂಬಿದ ಸಂಕುಚಿತ ದೃಷ್ಟಿಯುದಾಗಿತ್ತು! ದೇವಾನುಗ್ರಹವನ್ನು ಅನುಸರಿಸಿದವನಾಗಿ ಸೌಲನು ದಾವೀದನ ಪರವಾದ ತನ್ನ ಹೊಣೆಗಾರಿಕೆಯನ್ನು ಈಡೇರಿಸುವವನಾಗಿ ದಾವಿದನನ್ನು ಅಳಿಯನನ್ನಾಗಿ ಮಾಡಿಕೊಂಡು ಮುಂದೆ ಅಂತಿಮವಾಗಿ ದಾವೀದನು ದೇವರ ನೇಮಕದ ಪ್ರಕಾರ ರಾಜ್ಯಾಧಿಕಾರವನ್ನು ಪಡಕೊಂಡಾಗ ತನ್ನ ಕುಟುಂಬವನ್ನು ಆತನ ಕುಟುಂಬದೊಂದಿಗೆ ನಿಕಟವಾಗಿ ಹೆಣೆದುಕೊಳ್ಳುವಂತೆ ಮಾಡಿಕೊಳ್ಳಬಹುದಿತ್ತು. ಆದರೆ ಮತ್ಸರ ಹಗೆತನಗಳು ಸಾಮಾನ್ಯವಾಗಿ ತಮ್ಮ ಅತ್ಯುನ್ನತ ಹಿತಾಸಕ್ತಿಗೆ ಕುರುಡನ್ನಾಗಿ ಮಾಡುತ್ತವೆ. ಹೀಗಾಗಿ ಸೌಲನು ತನ್ನ ಮಗಳನ್ನು ದಾವೀದನಿಗೆ ಹೆಂಡತಿಯಾಗಿ ಮಾಡುವದರಿಂದ ಹಿಂದೆಗೆದುಕೊಂಡಿದ್ದನು, ಅಲ್ಲದೆ ಆತನ ಮುಂದಿನ ಹೆಜ್ಜೆಯು ದಾವೀದನನ್ನು ಸೇನೆಗೆ ಕಳುಹಿಸಿ ಒಂದು ಪಟಾಲಮ್ಮಿನ ದಂಡನಾಯಕನನ್ನಾಗಿ ಮಾಡಿ ಯುದ್ಧದಲ್ಲಿ ಆತನ ಧೀರತೆಯು ಆತನಿಗೆ ಮರಣವುಂಟು ಮಾಡುವದೆಂದು ಅಪೇಕ್ಷಿಸಿ ನಿರೀಕ್ಷಿಸಿದ್ದನು. ಆದರೆ ದೇವರು ದಾವಿದನೊಂದಿಗಿದ್ದು ಆತನನ್ನ ಆಶೀರ್ವದಿಸಿದ್ದನು, ಅಲ್ಲದೆ ದಾಖಲೆಯಲ್ಲಿರುವದೇನಂದರೆ "ಯೆಹೋವನು ಇವನ ಸಂಗಡ ಇದ್ದದರಿಂದ ಎಲ್ಲಾ ಕಾರ್ಯಗಳಲ್ಲಿ ಇವನು ವಿವೇಕದಿಂದ ನಡೆಯುತ್ತಿದ್ದನು." ಎಂಬದು.

ಹೀಗೆಯೇ ಈಗ ತಮ್ಮ ಮನಸ್ಸುಗಳನ್ನು ಹೃದಯಗಳನ್ನು ಬೆಳಗಿಸಿ ತಮ್ಮನ್ನು ಸರಿಯಾದ ಮಾರ್ಗದಲ್ಲಿ ಮಾರ್ಗದರ್ಶನ ಮಾಡುವ ಸಲುವಾಗಿ ಕರ್ತನ ಆತ್ಮವನ್ನು ಮತ್ತು ಶಕ್ತಿಯನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹೊಂದಿದವರ ಸಂಗತಿಯೂ ಇರುವದು. ಇವರೆಲ್ಲರೂ ಪರಲೋಕದ ಈ ಪ್ರಭಾವಕ್ಕೆ ಒಳಗಾದವರಾಗಿರಲು ಅಲ್ಲದೆ ಪರಾತ್ಪರನ ಮಕ್ಕಳಾಗಿರಲು ಇವರು ಜ್ಞಾನವಂತರಾಗಿ ವಿವೇಕದಿಂದ ವರ್ತಿಸಬೇಕು; ಈ ರೀತಿಯಲ್ಲಿ ಅವರು ಪರಲೋಕದಲ್ಲಿರುವ ತಮ್ಮ ತಂದೆಯನ್ನು ಮಹಿಮೆ – ಪಡಿಸಿ, ಕರ್ತನಾದ ಯೇಸುವನ್ನು ಸನ್ಮಾನಿಸುವವರಾಗಿ, ತಮ್ಮನ್ನು ನಂಬಿಗಸ್ತರ ಮನೆತನದವರೆಲ್ಲರಿಗೆ ಸಹಾಯಕರನ್ನಾಗಿ ಮಾಡಿಕೊಂಡು, ತಮ್ಮ ಬೆಳಕನ್ನು ಜನರ ಮುಂದೆ ಹೇಗೆ ಪ್ರಕಾಶಿಸುವಂತೆ ಮಾಡಬೇಕೆಂದರೆ ಜನರೆಲ್ಲರೂ ಇವರು ಯೇಸುವಿನೊಡನೆ ಇದ್ದು ಅತನಲ್ಲಿ ಕಲಿತುಕೊಂಡವರಾಗಿ – ರುವರೆಂಬ ಅಂಶವನ್ನು ಅವರು ತಮ್ಮ ತಿಳುವಳಿಕೆಗೆ ತಂದು– ಕೊಳ್ಳುವಂತಾಗಬೇಕು.

ಆದರೆ ದಾವೀದನು ತಾನು ಹೆಚ್ಚು ಜ್ಞಾನವಂತನಾಗಿ ನಡೆದುಕೊಂಡಷ್ಟೂ ಅರಸನಾದ ಸೌಲನು ಹೆಚ್ಚು ಮತ್ಸರವುಳ್ಳವನಾಗುತ್ತಾ ಬಂದಿದ್ದನು. ಕರ್ತನು ದಾವೀದನನ್ನು ಅಧಿಕವಾಗಿ ಆಶೀರ್ವದಿಸಿ ಆತನನ್ನು ದೀನತೆಯ ಜೀವನದಲ್ಲಿ ಮತ್ತು ಜ್ಞಾನದಲ್ಲಿ ಅಭಿವೃದ್ಧಿಪಡಿಸಿದಷ್ಟೂ ವಾಸ್ತವದಲ್ಲಿ ಅವನು ಅರಸನಿಂದ ಹೆಚ್ಚು ವಿರೋಧವನ್ನು ಎದುರಿಸುತ್ತಾಬಂದಿದ್ದನು. ಅಲ್ಲದೆ ಹೀಗೆಯೇ ಇದು ನಮ್ಮ ವಿಷಯದಲ್ಲಿಯೂ ಖಂಡಿತವಾಗಿ ಇರುವದು. ನಾವು ಎಷ್ಟರ ಪ್ರಮಾಣದಲ್ಲಿ ಸ್ವಸ್ಥತೆಯ ಆತ್ಮವನ್ನು ಹೊಂದಿ ಕರ್ತನ ಮತ್ತು ಸಹೋದರರ ವಿಷಯದಲ್ಲಿ ಹೆಚ್ಚು ಆಸಕ್ತರಾಗಿ ಪ್ರಾಣವನ್ನು ನೀಡುವಷ್ಟರ ಮಟ್ಟಿಗೆ ಸತ್ಯದ ಸೇವೆಯಲ್ಲಿ ನಿರತರಾಗಿರುವೆವೋ ಇದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕರ್ತನೊಂದಿಗೆ ಹೃದಯದ ಸಾಮರಸ್ಯವಿಲ್ಲದವರಲ್ಲಿ ಮತ್ಸರ ಮತ್ತು ಭಯವನ್ನು ನಾವು ಉಂಟುಮಾಡಬಹುದು. ಆದರೆ ಎಲ್ಲಾ ಇಸ್ರಾಯೇಲ್ಯರು ಮತ್ತು ಯೆಹೂದ್ಯರು ದಾವೀದನನ್ನು ಪ್ರೀತಿಸಿದ್ದರೆಂದು ನಾವು ದಾವೀದನ ವಿಷಯದಲ್ಲಿ ಓದಿರುವಂತೆಯೇ ನಿಜವಾದ ದೇವಜನರೆಲ್ಲರ ವಿಷಯದಲ್ಲಿಯೂ ಇರುವದೆಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು; ಯಾಕಂದರೆ ಯಾರು ಕರ್ತನ ಆತ್ಮವನ್ನು ಹೊಂದಿರುವರೋ ಹಾಗು ಯಾರು ದಾವೀದನ ವರ್ಗಕ್ಕೆ ಸೇರಿರುವರೋ ಅವರು ಹೆಚ್ಚು ಹೆಚ್ಚು ಪ್ರೀತಿಸಲ್ಪಟ್ಟು ಗೌರವಿಸಲ್ಪಡುವರು. ಸೈತಾನನು ಅಂತಿಮವಾಗಿ ಬಂಧಿಸಲ್ಪಟ್ಟು ಆಕಾಶದ ಕೆಳಗೆ ಕರ್ತನು ತನ್ನ ರಾಜ್ಯವನ್ನು ಸ್ಥಾಪಿಸಿದ ಪರಿಣಾಮವಾಗಿ ಕುರುಡರೆಲ್ಲರ ಕಣ್ಣುಗಳು ತೆರೆದುಕೊಂಡು ಕಿವುಡರೆಲ್ಲರ ಕಿವಿಗಳು ಕೇಳಲ್ಪಡುವಾಗ ಕರ್ತನೊಂದಿಗೆ ಹೊಂದಾಣಿಕೆಯಲ್ಲಿ ಇಲ್ಲದ ಜನರೆಲ್ಲರೂ ಕ್ರಿಸ್ತನೆಂಬ ದಾವೀದನ ವರ್ಗದವರ ನಂಬಿಗಸ್ತಿಕೆಯನ್ನು ಗುರುತಿಸಿಕೊಂಡು ಅವರ ಪರವಾಗಿ ದೇವರನ್ನು ಕೊಂಡಾಡುವರು.

"ಯೆಹೋವ ದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಾ."

ನಮ್ಮ ಸುವರ್ಣಮಯ ಪಥ್ಯಭಾಗವು ದಾವೀದನ ವರ್ಗದವರಿಗೆ ಅಂದರೆ ಪ್ರಿಯರೂ ಅಭಿಷೇಕಿಸಲ್ಪಟ್ಟವರೂ ಆಗಿರುವ ಕ್ರಿಸ್ತನ ದೇಹದ ಸದಸ್ಯರಿಗೆ ಒಂದು ವಿಶೇಷ ಪ್ರೋತ್ಸಾಹವಾಗಿರುವದು. ಇವರಿಗೆ ಯೆಹೋವದೇವರು ಸೂರ್ಯನೂ ಗುರಾಣಿಯೂ ಆಗಿರುವನು. ಇವರಿಗೆ ಆತನು ಜ್ಞಾನಪ್ರಕಾಶವನ್ನು ನೀಡುವದು ಮಾತ್ರವಲ್ಲದೆ ತಾನು ಇವರಿಗೆ ದಯಪಾಲಿಸುವ ಆಶೀರ್ವಾದದಿಂದ ಯಾವ ಹಾನಿಯೂ ಉಂಟಾಗದಂತೆಯೂ ನೋಡಿಕೊಳ್ಳುವನು. ಆತನು ಅವರನ್ನು ವೈರಿಗಳೆಲ್ಲರಿಂದ ಹಾಗು ಯಾವುದೇ ವಿಧದಲ್ಲಿ ಹಾನಿಗೊಳಿಸುವ ಪ್ರವೃತ್ತಿಯುಳ್ಳ ಎಲ್ಲವುಗಳಿಂದಲೂ ಕಾಪಾಡುವನು; "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ..." (ರೋಮಾ 8:28) ಹೀಗಿರುವಲ್ಲಿ ಇಂಥಾ ಆಶೀರ್ವಾದಪೂರ್ಣ ಭರವಸದೊಡನೆ ನಾವು ಹರ್ಷವುಳ್ಳವರಾಗಿ ಆತ್ಮವಿಶ್ವಾಸದಿಂದ ದೇವರು ನಂಬಿಗಸ್ತರಿಗೆ ವಾಗ್ದಾನಮಾಡಿದ ಮಹಿಮೆಯುಳ್ಳ ಪ್ರತಿಫಲದಲ್ಲಿ ಒಂದು ಪಾಲನ್ನು ಹೊಂದುವ ವಿಶ್ವಾಸದಿಂದ ನಾವು ಭವಿಷ್ಯತ್ತಿನ ಕಾಲವನ್ನು ಎದುರು ನೋಡಬಹುದು.

ದಾವೀದನಿಗೆ ತನ್ನ ಅಭಿಷೇಕದ ಹಾಗೂ ತನಗೆ ಆನಂತರದಲ್ಲಿ ಬರುವ ಆಶೀರ್ವಾದದ ವಿಷಯವಾಗಿ ಕೇವಲ ಆಲೋಚಿಸುವದರ ಬಗ್ಗೆ ನೀಡದೇ ಇದ್ದಂತೆಯೇ ನಮಗೂ ಸಹ ನಂಬಿಗಸ್ತರಿಗೆ ದೇವರು ವಾಗ್ದಾನಮಾಡಿರುವ ರಾಜ್ಯಮಹಿಮೆಗಳ ಬಗ್ಗೆ ಕೇವಲ ಆಲೋಚಿಸುವಂತೆ ನೀಡಲಾಗಿರುವದಿಲ್ಲ.

ಯಾಕಂದರೆ ಹೀಗೆ ಮಾಡುವದರಿಂದ ನಾವು ಉಬ್ಬಿಕೊಂಡವರಾಗಿ ಆ ಮೂಲಕವಾಗಿ ಬರಲಿರುವ ಆಶೀರ್ವಾದಗಳಲ್ಲಿ ಪಾಲನ್ನು ಪಡೆಯಲು ಅನರ್ಹರನ್ನಾಗಿಸಿಕೊಳ್ಳುವೆವು. ವಾಸ್ತವದಲ್ಲಿ, ಬರುತ್ತಲಿರುವ ಭವ್ಯತೆಯುಳ್ಳ ಭಾಗ್ಯಕರ ಮಹಿಮಾಪ್ರಭಾವದ ಸಂಗತಿಯನ್ನು ಮರೆಯದವರಾಗಿ, ಸಹಜವಾಗಿಯೇ ದಾವೀದನದಂತೆ ಈಗಿನ ಸಂಗತಿಗಳ ಕಡೆಗೆ ನಮ್ಮ ಗಮನವನ್ನು ತಿರುಗಿಸಬೇಕು. ನಮ್ಮ ಕೈಗೆ ಸಿಕ್ಕಿದ ಕೆಲಸವನ್ನು ನಾವು ಪೂರ್ಣಾಸಕ್ತಿಯಿಂದ ಮಾಡುವದು ಈಗ ನಮ್ಮ ಸಂಗತಿಯಾಗಿರಬೇಕು, ಕೇವಲ ಹೀಗೆ ಮಾಡುವದರಿಂದಲೇ ನಾವು ಕರೆಯಲ್ಪಟ್ಟದ್ದನ್ನು ಆಯಲ್ಪಟ್ಟದ್ದನ್ನು ದೃಢಪಡಿಸಿಕೊಳ್ಳಲು ಸಾಧ್ಯವೆಂಬುದನ್ನು ನೆನಪಿನಲ್ಲಿಟ್ಟುಕೊಂಡಿರಬೇಕು.

ಸೌಲನು [ದಾವೀದನನ್ನು] ವಿರೋಧಿಸ ಸಲುವಾಗಿ ತೆಗೆದುಕೊಂಡ ಪ್ರತಿಯೊಂದು ಹೆಜ್ಜೆಯೂ ದಾವೀದನಲ್ಲಿ ಒಂದು ಆಶೀರ್ವಾದವನ್ನು ಉಂಟುಮಾಡಿ ಅತನಿಗೆ ವಿವಿಧ ಅನುಭವಗಳನ್ನು ಒದಗಿಸಿ ಮುಂದೆ ತಾನು ಅರಸನಾಗಿ ಉಪಯುಕ್ತನಾಗಲು ಅರ್ಹನನ್ನಾಗಿ ಮಾಡಿ ಅವನನ್ನು ಸಿದ್ಧಗೊಳಿಸಿತ್ತು. ಹೀಗೆಯೇ ಈಗ ಲೋಕ ಶರೀರ ಹಾಗು ಸೈತಾನನ ಮೂಲಕವಾಗಿ ಕರ್ತನು ನಮ್ಮ ಮೇಲೆ ಬರಮಾಡುವ ಪರಿಶೋಧನೆ ಸಂಕಷ್ಟ ಮತ್ತು ನಿರಾಶೆ ಇವೆಲ್ಲವುಗಳನ್ನು ನಾವು ನಂಬಿಗಸ್ತರಾಗಿ ಬಳಸಿಕೊಂಡಲ್ಲಿ ಇವು ನಮ್ಮನ್ನು ಕರ್ತನ ಭವ್ಯವಾದ ರಾಜ್ಯದ ಸೌಭಾಗ್ಯಗಳಲ್ಲಿ ಪಾಲನ್ನು ಹೊಂದಲು ಸಿದ್ಧರನ್ನಾಗಿಸುವದಲ್ಲದೆ ಮತ್ತೇನೂ ಮಾಡಲಾರವು.

*****

ಹಿಂಸೆಗೊಳಗಾದವನೊಬ್ಬನ ನಂಬಿಕೆ

ರೀಪ್ರಿಂಟ್ಸ್ ಪುಟ 5662

1 ಸಮುವೇಲ 19

"ಯೆಹೋವನ [ಮೇಲಿಟ್ಟ] ಭರವಸ[ದಿಂದ] ಉದ್ಧಾರ [ಸುರಕ್ಷೆ] – ಜ್ಞಾನೋ. 29:25

ಫಿಲಿಷ್ಟಿಯರೊಡನೆ ಯುದ್ಧವು ಮುಂದುವರೆಯುತ್ತಿದ್ದು ದಾವೀದನನ್ನು ಒಬ್ಬ ಕ್ರಮಬದ್ಧನಾದ ಸೈನಿಕನನ್ನಾಗಿ ಮಾಡಿ ಅವನನ್ನು ಒಂದು ಪಟಾಲಮ್ಮಿನ ಮೇಲೆ ದಂಡನಾಯಕನನ್ನಾಗಿಸಿ ಅರಸಾನ ಸೌಲನು ತನ್ನೊಡನೆ ನಿಕಟವಾಗಿ ಸಂಪರ್ಕ–ದಲ್ಲಿಟ್ಟುಕೊಂಡಿದ್ದನು. ದಾವೀದನು ಎಲ್ಲಿ ಯುದ್ಧದಲ್ಲಿ ಭಾಗವಹಿಸುತ್ತಿದ್ದನೋ ಅಲ್ಲೆಲ್ಲಾ ವಿಜಯದ ಮೇಲೆ ವಿಜಯವು ಲಭಿಸುತ್ತಿತ್ತು; ಮತ್ತು ಜನರು ಹೊಗಳುತ್ತಿದ್ದುದ್ದನ್ನು ಅರಸನಾದ ಸೌಲನು ನೋಡಿದ್ದು ಇದು ತನ್ನನ್ನು ದಾವೀದನಿಗೆ ವಿರೋಧವಾಗಿ ತಿರುಗಿಕೊಳ್ಳುವಂತೆ ಮಾಡಿತ್ತು. ದಾವೀದನು ಒಂದು ವಿಜಯವನ್ನು ಪಡೆದು ಹಿಂದಿರುಗುತ್ತಿದ್ದಾಗ ಆ ಹಳ್ಳಿಯ ಹೆಂಗಸರು ಮತ್ತು ಹುಡುಗಿಯರು ಹೊರಗೆ ಬಂದು–

"ಸೌಲನು ಸಾವಿರಗಟ್ಟಲೆ ಕೊಂದನು;
ದಾವೀದನು ಹತ್ತು ಸಾವಿರ ಗಟ್ಟಲೆ ಕೊಂದನು"

ಎಂದು ಹಾಡುತ್ತಿದ್ದಾಗ ಈ ಮನೋಭಾವವು ತನ್ನ ಅತ್ಯಂತ ಮುಖ್ಯವಾದ ಘಟ್ಟವನ್ನು ತಲುಪಿತ್ತು.

ಅಸೂಯೆಯ ದಳ್ಳುರಿಯು ಸೌಲನನ್ನು ಪೂರ್ಣವಾಗಿ ಅವರಿಸಿಕೊಂಡಿದ್ದು ಆಗಿನಿಂದ ದಾವೀದನನ್ನು ಸಂಹರಿಸುವದು ಆತನ ಉದ್ದೇಶಗಳಲ್ಲಿ ಒಂದಾಗಿದ್ದಂತೆ ತೋರುತ್ತದೆ. ದಾವೀದನನ್ನು ಈಗಾಗಲೇ ಅರಸನ ಉತ್ತರಾಧಿಕಾರಿಯನ್ನಾಗಿ ಸಮುವೇಲನಿಂದ ಅಭಿಷೇಕಿಸಲ್ಪಟ್ಟಿರುವ ಸಂಗತಿಯನ್ನು ಸೌಲನಿಂದ ತಡೆಹಿಡಿದು ಗುಪ್ತವಾಗಿಡಲಾಗಿತ್ತು. ಅವನು ಕೇವಲ ತಿಳಿದಿದ್ದೇನಂದರೆ ತಾನು ಅಮಾಲೇಕ್ಯರ ವಿಷಯವಾದ ದೇವರ ಚಿತ್ತವನ್ನು ನೆರವೇರಿಸಲು ವಿಫಲನಾದ ಪರಿಣಾಮವಾಗಿ ರಾಜ್ಯವನ್ನು ತನ್ನಿಂದ ಹಾಗು ತನ್ನ ಕುಟುಂಬದಿಂದ ತೆಗೆದು ಬೇರೊಬ್ಬನಿಗೆ ಕೊಡಲ್ಪಡುವದೆಂದು ಪ್ರವಾದಿಯಾದ ಸಮುವೇಲನು ತಿಳಿಸಿದ್ದನೆಂಬದು. ಇದು ಎಂದೂ ನಿಜವಾಗದಿರಬಹುದೆಂದೂ ತನ್ನ ಮಗನಾದ ಯೋನಾತಾನನು ತನ್ನ ಉತ್ತರಾಧಿಕಾರಿಯಾಗಬಹುದೆಂಬುದನ್ನು ಸೌಲನು ನಿರೀಕ್ಷಿಸಿದ್ದ ಸಾಧ್ಯತೆಗಳಿರುವದು.

ಅಸೂಯೆಯು ಸ್ವಾರ್ಥವೆಂಬ ಬಿತ್ತನೆಯ ಬೀಜ ಹೊಡೆದಂಥ ವಿಷಪೂರಿತ ಹಣ್ಣಾಗಿರುವದು. ಅದು ವಿವೇಚನಾ ಶಕ್ತಿಯನ್ನು ಅಸಮತೋಲನಗೊಳಿಸಿ ಸಂತೋಷವನ್ನು ನಂದಿಸುವದು. ಇದನ್ನು ಹೊಂದಿದವನನ್ನು ತೀವ್ರವಾದ ಖಿನ್ನತೆಗೆ ಒಳಪಡಿಸುವದು ಹೀಗಾಗಿ ಇದು ಒಬ್ಬನನ್ನು ನಿಯಂತ್ರಿಸಿ–ಕೊಂಡಿದ್ದಾಗ ಅವನು ನಿಜವಾಗಿಯೂ ಹುಚ್ಚನಾಗುವನು. ಇದು ಅರಸನಾದ ಸೌಲನ ವಿಷಯದಲ್ಲಿ ನಿದರ್ಶಿತವಾಗಿದ್ದುದು ಮಾತ್ರವಲ್ಲದೆ ಇದು ಪ್ರತಿಯೊಬ್ಬ ಮಾನವ ಜೀವಿಯ ಅನುಭವಗಳಲ್ಲಿ ಹೆಚ್ಚು ಕಡಿಮೆ ನಿದರ್ಶಿಸಲ್ಪಟ್ಟಿರುತ್ತದೆ. ಅಸೂಯೆ ಎಂಬದು ಏನೆಂಬುದನ್ನು ಅನುಭವದ ಮೂಲಕವಾಗಿ ತಿಳಿದುಕೊಳ್ಳದೆ ಇರುವವಂಥವನು ಯಾರಿದ್ದಾನೆ? ಇದರ ಬಗ್ಗೆ ಹೆಚ್ಚು ತಿಳಿದಂತೆಲ್ಲಾ ಇದು ಹೆಚ್ಚು ಕೆಟ್ಟದ್ದಾಗಿ ಕಂಡುಬರುವದು. ಇದು ಬೆಳೆದವರನ್ನು ಸಹಿತವಾಗಿ ಮಕ್ಕಳನ್ನೂ ಕೊಲ್ಲುವವರನ್ನಾಗಿ ಮಾಡುತ್ತದೆ. ಇದು ಮನೆಗಳನ್ನು ಸಹಿತವಾಗಿ ವಾಣಿಜ್ಯೋದ್ಯಮ–ಗಳನ್ನು ಭಗ್ನಗೊಳಿಸುವದು. ಇದು ಸ್ವಾರ್ಥದ ಅತಿ ಭಯಾನಕ–ವಾದ ಅದೇ ಸಮಯದಲ್ಲಿ ಅತಿ ಅವಿವೇಕತನದ ವ್ಯಕ್ತಪಡಿಸುವಿಕೆ–ಯಾಗಿದೆ. ಇದು ತನ್ನಲ್ಲಿರುವದನ್ನು ಗುರುತಿಸಿಕೊಂಡ ಪ್ರತಿಯೊಬ್ಬನೂ ಎಚ್ಚೆತ್ತುಕೊಂಡು ಪ್ರಾಮಾಣಿಕವಾಗಿ ಅದರ ಉಸಿರನ್ನು ಕಟ್ಟಿಸಿ ಜಾಗರೂಕತೆಯ ಮೂಲಕವಾಗಿ ಅದರ ಮೇಲೆ ಜಯಸಾಧಿಸಲು ಪರಿಶ್ರಮಿಸಬೇಕು, ಅಲ್ಲದೆ ಒಬ್ಬನು ಕ್ರೈಸ್ತನಾದಲ್ಲಿ ಅವನು ಪ್ರಾರ್ಥನೆಯ ಮೂಲಕವಾಗಿ ಇದನ್ನು ಮಾಡಬೇಕು.

ಸೌಲನ ಅಸೂಯೆಯು ಕುತಂತ್ರದ್ದಾಗಿತ್ತು

ಅಸೂಯೆಯ ಆವೇಶದ ಅಧೀನದಲ್ಲಿದ್ದಾಗ ಅರಸನಾದ ಸೌಲನು ದೇವರಿಂದ ಕಳುಹಿಸಲ್ಪಟ್ಟ ಒಂದು ದುರಾತ್ಮವನ್ನು ಹೊಂದಿದ್ದನೆಂದು ವರ್ಣಿಸಲಾಗಿರುವದು, ಇನ್ನೂ ಸೂಕ್ತವಾಗಿ ಹೇಳುವದಾದರೆ ದೇವರಿಗೆ ವಿರುದ್ಧವಾಗಿರುವ ಒಂದು ದುರಾತ್ಮವು ಅಂದರೆ ಕರುಣೆ ನ್ಯಾಯ ಪ್ರೀತಿಯುಳ್ಳ ದೇವರಾತ್ಮಕ್ಕೆ ವಿರುದ್ಧವಾದಂಥದ್ದೆಂದು ನಾವು ಹೇಳುವದು. ಅರಸನು ಈ ಖಿನ್ನತೆಯು ಆವೇಶದಲ್ಲಿ ಕಷ್ಟಪಡುತ್ತಿದ್ದು ಇದನ್ನು ಹಿಂಬಾಲಿಸಿಕೊಂಡು ಫಿಲಿಷ್ಟಿಯರೊಡನೆಯ ಯುದ್ಧದ ನಿಲುಗಡೆ ಬಂದ ಸಮಯದಲ್ಲಿ ಯವನಸ್ಥನಾದ ದಾವೀದನಿಗೆ ತನ್ನ ಕಿನ್ನರಿ ಭಾರಿಸುವ ಕೌಶಲ್ಯದಿಂದ ಸೌಲನನ್ನು ಕೆಲವು ಕಾಲ ಶಾಂತಗೊಳಿಸಲು ಸಾಧ್ಯವಾಗಿತ್ತು; ಆದರೂ ಅರಸನ ವಂಚನೆಯ ಮನಃಸ್ಥಿತಿಯು ಅವನಿಗೆ ತಿಳಿದಿತ್ತು; ಅಲ್ಲದೆ ಎರಡು ಸನ್ನಿವೇಶಗಳಲ್ಲಿ ಸೂಕ್ಷ್ಮ ದೃಷ್ಟಿಯುಳ್ಳ ಆತನ ಕಣ್ಣುಗಳು ಸರಿಯಾದ ಸಮಯದಲ್ಲಿ ಸೌಲನು ಸಾಧಾರಣವಾಗಿ ತನ್ನ ಕೈಯಲ್ಲಿ ಇರುತ್ತಿದ್ದ ರಾಜದಂಡವಾಗಿದ್ದ ಈಟಿಯನ್ನು ತನ್ನ ಮೇಲೆ ಎಸೆಯುವದರಿಂದ ತಪ್ಪಿಸಿಕೊಳ್ಳುವಂತೆ ಮಾಡಿತ್ತು.

ದಾವೀದನನ್ನು ಜಗಳಕ್ಕೆ ಎಳೆದು ಅದನ್ನು ರಾಜದ್ರೋಹವೆಂದು ಅರ್ಥೈಸಿ ಆ ಮೂಲಕವಾಗಿ ಆತನ ಮರಣವನ್ನು ನ್ಯಾಯಬದ್ಧವನ್ನಾಗಿಸುವ ಉದ್ದೇಶದಿಂದ ತನ್ನ ಹಿರಿಯ ಮಗಳನ್ನು ಹೆಂಡತಿಯನ್ನಾಗಿ ಮಾಡಿಕೊಡುವೆನೆಂದು ವಾಗ್ದಾನಮಾಡಿ ಆನಂತರದಲ್ಲಿ ಆಕೆಯನ್ನು ಬೇರೊಬ್ಬನಿಗೆ ಕೊಟ್ಟಿದ್ದನು. ಹೇಗೂ ದಾವೀದನು ವಿವೇಚನಾಯುಕ್ತನಾಗಿ ತಾನು ಇಂಥಾ ಗೌರವವನ್ನು ಅಪೇಕ್ಷಿಸಲು ಒಂದು ಕುಲೀನ ಮನೆತನದಿಂದ ಬಂದವನಲ್ಲವೆಂದು ವ್ಯಾಖ್ಯಾನಿಸಿದ್ದನು; ಇಲ್ಲವೇ ಅರಸನ ಮಗಳನ್ನು ವರಿಸಲು ತಕ್ಕಷ್ಟು ವಧುದಕ್ಷಿಣೆಯನ್ನು ತೆರೆಲು ಆತನು ಆರ್ಥಿಕವಾಗಿ ಶಕ್ತನಾಗಿರಲಿಲ್ಲ. ಮತ್ತೊಂದು ಕುತಂತ್ರವೆಂದರೆ ಅದು ಅರಸನ ಕಿರಿಯ ಮಗಳಾದ ಮೀಕಳಲನ್ನು ಮದುವೆಗೆ ನಿಶ್ಚಯಮಾಡಿಕೊಡುವದಾಗಿತ್ತು. ದಾವೀದನು ಮತ್ತೆ ಮಗಳಿಗೆ ತಾನು ಅನರ್ಹನೆಂದೂ ಅಲ್ಲದೆ ವಧುದಕ್ಷಣೆಯನ್ನು ಕೊಡುವಷ್ಟು ಸಂಪತ್ತು ತನ್ನಲ್ಲಿ ಇರುವದಿಲ್ಲವೆಂದು ಹೇಳಿದ್ದನು. ಆ ಕೂಡಲೇ ಸೌಲನು ವಧುದಕ್ಷಿಣೆಯು ನೂರು ಫಿಲಿಷ್ಟಿಯರನ್ನು ಕೊಂದುದರ ಸಾಕ್ಷಿಯನ್ನು ನೀಡಬೇಕೆನ್ನುವದಕ್ಕೆ ಒಡಂಬಟ್ಟಿದ್ದನು. ನಿಸ್ಸಂಶಯವಾಗಿ ಈ ಬೇಡಿಕೆಯನ್ನು ಈಡೇರಿಸುವ ಪ್ರಯತ್ನದಲ್ಲಿ ದಾವೀದನು ತನ್ನ ಪ್ರಾಣವನ್ನು ಕಳಕೊಳ್ಳುವನೆಂಬುದನ್ನು ಭರವಸೆಯಿಂದ ನಿರೀಕ್ಷಿಸಿದ್ದನು; ಆದಕ್ಕೆ ಬದಲಾಗಿ ಯುವಕನಾದ ದಾವೀದನು ಆ ಸಂಖ್ಯೆಯ ಎರಡರಷ್ಟು ಮಂದಿಯನ್ನು ಕೊಂದು ಸೌಲನ ಮಗಳಾದ ಮೀಕಳಲನ್ನು ಪಡಕೊಂಡಿದ್ದನು.

ಅರಸನು ಹುಚ್ಚು ಅಸೂಯೆ ಹೊಂದಿದವನಾಗಿ ತನ್ನ ಮಗನಾದ ಯೋನಾತಾನನಿಗೆ ಹಾಗು ತನ್ನ ಸಾಧಾರಣರಾದ ಆಸ್ಥಾನಿಕರಿಗೆ ದಾವೀದನು ನಿರ್ನಾಮವಾಗಬೇಕೆಂದು ಹೇಳಿದ್ದನು. ಯೋನಾತಾನನ ಮನೋಭಾವವು ಪ್ರೀತಿ ಹಾಗು ಭ್ರಾತೃತ್ವವುಳ್ಳದ್ದಾದಷ್ಟೂ ಆತನ ತಂದೆಯು ಕ್ರೌರ್ಯ ಅಸೂಯೆ ಸ್ವಾರ್ಥವುಳ್ಳವನಾಗಿದ್ದನು. ದಾವೀದನ ರಾಜ್ಯಗೌರವಗಳ ಪಡೆಯುವಿಕೆಯು ಫಲವಾಗಿ ಯೋನಾತಾನನು ನಷ್ಟಹೊಂದುವವನಾಗಿದ್ದನು. ಹೀಗಾಗಿ ಯೋನಾತಾನನ ಪ್ರೀತಿಯು ಒಂದು ಗಾದೆಯ ಮಾತಾಯಿತು. ಜೊತೆಗೆ ಆತನು ನಿಜವಾದ ಮನುಷ್ಯತ್ವ ಮತ್ತು ಭ್ರಾತೃತ್ವಗಳನ್ನು ಅಂದರೆ ಒಬ್ಬ ಸಂಧಾನಕಾರನ ಮನೋಭಾವವನ್ನು ಹೊಂದಿದ್ದನು. ಆತನು ದಾವೀದನ ಪರವಾಗಿ ತನ್ನ ತಂದೆಯ ಬಳಿಯಲ್ಲಿ ಮಧ್ಯಸ್ತಿಕೆ ವಹಿಸಿದ್ದನು. ಆತನ ಭಾಷೆಯು ತನ್ನ ಮಿತ್ರನಾದ ದಾವೀದನ ಪರವಾದ ಭ್ರಾತೃಗೌರವ ಸಹಿತವಾದ ಶ್ರದ್ಧೆಗೆ ಒಂದು ಸೊಗಸಾದ ಮಾದರಿಯಾಗಿತ್ತು. ಆತನು ಹೇಳಿದ್ದು: "ಒಡೆಯನು ತನ್ನ ಸೇವಕನಾದ ದಾವೀದನಿಗೆ ಅನ್ಯಾಯಮಾಡದಿರಲಿ; ಅವನು ನಿನಗೆ ದ್ರೋಹಮಾಡಲಿಲ್ಲ; ಅವನು ಮಾಡಿದ್ದೆಲ್ಲವೂ ನಿನ್ನ ಹಿತಕ್ಕಾಗಿಯೇ. ತನ್ನ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗಿ ಆ ಫಿಲಿಷ್ಟಿಯನನ್ನು ಕೊಂದನು; ಯೆಹೋವನು ಇಸ್ರಾಯೇಲ್ಯರಿಗೆ ಮಹಾ ಜಯವನ್ನುಂಟು ಮಾಡಿದನು. ನೀನು ಅದನ್ನು ನೋಡಿ ಸಂತೋಷಪಟ್ಟಿಯಲ್ಲಾ; ನೀನು ದಾವೀದನನ್ನು ನಿಷ್ಕಾರಣವಾಗಿ ಕೊಂದು ನಿರ್ದೋಷಿಯ ರಕ್ತವನ್ನು ಸುರಿಸಿದ ಅಪರಾಧಕ್ಕೆ ನೀನೇಕೆ ಗುರಿಯಾಗುತ್ತೀ."

ಸಂಧಾನಕಾರನ ಕೋರಿಕೆಯು ಫಲಕಾರಿಯಾಗಿತ್ತು. ಅರಸನು ತನ್ನ ಪಟ್ಟನ್ನು ಸಡಿಲಗೊಳಿಸಿದ್ದನು.. ದಾವೀದನನ್ನು ಮತ್ತೆ ಕರೆತಂದು ಆತನು ಕುಟುಂಬದ ಒಬ್ಬ ಸದಸ್ಯನನ್ನಾಗಿ ಮಾಡಲ್ಪಟ್ಟಿದ್ದನು. ಆದರೆ ಇದು ಕೇವಲ ಆ ಸಮಯಕ್ಕೆ ಮಾತ್ರ ಸೀಮಿತವಾಗಿತ್ತು. ಅರಸನಿಗೆ ಕೆಲವು ಘನವಂತಿಕೆ ಸ್ವಭಾವವು ಇಲ್ಲದೇ ಇರಲಿಲ್ಲ, ಆದರೆ ಅದು ಆಳವಾಗಿ ಬೇರೂರಿರಲಿಲ್ಲ. ಇವು ಆತನ ಜೀವನವನ್ನು ನಿಯಂತ್ರಿಸುತ್ತಿರಲಿಲ್ಲ. ಬದಲಾಗಿ ಆತನು ದುಷ್ಟ ಮನಸ್ಸಿನ ಸ್ವಾರ್ಥ ಮನಸ್ಸಿನ, ಅಸೂಯೆ ಮನಸ್ಸಿನ ನಿಯಂತ್ರಣದಲ್ಲಿದ್ದು ಅದು ದೇವರ ಮನಸ್ಸಿಗೆ ಮನೋಭಾವಕ್ಕೆ ದೂರವಾದ್ದದ್ದಾಗಿಯೂ ವಿರುದ್ಧವಾದದ್ದಾಗಿಯೂ ಇತ್ತು.

ಶೀಘ್ರದಲ್ಲೇ, ಮತ್ತೆ ಅಸೂಯೆಯ ಉದ್ವೇಗದಲ್ಲಿ ಅರಸನು ಈಟಿಯನ್ನು ಎಸೆಯಲು ಚಲನೆ ಮಾಡುವದು ಮಾತ್ರವಲ್ಲದೆ ಅದನ್ನು ಮಾರಣಾಂತಿಕ ಉದ್ದೇಶದಿಂದ ದಾವೀದನು ಕುಳಿತ್ತಿದ್ದ ಹಿಂದಿನ ಗೋಡೆಗೆ ಹತ್ತಿಕೊಳ್ಳುವಂತೆ ಎಸೆದಿದ್ದನು; ದಾವೀದನು ಶೀಘ್ರವಾಗಿ ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದನು. ದಾವೀದನು ತನ್ನ ಕೋಣೆಗೆ ಹೋದನು; ಆದರೆ ಅಲ್ಲಿ ಒಬ್ಬ ಕಾವಲುಗಾರನನ್ನು ಇರಿಸಿ ದಾವೀದನು ಅಲ್ಲಿಂದ ಹೊರಗೆ ಬಂದಕೂಡಲೇ ಅವನನ್ನು ಕೊಂದುಹಾಕಲು ಅವನಿಗೆ ಸೂಚಿಸಿಲಾಗಿತ್ತು. ಆತನ ಹೆಂಡತಿಯು ಆತನಿಗೆ ಇದನ್ನು ತಿಳಿಸಿ ಕಿಟಕಿಯಿಂದ ಇಳಿದು ಸುರಕ್ಷಿತನಾಗಿ ಹೋಗಲು ಆತನಿಗೆ ಸಹಾಯ ಮಾಡಿದ್ದಳು. ಆ ಮನೆಯು ಗೋಡೆಯ ಮೇಲೆ ಕಟ್ಟಿದ್ದ ಸಾಧ್ಯತೆಗಳಿದ್ದು, ಇದು ಭಕ್ತನಾದ ಪೌಲನು ಬಿಡುಗಡೆಹೊಂದಿದ ಸಂಗತಿಗೆ ಸಮನಾಗಿಯೇ ಆಗಿತ್ತು.

ಒಬ್ಬ ಹೆಂಡತಿಗಾಗಿ ಇನ್ನೂರು ಕೊಲೆಗಳು

ಕುಚೋದ್ಯಗಾರರು ಈ ಪಾಠದ ಒಂದು ಗುಣಲಕ್ಷಣವನ್ನು ಹಿಡಿದುಕೊಂಡು ಸತ್ಯವೇದವು ಕೊಲೆಯನ್ನು ಪ್ರೋತ್ಸಾಹಿಸುತ್ತಿದ್ದು ಹೀಗಾಗಿ ಅದು ನೀತಿಗೆ ವಿರುದ್ಧವಾಗಿಯೂ ಮತ್ತು ನೀತಿಸ್ವರೂಪನಾದ ದೇವರಿಗೆ ವಿರುದ್ಧವಾಗಿಯೂ ಇರುವದೆಂದು ಆಪಾದಿಸಿರುವರು. ಅವರು ಹೇಳುವದು: "ಇಲ್ಲಿ ದಾವೀದನು

ಬಹು ವಿವೇಚನೆಯುಳ್ಳ ಹಾಗು ಕರ್ತನ ಆತ್ಮವನ್ನು ಹೊಂದಿರುವ, ಸ್ವಸ್ಥಚಿತ್ತನಾದ ಒಬ್ಬ ಪ್ರವಾದಿಯನ್ನಾಗಿ ಕಂಡುಕೊಳ್ಳುವೆವು; ಆದರೂ ಒಬ್ಬ ಹೆಂಡತಿಯ ಬೆಲೆಯಾಗಿ ಇನ್ನೂರು ಮಾನವ ಜೀವಿಗಳ ಪ್ರಾಣವನ್ನು ತೆಗೆಯುವವನಾಗಿದ್ದನೆಂಬುದನ್ನು ನಾವು ನೋಡುತ್ತೇವೆ ಆದರೂ ಸತ್ಯವೇದದಲ್ಲಿ ಇದರ ಬಗ್ಗೆ ಖಂಡನೆಯಾಗಿ ಒಂದು ಮಾತನ್ನಾದರೂ ಹೇಳಿರುವದನ್ನು ಕೇಳುವದಿಲ್ಲ."

ಇಂಥಾ ಆರೋಪಗಳನ್ನು ಮತ್ತು ವಾದಗಳನ್ನು ಒಂದು ವಿವೇಚನಾಪೂರ್ಣ ವಿಧಾನದಿಂದ ಎದುರಿಸಬೇಕು–ಇದನ್ನು "ನಿನ್ನೊಡನೆ ವಾದಿಸುವದರಿಂದ ಪ್ರಯೋಜನವೇನೂ ಇರುವದಿಲ್ಲ; ನೀನು ಒಬ್ಬ ನಾಸ್ತಿಕ" ಎಂದು ಹೇಳಿ ಮುಂದೆ ಹೋಗಬಾರದು. ನೀತಿಯನ್ನು ಅನುಸರಿಸುವವನು ನೀತಿವಂತನು; ಅನೀತಿಯನ್ನು ಅನುಸರಿಸುವವನು ಅನೀತಿವಂತನು. ಸತ್ಯವೇದದ ಈ ಪ್ರಸ್ತಾವನೆಯು ದೇವರಿಗೂ ಮತ್ತು ದಾವೀದನ ಸಹಿತವಾಗಿ ಇತರರಿಗೂ ಅನ್ವಯವಾಗುತ್ತದೆ. ಆದರೆ ಇದರ ಬಗ್ಗೆ ವಿಚಾರಣೆಮಾಡುವಾಗ ನಮ್ಮ ವಿಷಯವನ್ನು ನಿಷ್ಪಕ್ಷಪಾತ ಮನಸ್ಸಿನಿಂದ ನಾವು ಪ್ರಾರಂಭಿಸಬೇಕು. ಪಕ್ಷಪಾತದ ದೃಷ್ಟಿಯಿಂದ ಖಂಡನೆಮಾಡುವದಕ್ಕೆ ಬದಲಾಗಿ ನಾವು ವಾಸ್ತವದಲ್ಲಿ ಈ ನಡಾವಳಿಯನ್ನು ಹೇಗೆ ಸತ್ಯವೇದವು ಎಲ್ಲೆಡೆ ಸಮರ್ಥಿಸಿಕೊಂಡು ಬರುವ ನೀತಿತತ್ವಗಳಿಗೆ ಹೇಗೆ ಸರಿಹೊಂದಿಸಬಹುದೆಂಬುದನ್ನು ವಿಚಾರಣೆಮಾಡಬೇಕು.

ಮೊದಲನೆಯದಾಗಿ, ಧರ್ಮಶಾಸ್ತ್ರದ ಅಧೀನದಲ್ಲಿರುವ ಒಬ್ಬ ಯೆಹೂದ್ಯನಿಗೂ ಕ್ರಿಸ್ತನ ನೇತೃತ್ವದಲ್ಲಿರುವ ಒಬ್ಬ ಕ್ರೈಸ್ತನಿಗೂ ಇರುವ ವ್ಯತ್ಯಾಸವನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕು.



ದಾವೀದನು ಕಿಟಕಿಯ ಮೂಲಕವಾಗಿ ತಪ್ಪಿಸಿಕೊಳ್ಳುವದು
– ಗುಸ್ತಾವ್ ದೋರ್

ಎರಡನೆಯದಾಗಿ, ಮೃತಿಹೊಂದುವವರು ಇನ್ನೂ ಜೀವಂತ–ವಾಗಿದ್ದು ಕೂಡಲೇ ನಿತ್ಯಯಾತನೆಗೆ ಹೋಗುವರೆಂಬುದನ್ನು ಸತ್ಯವೇದವು ಬೋಧಿಸುವದಿಲ್ಲವೆಂಬುದನ್ನು ಮನಸ್ಸಿನಲ್ಲಿಟ್ಟು–ಕೊಳ್ಳಬೇಕು. ಅದು ಬೋಧಿಸುವದೇನಂದರೆ ಮೃತರಾದವರೂ ನಿಜವಾಗಿಯೂ ಮೃತರಾಗಿರುವರೆಂದೂ ಅವರಿಗೆ ದೇವರು ನೀಡಿರುವ ನಿರೀಕ್ಷೆಯೆಂದರೆ ಮುಂದೆ ಒಂದು ಅನುಕೂಲಕರ –ವಾದ ಸನ್ನಿವೇಶಗಳಲ್ಲಿ ಮೆಸ್ಸೀಯನ ಭಾಗ್ಯಕರವಾದ ರಾಜ್ಯದಲ್ಲಿ ಮರಣದ ಸ್ಥಿತಿಯಿಂದ ಪುನರುತ್ಥಾನವಾಗುವದೆಂಬದು.

ಪಾಪಕ್ಕೆ ಆಗುವ ದಂಡನೆಯು ಮರಣವಾಗಿರುವದು, ಮರಣ ನಂತರದಲ್ಲಿನ ಯಾತನೆಯಲ್ಲವೆಂಬುದನ್ನು ಸತ್ಯವೇದವು ನಮಗೆ ತಿಳಿಸುತ್ತದೆ. ಅದು ನಮಗೆ ತಿಳಿಸುವದೇನಂದರೆ ತಂದೆಯಾದ ಆದಾಮನಿಗೆ ಆತನು ಬುದ್ಧಿಪೂರ್ವಕವಾಗಿ ಹಾಗು ಇಚ್ಛಾಪೂರ್ವಕವಾಗಿ ಮಾಡಿದ ಪಾಪಕ್ಕೆ ಈ ದಂಡನೆಯನ್ನು ನ್ಯಾಯಸಮ್ಮತವಾಗಿ ವಿಧಿಸಲಾಗಿತ್ತು. ಮನುಕುಲವು ಸಾಯುತ್ತಿರುವದು ವಂಶಪಾರಂಪರ್ಯ ನಿಯಮದ ಕಾರಣದಿಂದ; ಅಸ್ವಸ್ಥತೆಯ ಅಪರಿಪೂರ್ಣತೆಯ ಮರಣದ ಬೀಜವು ನಮ್ಮ ಜನನದ ಗಳಿಗೆಯಿಂದ ನಮ್ಮಲ್ಲಿರುವದು.

ಈ ದೃಷ್ಟಿಯಿಂದ, ಇಡೀ ನಮ್ಮ ಲೋಕವು ಮರಣ ದಂಡನೆಯ ಅಧೀನದಲ್ಲಿರುವ ತಪ್ಪಿತಸ್ಥರಿಂದ ಕೂಡಿದ ಲೋಕವಾಗಿರುವದು. ಇದು ದೇವದೂತರಿಗೆ ಕೊಡಲಾಗು–ವಂಥದ್ದು ಅಂದರೆ ಸಂತೋಷ ಸಮಾಧಾನ ಜೀವ ಪರಿಪೂರ್ಣತೆ ಇವುಗಳನ್ನು ದೇವರು ಮಾನವರಿಗೆ ತನ್ನ ವಿವಿಧ ರೀತಿಯ ವರ್ತನೆಗಳ ಮೂಲಕವಾಗಿ [ಕೊಟ್ಟು] ಸಮ್ಮತಿಸುತ್ತಿರುವದರ ಬಗ್ಗೆ ವಿವರಣೆಯನ್ನು ನೀಡುವದು. ಇದು ದೇವರು ಮರಣವನ್ನು ಉಂಟುಮಾಡುವಂಥ ಹಲವಾರು ಸನ್ನಿವೇಶಗಳನ್ನು ಅಂದರೆ ಕ್ಷಾಮ ವ್ಯಾಧಿ ಭೂಕಂಪ ಚಂಡಮಾರುತ ಮುಂತಾದವುಗಳು ಬರುವಂತಾಗಲು ಅನುವುಮಾಡುತ್ತಿರುವದರ ಬಗ್ಗೆ ನಮಗೆ ವಿವರಣೆಯನ್ನು ನೀಡುತ್ತದೆ. ಒಬ್ಬನ ಅವಿಧೇಯತೆಯ ಮೂಲಕವಾಗಿ ಎಲ್ಲರಿಗೂ ನ್ಯಾಯಸಮ್ಮತವಾದ ದಂಡನೆಯನ್ನು ವಿಧಿಸಿದ ಅದೇ ದೇವರು ಮರಣ ಪರ್ಯಂತರವಾದ ಕ್ರಿಸ್ತನ ವಿಧೇಯತೆಯ ಮೂಲಕವಾಗಿ ಎಲ್ಲರಿಗೂ ನೀತಿವಂತರೆಂದು ನಿರ್ಣಯಿಸುವ ಏರ್ಪಾಡು ಮಾಡಿರುವದನ್ನು ನಾವು ಕಾಣುವಾಗ ಸಂಗತಿಗಳನ್ನು ಒಂದು ಹೊಸ ಬೆಳಕಿನ ಮೂಲಕವಾಗಿ ಕಾಣಲು ಆರಂಭಿಸುತ್ತೇವೆ. ಮೆಸ್ಸೀಯನ ರಾಜ್ಯವು ಬೆಳಕು, ದೇವರ ವಿಷಯವಾದ ಪರಿಜ್ಞಾನ ಹಾಗು ದೇವಾನುಗ್ರಹಕ್ಕೆ ಹಿಂದಿರುಗುವ ಪೂರ್ಣ ಅವಕಾಶವನ್ನು ಮತ್ತು ನಿತ್ಯಜೀವವನ್ನು ಪಡೆಯುವ ಉದ್ದೇಶಕ್ಕಾಗಿಯೇ ಸ್ಥಾಪಿತವಾಗಬೇಕಿರುವದೆಂಬುದನ್ನು ನಾವು ಕಲಿತುಕೊಳ್ಳುವಾಗ ನಮ್ಮ ಹೃದಯವು ಆನಂದಿಸುವದು.

ನಮ್ಮ ಮೊದಲನೇ ಪ್ರಸ್ತಾವನೆಗೆ ಹಿಂದಿರುಗಿದವರಾಗಿ ನಾವು ಮನನಮಾಡಿಕೊಳ್ಳುವದೇನಂದರೆ ನಾವು ಈ ಸುವಾರ್ತಾಯುಗದಲ್ಲಿ ನಮ್ಮ ವಿಷಯವಾಗಿ ತೀರ್ಮಾನಿಸಿ–ಕೊಳ್ಳುವ ರೀತಿಯಲ್ಲಿಯೇ ದಾವೀದನ ಮತ್ತು ಆತನ ಕಾಲದ ಜನರ ವಿಷಯದಲ್ಲಿ ತೀರ್ಮಾನ ಮಾಡಬಾರದೆಂಬುದೇ. ಆತನನ್ನು ಮತ್ತು ಆತನ ಜನಾಂಗದವರನ್ನು ಸೀನಾಯಿ ಪರ್ವತದ ಬಳಿಯಲ್ಲಿ ನೀಡಲಾದ ಆಜ್ಞಾವಿಧಿಗಳ ಮೂಲಕವಾಗಿ ಅಂದರೆ

ಅದು–"ಕಣ್ಣಿಗೆ ಪ್ರತಿಯಾಗಿ ಕಣ್ಣು, ಹಲ್ಲಿಗೆ ಪ್ರತಿಯಾಗಿ ಹಲ್ಲು, ಜೀವಕ್ಕೆ ಪ್ರತಿಯಾಗಿ ಜೀವ." ಎಂಬುದರ ಮೂಲಕವಾಗಿ ತೀರ್ಪುಮಾಡಬೇಕು. ಕಾನಾನ್ ದೇಶದ ಜನರಿಗೆ ತಮ್ಮ ಅನೀತಿಯ ಪಾತ್ರೆಯು ತುಂಬುವಂತೆ ಬಿಡಲಾಗಿತ್ತೆಂದು ಇಸ್ರಾಯೇಲ್ಯರಿಗೆ ತಿಳಿಸಲಾಗಿರುವದು; (1 ಸಮುವೇಲ 15:2,3) ಹೀಗಾಗಿ ಅಬ್ರಹಾಮನ ಮಕ್ಕಳಿಗೆ ಆ ದೇಶವನ್ನು ಸಂಪೂರ್ಣವಾಗಿ ಕೊಡಲ್ಪಟ್ಟು ಅದನ್ನು ದೇವರ ಸಮ್ಮತಿಯಿಂದ ಸಾಧ್ಯವಾದಷ್ಟು ಶೀಘ್ರವಾಗಿ ಅದನ್ನು ವಶಪಡಿಸಿಕೊಳ್ಳಬೇಕೆಂದು ಇಸ್ರಾಯೇಲ್ಯರಿಗೆ ತಿಳಿಸಲಾಗಿತ್ತು. ಅವರು ತಮ್ಮ ವೈರಿಗಳನ್ನು ದೇವರ ವೈರಿಗಳಾಗಿರುವರೆಂದು ಹೇಳಿ ಅವರೆಲ್ಲರನ್ನು ಸಂಹರಿಸಬೇಕೆಂಬ ಕಾರ್ಯಭಾರವನ್ನು ವಹಿಸಲಾಗಿದ್ದು, ಕರ್ತನು ಹೀಗೆ ಸಂಹೃತ ರಾದವರೆಲ್ಲರಿಗೆ ಮುಂದೆ ಮೆಸ್ಸೀಯನ ರಾಜ್ಯದಲ್ಲಿ ಒಂದು ಏರ್ಪಾಡನ್ನು ಮಾಡಿರುವನೆಂಬುದನ್ನು ಸಹ ಅವರಿಗೆ ತಿಳಿಸಿರಲಿಲ್ಲ.

ಫಿಲಿಷ್ಟಿಯರು ಕಾನಾನ್ ದೇಶದಲ್ಲಿದ್ದರು; ಅಲ್ಲಿ ಅವರು ತಮ್ಮ ಸ್ವಂತ ಪಾಲನ್ನು ಹೊಂದಿರುವದು ಮಾತ್ರವಲ್ಲದೆ ಇಸ್ರಾಯೇಲ್ಯರು ಈಗಾಗಲೇ ಜಯಿಸಿಕೊಂಡಿದ್ದ ಭಾಗವನ್ನು ಆಕ್ರಮಿಸಿಕೊಂಡಿದ್ದರು. ಅವರು ಅನೇಕ ಇಸ್ರಾಯೇಲ್ಯರ ಜೀವಹರಣಮಾಡಿದ್ದರು. ಫಿಲಿಷ್ಟಿಯರನ್ನು ಮತ್ತು ಕಾನಾನಿನಲ್ಲಿ ನೆಲೆಸಿರುವಂಥ ಇತರ ಎಲ್ಲರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂಬದು ದೇವರು ಇಸ್ರಾಯೇಲ್ಯರಿಗೆ ಮಾಡಿದ ಆದೇಶಕ್ಕೆ ಇದು ಸಂಪೂರ್ಣ ಹೊಂದಾಣಿಕೆಯಲ್ಲಿತ್ತು. ದಾವೀದನು ಕೇವಲ ಇಸ್ರಾಯೇಲ್ಯರೆಲ್ಲರು ಯಾವುದನ್ನು ದೈವೀಕ ಯೋಜನೆಯಲ್ಲಿನ ದೈವೀಕ ಆಜ್ಞಾಪನೆಯೆಂದು ಗುರುತಿಸಿಕೊಂಡಿದ್ದರೋ ಕೇವಲ ಅದನ್ನೇ ಆತನು ಕಾರ್ಯಗತ ಮಾಡುತ್ತಾ ಬಂದಿದ್ದನು. ಕೇವಲ ಈ ಒಂದು ದೃಷ್ಟಿಯಿಂದಲೇ ದೈವೀಕ ಆಜ್ಞಾಪನೆಗಳು ಹಾಗು ಇಸ್ರಾಯೇಲ್ಯರ ಹಿಂದಿನ ನಡವಳಿಕೆಗಳು ಸೂಕ್ತವೆಂದು ಮಾನ್ಯಮಾಡಬೇಕು.

ನಮ್ಮ ಕರ್ತನ ವಿಮೋಚನಾ ಕಾರ್ಯದ ಹಾಗು ಪಂಚಾಶತ್ತಮ ದಿನದ ಆಶೀರ್ವಾದದ ಮೂಲಕವಾಗಿ ಆರಂಭವಾದ ನೂತನ ವ್ಯವಸ್ಥೆಯ ಅನುಸಾರವಾಗಿ ಸಭೆಯಾಗಿರುವ ಈ ಕಾಲಘಟ್ಟದ ಕರ್ತನ ಜನರು ಹೊಸ ವ್ಯವಸ್ಥಾಕ್ರಮದ ಅಧೀನತೆಯಲ್ಲಿದ್ದು ತಮ್ಮ ಮಾತಿನ ಹಾಗು ದೃಷ್ಟಾಂತದ ಮೂಲಕವಾಗಿ ಅವರು ಹಿಂದಿನ ಕಾಲದಲ್ಲಿ ಇಸ್ರಾಯೇಲ್ಯರು ದೈವೀಕ ನ್ಯಾಯನೀತಿಗೆ ಸಂಬಂಧಿಸಿದ ತತ್ವಗಳನ್ನು ನಿದರ್ಶನದ ಮೂಲಕವಾಗಿ ತೋರ್ಪಡಿಸಲು ಆಜ್ಞಾಪಿಸಿದ ಪ್ರಕಾರವೇ ಕರುಣೆಯ ಸಂಬಂಧದ ತತ್ವಗಳನ್ನು ದೃಷ್ಟಾಂತದ ಮೂಲಕವಾಗಿ ತೋರ್ಪಡಿಸಬೇಕಿರುವದು. ನಾವು ನಮ್ಮ ವೈರಿಗಳನ್ನು ಪ್ರೀತಿಸಿ ನಮ್ಮನು ಹಗೆಮಾಡುವವರಿಗೆ ಮತ್ತು ನಮ್ಮನ್ನು ಹಿಂಸಿಸಿ ನಮ್ಮ ಮೇಲೆ ಎಲ್ಲಾ ರೀತಿಯ ಕೆಟ್ಟಕೆಟ್ಟ ಮಾತನ್ನು ಸುಳ್ಳಾಗಿ ಹೇಳುವವರಿಗೆ ನಾವು ಒಳ್ಳೆಯದನ್ನು ಮಾಡಬೇಕು. ಹೀಗೆ ಮಾಡಿದರೆ ನಾವು ಪರಲೋಕದಲ್ಲಿರುವ ನಮ್ಮ ತಂದೆಗೆ ಮಕ್ಕಳಾಗುವೆವು ಅಲ್ಲದೆ ನಾವು ಆತನಿಂದ ಪವಿತ್ರಾತ್ಮನ ಮೂಲಕವಾಗಿ ಹುಟ್ಟಿದವರಾಗಿರುವೆವೆಂದು [ಅಂಕುರಿಸಲ್ಪಟ್ಟಿರುವೆವೆಂದು] ತೋರ್ಪಡಿಸುವೆವು. ಆದರೆ ಯೆಹೂದ್ಯರು ದೇವರ ಮಕ್ಕಳಾಗಿರಲಿಲ್ಲ. ಆದರೆ ಅವರು "ಸೇವಕರ ಮನೆತನದವರಾಗಿದ್ದರು." (ಇಬ್ರೀಯ 3:5) ತಾವು ದೇವರ ಮಕ್ಕಳಾಗಿದ್ದೇವೆಂಬುದನ್ನು ಅವರು ತಮ್ಮ ಬಗ್ಗೆ ಎಂದೂ ಅಲೋಚಿಸಿರಲಿಲ್ಲ. ಯೇಸುವು ತಾನು ದೇವರ ಮಗನಾಗಿ–ದ್ದೇನೆಂದು ಪ್ರಕಟಿಸಿಕೊಂಡಾಗ ಅವರು ರೋಷವುಳ್ಳವರಾಗಿ, ಅವನು [ಯೇಸುವು] ದೇವದೂಷಣೆಮಾಡಿದ್ದಾನೆಂದು ಹೇಳಿ ಅವನ ಮೇಲೆ ಎಸೆಯಲು ಕಲ್ಲನ್ನು ತೆಗೆದುಕೊಂಡಿದ್ದರು.

ಆದಾಮನು ದೇವರ ಮೊದಲನೇ ಮಗನಾಗಿದ್ದನು ಮತ್ತು ಆತನು ಪಾಪಮಾಡಿದಾಗ ದೇವರೊಡನೆಯ ಆ ಸಂಬಂಧದಿಂದ ತೆಗೆದುಹಾಕಲ್ಪಟ್ಟಿದ್ದನು; ಆದಾಮನ ಕಾಲದಿಂದ ಯೇಸುವಿನ ಕಾಲದ ವರೆಗೆ ಇತರ ಯಾರೂ ಎಂದೂ ದೇವರ ಮಕ್ಕಳೆಂದು ಹೇಳಲ್ಪಡಲ್ಲಿಲ್ಲ ಅಥವಾ ಮನ್ನಣೆ ನೀಡಿರಲ್ಲಿಲ್ಲ. ಅವರು ಪಾಪಿಗಳು ಅಪರಿಚಿತರು ಅನ್ಯರು ಪರದೇಶಿಗಳು ಮರಣದಂಡನೆಗೆ ಒಳಗಾಗಿದ್ದ ಅಪರಾಧಿಗಳಾಗಿದ್ದರು. ಆದರೆ ಯೇಸುವಿನ ಮೂಲಕವಾಗಿ ಹೊಸ ಬೋಧನೆ ಬಂದದ್ದು ಮಾತ್ರವಲ್ಲದೆ ಹೊಸ ಸಂಬಂಧವೂ ಬೆಳೆದುಬಂದಿತ್ತು. "ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು; ಅವನು ಮುಂದೆ ಪ್ರಕಟವಾಗಬೇಕಿದ್ದ ಸಂಗತಿಗಳಿಗೆ ಸಾಕ್ಷಿಯಾಗಿದ್ದನು." –

*****

ಆಪತ್ತಿನಲ್ಲಾಗುವ ಮಿತ್ರನೇ ಒಬ್ಬ ನಿಜವಾದ ಮಿತ್ರ

ರೀಪ್ರಿಂಟ್ಸ್ ಪುಟ 5664

1 ಸಮುವೇಲ 20

"ಮಿತ್ರನ ಪ್ರೀತಿಯು ನಿರಂತರ" [ಒಬ್ಬ ಮಿತ್ರನು ನಿರಂತರವಾಗಿ ಪ್ರೀತಿಸುವನು] – ಜ್ಞಾನೋಕ್ತಿ 17:17

ಚರಿತ್ರೆಯು ಸ್ನೇಹದ ಘನವಂತಿಕೆಯ ನಿದರ್ಶನಗಳನ್ನು ದಾಖಲಿಸಿರುದು; ಆದರೆ ಇದರಲ್ಲಿ ಉತ್ಕೃಷ್ಟವಾದುದು ನಮ್ಮ ಪಾಠದ ಕತೆಯಾಗಿರುವದು. ಅದು ಯಾವುದಂದರೆ ಸೌಲನ ಮಗನೂ ಮುಂದೆ ಇಸ್ರಾಯೇಲ್ಯರ ಸಿಂಹಾಸನಕ್ಕೆ ಬಾಧ್ಯಸ್ಥನೂ ಆದ ಯೋನಾತಾನನು ಜನರ ಹೃದಯದಲ್ಲಿ ಹಾಗು ದೇವರ ಏರ್ಪಾಟಿನಲ್ಲಿ ತನ್ನ ಪ್ರತಿಸ್ಪರ್ಧಿಯೂ ಆದ ದಾವೀದನೊಡನೆಯ ಸ್ನೇಹದ ಪ್ರೀತಿಯೆಂಬದೇ. ಆತನ ಸ್ನೇಹದಲ್ಲಿನ ಶುದ್ಧತೆ ಹಾಗು ನಿಸ್ವಾರ್ಥತೆಗಳು ನಮಗೆ ಆ ಕಾಲದಲ್ಲಿ ಕೆಲವರು ಪಡೆದಿದ್ದ ಘನವಂತಿಕೆಯನ್ನು ತೋರಿಸಿಕೊಡುತ್ತದೆ. ಅದು ನಾವು ಶಂಕಿಸಲಾರದೇ ಇರಬಹುದಾಗಿಯೂ ಆಗಿದ್ದು ಅಲ್ಲದೆ ಅದು ವಿಕಾಸವಾದದ ತತ್ವಕ್ಕೆ ಅತಿ ವಿರುದ್ಧವಾದುದಾಗಿಯೂ ಇರುವಂಥದು.

ಯೋನಾತಾನನ ಪ್ರೀತಿಯ ಮನೋಭಾವವು ಆತನ ತಂದೆ ಅರಸನಾದ ಸೌಲನ ಅಸೂಯಾ ಮನೋಭಾವಕ್ಕಿಂತಲೂ ಬಹು ವಿಭಿನ್ನ ರೀತಿಯಲ್ಲಿ ಎದ್ದುಕಾಣುತ್ತದೆ. ದಾವೀದನೊಡನೆಯ ಆತನ ಮೊದಲನೇ ಭೇಟಿಯು ದಾವೀದನು ಗೊಲ್ಯಾತನ ಮೇಲಿನ ಗೆಲುವಿನ ನಂತರದಲ್ಲಿ ಆಗಿತ್ತೆಂಬುದು ಸ್ಪಷ್ಟವಾಗಿತ್ತು. ದಾವೀದನು ತನಗೆ ಒಬ್ಬ ಪ್ರತಿಸ್ಪರ್ಧಿಯೆಂದೂ ಅವನನ್ನು ತುಳಿದು–ಬಿಡಬೇಕೆಂದು ಯೋಚಿಸುವದಕ್ಕೆ ಬದಲಾಗಿ ಘನವಂತಿಕೆಯುಳ್ಳ ಯೋನಾತಾನು ತನ್ನ ರಾಜಕುಮಾರನ ವಸ್ತ್ರವನ್ನು ತೆಗೆದು ಅದರೊಂದಿಗೆ ತನ್ನ ಖಡ್ಗವನ್ನು ತನ್ನ ಪ್ರಸಿದ್ಧವಾದ ಬಿಲ್ಲಿನೊಡನೆ ದಾವೀದನಿಗೆ ಕೊಟ್ಟಿದ್ದನು.

ಪಾದ್ರಿಯಾದ ಅಲೆಕ್ಸ್ ವ್ಹೈಟ್ ಎಂಬವರು ಹೀಗೆ ಟೀಕೆಮಾಡಿರುವರು– "ಯೋನಾತಾನನು ಸೌಲನ ಹಿರಿಯ ಮಗನಾಗಿದ್ದನು; ಹೀಗಾಗಿ ಇಸ್ರಾಯೇಲಿನ ಸಿಂಹಾಸನಕ್ಕೆ ಸ್ಪಷ್ಟವಾದ ಬಾಧ್ಯಸ್ಥನಾಗಿದ್ದನು. ಸುಲಕ್ಷಣನೂ, ಶೀಘ್ರವಾಗಿ ಮನಮರುಗುವವನೂ, ಪೂರ್ಣ ಶಕ್ತಿಶಾಲಿಯೂ, ಪೂರ್ಣ ಹೃದಯವಂತಿಕೆಯುಳ್ಳವನೂ ಆಗಿದ್ದ ಯೋನಾತಾನನು ಸೈನ್ಯದವರ ಹೆಮ್ಮೆಯೂ ಸಾಧಾರಣ ಜನರಿಗೆ ಪ್ರಿಯನೂ ಆಗಿದ್ದನು. ಆತನ ವ್ಯಕ್ತಿಸೊಬಗು ಮತ್ತು ಕಾಲುಗಳ ಚುರುಕುತನದ ಕಾರಣಗಳಿಗಾಗಿ ಆತನ ಸಹಚರರು ಆತನನ್ನು ಚುರುಕು ಜಿಂಕೆಯೆಂದು ವಾಡಿಕೆಯಾಗಿ ಕರೆಯುತ್ತಿದ್ದರು. ಆದರೆ ಆತನ ತಂದೆಯ ಮಹಾ ವಿನಾಶಕಾರೀ ಅತಿಕ್ರಮಣಗಳ ದೆಸೆಯಿಂದ ಯೋನಾತಾನನು ಶೀಘ್ರದಲ್ಲಿ ಇಸ್ರಾಯೇಲ್ಯರ ಎರಡನೇ ಅರಸನೂ, ಸೌಲನ ಉತ್ತರಾಧಿಕಾರದಲ್ಲಿ ಎರಡನೆಯವನೂ ಆಗಬಹುದಾಗಿದ್ದರೂ ಒಂದು ಸಿಂಹಾಸನದಲ್ಲಿ ಕುಳಿತು ಆ ಸಿಂಹಾಸನಕ್ಕೆ ಸ್ಥಿರತೆಯನ್ನು ಕೊಟ್ಟು ಅದರ ಕಿರೀಟಕ್ಕೆ ಒಂದು ಮೆರುಗನ್ನು ಕೂಡಿಸುವ ಉತ್ಕೃಷ್ಟ ಲಕ್ಷಣಗಳುಳ್ಳ ಮನಸ್ಸು ಹೃದಯ ಗುಣಮಟ್ಟದ ಅರಸರಲ್ಲಿ ಎರಡನೆಯವನಾಗುತ್ತಿರಲಿಲ್ಲ." ಪುರಾತನ ಕಾಲದವರಲ್ಲಿ ಒಬ್ಬರು ಇದನ್ನು ಹೀಗೆ ಚೆನ್ನಾಗಿ ಬರೆದಿದ್ದರು: "ಒಬ್ಬ ನಿಷ್ಠಾವಂತ ಸ್ನೇಹಿತನಿಗೆ ಸಮನಾದ ಆಶೀರ್ವಾದವು ಜೀವನದಲ್ಲಿ ಮತ್ತೊಂದಿಲ್ಲ; ಅಲ್ಲದೆ ಒಬ್ಬ ಕವಿಯು ಹೀಗೆ ಬರೆದಿರುವದನು:

ಸ್ನೇಹಿತನೊಬ್ಬನು ಕೊಡುವ ಸಂತೋಷಕ್ಕಿಂತಲೂ
ಮತ್ತೊಂದನ್ನು ಕೊಡಲಾರದು ಜೀವನವು;
ಪ್ರವಾದನೆ ನೆರವೇರಿಕೆಗಳು ಒಟ್ಟುಗೂಡಿ
ಮಿಡಿವದು ಹೃದಯವು ನಮ್ಮ ನಮ್ಮದರೊಂದಿಗೆ–
ನಮಗೆ ತಿಳಿವದು ಆ ಹೃದಯವ ಅದು ತಿಳಿವದು ನಮ್ಮನ್ನ."

"ಆಪತ್ತಿನಲ್ಲಾಗುವ ಮಿತ್ರನು ನಿಜವಾದ ಒಬ್ಬ ಮಿತ್ರನು"

ಯೋನಾತಾನನ ಸ್ನೇಹ, ಪ್ರೀತಿಯು ಅಲ್ಪಕಾಲಿಕ ಉತ್ಸಾಹದ ರೀತಿಯದ್ದಾಗಿರಲಿಲ್ಲ. ಅದು ವಾಸ್ತವಿಕ ಸಂಗತಿಯಾಗಿತ್ತು. ಆತನು ಕೇವಲ ಮಾತಿನಿಂದ ಪ್ರೀತಿಸಿರಲಿಲ್ಲ, ಅದರೆ ಕೃತ್ಯದಿಂದಲೂ ಸತ್ಯದಿಂದಲೂ ಪ್ರೀತಿಸಿದ್ದನು. ಅಂದರೆ ಕೇವಲ ತನ್ನ ತಂದೆಯು ತನ್ನ ಮಿತ್ರನನ್ನು ಬೆಂಬಲಿಸುವಾಗ ಅಲ್ಲದೆ ಜನರು ಆತನನ್ನು ಹೊಗಳುವಾಗ ಮತ್ತು ಅತನು ಹೀಗೆ ಇತರರಿಂದ ಬೆಂಬಲ ಪಡೆದಿರುವಾಗ ಮಾತ್ರವಾಗಿರದೆ ಅರಸನು ತನ್ನ ಮಿತ್ರನ ವೈರಿಯಾಗಿ ಆತನ ಜೀವವನ್ನು ತೆಗೆಯುದಕ್ಕೆ–ದ್ದಾಗಲೂ ಅದೇ ರೀತಿಯಲ್ಲಿ ಪ್ರೀತಿಸಿದ್ದನು. ನಿಜವಾಗಿ ಹೇಳಬಹುದೇನಂದರೆ ಪರೀಕ್ಷೆಗೆ ಒಳಪಡದ ಯಾವ ಸ್ನೇಹವೂ ಲೆಕ್ಕಕ್ಕೆ ತೆಗೆದುಕೊಳ್ಳಬಾರದೆಂಬುದನ್ನು ಖಚಿತವಾಗಿ ಹೇಳಬಹು–ದೆಂಬದೇ. ಪರಿಶೋಧನೆಪರೀಕ್ಷೆಗಳನ್ನು ಎದುರಿಸಲಾಗದಂಥ ಸ್ನೇಹ, ಯಾವ ತ್ಯಾಗವನ್ನು ಮಾಡದ ಸ್ನೇಹ ಇವುಗಳು ಮಾದರಿಯಾದ ರೀತಿಯವುಗಳೆಂದು ತೆಗೆದುಕೊಳ್ಳಲಾಗದು.

ಯೋನಾತಾನನು ಹೊಂದಿದ್ದ ಪ್ರೀತಿಯ ಬಗೆಯು ಕರ್ತನು ತನ್ನ ಹಿಂಬಾಲಕರು ಹೊಂದಿರಬೇಕೆಂದು ಪ್ರಬೋಧಿಸಿದ್ದ ಪ್ರೀತಿಯ ಬಗೆಯದ್ದಾಗಿತ್ತು; ಅಂದರೆ ಗೌರವಿಸುವದರಲ್ಲಿ ಒಬ್ಬರಿಗಿಂತ ಮತ್ತೊಬ್ಬರು ಮುಂದಾಗಿರಬೇಕೆಂಬದರ ಬಗೆಯ ಪ್ರೀತಿಯದ್ದಾಗಿತ್ತು. ಇತರರ ಪ್ರೀತಿಯು ವಿಶೇಷವಾಗಿರಲು ಇದು ನಿಸ್ಸಂದೇಹವಾಗಿ ಭೂಸಂಬಂಧದ ಪ್ರೀತಿಗಿಂತಲೂ ಮಿಗಿಲಾದದ್ದಾಗಿ ನಿಲ್ಲುವದು, ಇದಕ್ಕೆ ವಿಶೇಷ ಕಾರಣವೆಂದರೆ ದಾವೀದನ ಪ್ರೀತಿಯು ಒಂದು ಧಾರ್ಮಿಕ ಆಧಾರದ ಮೇಲೆ ಸ್ಥಾಪಿತವಾಗಿತ್ತು. ಕಾರಣ ದಾವೀದನು ದೇವರನ್ನು ಪ್ರೀತಿಸಿ ಆತನ ಚಿತ್ತದ ಪ್ರಕಾರ ಮಾಗದರ್ಶಿಸಲ್ಪಡುವನ್ನು ಬಯಸಿದ್ದನು. ದಾಖಲೆಗಳು ತಿಳಿಸಿರುವಂತೆ ಆ ಸಮಯದಲ್ಲಿ ಆ ಚಿತ್ತವು ತೋರ್ಪಡಲಾಗಿತ್ತು– ಅದೇನಂದರೆ ಆತನು ಕಾದುಕೊಂಡಿರ–ಬೇಕೆಂದೂ, ತಾನು ತನ್ನನ್ನು ಜ್ಞಾನದಿಂದ ನಡೆಸಿಕೊಳ್ಳಬೇಕೆಂದೂ ಅಲ್ಲದೆ ಯೋನಾತಾನನು ಈ ಜ್ಞಾನವುಳ್ಳ ಆತ್ಮದ ಬಗ್ಗೆ ಗ್ರಹಿಸಿಕೊಂಡಿದ್ದ ಕಾರಣದಿಂದಲೂ ದಾವೀದನು ನೀತಿಯುಳ್ಳ ಆತ್ಮದಿಂದ ನಡೆಸಲ್ಪಡುತ್ತಿದ್ದುದನ್ನು ತಾನು ಅರ್ಥಮಾಡಿಕೊಂಡಿದ್ದ ದೆಸೆಯಿಂದಲೂ ಆತನು ದಾವೀದನನ್ನು ಪ್ರೀತಿಸಿದ್ದನು.

ನಿಜವಾಗಿಯೂ ನಾವು ಸತ್ಯವೇದವನ್ನು ಅರ್ಥಮಾಡಿ–ಕೊಂಡು ಸತ್ಯದ ಆತ್ಮವನ್ನು ಪಡೆದಷ್ಟರ ಪ್ರಮಾಣದಲ್ಲಿಯೇ ನಾವು ಅದರಲ್ಲಿನ ತತ್ವಗಳನ್ನು–ಅದು ಸ್ನೇಹದ ಅಥವಾ ಅರಸನ ಕಡೆಗಿರುವ ಕರ್ತವ್ಯದ, ನಮ್ಮ ಕುಟುಂಬ ಸಂಬಂಧದ ಕರ್ತವ್ಯ, ಅಥವಾ ದೇವರ ಕಡೆಗಿರುವ ಕರ್ತವ್ಯವಾಗಿದ್ದರೂ ಅದನ್ನು ನಕಲುಮಾಡಲು ಅದರ ಅತ್ಯುತ್ತಮ ರೀತಿಯ ಮಾದರಿಯನ್ನು ತೊರ್ಪಡಿಸುವದನ್ನು ಮನನಮಾಡಿಕೊಳ್ಳಲು ಸಮರ್ಥರನ್ನಾಗಿ–ಸುತ್ತದೆಂಬುದದನ್ನು ನಾವು ಖಚಿತಮಾಡಿಕೊಳ್ಳಬಹುದು. ನಿಜವಾದ ಸ್ನೇಹ, ನಿಜವಾದ ಪ್ರೀತಿ, ಹೃದಯದ ಮತ್ತು ಮನಸ್ಸಿನ ಅತ್ಯುತ್ತಮ ಗುಣಲಕ್ಷಣಗಳ ಕಡೆಗೆ ನಡೆಸುವ ಪ್ರಭಾವಗಳು ದೇವರಿಂದ ಬರುವಂತೆಯೇ ಸ್ವಾರ್ಥ ದುರಾಸೆ ಅಸೂಯೆಗಳ ಕಡೆಗೆ ನಡೆಸುವ ಹಲವಾರು ಪ್ರಭಾವಗಳು ಕಾರ್ಯ ಪ್ರವೃತ್ತವಾಗಿರುತ್ತವೆ.

ನಾವು ಈಗಾಗಲೆ ಹಿಂದಿನ ಒಂದು ಪಾಠದಲ್ಲಿ ಯೋನಾತಾನನು ಹೇಗೆ ಅರಸನಾಗಿರುವ ತನ್ನ ತಂದೆ ಹಾಗು ದಾವೀದನ ನಡುವೆ ಸಂಧಾನಕಾರನಾಗಿ ಕಾರ್ಯ ನಿರ್ವಹಿಸಿದ್ದನೆಂಬುದನ್ನು ಗಮನಿಸಿದ್ದೇವೆ. ಈ ದಿನದ ಪಾಠವು ಮತ್ತೊಂದು ಸಂದರ್ಭದಲ್ಲಿ ಯೋನಾತಾನನು ನಿರ್ವಹಿಸಿದ ನಿಜ

ಸ್ನೇಹಿತನ ಪಾತ್ರದ ಬಗ್ಗೆ ನಮ್ಮ ಗಮನಕ್ಕೆ ತರುತ್ತದೆ. ದಾವೀದನು ತನ್ನ ಜೀವಿತವು ಅಪಾಯದಲ್ಲಿರುವದನ್ನು ಗ್ರಹಿಸಿಕೊಂಡಿದ್ದು ಆ ಬಗ್ಗೆ ತನ್ನ ಭಯವನ್ನು ಯೋನಾತಾನನಿಗೆ ಹೇಳಿಕೊಂಡಿದ್ದನು. ತನ್ನ ತಂದೆಯು ಕೊಟ್ಟ ಮಾತನ್ನು ಮುರಿಯುವನೆಂಬುದನ್ನು ನಂಬಲು ಯೋನಾತಾನನಿಗೆ ಕಷ್ಟವಾಗಿತ್ತಾದರೂ ದಾವೀದನ ಮನೋಭಾವವು ಆತನಿಗೆ ಪ್ರಭಾವ ಬೀರಿತ್ತು. ಅಮಾವಾಸ್ಯೆಯ ನಂತರದ ಮೊದಲನೇ ದಿನದ ಔತಣಕೂಟವು ಬಂದಿತ್ತು; ದಾವೀದನು ಅರಸನ ಪಂಕ್ತಿಯಲ್ಲಿ ಕೂರುವದನ್ನು ಅಪೇಕ್ಷಿಸಲಾಗಿತ್ತು. ಅರಸನಾದ ಸೌಲನು ಮುಖ್ಯಸ್ಥಾನದಲ್ಲಿ ಕುಳಿತುಕೊಳ್ಳಲು, ಯೋನಾತಾನನು ಅರಸನ ಬಲಗಡೆಯಲ್ಲಿ ಕುಳಿತುಕೊಳ್ಳಲು ಮತ್ತು ಔತಣಕೂಟದ ಮುಖ್ಯಸ್ಥನು ಎಡಗಡೆಯಲ್ಲಿರಲು, ದಾವೀದನು ನಾಲ್ಕನೇ ಸ್ಥಾನದಲ್ಲಿ ಅರಸನ ಎದುರುಗಡೆಯಲ್ಲಿ ಇರುತ್ತಿದ್ದನು. ಸ್ನೇಹಿತರ ನಡುವಿನ ಏರ್ಪಾಡಿನ ಅನುಸಾರ ಯೋನಾತಾನನು ತನ್ನ ತಂದೆಯ ಉದ್ದೇಶವನ್ನು ಖಚಿತಪಡಿಸಿಕೊಂಡು ಅದನ್ನು ನಿಖರವಾಗಿ ದಾವೀದನಿಗೆ ತಿಳಿಸಬೇಕಿತ್ತು.

ಹಬ್ಬದ ಮೊದಲನೆಯ ದಿನದಲ್ಲಿ ಅರಸನು ಏನೂ ಹೇಳಿರಲಿಲ್ಲವಾದರೂ. ಯೋನಾತಾನನು ಹೇಗೂ ಈ ಸಂಗತಿಗೆ ತನ್ನ ತಂದೆಯ ಗಮನವನ್ನು ಸೆಳೆದು ದಾವೀದನನ್ನು ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುವಂತೆ ಮಾಡುವ ಸಲುವಾಗಿ ಒಂದು ಅನುಕೂಲವಾದ ಸಮಯವನ್ನು ಆದುಕೊಂಡಿದ್ದನು. ಅರಸನು "ದಾವೀದ" ಎಂಬ ಹೆಸರನ್ನು ಬಹುವಾಗಿ ಹಗೆಮಾಡಿದ್ದಾಗ್ಯೂ ಕಡೆಯಲ್ಲಿ ಆತನು "ಇಷಯನ ಮಗನ" ಬಗ್ಗೆ ವಿಚಾರಿಸಿದ್ದನು. ದಾವೀದನು ಹಬ್ಬವನ್ನು ಆಚರಿಸಲು ತನ್ನ ಅಪ್ಪಣೆಯಿಂದ ಬೇತ್ಲೆಹೇಮಿಗೆ ಹೋಗಿರುವನೆಂದು ಯೋನಾತಾನನು ಉತ್ತರಿಸಿದ್ದನು.

ಅರಸನು ಆ ಸಮಯದಲ್ಲಿ ದಾವೀದನನ್ನು ಕೊಲ್ಲುವ ತನ್ನ ಉದ್ದೇಶವು ಸ್ಪಷ್ಟವಾಗಿ ವಿಫಲವಾಗಿದ್ದು ತಾನು ನಿಜವಾಗಿಯೂ ಬಹು ಹೆಚ್ಚಾಗಿ ಪ್ರೀತಿಸುತ್ತಿದ್ದ ತನ್ನ ಮಗನ ಮೇಲೆ ತನ್ನ ಕೋಪವನ್ನು ಹರಿಬಿಟ್ಟದ್ದನು. ಆತನನ್ನು ಒಬ್ಬ ಅಕ್ರಮಗಾರನಾದ ಮಗನೆಂದೂ, ಹೀಗೆ ತನ್ನ ತಾಯಿಗೆ ಯೋಗ್ಯನಲ್ಲವೆಂದು ಸಂಬೋಧಿಸುವದರ ಮೂಲಕವಾಗಿ ಆತನು ತನ್ನ ಸ್ವಂತ ಮಗನನ್ನು ನಿರ್ಲಕ್ಷಿಸಿರುವದನ್ನು ಪರೋಕ್ಷವಾಗಿ ಸೂಚಿಸಿದ್ದನು. ತನ್ನ ಕೋಪದಲ್ಲಿ ಆತನು ತನ್ನ ಮಗನ ಮೇಲೆ ಒಂದು ಈಟಿಯನ್ನು ಎಸೆದಿದ್ದನು. ತನ್ನ ಮಗನನ್ನು ಹೊಡೆಯುವ ಉದ್ದೇಶವಿಲ್ಲದಿದ್ದರೂ ಇದು ಕೇವಲ ತನ್ನ ಉಗ್ರ ಕೋಪವನ್ನು ಹೊರಗೆಡವಿದ್ದರ ಸಂಭವವಿತ್ತು. ಇದಕ್ಕೆ ಪ್ರತಿಯಾಗಿ ಯೋನಾತಾನನ ಸಂಭಾಷಣೆಯು ತನ್ನ ವಿಷಯವಾಗಿ ತಾನು ಅಲ್ಪವಾಗಿ ಯೋಚಿಸಿ, ತನ್ನ ಮಿತ್ರನ ಪರವಾಗಿ ಅಪಾಯ ತಂದುಕೊಂಡದ್ದನ್ನು ಅಲ್ಲದೆ ಹೆಚ್ಚಾಗಿ ತನ್ನ ಮಿತ್ರನಿಗೆ ಅನ್ಯಾಯವಾಗಿದ್ದರ ಬಗ್ಗೆ ಅಲೋಚಿಸಿದ್ದನ್ನು ತೋರಿಸಿಕೊಡುತ್ತದೆ. "ತನ್ನ ತಂದೆ ದಾವೀದನನ್ನು ಕೊಲ್ಲುವದಕ್ಕೆ ನಿಶ್ಚಯಿಸಿದ್ದಾನೆಂಬದು ಯೋನಾತಾನನಿಗೆ ಗೊತ್ತಾಗಲು ಅವನು ಬಲು ಸಿಟ್ಟುಗೊಂಡು ಪಂಕ್ತಿಯಿಂದೆದ್ದು ಹೋದನು; ತನ್ನ ತಂದೆಯು ದಾವೀದನನ್ನು ಅಪಮಾನಪಡಿಸಿದ್ದರಿಂದ ಯೋನಾತಾನನಿಗೆ ಬಹಳ ದುಃಖವುಂಟಾಗಿ ಅವನು ಆ [ಎರಡನೇ] ದಿವಸ ಊಟ ಮಾಡಲೇ ಇಲ್ಲ."

ಇದು ಒಂದು ಸೊಗಸಾದ ಸ್ನೇಹವಾಗಿದ್ದು ಒತ್ತಡದ ಸಮಯದಲ್ಲಿ ತನ್ನತನವನ್ನು ಮರೆತು ಕೇವಲ ಸ್ನೇಹಿತನ ಹಿತಾಸಕ್ತಿಯ ಬಗ್ಗೆ ಅಲೋಚಿಸುವದಾಗಿರುವದು. ಮಾನವನ ಪ್ರೀತಿಸ್ನೇಹಗಳಿಗೆ ತದ್ವಿರುದ್ಧವಾಗಿಯೋ ಎಂಬಂತೆ ನಾವು ಯೇಸುವಿನ ವಿಷಯವಾಗಿ ಹೀಗೆ ಓದುತ್ತೇವೆ: "ಪ್ರಾಣವನ್ನೇ ಸ್ನೇಹಿತನಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನದು ಯಾವದೂ ಇಲ್ಲ." ಹೀಗಿದ್ದರೂ ಯೇಸುವಿನ ವಿಷಯದಲ್ಲಿ ಇದು ಯಾವ ಲೌಕಿಕ ಪ್ರೀತಿ ಅಥವಾ ಸ್ನೇಹಕ್ಕಿಂತಲೂ ಮಿಗಿಲಾಗಿತ್ತು; ಯಾಕಂದರೆ "ನಾವು ಪಾಪಿಗಳಾಗಿದ್ದರೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ..." ಅಪೊಸ್ತಲನು ಪ್ರಕಟಮಾಡಿ ಹೇಳಿರುವದು ಕರ್ತನು ಕ್ರೈಸ್ತರೆಲ್ಲರಿಗೆ ಒಂದು ಮಾದರಿಯನ್ನು ತೋರಿಸಿ "ಸಹೋದರಿಗೋಸ್ಕರ ತಮ್ಮ ಪ್ರಾಣವನ್ನು ಕೊಡಬೇಕೆಂದು" ಒಬ್ಬರಿಗೋಸ್ಕರ ಮತ್ತೊಬ್ಬರು ಸಾಯಲು ಸಿದ್ಧವಿರಬೇಕೆಂದು. ಇದು ಪರಲೋಕದಿಂದಾದ ಪ್ರೀತಿ, ದೈವೀಕ ಸ್ನೇಹವಾಗಿದ್ದು ಇದರ ಬಗ್ಗೆ ಯೋನಾತಾನನ ಪ್ರೀತಿಯನ್ನು ನಮ್ಮ ಕರ್ತನ ಹಾಗು ಅಪೋಸ್ತಲರ ಪ್ರೀತಿಯ ನಂತರದ ಒಂದು ಮಾದರಿಯಾಗಿ ತೆಗೆದುಕೊಳ್ಳಬಹುದು.

"ಬಾಣವು ನಿನ್ನ ಆಚೆ ಬಿತ್ತಲ್ಲಾ"

ಮರುದಿನ ಬೆಳಿಗ್ಗೆ ದಾವೀದನು ತನ್ನ ಮನೆಯಿಂದ ಹಿಂದಿರುಗಿ ಅರಸನ ಮನೋಭಾವದ ಬಗ್ಗೆ ಯೋನಾತಾನನ ನಿರ್ಣಯವನ್ನು ತಿಳಿದುಕೊಳ್ಳುವದಕ್ಕಿದ್ದನು. ಗೊತ್ತುಮಾಡಿಕೊಂಡ ಸೂಚನೆಯೆಂದರೆ ಯೋನಾತಾನನು ತನ್ನ ಬಿಲ್ಲುಬಾಣವನ್ನು ತೆಗೆದುಕೊಂಡು ಒಂದು ದೊಡ್ಡ ಬಂಡೆಯ ಬಳಿಯಿರುವ ಹೊಲಕ್ಕೆ ಹೋಗಬೇಕು ಮತ್ತು ತನ್ನ ಬಾಣ ಹೂಡುವಿಕೆಯ ಸಂಬಂಧವಾಗಿ ಆತನು "ಬಾಣವು ನಿನ್ನ ಆಚೆ ಬಿತ್ತಲ್ಲಾ? ಬೇಗ ಹೋಗು!" ಎಂದು ಕೂಗಿ ಹೇಳಿದರೆ ಆ ಸಂದೇಶವು ದಾವೀದನು ಓಡಿಹೋಗುವ ಬಗೆಯದಾಗಿತ್ತು. ಹಾಗು ಅದನ್ನು ಹೀಗೆಯೇ ಮಾಡಲಾಗಿತ್ತು. ಆದರೆ ಬಹುಶಃ ವೈಯುಕ್ತಿಕವಾದ ಸಂಪರ್ಕವಿಲ್ಲದೆ ನಿರಂತರವಾಗಿ ಬೇರ್ಪಡುವದನ್ನು ಯೋಚಿಸಲು ಆ ಇಬ್ಬರು ಸ್ನೇಹಿತರಿಗೆ ಸಾಧ್ಯವಾಗಿರಲಿಲ್ಲ. ದಾವೀದನು ಅಡಗಿಕೊಂಡಿದ್ದ ಬಂಡೆಯ ಹಿಂದೆ ಯೋನಾತಾನನು ಹೋಗಿದ್ದನು. ಪೌರಾತ್ಯದ ಪದ್ಧತಿಯ ಮೇರೆಗೆ ಇಬ್ಬರೂ ತಬ್ಬಿಕೊಂಡು ಒಬ್ಬರಿಗೊಬ್ಬರು ಮುದ್ದಿಟ್ಟು ವಿದಾಯ ಹೇಳಿದ್ದರು. ಅದು ನಿಜವಾದ ಪ್ರೇಮಿಗಳ ಒಂದು ಮನುಷ್ಯತ್ವದ ಘನವಂತಿಕೆಯುಳ್ಳ ಪ್ರೀತಿಯಾಗಿತ್ತು.

ಇಲ್ಲಿ ಯೋನಾತಾನನು ದಾವೀದನ ವಿಷಯವಾಗಿ ದೇವರ ಏರ್ಪಾಡಿನಲ್ಲಿರುವ ತನ್ನ ನಂಬಿಕೆಯನ್ನು ಸೂಚಿಸಿ ಏನೇ ಸಂಭವಿಸಿದರೂ ತನ್ನ ಹಾಗು ತನ್ನ ಕುಟುಂಬದ ಬಗ್ಗೆ ದಾವೀದನು ಕೃಪಾಪೂರ್ಣನಾಗಿ ನಡಕೊಳ್ಳುವ ಸಲುವಾಗಿ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೇಳಿಕೊಂಡು ಹೀಗೆ

ಹೇಳಿದ್ದನು "ಸಮಾಧಾನದಿಂದ ಹೋಗು; ನಾವು ಯೆಹೋವನ ಹೆಸರಿನಲ್ಲಿ ಆಣೆಯಿಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿದ್ದೇವಲ್ಲಾ; ಆತನೇ ನನಗೂ ನಿನಗೂ ನಿನ್ನ ಸಂತಾನಕ್ಕೂ ನನ್ನ ಸಂತಾನಕ್ಕೂ ಸದಾ ಸಂಬಂಧಸಾಕ್ಷಿಯಾಗಿರಲಿ ಎಂದು ಹೇಳಿದನು. ತರುವಾಯ ದಾವೀದನು ಹೊರಟುಹೋದನು; ಯೋನಾತಾನನು ಊರೊಳಕ್ಕೆ ಬಂದನು."

ದಾವೀದನು ಹೀಗೆ ಸೌಲನ ಕುಟುಂಬಕ್ಕೆ ಸ್ನೇಹಿತನಾಗಿರುವ ಸಂಬಂಧದ ಹೊಣೆಗಾರಿಕೆಯನ್ನು ಎಂದೂ ಮರೆತಿರಲಿಲ್ಲವೆಂಬುದನ್ನು ಸತ್ಯವೇದದ ಚರಿತ್ರೆಯು ನಮಗೆ ತೋರಿಸಿಕೊಡುತ್ತದೆ. ಆಗಿನ ಕಾಲದಲ್ಲಿದ್ದ ಪೌರಾತ್ಯ ದೇಶಗಳ ಪದ್ಧತಿಯೆಂದರೆ ಒಂದು ಹೊಸ ರಾಜಮನೆತನವು ಅಧಿಕಾರಕ್ಕೆ ಬಂದರೆ ಅದು ಪದಚ್ಯುತವಾದ ರಾಜಮನೆತನದ ಗಂಡಸರೆಲ್ಲರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂಬದು. ಆದರೆ ದಾವೀದನ ವಿಷಯದಲ್ಲಿ ಹೀಗಿರಲಿಲ್ಲ.

ಫಿಲಿಷ್ಟಿಯರೊಡನೆ ನಡೆದ ಯುದ್ಧದಲ್ಲಿ ಯೋನಾತಾನನು ತನ್ನ ತಂದೆಯೊಡನೆ ರಣರಂಗದಲ್ಲಿ ಮೃತನಾದ ಸ್ವಲ್ಪ ಸಮಯದ ನಂತರದ ಸನ್ನಿವೇಶದಲ್ಲಿ ದಾವೀದನು ಈ ಮುಂದಿನ ಸೊಗಸಾದ ಮಾತಿನಲ್ಲಿ ಇದನ್ನು ಹೀಗೆ ವ್ಯಕ್ತಪಡಿಸಿದ್ದನು:

ಯೋನಾತಾನು ನಿಮ್ಮ ಬೆಟ್ಟಗಳಲ್ಲಿ ಹತನಾಗಿ ಬಿದ್ದನಲ್ಲಾ.
ಯೋನಾತಾನನೇ, ನನ್ನ ಸಹೋದರನೇ, ನಿನಗೋಸ್ಕರ
ನನ್ನಲ್ಲಿ ಬಹು ಸಂಕಟವಾಗಿದೆ;
ನೀನು ನನಗೆ ಬಹು ಮನೋಹರನಾಗಿದ್ದೀ.
ನನ್ನ ಮೇಲಿನ ನಿನ್ನ ಪ್ರೀತಿಯು ಆಶ್ಚರ್ಯಕರವಾದದ್ದೇ ಸರಿ;
ಅದು ಸತೀಪ್ರೇಮಕ್ಕಿಂತ ಶ್ರೇಷ್ಠವಾದದ್ದು.

ನಮ್ಮ ವಿಶ್ವಾಸವೇನಂದರೆ ಈ ವೃತ್ತಾಂತವನ್ನು ಓದಿದ ಯಾರೂ ನಿಜವಾದ ಸ್ನೇಹ ಸತ್ಯಪರತೆ ಘನವಂತಿಕೆ ಹೆಚ್ಚು ನಂಬಿಗಸ್ತನಾದ ಒಬ್ಬ ಸ್ನೇಹಿತ ಇವುಗಳನ್ನು ಬೆಂಬಲಿಸುವ ಪ್ರಭಾವಕ್ಕೆ ಒಳಗಾಗದೇ ಇರಲು ಸಾಧ್ಯವಿಲ್ಲವೆಂಬದೇ. ಕ್ರಿಸ್ತನ ಮೇಲಿನ ಪ್ರೀತಿಗೆ ನಡೆಸುವಂಥ ಯೋನಾತಾನನ ಪ್ರೀತಿ ಮತ್ತು ಅವರು ದೇವರ ಪ್ರಿಯ ಕುಮಾರನ ಸ್ವರೂಪಿಗಳಾಗಬೇಕೆಂಬ ಆದೇಶ ಮುಂತಾದ ಸಂಗತಿಗಳಿಂದ ವಿಶೇಷವಾಗಿ ಒಬ್ಬ ಕ್ರೈಸ್ತನು ಒಂದು ಆಶೀರ್ವಾದ ಪಡಕೊಳ್ಳಬೇಕಾದಲ್ಲಿ ಅವನ ಸ್ನೇಹಸಂಬಂಧಗಳು ನಿಷ್ಠೆ ಸತ್ಯತೆ ವಿಶೇಷವಾಗಿ ಒಬ್ಬನ ವಿಷಯದಲ್ಲಿ ಮತ್ತೊಬ್ಬನು ಸಹಿಷ್ಣತೆಯುಳ್ಳವರಾಗಿರಬೇಕು; ಇದನ್ನು ಅಪೋಸ್ತಲನು ಹೀಗೆ ಪ್ರಭೋಧಿಸಿರುವನು: "ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ."

*****

ದಾವೀದ ಮತ್ತು ಯೋನಾತಾನರು

ರೀಪ್ರಿಂಟ್ಸ್ ಪುಟ 1907

1 ಸಮುವೇಲ 20:32–42

"ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು." – ಜ್ಞಾನೋಕ್ತಿ 18:24

ನಿಜವಾದ ಸ್ನೇಹವು, ನಮ್ಮ ಪಾಪವೆಂಬ ಶಾಪದಿಂದ ತುಂಬಿದ ಭೂಮಿಯ ಮೇಲಿರುವ ಒಂದು ವಿರಳ ಪುಷ್ಪವಾಗಿದ್ದು ಅದು ಕಂಡುಬಂದು ಸಾಬೀತುಮಾಡಲ್ಪಟ್ಟಾಗ ಅದನ್ನು ಬಹು ಅಮೂಲ್ಯವೆಂದು ಎಣಿಸಲ್ಪಡಬೇಕು. ಅದು ಮೂಲದಲ್ಲಿ ದೇವರ ಹೋಲಿಕೆಯ ಒಂದು ಅಂಶವಾಗಿರುತ್ತದೆ. ಸ್ವಾರ್ಥದ ಆಲ್ಪಿಕೆಯುಳ್ಳ ಹೃದಯದಲ್ಲಿ ಅದರ ಅಸ್ತಿತ್ವವು ಎಂದೂ ಇರದು; ಯಾಕಂದರೆ ಸ್ವಂತ ಹಿತಾಸಕ್ತಿಯನ್ನು ದಾಟಿದ ಕ್ಷಣದಿಂದಲೇ ಸುಳ್ಳಿನ ಹಾಗು ಅಸ್ಥಿರ ಸ್ನೇಹವು ಕ್ಷಯಿಸಲಾರಂಭಿಸುವದು ಇಲ್ಲವೇ ವಿಶ್ವಾಸಘಾತುಕತನವು ಸಾಬೀತಾಗುವದು.

ದಾವೀದ ಯೋನಾತಾನರ ಸ್ನೇಹವು ನಿಜವಾದ ರೀತಿಯದೆಂಬದು ಸ್ಪಷ್ಟವಾಗಿತ್ತು. ಯಾಕಂದರೆ ಈ ಇಬ್ಬರ ವಿಷಯದಲ್ಲಿಯೂ ಇದು ಪರೀಕ್ಷಾಕುಲುಮೆಯಲ್ಲಿ ಪ್ರಮಾಣೀಕೃತವಾಗಿದ್ದು ವರುಷಗಳ ಪರ್ಯಂತರವಾಗಿ ಸಂಕುಚಿತ ಮನಸ್ಸಿನವರು ನಿಲ್ಲಲಾರದಂಥ ಪರಿಶೋಧನೆಯ ಸನ್ನಿವೇಶಗಳಲ್ಲಿಯೂ ಸ್ಥಿರವಾಗಿ ಒಂದುಗೂಡಿಸಲ್ಪಟ್ಟದ್ದಾಗಿತ್ತು. ಅದು ಕೇವಲ ಆಡಂಬರದ ಗೀಳಾಗಿರದೆ ಇಬ್ಬರ ವಿಷಯದಲ್ಲಿಯೂ ನಿಜವಾದ ನೀತಿ ಆಧಾರಿತ ಮೌಲ್ಯಗಳ ಮೇಲೆ ಸ್ಥಾಪಿತವಾಗಿತ್ತು; ಅಲ್ಲದೆ ಈ ನೀತಿ ಮೌಲ್ಯಗಳೇ ಅವರ ಸ್ನೇಹದ ಆಕರ್ಷಕ ಬಂಧಗಳ ಅಂಶಗಳಾಗಿದ್ದವು. ಇಬ್ಬರೂ ದೇವರಲ್ಲಿ ಶ್ರದ್ಧೆಭಕ್ತಿಯುಳ್ಳ ಪುರುಷರಾಗಿದ್ದು, ನಂಬಿಕೆಯುಳ್ಳವರೂ ಮತ್ತು ದೈವಿಕ ಧೈರ್ಯಶೌರ್ಯವುಳ್ಳವರೂ, ನೀತಿಸತ್ಯತೆಗಳನ್ನು ಪ್ರೀತಿಸುವವರೂ; ಅಲ್ಲದೆ ಅವರ ಗುಣಗಳಲ್ಲಿದ್ದ ಈ ಮೂಲಾಂಶಗಳ ಪರಸ್ಪರ ಆವಿಷ್ಕಾರವೇ ಅವರ ಪ್ರಾಣವನ್ನು ಬೆಸೆದು ಒಬ್ಬರನ್ನಾಗಿಸಿತ್ತು.

ಅರಸನಾದ ಸೌಲನ ಹಿರಿಯ ಮಗನಾದ ಯೋನಾತಾನನು ಸಹಜವಾಗಿ ಆತನ ಸಿಂಹಾಸನಕ್ಕೆ

ಬಾಧ್ಯಸ್ಥನಾಗಿದ್ದು ಸೌಲನು ತನ್ನನ್ನು ದೇವರ ಕೋಪಕ್ಕೆ ಗುರಿಮಾಡಿಕೊಳ್ಳದೇ ಸಿಂಹಾಸನ ಸೌಭಾಗ್ಯವನ್ನು ತನ್ನ ಮುಂದಿನ ತಲೆಮಾರಿಗೆ ದೃಡಪಡಿಸಿ ತನ್ನ ಸ್ವಂತ ಅರಸುತನವನ್ನು ಕಡಿತ ಮಾಡಿಕೊಂಡ ಪಕ್ಷದಲ್ಲಿ ನಿಸ್ಸಂದೇಹವಾಗಿಯೂ ಯೋನಾತಾನನು ತನ್ನ ತಂದೆಯ ಉತ್ತರಾಧಿಕಾರಿಯಾಗಿ ಸಫಲನಾಗುತ್ತಿದ್ದನು. (1 ಸಮುವೇಲ 13:13) ಯೋನಾತಾನನು ತನ್ನ ತಂದೆಗೆ ಶ್ರದ್ಧಾಭಕ್ತಿಯುಳ್ಳ ಮಗನೂ ಅಲ್ಲದೆ ದೇವರಿಗೆ ಹಾಗು ತನ್ನ ಜನರಿಗೆ ಚೈತನ್ಯಭರಿತನಾದ ಸೇವಕನೂ ಆಗಿದ್ದನು. ತಂದೆಯ ಮತ್ತು ಮಗನಲ್ಲಿರುವ ಆಳವಾದ ಸ್ನೇಹಬಂಧಗಳು ಅನೇಕ ಅಂಶಗಳ ಮೂಲಕವಾಗಿ ತೋರ್ಪಡಲಾಗಿರುವದು. ಯೋನಾತಾನನು ಫಿಲಿಷ್ಟಿಯರಿಗೆ ವಿರೋಧವಾಗಿ ನಡೆಸಿದ ತನ್ನ ಒಂದು ಅಪಾಯಕರ ದಂಡೆಯಾತ್ರೆಯ ಯೋಜನೆಯನ್ನು ತನ್ನ ತಂದೆಯಿಂದ ಗುಪ್ತವಾಗಿಟ್ಟಿದ್ದನು. (1 ಸಮುವೇಲ 14:1) ಸೌಲನು ತೆಗೆದುಕೊಂಡ ಅಸಾಧಾರಣವಾದ ಪ್ರತಿಜ್ಞೆಯ ಪರಿಣಾಮವನ್ನು ತನ್ನ ಮಗನ ಕಡೆಗಿದ್ದ ತನ್ನ ವಾತ್ಸಲ್ಯದ ಬಗ್ಗೆ ಒತ್ತುಕೊಟ್ಟು ತಿಳಿಸಲಾಗಿತ್ತು. (1 ಸಮುವೇಲ 14:39–44) ಆತನು ಸಾರಿಹೇಳಿದ್ದೇನಂದರೆ ತನ್ನ ಪ್ರತಿಜ್ಞೆಯನ್ನು ಈಡೇರಿಸಲು ಅಗತ್ಯವಾದಲ್ಲಿ ತನ್ನ ಅತ್ಯಂತ ಪ್ರಿಯವಾದುದ್ದನ್ನು ತ್ಯಜಿಸುವನೆಂಬುದು. ಆದರೆ ಜನರು–ದೇವರು ಯೋನಾತಾನನ ಪಕ್ಷದಲ್ಲಿರಬೇಕೆಂದು ತಿಳಿಸಿ ಅತನನ್ನು [ಇಕ್ಕಟ್ಟಿನಿಂದ] ಪಾರುಮಾಡಿದರು. ತಂದೆ ಮತ್ತು ಮಗನ ನಡುವೆ ಬಹು ಸ್ಪಷ್ಟವೂ ನಿಕಟವೂ ಆದ ವಿಶ್ವಾಸವಿತ್ತು. (1 ಸಮುವೇಲ 20:2) "ನನ್ನ ತಂದೆಯು ಅಲ್ಪಕಾರ್ಯವನ್ನಾಗಲಿ ದೊಡ್ಡಕಾರ್ಯವನ್ನಾಗಲಿ ನನಗೆ ತಿಳಿಸದೆ ಮಾಡುವದಿಲ್ಲ." ಅಲ್ಲದೆ ಯೋನಾತಾನನು ತನ್ನ ತಂದೆಯೊಡನೆ ದೊಡ್ಡ ಪ್ರಭಾವ ಹೊಂದಿದವವನಾಗಿದ್ದು (1 ಸಮುವೇಲ 19;6) ದೇವಜನರನ್ನು ಅವರ ವೈರಿಗಳು ಹಾಗು ಶೋಷಕರಿಂದ ಕಾಪಾಡಲು ತಂದೆಯೊಡನೆ ಸಹಕರಿಸುವಲ್ಲಿ ಬಹು ಸಕ್ರಿಯನಾಗಿದ್ದನು.

ಯೋನಾತಾನನು ದೇವರನ್ನು ಹಾಗು ಆತನ ಜನರನ್ನು ಪ್ರೀತಿಸಿ ಅವರ ಪರವಾಗಿರುವ ದೇವರ ಶಕ್ತಿಯಲ್ಲಿ ದೃಡವಾದ ವಿಶ್ವಾಸಹೊಂದಿದ್ದನು. ದಾವೀದನು ಗೊಲ್ಯಾತನ ಎದುರಿನಲ್ಲಿ–ದ್ದಂತೆಯೇ ಯೋನಾತಾನನು ದೇವರಲ್ಲಿನ ನಂಬಿಕೆಯ ಮೂಲಕವಾಗಿ ತನ್ನ ಆಯುಧವಾಹಕನೊಂದಿಗೆ ಫಿಲಿಷ್ಟಿಯರ ಕಾವಲುದಂಡನ್ನು ಸಮೀಪಿಸಿ ಹೀಗೆ ಹೇಳಿದ್ದನು, "ಒಂದು ವೇಳೆ ಯೆಹೋವನು ತಾನೇ ನಮಗೋಸ್ಕರ ಕಾರ್ಯ ನಡಿಸುವನು. ಬಹು ಜನರಿಂದಾದರೂ ಸ್ವಲ್ಪ ಜನರಿಂದಾದರೂ ರಕ್ಷಿಸುವದು ಯೆಹೋವನಿಗೆ ಅಸಾಧ್ಯವಲ್ಲ." – 1 ಸಮುವೇಲ 14:6.

ಯೋನಾತಾನನು ಸಹಜವಾಗಿಯೇ ಇಸ್ರಾಯೇಲ್ಯರ ಸಿಂಹಾಸನಕ್ಕೆ ಬಾಧ್ಯಸ್ಥನಾಗಿದ್ದಾಗ್ಯೂ ಹಾಗೂ ದಾವೀದನು ಆತನ ಸ್ಥಾನವನ್ನು ತೆಗೆದುಕೊಳ್ಳಲು ಅಭಿಷೇಕಿಸಲ್ಪಟ್ಟಿದ್ದಾಗ್ಯೂ ಅಲ್ಲದೆ ಯೋನಾತಾನನು ರಾಜವಂಶಸ್ಥನಾಗಿ ಸುಮಾರು ಮೂವತ್ತು ವರುಷ ವಯಸ್ಸುಳ್ಳವನಾದಾಗ್ಯೂ ಮತ್ತು ದಾವೀದನು ಒಬ್ಬ ಕುರುಬರ ಯವನಸ್ಥನಾಗಿ ಸುಮಾರು ಇಪ್ಪತ್ತಮೂರು ವರುಷಗಳ ವಯಸ್ಸಿನವನಾಗಿರುವ ಸಂಭವವಿದ್ದಾಗಲೂ ಅವರ ಈ ಸೊಬಗಿನ ಸ್ನೇಹದಲ್ಲಿ ಪ್ರತಿಸ್ಪರ್ಧಿ ಮನೋಭಾವವಾಗಲಿ, ಅಸೂಯಾ ಮನೋಭಾವವಾಗಲಿ, ಪೊಳ್ಳು ಘನತೆ ಗೌರವಗಳಾಗಲಿ ಇರಲಿಲ್ಲ. ಇಬ್ಬರೂ ತಮ್ಮ ಸರಳ ಹೃದಯದಿಂದ ದೇವರ ನೇಮಕವನ್ನು ಅತಿ ಜ್ಞಾನವೂ ಅತ್ಯುತ್ತಮವೂ ಆಗಿರುವದೆಂಬುದನ್ನು ಅಂಗೀಕರಿಸಿಕೊಂಡವರಾಗಿ ದೇವರ ಕಡೆಗಿರುವ ತನ್ನ ಜನರ ಕಡೆಗಿರುವ ತಮ್ಮಿಬ್ಬರ ಕಡೆಗಿರುವ ತಮ್ಮ ಪಾತ್ರವನ್ನು ಘನವಂತಿಕೆಯಿಂದ ನಡೆಸಲು ನಿರ್ಣಯಿಸಿ–ಕೊಂಡಿದ್ದರು. ಮತ್ತು ಹೀಗೆ ಯೋನಾತಾನನು ತನ್ನ ಕಾರ್ಯಸ್ಥಾನದ ಕರ್ತವ್ಯದಲ್ಲಿ ತನ್ನ ತಂದೆಯೊಡನೆ ಸಹಕರಿಸುವವನಾಗಿ ದೇವರು ಅವನಿಗೆ ಅಧಿಕಾರ ಸಾಮರ್ಥ್ಯ ನೀಡಿರುವಷ್ಟರವರೆಗೂ ತನಗೆ ಬದಲಾಗಿ ಆಳ್ವಿಕೆಮಾಡಲು ನೇಮಿಸಿದ್ದಾನೆಂದು ತಿಳಿದುಕೊಂಡಿರುವವನ ರಕ್ಷಣೆ ಹಾಗು ಕಾಪಾಡುವಿಕೆಗಾಗಿ ತನ್ನ ಕಾರ್ಯಸ್ಥಾನದ ಸವಲತ್ತುಗಳನ್ನು ಪ್ರಸಂಶಾರ್ಹವಾಗಿ ಬಳಸಿಕೊಂಡಿದ್ದನು.

ಅಲ್ಲದೆ ಸೌಲನು ತನಗೂ ಹಾಗು ತನ್ನ ಮನೆತನಕ್ಕೂ ಪ್ರತಿಸ್ಪರ್ಧಿ ಎಂದು ಭಾವಿಸಿರುವವನಿಗೆ ವಿರೋಧವಾಗಿ ಮತ್ಸರ ಅಸೂಯೆ ಹಗೆತನ ಪ್ರತಿಕಾರ ಮಾನೋಭಾವದಿಂದ ಕೂಡಿದವನಾಗಿ ಆತನನ್ನು [ದಾವೀದನನ್ನು] ಸಂಹರಿಸಲು ನಿರ್ಧರಿಸಿ ಸತತವಾಗಿ ಪರಿಶ್ರಮಿಸುತ್ತಿರಲು, ಯೋನಾತಾನನು ತನ್ನ ಅಧಿಕಾರದಲ್ಲಿರುವ ಎಲ್ಲಾ ವಿಧಾನಗಳಿಂದಲೂ ತನ್ನ ಸ್ವಂತ ಜೀವವನ್ನೂ ಸಹ ಅಪಾಯಕ್ಕೆ ಗುರಿಮಾಡಿಕೊಂಡು ದಾವೀದನನ್ನು ಕಾಪಾಡಿ ಸಂರಕ್ಷಿಸಿದ್ದನು. – 1 ಸಮುವೇಲ 20:32–33.

ದಾವೀದನು ಮೊದಲು ಸೌಲನ ಮನೆಗೆ ಆತನ ಸೇವೆಮಾಡಲು ಬಂದಾಗ, ಹಾಗೂ ಯೋನಾತಾನನ ಜೀವವು ದಾವೀದನ ಜೀವದೊಡನೆ ಬೆಸೆದುಕೊಂಡಿರಲು "ಯೋನಾತಾನನು ದಾವೀದನನ್ನು ತನ್ನ ಪ್ರಾಣದಂತೆಯೇ ಪ್ರೀತಿಸಿದ್ದರಿಂದ ಅವನೊಡನೆ ಒಡಂಬಡಿಕೆ ಮಾಡಿಕೊಂಡನು. [ದಾವೀದನು ದೇವರಿಂದ ಅಭಿಷೇಕಹೊಂದಿದವನೆಂದೂ ಅಂದರೆ ಕ್ರಮೇಣ ರಾಜ್ಯಕ್ಕೆ ದೇವರ ಆಯ್ಕೆ ಎಂಬ ಅಂಶವನ್ನು ಗುರುತಿಸಿಕೊಂಡವನಾಗಿ] ಇದಲ್ಲದೆ ಅವನು ತನ್ನ ಮೇಲಿದ್ದ ನಿಲುವಂಗಿಯನ್ನು ತನ್ನ ಯುದ್ಧವಸ್ತ್ರಗಳನ್ನು ಕತ್ತಿ ಬಿಲ್ಲು ನಡುಕಟ್ಟುಗಳನ್ನು ದಾವೀದನಿಗೆ ಕೊಟ್ಟಿದ್ದನು. ಹೀಗೆ ಅವರು ತಮ್ಮ ಇಬ್ಬರ ನಂಬಿಗಸ್ತಿಕೆಯುಳ್ಳ ಸ್ನೇಹ ಸಂಬಂಧವಾಗಿ ಎಲ್ಲಾ ವಿಷಯಗಳಲ್ಲಿಯೂ ದೇವರ ಚಿತ್ತಕ್ಕೆ ತಮ್ಮನ್ನು ಒಳಪಡಿಸಿಕೊಂಡವರಾಗಿ ಒಡಂಬಡಿಕೆ ಮಾಡಿಕೊಂಡಿದ್ದರು".

ದಾವೀದನು ಯೋನಾತಾನನ್ನು ಬಿಟ್ಟು ತನ್ನ ಜೀವವನ್ನು ಕಾಪಾಡಿಕೊಳ್ಳಲು ಸೌಲನ ಸಮ್ಮುಖದಿಂದ ಓಡಿಹೋಗುವಾಗ ಮತ್ತೆ ಅವರು ನಿರಂತರವಾದ ಸ್ನೇಹದ ಸಂಬಂಧವಾಗಿ ಒಡಂಬಡಿಕೆ ಮಾಡಿಕೊಂಡರು. "ದಾವೀದನು ಕಲ್ಲುಕುಪ್ಪೆಯ ಬಳಿಯಿಂದೆದ್ದು ಬಂದು [ಯೋನಾತಾನನನ್ನು ಸಮೀಪಿಸಿ] ಮೂರು ಸಾರಿ ಸಾಷ್ಟಾಂಗವಾಗಿ ನಮಸ್ಕಾರಮಾಡಿ ಯೋನಾತಾನನನ್ನು [ತನ್ನ ಸ್ನೇಹಿತನ ವ್ಯಕ್ತಿತ್ವ ಹಾಗು ಆತನ

ಕಾರ್ಯಸ್ಥಾನದ ಮೇಲಿನ ಉನ್ನತ ಗೌರವದ ಸಂಕೇತವಾಗಿ] ವಂದಿಸಿದನು. ಅವರು ಒಬ್ಬರಿಗೊಬ್ಬರು ಮುದ್ದಿಟ್ಟುಕೊಂಡು ಅತ್ತರು; ದಾವೀದನು ಬಹಳವಾಗಿ ಅತ್ತನು. ಅನಂತರ ಯೋನಾತಾನನು ದಾವೀದನಿಗೆ–ಸಮಾಧಾನದಿಂದ ಹೋಗು; ಆತನು ನನ್ನ ತಂದೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರಲಿ. [ನೀನು ರಾಜ್ಯವನ್ನು ಪಡೆದುಕೊಂಡು ಬರುವಾಗ] ನೀನು ಯೆಹೋವನನ್ನು ನೆನಸಿ ನಿನ್ನ ಜೀವಮಾನವೆಲ್ಲಾ ನನಗೆ ಕೃಪೆತೋರಿಸು; ನಾನು ಸತ್ತ ನಂತರ ನನ್ನ ಮನೆಯ ಮೇಲೆಯೂ ಶಾಶ್ವತವಾಗಿ ನಿನ್ನ ದಯವಿರಲಿ. [ಯೋನಾತಾನನು ಮುಂದೆ ತನ್ನ ವಂಶಸ್ಥರು ಸಿಂಹಾಸನಕ್ಕೆ ತಮ್ಮ ಹಕ್ಕನ್ನು ಪ್ರತಿಪಾದಿಸಿದಲ್ಲಿ ದಾವೀದನು ಶೋಧನೆಗೆ ಒಳಗಾಗಿ ಹೀಗೆ ಮಾಡಬಹು–ದೆಂಬುದನ್ನು ಪೂರ್ವಭಾವಿಯಾಗಿ ನಿರೀಕ್ಷಿಸಿದ್ದನು] ಯೆಹೋವನು ನಿನ್ನ ಎಲ್ಲಾ ಶತ್ರುಗಳನ್ನು ಭೂಮಿಯಿಂದ ತೆಗೆದು ಹಾಕಿದ ಮೇಲಾದರೂ ಅದು ನನ್ನ ಮನೆಯಿಂದ ಅಗಲದಿರಲಿ... ತಾನು ದಾವೀದನನ್ನು ತನ್ನ ಪ್ರಾಣದಂತೆ ಪ್ರೀತಿಸುತ್ತಿದ್ದರಿಂದ ಆ ಪ್ರೀತಿಸಾಕ್ಷಿಯಾಗಿ ಅವನಿಂದ ಪ್ರಮಾಣ ಮಾಡಿಸಿದನು.– 1 ಸಮು. 20:13–17

ಒಂದು ಅಥವಾ ಎರಡು ವರುಷಗಳ ನಂತರ ಕೇವಲ ಅವರು ಮತ್ತೊಂದು ಸಾರಿ ಸಂಧಿಸಿದ್ದರು. ಅದು ಜೀಫ್ ಅರಣ್ಯದಲ್ಲಿ ಇದೇ ರೀತಿಯ ಒಂದು ಸನ್ನಿವೇಶದಲ್ಲಿ ನಡೆದಿತ್ತು. ಸೌಲನು ಆಗಲೂ ತನ್ನ ಪ್ರತಿಸ್ಪರ್ಧಿಯನ್ನು ಕೊಲ್ಲುವ ಸಲುವಾಗಿ ಆತನನ್ನು ಹುಡುಕಾಡುತ್ತಿದ್ದನು, ಅಲ್ಲದೆ ಯೋನಾತಾನನು ದಾವೀದನ ಸ್ಥಿತಿಯನ್ನು ತಿಳಿದವನಾಗಿ ಆತನನ್ನು ಕಂಡುಕೊಳ್ಳಲು ಶ್ರಮಿಸುತ್ತಿದ್ದನು. "ಆಗ ಸೌಲನ ಮಗನಾದ ಯೋನಾತಾನನು ಅಲ್ಲಿಗೆ ಹೋಗಿ ದಾವೀದನಿಗೆ–ಭಯಪಡಬೇಡ; ನೀನು ನನ್ನ ತಂದೆಯಾದ ಸೌಲನ ಕೈಗೆ ಸಿಕ್ಕಿಬೀಳುವದಿಲ್ಲ; ನೀನು ಇಸ್ರಾಯೇಲ್ಯರ ಅರಸನಾಗುವಿ; ನಾನು ನಿನಗೆ ಎರಡನೆಯ–ವನಾಗಿರುವೆನು. ಹೀಗಾಗುವದೆಂದು ನನ್ನ ತಂದೆಯಾದ ಸೌಲನೂ ತಿಳಿದುಕೊಂಡಿದ್ದಾನೆ ಎಂದು ಹೇಳಿ ದೇವರಲ್ಲಿ ಅವನನ್ನು ಬಲಪಡಿಸಿದನು. – 1 ಸಮುವೇಲ 23:16–17.

ಈ ಹೃದಯಸ್ಪರ್ಶಿ ನಿರೂಪಣೆಯಲ್ಲಿ ಅಮೂಲ್ಯವಾದ ಪಾಠಗಳಿರುವದು ಅದನ್ನು ನಾವು ಕಡೆಗಣಿಸಲು ಸಾಧ್ಯವಾಗದು.

(1) ಇದು ಅಪರೂಪದ ಘಟನೆಯಾದರೂ, ನಿಜವಾದ ಹಾಗು ದೀರ್ಘಕಾಲ ಉಳಿಯವ ಸ್ನೇಹವು ಸಾಧ್ಯವೆಂಬುದನ್ನು ತೋರಿಸಿಕೊಡುವದು.

(2) ನಿಜವಾದ ಹಾಗು ಸುದೀರ್ಘವಾದ ಸ್ನೇಹವು ಕೇವಲ ತಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಪೂರ್ಣವಾಗಿ ಅಧೀನಪಡಿಸಿ ಕೊಂಡು ನೀತಿಸತ್ಯತೆಗಳ ಸ್ಥಿರವಾದ ಸಿದ್ಧಾಂತಗಳನ್ನು ಕಾರ್ಯಗತಗೊಳಿಸಿರುವ ಘನವಂತಿಕೆಯ ಮತ್ತು ನಿಸ್ವಾರ್ಥ ಮನಸ್ಸುಗಳ ನಡುವೆ ಅಸ್ತಿತ್ವದಲ್ಲಿರಲು ಸಾಧ್ಯವೆಂಬುದನ್ನು ಸೂಚಿಸುತ್ತದೆ.

(3) ಇಂಥಾ ಸ್ನೇಹವು ಇಸ್ರಾಯೇಲ್ಯರ ಧರ್ಮಶಾಸ್ತ್ರದ ಮಬ್ಬು ಬೆಳಕಿನಲ್ಲಿ ಸಂಭವಿಸಿರುವದೇ ಆದಲ್ಲಿ ಸುವಾರ್ತಾ ಪ್ರಕಾಶದಲ್ಲಿ ಇದು ಆಗಾಗ್ಗೆ ಬಹು ಅಧಿಕವಾಗಿ ಸಂಭವಿಸಬೇಕಿರುವದೆಂದು ಸೂಚಿಸುತ್ತದೆ. ನಿಜ, ಇಂಥದನ್ನು ತೋರ್ಪಡಲಾಗುವ ಸನ್ನಿವೇಶಗಳು ಯಾವಾಗಲೂ ಇರುವದಿಲ್ಲ, ಆದರೆ ಈ ರೀತಿಯ ಹಲವಾರು ಸನ್ನಿವೇಶಗಳು ಇರುತ್ತವೆ. ದೇವರ ಚಿತ್ತ ಹಾಗು ನೇಮಕ ಅಲಕ್ಷ್ಯಮಾಡಿ ಬದಲಾಗಿ ತನ್ನ ಸ್ವಂತ ಚಿತ್ತ ಹಾಗು ವಿಧಾನಗಳನ್ನು ಅನುಸರಿಸುವ ಶೋಧನೆಗೆ ಒಳಗಾಗುವಂಥ ಪ್ರತಿಸ್ಪರ್ಧಿ ಮನೋಭಾವ ಯಾವಾಗಲೂ ಇರುವದು.

ಹೀಗೆ ಶೋಧನೆಗೆ ಒಳಗಾದಾಗ ನಾವು ಯೋನಾತಾನನ ಮತ್ತು ಸಮುವೇಲನ ಘನವಂತಿಕೆಯನ್ನು ನೆನಪಿಗೆ ತಂದುಕೊಳ್ಳೋಣ: ಯೋನಾತಾನನು ದಾವೀದನ ಕೈಗಳನ್ನು ಬಲಪಡಿಸುವವನಾಗಿ ಹೀಗೆ ಹೇಳಿದ್ದನು–"ಭಯಪಡಬೇಡ; ನೀನು ನನ್ನ ತಂದೆಯಾದ ಸೌಲನ ಕೈಗೆ ಸಿಕ್ಕಿಬೀಳುವದಿಲ್ಲ; ನೀನು ಇಸ್ರಾಯೇಲ್ಯರ ಅರಸನಾಗುವಿ; ನಾನು ನಿನಗೆ ಎರಡನೆಯವನಾಗಿರುವೆನು;" ಸಮುವೇಲನು ತನ್ನ ಪ್ರತಿಸ್ಪರ್ಧಿಯಾದ ಸೌಲನ ಬಗ್ಗೆ ಹೀಗೆ ಹೇಳಿದ್ದನು–"ನೋಡಿದಿರಾ, ಯೆಹೋವನಿಂದ ಆರಿಸಲ್ಪಟ್ಟವನು ಇವನೇ; ಸರ್ವ ಜನರಲ್ಲಿ ಇವನಿಗೆ ಸಮಾನರು ಇಲ್ಲವೇ ಇಲ್ಲ!" ಹೀಗಾಗಿ ನಾವು–"ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗೋಣ." ಮತ್ತು ದೇವರ ಚಿತ್ತವು ದೇವರ ಮಾರ್ಗವು ಅಭಿವೃದ್ಧಿಯಾಗುವದನ್ನು ನೋಡಲು ಎಂದೂ ಸಂತೋಷಿಸುವವರಾಗೋಣ.

ದಾವೀದ ಯೋನಾತಾನರ ಸ್ನೇಹವು ಮಹಿಮಾ ಪದವಿಗೆ ಸೇರಿದ ಸಭೆ ಹಾಗು ಅವರ ನಂತರ ದೇವರ ರಾಜ್ಯದಲ್ಲಿ ಆಳ್ವಿಕೆ ಮಾಡುವ ಭೂಲೋಕದಲ್ಲಿನ ಪ್ರಭುಗಳಿಗೂ ಇರುವ ಸೊಗಸಾದ ಹೊಂದಾಣಿಕೆಯ ಬಗ್ಗೆ ಸಹ ಸೂಚಿಸಲಿರುವಂತೆ ತೋರುವದು. ಅವರ ನಡುವೆ ಯಾವ ಅಸಮ್ಮತಿ ಅಥವಾ ಪ್ರತಿಸ್ಪರ್ಧಿ ಮನೋಬಾವ ಅಥವಾ ಅಸೂಯೆಯ ಒಂದು ಕುರುಹೂ ಇರುವುದಿಲ್ಲ; ಯಾಕಂದರೆ ದೇವರ ಭವ್ಯವಾದ ಯೋಜನೆಯಲ್ಲಿನ ತನ್ನ ಗೌರವಿತ ಸ್ಥಾನವನ್ನು ಭರಿಸಲು ಪ್ರತಿಯೊಬ್ಬನೂ ಹರ್ಷವುಳ್ಳವನಾಗಿರುವನು, ಹಾಗು ಮತ್ತೊಬ್ಬನನ್ನು ತನ್ನ ಸ್ವಂತ ಪ್ರಾಣದಂತೆಯೇ ಪ್ರೀತಿಸುವನು. ಸುವಾರ್ತಾಯುಗದಲ್ಲಿನ ಸಭೆಯು ಅಬ್ರಹಾಮನ ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾದ ದೇವಾನುಗ್ರಹದ ಮೊದಲನೇ ಸ್ಥಾನವನ್ನು ಪಡೆಯುವದಾದರೂ ಪೂರ್ವದಲ್ಲಿ ಹೆಸರುಗೊಂಡಿರುವ ನಂಬಿಕೆಯ ವೀರರು ಗೌರವದಲ್ಲಿ ಎರಡನೇ ಸ್ಥಾನದಲ್ಲಿರುವದನ್ನು ತಾವು ಕಂಡುಕೊಳ್ಳುವರು, ಹೀಗೆ ಇದನ್ನು ಪಡೆಯಲು ಸಂತೋಷಿಸುವರು ಸಹ ಯಾಕಂದರೆ ದೇವ ಜ್ಞಾನ ಹಾಗು ಪ್ರೀತಿಯು ಹೀಗೆ ಇದನ್ನು ನಿಯೋಜಿಸಿರುವದು.

ಅಲ್ಲದೆ ದಾವೀದನು ಯೋನಾತಾನನ ಮನೆತನದವರ ಮೇಲೆ ತಾನು ಕರುಣೆತೋರಿಸುವದನ್ನು ನಿಲ್ಲಿಸಬಾರದೆಂದು ಯೋನಾತಾನನೊಡನೆ ಮಾಡಿಕೊಂಡ ತನ್ನ ಒಡಂಬಡಿಕೆ ನೆನಪಿನಲ್ಲಿಟ್ಟುಕೊಂಡಿದ್ದಂತೆಯೇ (2 ಸಮುವೇಲ 9:1–13)

ಮಹಿಮಾ ಪದವಿಗೆ ಸೇರಿದ ಸಭೆಯು [ಪೂರ್ವಕಾಲದಲ್ಲಿ ಹೆಸರುಗೊಂಡ] ನಂಬಿಕೆಯು ವೀರರನ್ನು ಮೊದಲು ಆಶೀರ್ವದಿಸಬೇಕೆಂದೂ ಆನಂತರ ತಮ್ಮ ಕಾನೂನು ವ್ಯಾಪ್ತಿಗೆ ಬರುವ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಬೇಕೆಂಬ ತನ್ನ ಒಡಂಬಡಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳುವದು. ಸೈತಾನು ("ಘರ್ಜಿಸುವ ಸಿಂಹದೋಪಾದಿಯಲ್ಲಿ" (1 ಪೇತ್ರ 5:8) ಕೆರಳಿ ನಮ್ಮನ್ನು ಬೆನ್ನಟ್ಟಿ ಬರುವಾಗ ಮೋಶೆಯ ಧರ್ಮಶಾಸ್ತ್ರ ಹಾಗು ಪ್ರವಾದಿಗಳ ಮೂಲಕವಾದ ಅವರ ಪ್ರೀತಿಪೂರ್ವಕವಾದ ಸೇವೆಯು ಮತ್ತು ಅವರ ಘನವಂತಿಕೆಯ ಭಕ್ತಿಪೂರ್ಣ ಜೀವನ ಹಾಗು ಗುಣಸ್ವಭಾವಗಳ ಉದಾಹರಣೆಗಳು ನಮಗೆ ಬಹು ಉಪಯೋಗಕರವಾಗಿರುವವು; ಅದು ಸೌಲನು ದಾವೀದನನ್ನು ಬೆನ್ನಟ್ಟಿಕೊಂಡು ಹೋಗಿದ್ದ ಸಂಗತಿಯು "ನಿರಂತರವಾಗಿ ನೆನಪಿನಲ್ಲಿರುವ" ಹಾಗೆಯೇ ಇರುವದು.

*****

ಮೊದಲನೇ ತಿಂಗಳಿನ ಪಸ್ಕ ಹಬ್ಬವು

ರೀಪ್ರಿಂಟ್ಸ್ ಪುಟ 4127 (ಆಯ್ದುಕೊಂಡ ಭಾಗ)

ನಮ್ಮ ಸೌರಮಾನ ಪಂಚಾಗವನ್ನು [ಕ್ಯಾಲೆಂಡರ್] ಚಂದ್ರಮಾನ ಕಾಲವನ್ನು ಸೌರಮಾನ ಕಾಲದೊಂದಿಗೆ ಸಂಯೋಜಿಸಿರುವ ಯೆಹೂದ್ಯರ ಪಂಚಾಂಗದೊಡನೆ ಹೊಂದಾಣಿಸಲು ಅನೇಕರು ಗಣನೀಯ ಪ್ರಮಾಣದ ಕಷ್ಟಗಳನ್ನು ಅನುಭವಿಸಿರುವರು. ಇಂಥವರಿಗೆ ಸಹಾಯಮಾಡುವ ಸಲುವಾಗಿ ನಾವು ಈ ವಿಷಯದ ಬಗ್ಗೆ ಸ್ಮಿತ್ ಸತ್ಯವೇದ ನಿಘಂಟಿನ ಒಂದು ಆಯ್ದಭಾಗವನ್ನು ಹಾಗು ಇದೇ ವಿಷಯವಾಗಿ ಇಬ್ರೀಯ ಕಾಲಗಣನೆ ಪಂಡಿತರಾದ ಲಿಂಡೋರವರ [ವ್ಯಾಖ್ಯಾನದ] ಆಯ್ದಭಾಗಗಳೊಂದಿಗೆ ಉಲ್ಲೇಖಿಸುವೆವು

ಸ್ಮಿತ್ ಸತ್ಯವೇದ ನಿಘಂಟು ಹೀಗೆ ಹೇಳುವದು:–

"ಚಂದ್ರನು ಒಂದು ಗ್ರಹಕೂಟದಿಂದ ಮತ್ತೊಂದೆಡೆ ಸುತ್ತುವದನ್ನು ಒಂದು ಚಂದ್ರಮಾನ ತಿಂಗಳೆಂದು ಕರೆಯಲಾಗಿದ್ದು; ಅದು 29:12:44:3–1/3, ಅಂದರೆ ಇದು 29–1/2 ದಿನ ಮತ್ತು ಸುಮಾರು 3/4 ಗಂಟೆ ಆಗುತ್ತದೆ, ಇದನ್ನು 30 ದಿನ ಅನುಸರಿಸಿ ಬಂದ 29 ದಿನ ಎಂದು ಪರ್ಯಡಿಸುವದಕ್ಕಿಂತಲೂ ಉತ್ತಮವಾದುದನ್ನು ಮಾಡದಿರಲು ಸಾಧ್ಯವಿರುವದಿಲ್ಲ. ಒಂದು ತಿಂಗಳು 30 ದಿನಗಳನ್ನು ಹೊಂದಿದ್ದಾಗ ಆ ತಿಂಗಳಿನ ಕಡೇ ದಿನವು ಮುಂದಿನ ತಿಂಗಳಿನ ಮೊದಲನೇ ದಿನವನ್ನು ಹಿಂಬಾಲಿಸಿ ಬರುವ ಆ ಎರಡು ದಿನಗಳನ್ನು ಹೊಸ ಚಂದ್ರವೆಂದು ಕರೆಯಲಾಗುತ್ತದೆ. ಇದನ್ನು ಒಂದು ರಜೆಯ ದಿನವನ್ನು ಆ ದಿನದ ಒಂದು ಭಾಗವಾಗಿ ತೆಗೆದುಕೊಳ್ಳಲಾಗದೆಂಬ ಸಿದ್ಧಾಂತದ ಆಧಾರದ ಮೇಲೆ ಪರಿಗಣಿಸಲಾಗುತ್ತದೆ. 30ನೇ ದಿನವು ಹಿಂದಿನ ದಿನದ ಅರ್ಧಭಾಗವಾಗಿಯೂ ಹಾಗು ಹೊಸ ಚಂದ್ರನ ಅರ್ಧಭಾಗವಾಗಿಯೂ ಅಗಿದ್ದು ಆ ಸಂಪೂರ್ಣವಾದ ದಿನವನ್ನು ರಜೆಯ ದಿನವೆಂದು ಪರಿಗಣಿಸಲಾಗುತ್ತದೆ; ಇದನ್ನು ಹೊಸ ಚಂದ್ರನ ಪೂರ್ಣ ದಿನವೆಂದು ಅದರ ಚಲನೆಯ ಪಥವನ್ನು ಅನುಸರಿಸಿ ಹೇಳಲಾಗುವದು. ಈ ನಿಯಮವನ್ನು ಪುರಾತನ ಕಾಲದಲ್ಲಿ ಅನುಸರಿಸಲಾಗುತ್ತಿದ್ದು, ಅದನ್ನು 1 ಸಮುವೇಲ 20:5,27 ಈ ವಚನಗಳಲ್ಲಿ ಕಾಣುತ್ತೇವೆ.

*****

ಒಂದು ಗಮನಾರ್ಹ ಸ್ನೇಹ

ರೀಪ್ರಿಂಟ್ಸ್ ಪುಟ 3232

1 ಸಮುವೇಲ 20:12–23

"ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು" – ಜ್ಞಾನೋಕ್ತಿ 18:24

ಚರಿತ್ರೆಯು ಪೂರ್ವಕಾಲದಲ್ಲಿನ ಮಹಾ ಪುರುಷರ ನಡುವಿನ ಗಾಢವಾದ ಸ್ನೇಹದ ಪ್ರಸಂಗಗಳನ್ನು ಪ್ರಸ್ತುತಿಪಡಿಸುತ್ತದೆ. ಆದರೆ ಇವು ಯಾವುದೂ ಈ ಪಾಠದಲ್ಲಿ ಉಲ್ಲೇಖಿಸಿರುವ ದಾವೀದ ಯೋನಾತಾನರ ನಡುವಿನ ಸ್ನೇಹವನ್ನು ಮೀರಿಸುವದಿಲ್ಲವೆಂದು ನಮಗೆ ತಿಳಿಸುವದು. ದಾವೀದನ ಪರವಾದ ಯೋನಾತಾನನ ಪ್ರೀತಿಯು ಸಂಪೂರ್ಣವಾಗಿ ದಾವೀದನಿಂದ ಪ್ರತಿಯಾಗಿ ತೋರಲ್ಪಟ್ಟದ್ದು ಸ್ಪಷ್ಟವಾಗಿರಲು, ಆದು ಕೇವಲ ನಿಸ್ವಾರ್ಥಸ್ನೇಹವಾಗಿ ಪ್ರಜ್ವಲಿಸುವದು ಮಾತ್ರವಲ್ಲದೆ ಅದು ಯೋನಾತಾನನ ಹಿತಾಸಕ್ತಿಗಳಿಗೆ ಮಾರಕವಾಗಿ ತೋರಿತ್ತಾದರೂ ವಾಸ್ತವದಲ್ಲಿ ಅದು ಹಾಗೆ ಇರಲಿಲ್ಲ.

ಅರಸನಾದ ಸೌಲನ ಮಗನಾಗಿ ಯೋನಾತಾನನು ಇಸ್ರಾಯೇಲ್ಯರ ಸಿಂಹಾಸನಕ್ಕೆ ಬಾಧ್ಯಸ್ಥನೆಂದು ಗುರುತಿಸಲ್ಪಟ್ಟಿದ್ದು ಆ ಸಮಯದಲ್ಲಿ ಆತನು ಸುಮಾರು ಮೂವತ್ತೈದು ವರುಷದವನಾಗಿದ್ದನು. ದಾವೀದನು ಸುಮಾರು ಇಪ್ಪತ್ತೊಂದು ವರುಷ ವಯಸ್ಸಿನ ಹಳ್ಳಿಗಾಡಿನ ಯುವಕನಾಗಿದ್ದು ಅನಿರೀಕ್ಷಿತವಾಗಿ ದೇಶದವರ ಎದುರಿನಲ್ಲಿ ಪ್ರಾಮುಖ್ಯತೆಗೆ ಏರಿದವನಾಗಿ ಒಬ್ಬ

ಸಹಸ್ರಾಧಿಪತಿಯಾಗಿ ನೇಮಕಗೊಂಡಿದ್ದು ಕೇವಲ ಆಗಷ್ಟೇ ಸೌಲನ ಮಗಳನ್ನು ಮದುವೆಯಾಗಿದ್ದನು. ದಾವೀದನು ಜನಪ್ರಿಯವಾಗಿರುವ ದೆಸೆಯಿಂದ ಸೌಲನು ತಾನೇ ಆವನನ್ನು ಒಬ್ಬ ಪ್ರತಿಸ್ಪರ್ಧಿಯನ್ನಾಗಿ ಕಂಡುಕೊಂಡಿದ್ದನು. ಆದರೆ ಎಂದಾದರೂ ಒಂದು ದಿನ ಸೌಲನಿಗೆ ಉತ್ತರಾಧಿಕಾರಿಯಾಗಲು ದಾವೀದನಿಗೆ ಎಲ್ಲವು ಪ್ರತಿಕೂಲವಾಗಿದ್ದವು. ಹೀಗಿರಲಾಗಿ ಪರಿಪೂರ್ಣತೆಯಿಂದ ಬಿದ್ದುಹೋದ ಮಾನವನ ದೃಷ್ಟಿಯಿಂದ ಯೋನಾತಾನನಿಗೆ ದಾವೀದನನ್ನು ಒಬ್ಬ ವಿರೋಧಿ ಮತ್ತು ಪ್ರತಿಸ್ಪರ್ಧಿಯಾಗಿ ಎಣಿಸುವದಕ್ಕೆ ಪ್ರತಿಯೊಂದು ಕಾರಣಗಳಿದ್ದು ಹೀಗೆ ಬಿದ್ದುಹೋಗಿರುವ ಸ್ವಭಾವದಲ್ಲಿನ ಅಸೂಯೆ ಮತ್ಸರಗಳು ಯೋನಾತಾನನ ಹೃದಯದಲ್ಲಿ ಗೂಡುಕಟ್ಟಿಕೊಂಡು ಅವು ಅಲ್ಲಿ ಪ್ರೀತಿ ಸ್ನೇಹಗಳಿಗೆ ಬದಲಾಗಿ ಹಗೆತನ ವೈರತ್ವಗಳು ಹುಟ್ಟುವಂತೆಮಾಡುವದನ್ನು ನಿರೀಕ್ಷಿಸಬಹುದಾಗಿತ್ತು. ಈ ಸನ್ನಿವೇಶಗಳ ಮೂಲಕವಾಗಿ ರಚನೆಗೊಂಡಿದ್ದ ಇಬ್ಬರು ಯವನಸ್ಥರ ನಡುವಿನ ಅಸಾಧಾರಣ ಸ್ನೇಹವು ಒಂದು ಅತಿ ಆಶ್ಚರ್ಯಕರವಾದವುಗಳಲ್ಲಿ ಒಂದಾಗಿರುವದಾಗಿ ಇತಿಹಾಸದ ಪುಟಗಳಲ್ಲಿ ಸೇರಿತ್ತು.

ಯೋನಾತಾನನ ಪ್ರಾಣವು ದಾವೀದನ ಪ್ರಾಣದೊಂದಿಗೆ ಹೇಗೆ ಹೆಣೆದುಕೊಂಡಿತ್ತೆಂದು ನಾವು ಓದಿರುವೆವು. ಹೇಗಂದರೆ ಅವರ ಅನುರಾಗ ವಿಶ್ವಾಸ ಪ್ರೀತಿ ಇವುಗಳು ಬೆಸೆದುಕೊಂಡು ಹೋಗಿದ್ದವು. ದಾವೀದನು ಸೌಲನ ಆಸ್ಥಾನದಲ್ಲಿ ಇರಲು ಬಂದಾಗ ಯೋನಾತಾನನು ಅವನಿಗೆ ತನ್ನ ಸ್ವಂತ ವಸ್ತ್ರಗಳಲ್ಲಿ ಕೆಲವೊಂದನ್ನು ಕೊಟ್ಟಂಥದ್ದು ಕೇವಲ ಈ ಸ್ನೇಹ ಮತ್ತು ಪ್ರೀತಿಯ ಇತರ ಅಮೂಲ್ಯ ಮನೋಭಾವಗಳು ಕಾರ್ಯ–ಪ್ರವೃತ್ತವಾದುದರ ಬಾಹ್ಯ ಪ್ರದರ್ಶನವಾಗಿತ್ತು. ದಾವೀದನಿಗೆ ಘನತೆಯನ್ನು ತಂದುಕೊಟ್ಟು ಆತನ ಗೌರವವನ್ನು ದೊರಕಿಸಿಕೊಟ್ಟಿದ್ದೆಲ್ಲವೂ ಯೋನಾತಾನನ ಜನ್ಮಸಿದ್ಧ ಹಿತಾಸಕ್ತಿಗಳಿಗೆ ಚ್ಯುತಿತರುವಂಥವುಗಳಾಗಿದ್ದವು. ಈತನು [ಸಿಂಹಾಸನಕ್ಕೆ] ಸ್ಪಷ್ಟವಾದ ಬಾಧ್ಯತೆ ಹೊಂದಿರಲು, [ರಾಜನ] ಆಸ್ಥಾನದಲ್ಲಿ ತನ್ನದೇ ಆದ ಗೌರವ ಸ್ಥಾನವನ್ನು ಕಾಪಾಡಿಕೊಳ್ಳಲು ಅಭಿಲಾಷಿಸುವಂಥದ್ದು ಈತನಿಗೆ ಅಯುಕ್ತವಾಗಿರಲಿಲ್ಲ. ತಮ್ಮ ಸ್ವಂತ ಗೌರವ ಉನ್ನತಿಗಳಿಗಾಗಿ ಇತರರನ್ನು ತುಳಿದುಬಿಡುವದು ಅವಶ್ಯವೆಂದು ಭಾವಿಸುವಂಥ ತಪ್ಪನ್ನು ಮಾಡುವದು ಸಂಕುಚಿತ ಮನಸ್ಸುಳ್ಳವರಿಗೆ ಸಹಜವಾಗಿರುವದು; ಆದರೆ ಯೋನಾತಾನನು ಹೀಗೆ ಅಲ್ಪ ಮನಸ್ಕನಾಗಿರದೆ ಘನವಂತಿಕೆ ಹೃದಯಹೊಂದಿದ್ದ ಕಾರಣ ಈತನ ಗುಣಸ್ವಭಾವವನ್ನು ತಿಳಿದವರೆಲ್ಲರೂ ಅಂದಿನಿಂದ ಇಂದಿನ ವರೆಗೂ [ಈತನನ್ನು] ಇಷ್ಟಪಡುವರು.

ಪ್ರತಿಯೊಂದು ಸಂಗತಿಗೂ ಕಾರಣವುಂಟು. ಹೀಗಾಗಿ ಈ ಎರಡು ಘನವಂತಿಕೆಯುಳ್ಳ ಜೀವಿಗಳ ನಡುವಿನ ಈ ಪ್ರೀತಿಗೂ ಕಾರಣವಿರಬೇಕು. ಯಾವುದು ನ್ಯಾಯವೂ ಸತ್ಯವೂ ಶುದ್ಧವೂ ಘನತೆಯೂ ಗೌರವವೂ ಆಗಿರುವದೋ ಅವುಗಳನ್ನು ನಾವು ಪ್ರೀತಿಸಿ ಅಮೂಲ್ಯವೆಂದು ಪರಿಗಣಿಸಬೇಕೆಂದು ಅಪೋಸ್ತಲನು ಹೇಳಿರುವನು; ಇವುಗಳಿಗೆ ವ್ಯತಿರಿಕ್ತವಾದವುಗಳ ಮೇಲಿನ ಪ್ರೀತಿಯು ಅನುಚಿತವೆಂಬದು ಇಲ್ಲಿ ಅನ್ವಯಿತ. ನೀತಿ ಮತ್ತು ಸದ್ಗುಣಗಳ ತತ್ವಗಳನ್ನು ಪ್ರೀತಿಸುವದು ಹಾಗು ವ್ಯಕ್ತಿಗಳನ್ನು ಪ್ರೀತಿಸುವದು ಇವುಗಳಿಗೆ ವ್ಯತ್ಯಾಸವಿರುವದೆಂಬುದು ನಿಜವೇ; ಆದರೆ ನಾವು ಗಮನಿಸ ಬಯಸುವದೆಂದರೆ ವ್ಯಕ್ತಿಗಳ ಮೇಲಿನ ಪ್ರೀತಿಯು ಅವರು ಹೊಂದಿರುವ ಘನತೆ ಹಾಗು ಪ್ರಸಂಶಾರ್ಹ ಪ್ರೀತಿಯ ಗುಣಗಳ ಮೇಲೆ ಆಧಾರಗೊಂಡಿರಬೇಕೆಂಬದು. ಇವರಲ್ಲಿ ಒಬ್ಬನಿಗೆ ಕೆಟ್ಟ ಹಾಗು ಹೀನ ಗುಣಗಳಿದ್ದಲ್ಲಿ ಒಬ್ಬನು ಮತ್ತೊಬ್ಬನನ್ನು ಪ್ರೀತಿಸಲು ಇಬ್ಬರಿಗೂ ಸಾಧ್ಯವಿರುತ್ತಿರಲಿಲ್ಲ; ಯಾಕಂದರೆ ಕೇವಲ ನೀಚರೇ ನೀಚರನ್ನು ಪ್ರೀತಿಸಲು ಸಾಧ್ಯ, ಅಲ್ಲದೆ ಕೇವಲ ವಕ್ರಮಾರ್ಗಿಗಳೇ ವಕ್ರಮಾರ್ಗಿಗಳನ್ನು ಪ್ರೀತಿಸಲು ಸಾಧ್ಯ.

ದಾವೀದನ ಗುಣಗಳಲ್ಲಿದ್ದ ಯಾವದು ಯೋನಾತಾನನ ಪ್ರೀತಿಯನ್ನು ಆಕರ್ಶಿಸಿತ್ತು? ನಿಸ್ಸಂದೇಹವಾಗಿಯೂ ಅದು ಆತನ ಘನತೆ, ಆತನ ದೈರ್ಯ, ಆತನ ನಿಷ್ಠೆ, ಅರಸನಿಗೂ ಮತ್ತು ರಾಷ್ಟ್ರಕ್ಕೂ ಇದ್ದ ಆತನ ನಂಬಿಗಸ್ತಿಕೆ ಮತ್ತು ಎಲ್ಲಕ್ಕೂ ಮಿಗಿಲಾಗಿ ದೇವರಲ್ಲಿದ್ದ ಆತನ ಭರವಸೆ, ಆತನ ಮೇಲೆ ತನ್ನ ಅವಲಂಭನೆಯಾಗಿದ್ದವು. ಯೋನಾತಾನನಲ್ಲಿ ಇದ್ದದ್ದು ಯಾವದು ದಾವೀದನ ಪ್ರೀತಿಯನ್ನು ಪ್ರತಿಯಾಗಿ ಸೆಳೆದದ್ದು? ಅನೇಕವಿದ್ದವು ಇದೇ ಗುಣಗಳು; ಯೋನಾತಾನನು ಸಹ ಧೈರ್ಯಶಾಲಿಯಾಗಿದ್ದು ಇದನ್ನು ಆಗಲೇ ತೋರ್ಪಡಿಸಿದ್ದನು; ಆತನು ನಿಷ್ಠಾವಂತನೂ, ಪ್ರಮಾಣಿಕನೂ, ದೀನ ಮನಸ್ಸುಳ್ಳವನೂ, ಉದಾರಿಯೂ, ಒಬ್ಬ ಸ್ನೇಹಿತನಿಗೆ ನಂಬಿಗಸ್ತನೂ ಮತ್ತು ಎಲ್ಲಕ್ಕೂ ಮಿಗಿಲಾಗಿ ತನ್ನ ದೇವರಿಗೆ ನಂಬಿಗಸ್ತನಾಗಿದ್ದನು. – 1 ಸಮುವೇಲ 14:1–15, 27–30, 43; 23:16–18.

ಈ ಇಬ್ಬರ ಹೃದಯದಲ್ಲಿಯೂ ಕೆಲವು ಸಹಜ ಗುಣಗಳಿರುವಲ್ಲಿ ಅವು ಒಬ್ಬನು ಮತ್ತೊಬ್ಬನನ್ನು ಪ್ರೀತಿಸಲು ಶಿಫಾರಸ್ಸುಮಾಡಿದ್ದವು, ಇವರ ಐಕ್ಯತೆಯ ದೊಡ್ಡ ಬಂಧವು ದೇವರಿಗೆ ಅವರಿಬ್ಬರಲ್ಲಿದ್ದ ನಂಬಿಕೆ ಮತ್ತು ಶ್ರದ್ಧಾಭಕ್ತಿಗಳೇ. ಯಾರೊ ಒಬ್ಬರು ಹೇಳಿರುವದೇನಂದರೆ ಯಾರು ಅತ್ಯುತ್ತಮ ಸ್ನೇಹಿತರಾಗುವರೋ ಆ ಇಬ್ಬರಿಗೂ ಆಸಕ್ತಿಯುಳ್ಳ ಒಂದು ಮೂರನೇ ವಸ್ತುವಿನ ಅಗತ್ಯವಿರುವದೆಂಬದು; ಆ ನಂತರ ಎರಡು ಅರ್ಧ ವೃತ್ತಗಳು ಕೇಂದ್ರ ಬಿಂಧುವಿಗೆ ಬಂದು ಸೇರುವಂತೆ ಅವರು ಆ ಬಿಂಧುವಿನ ಹತ್ತಿರ ಬಂದಷ್ಟೂ ಅವರು ಒಬ್ಬರಿಗೊಬ್ಬರು ಸಮೀಪವಾಗುವರು. ಈ ಇಬ್ಬರು ಪುರುಷರ ನಡುವೆ ಹೀಗೆಯೇ ಇರುವದು: ದೇವರ ಕಡೆಗೆ ಅವರ ನಿಷ್ಠೆ ಹಾಗು ದೇವರಲ್ಲಿನ ನೀತಿಸತ್ಯತೆಯ ಸಂಬಂಧದ ಸಿದ್ಧಾಂತಗಳ ನಿದರ್ಶನಗಳು ಅವರ ಸ್ನೇಹದ ದೃಢ ಬಂಧವಾಗಿದ್ದು ಇವು ವಿವಿಧ ಲೌಕಿಕ ಹಿತಾಸಕ್ತಿಗಳ ದೆಸೆಯಿಂದ ತಮ್ಮ ಪ್ರೀತಿಅನುರಾಗಗಳು ಅಗಲಿಹೋಗುವದನ್ನು ತಡೆದಿದ್ದವು.

ಇದೇ ಸಿದ್ಧಾಂತಗಳು ಎಲ್ಲಾ ನಿಜವಾದ ಹಾಗು ನಿಸ್ವಾರ್ಥ ಪ್ರೀತಿಯಲ್ಲಿ ನಿದರ್ಶಿಸಲ್ಪಟ್ಟಿರುವದು: ಮತ್ತೊಬ್ಬನನ್ನು ಪ್ರೀತಿಸಿ ಅವನ ಹಿತಾಸಕ್ತಿಗಳನ್ನು ಹಿಡಿದಿಟ್ಟುಕೊಳ್ಳಲು ಪರಸ್ಪರ ಆಕರ್ಶಕ – ವಾದ ಯಾವುದೋ ಒಂದು ಅಂಶವಿರಬೇಕು. ಪ್ರೀತಿ–ಸ್ನೇಹಗಳ ಪರವಾದ ಪ್ರತಿಜ್ಞೆಗಳು ಅಥವಾ ವಿವಾಹ ಸಂಬಂದದ ಪ್ರತಿಜ್ಞೆಗಳು

ಮುರಿದು ಬೀಳುವಂತಾಗಲು ಇವರಲ್ಲಿ ಒಬ್ಬನಿಗೆ ಅಥವಾ ಮತ್ತೊಬ್ಬನಿಗೆ ಸ್ವಾರ್ಥ ಪ್ರೀತಿ ಅಲ್ಲದೆ ದೇವರ ವಾಕ್ಯವು ಮನಸ್ಸಿಗೆ ನಾಟುವಂತೆ ಒತ್ತಿ ಹೇಳುವಂಥ ಮತ್ತು ಈ ಪಾಠದಲ್ಲಿ ಬಹು ಘನತೆಯುಳ್ಳದ್ದಾಗಿ ನಿದರ್ಶಿಸಿರುವಂಥ ಶುದ್ಧತೆಯನ್ನು ಹೊಂದದೇ ಇರುವಂಥ ಪ್ರೀತಿಯಿರಬೇಕೆಂಬದು ಸೂಚಿತವಾಗುವದು. ಸ್ವಾರ್ಥ ಪ್ರೀತಿಯು ವಾಸ್ತವದಲ್ಲಿ ಪ್ರತಿಭೆಯುಳ್ಳವುಗಳನ್ನು ಒಳ್ಳೆಯವುಗಳನ್ನು ಘನತೆಯುಳ್ಳವುಗಳನ್ನು ಔದಾರ್ಯವುಳ್ಳವುಗಳನ್ನು ಮೆಚ್ಚಬಹುದಾದರೂ ಇದೇ ರೀತಿಯಲ್ಲಿ ಅದು ಸ್ವತಃ ಘನವುಳ್ಳದ್ದೂ ಅಲ್ಲದೆ ಔದಾರ್ಯವುಳ್ಳದ್ದೂ ಆಗಿರುವದಿಲ್ಲ; ಕೆಲವು ಸಂಗತಿಗಳನ್ನು ತನ್ನ ಸ್ವಂತ ಹಿತಾಸಕ್ತಿಗೆ ಹೆಚ್ಚು ಉತ್ತಮವಾಗಿ ಬಳಸಿಕೊಳ್ಳಲು ಸಾಧ್ಯವೆಂಬುದು ತಾನು ನಂಬಿದ್ದಲ್ಲಿ ಕೆಲವು ಸಾರಿ ಸ್ನೇಹವನ್ನು ತ್ಯಜಿಸುವಂಥ ಶೋಧನೆಗಳಿಂದ ಆವರಿಸಲ್ಪಡುವದು ಖಚಿತ. ಯೋನಾತಾನನ ಪ್ರೀತಿಯು ಈ ಸ್ವಾರ್ಥದ ವಿಧವಾಗಿರಲಿಲ್ಲ, ಪರಿಣಾಮವಾಗಿ ಅದು ಅಚಲವಾಗಿತ್ತು. ವಾಸ್ತವದಲ್ಲಿ ಅದು ಸ್ವಾರ್ಥಪರವಾದ ಯಾವುದೇ ಸಲಹೆಗಳನ್ನು ಜಯಿಸಿದಷ್ಟರ ಪ್ರಮಾಣದಲ್ಲಿ ಆ ಪ್ರೀತಿಯು ದೃಢವಾಗಿಯೂ ಬಲವಾಗಿಯೂ ಬೆಳೆಯುತ್ತಾ ಬಂದಿತ್ತು. ಈ ಸಂಬಂಧದಲ್ಲಿ ಇದು ತನ್ನ ಜನರ ಪರವಾಗಿದ್ದ ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರೀತಿಯನ್ನು ಸಮರ್ಪಕವಾಗಿ ಪ್ರತಿನಿಧಿಸುತ್ತದೆ. ಯೋನಾತಾನನು ತನ್ನ ಸ್ವಂತ ಸ್ಥಾನವನ್ನು ನಷ್ಟಪಡಿಸಿಕೊಂಡು ದಾವೀದನನ್ನು ಪ್ರೀತಿಸಿದ್ದ ಹಾಗೆಯೇ ನಮ್ಮ ಕರ್ತನಾದ ಯೇಸುವು ತಾನು ತನ್ನ ಜನರನ್ನು ವಿಮೋಚಿಸುವ ಸಲುವಾಗಿ ತನ್ನ ತಂದೆಯ ಬಳಿಯಲ್ಲಿದ್ದ ಮಹಿಮೆಯನ್ನು ಬಿಟ್ಟಿದ್ದನು. ತನ್ನ ಜನರಿಗೆ ಆತನು ಹೀಗೆ ಪ್ರಕಟಮಾಡಿ ಹೇಳಿದ್ದನು, "ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನಡೆದರೆ ನೀವು ನನ್ನ ಸ್ನೇಹಿತರು."

"ಎಲ್ಲರ ಮೇಲಿರುವ ಒಬ್ಬಾತನು
ಅರ್ಹನಾಗುವನು ಸ್ನೇಹಿತನೆಂಬ ಹೆಸರಿಗೆ ಸಮರ್ಪಕವಾಗಿ;
ಸಹೋದರನಿಗೆ ಮಿಗಿಲಾಗಿರುವ ಆತನ ಪ್ರೀತಿಯು
ಅಮೂಲ್ಯವೂ ಮುಕ್ತವೂ ಆಗಿರುವದಲ್ಲದೆ ಅದಕ್ಕೆ ಅಂತ್ಯವಿಲ್ಲ."

ದಾವೀದನ ಜೀವಿತವು ಅಪಾಯದಲ್ಲಿರುವ ಸಮಯದಲ್ಲಿ ನಮ್ಮ ಪಾಠವು ಈ ಇಬ್ಬರು ಸ್ನೇಹಿತರನ್ನು ಪರಿಚಯಿಸಿಕೊಡುತ್ತದೆ. ನಮ್ಮ ಹಿಂದಿನ ಪಾಠವು ಸೌಲನು ದಾವೀದನ್ನು ಹಿಂಸಿಸುವ ಪ್ರವೃತ್ತಿಯಲ್ಲಿ ಇದ್ದುದನ್ನು ತೋರಿಸಿಕೊಟ್ಟಿತ್ತು. ಬೆದರಿಸುವ ಕಾರ್ಯವು ಅನೇಕ ಸಾರಿ ಪುನರಾವರ್ತನೆಗೊಂಡು ಅಂತ್ಯದಲ್ಲಿ ತನ್ನ ಸಂಗೀತಗಾರನಾದ ದಾವೀದನ ಕಡೆಗೆ ಈಟಿಯನ್ನು ಎಸೆಯುವದರಲ್ಲಿ ಕೊನೆಗೊಂಡಿತ್ತು ಆದರೆ ದಾವೀದನು ಅದರಿಂದ ತಪ್ಪಿಸಿಕೊಂಡಿದ್ದನು. ಈ ಹಗೆತನದ ಭಾವನೆಯ ದೃಷ್ಟಿಯಿಂದಲೇ ದಾವೀದನ ಕಡೆಗೆ ಸೌಲನು ಕೆಲವು ಮನಸ್ಸಿನ ಬದಲಾವಣೆಗಳನ್ನು ತೋರ್ಪಡಿಸುವ ವರೆಗೂ ದಾವೀದನು ಮತ್ತೆ ಆಸ್ಥಾನದಲ್ಲಿ ಕಾಣಿಸಿಕೊಳ್ಳುವದು ಅನುಚಿತವೆಂಬುದನ್ನು ಈ ಸ್ನೇಹಿತರು ನಿರ್ಧರಿಸಿದ್ದರು. ಬರುತ್ತಿದ್ದ ಔತಣಕೂಟವು ಒಂದು ಮುಖ್ಯವಾದುದ್ದಾಗಿತ್ತು; ಯೋನಾತಾನನು ಮತ್ತು [ಆತನ] ಮನೆತನದ ಇತರರು ಉಪಸ್ಥಿತರಿರುವರು, ಆದರೆ ದಾವೀದನು ಅಲ್ಲಿ ಇದ್ದು ತನ್ನ ಜೀವಕ್ಕೆ ಅಪಾಯ ತಂದುಕೊಳ್ಳುವದು ವಿವೇಕವಲ್ಲವೆಂದು ಪರಿಗಣಿಸಲಾಗಿತ್ತು, ಅಲ್ಲದೆ ಯೋನಾತಾನನು ಅರಸನಿಗೆ [ದಾವೀದನ ಅನುಪಸ್ಥಿತಿಯ] ಕಾರಣಗಳನ್ನು ಕೊಟ್ಟು ಆನಂತರದಲ್ಲಿ ದಾವೀದನಿಗೆ ಅರಸನ ಮನೋಭಾವವನ್ನು ತಿಳಿಸುವಂತೆ ಏರ್ಪಡಿಸಿಕೊಳ್ಳಲಾಗಿದ್ದು; ಹೀಗಾಗಿ ಅಗತ್ಯವಾದ್ದಲ್ಲಿ ಆತನು ದೇಶವನ್ನು ಬಿಟ್ಟು ಓಡಿಹೋಗಬೇಕಿತ್ತು. ಸೌಲನ ಹೃದಯದಲ್ಲಿ ದಾವೀದನ ಕಡೆಗೆ ಪೂರ್ಣವಾಗಿ ಕಹಿಭಾವನೆ ಇರುವದನ್ನು ಯೋನಾತಾನನು ಕಂಡುಕೊಂಡಿದ್ದನು. ಅದು ಎಷ್ಟರ ಮಟ್ಟಿಗೆ ಇತ್ತೆಂದರೆ ತನ್ನ ಮಗನು ಆತನ ಅನುಪಸ್ಥಿತಿಗೆ ಕಾರಣಗಳನ್ನು ಕೊಟ್ಟದ್ದಕ್ಕಾಗಿ ಸೌಲನು ಕೋಪಗೊಂಡು ತನ್ನ ಅಸಂತೋಷದ ಸೂಚನೆಯಾಗಿ ತನ್ನ ಈಟಿಯನ್ನು ಆತನ ಕಡೆಗೆ ಎಸೆದಿದ್ದನು; ಆದರೂ ಇಲ್ಲಿ ಯೋನಾತಾನನ್ನು ಕೊಲ್ಲುವ ಉದ್ದೇಶವಿಲ್ಲದ ಸಾಧ್ಯತೆಗಳಿತ್ತು. ಯೋನಾತಾನು ತನ್ನ ತಂದೆಯ ಅನುಚಿತ ವರ್ತನೆ ಹಾಗು ಆತನು ಮಾಡಿದ ತಪ್ಪಿಗೆ ಸಿಟ್ಟುಗೊಂಡು ಕೂಡಲೇ ಸಂಗತಿಯನ್ನು ಈ ಪಾಠದಲ್ಲಿ ಹೇಳಿರುವಂತೆ ಮುಂದಾಗಿ ಏರ್ಪಡಿಸಿಕೊಂಡಿದ್ದ ಸಾಂಕೇತದ ಮೂಲಕವಾಗಿ ದಾವೀದನಿಗೆ ಸೂಚಿಸಿದ್ದನು. ಹೇಗೂ ಈ ಇಬ್ಬರು ಸ್ನೇಹಿತರಿಗೆ ವೈಯುಕ್ತಿಕವಾಗಿ ಭೇಟಿಮಾಡದೆ ಬೀಳ್ಕೊಡುವಂತಾಗಲು ಸಾಧ್ಯವಾಗಿರಲಿಲ್ಲ. ಮತ್ತು [ಆ ಭೇಟಿಯಲ್ಲಿ] ಅವರು ಒಬ್ಬರಿಗೊಬ್ಬರು ಮುದ್ದಿಟ್ಟು ಗೋಳಾಡಿ ಪರಸ್ಪರ ವಾಗ್ದಾನ ಮಾಡಿಕೊಳ್ಳುವ ಮೂಲಕ ಬದ್ಧರಾಗಿ ಪರಸ್ಪರವಾದ ತಮ್ಮ ಶ್ರದ್ಧೆಪ್ರಾಮಾಣಿಕತೆಗಳಿಗೆ ಸಾಕ್ಷಿಯಾಗಿರಲು ದೇವರನ್ನು ಪ್ರಾರ್ಥಿಸಿ ಪರಸ್ಪರ ಬೀಳ್ಕೊಟ್ಟಿದ್ದರು. ಅರಸನಾದ ಸೌಲನಿಗೆ ದಾವೀದನು ಉತ್ತರಾಧಿಕಾರಿಯಾಗುವದು ದೇವರ ಆಯ್ಕೆಯಾಗಿರುವದೆಂಬುದನ್ನು ಯೋನಾತಾನನು ಪೂರ್ಣವಾಗಿ ಮನಗೊಂಡಂಥದ್ದು ಸ್ಪಷ್ಟವಾಗಿತ್ತು. ಅಲ್ಲದೆ ಯೋನಾತಾನನು ದೇವರ ಕಡೆಗೆ ಪೂರ್ಣ ವಿಶ್ವಾಸ ಭಕ್ತಿಯುಳ್ಳವನಾಗಿ ಸ್ವಲ್ಪವೂ ದೇವರ ಏರ್ಪಾಡಿಗೆ ವಿರೋಧಿಸುವಂಥ ಭಾವನೆಯನ್ನು ಹೊಂದಿರಲಿಲ್ಲ. ಅದಲ್ಲದೆ ತನ್ನ ಆತ್ಮವಿಶ್ವಾಸದಿಂದ ದಾವೀದನು ಈಗಾಗಲೇ ಯೋನಾತಾನನಿಗೆ ತನ್ನ ಅಭಿಷೇಕದ ಬಗ್ಗೆ ತಿಳಿಸಿದ್ದು ಅಲ್ಲದೆ ಆತನು ಹೇಗೂ ಇದು ಅರಸನಾದ ಸೌಲನ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಲು ಈ ಅಭಿಷೇಕವು ಒಂದು ಸೂಕ್ತ ಕಾರಣವಾಗಲೀ ಅಥವಾ ಆಧಾರವಾಗಲೀ ಆಗದೆಂಬ ಭರವಸೆ ನೀಡಿದ್ದ ಸಾಧ್ಯತೆಯು ಬಹುವಾಗಿತ್ತು. ಇದಕ್ಕೆ ಪ್ರತಿಯಾಗಿ ದೇವರು ಆತನನ್ನು [ದಾವೀದನನ್ನು] ಆರಿಸಿಕೊಂಡವನಾಗಿ ಆತನನ್ನು ಅಭಿಷೇಕಿಸಿದ್ದಲ್ಲದೆ ಈಗಾಗಲೇ ತಾನು ಅರಸನ ಸ್ಥಾನಕ್ಕೆ ಅಭಿಷೇಕಿಸಿದವನಿಗೆ [ಸೌಲನಿಗೆ] ಯಾವ ಹಾನಿಯನ್ನು ಮಾಡಲು ಕೈಹಾಕದೆ ದೇವರು ತನ್ನ ನಿಗದಿತ ಸಮಯದಲ್ಲಿ ಹಾಗು ತನ್ನದೇ ಆದ ರೀತಿಯಲ್ಲಿ ಆತನನ್ನು [ದಾವೀದನನ್ನು ಅಧಿಕಾರದಲ್ಲಿ] ಪ್ರತಿಷ್ಠಾಪಿಸಲು ಪೂರ್ಣವಾಗಿ ಸಮರ್ಥನಾಗಿದ್ದನು.

ಸ್ನೇಹವೆಂಬದು ಮನಸ್ಸಿನ ಮತ್ತು ಹೃದಯದ ಸಮಾನ ಗುಣಲಕ್ಷಣಗಳನ್ನು ಹೊಂದಿರುವಂಥದ್ದನ್ನು ಅಡಕವಾಗಿರುವದು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಔದಾರ್ಯವುಳ್ಳ ಪ್ರೀತಿಯು ಔದಾರ್ಯವನ್ನು ಹುಟ್ಟಿಸುವದು, ಘನತೆಯುಳ್ಳ ಪ್ರೀತಿಯು ಘನತೆಯನ್ನು ಹುಟ್ಟಿಸುವದು, ಪ್ರಾಮಾಣಿಕವಾದ ಪ್ರೀತಿಯು ಪ್ರಾಮಾಣಿಕತೆಯನ್ನು ಹುಟ್ಟಿಸುವದು, ಸಾತ್ವಿಕತೆಯುಳ್ಳ

ಪ್ರೀತಿಯು ಸಾತ್ವಿಕತೆಯನ್ನು ಹುಟ್ಟಿಸುವದು, ಮುಂತಾದವುಗಳು; ಆದರೆ ನಾವು ಈಗ ಗಮನಕ್ಕೆ ತರುವ ಅಂಶವೇನಂದರೆ ದೇವ ಜನರಲ್ಲಿ ಅಧಿಕಾರಿಗಳು ಅನೇಕರಿಲ್ಲ, ಜ್ಞಾನಿಗಳು ಅಥವಾ ಕುಲೀನರು ಅನೇಕರಿಲ್ಲ, – ಸಹಜವಾಗಿ ಹೇಳುವದಾದರೆ ದೇವರು ಪ್ರೀತಿಸಿ ಒಡಂಬಡಿಕೆಯ ಮೂಲಕ ತನ್ನ ಜನರನ್ನಾಗಿ, ಸ್ನೇಹಿತರನ್ನಾಗಿ, ಮಕ್ಕಳನ್ನಾಗಿ ಅಂಗೀಕರಿಸಲ್ಪಡುವವರು ಮುಖ್ಯವಾಗಿ ಸಹಜವಾಗಿಯೇ ಘನತೆಯಳ್ಳವರಲ್ಲ. ನಾವು ಮತ್ತೂ ಗಮನಿಸುವದೇನಂದರೆ ಪ್ರತಿಷ್ಠಿತರಾದ ದೇವಜನರ ಮಧ್ಯದಲ್ಲಿರುವ ಪ್ರೀತಿ ಸ್ನೇಹಗಳು ಯಾವ ಭೌತಿಕವಾದ ಕಟ್ಟುಪಾಡಿಗಿಂತಲೂ ಬಾಂಧವ್ಯಕ್ಕಿಂತಲೂ ದೃಢವಾದದ್ದೂ ಗಾಢವಾದದ್ದೂ ಆಗಿರುವದೆಂಬದು. ಆದಾಗ್ಯೂ ದೇವಜನರಲ್ಲಿ "ಅಧಿಕಾರಿಗಳು ಅನೇಕರಿಲ್ಲ, ಕುಲೀನರು ಅನೇಕರಿಲ್ಲ" ಆದರೆ ಮುಖ್ಯವಾಗಿ ಲೌಕಿಕ ದೃಷ್ಟಿಯಲ್ಲಿ ಬಡವರಾಗಿದ್ದು ನಂಬಿಕೆಯಲ್ಲಿ ಐಶ್ವರ್ಯವಂತರಾಗಿರುವರು. ಸಾಧಾರಣವಾದ ಸ್ನೇಹದ ಈ ಒಂದು ನಿಯಮದಲ್ಲಿ ತೋರಿಕೆಯಲ್ಲಿನ ವಿರೋಧಾಭಾಸಗಳು ಹೇಗೆ ತಲೆದೂರುತ್ತವೆ? ನಾವು ಉತ್ತರಿಸುವದೇನಂದರೆ ಪಾಪಿಗಳಾಗಿರುವ ನಮ್ಮ ಕಡೆಗಿನ ದೇವರ ಪ್ರೀತಿಯು ಸ್ನೇಹದ ರೀತಿಯದಲ್ಲ ಆದರೆ ಕರುಣೆ ಅನುಕಂಪಗಳ ರೀತಿಯದು ಮತ್ತು ಇದೇ ರೀತಿಯಲ್ಲಿ ತನ್ನ ಜನರಿಗಾಗಿರುವ ಆತನ ಪ್ರೀತಿಯು ಸ್ನೇಹದ ರೀತಿಯದಲ್ಲ ಆದರೆ ಅನುಕಂಪ ಸಹಾನುಭೂತಿ, ಅವರ ಹೀನಸ್ಥಿತಿಯಿಂದ ಹೊರತರಲು ಅವರಿಗೆ ಸಹಾಯಮಾಡುವ ಬಯಕೆಯಾಗಿರುತ್ತದೆ. ನಾವು ಪಾಪಿಗಳಾಗಿರುವದು ನಿಲ್ಲಿಸಲ್ಪಟ್ಟ ಬಳಿಕವೇ ಅಲ್ಲದೆ, ಆವರೆಗೂ ಅಲ್ಲ, ಕ್ರಿಸ್ತನನ್ನು ಅಂಗಿಕಾರ ಮಾಡಿಕೊಳ್ಳುವ ಮೂಲಕವಾಗಿ ನಾವು ದೇವರಿಗೆ ಸ್ನೇಹಿತರಾಗುವ ಹಾಗು ಆತನನ್ನು ನಮ್ಮ ಸ್ನೇಹಿತನೆಂದು ಅರಿವುಮಾಡಿಕೊಳ್ಳುವ ಸೌಭಾಗ್ಯವನ್ನು ಪಡೆದುಕೊಳ್ಳುವೆವು. ನಾವು ಪಾಪಿಗಳಾಗಿರುವಂಥದ್ದು ರದ್ದಾಗಿ ಆತನ ಪ್ರಿಯನಲ್ಲಿ ನಾವು ಅಂಗೀಕಾರವಾಗುವವರೆಗೆ ಅಲ್ಲದೆ, ಆ ನಂತರವೇ ನಾವು ಇದೇ ರೀತಿಯಲ್ಲಿ ಮಾರ್ಪಾಟು ಹೊಂದಿರುವಂಥ ಇತರರ ಸ್ನೇಹಿತರಾಗಿ ಈ ಸ್ನೇಹದ ಗುಣಲಕ್ಷಣದಲ್ಲಿ ಅಂದರೆ ಸಹೋದರರಾಗಿ ಪರಸ್ಪರ ಪ್ರೀತಿಯಲ್ಲಿ ಮತ್ತು ಪವಿತ್ರಾತ್ಮದಲ್ಲಿ ಪಾಲುಗಾರರಾಗಿ ಬೆಳೆಯಲು ಆರಂಭಿಸುವದು.

ಒಂದೇ ಮಾತಿನಲ್ಲಿ ಹೇಳುವದಾದರೆ ಎರಡು ಮಟ್ಟದ ಸ್ನೇಹಗಳಿರುವದು; ಅವುಗಳಲ್ಲಿ ಒಂದು ಸ್ವಭಾವಸಿದ್ಧವಾದ ಮಟ್ಟದ್ದಾಗಿದ್ದು, ಇದರಲ್ಲಿ ಸ್ವಭಾವಸಿದ್ಧವಾದ ಗುಣಲಕ್ಷಣಗಳನ್ನು ಹೊಂದಿರುವ ಮನುಷ್ಯರು ಒಟ್ಟಾಗಿ ಸೇರಿಕೊಳ್ಳುವರು; ಮತ್ತೊಂದು ಆತ್ಮಿಕ ಮಟ್ಟದ್ದಾಗಿದ್ದು ಅದು ಸ್ವಭಾವಸಿದ್ಧ ಗುಣಲಕ್ಷಣಗಳ ಮಟ್ಟದಂತಿರದೆ ಇದರಲ್ಲಿ ಅವರು ಆತ್ಮಿಕವಾದ ನಿರೀಕ್ಷೆ ಗುರಿ ಮತ್ತು ಆಕಾಂಕ್ಷೆಗಳಲ್ಲಿ ಒಮ್ಮತವುಳ್ಳವರಾಗಿರುವರು; ಇವರು ಹೊಸದಾದ ಬಾಂಧವ್ಯ, ಹೊಸದಾದ ಪ್ರೀತಿಯ ಮೂಲಕವಾಗಿ ಇನ್ನೂ ನಿಕಟವಾಗಿ ಕೂಡಿಕೊಳ್ಳುವರು. ಇದು ಅವರ ಶರೀರಭಾವದ ಬಾಂಧವ್ಯವನ್ನು ಉಂಟುಮಾಡುವಂಥದ್ದಾಗಿರದೆ, ಕ್ರಿಸ್ತೀಯ ಪ್ರೀತಿಯಲ್ಲಿ ಹಾಗು ಐಕ್ಯತೆಯಲ್ಲಿ ಅವರ ಹೃದಯಗಳನ್ನು ಕಟ್ಟಿಹಾಕುವಂಥದ್ದಾಗಿರುವದು.

ಕ್ರಿಸ್ತನಲ್ಲಿರುವ ಈ ನೂತನ ಸೃಷ್ಟಿಗಳು ಒಬ್ಬರನ್ನೊಬ್ಬರು ತಿಳಿದುಕೊಳ್ಳುವದು ಶಾರೀರಿಕ ರೀತಿಯಿಂದಲ್ಲ, ಆದರೆ ಆತ್ಮಿಕ ರೀತಿಯ ಅನುಸಾರವಾಗಿರುವದು. ಇವರಲ್ಲಿ ಶಾರೀರಿಕವಾದ ಬಲಹೀನತೆಗಳು ಏನೇ ಇದ್ದರೂ, ಅವರಲ್ಲಿ ಪ್ರತಿಯೊಬ್ಬನ ಆತ್ಮದಲ್ಲಿ [ಮನೋಭಾವದಲ್ಲಿ] ಅಥವಾ ನೂತನ ಮನಸ್ಸಿನಲ್ಲಿ ಉತ್ಕೃಷ್ಟವಾದ ಘನವಂತಿಕೆಯು ಮನೋಭಾವಗಳು, ಅತ್ಯುನ್ನತವಾದ ಆಕಾಂಕ್ಷೆಗಳು ಅಂದರೆ ಸದ್ಗುಣವುಳ್ಳವುಗಳು ಸತ್ಯವಾದವಗಳು ಘನತೆಯುಳ್ಳವುಗಳು ಶುದ್ಧವಾದವುಗಳು ಇರುವವು. ಅವರು ಒಬ್ಬರನ್ನೊಬ್ಬರು ಪ್ರೀತಿಸುವದು ಹೊಸ ದೃಷ್ಟಿಯ ಮೂಲಕವಾಗಿ ಅಂದರೆ ಅವರ ನೂತನವಾದ ಉದ್ದೇಶ, ಸಂಕಲ್ಪ, ದೇವರೊಂದಿಗೆ ಆದ ಹೊಂದಾಣಿಕೆ, ಇವುಗಳ ಕಾರಣದಿಂದ. ಮತ್ತು ಅವರು ಮತ್ತೊಬ್ಬರಲ್ಲಿರುವ ನಂಬಿಕೆಯ ಪರವಾದ ಒಳ್ಳೆಯ ಹೋರಾಟ, ಹಾಗು ಲೋಕ ಶರೀರ ಮತ್ತು ಸೈತಾನನ ದುಷ್ಪ್ರಭಾವಗಳ ವಿರುದ್ಧ ಮಾಡುವ ಹೋರಾಟಗಳಲ್ಲಿ ಕಂಡುಬರುವಂಥ ಅವರ ಶಕ್ತಿಯನ್ನು ಕಂಡುಕೊಂಡಂತೆಲ್ಲಾ ಪರಸ್ಪರವಾದ ಅವರ ಸ್ನೇಹವು ಹೆಚ್ಚೆಚ್ಚಾಗಿ ಬೆಳೆಯುತೊಡಗುವದು. ತಮ್ಮ ಪೂರ್ವದ ಸ್ಥಿತಿಯೆಲ್ಲವೂ ಹೋಗಿ ಎಲ್ಲವನ್ನೂ ನೂತನದಾಗಿ ಪಡೆದುಕೊಂಡಿರುವಂಥ ಕ್ರಿಸ್ತನಲ್ಲಿರುವ ಈ ನೂತನ ಸೃಷ್ಟಿಗಳ ನಡುವಿನ ಪ್ರೀತಿ ಸ್ನೇಹಗಳ ಬಗ್ಗೆ ಯಾವ ನಾಲಿಗೆಯಾದರೂ ಅಥವಾ ಲೇಖನಿಯಾದರೂ ಸಮಂಜಸವಾಗಿ ವ್ಯಕ್ತಪಡಿಸಲು ಸಾಧ್ಯವಾಗದು.

ಹೇಗೂ ಇದು ತಂದೆತಾಯಿಗಳು ತಮ್ಮ ಮಕ್ಕಳಿಗೆ ತೋರಿಸುವ ಪ್ರೀತಿಯನ್ನು ಅದೇ ರೀತಿಯಲ್ಲಿ ಇತರ ಮಕ್ಕಳಿಗೂ ತೋರಿಸಬೇಕೆಂಬುದನ್ನು ಸೂಚಿಸುವದಿಲ್ಲ; ಯಾಕಂದರೆ ಒಬ್ಬನು ತನ್ನವರ ಕಡೆಗೆ ಒಂದು ಹೆಚ್ಚಾದ ಜವಾಬ್ದಾರಿಯನ್ನು ಹೊಂದಿರುವನು, ಅದನ್ನು ಅರಿತುಕೊಳ್ಳಬೇಕು. ಇಲ್ಲವೇ ಭಕ್ತರೆಲ್ಲರನ್ನೂ ಒಂದೇ ಪ್ರಮಾಣದಲ್ಲಿ ಪ್ರೀತಿಸಬೇಕೆನ್ನುವದು ಇದರಲ್ಲಿ ಸೂಚಿತವಾಗಿರುವದಿಲ್ಲ. ನಮ್ಮ ಕರ್ತನು ತನ್ನ ಕೆಲವು ಶಿಷ್ಯರನ್ನು ವಿಶೇಷವಾಗಿ ಪ್ರೀತಿಸಿದ್ದನೆಂದು ನಮಗೆ ಹೇಳಲಾಗಿರುವದು. ಕಡೆಯಲ್ಲಿ ಅಪರಿಪೂರ್ಣತೆಯು ಹೋಗಿ ಪರಿಪೂರ್ಣತೆಯು ಬಂದಾಗ ಸಹೋದರರೆಲ್ಲರೂ ಪರಿಪೂರ್ಣರಾಗಿರುವರು ಮತ್ತು ನೆರೆಯವರೆಲ್ಲರೂ ಪ್ರಿಯರಾದ ಸಹೋದರರಾಗಿರುವರು. ಹೀಗಾಗಿ ನಾವು ಆವರೆಗೂ ಎಲ್ಲರನ್ನೂ ಪ್ರೀತಿಸಬೇಕು, ಆದರೆ "ಒಂದು ವಿಷಯದಲ್ಲಿ ವ್ಯತ್ಯಾಸವಿರಬೇಕು" ಅದೇನಂದರೆ ನಮ್ಮ ಪ್ರೀತಿಯು ಸಹಜವಾದ [ಲೌಕೀಕ ಸಂಬಂಧದ] ಹೊಣೆಗಾರಿಕೆಗಳ ಹಾಗು ಆತ್ಮಿಕ ಬೆಳವಣಿಗೆಯ ಅನುಸಾರವಾಗಿ ಇರಬೇಕು. – ಯೂದ 22ನೇ ವಚನ.

ಹೆಸರಿನ ಕ್ರೈಸ್ತರು ಮತ್ತು ನಿಜವಾದ ಕ್ರೈಸ್ತರು ಇರುವ ರೀತಿಯಲ್ಲಿಯೇ ಒಂದು ಹೆಸರಿಗಾಗಿರುವ ಪ್ರೀತಿಯ ಸಹಿತವಾಗಿ ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವವರ ನಡುವಿನ ಒಂದು ನಿಜವಾದ ಪ್ರೀತಿಯೂ ಸಹ ಇರುವದು, ಮತ್ತು ನಿಜವಾದ ಕರ್ತನ ಜನರ ಗುರಿಯು ಅಧಿಕಾಧಿಕವಾಗಿ ಆತನ ಆತ್ಮ [ಮನೋಭಾವ], ಆತನ ಗುಣ, ಆತನ ಪ್ರವೃತ್ತಿ, ಆತನ ಪ್ರೀತಿ, ಆತನ ಸ್ನೇಹ ಇವುಗಳನ್ನು ಬೆಳೆಸಿಕೊಳ್ಳುವಂಥದ್ದಾಗಬೇಕು; ಹಾಗು ಕರ್ತನು ಅಪೋಸ್ತಲನ

ಮುಖಾಂತರ ಸುಸ್ಪಷ್ಟವಾದ ಪದಗಳ ವರ್ಣನೆಯಿಂದ ನಮ್ಮ ಗಮನಕ್ಕೆ ತಂದಿರುವಂಥ ಮೇಲಿನಿಂದ ಬರುವಂಥ ಪ್ರೀತಿಯನ್ನು ಬೆಳೆಸಿಕೊಳ್ಳಲು ನಾವು ಸಮರ್ಥರಾಗಬೇಕು. ಈ ವರ್ಣನೆಯು 1 ಕೊರಿಂಥ 13ನೇ ಅಧ್ಯಾಯದಲ್ಲಿ ನೀಡಲಾಗಿರುವದು. ಇದನ್ನು ನೂತನ ಸೃಷ್ಟಿಗಳಾಗಿರುವವರೆಲ್ಲರೂ ಕೆಲವು ಮಟ್ಟಿನ ಅನುಭವದಲ್ಲಿ ಪಡೆದುಕೊಳ್ಳಬೇಕು; ಯಾಕಂದರೆ ಯಾವನಿಗಾದರೂ ಕ್ರಿಸ್ತನ ಆತ್ಮವು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ; ಆದರೆ ದೇವ ಜನರಲ್ಲಿ ಪ್ರತಿಯೊಬ್ಬನೂ ಕರ್ತನಲ್ಲಿ ಬಲಹೊಂದುವಷ್ಟರ ಪ್ರಮಾಣದಲ್ಲಿ ಅನುಭವದಲ್ಲಿಯೂ ಹೆಚ್ಚುತ್ತಾ ಬಂದು ಇದನ್ನು ಮನವರಿಕೆಯಾಗುವ ರೀತಿಯಲ್ಲಿ ಅರ್ಥಮಾಡಿಕೊಳ್ಳುವರು. ಅಂದರೆ ಅವರು ಎಲ್ಲರಿಗಿಂತಲೂ ಮಿಗಿಲಾದ ಸ್ನೇಹಿತನಾದ ದೇವರ ಪ್ರಿಯ ಮಗನ ಸ್ವರೂಪಿಗಳಾಗುವರು.

ಒಬ್ಬ ಲೇಖಕನು ಹೇಳಿರುವದು–"ಜೀವಿತದ ಘನತೆಗೌರವ ಪ್ರೀತಿಮಾಡುವದು, ಪ್ರೀತಿಮಾಡಿಸಿಕೊಳ್ಳವದಲ್ಲ; ಕೊಡುವದು, ತೆಗೆದುಕೊಳ್ಳುವದಲ್ಲ; ಸೇವೆಮಾಡುವದು, ಸೇವೆಮಾಡಿಸಿಕೊಳ್ಳುವದಲ್ಲ....ಸ್ವಹಿತಾಸಕ್ತನು ಸ್ನೇಹಿತರನ್ನು ಗಳಿಸಿಕೊಂಡರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗದು."

ಮತ್ತೊಬ್ಬರು ಟೀಕೆಮಾಡಿರುವದು, "ಇಗೋ, ಎಂಥಾ ಘೋರ ತಪ್ಪುಗಳಿಗೆ, ಹಾಗು ತೀವ್ರ ಅಸಂಬದ್ಧತೆಗಳಿಗೆ ಕಟ್ಟುಬೀಳುವರು ಅನೇಕರು ಒಬ್ಬ ಸ್ನೇಹಿತನನ್ನು ಮಾಡಿಕೊಂಡು ಅವನಿಗೆ ಅವುಗಳನ್ನು ಹೇಳಿಕೊಳ್ಳುವ ಬಯಕೆಗಾಗಿ."

ಅನೇಕ ವಿಮರ್ಶನಕಾರರು ಅಲೋಚಿಸುವಂತೆ ತೋರುವದೇನಂದರೆ ನಿಜವಾದ ವಿಮರ್ಶೆಯು ಮೌಲ್ಯತಗ್ಗಿಸುವದಲ್ಲ ಆದರೆ ಮೌಲ್ಯವನ್ನು ಹೆಚ್ಚಿಸುವದು. ಹೆಚ್ಚು ಜೀವಗಳು ಹಾಳಾಗಿರುವದು ಅನಗತ್ಯ ಕ್ರೌರ್ಯದಿಂದ ಅನಗತ್ಯ ಸೌಜನ್ಯದಿಂದಲ್ಲ."

"ಯಾವುದೇ ಒಬ್ಬ ವ್ಯಕ್ತಿಯ ಕೇಂದ್ರೀಕೃತವಾದ ಪ್ರೀತಿಯು ಸಾರ್ವಜನಿಕ ಸದ್ಭಾವನೆಯ ಮೂಲಕವಾಗಿ ಅಂದರೆ ಎಲ್ಲರ ಮೇಲಿನ ಪ್ರೀತಿಯಲ್ಲಿ ಪ್ರವರ್ತಿಸುವದು. ಮೇಣದಬತ್ತಿ ದೀಪವು ಅದನ್ನು ಹೊತ್ತಿಸುವವನ ಮೇಲೆ ಪ್ರಕಾಶಿಸುವದು ಮಾತ್ರವಲ್ಲದೆ ತನ್ನ ಬೆಳಕಿನಕಿರಣದ ವ್ಯಾಪ್ತಿಯೊಳಗೆ ಬರುವವರೆಲ್ಲರ ಮೇಲೆಯೂ ಪ್ರಕಾಶಿಸುವದು."

"ನಿಜವಾದ ಸ್ನೇಹದಲ್ಲಿರುವ ಒಳ್ಳೆಯದರ ಪರವಾದ ಶಕ್ತಿಯು ಸುಳ್ಳಿನಲ್ಲಿನ ಕೆಟ್ಟತನದ ವಿರುದ್ಧವಾದ ಶಕ್ತಿಯೂ ಆಗಿರುವದು."

"ಮಿತ್ರನಾಗಿದ್ದನೋ ಇಲ್ಲವೇ ಶತ್ರುವಾಗಿದ್ದನೋ
ಈ ಸುಳ್ಳನ್ನು ಹಬ್ಬಿಸಿದವನು!
ಇಲ್ಲ, ಶಿಶುವಲ್ಲದೆ ಮತ್ತಾರು ಪ್ರಶ್ನಿಸುವದು ಈ
ಬಗೆಯಲ್ಲಿ?
ಅದು ನನ್ನ ಅತಿ ಸನಿಹದ ಶತ್ರುಗಳಲ್ಲಿ ಒಬ್ಬನಾಗಿದ್ದನು."

*****

ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ

ರೀಪ್ರಿಂಟ್ಸ್ 4225

1 ಸಮುವೇಲ 22

"ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ." – ಲೂಕ 6:27

ಒಬ್ಬ ಹೆಸರಿಗೆ ಕಾನೂನುಬಾಹಿರ ವ್ಯಕ್ತಿಯ ಪಾತ್ರವನ್ನು ವಹಿಸಲು ದಾವೀದನು ಏಳು ವರುಷಗಳ ಪರ್ಯಂತರ ತನ್ನ ನಾಡಿನಿಂದ ಬಲವಂತವಾಗಿ ಒಬ್ಬ ದೇಶಭ್ರಷ್ಟನಂತೆ ಮಾಡಲ್ಪಟ್ಟಿದ್ದನು. ಅರಸನಾದ ಸೌಲನು ದುರಾತ್ಮ ಪೀಡಿತನಾಗಿ ಕೆಲವು ಸಾರಿ ಕಾರ್ಯತಃ ಬುದ್ಧಿಭ್ರಮಣೆಯುಳ್ಳವನಾಗಿ ಆ ಏಳು ವರುಷಗಳು ಕೆಲವು ಮನುಷ್ಯರು ಕಾಡುಪ್ರಾಣಿಗಳನ್ನು ಬೇಟೆಯಾಡುವದರಲ್ಲಿ ಸಂತೋಷಿಸುವಂತೆ ದಾವೀದನನ್ನು ಸ್ಥಳದಿಂದ ಸ್ಥಳಕ್ಕೆ ಮನರಂಜನೆಗಾಗಿಯೋ ಎಂಬಂತೆ ಬೆನ್ನಟ್ಟಿಕೊಂಡು ಹೋಗುತ್ತಿದ್ದುದು ನಿಸ್ಸಂದೇಹವಾಗಿತ್ತು. ಈ ಒಂದು ಅಂಶದ ಬೆಳಕಿನಲ್ಲಿಯೇ ದಾವೀದನು ಕೀರ್ತನಾ ಗ್ರಂಥದಲ್ಲಿ ತಾನು ತಪ್ಪಿಸಿಕೊಂಡುದರ ವಿಷಯವನ್ನು ಪ್ರಸ್ತುತಿಪಡಿಸಿರುವನು. ಅತೃಪ್ತರ ಒಂದು ದೊಡ್ಡ ಗುಂಪು ಸೌಲನ ಹಿಂಸೆಗೆ ತುತ್ತಾಗಿ ದಾವೀದನನ್ನು ಸೇರಿಕೊಂಡು ಆತನನ್ನು ತಮ್ಮ ನಾಯಕನನ್ನಾಗಿ ಮಾಡಿಕೊಂಡಿದ್ದರು. ಇವರು ಕನಿಷ್ಠದಲ್ಲಿ 400 ಮಂದಿಯಿದ್ದು (1 ಸಮುವೇಲ 22:2) ಆ ನಂತರದಲ್ಲಿ ಅವರ ಸಂಖ್ಯೆಯಾಗಿತ್ತು 600. (1 ಸಮುವೇಲ 25:13,27) ದಾವೀದನ ಸ್ವಂತ ತಂದೆತಾಯಿಗಳು ಮತ್ತು ಸಹೋದರರು ಹಿಂಸೆಗೆ ಗುರಿಯಾದವರೊಂದಿಗಿದ್ದು ಇದು ದಾವೀದನ ಕಾರಣದಿಂದಾಗಿರುವ ಸಂಭವವಿತ್ತು; ಮತ್ತು ಪ್ರವಾದಿಯಾದ ಗಾದನು ಮಹಾಯಾಜಕನಾದ ಅಬಿಮೆಲೇಕನ ಮಗನಾದ ಮಹಾಯಾಜಕನಾದ ಅಬಿಯಾತಾರನು ಇವರು ಸಹ ಅವರೊಂದಿಗೆ ಇದ್ದರು; (1 ಸಮುವೇಲ 22:22–23) ಆತನ

ತಂಗಿಯ ಮಗನಾದ ಅಬಿಷೈ ಸಹ ಇದ್ದು ಮುಂದೆ ಅವನು ಒಬ್ಬ ದೊಡ್ಡ ಸೇನಾಧಿಕಾರಿಯಾದನು (1 ಸಮುವೇಲ 26:6) ಮತ್ತೂ ಸಹ ಗಮನಿಸಲಾಗಿರುವದೆಂದರೆ ಆ ಗುಂಪಿನಲ್ಲಿ 11 ಮಂದಿ ಗಾದ್ ಕುಲದ ಯುದ್ಧ ವೀರರಿದ್ದರೆಂಬದು. (1 ಸಮುವೇಲ 12:8–14) ಅಲ್ಲದೆ ಬೆನ್ಯಾಮೀನ್ ಕುಲದ 23 ಮಂದಿ ಯುದ್ಧವೀರರಿದ್ದು ಅವರು ಎರಡು ಕೈಗಳಿಂದಲೂ ಬಾಣಗಳನ್ನು ಚೆನ್ನಾಗಿ ಎಸೆಯುವ ನಿಪುಣರಾದ ಬಿಲ್ಲುಗಾರರಾಗಿದ್ದರು. – 1 ಪೂರ್ವಕಾಲ ವೃತ್ತಾಂತ 12:1–7.

ಪ್ರೊಫೆಸರ್ ರೈಟ್ ಸಲಹೆ ಮಾಡಿರುವದು–ಅಂದು ಪ್ರಚಲಿತವಾಗಿದ್ದ ಸನ್ನಿವೇಶದಲ್ಲಿ ಒಬ್ಬ ಕಾನೂನುಭಾಹಿರ ವ್ಯಕ್ತಿಯಾಗುವುದು ಪ್ರಸಂಶನಾರ್ಹವಾಗಿತ್ತು. ಆತನು ಹೇಳಿರುವದು: "ಇಂಥಾ ಒಂದು ಕಾಲದಲ್ಲಿ ಕಾನೂನುಭಾಹಿರ ವ್ಯಕ್ತಿಯಾಗುವದು ಅಕ್ರಮವೆನ್ನಿಸಿರಲಿಲ್ಲ; ಅದು ಒಂದು ನ್ಯಾಯಬದ್ಧ ಕ್ರಾಂತಿಯ ಆರಂಭವಾಗಿತ್ತು. ಆ ಸಮಯದಲ್ಲಿ ಅದುಲ್ಲಾಮನ ಗುಹೆಯಲ್ಲಿ ದಾವೀದನ ಬಳಿಗೆ ಸೇರಿಕೊಂಡ ಅತೃಪ್ತಜನರು ನಿಜವಾದ ದೇಶಭಕ್ತರಾಗಿದ್ದರು. ಇದು ನಾಬಾಲನಿಗೆ ಕಳುಹಿಸಿದ ತನ್ನ ಸಂದೇಶದಲ್ಲಿ ಸ್ಪಷ್ಟವಾಗಿದ್ದು ಅದರಲ್ಲಿ ಆತನು ಕೇಳಿಕೊಂಡಿರುವದೇನಂದರೆ ತಾನು ನಾಬಾಲನಿಗೆ ರಕ್ಷಣೆ ನೀಡಿರುವದರಲ್ಲಿ ಅಂದರೆ ಗಡಿಗೆ ಹೊಂದಿಕೊಂಡಿರುವ ಬುಡಕಟ್ಟು ಜನರ ಹಠಾತ್ ದಾಳಿಯಿಂದ ತಾನು ಒಂದು ಸರ್ಕಾರವು ನಿರ್ವಹಿಸಿದ ಕರ್ತವ್ಯಗಳೆಲ್ಲವನ್ನು ನಿರ್ವಹಿಸಿದ್ದು, ಹೀಗಾಗಿ ಆತನು ಕೇಳಿದ್ದ ಕಪ್ಪವನ್ನು ವ್ಯವಸ್ಥಿತ ರಾಜ್ಯಾಧಿಕಾರವು ವಿಧಿಸುವ ನ್ಯಾಯಯುತ ತೆರಿಗೆಗಿಂತ ಹೆಚ್ಚೇನೂ ಆಗಿರಲಿಲ್ಲ."

ಆ ಸುಣ್ಣದ ಕಲ್ಲಿನ ಪ್ರದೇಶದಲ್ಲಿ ಅನೇಕ ಗುಹೆಗಳಿದ್ದವು. ಅದುಲ್ಲಾಮನ ಗವಿಯೆಂದು ಹೆಸರುಗೊಂಡಿರುವ ಗವಿಯಲ್ಲಿ ಒಂದು ಸಣ್ಣ ಸೈನ್ಯಕ್ಕೆ ಬೇಕಾಗುವ ಅನೇಕ ಕೊಠಡಿಗಳು ಮತ್ತು ಸ್ಥಳಾವಕಾಶಗಳು ಇದ್ದವು; ಅದು ದಾವೀದನು ಗೊಲ್ಯಾತನನ್ನು ಎದುರಿಸಿದ್ದ ಸ್ಥಳಕ್ಕೆ ಬಹು ದೂರವೇನೂ ಇರಲಿಲ್ಲ. ಈ ಹೆಸರಿನೊಡನೆ ಹೊಂದಿಕೊಂಡಂತೆ ಗಣನೀಯವಾದ ಮೂರು ಕುತೂಹಲಕಾರೀ ಸಂಗತಿಗಳಿದ್ದವು. ಇವುಗಳಲ್ಲಿ ಒಂದನ್ನು 1 ಪೂರ್ವಕಾಲ ವೃತ್ತಾಂತ 11:15–19ರಲ್ಲಿ ತಿಳಿಸಲಾಗಿದ್ದು, ಇಲ್ಲಿ ನಮಗೆ ದಾವೀದನ ಹಿಂಬಾಲಕರ ಪ್ರಾಮಾಣಿಕತೆ ಹಾಗು ದಾವೀದನ ಸ್ವಂತ ನಿಸ್ವಾರ್ಥತೆಯ ಒಂದು ಸಣ್ಣ ಚಿತ್ರಣವನ್ನು ನೀಡಲಾಗಿರುವದು. ಇಲ್ಲಿ ದಾವೀದನ ಹಿಂಬಾಲಕರು ಆತನ ಮೇಲೆ ಇಟ್ಟಿದ್ದ ಪ್ರೀತಿಯ ತಳಹದಿಯು ನೆಲೆಗೊಂಡಿರುವದು ನಿಸ್ಸಂದೇಹ. ಅದು ಫಿಲಿಷ್ಟಿಯರು ಮುತ್ತಿಗೆ ಹಾಕುತ್ತಿದ್ದ ಸಮಯವಾಗಿದ್ದು ಆಗ ದಾವೀದನು ಮತ್ತು ಆತನ ಹಿಂಬಾಲಕರು ಸೌಲನ ಪಕ್ಷದಲ್ಲಿರಲು ಸಾಧ್ಯವಾಗದಿದ್ದಾಗ್ಯೂ ಆತನಿಗೆ ವಿರೋಧವಾಗಿರಲೂ ಆಗಿರಲಿಲ್ಲ. ಫಿಲಿಷ್ಟಿಯರ ಪಾಳಯವು ಆ ಗುಹೆ ಮತ್ತು ದಾವೀದನ ಸ್ವಂತ ಪಟ್ಟಣವಾದ ಬೇತ್ಲೆಹೇಮಿನಲ್ಲಿದ್ದ ಶುದ್ಧನೀರಿನ ಬುಗ್ಗೆಯ ಮಧ್ಯದಲ್ಲಿತ್ತು. ಬಾಯಾರಿದ್ದ ದಾವೀದನು ಬೇತ್ಲೆಹೇಮಿನ ಬುಗ್ಗೆಯ ಉತ್ಕೃಷ್ಟತೆಯ ಬಗ್ಗೆ ಪ್ರಸಂಶಿಸಿ ಅದರ ಹಂಬಲಿಕೆನ್ನು ಸೂಚಿಸಿದ್ದನು. ತಮ್ಮ ನಾಯಕನ ಕಡೆಗಿನ ಶ್ರದ್ಧೆಯೊಡನೆ ದಾವೀದನ ಮುಖ್ಯಸ್ಥರಲ್ಲಿ ಮೂರು ಮಂದಿ ಫಿಲಿಷ್ಟಿಯರ ಪಾಳೆಯದ ಸೇನಾ ಪಹರೆಯಲ್ಲಿ ನುಸುಳಿ ಹೋಗುವ ಸಾಹಸ ಮಾಡುವ ಮೂಲಕವಾಗಿ ದಾವೀದನಿಗೆ ತಾನು ಹಂಬಲಿಸಿದ್ದ ನೀರನ್ನು ತಂದು ಕೊಟ್ಟಿದ್ದರು. ಆದನ್ನು ತೆಗೆದುಕೊಂಡಾಗ, ತನ್ನ ಹಿಂಬಾಲಕರು ತೋರಿದ ಇಂಥಾ ಮೆಚ್ಚುಗೆ ಹಾಗು ಪ್ರೀತಿಗಾಗಿ ದಾವೀದನ ಹೃದಯವು ದೇವರಿಗೆ ಪೂರ್ಣವಾಗಿ ಕೃತಜ್ಞತೆಯಿಂದ ಕೂಡಿತ್ತಾದರೂ, ಇದಕ್ಕೆ ತೆತ್ತ ಬೆಲೆಯನ್ನು ಹಾಗು ಅವರು ತಮ್ಮನ್ನು ಅಪಾಯಕ್ಕೆ ಗುರಿಮಾಡಿಕೊಂಡಿದ್ದನ್ನು ಪರಿಗಣಿಸಿದವನಾಗಿ ತಾನು ಇದಕ್ಕೆ ಅನರ್ಹನೆಂದು ಭಾವಿಸಿಕೊಂಡು ದೇವರಿಗೆ ಕೃತಜ್ಞಾರ್ಪಣೆ ಸಲ್ಲಿಸುವವನಾಗಿ ಹಾಗು ತನ್ನ ಹಿಂಬಾಲಕರು ತೋರಿದ ಕರುಣೆಗೆ ತನ್ನ ಅತ್ಯುನ್ನತ ಪ್ರಸಂಶೆಯನ್ನು ವ್ಯಕ್ತಪಡಿಸುವವನಾಗಿ ಆ ನೀರನ್ನು ನೆಲಕ್ಕೆ ಸುರಿದಿದ್ದನು. ಇದನ್ನು ಕವಿಯು ಹೀಗೆ ಹೇಳಿರುವನು, –

"ಮತ್ತು ಅತಿಥೇಯರೆಲ್ಲರೂ ಬೆರಗಾಗಿ ನೋಡುತ್ತಿರಲು,
ಹಾಗೂ ಆ ಘನವಂತಿಕೆಯುಳ್ಳ ಮೂವರು,
ಆ ಮೂವತ್ತರಲ್ಲಿನ ಅತ್ಯುನ್ನತ ಪರಾಕ್ರಮಶಾಲಿಗಳು,
ತಮ್ಮ ಪ್ರಾಣಗಳು ದಾವೀದನು ಮತ್ತು ದೇವರೊಂದಿಗೆ
ನಿಕಟವಾಗಿ ಹೆಣೆದುಕೊಂಡಂತೆ ಭಾವಿಸಿದ್ದರು."

ಉಲ್ಲೇಖಿಸಲಾದ ಎರಡನೇ ಆಸಕ್ತ ಸಂಗತಿಯೆಂದರೆ ದಾವೀದನು ತನ್ನ ಮುಪ್ಪಿನ ತಂದೆತಾಯಿಗಳನ್ನು ಅದುಲ್ಲಾಮನ ಗುಹೆಯಿಂದ ಕರೆದುಕೊಂಡು ಕಲ್ಲುಬಂಡೆಗಳ ಬೆಟ್ಟದ ಮೇಲಿನಿಂದ ಲವಣ ಸಮುದ್ರದ ಕಟ್ಟ ಕಡೆಯಲ್ಲಿನ ಮೋವಾಬ್ಯರ ಪರ್ವತಗಳ ಮೇಲೆ ಒಂದು ಸುಧೀರ್ಘವಾದ ಪ್ರಯಾಣ ಮಾಡಿ ಮೋವಾಬಿನ ಅರಸನ ಬಳಿಗೆ ಒಂದು ಸುರಕ್ಷಿತ ಸ್ಥಳಕ್ಕೆ ಹೋದದ್ದು. – 1 ಸಮುವೇಲ 22:3–4.

ಉಲ್ಲೇಖಿಸಲಾದ ಮೂರನೇ ಆಸಕ್ತ ಸಂಗತಿಯು ಇದೇ ಗವಿಯಲ್ಲಿ ಅರಸನಾದ ಸೌಲನ ಜೀವವನ್ನು ಉಳಿಸಿದ್ದು – 1 ಸಮುವೇಲ 24ನೇ ಅಧ್ಯಾಯ.

ದಾವೀದನು ಪರೀಕ್ಷಿಸಲ್ಪಟ್ಟದ್ದು – ಸೌಲನು ಬಿಡಲ್ಪಟ್ಟದ್ದು

ಈ ದಿನದ ಪಾಠವು ದಾವೀದನಿಂದ ಸೌಲನ ಜೀವವು ಎರಡನೇ ಸಾರಿ ಉಳಿಸಲ್ಪಟ್ಟದ್ದಕ್ಕೆ ಸಂಬಂಧಿಸಿರುವದು. ಅರಸನು ತನ್ನ ಸೈನ್ಯದ ಒಂದು ದೊಡ್ಡ ಗುಂಪಿನೊಂದಿಗೆ ದಾವೀದನಿಗೆ ವಿರೋಧವಾಗಿ ಹೊರಟು ಬಂದಿದ್ದನು. ಆ ದಿನಗಳ ಪದ್ಧತಿಯ ಮೇರೆಗೆ ಅರಸನ ಗುಡಾರವು ಮಧ್ಯದಲ್ಲಿ ಬರುವಂತೆ ಪಾಳೆಯವು ಹಾಕಲ್ಪಡುತ್ತಿದ್ದು, ಅರಸನ ಗುಡಾರವು ಆತನ ಈಟಿಯನ್ನು ಬಾಗಲಲ್ಲಿ ನಿಲ್ಲಿಸುವದರ ಮೂಲಕವಾಗಿ ಸೂಚಿಸಲಾಗುತ್ತಿತ್ತು. ಹೇಗೂ ಆ ಕಾಲದಲ್ಲಿ ಆ ದೇಶದಲ್ಲಿ ಮಳೆಯಾಗುವ ಅಪಾಯವು ಇಲ್ಲದ ಕಾರಣದಿಂದಾಗಿ ಗುಡಾರಗಳನ್ನು ಬಳಕೆಮಾಡದಿರುವ ಸಾಧ್ಯತೆಗಳಿದ್ದು ಪ್ರಯಾಣಿಕರು ತಮ್ಮ ಹೊರಗಿನ ಅಂಗಿಯನ್ನು ಸುತ್ತಿಕೊಂಡು ಯಾವುದೇ ಒಂದು ಅನುಕೂಲವಾದ ಜಾಗದಲ್ಲಿ

ಮಲಗಿಕೊಳ್ಳುವದು ವಾಡಿಕೆಯಲ್ಲಿತ್ತು. ತನ್ನ ಬೆಂಗಾವಲಿನವ–ರೊಂದಿಗೆ ದಾವೀದನು ಇಡೀ ದೇಶದಲ್ಲಿ ಚಿರಪರಿಚಿತನಾಗಿದ್ದು ಅಲ್ಲಿ ನಡೆಯುತ್ತಿದ್ದ ಎಲ್ಲವುಗಳ ಬಗ್ಗೆ ತಿಳಿದಿರುತ್ತಿದ್ದನು. ಆತನ ಬೆಂಗಾವಲಿನ ಮುಖ್ಯಸ್ಥರಲ್ಲೊಬ್ಬನು ವೈರಿಯನ್ನು ಕಿತ್ತೊಗೆಯುವಂಥ ಒಂದು ಒಳಸಂಚು ಮಾಡಿ, ಒಬ್ಬ ಭಾಗಶಃ ಬುದ್ಧಿಗೇಡಿಯ ಆಡಳಿತದಿಂದ ದೇಶವನ್ನು ಕಾಪಾಡುವಂತೆಯೂ, ಅಲ್ಲದೆ ತನ್ನ ಮತ್ತು ತನ್ನೊಡನೆ ಇರುವ ನಂಬಿಗಸ್ತ ಜನರ ಗುಂಪಿನ ತಪ್ಪುಗಳನ್ನು ಸರಿಪಡಿಸಿಕೊಳ್ಳುವದರ ಬಗ್ಗೆ ಸಲಹೆ ಮಾಡಿದ್ದನು. ಆ ಯೋಜನೆಯ ಸಫಲತೆಯು ದಾವೀದನ ಒಪ್ಪಿಗೆಯನ್ನು ಪಡೆದು ಅರಸನಾದ ಸೌಲನು ಮತ್ತು ಆತನ ಸೈನಿಕರು ಪ್ರಯಾಣದಿಂದಾದ ಆಯಾಸದಿಂದ ನಿದ್ರಿಸುವಾಗ ಪಾಳೆಯದಲ್ಲಿ ನುಸುಳಿ ಅರಸನಾದ ಸೌಲನನ್ನು ಆತನ ಗುಡಾರದಲ್ಲಿಯೇ ಕೊಂದು ಆ ಮೂಲಕವಾಗಿ ಆತನಲ್ಲಿ ಕೇಂದ್ರಿಕೃತವಾದ ಎಲ್ಲಾ ಸಂಕಷ್ಟಗಳನ್ನು ಅಂತ್ಯಗೊಳಿಸುವ ಸಾಧ್ಯತೆಗಳಿದ್ದವು. ಈ ಯೋಜನೆಯು ಸೂಕ್ತವಾದುದೆಂದು ಸಾವಿರದ ಒಂಬೈನೂರ ತೊಂಭತ್ತೊಂಭತ್ತು ಸೈನಿಕರಿಂದ ಪರಿಗಣಿಸಲ್ಪಟ್ಟಿದ್ದರೂ ಅದು ದಾವೀದನಿಗೆ ಇಷ್ಟವಾಗಿರಲಿಲ್ಲ.

ಆ ಸನ್ನಿವೇಶವನ್ನು ಸೂಕ್ತವಾದ ದೃಷ್ಟಿಯಿಂದ ಕಂಡವನಾಗಿ ದಾವೀದನು, ತನಗೆ ಸೌಲನ ಉತ್ತರಾಧಿಕಾರಿಯಾಗಿ ಅಭಿಷೇಕ ತೈಲವು ತನ್ನ ಮೇಲೆ ಬಂದಿದ್ದಾಗ್ಯೂ, ಅರಸನಾದ ಸೌಲನು ಹೊಂದಿರುವ ಸ್ಥಾನಮಾನಗಳು ದೈವ ನೇಮಿತವೆಂದು ಪರಿಗಣಿಸಿದ್ದನು. ತಾನು ಸಿಂಹಾಸನಕ್ಕೆ ಏರಬೇಕಾದ ದೇವರ ನಿಗದಿತ ಸಮಯವು ಬಂದಲ್ಲಿ ಅದನ್ನು ದೇವರು ತನ್ನದೇ ಆದ ಸಮಯ ತನ್ನದೇ ಆದ ವಿಧಾನದಲ್ಲಿ ನೆರವೇರಮಾಡಲು ಸಾಧ್ಯವೆಂಬುದನ್ನು ದಾವೀದನು ಸೂಕ್ತವಾಗಿ ವಿವೇಚನೆ–ಮಾಡಿದ್ದನು; ಅಲ್ಲದೆ ಅರಸನ ಮರಣಕ್ಕೆ ಬೇರೆ ಯಾವುದೇ ಕಾರಣದಿಂದ ತಾನು ಒಳಸಂಚುಮಾಡುವದು ತನ್ನ ಕಡೆಯಿಂದ ಪಾಪವಾಗುತ್ತದೆಂದು ತಿಳಿದಿದ್ದನು. ತಾನು ಅರಸನಾದ ಸೌಲನನ್ನು ಕೊಲ್ಲದಿರುವದು ಮಾತ್ರವಲ್ಲದೆ ಇತರರು ಅದನ್ನು ಮಾಡಲೂ ತಾನು ಅನುಮೋದಿಸುತ್ತಿರಲಿಲ್ಲ, ಇಲ್ಲವೇ ಒಂದು ಅರೆಮನಸ್ಸಿನ ಆಕ್ಷೇಪಣೆಯಿಂದಲೂ ಆತನು ಇದನ್ನು ಅನುಮೋದಿಸುತ್ತಿರಲಿಲ್ಲ. ಬದಲಾಗಿ ಆತನು ಸೌಲನ ರಕ್ಷಕನಾಗಿ ನಡಕೊಳ್ಳುವನಾಗಿದ್ದು, ಹೀಗಾಗಿ ಇದನ್ನು ಕಾರ್ಯಗತಗೊಳಿಸಲು ಈ ಸಾಹಸದ ಸಂಚಿನ ರಚನಕಾರನಿಗೂ ಯಾವುದೇ ಅವಕಾಶವು ಇಲ್ಲದಂತಾಗಿತ್ತು. ದಾವೀದನು ಆತನೊಡನೆ ಒಂದು ಭಿನ್ನವಾದ ಯೋಜನೆಯನ್ನು ಕಾರ್ಯಗತಗೊಳಿಸಲು ಹೊರಟಿದ್ದನು; ಅದೇನಂದರೆ ಅರಸನು ಸಂಪೂರ್ಣವಾಗಿ ದಾವೀದನ ನಿಯಂತ್ರಣಕ್ಕೆ ಸಿಕ್ಕಿಬಿದ್ದಿದ್ದನೆಂಬು–ದನ್ನು ಪ್ರಮಾಣೀಕರಿಸುವ ಸಲುವಾಗಿ ಪಾಳೆಯದಿಂದ ಕೆಲವೊಂದು ವಸ್ತುವನ್ನು ಹೊರಗೆ ತರುವದಾಗಿಯೂ ಮತ್ತು ಹೀಗೆ ದಾವೀದನ ಮನಸಿನಲ್ಲಿ ಸೌಲನಿಗೆ ಹಾನಿಮಾಡುವ ಯಾವ ಬಯಕೆಯೂ ಇಲ್ಲದಿದ್ದು, ಆದರೆ ಅದಕ್ಕೆ ಪ್ರತಿಯಾದದ್ದು ಇರುತ್ತದೆಂಬುದನ್ನು ತೋರಿಸಿಕೊಡುವದಿತ್ತು.

ಈ ಯೋಜನೆಯನ್ನು ಕಾರ್ಯಗತಮಾಡಲು ದಾವೀದನು ಅಬಿಷೈಯೊಡನೆ ನಿಶ್ಚಬ್ಧವಾಗಿ ತ್ವರಿತಗತಿಯಲ್ಲಿ ಸೌಲನ ಪಾಳೆಯದೊಳಗೆ ಹೋಗಿದ್ದನು. ಮೊದಲು ಅವರು ಸೌಲನ ಗುಡಾರದ ಮುಂದಿದ್ದ ಆತನ ಈಟಿಯನ್ನು ತೆಗೆದುಕೊಂಡಿದ್ದರು; ಆನಂತರ ಗುಡಾರವನ್ನು ಪ್ರವೇಶಿಸಿ ಅರಸನ ಮಂಚದ ಹತ್ತಿರವಿದ್ದ ಕುಡಿಯುವ ನೀರಿನ ತಂಬಿಗೆಯನ್ನು ಕಂಡು ಅದನ್ನು ತೆಗೆದುಕೊಂಡಿದ್ದರು. ಆ ನಂತರ ಅವರಿಬ್ಬರೂ ಸೌಲನ ಪಾಳಯದ ಎದುರಿಗಿರುವ ಗುಡ್ಡಕ್ಕೆ ಹೋಗಿ ಸೌಲನನ್ನು ಮತ್ತು ಆತನ ಸೈನಿಕರನ್ನು ಎಬ್ಬಿಸುವ ಸಲುವಾಗಿ ಗಟ್ಟಿಯಾಗಿ ಕೂಗಿದ್ದರು. ದಾವೀದನು ಸೌಲನ ಸೇನಾಧಿಪತಿಗೆ ಹೇಗೂ ತನ್ನ ಗುರುತು ಹೇಳದೆ ತಾನು ಹೇಗೆ ಪಾಳಯವನ್ನು ಹೊಕ್ಕು ಅರಸನ ಈಟಿ ಮತ್ತು ಕುಡಿಯುವ ನೀರಿನ ಮಡಿಕೆಯನ್ನು ತೆಗೆದುಕೊಂಡು ಬಂದಿರುವದನ್ನು ಹೇಳಿ ಆತನು ಅರಸನನ್ನು ಸೂಕ್ತವಾಗಿ ಕಾಪಾಡಲು ನಿರ್ಲಕ್ಷಿಸಿದ್ದಕ್ಕಾಗಿ ತರಾಟೆಗೆ ತೆಗೆದುಕೊಂಡಿದ್ದನು. ಕೂಡಲೇ ಪಾಳಯದಲ್ಲಿದ್ದವರೆಲ್ಲರೂ ಎಚ್ಚರಗೊಂಡಿದ್ದು ಅರಸನು ತಾನೇ ದಾವೀದನ ಸ್ವರವನ್ನು ಗುರುತುಹಿಡಿದವನಾಗಿ ತನಗೆ ತಿಳಿಸಲಾದ ಅಂಶವನ್ನು ಅಂದರೆ ತನ್ನ ಈಟಿ ಮತ್ತು ತಂಬಿಗೆ ಇಲ್ಲದಿರುವದನ್ನು ಕಂಡುಕೊಂಡಿದ್ದನು. ಇವುಗಳನ್ನು ದಾವೀದನು ಒಬ್ಬ ದೂತನ ಮೂಲಕ ಹಿಂದಿರುಗಿಸಲು ಪ್ರಸ್ತಾಪಿಸಿ, ತಾನು ಅವುಗಳನ್ನು ತೆಗೆದುಕೊಂಡದ್ದು ಕೇವಲ ತನಗೆ ಅರಸನ ಬಗ್ಗೆ ಯಾವ ಕೆಟ್ಟ ಅಭಿಪ್ರಾಯವೂ ಇಲ್ಲವೆಂಬುದನ್ನು ಅಲ್ಲದೆ ಯಾವ ಹಾನಿಯನ್ನೂ ಮಾಡುವ ಬಯಸಿಕೆಯಿಲ್ಲವೆಂಬುದನ್ನು ತೋರಿಸಿಕೊಡುವದಕ್ಕಾಗಿತ್ತೆಂದು ವಿವರಿಸಿ ಹೇಳಿದ್ದನು. ದಾವೀದನು ಸೌಲನ ವೈರತ್ವವು ಆತನ ಕೋಪೋದ್ರೇಕ ಮತ್ತು ಸ್ವಾರ್ಥದ ಸಲುವಾದುದೆಂದು ಆರೋಪಿಸಿರಲಿಲ್ಲ; ಆದರೆ ಇದು ದೇವರ ಚಿತ್ತವೇ ಆಗಿದ್ದಲ್ಲಿ ನಾವು ದೇವರಿಗೆ ಯಜ್ಞಾರ್ಪಣೆಮಾಡುವದರ ಮೂಲಕವಾಗಿ ಇದನ್ನು ನಿಲ್ಲಿಸಬಹುದೆಂಬುದನ್ನು ಬಹು ನಮ್ರತೆಯಿಂದ ಸೂಚಿಸಿದ್ದನು; ಆದರೆ ಅರಸನು ಮನುಷ್ಯರ ಆಲೋಚನೆಗಳನ್ನು ಅನುಸರಿಸುವವನಾಗಿದ್ದರೆ ಆ ಮನುಷ್ಯರು ದುಷ್ಟರೆಂದು, ಯಾಕಂದರೆ ತನ್ನನ್ನು ತನ್ನ ಜನರಿಂದ ಅನ್ಯಜನರ ನಾಡಿಗೆ ಓಡಿಸುವಂಥ ಅವರ ಸಲಹೆಯ ಪರಿಣಾಮವು ಒಬ್ಬ ಇಸ್ರಾಯೇಲ್ ಸಹಚರನನ್ನು ತನ್ನ ಮನೆ ನಾಡಿನಿಂದ ಅಗಲಿಸುವದು ಮಾತ್ರವಲ್ಲದೆ ತನ್ನ ದೇವರು ಮತ್ತು ತನ್ನ ಧರ್ಮದಿಂದಲೂ ಅಗಲಿಸುವಂತಾಗುವದೆಂದು ಹೇಳಿದ್ದನು. ತನ್ನ ರಕ್ತವು ಸುರಿಸಲ್ಪಡಬೇಕಿದ್ದಲ್ಲಿ ಅದು ಇಸ್ರಾಯೇಲ್ಯರ ನಾಡಿನಲ್ಲೇ ಆಗಬೇಕೆಂದು ತಾನು ಬಯಸುವದಾಗಿ ಅರಸನಿಗೆ ಭರವಸೆ ನೀಡಿ ಹೇಳಿದ್ದಲ್ಲದೆ ಇದು ಮಾತ್ರವೇ ತಾನು ಜನ್ಮಭೂಮಿಯನ್ನು ಬಿಡದಿರುವದಕ್ಕೆ ಕಾರಣವೆಂದು ಅರಸನಿಗೆ ಸೂಚಿಸಿದ್ದನು. ಅರಸನು ತನ್ನನ್ನು ಒಬ್ಬ ಶತ್ರುವಿನಂತೆ ಹಿಂದಟ್ಟುವವನಾಗಿ ತನ್ನನ್ನು ತನ್ನ ಸಹಕಾರಿಗಳನ್ನು ಸಾಮ್ರಾಜ್ಯದ ಶತ್ರುಗಳೆಂದು ಭಾವಿಸಿದ್ದಲ್ಲಿ ಅದು ಒಂದು ಗೌಜುಗವನ್ನು ಬೇಟೆಯಾಡುವ ಸಲುವಾಗಿ ಒಂದು ದಂಡೆಯಾತ್ರೆ ಕೈಗೊಳ್ಳುವಂತೆ ಯೋಚಿಸುವಂಥದ್ದಾಗಿದ್ದು ಅದು ಹಾಸ್ಯಾಸ್ಪದವಾದಂತಾಗುವದೆಂದು ಸೂಚಿಸಿ ಹೇಳಿದ್ದನು.

ಅರಸನಾದ ಸೌಲನು ತಾನು ತಪ್ಪಿನಲ್ಲಿದ್ದೇನೆಂಬುದನ್ನು ಒಪ್ಪಿಕೊಳ್ಳುವಷ್ಟು ಪ್ರಮಾಣಿಕನಾಗಿ ಹೀಗೆ ಹೇಳಿದ್ದನು: **"ನಾನು ಪಾಪಮಾಡಿದೆನು. ದಾವೀದನೇ ನನ್ನ ಮಗನೇ ಹಿಂದಿರುಗಿ ಬಾ; ಈ ಹೊತ್ತು ನನ್ನ ಜೀವವು ನಿನ್ನ ದೃಷ್ಟಿಯಲ್ಲಿ ಬಹು ಬೆಲೆಯುಳ್ಳದ್ದೆಂದು ಎಣಿಸಲ್ಪಟ್ಟಿತ್ತು. ಆದುದರಿಂದ ನಾನು ನಿನಗೆ ಇನ್ನು ಯಾವ ಕೇಡು ಮಾಡುವದಿಲ್ಲ. ಈ ವರೆಗೆ ನಾನು ಮಾಡಿದ್ದು ಹುಚ್ಚುತನವೂ ದೊಡ್ಡ ತಪ್ಪೂ ಆಗಿದೆ."**

"ನನ್ನನ್ನು ಎಲ್ಲಾ ಇಕ್ಕಟ್ಟಿನಿಂದ ಬಿಡಿಸು"

ದಾವೀದನು ಅರಸನಿಗೆ ಕೊಟ್ಟ ಉತ್ತರವು ಬಹು ಗಮನಾರ್ಹವಾಗಿದ್ದು ಅದು ನಮಗೆ ಆ ಮನುಷ್ಯನ ಗುಣದ ಕೇಂದ್ರವು ಹಾಗು ಆತನ ನಡವಳಿಕೆಯ ಮಾರ್ಗದರ್ಶನವು ದೇವರ ಕಡೆಗಿದ್ದ ಆತನ ಭಯಭಕ್ತಿ ಹಾಗು ಆತನ ನಂಬಿಕೆಯೆಂಬುದನ್ನು ನಮಗೆ ತೋರಿಸುವದು. ಆತನು ಹೇಳಿದ್ದು: "ಯೆಹೋವನು ಪ್ರತಿಯೊಬ್ಬನಿಗೂ ಅವನವನ ನೀತಿಸತ್ಯತೆಗಳಿಗನುಸಾರವಾದ ಫಲವನ್ನು ಕೊಡುವನು. ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಟ್ಟಿದ್ದರೂ ನೀನು ಯೆಹೋವನ ಅಭಿಷಕ್ತನೆಂದು ನಾನು ನಿನ್ನ ಮೇಲೆ ಕೈಹಾಕಲಿಲ್ಲ. ನಾನು ಈ ಹೊತ್ತು ನಿನ್ನ ಜೀವವನ್ನು ಮಾನ್ಯವಾದ–ದ್ದೆಂದೆಣಿಸಿದಂತೆ ಯೆಹೋವನೂ ನನ್ನ ಜೀವವನ್ನು ಎಲ್ಲಾ ಇಕ್ಕಟ್ಟಿನಿಂದ ಬಿಡಿಸಲಿ." (ವಚನ 23, 24) ಎಷ್ಟು ಅದ್ಭುತವಾದದ್ದು ಇಲ್ಲಿ ವ್ಯಕ್ತವಾಗಿರುವಂಥದು! ಇದರಲ್ಲಿ ಸೌಲನ ದಯೆಗೆ ಬೇಡಿಕೆಯಿಲ್ಲ, ಆತನ ಮೇಲಿನ ಅವಲಂಬನೆಯ ಸಂಬಂಧವಾಗಿ ಯಾವ ವ್ಯಕ್ತಪಡಿಸುವಿಕೆಯೂ ಇರುವದಿಲ್ಲ. ಆದರೆ ದೇವರಿಗೆ ಒಂದು ಪ್ರಾರ್ಥನೆಯಿದ್ದು ಅದು ತನ್ನನ್ನು ಬಿಡಿಸಲು ದೇವರ ಸಂಕಲ್ಪ ಹಾಗು ಸಾಮರ್ಥ್ಯದಲ್ಲಿ ಪೂರ್ಣ ವಿಶ್ವಾಸ ವ್ಯಕ್ತಪಡಿಸಲಾಗಿತ್ತು. ಮೇಲಾಗಿ, ವಿಧ್ಯಾಬ್ಯಾಸ ಹೊಂದಿದವರಾಗಿ ದಾವೀದನು ಎಂದೂ ಅನುಭವ ಪಡೆಯದ ಕ್ರಿಸ್ತೀಯ ಅನುಭವ ಶಾಲೆಯ ಪ್ರಯೋಜನವನ್ನು ಪಡೆದಿರುವ ಯಾವ ಕ್ರೈಸ್ತ ಪ್ರಿಯರೂ ಕಲಿಯಲಾಗದ ಒಂದು ಪಾಠವನ್ನು ದಾವೀದನು ಕಲಿತುಕೊಂಡಿರುವಂತೆ ತೋರುವದು. ದಾವೀದನ ನಡಾವಳಿ ಮತ್ತು ಭಾಷೆಯು ಆತನು ಕರ್ತನ ಪ್ರಾರ್ಥನೆ–ಯಲ್ಲಿರುವ ಈ ಭಾಗವನ್ನು ಅರ್ಥಮಾಡಿಕೊಂಡಿದ್ದಂತೆ ತೋರುವದು, ಅದೇನಂದರೆ–"ನಮಗೆ ತಪ್ಪುಮಾಡಿದವರನ್ನು ನಾವು ಕ್ಷಮಿಸುವಂತೆ ನಮ್ಮ ತಪ್ಪುಗಳನ್ನೂ ಕ್ಷಮಿಸು." ಎಂಬುವದು. ಇತರರಿಗೆ ನಾವು ಕರುಣೆತೋರಿಸಿದ ಪ್ರಕಾರವೇ ನಮಗೂ ಕರುಣೆತೋರಿಸು. ಇದು ದಾವೀದನ ಹೇಳಿಕೆಯ ಸಾರಾಂಶವು. ನಾನು ನಿನಗೆ ಕರುಣೆತೋರಿದಂತೆಯೇ, ಅರಸನಾದ ಸೌಲನೇ, ದೇವರು ನನಗೂ ಕರುಣೆಯನ್ನು ತೋರಲಿ.

"ಆಗ ಸೌಲನು ದಾವೀದನಿಗೆ–ನನ್ನ ಮಗನೇ, ದಾವೀದನೇ, ನೀನು ಆಶೀರ್ವಾದ ಹೊಂದು; ನೀನು ಹೇಗೂ ಮಹಾಕಾರ್ಯಗಳನ್ನು ನಡೆಸಿ ಸಫಲನಾಗುವಿ ಎಂದು ಹೇಳಿ ತನ್ನ ಊರಿಗೆ ಹೊರಟನು; ದಾವೀದನು ತನ್ನ ದಾರಿ ಹಿಡಿದನು." ಆದರೆ ಹಿಂದಿರುಗಿಬರುವಂತೆ ಆಹ್ವಾನಿಸಲ್ಪಟ್ಟಿದ್ದರೂ ಸೌಲನ ಮನಸ್ಸು ಮಾತುಗಳು ನಂಬಲು ಅನರ್ಹವೆಂಬುದನ್ನು ದಾವೀದನು ಅರಿತುಕೊಂಡಿದ್ದನು. ಇದು ನಾವೆಲ್ಲರೂ ಗಮನಿಸಲು ಅಗತ್ಯವಿರುವ ಒಂದು ಪಾಠವಾಗಿರುವದು, ಅದೇನಂದರೆ ಕೆಟ್ಟ ಹೃದಯವು ಕೆಲವು ಕ್ಷಣ ಕುಗ್ಗಿರುವ, ನಯವಿನಯದ, ಪ್ರೀತಿಯುಳ್ಳಂತೆ ಕಂಡರೂ ಅದು ನಂಬಲು ಅನರ್ಹವಾದು–ದೆಂಬದು. ಇದು ನಾವು ಮತ್ತೆ ಎಂದಿಗೂ ನಮಗೆ ಕೆಟ್ಟದ್ದನ್ನು ಅಥವಾ ಹಾನಿಯನ್ನು ಮಾಡಿದವರಿಗೆ ಇಲ್ಲವೇ ನಮಗೆ ಕೇಡು ಮಾಡಿದ್ದವರ ಬಗ್ಗೆ ವಿಶ್ವಾಸವಿಡಬಾರದೆಂಬ ಅರ್ಥಕೊಡುವದಿಲ್ಲ; ಆದರೆ ನಾವು ಕೇಡಿಗೆ ಪ್ರತಿಯಾಗಿ ಕೇಡನ್ನು, ಕೋಪಕ್ಕೆ ಪ್ರತಿಯಾಗಿ ಕೋಪವನ್ನು, ದ್ವೇಷಕ್ಕೆ ಪ್ರತಿಯಾಗಿ ದ್ವೇಷವನ್ನು, ನಿಂದೆಗೆ ಪ್ರತಿಯಾಗಿ ನಿಂದೆಯನ್ನು ಮಾಡದಿದ್ದಾಗ್ಯೂ ನಾವು ಬುದ್ಧಿವಿವೇಕವನ್ನು ಬಳಸಿಕೊಂಡವರಾಗಿ ಇಂಥಾ ಶಕ್ತಿಗಳಿಗೆ ನಮ್ಮನ್ನು ಅತಿಯಾಗಿ ಒಪ್ಪಿಸಿಕೊಡದೆ ನಾವು ಕೇವಲ ಪುನರಾಶ್ವಾಸನೆಯ ಮಾತುಗಳನ್ನು ತೆಗೆದುಕೊಳ್ಳದೆ ಹೃದಯ ಪರಿವರ್ತನೆಯ ಬಗ್ಗೆ ಕಾರ್ಯರೂಪದ ಸಾಕ್ಷಿಗಳನ್ನು ಅಂದರೆ ಹಗೆತನವೆಂಬ ಹುಳಿಯನ್ನು ಹೊರದೂಡಲಾಗಿರುವದರ ಸಾಕ್ಷಿಯನ್ನು ತೆಗೆದುಕೊಳ್ಳಬೇಕು.

ನೂತನ ಸೃಷ್ಟಿಗಳಿಗಿರುವ ಇತರ ಪಾಠಗಳು

ದಾವೀದನು ಗೊಲ್ಯಾತನ ಮೇಲೆ ಮಹಾ ವಿಜಯವನ್ನು ಗಳಿಸಿದ್ದನು; ಆದರೆ ಈ ಪಾಠವು ಆತನು ತನಗಾಗಿ ಗಳಿಸಿದ್ದ ಇನ್ನೂ ಒಂದು ಮಹಾ ವಿಶೇಷವಾದ ವಿಜಯವನ್ನು ದಾಖಲಿ–ಸುತ್ತದೆ. ಒಬ್ಬ ಪ್ರಾಕೃತ ಮನುಷ್ಯನಾಗಿ ಪವಿತ್ರಾತ್ಮನ ಮೂಲಕವಾಗಿ ಮತ್ತೆ ಹುಟ್ಟಿದವನಾಗಿರದೆ ಆತನು ಅದ್ಭುತವಾದ ಆತ್ಮ–ಸಂಯಮವನ್ನು ತೋರ್ಪಡಿಸಿದ್ದನು. ಸೌಲನ ಮೇಲಿನ ಆತನ [ದಾವೀದನ] ಪ್ರೀತಿಯು ಅರಸನ ಜೀವವನ್ನು ಉಳಿಸಿತ್ತೆಂದು ಹೇಳಲು ನಮಗೆ ಸಾಧ್ಯವಾಗದು; ವಾಸ್ತವದಲ್ಲಿ ಅದು ದೇವರ ಮೇಲಿನ ಆತನ ಪ್ರೀತಿ, ದೈವಾಧಿಕಾರದ ಮೇಲೆ ಆತನಿಗಿದ್ದ ಗೌರವವಾಗಿತ್ತು. ದೇವರ ಕಡೆಗಿದ್ದ ಆತನ ಶ್ರದ್ಧಾಭಕ್ತಿಗಳು ನಿಜವಾಗಿಯೂ ಬಹು ದೃಢವಾಗಿರದಿದ್ದಲ್ಲಿ ಇದರ ಎದುರಿನಿಂದ ಪರಿಶೋಧನೆಯು ಆತನನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಸಾಧಾರಣ ಮನುಷ್ಯನಿಗೆ ಎಂಟು ಕಾರಣಗಳು ತನ್ನ ವೈರಿಯನ್ನು ಕೊಲ್ಲುವಂಥಾ ವಿರೋಧದ [ಪ್ರತಿಕಾರದ] ವಿಧಾನವು ಅಪೀಲುಮಾಡುವದು. (1) ಅರಸನ ಹಾಗು ದಾವೀದನು ಮತ್ತು ಆತನ ಸಣ್ಣ ಸಂಖ್ಯೆಯ ಜನರ ನಡುವಿನ ಒಂದು ವಿಧಿವತ್ತಾದ ಯುದ್ಧವೇ ಅದು ಆಗಿತ್ತು. ಈ ದಿನದ ಯಾವುದೇ ಸೈನ್ಯದಲ್ಲಿ ಇಂಥಾ ಒಂದು ಅನಿರೀಕ್ಷಿತ ಸಂಗತಿಯು ಸಂಪೂರ್ಣವಾಗಿ ಸಮರ್ಥಿಸಿಕೊಳ್ಳುವಂಥದ್ದೆಂದು ಪರಿಗಣಿಸಲಾಗಿರುವದು. (2) ತನ್ನ ಸ್ವಂತ ಸಂರಕ್ಷಣೆಯು ಅರಸನ ಮರಣಕ್ಕಾಗಿ ಬೇಡಿಕೆಯಿಟ್ಟಿತ್ತೆಂದು ತೋರುತ್ತದೆ; ಅಲ್ಲದೆ ಇಂಥಾ ಒಂದು ಸಂರಕ್ಷಣಾ ಕಾರ್ಯವು ಪ್ರಕೃತಿಯ ಮೊದಲನೇ ನಿಯಮವೆಂದು ಲೋಕದಲ್ಲಿ ಸಾಧಾರಣವಾಗಿ ಗುರುತಿಸಲಾಗಿರುವದು. (3) ತನ್ನ ಅಲೆಮಾರಿ ಜೀವಿತದಿಂದ ಪಾರಾಗಿ ತಾನು ದೇವರಾದುಕೊಂಡ ಜನಾಂಗವಾಗಿ ಶಾಂತಿನೆಮ್ಮದಿಗಳಿಂದ ಜೀವಿಸುವಂಥ ಸಂಗತಿಯು ಕಾರ್ಯವೆಸಗಲು ದೃಢವಾದ ಬೇಡಿಕೆಯಿಟ್ಟಿತ್ತು. (4) ಅರಸನಾಗಲು ಅಭಿಷೇಕಹೊಂದಿ ಸೌಲನಿಗೆ ಉತ್ತರಾದಿಕಾರಿ–ಯಾಗಿ ಶೀಘ್ರವಾಗಿ ಸಿಂಹಾಸನಕ್ಕೆ ಏರುವಂಥದ್ದನ್ನು ನಿರೀಕ್ಷೆಮಾಡಲು ಹಲವರಿಗೆ ಒಂದು ಪ್ರಬಲವಾದ ಕಾರಣ–ವಾಗುತ್ತದೆ. (5) ತಾನು ಸೌಲನ ಮೂಲಕವಾಗಿ ಕಷ್ಟಪಟ್ಟಿದ್ದ ಸಂಗತಿಗಳಿಗೆ ಪ್ರತಿಕಾರಮಾಡಬೇಕೆಂಬ ಅಂಶವು ತನ್ನಲ್ಲಿಯೇ ಸಲಹೆಮಾಡುವದು ನಿಸ್ಸಂದೇಹ. (6) ಆತನ ದೇಶಭಕ್ತಿ ಅಂದರೆ

ತನ್ನ ದೇಶದ ಹಾಗು ತನ್ನ ಜನಾಂಗದ ಮೇಲಿನ ತನ್ನ ಪ್ರೀತಿ ಮತ್ತು ಸೌಲನು ಅರಸನಾಗಿರಲು ಶ್ರೀಘ್ರವಾಗಿ ಅನರ್ಹನಾಗುತ್ತಿರುವ ಸಂಗತಿಯು ಸೌಲನ ಮರಣವನ್ನು ಬಯಸಲು ಮತ್ತೊಂದು ಕಾರಣವಾಗಿತ್ತು. (7) ಈ ಕಾರ್ಯವನ್ನು ನೆರವೇರಿಸುವಂಥದ್ದು ಹೀಗೆ ತನ್ನ ಕೈಗೆ ಬರುತ್ತಿರುವ ದೇವರ ಏರ್ಪಾಡು ಎಂದು ಅರ್ಥೈಸಿಕೊಳ್ಳುವದು; ಒಂದು ದುಷ್ಟ ಹೃದಯ ಹಾಗು ತಪ್ಪಿತಸ್ಥ ಮನೋಭಾವ ಹೊಂದಿದ ಮನಃಸಾಕ್ಷಿಯು ಹೀಗೆ ನಿರ್ಣಯಿಸುತ್ತಿತ್ತು. (8) ಆತನ ಹಿಂಬಾಲಕರೆಲ್ಲರ ಹಿತಾಸಕ್ತಿಗಳು, ಅವರಲ್ಲಿ ದಾವೀದನ ನೆಮ್ಮದಿ ಹಾಗು ರಕ್ಷಣೆಯ ಕಾರಣ ತಮ್ಮ ಜೀವಗಳನ್ನು ಅಪಾಯಕ್ಕೆ ಗುರಿಮಾಡಿಕೊಂಡವರು ಅರಸನು ಕೊಲ್ಲಲ್ಪಡಬೇಕೆಂಬ ಬೇಡಿಕೆಹಾಕಿದ್ದರು; ಇನ್ನೂ ಹೆಚ್ಚಾಗಿ ದಾವೀದನು ಅರಸನ ಜೀವವನ್ನು ಉಳಿಸಿದ್ದರಲ್ಲಿದ್ದ ಹಿಂದಿನ ಉದ್ದೇಶವನ್ನು ಗ್ರಹಿಸಿಕೊಳ್ಳಲು ಅನೇಕರು ಅಶಕ್ತರಾಗು–ವರೆಂಬುದು ನಿಸ್ಸಂದೇಹ. ಇಂಥವರಿಗೆ ಈ ಒಂದು ಅವಕಾಶವು ತಪ್ಪಿಹೋಗುವಂತೆ ಮಾಡಿದ್ದರಲ್ಲಿ ದಾವೀದನು ಅನುಸರಿಸಿದ ವಿಧಾನವು ಬುದ್ಧಿಯಿಲ್ಲದ್ದೂ ಬಹುತೇಕ ಹುಚ್ಚುತನವೂ ಆಗಿರುವಂತೆ ಕಂಡಿತ್ತು. ಹೀಗಾಗಿ ದಾವೀದನು ತಾನೇ ತನ್ನ ಸಹಕಾರಿಗಳನ್ನು ಸಂಕಷ್ಟಗಳಿಂದ ಅಗಲಿಸಬಹುದಿತ್ತು.

ಖಂಡಿತವಾಗಿಯೂ ಒಬ್ಬ ಬಲಹೀನ ಮನುಷ್ಯನು ಅಥವಾ ಕರ್ತನಿಗೆ ಅಲ್ಪ ಭಯಭಕ್ತಿಯುಳ್ಳ ಹಾಗು ಆತನಲ್ಲಿ ಕಡಿಮೆ ನಂಬಿಕೆಯುಳ್ಳವನು ಇಂಥಾ ಆಶಾಪಾಶಗಳ ಒತ್ತಡಕ್ಕೆ ಮಣಿದುಹೋಗುತ್ತಿದ್ದನು. ದಾವೀದನು ಇವುಗಳಿಗೆ ಮಣಿಯಲಿಲ್ಲ ಎಂಬ ಅಂಶವು ಆತನ ಗುಣಗಳ, ಆತನ ಸಿದ್ಧಾಂತಗಳ ಬಗ್ಗೆ ಬಲವಾದ ಸಾಕ್ಷಿನೀಡುವದು.

ಕ್ರಿಸ್ತನ ಅನುಭವ ಶಾಲೆಯಲ್ಲಿ ಮುಂದುವರೆದ ಪಾಠಗಳನ್ನು ಹೊಂದಿರುವ ಹಾಗು ಪವಿತ್ರಾತ್ಮನಿಂದ ಹುಟ್ಟಿದಂಥ ಅನುಕೂಲಗಳನ್ನು ಪಡೆದಿರುವ, ಈ ಮೂಲಕವಾಗಿ ದೇವರ ಗುಣ ಹಾಗು ಚಿತ್ತದ ವಿಷಯವಾಗಿ ಆಳವಾದ ಸಂಗತಿಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯನ್ನು ಹೊಂದಿರುವ ನಮ್ಮ ಬಗ್ಗೆ ಹೇಗಿರುವದು? ನಾವು ಇದೇ ರೀತಿಯ ನಂಬಿಗಸ್ತಿಕೆ ಔದಾರ್ಯಗಳನ್ನು ಪಡೆದಿರುವರಾಗಿರುವೆವೋ? ಆದರೆ ಖಂಡಿತವಾಗಿಯೂ ದೇವರು ನಮ್ಮಿಂದ ದಾವೀದನಿಗಿಂತಲೂ ಇನ್ನೂ ಹೆಚ್ಚಾದುದನ್ನು ಅಪೇಕ್ಷಿಸುವನು; ಆದುದರಿಂದ "ಮಕ್ಕಳ ಮನೆತನದವರಾದ" ನಾವು ಪ್ರತಿಯೊಂದು ವಿಧದಲ್ಲಿಯೂ "ಸೇವಕರ ಮನೆತನದವರಿಗಿಂತ" ಹೆಚ್ಚು ಅನುಕೂಲಗಳನ್ನು ಹೊಂದಿರುವಲ್ಲಿ ಖಂಡಿತವಾಗಿಯೂ ನಮ್ಮಿಂದ ಹೆಚ್ಚಾದುದನ್ನು ನಾವು ಅಪೇಕ್ಷೆಮಾಡಿಕೊಳ್ಳಬೇಕು. ನಮ್ಮ ವಿಮೋಚಕನೂ, ನಮ್ಮ ಒಡೆಯನೂ, ನಮ್ಮ ಬೋಧಕನೂ ನಮಗೆ ಪ್ರಬೋಧಿಸಿ ನಮಗೆ ಒಂದು ಹೊಸ ಆಜ್ಞೆಯನ್ನು ನೀಡಿ ಹೀಗೆ ಹೇಳಿರುವವನಲ್ಲವೇ: "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ. ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು." ಮತ್ತೆ ನಮ್ಮ ಸ್ವರ್ಣಮಯ ಪಠ್ಯಭಾಗದ ಮಾತುಗಳಲ್ಲಿ ನಾವು ಈ ಆದೇಶವನ್ನು ಪಡೆದಿರುವೆವು, "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ." ಈ ಪಾಠವನ್ನು, ನಾವು ಹೊಂದಿರುವ ಪ್ರಬೋಧನೆಗಳನ್ನು ನಮಗೆ ಮನವರಿಕೆಯಾಗಿರುವದನ್ನು ನಾವು ಹೇಗೆ ತೋರ್ಪಡಿಸುತ್ತಿರುವೆವು? ದೇವರ ಮೇಲಿನ ಪ್ರೀತಿಯ ಸಂಬಂಧದ ಆಜ್ಞೆಗಳನ್ನು, ಅಂದರೆ ಆತನ ಬೋಧನೆಗಳು, ಸಹೋದರರು, ವೈರಿಗಳು ಇವುಗಳ ಮೇಲಿನ ಪ್ರೀತಿಯ ಸಂಬಂಧವಾದ ಆಜ್ಞೆಗಳನ್ನು ನಾವು ಅನುದಿನವೂ ಹೇಗೆ ಕಾರ್ಯಗತ ಮಾಡುತ್ತಿರುವೆವು?

ಆ ರಾಜ್ಯದಲ್ಲಿ ಕೊಲೆಗಾರನೂ ಇರುವುದಿಲ್ಲ

ದಾವೀದನಿಗೆ ಬಂದಂಥ ಪರೀಕ್ಷೆಗಳು ಈ ದಿನದಲ್ಲಿ ಕ್ರೈಸ್ತರಾಗಿ ನಮಗೆ ಬರಲು ಸಾಧ್ಯವಿರುವದಿಲ್ಲವೆಂದು ಹೇಳಬಹುದು; ಆದರೆ ಇಂಥದ್ದು ಬಂದದ್ದೇ ಆದರೆ ಯಾವ ಕ್ರೈಸ್ತನಾಗಲೀ, ಯಾವ ಭಕ್ತನಾಗಲೀ, ಖಂಡಿತವಾಗಿಯೂ ಒಬ್ಬ ಕೊಲೆಗಾರನಾಗುವದಿಲ್ಲವೆಂದು ಹೇಳಬಹುದು. ನಮ್ಮ ಉತ್ತರವೇನಂದರೆ ನಾವು ಹೊಸ ದೈವವ್ಯವಸ್ಥೆಯಲ್ಲಿದ್ದು ಅದೇ ನಿಯಮದ ಅಧೀನದಲ್ಲಿದ್ದೇವೆ, ಆದರೆ ಒಂದು ಉನ್ನತ ಮಟ್ಟದ ವ್ಯಾಖ್ಯಾನ ಅಥವಾ ಅರ್ಥವಿವರಣೆಯನ್ನು ಹೊಂದಿದ್ದೇವೆಂಬು–ದನ್ನು ಮರೆಯಬಾರದೆಂಬುದೇ; ಇದಕ್ಕೆ ದೃಷ್ಟಾಂತವಾಗಿ ಹೇಳುವದಾದರೆ, ನಮ್ಮ ಒಡೆಯನು ಹೀಗೆ ಹೇಳಿದ ಮಾತುಗಳು, "ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯು ಕೂಡ ವ್ಯೆಭಿಚಾರ ಮಾಡಿದವನಾದನು." ಅಲ್ಲದೆ ಪುನಃ "ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯ ವಿಚಾರಣೆಗೆ ಗುರಿ–ಯಾಗುವನು;" "ತನ್ನ ಸಹೋದರನನ್ನು ದ್ವೇಷಿಸುವನು ಕೊಲೆಗಾರನಾಗಿದ್ದಾನೆ. (ಮತ್ತಾಯ 5:22,28; 1 ಯೋಹಾನ 3:15) ದೈವಿಕ ಆಜ್ಞೆಯ ಈ ಉನ್ನತ ಮಟ್ಟದ ಅರ್ಥವಿವರ–ಣೆಯನ್ನು, ಹಾಗು ನಮ್ಮ ಮನಸ್ಸಿನಲ್ಲಿ ಇದು ನಡೆಸುವ ಕಾರ್ಯ–ವನ್ನು ಗಣನೆಗೆ ತೆಗೆದುಕೊಂಡವರಾಗಿ, ನಮಗೆ ಸುಲಭವಾಗಿ ಕಾಣುವಂಥ ಸಂಗತಿಯೆಂದರೆ ದಾವೀದನಿಗೆ ಬಂದಂಥ ಅದೇ ವಿಧವಾದ ಅವಕಾಶಗಳು ಅಂದರೆ ಕೇಡಿಗೆ ಪ್ರತಿಯಾಗಿ ಕೇಡನ್ನು, ನಿಂದನೆಗೆ ಪ್ರತಿಯಾಗಿ ನಿಂದನೆಯನ್ನು ಮಾಡುವ ಅವಕಾಶಗಳು; ನಮ್ಮ ನೆರೆಯವನನ್ನು, ನಮ್ಮ ಸಹೋದರನನ್ನು ಸಂಹಾರಮಾಡುವಂಥ ಅವಕಾಶಗಳು; ಅಂದರೆ ಆತನ ಕೀರ್ತಿಪ್ರಭಾವ, ಮುಂತಾದವುಗಳನ್ನು ಕೊಲ್ಲುವ ಅವಕಾಶಗಳು ನಮ್ಮಲ್ಲಿ ಪ್ರತಿಯೊಬ್ಬನಿಗೂ ಲಭಿಸುವಂತಾಗಲು ಸಾಧ್ಯ.

ನಾವು ಈ ಪರೀಕ್ಷೆಗಳನ್ನು ಹೇಗೆ ಎದುರಿಸುತ್ತಿದ್ದೇವೆ? ದಾವೀದನು ಮಾಡಿದಂತೆ ನಾವು ಸ್ವಾರ್ಥದ ಮೇಲೆ ವಿಜಯವನ್ನು ಗಳಿಸುತ್ತಿದ್ದೇವೋ? ಅಥವಾ ನಾವು ಕೆಡುಕನಿಂದ ಜಯಿಸಲ್ಪಡುತ್ತಿದ್ದೇವೋ? ಎರಡನೆಯ ಸಂಗತಿಯು ನಮ್ಮದಾಗಿದ್ದಲ್ಲಿ, ನಾವು ಹೀಗೆ ದಾವೀದನ ಅಥವಾ ಪ್ರಿಯನ ವರ್ಗದ ಅಂಗಗಳಲ್ಲವೆಂಬುದನ್ನು ಸಾಬೀತುಪಡಿಸಿ, ವಿರೋಧಿಯೊಡನೆ [ಸೈತಾನನೊಡನೆ] ಒಂದು ಸಂಬಂಧವನ್ನು

ಸ್ಥಾಪಿಸಿಕೊಂಡು, ಕೆಲವು ಮಟ್ಟಿಗೆ ಆತನ ಮನೋಭಾವ, ಆತನ ಪ್ರವೃತ್ತಿ, ಇವುಗಳಲ್ಲಿ ಪಾಲುಗಾರರಾಗಿ ತಪ್ಪುಮಾಡುವದರಲ್ಲಿ, ನಮ್ಮ ಸಹೋದರರ ಹತ್ಯೆಮಾಡುವದರಲ್ಲಿ ಕೆಲವು ಮಟ್ಟಿಗೆ ಇದನ್ನು ತೋರ್ಪಡಿಸುತ್ತಿರುವೆವು. ಈ ಸುವಾರ್ತಾಯುಗದ ಅಂತ್ಯದಲ್ಲಿ ತನ್ನ ಜನರಿಗೆ ಈ ಸಂಬಂಧವಾಗಿ ವಿಶೇಷ ಕಷ್ಟಪರಿಶೋಧನೆಗಳು ಬರುವದೆಂಬುನ್ನು ನಮ್ಮ ಕರ್ತನು ನಿಜವಾಗಿಯೂ ಇದನ್ನು ಅನ್ವಯಿಸಿಕೊಂಡು ಹೇಳಿರುವಂತೆ ತೋರುವದು. ಆತನು ಪ್ರಕಟವಾಡಿ ಹೇಳಿರುವದು: ಸಹೋದರನು ಮತ್ತೊಬ್ಬ ಸಹೋದರನನ್ನು ಮರಣಕ್ಕೆ ಒಪ್ಪಿಸುವನು, ತಂದೆತಾಯಿಗಳು ತಮ್ಮ ಮಕ್ಕಳನ್ನು ಮರಣಕ್ಕೆ ಒಪ್ಪಿಸುವರು; ಅಲ್ಲದೆ ಇಂಥಾ ಪರಿಸ್ಥಿತಿಯಲ್ಲಿ ಕ್ರಿಸ್ತನಂಬಿಕೆಯುಳ್ಳವರನ್ನು ಲೋಕದ ಎಲ್ಲಾ ಜನರು ಹಗೆಮಾಡುವರು. ಇಂಥಾ ವಿಷಯಗಳಲ್ಲಿ ನಾವು ಎಷ್ಟರ ಮಟ್ಟಿಗೆ ನಮ್ಮ ವೈರಿಯೊಂದಿಗೆ ಒಳಸಂಚನ್ನು ಮಾಡುತ್ತಿರುವೆವು ಅಥವಾ ಸಹಕರಿಸುತ್ತಿರುವೆವು? ನಾವು ಎಷ್ಟರ ಮಟ್ಟಿಗೆ ಪೂರ್ವಕಾಲದ ದಾವೀದನಂತೆ ಕರ್ತನಲ್ಲಿ ಅತಿ ಭಯಭಕ್ತಿಯುಳ್ಳವರಾಗಿ ಅಭಿಷಕ್ತರಲ್ಲಿ ಒಬ್ಬನನ್ನು ಮುಟ್ಟಲು, ಹಾನಿಮಾಡಲು ಧೈರ್ಯಮಾಡದೆ, ಇಲ್ಲವೆ ಸೌಲನು ದಾವೀದನಿಗೆ ಮಾಡಿದಂತೆ ನಮ್ಮ ಪ್ರಾಣವನ್ನು ತೆಗೆಯಲು ಬಯಸುತ್ತಿರುವ, ನಮ್ಮ ಮೇಲೆ ಕೆಟ್ಟಮಾತನ್ನು ಸುಳ್ಳಾಗಿ ಹೊರಿಸುತ್ತಿರುವ ವೈರಿಗೆ ಹಾನಿಮಾಡಲು ಧೈರ್ಯಮಾಡದೆ ಇರುವೆವು?

ಕರ್ತನ ಜನರಿಗೆ ಬರುವ ಪರಿಶೋಧನೆಯ ಕೆಲವು ಅಂಶಗಳು ದಾವೀದನಿಗಾದ ಕಷ್ಟಪರಿಶೋಧನೆಯಲ್ಲಿ ಉದಾಹರಿಸಲ್ಪಟ್ಟಿರುವದು; ಏನಂದರೆ ನಾವು ಮಾಡಲು ಆಶಿಸದಂಥ ಸಂಗತಿಗಳನ್ನು ಇತರರು ಮಾಡಲು ಅನುಕೂಲ ಮಾಡಿಕೊಡುವಂಥ ಅವಕಾಶಗಳು. ನೀನು ತೀರ್ಮಾನಿಸಿ–ಕೊಂಡಂತೆ ಮಾಡಲು ಹೊರಡು ನಾನು ಇದರಲ್ಲಿ ದೂರ ನಿಲ್ಲುವೆನು; ಆದರೆ ನಾನು ನಿನಗೆ ಗುಪ್ತವಾಗಿ ಹೇಳುವದೇನಂದರೆ ನೀನು ದೇಶಕ್ಕಾಗಿ ಘನವುಳ್ಳ ಕಾರ್ಯವನ್ನು ನಡೆಸುತ್ತಿರುವಿಯೆಂದು ನಂಬಿದ್ದೇನೆ, ಅಲ್ಲದೆ ಇದು ಅರಸನ ಹಿತಾಸಕ್ತಿಗೂ ಸಹ ಸಹಾಯವಾಗುವದು ಯಾಕಂದರೆ ಅವನು ನನಗೂ ವೈರಿಯಾಗಿರುವದರಿಂದ ಅವನು ಸಾಯುವದು ಉತ್ತಮವೆಂದು ಅಭಿಷೈಗೆ ಹೇಳುವದು ದಾವೀದನಿಗೆ ಎಷ್ಟು ಸುಲಭವಾಗಿತ್ತು? ದಾವೀದನು ಎಂಥಾ ವಿಭಿನ್ನವಾದ ವಿಧಾನವನ್ನು ಅನುಸರಿಸಿದ್ದನೆಂಬುದನ್ನು ನಾವು ಗಮನಿಸುವರಾಗೋಣ; ಬೇರೆ ಯಾವುದೇ ವಿಧಾನವನ್ನು ಅನುಸರಿಸುವದು ಪರಲೋಕದ ತಂದೆಗೆ ಅಸಂತೋಷ–ವಾಗುತ್ತಿದ್ದು, ಇದು ಪರೀಕ್ಷೆಯಲ್ಲಿ ದಾವೀದನು ವಿಫಲನಾದನೆಂಬ ಅರ್ಥಕೊಡುವದಾಗಿತ್ತು.

ನಮ್ಮ ವಿಷಯದಲ್ಲಿಯೂ ಹೀಗೆಯೇ ಇರುವದು. ನಾವು ಅನೀತಿಯನ್ನು ಮಾಡದೇ ಇರುವದು, ಕೆಟ್ಟದ್ದನ್ನು ನುಡಿಯದೇ ಇರುವದು, ಕೆಟ್ಟದ್ದನ್ನು ಅಲೋಚಿಸದೇ ಇರುವದು, ನಮ್ಮ ಮಿತ್ರನಿಗೋ ಅಥವಾ ಶತ್ರುವಿಗೋ ಕೇಡನ್ನು ಮಾಡದೇ ಇರುವದು ಮಾತ್ರವಲ್ಲದೆ ನಾವು ಈ ವಿಧಾನದ ಬಗ್ಗೆ ಎಷ್ಟರ ಮಟ್ಟಿಗೆ ಹೃದಯಪೂರ್ವಕವಾಗಿ ಸಹಾನುಭೂತಿಯುಳ್ಳವರಾಗಬೇಕೆಂದರೆ ಯಾರಾದರೂ ನಮ್ಮ ಹಿತಾಸಕ್ತಿಯ ದೃಷ್ಟಿಯಿಂದ ಒಂದು ಕೆಡುಕನ್ನು ಮಾಡಲು ಪ್ರಸ್ತಾಪಿಸಿದಲ್ಲಿ ನಾವು ದೇವರ ಚಿತ್ತದ ಮತ್ತು ಸಹೋದರ ಪ್ರೀತಿಯ ಸಂಬಂಧವಾದ ಆಜ್ಞಾವಿಧಿಗಳ ಬಗ್ಗೆ ಎಷ್ಟು ಅನುಕಂಪವುಳ್ಳವರಾಗಬೇಕೆಂದರೆ ನಮ್ಮ ಪೂರ್ಣಶಕ್ತಿಯಿಂದ ಈ ಕೃತ್ಯವನ್ನು ನಾವು ವಿರೋಧಿಸಬೇಕು.

ಏಳು ವರುಷಗಳ ಪರೀಕ್ಷೆಯ ಕಾಲದ ಪರ್ಯಂತರವಾಗಿ ದಾವೀದನು ಅರಸುತನದ ಶಿಸ್ತುಸಂಯಮವನ್ನು ಕಲಿಯುತ್ತಿದ್ದನು;. ಅದು ವಿಪತ್ತಿನ, ಹಿಂಸೆ ಪರಿಶೋಧನೆಯ, ಅನುಭವ ಪಡೆಯುತ್ತಿದ್ದ ಒಂದು ಶಾಲೆಯಾಗಿದ್ದು ಅದರಲ್ಲಿ ಆತನು ಅಮೂಲ್ಯವಾದ ಪಾಠಗಳನ್ನು ಕಲಿತಿದ್ದನು; ಆತನಿಂದ ಬಹು ಕುತೂಹಲಕಾರಿಯಾದ ಅನೇಕ ಕೀರ್ತನೆಗಳು ರಚಿಸಲ್ಪಟ್ಟದ್ದರ ಗೌರವವು ಈ ಸಮಯಕ್ಕೇ ಸಲ್ಲುವದು; ದೃಷ್ಟಾಂತವಾಗಿ ಹೇಳುವದಾದರೆ 34ನೇ ಕೀರ್ತನೆ, 57ನೇ ಕೀರ್ತನೆಗಳು. ಹೀಗೆಯೇ ಈ ಸುವಾರ್ತಾಯುಗದ ಸಭೆಯಾದ ಕರ್ತನ ಅಭಿಷಕ್ತರು ಈಗ ಅಡವಿಯೆಂಬ ಶಿಸ್ತುಸಂಯಮವನ್ನು ಕಲಿಯುವ ಸ್ಥಳದಲ್ಲಿದ್ದು ವಿರೋಧಿಗಳು ಅವರನ್ನು ಹಿಂದಟ್ಟಿ ಬರುತ್ತಿರುವರು; ನಮಗೆ ಇದು ಅರಸನ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಸಲುವಾಗಿ ಅಮೂಲ್ಯವಾದ ಪಾಠಗಳನ್ನು ಕಲಿಯುತ್ತಿರುವಂಥ ಸಿದ್ಧತೆಯ ಸಮಯವಾಗಿರುವದು; ಅಲ್ಲದೆ ಇದು ದಾವೀದನ ವಿಷಯದಲ್ಲಿದ್ದಂತೆ ನಮ್ಮ ಹೃದಯಗಳು ಸ್ತುತಿಯಿಂದ ತುಂಬಿದವುಗಳಾಗಿ ಕೃತಜ್ಞತಾಪೂರ್ವಕವಾಗಿ, ಗೌರವಾರ್ಪಣೆಯು ಮೂಲಕವಾಗಿ ಕರ್ತನ ಬಳಿಗೆ ಎಳೆಯಲ್ಪಡುತ್ತಿರುವ ಕಾಲವಾಗಿರುವದು. ಎಲ್ಲಾ ವಿಧದಲ್ಲಿಯೂ ಇರುವ ವ್ಯತ್ಯಾಸವೆಂದರೆ ಸಮಸ್ತವೂ ನಮಗೆ ಅನುಕೂಲಕರ–ವಾಗಿರುವದೆಂಬದು. ಆತನದು [ದಾವೀದನದು] ಛಾಯ–ರೂಪವಾಗಿದ್ದು ಭೂಸಂಬಂಧದಲ್ಲಿತ್ತು. ನಮ್ಮದು ನಿಜರೂಪ–ದಲ್ಲಿದ್ದು, ಪರಲೋಕ ಸಂಬಂಧದವಾಗಿದ್ದು ಅದರ ವಾಸ್ತವಾಂಶ–ಗಳು ಬೆಲೆಕಟ್ಟಲಾಗದಷ್ಟು ಅಮೂಲ್ಯವಾಗಿರುವದು. ಎಂಥಾ ವಿಧವಾದ ವ್ಯಕ್ತಿಗಳಾಗಿರಬೇಕು ನಾವುಗಳು! ಎಷ್ಟು ಸಂಪೂರ್ಣ–ವಾಗಿ ಕಲಿಯಬೇಕು ನಾವು ಈ ಪಾಠಗಳನ್ನು! ಎಂಥಾ ವಿಶೇಷವಾದದ್ದು ಇರುವ ಬಹುಮಾನವು, ನಾವು ಪಡಕೊಳ್ಳಲು ಅಪೇಕ್ಷಿಸುತ್ತಿರುವ ರಾಜ್ಯವು! "ನೀವು ಇದನ್ನು ತಿಳುಕೊಂಡು ಇದರಂತೆ ಮಾಡಿದರೆ ನೀವು ಧನ್ಯರು." – ಯೋಹಾನ 13:17

*****

ಒಳ್ಳೆಯತನದಿಂದ ಕೆಟ್ಟತನವನ್ನು ಜಯಿಸುವದು

ರೀಪ್ರಿಂಟ್ಸ್ ಪುಟ 3238

ಸಮುವೇಲ 22ನೇ ಅಧ್ಯಾಯ

"ನಿಮ್ಮ ವೈರಿಗಳನ್ನು ಪ್ರೀತಿಸಿ, ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ" –ಲೂಕ 6:27

ಈ ಪಾಠವು ಅರಸನಾದ ಸೌಲನ ಅಸೂಯೆ ಮತ್ತು ಹಗೆತನಗಳ ದೆಸೆಯಿಂದ ದಾವೀದನು ಏಳು ವರುಷಗಳು ದೇಶಭ್ರಷ್ಟನಂತೆ ಅಲೆದಾಡಿದಾಗ ಪಡೆದ ಅನುಭವಕ್ಕೆ ಸಂಬಂಧಿಸಿರುತ್ತದೆ. ಸೌಲನು ಇನ್ನೂ ಇಸ್ರಾಯೇಲ್ಯರ ಸಿಂಹಾಸನದಲ್ಲಿ ಹೆಸರಿಗಾಗಿ ದೇವರ ಪ್ರತಿನಿಧಿಯಾಗಿದ್ದಾಗ್ಯೂ ದೇವರ ಆಶೀರ್ವಾದ ಮತ್ತು ಅಧಿಕಾರವನ್ನು ಆತನು ಕಳಕೊಂಡಿದ್ದು, ಅದು ಗಣನೀಯ ಪ್ರಮಾಣದಲ್ಲಿ ದಾವೀದನಿಗೆ ತಾನು ಸೌಲನ ಉತ್ತರಾಧಿಕಾರಿಯಾಗಿ ಅಭಿಷೇಕವಾದ ನಂತರ ವರ್ಗಾವಣೆಯಾಗಿತ್ತು. ಅರಸನು ತನ್ನ ಉತ್ತಮ ನ್ಯಾಯನಿರ್ಣಯಗಳನ್ನು ದುಷ್ಟ ಉದ್ವೇಗಪ್ರವೃತ್ತಿಗಳ ವಶಮಾಡಿದ್ದನೆಂಬುದನ್ನು ಮತ್ತು ದಾವೀದನು "ದೇವರಿಗೆ ಒಪ್ಪುವ ಮನುಷ್ಯನಾಗಿ" [ಅಥವಾ ಸ್ವತಃ ದೇವರಲ್ಲಿದ್ದಂಥ ಹೃದಯವನ್ನೇ ಪಡೆದಿದ್ದ ಮನುಷ್ಯನಾಗಿ] ಪರಿಪೂರ್ಣತೆಯಿಂದ ದೂರ ಉಳಿದಾಗ್ಯೂ ತನ್ನನ್ನು ಸ್ವಾಧೀನಪಡಿಸಿಕೊಂಡು ನೀತಿ ಸಿದ್ಧಾಂತಗಳ ಮಾರ್ಗದರ್ಶನದಲ್ಲಿ ಕೆಟ್ಟತನವನ್ನು ಜಯಿಸಲು ಪರಿಶ್ರಮಿಸುವಲ್ಲಿ ಸಫಲನಾಗಿದ್ದನೆಂಬುದನ್ನು ಈ ಪಾಠವು ನಮ್ಮ ಮನಸ್ಸಿಗೆ ಕೊಂಡು ತರುವದು. ದಾವೀದನು ಪರಿಪೂರ್ಣನೆಂದು ನಾವು ಆಲೋಚಿಸುವಂತಿಲ್ಲ. ಇಲ್ಲವೇ ನಾವು ದಾವೀದನ ಪಾಪದೋಷಗಳ ಬಗ್ಗೆ ವಿವೇಚನೆಯಿಲ್ಲದವರಾಗಿ ಅಥವಾ ಅವುಗಳನ್ನು ಮನ್ನಿಸುವ ಅಥವಾ ಅವುಗಳನ್ನು ಅನುಸರಿಸುವ ಹಾಗಿಲ್ಲ. ಹೊಸ ಒಡಂಬಡಿಕೆಯ ಅರ್ಥದಲ್ಲಿ ದಾವೀದನು "ಭಕ್ತರಲ್ಲಿ" ಒಬ್ಬನಾಗಿರಲಿಲ್ಲ. ಆತನು ಉನ್ನತ ಸ್ಥಾನಕ್ಕೆ ಉಂಟಾದ ಕರೆಯಲ್ಲಿ ಪಾಲನ್ನು ಹೊಂದುವದಕ್ಕೆ ಬಹು ಮುಂಚಿತವಾದ ಒಂದು ಕಾಲದಲ್ಲಿ ಜೀವಿಸಿದ್ದನು, ಇಲ್ಲವೇ ಆತನಿಗೆ ಯೇಸುವಿನ ಹೆಜ್ಜೆಜಾಡನ್ನು ಅನುಸರಿಸಲು ಸಾಧ್ಯವಿರಲಿಲ್ಲ; ಕಾರಣ ನಮ್ಮ ರಕ್ಷಣೆಯ ವೀರನು ಹಾಗೂ ಇಕ್ಕಟ್ಟಾದ ಮಾರ್ಗದಲ್ಲಿ ನಮಗೆ ಮುಂದಾಗಿ ಓಡಲಿರುವಾತನು ಇನ್ನೂ ಆಗಮಿಸಿರಲಿಲ್ಲ. ದಾವೀದನು ದೇವರಲ್ಲಿ ಪೂರ್ಣವಾದ ನಂಬಿಕೆಯುಳ್ಳವನೂ ಮತ್ತು ಸರಿಯಾಗಿ ಗುರಿಯಿಟ್ಟುಕೊಂಡಿರುವ ಅರ್ಥದಲ್ಲಿ ಅವನು ದೇವರಲ್ಲಿದ್ದ ಹೃದಯವನ್ನೇ [ಮನಸ್ಸನ್ನೇ] ಹೊಂದಿದ್ದ ಮನುಷ್ಯನಾಗಿದ್ದನು. ತನ್ನ ಹೃದಯದಲ್ಲಿ ಆತನು ದೇವರ ಚಿತ್ತವನ್ನು ನೆರವೇರಿಸಲು ಬಯಸಿದ್ದು, ಎಲ್ಲೆಲ್ಲಿ ಆತನು ಇದರ ವಿಷಯದಲ್ಲಿ ವಿಫಲನಾಗಿದ್ದನೋ ಅದು ಆತನಲ್ಲಿ ವ್ಯಥೆಯನ್ನು ಉಂಟುಮಾಡಿ ಆತನು ಪಶ್ಚಾತಾಪಪಡುವಂತೆ ನಡೆಸಿತ್ತು. ದೇವರು ತನ್ನ ಜನರ ವಿಷಯದಲ್ಲಿ ತನ್ನ ಗುಣ ಮತ್ತು ತನ್ನದೇ ಆದ ಯೋಜನೆ ಹಾಗು ಪರಿಪೂರ್ಣವಾದ ಚಿತ್ತವನ್ನು ಪ್ರಕಟಮಾಡುವ ಕಾಲಕ್ಕೆ ಮೊದಲೇ ಜೀವಿಸಿದ್ದನು. ಇವೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡಲ್ಲಿ, ದಾವೀದನು ನಂಬಿಕೆಯ ಹಾಗು ವಿಧೇಯತೆಯ ಸಂಬಂಧದಲ್ಲಿ ಮಾಡಿದ ಸಾಧನೆಯು ಬಹು ಗಮನಾರ್ಹವಾಗಿತ್ತು. ಹೀಗಾಗಿ ಒಟ್ಟಾರೆ ಸುವಾರ್ತಾಯುಗದ ಸಭೆಗೆ ಮಾದರಿ ಅಥವಾ ಚಿತ್ರಣವಾಗಿ ಪರಿಗಣಿಸದಿದ್ದಾಗ್ಯೂ ಆತನ ಜೀವನಚರಿತ್ರೆಯ ಮೂಲಕವಾಗಿ ಸೂಕ್ತವಾದ ನಂಬಿಕೆ ಹಾಗು ವಿಧೇಯತೆಗಳ ನಿದರ್ಶನಗಳನ್ನು ತೆಗೆದುಕೊಳ್ಳಬಹುದು; ಅವುಗಳಲ್ಲಿ ಕೆಲವು ನಮ್ಮ ಮುಂದಿರುವ ಪಾಠದಲ್ಲಿ ಗುರುತಿಸಲಾಗಿರುವದು.

ದಾವೀದನು ಸೌಲನ ರೋಷಕ್ಕೆ ತಪ್ಪಿಸಿಕೊಂಡು ಪಲಾಯನಮಾಡಿದ ಸಮಯದಿಂದ ಸೌಲನು ಮರಣಹೊಂದಿದ ವರೆಗಿನ ಏಳು ವರುಷಗಳು ದಾವೀದನಿಗೆ ಒಂದು ವಿಶಿಷ್ಟವಾದ ದೀರ್ಘಕಾಲದ ನಂಬಿಕೆಯ ಹಾಗು ತಾಳ್ಮೆಯ ಸಂಬಂಧದ ಪರೀಕ್ಷಾ ಕಾಲವಾಗಿತ್ತು. ತನ್ನದೇ ಆದ ಆತನ ನಡೆಯು ಒಂದು ಸತ್ಯಘನತೆಯುಳ್ಳದ್ದಾಗಿತ್ತು. ಆತನು ಅತಿ ನಿಷ್ಠೆಯುಳ್ಳವನಾಗಿ ತನ್ನ ಅರಸನಿಗೆ ಹಾಗು ತನ್ನ ನಾಡಿಗೆ ಸೇವೆಮಾಡಿದ್ದಾಗ್ಯೂ ಪ್ರತಿಫಲವನ್ನು ಪಡೆಯುವಲ್ಲಿ ನಷ್ಟಪಟ್ಟಿದ್ದನು. ಒಂದು ಸಮಯದಲ್ಲಿ ಅವನು ಒಬ್ಬ ದೇಶಭ್ರಷ್ಟನಾಗಿ ಅನ್ಯದೇಶದಲ್ಲಿದ್ದನು, ತನ್ನ ತಂದೆಯ ಕುಟುಂಬವು ರಕ್ಷಣೆಯ ಸಲುವಾಗಿ ಮೋವಾಬ್ ದೇಶಕ್ಕೆ ಸಾಗಿಸಲ್ಪಟ್ಟಿತ್ತು. ದಾವೀದನು ಸೌಲನಿಗೆ ಉತ್ತರಾಧಿಕಾರಿಯಾಗಿ ಅಭಿಷೇಕಹೊಂದಿ ತನ್ನ ರಾಜ್ಯಕ್ಕೆ ಬರಲು ಹೀಗೆ ವಿಳಂಬವಾಗುವಂಥದ್ದು, ಅದಕ್ಕೆ ಬದಲಾಗಿ ಒಬ್ಬ ದೇಶಭ್ರಷ್ಟನಂತೆ ಹುಡುಕಾಡಲ್ಪಡುವಂತೆ ಮತ್ತು ಹಿಂಸಿಸಲ್ಪಡುವಂತೆ ದೇವರು ಬಿಡುವದು ಆತನಿಗೆ ವಿಚಿತ್ರವಾಗಿ ಕಂಡುಬಂದಿರಬಹುದು. ಹೇಗೂ ದಾವೀದನಿಗೆ ಇದು ತನ್ನ ನಂಬಿಕೆಯ ವಿಷಯವಾಗಿ ಒಂದು ಅಮೂಲ್ಯವಾದ ಪರೀಕ್ಷೆಯಾಗಿದ್ದು ನಿಸ್ಸಂದೇಹವಾಗಿ ನಂಬಿಕೆಯ ಬೇರುಗಳು ದೃಢವಾಗಲು ಸಹಾಯಮಾಡಿದ್ದಾಗಿ ಹೀಗೆ ಆತನ ಗುಣವನ್ನು ಇನ್ನೂ ಬಲಗೊಳಿಸಿ ದೇವರಲ್ಲಿನ ಆತನ ಭರವಸೆಯು ಇನ್ನೂ ಸ್ಥಿರಗೊಳ್ಳುವಂತೆ ಮಾಡಿತ್ತು. ಆದರೆ ಇದರೊಡನೆ ಆ ಏಳು ವರುಷಗಳು ದಾವೀದನಿಗೆ ಅಮೂಲ್ಯವಾಗಿದ್ದು ಅವು ಆತನನ್ನು ಅರಸನ ಕಾರ್ಯಸ್ಥಾನಕ್ಕೆ ಸಿದ್ಧಗೊಳಿಸಿತ್ತೆಂಬುದನ್ನು ನಾವು ಸುಲಭವಾಗಿ ಕಾಣಬಹುದು. ಅವು ಆತನಿಗೆ ಜನರೊಡನೆ ನಿಕಟ ಪರಿಚಿತನಾಗಿ ಅವರ ಜೀವನದ ವಿಧಾನಗಳು ಮತ್ತು ಸಾಮಾನ್ಯ ಮನೋಭಾವಗಳನ್ನು ತಿಳುಕೊಳ್ಳುವಂತೆ ಮಾಡಿತ್ತು. ಹಾಗು ಅಲ್ಲಿನ ಸುತ್ತುಮುತ್ತಲಿನವರೊಡನೆ ಸಹ ಪರಿಚಿತನಾಗುವಂತೆ ಮಾಡಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ, ಆತನು ದೇವರನ್ನು ನಿಕಟವಾಗಿ ತಿಳಿದುಕೊಂಡವನಾಗಿ ದೇವರು ಇರುವ ಸುಳಿವು ದೊರಕುವ ಸಾಧ್ಯತೆಯು ಸಹ ಇಲ್ಲದಿರುವಾಗಲೂ ಆತನ ಕೃಪಾನುಗ್ರಹದಲ್ಲಿ ಭರವಸನಾಗಿರುವದನ್ನು ಕಲಿತುಕೊಂಡಿದ್ದನೆಂಬುದನ್ನು ನಾವು ಖಚಿತಮಾಡಿಕೊಳ್ಳಬಹುದು. ಆತನ ಕೀರ್ತನೆಗಳಲ್ಲಿ ಬಹುತೇಕ

ಈ ಸಮಯದಲ್ಲಿ ಬರೆಯಲ್ಪಟ್ಟು ಅವು ದಾವೀದನ ಅನುಭವಗಳನ್ನು ವರ್ಣಿಸಲ್ಪಟ್ಟಿರುವಂಥದ್ದೋ ಇಲ್ಲವೇ ನಂತರದಲ್ಲಿ ಅವು ಬರೆಯಲ್ಪಟ್ಟಿದ್ದು ಆ ಅನುಭವಗಳಿಂದ ಕಲಿತಿದ್ದ ಪಾಠಗಳ ಬಗ್ಗೆ ವರ್ಣಿಸಲಾಗಿರುವಂಥದ್ದೋ ಆಗಿರುವದು. ಇವುಗಳಲ್ಲಿ ಕೀರ್ತನೆ 34, 52, 56, 57, 63 ಹೆಸರಿಸಬಹುದು.

ಆತ್ಮಿಕ ಇಸ್ರಾಯೇಲ್ಯರಾದ ನಾವು ದೇವರ ಮಕ್ಕಳಾಗಿ ಅಂಗೀಕರಿಸಲ್ಪಟ್ಟು ರಾಜವಂಶದ ಯಾಜಕರಾಗಿ ಮುಂದಿನ ಸೇವಾಕಾರ್ಯಕ್ಕೆ ದೇವರಿಂದ ಅಭಿಷೇಕಿಸಲ್ಪಟ್ಟು ನಮ್ಮ ಆಶೀರ್ವದಿತ ಶಿರಸ್ಸಾದ ಕರ್ತನೊಡನೆ ಭೂಲೋಕವನ್ನು ಆಳ್ವಿಕೆಮಾಡಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲಿರುವ ನಾವು ಈ ಪಾಠದಲ್ಲಿನ ಸಂಗತಿಯು ನಡೆದ ಸಮಯದಲ್ಲಿ ದಾವೀದನಿಗಾದ ಪರೀಕ್ಷಾರ್ಥದ ಅನುಭವಗಳಿಂದ ಅಮೂಲ್ಯ ಪಾಠಗಳನ್ನು ಸುಲಭವಾಗಿ ಗುರುತಿಸಿಕೊಳ್ಳಬಹುದು. ಇಹಲೋಕದ ಅಧಿಕಾರಿಯು ನಮ್ಮ ವೈರಿ, ಅದು ನಾವು ಕೆಟ್ಟದ್ದನ್ನು ಮಾಡಿದ್ದೇವೆಂಬ ಕಾರಣದಿಂದ ಅಲ್ಲ, ಆದರೆ ಆತನು ತನಗಿರುವ ಕಾಲವು ಸ್ವಲ್ಪವೆಂದು ಗ್ರಹಿಸಿಕೊಂಡ ಕಾರಣದಿಂದ ಅಲ್ಲದೆ ಆತನಲ್ಲಿರುವ ಒಂದು ಆತ್ಮವು [ಮನೋಭಾವವು] ನಮ್ಮಲ್ಲಿರುವ ದೇವರ ಆತ್ಮಕ್ಕೆ ವಿರುದ್ಧವಾಗಿರುವದೆಂಬ ಕಾರಣಕ್ಕಾಗಿರುವದು. ನಾವು ಸಹ ದೇವರಿಂದ ಅಭಿಷೇಕಿಸಲ್ಪಟ್ಟು ಆ ರಾಜ್ಯದಲ್ಲಿ ಮಾನ ಮಹಿಮೆ ಅಮರತ್ವವನ್ನು ಹೊಂದುವ ಭರವಸೆ ನೀಡಲ್ಪಟ್ಟವರಾಗಿರಲು ದೇವರು ಏಕೆ ಇಂಥಾ ಪರೀಕ್ಷಾರ್ಥವಾದ ಅನುಭವಗಳನ್ನು ಹಾಗು ಲೋಕ, ಶರೀರ, ಸೈತಾನ ಇವರೊಡನೆ ಇಂಥಾ ತೀವ್ರವಾದ ಹೋರಾಟ ಮಾಡಲು ಬಿಟ್ಟಿರುವನೆಂಬುದಕ್ಕೆ ಕೆಲವು ಸಮಯಗಳಲ್ಲಿ ಆಶ್ಚರ್ಯಪಡಬಹುದು. ನಾವು ಕರ್ತನ ಮಾರ್ಗವನ್ನು ಹೆಚ್ಚು ನಿರ್ದಿಷ್ಟವಾಗಿ ಕಲಿತುಕೊಂಡಷ್ಟು ಅಂದರೆ "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಾ ಪದವಿಯನ್ನು ಅಲೋಚಿಸಿ (ಹೋಲಿಸಿ ನೋಡಿ) ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ" ಎಂಬುದನ್ನು ಕಲಿತುಕೊಂಡಷ್ಟು ಇದರ ಕಾರಣವು ನಮಗೆ ಸ್ಪಷ್ಟವಾಗುತ್ತಾ ಬರುತ್ತದೆ. ನಮಗೆ ತಾಳ್ಮೆಯ ಅವಶ್ಯಕತೆಯಿರುವದು ಆದರೆ ಅದನ್ನು ಕೇವಲ ಕಷ್ಟಪರಿಶೋಧನೆಗಳಿಂದ ಮಾತ್ರ ಗಳಿಸಲು ಸಾಧ್ಯ. ನಮಗೆ ನಂಬಿಕೆಯ ಅಗತ್ಯವಿರುವದು ಆದರೆ ಅದನ್ನು ಕೇವಲ ಅನಿವಾರ್ಯ ಸನ್ನಿವೇಶಗಳಿಂದ ಮಾತ್ರ ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯ. ನಾವು ನಿರ್ವಹಿಸಲಿರುವ ಮುಂದಿನ ಕಾರ್ಯಕ್ಕಾಗಿ ನಾವು ಅನುಭವವನ್ನು ಪಡೆಯುವ ಅವಶ್ಯಕತೆಯಿರುವದು ಆದರೆ ಅದನ್ನು ಎಂಥಾ ಅನುಭವಗಳಿಂದ ಗಳಿಸಿಕೊಳ್ಳಲು ಸಾಧ್ಯವೆಂದರೆ ನಾವು ನಮ್ಮ ನಿರ್ಬಲಾವಸ್ಥೆಗಳನ್ನು ಕುರಿತು ಅನುಕಂಪ–ಹುಟ್ಟಿಸುವಂಥವುಗಳಿಂದ ಹಾಗು ನಮ್ಮ ಸುತ್ತಲು ಇರುವವರ ಕಷ್ಟಪರಿಶೋಧನೆಗಳನ್ನು ಅರಿತುಕೊಳ್ಳುವದರ ಮೂಲಕ ಇವುಗಳನ್ನು ಗಳಿಸಿಕೊಳ್ಳಲು ಸಾಧ್ಯ. ನಾವು ಸಿಂಹಾಸನವನ್ನು ಏರಿದಾಗ ನಾವು ಅವರ ಸೇವಕರೂ ಪ್ರತಿನಿಧಿಗಳೂ ಆಗಿರುವೆವು. ಹೀಗಾಗಿ ದಾವೀದನ ವಿಷಯದಲ್ಲಿದ್ದಂತೆ ನಮಗೆ ಈಗಿನ ಕಾಲದಲ್ಲಿನ ಅನುಭವಗಳಿಂದ ದೊರೆಯುವ ಪಾಠವೆಂದರೆ ಅದು ಕೆಟ್ಟತನವನ್ನು ಪ್ರತಿರೋಧಿಸಬೇಕೆಂಬದೇ; ಹೇಗೂ ಅದು ಕೆಟ್ಟತನದ ಮೂಲಕವಾಗಿಯಲ್ಲ ಆದರೆ ಅದು ಒಳ್ಳೆತನದ ಮೂಲಕವಾಗಿರಬೇಕು.

ದಾವೀದನು ಹಾಗು ಸತ್ಯವೇದದಲ್ಲಿನ ಇತರ ವೀರಪುರುಷರ ದೃಷ್ಟಾಂತಗಳನ್ನು ಗಣನೆಗೆ ತೆಗೆದುಕೊಳ್ಳುವದರಲ್ಲಿ ನಾವು ಅವುಗಳ ನಿರೂಪಣೆಯು ಸರಳತೆಯು ಬಗ್ಗೆ ಪ್ರಭಾವಿತರಾಗುತ್ತೇವೆ. ಏಕೆಂದರೆ ಅವರ ಸುಕೃತ್ಯಗಳನ್ನು ತಿಳಿಸಿರುವ ಮುಗ್ಧತೆಯಿಂದಲೇ ಅವರ ನಡತೆಯ ಕೆಟ್ಟ ಸಂಗತಿಗಳನ್ನೂ ತಿಳಿಸಲಾಗಿರುವದು. ಇದು ಸತ್ಯವೇದದ ವಿಶಿಷ್ಠತೆಗಳಲ್ಲಿ ಒಂದಾಗಿದ್ದು ಅದರ ನಂಬಿಗಸ್ತಿಗೆ ಅದರ ಆಂತರಿಕ ಪ್ರಮಾಣಗಳಲ್ಲಿ ಒಂದಾಗಿರುವದು. ದಾವೀದನು ಮಾಡಿದ ಅವಹೇಳನಕಾರೀ ಸಂಗತಿಗಳನ್ನು ಮರೆಮಾಚಿ ಆತನ ಚರಿತ್ರೆಗೆ ಹೊಳಪುಕೊಡುವದು ಎಷ್ಟೋ ಸುಲಭವಾಗಿರುತ್ತಿತ್ತು; ಸತ್ಯವೇದ ಸಿದ್ಧತೆಯು ದೇವರ ಮೇಲ್ವಿಚಾರಣೆಯಲ್ಲಿ ನಡೆಯದಿದ್ದಲ್ಲಿ ವಿಶೇಷವಾಗಿ ಒಬ್ಬ ಅರಸನ ವಿಷಯದಲ್ಲಿ ಎಷ್ಟು ಖಚಿತವಾಗಿ ಇದನ್ನು ಮಾಡಬಹುದಿತ್ತು. ಪ್ರಮುಖ ವ್ಯಕ್ತಿಗಳ ತಪ್ಪುಗಳನ್ನು ಬಿಟ್ಟುಬಿಟ್ಟಿದ್ದಲ್ಲಿ ಸತ್ಯವೇದದ ಓದುವಿಕೆಯು ಉತ್ತಮವಾಗಿರುತ್ತಿತ್ತೆಂದು ಕೆಲವರು ಅಲೋಚಿಸುವ ಪ್ರವೃತ್ತಿಯಲ್ಲಿರುವದು ನಮಗೆ ಖಚಿತ; ಹೇಗೂ ನಮಗೆ ಈ ವಿಷಯವು ಖಚಿತವಾಗಿಲ್ಲ. ಘನವಂತಿಕೆ ಗುಣಗಳುಳ್ಳ ಕೆಲವರ ಕಷ್ಟಪರಿಶೋಧನೆ ವೈಫಲ್ಯ ಹಾಗು ಪಶ್ಚಾತಾಪ ಸಂಬಂಧದ ಚರಿತ್ರೆಯು ಅವರ ಘನತೆಯ ಕಾರ್ಯ ಹಾಗು ಮನೋಭಾವಗಳ ವರ್ಣನೆಗಳಿಗಿಂತಲೂ ಕಡಿಮೆ ಆಶೀರ್ವಾದಕರವೇನಲ್ಲ. ದೇವಜನರಲ್ಲಿ ಕೆಲವರು ತಮ್ಮ ಶಾರೀರಿಕ ಬಲಹೀನತೆಗಳ ಬಗ್ಗೆ ಅರಿತವರಾಗಿ ಕೆಲವು ಸಮಯಗಳಲ್ಲಿ ಪಾಪದ ವಿರುದ್ಧವಾದ ಹೋರಾಟದಲ್ಲಿ ತಮ್ಮ ಆದರ್ಶವನ್ನು ಎತ್ತಿಹಿಡಿಯುವಲ್ಲಿ ವಿಫಲರಾದಾಗ ಸತ್ಯವೇದದಲ್ಲಿ ತಿಳಿಸಲಾದ ಇತರರ ಅನುಭವಗಳ ಮೂಲಕವಾಗಿ ಉತ್ತೇಜನ ಪಡೆದಿರುವರು. ಹೇಗಂದರೆ ಅವರು ಪಾಪದ ವಿಷಯವಾಗಿ ಪರಿತಪಿಸುವದರಲ್ಲಿ ಮುಂದುವರೆಯದೆ "ನೀನು ಪಾಪವನ್ನು ಕ್ಷಮಿಸುವವನಾದ್ದರಿಂದ ಮನುಷ್ಯರ ಭಯಭಕ್ತಿಗೆ ನೀನೇ ಪಾತ್ರನು" ಎಂಬ ಸತ್ಯ ವಚನವನ್ನು ಮನನಮಾಡಿಕೊಳ್ಳಬೇಕೆಂಬುದನ್ನು ಅರಿತಿರುವರು. ಇಂಥವರು–ದಾವೀದನು ಅನೇಕ ಸಂದರ್ಭಗಳಲ್ಲಿ ವಿಫಲನಾದುದನ್ನು ಹಾಗು ಆತನ ಪಶ್ಚಾತಾಪ ಕುಗ್ಗುವಿಕೆ ಮತ್ತು ದೇವಾನುಗ್ರಹದಲ್ಲಿ ಪುನಃಸ್ಥಾಪನೆಗೊಂಡದ್ದನ್ನು ತಮ್ಮ ಗಮನಕ್ಕೆ ತಂದು–ಕೊಂಡಿರುವರು; ಈ ಮೂಲಕ ಅವರು ಇದೇ ರೀತಿಯಲ್ಲಿ ಪಶ್ಚಾತಾಪಹೊಂದಲು, ಇದೇ ರೀತಿಯಲ್ಲಿ ತಾವು ಕ್ಷಮಿಸಲ್ಪಡಲು ದೇವರ ಕರುಣೆಯಲ್ಲಿ ಭರವಸವುಳ್ಳವರಾಗಲು, ಮತ್ತು ಇದೇ ರೀತಿಯಲ್ಲಿ ತಮ್ಮ ಪಾಪ ಖಿನ್ನತೆಯಿಂದ ಎದ್ದು ನೀತಿ ಸತ್ಯತೆ ಪರಿಶುದ್ಧತೆ ಮುಂತಾದವುಗಳ ಪರವಾದ ಹೋರಾಟವನ್ನು ಹೊಸದಾಗಿ ಆರಂಭಿಸಲು ಧೈರ್ಯಗೊಂಡಿರುವರು.

ನಮ್ಮ ಪಾಠವು ದಾವೀದನು ಸೌಲನಿಂದ ಹಿಂದಟ್ಟಲ್ಪಟ್ಟಾಗ ಆತನಿಗಾದ ಅನುಭವಕ್ಕೆ ಸಂಬಂಧಿಸಿರುತ್ತದೆ. ಅರಸನಾದ ಸೌಲನ ಅಸಹಜ ನಡೆಯು ಒಂದು ದುರಾತ್ಮದ ಅಧೀನದಲ್ಲಿದ್ದು, ದಾವೀದನ ವಿಷಯದಲ್ಲಿ ಸಂಭವಿಸಿದ್ದಂತೆ, ಅದು

ನಿಸ್ಸಂದೇಹವಾಗಿ ಇತರ ಮನುಷ್ಯರೊಡನೆ ಅನ್ಯಾಯವಾಗಿ ನಡಕೊಳ್ಳುವಂತೆ ಅಂದರೆ ಒಬ್ಬನ ವಿಷಯದಲ್ಲಿ ಒಂದು ಬಗೆ, ಮತ್ತೊಬ್ಬನ ವಿಷಯದಲ್ಲಿ ಇನ್ನೊಂದು ಬಗೆಯಲ್ಲಿ ವರ್ತಿಸುವಂತೆ ನಡೆಸಿತ್ತು. ಸೌಲನ ವೈರತ್ವಕ್ಕೆ ಗುರಿಯಾಗಿದ್ದ ಇಂಥಾ ಜನರು ಮತ್ತು ಬಲವಂತದಿಂದ ದೇಶಭ್ರಷ್ಟರಂತೆ ಅಲೆದಾಡುವ ಹಾಗೆ ಮಾಡಲ್ಪಟ್ಟವರು ದಾವೀದನೊಡನೆ ನೆಲೆಸಲು ಬಯಸಿ ಆತನ ಉತ್ಕೃಷ್ಟ ಮಟ್ಟದ ನಿಯಂತ್ರಣಾಧಿಕಾರಗಳಿಗೆ ತಮ್ಮನ್ನು ಒಳಪಡಿಸಿಕೊಂಡಿದ್ದರು. ಒಂದು ಸಮಯದಲ್ಲಿ ಇವರ ಸಂಖ್ಯೆಯು 400 ಆಗಿದ್ದು ನಂತರದಲ್ಲಿ ಅದು 600 ಆಗಿತ್ತು. (1 ಸಮುವೇಲ 22:2; 25:13; 27:2) ಸೌಲನ ಅಸಹಜ ನಡೆಯ ದೆಸೆಯಿಂದ ಈ ಮನುಷ್ಯರು ತಮ್ಮ ಜೀವಿತದ ಸಾಧಾರಣ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಲು ಅಡಚಣೆಯಾಗಿ ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಅಲೆದಾಡುವರಾಗಿದ್ದು ಇವರಿಗೆ ಆಹಾರವು ಬೇಕಿದ್ದುದರಿಂದ ಇವರು ಎಲ್ಲಿಗೆ ಹೋದರೂ ಇವರ ಇರುವಿಕೆಯು ರೈತರಿಗೆ ಅದು ಒಂದು ಕಷ್ಟಕರವಾಗಿದ್ದುದು ನಿಸ್ಸಂದೇಹವಾಗಿತ್ತು. ಅವರ ಆಹಾರ ಸಂಗ್ರಣೆಯು ಯೆಹೂದ್ಯರ ನಿಯಮದ ಅನುಸಾರ ನಡೆಯಬಹುದಾಗಿದ್ದು, ಇದರ ಪ್ರಕಾರ ಯಾವುದೇ ಹಸಿವುವುಳ್ಳ ವ್ಯಕ್ತಿಯು ಯಾವುದೇ ಜಮೀನಿಗಾಗಲೀ, ಹಣ್ಣಿನ ತೋಟಕ್ಕಾಗಲೀ ದ್ರಾಕ್ಷೇತೋಟಕ್ಕಾಗಲಿ ಪ್ರವೇಶಿಸಿ ಯಾವುದೇ ಅಭ್ಯಂತರವಿಲ್ಲದೆ ತನಗೆ ತೃಪ್ತಿಯಾಗುವಷ್ಟು ತಿನ್ನಬಹುದಾಗಿತ್ತು.

ನಿಸ್ಸಂದೇಹವಾಗಿ ಜೀಫ್ ಗ್ರಾಮದ ಜನರು ಅರಸನ ಅನುಗ್ರಹವನ್ನು ದೊರಕಿಸಿಕೊಳ್ಳುವ ಸಲುವಾಗಿ ಹಾಗು ಅಷ್ಟು ಜನರಿಗೆ ಆಹಾರ ದೊರಕಿಸಿಕೊಡಲು ಅಂಜಿದ ಕಾರಣದಿಂದ ಸಹ ಅವರು ಅರಸನಾದ ಸೌಲನಿಗೆ ದಾವೀದನು ಮತ್ತು ಆತನ ಜನರ ಗುಂಪನ್ನು ತಮ್ಮ ಸುತ್ತುಮುತ್ತಣ ಪ್ರದೇಶದಲ್ಲಿ ಕಂಡುಕೊಳ್ಳುವ ಸಾಧ್ಯತೆಯ ಬಗ್ಗೆ ಹೇಳಿಕಳುಸಿದ್ದರು. ಅರಸನು ಅವಸರದಿಂದ 3000 ಮಂದಿಯ ಪಟಾಲಮ್ಮನ್ನು ಕೂಡಿಸಿಕೊಂಡು ಆ ಸ್ಥಳಕ್ಕೆ ಹೋಗಿದ್ದನು. ಅವರು ದಾವೀದನು ಮತ್ತು ಆತನ ಹಿಂಬಾಲಕರನ್ನು ಸೆರೆಹಿಡಿಯಲು ಕಾತುರಗೊಂಡಿದ್ದ ಸಾಧ್ಯತೆಗಳಿದ್ದವು. ಹೇಗೂ ಅವರನ್ನು ಅಷ್ಟು ಸುಲಭವಾಗಿ ಹಿಡಿಯಲು ಆಗಿರಲಿಲ್ಲ; ವಾಸ್ತವದಲ್ಲಿ ಅವರು ತರಬೇತಿಪಡೆದ ಸೈನ್ಯದವರಿಗಿಂತಲೂ ಬೇಹುಗಾರಿಕೆಯಲ್ಲಿ ಹೆಚ್ಚು ಉತ್ತಮವಾಗಿ ಪಳಗಿದವರಾಗಿದ್ದರು. ಅರಸನು ಅವರ ಬಗ್ಗೆ ಸ್ವಲ್ಪವಾಗಿ ತಿಳಿದುಕೊಂಡಿರಲು ಅಥವಾ ಎನೂ ತಿಳಿಯದೆ ಇದ್ದಾಗ್ಯೂ ಅವರು ಅರಸನ ಹಾಗು ಆತನ ಸೈನ್ಯದವರ ಬಗ್ಗೆ ಎಲ್ಲವನ್ನು ಸುಲಭವಾಗಿ ತಿಳಿದು ಖಚಿತಪಡಿಸಿಕೊಳ್ಳುತ್ತಿದ್ದರು.

ದಾವೀದನು ಒಬ್ಬ ನಂಬಿಗಸ್ತ ಜೊತೆಗಾರನೊಡನೆ ಸೌಲನ ಪಾಳಯದೊಳಗೆ ಹೇಗೆ ಹೋಗಿದ್ದನೆಂಬುದನ್ನು ಕಥೆಯು ತೋರಿಸುತ್ತದೆ. ಅರಸನಾದ ಸೌಲನು ಮತ್ತು ಸೈನ್ಯವೆಲ್ಲವು, ಈಗಲೂ ಸಹ ಆಗಾಗ್ಗೆ ಪಾಲೆಸ್ತೀನಾ ದೇಶದಲ್ಲಿ ವಾಡಿಕೆಯಲ್ಲಿರುವಂತೆ, ತಮ್ಮ ಹೊರ ಉಡುಪಿನೊಡನೆ ಗುಡಾರಗಳ ಹೊರಗೆ [ನೆಲದ ಮೇಲೆ] ಮಲಗಿಕೊಂಡಿದ್ದರು; ಅರಸನು ಒಂದು 'ಕಂದಕದಲ್ಲಿ' ಇಳುಕೊಳ್ಳುತ್ತಿರಲಿಲ್ಲ ಆದರೆ ಒಂದು ಜಾಗದಲ್ಲಿ ಅಥವಾ ಸೈನ್ಯದ ಗಾಡಿಗಳಿಂದ ಸುತ್ತುವರೆದ ಸ್ಥಳದಲ್ಲಿ ಇಳುಕೊಳ್ಳುತ್ತಿದ್ದನು; ಅರಸನನ್ನು, ಉಳಿದ ಸೈನ್ಯದವರಿಂದ ವ್ಯತ್ಯಾಸ ತೋರಿಸುವದಕ್ಕಾಗಿ ತನ್ನ ತಲೆಯ ದಿಂಬಿನ ಬಳಿಯಲ್ಲಿ ಆತನ ಈಟಿಯನ್ನು ನಿಲ್ಲಿಸಲಾಗುತ್ತಿದ್ದು, ಅದು ಈಗಲೂ ಆ ಸೀಮೆಯ [ಅಲೆಮಾರೀ] ಬೆದೋನಿಯರ ಮುಖ್ಯಸ್ಥರಲ್ಲಿ ಒಂದು ಪದ್ಧತಿಯಾಗಿರುವದು. ದಾವೀದನು ಮತ್ತು ಆತನ ಬೆರಳೆಣಿಕೆಯ ಹಿಂಬಾಲಕರು ಅರಸನ ಮತ್ತು ಆತನ ಸೈನ್ಯದವರ ಬಗ್ಗೆ ಹೆದರಿಕೊಂಡು ತಮ್ಮ ಹತ್ತಿರಕ್ಕೆ ಬರಲಾರರೆಂಬ ಆಲೋಚನೆಯಿಂದ ನಿಶ್ಚಿಂತನಾಗಿ ಅರಸನು ತನಗೆ ಕಾವಲು ಪಡೆಯನ್ನು ಅಥವಾ ಕಾವಲುಗಾರರನ್ನು ಇಟ್ಟುಕೊಳ್ಳುವ ಏರ್ಪಾಡನ್ನು ಮಾಡಿಕೊಂಡಿರಲಿಲ್ಲ; ಹೀಗಾಗಿ ದಾವೀದನು ಮತ್ತು



ಜೇಮ್ಸ ಟಿಸ್ಸೋಟ್ ರಚಿಸಿದ ದಾವೀದನ ರಣಶೂರರು

ಆತನ ಜೊತೆಗಾರರು ಮಾಡಬಯಸಿದ್ದಲ್ಲಿ ಅರಸನನ್ನು ಆತನು ನಿದ್ರಿಸುವಾಗ ಸುಲಭವಾಗಿ ಕಂಡುಕೊಂಡು ಆತನನ್ನು ಕೊಲೆಮಾಡಿ ಯಾರಿಗೂ ಗೊತ್ತಾಗದಂತೆ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವಿತ್ತು. ದಾವೀದನಿಗೆ ಅರಸನನ್ನು ಕೊಲ್ಲಲು ಹಿಂದೆಗೆದರೆ ತನಗೆ ಉಂಟಾಗುವ ಲಾಭವೇನೆಂಬುದನ್ನು ಕಂಡುಕೊಳ್ಳಲಾರ–ದಷ್ಟು ತಾನು ಮಂದಬುದ್ಧಿಯುಳ್ಳವನಾಗಿರಲಿಲ್ಲ, ಆದರೆ ಅದು ದೇವರ ಮೇಲೆ ತನಗಿದ್ದ ಗೌರವ ಹಾಗು ಆತನ ಕಡೆಗಿದ್ದ ತನ್ನ ನಿಷ್ಠೆಯ ಕಾರಣದಿಂದಾಗಿತ್ತು. ದೇವರು ಇಸ್ರಾಯೇಲ್ಯರ ಅರಸನೆಂದು ಪೂರ್ಣವಾಗಿ ಗ್ರಹಿಸಿಕೊಂಡಿದ್ದನು; ಮತ್ತು ದೇವರೇ ಅರಸನಾದ ಸೌಲನನ್ನು ತಾನು ಆಕ್ರಮಿಸಿಕೊಂಡಿರುವ ಸ್ಥಾನದಲ್ಲಿ ಸ್ಥಾಪಿಸಿರುವನೆಂಬುದನ್ನು ಹಾಗು ಆತನನ್ನು ಅರಸನನ್ನಾಗಿ ಅಭಿಷೇಕಿಸಿರುವನೆಂಬುದನ್ನೂ ಅಲ್ಲದೆ ಅರಸನನ್ನು ದೇವರ ಪ್ರತಿನಿಧಿಯನ್ನಾಗಿ ಗೌರವಿಸುವದು ಜನರ ಕರ್ತವ್ಯವೆಂಬುದನ್ನು ಪೂರ್ಣವಾಗಿ ಗುರುತಿಸಿಕೊಂಡಿದ್ದನು. (ಅನ್ಯಜನರಲ್ಲಿ ಅರಸರು ಹೀಗೆ ದೇವರಿಂದ ಸ್ಥಾಪಿಸಲ್ಪಡುವದಿಲ್ಲ). ದೇವರು ತನ್ನನ್ನು ಸೌಲನ ಉತ್ತರಾಧಿಕಾರಿಯನ್ನಾಗಿ ಅಭಿಷೇಕಿಸಿದ್ದು ತಾನು ದೈವಿಕ ಏರ್ಪಾಡಿನ ಅನುಸಾರವಾಗಿ ಸೌಲನ ಜೀವವನ್ನು ತನ್ನ ಅಧಿಕಾರಕ್ಕೆ ಒಪ್ಪಿಸಿದ್ದಾನೆಂಬುದನ್ನು ವಿವೇಚಿಸಲು ಬಿಟ್ಟಿರುತ್ತಾನೆಂದು ಆಲೋಚಿಸುವಷ್ಟು ಬಲಹೀನವಾಗಿರಲಿಲ್ಲ ಆತನ ಮನಃಸಾಕ್ಷಿ. ಪ್ರತಿಯಾಗಿ ದೇವರು ಆಗಲೂ ಅರಸನಾಗಿದ್ದು ಸೌಲನನ್ನು ಸಿಂಹಾಸನದಿಂದ ತಳ್ಳಿಬಿಟ್ಟು ತನ್ನದೇ ಆದ ರೀತಿಯಲ್ಲಿ ತನ್ನನ್ನು ಸಿಂಹಾಸನಕ್ಕೆ ತರಲು ಎಲ್ಲಾ ಅಧಿಕಾರವನ್ನು ಹೊಂದಿರುವನೆಂದೂ ಅಲ್ಲದೆ ಸರ್ವಶಕ್ತನಿಗೆ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ಆತನಿಗೆ ಒಬ್ಬ ಕೊಲೆಗಾರನ ಸಹಾಯ ಅಗತ್ಯವಿರದೆಂಬುದನ್ನು ಸೂಕ್ತವಾಗಿ ಆಲೋಚಿಸಿದ್ದನು.

ಈ ಪರೀಕ್ಷೆಯನ್ನು ಇನ್ನೂ ಬಲಗೊಳಿಸಲು ದಾವೀದನ ಜೊತೆಗಾರನು ಇವೆಲ್ಲವುಗಳ ಬಗ್ಗೆ ಸಲಹೆಮಾಡಿದ್ದು ಅದನ್ನು ಕಾರ್ಯಗತಮಾಡಲು ಪ್ರಸ್ತಾಪಿಸಿದ್ದನು; ಹೀಗಾಗಿ ದಾವೀದನಿಗೆ ಒಂದು ಮಾತನ್ನಾದರೂ ಆಡದಂತೆ ಅಥವಾ ತನಗೆ ಬೊಟ್ಟುಮಾಡಿ ತೋರಿಸದಂಥ ರೀತಿಯಲ್ಲಿ ಸಂಗತಿಯನ್ನು ನಿರ್ವಹಿಸಬಹುದಾಗಿತ್ತು. ಒಂದು ಬಲಹೀನ ಮನಸ್ಸಿಗೆ ಇದು ಒಂದು ಬಹು ಹೆಚ್ಚಿನ ಮಟ್ಟದ ಶೋಧನೆಯಾಗುತ್ತಿದ್ದು–ಅಪರಾಧವು ತನ್ನ ಮೇಲೆ ಬರತಕ್ಕದ್ದಲ್ಲವೆಂದು ತನ್ನಲ್ಲೇ ವಾದಿಸಿಕೊಂಡಿರಬಹುದಿತ್ತು; ಆ ವಾದವು ಏನಂದರೆ ಕೇವಲ ತಾನು ಸುಮ್ಮನ್ನಿದ್ದು, ಮಧ್ಯಪ್ರವೇಶಿಸಲು ನಿರಾಕರಿಸುವ ಮೂಲಕವಾಗಿ ಸಂಗತಿಯನ್ನು ಸಂಪೂರ್ಣವಾಗಿ ಮತ್ತೊಬ್ಬನ ಮೂಲಕವಾಗಿ ನೆರವೇರುವಂತಾಗಲು ಬಿಡುವದೆಂಬದು. ಆದರೆ ತನ್ನ ಜೊತೆಗಾರನು ತನ್ನ ಔಪಚಾರಿಕ ಅಥವಾ ಪರೋಕ್ಷವಾದ ಸಮ್ಮತಿಯಿಲ್ಲದೆ ಕಾರ್ಯವನ್ನು ಮಾಡಲಾರನೆಂಬುದನ್ನು ದಾವೀದನು ತಿಳಿದಿದ್ದನು. ಆ ಕೊಲೆಗೆ ಯಾರೇ ಸಾಧನವಾಗಿದ್ದರೂ ಅದರ ಹೊಣೆಗಾರಿಕೆಯು ಆಗಲೂ ತನ್ನದೇ ಆಗಿರುವದೆಂಬುದನ್ನು ತಿಳಿದುಕೊಂಡಿದ್ದನು. ಸೌಲನ ಹೊಟ್ಟೆಕಿಚ್ಚು ದ್ವೇಷ ಹಗೆತನ ಹಾಗು ಕೊಲೆಗಡುಕ ಮನೋಭಾವಗಳನ್ನು ತಾನು ಅಂಥದ್ದೇ ಮನೋಭಾವಗಳಿಂದ–ಅಂದರೆ ಕೆಟ್ಟತನವನ್ನು ಕೆಟ್ಟತನದಿಂದ ಎದುರಿಸಬಾರದೆಂದು ಬದಲಾಗಿ ತಾನು ಆತನ ದುಷ್ಟ ಹಾಗು ಕೊಲೆಗಡುಕ ಉದ್ದೇಶಗಳನ್ನು ಕರುಣೆಯಿಂದ ಪ್ರತೀಕರಿಸಲು ದಾವೀದನು ನಿರ್ಧರಿಸಿಕೊಂಡಿದ್ದನು. ಇದು ಕೇವಲ ಒಂದು ಧೋರಣೆ ಮಾತ್ರವಾಗಿರಲಿಲ್ಲ, ಆದರೆ ದಾವಿದನು ತನ್ನ ಹೃದಯದಲ್ಲಿ ಸೌಲನ ಬಗ್ಗೆ ಎಂದೂ ಕೊಲೆಗಡುಕ ಮನೋಭಾವವಿಲ್ಲದಿದ್ದುದು ಸ್ಪಷ್ಟವಾಗಿತ್ತು; ಕಾರಣ ಆಗ ದಾವೀದನು ಸೌಲನನ್ನು ಎರಡನೇ ಸಾರಿ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದ್ದು ಆತನನ್ನು ನಾಶಗೊಳಿಸಬಹುದಿತ್ತು. ಇದರಿಂದ ದಾವೀದನು ಸೌಲನನ್ನು ಇಂಥಾ ಗುಣಗಳುಳ್ಳ ಬೇರೆ ಯಾವ ವ್ಯಕ್ತಿಗಿಂತಲೂ ಹೆಚ್ಚು ಭಾವಾನುರಾಗದಿಂದ ಪ್ರೀತಿಸಿದ್ದನೆಂದು ನಾವು ಕಲ್ಪಿಸಿಕೊಳ್ಳುವಂತಿಲ್ಲ. ದಾವೀದನು ಸೌಲನನ್ನು ಪ್ರೀತಿಸಿದ್ದುದು ಯಾವ ಅರ್ಥದಿಂದ ಅಂದರೆ ಅದು ನಮ್ಮ ಪಠ್ಯಭಾಗದಲ್ಲಿ ಉಲ್ಲೇಖಿಸಿರುವಂಥ ನಮ್ಮ ವೈರಿಗಳ ಕಡೆಗೆ ತೋರಿಸಲ್ಪಡುವ ಸೂಕ್ತ ವಿಧದ ಪ್ರೀತಿಯಿಂದ ಎಂಬದು. ಅದು ಸಹಾನುಭೂತಿ ಅನುಕಂಪವುಳ್ಳಂಥ ಪ್ರೀತಿ. ಅದು ವೈರಿಯ ಗುಣ ಮುಂತಾದುದನ್ನು ಒಪ್ಪದಿದ್ದರೂ, ಆತನಿಗೆ ಹೇಗೂ ಹಾನಿಮಾಡದೆ ಇಲ್ಲವೇ ಇತರರು ಹಾಗೆ ಮಾಡುವದಕ್ಕೆ ಪ್ರೋತ್ಸಾಹಿಸದೆ, ಅತನ ಜೀವವನ್ನು ಯಾವ ವಿಧದಲ್ಲಿಯಾದರೂ ಉಳಿಸಿ ಆತನಿಗೆ ಕರುಣೆತೋರಿಸುವಂಥದ್ದು.

ಇಲ್ಲಿ ಆತ್ಮಿಕ ಇಸ್ರಾಯೇಲ್ಯರಾದ ನಮ್ಮೆಲ್ಲರಿಗೆ ಒಂದು ಒಳ್ಳೆಯ ಪಾಠವಿರುವದು. ದೇವರು ನೇಮಿಸಿರುವಂಥದ್ದನ್ನು ಹಾಗು ಅನುಮತಿಸಿರುವಂಥದ್ದನ್ನು ನಾವು ಗುರುತಿಸಿ–ಕೊಳ್ಳಬೇಕೆಂಬದು, ಅದು ಕೇವಲ ಭೂಲೋಕದ ರಾಜ್ಯಾಧಿಕಾರಗಳ ಬಗ್ಗೆ ಮಾತ್ರವಲ್ಲದೆ ವಿಶೇಷವಾಗಿ ದೇವರು ಸಭೆಯಲ್ಲಿ ನೇಮಕಮಾಡಿರುವಂಥವರನ್ನು ಗುರುತಿಸಿಕೊಳ್ಳ–ಬೇಕೆಂಬದು. ಅಂಥವರು ನೀತಿಗೆ ವೈರಿಗಳಾದಾಗಲೂ ಅಂಥವರನ್ನು ನಾಶಗೊಳಿಸುವದು ನಮ್ಮ ಕೆಲಸವಲ್ಲ. ನಮ್ಮನ್ನು ತನ್ನ ರಾಜ್ಯಕ್ಕೆ ಕರೆದು ತನ್ನ ನಿಗದಿತವಾದ ಸಮಯದಲ್ಲಿ ಅದನ್ನು ನಮಗೆ ಕೊಡಲು ವಾಗ್ದಾನಮಾಡಿರುವ ದೇವರು ಪ್ರಕಟಮಾಡಿ ಹೇಳಿರುವದೇನಂದರೆ ನಾವು ಪ್ರಶಾಂತರಾಗಿ ಜೀವಿಸಿ ನಮ್ಮ ವೈರಿಗಳಿಗೆ ಅಂದರೆ ನಮ್ಮನ್ನು ನಾಶಪಡಿಸುವಂಥವರನ್ನು ಅಥವಾ ನಮ್ಮ ಗುಣಗಳನ್ನು ಅಥವಾ ಯಾವುದನ್ನಾದರೂ ಸಂಹಾರಮಾಡುವ ಉದ್ದೇಶದಿಂದ ಹಿಂದಟ್ಟುತ್ತಿರುವವರ ಬಗ್ಗೆ ತಾಳ್ಮೆ ಸೌಮ್ಯಭಾವ ಕರುಣೆಯನ್ನು ತೋರಿಸಬೇಕೆಂಬದು. ನಾವು ಕೇಡಿಗೆ ಪ್ರತಿಯಾಗಿ ಕೇಡನ್ನು, ಇಲ್ಲವೇ ನಿಂದೆಗೆ ಪ್ರತಿಯಾಗಿ ನಿಂದೆಯನ್ನು, ಅಥವಾ ಆರೋಪಕ್ಕೆ ಪ್ರತ್ಯಾರೋಪವನ್ನು ಮಾಡದೆ, ಬದಲಾಗಿ ನಮ್ಮ ವೈರಿಗಳ ಬಗ್ಗೆ ಸಾಧ್ಯವಾದಷ್ಟೂ ನಾವು ಕರುಣೆಯಿಂದ ಮಾತನಾಡಿ ಅವರ ಬಗ್ಗೆ ಉದಾರವಾಗಿ ಆಲೋಚಿಸಬೇಕೆಂಬದೆ. ಯಾವುದೇ ಅರ್ಥದಲ್ಲಿ ದೈಹಿಕವಾಗಿಯಾಗಲೀ ಅಥವಾ ನಾಲಿಗೆಯಿಂದಾಗಲೀ ಅಥವಾ ಇನ್ನಾವುದೇ ವಿಧಾನದಿಂದಾಗಲೀ ನಾವು ಪ್ರತೀಕಾರಮಾಡದೆ ಅಥವಾ ಅವರ [ವೈರತ್ವದ] ಮನೋಭಾವವನ್ನು ಪ್ರದರ್ಶಿಸದೆ, ಕೆಟ್ಟತನಕ್ಕೆ ಒಳ್ಳೆತನವನ್ನು ಹಿಂದಿರುಗಿಸಬೇಕು, ಹಗೆತನ ಹಾಗು ಹಾನಿಗೆ ಪ್ರತಿಯಾಗಿ ಕರುಣೆ ಅನುಕಂಪವನ್ನು ತೋರಿಸಬೇಕೆಂಬದು.

ದಾವೀದನು ಹಾಗು ಆತರ ಜೊತೆಗಾರರು ಒಂದು ಸುರಕ್ಷಿತವಾದ ಜಾಗಕ್ಕೆ ತಲುಪಿದ ನಂತರ, ಸರಿಯಾದ ಸಮಯವು ಬಂದಾಗ, ಅವರು ರಾಜನಿಗೂ ಹಾಗು ಆತನ ಮುಖ್ಯ ಸೇನಾಧಿಪತಿಗೂ ವಂದಿಸಿ ಅರಸನ ಜೀವವು ಅಪಾಯಕ್ಕೆ ಒಳಗಾಗಿತ್ತೆಂದೂ ಆದರೆ ಆತನು ಉಳಿಸಲ್ಪಟ್ಟಿದ್ದನೆಂಬ ಅಂಶವನ್ನು

ಅವರ ಗಮನಕ್ಕೆ ತಂದವರಾಗಿ, ಇದಕ್ಕೆ ಪ್ರಮಾಣವಾಗಿ ಅವರು [ಅರಸನ] ಈಟಿ ಮತ್ತು ನೀರಿನ ಮಡಿಕೆಯನ್ನು ಅರಸನು ಇದಕ್ಕಾಗಿ ಕಳುಹಿಸುವ ದೂತನ ಮೂಲಕವಾಗಿ ಹಿಂದಿರುಗಿಸುವದಾಗಿ ಅವನಿಗೆ ತಿಳಿಸಿದ್ದರು. ದಾವೀದನು ಈ ವಿಷಯದಲ್ಲಿ ತನ್ನ ನಡವಳಿಕೆಯನ್ನು ನಿಯಂತ್ರಿಸಿದ್ದ ತನ್ನ ಉದಾರ ಮನೋಭಾವವನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದುದು ಅಯುಕ್ತವೇನಾಗಿರಲಿಲ್ಲ. ಅರಸನು ಆ ಕ್ಷಣದಲ್ಲೇ ಸನ್ನಿವೇಶವನ್ನು ಗ್ರಹಿಸಿಕೊಂಡವನಾಗಿ ತನ್ನ ವಿರೋಧಾಭಾಸ ರೀತಿಯ ಬಗ್ಗೆ ಕ್ಷಮೆಯಾಚಿಸಲು ಒಪ್ಪಿಕೊಳ್ಳುವಷ್ಟು ಪ್ರಾಮಾಣಿಕವಾದ ಮನುಷ್ಯತ್ವವುಳ್ಳವನಾಗಿದ್ದನು. ದಾವೀದನು ಅನುಸರಿಸಿದ ವಿಧಾನವು ಆತನನ್ನು ಗೆದ್ದಿತ್ತು.

ಒಳ್ಳೆಯದನ್ನು ಮಾಡುವಲ್ಲಿ ದೊರೆಯುವ ಫಲಿತಾಂಶವು ಯಾವಾಗಲೂ ಈ ವಿಷಯದಲ್ಲಿದ್ದಂತೆ ಬಹು ಸ್ಪಷ್ಟವಾಗಿರುವದಿಲ್ಲ, ಯಾಕಂದರೆ ಕೆಲವು ಕೆಡುಕರು ಸೌಲನಲ್ಲಿದ್ದುದಕ್ಕಿಂತಲೂ ಕಡಿಮೆ ಗುಣ ಹಾಗು ಸಿದ್ಧಾಂತಗಳನ್ನು ಹೊಂದಿರುವರು; ಸೌಲನು ಪ್ರಸಂಶಾಹೀನತೆ ಮತ್ಸರ ಮತ್ತು ಅಸೂಯೆಯುಳ್ಳವನಾಗಿದ್ದನು. ಆದರೆ ನಾವು ಕೆಟ್ಟತನಕ್ಕೆ ಪ್ರತಿಯಾಗಿ ಒಳ್ಳೆಯತನವನ್ನು ಸಲ್ಲಿಸಿ ಕೆಟ್ಟದ್ದನ್ನು ಮಾಡುವವರಿಂದ ಇದಕ್ಕೆ ಅಂಗೀಕಾರವನ್ನು ಪಡೆಯುವಲ್ಲಿ ವಿಫಲವಾದರೂ ಹೇಗೂ ಅದು ಸರಿಯಾಗಿಯೇ ಆಗಿದ್ದು ನಮಗೆ ಅದರಿಂದ ಒಂದು ಆಶೀರ್ವಾದ ಉಂಟಾಗುವದು. ತನ್ನ ಕರುಣೆಯಿಂದ ಜಯಿಸಲ್ಪಡಲು ವಿಫಲನಾಗುವ ಮೂಲಕ ನಷ್ಟಹೊಂದುವವನು ಕೆಟ್ಟದ್ದನ್ನು ಮಾಡುವವನೇ. ಸೌಲನು ಸ್ಪಷ್ಟವಾಗಿ ಮಾನಸಾಂತರ ಹೊಂದಿದಾಗ್ಯೂ, ದಾವೀದನು ತನ್ನ ಬಲದ ಬಗ್ಗೆ ತಾನು ಭರವಸೆನಾಗಿರುವದಕ್ಕಿಂತಲೂ ಉತ್ತಮವಾದುದನ್ನು ತಿಳಿದುಕೊಂಡಿದ್ದನು; ಇಲ್ಲಿಯೂ ಸಹ ನಮಗೆ ಒಂದು ಪಾಠವಿರುವದು, ಅದೇನಂದರೆ ನಮ್ಮ ವೈರಿಗಳ ಕಡೆಗೆ ನಾವು ಉದಾರಿಗಳಾಗಿ ಅವರ ಕೆಟ್ಟತನಕ್ಕೆ ಪ್ರತಿಯಾಗಿ ಒಳ್ಳೆಯದನ್ನು ಹಿಂದಿರುಗಿಸಿದಾಗಲೂ ನಾವು ಅವರ ಸುಧಾರಣೆಯ ಬಗ್ಗೆ ಅತಿ ಸುಲಭವಾಗಿ ಮನವರಿಕೆಮಾಡಿಕೊಳ್ಳದೆ, ಸೌಲನ ವಿಷಯದಲ್ಲಿ ದಾವೀದನು ಮಾಡಿದಂತೆ, ಆತನು [ವೈರಿಯು] ಒಂದು ದುರಾತ್ಮದ ಅಧೀನದಲ್ಲಿದ್ದನೆಂದೂ ಮತ್ತು ಹೀಗಾಗಿ ಹೃದಯದ ಪರಿವರ್ತನೆ ಪ್ರದರ್ಶಿಸಲ್ಪಡಲು ಸೂಕ್ತವಾದ ಸಮಯವನ್ನು ನೀಡಿದವರಾಗಿ ಅಲ್ಲಿಯವರೆಗೂ ತಪ್ಪಿನ ಯಾವುದೇ ಒಂದು ಅಂಗೀಕರಿಸಿಕೊಳ್ಳುವಿಕೆ ಅಥವಾ ಸುಧಾರಣೆಯ ತೋರ್ಪಡಿಸುವಿಕೆಯನ್ನು [ವೈರಿಯ} ಮನೋಪ್ರವೃತ್ತಿಯಲ್ಲಿನ ಬದಲಾವಣೆಯನ್ನು ಒಂದು ಕ್ಷಣಿಕವಾದ ಭಾವಾವೇಶವೆಂದು ಎಣಿಸಬೇಕು.

ಸೌಲನಿಗೆ ದಾವೀದನು ನೀಡಿದ ಉತ್ತರವು, ಎಲ್ಲಾ ಸನ್ನಿವೇಶಗಳಲ್ಲಿಯೂ, ಸತ್ಯಪರತೆ ಹಾಗು ಸಹಿಷ್ಣತೆಗೆ ಒಂದು ಮಾದರಿಯಾಗಿತ್ತು. ಸೌಲನ ಅಪರಾಧೀಮನೋಭಾವವನ್ನು ಆತನು ಸಮ್ಮತಿಸುವದಾಗಲೀ ಅಥವಾ ಅಲ್ಲಗಳೆಯುವದಾಗಲೀ ಮಾಡಿರಲಿಲ್ಲ, ಇಲ್ಲವೇ ಅರಸನ ಕರುಣೆ ಅನುಗ್ರಹಗಳಿಗಾಗಿ ಮನವಿ ಮಾಡಿರಲಿಲ್ಲ. ಬದಲಾಗಿ ಆತನು ದೇವರಲ್ಲಿನ ತನ್ನ ಆತ್ಮವಿಶ್ವಾಸದ ಬಗ್ಗೆ ಸಾರಿ ಹೇಳಿದ್ದನು; ಅಂದರೆ ದೇವರು ಪ್ರತಿಯೊಬ್ಬನ ವಿಷಯದಲ್ಲಿಯೂ ತನ್ನ ನೀತಿಕರುಣೆಯ ಅನುಸಾರವಾಗಿ ನಡಕೊಳ್ಳುವನೆಂದು ಹೇಳಿ ಅರಸನ ಜೀವವನ್ನು ಉಳಿಸಿದ್ದುದು ದೇವರ ಮತ್ತು ಆತನ ನೀತಿಮಟ್ಟದ ಮೇಲಿನ ತನ್ನ ಗೌರವಕ್ಕಾಗಿಯೇ ಎಂಬುದನ್ನು ತೋರಿಸಿಕೊಟ್ಟಿದ್ದನು. ತಾನು ಅರಸನಿಗೆ ಕರುಣೆಯನ್ನು ತೋರಿದಂತೆಯೇ ದೇವರಿಂದ ತನಗೂ ಕರುಣೆತೋರಲ್ಪಡುವ ಸಲುವಾಗಿ ದೇವರಲ್ಲಿ ಭರವಸನಾಗಿರುವದಾಗಿ ಸಾರಿ ಹೇಳಿದ್ದನು. ತಾನು ಎಲ್ಲಾ ಕಷ್ಟಸಂಕಟಗಳಿಂದ ಬಿಡುಗಡೆಹೊಂದ ಸಲುವಾಗಿ ಕರುಣೆ ಹಾಗು ಸಹಾಯಗಳಿಗಾಗಿ ಅರಸನಲ್ಲಿಯಲ್ಲ ದೇವರಲ್ಲಿಯೇ ಭರವಸವಿಟ್ಟುಕೊಂಡಿದ್ದನು. ಎಷ್ಟರ ಮಟ್ಟಿಗೆ ದಾವೀದನು ತನ್ನ ಉನ್ನತ ಮಟ್ಟದ ವ್ಯಕ್ತಪಡಿಸುವಿಕೆಯ ಬಗ್ಗೆ ತನಗೆ ಮನವರಿಕೆಯಾಗಿತ್ತೆಂಬದು ನಮಗೆ ತಿಳಿದಿಲ್ಲ. ಒಬ್ಬ ಪ್ರವಾದಿಯಾಗಿ ಆತನು ಆಗಾಗ್ಗೆ ಶಿರಸ್ಸು ಮತ್ತು ದೇಹದಿಂದ ಕೂಡಿದ ಕ್ರಿಸ್ತನಿಗೆ ಛಾಯೆಯಾಗಿರುವನು. ಆತನ ಮಾತುಗಳು ನಿಶ್ಚಯವಾಗಿ ತನಗಿಂತಲೂ ಹೆಚ್ಚು ಸಮಂಜಸವಾಗಿ ಸಭೆಯ ಸಲುವಾಗಿರುವದು. ದಾವೀದನು ಆಗಲೂ ಧರ್ಮಶಾಸ್ತ್ರದ ಅಧೀನತೆಯಲ್ಲಿದ್ದ ಕಾರಣ ಆತನ ಬಗ್ಗೆ ಧರ್ಮಶಾಸ್ತ್ರದ ಪ್ರಕಾರ ತೀರ್ಮಾನಿಸಬೇಕಾಗುವದು; ಅಪೋಸ್ತಲನು ಪ್ರಕಟಮಾಡಿ ಹೇಳಿರುವಂತೆ ನೀತಿವಂತನು ಒಬ್ಬನಾದರೂ ಇಲ್ಲವೆಂಬುದನ್ನು ಧರ್ಮಶಾಸ್ತ್ರವು ಸಾಬೀತುಪಡಿಸುತ್ತದೆ. ಹೇಗೂ ನಮ್ಮ ದಿವಸದಲ್ಲಿ ನಾವು ಕ್ರಿಸ್ತನ ನೀತಿವಸ್ತ್ರದಿಂದ ಮುಚ್ಚಲ್ಪಡಬಹುದು, ಹೀಗಾಗಿ "ಧರ್ಮಶಾಸ್ತ್ರದಿಂದಾದ ನೀತಿಯು ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುವ ನಮ್ಮಲ್ಲಿ ನೆರವೇರಲ್ಪಡುವದು." ನಮ್ಮ ನೀತಿಯ ಪರವಾಗಿರುವ ಹೃದಯದ ಉದ್ದೇಶಗಳು ಕ್ರಿಸ್ತನ ಯಜ್ಞಫಲದ ಮೂಲಕವಾಗಿ ಅಂಗೀಕರಿಸಲ್ಪಡುತ್ತವೆ. ಕ್ರಿಸ್ತನಿಗೆ ಮತ್ತು ಆತನ ವಾಕ್ಯಗಳಿಗೆ ನಾವು ನಂಬಿಗಸ್ತರಾಗಿರುವ ಸಲುವಾದ ನಮ್ಮ ಪರಿಪೂರ್ಣವಾದ ಕ್ರಿಯೆಗಳಿಗೆ ಬದಲಾಗಿ ಇದರ ವಿಷಯವಾದ ನಮ್ಮ ಹೃದಯದ ಬಯಕೆ ಪರಿಶ್ರಮಗಳು ಅಂಗೀಕರಿಸಲ್ಪಡುವವು. ಮತ್ತು ಹೀಗಾಗಿ ನಿಗದಿತ ಕಾಲದಲ್ಲಿ ದೇವರು ತನ್ನ ಪ್ರಿಯನಲ್ಲಿ ನಮ್ಮನ್ನು ತನ್ನ ರಾಜ್ಯಪ್ರಭಾವಗಳಿಗೆ ಅಂಗೀಕರಿಸಿಕೊಳ್ಳುವನು. ಪುನಃ ದಾವೀದನ ಮನೋಭಾವಗಳು ನಮ್ಮದಾಗಿರುವದು ಹಾಗು ತಾನು ಸೌಲನಿಗೆ ಕರುಣೆತೋರಿದ ಪ್ರಕಾರ ದೇವರು ತನಗೆ ಕರುಣೆ ತೋರುವನೆಂಬ ಆತನ ಸಿದ್ಧಾಂತಗಳು ನಮ್ಮನ್ನು ಆಕರ್ಷಿಸುವವು. ಇದೇ ನಮ್ಮ ಒಡೆಯನ ಬೋಧನೆಯ ಸಾರಂಶವಾಗಿರುವದು; ಅದೇನಂದರೆ– "ನೀವು ಜನರ ತಪ್ಪುಗಳನ್ನು ಕ್ಷಮಿಸದೇಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ." – ಯಾವನು ಕರುಣೆಯನ್ನು ತೋರಿಸಲಾರನೋ ಅವನು ಕರುಣೆಯನ್ನು ಹೊಂದಲಾರನು.

ತನ್ನಲ್ಲಿರುವ ಮನೋಭಾವಕ್ಕಿಂತಲೂ ದಾವೀದನಲ್ಲಿರುವ ಮನೋಭಾವವು ಹೆಚ್ಚು ನೀತಿಯುಳ್ಳದ್ದೆಂದು ಕಡೆಯಲ್ಲಿ ಸೌಲನು ಗುರುತಿಸಿಕೊಂಡವನಾಗಿ–ದಾವೀದನು ಕಡೆಯಲ್ಲಿ ಬಹು ಏಳಿಗೆಯಾಗುವನೆಂದು ಸಾರಿ ಹೇಳಿದ್ದನು. ಹೀಗೆಯೇ ಆತ್ಮಿಕ ಇಸ್ರಾಯೇಲ್ಯರ ಶತೃಗಳು, ಸೌಲನು ಆಗಾಗ್ಗೆ ಮಾಡಿದಂತೆ, ತಾವು ಯಥಾರ್ಥತೆಯಿಂದ ಸಂಗತಿಯನ್ನು ಒಪ್ಪಿಕೊಳ್ಳದಿದ್ದರೂ, ತಮ್ಮ ನಡವಳಿಕೆ ಹಾಗು ದೇವರ ಆತ್ಮನಿಂದ ನಡೆಸಿಕೊಳ್ಳುವಂಥವರ ನಡವಳಿಕೆಗಳ ನಡುವೆ ಇರುವ ವ್ಯತ್ಯಾಸವನ್ನು ಅರಿತುಕೊಳ್ಳುವರು. ಸೌಲನಿಂದ ಪ್ರತಿನಿಧಿಸಲ್ಪಡುವ ವರ್ಗವು ಬಹು ಸಂಖ್ಯೆಯುಳ್ಳಂಥದ್ದಾಗಿರುವದು. ಅದು ನೀತಿಯನ್ನು ಗ್ರಹಿಸಿಕೊಂಡು ಅದನ್ನು ಒಪ್ಪಿಕೊಳ್ಳುವದಾದರೂ ಅನೀತಿಯನ್ನು

ಹಿಂಬಾಲಿಸುವದು: ಅದು ಒಳ್ಳೇತನವನ್ನು ಗ್ರಹಿಸಿಕೊಂಡಾಗ್ಯೂ ಅದನ್ನು ಕೆಟ್ಟತನದ ಮೂಲಕವಾಗಿ ವಿರೋಧಿಸುವದು. ದೇವರಲ್ಲಿನ ನಂಬಿಕೆಯ ವಿಷಯದಲ್ಲಿ ಹಾಗು ಆತನನ್ನು ಮೆಚ್ಚಿಸುವ ಬಗ್ಗೆ ನಾವು ದಾವೀದನಂತೆ ಇರೋಣ; ಆತನ ಹೆಸರು ಪ್ರಿಯನೆಂಬುದನ್ನು ಸೂಚಿಸುವದು, ಅಲ್ಲದೆ ನಮಗೆ ಈಗಾಗಲೇ ತಿಳಿಸಲ್ಪಟ್ಟಿರುವಂತೆ ದಾವೀದನು ಅನೇಕ ವಿಧದಲ್ಲಿ ಶಿರಸ್ಸು ಹಾಗು ದೇಹದಿಂದ ಕೂಡಿರುವ ಕ್ರಿಸ್ತನೆಂಬ ಪ್ರಿಯನಿಗೆ ಒಂದು ಛಾಯೆಯಾಗಿರುವನು.

*****

"ನನ್ನ ಅಭಿಷಕ್ತರನ್ನು ಮುಟ್ಟಬಾರದು"

ರೀಪ್ರಿಂಟ್ಸ್ ಪುಟ 5672

1 ಸಮುವೇಲ 26

"ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರಮಾಡಿರಿ." –ಲೂಕ 6:27

ಸೌಲನಿಂದ ದೇಶಭ್ರಷ್ಟನಾಗಿ ಮಾಡಲ್ಪಟ್ಟು ಬೆನ್ನಟ್ಟಲ್ಪಟ್ಟ ಯವನಸ್ಥನಾದ ದಾವೀದನು ಒಂದು ವೈವಿಧ್ಯತೆಯುಳ್ಳ ವೃತ್ತಿಯನ್ನು ಹೊಂದಿದ್ದನು. ಆತನು ಶೀಘ್ರವಾಗಿ ನತದೃಷ್ಟ ಹಾಗು ಸಮಾಜದಿಂದ ನ್ಯಾಯವಾಗಿಯೋ ಅಥವಾ ಅನ್ಯಾಯ–ವಾಗಿಯೋ ಬಹಿಷ್ಕರಿಸಲ್ಪಟ್ಟ ಗುಂಪಿನ ಜನರನ್ನು ಕೂಡಿಕೊಂಡ–ವನಾಗಿದ್ದನು. ಅವರಲ್ಲಿ ಕೆಲವರು ನಿಸ್ಸಂದೇಹವಾಗಿ ಅಪರಾಧಿ–ಗಳಾಗಿದ್ದು; ಕೆಲವರು ಸಾಲಗಾರರಾಗಿ ಬಂಧನಕ್ಕೆ ಗುರಿಯಾಗಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಓಡಿಬಂದವರು ಮುಂತಾದ–ವರಿದ್ದರು. ಯಾವುದೇ ಸನ್ನಿವೇಶದಲ್ಲಿಯೂ ಯವನಸ್ಥನಾದ ದಾವೀದನು–ಹೆಚ್ಚು ಕಡಿಮೆ ಶಸ್ತ್ರಧಾರಿಗಳಾದ, ಹೆಚ್ಚು ಕಡಿಮೆ ಹತಾಶರಾಗಿದ್ದ–ಸುಮಾರು 400 ಜನರ ಒಂದು ಗುಂಪಿಗೆ ಮುಖ್ಯಸ್ಥನಾಗಿರುವದನ್ನು ಶೀಘ್ರದಲ್ಲಿ ಕಂಡುಕೊಂಡಿದ್ದನು.

ಇದು ದಾವೀದನಿಗೆ ಮುಂದಿನ ರಾಜ್ಯಭಾರದ ಕಾರ್ಯನಿರ್ವಣೆಗೆ ಒಂದು ದೊಡ್ಡ ತರಬೇತಿಯಾಗಿತ್ತು. ಇದು ಆತನಿಗೆ ಸಮಾಜದಿಂದ ಎಂದೂ ಒಳಿತನ್ನು ಹೊಂದದವರ ಸ್ಥಿತಿಗತಿಗಳ ಒಂದು ಆಂತರ್ಯವನ್ನು ನೋಡುವ ಅವಕಾಶ ನೀಡಿತ್ತು. ತಾನು ಮತ್ತು ತನ್ನ ಸಣ್ಣ ಸೇನೆಯ ಜೀವನಾವಶ್ಯಕಗಳ ಸಂಗ್ರಹಣೆಯು ರೈತರಿಂದ ಸುಂಕ ವಸೂಲಿಯ ಮೂಲಕವಾಗಿ ನಡೆಯುತ್ತಿದ್ದುದು ನಿಸ್ಸಂಶಯ. ಈ ಸುಂಕ ಅಥವಾ ತೆರಿಗೆಗೆ ಬದಲಾಗಿ ದಾವೀದನು ನಿಸಂದೇಹವಾಗಿ ಅವರನ್ನು [ರೈತರನ್ನು] ಫಿಲಿಷ್ಟಿಯರಿಂದ ಮಾತ್ರವಲ್ಲದೆ ಯೋರ್ದಾನಿನ ಆಚೆ ಮೋವಾಬಿನಿಂದ ಪದೇಪದೇ ಬರುವಂಥ ಸುಲಿಗೆಗಾರರಿಂದ ಸಂರಕ್ಷಿಸುತ್ತಿದ್ದನು. ಆ ಕಾಲದವರೆಗೆ ಸೌಲನ ಆಡಳಿತವು ಯಾವುದೇ ಸಮರ್ಪಕವಾದ ರಕ್ಷಣಾ ವ್ಯವಸ್ಥೆಯನ್ನು ಒದಗಿಸದೇ ಇದ್ದುದು ಸ್ಪಷ್ಟವಾಗಿತ್ತು. ತನ್ನ ಪ್ರಜೆಗಳ ಹಿತಾಸಕ್ತಿಗಳನ್ನು ಸಂರಕ್ಷಿಸುವದಕ್ಕೆ ಬದಲಾಗಿ ಅರಸನು ತನ್ನ ನಂಬಿಗಸ್ತ ಸೇವಕನಾದ ದಾವೀದನಿಗೆ ವಿರೋಧವಾಗಿ ಅಸೂಯೆಯಿಂದ ಬುದ್ಧಿಗೆಟ್ಟವನಾಗಿ ಕಾಲ ಕಾಲಕ್ಕೆ ಅರಣ್ಯದಲ್ಲಿ ಕಾಡುಪ್ರಾಣಿಗಳನ್ನು ಬೇಟೆಯಾಡುವ ರೀತಿಯಲ್ಲಿ ಆತನನ್ನು ಹಿಂದಟ್ಟಲು ವ್ಯವಸ್ಥೆ ಮಾಡುತ್ತಿದ್ದನು.

ದಾವೀದನ ಬಳಿಗೆ ಬಂದವರಲ್ಲಿ ಮೂವರು ತನ್ನ ಸೋದರಳಿಯರು ಅಂದರೆ ತನ್ನ ತಂಗಿಯ ಮಕ್ಕಳಾಗಿದ್ದರು. ಇವರು ನಂತರದಲ್ಲಿ ಅರಸನಾದ ದಾವೀದನಿಗೆ ಆತನ ಎಲ್ಲಾ ಕೆಲಸಗಳಲ್ಲಿ ಬಹು ಪ್ರಮುಖರಾಗಿ ಗುರುತಿಸಿಕೊಂಡು ಬಂದಿದ್ದರು. ಒಬ್ಬನು ಯೋವಾಬನಾಗಿದ್ದು ಅವನು ಸೇನೆಯ ಮುಖ್ಯಸ್ಥ ಅಥವಾ ಮಹಾ ದಂಡನಾಯಕನಾಗಿದ್ದನು. ಅಭಿಷೈ ಹಾಗು ಅಸಾಹೇಲನು ಇತರ ಇಬ್ಬರಾಗಿದ್ದು ಅವರು ಸಾಮರ್ಥ್ಯವುಳ್ಳ ಮನುಷ್ಯರಾಗಿ ಮುಂದೆ ರಾಜ್ಯದಲ್ಲಿ ಹೆಸರುವಾಸಿಯಾಗಿದ್ದರು.

ದಾವೀದನ ಗುಣದ ಘನವಂತಿಕೆ

ಕೆಲವು ಸಮಯದವರೆಗೆ ದಾವೀದನು ಮತ್ತು ಅತನ ಸಂಗಡಿಗರು ಅದುಲ್ಲಾಮನ ಗುಹೆಯನ್ನು ಒಂದು ಭದ್ರವಾದ ನೆಲೆಯನ್ನಾಗಿ ಮಾಡಿಕೊಂಡಿದ್ದರು. ದಾವೀದನು ತನ್ನ ಒಂದು ದೊಡ್ಡ ಲಾಭಕ್ಕಾಗಿ ತನ್ನ ದೇಶವನ್ನು ಆಂತರಿಕ ಕಲಹದಲ್ಲಿ ಮುಳುಗುವಂತೆ ಮಾಡಿರಲಿಲ್ಲ, ಅಲ್ಲದೆ ಆತನಿಗೆ ಇದನ್ನು ಮಾಡಲು ಅಧಿಕವಾದ ಸಾಮರ್ಥ್ಯವೂ ಇತ್ತು. ಬಹು ಪಾಲಿನ ಜನರು ಆತನ ಪಕ್ಷವನ್ನು ಹಿಡಿಯುವದು ಮೊದಲಿನಿಂದಲೂ ಸ್ಪಷ್ಟವಾಗಿದ್ದು ಅರಸನಾದ ಸೌಲನ ಮೇಲೆ ಆತನು ಗೆಲುವನ್ನು ಸುಲಭವಾಗಿ ಸಾಧಿಸಬಹುದಿತ್ತು. ಅಲ್ಲದೆ ಇದು ದೇವರ ಚಿತ್ತವೆಂದು ಆಲೋಚಿಸಿಕೊಂಡು ಎಷ್ಟು ಸುಲಭವಾಗಿ ಆತನು ತನ್ನನ್ನೇ ಮೋಸಗೊಳಿಸಿಕೊಳ್ಳಬಹುದಿತ್ತು! ಪ್ರವಾದಿಯಾದ ಸಮುವೇಲನ ಮೂಲಕವಾಗಿ ದೇವರು ತನ್ನನ್ನು ಅರಸನಾಗಲು ಅಭಿಷೇಕಿಸಿದ್ದನೆಂಬುದನ್ನು ಜ್ಞಾಪಿಸಿಕೊಂಡಿದ್ದನು; ಆ ಸ್ಥಾನವನ್ನು ಆಕ್ರಮಿಸಿಕೊಳ್ಳುವದು ತನ್ನದಾಗಿರುವದಿಲ್ಲ ಆದರೆ ತಾನು ದೇವರು ನೇಮಿಸಿದ ಸಮಯವನ್ನು ಪಾಲನೆಮಾಡಬೇಕೆಂಬುದನ್ನು ಸಹ ನೆನಪುಮಾಡಿಕೊಂಡಿದ್ದನು; ಅಂದರೆ ದೈವಾಧಿಕಾರವು ಸೌಲನ ರಾಜ್ಯವನ್ನು ತೆಗೆದುಹಾಕಿ ಅದನ್ನು ಸೌಲನ ಉತ್ತರಾಧಿಕಾರಿಯಾದ ತನ್ನನ್ನು ಅರಸನನ್ನಾಗಿ ಮಾಡಿ ಅದರ ನಿಯಂತ್ರಣವನ್ನು ತನಗೆ ಕೊಡುವದೆಂಬುದನ್ನು ನೆನಪು ಮಾಡಿಕೊಂಡಿದ್ದನು.

ದೇವಜನರೆಲ್ಲರು ಹೀಗೆ ಕರ್ತನಿಗಾಗಿ ಕಾಯಬೇಕೆಂಬು–ದನ್ನು ನೆನಪಿನಲ್ಲಿಟ್ಟುಕೊಂಡಲ್ಲಿ ಅದು ಎಷ್ಟೋ ಆಶೀರ್ವಾದ–ಕರವು! "ಯೆಹೋವನು ಇಂತೆನ್ನುತ್ತಾನೆ–ಹೀಗಿರಲು ನನ್ನನ್ನು ಕಾದುಕೊಂಡಿರ್ರಿ, ನಾನು ಬೇಟೆಹಿಡಿಯಲಿಕ್ಕೆ ಏಳುವ ದಿನವನ್ನು ಎದುರುನೋಡಿರಿ;" ದೇವರು ನೇಮಿಸಿದ ಕಾಲ ಸಮಯಗಳು ನಮಗೆ ಅತ್ಯುತ್ತಮವಾದವುಗಳು ಅಲ್ಲದೆ ನಮ್ಮನ್ನು ದೇವರ ಸಮಯಗಳಿಗಿಂತ ಮುಂದಾಗಿ ಮಾಡಿಕೊಳ್ಳುವ ಯಾವುದೇ ನಮ್ಮ ಪ್ರಯತ್ನವು ಖಂಡಿತವಾಗಿ ನಮಗೆ ಪ್ರತಿಕೂಲವಾಗಿ ಸ್ಪಂದಿಸುವದು. ದಾವೀದನು ಹೀಗೆ ದೇವರಲ್ಲಿ ಪೂರ್ಣವಾದ ನಂಬಿಕೆಯುಳ್ಳವನಾಗಿದ್ದು ಆತನಿಗೆ ವಿಧೇಯನಾಗಿರುವ ಆತ್ಮವನ್ನು ಹೊಂದಿದ್ದ ಕಾರಣದಿಂದಲೇ ದೇವರ ಹೃದಯವನ್ನು [ಮನಸ್ಸನ್ನು] ಹೊಂದಿರುವ ಮನುಷ್ಯನೆಂದು ಕರೆಯಲ್ಪಟ್ಟಿದ್ದನು. ಇದರಿಂದ ಆತನು ಪರಿಪೂರ್ಣತೆಯುಳ್ಳವನೆಂದಲ್ಲ, ಆತನು ಯಾವಾಗಲೂ ದೇವರ ಚಿತ್ತವನ್ನು ಕೈಗೊಳ್ಳುತ್ತಿದ್ದವನೆಂದಲ್ಲ, ಆದರೆ ದೇವರ ಚಿತ್ತವು ಆತನ ಹೃದಯದ ನಿಜವಾದ ಬಯಕೆಯಾಗಿದ್ದು; ಎಂದಾದರೂ ತನ್ನ ಶಾರೀರಿಕ ಬಲಹೀನತೆಯ ದೆಸೆಯಿಂದ ತಾನು ಬೇರೊಂದು ಮಾರ್ಗವನ್ನು ಅನುಸರಿಸಿದವನಾಗಿ ತನ್ನ ತಪ್ಪನ್ನು ಕಂಡುಕೊಂಡಾಗ ತಾನು ಪಶ್ಚಾತ್ತಾಪಪಟ್ಟು ದೈವಿಕ ಕ್ಷಮೆಯನ್ನು ಯಾಚಿಸಿ ತನ್ನ ಮಾರ್ಗವನ್ನು ಬದಲಿಸಿಕೊಳ್ಳುವಲ್ಲಿ ಪ್ರಾಮಾಣಿಕನಾಗಿರುತ್ತಿದ್ದನು.

ಜೋಸೆಫ್ ಪಾರ್ಕರ್ ಎಂಬುವವರು ವ್ಯಾಖ್ಯಾನ ಮಾಡಿ ಹೀಗೆ ಹೇಳಿರುವರು: "ಈ ಎಲ್ಲಾ ಚಿತ್ರಣಗಳು ಲೋಕದಲ್ಲಿ ಯೇಸು ಕ್ರಿಸ್ತನ ಸ್ಥಾನಮಾನಗಳಿಗೆ ಒಂದು ಛಾಯಾರೂಪ–ವೆಂಬುದನ್ನು ಕಂಡುಹಿಡಿಯುವದರಲ್ಲಿ ಇದರ ಅರ್ಥದಲ್ಲಿ ಯಾವ ತಿರುಚುವಿಕೆಯೂ ಇರುವದಿಲ್ಲ. ಆತನು ಮನುಷ್ಯರಿಂದ ಹೀನೈಸಲ್ಪಟ್ಟವನೂ ತಿರಸ್ಕರಿಸಲ್ಪಟ್ಟವನೂ ಆಗಿದ್ದನು; ಆತನಿಗೆ ತಲೆಯಿಡುವಷ್ಟೂ ಸ್ಥಳವು ಇರಲಿಲ್ಲ; ಅಲ್ಲದೆ ಶೀಘ್ರದಲ್ಲಿ ಆತನ ಸುತ್ತಲೂ ಕೂಡಿದ್ದ ಜನರು ಲೆಕ್ಕವಿಲ್ಲದಷ್ಟು ನಿರೀಕ್ಷೆಗಳ ವಿಶಿಷ್ಟತೆಯುಳ್ಳವರೂ, ವೈಯುಕ್ತಿಕವಾಗಿ ಕೀಳರಿಮೆಯುಳ್ಳವರೂ, ಸಾಮಾಜಿಕವಾಗಿ ಹೀನೈಸಲ್ಪಟ್ಟವರು, ಅಲ್ಲದೆ ಎಲ್ಲಾ ಬಗೆಯ ಅಗತ್ಯತೆಯುಳ್ಳವರೂ ಆಗಿದ್ದರು; ಆತನು ಒಕ್ಕಲಾಗಿ [ವಾಸಕ್ಕಾಗಿ] ತೆಗೆದುಕೊಂಡಿದ್ದ ಭೂಮಿಯೆಂದು ನಮ್ಮಿಂದ ಕರೆಯಲ್ಪಡುವ ಅದುಲ್ಲಾಮನ ಗುಹೆಯಲ್ಲಿ ದೇವಕುಮಾರನ ಸುತ್ತಲೂ ಕೂಡಿಬಂದಂಥವರು ನಿಸ್ಸಂದೇಹವಾಗಿಯೂ ಪರಾಕ್ರಮಿಗಳ ಅಥವಾ ಪ್ರತಿಭಾವಂತರ ಸಮೂಹವಾಗಿರಲಿಲ್ಲ."

ತನ್ನ ಹಿಂಬಾಲಕರೊಡನೆ ಪ್ರವಾಸಿಯಾಗಿ ಅದುಲ್ಲಾಮನ ಗುಹೆಯಲ್ಲಿದ್ದ ದಾವೀದನು ಮನೆಗಾಗಿ ಹಂಬಲಿಸುತ್ತಿದ್ದು ಬೇತ್ಲೆಹೇಮ್ ನಿವಾಸದ ಬಾವಿಯ ಒಳ್ಳೆಯ ನೀರನ್ನು ಉಲ್ಲೇಖಿಸಿ ಅದನ್ನು ಅಲ್ಲಿಂದ ಪಡೆಯಲು ಸಾಧ್ಯವಾದರೆ ತನಗೆ ಎಷ್ಟು ಆನಂದವಾಗುವದೆಂದು ಹೇಳಿದ್ದನು. ಪರಿಣಾಮವಾಗಿ ಆತನ ನಂಬಿಗಸ್ತರಾದ ಹಿಂಬಾಲಕರಲ್ಲಿ ಮೂವರು, ಅವರಲ್ಲಿ ಒಬ್ಬನು ಅತನ ಸೋದರಳಿಯನಾಗಿದ್ದು, ದಾವೀದನಿಗೆ ತಿಳಿಯದಂತೆ ಅಪಾಯಕರವಾದ ಪ್ರಯಾಣವನ್ನು ಕೈಗೊಂಡಿದ್ದರು. ಅದು ಎರಡು ಕಾರಣಗಳಿಗಾಗಿ ಅಪಾಯಕರವಾಗಿತ್ತು: ಮೊದಲನೆದಾಗಿ, ಅವರು ಅರಸನಾದ ಸೌಲನ ಮೂಲಕವಾಗಿ ದೇಶಭ್ರಷ್ಟರಾಗಿ ಮಾಡಲ್ಪಟ್ಟಿದ್ದರು; ಎರಡನೆಯದಾಗಿ, ಆ ಸಮಯದಲ್ಲಿ ಬೇತ್ಲೆಹೇಮು ಫಿಲಿಷ್ಟಿಯರ ಕೈಯಲ್ಲಿತ್ತು; ಆದರೆ ಈ ಕಷ್ಟಗಳಿ–ದ್ದಾಗ್ಯೂ ಈ ಧೀರ ಪುರುಷರು ತಮ್ಮ ನಾಯಕನಿಗೆ ತಮ್ಮ ಪ್ರೀತಿ ನಿಷ್ಠೆಗಳನ್ನು ಪ್ರದರ್ಶಿಸುವವರಾಗಿ ಆ ಮೆಚ್ಚಿಗೆಯ ಬಾವಿಯಿಂದ ಚರ್ಮದ ಬುದ್ಧಲಿಯಲ್ಲಿ ನೀರನ್ನು ತಂದುಕೊಟ್ಟಿದ್ದರು.

ಅವರು ಬಂದು ದಾವೀದನಿಗೆ ಅದನ್ನು ಅರ್ಪಿಸಿದಾಗ ಆತನು ಒಂದು ಅದ್ಭುತವಾದ ಹೃದಯ ನಿಷ್ಠೆಯನ್ನು ತೋರಿಸಿದ್ದನು. ಅವನು ಅವರು ತನಗೆ ತೋರಿಸಿದ ದೊಡ್ಡ ಶ್ರದ್ಧಾಭಕ್ತಿಯನ್ನು ಅವರು ತೆಗೆದುಕೊಂಡ ಅಪಾಯ ಮತ್ತು ಅವರು ತಂದಿದ್ದ ನೀರಿನ ಬಗ್ಗೆ ಕೇವಲ ಪ್ರಸಂಶಿಸಿದ್ದುದು ಮಾತ್ರವಲ್ಲದೆ, ಅದನ್ನು ಲಘುವಾಗಿ ಬಳಸಲು ತನಗೆ ಅದು ಅತ್ಯಮೂಲ್ಯವೂ ಹಾಗು ಅದನ್ನು ಬಹು ದೊಡ್ಡ ಬೆಲೆಯನ್ನು ಕೊಟ್ಟು ತಂದಿರುವದಾಗಿಯೂ ಸಾರಿ ಹೇಳಿದ್ದನು. ಅದನ್ನು ಅವರು ಅನುಭವಿಸುತ್ತಿರುವ ಆಶೀರ್ವಾದ ಹಾಗು ಅಂಥಾ ನಿಷ್ಠರಾದ ಜೊತೆಗಾರರಿಂದ ದೊರೆತ ಆದರಣೆ ಹಾಗು ಬೆಂಬಲದ ಕಾರಣಕ್ಕಾಗಿ ದೇವರಿಗೆ ಕೃತಜ್ಞತಾರ್ಪಣೆ ಸೂಚಿಸುವ ಸಲುವಾಗಿ ಅದನ್ನು ಭೂಮಿಯ ಮೇಲೆ ಸುರಿದಿದ್ದನು. ಖಂಡಿತವಾಗಿಯೂ ದಾವೀದನ ಹಿರಿಮೆ ಹಾಗು ದೇವರ ಕಡೆಗಿರುವ ಶ್ರದ್ಧಾಭಕ್ತಿಯು ಮತ್ತು ನಂಬಿಕೆಯು ಈ ಕಾರ್ಯದಲ್ಲಿ ಮತ್ತೆ ಪ್ರದರ್ಶಿತವಾಗಿತ್ತು! ಇದು ಆತನನ್ನು ಒಬ್ಬ ಸಾಮಾನ್ಯ ಮನುಷ್ಯನಿಗಿಂತಲೂ ಹೆಚ್ಚಿನವನೆಂದು ಅಂದರೆ ಒಬ್ಬ ಘನವಂತಿಕೆಯುಳ್ಳ ಮನುಷ್ಯನೆಂದು ಗುರುತಿಸುತ್ತದೆ.

ರಾಜ್ಯಾಡಳಿತ ಕಾರ್ಯಗಳಿಗೆ ತರಬೇತಿ

ಈ ಸಮಯಕ್ಕೆ ದಾವೀದನು ಮತ್ತು ಆತನ ಹಿಂಬಾಲಕರು ನೋಬ್ ಎಂಬ ಒಂದು ಸ್ಥಳದಲ್ಲಿದ್ದರು; ಅಲ್ಲಿ ಯಾಜಕನಾದ ಅಭಿಮಲೇಕನು ಆತನಿಗೆ ಕರುಣೆಯನ್ನು ತೋರಿಸಿದ್ದನು. ಅರಸನಾದ ಸೌಲನು ಇದನ್ನು ಒಬ್ಬ ಗೂಢಾಚಾರನ ಮೂಲಕವಾಗಿ ತಿಳಿದುಕೊಂಡವನಾಗಿ ಆ ಸ್ಥಳದಲ್ಲಿದ್ದ ಯಾಜಕರು ಮತ್ತು ಅವರ ಕುಟುಂಬವೆಲ್ಲವನ್ನು ಸಂಹಾರ ಮಾಡಿದ್ದನು, ಅವರೆಲ್ಲರೂ 85 ಮಂದಿಯಾಗಿದ್ದರು. ಇದು ಯಾಜಕನಾದ ಅಭಿಮಲೇಕನ ಮಕ್ಕಳಲ್ಲಿ ಒಬ್ಬನನ್ನು ಏಫೋದಿನ ಸಹಿತವಾಗಿ ಅಲ್ಲಿಗೆ ಕರಕೊಂಡು ಬಂದಿತ್ತು. ಪ್ರವಾದಿಗಳಲ್ಲಿ ಒಬ್ಬನು ಸಹ ದಾವೀದನನ್ನು ಕೂಡಿಕೊಂಡಿದ್ದನು. ಇವೆಲ್ಲವೂ ದಾವೀದನ ಸ್ಥಾನಮಾನಗಳನ್ನು ಹೆಚ್ಚು ಸುರಕ್ಷಿತವನ್ನಾಗಿಸಿತ್ತು, ಇವೆಲ್ಲವುಗಳಿಗೆ ಮಿಗಿಲಾಗಿ ತನ್ನಿಂದ ದೇವರ ಅನುಗ್ರಹವು ಬಿಟ್ಟುಹೋಗಿರುವದಾಗಿ ಸೌಲನಿಗೆ ಮನದಟ್ಟು ಮಾಡಿಕೊಟ್ಟಿತ್ತು. ಹೀಗಾದರೂ ಸೌಲನು ದೇವರ ಹಾಗು ಆತನ ದೈವಿಕ ಕಾರ್ಯಕ್ರಮಗಳಿಗೆ ವಿರುದ್ಧವಾಗಿ ಹೋರಾಡುವದನ್ನು ಮುಂದುವರೆಸಿದ್ದನು.

ಈ ಸಂದರ್ಭದಲ್ಲಿ ದಾವೀದನ ಸೇನಾಬಲವು ಕ್ರಮೇಣ ಹೆಚ್ಚುತ್ತಾ ಬಂದು ಅವರ ಸಂಖ್ಯೆಯು 600ಕ್ಕೆ ಏರಿದ್ದು, ಆತನ

ಅನುಭವವೂ ಸಹ ಅಧಿಕವಾಗಿ ಆತನ ಮುಂಬರುವ ಕಾರ್ಯಗಳಿಗೆ ಉತ್ತಮವಾಗಿ ಸಿದ್ಧಗೊಳಿಸಿತ್ತು. ಬಿಷೋಪರಾದ ವಿಲ್ಬರ್ ಪೋರ್ಸ್ ಎಂಬುವವರು ಟೀಕೆಮಾಡಿ ಹೀಗೆ ಹೇಳಿರುವರು: "ಒಂದು ಮಹಾ ತರಬೇತಿಯು ಅರಣ್ಯದಲ್ಲಿನ ಆತನ ದೇಶಭ್ರಷ್ಟ ಜೀವಿತದ ಮೂಲಕವಾಗಿ ಮನುಷ್ಯರಿಗೆ ಸಂಬಂಧಿಸಿದ ದೇಶಾಡಳಿತ ಹಾಗು ಪರಿಜ್ಞಾನಗಳಿಗಾಗಿ ಕಾದುಕೊಂಡಿತ್ತು. ವೈಯುಕ್ತಿಕವಾದ ಸರ್ವೋಚ್ಚತೆಯಲ್ಲದೆ ಮತ್ತಾವದೂ ಇಂಥಾ ಅಕ್ರಮವುಳ್ಳ ಯಾವದೇ ಜೀವರಾಶಿಯನ್ನು ಅಧೀನತೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ; ಅಲ್ಲದೆ ದಾವೀದನು ಇಂಥಾ ಹಿಂಬಾಲಕರಿಗೆ ಮನಸ್ಸು ಒಪ್ಪದ ನಾಯಕನಾಗಿ ಅವರನ್ನು ಅಧೀನದಲ್ಲಿಟ್ಟುಕೊಳ್ಳುವ ಹಾಗು ಮನುಷ್ಯರ ಮೇಲೆ ರಾಜ್ಯಾಡಳಿತ ಮಾಡುವ ಹಾಗು ವಿರೋಧಾಭಿಪ್ರಾಯವುಳ್ಳ ಹೃದಯಗಳನ್ನು ಹೊಂದಾಣಿಕೆಯುಳ್ಳ ಒಂದು ಐಕ್ಯತೆಗೆ ಬೆಸೆಯುವ ಗುಟ್ಟುಗಳನ್ನು ಕರಗತ ಮಾಡಿಕೊಳ್ಳುವ ಬಗ್ಗೆ ಕಲಿತುಕೊಂಡಿದ್ದನು.

ಆಗೊಮ್ಮೆ ಈಗೊಮ್ಮೆ ಅರಸನಾದ ಸೌಲನು ದಾವೀದನನ್ನು ಸಂಹರಿಸಲು ಉತ್ಸುಕನಾಗುತ್ತಿದ್ದನು. ಇಂಥಾ ಒಂದು ಸಂದರ್ಭದಲ್ಲಿ ದಾವೀದನು ಮತ್ತು ಆತನ ಜೊತೆಗಾರರು ಲವಣ ಸಮುದ್ರದ ಪಶ್ಚಿಮ ದಂಡೆಯ ಬಳಿಯ ಬೋಳು ಬೆಟ್ಟದ ಒಂದು ಗುಹೆಯನ್ನು ಆಶ್ರಯಿಸಿಕೊಂಡಿದ್ದರು; ಅರಸನಾದ ಸೌಲನು ಒಂದು ಒಳ್ಳೆಯ ಸಂಖ್ಯೆಯ ಸೇನಾಬಲದೊಂದಿಗೆ ದಾವೀದನನ್ನು ಹಿಂದಟ್ಟುತ್ತಾ ಅದೇ ಗುಹೆಯೊಳಗೆ ಶೌಚಮಾಡಿ ವಿರಮಿಸಿಕೊಳ್ಳಲು ಪ್ರವೇಶಿಸಿದ್ದನು. ಅವನು ಎಷ್ಟು ಸಮಯ ಅಲ್ಲಿದ್ದನೆಂಬದು ತಿಳಿದು ಬಂದಿಲ್ಲ. ಈ ಗುಹೆಗಳಲ್ಲಿ ಕೆಲವು ಸಾವಿರದ ಐನೂರು ಮಂದಿಗೆ ಆಶ್ರಯ ನೀಡುವಷ್ಟು ದೊಡ್ಡದಾಗಿರುವದೆಂದು ಕಿಟ್ಟೋ ಎಂಬುವವರು ನಮಗೆ ತಿಳಿಸಿರುವರು. ಮತ್ತೊಬ್ಬ ಲೇಖಕರು ಹೀಗೆ ಟೀಕೆಮಾಡಿ ಹೇಳಿರುವರು: "ಒಬ್ಬ ಯಾತ್ರಿಕನು ನಿಶ್ಚಯವಾಗಿಯೂ ನಮಗೆ ಹೇಳಿರುವದೇನಂದರೆ ಏನ್ಗೇದಿಗೆ ಸುಮಾರು ಇಪ್ಪತ್ತು ಮೈಲಿ ದೂರವಿರುವ ಗುಹೆಗಳಲ್ಲಿರುವ ಒಂದರಲ್ಲಿ ಮೂವತ್ತು ಸಾವಿರ ಮಂದಿಗಿಂತಲೂ ಕಡಿಮೆಯಿಲ್ಲದಷ್ಟು ಜನರು ಒಂದೇ ಸಮಯಕ್ಕೆ ಅಡಗಿಕೊಳ್ಳಬಹುದಿತ್ತೆಂಬದು. ಈ ಡೊಂಗರಗಳ ಒಳಗೆ ಮಧ್ಯರಾತ್ರಿಯ ಕತ್ತಲಿರುವದು. ಅಲ್ಲಿಂದ ಒಬ್ಬನು ಹೊರಗಿನದನ್ನು ಸ್ಪಷ್ಟವಾಗಿ ನೋಡಲು ಸಾಧ್ಯವಿದ್ದರೂ ಒಳಗೆ ನಾಲ್ಕು ಹೆಜ್ಜೆಯಷ್ಟು ದೂರವನ್ನು ನೋಡಲು ಅಸಾಧ್ಯವಿರುವದು."

ದಾವೀದನು ಮತ್ತು ಆತನ ಸಹಚರರು ಗುಹೆಯಲ್ಲಿ ಇನ್ನೂ ಹಿಂದೆ ಇದ್ದರು; ಸೌಲನು ಮತ್ತು ಆತನ ಜೊತೆಗಾರರು ವಿರಮಿಸಲು ಆ ಗುಹೆಯಲ್ಲಿ ಪ್ರವೇಶಿಸಿದಾಗ ದಾವೀದನ ಸೇನಾಗುಂಪಿನ ಬಯಕೆಯು ಕನಿಷ್ಠ ಪಕ್ಷದಲ್ಲಿ ಸೌಲನನ್ನು ಕೊಲ್ಲಬೇಕೆಂದಿದ್ದು ಹೀಗಾಗಿ ಅವರ ಈ ಕಷ್ಟಕರ ಅನುಭವಗಳೆಲ್ಲವೂ ಕೊನೆಗೊಂಡಂತಾಗಿ ಅರಸನು ನಡೆಸಿದ ಹಾಗು ನಡೆಸುತ್ತಿರುವ ಕೆಟ್ಟತನಕ್ಕೆ ನ್ಯಾಯವಾದ ಪ್ರತಿಫಲವುಂಟಾಗುವದೆಂದಾಗಿತ್ತು. ಆದರೆ ದಾವೀದನು ಇದಕ್ಕೆ ಸಮ್ಮತಿಪಟ್ಟಿರಲಿಲ್ಲ. ಬದಲಾಗಿ ಅವನು ಅರಸನಾದ ಸೌಲನ ಉಡುಗೆಯ ಒಂದು ಅಂಚನ್ನು ಹೇಗೂ ಕತ್ತರಿಸಿಕೊಂಡು ಸೌಲನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿದ್ದನೆಂಬುದನ್ನು ಪ್ರದರ್ಶಿಸುವಂತಾಗಿ ತಾನು ಬಯಸಿದ್ದಲ್ಲಿ ಸೌಲನನ್ನು ಕೊಲ್ಲಬಹುದಿತ್ತೆಂಬುದನ್ನು ತೋರ್ಪಡಿಸುವ ಸಲುವಾಗಿದ್ದು ಇದು ಅರಸನ ಕಡೆಗಿರುವ ತನ್ನ ನಿಷ್ಠೆಯನ್ನು ತೋರ್ಪಡಿಸುವ ಸಲುವಾಗಿಯು ಸಹ ಆಗಿತ್ತು.

ಆ ನಂತರ ಅರಸನು ಮತ್ತು ಆತನ ಸಹಚರರು ಸ್ವಲ್ಪ ದೂರ ಹೋದ ನಂತರ ಹೀಗಾಗಿ ಅಲ್ಲಿ ಅಪಾಯವು ಇಲ್ಲದಿರುವಾಗ ದಾವೀದನು ಮತ್ತು ಆತನ ಜೊತೆಗಾರರು ತಮ್ಮನ್ನು ತೋರ್ಪಡಿಸಿಕೊಂಡು ಅರಸನಿಗೆ ತನ್ನ ಪ್ರಜೆಗಳ ನಿಷ್ಠೆಯ ಬಗ್ಗೆ ಪ್ರಸಂಶೆಯಿಲ್ಲವೆಂದೂ ಅವರು ಅರಸನ ಪ್ರಾಣವನ್ನು ತೆಗೆಯದಿದ್ದರೂ ಆತನು ಅವರ ಪ್ರಾಣಕ್ಕಾಗಿ ಹುಡುಕಾಡುತ್ತಿರುವನೆಂದು ಹೇಳಿ ಪ್ರತಿಭಟಿಸಿದ್ದರು. ಸೌಲನ ಉತ್ತಮ ಗುಣವು ಎಚ್ಚೆತ್ತುಕೊಂಡಿತ್ತು; ಅಲ್ಲದೆ ಅವನು ಅಳುತ್ತಾ ಹೀಗೆ ಹೇಳಿದ್ದನು: "ನೀನು ನನಗಿಂತಲೂ ಹೆಚ್ಚು ನೀತಿವಂತನು." ಮತ್ತು ಆ ಸಮಯಕ್ಕೆ ದೇಶಭ್ರಷ್ಟನಾದ ದಾವೀದನ ಬೇಟೆಯನ್ನು–ತಾನೂ ಇನ್ನೆಂದಿಗೂ ಮತ್ತೆ ಹೀಗೆ ಮಾಡುವದಿಲ್ಲವೆಂದು ವಾಗ್ದಾನ ಮಾಡುವದರ ಮೂಲಕವಾಗಿ ಕೈಬಿಟ್ಟಿದ್ದನು. ಹೀಗಿದ್ದರೂ ಸ್ವಲ್ಪ ಸಮಯದ ನಂತರ ಇದೇ ರೀತಿಯ ಮತ್ತೊಂದು [ಘಟನೆಯ] ಅನುಭವವು ಉಂಟಾದ ಬಗ್ಗೆ ನಮ್ಮ ಪಾಠವು ತಿಳಿಸುತ್ತದೆ.

ಈ ಸಂದರ್ಭದಲ್ಲಿ ದಾವೀದನು ಒಂಟಿಯಾಗಿ ತನ್ನ ಸೋದರಳಿಯನ ಜೊತೆಯಲ್ಲಿ ಸೌಲನ ಪಾಳೆಯದೊಳಗೆ ಹೋಗಿ ಆತನ ತಲೆಯ ಬಳಿಯಿದ್ದ ಈಟಿಯನ್ನು ಹಾಗು ಅರಸನಿಗೆ ಸಂಬಂಧಿಸಿದ ನೀರಿನ ಬುದ್ಧಲಿಯನ್ನು ತೆಗೆದುಕೊಂಡು ಬಂದಿದ್ದನು. ಇವುಗಳೊಂದಿಗೆ ನಿರ್ಗಮಿಸಿ ಅವರು [ಸ್ವಲ್ಪ] ದೂರದಲ್ಲಿನ ನಡುವೆ ಕಂದಕವಿದ್ದ ಒಂದು ಬೆಟ್ಟದ ಮೇಲಿನಿಂದ ಸೌಲನು ಮತ್ತು ಆತನ ಸೈನ್ಯವು ಕೇಳಿಸಿಕೊಳ್ಳುವಂತೆ ಸುರಕ್ಷಿತವಾಗಿ ಮಾತನಾಡಲು ಸಾಧ್ಯವಾಗಿತ್ತು. ತಾನು ಸೌಲನ ಸೈನಿಕರಿಗಿಂತ ಹೆಚ್ಚು ಜಾಗ್ರತೆಯಾಗಿರುವದು ಮಾತ್ರವಲ್ಲದೆ ತಾನು ಅರಸನ ಹಿತಾಸಕ್ತಿಗಳಿಗೆ ಬಹು ನಿಷ್ಠೆಯುಳ್ಳವನೆಂಬುದನ್ನು ಸೂಚಿಸಿ ಹೇಳಿ ಒಬ್ಬ ದೂತನನ್ನು ಕಳುಹಿಸಿಕೊಟ್ಟಲ್ಲಿ ತಾನು ಈಟಿ ಮತ್ತು ಬುದ್ಧಲಿಗಳೆರಡನ್ನು ಹಿಂದಿರುಗಿಸುವದಾಗಿ ದಾವೀದನು ತಿಳಿಸಿದ್ದನು; ತಾನು [ಸೌಲನಿಗೆ] ಯಾವ ಹಾನಿಯನ್ನು ಬಯಸಲ್ಲಿಲ್ಲವೆಂದೂ ಆದರೆ ಕೇವಲ ಅರಸನಿಗೆ ತನ್ನ ಸಂಪೂರ್ಣವಾದ ನಿಷ್ಠೆಯ ಬಗ್ಗೆ ಮತ್ತೂ ಮನವರಿಕೆಮಾಡಿ–ಕೊಡುವ ಸಲುವಾಗಿ ಇವುಗಳನ್ನು ತಂದಿರುವದಾಗಿಯೂ, ತನ್ನನ್ನು ಒಬ್ಬ ಶತ್ರುವಿನಂತೆ ಹಿಂದಟ್ಟುವದು ಒಂದು ತಪ್ಪೆಂದು ತೋರಿಸಿಕೊಟ್ಟಿದ್ದನು.

ಒಬ್ಬ ಅರಸನ ಪಾಳೆಯದಲ್ಲಿ ಹೀಗೆ ನುಸುಳುವದು ಈ ದಿನದಲ್ಲಿ ಆಧುನಿಕ ವಿಧಾನದ ಮೂಲಕವಾಗಿ ಕಾವಲುಗಾರರನ್ನು ನೇಮಿಸುವದು, ಪ್ರವೇಶ ನಿರೋಧಕಗಳು ಮುಂತಾದವುಗಳನ್ನು ಅಳವಡಿಸಿರುವ ಕಾರಣದಿಂದ ಅದು ಅಸಾಧ್ಯವಾಗಿರುವದು. ಆದರೆ ಹಿಂದಿನ ಕಾಲದಲ್ಲಿ ಹೀಗಿರಲಿಲ್ಲ, ಇಲ್ಲವೇ ಈ ದಿನದಲ್ಲಿಯೂ ಪೌರಾತ್ಯ ದೇಶಗಳಲ್ಲಿ ಯಾವುದೇ ಒಂದು

ಗಣನೀಯ ಹಂತದಲ್ಲಿಯೂ ಹೀಗಿರುವದಿಲ್ಲ. ಗಿದ್ಯೋನನು ಮತ್ತು ಆತನ ಗುಂಪು ಹೀಗೆಯೇ ಒಂದು ಪಾಳೆಯಕ್ಕೆ ಮುತ್ತಿಗೆಹಾಕಿದ್ದರೆಂಬುದನ್ನು ನಾವು ನೆನಪಿಸಿಕೊಳ್ಳುವೆವು. ಅಬ್ರಹಾಮನು 5 ಮಂದಿ ಅರಸರನ್ನು ಹಿಂದಟ್ಟಿದ್ದನ್ನು, ಅಲ್ಲದೆ ಅವನು ಅವರನ್ನು ಕಂಡುಕೊಂಡಾಗ ಸೂಕ್ತವಾದ ಕಾವಲು ಪಡೆಯಿಲ್ಲದೆ ಅವರು ನಿದ್ರೆಯಿಂದ ಆವರಿಸಲ್ಪಟ್ಟಿರುವದಾಗಿ ಆತನು ಕಂಡಿದ್ದನ್ನು ನಾವು ನೆನಪಿಸಿಕೊಳ್ಳುತ್ತೇವೆ. ಪೌರಾತ್ಯದಲ್ಲಿ ದೊಡ್ಡ ಅನುಭವವುಳ್ಳ ಒಬ್ಬ ಪ್ರಯಾಣಿಕನು ಹೀಗೆ ಹೇಳಿರುವನು: "ಅರಬ್ಬೀಯರು ವಿಶೇಷವಾಗಿ ಆಯಾಸಗೊಂಡಾಗ ದೀರ್ಘವಾಗಿ ನಿದ್ರಿಸುವರು. ನಾನು ಅಗಾಗ್ಗೆ ಪ್ರಯಾಣ ಮಾಡುವಾಗ ನನ್ನ ಹೇಸರ ಕತ್ತೆಯನ್ನು ಓಡಿಸುವವರು ಮತ್ತು ಸೇವಕರು ಅಪಾಯವುಳ್ಳದ್ದೆಂದು ಭಾವಿಸುವ ಸ್ಥಳಗಳಲ್ಲಿ ತಾವು ಜೊತೆಗೂಡಿ ಎಚ್ಚರವಾಗಿ ಕಾಯುವಕ್ಕೆ ಒಪ್ಪಿಕೊಂಡಿದ್ದಾಗ್ಯೂ ಪ್ರತಿಯೊಂದು ಸಂದರ್ಭದಲ್ಲಿಯೂ ಅವರು ಶೀಘ್ರವಾಗಿ ನಿದ್ರಿಸುವದನ್ನು ನಾನು ಕಂಡಿದ್ದು, ಸಾಧಾರಣವಾಗಿ ಅವರ ನಿದ್ರೆಯು ಎಷ್ಟು ಗಾಢವಾಗಿರುತ್ತಿತ್ತೆಂದರೆ ಅವರು ಎಚ್ಚರಗೊಳ್ಳದೆಯೇ ನಾನು ಅವರ ಮಧ್ಯದಲ್ಲಿ ನಡೆದಾಡುವದು ಸಾಧ್ಯವಿದ್ದುದು ಮಾತ್ರವಲ್ಲದೆ ಅವರ ಹೊದಿಕೆಯನ್ನೂ ತೆಗೆದುಕೊಳ್ಳಲೂ–ಬಹುದಿತ್ತು."

ಒಂದು ಪ್ರಯೋಜನಕರವಾದ ಪಾಠ

ತನ್ನ ವೈರಿಯ ಜೀವವನ್ನು ತೆಗೆಯಲು ತನಗೆ ಇಚ್ಛೆಯಿಲ್ಲದಿರಲು ದಾವೀದನು ಕೊಟ್ಟ ವಿವರಣೆಯೆಂದರೆ ಸೌಲನು ಅಭಿಷಕ್ತನಾಗಿದ್ದು ಆತನ ಮೇಲೆ ಹಲ್ಲೆಮಾಡುವದು ಸರ್ವಶಕ್ತನ ವ್ಯವಸ್ಥೆಗಳ ಮೇಲೆ ಆಕ್ರಮಣ ನಡೆಸಿದ ಹಾಗೆ ಆಗುವದೆಂಬುದು. ಈ ದಾವೀದನಿಗೆ ಇದನ್ನು ಬುದ್ಧಿಪೂರ್ವಕವಾಗಿ ಮಾಡಲು ಸಾಧ್ಯವಾಗದು. "ನಾನು ಅಭಿಷೇಕಿಸಿದವರನ್ನು ಮುಟ್ಟಬಾರದು, ನನ್ನ ಪ್ರವಾದಿಗಳಿಗೆ [ಸೇವಕರಿಗೆ] ಯಾವ ಕೇಡನ್ನೂ ಮಾಡಬಾರದು."

ಈ ತತ್ವವನ್ನು ಮನಸ್ಸಿನಲ್ಲಿಟ್ಟುಕೊಳ್ಳುವದು ಈ ದಿವಸಗಳಲ್ಲಿರುವ ನಮಗೆ ಒಳ್ಳೆಯದು. ಈ ದಿನದ ಅರಸರುಗಳು ದೇವರ ಅಭಿಷಕ್ತರಾಗಿರುವರೆಂದು ನಾವು ಹೇಗೂ ಆಲೋಚಿಸುವಂತಿಲ್ಲ. ಅವರು ಸ್ವತಃ ತಮ್ಮದೇ ಆದ ಅಭಿಷೇಕ–ಹೊಂದಿದವರು. ಅವರ ರಾಜ್ಯಗಳು ಈ ಲೋಕದ ರಾಜ್ಯಗಳು. ಪ್ರತಿಯಾಗಿ ಇಸ್ರಾಯೇಲು ದೇವರ ವಿಶೇಷವಾದ ರಾಜ್ಯವಾಗಿದ್ದು, ಅದನ್ನು ಆತನು [ದೇವರು] ಒಂದು ವಿಶೇಷವಾದ ಒಡಂಬಡಿಕೆಯ ಏರ್ಪಾಡಿನ ಮೂಲಕವಾಗಿ ಅಂಗೀಕರಿಸಿ–ಕೊಂಡಿದ್ದನು. ಅರಸನಾದ ಸೌಲನು ದೇವಾಧಿಕಾರದ ಮೂಲಕವಾಗಿ ವಿಶೇಷ ಅಭಿಷೇಕ ತೈಲದಿಂದ ಅಭಿಷೇಕಿಸ–ಲ್ಪಟ್ಟಿದ್ದನು; ಆ ಅಭಿಷೇಕ ತೈಲವು ಪವಿತ್ರಾತ್ಮನಿಗೆ ಛಾಯೆಯಾಗಿರುವದು. ದಾವೀದನ ಅಭಿಷೇಕವು ಅದೇ ತೈಲದ ಮೂಲಕವಾಗಿದ್ದು ಅದು ಆತನಿಗೆ ಈ ಹಿಂದೆ ಸೌಲನಲ್ಲಿ ನೆರವೇರಿಸಲಾದ ಅಭಿಷೇಕದಲ್ಲಿ ಮಧ್ಯಪ್ರವೇಶಿಸುವಂಥ ಒಂದು ಹಕ್ಕನ್ನು ಆತನಿಗೆ ನೀಡಿರುವದಿಲ್ಲವಾದರೂ ಇದು ದಾವೀದನಿಗೆ ಸೌಲನ ಉತ್ತರಾಧಿಕಾರಿಯಾಗಿರುವನೆಂಬ ಅಭಯವನ್ನು ನೀಡುವಂಥದ್ದಾಗಿದ್ದು, ಆದರೆ ಇದು ತಾನು ಸೌಲನನ್ನು ತೆಗೆದುಹಾಕುವದಕ್ಕಾಗಿರದೆ ದೇವರು ತನ್ನ ಸ್ವಂತ ಸಮಯ ಹಾಗು ವಿಧಾನದ ಮೂಲಕವಾಗಿ ಅದನ್ನು [ದಾವೀದನ] ಸ್ವಾಧೀನಕ್ಕೆ ಕೊಡುವಂಥದ್ದಾಗಿತ್ತು.

ಭೂಲೋಕ ರಾಜ್ಯಗಳ ನಾಣ್ಯಗಳೆಲ್ಲವೂ ತಮ್ಮನ್ನು ಆಳುವವನು ರಾಜ್ಯಭಾರ ಮಾಡುತ್ತಿದ್ದು ಮೆಸ್ಸೀಯನ ಪ್ರತಿನಿಧಿಯಾಗಿ ಅಧಿಕಾರನಡೆಸುತ್ತಿರುವನೆಂಬುದನ್ನು ಸೂಚಿಸುವದಾದರೂ, ಇದು ಒಂದು ತಪ್ಪೆಂದು ನಾವು ತಿಳಿದಿರುತ್ತೇವೆ. ಮೆಸ್ಸೀಯನ ರಾಜ್ಯ ಇನ್ನೂ ಸ್ಥಾಪಿತ–ವಾಗಿರುವದಿಲ್ಲ. "ನಿನ್ನ ರಾಜ್ಯವು ಬರಲಿ" ಎಂದು ನಾವೂ ಇನ್ನೂ ಪ್ರಾರ್ಥಿಸುತ್ತಿರುವೆವು.

ಐದು ಲೋಕ ಸಾಮ್ರಾಜ್ಯಗಳು

ದೇವರು ಛಾಯಾರೂಪದ ರಾಜ್ಯವನ್ನು ತೆಗೆದುಹಾಕಿದಾಗ [ಅದರ] ಕಡೆಯ ಅರಸನಾದ ಚಿದ್ಕೀಯನಿಗೆ ನೀಡಲಾದ ಸಂದೇಶವೆಂದರೆ: "ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು; [ರಾಜ್ಯಕ್ಕೆ} ಬಾಧ್ಯನು ಬರುವದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು." ಹೀಗೆ ಲೋಕದಲ್ಲಿ ದೇವರ ಆಳ್ವಿಕೆಯ ಸಂಬಂಧವಾಗಿ ಅಂದರೆ ಚಿದ್ಕೀಯನಿಂದ ಮೆಸ್ಸೀಯನ ಸಾವಿರ ವರುಷದ [ಆಳ್ವಿಕೆಯ] ರಾಜ್ಯದ ವರೆಗೆ ದೇಶದಲ್ಲಿ ರಾಜನಿಲ್ಲದ ನಡುಗಾಲವನ್ನು ತಿಳಿಸಲಾಗಿತ್ತು. ಹೇಗೂ ಈ ಮಧ್ಯದಲ್ಲಿ ದೇವರು ಅನ್ಯಜನಾಂಗ–ಗಳಿಗೆ ಲೋಕದಲ್ಲಿ ಅವರು ಯಾವ ವಿಧದ ರಾಜ್ಯವನ್ನು ಸ್ಥಾಪಿಸುವರೆಂಬುದನ್ನು ತೋರಿಸಲು ಒಂದು ಅವಕಾಶವನ್ನು ನೀಡಿದ್ದನು. ಚಿದ್ಕೀಯನ ದಿವಸಗಳಿಂದ, ಅಂದರೆ ಕ್ರಿ. ಪೂ. 606 ರಿಂದ, ಈಗಿನ ಕಾಲದವರೆಗೆ ನಾವು ನಾಲ್ಕು ವಿಧದ ವೈವಿಧ್ಯತೆಯುಳ್ಳ ಸರಕಾರಗಳನ್ನು ಹೊಂದಿದವರಾಗಿದ್ದು, ನಾಲ್ಕನೆಯದು ಒಂದು ವಂಚಿತವಾದ ವಿಧಾನದ ಮೂಲಕವಾಗಿ ಮಾರ್ಪಡಿಸಲಾಗಿರುವದು. ಈ ರಾಜ್ಯಗಳು (1) ಬಾಬಿಲೋನ್, (2) ಮೇದೋ–ಪರ್ಷಿಯ, (3) ಗ್ರೀಸ್ ಮತ್ತು (4) ರೋಮ್ ಸಾಮ್ರಾಜ್ಯಗಳಾಗಿದ್ದವು. ಈಗಿರುವ ಯೂರೋಪ್ ರಾಜ್ಯಗಳು ರೋಮ್ ಸಾಮ್ರಾಜ್ಯದ ಮಿಥ್ಯಾರೂಪ ಅಥವಾ ತೋರ್ಪಡಿಕೆ–ಯಾಗಿರುವದು. ಅವರ ನಿಯಮವಿಧಿಗಳು ಆಕಾಂಕ್ಷೆಗಳು ನಿರ್ದಿಷ್ಟವಾಗಿ ರೋಮನ್ನರದ್ದೇ ಆಗಿದ್ದು, ಅದು ಮೋಸಗೊಳಿಸುವಂಥದ್ದೂ ಸ್ವತಃ ಮೋಸಗೊಳಿಸಲ್ಪಟ್ಟದ್ದೂ ಆಗಿರುವವು. ಅವರು ತಮ್ಮನ್ನು ಕ್ರೈಸ್ತ ಸಾಮ್ರಾಜ್ಯಗಳ ಶೈಲಿಯೆಂದು ಕರೆದುಕೊಂಡಿದ್ದು, ಲೋಕದವರೆಲ್ಲರೂ ಒಂದು ಸಾಮಾನ್ಯ ಒಮ್ಮತದ ಮೂಲಕವಾಗಿ ಇದರ ಬಗ್ಗೆ ಕ್ರೈಸ್ತಸಾಮ್ರಾಜ್ಯ ಅಂದರೆ ಕ್ರಿಸ್ತನ ರಾಜ್ಯವೆಂದು ಕರೆಯುವ ವಾಡಿಕೆಯಲ್ಲಿರುವರು.

ಸತ್ಯವೇದವು ಇದನ್ನು ಚಿತ್ರಿಸಿರುವದು; ಈ ಎಲ್ಲಾ ರಾಜ್ಯಾಧಿಕಾರಗಳನ್ನು ಸಾಂಕೇತಿಕವಾದ ಪ್ರತಿಮೆಯಲ್ಲಿ

ಸೂಚಿಸಿದ್ದು, ಅದರ ಕಾಲುಗಳು ಕಬ್ಬಿಣದಾಗಿದ್ದು ಪಾದಗಳಿಗೆ ಜೇಡಿಮಣ್ಣಿನ ಲೇಪನವನ್ನು ನೀಡಿ ಅದು ಕಲ್ಲಿನ ಪಾದಗಳಾಗಿ ಕಾಣುವಂತೆ ಮಾಡಲಾಗಿತ್ತು. ಆ ಕಲ್ಲು ದೇವರ ರಾಜ್ಯದ ಸಂಕೇತ–ವಾಗಿರುವದು. ಹೀಗೆ ಈ ದಿನದ ಯೂರೋಪಿನ ರಾಜ್ಯಗಳು ಯುದ್ಧಗಳಲ್ಲಿದ್ದು ಕ್ರಿಸ್ತೀಯ ಮನೋಭಾವವನ್ನು ಬಿಟ್ಟು ಬೇರೆ ಯಾವದನ್ನಾದರೂ–ಅಂದರೆ ಕೋಪ ಕ್ರೋಧ ಅಸೂಯೆ ಹಗೆತನ ಮತ್ತು ಹೋರಾಟಗಳ ಮನೋಬಾವಗಳನ್ನು ತೋರ್ಪ–ಡಿಸುತ್ತಿದ್ದು; ಇವುಗಳನ್ನು ಅಪೋಸ್ತಲನು "ಶಾರೀರಭಾವದ ಹಾಗು ಸೈತಾನನ ಕೃತ್ಯಗಳು" ಎಂದು ಕರೆದಿರುವನು. ಈ ರಾಜ್ಯಗಳು ತಮ್ಮನ್ನು ಮೆಸ್ಸೀಯನ ರಾಜ್ಯವೆಂದು ಕರೆದುಕೊಂಡಿದ್ದು, ಇವುಗಳು ಆ ಪ್ರತಿಮೆಯ ಪಾದಗಳಲ್ಲಿ ಸೂಚಿತವಾಗಿರುವದು. ಈ ರಾಜ್ಯಕ್ಕೆ ಕಲ್ಲಿನಂಥ ಬಣ್ಣವಿದ್ದು, ಶೀಘ್ರದಲ್ಲೇ ಭೂಮಿಯನ್ನೆಲ್ಲಾ ತುಂಬಿಕೊಳ್ಳುವದು. – ದಾನಿಯೇಲ 2:31–45

ಮೆಸ್ಸೀಯನ ರಾಜ್ಯವು – ಹೀಗೆ ಚಿತ್ರಿತಗೊಂಡಿರುವದು: "(ಬೆಟ್ಟದೊಳಗಿಂದ) ಒಂದು ಗುಂಡು ಬಂಡೆಯು ಕೈಯಿಲ್ಲದೆ ಒಡೆಯಲ್ಪಟ್ಟು" ಅಂದರೆ ಮಾನವನ ಯತ್ನದಿಂದಲ್ಲದೆ ಒಡೆಯ–ಲ್ಪಟ್ಟು; ಮತ್ತು ಈ ರಾಜರ ದಿನದಲ್ಲಿ ಎಂಬದು ಆ ಪ್ರತಿಮೆಯ ಕಾಲ್ಬೆರಳುಗಳನ್ನು ಸೂಚಿಸಿದ್ದು, ಅದು ಆ ಪ್ರತಿಮೆಯ ಹೆಜ್ಜೆಗೆ ಬಡಿದು ಅದನ್ನು ಪುಡಿಪುಡಿಯಾಗಿ ಮಾಡಿ ಆ ಬಂಡೆಯು ಮಹಾ ಪರ್ವತವಾಗಿ ಅಥವಾ ರಾಜ್ಯವಾಗಿ ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಬೇಕಿರುವದು. ನಾವು ನಂಬಿರುವಂತೆ ಈ ಬಡಿಯು–ವಿಕೆಯು ಸಮೀಪಿಸುತ್ತಿದ್ದು, ಯೂರೋಪಿನ ಈ ಯುದ್ಧವು ಜನಾಂಗಗಳನ್ನು ದುರ್ಬಲಗೊಳಿಸುವಂಥ ದೇವರ ಉದ್ದೇಶ–ವುಳ್ಳದ್ದಾಗಿದ್ದು ಮತ್ತು ಅವುಗಳನ್ನು ಸಂಕಟಕಾಲವೆಂಬ ಮುಂದಿನ ಹಂತಕ್ಕೆ ಸಿದ್ಧಪಡಿಸುವದು; ಅದು ಮಹಾ ಭೂಕಂಪನವಾಗಿದ್ದು ಸಾಂಕೇತಿಕವಾಗಿ ಕ್ರಾಂತಿಯನ್ನು ಸೂಚಿಸುವದು.

ಆ ಕ್ರಾಂತಿಯನ್ನು ಕೂಡಲೇ ಅನುಸರಿಸಿಕೊಂಡು ಬರಲಿರುವದು ಸಾಂಕೇತಿಕವಾದ ಮಹಾ ಬೆಂಕಿಯಾಗಿದ್ದು ಅದು ಈಗಿನ ಕಾಲದ ವ್ಯವಸ್ಥಾ ಕ್ರಮಗಳೆಲ್ಲವನ್ನು ಸಂಪೂರ್ಣವಾಗಿ ನಾಶಗೊಳಿಸಬೇಕಿರುವದು. ಈ ಬೆಂಕಿಯು ಆಡಳಿತಾದಿ–ಕಾರಗಳೆಲ್ಲವುಗಳನ್ನು ಕಿತ್ತೊಗೆಯುವಂಥ ಅರಾಜಕತೆಯನ್ನು ಸೂಚಿಸುವದು. ಹೀಗೆ ತನ್ನ ಅತ್ಯುತ್ತಮ ಸಾಧನೆಗಳು ಕೇವಲ ಅನುಕರಣೆಗಳಾಗಿದ್ದು ಕ್ರಮೇಣ ಅದು ವಿನಾಶಕ್ಕೆ ನಡೆಸುವ–ದೆಂಬುದನ್ನು ತಾನು ಪ್ರಮಾಣೀಕರಿಸಿಕೊಳ್ಳಲು ದೇವರು ಮನುಷ್ಯನನ್ನು ಬಿಟ್ಟಿರುವನು. ಕಲಿತುಕೊಂಡಂಥ ಪಾಠವೆಂದರೆ ಮನುಕುಲದವರೆಲ್ಲರೂ ಮುಂದೆ ಬರಲಿರುವ ಮೆಸ್ಸೀಯನ ರಾಜ್ಯಕ್ಕೆ ಸಿದ್ಧರಾಗುವರೆಂಬದು, ಅಲ್ಲದೆ ಇದೇ "ಜನಾಂಗಗಳ ಇಷ್ಟ ವಸ್ತುವಾಗಿರುವದು." – ಹಗ್ಗಾಯ 2:7.

*****

ಅರಸನಾದ ಸೌಲನ ಅಂತಿಮ ಯುದ್ಧ

ರೀಪ್ರಿಂಟ್ಸ್ ಪುಟ 5673

1 ಸಮುವೇಲ 28

"ಯೆಹೋವನು ನನಗೆ ಬಲವೂ ಗುರಾಣಿಯೂ ಆಗಿದ್ದಾನೆ; ನಾನು ಆತನಲ್ಲಿ ಭರವಸವಿಟ್ಟೆನು, ನನಗೆ ಸಹಾಯವು ಉಂಟಾಯಿತು." – ಕೀರ್ತನೆ 28:7

ಇಂದಿನ ಅಧ್ಯಯನವು ಇಸ್ರಾಯೇಲ್ಯರ ಇತಿಹಾಸದಲ್ಲಿ ಹಾಗು ದೇವರಿಗೆ ಪ್ರಿಯನೂ ಆದ ದಾವೀದನ ಅನುಭವಗಳಲ್ಲಿ ಒಂದು ಕುತೂಹಲಕಾರೀ ಅವಧಿಯನ್ನು ಒಳಗೊಂಡಿರುತ್ತದೆ. ಅರಸನಾದ ಸೌಲನಿಂದ ಹಿಂಸಿಸಲ್ಪಟ್ಟು ಹಿಂದಟ್ಟಲ್ಪಟ್ಟ ದಾವೀದನಿಗೆ ಯಾವ ಸುರಕ್ಷಿತವಾದ ನೆಲೆಯೂ ಇಲ್ಲದಂತಾಯಿತು. ಫಿಲಿಷ್ಟಿಯರು ದಾವೀದನನ್ನು ಒಬ್ಬ ಶತ್ರುವಿಗಿಂತಲೂ ಸ್ನೇಹಿತನನ್ನಾಗ ಬಯಸಿದವರಾಗಿ ದಾವೀದನಿಗೂ ಮತ್ತು ಆತನ ಹಿಂಬಾಲಕರಿಗೂ ಚಿಗ್ಲಕ್ ಎಂಬ ಪಟ್ಟಣವನ್ನು ಬಿಟ್ಟುಕೊಟ್ಟಿದ್ದರು. ಅಲ್ಲಿ ನೆಲೆಸಿದ್ದಾಗ ದಾವೀದನ ವಿಜಯವು ಅಮಾಲೇಕ್ಯರ ಮೇಲಾಗಿದ್ದುದಾದರೂ ಎಂದೂ ಅದು ಇಸ್ರಾಯೇಲ್ಯರ ವಿರುದ್ಧವಾಗಿರಲಿಲ್ಲ. ಆತನಿಗೆ ಮನಃಪೂರ್ವಕವಾಗಿ ದೇವಜನರ ವಿರುದ್ಧವಾಗಿ ಯುದ್ಧ ಮಾಡಲು ಸಾಧ್ಯವಿರಲಿಲ್ಲ. ಆದಾಗ್ಯೂ ದೇವರು ನಾಶಮಾಡ ಬೇಕೆಂದು ಪ್ರಕಟಿಸಿರುವಂಥವರ ವಿರೋಧವಾಗಿ ಅಂದರೆ ತಮ್ಮ ದುಷ್ಟತನವು ಪೂರ್ಣವಾಗುತ್ತಾ ಬಂದ ಕಾರಣದಿಂದ ದೇವರು ಅನುಮತಿಸುವ ಮಟ್ಟಿಗೆ ಅಂಥವರ ವಿರುದ್ಧವಾಗಿ ಹೋರಾಡುವದು ಉಚಿತವೆಂದು ಆತನಿಗೆ ಅನ್ನಿಸಿತ್ತು.

ಈ ಮಧ್ಯೆ, ಸೌಲನ ಆಳ್ವಿಕೆಯ ಅಂತ್ಯವು ಸಮೀಸುತ್ತಾ ಬಂದಿತ್ತು. ಫಿಲಿಷ್ಟಿಯರ ಒಂದು ಹೊಸ ಆಕ್ರಮಣವು ಸೈನ್ಯವೆಲ್ಲಾ ತನಗೆ ಸಾಧ್ಯವಾದಷ್ಟೂ ಒಟ್ಟಗೂಡಿಸಲ್ಪಡುವದು ಅಗತ್ಯವನ್ನಾಗಿಸಿದ್ದು, ಆನಂತರ ಅದರ ಫಲಿತಾಂಶವು ಬಹು ಅನಿಶ್ಚಿತವಾಗಿರುವದೆಂದು ಸೌಲನಿಗೆ ಅನ್ನಿಸಿತ್ತು. ಅರಸನಾಗಿ ದೇವರ ನಿಬಂಧನೆಯ ಅನುಸಾರ ಮಂತ್ರವಾದಿಗಳು ಮಾಟಗಾರರು ಹಾಗು ಬೇತಾಳಿಗರೆಲ್ಲರೂ ಇಸ್ರಾಯೇಲ್ ದೇಶವನ್ನು ಬಿಟ್ಟುಹೋಗಬೇಕೆಂದು ಆಜ್ಞೆಮಾಡಿದ್ದಾಗ್ಯೂ ಕೆಲವರು ಅಲ್ಲಲ್ಲಿ ಉಳಿದುಕೊಂಡಿದ್ದರು. ತನ್ನ ಅತಿರೇಕದ ಕಾರಣ ದೇವರು ತನಗೆ ಉತ್ತರಿಸುವದಿಲ್ಲವೆಂಬುದನ್ನು ಕಂಡು ಸೌಲನು ಏಂದೋರಿನ ಬೇತಾಳಿಕಳನ್ನು ಸಂಧಿಸಿದ್ದನು. ಈಕೆಯು ಸೌಲನ ಮುಖ್ಯ ಸೇನಾಪತಿಯಾದ ಅಬ್ನೇರನ ತಾಯಿಯಾಗಿದ್ದಳೆಂದು ಕೆಲವರಿಂದ ಹೇಳಲಾಗಿರುವದು.

ಆ ಬೇತಾಳಿಕಳು ತನಗೆ ಕೇಡಾಗದೆಂಬ ಭರವಸೆ ಪಡೆದ ನಂತರ ತಾನು ಭಾವಿಸಿದ್ದಂಥ ಬಿದ್ದುಹೋದ ದೇವದೂತ–ರೊಂದಿಗೆ ಸಂಪರ್ಕಿಸಿದ್ದಳು. ಆಕೆಯು ಭಾವಿಸಿದ್ದಂತೆ ಮತ್ತು

ಈಗಲೂ ಆತ್ಮಿಕವಾದಿಗಳು ಭಾವಿಸುವಂತೆ ಇವು ಸತ್ತುಹೋದವರ ಆತ್ಮವಾಗಿದ್ದವೆಂಬದು. ನಿಸ್ಸಂದೇಹವಾಗಿ ಆಕೆಯು ಪ್ರಾಮಾಣಿಕಳಾಗಿದ್ದು ಅಲ್ಲಿ ಕರೆಯಲ್ಪಟ್ಟದ್ದು ಸಮುವೇಲನೆಂದು ಯೋಚಿಸಿದ್ದಳು. ಆದರೆ "ಸತ್ತವರಿಗೆ ಯಾವ ತಿಳುವಳಿಕೆಯೂ ಇರುವದಿಲ್ಲ" ಎಂದು ಸತ್ಯವೇದವು ನಮಗೆ ಭರವಸೆ ನೀಡುತ್ತದೆ. ಸಮುವೇಲನು ತನ್ನ ಪಿತೃಗಳೊಂದಿಗೆ ನಿದ್ರಿಸುತ್ತಿದ್ದು, ಪುನರುತ್ಥಾನ ಕಾಲದ ಉದಯಕ್ಕಾಗಿ ಕಾಯುತ್ತಿದ್ದು, ಯಾವ ಬುದ್ಧಿವಾದವನ್ನೂ ನೀಡಲು ಆತನಿಗೆ ಸಾಧ್ಯವಿರಲಿಲ್ಲ; ನಡೆಯುತ್ತಿದ್ದ ಯಾವ ಸಂಗತಿಯ ಬಗ್ಗೆಯೂ ತಿಳಿಯಲು ಆತನಿಗೆ ಸಾಧ್ಯವಿರಲಿಲ್ಲ.

ಹೇಗೂ ದುರಾತ್ಮಗಳು ಆ ಕಾಲಗಳು ಸಹಿತವಾಗಿ ಈಗಲೂ ಸತ್ತವರ ವ್ಯಕ್ತಿರೂಪತಾಳಿ ತಮಗಿರುವ ಉತ್ಕೃಷ್ಟ ಪರಿಜ್ಞಾನವನ್ನು ಬಳಸಿಕೊಂಡು ಸತ್ತವರಿಗೆ ಬದಲಾಗಿ ಉತ್ತರಿಸುವವು. ಈ ವಿಷಯದಲ್ಲಿ ಮಂಡಿಸಲಾದ ಪ್ರಶ್ನೆಗೆ ನೀಡಲಾದ ಉತ್ತರವೆಂದರೆ ಮರುದಿನ ಅರಸನು ಯುದ್ಧದಲ್ಲಿ ಸೋತುಹೋಗುವದಲ್ಲದೆ ತಾನು ಮತ್ತು ತನ್ನ ಮಕ್ಕಳು ಸಂಹರಿಸಲ್ಪಡುವರೆಂಬುದು.

ಬಿದ್ದುಹೋದ ದೇವದೂತರು ನಮ್ಮ ಮನುಕಲದ ಸಂಬಂಧವಾಗಿ ಇಷ್ಟು ಸಂಗತಿಗಳನ್ನು ಹೇಗೆ ತಿಳಿದಿರುವರೆಂಬದು ನಮಗೆ ಗೊತ್ತಿರುವದಿಲ್ಲ. ಆದರೆ ನಮಗೆ ತಿಳಿದು ಬಂದಿರುವದೇನಂದರೆ ಅವರೊಂದಿಗೆ ಯಾವುದೇ ವಿಧವಾಗಿ ವ್ಯವಹರಿಸುವದು ಅವಿವೇಕವೆಂಬುದು; ಯಾಕಂದರೆ ದೇವರು ಇದನ್ನು ನಿಷೇಧಿಸಿರುವನು. ಅವುಗಳ ಒಂದೇ ಉದ್ದೇಶವೇನಂದರೆ ಅದು ಜನರನ್ನು ಮೋಸಗೊಳಿಸುವದೇ; ಅಲ್ಲದೆ ಭಕ್ತನಾದ ಪೌಲನ ಅನುಸಾರವಾಗಿ ಕನಸುಗಳು ಹಾಗು ಪ್ರಕಟನೆಗಳ ಮೂಲಕವಾಗಿ ಅವರು ಅನೇಕ ಬಗೆಯ ದೆವ್ವಗಳ ಬೋಧನೆಗಳನ್ನು ಸಭೆಯೊಳಗೆ ತಂದಿದ್ದರು. (1 ತಿಮೋಥೆ 4:1) ಇವು ನಮ್ಮ ವಿಶ್ವಾಸ ಸೂತ್ರಗಳಲ್ಲಿ ಸೇರಿಕೊಂಡು, ಲೇಪನದ್ರವ್ಯದಲ್ಲಿ ನೊಣಬಿದ್ದು ದುರ್ಗಂಧ ಬೀರುವಂತೆ ಮಾಡಿರುವದು. (ಪ್ರಸಂಗಿ 10:1)

ಸತ್ಯವೇದವು ಸ್ಪಷ್ಟವಾಗಿ ಯಾವುದನ್ನು ಬೋಧಿಸುವದೆಂಬುದನ್ನು ಜನರು ಮನಗಂಡದ್ದೇಯಾದಲ್ಲಿ ಅದು ಸಂತೋಷಕರವಾಗುವದು; ಅದೇನಂದರೆ ಸತ್ತವರು ಸತ್ತವರಾಗಿಯೇ ಇದ್ದು ಅವರಿಗೆ ಯಾವ ವಿಧವಾದ ಮಾಹಿತಿಯನ್ನು ನೀಡಲು ಸಾಧ್ಯವಿರದೆಂಬದು. ಅವರು ಸಂತೋಷವಾಗಲೀ ಇಲ್ಲವೇ ಸಂಕಟವಾಗಲಿ ಪಡದೇ ಇರುವವರಾಗಿದ್ದು, ಕೇವಲ ಅವರ ಜೀವಸತ್ವವು ಸ್ವಲ್ಪಕಾಲ ತಡೆಹಿಡಿಯಲಾಗಿದ್ದು, ಅವರು ಉತ್ತಮ ದಿನದ ಉದಯಕ್ಕಾಗಿ ಕಾದುಕೊಂಡಿದ್ದು, ಆ ದಿನದಲ್ಲಿ ಇಮ್ಮಾನುವೇಲನು ಅಂದರೆ ಮೆಸ್ಸೀಯನು ಕಲ್ವಾರಿಯಲ್ಲಿ ತನ್ನ ಈಡುಬಲಿಯ ಅರ್ಪಣೆಯ ಫಲವಾಗಿ ದೇವರ ಮಹಿಮೆಯ ವಿಷಯವಾದ ಪರಿಜ್ಞಾನವನ್ನು ಎಲ್ಲರಿಗೂ ಕೊಡುವನು. ಸತ್ತವರು [ಮೊದಲು] ಜೀವಂತವಾಗಿ ಇದ್ದುದಕ್ಕಿಂತಲೂ ಹೆಚ್ಚು ಜೀವಂತವಾಗಿರುವರೆಂಬ ಬೋಧನೆಯು ಬುದ್ಧಿಹಿನತೆಯುಳ್ಳದ್ದಾಗಿರುವದು ಮಾತ್ರವಲ್ಲದೆ ದೇವರ ವಾಕ್ಯವನ್ನು ನಿರಾಕರಿಸಿದ್ದು, ಘೋರವಾದ ಅನೇಕ ವಿಧವಾದ ದೊಡ್ಡ ತಪ್ಪುಗಳಿಗೆ ತಳಹದಿಯಾಗಿ ಮಾಡಲ್ಪಟ್ಟು, ಕ್ರೈಸ್ತರ ವಿವೇಚನಾ ಶಕ್ತಿಗಳನ್ನು ಅಪಾಯಕ್ಕೆ ಈಡುಮಾಡಿರುವದು. ಅವರೇನಾದರೂ ತಮ್ಮ ಪ್ರಿಯ ಮಿತ್ರರು ಪುನರುತ್ಥಾನ ಕಾಲವು ಉದಯಿಸುವವರೆಗೆ ಕೇವಲ ನಿದ್ರಿಸುತ್ತಿರುವರೆಂಬುದನ್ನು ತಿಳುಕೊಂಡದ್ದೇಯಾದಲ್ಲಿ, ಯಾರೂ ಸತ್ತವರಿಗಾಗಿ ಪ್ರಾರ್ಥಿಸಲಾರರು ಇಲ್ಲವೇ ಅವರು ಪರ್ಗೆಟೋರಿ ಎಂಬ [ಶುದ್ಧೀಕರಣ] ಸ್ಥಳದಿಂದ ಬಿಡುಗಡೆ ಹೊಂದುವದಕ್ಕಾಗಿ [ಕೆಥೋಲಿಕರ ದೇವಾಲಯದಲ್ಲಿ] ದಿವ್ಯಪೂಜೆಯನ್ನು [ಮಾಸ್] ನಡೆಸಲಾರರು.

ಆದರೆ, ಎಲ್ಲಕ್ಕಿಂತಲೂ ಕೆಟ್ಟದ್ದಾದುದ್ದು ಏನಂದರೆ, ಸತ್ತವರು ಜೀವಂತವಾಗಿರುವರೆಂಬ ಸಿದ್ಧಾಂತವು ಹಲವಾರು ಬಗೆಯ ದೇವದೂಷಣೆಗಳಿಗೆ ಮೂಲವಾಗಿದ್ದು, ಹೆಚ್ಚು ಕಡಿಮೆ ಕ್ರೈಸ್ತ ಪಂಗಡಗಳೆಲ್ಲವೂ ತಮ್ಮ ವಿಶ್ವಾಸ ಸೂತ್ರಗಳಲ್ಲಿ ಇವುಗಳನ್ನು ಪ್ರತಿಬಿಂಬಿಸಿಕೊಂಡು ಬಂದಿರುವಂಥದ್ದೇ. ಈ ದೇವದೂಷಣೆಗಳು ದೇವರ ಗುಣ ಮತ್ತು ಆತನ ಯೋಜನೆಗಳ ವಿಷಯವಾದ ಘೋಷಣೆಗಳನ್ನು ಒಳಗೊಂಡಿದ್ದು, ಯಾವ ದೇವ ವಿರೋಧಿಯೂ ನಾಚಿಕೊಳ್ಳುವಂತಾಗ ಮಾಡಿ, ಕನಿಕರವುಳ್ಳ ತಂದೆಯೂ ಕೃಪಾಪೂರ್ಣನಾದ ದೇವರೂ ಆದವನ ಗುಣವಿಶೇಷತೆಗಳಿಗೆ ದೂರವಾಗಿಸಿರುವದು; ಈತನ ಮೂಲಕವಾಗಿಯೇ ಎಲ್ಲಾ ಒಳ್ಳೇ ದಾನಗಳು ಕುಂದಿಲ್ಲದ ಎಲ್ಲಾ ವರಗಳೂ ಇಳಿದು ಬರುವವು. – ಯಾಕೊಬ 1:17

"ಬಿಲ್ಲೆಂಬ ಒಂದು ಶೋಕಗೀತ"

ದಾವೀದನು ಯುದ್ಧದ ಪರಿಣಾಮವನ್ನು ಕೇಳಿದಾಗ ಸೌಲನು ಮತ್ತು ಯೋನಾತಾನರ ಬಗ್ಗೆ ತನ್ನ ಸಹಾನುಭೂತಿಯನ್ನು ಒಂದು ಸೊಗಸಾದ ಕವಿತೆಯಲ್ಲಿ ವ್ಯಕ್ತಪಡಿಸಿದ್ದನು. ಈ ಕವಿತೆಯಲ್ಲಿ ಸೌಲನು ತನಗೆ ಹೇಗೆ ಹಿಂಸೆಕೊಟ್ಟಿದ್ದನೆಂಬುದರ ಅಥವಾ ತನ್ನ ಜೀವತೆಗೆಯಲು ಪ್ರಯತ್ನಿಸಿದ್ದನೆಂಬುರ ಬಗ್ಗೆ ಒಂದೇ ಒಂದು ಸೂಚನೆಯಾಗಲೀ ಒಳಗೊಂಡಿರುವದಿಲ್ಲ. ಅದರಲ್ಲಿ ಸೌಲನು ನೆರವೇರಿಸಿದ್ದ ಎಲ್ಲಾ ಒಳ್ಳೆಯ ವಿಷಯಗಳಿಗಾಗಿ ಆತನನ್ನು ಅಭಿನಂದಿಸಲಾಗಿತ್ತು. ಸತಿಯ ಪ್ರೇಮವನ್ನೂ ಮೀರಿಸಿದ್ದಂಥ ಯೋನಾತಾನನ ಕೋಮಲವಾದ ಪ್ರೀತಿಯ ಬಗ್ಗೆ ಅದರಲ್ಲಿ ತಿಳಿಸಲಾಗಿತ್ತು. ಈ ಕವನವು 2 ಸಮುವೇಲ 1:17–27 ರಲ್ಲಿ ದಾಖಲಾಗಿರುವದು. ಸೌಲ ಹಾಗು ಯೋನಾತಾನರ ಬಗ್ಗೆ ಬಿಲ್ಲೆಂಬ ಶೋಕಗೀತದಲ್ಲಿ ವರ್ಣಿಸಲ್ಪಟ್ಟಿರುವ ದಾವೀದನ ಮನೋಭಾವವನ್ನು ಸೌಲನ ಅಂತ್ಯ ಪ್ರಯಾಣ [ಡೆಡ್ ಮಾರ್ಚ್ ಫ್ರಮ್ ಸೌಲ್] ಎಂಬ ನಮ್ಮ ಕಾಲದ ರಾಗದಲ್ಲಿ ಸಂಗೀತಗಾರನು ರಾಗಸಂಯೋಜನೆ ಮಾಡಿರುವನು; ಹೀಗೆ ಈ ರಾಗವು ಈದಿನದಲ್ಲಿನ ಮಹಾನ್ ವ್ಯಕ್ತಿಗಳ ಅಂತ್ಯ ಸಂಸ್ಕಾರಗಳಲ್ಲಿ ನುಡಿಸುವದರೊಂದಿಗೆ ಈ ವಿಷಯವನ್ನು ಗುರುತಿಸಿಕೊಳ್ಳುತ್ತಾ ಬಂದಿರುವದು.

ಈ ಯುದ್ಧದಲ್ಲಿ ಯೋನಾತಾನನು ಒಳಗೊಂಡಂತೆ ಸೌಲನ ಮಕ್ಕಳು ಕೊಲ್ಲಲ್ಪಟ್ಟಿದ್ದರು. ಸೌಲನು ಗಾಯಗೊಂಡಿದ್ದನು.

ತಾನು ಫಿಲಿಷ್ಟಿಯರ ಕೈಗೆ ಸಿಕ್ಕಿಬಿದ್ದಲ್ಲಿ ಅವರು ತನ್ನನ್ನು ಚಿತ್ರಹಿಂಸೆ ನೀಡಿ ಕೊಲ್ಲುವರೆಂದು ಭಯಪಟ್ಟು ತನ್ನ ಆಯುಧವಾಹಕನು ತನ್ನನ್ನು ಕೊಲ್ಲಬೇಕೆಂದು ಬಯಸಿದ್ದು, ಕಡೆಗೆ ತನ್ನ ಸ್ವಂತ ಕತ್ತಿಯಿಂದಲೇ ಆತ್ಮಹತ್ಯೆಮಾಡಿಕೊಂಡಿದ್ದನು.

ಅಮಾಲೇಕ್ಯನಾದ ಒಬ್ಬ ಯೌವನಸ್ಥನು ದಾವೀದನಿಂದ ಅನುಗ್ರಹ ಹೊಂದುವದಾಗಿ ಆಲೋಚಿಸಿ ದಾವೀದನು ಹೇಗೆ ಸೌಲನಿಂದ ಹಿಂಸೆಪಟ್ಟಿದ್ದನೆಂಬುದರ ಬಗ್ಗೆ ಕೆಲವು ಸಂಗತಿಗಳನ್ನು ತಿಳುಕೊಂಡವನಾಗಿ ದಾವೀದನಿಗೆ ಸೌಲನ ಮರಣದ ಸುದ್ದಿಯನ್ನು ತಂದು ಸೌಲನ ಕಿರೀಟ ಹಾಗು ಸೌಲನ ತೋಳಿನ ಕಡಗವನ್ನು ಕೊಟ್ಟು ಆರಸನಾದ ಸೌಲನನ್ನು ಆತನ ಕೋರಿಕೆಯ ಮೇರೆಗೆ ತಾನು ರವಾನಿಸಿರುವದಾಗಿ [ಪ್ರಾಣ ತೆಗೆದಿರುವದಾಗಿ] ಹೇಳಿದ್ದನು. ಹೇಗೂ ಇದು ತಾನು ಗೌರವ ಹೊಂದಿಕೊಳ್ಳುವ ಸಲುವಾಗಿ ಕಥೆಯ ಈ ಭಾಗವನ್ನು ಸೃಷ್ಟಿಮಾಡಿದ್ದ ಸಂಭವವಿರುವದು. ಏನೇ ಇದ್ದರೂ ದಾವೀದನು ಈ ಸಂಗತಿಯನ್ನು ಹೇಗೆ ತೆಗೆದುಕೊಳ್ಳಬಹುದೆಂಬುದನ್ನು ನಿರೀಕ್ಷಿಸಿದ್ದಕ್ಕಿಂತಲೂ ಒಂದು ವಿಭಿನ್ನ ರೀತಿಯಲ್ಲಿ ತೆಗೆದುಕೊಂಡಿದ್ದು ಆ ಯವನಸ್ಥನಿಗೆ ಹೀಗೆ ಹೇಳಿದ್ದನು "ನೀನು ಕೈಯೆತ್ತಿ ಯೆಹೋವನ ಅಭಿಷಕ್ತನನ್ನು ಕೊಲ್ಲುವದಕ್ಕೆ ಏಕೆ ಭಯಪಡಲಿಲ್ಲ." ಆನಂತರ ಆತನಿಗೆ ಮರಣವಾಗಬೇಕೆಂದು ಆಜ್ಞಾಪಿಸಿದ್ದನು. ಆದರೆ ದಾವೀದನು ಸೌಲ ಯೋನಾತಾನರಿಗಾಗಿ ಆ ಸಂಜೆಯ ವರೆಗೂ ಶೋಕಿಸಿದ್ದನು.

ತಾನು ಕಡೆಯಲ್ಲಿ ಇಸ್ರಾಯೇಲಿನ ಅರಸನಾಗ–ಬೇಕಿರುವದೆಂಬುದರ ಬಗ್ಗೆ ಪೂರ್ಣವಾಗಿ ಭರವಸವುಳ್ಳವನಾಗಿ ದಾವೀದನು ದೇವರಿಗಾಗಿ ಅನೇಕ ವರುಷಗಳು ಕಾದುಕೊಂಡಿದ್ದನು; ಆದರೆ ಆ ಸಂದರ್ಭಕ್ಕಾಗಿ ಯಾವ ವಿಧದಲ್ಲಿಯೂ ಆತುರಪಡದೆ ಕೇವಲ ದೇವರು ತನ್ನನ್ನು ಇರಿಸುವ ಕಾರ್ಯಸ್ಥಾನದ ಅಧಿಕಾರ ಹಾಗು ಜವಾಬ್ದಾರಿಗಳನ್ನು ನಿರ್ವಹಿಸಲು ಸಿದ್ಧನಾಗಿ ಕಾದುಕೊಂಡಿದ್ದನು. ದಾವೀದನು ಅನುಸರಿಸಿದ ವಿಧಾನದಲ್ಲಿ ನಮಗಿರುವದು ಎಂಥಾ ಒಂದು ಅದ್ಭುತವಾದ ನಿದರ್ಶನ! ಕ್ರೈಸ್ತರು ತಮ್ಮ ಎಲ್ಲಾ ಆಗುಹೋಗುಗಳಲ್ಲಿ ದೇವರ ಸಮಯಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿರುವದರ ಬಗ್ಗೆ ಎಷ್ಟೊಂದನ್ನು ಕಲಿತುಕೊಳ್ಳಲು ಅವರಿಗೆ ಸಾಧ್ಯ. "ನಿನ್ನ ರಾಜ್ಯವು ಬರಲಿ" ಎಂದು ಕೇವಲ ಪ್ರಾರ್ಥಿಸುತ್ತಾ ದೇವರ ರಾಜ್ಯಕ್ಕಾಗಿ ಕಾದುಕೊಂಡಿರುವದು ಮಾತ್ರವಲ್ಲದೆ, ತಮ್ಮ ಜೀವನದ ಎಲ್ಲಾ ಸಂಗತಿಗಳಲ್ಲಿಯೂ ದೇವರ ನಡೆಸುವಿಕೆ ಹಾಗು ಎಲ್ಲಾ ಸಂಗತಿಗಳನ್ನು ತಮ್ಮ ಒಳಿತಿಗಾಗಿ ಮಾರ್ಪಡಿಸುವಂಥ ದೇವಕೃಪೆಗಾಗಿ ಕಾದುಕೊಂಡಿರುವಂಥದ್ದನ್ನು ಇದು ಒಳಗೊಂಡಿರುವದು. ಇದು ಕ್ರೈಸ್ತರು ಪದೇ ಪದೇ ಅತಿಯಾಗಿ ಮಾಡುವ ತಪ್ಪುಗಳಲ್ಲಿ ಒಂದಾಗಿದ್ದು ಅವರು ತಮ್ಮ ಹಿತಾಸಕ್ತಿಯ ಪರವಾಗಿರುವ ದೇವರ ಕೃಪೆಯನ್ನು ಹಾಗು ಮಾಡಲ್ಪಟ್ಟ ಮೇಲ್ವಿಚಾರಣೆಯ ಸಂಬಂಧದ ವಾಗ್ದಾನಗಳನ್ನು ಅಲಕ್ಷಿಸುವವರಾಗಿ ತಮ್ಮ ಸಂಗತಿಗಳನ್ನು ತಾವೇ ನಿರ್ವಹಿಸಿಕೊಳ್ಳಲು ಪ್ರಯತ್ನಿಸುವರು. ಇದು ಅನೇಕ ವೇಳೆ ಅವರಿಗೆ ಅನಾನುಕೂಲಕರವಾಗಿ ಪರಿಣಮಿಸಿರುವದು.

ಬಹುಶಃ ತಾನು ತನ್ನ ಸಹಚರರು ಫಿಲಿಷ್ಟಿಯರ ದೇಶದೊಳಗಿಂದ ಹೊರಡುವ ಸಮಯವು ಬಂದಿರುವದೆಂದು ಅರಿತುಕೊಂಡು ಏಫೋದಿನೊಡನೆ ಇದ್ದ ಯಾಜಕನ ಮೂಲಕವಾಗಿ ದೇವರನ್ನು ವಿಚಾರಿಸಿದ್ದನು. ತಾನು ಯೆಹೂದ ದೇಶದೊಳಗೆ ಹೋಗಬೇಕೆಂಬದು ಉತ್ತರವಾಗಿತ್ತು. ನಂತರ ಮಾಡಿದ್ದ ವಿಚಾರಣೆಯು ಯಾವ ಪಟ್ಟಣದೊಳಗೆ ಹೋಗಬೇಕು? ಎಂಬದು ಮತ್ತು ಉತ್ತರವು ಹೆಬ್ರೋನಿಗೆ ಎಂದಾಗಿತ್ತು. ಅಲ್ಲಿಂದಲೇ ದಾವೀದನು ಹಾಗು ಆತನ ಸಹಚರರು ತಮ್ಮ ಕುಟುಂಬದೊಡನೆ ಒಯ್ಯಲ್ಪಟ್ಟಿದ್ದುದಲ್ಲದೆ ತನ್ನ ಸ್ವಂತ ಕುಲವಾದ ಯೆಹೂದ ಕುಲವು ಆತನನ್ನು ತಮ್ಮ ಅರಸನೆಂದು ಕೂಡಲೇ ಗುರುತಿಸಿಕೊಂಡಿತ್ತು. ಈ ಸಂಗತಿಗಳು ನಡೆಯಲ್ಪಟ್ಟು ಹಾಗು ಆತನು ಎಲ್ಲಾ ಇಸ್ರಾಯೇಲ್ಯರ ಮೇಲೆ ಅರಸನಾಗುವದಕ್ಕೆ ಮೊದಲು ಹೇಗೂ ಏಳು ವರುಷಗಳಿಗೂ ಹೆಚ್ಚು ಸಮಯ ಕಳೆದಿದ್ದವು. ಈ ಮಧ್ಯೆ ಅರಸನಾದ ಸೌಲನ ಮಕ್ಕಳಲ್ಲಿ ಒಬ್ಬನಾದ ಈಷ್ಬೋಶೇತನು ಬದುಕಿ ಉಳಿದಿದ್ದನು; ಅಲ್ಲದೆ ಸೌಲನ ಮುಖ್ಯ ಸೇನಾಧಿಕಾರಿಯಾದ ಅಬ್ನೇರನು ಆತನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಅಭಿಷೇಕಿಸಲ್ಪಡುವಂತೆ ಮಾಡಿದ್ದನು. ಯೆಹೂದದ ಅರಸನಾದ ದಾವಿದನು ಇತರ ಕುಲಗಳನ್ನು ಬಲಾತ್ಕಾರಿಸಲು ಯಾವ ಪ್ರಯತ್ನವನ್ನೂ ಮಾಡಿರಲಿಲ್ಲ. ಆದರೆ ದೇವರ ನಿಗದಿತ ಸಮಯಕ್ಕಾಗಿ ಕಾದುಕೊಳ್ಳುವದನ್ನು ಮುಂದುವರೆಸಿದ್ದನು.

ಈ ಮಧ್ಯೆ, ಅಬ್ನೇರನು ಹೇಗೂ ದಾವೀದನ ಸೇವಕರಿಗೆ ವಿರೋಧವಾಗಿ ಒಂದು ಸೈನ್ಯವನ್ನು ಕೂಡಿಸಿದ್ದನು ಅಲ್ಲದೆ ಒಂದು ಘೋರ ಯುದ್ಧ ಸಂಭವಿಸಿದ್ದು ಅದರಲ್ಲಿ ದಾವೀದನ ಸೇನೆಯು ಜಯಗಳಿಸಿತ್ತು; ಇತರರು ಹೋರಾಟದಲ್ಲಿ ಸೋತುಹೋಗಿದ್ದರು. ಅಂತ್ಯದಲ್ಲಿ ಅಬ್ನೇರನು ಅರಸನಾದ ಈಷ್ಬೋಶೇತನ ಮೇಲೆ ಸಿಟ್ಟುಗೊಂಡು ತಾನು ದಾವೀದನಿಗೆ ಸಾಮಂತನಾಗುವದಾಗಿ ತಾನು ಇಸ್ರಾಯೇಲ್ಯರೆಲ್ಲರ ಮನಸ್ಸುಗಳು ದಾವೀದನ ಕಡೆಗೆ ತಿರುಗಿಕೊಳ್ಳಲು ಸಹಾಯಮಾಡುವದಾಗಿ ಆತನೊಡನೆ ಪ್ರಸ್ತಾಪಿಸಿದ್ದನು. ಅರಸನಾದ ದಾವೀದನು ನಿಸ್ಸಂದೇಹವಾಗಿಯೂ ಇದು ದೇವರ ಚಿತ್ತ ಹಾಗು ದೇವರ ವಾಗ್ದಾನಕ್ಕೆ ಅನುಸಾರವಾಗಿರುವದೆಂದು ಪರಿಗಣಿಸಿ ಈ ಪ್ರಸ್ತಾಪವನ್ನು ಪ್ರಸಂಶಿಸಿದ್ದನು. ಹೇಗೂ ಸಂಗತಿಯು ಹೀಗೆ ನಡೆದಿರಲಿಲ್ಲ; ಯಾಕಂದರೆ ದಾವೀದನ ಸೋದರಳಿಯನಾದ ಯೋವಾಬನು ರಣಶೂರರಲ್ಲಿ ಮುಖ್ಯಸ್ಥನಾಗಿದ್ದು ಅಬ್ನೇರನನ್ನು ಮೋಸದಿಂದ ಸಂಹರಿಸಿದ್ದನು. ಮತ್ತೆ ದಾವೀದನ ನಡವಳಿಕೆಯು ತನ್ನ ಕಾಲದಲ್ಲಿ ಸಾಧಾರಣವಾಗಿದ್ದ ಮನೋಭಾವಕ್ಕಿಂತಲೂ ಭಿನ್ನವಾಗಿದ್ದುದನ್ನು ನಾವು ನೋಡುತ್ತೇವೆ. ಅಬ್ನೇರನ ಮರಣಕ್ಕೆ ಸಂತೋಷಿಸುವದರ ಬದಲು ಅರಸನು ಆತನಿಗಾಗಿ ಶೋಕಿಸುವವನಾಗಿ ತನ್ನ ಸೋದರಳಿಯನು ಅನುಸರಿಸಿದ್ದ ತಪ್ಪಾದ ವಿಧಾನವನ್ನು ಖಂಡಿಸಿದ್ದನು. ಅತಿ ಸಮರ್ಥನಾದ ತನ್ನ ಸೈನಿಕನ ಎದುರಿನಲ್ಲಿ ಒಬ್ಬ ಮಹಾ ಸೈನಿಕನಾಗಿದ್ದ ಅಬ್ನೇರನ ಸದ್ಗುಣವನ್ನು ಬಹುವಾಗಿ ಶ್ಲಾಘಿಸುವಷ್ಟು ಧೈರ್ಯವುಳ್ಳವನಾಗಿ ಹೀಗೆ ಹೇಳಿದ್ದನು: "ಈ ಹೊತ್ತು ಇಸ್ರಾಯೇಲ್ಯರಲ್ಲಿ ಹತವಾದವನು ಪ್ರಭುವೂ ಮಹಾಪುರುಷನೂ ಆಗಿದ್ದನು..."

ಇಸ್ರಾಯೇಲ್ಯರೆಲ್ಲರ ಮೇಲಣ ಅರಸನು

ಆದರೆ ಇದಾದ ಕೆಲವು ಸಮಯಗಳ ನಂತರ ಇತರರು ಅರಸನಾದ ದಾವೀದನ ಬಗ್ಗೆ ತಪ್ಪಾಗಿ ತಿಳುಕೊಂಡವರಾಗಿ ಅರಸನಾದ ಈಷ್ಬೋಶೆತನನ್ನು ಸಂಹರಿಸಿ ಆತನ ತಲೆಯನ್ನು ಆತನ ಸಾವಿಗೆ ಸಾಕ್ಷಿಯಾಗಿ ದಾವೀದನಿಗೆ ತಂದುಕೊಟ್ಟಿದ್ದರು; ಇದಕ್ಕೆ ತಮಗೆ ಬಹುಮಾನ ಸಿಗುವದೆಂದು ಅವರು ಅಪೇಕ್ಷಿಸಿದ್ದುದು ಅಲ್ಲಿ ನಿಸ್ಸಂದೇಹವಾಗಿತ್ತು. ಇದಕ್ಕೆ ಪ್ರತಿಯಾಗಿ ಅವರೂ ಖಂಡಿಸಲ್ಪಟ್ಟಿದ್ದರು. ಅವರು ಅರಸನನ್ನು ವಧಿಸಿದ್ದರು. ಅವರೂ ಇದೇ ಶಿಕ್ಷೆಗೆ ಅರ್ಹರೆಂದು ಎಣಿಸಲ್ಪಟ್ಟವರಾಗಿ ತಾವೇ ವಧಿಸಲ್ಪಟ್ಟಿದ್ದರು. ಹೀಗೆ ಜನರು ದಾವೀದನು ಅನುಸರಿಸಿದ ವಿಧಾನದ ನೀತಿಯ ತತ್ವವು ಆತನ ದಿನದಲ್ಲಿ ಬಹು ಅಸಾಧಾರಣವೆಂದು ಕಂಡುಕೊಂಡಿದ್ದರು; ಮತ್ತು ಈಗಲೂ ಅದು ಬಹು ಅಸಾಧಾರಣವೆಂದು ನಾವು ಹೇಳಬಹುದು. ಈ ಸಂಗತಿಗಳೆಲ್ಲವೂ ಅರಸನು ಜನರಿಗೆ ಪ್ರಿಯನಾಗುವಂತೆ ನಡೆಸಿದ್ದವು; ತಾವು ಕಂಡವನು ಕೇವಲ ಸ್ವಾರ್ಥಪರನೂ ಸಂಕುಚಿತಭಾವದವನೂ ಆಗಿರದೆ ಅತನು ವಿಶಾಲ ಮನಸ್ಸುಳ್ಳವನೂ ತನ್ನ ವಿರೋಧಿಗಳು, ವೈರಿಗಳು ಇವರ ಕಡೆಗೂ ಔದಾರ್ಯವುಳ್ಳವನೆಂಬುದನ್ನು ಅವರು ಗ್ರಹಿಸಿಕೊಂಡಿದ್ದರು. ದಾವೀದನು ನ್ಯಾಯನೀತಿಗಳ ಬಗ್ಗೆ ವಿಶೇಷ ಮೆಚ್ಚುಗೆಯುಳ್ಳವನೂ ಹಾಗೂ ತನ್ನ ವಿರೋಧಿಗಳ ಬಗ್ಗೆ ಸಹ ವಿಶಾಲವಾದ ಸಹಾನುಭೂತಿಯುಳ್ಳವನೂ ಆಗಿದ್ದಂತೆ ತೋರುತ್ತದೆ.

ಹನ್ನೊಂದು ಕುಲಗಳು ದಾವೀದನು ಇಸ್ರಾಯೇಲ್ಯರೆಲ್ಲರ ಮೇಲೆ ಅರಸನಾಗುವದನ್ನು ತಾವು ಮಾನ್ಯಮಾಡುವದಾಗಿ ದಾವೀದನೊಡನೆ ಪ್ರಸ್ತಾಪಿಸಲು ಒಂದು ನಿಯೋಗವನ್ನು ಕಳುಹಿಸಿದಾಗ ಅರಸನಾದ ದಾವೀದನು ಮೂವತ್ತೇಳು ವರುಷದವನಾಗಿದ್ದನು. ಅಲ್ಲಿಗೆ ಅರಸನಾದ ಸೌಲನ ಮರಣದ ನಂತರ ಏಳುವರೆ ವರುಷಗಳು ಕಳೆದಿದ್ದವು ಹಾಗು ಸಮುವೇಲನು ದಾವೀದನನ್ನು ಮೊದಲು ಅಭಿಷೇಕಿಸಿದ ನಂತರ ಸುಮಾರು ಹದಿನೇಳು ವರುಷಗಳು ಕಳೆದಿರುವ ಸಂಭವವಿರುವದು. ನಂಬಿಕೆ ಮತ್ತು ತಾಳ್ಮೆಗಳು ಆ ವರುಷಗಳಲ್ಲಿನ ಪ್ರತಿಯೊಂದು ಹಂತದಲ್ಲಿಯೂ ಗುರುತುಮಾಡಲ್ಪಟ್ಟಿದ್ದು, ನಮಗೆ ಅರಸನಾದ ದಾವೀದನ ಗುಣಗಳನ್ನು ತೋರಿಸಿಕೊಡಲು ಬೇರೆ ಯಾವ ರೀತಿಯಲ್ಲಿಯೂ ಸಾಧ್ಯವಾಗದು. ಅವುಗಳ ಭವ್ಯತೆಯು ಮುಖ್ಯವಾಗಿ ತೋರಲಾಗಿದ್ದು ಅದರಲ್ಲಿ ದೇವರ ಮೇಲಿನ ಭಕ್ತಿ ಹಾಗು ದೇವರ ಚಿತ್ತಕ್ಕೆ ಆತನ ಅಧೀನತೆಯನ್ನೂ ತೋರ್ಪಡಿಸಲಾಗಿರುವದು.

ಇಸ್ರಾಯೇಲ್ಯರ ಕುಲಗಳೆಲ್ಲವುಗಳ ಮೇಲೆ ಅರಸನಾಗಲು ದಾವೀದನು ನೀಡಿದ ಒಪ್ಪಿಗೆಯು ತನ್ನ ಮೇಲೆ ಮೂರನೆಯ ಸಾರಿ ಅಭಿಷೇಕ ತೈಲವು ಹಾಕಲಾದುದನ್ನು ಗುರುತಿಸಲ್ಪಡುತ್ತದೆ.

ಈ ಮಧ್ಯೆ ಅರಸನಾದ ದಾವೀದನು ತನ್ನ ವೈರಿಗಳನ್ನು ಅಂದರೆ ದೇವರು ಸಂಹರಿಸಬೇಕೆಂದು ಪ್ರಕಟಮಾಡಿ ಹೇಳಿದ್ದ ವೈರಿಗಳನ್ನು ಜಯಿಸುವಲ್ಲಿ ಪ್ರಬಲನಾಗುತ್ತಾ ಬಂದಿದ್ದನು. ನಾವು ನಮ್ಮ ಓದುಗರನ್ನು ಹೊಸದಾಗಿ ನೆನಪಿಸುವದೇನಂದರೆ ಅಮೋರಿಯರ ಅಪರಾಧವು ಪೂರ್ಣವಾಗುತ್ತಾ ಬಂದಿದ್ದು ಹೀಗೆ ಅವರನ್ನು ಭೂಲೋಕದೊಳಗಿಂದ ನಾಶಗೊಳಿಸುವದು ಆತನ [ದೇವರ] ಚಿತ್ತವೆಂಬುದನ್ನು ಸೂಚಿಸಿತ್ತೆಂಬುದು. ಅವರನ್ನು ಯುದ್ಧದಿಂದಾಗಲೀ ಅಥವಾ ವ್ಯಾಧಿಯಿಂದಾಗಲೀ ಇಲ್ಲವೇ ಕ್ಷಾಮದಿಂದಾಗಲೀ ನಾಶಪಡಿಸುವಂಥದ್ದು ಅವರಿಗೆ ಮುಖ್ಯವಾಗಿರಲಿಲ್ಲ; ಆದರೆ ದೇವರು ವಿಧಿಸಿದ ಮರಣ ದಂಡನೆಯ ತೀರ್ಪನ್ನು ಜಾರಿಗೊಳಿಸಬೇಕಾಗಿತ್ತು.

ಹೇಗೂ ಎಲ್ಲಾ ಸಮಯಗಳಲ್ಲಿ ದೇವರು ವ್ಯಾಧಿ ಯುದ್ಧ ಕ್ಷಾಮ ಅಂಟುರೋಗ ಮರಣ ಇವುಗಳು ಲೋಕದಲ್ಲಿ ಪ್ರಬಲವಾಗಿರುವಂತೆ ದೇವರು ಬಿಟ್ಟಿರುತ್ತಾನೆ. ಆತನು ದಿವ್ಯ ವಿಮೋಚಕನ ಮೂಲಕವಾಗಿ, ಮಾನವರ ವಿಮೋಚನೆಗಾಗಿ ಮಾನವರ ರಕ್ಷಣೆಗಾಗಿ, ಸಿದ್ದತೆಯನ್ನು ಮಾಡಿರುತ್ತಾನೆ. ಪಾಪಮರಣಗಳ ಆಳ್ವಿಕೆಯನ್ನು ರದ್ದುಮಾಡಿ ಸೈತಾನನು ಬಂದಿಸಲ್ಪಟ್ಟು ದೈವೀಕ ಸತ್ಯವೆಂಬ ಸೂರ್ಯನ ಕಿರಣಗಳು ಭೂಮಿಯನ್ನು ಆವರಿಸುವಂತಾಗಲು ಮೆಸ್ಸೀಯನ ರಾಜ್ಯವು ಶೀಘ್ರದಲ್ಲಿ ಭೂಲೋಕದ ನಿಯಂತ್ರಣವನ್ನು ಸಾಧಿಸಲಿರುವದು. ಆಗ ದೇವರನ್ನು ಆತನ ನಿಜವಾದ ಸಂದೇಶವನ್ನು ತಿಳಿದು ಗ್ರಹಿಸಿಕೊಳ್ಳ ಸಲುವಾಗಿ ಕುರುಡರ ಕಣ್ಣುಗಳು ಕಾಣುವಂತಾಗಿ ಕಿವುಡರ ಕಿವಿಗಳು ತೆರೆಯಲ್ಪಡುವವು.

ಈ ಮಧ್ಯೆ ಇಸ್ರಾಯೇಲ್ಯರ ಖಡ್ಗದಿಂದ ಸಾವನ್ನಪ್ಪಿದವರೆಲ್ಲರು ಕಾಲವು ಸಂದುಹೋದುದರ ಬಗ್ಗೆ ಏನೂ ತಿಳಿಯದವರಾಗಿರುವರು. ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ಧೂಳಿನಲ್ಲಿ ನಿದ್ರಿಸುವವರೆಲ್ಲರೂ ಎಚ್ಚರಗೊಳ್ಳುವಾಗ ಅವರೂ ಎಚ್ಚರಗೊಳ್ಳುವರು. ಅವರು ಆಗ ನಾವು ಅವರಿಗಾಗಿ ಕೇಳಿಕೊಳ್ಳಲು ಸಾಧ್ಯವಿರುವದಕ್ಕಿಂತಲೂ ಅತಿ ಅನುಕೂಲಕರವಾದ ಸ್ಥಿತಿಗೆ ಬಂದವರಾಗಿ ಅಂದರೆ ಅಜ್ಞಾನ ಮೂಢನಂಬಿಕೆಗಳೆಂಬ ಸಂಕೋಲೆಗಳಿಂದ ವಿಮುಕ್ತರಾಗಿ, ಮೆಸ್ಸೀಯನ ರಾಜ್ಯವು ಅವರಿಗೆ ತಮ್ಮ ಬಲಹೀನತೆ ಅವನತಿಯಿಂದ ಏದೇನಿನಲ್ಲಿ ಕಳಕೊಂಡಿದ್ದು ಕಲ್ವಾರಿಯಲ್ಲಿ ವಿಮೋಚಿಸಲ್ಪಟ್ಟಂಥ ಮಾನವರ ಪರಿಪೂರ್ಣತೆಗೆ ಹಿಂದಿರುಗಿ ಬರಲು ಅವರಿಗೆ ಸಹಾಯ ಮಾಡಲು ಸಿದ್ಧವಾಗಿರುವದು.

*****

ಆತ್ಮಿಕವಾದವು ಪರಿಶೀಲಿಸಲ್ಪಟ್ಟದ್ದು

ರೀಪ್ರಿಂಟ್ಸ್ ಪುಟ 754

"ಸತ್ತವರಲ್ಲಿ ವಿಚಾರಿಸುವವರ ಮತ್ತು ಬೇತಾಳಿಕರ ಹತ್ತಿರ ಹೋಗಬಾರದು ಅವರ ಆಲೋಚನೆಯನ್ನು ಕೇಳಿ ಅಶುದ್ಧರಾಗಬಾರದು" – ಯಾಜಕ 19:31

"ಕಣಿಹೇಳುವವರು, ಶಕುನ ನೋಡುವವರು, ಯಂತ್ರ ಮಂತ್ರಗಳನ್ನು ಮಾಡುವವರು, ಮಾಟಗಾರರು ತಂತ್ರಗಾರರು, ಸತ್ತವರನ್ನು ವಿಚಾರಿಸುವವರು, ಬೇತಾಳಿಕರು, ಪ್ರೇತಸಿದ್ಧರು ಇಂಥವರಲ್ಲಿ ಯಾರೂ ನಿಮ್ಮಲ್ಲಿ ಇರಬಾರದು. ಇಂಥ ಕೆಲಸಗಳನ್ನು ನಡಿಸುವವರು ಯೆಹೋವನಿಗೆ ಅಸಹ್ಯರಾಗಿದ್ದಾರೆ; ಇಂಥಾ ಹೇಯ ಕೃತ್ಯಗಳನ್ನು ಮಾಡುವ ಆ ಜನಾಂಗಗಳನ್ನು ನಿಮ್ಮೆದುರಿನಿಂದ ಹೊರಡಿಸಿಬಿಡುತ್ತಾನಲ್ಲಾ." – ಧರ್ಮೋಪದೇಶ ಕಾಂಡ 18:10–12

ಸತ್ತವರು ಬೇರೊಂದು ಜೀವಲೋಕದಲ್ಲಿ ಅಥವಾ ಜೀವಾಸ್ಥಿತ್ವದಲ್ಲಿ ಜೀವಿಸುತ್ತಿರುವರೆಂಬ ನಂಬಿಕೆಯು ಹೊಸದೇನಲ್ಲ. ಇದು ಪುರಾತನವರ ಧರ್ಮದ [ಬೋಧನೆಯ] ಒಂದು ಅಂಶವಾಗಿದ್ದು, ಎಲ್ಲಾ ಪುರಾಣ ಕತೆಗಳಿಗೆ ಇದು ಮೂಲವಾಗಿತ್ತು. ಸಹಜವಾಗಿಯೇ ಇದು ಈ ಸತ್ತುಹೋದ ವ್ಯಕ್ತಿಗಳು ಕನಿಷ್ಠ ಪಕ್ಷದಲ್ಲಿ ಇಂಥಾ ಸನ್ನಿವೇಶಗಳಲ್ಲಿ ಜೀವಿತರೊಡನೆ ಸಂಪರ್ಕ ಹೊಂದಿರಲು ಸಮರ್ಥರಾಗಿರ–ಬೇಕಿದ್ದುದಲ್ಲದೆ ಅವರು ಸಂಪರ್ಕಹೊಂದಿದ್ದರೆಂಬದನ್ನು ಹಿಂದೆ ವೈಚಾರಿಕತೆಯಾಗಿ ತೋರುವಂತೆ ಮಾಡಲಾಗಿತ್ತು; ಈಗಲೂ ಹೀಗೆಯೇ ಮಾಡಲಾಗಿರುವದು.

ನ್ಯಾಯಸಮ್ಮತವೆಂಬಂತೆ ತೋರುವ ಈ ವೈಚಾರಿಕತೆಯು (ಕೇವಲ ಸತ್ಯವೇದದಲ್ಲಿ ತಿಳಿಸಲಾಗಿರುವ ಅಂಶಗಳನ್ನು) ಅಪಾರ್ಥ ಮಾಡಿಕೊಂಡಿರುವ ಆಧಾರದ ಮೇಲೆ ಅಂದರೆ [ಸಾಯುವಾಗ] ದೇಹದಿಂದ ಹೊರಬಂದ ಮನುಷ್ಯರ ಆತ್ಮಗಳ ರೂಪವೆಂಬ ತತ್ವದ ಮರೆಯಲ್ಲಿ "ದೆವ್ವಗಳು" ಎಂಬ ಮೋಸಗಾರಿಕೆಯ ಅಭ್ಯಾಸವನ್ನು ಮರೆಮಾಚುವ ಮೂಲಕ ಅದಕ್ಕೆ ಬಲವನ್ನು ನೀಡಲಾಗಿರುವದು. ತಮ್ಮ ಗುರುತನ್ನು [ನಿಜರೂಪವನ್ನು] ಮರೆಮಾಚಿದಂಥ ಈ ವಿಧಾನವನ್ನು ಅವರು ಅತ್ಯಾಸಕ್ತಿಯಿಂದ ಬಳಸಿಕೊಂಡು ಅನೇಕರ ಮನಸ್ಸು ಜೀವಗಳ ಮೇಲೆ ಪ್ರಭಾವ ಬೀರುವದನ್ನು ಹೀಗೆ ನಿರಂತರವಾಗಿ ಮುಂದುವರೆಸಿಕೊಂಡು ಬಂದಿರುವರು.

ಆತ್ಮಗಳ ಜೊತೆಯ ಈ ಒಡನಾಟ ಹಾಗು ನಿಕಟ ಸಂಬಂಧವನ್ನು ದೇವರು ಅಸಹ್ಯಕರವಾದ ಹೇಯಕೃತ್ಯವೆಂದು ಪರಿಗಣಿಸಿ ಇದರಲ್ಲಿ ತೊಡಗಿಸಿಕೊಂಡವರಿಗೆ (ಸಂಪರ್ಕ ಮಾಧ್ಯಮಿಗಳಿಗೆ) ಬೆದರಿಕೆಯನ್ನು ಹಾಕಿದವನಾಗಿ ಇಂಥವರನ್ನು ವಿಚಾರಿಸುವ ಸಲುವಾಗಿ ಬರುವವರಿಗೆ ಮರಣದಂಡನೆಯನ್ನು ವಿಧಿಸಿದ್ದನು.

ಆತ್ಮಗಳ ಈ ಸಮಾಲೋಚಿಸುವಿಕೆಯನ್ನು ಕಾನಾನ್ ದೇಶದಲ್ಲಿ ವಾಸಿಸುತ್ತಿದ್ದ ಅನ್ಯಜನರು ಒಂದು ದೊಡ್ಡ ಪ್ರಮಾಣದಲ್ಲಿ ಅಭ್ಯಾಸಿಸುತ್ತಿದ್ದರು. "ಸಂಪ್ರದಾಯಸ್ಥಿಕೆ" ಎಂದು ಕರೆಯಲ್ಪಡುವ ಸಂಪ್ರದಾಯ ವಾದಿಗಳು ಆತ್ಮಿಕವಾದದ ವಿರುದ್ಧವಾಗಿ ಬಹು ದುರ್ಬಲವಾದ ಪ್ರತಿರೋಧವನ್ನು ತೋರ್ಪಡಿಸಿರುವರಾದರೂ ಇದನ್ನು ಸಮರ್ಥವಾಗಿ ನಿಭಾಯಿಸಲು ನಿಜವಾಗಿಯೂ ಬಲವಿಲ್ಲದಿರುವರು; ಯಾಕಂದರೆ ಸಂಪ್ರದಾಯವಾದದ ತತ್ವವು ಇದನ್ನು ಪ್ರೋತ್ಸಾಹಿಸಿ ದೃಢಪಡಿಸುತ್ತಾ ಬಂದಿರುವದು. ಅಲೆಘನಿ ಪಟ್ಟಣದ ಡಬ್ಲ್ಯು. ಜೆ. ರಾಬಿನ್‌ಸನ್ ಎಂಬುವರು ಮಾಡಿರುವ ಒಂದು ಪ್ರಸಂಗದಲ್ಲಿ ಇದನ್ನು ತೋರಿಸಿಕೊಡಲಾಗಿದ್ದು, ಅದನ್ನು ನಾವು 1884ನೇ ಇಸವಿಯ ನವೆಂಬರ್ 3ನೇ ತಾರೀಖಿನ "ಪಿಟ್ಸ್‌ಬರ್ಗ್ ಡೆಸ್ಪಾಚ್" ಎಂಬ ಪತ್ರಿಕೆಯಿಂದ ಆರಿಸಿಕೊಂಡು ಈ ಕೆಳಗೆ ಉಲ್ಲೇಖಿಸಿರುವೆವು:

ಆಧುನಿಕ ಆತ್ಮೀಕವಾದ

"ಕಳೆದ ಸಂಜೆ ಅಲೆಘನಿಯ ಫರ್ಟ್ಸ್ ಯುನೈಟೆಡ್ ಪ್ರೆಸ್ಬಿಟೇರಿಯನ್ ಚರ್ಚ್‌ನಲ್ಲಿ ಒಂದು ಅಸಾಧಾರಣವಾದ ದೊಡ್ಡ ಸಭೆಯು "ಆಧುನಿಕ ಪ್ರೇತಾತ್ಮವಾದ" ಬಗ್ಗೆ ಕುತೂಹಲಕಾರಿಯೂ ತಿಳುವಳಿಕೆದಾಯಕವೂ ಆದ ಒಂದು ವಾಕ್ಯಸಂದೇಶವನ್ನು ಆ ಸಭೆಯ ಪಾಲಕರಾದ ರೆವರೆಂಡ್ ಡಬ್ಲ್ಯೂ ಜೇ ರಾಬಿನ್‌ಸನ್ ಎಂಬುವರು ನೀಡುವುದನ್ನು ಕೇಳಲು ನೆರೆದುಬಂದಿತ್ತು. ಅವರು ತಮ್ಮ [ಸಂದೇಶದ] ಪಠ್ಯಭಾಗಕ್ಕಾಗಿ ಈ ಮುಂದಿನ ವಾಕ್ಯಭಾಗವನ್ನು ಆದುಕೊಂಡಿದ್ದರು: "ಮೋಶೆಯು ಧರ್ಮಶಾಸ್ತ್ರವೂ ಪ್ರವಾಧಿಗಳ ಗ್ರಂಥಗಳು ಅವರಲ್ಲಿ ಅವೆ;... ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನು ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ." ತಮ್ಮ ಪ್ರಸ್ತಾವನೆಯ ಪೀಠಿಕೆಯಲ್ಲಿ ಇವರು ಹೇಳಿದ್ದು–ಆತ್ಮಿಕ ಜಗತ್ತಿನಿಂದ ಯಾವುದೇ ಪ್ರಾಣಾತ್ಮವು ಹಿಂದಿರುಗಿ ಬರುವ ಅಗತ್ಯವಿರುವುದು ನನಗೆ ಕಾಣುವದಿಲ್ಲ; ಕಾರಣ ಇದರ ಬಗ್ಗೆ ಅವರಿಗೆ ಸತ್ಯವೇದದಲ್ಲಿರುವ ದೇವರ ವಾಕ್ಯದಲ್ಲಿ ಈಗಾಗಲೇ ಪ್ರಕಟಿಸಿ ಹೇಳಿರುವದಕ್ಕಿಂತಲೂ ಯಾವುದೇ ಹೆಚ್ಚಿನದನ್ನು ತಿಳಿಸುವದಕ್ಕೆ ಸಾಧ್ಯವಾಗದು. ಅವರು ಆರಸನಾದ ದಾವೀದನು ತನ್ನ ಮಗನಾದ ಅಬ್ಷಾಲೋಮನ ಜೀವಾತ್ಮವು ಹಿಂದಿರುಗುವ ಬಗ್ಗೆ ಆತನು ಘೋಷಣೆಯನ್ನು ಉಲ್ಲೇಖಿಸಿ ಹೇಳಿರುವರು. ದಾವೀದನು ಹೇಳಿದ್ದು–"ನಾನಾಗಿ ಅವನ ಬಳಿಗೆ ಹೋಗಬೇಕೇ ಹೊರತು ಅವನು ನನ್ನ ಬಳಿಗೆ ಬರುವದಿಲ್ಲ." ಅಲ್ಲದೆ ಪುನಃ ಯೋಬನು ಒತ್ತುಕೊಟ್ಟು ಪ್ರಕಟಿಸಿ ಹೇಳಿದ್ದು–"ಮನುಷ್ಯರು ಮಲಗಿಕೊಂಡು ಏಳದೇ ಇರುವರು; ಆಕಾಶವು ಅಳಿದುಹೋಗುವ ತನಕ ಅವರು ನಿದ್ರೆಯಿಂದ ತಿಳಿಯುವದಿಲ್ಲ, ಎಬ್ಬಿಸಲ್ಪಡುವದಿಲ್ಲ." ಆದರೆ ಪ್ರಾಣಾತ್ಮವು ಆತ್ಮಿಕ ಜಗತ್ತಿನಿಂದ ಹಿಂದಿರುಗಿ ಬಂದುದರ ಬಗ್ಗೆ ಕೇವಲ ಮೂರು

ದೃಷ್ಟಾಂತದ ದಾಖಲೆಗಳು ಸತ್ಯವೇದದಲ್ಲಿ ಒಳಗೊಂಡಿರುವದು. ಯೇಸುವು ತನ್ನ ಮೂವರು ಶಿಷ್ಯರನ್ನು ಪರ್ವತದ ಮೇಲೆ ಕರಕೊಂಡು ಹೋಗಿದ್ದಾಗ, ಅವರು ನಿದ್ರೆಹೋಗಿದ್ದರು, ಹಾಗು ಅವರು ಎಚ್ಚೆತ್ತಾಗ ಮೋಶೆ ಮತ್ತು ಎಲೀಯನನ್ನು ಕಂಡದ್ದು ಇವುಗಳಲ್ಲಿ ಒಂದನೇ ಸಂಗತಿಯಾಗಿತ್ತು; ಅರಸನಾದ ಸೌಲನಿಗಾದ ಸಮುವೇಲನ ವ್ಯಕ್ತಿದರ್ಶನವು ಮರುದಿನ ಸೌಲನ ಮರಣದ ಬಗ್ಗೆ ಮುನ್ನೆಚ್ಚರಿಕೆ ನೀಡುವ ಹಾಗು ದಾವೀದನ ಆಳ್ವಿಕೆಯು ಸಮೀಪಿಸುತ್ತಿರುವಂಥದ್ದನ್ನು ತಿಳಿಸಿದ್ದು ಮತ್ತೊಂದು ವಿಷಯವಾಗಿತ್ತು. ಅಲ್ಲದೆ ಲಾಜರನನ್ನು ಬಾಧಿಸಿ ಆತನ ಜೀವನಾಗತ್ಯತೆಗಳ ಬೇಡಿಕೆಗೆ ಕಿವಿಯನ್ನು ಮುಚ್ಚಿಕೊಂಡಿದ್ದ ಒಬ್ಬ ಕಾಲ್ಪನಿಕ ಐಶ್ವರ್ಯವಂತ ವ್ಯಕ್ತಿಯ ಸಂಗತಿಯು ಉಳಿದ ಮತ್ತೊಂದಾಗಿತ್ತು.

ಸಮುವೇಲನು ಬರುತ್ತಿದ್ದುದರ ವಿಷಯವಾಗಿ ಹೇಳುವದಾದರೆ, ಸೌಲನಿಗೆ ತಾನು ಮನಃಪೂರ್ವಕವಾಗಿ ಹಾಗು ದೇವರ ಆಜ್ಞೆಗೆ ಅವಿಧೇಯನಾದುದಕ್ಕಾಗಿ ತನಗೆ ಅಂತ್ಯದಲ್ಲಿ ಏನು ಸಂಭವಿಸುವದೆಂಬುದನ್ನು ತಿಳಿದವನಾಗಿದ್ದರಿಂದ ಇದರ ಅಗತ್ಯವಿರಲಿಲ್ಲವೆಂಬುದು; ಆದರೆ ಸಮುವೇಲನು ಬಂದದ್ದು ಇಂಥಾ ಸಂದರ್ಶನವು ಪ್ರಯೋಜನವಾಗದೆಂಬುದನ್ನು ಮನುಷ್ಯರಿಗೆ ಮನವರಿಕೆಮಾಡಿಕೊಡುವ ಸಲುವಾಗಿತ್ತೆಂಬದು ಸ್ಪಷ್ಟ; ಯಾಕಂದರೆ ಈಗಾಗಲೇ ತಿಳಿದಿರುವದನ್ನು ತಿಳಿಸಲು ಮಾತ್ರ ಆತನಿಗೆ ಸಾಧ್ಯವಿತ್ತು. ಮೋಶೆಯು ಅನೇಕ ಶತಮಾನಗಳ ಹಿಂದೆಯೇ ಸತ್ತುಹೋಗಿದ್ದನು. ಎಲೀಯನು 150 ವರುಷಗಳ ಹಿಂದೆ ಬೇರೊಂದು ಲೋಕಕ್ಕೆ ತೆರಳಿದ್ದನು. ಎಲ್ಲರೂ ಕೇಳಿಸಿಕೊಂಡಿರುವ ಯಾತನಾಸ್ಥಳವಾದ ನರಕದ ಸಂಬಂಧ–ವಾಗಿತ್ತು ಹೆಸರು ತಿಳಿಯದ ಐಶ್ವರ್ಯವಂತನ ಸಂದೇಶ. ಭೂಲೋಕದಲ್ಲಿ ಪಶ್ಚಾತ್ತಾಪವೆಂಬದು ಮಾತ್ರ ಒಬ್ಬನ ಪ್ರಾಣಾತ್ಮವನ್ನು ರಕ್ಷಿಸುವದೆಂದೂ, ಅಲ್ಲದೆ ನರಕದಲ್ಲಿ ಇಂಥಾ ಒಂದು ಸಂಗತಿಯು ಅಸಾಧ್ಯವೆಂದು ಆತನು ಅವರಿಗೆ ತಿಳಿಸಿದ್ದನು. ಮತ್ತು ಈಗಾಗಲೇ ಶಾಸ್ತ್ರವಚನಗಳ ಪಠಣವನ್ನು ಇಲ್ಲವೇ ವಿವರಿಸಿದ್ದನ್ನು ಕೇಳಿದ್ದವರಿಗೆ ಸಹ ಇದು ಚಿರಪರಿಚಿತವಾಗಿತ್ತು. ಇವೆಲ್ಲವೂ ಬಂದಿರುವಂಥದ್ದು ಸಂದೇಶಗಳೊಂದಿಗೆ ಮತ್ತು ಕೇವಲ ದೇವರು ಸತತವಾಗಿ ಮನುಷ್ಯರ ದೃಷ್ಟಿಯ ಹಾಗು ಮನಸ್ಸಿನ ಎದುರಿನಲ್ಲಿ ಇಟ್ಟಿರುವಂಥದ್ದನ್ನು ವರದಿಮಾಡಲಾದ ಅಂಶಗಳೊಂದಿಗೆ ಮಾತ್ರವಾಗಿತ್ತು. ಆದರೆ ಸತ್ಯವೇದದಲ್ಲಿ ಪ್ರಕಟಿಸಲಾದ ಸಂಗತಿಗಳು ಎಷ್ಟು ವಿಭಿನ್ನವಾಗಿತ್ತು ಈ ದಿನದಲ್ಲಿ ಹೇಳಲ್ಪಟ್ಟವರಿಗೆ. ಎಲ್ಲಾ ಕಾಲಗಳಲ್ಲಿ ಕೇವಲ ಒಬ್ಬರೇ ಒಂದು ಕರೆಗೆ ಸ್ಪಂಧಿಸಿದವರಾಗಿ ಕಾಣಿಸಿಕೊಂಡಿದ್ದಂಥದ್ದು. ಆನಂತರ ಅವರ ಬರುವಿಕೆಯ ವಿಧಾನವು. ಹಿಂದಿನ ಕಾಲದಲ್ಲಿ ಸತ್ಯಸಂದೇಶಗಳನ್ನು ನುಡಿದಿದ್ದವರ ಧ್ವನಿಗಳಿರುವಲ್ಲಿ, ಇಂದಿನ ಕಾಲದವರೆಂದು ಕರೆಯಲ್ಪಡುವವರ ಬಗ್ಗೆ ಹೇಳುವದಾದರೆ ಇದು ಕೇವಲ ಕುಟ್ಟುವಿಕೆಯಾಗಿದ್ದು ಅದು ಆತ್ಮಿಕ ಜಗತ್ತಿನಿಂದ ಹಿಂದಿರುಗುವವರನ್ನು ಹೊರತುಪಡಿಸಿ ಬೇರೆ ಯಾವುದನ್ನಾದರೂ ಸೂಚಿಸುವಂಥದ್ದಾಗಿತ್ತು. ಸತ್ಯವೇದವು ಹೇಳಲ್ಪಟ್ಟ ಸಂದೇಶವು ಸತ್ಯದ ವಿಷಯವಾಗಿರಲು, ಈ ಆಧುನಿಕ ಕಾಲದವರು ನುಡಿಯುವಂಥದ್ದು ಅತಿ ಸುಧೀರ್ಘವಾದ ಅನಗತ್ಯ ಆಚಾರಗಳಾಗಿದ್ದು, ಈ ಆತ್ಮಗಳು ಬೇರೆ ಏನನ್ನಾದರೂ ಕಲಿತುಕೊಂಡಿದ್ದಾಗ್ಯೂ ಅವು ತಮ್ಮ ಹಿಂದಿನ ವಿವೇಚನೆಯನ್ನು ಕಳೆದುಕೊಂಡಿದ್ದವು. ಅವರು ಬಡಬಡಿಕೆಯ ವ್ಯರ್ಥ ವಿಷಯಗಳನ್ನು ನುಡಿಯುವರು. ಇವುಗಳ ವ್ಯತ್ಯಾಸಗಳು ಸತ್ಯಕ್ಕೂ ಅಸತ್ಯಕ್ಕೂ ಬೆಳಕಿಗೂ ಕತ್ತಲೆಗೂ ನಡುವಿನಲ್ಲಿರುವದು. ಎಲ್ಲಾ ಮನುಷ್ಯರು ತಿಳಿಯಲು ಅಗತ್ಯವಿರುವ ಸಂಗತಿಗಳನ್ನು ಸತ್ಯವೇದವು ಒಳಗೊಂಡಿರುವದು; ಮತ್ತು ಇದರಲ್ಲಿ ಸತ್ತವರ ವಿಷಯವಾಗಿರುವ ಸಾಕ್ಷಾಧಾರಗಳನ್ನು ಕಂಡುಕೊಳ್ಳಲಾಗಿರುವದು. "ಅಲ್ಲದೆ ಈಗ ಸತ್ತವರು ನಮ್ಮ ಬಳಿಗೆ ಹಿಂದಿರುಗದೇ ಇರುವಲ್ಲಿ, ನಾವು ತ್ವರಿತವಾಗಿ ಅವರ ಬಳಿಗೆ ಹೋಗುತ್ತಿದ್ದೇವೆ. ಈ ಲೋಕವನ್ನು ಹಾಗು ನಿಮ್ಮ ಸತ್ಯವೇದವನ್ನು ಅಧ್ಯಯನಮಾಡಿ ಬರಲಿರುವ ಲೋಕಕ್ಕಾಗಿ ಸಿದ್ಧರಾಗಿರಿ," ಇವು ಆತನ ವಾಕ್ಯಸಂದೇಶದ ಮುಕ್ತಾಯ ನುಡಿಗಳಾಗಿದ್ದವು.

ಇದನ್ನು ಸತ್ತವರ ಸ್ಥಿತಿ ಹಾಗು [ಅವರ] ವಾಸಸ್ಥಾನದ ಬಗ್ಗೆ "ಸಂಪ್ರದಾಯಸ್ಥರು " ವ್ಯಕ್ತಪಡಿಸಲಾದ ಅಭಿಪ್ರಾಯವೆಂದು ಪರಿಗಣಿಸಬಹುದು.

"ಕೇವಲ ಒಬ್ಬರೇ (ಡಾ. ರಾಬಿನ್‌ಸನ್ ಹೇಳುವದು) ಎಲ್ಲಾ ಕಾಲಗಳಲ್ಲಿ ಒಂದು ಕರೆಗೆ ಪ್ರತಿಸ್ಪಂದಿಸಿದ್ದುದು" ಆದರೆ ಅದು ಒಬ್ಬನೇ ಆಗಿರಲು, ಹೆಚ್ಚು ಜನರು ಏಕಿರಬಾರದು? ಈ ಒಬ್ಬನು ದೇವರ ನಂಬಿಗಸ್ತ ಸೇವಕನಾದ ಸಮುವೇಲನಾಗಿದ್ದನು. ಇದು ನಿಜವೇ ಆದಲ್ಲಿ, ದೇವರ ನೀತಿವಂತನಾದ ಸೇವಕನು ಒಬ್ಬ ದುಷ್ಟ ಸಂಪರ್ಕ ಮಾಧ್ಯಮಿಯ ಅಧೀನದಲ್ಲಿದ್ದನೆಂದೂ ಅಲ್ಲದೆ ದೇವರ ಸೇವಕರೆಲ್ಲರೂ ನಿಸ್ಸಂದೇಹವಾಗಿ ಇದೇ ರೀತಿಯ ಅಧಿಕಾರದ ಅಧೀನದಲ್ಲಿದ್ದು, ಮಹಾ ದೇವರು ಸಮುವೇಲನನ್ನು ತನ್ನ ಚಿತ್ತಕ್ಕೆ ಬಹು ಅಸಹ್ಯಕರವಾದ, ಈ ಹೇಯವಾದ್ದರಿಂದ ಕಾಪಾಡಲು ಅಧಿಕಾರ ಇಲ್ಲದೇ ಹೋದಲ್ಲಿ ತನ್ನ ಮಕ್ಕಳಲ್ಲಿ ಯಾರನ್ನಾದರೂ ಅಂಧಕಾರದ ಅಧಿಪತಿಗಳಿಂದ ಕಾಪಾಡುವದನ್ನು ನಿರೀಕ್ಷಿಸಲು ಯಾವನಿಗಾದರೂ ಹೇಗೆ ಸಾಧ್ಯ? ನಮ್ಮ ನ್ಯಾಯ ಸಮ್ಮತವಾದ ಕೋಪವನ್ನು ವ್ಯಕ್ತಪಡಿಸಲು ಹಾಗು ದೇವರ ಹಾಗು ದೇವರ ವಾಕ್ಯದ ಬಗ್ಗೆ ಇರುವ ಇಂಥಾ ಕುರುಡಾದ ಹಾಗು ದಾರಿತಪ್ಪಿದ ಅಭಿಪ್ರಾಯವನ್ನು ತುಚ್ಛೀಕರಿಸಲು ನಮಗೆ ಶಬ್ದಗಳು ಸಿಗಲು ಸಾಧ್ಯವಾಗದು. ಉನ್ನತ ಅಧಿಕಾರಸ್ಥಾನದಲ್ಲಿರುವ ಬೋಧಕರು ದೇವರ ವಾಕ್ಯವನ್ನು ತಪ್ಪಾಗಿ ಉಲ್ಲೇಖಿಮಾಡಿ ನೇರವಾಗಿ ಪ್ರತಿರೋಧಿಸುತ್ತರುವಲ್ಲಿ, ಆತ್ಮಿಕವಾದವು ಹಬ್ಬುತ್ತಿರುವದಕ್ಕೆ ಆಶ್ಚರ್ಯವೇನಾದರೂ ಉಂಟೋ? ದೇವರ ವಾಕ್ಯವು ಸಾರಿ ಹೇಳುವದು: "ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ, ನೀನು ಸೇರಬೇಕಾದ ಪಾತಾಳದಲ್ಲಿ ಯಾವ ಕೆಲಸವೂ ಯುಕ್ತಿಯೂ ತಿಳಿವಳಿಕೆಯೂ ಜ್ಞಾನವೂ ಇರುವದಿಲ್ಲ." (ಪ್ರಸಂಗಿ 9:5,10) "ಮೃತರಿಗೆ ನಿನ್ನ ಜ್ಞಾಪಕವಿರುವದಿಲ್ಲವಲ್ಲಾ; ಪಾತಾಳದಲ್ಲಿ ನಿನ್ನನ್ನು ಸ್ತುತಿಸುವವರು ಯಾರು?" (ಕೀರ್ತನೆ 6:5) ಸಂಪ್ರದಾಯವಾದ ಮತ್ತು ರೋಮನಿಸಮ್ ಹಾಗು ಆತ್ಮಿಕವಾದ ಎಂದು ಕರೆಯಲ್ಪಡುವದು ಸರಿಯಾಗಿದ್ದು; ಹಾಗು ಜೀವದ ಗುಣಲಕ್ಷಣ ಮತ್ತು ಸೂಕ್ಷತೆಗಳನ್ನು ಹೊಂದಿರುವ ಮೃತರ ವಿಷಯವು ಸರಿಯಿದ್ದು, ಮತ್ತು ದೇವರ ವಾಕ್ಯವು ಒಂದು ಸುಳ್ಳಾಗಿರಬೇಕು, ಅಥವಾ: "ಸತ್ತವರಿಗೋ ಯಾವ

ತಿಳುವಳಿಕೆಯೂ ಇರುವದಿಲ್ಲ." ಎಂಬ ದೇವರ ವಾಕ್ಯವು ಸತ್ಯವಾಗಿದ್ದು ಮತ್ತು ಈ ಮಾನವ ನಿರ್ಮಿತ ವ್ಯವಸ್ಥಾಪನೆಗಳು ಬೋಧಿಸುವದು ಸುಳ್ಳಾಗಿರುವದು. ಇವೆರಡರ ನಡುವಿನ ಮಾರ್ಗವಿರಲು [ಅಭಿಪ್ರಾಯ] ಸಾಧ್ಯವಿಲ್ಲ. ನಾವು [ಈ] ಒಂದನ್ನು ಅಥವಾ [ಆ] ಮತ್ತೊಂದನ್ನು ತಿರಸ್ಕರಿಸಬೇಕು.

ಡಾ. ರಾಬಿನ್‌ಸನ್‌ರವರು ಯೋಬನ [ವಾಕ್ಯವನ್ನು] ಸರಿಯಾಗಿ ಉಲ್ಲೇಖಿಸಿದ್ದಲ್ಲಿ ಅವರು ತಮ್ಮ ವಾದವನ್ನು ಸ್ವತಃ ತಾವೇ ಕೆಡವಿಕೊಳ್ಳುವರು. ಯೋಬನು (14:10–12ರಲ್ಲಿ) ಹೇಳುವದು–"ಮನುಷ್ಯನಾದರೋ ಸತ್ತು ಬೋರಲ ಬೀಳುವನು, ಪ್ರಾಣಹೋಗಲು ಅವನು ಎಲ್ಲಿಯೋ! ಸರೋವರದ ನೀರು ಬತ್ತುವಂತೆಯೂ ನದಿಯು ಆರಿ ಒಣಗುವ ಹಾಗೆಯೂ ಮನುಷ್ಯರು ಮಲಗಿಕೊಂಡು ಏಳದೇ ಇರುವರು; ಆಕಾಶವು ಅಳಿದುಹೋಗುವ ತನಕ ಅವರು ನಿದ್ರೆತಿಳಿಯುವದಿಲ್ಲ, ಎಬ್ಬಿಸಲ್ಪಡುವದಿಲ್ಲ."

ಇದಕ್ಕಿಂತಲೂ ಹೆಚ್ಚು ಸರಳವಾಗಿ ಏನನ್ನಾದರೂ ಹೇಳಲು ಸಾಧ್ಯವೇ? ಅದು ಜೀವದ ಲಕ್ಷಣವನ್ನು ಅಂದರೆ ಜ್ಞಾನ, ತಿಳುವಳಿಕೆ, ಕಾರ್ಯ, ಯುಕ್ತಿ, ನೆನಪು ಅಥವಾ ಕೃತಜ್ಞತಾಸ್ತುತಿ ಈ ಪ್ರತಿಯೊಂದು ಅಂಶವೂ ಇಲ್ಲದಿರುವಂಥದ್ದನ್ನು ತೋರಿಸುವದು. ಅಲ್ಲದೆ ಈ [ಇದರ] ದಂಡನೆಯಿಂದ ಯಾರೂ ವಿನಾಯಿತಿಪಡೆಯುವದಿಲ್ಲ. "ತನ್ನ ಪ್ರಾಣವನ್ನು (ಜೀವವನ್ನು) ಇದರ ಅಧಿಕಾರದಿಂದ ಬಿಡುಗಡೆ ಮಾಡಲು ಯಾವ ಮನುಷ್ಯನಿಗೂ ಸಾಧ್ಯವಿಲ್ಲ." ಅವನು "ಜೀವಿತರ ಲೋಕದಿಂದ" ತೆಗೆಯಲ್ಪಟ್ಟಿದ್ದಾನೆ–ಜೀವನವೆಲ್ಲವನ್ನೂ ಆ ಕ್ಷಣಕ್ಕೆ ದೇವರ ವಾಕ್ಯದ ಮೂಲಕ ತೋರಲಾಗಿರುವದು–"ಪ್ರಾಣಹೋಗಲು ಅವನು ಎಲ್ಲಿಯೋ!" – **ಪುನರುತ್ಥಾನದ** ಮೂಲಕವಾಗಿ ದೇವರ ಉದ್ದೇಶದಲ್ಲಿ ತನಗೆ ಸ್ಥಾನವಿರುವದೆಂಬುದನ್ನು ಅವನು ಗ್ರಹಿಸಿಕೊಳ್ಳಬೇಕೇ ಹೊರತು ಅವನಿಗೆ ಯಾವ ಅಸ್ಥಿತ್ವವೂ ಇನ್ನು ಇರುವದಿಲ್ಲವೆಂಬದು ಇದರಲ್ಲಿ ಅಡಕವಾಗಿರುತ್ತದೆ.

ಪಾಪದ ಶಿಕ್ಷೆ ಅಥವಾ ಸಂಬಳವು ಮರಣ–ಅಂದರೆ ಜೀವದ ನಂದಿಹೋಗುವಿಕೆ. ಇದನ್ನು ತಪ್ಪಿಸಿಕೊಳ್ಳುವಂತಿಲ್ಲ, ಇಲ್ಲವೇ ಇದರಿಂದ ಎದ್ದುಬರುವ ಯಾವ ಸಾಧ್ಯತೆಗಳು ಇಲ್ಲ; "ಎದ್ದು ಬರುವದಿಲ್ಲ" ಮತ್ತು "ಎಚ್ಚರವಾಗುವದಿಲ್ಲ" ಎಂಬ ಈ ವಾಕ್ಯಗಳ ಮೂಲಕವಾಗಿ ಇದರಲ್ಲಿ ಯಾವ ಸಂಭವನೀಯವೂ ಇಲ್ಲದ ರೀತಿಯಲ್ಲಿ [ಬಹು ಖಂಡಿತವಾಗಿ] ಸಾಬೀತು–ಪಡಿಸಲಾಗಿರುವದು. ಆದರೂ ಒಂದು **ನಿಗದಿತ ಕಾಲದಲ್ಲಿ** ಸತ್ತವರು ಎದ್ದುಬರುವರು ಅಥವಾ ಪುನರುತ್ಥಾನವಾಗುವರು ಎಂಬುದು ಈ ವಾಕ್ಯದ ಅಂತ್ಯಭಾಗದಲ್ಲಿ ಇರುವದು ಸ್ಪಷ್ಟವಾಗಿ–ರುವದು–ಅದೇನಂದರೆ ಆಕಾಶವು ಇಲ್ಲದೆ ಹೋಗುವದು; ಅಂದರೆ ಹೊಸ ವ್ಯವಸ್ಥೆಯು ಪರಿಚಯಿಸಲ್ಪಡುವವರೆಗೂ; ಈಗಿನ ಸಂಗತಿಯು ಅಲುಗಾಡಿಸಲ್ಪಟ್ಟು ತೆಗೆಯಲ್ಪಡುತ್ತಿರುವದೆಂದು ಯೇಸುವಿನಿಂದ (ಮತ್ತಾಯ 24:29) ಮತ್ತು ಪೌಲನಿಂದ (ಇಬ್ರೀಯ 12:26–27) ಉಲ್ಲೇಖವಾಗಿರುವದು. ದೇವರ ವಾಕ್ಯದಲ್ಲಿನ ಹೇಳಿಕೆಗಳಿಗೆ ಯಾವ ವಿನಾಯಿತಿಯೂ ಸಾಧ್ಯವಿರುವದಿಲ್ಲ, ಸತ್ತವರೊಂದಿಗೆ ಸಂಪರ್ಕಮಾಡುವ ಸಾಧ್ಯತೆಗಳಿರುವದೆಂಬದು ಒಂದು ಭ್ರಾಂತಿಯೆಂಬುದು ಸ್ಪಷ್ಟ. ಆತ್ಮಿಕವಾದದಲ್ಲಿ ಅಭ್ಯಾಸಿಸಲಾದ ವಂಚನೆಯು ಬಹು ಘೋರವಾದದ್ದು, ಕಾರಣ ಇಲ್ಲಿ ಮನುಷ್ಯರನ್ನಲ್ಲ, ದೆವ್ವಗಳನ್ನು ಸಂಪರ್ಕಿಸಲಾಗುತ್ತಿರುವದು. ಇದಕ್ಕೆ ಹೇರಳವಾದ ಸಾಕ್ಷಿ ಪ್ರಮಾಣಗಳನ್ನು ದೇವರ ವಾಕ್ಯದಲ್ಲಿ ಒದಗಿಸಲಾಗಿರುವದು. ಹೀಗಾಗಿಯೂ "ಸಂಪ್ರದಾಯವಾದ" [ಆರ್ಥೋಡಾಕ್ಸಿ] ಎಂಬದು ಈ ಹೇಯಕೃತ್ಯವನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ಬಲಹೀನವಾಗಿರುವದಕ್ಕೆ ಕಾರಣ ಮರಣವೆಂಬುದರ ಬಗ್ಗೆ ಇದು ಸುಳ್ಳು ಸಿದ್ಧಾಂತವನ್ನು ಅನುಸರಣೆಮಾಡುತ್ತಿರುವಂಥದ್ದು ಹಾಗು ಇದಕ್ಕೆ ಭಿನ್ನವಾಗಿರುವ ದೇವರ ವಾಕ್ಯದ ಸಾಕ್ಷಿಯನ್ನು ಅರಿತುಕೊಳ್ಳಲು ಮನಸ್ಸಾರೆ ಇಚ್ಛಿಸದೇ ಇರುವದೇ.

ಆಧುನಿಕ ಆತ್ಮಿಕವಾದದ ಸಂಪರ್ಕ ಮಾಧ್ಯಮಿಗಳನ್ನು ಹಿಂದಿನ ಕಾಲದಲ್ಲಿ ಸತ್ತವರಲ್ಲಿ ವಿಚಾರಿಸುವವರೊಡನೆ ಗುರುತಿಸಲಾಗಿರುವದು. ಇವರು ಮಾಟಗಾತಿ ಮತ್ತು ಬೇತಾಳಿಕರು ಎಂಬ ಹೆಸರಿನವರಾಗಿದ್ದು ಈಗ ಮಾಡುತ್ತಿರುವಂತೆ ಆಗಲೂ ಅವರು ಸತ್ತವರನ್ನು ಬರಮಾಡಿ ಅವರೊಂದಿಗೆ ಸಂಪರ್ಕ–ಮಾಡುವ ಶಕ್ತಿಯು ತಮ್ಮಲ್ಲಿರುವದಾಗಿ ಹೇಳಿಕೊಂಡಿದ್ದರು. ಇದನ್ನು ಏಂದೋರಿನ ಮಾಟಗಾತಿಯು ಸೌಲನ ಕೋರಿಕೆಗೆ ಕೊಟ್ಟ ಈ ಉತ್ತರದಲ್ಲಿ ತೋರಿಸಲಾಗಿತ್ತು: "ನಿನಗೆ ಯಾರನ್ನು ಬರಮಾಡಬೇಕು?" ಆಗ ಸೌಲನ ಉತ್ತರ: "ಸಮುವೇಲನನ್ನು [ಬರಮಾಡು]" ಎಂದಾಗಿತ್ತು. (1 ಸಮುವೇಲ 28:11) ಆಕೆ ಯಾರನ್ನು ಬರಮಾಡಿದ್ದಳೋ ಅವನು ಸಮುವೇಲನಿರಬೇಕೆಂದು ಊಹಿಸಲಾಗಿತ್ತು; ಅಲ್ಲದೆ ಈಗ ಅದೇ ಆತ್ಮಗಳು ಸತ್ತು ಹೋಗಿರುವ ಜೀವಿತರ ಮಿತ್ರರೆಂದು ಭಾವಿಸಲಾಗಿರುವದು. ಡಾ. ರಾಬಿನ್‌ಸನ್‌ರವರು ಹೇಳಿಕೊಂಡಿರುವಂತೆ ಈ ಆತ್ಮಗಳು ಸತ್ಯವನ್ನು ಹೇಳಿದ್ದು, ಮತ್ತು "ಸಂಪ್ರದಾಯವಾದಸ್ಥರ" ಸಿದ್ಧಾಂತವು ಸರಿಯೇ ಆದಲ್ಲಿ ದುಷ್ಟ ಸೌಲನು ಮರುದಿನ ನೀತಿವಂತನಾದ ಸಮುವೇಲನೊಡನೆ ಇರಬೇಕಾಗುತ್ತಿತ್ತು.

ಹೇಗೂ ಸತ್ತವರ ಆತ್ಮಗಳೊಡನೆ ಮಾಡುವ ಈ ಸಮಾಲೋಚನೆಯು ದೇವರು ವ್ಯಕ್ತಗೊಳಿಸಿರುವ ಆಜ್ಞೆಗೆ ವಿರುದ್ಧವಾಗಿದ್ದಲ್ಲಿ, "ಸತ್ತವರಲ್ಲಿ ವಿಚಾರಿಸುವವರ ಮತ್ತು ಬೇತಾಳಿಕರ ಹತ್ತಿರ ಹೋಗಬಾರದು; ಅವರ ಆಲೋಚನೆಯನ್ನು ಕೇಳಿ ಅಶುದ್ಧರಾಗಬಾರದು..." (ಯಾಜಕಕಾಂಡ 19:31), ಇದನ್ನು ದುಷ್ಟತನವೆಂದು ತಿರಸ್ಕರಿಸಿರುವ ದೇವರ ಪ್ರವಾದಿಯು ಈಗ ಸತ್ತಿದ್ದು ಅವನು ಇದರಲ್ಲಿ [ಈ ವಿಷಯದಲ್ಲಿ] ಭಾಗಿಯಾಗಿರಲು ಹೇಗೆ ಸಾಧ್ಯ? ಅಲ್ಲದೆ ಮನಃಪೂರ್ವಕವಾಗಿಯೋ ಅಥವಾ ಮನಃಪೂರ್ವಕವಾಗಿಯಲ್ಲವೋ ಕರೆಯಲ್ಪಟ್ಟು, ಈ ಕರುಣೆಯ ನಿಮಿತ್ತ, ಈ ಎರಡು ಸಂಗತಿಗಳಲ್ಲಿ ಯಾವುದಾದರೂ ಒಂದರಲ್ಲಿ ಅಂಧಕಾರದ ಅಧಿಕಾರಕ್ಕೆ ಒಳಗಾಗಿ ಮರಣದಂಡನೆಗೆ ಯೋಗ್ಯ–ನೆಂದು ಎಣಿಸಲ್ಪಟ್ಟಿರುವವರೊಡನೆ ಈ ಅನ್ಯೋನ್ಯತೆಯಲ್ಲಿರಲು ಹೇಗೆ ಸಾಧ್ಯವಿರುವದು.

ಅದು ಸಮುವೇಲನು ಅಲ್ಲದೇ ಇದ್ದಲ್ಲಿ, ಅದು ಯಾರಾಗಿತ್ತು? ನಾವು ಉತ್ತರಿಸುವದು: ಅದು ಸಮುವೇಲನನ್ನು ವ್ಯಕ್ತೀಕರಿಸಿದ್ದ ಅಸತ್ಯವಾಡುವ ಒಂದು ದುರಾತ್ಮವಾಗಿತ್ತೆಂಬುದು.

ಈ ದುರಾತ್ಮಗಳು ಮನುಷ್ಯರನ್ನು ತಮ್ಮ ದುರ್ಭಾವದ ಅಧೀನಕ್ಕೆ ಒಳಪಡಿಸಿಕೊಳ್ಳುವ ಪ್ರತಿಯೊಂದು ಅವಕಾಶವನ್ನು ಅತ್ಯಾಸಕ್ತಿಯಿಂದ ಸದುಪಯೋಗ ಮಾಡಿಕೊಂಡು– "ಕಣಿಹೇಳುವವರು, ಶಕುನನೋಡುವವರು, ಯಂತ್ರ–ಮಂತ್ರಗಳನ್ನು ಮಾಡುವವರು, ಮಾಟಗಾರರು, ತಂತ್ರಗಾರರು, ಸತ್ತವರನ್ನು ವಿಚಾರಿಸುವವರು, ಬೇತಾಳಿಕರು, ಪ್ರೇತಸಿದ್ಧರು ಇಂಥವರು ಯಾರೂ ನಿಮ್ಮಲ್ಲಿ ಇರಬಾರದು. ಇಂಥ ಕೆಲಸಗಳನ್ನು ನಡೆಸುವವರು ಯೆಹೋವನಿಗೆ ಅಸಹ್ಯರಾಗಿದ್ದಾರೆ; ನಿಮ್ಮ ದೇವರಾದ ಯೆಹೋವನು ಇಂಥ ಹೇಯಕೃತ್ಯಗಳನ್ನು ಮಾಡುವ ಆ ಜನಾಂಗಗಳನ್ನು (ಹಿಂದೆ ಕಾನಾನಿನಲ್ಲಿ ವಾಸಿಸುತ್ತಿದ್ದ ಜನಾಂಗಗಳಾಗಿದ್ದು–ಇವರು ಮಾಡುವ ಪಾಪಗಳನ್ನು ಇಸ್ರಾಯೇಲ್ಯರ ಅರಸರುಗಳು ಅನುಕರಣೆಮಾಡಿದ್ದರು) ನಿಮ್ಮೆದುರಿನಿಂದ ಹೊರಡಿಸಿಬಿಡುತ್ತಾನಲ್ಲಾ" (ಧರ್ಮೋ. 18:10–11) ಹಾಗು "ಯಾವನಾದರೂ ಸತ್ತವರಲ್ಲಿ ವಿಚಾರಿಸುವವರ ಅಥವಾ ಬೇತಾಳಿಕರ ಬಳಿಗೆ ಹೋಗಿ ಅವರ ಆಲೋಚನೆಗಳನ್ನು ಕೇಳಿಕೊಂಡು ದೇವದ್ರೋಹಿಯಾದರೆ ನಾನು ಆ ಮನುಷ್ಯನಿಗೆ ವಿಮುಖನಾಗಿ ಅವನನ್ನು ಕುಲದಿಂದ ತೆಗೆದುಹಾಕುವೆನು" (ಯಾಜಕಕಾಂಡ 20:6) ಎಂಬ ದೇವಾಜ್ಞೆಗಳಿದ್ದಾಗ್ಯೂ [ಇವುಗಳನ್ನು ಅಲಕ್ಷಿಸಿ] ತಮ್ಮನ್ನು ಸಂಪರ್ಕಿಸುವವರಿಗೆ ತಮ್ಮ ಗುರುತಿನ ಬಗ್ಗೆ [ಗುರುತನ್ನು ಮರೆಮಾಚಿ] ಅವರನ್ನು ವಂಚಿಸುತ್ತಿರುವವು. ಈ ಆಜ್ಞೆಗಳನ್ನು ಸೌಲನು ಚೆನ್ನಾಗಿ ತಿಳಿದುಕೊಂಡಿದ್ದನು: ಏಂದೋರಿನ ಮಾಟಗಾತಿಯ ಜೊತೆ ಸಮಾಲೋಚಿಸುವಾಗ ತಾನು ಬುದ್ಧಿಪೂರ್ವಕವಾಗಿಯೂ ಉದ್ದೇಶ ಪೂರ್ವಕವಾಗಿಯೂ ಈ ಆಜ್ಞೆಗಳಿಗೆ ವಿರುದ್ಧ ತಾನು ಕಾರ್ಯವೆಸಗುತ್ತಿರುವದು ಆತನಿಗೆ ತಿಳಿದಿತ್ತು. ಈ ದೇವಾಜ್ಞೆಯ ಉಲ್ಲಂಘನೆಗೆ ದೇವರು ಬೆದರಿಕೆರೂಪದ ಶಿಕ್ಷೆಯನ್ನು ನೀಡಿದ್ದನು. "ಸೌಲನು ಯೆಹೋವನ ವಾತನ್ನು ಕೇಳದೆ ಆತನಿಗೆ ವಿರೋಧವಾಗಿ ದ್ರೋಹಮಾಡಿದ್ದರಿಂದಲೂ ಯೆಹೋವನ ಸನ್ನಿಧಿಯಲ್ಲಿ ವಿಚಾರಿಸದೆ ಪ್ರೇತಸಿದ್ಧರಲ್ಲಿ ವಿಚಾರಿಸಿದ್ದರಿಂದಲೂ ಅವನಿಗೆ ಇಂಥಾ ಮರಣವಾಯಿತು." (1 ಪೂರ್ವಕಾಲವೃತ್ತಾಂತ 10:13) ಇದು ಈ ವಿವಾದವನ್ನು ಬಗೆಹರಿಸುತ್ತದೆ. ಸೌಲನು ದೇವಾಜ್ಞೆಗೆ ವಿರುದ್ಧವಾಗಿ ಆತ್ಮದೊಂದಿಗೆ ಬಳಕೆಯಿರುವವರಲ್ಲಿ ಸಲಹೆಯನ್ನು ಕೇಳಿ ಪಾಪಮಾಡಿದ್ದನು. ಹೀಗಾಗಿ ಇಲ್ಲಿ ಸಮಾಲೋಚಿಸಿದ್ದುದು ಕೇವಲ ದೇವರ ಪ್ರವಾದಿಯೊಡನೆ ಆಗಿರಲಿಲ್ಲ ಆದರೆ ಅದು ಒಂದು ದುರಾತ್ಮದೊಡನೆ ಆಗಿತ್ತೆಂಬದು ಇಲ್ಲಿ ಸರಳವಾಗಿತ್ತು. ಇದು ಯೇಸು ಮತ್ತು ಆತನ ಶಿಷ್ಯರು ಹೊರಡಿಸಿದ್ದಂಥ ರೀತಿಯದ್ದೇ ಆಗಿತ್ತು. ಇವು ಅದೇ ಗುಂಪಿನ ಬಿದ್ದುಹೋದ ಆತ್ಮಿಕ ಜೀವಿಗಳಾಗಿದ್ದವೆಂಬುದು ಇದೇ ರೀತಿಯ ಈ ಮುಂದಿನ ವಿವರಣೆಯಲ್ಲಿ ನಿರ್ಣಾಯಕವಾಗಿ ಸಾಬೀತಾಗಿರುವದು: ಅದೇನಂದರೆ "ಗಾರುಡಗಾತಿಯಾದ ಒಬ್ಬ ದಾಸಿಯು ನಮ್ಮೆದುರಿಗೆ ಬಂದಳು. ಆಕೆ ಕಣಿಹೇಳುವದರಿಂದ ಅವಳ ಯಜಮಾನರಿಗೆ ಬಹು ಆದಾಯವಾಗುತ್ತಿತ್ತು." ಈಕೆಯ ಭವಿಷ್ಯ ನುಡಿಯು ಪೌಲನಿಗೆ ಎಷ್ಟು ಬೇಸರವನ್ನುಂಟುಮಾಡಿ–ತ್ತೆಂದರೆ ಆತನು "ಹಿಂದಿರುಗಿ ಆ ದೆವ್ವಕ್ಕೆ ಅವಳನ್ನು ಬಿಟ್ಟುಹೋಗು ಎಂದು ಯೇಸು ಕ್ರಿಸ್ತನ ಹೆಸರಿನಲ್ಲಿ ನಿನಗೆ ಅಪ್ಪಣೆ ಕೊಡುತ್ತೇನೆ ಎಂದು ಹೇಳಿದ್ದನು. ಅದೇ ಗಳಿಗೆಯಲ್ಲಿಯೇ ಅದು ಬಿಟ್ಟು ಹೋಯಿತು." (ಅ. ಕೃ. 16:16) ಇದು 1 ಸಮುವೇಲ 28ನೇ ಅಧ್ಯಾಯದಲ್ಲಿರುವ ಈ ವಿವರಣೆಯನ್ನು ಹೋಲುವದು: "ದಯವಿಟ್ಟು ನನಗೋಸ್ಕರ ಸತ್ತವರಲ್ಲಿ ವಿಚಾರಿಸಿ ಕಣಿಹೇಳು... ಎಂದು ಆಕೆಯನ್ನು [ಸೌಲನು] ಬೇಡಿಕೊಂಡನು." ಏಂದೋರಿನ ಮಾಟಗಾತಿಯು ಅಭ್ಯಾಸಮಾಡುತ್ತಿದ್ದ ಭವಿಷ್ಯ ನುಡಿಯು ಈ ಗಾರುಡಗಾತಿಯ ಸ್ವಭಾವದ್ದೇ ಆಗಿದ್ದು, ಈಕೆಯು ಬಳಸುತ್ತಿದ್ದ ಮಾಧ್ಯಮದ ರೀತಿಯದ್ದೇ ಆಗಿರಲು, ಪೌಲನು ಈಕೆಯಿಂದ ಆ ಅಶುದ್ಧಾತ್ಮ ಅಥವಾ ದೆವ್ವವನ್ನು ಹೊರಡಿಸಿಬಿಟ್ಟಿದ್ದನು.

ಇಲ್ಲವೇ ಡಾ. ರಾಬಿನ್‌ಸನ್ ರವರಿಂದ ಉಲ್ಲೇಖಿಸಲಾದ ಮೋಶೆ ಎಲೀಯರು ರೂಪಾಂತರದ ಬೆಟ್ಟದಲ್ಲಿ **ಪ್ರತ್ಯಕ್ಷರಾದದ್ದು** ಸತ್ತುಹೋದ ಮನುಷ್ಯರು ಜೀವಿಸುತ್ತಿರುವರೆಂಬ ಸಿದ್ಧಾಂತವನ್ನು ಬೆಂಬಲಿಸುವದಿಲ್ಲ. ಯಾಕಂದರೆ ಇದು ಒಂದು **"ದರ್ಶನ"** ಎಂದು ಯೇಸುವು ತನ್ನ ಶಿಷ್ಯರಿಗೆ ಸ್ಪಷ್ಟವಾಗಿ ಸಾರಿಹೇಳಿ, ಅವರಿಗೆ ತಾನು [ಮರಣದಿಂದ] ಎದ್ದುಬರುವವರೆಗೂ ಕ್ರಿಸ್ತನ ರಾಜ್ಯದ ಮುನ್ಸೂಚಿಯಾದ ಈ **ದರ್ಶನದ** ಬಗ್ಗೆ ಯಾರಿಗೂ ಹೇಳಬಾರದೆಂದು ಆಜ್ಞಾಪಿಸಿದ್ದನು. (ಮತ್ತಾಯ 17:9)

ಐಶ್ವರ್ಯವಂತನು ಮತ್ತು ಲಾಜರನ ಸಾಮ್ಯವನ್ನು ಹೊರತುಪಡಿಸಿ ಹೊಸ ಒಡಂಬಡಿಕೆಯ ಗ್ರಂಥದಲ್ಲಿ ದಾಖಲಾಗಿರುವ ಎಲ್ಲಾ ಸಾಮ್ಯಗಳನ್ನು ಸಂಪ್ರದಾಯವಾದಿಗಳು ಅಕ್ಷರಾರ್ಥವಲ್ಲದ ರೀತಿಯಲ್ಲಿ [ಅಂದರೆ, ಸಾಂಕೇತಿಕ ರೀತಿಯ] ವ್ಯಾಖ್ಯಾನವನ್ನು ಮಾಡಿರುವರು. ಐಶ್ವರ್ಯವಂತನು ಹಾಗು ಲಾಜರನ ಸಾಮ್ಯವನ್ನು ಅವರು ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ತತ್ವಗಳಿಗೆ ಪ್ರತಿಯಾಗಿ ಇದನ್ನು ಅಕ್ಷರಾರ್ಥದಲ್ಲಿ ತೆಗೆದುಕೊಂಡಿರುವರು. ಇದರಲ್ಲಿ ಕೆಲವು ನಿರರ್ಥಕ ವಿಷಯಗಳು ಒಳಗೊಂಡಿರುವವು; ಅದು ಏನಂದರೆ ಲಾಜರನನ್ನು ದೇವದೂತರು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದಂಥ ವಿಷಯವು; ಅಲ್ಲದೆ [ಇಬ್ಬರ ನಡುವೆ] ಒಂದು ದೊಡ್ಡ ಡೊಂಗರವಿದ್ದು ಹೀಗಾಗಿ ಅಲ್ಲಿಂದ (ಪರಲೋಕದಿಂದ) ನೀನು ಇರುವಲ್ಲಿಗೆ (ಅಂದರೆ ಸಾಂಪ್ರಾದಾಯವಾದಿಗಳು ಹೇಳುವಂಥ ನರಕಕ್ಕೆ) ಬರಲು ಸಾಧ್ಯವಾಗದೆಂಬದು, ಮುಂತಾದವುಗಳು. ಅವರು ಈ ಅಕ್ಷರಾರ್ಥಕ್ಕೆ ಸಾಮಾನ್ಯವಾಗಿ ಈ ಮುಂದಿನ ವಾತನ್ನು ಸೇರಿಸಿರುವರು: "ನರಕದಲ್ಲಿ ಸೇರುವಂಥವರು ಹಿಂದಿರುಗಿ ಬರಲಾರರು; ಅಲ್ಲಿಗೆ ಇಳಿದು ಹೋಗುವಂಥವರು ಎಂದೆಂದಿಗೂ ಇಳಿದೇ ಹೋಗಿರುವರು." ಡಾ. ರಾಬಿನ್‌ಸನ್‌ರವರು ಹೇಗೂ ಇದಕ್ಕೆ ಒಂದು ಹೊಸ ಪದಗುಚ್ಛವನ್ನು ಸೇರಿದ್ದು, ಇದರಿಂದ [ವಿಷಯವು] ನಿರರ್ಥಕತೆಯ ಹಾಗು ಅಯುಕ್ತತೆಯ ಶಿಖರವನ್ನು ತಲುಪಿದ್ದು, ಇದರಲ್ಲಿ ಐಶ್ವರ್ಯವಂತನನ್ನು (ಸಂಪ್ರದಾಯವಾದಿಗಳು ಹೇಳುವ ನರಕವೆಂಬ) ಆತ್ಮಿಕಲೋಕದಿಂದ ಒಂದು ಸಂದೇಶದೊಡನೆ ಹಿಂದಿರುಗಿ ಬರುವಂತೆ ಮಾಡಲಾಗಿರುವದು. ಈ ಸಾಮ್ಯದ ಒಂದು ಖಚಿತವಾದ ಸ್ಪಷ್ಟೀಕರಣಕ್ಕಾಗಿ "ಫುಡ್ ಫಾರ್ ಥಿಂಕಿಂಗ್ ಕ್ರಿಶ್ಚಿಯನ್" ಎಂಬ ಕಿರುಹೊತ್ತಿಕೆಯ ಪುಟ 154 ನೋಡಿ.

*****

ಅರಸನಾದ ಸೌಲನು ಮೃತರೊಂದಿಗೆ ಮಾತನಾಡಿದ್ದನೋ?

ಹಾರ್ವೆಸ್ಟ್ ಗ್ಲೀನಿಂಗ್ 727

ಅರಸನಾದ ಸೌಲನು ಬೇತಾಳಿಕಳಾದ ಏಂದೋರಿನ ಮಾಟಗಾತಿಯೊಡನೆ ಅಥವಾ ಮೃತರ-ಸಂಪರ್ಕ-ಮಾಧ್ಯಮಿಯೊಡನೆ ನಡೆಸಿದ್ದ ಮೃತರ ದರ್ಶನವು, 1 ಸಮುವೇಲ 28:1-20ನೇ ವಾಕ್ಯಗಳಲ್ಲಿ ನಿರೂಪಿಲಾಗಿರುವಂತೆ, ಈ ದಿನದಲ್ಲಿ ನಡೆಸುತ್ತಿರುವದಾಗಿ ಹೇಳಿಕೊಳ್ಳುವಂಥ ಸಂಗತಿಗೆ ಒಂದು ನಿದರ್ಶನವಾಗಿರುವದು. ಈ ಮೃತರ-ಸಂಪರ್ಕ-ಮಾಧ್ಯಮಿಗಳ ಸಂಬಂಧವಾದ ಆಜ್ಞಾವಿಧಿಗಳು ಬಹು ಕಠಿಣವಾಗಿದ್ದು ಇದರ ಶಿಕ್ಷೆಯು ಮರಣದಂಡನೆಯಾಗಿದ್ದಾಗ್ಯೂ, ಅಲ್ಲಿ ಕೆಲವರಿದ್ದು ಅವರು ಈ ಮೂಲಕವಾಗಿ ಜನರಿಂದ ಹಣಗಳಿಸುತ್ತಿದ್ದ ಕಾರಣದಿಂದ ತಮ್ಮ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಳ್ಳಲು ಸಿದ್ಧರಿದ್ದರು. ಈ ದಿನದಲ್ಲಿನ ಸಂಪರ್ಕಮಾಧ್ಯಮಿಗಳ ವಿಷಯದಲ್ಲಿದ್ದಂತೆಯೇ, ಅವರು ಮೃತರಾದ ತಮ್ಮ ಮಿತ್ರರಿಂದ ಆತ್ಮಿಕ ಲೋಕದಿಂದ ಉತ್ಕೃಷ್ಟ ಮಾಹಿತಿಗಳನ್ನು ಪಡೆಯುತ್ತಿರುವದಾಗಿ ನಂಬಿದ್ದರು. ಇಸ್ರಾಯೇಲ್ ದೇಶದಲ್ಲಿ ದೈವ ಪ್ರತಿಬಂಧಕಾಜ್ಞೆ ಹಾಗು ತನ್ನದೇ ಆದ ನಿಷೇಧಾಜ್ಞೆಗೆ ವಿರುದ್ಧವಾಗಿ ಅನೇಕ ಮೃತರ-ಸಂಪರ್ಕ-ಮಾಧ್ಯಮಿಗಳು ಇದ್ದರೆಂಬದು ಸೌಲನಿಗೆ ಚೆನ್ನಾಗಿ ತಿಳಿದಿತ್ತು. ಹೀಗಾಗಿ ಆತನ ಸೇವಕರಿಗೆ ಎಂದೋರಿನಲ್ಲಿ ಒಬ್ಬಳನ್ನು ಕಂಡುಕೊಳ್ಳಲು ಕಷ್ಟಕರವಾಗಿರಲ್ಲಿವೆಂಬುದು ಸ್ಪಷ್ಟವಾಗಿತ್ತು. ಸೌಲನು ಸಂದರ್ಶನಕ್ಕೆ ತಾನು ವೇಷಮರೆಸಿಕೊಂಡು ಬಂದಿದ್ದರೂ ಆ ತಂತ್ರಗಾರಿಕೆಯ ಸ್ತ್ರೀಗೆ ನಿಸ್ಸಂದೇಹವಾಗಿ ಇಸ್ರಾಯೇಲಿನ ರಾಜನಾವುದೇ ಮನುಷ್ಯನಿಗಿಂತಲೂ ತನ್ನ ತಲೆ ಹಾಗು ಹೆಗಲು ಎತ್ತರವಿರುವ ಸೌಲನ ಗಾಂಭೀರ್ಯವು ಚೆನ್ನಾಗಿ ತಿಳಿದಿತ್ತು. (1 ಸಮುವೇಲ 9:2) ಹೀಗಾಗಿ ಈ ಸೇವೆಯ ದೆಸೆಯಿಂದ ತನಗೆ ಯಾವ ಹಾನಿಯೂ ಸಂಭವಿಸದಿರುವಂತಾಗಲು ಆಕೆಯು ಸ್ವತಃ ಸೌಲನ ಸ್ವಂತ ಬಾಯಿಂದ ಒಂದು ಪ್ರಮಾಣ ಪೂರ್ವಕವಾದ ವಾಗ್ದಾನವನ್ನು ಪಡಕೊಳ್ಳಲು ನಿರ್ದಿಷ್ಟತೆಯುಳ್ಳವಳಾಗಿದ್ದಳು.

ಏಂದೋರಿನ ಸಂಪರ್ಕ-ಮಾಧ್ಯಮಿಯ ಮೂಲಕವಾಗಿ ದುರಾತ್ಮಗಳು ಬಳಸಿದ್ದ ವಿಧಾನಗಳು ಈ ದಿನದಲ್ಲಿ ಬಳಸಲಾಗುವಂಥ ರೀತಿಯಲ್ಲಿಯೇ ಇದ್ದವು. ಅವುಗಳು ಆ ಮಾಧ್ಯಮಿಯ ಮಾನಸಿಕ ದೃಷ್ಟಿಯ ಎದುರಿನಲ್ಲಿ ತನ್ನ ಪದ್ಧತಿಯಂತೆ ಒಂದು ಉದ್ದನೆಯ ವಸ್ತ್ರವನ್ನು ಧರಿಸಿರುವ ವೃದ್ಧ ಪ್ರವಾದಿಯಾದ ಸಮುವೇಲನನ್ನೇ ಹೋಲುವಂಥ ಒಂದು ಚಿರಪರಿಚಿತ ರೂಪವೇ ದಾಟಿಹೋಗುವಂತೆ ಮಾಡಿದ್ದವು. ಆಕೆಯು ನೀಳವಸ್ತ್ರಧಾರಿಯ (ಅಥವಾ ಹೊಳಪುವಸ್ತ್ರಧಾರಿಯ) ಚಿತ್ರವನ್ನು ವರ್ಣಿಸಿದಾಗ ಕೂಡಲೇ ಸೌಲನು ಅದನ್ನು ಸಮುವೇಲನ ವರ್ಣನೆಯೆಂದು ಗ್ರಹಿಸಿಕೊಂಡಿದ್ದನು; ಆದರೆ ಸೌಲನು ತಾನು ವೈಯುಕ್ತಿಕವಾಗಿ ರಾಜನಾವುದನ್ನೂ ನೋಡದಿದ್ದರೂ, ಈ ವರ್ಣನೆಯ ಮೂಲಕವಾಗಿ ಆತನು ಸಮುವೇಲನಾಗಿದ್ದನೆಂಬುದನ್ನು "ಅರಿತುಕೊಂಡಿದ್ದನು". ಇಂಥಾ ಸಂದರ್ಭಗಳಲ್ಲಿ ಜನರು ಸಾಧಾರಣವಾಗಿ ಮಾಡುವಂತೆ ಸೌಲನು ಸುಲಭವಾಗಿ ಮನವರಿಕೆಮಾಡಿಕೊಂಡಿದ್ದು, ಸಮುವೇಲನು ಆತ್ಮಿಕ ಜೀವಿಯಾಗಿದ್ದು ಬಹು ಉತ್ತಮ ಸ್ಥಿತಿಯಲ್ಲಿ ಇರುವಲ್ಲಿ, ಈಗಿನ ಕಾಲದಲ್ಲಿ ಜೀವಿಸುವವರಂತೆ ಸಮುವೇಲನು ಬಗ್ಗಿದ ವೃದ್ಧನಂತೆ ಕಾಣಲು ಹೇಗೆ ಸಾಧ್ಯವೆಂಬುದನ್ನು ಸೌಲನು ಪ್ರಶ್ನಿಸಿರಲಿಲ್ಲ; ಇಲ್ಲವೇ ತಾನು ತಿಳಿದಿದ್ದಂತೆ ಸಮುವೇಲನು ಒಬ್ಬ ಭೂಜೀವಿಯಾಗಿದ್ದಾಗ ಧರಿಸಿದ್ದ ಅದೇ ಹಳೇ ವಸ್ತ್ರವನ್ನು ಆತನು ಆತ್ಮಿಕ ಲೋಕದಲ್ಲಿಯೂ ಏಕೆ ಧರಿಸಿದ್ದನೆಂಬುದನ್ನು ಸೌಲನು ವಿಚಾರಿಸಿರಲಿಲ್ಲ.

ಸೌಲನು ದೇವರಿಂದ ತೊರೆಯಲ್ಪಟ್ಟಿದ್ದು ಈಗ ಈ "ಅಸತ್ಯವನ್ನಾಡುವ ಆತ್ಮಗಳಿಂದ" ಸುಲಭವಾಗಿ ವಂಚಿಸಲ್ಪಟ್ಟಿದ್ದನು; ಇವು ಪ್ರವಾದಿಯ ವ್ಯಕ್ತಿರೂಪದಲ್ಲಿ ಬಂದು ಆತನ ಹೆಸರಿನಲ್ಲಿ ತಮ್ಮ "ಸಂಪರ್ಕ ಮಾಧ್ಯಮಿಯ" ಅಂದರೆ ಮಾಟಗಾತಿ, ಬೇತಾಳಿಕಳು, ಆತ್ಮವಾದಿಯ, ಮೂಲಕವಾಗಿ ಸೌಲನೊಂದಿಗೆ ಮಾತಾಡಿದ್ದವು.

ಬಿದ್ದುಹೋದ ಆತ್ಮಗಳು ಭೂಲೋಕದಲ್ಲಿ ನಡೆಯುವ ಸಂಗತಿಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರುವದು ಮಾತ್ರವಲ್ಲದೆ ಅವು ವಂಚಿಸುವದರಲ್ಲಿ ನಿಪುಣತೆಯುಳ್ಳವುಗಳಾಗಿರುವವು. ಸೌಲನಿಗೆ ಉತ್ತರಿಸುವಾಗ, ಆತನನ್ನು ಉತ್ತಮ ರೀತಿಯಲ್ಲಿ ವಂಚಿಸ ಸಲುವಾಗಿ ಮೃತ ಪ್ರವಾದಿಯ ವಿಧಾನ, ಶೈಲಿ ಹಾಗು ಆತನ ಮನೋಪ್ರವೃತ್ತಿಯ ಬಗ್ಗೆ ನಿರ್ಣಯಿಸಿಕೊಂಡು ಅದನ್ನು ಸಾಧ್ಯವಾದಷ್ಟು ನಿಕಟವಾಗಿ ಅನುಕರಣೆಮಾಡಲು ನಿರ್ಧರಿಸಿ ಕೊಂಡಿದ್ದವು. (ಹೀಗೆ ಈ ಅಸತ್ಯವನ್ನಾಡುವ ಆತ್ಮಗಳು ಯಾವಾಗಲೂ ಮೃತರ ಮುಖಚರ್ಯೆ ಅವರು ಅನುಸರಿಸುವ ವಿಧಾನಗಳು ಹಾಗು ಅವರ ಪ್ರವೃತ್ತಿಗಳನ್ನು ನಕಲುಮಾಡಲು ಬಯಸುವವು) ಆ ಪ್ರತ್ಯುತ್ತರವೇನಾಗಿತ್ತೆಂದರೆ "ನೀನು ನನ್ನ ವಿಶ್ರಾಂತಿಯನ್ನು ಕೆಡಿಸಿದ್ದೇಕೆ?" ಈ ಉತ್ತರವು ಯೆಹೂದ್ಯರ ನಂಬಿಕೆಯನ್ನು ಹೋಲುವದು; ಅದೇನಂದರೆ ಒಬ್ಬ ವ್ಯಕ್ತಿಯು ಸತ್ತಾಗ ಆತನು "ಶಿಯೋಲ್" ಎಂಬ ಸಮಾಧಿಯ ಸ್ಥಳದಲ್ಲಿ ಪ್ರಜ್ಞಾಹೀನಸ್ಥಿತಿಯಲ್ಲಿದ್ದು ಪುನರುತ್ಥಾನಕ್ಕಾಗಿ ಕಾದು ಕೊಂಡಿರುವನೆಂಬದು. (ಯೋಬ 14:12-15,21: ಕೀರ್ತನೆ 90:3; ಪ್ರಸಂಗಿ 9:5-6) ಹೀಗೆ ನಿರೂಪಿಸಲಾದದ್ದೇನಂದರೆ ಸಮುವೇಲನನ್ನು ಸಮಾಧಿಯಿಂದ ಕರಕೊಂಡು ಬರಲಾಗಿದ್ದು, ಅದು ಪರಲೋಕದಿಂದ ಇಳಿದು ಬರುವಂತೆ ಮಾಡಿರಲಿಲ್ಲ, ಅಲ್ಲದೆ ಆತನ ವಿಶ್ರಾಂತಿಯು ಅಥವಾ ಸಮಾಧಾನಕರವಾದ ನಿದ್ರೆಯನ್ನು ಕೆಡಿಸಿರಲಿಲ್ಲ ಇಲ್ಲವೇ ಆತನ ವಿಶ್ರಾಂತಿಯನ್ನು ಭಂಗಪಡಿಸಿರಲಿಲ್ಲವೆಂಬದು. ಕೀರ್ತನೆ 13:3; ಯೋಬ 14:12; ಕೀರ್ತನೆ 90:5; ಯೋಹಾನ 11:11-14. ಪ್ರವಾದಿಯಾದ ಸಮುವೇಲನು ಬದುಕಿರುವಾಗ ತನ್ನನ್ನು ಭೇಟಿಯಾಗಿ ತನ್ನೊಡನೆ ಯಾವುದೇ ಹೆಚ್ಚಿನ ಸಂಭಾಷಣೆಮಾಡಲು ನಿರಾಕರಿಸಿದ್ದಂಥವನು ಮಾಟಗಾತಿಯ ಅದ್ಭುತ ಶಕ್ತಿಯ ಮೂಲಕವಾಗಿ ತನ್ನೊಂದಿಗೆ

ಸಂಪರ್ಕಿಸಲು ಬಲವಂತಮಾಡಲ್ಪಟ್ಟಿರುವನೆಂದು ನಂಬುವಂತೆ ಸೌಲನು ಸುಲಭವಾಗಿ ವಂಚಿಸಲ್ಪಟ್ಟಿದ್ದನು. (1 ಸಮುವೇಲ 15:26,35 ನೋಡಿ) ಸ್ವತಃ ಸೌಲನ ಸಾಕ್ಷಿಯು ಹೀಗಿತ್ತು: "ದೇವರು ನನ್ನನ್ನು ಬಿಟ್ಟು ದೂರಹೋಗಿದ್ದಾನೆ; ಆತನು ನನಗೆ ಪ್ರವಾದಿಗಳಿಂದಾಗಲಿ ಕನಸುಗಳಿಂದಾಗಲಿ ಉತ್ತರ–ಕೊಡಲೊಲ್ಲನು." 1 ಸಮುವೇಲ 28:6,15.

ಸಮುವೇಲನು ದೇವರಿಗಿಂತಲೂ ಮಾಟಗಾತಿಗೆ ವಿಧೇಯನಾಗುವನೋ?

ಸೂಕ್ತ ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿಯು ಈ ಸನ್ನಿವೇಶದಲ್ಲಿ ಸಮುವೇಲನು ಸೌಲನೊಡನೆ ಯಾವುದೇ ಸಮಾಲೋಚನೆ ನಡೆಸುವನೆಂದು ಭಾವಿಸುವದರಲ್ಲಿನ ನಿರರ್ಥಕತೆಯನ್ನು ಸುಲಭವಾಗಿ ಕಾಣುವನು.

(1) ಸಮುವೇಲನು (ಜೀವಿಸುತ್ತಿದ್ದಾಗ) ದೇವರು ಸೌಲನನ್ನು ತೊರೆದಿದ್ದಾನೆಂಬುದನ್ನು ಅರಿತುಕೊಂಡಿದ್ದು, ಹೀಗಾಗಿ ದೇವರು ತನಗೆ ಕೊಡಲು ಇಚ್ಛಿಸದ ಯಾವುದೇ ಮಾಹಿತಿಯನ್ನು ಕೊಡುವ ಅಥವಾ ಅದರ ಬಗ್ಗೆ ಹೇಳುವ ಅಧಿಕಾರ ಸಮುವೇಲನಿಗೆ ಇರಲಿಲ್ಲ. ಅಲ್ಲದೆ ಸಮುವೇಲನು ಹಾಗೆ ಮಾಡಲಾರನು.

(2) ದೇವರಿಂದ ಖಂಡನೆಗೊಳಗಾಗಿದ್ದು ಇಸ್ರಾಯೇಲ್ ದೇಶದಲ್ಲಿ ನೆಲೆಸುವಂಥ ಅಧಿಕಾರದಿಂದ ನಿಷೇಧಿಸಲ್ಪಟ್ಟ ಒಬ್ಬ ಆತ್ಮ–ಸಂಪರ್ಕ–ಮಾಧ್ಯಮಿಯು ದೇವರು ತೊರೆಯಲ್ಪಟ್ಟ ದುಷ್ಟ ಅರಸನ ಕೊರಿಕೆಯ ಮೇರೆಗೆ ಸಮುವೇಲನ ವಿಶ್ರಾಂತಿಯನ್ನು ಭಂಗಪಡಿಸಿ ಆತನನ್ನು ಶಿಯೋಲ್ ಎಂಬ ಮರಣಾವಸ್ಥೆಯಿಂದ ಹೊರತರುವದನ್ನು ಭಾವಿಸುವಂಥದ್ದು ಸಂಪೂರ್ಣವಾಗಿ ನಿರರ್ಥಕವಾದದ್ದು. ಸಮುವೇಲನು ಭೂಮಿಯೊಳಗೆ ಇಳಿದುಹೋಗಿದ್ದನೇ, ಅಥವಾ ದೂರದಲ್ಲಿ ಪರಲೋಕದೊಳಗೆ ಇರುವನೇ? ಯಾವುದೇ ಈ ಎರಡು ಸನ್ನಿವೇಶಗಳಲ್ಲಿಯೂ ಸಮುವೇಲನಿಗೆ ತಾನು ಅರಸನಾದ ಸೌಲನ ಮುಂದೆ ಪ್ರತ್ಯಕ್ಷನಾಗಿ ಆತನ ಪ್ರಶ್ನೆಗಳಿಗೆ ಉತ್ತರಿಸುವಂತೆ ಆದೇಶಿಸುವ ಅಧಿಕಾರವನ್ನು ಮಾಟಗಾತಿ ಪಡೆದಿದ್ದಳೇ? ಇಲ್ಲವೇ ಯಾವುದೇ ಸಂಪರ್ಕ–ಮಾಧ್ಯಮಿಯು ಸತ್ತವನ ವಿಶ್ರಾಂತಿಯನ್ನು ಭಂಗಪಡಿಸಿ ಅವನನ್ನು ಹೊರತಂದು ಅಥವಾ ಯಾವುದೇ ವಿಧದಲ್ಲಿ ಬರುವಂತೆ ಮಾಡಿ ಜೀವಿತರ ಊಹಾಪೂರಿತ ಪ್ರಶ್ನೆಗಳಿಗೆ ಉತ್ತರಿಸುವಂತೆ ಮಾಡುವ ಅಧಿಕಾರವಿರುವಂಥದನ್ನು ಭಾವಿಸಿಕೊಳ್ಳುವದು ಉಚಿತವೇ?

ಮಾಟಗಾತಿಯ "ವಂಚಿಸುವ ಆತ್ಮವು" ಸಮುವೇಲನನ್ನು ವ್ಯಕ್ತೀಕರಿಸಿಕೊಂಡು ಸೌಲನು ತಾನೇ ಅಪೇಕ್ಷಿಸಲಾಗದ ಯಾವುದೇ ಸಂಗತಿಯನ್ನೂ ಮುಂದಾಗಿ ಹೇಳಿರಲಿಲ್ಲ. ರಾಜ್ಯವು ತನ್ನ ಹಾಗು ತನ್ನ ಸಂತತಿಯಿಂದ ತೆಗೆಯಲ್ಪಟ್ಟಿರುವಂಥ ದೇವರ ನುಡಿಯ ಬಗ್ಗೆ ಸೌಲನಿಗೆ ತಿಳಿದಿದ್ದು, ಫಿಲಿಷ್ಟಿಯರ ಸೇನೆಯು ಮರುದಿನ ಯುದ್ಧಕ್ಕೆ ವ್ಯೂಹಕಟ್ಟುವದರ ಬಗ್ಗೆ ಭಯವಿದ್ದ ಕಾರಣ ಆತನು ಮಾಟಗಾತಿಯನ್ನು ಹುಡುಕಿಕೊಂಡು ಹೋಗಿದ್ದನು. ದಾವೀದನು ತನ್ನ ಉತ್ತರಾಧಿಕಾರಿ ಆಗುವನೆಂಬುದನ್ನು ದೇವರು ತಿಳಿಸಿದ್ದರಿಂದ ಸೌಲನು ತನಗಾಗಲಿ ಅಥವಾ ತನ್ನ ಸಂತತಿಗಾಗಲಿ ಯಾವ ಕರುಣೆಯನ್ನು ನಿರೀಕ್ಷಿಸಿರಲಿಲ್ಲ. ಆದುದರಿಂದ ಈ ಸಂಗತಿಗೆ ಜೊತೆಗೂಡುವ ಕೇವಲ ಒಂದೇ ಒಂದು ಗುಣಲಕ್ಷಣದ ಅಂಶವು ಯಾವುದೇ ವಿಧದಲ್ಲಿ ಜ್ಞಾನಾತೀತವಾಗಿ ಸೂಚಿತವಾಗುವದನ್ನು ಸಹ ಆತನು ಅಪೇಕ್ಷಿಸಿದ್ದನು; ಅದೇನಂದರೆ "ನಾಳೆ ನೀನು ನಿನ್ನ ಮಕ್ಕಳೂ ನಾನಿರುವಲ್ಲಿಗೆ ಬರುವಿರಿ; ಆತನು ಇಸ್ರಾಯೇಲ್ ಸೈನ್ಯವನ್ನು ಫಿಲಿಷ್ಟಿಯರ ಕೈಗೆ ಒಪ್ಪಿಸುವನು." ಚೆನ್ನಾಗಿ ತಿಳುವಳಿಕೆಯುಳ್ಳ ದೆವ್ವಗಳು ಫಿಲಿಷ್ಟಿಯರ ಸೇನೆಯ ಬಲವನ್ನು ಹಾಗು ಅದರ ಸ್ಥಾನಮಾನಗಳನ್ನು ಮತ್ತು ಸೌಲನ ಸೇನೆಯ ಬಲಹೀನತೆ ಹಾಗು ಅದರ ಸ್ಥಾನಮಾನಗಳನ್ನು ಮಾತ್ರವಲ್ಲದೆ ಸೌಲನು ಆಗಲೇ ಭಯಪೀಡಿತನಾಗಿದ್ದು ಮಾಟಗಾತಿ–ಮಧ್ಯಮಿಯ ಮೂಲಕವಾಗಿ ವಿಚಾರಿಸುತ್ತಿರುವ ಕಾರಣ ಆತನು ಆ ಸನ್ನಿವೇಶದ ಬಗ್ಗೆ ಗೊಂದಲದಲ್ಲಿರುವದನ್ನು ಸೌಲನಿಗಿಂತಲೂ ಅವು ಚೆನ್ನಾಗಿ ತಿಳಿದಿದ್ದವು. ಆ ಕಾಲದ ಯುದ್ಧಗಳ ಬಗ್ಗೆ ಚಿರಪರಿಚಿತನಾದ ಯಾವನೇ ಆದರೂ ಈ ಮುಂದಿನದನ್ನು ತಿಳಿದಿರುವನು:–

(1) ಒಂದು ದಿನ ಯುದ್ಧವು ಸಮಸ್ಯೆಯನ್ನು ಬಗೆಹರಿಸುವ ಸಂಭವವಿರುವದು; ಮತ್ತು

(2) ಅರಸನ ಹಾಗು ಆತನ ಮನೆತನದವರ ಮರಣವು ಒಂದೇ ತಾರ್ಕಿಕವಾದ ಫಲಿತಾಂಶವಾಗುವದು. ಹೀಗಿದ್ದರೂ "ವಂಚಿಸುವ ಆತ್ಮವು" ತಪ್ಪನ್ನು ಎಸೆಗಿತ್ತು. ಯಾಕಂದರೆ ಸೌಲನ ಇಬ್ಬರು ಮಕ್ಕಳು ತಪ್ಪಿಸಿಕೊಂಡವರಾಗಿ ವರುಷಗಳ ಪರ್ಯಂತರ ಜೀವಿಸಿದ್ದರು. ಸೌಲನ ಯುದ್ಧ ಮರಣಗಳು ಏಂದೋರಿನ ಮಾಟಗಾತಿಯನ್ನು ಬೇಟಿಮಾಡಿದ ಅನೇಕ ದಿನಗಳ ನಂತರ ಸಂಭವಿಸಿತೆಂಬುದನ್ನು ವಿಧ್ವಾಂಸರುಗಳು ಸಹ ನಿರಾಕರಿಸಿರುವರು.

ಸೈತಾನನು ಮತ್ತು ದುಷ್ಟತನದಲ್ಲಿ ಆತನ ಸಹಯೋಗಿಗಳಾದ ಬಿದ್ದುಹೋದ ದೂತರು ಜೀವನದ ಆಗುಹೋಗುಗಳ ವಿಷಯವಾಗಿ ಮನುಷ್ಯರಿಗಿಂತಲೂ ಗಣನೀಯವಾಗಿ ಹೆಚ್ಚಿನ ಸಂಗತಿಗಳನ್ನು ತಿಳಿದಿರುವರೆಂಬುದಕ್ಕೆ ಆಶ್ಚರ್ಯಪಡಬೇಕಿಲ್ಲ. ಅವರು ಸಹಜವಾಗಿಯೇ ರಚನಾಕ್ರಮದಲ್ಲಿ ಮನುಷ್ಯರಿಗಿಂತಲೂ ಒಂದು ಉನ್ನತ ಹಾಗು ಹೆಚ್ಚು ಬುದ್ಧಿವಂತಿಕೆಯ ಸ್ಥಾನದಲ್ಲಿರುವರೆಂಬುದನ್ನು ನಾವು ನೆನಪಿನಲ್ಲಿಡಬೇಕು. ಯಾಕಂದರೆ ಮಾನವನನ್ನು "ದೇವದೂತರಿಗಿಂತಲೂ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ." (ಕೀರ್ತನೆ 8:5) ಇದಲ್ಲದೆ ಶಿಥಿಲಾವಸ್ಥೇ ಹಾಗು ಮರಣಗಳಿಂದ ಕುಂಟಿತವಾಗದ ಸಾವಿರ ವರುಷಗಳ ಅವರ ಅನುಭವವು, ಹೋಲಿಸಿ ನೋಡಿದಲ್ಲಿ, "ಜೀವಿಸಿರುವ ಕಾಲವೂ ಸ್ವಲ್ಪವಾಗಿಯೂ ಕಷ್ಟಕರವಾಗಿಯೂ" ಇರುವ ಮಾನವನ ಜೀವಿತವು ಮರಣದಲ್ಲಿ ಶೀಘ್ರವಾಗಿ ರದ್ದಾಗುವದು. ಈ "ದುರಾತ್ಮಗಳ" ಕುಯುಕ್ತಿಯನ್ನು ಸಮರ್ಥವಾಗಿ ನಿಭಾಯಿಸಲು ಮಾನವರಿಗೆ ಸಾಧ್ಯವಾಗ–ದೆಂಬುದನ್ನು ಹಾಗು ಕೇವಲ ನಮಗಿರುವ ಒಂದೇ ಸುರಕ್ಷತೆಯು ದೈವಿಕ ಏರ್ಪಾಟಿನಲ್ಲಿದ್ದು, ಇದನ್ನು ಹೊಂದಲು ಬಯಸುವ ನಮ್ಮಲ್ಲಿನ ಪ್ರತಿಯೊಬ್ಬನೂ ಈ ದೆವ್ವಗಳೊಂದಿಗೆ ಯಾವ ಸಂಪರ್ಕವನ್ನು ಮಾಡಲು ನಿರಾಕರಿಸಬೇಕೆಂಬುದಕ್ಕೆ ನಮಗೆ ಆಶ್ಚರ್ಯವಾಗಲು ಸಾಧ್ಯವೇ? ದೇವರ ವಾಕ್ಯವೇನಂದರೆ: "ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು

ಓಡಿಹೋಗುವನು." (ಯಾಕೋಬ 4:7) "ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾದ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ; ಲೋಕದಲ್ಲಿರವ ನಿಮ್ಮ ಸಹೋದರರು ಅಂಥ ಬಾಧೆಗಳನ್ನೇ ಅನುಭವಿಸುತ್ತಿ–ದ್ದಾರೆಂದು ನಿಮಗೆ ತಿಳಿದಿದೆಯಲ್ಲಾ." 1 ಪೇತ್ರ 5:8–9.

*****

"ಕಠಿಣ ಕಾಲಗಳು ಬರುವವು"

ರೀಪ್ರಿಂಟ್ಸ್ 4976 (ಆಯಲ್ಪಟ್ಟದ್ದು)

"ಆದರೆ ಕಡೇ ದಿವಸಗಳಲ್ಲಿ ಕಠಿಣ ಕಾಲಗಳು ಬರುವದೆಂಬುದನ್ನು ತಿಳಿದುಕೋ" – 2 ತಿಮೋಥೆ 3:1

ನಾವು "ಬೇಡಿಗಳನ್ನು ಹಾಕಿ ಕತ್ತಲೆಯೊಳಗೆ ಇಡಲಾದ" ಬಿದ್ದುಹೋದ ದೇವದೂತರ ಹಾಗು ದೆವ್ವಗಳ ಒಡೆಯನಾದ ಸೈತಾನನನ್ನು ಬಂಧಿಸುವಂಥದರ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟವಾಗಿ ತಿಳುಕೊಳ್ಳಬೇಕಿರುವದು. ಸೈತಾನನ ಬಂಧಿಸುವಿಕೆಯು, ಶಾಸ್ತ್ರವಚನಗಳಲ್ಲಿ ಪ್ರಸ್ತುತಿಪಡಿಸಿರುವಂತೆ, ಕ್ರಿಸ್ತನ ಎರಡನೇ ಬರುವಿಕೆಯಲ್ಲಿ ನೆರವೇರುವದು: "ಅವನು ಪಿಶಾಚನೂ ಸೈತಾನನೂ ಆಗಿರುವ ಪುರಾತನಸರ್ಪವೆಂಬ ಘಟಸರ್ಪನನ್ನು ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು." (ಪ್ರಕಟನೆ 20:2) ಆ ಸಾವಿರ ವರುಷದಲ್ಲಿ ಕ್ರಿಸ್ತನು ಹಾಗು ಆತನ ಭಕ್ತರು ಅರಸರಾಗಿ ಮತ್ತು ದೇವರಿಗೆ ಯಾಜಕರಾಗಿ ಆಳ್ವಿಕೆಮಾಡುವರು. ಕೆಳದರ್ಜೆಯ ದೇವದೂತರ ನಿರ್ಬಂಧವನ್ನು ಭಕ್ತನಾದ ಪೇತ್ರ ಹಾಗು ಭಕ್ತನಾದ ಯೂದನಿಂದ ತಿಳಿಸಲ್ಪಟ್ಟಿರುವದು. ಈ ಬಿದ್ದುಹೋದ ದೇವದೂತರ ಬಗ್ಗೆ ಪೇತ್ರನು ನುಡಿಯುವವನಾಗಿ ಹೀಗೆ ತಿಳಿಸಿರುವನು: "ನೋಹನು ನಾವೆಯನ್ನು ಕಟ್ಟಿಸುತ್ತಿರಲು ದೇವರು ದೀರ್ಘಶಾಂತಿಯಿಂದ ಕಾದಿದ್ದಾಗ ಆತನಿಗೆ ಅವಿಧೇಯರಾಗಿದ್ದವರ..." – 2 ಪೇತ್ರ 2:4; ಯೂದ 6; 1 ಪೇತ್ರ 3:20.

ಶಾಸ್ತ್ರವಚನಗಳನ್ನು ಪರಿಶೀಲಿಸಿದಾಗ ನಾವು ನೋಡುವದೇನಂದರೆ ಪ್ರಕಾಶವುಳ್ಳ ದೇವದೂತರಿದ್ದು ಅವರು ಅವಿಧೇಯರಾಗಿ, ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟು ಮನುಷ್ಯರಾಗ ಬಯಸಿ ಮನುಷ್ಯಪುತ್ರರ ದೇಹದ ರೂಪವನ್ನು ಧರಿಸಿಕೊಂಡಿದ್ದರೆಂಬದು. ಅವರ ಬಗ್ಗೆ ದಾಖಲೆಯನ್ನು ನಾವು ಆದಿಕಾಂಡ 6:1–4 ರಲ್ಲಿ ಕಂಡು–ಕೊಳ್ಳುತ್ತೇವೆ: "ದೇವಪುತ್ರರು ಮನುಷ್ಯ ಪುತ್ರಿಯರ ಸೌಂದರ್ಯವನ್ನು ನೋಡಿ ತಮಗೆ ಇಷ್ಟರಾದವರನ್ನು ಹೆಂಡರನ್ನಾಗಿ ಮಾಡಿಕೊಂಡರು." ಅವರಿಗೆ ಹುಟ್ಟಿದ್ದ ಮಕ್ಕಳಿದ್ದರು. "ದೇವಪುತ್ರರು ಮನುಷ್ಯಪುತ್ರಿಯರನ್ನ ಕೂಡಿ ಅವರಲ್ಲಿ ಮಕ್ಕಳನ್ನು ಪಡೆಯುವ ಕಾಲದಲ್ಲಿ ಮಹಾಶರೀರಿ–ಗಳಿದ್ದರು. [ದೈತ್ಯರು] ಪೂರ್ವದಲ್ಲಿ ಹೆಸರುಗೊಂಡ ಪರಾಕ್ರಮ ಶಾಲಿಗಳು ಇವರೇ." ಆಗ ಆ ಹಿಂದಿನ ಹದಿನಾರು ಶತಮಾನ–ಗಳಲ್ಲಿ ಇದ್ದುದ್ದಕಿಂತಲೂ ಹೆಚ್ಚು ದುಷ್ಟತನವು ಇಡೀ ಲೋಕದಲ್ಲಿ ತುಂಬಿತ್ತು. ಆಗ ದೇವರು ನಾವೆಯಲ್ಲಿ ರಕ್ಷಿಸಲ್ಪಟ್ಟವರನ್ನು ಹೊರತುಪಡಿಸಿ ಮನುಕುಲವೆಲ್ಲವನ್ನು ಗುಡಿಸಿಹಾಕಿದ್ದನು.

ಆತ್ಮಗಳು ದೇವರ ವಾಕ್ಯವನ್ನು ನಿರರ್ಥಕ ಮಾಡಲು ಬಯಸುವವು

ಅಪೋಸ್ತಲನು ಮುಂದುವರಿದು ಬಿದ್ದುಹೋದ ದೇವದೂತರಿಗೆ ಏನು ಮಾಡಲಾಗಿತ್ತೆಂಬುದನ್ನು ತೋರಿಸಿ ಕೊಟ್ಟಿದ್ದಾನೆ. ಅವುಗಳು ಹಿಂದೆ ಇದ್ದುದಕ್ಕಿಂತಲೂ ಕಡಿಮೆ ಬಲಹೊಂದಿದ್ದು, ಸವಲತ್ತುಗಳು ಕಡಿಮೆಯಿರುವದು. ಆಗ ಅವುಗಳಿಗೆ ದೇಹಧರಿಸುವ ಶಕ್ತಿಯಿದ್ದು, ತಿಂದು ಕುಡಿಯಲು ಸಾಧ್ಯವಿತ್ತಲ್ಲದೆ, ಅವು ಮನುಷ್ಯರ ಕಾರ್ಯಗಳೆಲ್ಲವನ್ನು ನಿರ್ವಹಿಸುತ್ತಿದ್ದವು. ಪ್ರಳಯದ ನಂತರ ಅವುಗಳು ಕತ್ತಲಿನ ಸರಪಣಿಗಳಿಂದ ಬಂಧಿಸಲ್ಪಟ್ಟಿದ್ದವು; ಹೇಳುವದಾದರೆ ಅವುಗಳಿಗೆ ದೇಹಧರಿಸುವದನ್ನು ನಿರ್ಬಂಧಿಸಿ, ಅವುಗಳು ಆ ಹಿಂದೆ ಮಾಡುತ್ತಿದ್ದಂತೆ ಬೆಳಕಿನಲ್ಲಿ ಕಾರ್ಯವೆಸಗುವ ಸಾಮರ್ಥ್ಯವನ್ನು ತಡೆಹಿಡಿಯಲಾಗಿತ್ತು. ಸೌಲನು ಏಂದೋರಿನ ಮಾಟಗಾತಿಯನ್ನು ಯುದ್ಧವು ಮುಂದೆ ಹೇಗೆ ಸಾಗುವದೆಂಬುದನ್ನು ವಿಚಾರಿಸಲು ಬಯಸಿದಂತೆ ಅವುಗಳು ಹೇಗೂ ಈಗಲೂ ಕಾರ್ಯವೆಸ–ಗುತ್ತಿರುವವು. – 1 ಸಮುವೇಲ 28:7–20

ಪ್ರವಾದಿಯಾದ ಯೆಶಾಯನು ಹೇಳಿರುವದೆಂದರೆ "ಲೊಚಗುಟ್ಟುವ ಪಿಟಿಪಿಟಿಗುಟ್ಟುವ ಪ್ರೇತವಿಚಾರಕರು ಹಾಗು ಬೇತಾಳಿಕರು" [ಅಂದರೆ ಸತ್ತವರೊಂದಿಗೆ ಸಂಪರ್ಕಿಸುವದಾಗಿ ನಟಿಸುವವರು] ಇವರೊಡನೆ ಯಾವ ಸಂಬಂಧವನ್ನೂ ಮಾಡಬಾರದೆಂಬದು. (ಯೆಶಾಯ 8:19) ಆದರೆ ಈ ಬಿದ್ದುಹೋದ ದೇವದೂತರು ದೇವರ ವಾಕ್ಯವನ್ನು ನಿರರ್ಥಕಮಾಡ ಬಯಸುತ್ತಿರುವವು; ಹೀಗಾಗಿ ಸೌಲನಿಗೆ ಸಮುವೇಲನು ಮಾಡಿದ ಸಂಗತಿಯಂತೆ ಮೃತರಾದ ಅನೇಕರನ್ನು ಅವು ಅನುಕರಿಸಿ ವ್ಯಕ್ತೀಕರಿಸುತ್ತಿರುವವು. ಸಮುವೇಲನು ಬಂದು ಸೌಲನು ಹೊಂದಬಾರದೆಂದು ದೇವರು ಹೇಳಿದ ಸಂಗತಿಯನ್ನು ತಿಳಿಸುವನೆಂದು ಭಾವಿಸುವಂತಿಲ್ಲ. ಇದೇ ತತ್ವವು ನಮ್ಮ ದಿನಗಳಿಗೂ ಅನ್ವಯವಾಗುತ್ತಾ ಬಂದಿರುವದು. ಮನುಷ್ಯರ ಚಿತ್ತವನ್ನು ವಶಪಡಿಸಿಕೊಳ್ಳುವದರ ಮೂಲಕವಾಗಿ ಮನುಷ್ಯದೇಹವನ್ನು ಅಧೀನಮಾಡಿಕೊಂಡಿರುವದನ್ನು ಹೊರತು ಪಡಿಸಿ ಬಿದ್ದುಹೋದ ದೇವದೂತರು ತಮ್ಮ ಕಾರ್ಯವನ್ನು ನಡೆಸಲು ಸಮರ್ಥರಿರುವದಿಲ್ಲ.

*****

ಆತ್ಮಿಕವಾದದ ಬಗ್ಗೆ ಸತ್ಯವೇದವು ಹೇಳುವದೇನು?

ರೀಪ್ರಿಂಟ್ಸ್ 2171 (ಆರಿಸಲ್ಪಟ್ಟದ್ದು)

ಸತ್ತವರನ್ನು ವ್ಯಕ್ತೀಕರಿಸುವ ಈ ಆತ್ಮಗಳು ಯಾವವು?

ಪುನರುತ್ಥಾನದ ನಂತರದ ವರೆಗೂ ಸತ್ತವರಿಂದ ಯಾವ ಸಂಪರ್ಕವೂ ಇರಲು ಸಾಧ್ಯವಾಗದೆಂಬುದರ ಬಗ್ಗೆ ಸತ್ಯವೇದದಲ್ಲಿ ಬಹು ವಿಫುಲವಾದ ಹಾಗು ಬಹು ಖಚಿತವಾದ ಸಾಕ್ಷಿಪ್ರಮಾಣಗಳು ನಮಗಿರುವದು. ಮಿಗಿಲಾಗಿ, ಕೆಲವೊಂದು ಆತ್ಮಗಳು ಮಾತ್ರವಲ್ಲದೆ ಇವೆಲ್ಲವುಗಳೂ "ದುರಾತ್ಮಗಳು" "ಅಸತ್ಯವನ್ನಾಡುವ ಆತ್ಮಗಳು" "ವಂಚಿಸುವ ಆತ್ಮಗಳು" ಎಂಬುದಕ್ಕೆ ಸತ್ಯವೇದದಲ್ಲಿ ಖಚಿತವಾದ ಸಾಕ್ಷಿಪ್ರಮಾಣ–ಗಳಿರುವದು. ಮಾನವರು ಇವುಗಳಿಂದ ಮಾಹಿತಿಪಡೆಯಲು ಬಯಸುವದನ್ನು ಸತ್ಯವೇದವು ನಿಷೇಧಿಸಿರುವದಲ್ಲದೆ ಈ ಪಿಶಾಚಿಗಳು ಅಥವಾ ದೆವ್ವಗಳು "ತಮ್ಮ ದೊರೆತನವನ್ನು ಕಾಪಾಡಿಕೊಳ್ಳದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ" ದೇವದೂತರೆಂದು ಸತ್ಯವೇದವು ನಮಗೆ ಸ್ಪಷ್ಟವಾಗಿ ತಿಳಿಸುತ್ತದೆ; ಪ್ರಳಯಕ್ಕೆ ಮೊದಲು ಮನುಕುಲವನ್ನು ಪಾಪದಿಂದ ಮೇಲೆ ತರುವ ಕಾರ್ಯದಲ್ಲಿ ಪರಿಶ್ರಮಿಸುವ ಉದ್ದೇಶದಿಂದ ಮಾನವರಿಗೆ ಮೇಲ್ವಿಚಾರಣೆಮಾಡುವಂಥದ್ದನ್ನು ಕೆಲವು ದೇವದೂತರಿಗೆ ವಹಿಸಲಾಗಿತ್ತು. ಅಲ್ಲದೆ ಇದು ಇವರು ಈ ಕಾರ್ಯದಲ್ಲಿ ವಿಫಲರಾದುದರ ಮೂಲಕವಾಗಿ ಎಲ್ಲರಿಗೂ ಪಾಪಕ್ಕೆ ಪರಿಣಾಮಕಾರಿಯಾದ ಒಂದೇ ಪರಿಹಾರವಿದ್ದು, ಅದು ಕ್ರಿಸ್ತನಲ್ಲಿ ಒದಗಿಸಲಾಗಿರುವದೆಂಬುದನ್ನು ಎಲ್ಲರೂ ಕಲಿತುಕೊಳ್ಳುವ ಸಲುವಾಗಿತ್ತು. ಮನುಕುಲವನ್ನು ಮೇಲೆತ್ತುವ ಬದಲು ಈ ದೇವದೂತರು ತಾವೇ ಪಾಪಕ್ಕೆ ಮರುಳಾಗಿ ತಮಗೆ ಅನುಗ್ರಹಿಸಲಾದ ಅಧಿಕಾರವನ್ನು ಅಂದರೆ ಮನುಷ್ಯ ರೂಪವನ್ನು ಧರಿಸುವ ಅಧಿಕಾರವನ್ನು ದುರುಪಯೋಗಿಸಿಕೊಂಡು ಮತ್ತೊಂದು ಸಂತತಿಯನ್ನು ಆರಂಭಿಸಲು ಮುಂದಾಗಿದ್ದರು. (ಆದಿಕಾಂಡ 6:1–6) ಇವರ ಅಕ್ರಮ ಸಂತತಿಯನ್ನು ಪ್ರಳಯದಲ್ಲಿ ಅಳಿಸಿಹಾಕಲಾಗಿದ್ದು ಮತ್ತು ಆನಂತರ ಅವರಿಗೆ ಭೌತಿಕ ಶರೀರವನ್ನು ಧರಿಸಿಕೊಳ್ಳುವ ಸ್ವತಂತ್ರವನ್ನು ರದ್ದುಮಾಡಿದ್ದು ಹಾಗು ತಮ್ಮ ದೊರೆತನವನ್ನು ಉಲ್ಲಂಘಿಸದೆ ಅದನ್ನು ಕಾಪಾಕೊಂಡಿರುವ ಪರಿಶುದ್ಧ ದೇವದೂತರಿಂದ ಇವರು ಪ್ರತ್ಯೇಕಿಸಲ್ಪಟ್ಟಿದ್ದರು.

ಅಪೋಸ್ತಲನಾದ ಪೇತ್ರನು (2 ಪೇತ್ರ 2:4) ಇವುಗಳನ್ನು ಹೆಸರಿಸಿ ಹೀಗೆ ಹೇಳಿರುವನು: "ಹೇಗಂದರೆ ದೇವದೂತರು ಪಾಪಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯತೀರ್ಪನ್ನು ಹೊಂದುವದಕ್ಕೆ ಇಡಲ್ಪಡಬೇಕೆಂದು ಕತ್ತಲೆ ಗುಂಡಿಗಳಿಗೆ ಒಪ್ಪಿಸಿದನು." ಯೂದನೂ ಸಹ (ವಚನ 6ರಲ್ಲಿ) ಈ ವರ್ಗದವರ ಬಗ್ಗೆ ಹೆಸರಿಸಿ ಹೀಗೆ ಹೇಳಿರುವನು: "ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ ದೇವದೂತರಿಗೆ ದೇವರು ನಿತ್ಯವಾದ ಬೇಡಿಗಳನ್ನು ಹಾಕಿ ಮಹಾ ದಿನದಲ್ಲಿ ಆಗುವ ದಂಡನೆಯ ತೀರ್ಪಿಗಾಗಿ ಅವರನ್ನು ಕತ್ತಲೆಯೊಳಗೆ ಇಟ್ಟಿದ್ದಾನೆ." ಈ ಕೆಟ್ಟ ದೇವದೂತರ ವಿಷಯವಾಗಿ [ಕೆಳಗಿನ] ಈ ಮೂರು ಅಂಶಗಳನ್ನು ಗಮನಿಸಿ:

(1) ಅವರನ್ನು ಟಾರ್ಟರಸ್ [Tartarus] ಎಂಬಲ್ಲಿ ಸೆರೆಯಲ್ಲಿಡಲಾಗಿರುವದು, ಅಂದರೆ ನಿರ್ಬಂಧಿಸಲಾಗಿದ್ದರೂ ಅವರನ್ನು ನಾಶಗೊಳಿಸಲಾಗಿಲ್ಲ. ಟಾರ್ಟರಸ್ ಎಂಬುದನ್ನು ಈ ಒಂದು ವಾಕ್ಯಭಾಗದಲ್ಲಿ ಹೊರತು ಪಡಿಸಿ ಬೇರೆ ಎಲ್ಲಿಯೂ "ನರಕವೆಂದು" ಅನುವಾದಿಸಲಾಗಿರುವದಿಲ್ಲ. ಇದು ಸಮಾಧಿಯನ್ನು ಸೂಚಿಸುವದಿಲ್ಲ, ಇಲ್ಲವೇ "ಬೆಂಕಿ ಗಂಧಕಗಳುಳ್ಳ ಕೆರೆ" ಎಂದು ಸಾಂಕೇತಿಕವಾಗಿ ಹೇಳಿರುವದನ್ನು ಹೊರತು ಪಡಿಸಿದಲ್ಲಿ, ಎರಡನೇ ಮರಣವನ್ನು ಸೂಚಿಸುವದಿಲ್ಲ; ಆದರೆ ಇದು ಗಾಳಿ ಅಥವಾ ಭೂಮಿಯ ವಾಯುಮಂಡಲವನ್ನು ಸೂಚಿಸುವದು.

(2) ಈ ಬಂಧಿತ ಸ್ಥಿತಿಯಲ್ಲಿಯೂ ಅವುಗಳು ಕೆಲವು ಸ್ವಾತಂತ್ರ್ಯವನ್ನು ಹೊಂದಿರುವವು, ಹೀಗಾಗಿಯೂ ಅವುಗಳನ್ನು ಸರಪಣಿಯಿಂದ ಕಟ್ಟಲಾಗಿಲಾಗಿದ್ದು, ಅಥವಾ ನಿರ್ಬಂಧಿಸಲಾಗಿದ್ದು, ಒಂದು ವಿಧದಲ್ಲಿ, ಅವುಗಳು "ಕತ್ತಲೆಯ ಸರಪಣಿಗಳಿಂದ ಬಂಧಿತವಾಗಿರುವಲ್ಲಿ," ಬೆಳಕಿನಲ್ಲಿ ತಮ್ಮ ಅಧಿಕಾರವನ್ನು ನಡೆಸಲು ಅನುಮತಿ ನೀಡಲಾಗಿರುವದಿಲ್ಲ.

(3) ಈ ನಿರ್ಬಂಧವು "ಮಹಾ ದಿನದಲ್ಲಾಗುವ ನ್ಯಾಯತೀರ್ಪಿನ" ಅಂದರೆ ಒಂದು ಸಾವಿರ ವರುಷದ ಮಹಾದಿನದ ವರೆಗೂ ಮುಂದುವರೆಯಲ್ಲಿದ್ದು – ಇದು ಒಟ್ಟಾರೆ 4000 ವರುಷಗಳಿಗೂ ಹೆಚ್ಚಾಗಿರುವದು. ನಾವು ಈಗಾಗಲೇ ಸಾವಿರ ವರುಷಗಳ ದಿನದ ಅಂದರೆ "ಆ ಮಹಾ ದಿನದ" ಉದಯಕಾಲದಲ್ಲಿದ್ದು, "ಕತ್ತಲು" ಎಂಬ ಈ ಕೆಲವು ಪರಿಮಿತಿಗಳಲ್ಲಿ, ಇದನ್ನು ಕ್ರಮೇಣ ತೆಗೆದುಹಾಕಲ್ಪಡುವದಕ್ಕೆ ಬಹು ಕಾಲದ ಮೊದಲೇ ಎಂದು ಅರ್ಥೈಸಿಕೊಳ್ಳಬೇಕೆಂದು ಗ್ರಹಿಸಿಕೊಳ್ಳಲು ಸಾಧ್ಯವಿರುವದು. ಹೀಗಿದ್ದಲ್ಲಿ, "ಕತ್ತಲೆಯೆಂಬ ಸರಪಣಿಗಳಿಂದ" ಬಿಡುಗಡೆಮಾಡಬೇಕಿದ್ದಲ್ಲಿ, ಇದು ಈ ದುರಾತ್ಮಗಳಿಗೆ ಅಥವಾ "ಅಸತ್ಯವಾಡುವ ಆತ್ಮಗಳಿಗೆ" ಹಗಲಿನ ಬೆಳಕಿನಲ್ಲಿ ವಂಚನೆಮಾಡಲು (ಈಗಾಗಲೇ ಇದನ್ನು ಮಾಡಲು ಇವು ಯತ್ನಿಸುತ್ತಿರುವವು) ಅನುಮತಿ ನೀಡಿದಂತಾಗುವದು ಅಂದರೆ ಇದು ಪ್ರಳಯದ ಕಾಲದ ನಂತರ ಮಾನವ ಕುಲವನ್ನು ಮರುಳುಗೊಳಿಸುತ್ತಿರುವದನ್ನು ನಾವು ತಿಳಿದಿರುವದಕ್ಕಿಂತಲೂ ಹೆಚ್ಚಾಗಿ ಮಾಡಲು ಅನುಮತಿಸುವದೆಂದಾಗುವದು.

ಬಿದ್ದುಹೋದ ಈ ದೇವದೂತರನ್ನು ಅಥವಾ ದೆವ್ವಗಳನ್ನು ಸೈತಾನನೊಂದಿಗೆ ಅಂದರೆ ದುರಾತ್ಮಗಳ ಒಡೆಯನು ಇಲ್ಲವೇ ಪಿಶಾಚನು ಎಂಬುವನೊಂದಿಗೆ ಹೊಲಿಸಿ ಗೊಂದಲಕ್ಕೆ ಈಡುಮಾಡಿಕೊಳ್ಳಬಾರದು. ಈತನ ದುಷ್ಕಾರ್ಯ ಪ್ರವೃತ್ತಿಗಳು ಬಹು ಹಿಂದೆಯೇ ಆರಂಭಗೊಂಡಿದ್ದು, ಈತನೇ ಮೊದಲಿಗನಾಗಿ ಅಂದರೆ ಈತನೊಬ್ಬನೇ ಬಹು ಕಾಲದಿಂದಲೂ ದೈವಿಕ ಆಡಳಿತ ವ್ಯವಸ್ಥೆಗೆ ಶತ್ರುವಾಗಿರುವನು; ಈತನು ಒಂದು ಉತ್ಕೃಷ್ಟ

ಕ್ರಮದಲ್ಲಿನ ಒಬ್ಬ ದೇವದೂತನಾಗಿ ಸೃಷ್ಟಿಸಲ್ಪಟ್ಟಿದ್ದು, ತನ್ನನ್ನು ಸರ್ವಶಕ್ತನಿಗೆ ಪ್ರತಿಸ್ಪರ್ಧಿಯಾಗಿ ಸ್ಥಾಪಿತವಾಗಲು ಬಯಸಿದವನಾಗಿ, ಆದಾಮನು ಹಾಗು ಅವನ ಸಂತತಿಯನ್ನು ತನ್ನ ಸೇವಕರಾಗಲು ವಂಚಿಸಿ ಆಮಿಷವನ್ನು ತೋರಿದ್ದು, ನಾವೆಲ್ಲರೂ ತಿಳಿದಿರುವಂತೆ ಕನಿಷ್ಠ ಪಕ್ಷದಲ್ಲಿ ಒಂದು ಕಾಲಕ್ಕೆ ಬಹುತೇಕ ಸಫಲನಾಗಿದ್ದನು. "ನಂಬಲೊಲ್ಲದರವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಾದ" "ಇಹಲೋಕಾಧಿಪತಿಯು" ನಿಜವಾಗಿಯೂ ಒಂದು ದೊಡ್ಡ ಸಂಖ್ಯೆಯಲ್ಲಿ ವಂಚಿತರಾಗಿ ಗುಲಾಮಗಿರಿಯಲ್ಲಿರುವ ಹಿಂಬಾಲಕರನ್ನು ಹೊಂದಿರುವನು. ಈತನು ಸಹಜವಾಗಿಯೇ "ತಮ್ಮ ದೊರೆತನವನ್ನು ಕಾಪಾಡದೆ ತಮಗೆ ತಕ್ಕ ವಾಸಸ್ಥಾನವನ್ನು ಬಿಟ್ಟ" ಹಾಗು ಜಲಪ್ರಳಯದ ಸಮಯದಲ್ಲಿ ನಿರ್ಬಂಧಿಸಲ್ಪಟ್ಟ ದೇವದೂತರು ದಾರಿತಪ್ಪುವದನ್ನು ಮೆಚ್ಚುವವನಾಗಿದ್ದು ಈ ಮೂಲಕವಾಗಿ ಇವನು ಅವರ ಮುಖ್ಯಸ್ಥನಾದ "ದೆವ್ವಗಳ ಒಡೆಯನೆಂದು" ಹೇಳಲ್ಪಟ್ಟಿದ್ದು ಸಂದೇಹವಿಲ್ಲದೆ ಒಂದು ಉತ್ಕೃಷ್ಟ ಸ್ತರದಲ್ಲಿನ ಜೀವಿಯಾಗಿ ಇತರರ ಮೇಲೆ ಕೆಲವು ಮಟ್ಟಿನ ನಿಯಂತ್ರಣವನ್ನು ಸಾಧಿಸಿ ಪ್ರಯೋಗಿಸುತ್ತಿರುವನು.

ಈ ಬಿದ್ದುಹೋದ ದೇವದೂತರು, ಅಂದರೆ "ದೆವ್ವಗಳು", ತಮ್ಮಲ್ಲಿ ಬಹು ಅಲ್ಪ ಆಸಕ್ತಿ ಹೊಂದಿರುವ ಸಂಭವವಿರುವದು; ಹೇಗಂದರೆ ಕೆಟ್ಟ ಜೀವಿಗಳು ಯಾವಾಗಲೂ ಶುದ್ಧರೊಂದಿಗೆ ಆಟವಾಡಲು ಇಷ್ಟಪಡುವದು ಸ್ಪಷ್ಟವಾಗಿದ್ದು, ಅವರನ್ನು [ಮನುಕುಲದವರನ್ನು] ಭ್ರಷ್ಟಗೊಳಿಸಿ ಹೀನಸ್ಥಿತಿಗೆ ತರುವುದರಲ್ಲಿ ಸಂತೋಷಿಸುವರು. ಈ ದೆವ್ವಗಳ ಇತಿಹಾಸವು ಜಲಪ್ರಳಯಕ್ಕೆ ಮೊದಲು ಇವುಗಳಲ್ಲಿದ್ದಂಥ ದುಷ್ಟತನವನ್ನು ನಡೆಸುವ ಬಯಕೆಯು ಇವುಗಳನ್ನು ಬಿದ್ದುಹೋಗುವಂತೆ ನಡೆಸಿತೆಂಬುದನ್ನು ತೋರುವಂತೆ ಶಾಸ್ತ್ರವಚನಗಳಲ್ಲಿ ನೀಡಲಾಗಿರುವದು; ಇದು ಈಗಲೂ ಅವುಗಳಲ್ಲಿ ಮುಂದುವರೆಯುತ್ತಿರುವದು. ಈಗಲೂ ವಿಷಯಲಂಪಟತೆ ಹಾಗು ನೀತಿಭ್ರಷ್ಟತೆಗಳಲ್ಲಿ ಇರುವದು ಇವುಗಳ ಪರಮ ಸಂತೋಷ; ಚೆನ್ನಾಗಿ ಅಭಿವೃದ್ಧಿಯಾದವರಿಗೆ ವಿರುದ್ಧವಾಗಿ ಕೀಟಲೆ ಮಾಡುವದಲ್ಲದೆ ತಾವು ಸಂಪೂರ್ಣವಾಗಿ ನಿಯಂತ್ರಿಸಿಕೊಂಡಂಥವರನ್ನು ವಿಷಯಲಂಪಟರನ್ನಾಗಿ ಮಾಡುವದೇ ಮನುಕುಲದ ಮೇಲಿರುವ ಇವುಗಳ ಪ್ರಭಾವದಲ್ಲಿನ ಸಾಮಾನ್ಯ ಪ್ರವೃತ್ತಿ.

ಈಗ ಪರಿಗಣಿಸಲಾಗಿರುವ ಮಾನವ ಸಂತಾನಾಭಿವೃದ್ಧಿ ಮಾನಸಿಕ ಅಸ್ಥಿರತೆ ಮತ್ತು ಭಾವೋದ್ವೇಗಗಳನ್ನು ಅನೇಕ ಕ್ರೈಸ್ತರು ದೆವ್ವಗಳ ಕೃತ್ಯಗಳ ಲಕ್ಷಣವೆಂದು ಆರೋಪಿಸಿ ಈ ಬಗ್ಗೆ ಕರ್ತನು ಹಾಗು ಅಪೋಸ್ತಲರು ಮೋಸಹೋಗಿರುವರೆಂಬ ನಿರ್ಣಯಕ್ಕೆ ಅವರು ಬಂದಿರುವದರ ಬಗ್ಗೆ ನಮಗೆ ಚೆನ್ನಾಗಿ ತಿಳಿದಿರುವದು. ಆದರೆ ಎಲ್ಲರೂ ಒಪ್ಪಿಕೊಳ್ಳಬೇಕಾದುದೆಂದರೆ, ನಮ್ಮ ಕರ್ತನು ಈ ವಿಷಯದಲ್ಲಿ ತಪ್ಪಿಹೋಗಿದ್ದೇ ಆಗಿದ್ದಲ್ಲಿ, ಯಾವುದೇ ವಿಷಯದ ಮೇಲೆ ಆತನು ಮಾಡಿರುವಂಥ ಉಪದೇಶವು ಒಂದು ಸುರಕ್ಷಿತವಲ್ಲದ ಮಾರ್ಗದರ್ಶಿಯಾಗುವದೆಂಬದು.

ಈ ದೆವ್ವಗಳಿಗೆ ಕೊಡಲ್ಪಟ್ಟಿರುವ ವ್ಯಕ್ತಿತ್ವ ಹಾಗು ಬುದ್ಧಿಶಕ್ತಿಯ ಬಗ್ಗೆ ಮುಂದಿನ ಶಾಸ್ತ್ರವಚನಗಳನ್ನು ಗಮನಿಸಿ: "ದೇವರು ಒಬ್ಬನೇ ಎಂದು ನೀನು ನಂಬುವವನು; ಹಾಗೆ ನಂಬುವದು ಒಳ್ಳೆಯದು. ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ." (ಯಾಕೋಬ 2:19) ಮಾನವ ಮನೋಪ್ರವೃತ್ತಿಗಳು "[ಹೀಗೆ] ನಂಬಿ ನಡುಗುವವೋ?" ದೆವ್ವವು ನಮ್ಮ ಕರ್ತನಿಗೆ ಹೀಗೆ ಹೇಳಿದ್ದವು, "ನೀನು [ಕ್ರಿಸ್ತನು] ದೇವರ ಕುಮಾರನು ಎಂದು ಅಬ್ಬರಿಸಿ ಅನೇಕರನ್ನು ಬಿಟ್ಟು ಹೋದವು. ತಾನು ಕ್ರಿಸ್ತನೆಂದು ಅವುಗಳಿಗೆ ತಿಳಿದಿದ್ದರಿಂದ ಆತನು ಅವುಗಳನ್ನು ಮಾತಾಡದಂತೆ ಗದರಿಸಿದನು." (ಲೂಕ 4:41) ಮತ್ತು ಬೇರೊಂದು [ದೆವ್ವವು] ಹೇಳಿದ್ದು: "ಯೇಸುವಿನ ಗುರುತು ನನಗುಂಟು, ಪೌಲನನ್ನೂ ಬಲ್ಲೆನು, ನೀವಾದರೆ ಯಾರು?" (ಅ.ಕೃ. 19:15) ಪೌಲನು ಕಣಿಹೇಳುವ ಆತ್ಮವನ್ನು ಗಾರುಡಗಾತಿಯಾದ ಹುಡುಗಿಯಿಂದ ಹೊರಡಿಸಿದಂಥದ್ದು (ಅ.ಕೃ. 16:26–19) ಒಂದು ಒಳ್ಳೆಯ ನಿದರ್ಶನ. ಅಪೋಸ್ತಲನು ಆ ಸ್ತ್ರೀಯನ್ನು ಯಾವುದೇ ಸೂಕ್ತವಾದ ಪ್ರತಿಭೆ ಅಥವಾ ಶಕ್ತಿಯಿಂದ ವಂಚಿತಳನ್ನಾಗಿ ಮಾಡಿದನೆಂದು ಯಾರಿಗಾದರೂ ಹೇಳಲು ಸಾಧ್ಯವೇ? ಇದು ಆಕೆಯ ದೇಹವನ್ನು ವಶೀಕರಿಸಿಕೊಂಡು ಅದನ್ನು ಬಳಸಿಕೊಳ್ಳುತ್ತಿದ್ದ ಒಂದು ಆತ್ಮವೆಂಬುದನ್ನು ಅರಿಕೆಮಾಡಿ ಹೇಳಬೇಕಲ್ಲವೇ? – ಅಲ್ಲಿ ಇದು ಸಹಿಸಿಕೊಳ್ಳಲು ಯೋಗ್ಯವಲ್ಲದ ಒಂದು ದುರಾತ್ಮವಾಗಿರುವದಲ್ಲವೇ?

ಶಾಸ್ತ್ರವಚನಗಳಲ್ಲಿ ಹೇಳಿರುವ ದೆವ್ವಗಳು ಸತ್ತು ಹೋಗಿರುವ ದುಷ್ಟ ಪುರುಷರ ಹಾಗು ಸ್ತ್ರೀಯರ ಆತ್ಮಗಳೆಂದೂ, ಅಲ್ಲದೆ ಆತ್ಮವಾದಿಗಳು ಒಪ್ಪಿಕೊಂಡಿರುವಂಥ "ವಂಚಿಸುವ ಆತ್ಮಗಳು" ಎಂದು ಹೇಳಿಕೊಳ್ಳುವಂಥ ಅನೇಕರಿಗೆ ಇನ್ನೂ ಒಂದು ತೊಡಕು ಎದುರಾಗುವದು; – ಕಾರಣ "ಶೀಯೋಲ್' ಮತ್ತು ಹೇಡ್ಸ್ ಎಂಬುದನ್ನು ಅವರು ತಪ್ಪಾಗಿ ಅರ್ಥೈಸಿಕೊಂಡವರಾಗಿ ಅದನ್ನು ನರಕವೆಂದು ವ್ಯಾಖ್ಯಾನಮಾಡಿಕೊಂಡು ಅವರು ಸಾಮಾನ್ಯವಾಗಿ ಸತ್ತುಹೋಗಿರುವ ಕೆಟ್ಟವರ ಆತ್ಮಗಳು ನರಕಯಾತನೆಗೆ ಹೋಗಿರುವದೆಂದು ಹೇಳಿಕೊಳ್ಳುವರು. ಹೀಗಿದ್ದಲ್ಲಿ ಅವುಗಳಿಗೆ ಅಷ್ಟೊಂದು ಸ್ವಾತಂತ್ರವಿರಲು ಹೇಗೆ ಸಾಧ್ಯ?

"ಮಾಟಗಾರಿಕೆ" "ಬೇತಾಳಿಕತೆ" "ವಾಮಾಚಾರ" "ಯಕ್ಷಣಿ ವಿದ್ಯೆ" ಮುಂತಾದವುಗಳು ಸಂಪೂರ್ಣವಾಗಿ ಭ್ರಮೆಯೆಂದು ಅನೇಕರಿಂದ ಭಾವಿಸಲಾಗಿರುವದು. ಆದರೆ ಇವುಗಳು ಐಗುಪ್ತರ ಮೇಲೆ ಬಲವಾದ ಹಿಡಿತವನ್ನು ಹೊಂದಿತ್ತೆಂದೂ, ಅಲ್ಲದೆ ದೇವರು ಇಸ್ರಾಯೇಲ್ಯರ ಸಂಬಂಧದಲ್ಲಿ ಇವುಗಳಿಗೆ ವಿರೋಧವಾಗಿ ವಿಶೇಷವಾದ ಏರ್ಪಾಟನ್ನು ಮಾಡಿದ್ದನೆಂಬುದನ್ನು ನಾವು ಕಂಡುಕೊಂಡಾಗ, ಮತ್ತು ಆತನು ಇವುಗಳಲ್ಲಿನ ಒಳ್ಳೆಯವುಗಳಿಗೆ ಅಥವಾ ಯಾವುದೇ ಅಸ್ತಿತ್ವವಿಲ್ಲದಂಥವುಗಳಿಗೆ ಇಂಥ ಯಾವ ನಿರ್ಬಂಧವನ್ನು ವಿಧಿಸಿರುವದಿಲ್ಲವೆಂಬುದಕ್ಕೆ ನಾವು ಸಂತುಷ್ಟರಾಗಿದ್ದೇವೆ. ಇಸ್ರಾಯೇಲ್ಯರಿಗೆ ಇದರ ಬಗ್ಗೆ ಇರುವ ಸೂಚನೆಗಳು ಬಹು

ಸ್ಪಷ್ಟವಾಗಿದ್ದವು; ಅವರು ಬೇತಾಳಿಕರೊಡನೆ (ಅಂದರೆ ಮೃತರೊಡನೆ ಮಾತನಾಡುವದಾಗಿ ಹೇಳಿಕೊಳ್ಳುವವರ ಅಂದರೆ ಆತ್ಮ–ಮಾಧ್ಯಮಿಗಳೊಡನೆ) ಇಲ್ಲವೇ ಯಾವ ಮಾಂತ್ರಿಕರೊಡನೆ ಅಥವಾ ಮಾಟಗಾತಿಯರೊಡನೆ ಯಾವುದೇ ಸಂಪರ್ಕವನ್ನು ಅಥವಾ ಯಾವುದೇ ವಿಚಾರಣೆಯನ್ನು ಮಾಡಬಾರದಿತ್ತು. ಇಲ್ಲವೇ ಅತೀಂದ್ರಿಯ ಶಕ್ತಿ, ಮೋಹಗೊಳಿಸುವ; ಅಥವಾ ಯಕ್ಷಣಿ ವಿದ್ಯೆಯ ಮತ್ತು ಮಂತ್ರೋಚ್ಚಾರದ ಮೂಲಕವಾಗಿ ಅದ್ಭುತಗಳನ್ನು ಮಾಡುವವರನ್ನು ಸಂಪರ್ಕಿಸಬಾರದಿತ್ತು. – ಮುಂದಿನ ವಾಕ್ಯಭಾಗಗಳನ್ನು ಗಮನವಿಟ್ಟು ಓದಿರಿ: ವಿಮೋಚನಾಕಾಂಡ 22:18; ಧರ್ಮೋಪದೇಶಕಾಂಡ 18:9–12; ಯಾಜಕಕಾಂಡ 19:31; 20:6,27; 2 ಅರಸರು 21;2, 6, 9, 11; 1 ಪೂರ್ವ 10:13, 14; ಅ.ಕೃ. 16:16–18; ಗಲಾತ್ಯ 5:19–21; ಪ್ರಕಟನೆ 21:8; ಯೆಶಾಯ 8:19, 20; 19:3.

ಅರಸನಾದ ಸೌಲನು ಬೇತಾಳಿಕಳಾದ ಏಂದೋರಿನ ಮಾಟಗಾತಿಯೊಡನೆ ಅಥವಾ ಮೃತರ–ಸಂಪರ್ಕ–ಮಾಧ್ಯಮಿಯೊಡನೆ ನಡೆಸಿದ್ದ ಮೃತರ ದರ್ಶನದ ಸಂಬಂಧವಾಗಿರುವ ಸತ್ಯವೇದದ ಕಥೆಯು, 1 ಸಮುವೇಲ 28:7–20ನೇ ವಾಕ್ಯಗಳಲ್ಲಿ ನಿರೂಪಿಲಾಗಿರುವಂತೆ, ಈ ದಿನದಲ್ಲಿ ನಡೆಸುತ್ತಿರುವದಾಗಿ ಹೇಳಿಕೊಳ್ಳುವಂಥ ಸಂಗತಿಗೆ ಒಂದು ನಿದರ್ಶನವಾಗಿರುವದು. ಈ ಮೃತರ–ಸಂಪರ್ಕ–ಮಾಧ್ಯಮಿಗಳ ಸಂಬಂಧವಾದ ಆಜ್ಞಾವಿಧಿಗಳು ಬಹು ಕಠಿಣವಾಗಿದ್ದು ಇದರ ಶಿಕ್ಷೆಯು ಮರಣದಂಡನೆಯಾಗಿದ್ದಾಗ್ಯೂ, ಅಲ್ಲಿ ಕೆಲವರಿದ್ದು ಅವರು ಈ ಮೂಲಕವಾಗಿ ಜನರಿಂದ ಹಣಗಳಿಸುತ್ತಿದ್ದ ಕಾರಣದಿಂದ ತಮ್ಮ ಜೀವವನ್ನು ಅಪಾಯಕ್ಕೆ ಗುರಿಮಾಡಿಕೊಳ್ಳಲು ಸಿದ್ಧರಿದ್ದರು. ಈ ದಿನದಲ್ಲಿನ ಸಂಪರ್ಕಮಾಧ್ಯಮಿಗಳ ವಿಷಯದಲ್ಲಿದ್ದಂತೆಯೇ, ಅವರು ಮೃತರಾದ ತಮ್ಮ ಮಿತ್ರರಿಂದ ಆತ್ಮಿಕ ಲೋಕದಿಂದ ಉತ್ಕೃಷ್ಟ ಮಾಹಿತಿಗಳನ್ನು ಪಡೆಯುತ್ತಿರುವದಾಗಿ ನಂಬಿದ್ದರು. ಇಸ್ರಾಯೇಲ್ ದೇಶದಲ್ಲಿ ದೈವ ಪ್ರತಿಬಂಧಕಾಜ್ಞೆ ಹಾಗು ತನ್ನದೇ ನಿಷೇಧಾಜ್ಞೆಗೆ ವಿರುದ್ಧವಾಗಿ ಅನೇಕ ಮೃತರ–ಸಂಪರ್ಕ–ಮಾಧ್ಯಮಿಗಳು ಇದ್ದರೆಂಬದು ಸೌಲನಿಗೆ ಚೆನ್ನಾಗಿ ತಿಳಿದಿತ್ತು. ಹೀಗಾಗಿ ಆತನ ಸೇವಕರಿಗೆ ಏಂದೋರಿನಲ್ಲಿ ಒಬ್ಬಳನ್ನು ಕಂಡುಕೊಳ್ಳಲು ಕಷ್ಟಕರ–ವಾಗಿರಲ್ಲಿವೆಂಬುದು ಸ್ಪಷ್ಟವಾಗಿತ್ತು. ಸೌಲನು ಸಂದರ್ಶನಕ್ಕಾಗಿ ತನ್ನ ವೇಷಮರೆಸಿಕೊಂಡು ಬಂದಿದ್ದರೂ ಆ ತಂತ್ರಗಾರಿಕೆಯ ಸ್ತ್ರೀಗೆ ನಿಸ್ಸಂದೇಹವಾಗಿ ಇಸ್ರಾಯೇಲಿನ ಯಾವುದೇ ಮನುಷ್ಯನಿಗಿಂತಲೂ ತನ್ನ ತಲೆ ಹಾಗು ಹೆಗಲು ಎತ್ತರವಿರುವ ಸೌಲನ ಗಾಂಭೀರ್ಯವು ಚೆನ್ನಾಗಿ ತಿಳಿದಿತ್ತು. (1 ಸಮುವೇಲ 9:2) ಹೀಗಾಗಿ ಈಕೆಯ ನಿರ್ಧಿಷ್ಟತೆಯು ಈ ಸೇವೆಯ ದೆಸೆಯಿಂದ ತನಗೆ ಯಾವ ಹಾನಿಯೂ ಸಂಭವಿಸದೇ ಇರುವಂತಾಗಲು ಈಕೆಯು ಸ್ವತಃ ಸೌಲನ ಸ್ವಂತ ಬಾಯಿಂದಲೇ ಒಂದು ಪ್ರಮಾಣಪೂರ್ವಕವಾದ ವಾಗ್ದಾನವನ್ನು ಪಡಕೊಂಡಿದ್ದಳು.

ಏಂದೋರಿನಲ್ಲಿ ಸಂಪರ್ಕ–ಮಾಧ್ಯಮಿಯ ಮೂಲಕವಾಗಿ ದುರಾತ್ಮಗಳು ಬಳಸಿದ್ದ ವಿಧಾನಗಳು ಈ ದಿನದಲ್ಲಿ ಬಳಸಲಾಗುವ ರೀತಿಯಂಥದ್ದೇ ಆಗಿದ್ದವು. ಅವುಗಳು ಆ ಮಾಧ್ಯಮಿಯ ಮಾನಸಿಕ ದೃಷ್ಟಿಯ ಎದುರಿನಲ್ಲಿ ತನ್ನ ಪದ್ಧತಿಯಂತೆ ಒಂದು ಉದ್ದನೆಯ ವಸ್ತ್ರವನ್ನು ಧರಿಸಿರುವ ವೃದ್ಧ ಪ್ರವಾದಿಯಾದ ಸಮುವೇಲನನ್ನೇ ಹೋಲುವಂಥ ಒಂದು ಚಿರಪರಿಚಿತ ರೂಪವೇ ದಾಟಿಹೋಗುವಂತೆ ಮಾಡಿದ್ದವು. ಆಕೆಯು ನೀಳವಸ್ತ್ರಧಾರಿಯ (ಅಥವಾ ಹೊಳಪುವಸ್ತ್ರಧಾರಿಯ) ಚಿತ್ರವನ್ನು ವರ್ಣಿಸಿದಾಗ ಕೂಡಲೇ ಸೌಲನು ಅದನ್ನು ಸಮುವೇಲನ ವರ್ಣನೆಯೆಂದು ಗ್ರಹಿಸಿಕೊಂಡಿದ್ದನು; ಆದರೆ ಸೌಲನು ತಾನು ವೈಯುಕ್ತಿಕವಾಗಿ ಯಾವುದನ್ನೂ ನೋಡದಿದ್ದರೂ, ಈ ವರ್ಣನೆಯ ಮೂಲಕವಾಗಿ ಆತನು ಸಮುವೇಲನಾಗಿದ್ದನೆಂಬುದನ್ನು "ಅರಿತು–ಕೊಂಡಿದ್ದನು". ಇಂಥಾ ಸಂದರ್ಭಗಳಲ್ಲಿ ಜನರು ಸಾಧಾರಣವಾಗಿ ಮಾಡುವಂತೆ ಸೌಲನು ಸುಲಭವಾಗಿ ಮನವರಿಕೆ ಮಾಡಿಕೊಂಡಿದ್ದು, ಸಮುವೇಲನು ಆತ್ಮಿಕ ಜೀವಿಯಾಗಿದ್ದು ಬಹು ಉತ್ತಮ ಸ್ಥಿತಿಯಲ್ಲಿ ಇರುವಲ್ಲಿ, ಈಗಿನ ಕಾಲದಲ್ಲಿ ಜೀವಿಸುವವರಂತೆ ಸಮುವೇಲನು ಬಗ್ಗಿದ ವೃದ್ಧನಂತೆ ಕಾಣಲು ಹೇಗೆ ಸಾಧ್ಯವೆಂಬುದನ್ನು ಸೌಲನು ಪ್ರಶ್ನಿಸಲು ಮುಂದಾಗಿರಲಿಲ್ಲ; ಇಲ್ಲವೇ ತಾನು ತಿಳಿದಿದ್ದಂತೆ ಸಮುವೇಲನು ಒಬ್ಬ ಭೂಜೀವಿಯಾಗಿದ್ದಾಗ ಧರಿಸಿದ್ದ ಅದೇ ಹಳೇ ವಸ್ತ್ರವನ್ನು ಆತನು ಆತ್ಮಿಕ ಲೋಕದಲ್ಲಿಯೂ ಏಕೆ ಧರಿಸಿದ್ದನೆಂಬುದನ್ನು ಸೌಲನು ವಿಚಾರಿಸಿಲಿಲ್ಲ. ಸೌಲನು ದೇವರಿಂದ ತೊರೆಯಲ್ಪಟ್ಟಿದ್ದು ಈಗ ಈ "ಅಸತ್ಯವನ್ನಾಡುವ ಆತ್ಮಗಳಿಂದ" ಸುಲಭವಾಗಿ ವಂಚಿಸಲ್ಪಟ್ಟಿದ್ದನು; ಇವು ಪ್ರವಾದಿಯ ವ್ಯಕ್ತಿರೂಪದಲ್ಲಿ ಬಂದು ಆತನ ಹೆಸರಿನಲ್ಲಿ ತಮ್ಮ "ಸಂಪರ್ಕ ಮಾಧ್ಯಮಿಯ" ಅಂದರೆ ಮಾಟಗಾತಿ, ಬೇತಾಳಿಕಳು, ಆತ್ಮವಾದಿಯ, ಮೂಲಕವಾಗಿ ಸೌಲನೊಂದಿಗೆ ಮಾತನಾಡಿದ್ದವು.

ಬಿದ್ದುಹೋಗಿರುವ ಆತ್ಮಗಳು ಭೂಲೋಕದಲ್ಲಿ ನಡೆಯುವ ಸಂಗತಿಗಳ ಬಗ್ಗೆ ಚೆನ್ನಾಗಿ ತಿಳಿದಿರುವದು ಮಾತ್ರವಲ್ಲದೆ ಅವು ವಂಚಿಸುವದರಲ್ಲಿಯೂ ನಿಪುಣತೆಯುಳ್ಳವುಗಳಾಗಿರುವವು. ಸೌಲನಿಗೆ ಉತ್ತರಿಸುವಾಗ, ಆತನನ್ನು ಉತ್ತಮ ರೀತಿಯಲ್ಲಿ ವಂಚಿಸ ಸಲುವಾಗಿ ಮೃತ ಪ್ರವಾದಿಯ ವಿಧಾನ, ಶೈಲಿ ಹಾಗು ಆತನ ಮನೋಪ್ರವೃತ್ತಿಯ ಬಗ್ಗೆ ನಿರ್ಣಯಿಸಿಕೊಂಡು ಅದನ್ನು ಸಾಧ್ಯವಾದಷ್ಟು ನಿಕಟವಾಗಿ ಅನುಕರಣೆಮಾಡಲು ಅಂದರೆ ಉತ್ತಮವಾಗಿ ವಂಚಿಸಲು ನಿರ್ಧರಿಸಿಕೊಂಡಿದ್ದವು. (ಹೀಗೆ ಈ ಅಸತ್ಯವನ್ನಾಡುವ ಆತ್ಮಗಳು ಯಾವಾಗಲೂ ಮೃತರ ಮುಖಚರ್ಯೆ ಅವರು ಅನುಸರಿಸುವ ವಿಧಾನಗಳು ಹಾಗು ಅವರ ಪ್ರವೃತ್ತಿಗಳನ್ನು ನಕಲುಮಾಡಲು ಬಯಸುವವು) ಆ ಪ್ರತ್ಯುತ್ತರವು ಏನಾಗಿತ್ತೆಂದರೆ "ನೀನು ನನ್ನ ವಿಶ್ರಾಂತಿಯನ್ನು ಕೆಡಿಸಿದ್ದೇಕೆ?" ಈ ಉತ್ತರವು ಯೆಹೂದ್ಯರ ನಂಬಿಕೆಯನ್ನು ಹೋಲುವದು; ಅದೇನಂದರೆ ಒಬ್ಬ ವ್ಯಕ್ತಿಯು ಸತ್ತಾಗ ಆತನು "ಶಿಯೋಲ್" ಎಂಬ ಸಮಾಧಿಯ ಸ್ಥಳದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ಪುನರುತ್ಥಾನಕ್ಕಾಗಿ ಕಾದುಕೊಂಡಿರುವನೆಂಬದು. (ಯೋಬ 14:12–15,21: ಕೀರ್ತನೆ 90:3; ಪ್ರಸಂಗಿ 9:5–6) ಹೀಗೆ ನಿರೂಪಿಸಲಾಗಿದ್ದೇನಂದರೆ ಸಮುವೇಲನನ್ನು ಸಮಾಧಿಯಿಂದ ಮೇಲಕ್ಕೆ ಕರಕೊಂಡು ಬರಲಾಗಿದ್ದು, ಅದು ಪರಲೋಕದಿಂದ ಇಳಿದು ಬರುವಂತೆ ಮಾಡಿರಲಿಲ್ಲ, ಅಲ್ಲದೆ ಆತನ ವಿಶ್ರಾಂತಿಯನ್ನು

ಅಥವಾ ಸಮಾಧಾನಕರವಾದ "ನಿದ್ರೆಯನ್ನು" ಕೆಡಿಸಲಾಗಿತ್ತು ಅಥವಾ "ಭಂಗಪಡಿಸಲಾಗಿತ್ತು" ಎಂಬುದೇ. –ಕೀರ್ತನೆ 13:3; ಯೋಬ 14:12; ಕೀರ್ತನೆ 90:5; ಯೋಹಾನ 11:11–14.

ತಾನು ಬದುಕಿರುವಾಗ ತನ್ನನ್ನು ಭೇಟಿಯಾಗಿ ತನ್ನೊಡನೆ ಯಾವುದೇ ಹೆಚ್ಚಿನ ಸಂಭಾಷಣೆಮಾಡಲು ನಿರಾಕರಿಸಿದ್ದಂಥ ಪ್ರವಾದಿಯಾದ ಸಮುವೇಲನು ಮಾಟಗಾತಿಯ ಅದ್ಭುತ ಶಕ್ತಿಯ ಮೂಲಕವಾಗಿ ತನ್ನೊಂದಿಗೆ ಸಂಪರ್ಕಿಸಲು ಬಲಾತ್ಕರಿಲ್ಪಟ್ಟಿರುವನೆಂಬುದನ್ನು ನಂಬುವಂತೆ ಸೌಲನು ಸುಲಭವಾಗಿ ವಂಚಿಸಲ್ಪಟ್ಟಿದ್ದನು. (1 ಸಮುವೇಲ 15:26,35 ನೋಡಿ) ಸ್ವತಃ ಸೌಲನ ಸಾಕ್ಷಿಯು ಹೀಗಿತ್ತು: "ದೇವರು ನನ್ನನ್ನು ಬಿಟ್ಟು ದೂರಹೋಗಿದ್ದಾನೆ; ಆತನು ನನಗೆ ಪ್ರವಾದಿಗಳಿಂದಾಗಲಿ ಕನಸುಗಳಿಂದಾಗಲಿ ಉತ್ತರಕೊಡಲೊಲ್ಲನು." 1 ಸಮುವೇಲ 28:6,15.

ಸೂಕ್ತವಾದ ತಿಳುವಳಿಕೆಯುಳ್ಳ ಯಾವುದೇ ವ್ಯಕ್ತಿಯು ಈ ಸನ್ನಿವೇಶದಲ್ಲಿ ಸಮುವೇಲನು ಸೌಲನೊಡನೆ ಯಾವುದೇ ಸಮಾಲೋಚನೆ ನಡೆಸುವನೆಂದು ಭಾವಿಸುವದರಲ್ಲಿನ ನಿರರ್ಥಕತೆಯನ್ನು ಸುಲಭವಾಗಿ ಕಾಣುವನು. (1) ಸಮುವೇಲನು (ತಾನು ಜೀವಿಸುತ್ತಿದ್ದಾಗ) ದೇವರು ಸೌಲನನ್ನು ತೊರೆದಿದ್ದಾನೆಂಬುದನ್ನು ಅರಿತುಕೊಂಡಿದ್ದು, ಹೀಗಾಗಿ ದೇವರು ತನಗೆ ಕೊಡಲು ಇಚ್ಛಿಸದ ಯಾವುದೇ ಮಾಹಿತಿಯನ್ನು ಕೊಡುವ ಅಥವಾ ಅದರ ಬಗ್ಗೆ ಹೇಳುವ ಅಧಿಕಾರ ಸಮುವೇಲನಿಗೆ ಇರಲಿಲ್ಲ. ಅಲ್ಲದೆ ಸಮುವೇಲನು ಹಾಗೆ ಮಾಡಲಾರನು. (2) ದೇವರಿಂದ ಖಂಡನೆಗೊಳಗಾಗಿದ್ದು ಇಸ್ರಾಯೇಲ್ ದೇಶದಲ್ಲಿ ನೆಲೆಸುವಂಥ ಅಧಿಕಾರದಿಂದ ನಿಷೇಧಿಸಲ್ಪಟ್ಟ ಒಬ್ಬ ಆತ್ಮ–ಸಂಪರ್ಕ–ಮಾಧ್ಯಮಿಗೆ ದೇವರು ತೊರೆದ ದುಷ್ಟ ಅರಸನ ಕೊರಿಕೆಯ ಮೇರೆಗೆ ಸಮುವೇಲನ ವಿಶ್ರಾಂತಿಯನ್ನು ಭಂಗಪಡಿಸಿ ಆತನನ್ನು ಶಿಯೋಲ್ ಎಂಬ ಮರಣಾವಸ್ಥೆಯಿಂದ ಹೊರತರುವ ಅಧಿಕಾರವಿರುವದೆಂಬುದನ್ನು ಭಾವಿಸುವುದು ಸಂಪೂರ್ಣವಾಗಿ ನಿರರ್ಥಕವಾದದ್ದು. ಸಮುವೇಲನು ಭೂಮಿಯೊಳಗೆ ಇಳಿದುಹೋಗಿದ್ದನೇ, ಅಥವಾ ದೂರದ ಪರಲೋಕದಲ್ಲಿ ಇರುವನೇ? ಯಾವುದೇ ಈ ಎರಡು ಸನ್ನಿವೇಶಗಳಲ್ಲಿಯೂ ಸಮುವೇಲನಿಗೆ ತಾನು ಅರಸನಾದ ಸೌಲನ ಮುಂದೆ ಪ್ರತ್ಯಕ್ಷನಾಗಿ ಆತನ ಪ್ರಶ್ನೆಗಳಿಗೆ ಉತ್ತರಿಸುವಂತೆ ಆದೇಶಿಸುವ ಅಧಿಕಾರವನ್ನು ಮಾಟಗಾತಿ ಪಡೆದಿದ್ದಳೇ? ಇಲ್ಲವೇ ಯಾವುದೇ ಸಂಪರ್ಕ–ಮಾಧ್ಯಮಿಗೆ ಸತ್ತವನ ವಿಶ್ರಾಂತಿಯನ್ನು ಭಂಗಪಡಿಸಿ ಅವನನ್ನು ಹೊರತಂದು ಅಥವಾ ಯಾವುದೇ ವಿಧದಲ್ಲಿ ಬರುವಂತೆ ಮಾಡಿ ಜೀವಿತರ ಊಹಾಪೂರಿತ ಪ್ರಶ್ನೆಗಳಿಗೆ ಉತ್ತರಿಸುವಂತೆ ಮಾಡುವ ಅಧಿಕಾರವಿರುವಂಥದನ್ನು ಭಾವಿಸಿಕೊಳ್ಳುವದು ಉಚಿತವೇ?

ಮಾಟಗಾತಿಯ "ವಂಚಿಸುವ ಆತ್ಮವು" ಸಮುವೇಲನನ್ನು ವ್ಯಕ್ತೀಕರಿಸಿಕೊಂಡು ಸೌಲನು ತಾನೇ ಅಪೇಕ್ಷಿಸದೇ ಇದ್ದ ಯಾವುದೇ ಸಂಗತಿಯನ್ನೂ ಆತನಿಗೆ ಮುಂದಾಗಿ ಹೇಳಿರಲಿಲ್ಲ. ರಾಜ್ಯವು ತನ್ನ ಹಾಗು ತನ್ನ ಸಂತತಿಯಿಂದ ತೆಗೆಯಲ್ಪಟ್ಟಿರುವದಾಗಿ ದೇವರು ನುಡಿದಿರುವ ಬಗ್ಗೆ ಸೌಲನಿಗೆ ತಿಳಿದಿದ್ದು, ಫಿಲಿಷ್ಟಿಯರ ಸೇನೆಯು ಮರುದಿನ ಯುದ್ಧಕ್ಕೆ ವ್ಯೂಹಕಟ್ಟುವ ಬಗ್ಗೆ ಭಯವಿದ್ದ ಕಾರಣ ಆತನು ಮಾಟಗಾತಿಯನ್ನು ಹುಡುಕಿಕೊಂಡು ಹೋಗಿದ್ದನು. ದಾವೀದನು ತನ್ನ ಉತ್ತರಾಧಿಕಾರಿ ಆಗುವನೆಂಬುದನ್ನು ದೇವರು ತಿಳಿಸಿದ್ದರಿಂದ ಸೌಲನು ತನಗಾಗಲಿ ಅಥವಾ ತನ್ನ ಸಂತತಿಗಾಗಲಿ ಯಾವ ಕರುಣೆಯನ್ನು ನಿರೀಕ್ಷಿಸಿರಲಿಲ್ಲ. ಆದುದರಿಂದ ಈ ಸಂಗತಿಗೆ ಸರಿಬೀಳುವ ಕೇವಲ ಒಂದೇ ಒಂದು ಅಂಶವು ಯಾವುದೇ ವಿಧದಲ್ಲಿ ಜ್ಞಾನಾತೀತವಾಗಿ ಸೂಚಿತವಾಗುವದನ್ನು ಸಹ ಆತನು ಅಪೇಕ್ಷಿಸಿದ್ದನು; ಅದೇನಂದರೆ "ನಾಳೆ ನೀನು ನಿನ್ನ ಮಕ್ಕಳೂ ನಾನಿರುವಲ್ಲಿಗೆ ಬರುವಿರಿ; ಆತನು ಇಸ್ರಾಯೇಲ್ ಸೈನ್ಯವನ್ನು ಫಿಲಿಷ್ಟಿಯರ ಕೈಗೆ ಒಪ್ಪಿಸುವನು." ಚೆನ್ನಾಗಿ ತಿಳುವಳಿಕೆಯುಳ್ಳ ದೆವ್ವಗಳು ಫಿಲಿಷ್ಟಿಯರ ಸೇನೆಯ ಬಲವನ್ನು ಹಾಗು ಅದರ ಸ್ಥಾನಮಾನಗಳನ್ನು ಮತ್ತು ಸೌಲನ ಸೇನೆಯ ಬಲಹೀನತೆ ಹಾಗು ಅದರ ಸ್ಥಾನಮಾನಗಳನ್ನು ಮಾತ್ರವಲ್ಲದೆ ಸೌಲನು ಆಗಲೇ ಭಯಪೀಡಿತನಾಗಿದ್ದು ಮಾಟಗಾತಿ–ಮಾಧ್ಯಮಿಯ ಮೂಲಕವಾಗಿ ವಿಚಾರಿಸುತ್ತಿರುವ ಕಾರಣ ಆತನು ಆ ಸನ್ನಿವೇಶದ ಬಗ್ಗೆ ಗೊಂದಲದಲ್ಲಿರುವದನ್ನು ಸೌಲನಿಗಿಂತಲೂ ಅವು ಚೆನ್ನಾಗಿ ತಿಳಿದಿದ್ದವು. ಆ ಕಾಲದ ಯುದ್ಧಗಳ ಬಗ್ಗೆ ಚಿರಪರಿಚಿತನಾದ ಯಾವನೇ ಆದರೂ ಈ ಮುಂದಿನದನ್ನು ತಿಳಿದಿರುವನು. (1) ಒಂದು ದಿನದ ಯುದ್ಧವು ಸಮಸ್ಯೆಯನ್ನು ಬಗೆಹರಿಸುವ ಸಂಭವವಿರುವದು; ಮತ್ತು (2) ಅರಸನ ಹಾಗು ಆತನ ಮನೆತನದವರ ಮರಣವು ಒಂದೇ ತಾರ್ಕಿಕವಾದ ಫಲಿತಾಂಶವಾಗುವದು. ಹೀಗಿದ್ದರೂ "ವಂಚಿಸುವ ಆತ್ಮವು" ತಪ್ಪನ್ನು ಎಸೆಗಿತ್ತು. ಯಾಕಂದರೆ ಸೌಲನ ಇಬ್ಬರು ಮಕ್ಕಳು ತಪ್ಪಿಸಿಕೊಂಡವರಾಗಿ ವರುಷಗಳ ಪರ್ಯಂತರ ಜೀವಿಸಿದ್ದರು. ಸೌಲನ ಯುದ್ಧ ಮರಣಗಳು ಏಂದೋರಿನ ಮಾಟಗಾತಿಯನ್ನು ಬೇಟಿಮಾಡಿದ ಅನೇಕ ದಿನಗಳ ನಂತರ ಸಂಭವಿಸಿತೆಂಬುದನ್ನು ವಿಧ್ವಾಂಸರುಗಳು ಸಹ ನಿರಾಕರಿಸಿರುವರು.



ಸೌಲನು ಮತ್ತು ಏಂದೋರಿನ ಮಾಟಗಾತಿಯು

ಸೈತಾನನು ಮತ್ತು ದುಷ್ಟತನದಲ್ಲಿ ಆತನ ಸಹಯೋಗಿ–ಗಳಾದ ಬಿದ್ದುಹೋದ ದೂತರು ಜೀವನದ ಅನೇಕ ಆಗುಹೋಗುಗಳ ಬಗ್ಗೆ ಮನುಷ್ಯರಿಗಿಂತಲೂ ಗಣನೀಯವಾಗಿ ಹೆಚ್ಚಿನ ಸಂಗತಿಗಳನ್ನು ತಿಳಿದಿರುವರೆಂಬುದಕ್ಕೆ ಆಶ್ಚರ್ಯಪಡ ಬೇಕಿಲ್ಲ. ಅವರು ಸಹಜವಾಗಿಯೇ ರಚನಾಕ್ರಮದಲ್ಲಿ ಮನುಷ್ಯರಿ–ಗಿಂತಲೂ ಒಂದು ಉನ್ನತ ಹಾಗು ಹೆಚ್ಚು ಬುದ್ಧಿವಂತಿಕೆಯ ಸ್ಥಾನದಲ್ಲಿರುವರೆಂಬುದನ್ನು ನಾವು ನೆನಪಿನಲ್ಲಿಡಬೇಕು. ಯಾಕಂದರೆ ಮಾನವನನ್ನು "ದೇವದೂತರಿಗಿಂತಲೂ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ." (ಕೀರ್ತನೆ 8:5) ಇದಲ್ಲದೆ "ಜೀವಿಸಿರುವ ಕಾಲವು ಸ್ವಲ್ಪವಾಗಿಯೂ ಕಷ್ಟಕರವಾಗಿಯೂ" ಇದ್ದು ಮರಣದಲ್ಲಿ ಶೀಘ್ರವಾಗಿ ರದ್ದಾಗಿ ಹೋಗುವ ಮಾನವನ ಜೀವಿತವನ್ನು ಹೋಲಿಸಿ ನೋಡಿದಲ್ಲಿ, ಕ್ಷಯಿಸುವಿಕೆ ಹಾಗು ಮರಣಗಳಿಂದ ಕುಂಟಿತವಾಗದ ಸಾವಿರಾರು ವರುಷಗಳ ಅನುಭವವು ಅವುಗಳಿಗೆ ಇರುವದೆಂಬುದನ್ನು ನಾವು ನೆನಪಿನಲ್ಲಿಡಬೇಕು. ಈ "ದುರಾತ್ಮಗಳ" ಕುಯುಕ್ತಿಯನ್ನು ಸಮರ್ಪಕವಾಗಿ ನಿಭಾಯಿಸಲು ಮಾನವರಿಗೆ ಸಾಧ್ಯವಾಗ–ದೆಂಬುದನ್ನೂ, ಅದಲ್ಲದೆ ನಮಗಿರುವ ಕೇವಲ ಒಂದೇ ಒಂದು ಸುರಕ್ಷತಾ ಮಾರ್ಗವು ದೈವಿಕ ಏರ್ಪಾಟಿನಲ್ಲಿರಲು, ಇದನ್ನು ಹೊಂದಲು ಬಯಸುವ ನಮ್ಮಲ್ಲಿನ ಪ್ರತಿಯೊಬ್ಬನೂ ಈ ದೆವ್ವಗಳೊಂದಿಗೆ ಯಾವ ಸಂಪರ್ಕವನ್ನು ಮಾಡಲು ನಿರಾಕರಿಸಬೇಕೆಂಬುದಕ್ಕೆ ನಮಗೆ ಆಶ್ಚರ್ಯವಾಗಲು ಸಾಧ್ಯವೇ? ಇರುವ ದೇವರ ವಾಕ್ಯವೇನಂದರೆ: "ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು." (ಯಾಕೋಬ 4:7) "ಸ್ವಸ್ಥಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾದ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ;" – 1 ಪೇತ್ರ 5:8–9.

ಆದರೆ ಹಿಂದಿನ ಹಾಗು ಈಗಿನ ಸಂಗತಿಗಳ ಬಗ್ಗೆ ತಿಳಿಸಲು ಸಮರ್ಥವಾಗಿರುವ ಈ ದುಷ್ಟ ಬುದ್ಧಿಶಕ್ತಿಗಳು ಭವಿಷ್ಯದ ಬಗ್ಗೆ ಊಹಿಸುವದಕ್ಕಿಂತಲೂ ಹೆಚ್ಚಿನದೇನೂ ಮಾಡಲು ಬಹು ಅಶಕ್ತವಾಗಿರುವವು. ಆದರೂ ಈ ಊಹಿತವಾದವುಗಳನ್ನು ಯಾವಾಗಲೂ ಎಷ್ಟು ಕೌಶಲ್ಯದಿಂದ ಹೇಳುವವೆಂದರೆ ಅದನ್ನು ವಿಚಾರಿಸುವವನಿಗೆ ತೃಪ್ತಿಪಡಿಸಿ ಫಲಿತಾಂಶವು ಆತನ ನಿರೀಕ್ಷೆಗೆ ವಿರುದ್ಧವಾಗಿದ್ದರೂ ಅದು ನಿಜವಿರುವಂತೆ ತೋರ್ಪಡಿಸುವವು. ಹೀಗೆ ಕ್ರೋಯೆಶಸ್ ಎಂಬುವರು ಕೇಳಿದ ಸಲಹೆಗೆ ಡೆಲ್ಫಿ ಎಂಬಾಕೆಯು ನೀಡಿದ ವಾಕ್ಸಂದೇಶವು ಆತನಿಗೆ ಆಗಿನ ಸಂಗತಿಗಳ ಬಗ್ಗೆ ಅದು ಮನುಷ್ಯಾತೀತ ಜ್ಞಾನವಾಗಿ ತೋರ್ಪಡಲಾಗಿದ್ದು, ಈ ಮೂಲಕವಾಗಿ ಆತನು ಆತ್ಮವಿಶ್ವಾಸವನ್ನು ಗಳಿಸಿಕೊಂಡವನಾಗಿ ಆ ಮಾಧ್ಯಮಿಯ ಮೂಲಕವಾಗಿ ಹೀಗೆ ವಿಚಾರಿಸಿದ್ದನು: "ತಾನು ಪರ್ಷಿಯನ್ನರ ವಿರುದ್ಧವಾಗಿ ಸೈನ್ಯವನ್ನು ಮುನ್ನಡೆಸಬಹುದೋ?" ಇತಿಹಾಸಕಾರನಾದ ಹೆರೋಡಿಟಸ್ಸನು ದಾಖಲಿಸಿರುವಂತೆ ಇದಕ್ಕೆ ಉತ್ತರವು ಹೀಗಿತ್ತು: "ಹ್ಯಾಲಿಸ್ಸನ್ನು ದಾಟುವದರ ಮೂಲಕವಾಗಿ ಕ್ರೋಯೆಶಸ್ಸನು ಆ ಮಹಾ ಬಲವನ್ನು ನಾಶಪಡಿಸುವನು." ಇದನ್ನು ನೆಚ್ಚಿಕೊಂಡು ಕ್ರೋಯೆಶಸ್ಸನು ಪರ್ಷಿಯನ್ನರ ಮೇಲೆ ಆಕ್ರಮಣಮಾಡಿ ಸೋತುಹೋಗಿದ್ದನು. ಸ್ವತಃ ಆತನ ಪ್ರಬಲವಾದ ಆಡಳಿತಾಧಿಕಾರವು ನಶಿಸಿಹೋಗಿತ್ತು! ಚರಿತ್ರೆಯು–ದೆವ್ವಗಳಿಗೆ ಭವಿಷ್ಯದ ಬಗ್ಗೆ ತಿಳುವಳಿಕೆ ಇರುವದಿಲ್ಲವೆನ್ನುವಂಥ ನಿದರ್ಶನಗಳಿಂದ ತುಂಬಿರುವದು. ಅಲ್ಲದೆ ದೇವರ ವಾಕ್ಯವು ಇಂಥದ್ದೆಲ್ಲವುಗಳನ್ನು ಆಕ್ಷೇಪಿಸಿ ಹೀಗೆ ಹೇಳಿರುವದು:–

"ಯಾಕೋಬ್ಯರ ಅರಸನಾದ ಯೆಹೋವನು ಹೀಗೆನ್ನುತ್ತಾನೆ–ನಿಮ್ಮ ವ್ಯಾಜ್ಯವು ಈಚೆಗೆ ಬರಲಿ, ನಿಮ್ಮ ಬಲವಾದ ನ್ಯಾಯವನ್ನು ತೋರ್ಪಡಿಸಿರಿ. ತಮ್ಮ ನ್ಯಾಯಗಳನ್ನು ಮುಂದಕ್ಕೆ ತರಲಿ. ಭವಿಷ್ಯತ್ತನ್ನು ನಮಗೆ ತಿಳಿಸಲಿ; ನಡೆದ ಸಂಗತಿಗಳ ವಿಶೇಷವನ್ನು ಸೂಚಿಸಿರಿ, ನಾವು ಅವುಗಳನ್ನು ಮನಸ್ಸಿಗೆ ತಂದುಕೊಂಡು ಅವುಗಳ ಪರಿಣಾಮವನ್ನು ಗ್ರಹಿಸುವೆವು; ಅಥವಾ ಭವಿಷ್ಯತ್ತುಗಳನ್ನು ಅರುಹಿರಿ. ನೀವು ದೇವರುಗಳೆಂದು ನಮಗೆ ಅರಿವು ಹುಟ್ಟುವಂತೆ ಮುಂದಾಗತಕ್ಕವುಗಳನ್ನು ತಿಳಿಸಿರಿ; ನಾವು ಕಕ್ಕಾಬಿಕ್ಕಿಯಾಗಿ ನೋಡುವಂತೆ ಮೇಲಾಗಲಿ ಕೇಡಾಗಲಿ ಏನಾದರೂ ಮಾಡಿರಿ." –ಯೆಶಾಯ 41:21–23.

ಆದರೆ ಮುಂದಿನ ದಿನದಲ್ಲಿ ಸೌಲನು ಸಮುವೇಲ–ನೊಂದಿಗೆ ಇರಬೇಕಿದ್ದಲ್ಲಿ ಪ್ರವಾದಿಯಾದ ಸಮುವೇಲನು ಇದ್ದದ್ದು ಎಲ್ಲಿ? ಭೇಟಿಮಾಡುವಂಥ ಸ್ಥಳವು ಪರಲೋಕವಾಗದೇ ಇರುವದು ಸ್ಪಷ್ಟ, ಯಾಕಂದರೆ ದುಷ್ಟನಾದ ಸೌಲನು ಖಂಡಿತವಾಗಿಯೂ ಅದರೊಳಗೆ ಪ್ರವೇಶಿಸಲು ಅನರ್ಹನಾಗಿದ್ದನು. (ಯೋಹಾನ 3:5) ಇಲ್ಲವೇ ಭೇಟಿಯಾದ ಸ್ಥಳವು ಬೆಂಕಿಜ್ವಾಲೆಯ ಹಾಗು ಯಾತನೆಯ ಸ್ಥಳವಾಗಿರಲು ಸಾಧ್ಯವಾಗಿರಲಿಲ್ಲ, ಯಾಕಂದರೆ ಸಮುವೇಲನು ಖಂಡಿತವಾಗಿ ಇಂಥಾ ಒಂದು ಸ್ಥಳದಲ್ಲಿ ಇರಲಿಲ್ಲ. ಇಲ್ಲ; "ವಂಚಿಸುವ ಆತ್ಮವು" ಸೌಲನಿಗೆ ನುಡಿದದ್ದು ಆ ಕಾಲದಲ್ಲಿದ್ದ ಸಾಧಾರಣವಾದ ನಂಬಿಕೆಯ ದೃಷ್ಟಿಯಿಂದಾಗಿದ್ದು ಅದು ಸಮುವೇಲನು ಮತ್ತು ಪಿತೃಗಳು ಹಾಗು ಪ್ರವಾದಿಗಳು ಬೋಧಿಸಿದ ವಿಷಯವಾಗಿತ್ತು, – ಅದೇನಂದರೆ ಸಾಯುವವರೆಲ್ಲರೂ, ಅವರು ಒಳ್ಳೆಯವರಾಗಿರಲಿ ಅಥವಾ ಕೆಟ್ಟವರಾಗಿರಲಿ ಒಂದೇ ರೀತಿಯಲ್ಲಿ ಶೀಯೋಲ್ ಎಂಬ ಸಮಾಧಿಗೆ ಅಂದರೆ ಮರಣಾವಸ್ಥೆಗೆ ಹೋಗುವರು. ಪ್ರಧಾನ ದೂತನಾದ ಮಿಕಾಯೇಲನ (ದಾನಿಯೇಲ 12:1–2) ಪುನರುತ್ಥಾನದ ಶಕ್ತಿಯ ಮೂಲಕವಾಗಿ ಎಚ್ಚರಗೊಳ್ಳದ ಹೊರತು ಆ ನಿದ್ರೆಯಿಂದ ಯಾರೂ ಎಚ್ಚರವಾಗಲು ಸಾಧ್ಯವಾಗದು. ಅಂದರೆ ಆ ಮಾಟಗಾತಿಯ "ವಂಚಿಸುವ ಆತ್ಮವು" ಸತ್ತವರನ್ನು ಮುಂದಾಗಿ ಎಬ್ಬಿಸುವದೆಂದು ಹೇಳಿಕೊಂಡಿದ್ದರ ಹೊರತು ಯಾರೂ ಮರಣದಿಂದ ಎದ್ದುಬರಲಾರರು. ಈ "ಅಸತ್ಯವಾಡುವ ಆತ್ಮವು ಸತ್ತವರನ್ನು ವ್ಯಕ್ತೀಕರಿಸಿಕೊಂಡು ಸಮುವೇಲನ ಪರವಾಗಿ ಉತ್ತರಿಸಿತ್ತು. ಆದರೆ ನಾವು ಇದನ್ನು ತೋರಿಸಿರುವ ಹಾಗೆ ಇದು ಒಂದು ವಂಚನೆ, ಒಂದು ಮೋಸವಾಗಿರುವದು.

ಈ ವಾಕ್ಯಭಾಗದ ಬಗ್ಗೆ ಚಾರ್ಲ್ಸ್ ವೆಸ್ಲಿಯವರು ಹೀಗೆ ಬರೆದಿರುವರು:

> "ಈ ಪರಿಶುದ್ಧ ವಾಕ್ಯಗಳು ಕೊಡುವ ಮುನ್ನೆಚ್ಚರಿಕೆ ಏನು? ಜೀವನವು ಎಂದು ಕೊನೆಗೊಳ್ಳುವದು ಎಂಬುದರ ಬಗ್ಗೆ ಒಂದು ಆಶಾಕಿರಣವೇ?

ನೀನು ಮತ್ತು ನಿನ್ನ ಮಕ್ಕಳು ನಾಳೆ ಖಂಡಿತವಾಗಿ
ನನ್ನೊಂದಿಗೆ ವಿಶ್ರಾಂತಿಯಲ್ಲಿರುವಿರಿ:
ನರಕಯಾತನೆಯ ಒಂದು ಸ್ಥಿತಿಯಲ್ಲಿ ಅಲ್ಲ,
ಸೌಲನು ಸಮುವೇಲನೊಂದಿಗೆ ಉಳಿದಿರುವದೇ ಆದರೆ
ಅಲ್ಲದೆ ಪ್ರೀತಿಮಯನಾದ ಯೋನಾತಾನನೂ
ಅಲ್ಲಿರುವದೇ ಆದರೆ
ಅದು ನರಕದ ನಿರಾಶಾ ಸ್ಥಿತಿಯಲ್ಲಂತೂ ಅಲ್ಲ,"

ಬಿದ್ದುಹೋದ ಈ ದೇವದೂತರು, ಅಥವಾ "ದೆವ್ವಗಳ" ತೋರ್ಪಡಿಸಿಕೊಳ್ಳುವಿಕೆಯ ಸಂಬಂಧದಲ್ಲಿ ಇರುವ ಒಂದು ಗಮನಾರ್ಹವಾದ ಸಂಗತಿಯೆಂದರೆ ಅದು ಸಾಧಾರಣ ವ್ಯವಹಾರ ಜ್ಞಾನವಿರುವ ಜನರು ಇವುಗಳಿಂದ ಸುಲಭವಾಗಿ ವಂಚಿತರಾಗಿ ಸತ್ತವರ ಬಗ್ಗೆ ಇರುವ ಇಂಥಾ ಹುರುಳಿಲ್ಲದ ಸಾಕ್ಷ್ಯಾಧಾರಗಳನ್ನು ಒಪ್ಪಿಕೊಳ್ಳುವರೆಂಬದು. ಜೀವಿತರ ವಿಷಯವಾಗಿ ಅವರು [ಇಂಥವುಗಳನ್ನು] ಒಪ್ಪಿಕೊಳ್ಳಲಾರರು. ವಿಚಾರಕನು ಮಾಧ್ಯಮಿಯ ಮೂಲಕವಾಗಿ ಆ ವ್ಯಕ್ತಿಯ ಹಾಗು ವರುಷಗಳ ಹಿಂದಿನ ಆತನ ನಡತೆ ಉಡುಪು ನೋಟ ಇವುಗಳಿಗೆ ಸರಿಹೊಂದುವ ವರ್ಣನೆಯನ್ನು ಅಂಗೀಕರಿಸಿಕೊಂಡು ಆತನಿಂದ [ಸಂಪರ್ಕ ಮಾಧ್ಯಮಿಯಿಂದ] ಬರುವಂಥದಾಗಿ ಉದ್ದೇಶವಳ್ಳ ಒಂದು ಸಂದೇಶವನ್ನು ಪವಿತ್ರವಾದುದೆಂದು ಎತ್ತಿಹಿಡಿಯುವರು. ಆದರೆ ಅದೇ ವ್ಯಕ್ತಿಯು ಜೀವಿಸುತ್ತಿರುವ ವಂಚಕನ ಹಾಗು ಒಬ್ಬ ಸೇವಕನ ಮೂಲಕವಾದ ಆತನ ಸಂದೇಶದ ವಿಷಯದಲ್ಲಿ ಇರಬಹುದಾದ ವಂಚನೆಯ ಬಗ್ಗೆ ಎಚ್ಚರಿಕೆಯಿಂದಿರುವರು.

ಈ ಬೇತಾಳಿಕರ, ಮಾಟಗಾತಿಯ ಹಾಗು ಸಂಪರ್ಕ–ಮಾಧ್ಯಮಿಗಳ ವಿಷಯವಾಗಿ ಶಾಸ್ತ್ರವಚನಗಳಲ್ಲಿ ತಿಳಿಸಲಾಗಿರುವ ಸಂಗತಿಯು ನಮಗೆ ಈ ಅಭಿಪ್ರಾಯಕ್ಕೆ ಬರಲು ನಡೆಸುವದು. ಏನಂದರೆ ಶತಮಾನಗಳವರೆಗೆ ಇವು ಸಂಪರ್ಕ–ಮಾಧ್ಯಮಿಗಳ ಮೂಲಕವಾಗಿ ಇಸ್ರಾಯೇಲ್ಯರೊಡನೆ ಅನ್ಯೋನ್ಯತೆಯಲ್ಲಿರಲು ಪ್ರಯತ್ನಿಸುತ್ತಿದ್ದವೆಂಬದು. ಆದರೆ ಕಾಲ ಕಾಲಕ್ಕೆ ತಮ್ಮನ್ನು ತೋರ್ಪಡಿಸಿಕೊಳ್ಳುವ ವಿಧಾನವನ್ನು ಬದಲಿಸಿಕೊಳ್ಳುವಂಥದ್ದು ಇವುಗಳ ವಾಡಿಕೆಯಾಗಿರುವದು ಸ್ಪಷ್ಟ; ಕೆಲವು ಕಾಲಕ್ಕೆ ನ್ಯೂ ಇಂಗ್ಲೆಂಡ್ ಮತ್ತು ಓಹಿಯೋ ಹಾಗು ಯೂರೋಪಿನ ಪರ್ಯಂತರ ಮಾಟಗಾರಿಕೆಯು ಪ್ರವರ್ಧಮಾನಕ್ಕೆ ಬಂದು ಆ ಮೇಲೆ ನಶಿಸಿಹೋಗಿತ್ತು. ಅಲ್ಲದೆ ಆ ನಂತರದಲ್ಲಿ ಆತ್ಮಿಕವಾದವು ಇದನ್ನು ಹಿಂಬಾಲಿಸಿಕೊಂಡು ಬಂದಿರುವದು. ಇದರಲ್ಲಿ [ಮೇಜು] ಕುಟ್ಟುವದು ಮತ್ತು ಆವೇಶದಿಂದ ಸಂಗೀತರಾಗದ ಮೂಲಕವಾಗಿ ಭವಿಷ್ಯವನ್ನು [ಅಸಂಗತವಾದುದನ್ನು] ನುಡಿಯುವದು ಇವುಗಳಿಗೆ ಎಡೆಮಾಡಿಕೊಡುತ್ತಿರುವದು. ಕ್ರಮೇಣ ಅತೀಂದ್ರಿಯ ಶಕ್ತಿ ಹಾಗು ದೇಹತಾಳಿಕೊಳ್ಳುವಿಕೆ ಇವುಗಳಲ್ಲಿ ಮುಖ್ಯವಾಗಿ ಪರಿಶ್ರಮಿಸುತ್ತಿರುವವು. ಇವುಗಳಲ್ಲಿ ಎರಡನೆಯದು ಬಹು ಕಷ್ಟಕರವಾಗಿದ್ದು ಇದರಲ್ಲಿನ ಷರತ್ತುಗಳು ಆಗಾಗ್ಗೆ ಪ್ರತಿಕೂಲವಾಗಿರುವದು. ಆಗಾಗ್ಗೆ ಇವು ಸಂಪರ್ಕ–ಮಾಧ್ಯಮಿಗಳ ಜೊತೆಗೂಡಿ ಇವುಗಳ ಸಹಾಯಪಡೆದು ವಂಚಿಸುತ್ತಿರುವವು.

*****

ಆಧ್ಯಾತ್ಮಿಕವಾದ

ರೀಪ್ರಿಂಟ್ಸ್ ಪುಟ 196 (ಆಯಲ್ಪಟ್ಟದ್ದು)

ಒಂದು ಕನ್ಕಾರ್ಡೆನ್ಸ್ [ಪದಗಳ ಪಟ್ಟಿ] ತೆಗೆದುಕೊಳ್ಳಿ ಅದರಲ್ಲಿ ಬೇತಾಳಿಕರು ಮಾಟಗಾರರು ಇವರುಗಳಿಗೆ ವಿರೋಧವಾಗಿ ಮತ್ತು "ಸತ್ತವರ ಆತ್ಮಗಳ" – ಅಂದರೆ ಮಾನವರನ್ನು ಸಂಪರ್ಕಿಸುವ ಸೈತಾನನೆಂಬ ಆಪಾದಕನ "ಮಾಧ್ಯಮಿಗಳ" ವಿರೋಧವಾಗಿ ದೇವರು ಎಷ್ಟೊಂದು ಹೇಳಿರುವನೆಂಬುದನ್ನು ನೋಡಿರಿ. "ಸತ್ತವರ ಆತ್ಮಗಳ" ಸಂಪರ್ಕ ಮಾಧ್ಯಮಿಗಳು–ತಾವು ಸತ್ತರೊಡನೆ ಸಂಪರ್ಕಮಾಡಿ ಅವರಿಂದ ಮಾಹಿತಿಯನ್ನು ಪಡಕೊಂಡಿರುವದಾಗಿ ಹೇಳಿಕೊಳ್ಳುವರು. ಹೀಗೆ ಹೇಳಿಕೊಳ್ಳುವದರಲ್ಲಿ ದೇವರ ವಾಕ್ಯದಲ್ಲಿನ ಸರಳವಾದ ನಿರೂಪಣೆಯನ್ನು ನಿರಾಕರಿಸಿರುವರು. ಅದೇನಂದರೆ ಸತ್ತವರು ಯಾವ ತಿಳುವಳಿಕೆಯನ್ನೂ ನೀಡಲಾರರೆಂಬುದನ್ನು ಸತ್ಯವೇದವು ಖಚಿತಪಡಿಸಿರುವದು. (ಯೋಬ 14:20–21; ಪ್ರಸಂಗಿ 9:10 ನೋಡಿ)

ಆದರೆ ಕೇವಲ ಇದು ಏದೇನಿನಲ್ಲಿ ಹವ್ವಳ ಮೇಲೆ ಹೇರಲಾದ ಸುಳ್ಳನ್ನು ಮುಂದುವರೆಸಲು ಸೈತಾನನು ಅನುಸರಿಸುವ ಮತ್ತೊಂದು ವಿಧಾನವಾಗಿತ್ತು. {"ಇವನು ಆದಿಯಿಂದಲೂ ಒಬ್ಬ ಸುಳ್ಳುಗಾರನು" ಎಂದು ಯೇಸುವು ಹೇಳಿರುವನು} ಅವಿಧೇಯರಾದಲ್ಲಿ ಅವರು ಸಾಯಬೇಕೆಂದು ದೇವರು ಹೇಳಿದ್ದನು; ಸೈತಾನನು ಈ ಹೇಳಿಕೆಯನ್ನು ಪ್ರತಿರೋಧಿಸುವವನಾಗಿ ಮಾನವನು ಸಹಜವಾಗಿ ಅಮರತ್ವವುಳ್ಳವನಾಗಿದ್ದು ಅವನಿಗೆ ಸಾಯಲು ಸಾಧ್ಯವಿಲ್ಲವೆಂದೂ ಹೀಗೆ ದೇವರು ಒಬ್ಬ ಸುಳ್ಳುಗಾರನೆಂದು ಹೇಳಿಕೊಂಡಿದ್ದನು. ಅಂದಿನಿಂದಲೂ "ನೀವು ಹೇಗೂ ಸಾಯುವದಿಲ್ಲ" ಎಂಬ ಈ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲು ಪರಿಶ್ರಮಿಸುತ್ತಿರುವನು. ತಮಗೆ ನುಡಿದಂಥದ್ದು ಸಂಪರ್ಕ–ಮಾಧ್ಯಮಿಯ ಮೂಲಕವಾದ "ದೆವ್ವಗಳ ಆತ್ಮಗಳು" ಎಂಬುದನ್ನು ಜನರು ಗ್ರಹಿಸಿಕೊಂಡದ್ದೇ ಆದಲ್ಲಿ ಅವರು ಆತನಿಂದ ದೂರವಿರುವರು ಎಂಬುದನ್ನು ತಿಳಿದುಕೊಂಡಲ್ಲಿ ಅವನಿಗೆ ಬಹು ಒಳ್ಳೆಯದಾಗಿರುವದು. ಹೀಗಾಗಿ ಅದು ಮೃತರಾದ ಜನರು (ಸತ್ತು ಹೋಗಿರದೆ, ಮೊದಲಿಗಿಂತಲೂ ಹೆಚ್ಚು ಜೀವಿತರಾಗಿರುವರು) ತಿಳಿಸುತ್ತಿರುವದಾಗಿ ಹೇಳಿಕೊಳ್ಳಲಾಗಿರುವದು.

ಈ ಬಗೆಯ ಒಂದು ನಿದರ್ಶನವನ್ನು 1 ಸಮುವೇಲ 28ನೇ ಅಧ್ಯಾಯದಲ್ಲಿ ನೀಡಲಾಗಿರುವದು. ಅದರಲ್ಲಿ ಇಸ್ರಾಯೇಲ್ಯರ ಅರಸನಾದ ಸೌಲನು ದುಷ್ಟನಾದುದಾಗಿಯೂ ಹಾಗು ದೇವರು ಆತನೊಡನೆ ಪ್ರವಾದಿಗಳ ಮೂಲಕವಾಗಿ ಇನ್ನೆಂದಿಗೂ ಸಂಪರ್ಕಿಸದಿದ್ದನು. ಆತನು ಫಿಲಿಷ್ಟಿಯರೊಡನೆ

ಯುದ್ಧಲ್ಲಿ ತೊಡಗಿದ್ದು ಒಂದು ಮಹಾ ಯುದ್ಧವು ಇಷ್ಟರಲ್ಲೇ ನಡೆಯುವದರಲ್ಲಿತ್ತು. ಆತನಿಗೆ ಸಲಹೆಯು ಬೇಕಿದ್ದು, ಮುಂದಿನ ಪರಿಣಾಮವೇನಾಗುವದೆಂದು ಆತನು ತಿಳಿಯ ಬಯಸಿದ್ದನು. ದೇವರು ಆತನಿಗೆ ಉತ್ತರಿಸುವದಿಲ್ಲವಾದುದರಿಂದ ಆತನು ಖಂಡನೆಗೊಳಗಾಗಿ ನಿಷೇಧಿಸಲಾಗಿದ್ದ ವರ್ಗವನ್ನು, ಅಂದರೆ ಒಬ್ಬ ಸಂಪರ್ಕ–ಮಾಧ್ಯಮಿಗಾಗಿ, ಸತ್ತವರಲ್ಲಿ ವಿಚಾರಿಸುವ ಒಂದು ಆತ್ಮವನ್ನು ಹೊಂದಿದ್ದ ಏಂದೋರಿನ ಮಾಟಗಾತಿಯನ್ನು ಹುಡುಕಿಕೊಂಡು ಹೋಗಿದ್ದನು.

(1 ಸಮುವೇಲ 28:3–20ರಲ್ಲಿ) ಹೇಳಲಾಗಿರುವ ಕಥೆಯು ಎಲ್ಲರಿಗೂ ಚಿರಪರಿಚಿತವಾಗಿದ್ದು, ಅದರಲ್ಲಿ ಆ ಸಂಪರ್ಕ–ಮಾಧ್ಯಮಿಯು ತನ್ನನ್ನು ಸಂದರ್ಶಿಸುವವನ ಬಗ್ಗೆ ತಿಳುವಳಿಕೆಯಿಲ್ಲದಿರುವಂತೆ ನಟಿಸಿ, ಸೌಲನು ಬಯಸುವ–ದೇನೆಂಬುದರ ಬಗ್ಗೆ ಅರಿತಿದ್ದು ಸಮುವೇಲನ ಒಂದು ವರ್ಣನೆ, ಮುಂತಾದುದನ್ನು ನೀಡಿದ್ದಳು. ಆನಂತರ ಇದನ್ನು ಅನುಸರಿಸಿಕೊಂಡು ಹೋಗಿತ್ತು ಬರುವಂಥ ಸೌಲನ ಸೇನೆಯ ಸೋಲುವಿಕೆ ಹಾಗು ಸ್ವತಃ ಆತನ ಮತ್ತು ಆತನ ಮಕ್ಕಳ ಮರಣದ ವಿವರಣೆ. ಈ ಸಂಗತಿಗಳು ಕೇವಲ ಸಂಪರ್ಕ–ಮಾಧ್ಯಮಿಯು ಮುಂದಾಗಿ ಹೇಳಿದ್ದಂತೆಯೇ ಸಂಭವಿಸಿದ್ದಂಥ ಅಂಶದ ಬಗ್ಗೆ ಸಮುವೇಲನೇ ನಿಜವಾಗಿಯೂ ಮಾಹಿತಿಯನ್ನು ಒದಗಿಸಿರುವನೆಂಬುದಕ್ಕೆ ಒಂದು ಸಾಕ್ಷಿಯಾಗಿರುವದೆಂದು ಕೆಲವರಿಂದ ಭಾವಿಸಲಾಗಿರುವದು. ಆದರೆ ಸಮುವೇಲನು ಜೀವಿಸುತ್ತಿದ್ದಲ್ಲಿ ಆತನಿಗೆ ಹೇಳಲು ಸಾಧ್ಯವಿದ್ದುದಲ್ಲದೆ [ಸಂಭವಿಸಲಿರುವ] ಸಂಗತಿಯನ್ನು ಮುಂದಾಗಿ ಹೇಳಲು ಸೈತಾನನಿಗೂ ಸಾಧ್ಯವಿತ್ತು. ಸೈತಾನನು ಒಬ್ಬ ಪ್ರವಾದಿಯಲ್ಲ–ವೆಂತಲೂ ಇಲ್ಲವೇ ದೇವರು ಆತನಿಗೆ ಮುಂಬರುವ ಸಂಗತಿಗಳನ್ನು ಪ್ರಕಟಿಸುವದಿಲ್ಲವಾದರೂ ಆತನು ದೇವವಾಕ್ಯದ ಒಬ್ಬ ವಿದ್ಯಾರ್ಥಿಯಾಗಿಯೂ ಹಾಗು ಅವುಗಳನ್ನು ನಂಬುವವನಾಗಿಯೂ ಇರುವನು. **"ದೆವ್ವಗಳೂ ಕೂಡ ಹಾಗೆಯೇ ನಂಬಿ ಹೆದರಿ ನಡಗುತ್ತವೆ."** (ಯಾಕೋಬ 2:19) ಸೌಲನ ಸೋಲುವಿಕೆ ಮತ್ತು ದಾವೀದನ ಸಿಂಹಾಸನಾ–ರೋಹಣವನ್ನು ಪ್ರವಾದಿಯಿಂದ ಮುಂತಿಳಿಸಲಾಗಿದ್ದು ಅದರ ಬಗ್ಗೆ ಸೌಲ ಹಾಗು ಸೈತಾನರಿಬ್ಬರಿಗೂ ತಿಳಿದಿದ್ದುದಲ್ಲದೆ ಪ್ರತಿಯೊಂದು ದೇವರ ವಾಕ್ಯವೂ ಖಂಡಿತವಾದುದೆಂಬುದನ್ನು ಸೈತಾನನು ಕಲಿತುಕೊಂಡಿದ್ದನು.

ಜೊತೆಗೆ, **"ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು..."** [ಅಥವಾ ಮರಣದ ಮೇಲೆ ಅಧಿಕಾರವನ್ನು ಹೊಂದಿರುವವನು ಸೈತಾನನು] ಎಂಬ ಅಪೋಸ್ತಲನ ನುಡಿಯನ್ನು ನಾವು ಮರೆಯಬಾರದು. (ಇಬ್ರೀಯ 2:14) ಆತನು ಮರಣ ದಂಡನೆಯನ್ನು ಜಾರಿಗೊಳಿಸುವವನಾದುದರಿಂದಲೂ ಹಾಗು ಅದನ್ನು ಜಾರಿಗೊಳಿಸಲು ದೇವರಿಂದ ಅನುಮತಿ ಹೊಂದಿರಬೇಕಾದುದರಿಂದಲೂ (ಯೋಬ 1:12) ತನಗೆ ಮರುದಿನ ಸೌಲನ ಆತನ ಮಕ್ಕಳ ಮತ್ತು ಇತರ ಅನೇಕರ ಜೀವದ ಮೇಲೆ ಅಧಿಕಾರವಿರುದನ್ನು ಆತನಿಗೆ ತಿಳಿದಿರುವಂಥದ್ದುದು ವಿಚಿತ್ರವೇ? ಇಲ್ಲ, ಇದು ಒಂದು ವಿವೇಚನಾಯುತ ತೀರ್ಮಾನ. ಖಂಡಿತವಾಗಿಯೂ ದೇವರು (ತನಗೆ ಸಾಧ್ಯವಿದ್ದಲ್ಲಿ ಸಮುವೇಲನೂ) ತಾನು ಮರಣದ ಶಿಕ್ಷೆಯ ಮೂಲಕವಾಗಿ ನಿಷೇಧಿಸಿ ಅದನ್ನು ದುಷ್ಟತನವೆಂದು ಖಂಡಿಸಲಾದಂಥದ್ದನ್ನು ಮಾನ್ಯಮಾಡುವ ಇಲ್ಲವೇ ಅದನ್ನು ಒಂದು ಸಂಪರ್ಕ ಸಾಧನವಾಗಿ ಬಳಸುವನೆಂಬುದನ್ನು ನಾವು ಒಂದು ಕ್ಷಣವಾದರೂ ಕಲ್ಪಿಸಿಕೊಳ್ಳಬಾರದು. 1 ಪೂರ್ವ. 10:13 ಓದಿ.

ದಾವೀದನಿಗೆ ಖಂಡಿತವಾಗಿ ವಾಗ್ದಾನ ಮಾಡಿದ ಕೃಪಾವರಗಳು

ಕೀರ್ತನೆ 89

[03] ನಾನು ಆರಿಸಿಕೊಂಡ ಸೇವಕನಾದ ದಾವೀದನ ಸಂಗಡ ಒಡಂಬಡಿಕೆ ಮಾಡಿಕೊಂಡು ಆಣೆಯಿಟ್ಟು–

[04] ಶಾಶ್ವತವಾಗಿ ನಿನ್ನ ಸಂತತಿಯನ್ನು ಸ್ಥಾಪಿಸುವೆನು, ತಲತಾಂತರಗಳಿಗೂಕ್ಕೂ ನಿನ್ನ ಸಿಂಹಾಸನವನ್ನು ಸ್ಥಿರಪಡಿಸುವೆನು ಎಂದು ಹೇಳಿದ್ದೇನೆ.

[20] ನನ್ನ ಸೇವಕನಾದ ದಾವೀದನನ್ನು ಕಂಡು ಪರಿಶುದ್ಧ ತೈಲದಿಂದ ಅವನನ್ನು ಅಭಿಷೇಕಿಸಿದ್ದೇನೆ.

[21] ನನ್ನ ಹಸ್ತವು ಅವನ ಮೇಲೆ ಸ್ಥಿರವಾಗಿರುವದು; ನನ್ನ ಭುಜವು ಅವನನ್ನು ಬಲಪಡಿಸುವದು.

[27] ನಾನಾದರೋ ಅವನನ್ನು ಜ್ಯೇಷ್ಠಪುತ್ರನನ್ನೂ ಭೂರಾಜರಲ್ಲಿ ಉನ್ನತನನ್ನೂ ಮಾಡಿಕೊಳ್ಳುವೆನು.

[28] ನನ್ನ ಕೃಪೆಯು ಅವನಲ್ಲಿ ಶಾಶ್ವತವಾಗಿ ಇರುವದು; ನನ್ನ ಒಡಂಬಡಿಕೆಯು ಅವನಲ್ಲಿ ಸ್ಥಿರವಾಗಿರುವದು.

[33] ಆದರೂ ನಾನು ಅವನಲ್ಲಿಟ್ಟಿರುವ ಕೃಪೆಯನ್ನು ತಪ್ಪಿಸುವದಿಲ್ಲ; ನನ್ನ ನಂಬಿಗಸ್ತಿಕೆಯಿಂದ ಜಾರುವದಿಲ್ಲ.

[34] ನನ್ನ ಒಡಂಬಡಿಕೆಯನ್ನು ಭಂಗಪಡಿಸುವದಿಲ್ಲ; ನನ್ನ ಮಾತನ್ನು ಬದಲಿಸುವದಿಲ್ಲ.

[35] ನನ್ನ ಪವಿತ್ರತ್ವದಲ್ಲಿ ಆಣೆಯಿಟ್ಟು ಒಂದು ಸಂಗತಿ ಹೇಳಿದ್ದೇನೆ. ಅದರ ವಿಷಯದಲ್ಲಿ ದಾವೀದನಿಗೆ ಸುಳ್ಳುಗಾರನಾಗುವದಿಲ್ಲ.

[36] ಅವನ ಸಂತತಿಯು ಶಾಶ್ವತವಾಗಿ ಇರುವದು; ಅವನ ಸಿಂಹಾಸನವು ಸೂರ್ಯನಂತೆ ನನ್ನ ಎದುರಿನಲ್ಲಿದ್ದು ಚಂದ್ರನಂತೆ ನಿತ್ಯಕ್ಕೂ ಸ್ಥಿರವಾಗಿರುವದು.

*****

ದೊಡ್ಡ ಅವಕಾಶಗಳ ದುರ್ಬಳಕೆ

ರೀಪ್ರಿಂಟ್ಸ್ 3240

1 ಸಮುವೇಲ 31:1–13

"ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಕಟ್ಟಕಡೆಗೆ ಅದು ಮರಣಮಾರ್ಗವೇ." –ಜ್ಞಾನೋಕ್ತಿ 14:12

ಅರಸನಾದ ಸೌಲನ ಜೀವಿತವು ಒಟ್ಟಾರೆ ಒಂದು ಪ್ರಮಾದ ಹಾಗು ವೈಫಲ್ಯಗಳಾಗಿದ್ದವು. ಅದು ದೇವಾನುಗ್ರಹದಿಂದ ಹಾಗು ತನ್ನ ದೇಶದ ಜನರ ಪ್ರೀತಿ ಹಾಗು ಗೌರವಗಳ ದೆಸೆಯಿಂದ ಭವ್ಯವಾದ ಸಾಧ್ಯತೆಗಳ ಹಾಗು ಅವಕಾಶಗಳ ಮೂಲಕ ಆರಂಭವಾಗಿತ್ತು. ತನ್ನ ವೈಯುಕ್ತಿಕ ಗುಣಗಳು ಅನೇಕ ವಿಧದಲ್ಲಿ ಗೌರವಾರ್ಹವಾಗಿತ್ತಲ್ಲದೆ ಆತನ ಶಾರೀರದ ಆಕೃತಿಯೂ ಅಂದರೆ ಆತನ ಶಿರಸ್ಸು ಹಾಗು ಭುಜಗಳು ತನ್ನ ಜೊತೆಗಾರರಿಗಿಂತಲೂ ಉನ್ನತವಾಗಿದ್ದು ತನ್ನ ಜನರಿಗೆ ನೋಡಲು ಆಕರ್ಷಣೀಯ–ವಾಗಿದ್ದಂಥದ್ದು ಆತನ ಪ್ರಭಾವವನ್ನು ಹೆಚ್ಚಿಸಿದ್ದವು. ಆದರೂ ಆತನು ವಿಫಲನಾಗಿದ್ದನು. ಈತನ ವೈಫಲ್ಯದ ಕಾರಣಗಳಿಂದ ನಮ್ಮಲ್ಲಿ ಪ್ರತಿಯೊಬ್ಬನೂ ಒಂದು ಒಳ್ಳೆಯ ಪಾಠವನ್ನು ತೆಗೆದುಕೊಳ್ಳಬಹುದು. ಒಬ್ಬ ಸಮಕಾಲೀನನು ಆತನ ಸಂಗತಿಯನ್ನು ಸಾರಾಂಶವಾಗಿ ಹೀಗೆ ಹೇಳಿರುವನು:

"ಸೌಲನು ಅನೇಕ ಘನವಂತಿಕೆಯ ಹಾಗೂ ಸ್ನೇಹಪರ ಅಂದರೆ ಧೀರತೆ ಹಾಗು ಕಾರ್ಯತತ್ಪರತೆ ಇವುಗಳಂಥ ಗುಣವಿಶೇಷಗಳನ್ನು ಹೊಂದಿದ್ದು, ತನ್ನ ಆರಂಭಿಕ ದಿನದಲ್ಲಿ ಸೌಜನ್ಯ ಹಾಗು ಔದಾರ್ಯವುಳ್ಳವನಾಗಿದ್ದನು. ಇವೆಲ್ಲವುಗಳನ್ನು ಆತನು ಸಹಜವಾಗಿಯೇ ಹೊಂದಿದ್ದನಾದರೂ ತನ್ನ ನೈತಿಕ ಗುಣಗಳನ್ನು ವೃದ್ಧಿಪಡಿಸಿಕೊಳ್ಳಲು ಇಲ್ಲವೇ ತನಗೆ ಸಹಜವಾಗಿ ಬಾರದಿದ್ದ ಯಾವುದೇ ಕೃಪಾವರಗಳನ್ನು ಸಾಧಿಸಿಕೊಳ್ಳಲು ಆತನು ಎಂದಾದರೂ ಪ್ರಯತ್ನಿಸಿದ್ದ ಸೂಚನೆಗಳಿರಲಿಲ್ಲ; ಇಲ್ಲವೆ ಧರ್ಮವು ಎಂದಾದರೂ ಆತನ ಮೇಲೆ ದೃಢವಾದ ಹಿಡಿತವನ್ನು ಹೊಂದಿದ್ದರ ಬಗ್ಗೆ ಕಲ್ಪಿಸಿಕೊಳ್ಳಲು ನಮಗೆ ಯಾವ ಕಾರಣವೂ ಇರುವದಿಲ್ಲ. ತನ್ನ ಸ್ವಾರ್ಥಭಾವದ ಹಾನಿಕರ ಪ್ರಭಾವದಿಂದ ಈ ಮೊದಲೇ ವಿಷಪೂರಿತ ಬಿಸಿಗಾಳಿಯು ಒಳ್ಳೆಯ ಪ್ರವೃತ್ತಿಯೆಂಬ ಪುಷ್ಪಗಳನ್ನು ಸುಟ್ಟುಹಾಕಿದ್ದಲ್ಲದೆ ದುಷ್ಟ ಪ್ರವೃತ್ತಿಯು ಬೆಳೆಯುವಂತಾಗಲು ಪ್ರಚೋದನೆ ಮಾಡಿತ್ತು. ಆತನ ಮೊದಲಿನ ಸದ್ಗುಣಗಳು ಕಾಣದಂತಾಗಿ ಅವುಗಳಿಗೆ ವಿರುದ್ಧವಾದಂಥವುಗಳು ದಾಟಿಕೊಂಡು ಮುಂದೆ ಬಂದಿದ್ದವು. ಸೌಜನ್ಯವು ಅಹಂಕಾರವಾಗಿ ಬಂದಿತ್ತು. ಅಲ್ಲದೆ ಸ್ವಾರ್ಥಚಿತ್ತದ ಸುಧೀರ್ಘವಾದ ಥಣಿಸುವಿಕೆಯು ಕ್ರೌರ್ಯ ಕುರುಡು–ಸಂಶಯ ಮತ್ತು ಕೋಪೋದ್ರೇಕಗಳನ್ನು ಬೆಳೆಯಮಾಡಿದ್ದು, ಇವು ಆತನನ್ನು ತನ್ನ ಕಾರಣವಿಲ್ಲದ ಹಗೆತನಕ್ಕೆ ಬಲಿಪಶುವಾಡಿ ಅದಕ್ಕೆ ದಾಸನನ್ನಾಗಿಸಿತ್ತು. ಯಾವಾತನು ದೇವರಿಗೆ ಎದುರು ಬೀಳುವನೋ ಅವನು ತನ್ನ ಗುಣಗಳನ್ನು ವಿಕೃತಿಮಾಡಿ–ಕೊಳ್ಳುವನು. ದುಃಸ್ಥಿತಿಯಿಂದ ಕೂಡಿದ ಸೌಲನ ಕಡೇ ವರುಷಗಳು ತನ್ನ ಉಬ್ಬಿದ ಬಂಡಾಯ ನಿಲ್ಲದ ದುಸ್ಸಂಶಯಗಳೆಂಬ ದೆವ್ವದಿಂದ ಪೀಡಿತನನ್ನಾಗಿಸಿ ಅದರಿಂದ ಬೆನ್ನಟ್ಟಿದವನನ್ನೋ ಎಂಬಂತೆ ಮಾಡಿದ್ದವು. ಇವು ಪಾಪವನ್ನು ಎಡೆಬಿಡದೆ ಆಕ್ರಮಿಸುವ ದುಃಖಕ್ಕೆ ಒಂದು ನಿದರ್ಶನವಾಗಿರುವದು; ಅಲ್ಲದೆ ಆತನು ಗಿಲ್ಬೋವದಲ್ಲಿನ ತನ್ನ ಅಂತಿಮ ಹೋರಾಟದಲ್ಲಿ ತನ್ನ ಸ್ವಂತ ಕತ್ತಿಯಿಂದಲೇ ಹತನಾದಂಥದ್ದು ಈ ಮುಂದಿನ ಭೀಕರ ನುಡಿಗಳನ್ನು ನಮ್ಮ ನೆನಪಿಗೆ ತರುವದು: "ಬಹಳವಾಗಿ ಗದರಿಸಿದರೂ ತಗ್ಗದವನು ಏಳದ ಹಾಗೆ ಫಕ್ಕನೆ ಮುರಿದು ಬೀಳುವನು." [ಜ್ಞಾನೋಕ್ತಿ 29:1]

ಈ ವಿನಾಶನಗಳೆಲ್ಲವುಗಳಿಗೆ ನಡೆಸಿದ ಸೌಲನಲ್ಲಿದ್ದ ತೊಡಕೇನಂದರೆ ಅದು ಆತನಲ್ಲಿದ್ದ ಸ್ವಾರ್ಥ, ಅಲ್ಲದೆ ಆತನು ಅಸಾಧಾರಣ ಸ್ವಾರ್ಥಿಯೇನಾಗಿರಲಿಲ್ಲ. ಮನುಕುಲದ ದೊಡ್ಡ ಪಾಲಿನ ಜನರು ಇದೇ ಸಮನಾದ ಸ್ವಾರ್ಥಭಾವ ಅಂದರೆ ಸ್ವ–ಇಚ್ಛೆಯುಳ್ಳವರಾಗಿರುವರು; ಅಲ್ಲದೆ ಬಹು ಪಾಲಿನ ಜನರು ಸೌಲನ ಹಾಗೆಯೇ ತಮ್ಮ ಮುಂದಿರುವ ಸಾಧ್ಯತೆಯುಳ್ಳ ಯಾವುದೇ ಸಂಗತಿಗಳಲ್ಲಿ ಮೊದಲಿಗೆ ವಿಫಲರಾಗಿರುವರು. ದಾವೀದನ ಜೀವನ ಯಾತ್ರೆಯಲ್ಲಿ ಜ್ಞಾನವಿವೇಕ ಹಾಗು ದೇವರ ಚಿತ್ತವನ್ನು ನೆರವೇರಿಸಲು ತಾನು ಬಹು ಮೊದಲೇ ಪ್ರತಿಷ್ಠೆಮಾಡಿ–ಕೊಂಡಿದ್ದರಿಂದ ದೊರೆತ ಅನುಕೂಲಗಳು ಹಾಗು ದೇವಾಶೀರ್ವಾದಗಳು, ಇವು ಕಷ್ಟಪರಿಶೋಧನೆಗಳಿಂದ ಕೂಡಿದ್ದಾಗ್ಯೂ, ಆತನಿಗೆ ಇಂಥಾ ಒಂದು ಸುಸ್ಥಿತಿಗೆ ಬರಲು ಖಚಿತವಾಗಿ ನಡೆಸಿದ್ದವು. ಹೀಗೆಯೇ ಸೌಲನು ಅನುಸರಿಸಿದ್ದ ಮಾರ್ಗವು ದೇವರನ್ನು ಗಣನೀಯವಾಗಿ ಅಲಕ್ಷ್ಯಮಾಡಿ ತಮ್ಮ ದಾರಿಯನ್ನು ತಾವೇ ನಿರ್ಧರಿಸಿಕೊಳ್ಳಲು ಪ್ರಯತ್ನಿಸುವವರು ಸಾಧಾರಣ ರೀತಿಯಲ್ಲಿ ಮಾಡುವ ತಪ್ಪುಗಳನ್ನು ನಿದರ್ಶಿಸುತ್ತದೆ. ಇಂಥವರು ಖಂಡಿತವಾಗಿ, ಸೌಲನು ಸ್ವತಃ ಮಾಡಿಕೊಂಡಿದ್ದಂತೆ, ತಮ್ಮ ಸ್ವಾರ್ಥಪರ ಆಕಾಂಕ್ಷೆಗಳಿಂದ ದಾರಿತಪ್ಪಿದವರಾಗುವರು. ಸೌಲನು ಮಾಡಿದ್ದ ಎರಡು ವಿಶೇಷ ಅಪರಾಧಗಳು ಯಾವುವೆಂದರೆ: (1) ದೈವೀಕ ಏರ್ಪಾಡಿನ ಪ್ರಕಾರ ತನಗೆ ಮಾಡಲು ಅಧಿಕಾರವಿಲ್ಲದಂಥ ಯಜ್ಞಾರ್ಪಣೆಯನ್ನು ಮಾಡಿದ್ದು [1 ಸಮುವೇಲ 13:1–14)]; (2) 1 ಸಮುವೇಲ 15:1–13 ರಲ್ಲಿ ದಾಖಲಿಸಿರುವಂತೆ, ದೇವರು ನೇರವಾಗಿ ವಿಧಿಸಿದ್ದ ಆಜ್ಞೆಗೆ ಅವಿಧೇಯನಾದುದು. ದಾವೀದನೂ ಸಹ ಅನೇಕ ಸಂದರ್ಭಗಳಲ್ಲಿ ತಪ್ಪುವವನಾಗಿ ದೇವರ ಚಿತ್ತಕ್ಕೆ ವಿರುದ್ಧ–ವಾದುದನ್ನು ಮಾಡಿದ್ದನೆಂದು ವಾದಿಸಬಹುದು. ಆದರೆ ಈ ಇಬ್ಬರ ಗುಣನಡತೆಗಳಲ್ಲಿ ಬಹು ಅಗಾಧವಾದ ವ್ಯತ್ಯಾಸ–ವಿರುವುದನ್ನು ನಾವು ಗಮನಿಸಬೇಕಿರುವದು. ಇದರಲ್ಲಿ ದಾವೀದನ ಹೃದಯವು ಯಾವಾಗಲೂ ದೇವರಿಗೆ ನಿಷ್ಠೆಯುಳ್ಳದ್ದಾಗಿದ್ದುದು ಸ್ಪಷ್ಟವಾಗಿತ್ತು; ಅಲ್ಲದೆ ಆತನು ತಪ್ಪಿತಸ್ಥನಾದಾಗ ಅದಕ್ಕಾಗಿ ಆತನು ಪಟ್ಟ ದುಃಖವು ಪ್ರಾಮಾಣಿಕವಾಗಿದ್ದು, ಇದು ಆತನನ್ನು ಮುಂದೆ ಬಹು ಎಚ್ಚರಿಕೆಯಿಂದಿರುವಂತೆ ನಡೆಸಿತ್ತು. ಇದಕ್ಕೆ ಪ್ರತಿಯಾಗಿ

ಸೌಲನಲ್ಲಿದ್ದ ತೊಂದರೆಯು ಆತನ ಹೃದಯದಲ್ಲಿದ್ದಂತೆ ತೋರುತ್ತದೆ; ಹೇಗಂದರೆ ಹೃದಯದಲ್ಲಿ ಆತನು ದೇವರ ಚಿತ್ತಕ್ಕೆ ವಿಧೇಯನಾಗಿರದೆ ಆತನು ತನ್ನ ಸ್ವಂತ ಇಚ್ಛೆಯ ಅನುಸಾರ ನಡಕೊಂಡಿದ್ದು, ಇವುಗಳ ಪರಿಣಾಮಕ್ಕೆ ಹೆದರಿದವನಾಗಿ ಪಶ್ಚಾತ್ತಾಪಪಟ್ಟು ಕ್ಷಮೆಯನ್ನು ಯಾಚಿಸಿದ್ದನೇ ಹೊರತು ಕೇವಲ ದೇವರ ಮಾರ್ಗದಿಂದ ತಪ್ಪಿಹೋದುದರ ಕಾರಣಕ್ಕಾದ ದುಃಖದಿಂದಾಗಿರಲಿಲ್ಲ.

ಈ ದಿನದಲ್ಲಿನ ಹೆಸರಿಗಾಗಿರುವ ದೇವಜನರ ನಡುವಿನ ಒಂದು ದೊಡ್ಡ ವ್ಯತ್ಯಾಸವನ್ನು ನಾವು ಇಲ್ಲಿ ಗಮನಿಸಬಹುದು: ನಿಜವಾಗಿಯೂ ಪ್ರತಿಷ್ಠಿತರಾಗಿರುವವರು ಮುಗ್ಗರಿಸಬಹುದು, ತಪ್ಪುಮಾಡಬಹುದು, ಆದರೆ ಹೃದಯದಲ್ಲಿ ಅವರು ಯಾವಾಗಲೂ ದೇವರಿಗೆ ನಿಷ್ಠೆಯುಳ್ಳವರಾಗಿದ್ದು ಆತನಿಗೆ ಸೇವೆ ಮಾಡಿ ಆತನನ್ನು ಮೆಚ್ಚಿಸ ಬಯಸುವವರಾಗಿರುವರು. ಇವರು ನಿಜವಾಗಿಯೂ ಆತ್ಮಿಕ ಇಸ್ರಾಯೇಲ್ಯರಾಗಿದ್ದು ದೇವರ ಆಶೀರ್ವಾದವು ಇವರ ಮೇಲಿರುವದು. ಬೇರೆ ವರ್ಗದವರು ದೇವಜನರಂತೆ ತೋರ್ಪಡಿಸಿಕೊಂಡರೂ ಹೃದಯದಲ್ಲಿ ದೇವರಿಗೆ ದೂರವಾಗಿದ್ದು ಕೇವಲ ತಮ್ಮ ತುಟಿಗಳು ಹಾಗು ಬಾಹ್ಯಾಚಾರಗಳಿಂದ ದೇವರ ಬಳಿಗೆ ಬರುವಂಥವರಾಗಿರುವರು. ಇವರಿಗೆ ಇತರರೊಡನೆ ಯಾವ ಪಾಲೂ ಇಲ್ಲವೇ ಪಾತ್ರವೂ ಇಲ್ಲದಾಗಿದ್ದು ಈಗಿನ ಕಾಲದ ದೇವರ ಕರೆಯ ಸಂಬಂಧವಾಗಿ ದೊರೆತ ಯಾವುದೇ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ನಡೆಸಿದ ತಮ್ಮ ಸ್ವ–ಇಚ್ಛೆಯ ಫಲವನ್ನು ಖಂಡಿತವಾಗಿ ಅನುಭವಿಸುವರು. ಮತ್ತೊಬ್ಬ ಲೇಖಕನು ಹೀಗೆ ಚೆನ್ನಾಗಿ ಹೇಳಿರುವನು:

"ಸೌಲನು ದೇವರನ್ನು ತೊರೆದಾಗ ಆತನಿಗೂ ಮತ್ತು ದೇವರಿಗೂ ನಡುವೆ ಬೇರ್ಪಡುವಿಕೆಯು ಅಗತ್ಯವಾಗಿತ್ತು. ಅಲ್ಲದೆ ಒಂದು ದುರಾತ್ಮವು ಆತನ ಹೃದಯವನ್ನು ಆಕ್ರಮಿಸಿಕೊಂಡಿತ್ತು. ಸೌಲನ ವಿನಾಶವನ್ನು ತ್ವರಿತಗೊಳಿಸಲು ದೇವರು ನೇರವಾಗಿ ಯಾವ ಕಾರ್ಯವನ್ನೂ ಮಾಡಿದ ಸೂಚನೆಯೂ ನಮಗೆ ಕಾಣುವದಿಲ್ಲ. ತನ್ನ ದುಷ್ಟ ಹೃದಯದ ಸಹಜ ಪರಿಣಾಮಗಳನ್ನು ಅಂದರೆ ದೇವರ ಸಹಾಯ ಮಾರ್ಗದರ್ಶನವಿಲ್ಲದಂಥ, ಹಾಗು ಭಾವೋದ್ವೇಗ ಮತ್ತು ಸ್ವಾರ್ಥತೆಗಳಿಂದ ನಡೆಸಲ್ಪಡುವಂಥ ಒಂದು ಜೀವಿತದ ಪರಿಣಾಮಗಳನ್ನು ಸಹಜವಾಗಿಯೇ ಅನುಭವಿಸುವಂತೆ ಮಾಡಿಕೊಳ್ಳಲು ಆತನಿಗೆ ಬಿಡಲಾಗಿತ್ತು. ತನ್ನ ವೈರಿಗಳನ್ನು ಜಯಿಸುವದಕ್ಕೆ ಬದಲಾಗಿ ಆತನು ದಾವೀದನನ್ನು ಹಿಂದಟ್ಟುವದರಲ್ಲಿ ತನ್ನ ಸಮಯವನ್ನು ಕಳೆದಿದ್ದನು. ಹೀಗೆ ಆತನ ರಾಜ್ಯವು ನಿರ್ಲಕ್ಷಿಸಲ್ಪಟ್ಟಿತ್ತು, ಆತನ ಪ್ರಜೆಗಳು ಅತೃಪ್ತರಾಗಿದ್ದರು, ಆತನ ಉತ್ತಮ ಪುರುಷರು ಆತನನ್ನು ತೊರೆದು ದಾವೀದನ ಬಳಿಗೆ ತೆರಳಿದವರಾಗಿ ಅವರೆಲ್ಲರೂ ವೈರಿಗಳ ದೇಶಕ್ಕೆ ಹೊರಡಿಸಲ್ಪಟ್ಟಿದ್ದರು. ಆತನ ಸೈನ್ಯವು ಧೈರ್ಯವನ್ನು ಕಳೆದುಕೊಂಡಿತ್ತು, ಅಲ್ಲದೆ ಕಡೆಯ ಆ ಮಹಾ ಯುದ್ಧದಲ್ಲಿ ಆತನು ದುರ್ಬಲನಾಗಿ ಆ ರಾತ್ರಿಯನ್ನು ತನ್ನ ಕಾರ್ಯಕ್ಕೆ ಸಿದ್ಧಮಾಡಿಕೊಳ್ಳುವದಕ್ಕೆ ಬದಲು ಒಬ್ಬ ಮಾಟಗಾತಿಯನ್ನು ಸಮಾಲೋಚಿಸುವದರಲ್ಲಿ ನಿತ್ರಾಣಗೊಂಡಿದ್ದನು. ಕಡೆಯಲ್ಲಿ ಹೀಗೆ ಆತನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಮೂಲಕವಾಗಿ ನಿಕೃಷ್ಠ ರೀತಿಯಲ್ಲಿ ಅವಸಾನಗೊಂಡಿದ್ದನು. – "ಆದುದರಿಂದ ಅವರು ತಮ್ಮ ನಡತೆಯ ಫಲವನ್ನು ಅನುಭವಿಸಿ ಸ್ವಂತ ಕುಯುಕ್ತಿಗಳನ್ನೇ ಹೊಟ್ಟೆ ತುಂಬಾ ಉಣ್ಣಬೇಕಾಗುವದು." ಜ್ಞಾನೋಕ್ತಿ 1:31.

ನಮ್ಮ ಪಾಠವು ಸೌಲನ ಕಡೆಯ ದಿನಗಳ ಅನುಭವಗಳಿಗೆ ಸಂಬಂಧಿಸಿರುವದು. ಫಿಲಿಷ್ಟಿಯರು ಒಂದು ಸೇನೆಯೊಡನೆ ಇಸ್ರಾಯೇಲ್ ದೇಶದಲ್ಲಿ ನುಸುಳಿಬಂದಿದ್ದರು, ಹಾಗು ಸೌಲನು ವಿರೋಧಿಸುವ ಒಂದು ಸೈನ್ಯದೊಡನೆ ಯುದ್ಧದಲ್ಲಿ ತೊಡಗಿಸಿಕೊಳ್ಳಲು ಮುಂದೆ ನಡೆದಿದ್ದನು. ಈ ಎರಡು ಸೈನ್ಯಗಳು ಪಾಳೆಯ ಮಾಡಿಕೊಂಡದ್ದು ನಜರೇತಿಗೆ ಬಹು ದೂರವೇನೂ ಇರಲಿಲ್ಲ. ಅರಸನಾದ ಸೌಲನು ಯುದ್ಧದ ಹಿಂದಿನ ರಾತ್ರಿಯಲ್ಲಿ ಏಂದೋರಿನ ಮಾಟಗಾತಿಯೊಡನೆ ಸಮಾಲೋಚಿಸಲು ಹೋಗುವಂತೆ ನಡಸಿದ್ದ ಮನಸ್ಸಿನ ಖಿನ್ನತೆಯ ಬಗ್ಗೆ ನಾವು ಸುಲಭವಾಗಿ ಕಲ್ಪಿಸಿಕೊಳ್ಳಲು ಸಾಧ್ಯ. ತನ್ನ ಸ್ವ–ಇಚ್ಛೆಯಿಂದ ಸಾಮಾನ್ಯವಾಗಿರುವ ದೇವರ ಚಿತ್ತವನ್ನು ಅಲಕ್ಷ್ಯಮಾಡಿ, ದಾವೀದನ ಮೇಲಿನ ಹಗೆತನದಿಂದ ತುಂಬಿಕೊಂಡಿದ್ದನು; ಯಾಕಂದರೆ ಕಡೆಯಲ್ಲಿ ದಾವೀದನನ್ನು ಇಸ್ರಾಯೇಲಿನ ಸಿಂಹಾಸನಕ್ಕೆ ತರುವದು ದೇವರ ಚಿತ್ತವಾಗಿತ್ತೆಂಬುದು ಆತನಿಗೆ ಅರಿವಾಗಿತ್ತು. ಹೀಗಾಗಿ ತನಗೆ ಯಾವ ಹಾನಿಯನ್ನು ಮಾಡದಿದ್ದ ಹಾಗೂ ನಿಜವಾಗಿಯೂ ಅತಿ ನಿಷ್ಠಾವಂತನಾದ ಒಬ್ಬ ಪ್ರಜೆಯಾಗಿದ್ದ ದಾವೀದನನ್ನು ವಿರೋಧಿಸುವಲ್ಲಿ ನಿಜವಾಗಿಯೂ ಆತನು ದೇವರಿಗೆ ವಿರೋಧವಾಗಿ ಹೋರಾಡುತ್ತಿದ್ದುದು ಆತನಿಗೆ ಅರಿವಾಗಿತ್ತು. ಮತ್ತು ಆಗ ಅಂದರೆ ಯುದ್ಧದ ಹಿಂದಿನ ರಾತ್ರಿಯಲ್ಲಿ ತಾನು ತಿರಸ್ಕೃತನಾಗಿ ಖಿನ್ನನಾಗಿರುವೆನೆಂದು ಆತನಿಗೆ ಅನ್ನಿಸಿದ್ದುದರಲ್ಲಿ ಆಶ್ಚರ್ಯವೇನಿರಲಿಲ್ಲ, ಕಾರಣ ಆತನು ದೇವರನ್ನು ವಿಚಾರಿಸಲು ಪ್ರಯತ್ನಿಸಿದಾಗ ತಾನು ಯಾವ ಪ್ರತ್ಯುತ್ತರವನ್ನೂ ಪಡೆದಿರಲಿಲ್ಲ. ಏಂದೋರಿನ ಮಾಟಗಾತಿಯನ್ನು ತನ್ನ ನೆನಪಿಗೆ ತಂದುಕೊಂಡು ಮಾರನೆ ದಿನದ ಬೆಳಗಿನ ಯುದ್ಧದ ಪರಿಣಾಮದ ಬಗ್ಗೆ ಆಕೆಯಿಂದ ತಿಳಿದುಕೊಳ್ಳಲು ನಿರ್ಣಯಿಸಿಕೊಂಡಿದ್ದನು. ಇಲ್ಲಿಯೂ ಮತ್ತೆ ಈ ಮಾರ್ಗವು ದೇವರ ಚಿತ್ತಕ್ಕೆ ವಿರೋಧವಾದುದೆಂದು ಆತನಿಗೆ ತಿಳಿದಿತ್ತು; ಯಾಕಂದರೆ ತಾನೇ ಧರ್ಮೋಪದೇಶಕಾಂಡ 18:10,12; ವಿಮೋಚನಾಕಾಂಡ 22:18ರಲ್ಲಿನ ದೇವರ ಆಜ್ಞೆಯನ್ನು ಜಾರಿಗೆ ತರಲು ಆದೇಶವನ್ನು ನೀಡಿದ್ದನು. ಈ ಸಂಗತಿಯಲ್ಲಿ ಆತನ ನಡೆಯು ತನ್ನ ಮನೋಪ್ರವೃತ್ತಿಯನ್ನು ನಿದರ್ಶಿಸಿದ್ದು, ಇದನ್ನು ದೇವರು ಮಾನ್ಯಮಾಡಿರಲಿಲ್ಲ. ಸಂಪರ್ಕ–ಮಾಧ್ಯಮಿಯ ಮೂಲಕ ದುರಾತ್ಮಗಳನ್ನು ಸಂಪರ್ಕಿಸುವದು ದೇವರಿಂದ ಮಾನ್ಯಮಾಡಿರುವದಿಲ್ಲವೆಂಬುದು ತನಗೆ ತಿಳಿದಿದ್ದಾಗ್ಯೂ ತಾನು ತಪ್ಪು ಮಾರ್ಗವನ್ನು ಅನುಸರಿಸಿದ್ದನು. ಹೀಗೆಯೇ ಈ ದಿನದ ದೇವಜನರಲ್ಲಿ ಕೆಲವರು ಸತ್ತವರ ಆತ್ಮಗಳನ್ನು ವಿಚಾರಿಸುವದು ಮುಂತಾದವುಗಳ ಬಗ್ಗೆ ಇರುವ ಸತ್ಯವೇದದ ಆದೇಶವನ್ನು ಉಪೇಕ್ಷೆಮಾಡಿ ಕೇವಲ "ಇದು ಹೇಗೆ ನಡೆಸಲ್ಪಡುತ್ತದೆ" ಎಂಬು–ದನ್ನು ನೋಡಲು ಆತ್ಮಿಕವಾದಿಗಳ ಕೂಟದಲ್ಲಿ ಭಾಗವಹಿಸಿ–ರುವರು. ದೇವರ ಆಜ್ಞೆಯನ್ನು ಉಪೇಕ್ಷಿಸುವಂಥ ಒಂದು ಮನೋಪ್ರವೃತ್ತಿಯು ಸ್ವ–ಇಚ್ಛೆಯುಳ್ಳದ್ದಾಗಿದ್ದು ಇದು ಸೌಲನನ್ನು ಸಂಕಷ್ಟಕ್ಕೆ ಸಿಕ್ಕಿಬೀಳುವಂತೆ ಮಾಡಿದ್ದು ಖಂಡಿತವಾಗಿಯೂ ಈ

ದಿನದಲ್ಲಿ ಇದನ್ನು ಮಾಡಿದವರಿಗೆ ಕಷ್ಟವನ್ನು ಉಂಟುಮಾಡುವದು. ತನ್ನ ಆಜ್ಞಾವಿಧಿಗಳನ್ನು ನಿರ್ಲಕ್ಷಿಸುವವರ ಬಗ್ಗೆ ದೇವರಿಗೆ ಸಂತೋಷವಿರುವದಿಲ್ಲ; ಸೌಲನನ್ನು ತನ್ನ ದಾರಿಯಲ್ಲಿ ಹೋಗಲು ಬಿಟ್ಟಿದ್ದಂತೆಯೇ ಆತನು ಅವರನ್ನು ತಮ್ಮ ದಾರಿಯಲ್ಲೇ ಹೋಗುವಂತೆ ಬಿಡುವನು; ಆದರೆ ಇಂಥಾ ಸ್ವೇಚ್ಛಾ ಮಾರ್ಗವು ಆ ಸಮಯಕ್ಕೆ ಎಷ್ಟು ಜ್ಞಾನವುಳ್ಳದ್ದಾಗಿ ತೋರಿದರೂ ಕಡೆಯಲ್ಲಿ ದೇವರೊಡನೆ ಇರುವ ಸಮಾಧಾನ ಮತ್ತು ಅನ್ಯೋನ್ಯತೆಯ ಸಂಬಂಧವಾಗಿ ಅದು ವಿನಾಶಕರವಾಗುವದು ಖಚಿತ. ಕೇವಲ ಯಾರು ದೇವರಿಗೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಡುವರೋ ಹಾಗು ಯಾರು ದೇವರ ಚಿತ್ತವನ್ನು ತಮ್ಮ ಸ್ವಂತ ಚಿತ್ತಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವರೋ ಅವರಿಗೇ ತಮ್ಮ ವಿಷಯದಲ್ಲಿ ಈ ಮುಂದಿನ ವಾಗ್ದಾನವು ನೆರವೇರಲ್ಪಡುವದನ್ನು ನಿರೀಕ್ಷಿಸಲು ಸಾಧ್ಯ: "....ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತದೆ."

ಇಲ್ಲಿರುವ ಪಾಠದ ವಿವರಣೆಯು ಬಹು ಸರಳವಾಗಿದ್ದು ಬಹು ಅಲ್ಪವಾಗಿ ವ್ಯಾಖ್ಯಾನಿಸಿ ಹೇಳುವ ಅವಶ್ಯಕತೆಯಿರುವದು. ಸೌಲನು ಹಾಗು ಆತನ ಮೂವರು ಗಂಡು ಮಕ್ಕಳು ಅಲ್ಲದೆ ಆತನ ಅಂಗರಕ್ಷಕರೆಲ್ಲರೂ ಯುದ್ಧದಲ್ಲಿ ಸಂಹಾರವಾಗಿದ್ದರು, ಇದರಲ್ಲಿ ಫಿಲಿಷ್ಟಿಯರು ವಿಶೇಷವಾಗಿ ರಾಜವಂಶದವರನ್ನು ಹಿಂದಟ್ಟಿದ್ದರೆಂದು ತೋರುತ್ತದೆ. ತಾನು ವೈರಿಗಳ ಕೈಗೆ ಜೀವಂತವಾಗಿ ಸಿಕ್ಕಿಕೊಂಡು ಅವರು ನೀಡುವ ಚಿತ್ರಹಿಂಸೆಯಿಂದ ತಪ್ಪಿಸಿಕೊಳ್ಳಲು ಸೌಲನು ಆತ್ಮಹತ್ಯೆಮಾಡಿಕೊಂಡಿದ್ದನು; ಆ ದಿನಗಳಲ್ಲಿ ಈ ವಾಡಿಕೆಯು ಅಪರೂಪವೇನಾಗಿರಲಿಲ್ಲ. ವಾಸ್ತವದಲ್ಲಿ ಫಿಲಿಷ್ಟಿಯರು ಸೌಲನನ್ನು ಭಗ್ನಗೊಳಿಸುವದರಲ್ಲಿ ಸಂತೋಷಗೊಂಡಿದ್ದರು ಅಲ್ಲದೆ ತಮ್ಮ ಗೆಲುವಿನ ಒಂದು ಗುರುತಾಗಿ ಆತನ ತಲೆಯನ್ನು ಪಾರಿತೋಷಕವಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ಕಳುಹಿಸಿಕೊಟ್ಟಿದ್ದರು. ಅವರು ಅಷ್ಟೆರೋತ್ ದೇವತೆಯ ಆರಾಧಕರಾಗಿದ್ದು ತಮ್ಮ ಗೆಲುವಿನ ಒಂದು ಸ್ಮಾರಕವಾಗಿ ಸೌಲನ ಆಯುಧವನ್ನು ಆಕೆಯ ಗುಡಿಯಲ್ಲಿ ನೇತುಹಾಕಿದ್ದರು. ಸೌಲನ ಹಾಗು ಆತನ ಮಕ್ಕಳ ದೇಹವನ್ನು ಬೇತ್ಷೆಹೇಮಿನ ಗೋಡೆಯ ಹೊರಗೆ ಒಂದು ದೊಡ್ಡ ಅಗೌರವದ ಗುರುತಾಗಿ ಕಟ್ಟಿಹಾಕಿದ್ದರು, ಆದರೆ ಮನಸ್ಸಿಕುಲದವರು ಆ ದೇಹಗಳನ್ನು ಪುನರ್ವಶಪಡಿಸಿಕೊಂಡು ನಂತರದಲ್ಲಿ ಅವುಗಳನ್ನು ಹೆಚ್ಚಾಗಿ ಭಗ್ನಗೊಳಿಸುವದರಿಂದ ತಪ್ಪಿಸಲು ಅವುಗಳನ್ನು ಸುಟ್ಟುಹಾಕಿ ಅದರ ಬೂದಿಯನ್ನು ಮತ್ತು ಸುಟ್ಟುಹೋಗದ ಮೂಳೆ ಮುಂತಾದವುಗಳನ್ನು ಹೂಣಿಟ್ಟಿದ್ದರು.

ಸ್ವರ್ಣಮಯ ಪಠ್ಯಭಾಗವು ನಾವೆಲ್ಲರೂ ನೆನಪಿನಲ್ಲಿಟ್ಟು ಕೊಳ್ಳಲು ಯೋಗ್ಯವಾದದ್ದು. ಇದರಲ್ಲಿರುವ ಪಾಠವೇನಂದರೆ ನಮ್ಮ ಜೀವನದಲ್ಲಿ ನಡೆಯುವ ಸಂಗತಿಗಳನ್ನು ನಾವೇ ಮಾರ್ಗದರ್ಶನ ಮಾಡಿ ನಿರ್ದೇಶಿಸಿಕೊಳ್ಳಲು ನಾವು ಸಮರ್ಥರಲ್ಲವೆಂಬದು; ಅದಕ್ಕೆ ನಮಗೆ ದೇವರ ಮಾರ್ಗ-ದರ್ಶನದ ಅಗತ್ಯವಿರುವದು. ಮಾನವರ ನ್ಯಾಯನಿರ್ಣಯವು ಸಂಪೂರ್ಣ ತಿಳುವಳಿಕೆಯ ಮೇಲೆ ಆಧಾರಗೊಂಡಿದ್ದರೂ ಅದು ನಂಬಲು ಅನರ್ಹವಾಗಿರುವದು; ಆದರೆ ತಿಳುವಳಿಕೆಯ ಕೊರತೆಯ ಸಹಿತವಾದ ನ್ಯಾಯನಿರ್ಣಯದ ದೆಸೆಯಿಂದ ಮನುಷ್ಯನಿಗೆ ಅನೇಕ ಮಾರ್ಗಗಳು ಸೂಕ್ತವಾದುದಾಗಿಯೂ ಬುದ್ಧಿವಂತಿಕೆಯುಳ್ಳದ್ದಾಗಿಯೂ ಹಿತಕರವಾದುದಾಗಿಯೂ ಹಾಗು ಅಪೇಕ್ಷಿಸುವಂಥದ್ದಾಗಿಯೂ ತೋರಿಬಂದರೂ ಅದನ್ನು ಅರಸಿಹೋದಾಗ ಅದು ನಿರಾಶೆ ಪರಾಭವಗಳಿಗೆ ನಡೆಸುವದಲ್ಲದೆ ಕಟ್ಟಕಡೆಗೆ ಮರಣಕ್ಕೆ ಅಂದರೆ ಎರಡನೆ ಮರಣಕ್ಕೆ ನಡೆಸುವದು. ಆದುದರಿಂದ ನಮ್ಮೆಲ್ಲರಿಗಿರುವ ಬುದ್ಧಿವಂತಿಕೆಯ ಹಾಗು ಸೂಕ್ತವಾದ ಮಾರ್ಗವೆಂದರೆ ಅದು ನಮ್ಮ ಅಸಮರ್ಥತೆ ಅಜ್ಞಾನವನ್ನು ಅರಿತುಕೊಂಡು ಅದನ್ನು ಒಪ್ಪಿಕೊಂಡವರಾಗಿ ನಮ್ಮ ಮಾರ್ಗದರ್ಶನಕ್ಕಾಗಿ ದಿವ್ಯ ಸೃಷ್ಟಿಕರ್ತನನ್ನು ಎದುರು ನೋಡಬೇಕು. "ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು" ಎಂಬ ಶಾಸ್ತ್ರವಚನದಲ್ಲಿರುವ ಆದೇಶಕ್ಕೆ ಗಮನ ಕೊಡುವವಂಥವರು ಧನ್ಯರು. ಈ ಸೂಕ್ತವಾದ ಮಾರ್ಗವು ಮುಂಚಿತವಾಗಿಯೇ ಆರಂಭವಾದಷ್ಟು ಪ್ರತಿಫಲಗಳು ಎಲ್ಲಾ ವಿಧದಲ್ಲಿಯೂ ಉತ್ತಮವಾಗಿದ್ದು ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಬಾಗಿಸಿಕೊಳ್ಳುವದು ಸುಲಭವಾಗುವದು; ಅಲ್ಲದೆ ದೇವರ ನಡಿಸುವಿಕೆಯ ಮೂಲಕವಾಗಿ ದೊರೆಯುವಂಥ ಪಾಠ ಸಂತೃಪ್ತಿ ಹಾಗು ಸಮಾಧಾನಗಳು ಬಹು ಅಮೂಲ್ಯವಾಗುವವು. ನಮ್ಮ ಹೃದಯ ಹಾಗು ಜೀವನ ಅಲ್ಲದೆ ನಮ್ಮ ಹಿತಾಸಕ್ತಿಗಳೆಲ್ಲವನ್ನು ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡವರಾಗಿ, ಆತನ ಚಿತ್ತವು ನಮ್ಮ [ಜೀವನದ] ಎಲ್ಲಾ ಸಂಗತಿಗಳಲ್ಲಿ ನೆರವೇರುವಂತೆ ಮಾಡಿಕೊಳ್ಳುವಂಥ ಪ್ರತಿಷ್ಠೆಯೇ ನೀತಿವಂತನೆಂದು ನಿರ್ಣಯಿಸಲ್ಪಟ್ಟ ಪ್ರತಿಯೊಬ್ಬ ನಂಬಿಗಸ್ತನನ್ನು ಸಭೆಯೆಂಬ ಕ್ರಿಸ್ತನ ದೇಹದ ಅನ್ಯೋನ್ಯತೆಯಲ್ಲಿ ಕೊಂಡುತರಲು ಅವಶ್ಯಕವಾದದ್ದು.

*****

ಅರಸನಾದ ಸೌಲನ ಅಪಮಾನಕರ ಅಂತ್ಯ

ರೀಪ್ರಿಂಟ್ಸ್ ಪುಟ 4234

1 ಸಮುವೇಲ 31

".....ನಿನ್ನ ದೇವರ ಬರುವಿಕೆಗೆ ನಿನ್ನನ್ನು ಸಿದ್ಧಮಾಡಿಕೋ." – ಆಮೋಸ 4:12

ಸೌಲನ ವೃತ್ತಿಜೀವನವು ಅತಿ ಅನುಕೂಲಕರವಾದ ಸ್ಥಿತಿಯಲ್ಲಿ ಆರಂಭವಾಗಿದ್ದು ಆದು ಆತ್ಮಹತ್ಯೆಯಲ್ಲಿ ಅತಿ ಅಪಮಾನಕರವಾಗಿ ಮುಕ್ತಾಯಗೊಂಡಿತ್ತು. ಸ್ಪಷ್ಟವಾದ ಸಾಮರ್ಥ್ಯವುಳ್ಳ ಒಬ್ಬ ಮನುಷ್ಯನಾಗಿ, ಒಬ್ಬ ಸೇನಾಧಿಕಾರಿಯಾಗಿ ಹಾಗು ಒಬ್ಬ ಆಡಳಿತಗಾರನಾಗಿದ್ದವನು ಒಂದು ವಿಷಯದಲ್ಲಿ ಕೊರತೆಯುಳ್ಳವನಾಗಿದ್ದನು; ಇದು ಆತನ ವೃತ್ತಿಜೀವನವನ್ನು

ಒಟ್ಟಾರೆ ಒಂದು ವೈಫಲ್ಯವನ್ನಾಗಿಸಿತ್ತು. ನಾವು ನೋಡಿರುವಂತೆ, ಈ ಶಬ್ದಗಳ ಒಂದು ಸಾಮಾನ್ಯ ಅರ್ಥದಲ್ಲಿ, ಆತನು ಭಕ್ತಿಹೀನನಾಗಿರಲಿಲ್ಲ, ಇಲ್ಲವೇ ಅಪವಿತ್ರನಾಗಿರಲಿಲ್ಲ, ನಿಷ್ಕರುಣೆಯುಳ್ಳವನಾಗಿರಲಿಲ್ಲ. ಅನೇಕ ವಿಧದಲ್ಲಿ ಆತನು ಸರ್ವಶಕ್ತನಿಗೆ ಗಾಢವಾದ ಗೌರವವನ್ನು ತೋರ್ಪಡಿಸಿದ್ದು, ಆತನ ಚಿತ್ತವನ್ನು ನೆರವೇರಿಸುವಂಥ ದೊಡ್ಡ ಬಯಕೆಯನ್ನು ಹೊಂದಿದ್ದನು. ಆತನ ವೈಫಲ್ಯವು ಒಟ್ಟಾರೆ ಆತನಲ್ಲಿದ್ದ ಎರಡು ಮನಸ್ಸಿನ ಪರಿಣಾಮವಾಗಿತ್ತು. ಅಪೋಸ್ತಲನು ಗಮನಾರ್ಹವಾಗಿ ಹೇಳಿರುವದೇನಂದರೆ: "ಎರಡು ಮನಸ್ಸುಳ್ಳವನು ತನ್ನ ನಡತೆಯಲ್ಲೆಲ್ಲಾ ಚಂಚಲನಾಗಿದ್ದಾನೆ." ನಮ್ಮ ಕರ್ತನು ಹೇಳಿರುವದು: "ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ." ಸೌಲನು ದೇವರನ್ನು ಸೇವಿಸ ಬಯಕೆ–ಯುಳ್ಳವನಾಗಿದ್ದರೂ ಸ್ವಾರ್ಥವನ್ನು ಹಾಗು ಧನವನ್ನು ಸೇವಿಸುವ ಆಕಾಂಕ್ಷೆಯುಳ್ಳವನಾಗಿದ್ದನು. ಆತನ ಸೂಕ್ತವಾದ ಮಾರ್ಗವು ಪೂರ್ಣವಾದ ಪ್ರತಿಷ್ಠೆ, ತನ್ನ ಚಿತ್ತವನ್ನು ಪೂರ್ಣವಾಗಿ ದೇವರ ಚಿತ್ತಕ್ಕೆ ಅಧೀನಮಾಡಿಕೊಳ್ಳುವುದಾಗಿತ್ತು. ಇದೇ ಆತನ ಮಾರ್ಗ ಹಾಗು ಆತನ ಉತ್ತರಾಧಿಕಾರಿಯಾದ ದಾವೀದನ ಮಾರ್ಗದ ನಡುವಿನ ಪ್ರಮುಖವಾದ ವ್ಯತ್ಯಾಸವಾಗಿತ್ತು. ಬಹುಶಃ ಬಾಹ್ಯವಾಗಿ ಸೌಲನು ಗುಣನಡತೆಯಲ್ಲಿ ತನ್ನ ಉತ್ತರಾಧಿಕಾರಿಯಂತೆ ಘನವಂತನಾಗಿದ್ದನು; ಆದರೆ ಆತನ ಉತ್ತರಾಧಿಕಾರಿಯು ದೇವರನ್ನು ಮೊದಲನೆಯದಾಗಿ ಇರಿಸಿಕೊಂಡಿದ್ದು, ತನ್ನ ಸ್ವಂತ ಚಿತ್ತವನ್ನು ದೇವರ ಚಿತ್ತಕ್ಕೆ ಒಳಪಡಿಸಿಕೊಂಡವನಾಗಿ, ಅನುಕೂಲವನ್ನು ಪಡೆದಿದ್ದನು. ಹೀಗಾಗಿ ತಾನು ಸಹಜವಾಗಿ ಯಾವುದೇ ಪ್ರಮಾದವನ್ನು ಮಾಡಿದ್ದರೂ, ಯಾವುದೇ ಸಹಜವಾದ ನ್ಯೂನ್ಯತೆಗಳನ್ನು ಪಡೆದಿದ್ದರೂ, ಆತನು ಇವುಗಳನ್ನು ಉಳಿದ ಮಾನವ ಕುಲದವರಲ್ಲಿ ಸಾಮಾನ್ಯವಾಗಿರುವಂಥದನ್ನು ಹಂಚಿಕೊಂಡು ಬಂದಿದ್ದನು; ಇವುಗಳು ದೇವರಿಗಾಗಿರುವ ಅತನ ಹೃದಯದಲ್ಲಿನ ನಿಷ್ಠೆಯ ಮೂಲಕವಾಗಿ ಸರಿದೂಗಿಸಲ್ಪಟ್ಟಿದ್ದು, ಇದು ಆತನನ್ನು ದಾರಿತಪ್ಪಲು ಬಿಡದಂತಿದ್ದು, ಪ್ರತಿಯೊಂದು ಅಪರಾಧದ ನಂತರ ಆತನನ್ನು ವ್ಯಥೆಯಿಂದ ಅಳುವಂತೆಮಾಡಿ ದೇವರಿಂದ ಕ್ಷಮೆಯನ್ನು ಬಯಸುವಂತಾಗಿ, ಹೀಗೆ ಅದು ದೇವರೊಂದಿಗೆ ನಿಕಟವಾಗಿ ನಡೆಯುವಂತೆ ಮಾಡಿತ್ತು. ಹೀಗೆ ದಾವೀದನು ದೇವರಲ್ಲಿದ್ದಂಥ ಹೃದಯವನ್ನು ಹೊಂದಿದ–ವನಾಗಿದ್ದು, ಇದು ತನ್ನ ಶಾರೀರಿಕವಾದ ಪರಿಪೂರ್ಣತೆ–ಯಿಂದಲ್ಲದೆ ಅದು ಆತನ ಉದ್ದೇಶದಲ್ಲಿನ ಹಾಗು ಹೃದಯದ ಬಯಕೆಯಲ್ಲಿನ ಪರಿಪೂರ್ಣತೆಯ ಕಾರಣದಿಂದಾಗಿತ್ತು. ಸೌಲನ ಗುಣನಡತೆಗಳು ಈ ದಿನಗಳಲ್ಲಿ ಅನೇಕ ಲೌಕೀಕ ಮನುಷ್ಯರಲ್ಲಿ ಪ್ರತಿನಿಧಿತವಾಗಿದ್ದು, ಅವರು ತಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಸಂಪೂರ್ಣವಾಗಿ ಒಳಪಡಿಸಿಕೊಂಡು ಭಕ್ತರಾಗಬಹುದಿದ್ದು, ಆದರೆ ತಮ್ಮ ಸ್ವಂತ ಚಿತ್ತವನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ಜೀವನವನ್ನು ಒಂದು ವೈಫಲ್ಯವನ್ನಾಗಿ ಮಾಡಿಕೊಂಡು ಪ್ರಸಂಶಾರ್ಹವಾದಂಥವುಗಳನ್ನು ಅಲ್ಪವಾಗಿ ಸಾಧಿಸಿಕೊಳ್ಳುವವರಾಗಿರುವರು.

ಅಸೂಯೆಯ ಮೂಲಕವಾಗಿ ಹುಚ್ಚನನ್ನಾಗಿ ಮಾಡಿದುದು

ಪ್ರವಾದಿಯಾದ ಸಮುವೇಲನು ಪ್ರಕಟಿಸಿ ಹೇಳಿದಂತೆ ಸೌಲನು ತನಗೆ ದೇವಾನುಗ್ರಹವು ಕಳೆದುಹೋದುದಕ್ಕಾಗಿ ಗೋಳಾಡಿದ್ದನು; ಆದರೆ ದೇವಾಶೀರ್ವಾದವು ಪೂರ್ಣ ಯವನಸ್ಥನಾದ ದಾವೀದನೊಂದಿಗೆ ಇರುವದನ್ನು ಗಮನಿಸಲು ಆರಂಭವಾಗುವವರೆಗೆ ಸಂಗತಿಯು ಆತನಿಗೆ ಅಷ್ಟು ಗಂಭೀರವೆನಿಸಿರಲಿಲ್ಲ. ಮಾನವನ ಸಂತೋಷಕ್ಕೆ ಅತಿ ಘೋರವಾದ ವೈರಿಗಳಲ್ಲಿ ಒಂದಾದ ಅಸೂಯೆಯು ಆತನ ಮನಸ್ಸನ್ನು ಪ್ರವೇಶಿಸಿ ಆತನನ್ನು ಬಹುಪಾಲು ವಿವೇಚನಾಹೀನ ನನ್ನಾಗಿ ಮಾಡಿತ್ತು. ಹೆಚ್ಚು ನಂಬಿಗಸ್ತನಾದ ದಾವಿದನು ಆತನಿಗೆ ಸೇವೆಮಾಡಿ ಉತ್ತಮವಾದ ಫಲಿತಾಂಶವನ್ನು ಪಡೆದಷ್ಟೂ ದಾವೀದನು ದೇವರ ಏರ್ಪಾಡಿನ ಅನುಸಾರ ತನ್ನ ರಾಜ್ಯಕ್ಕೆ ಉತ್ತರಾಧಿಕಾರಿ ಆಗಿರುವನೆಂಬುದನ್ನು ಸೌಲನು ಅಷ್ಟು ಹೆಚ್ಚಾಗಿ ಮನಗೊಂಡಿದ್ದನು. ನಾವು ನೋಡಿರುವಂತೆ ಇದು ದಾವೀದನನ್ನು ಹತ್ಯೆಮಾಡಲು ಹವಣಿಸುವಂಥಾ ಹಗೆತನಕ್ಕೆ ಸೌಲನನ್ನು ನಡೆಸಿದ್ದು ನಂತರದಲ್ಲಿ ಒಬ್ಬ ಸುಲಿಗೆಗಾರನಂತೆ ತನ್ನ ಸೇನಾತಂಡದ ಸಮೇತ ದಾವೀದನನ್ನು ಹುಡುಕಾಡುವಂತೆ ನಡೆಸಿತ್ತು. ಈ ಕಥಾ ನಿರೂಪಣೆಗೆ ಸಹಾಯಕವಾದ ಅನೇಕ ಸಂಗತಿಗಳು ದಾವೀದನ ಮೇಲಿನ ತನ್ನ ಅಸೂಯೆಯ ಸಂಬಂಧದಲ್ಲಿ ಸೌಲನನ್ನು ಪ್ರವೇಶಿಸಿದ ದುರಾತ್ಮವು ಅಸ್ಥಿರ ಮನಸ್ಸುಳ್ಳ ಒಂದು ದುಷ್ಟ ಅಥವಾ ಹಾನಿಕರವಾದ ಆತ್ಮ ಅಥವಾ ಪ್ರವೃತ್ತಿಯಾಗಿದ್ದುದು ಸ್ಪಷ್ಟವಾಗಿತ್ತು. ಈ ಸಂಗತಿಗಳಲ್ಲಿ ಕೇವಲ ಸೌಲನಿಂದ ಸೂಚಿತವಾದ ಲೌಕೀಕ ವರ್ಗದವರಿಗೆ ಒಂದು ದೊಡ್ಡ ಪಾಠವಿರುವದು ಮಾತ್ರವಲ್ಲದೆ ನೂತನ ಸೃಷ್ಟಿಗಳಾದ ನಮಗೂ ಒಂದು ಪಾಠವಿರುವದು. ನಮ್ಮ ಜೀವನದ ಪ್ರಯಾಣದಲ್ಲಿ ನಾವು ಅನುದಿನವೂ ಅನೇಕ ಸಾರಿ ಒಂದು ಸ್ಥಿತಿ ಅಥವಾ ಸನ್ನಿವೇಶಕ್ಕೆ ಬರುವೆವು ಅದನ್ನು ತಪ್ಪಾಗಿ ತೆಗೆದುಕೊಂಡಲ್ಲಿ ಅದು ಇಡೀ ನಮ್ಮ ಮಾರ್ಗವನ್ನೆಲ್ಲಾ ದೇವರ ಅನ್ಯೋನ್ಯತೆಯ ಸಂಬಂಧದಿಂದ ಪಾಪಕ್ಕೆ ಮಾರ್ಪಡಿಸಿ ಹಾಗು ಆತನನ್ನು ವಿರೋಧಿಸುವಂತಾಗ ಮಾಡುವದು. ಯಾವ ಕ್ರೈಸ್ತನು ತನ್ನ ಜೀವನದಲ್ಲಿ ಕೆಲವು ಸಂದಿಗ್ಧ ಪರಿಸ್ಥಿತಿಗಳು ಉಂಟಾಗಿ ಅವುಗಳಲ್ಲಿ ತನಗೆ ಎರಡು ಸ್ವರಗಳು ಮಾತಾಡುವಂತೆ ತೋರಿದ್ದು, ಇವುಗಳಲ್ಲಿ ಒಂದು ಯಾವುದೇ ಪರಿಸ್ಥಿತಿಯಲ್ಲಿಯೂ ದೀನತೆ ಹಾಗು ದೇವರಿಗೆ ವಿಧೇಯತೆಯನ್ನು ಪ್ರೋತ್ಸಾಹಿಸುವದನ್ನು, ಮತ್ತೊಂದು ಹೆಮ್ಮೆಯನ್ನು ಆಧಾರವಾಗಿಸಿಕೊಂಡ ಸ್ವ–ಇಚ್ಛೆಯಂತೆ ನಡೆಯುವದನ್ನು ಪ್ರಚೋದಿಸುವದನ್ನು ಮನಗೊಂಡಿರುವದಿಲ್ಲ? ನಾವು ಅನೇಕ ಯಶಸ್ಸುಗಳನ್ನು ಗಳಿಸುವದರ ಮೂಲಕವಾಗಿ ಇಂಥಾ ಒಂದು ಸಂದಿಗ್ಧತೆಗಳನ್ನು ಅಪರೂಪವಾಗಿಸಿಕೊಂಡಂಥ ಮುಂದುವರೆದ ಕ್ರೈಸ್ತರಾದಾಗಲೂ ಎಚ್ಚರದಿಂದಿದ್ದು – ನಮಗೆ ಒಬ್ಬ ಅತಿ ದುಷ್ಟನಾದ ವೈರಿಯಿದ್ದು ನೂತನ ಮನಸ್ಸೆಂಬ ಸಂಪತ್ತನ್ನು ಮಣ್ಣಿನ ಘಟಗಳಲ್ಲಿ ಪಡೆದವನಾಗಿರಲು, ನಮ್ಮ ಶರೀರದಲ್ಲಿ ಯಾವ ಪರಿಪೂರ್ಣತೆಯೂ ಇರುವದಿಲ್ಲವೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳುವದು ಅಗತ್ಯ. ಈ ಪರ್ಯಾಲೋಚನೆಗಳು ನಮ್ಮನ್ನು ಬಹು ದೀನರನ್ನಾಗಿ ಮಾಡಿ ದೇವರನ್ನು ನಿಕಟವಾಗಿ

ಆತುಕೊಂಡಿರುವಂತೆ ನಡೆಸಿ ನಮ್ಮ ನಡತೆ ಮನೋಭಾವಗಳಲ್ಲಿ ಹಾಗು ಅಲೋಚನೆಗಳಲ್ಲಿಯೂ ದೇವರ ಚಿತ್ತಕ್ಕೆ ಯಾವುದೇ ಪ್ರಮಾಣದಲ್ಲಿ ವಿರೋಧವು ಕಂಡುಬರುವದರ ಬಗ್ಗೆ ಭಯಪಟ್ಟು ಇಂಥವುಗಳನ್ನು ದೂರವಿಡುವಂತೆ ನಾವು ನೋಡಿಕೊಳ್ಳಬೇಕು. ಕೆಲವೊಂದು ವಿಷಯಗಳಲ್ಲಿ ದೇವರ ಅನುಗ್ರಹವು ನಮ್ಮನ್ನು ಬಿಟ್ಟು ಇತರರ ಕಡೆಗೆ ದಾಟಿಹೋದಂತೆ ಕಂಡುಬಂದಾಗಲೂ, ನಾವು ಯೋನಾತಾನನ ವಿಧಾನವನ್ನು ಅನುಸರಿಸುವವರಾಗಿ, ದೇವರೊಂದಿಗೆ ಹೋರಾಡುವದು ಖಂಡಿತವಾಗಿಯೂ ಅವಿವೇಕ –ವೆಂಬುದನ್ನು ತಿಳಿದುಕೊಳ್ಳಬೇಕು, ಯಾಕಂದರೆ ಈ ನಿಟ್ಟಿನಲ್ಲಿ ಯಾವುದೇ ಆಶೀರ್ವಾದವಿರುವ ಸಾಧ್ಯತೆಯಿರುವುದಿಲ್ಲ.

ಫಿಲಿಷ್ಟಿಯರ ಆಕ್ರಮಣ

ಸೌಲನು ದಾವೀದನ ಮೇಲೆ ನಡೆಸಿದ ಹಿಂಸಾಚಾರವು ಆತನ ಸಮಯ ಮತ್ತು ಗಮನವನ್ನೆಲ್ಲಾ ಆವರಿಸಿ – ಕೊಂಡಿತ್ತೆಂಬುದನ್ನು ಭಾವಿಸುವಂಥದ್ದು ನಮಗೆ ಸರಿಯಲ್ಲ. ಸಮರ್ಥನಾದ ಒಬ್ಬ ಮನುಷ್ಯನಾಗಿ ಆತನು ತನ್ನ ರಾಜ್ಯದಲ್ಲೆಲ್ಲಾ ಬಹು ಪ್ರಭಾವವನ್ನು ಬೆಳೆಸಿದ್ದನೆಂಬದು ನಿಸ್ಸಂದೇಹ. ಸೌಲನ ಮರಣದ ನಂತರ ಏಳು ವರುಷಗಳ ವರೆಗೆ ಇಸ್ರಾಯೇಲಿನ ಹತ್ತು ಕುಲಗಳು ಆತನ ಉತ್ತರಾಧಿಕಾರಿಯನ್ನು ಆತುಕೊಂಡವರಾಗಿ ದಾವೀದನಿಗೆ ಮನ್ನಣೆಮಾಡಲು ನಿರಾಕರಿಸಿದ್ದರಲ್ಲಿ ಇದು ಸ್ಪಷ್ಟವಾಗಿರುವದು. ಬದಲಾಗಿ ಸೌಲನ ಅಸೂಯೆಯ ಭ್ರಮೆಯು ನಿಸ್ಸಂದೇಹವಾಗಿ ಆತನ ವ್ಯಕ್ತಿತ್ವವನ್ನು ಹಾಗು ಜನರ ಸಂಪನ್ಮೂಲಗಳನ್ನು ಸಹ ದುರ್ಬಲಗೊಳಿಸಿದ್ದು, ಹೀಗಾಗಿ ಫಿಲಿಷ್ಟಿಯರು ಇಸ್ರಾಯೇಲ್ ದೇಶವನ್ನು ಆಕ್ರಮಣ ಮಾಡಲು ಒಂದು ಸದಾವಕಾಶವೆಂದು ಪರಿಗಣಿಸಿದ್ದರು. ಯುದ್ಧವು ಗಡಿಯಭಾಗದಲ್ಲಿ ನಡೆದಿರಲಿಲ್ಲ ಅಲ್ಲದೆ ಆಕ್ರಮಣಕಾರರನ್ನು ಪ್ರಾಮಾಣಿಕವಾಗಿ ಎದುರುಗೊಂಡಿರಲಿಲ್ಲ, ಆದರೆ ಯುದ್ಧ ಆರಂಭವಾಗುವ ಮೊದಲೇ ಗಣನಿಯವಾಗಿ ಅವರು ನೆಲೆಯೂರಿದ್ದರು. ಈ ಮಧ್ಯೆ ಅರಸನಾದ ಸೌಲನು ತಾನು ಏಂದೋರಿನ ಮಾಟಗಾತಿಯನ್ನು ಭೇಟಿ ಮಾಡಿದ ಸಂಗತಿಗಳ ಮೂಲಕವಾಗಿ ಆತನ ಮನಃಸ್ಥಿತಿಯ ಬಗ್ಗೆ ನಾವು ಚೆನ್ನಾಗಿ ಗೊತ್ತುಮಾಡಿಕೊಳ್ಳಬಹುದು. ದೌರ್ಭಾಗ್ಯನಾದ ಸೌಲನು! ದೇವರಲ್ಲಿ ನಂಬಿಕೆಯಿಡಲು ಆತನಲ್ಲಿ ಸಾಕಷ್ಟು ಪರಿಜ್ಞಾನವಿತ್ತು, ಆದರೆ ತಾನು ವರುಷಗಳಿಂದ ವಿಶೇಷವಾದ ದೇವಾನುಗ್ರಹದಿಂದ ತೆಗೆಯಲ್ಪಟ್ಟಿರುವಂಥದ್ದು ಸಹ ಆತನಿಗೆ ಚೆನ್ನಾಗಿ ತಿಳಿದಿದ್ದರೂ ಆತನು ದಾವೀದನನ್ನು ವಿರೋಧಿಸುವಲ್ಲಿ ದೇವರೊಂದಿಗೆ ನಿರರ್ಥಕವಾಗಿ ಹೋರಾಡುತ್ತಿದ್ದನು. ಆದರೆ ಇವೆಲ್ಲವುಗಳೊಂದಿಗೆ ತನ್ನ ಹೃದಯದ ಪೀಡನೆಯಿಂದ ಆತನು ಕೆಲವು ಮಾನವಾತೀತವಾದ ಸಲಹೆಗಳನ್ನು ಬಯಸಿದ್ದನು. ಅವನು ದಾವೀದನ ಜೀವವನ್ನು ತೆಗೆಯಲು ಪ್ರಯತ್ನಿಸುತ್ತಿದ್ದುದು ಮಾತ್ರವಲ್ಲದೆ ದಾವೀದನಿಗೆ ದೇವ ಮಂದಿರದಲ್ಲಿದ್ದ ರೊಟ್ಟಿಗಳನ್ನು ಕೊಟ್ಟಿದ್ದಕ್ಕಾಗಿ ಯಾಜಕರನ್ನೂ ಸಂಹರಿಸಿದ್ದನು; ಅಲ್ಲದೆ ತನಗೆ ದೇವಾನುಗ್ರಹದ ಅಗತ್ಯತೆಯಿರುವದನ್ನು ತಾನು ಅರಿತಿದ್ದರೂ ಸಾಧಾರಣವಾಗಿ ಇದರಿಂದ ತನ್ನನ್ನು ತೆಗೆದುಹಾಕಲ್ಪಡುವಂತೆ ಮಾಡಿಕೊಳ್ಳಲು ತನಗೆ ಸಾಧ್ಯವಿದ್ದದ್ದೆಲ್ಲವನ್ನೂ ಮಾಡಿದ್ದನು.

ಏಂದೋರಿನ ಮಾಟಗಾತಿಯನ್ನು ಭೇಟಿ ಮಾಡಿದ್ದುದು

ಬಿದ್ದುಹೋದ ದೇವದೂತರು, ದೆವ್ವಗಳು, ಸಹ ಸೌಲನ ಕಾಲದಲ್ಲಿ ಹಿಂದಿರುಗಿ ಬಂದಿದ್ದು, ಸತ್ತುಹೋದವರನ್ನು ವ್ಯಕ್ತೀಕರಿಸಿ ಕೊಂಡು ತಾವು ಅವರ ಪ್ರತಿನಿಧಿಗಳಾಗಿ ಜೀವಿತರೊಡನೆ ಸಂಸರ್ಗಹೊಂದಲು ಯತ್ನಿಸುತ್ತಿದ್ದರು. ದೆವ್ವಗಳೊಡನೆ ಮಾಡುವ ಇಂಥಾ ಸಂಪರ್ಕಗಳನ್ನು ದೇವರು ನಿರ್ದಿಷ್ಟವಾಗಿ ನಿಷೇಧಿಸಿದ್ದನು; ಅಲ್ಲದೆ ಇಂಥವರೆಲ್ಲರನ್ನು ಇಸ್ರಾಯೇಲ್ ದೇಶದಿಂದ ಹೊರಹಾಕಲು ಮತ್ತು ಹೀಗೆ ಇಸ್ರಾಯೇಲ್ಯರನ್ನು ಪರಿಶೋಧನೆಯಿಂದ ಹೊರಗೆ ಉಳಿಯುವಂತೆ ಮಾಡಲು ಸೌಲನ ಆಧಿಪತ್ಯದ ಪರ್ಯಂತರ ಮಾಡಲಾಗಿದ್ದ ಆಜ್ಞಾವಿಧಿ– ಯೇನಂದರೆ ಮಾಟಗಾರರು ಬೇತಾಳಿಕರು ಹಾಗು ಸಂಪರ್ಕ– ಮಾಧ್ಯಮಿಗಳೆಲ್ಲರಿಗೆ ಮರಣದಂಡನೆ ವಿಧಿಸಬೇಕೆಂಬದು. ಆದರೆ ತನ್ನ ಅತಿರೇಕದಲ್ಲಿ ನಿಸ್ಸಂದೇಹವಾಗಿ ಅರಸನಾದ ಸೌಲನು ವೇಷಮರೆಸಿಕೊಂಡವನಾಗಿ, ತನಗೇನಾದರೂ ಪ್ರವಾದಿಯಾದ ಸಮುವೇಲನ ಸಂಪರ್ಕವಾಗಬಹುದೆಂಬ ಉದ್ದೇಶದಿಂದ ಏಂದೋರಿನ ಮಾಟಗಾತಿಯನ್ನು ಹುಡುಕಿಕೊಂಡು ಹೋಗಿದ್ದನು. ಸ್ಪಷ್ಟವಾಗಿ ಆತನು ಲೋಕದಲ್ಲೆಲ್ಲಾ ಶೀಘ್ರವಾಗಿ ಪ್ರಸರಿಸುತ್ತಿರುವಂಥ ಭ್ರಾಂತಿಗೆ ಒಳಗಾಗಿದ್ದನು; ಅದೇನಂದರೆ ಸತ್ತವರು ಸತ್ತವರಾಗಿರುವದಿಲ್ಲ ಆದರೆ ಕೇವಲ ದೇಹವನ್ನು ತ್ಯಜಿಸಿರುವರೆಂಬಂಥದ್ದು. ಈ ಒಂದು ಕಲ್ಪನೆಯ ಮೇರೆಗೆ ಆತನು ಮಾಟಗಾತಿಯನ್ನು ಒಡಂಬಡಿಸಿ ಪ್ರವಾದಿಯಾದ ಸಮುವೇಲನೊಡನೆ ಒಂದು ಸಂದರ್ಶನಕ್ಕಾಗಿ ಕೇಳಿಕೊಂಡಿದ್ದನು.

ಅಲ್ಲಿ ನಡೆದ ತೋರ್ಪಡಿಸಿಕೊಳ್ಳುವಿಕೆಯನ್ನು ಈ ಎರಡು ವಿಧದಲ್ಲಿ ವಿವರಣೆ ನೀಡಿ ಹೇಳಬಹುದು:

(1) ಒಂದು ದುರಾತ್ಮವು ಸಮುವೇಲನನ್ನು ವ್ಯಕ್ತೀಕರಿಸಿಕೊಂಡು ಮಾರಣೆ ದಿನ ನಡೆಯುವ ಯುದ್ಧದ ಫಲಿತಾಂಶವನ್ನು ಮುಂದಾಗಿ ಹೇಳಿದ್ದಿರಬಹುದು. ನಿಸ್ಸಂದೇಹ– ವಾಗಿಯೂ ಭವಿಷ್ಯದಲ್ಲಿನ ಸಂಗತಿಯ ಫಲಿತಾಂಶವನ್ನು ಮುಂದಾಗಿ ಹೇಳಬಲ್ಲ ಬುದ್ಧಿ ಚಾತುರ್ಯವುಳ್ಳ ಯಾವನಿಗೇ ಆದರೂ ಇದು ಸುಲಭವಾಗುವದಿತ್ತು. ಇದಲ್ಲದೆ ದೆವ್ವಗಳು ಇಂಥಾ ಮಾಹಿತಿಗಳನ್ನು ನೀಡಲು ಯಾವ ಸೌಕರ್ಯಗಳನ್ನು ಪಡೆದಿರುವವೆಂಬುದು ನಮಗೆ ತಿಳಿದಿರುವದಿಲ್ಲ. ಈ ದಿನದಲ್ಲಿ ಅವು ಸಂಪರ್ಕ ಮಾಧ್ಯಮಿಗಳ ಮೂಲಕವಾಗಿ ತಿಳಿಸುವ ಅನೇಕ ಸಂಗತಿಗಳ ನಿಖರತೆಯು ಗಮನಾರ್ಹವಾಗಿರುತ್ತವೆ.

(2) ಸೌಲನು ಏನನ್ನಾದರೂ ನೋಡಿದ್ದನೆಂದಾಗಲಿ ಇಲ್ಲವೆ ಯಾವುದನ್ನಾದರೂ ಆಲಿಸಿದ್ದನೆಂದಾಗಲಿ ಹೇಳಲಾಗಿರುವದಿಲ್ಲ. ಆತನ ಸಂಪರ್ಕವು ಮಾಟಗಾತಿಯ ಮೂಲಕವಾಗಿತ್ತು; ಆಕೆಯು ನೋಡಿದ್ದಳು, ಆಕೆಯು ಕೇಳಿಸಿಕೊಂಡಿದ್ದಳು, ಆಕೆಯು ನುಡಿದಿದ್ದಳು. ಮಾಟಗಾತಿಯು ಏನನ್ನು ಹೇಳಿದ್ದಳೆಂಬುದರ ಮೂಲಕವಾಗಿ ಆತನು ಸಮುವೇಲನಾಗಿದ್ದನೆಂದು ಗ್ರಹಿಸಿಕೊಂಡಿದ್ದನು, ಅಂದರೆ ಆಕೆಯು ಸೌಲನಿಗೆ ನೀಡಿದ ನಿಲುವಂಗಿ ಮುಂತಾದವುಗಳ ವರ್ಣನೆಯ

ಮೂಲಕವಾಗಿ ಆತನು ಸಮುವೇಲನೆಂದು ಗ್ರಹಿಸಿಕೊಂಡಿದ್ದನು. ಆದರೆ ಆಗಲೂ ತನ್ನ ಭವಿಷ್ಯದ ಬಗ್ಗೆ ತಿಳುಕೊಳ್ಳಲು ಮಾಡಿದ ಪ್ರಯತ್ನದಲ್ಲಿ ಕಂಡುಬಂದಿದ್ದ ಆತನ ಧೈರ್ಯವು ಗಮನಾರ್ಹವಾಗಿತ್ತು. ದೇವರ ಬಗ್ಗೆ ಆತನಿಗಿದ್ದ ಪರಿಜ್ಞಾನ ಹಾಗು ತಾನು ಮಾಡಿದ ನಿಷಿದ್ಧವಾದ ಸಂಗತಿಯ ಮೂಲಕವಾಗಿ ತಾನು ಈಗಾಗಲೇ ದೈವಿಕ ಅಸಂತೋಷಕ್ಕೆ ಗುರಿಯಾಗಿದ್ದುದನ್ನು ಮನಗೊಂಡಿದ್ದ ಆತನು ಹೀಗೆ ನಿಷಿದ್ಧವಾದುದನ್ನು ನಡೆಸುವದರ ಮೂಲಕವಾಗಿ ಇನ್ನೂ ಹೆಚ್ಚು ಅಸಂತೋಷಕ್ಕೆ ಗುರಿಯಾಗುವನೆಂಬುದಕ್ಕೆ ಆತನು ಅಂಜಬೇಕಿತ್ತು. ಇಲ್ಲಿ ದೇವಜನರಿಗೆ ಒಂದು ಪಾಠವೂ ಸಹ ಇರುವದು. ದೇವರು ಯಾವುದನ್ನು ನಮಗೆ ಸೂಕ್ತವಾದ ವಿಧಾನದ ಮೂಲಕವಾಗಿ ಕೊಡಲು ಸಂತೋಷಿಸುವದಿಲ್ಲವೋ ಅದು ಇಲ್ಲದಿರುವದೇ ನಮಗೆ ಉತ್ತಮವೆಂದು ಅರಿತುಕೊಳ್ಳಬೇಕು. ಯಾರೇ ಅಗಲಿ ಯಾವುದೇ ಪ್ರಕಾರವಾಗಿ ದೇವರಿಗಿಂತಲೂ ಮುಂದಾಗಿ ಯಾವುದನ್ನಾದರೂ ಹೊಂದ ಸಲುವಾಗಿ ದೇವರಿಗೆ ತಪ್ಪಿಸಿಕೊಂಡು ಅದನ್ನು ಹೊಂದಲು ಪ್ರಯತ್ನಿಸುವದು ನಿರರ್ಥಕ. "ನಿನ್ನ ವಾದಿಯು [ವಿರೋಧಿಯು] ಸಂಗಡ ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ ಸಮಾಧಾನ ಮಾಡಿಕೋ" ಎಂಬ ನಮ್ಮ ಕರ್ತನ ನುಡಿಯು ಸೌಲನಂಥ ಸಂಗತಿಯಲ್ಲಿ, ದೇವರು ಅವನಿಗೆ ವಿರೋಧಿಯಾಗಿದ್ದ ಸನ್ನಿವೇಶದಲ್ಲಿ, ಖಂಡಿತವಾಗಿಯೂ ಅನ್ವಯವಾಗುತ್ತದೆ. ಅತನಿಗಿದ್ದ ಸೂಕ್ತವಾದ ಮಾರ್ಗವೆಂದರೆ–ತಾನು ದೇವರ ಕರುಣೆಗೆ ತನ್ನನ್ನು ಸಂಪೂರ್ಣವಾಗಿ ಎಸೆದುಕೊಂಡವನಾಗಿ ಆತನು ಎಲ್ಲಾ ಸಂಗತಿಗಳನ್ನು ತನಗೆ ಒಳಿತಾಗುವಂತೆ ಮಾರ್ಪಡಿಸಲು ಸಮರ್ಥನೆಂಬ ಭರವಸೆಯಿಂದಿರಬೇಕಿದ್ದುದೇ. ಇದು ನಮ್ಮ ವಿಧಾನವಾಗಿರಬೇಕು. ಕೇವಲ ದೇವರ ಚಿತ್ತಕ್ಕೆ ನಂಬಿಗಸ್ತರಾಗಿರುವದೇ ನಮಗೆ ಸುರಕ್ಷಿತವೂ ಆನಂದಕರವೂ ಆದ ಮಾರ್ಗವಾಗಿರುವದು.

ಸೌಲ ಯೋನಾತಾನರು ವಧಿಸಲ್ಪಟ್ಟದ್ದು

ಮರುದಿನ ಯುದ್ಧವು ಉಲ್ಬಣವಾಗಿತ್ತು, ಅಲ್ಲದೆ ಇಸ್ರಾಯೇಲ್ಯರ ಸೈನ್ಯವು ಕಳಪೆಯಾಗಿತ್ತು, ಅಲ್ಲದೆ ಸೌಲನು ಹಾಗು ಅವನ ಮಕ್ಕಳು ಜೊತೆಗೆ ಆತನ ಯೋಧರಲ್ಲಿ ಅನೇಕರು ಸಂಹೃತರಾಗಿದ್ದರು. ನಮ್ಮ ಪಾಠವು ಸೌಲನ ಆತ್ಮಹತ್ಯೆಯ ಬಗ್ಗೆ ತಿಳಿಸುತ್ತದೆ. ಆತನು ಜೀವಂತವಾಗಿ ತನ್ನ ವೈರಿಗಳ ಹಿಡಿತಕ್ಕೆ ಬರುವದಕ್ಕಿಂತಲೂ ತನ್ನ ಸ್ವಂತ ಕೈಗಳಿಂದಲೇ ಸಾಯಲು ಇಷ್ಟಪಟ್ಟಿದ್ದನು. ಬಡ ಮನುಷ್ಯನು! ಕವಿಯು ಆತನ ಕಡೆಯ ಗಳಿಗೆಯ ವ್ಯಥೆಯ ಬಗ್ಗೆ ವರ್ಣಿಸುವವನಾಗಿ ಹೀಗೆ ಹೇಳಿರುವನು:



ಅರಸನಾದ ಸೌಲನು ತನ್ನ ಸ್ವಂತ ಕತ್ತಿಯ ಮೇಲೆ ಬಿದ್ದಿರುವದು
– ವಿಲಿಯಂ ಐಸಾಕ್ ಇವರ ಚಿತ್ರ ರಚನೆ

"ಅಲ್ಲದೆ ನಿನ್ನ ಪಕ್ಕದಲ್ಲಿದ್ದ
ಬಾಗುಕತ್ತಿಯು
ನಡೆಸಿತ್ತು ನಿನ್ನ ಹಸ್ತವ; ನಿನ್ನ ಹೃದಯದೆಡೆಗೆ
ಕಿರೀಟವಿಲ್ಲದೆ ಕುದುರೆಯಿಲ್ಲದೆ ಶಿರಸ್ಸಿಲ್ಲದೆ
ಬಿದ್ದಿದ್ದನು
ಮಗನು ಮತ್ತು ಸ್ವಾಮಿಯು, ಸೌಲನ ಮನೆತನ!"

ಪಾಠದ ಮುಕ್ತಾಯದ ವಚನಗಳು ನಮಗೆ ಹೇಳುವದೇನಂದರೆ ಆ ಫಿಲಿಷ್ಟಿಯರು ಸೌಲನ ಆಯುಧಗಳನ್ನು ಸ್ವಲ್ಪಸ್ವಲ್ಪವಾಗಿ ಹಲವಾರು ಪಟ್ಟಣಗಳಿಗೆ ವಿಜಯದ ವಿವರಣೆಯೊಂದಿಗೆ ಕಳುಹಿಸಿ ಅವರು ಆತನ ಮೃತದೇಹವನ್ನು ಬೇತ್–ಷಹಾನ್ ಪಟ್ಟಣದ ಗೋಡಗೆ ಬಿಗಿದು ಕಟ್ಟಿದ್ದರೆಂಬದು. ಸೌಲನ ಆಳ್ವಿಕೆಯ ಬಹು ಆರಂಭದಲ್ಲಿ ನಾಲ್ವತ್ತು ವರುಷಗಳ ಹಿಂದೆ ಅಮ್ಮೋನಿಯರು ಯಾಬೇಷ್ ಪಟ್ಟಣಕ್ಕೆ ಆಕ್ರಮಣಮಾಡಿ ಅದನ್ನು ವಶಪಡಿಸಿಕೊಂಡು ಶರಣಾಗತಿಯನ್ನು ಯಾಬೇಷಿನ ಪ್ರತಿಯೊಬ್ಬ ನಿವಾಸಿಗಳ ಬಲಗಣ್ಣನ್ನು ನಾಶಗೊಳಿಸುವ ಷರತ್ತಿಗಿಂತಲೂ ಹೆಚ್ಚಿನಲ್ಲದಕ್ಕೆ ಬೇಡಿಕೆಯಿಟ್ಟಿದ್ದರೆಂಬುದನ್ನು ನೆನಸಿಕೊಳ್ಳಲಾಗುವದು. ಆಗ ಅರಸನಾದ ಸೌಲನು ಪ್ರಾಮಾಣಿಕನಾಗಿ ಅವರ ಬಿಡುಗಡೆಮಾಡಲು ತೆರೆಳಿ ಅವರನ್ನು

ಕಾಪಾಡಿದ್ದನು. ನಾಲ್ವತ್ತು ವರುಷಗಳ ನಂತರ ತಮ್ಮ ಪರವಾಗಿ ಸೌಲನು ಶಕ್ತಿವಿನಿಯೋಗಿಸಿದ್ದನ್ನು ಅವರು ಮರೆಯದಿದ್ದಂಥದ್ದನ್ನು ಇಲ್ಲಿ ನೆನಸಿಕೊಳ್ಳಲು ಯೋಗ್ಯ. ಹೀಗಾಗಿ ಅವರು ಸೌಲನ ಹಾಗು ಆತನ ಮಕ್ಕಳ ದೇಹಗಳನ್ನು ಕೊಳೆತುನಾರುವ ಹಾಗು ರಣಹದ್ದುಗಳಿಂದ ತಿಂದುಹಾಕಲ್ಪಡುವ ಸಲುವಾಗಿ ಅವುಗಳನ್ನು ಅವಮಾನಕರವಾಗಿ ಪಟ್ಟಣದ ಹೊರಗಿನ ಗೋಡೆಗೆ ಕಟ್ಟಿಹಾಕಿರು –ವದರ ಬಗ್ಗೆ ಕೇಳಿದವರಾಗಿ ಅಷ್ಟೊಂದು ದೂರಕ್ಕೆ ಹೋಗಿ ಆ ದೇಹಗಳನ್ನು ಕೆಳಗೆ ಇಳಿಸಿ ಇಂಥಾ ಇನ್ನೂ ಹೆಚ್ಚಿನ ಅವಮಾನಗೊಳಿಸಲು ಸಾಧ್ಯವಾಗದಂತೆ ಅವುಗಳನ್ನು ಸುಟ್ಟುಹಾಕಿ, ಕರಕಲಾಗಿ ಉಳಿದುದ್ದನ್ನು ಎಚ್ಚರಿಕೆಯಿಂದ ಹೂಣಿಟ್ಟಿದ್ದರು. ಹೀಗೆ ಅವರು ಅರಸನು ತೋರಿಸಿದ್ದ ಕರುಣೆಗೆ ತಮ್ಮ ಮನ್ನಣೆಯನ್ನು ಸಾಕ್ಷೀಕರಿಸಿದ್ದರು. ಅನುಕಂಪದ ಮಾತುಗಳು ಅನುಕಂಪದ ಕೃತ್ಯಗಳು ಎಂದೂ ನಶಿಸಿಹೋಗಲು ಸಾಧ್ಯವಿಲ್ಲ. ಅಲ್ಲದೆ ಯಾವುದೇ ಒಂದು ವಿಶೇಷ ರೀತಿಯ ದೇವಜನರಲ್ಲದವರ ಮೇಲೆಯೂ ಸಹ ಅವು ಎಂಥಾ ಒಂದು ಶಕ್ತಿಯನ್ನು ಪ್ರಯೋಗಿಸಬಹುದೆಂಬುದಕ್ಕೆ ನಮಗೆ ಅನೇಕ ವೇಳೆ ಆಶ್ಚರ್ಯವಾಗುವದು. ಇಂಥಾ ಒಂದು ಶ್ಲಾಘನೆಯು, ಅನುಕಂಪದ, ಮನೋಭಾವಗಳ ಸಾಕ್ಷ್ಯಾಧಾರಗಳು ಮನುಕುಲವು ಶೋಚನೀಯವಾಗಿ ಬಿದ್ದುಹೋಗಿ ಆ ಮೂಲಕ ಘಾಸಿಗೊಂಡಿದ್ದಾಗ್ಯೂ ಶಾರೀರಿಕವಾಗಿ ದೇವರ ಮೂಲ ಸಾರೂಪ್ಯದ ಅಂಶಗಳು ಪ್ರಾಕೃತ ಮನುಷ್ಯರ ನಡೆನುಡಿಗಳಲ್ಲಿ ಈಗಲೂ ಗುರುತಿಸಲು ಸಾಧ್ಯವೆಂಬದುದಕ್ಕೆ ಪ್ರಮಾಣ–ಗಳಾಗಿರುವದು. ಇವುಗಳಿಲ್ಲದೆ ಕಾರ್ಯವೆಸಗುವಂತಾಗಲು ಯಾವುದೂ ಇರುವದಿಲ್ಲವೆಂದು ಹೇಳಬಹುದು. ಹೊಸ ವ್ಯವಸ್ಥೆಯು ಉದಯವಾದಾಗ ಮತ್ತು ಸೈತಾನನನ್ನು ಮತ್ತು ಆತನ ದುಷ್ಟಪ್ರಭಾವನನ್ನು ಬಂಧಿಸಿರುವ ದೆಸೆಯಿಂದ ತಪ್ಪಾದವುಗಳಿಗಿಂತಲೂ ಸರಿಯಾದವುಗಳನ್ನು ಮಾಡಲು ಹೆಚ್ಚು ಸುಲಭವಾಗುವವು, ಆನಂತರದಲ್ಲಿ ಅನೇಕರು ನೀತಿಗೆ ತಮ್ಮನ್ನು ಸರಿಹೊಂದಿಸಿಕೊಂಡು ಕಡೆಯಲ್ಲಿ ನೀತಿಯನ್ನು ಪ್ರೀತಿಸಿ ಅನೀತಿಯನ್ನು ದ್ವೇಷಿಸುವರೆಂಬುದನ್ನು ನಾವು ಕಲ್ಪಿಸಿಕೊಳ್ಳಲು ನಮಗೆ ಎಷ್ಟೋ ಆನಂದವಾಗಬಹುದು.

"ನಿನ್ನ ದೇವರ ಬರುವಿಕೆಗೆ ನಿನ್ನನ್ನು ಸಿದ್ಧಮಾಡಿಕೋ." ಎಂಬ ಸುವರ್ಣಮಯ ಪಠ್ಯಭಾಗವು ಪ್ರತಿಯೊಬ್ಬನಿಗೂ ಪ್ರತಿಯೊಂದು ಸಮಯದಲ್ಲಿಯೂ ಸೂಕ್ತವಾದುದು. ಆದರೆ ದೇವರನ್ನು ಸಂಧಿಸಲು ಹಾಗು ಆತನ ಗುಣಸ್ವಭಾವ ಸಂಬಂಧವಾದ ಆತನ ತೀರ್ಮಾನಗಳನ್ನು ಕೇಳಲು ಸಿದ್ಧಮಾಡಿಕೊಳ್ಳಲಿರುವ ಸರಿಯಾದ ಮಾರ್ಗವು ಸಾಮಾನ್ಯವಾಗಿ ಭಾವಿಸಿಕೊಂಡಿರುವಂತೆ ಅದು ರೋಗ ಅಥವಾ ಮರಣ ಇಲ್ಲವೇ ವಿಪತ್ತುಗಳು ಬಂದಿರುವಂತೆ ನಮಗೆ ಅನ್ನಿಸುವಾಗ ಶ್ರದ್ಧಾಭಕ್ತಿಯನ್ನು ಹೊಂದಲು ಆರಂಭಿಸುವಂಥದ್ದಲ್ಲ. ನಾವು ಕ್ರಿಸ್ತನನ್ನು ನಂಬುವವರಾಗಿ ಪಾಪದಿಂದ ತಿರುಗಿಕೊಂಡು ಕ್ಷಮೆಯನ್ನು ಯಾಚಿಸುವವರಾಗಿ ದೇವರ ಅನುಗ್ರಹಕ್ಕೆ ಹೀಗೆ ಅರ್ಹರಾದ ಕ್ಷಣದಿಂದ ನಾವು ನಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಸಮರ್ಪಿಸಿಕೊಳ್ಳಲು ಆಗ್ರಹಿಸಲಾಗಿದ್ದು ಈ ರೀತಿಯಾಗಿ ಮಾಡುವದರಿಂದ ನಾವು ದೇವರ ಆತ್ಮನ ಅನ್ಯೋನ್ಯತೆಗೆ ಸ್ವೀಕರಿಸಲ್ಪಡುವೆವು. ಇದಾದ ನಂತರ ಕ್ರಿಸ್ತೀಯ ಅನುಭವಶಾಲೆಯ ಪ್ರವೇಶಮಾರ್ಗದಲ್ಲಿ ಸೇರಿರುವದನ್ನು ಸಾಬೀತು ಪಡಿಸಿಕೊಂಡು ಅಲ್ಲಿ ವಿಮೋಚಕನೊಡನೆ ಅನ್ಯೋನ್ಯರಾಗಿ ಆತನ ಮಹಿಮಾ ರಾಜ್ಯದಲ್ಲಿ ಅವರು ದೇವರ ಮಕ್ಕಳಾಗಿ ಆ ಮಹಿಮಾ ಕಾರ್ಯಕ್ಕೆ ಸಿದ್ಧರಾಗುವದನ್ನು ಕಲಿತುಕೊಳ್ಳುವರು. ಅವರು ಕೃಪೆಯಲ್ಲಿಯೂ ಪರಿಜ್ಞಾನದಲ್ಲಿಯೂ ಅಭಿವೃದ್ಧಿಯಾದಂತೆ ದೇವಾನುಗ್ರಹ ವನ್ನು ಅರಿತುಕೊಳ್ಳುವದರಲ್ಲಿಯೂ ಬೆಳೆಯುತ್ತಾ ಬರುವರು. [ಈ ವಿಚಾರವಾಗಿ] ಕವಿಯು ಹೀಗೆ ಹೇಳಿರುವನು:

"ಓಹ್, ನಿನ್ನ ಸೇವಕನ ಕಣ್ಣಿಗೆ ನೀನು ಮರೆಯಾಗದಂತೆ
ಯಾವ ಭೂಮೋಡಗಳು ಏಳದಿರಲಿ."

ಇಂಥಾ ಹೃದಯದ ಮನೋಭಾವವನ್ನು ಹೊಂದಿರು–ವವರು ಯಾವುದೇ ಸಮಯದಲ್ಲಿ ದೇವರನ್ನು ಸಂಧಿಸಲು ಸಿದ್ಧರಿರುವರು. ನಿಜವಾಗಿಯೂ ದೇವರೊಂದಿಗೆ ಅವರ ಸಂಧಿಸುವಿಕೆಯು ಈಗಾಗಲೇ ಆರಂಭವಾಗಿದ್ದು ಯಾವುದೇ ಸಂಗತಿಯು ಯಾವುದೇ ಮಟ್ಟದಲ್ಲಿ ಇದು ಸಂತೋಷಕರವಾಗಿ ಮುಂದುವರಿಯಲು ಅಡ್ಡಿಮಾಡಿದಲ್ಲಿ ಅದು ನಿಜವಾಗಿಯೂ ವಿನಾಶಕರವಾಗುವದು.

*****

ಆರ್ಮೆಗಿದ್ದೋನ್ ಯುದ್ಧ

ಗ್ರಂಥ 4, ಪುಟ 1 (ಆರಿಸಲ್ಪಟ್ಟದ್ದು)

ಆರ್ಮೆಗಿದ್ದೋನ್ ಎಂಬ ಇಬ್ರೀಯ ಭಾಷೆಯ ಶಬ್ಧವು ಮೆಗಿದ್ದೋ ಬೆಟ್ಟ ಅಥವಾ ವಿನಾಶಕರ ಪರ್ವತ ಎಂಬುದನ್ನು ಸೂಚಿಸುವದು. ಮೆಗಿದ್ದೋ ಎಂಬದು ಎಸ್ರದ್ರೋನ್ ಬಯಲಿನ ಒಂದು ಬಹು ಗುರುತರವಾದ ಸ್ಥಾನವನ್ನು ಆವರಿಸಿಕೊಂಡಿದ್ದು ಮಲೆನಾಡಿಗೆ ಇದು ಒಂದು ಬಹು ಮುಖ್ಯವಾದ ಕಣಿವೆ ಮಾರ್ಗದ ನಿಯಂತ್ರಣವನ್ನು ಪಡೆದಿರುವದು. ಈ ಪ್ರದೇಶವು ಪಾಲೆಸ್ತಿನಾ ದೇಶದ ಒಂದು ದೊಡ್ಡ ರಣರಂಗವಾಗಿದ್ದು, ಇದರಲ್ಲಿಯೇ ಹಳೆ ಒಡಂಬಡಿಕೆಯ ಚರಿತ್ರೆಯ ಪ್ರಸಿದ್ಧವಾದ ಅನೇಕ ಯುದ್ಧಗಳು ನಡೆದಿದ್ದವು. ಇಲ್ಲಿ ಗಿದ್ಯೋನನು ಹಾಗು ಆತನ ಸಣ್ಣ ಪಡೆಯು ಮಿದ್ಯಾನರನ್ನು ಜಾಗೃತರನ್ನಾಗಿಸಿ ಅವರನ್ನು ಮುಜುಗುರಪಡಿಸಿದ್ದರು. ಅವರು ತಮ್ಮ ಪಲಾಯನದಲ್ಲಿ ಒಬ್ಬರ–ನ್ನೊಬ್ಬರು ನಾಶಪಡಿಸಿಕೊಂಡಿದ್ದರು. (ನ್ಯಾಯಸ್ಥಾಪಕರು 7:19–23) ಅಲ್ಲಿಯೇ ಅರಸನಾದ ಸೌಲನು ಫಿಲಿಷ್ಟಿಯರಿಂದ ಪರಾಭವ ಗೊಂಡಿದ್ದನು. (1 ಸಮು. 31:1–6). ಅಲ್ಲಿಯೇ ಅರಸನಾದ ಯೋಷೀಯನು ಇಸ್ರಾಯೇಲ್ಯರ ಚರಿತ್ರೆಯ ಒಂದು ಅತಿ ವಿನಾಶಕರವಾದ ಹೋರಾಟದಲ್ಲಿ ಫರೋಹನ ನೇಕೋವಿನಿಂದ ಸಂಹೃತನಾಗಿದ್ದನು. (2 ಪೂ.ವೃ. 35:22–25) ಅಲ್ಲಿಯೇ ಸಹ ಇಜ್ರೇಲ್ ಎಂಬ ಪಟ್ಟಣದಲ್ಲಿ ಅರಸನಾದ ಆಹಾಬನು ಮತ್ತು ಅವನ ಹೆಂಡತಿ ಇಸಬೇಲಳು ಜೀವಿಸಿದ್ದು, ಅಲ್ಲಿಯೇ ಇಸಬೇಲಳು ನಂತರದಲ್ಲಿ ಭೀಕರವಾದ ಮರಣವನ್ನು ಅನುಭವಿಸಿದ್ದಳು. – 2 ಅರಸುಗಳು 9:30–37

ಈ ಯುದ್ಧಗಳು ಒಂದು ಅರ್ಥದಲ್ಲಿ ಛಾಯಾರೂಪವಾಗಿದ್ದವು. ಮಿದ್ಯಾನರ ಪರಾಭವವು ಇಸ್ರಾಯೇಲ್ಯರನ್ನು ಮಿದ್ಯಾನರ ದಾಸತ್ವದಿಂದ ಬಿಡುಗಡೆಮಾಡಿತ್ತು. ಹೀಗೆ ಗಿದ್ಯೋನನು ಹಾಗು ಅವನ ಪಡೆಯು ನಮ್ಮ ಕರ್ತನು ಹಾಗು ಸಭೆಗೆ ಛಾಯಾರೂಪವಾಗಿದ್ದು ಅವರು ಮಾನವಕುಲವನ್ನು ಅವರ ಪಾಪಮರಣದ ದಾಸತ್ವದಿಂದ ಬಿಡುಗಡೆಮಾಡಲಿರುವರು. ಅರಸನಾದ ಸೌಲನ ಮರಣವು ಹಾಗು ಅತನ ರಾಜ್ಯವನ್ನು ಫಿಲಿಷ್ಟಿಯರು ಕಿತ್ತೊಗೆದುದು ದಾವೀದನ ರಾಜ್ಯಭಾರಕ್ಕೆ ಮಾರ್ಗವನ್ನು ತೆರೆದಿದ್ದು, ದಾವೀದನು ಮೆಸ್ಸೀಯನಿಗೆ ಛಾಯೆಯಾಗಿದ್ದನು. ಅರಸಾದ ಆಹಾಬನು "ಘಟಸರ್ಪ" ಎಂದು ಪ್ರಕಟನಾ ಗ್ರಂಥದಲ್ಲಿ ಸಾಂಕೇತಿಕವಾಗಿ ಕರೆಯಲ್ಪಡುವ ಪ್ರಜಾಡಳಿತ ಸರ್ಕಾರಕ್ಕೆ ಛಾಯೆಯಾಗಿರುವನು. ರಾಣಿಯಾದ ಇಸಬೇಲಳು ಸಾಂಕೇತಿಕವಾಗಿ ಬಾಬೇಲ್ ಎಂಬ ಆ ಮಹಾ ಜಾರಸ್ತ್ರೀಗೆ ಮುನ್ಸೂಚನೆಯಾಗಿದ್ದು, ಹೀಗಾಗಿ ಅವಳು ಈ ಹೆಸರಿನಿಂದ ಪ್ರಸ್ತಾಪಿಸಲ್ಪಟ್ಟಿರುವಳು. "ಯೆಜೆಬೇಲೆಂಬ ಆ ಹೆಂಗಸು ತನ್ನನ್ನು ಪ್ರವಾದಿನಿಯೆಂದು ಹೇಳಿಕೊಂಡು ಜಾರತ್ವಮಾಡಬಹುದೆಂದೂ ವಿಗ್ರಹಗಳಿಗೆ ನೈವೇದ್ಯಮಾಡಿದ ಪದಾರ್ಥಗಳನ್ನು ತಿನ್ನಬಹುದೆಂದು ನನ್ನ ದಾಸರಿಗೆ ಬೋಧಿಸುತ್ತಾ ಅವರಿಗೆ ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೆ ಬಿಟ್ಟಿರುವದೇ." ಪ್ರಕಟನೆ 2:20

ಶಾಸ್ತ್ರವಚನದಲ್ಲಿ ದೇವರು ಆರ್ಮೆಗಿದ್ದೋನ್ ಎಂಬ ಈ ಪ್ರಸಿದ್ಧ ರಣರಂಗದ ಹೆಸರನ್ನು ಸತ್ಯ ಮತ್ತು ಸುಳ್ಳಿನ, ಸರಿ ಮತ್ತು ತಪ್ಪಿನ, ದೇವರು ಮತ್ತು ಮೆಮೋನನ, ನಡುವಿನ ಮಹಾ ಹೋರಾಟಕ್ಕೆ ಸೂಕ್ತವಾಗಿ ಜೊತೆಗೂಡಿಸಿರುವದನ್ನು ಕಂಡುಬಂದಿರುವದು ಸ್ಪಷ್ಟ. ಈ ಮೂಲಕವಾಗಿ ಸುವಾರ್ತಾಯುಗವು ಮುಕ್ತಾಯಗೊಂಡು ಸಾವಿರ ವರುಷದ ಆಳ್ವಿಕೆಯ ಕಾಲವು ಪ್ರವೇಶವಾಗುವದು. ಆತನು ಉದ್ದೇಶಪೂರ್ವಕವಾಗಿಯೇ ಅತ್ಯುನ್ನತವಾದ ಸಾಂಕೇತಿಕ ಭಾಷೆಯನ್ನು ಸತ್ಯವೇದದ ಕಡೆಯ ಪುಸ್ತಕದಲ್ಲಿ ಬಳಸಿದ್ದು, ಇದು ಕೆಲವು ಮುಖ್ಯವಾದ ಸತ್ಯಾರ್ಥಗಳನ್ನು ಅವುಗಳು ಪ್ರಕಟವಾಗಲು ನಿಗಧಿತವಾದ ಸಮಯದವರೆಗೂ ಮುಚ್ಚಿಡುವ ದೃಷ್ಟಿಯಿಂದ ಹೀಗೆ ಮಾಡಲಾಗಿರುವಂಥದ್ದು ಸ್ಪಷ್ಟವಾಗಿರುವದು. ಆದರೆ ಆ ನಿಗದಿತ ಕಾಲದಲ್ಲಿಯೂ "ದುಷ್ಟರು ದುಷ್ಟರಾಗಿಯೇ ನಡೆಯುವರು, ಅವರಲ್ಲಿ ಯಾರಿಗೂ ವಿವೇಕವಿರದು; ಜ್ಞಾನಿಗಳಿಗೆ ವಿವೇಕವಿರುವದು." (ದಾನಿಯೇಲ 12:10.) ಯಾರ ಹೃದಯವು ದೇವರೊಡನೆ ಹೊಂದಾಣಿಕೆಯಾಗಿರುವದಿಲ್ಲವೋ ಅವರು ತಿಳಿದುಕೊಳ್ಳಲಾರರು; ಆದರೆ ಆತನ ಜನರಲ್ಲಿನ ಜ್ಞಾನಿಗಳು ತಿಳಿದುಕೊಳ್ಳುವರು. ಇವರು ಒಡೆಯನ ಸಾಮ್ಯದ ಬುದ್ಧಿವಂತೆಯರಾದ ಕನ್ಯೆಯರ ವರ್ಗದವರಾಗಿರುವರು. ಮತ್ತಾಯ 25:1–13.

*****

ಆಪತ್ತಿನಲ್ಲಾಗುವ ಮಿತ್ರನೇ ನಿಜವಾದ ಮಿತ್ರನು

ರೀಪ್ರಿಂಟ್ಸ್ ಪುಟ 4224 (ಅರಿಸಲಾದುದು)

ಯೋನಾತಾನನು ಮತ್ತು ಆತನ ಪ್ರೀತಿಯ ಬಗ್ಗೆ ದಾವೀದನ ಅಭಿಪ್ರಾಯದ ಒಂದು ತುಣುಕನ್ನು "ಬಿಲ್ಲೆಂಬ ಒಂದು ಶೋಕಗೀತದಲ್ಲಿ" ನೀಡಲಾಗಿರುವದು. ಅದು ತನ್ನ ಸ್ನೇಹಿತನಾದ ಯೋನಾತಾನನ ಮರಣವಾದಾಗ ದಾವೀದನು ಮನಕರಗುವಂತೆ ರೋಧಿಸುವಾಗ ಹೇಳಲಾಗಿರುವದು. ಆತನು ಉದ್ಗಾರವಾಗಿ ಹೀಗೆ ಹೇಳಿರುವನು, "ಯೋನಾತಾನನೇ, ನನ್ನ ಸಹೋದರನೇ, ನಿನಗೋಸ್ಕರ ನನ್ನಲ್ಲಿ ಬಹು ಸಂಕಟವಾಗಿದೆ; ನೀನು ನನಗೆ ಬಹು ಮನೋಹರನಾಗಿದ್ದೀ. ನನ್ನ ಮೇಲಿದ್ದ ನಿನ್ನ ಪ್ರೀತಿಯು ಆಶ್ಚರ್ಯಕರವಾದದ್ದೇ ಸರಿ; ಅದು ಸತಿಪ್ರೇಮಕ್ಕಿಂತ ಶ್ರೇಷ್ಠವಾದದ್ದು." (2 ಸಮುವೇಲ 1:26) ಆದರೆ ಪ್ರಿಯ ಮಿತ್ರರೇ ನಾವು ಇದಕ್ಕಿಂತಲೂ ಹೆಚ್ಚು ಅದ್ಭುತವಾದ ಪ್ರೀತಿಯ ಬಗ್ಗೆ ತಿಳಿದಿದ್ದು, ಅದನ್ನು ಕೆಲವು ಸಾರಿ ಹೀಗೆ ಹಾಡುತ್ತೇವೆ:

"ಯೇಸುವಿನ ಪ್ರೀತಿಯು, ಎಲ್ಲವೂ ದೈವಿಕವಾಗಿದ್ದು,
ತುಂಬುವದು ಹಂಬಲಿಸುವ ನನ್ನ ಹೃದಯವ."

ಪ್ರೀತಿಯು ಪ್ರೀತಿಯನ್ನು ಹುಟ್ಟಿಸುತ್ತದೆ; ಮತ್ತು ಶಾಸ್ತ್ರವಚನವು ನಮಗೆ ಹೇಳುವದು ನಾವು ದೇವರನ್ನು ಮೊದಲು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಮೊದಲು ಪ್ರೀತಿಸಿ ನಮ್ಮ ಪರವಾಗಿ [ಪಾಪ ನಿವಾರಣಾರ್ಥವಾಗಿ] ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಆತನ ಪ್ರೀತಿಯು [ಪ್ರೀತಿಯ ನಿಜ ಗುಣವು] ತೋರಿಬರುತ್ತದೆ. ಹೀಗೆ ಯೇಸುವಿನ ಪ್ರೀತಿಯು ನಮ್ಮನ್ನು ಆಕರ್ಷಿಸಿದ್ದು ಇದಕ್ಕೆ ಪ್ರತಿಯಾಗಿ ನಮ್ಮ ಪ್ರೀತಿಯು [ಯೇಸುವಿನ ಕಡೆಗೆ] ಸೆಳೆಯಲ್ಪಟ್ಟಿರುವದು. ಮತ್ತು ಕ್ರಮೇಣ ನಾವು ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಪ್ರೀತಿ ಹಾಗು ಕ್ರಿಸ್ತನ ಪ್ರೀತಿಯ ಆಳ ಎತ್ತರ ಉದ್ದ ಅಗಲಗಳು ಮನವರಿಕೆ ಮಾಡಿಕೊಂಡಂತೆಲ್ಲಾ ಅವರ ಕಡೆಗೆ ನಮ್ಮ ಪ್ರೀತಿಯು ಅಧಿಕಗೊಂಡು ಸಮೃದ್ಧವಾಗುತ್ತದೆ. ಅಲ್ಲದೆ ಇದು ಹೆಚ್ಚುತ್ತಾ ಬಂದಂತೆಲ್ಲಾ ನಾವು ದೇವರಂತಾಗಿ ಇದಕ್ಕೆ ಸರಿಹೊಂದುವ ಪ್ರೀತಿಯು ನಮ್ಮಿಂದ ಹೊರಟು ನಮ್ಮನ್ನು ಪ್ರೀತಿಸದ ಇತರರನ್ನು ಸಹ ಪ್ರೀತಿಸುವಂತೆ ಮಾಡುವದು; ಹಾಗು ಅವರ ಮೇಲಿನ ನಮ್ಮ ಪ್ರೀತಿಯು ಪ್ರತಿಯಾಗಿ ಕೆಲವರಲ್ಲಿರುವ ಪ್ರೀತಿಯನ್ನು ಉತ್ತೇಜಿಸುವದು. ಹಾಗು ಲೌಕೀಕಭಾವಕ್ಕೆ, ಲೋಕದ ಮೇಲಿನ ಪ್ರೀತಿಗೆ, ಲೋಕದಲ್ಲಿನ ಸ್ವಾರ್ಥಭಾವಕ್ಕೆ ವಿರುದ್ಧವಾಗಿರುವ ಇದರ ತತ್ವವನ್ನು ಹೆಚ್ಚು ಮನವರಿಕೆಮಾಡಿಕೊಳ್ಳುವಂತೆ ಅವರನ್ನು ನಡೆಸುವದು. ಹೀಗಿರಲು ನಾವು ದೇವರಿಗೆ ಸರಿಹೊಂದುವ ಈ ಗುಣವನ್ನು ಬೆಳೆಸಿಕೊಳ್ಳಲು ಪರಿಶ್ರಮಿಸೋಣ. ಶಾಸ್ತ್ರವಚನಗಳು ಪ್ರಕಟಮಾಡುವಂತೆ ಪ್ರೀತಿಯು ಲೋಕದಲ್ಲಿ ಪ್ರಾಮುಖ್ಯವಾದ ವಿಷಯವೆಂಬುದನ್ನು ಗಮನಿಸುವದು ಮಾತ್ರವಲ್ಲದೆ ಇದೇ ದೈವೀಕ ಗುಣಲಕ್ಷಣದ ತಿರುಳಾಗಿದ್ದು, ಲೋಕದಲ್ಲಿ ಪ್ರೀತಿಯೆಂಬ ಈ ಒಂದು ಶಬ್ಧವೇ ಧರ್ಮಶಾಸ್ತ್ರದ ತಿರುಳಾಗಿದ್ದು ಅದನ್ನು

ನೆರವೇರಿಸುವಂಥದ್ದಾಗಿರುವದು. ಹೀಗಿರಲು ಈ ಗುಣವನ್ನು ಅಭ್ಯಾಸಿಸುವದರ ಮೂಲಕವಾಗಿಯೇ ನಾವು ಆಹ್ವಾನಿಸಲ್ಪಟ್ಟಂಥ ಮಹಿಮಾ ಸ್ಥಿತಿಗೆ ತಲುಪಲು ಸಾಧ್ಯವಾಗಿಸಲು ಇದು ನಮ್ಮನ್ನು ಸಿದ್ಧಪಡಿಸುವದೆಂಬುದನ್ನು ನಾವು ನೆನಪಿನಲ್ಲಿಡೋಣ, ಈ ಸ್ಥಾನವನ್ನು ಪಡಕೊಳ್ಳ ಸಲುವಾಗಿಯೇ ನಾವು ಕರ್ತನ ಕೃಪೆಯಿಂದ ಕರೆಯಲ್ಪಟ್ಟು ಆಯಲ್ಪಡುವದನ್ನು ದೃಢಪಡಿಸಿ–ಕೊಳ್ಳುತ್ತಿರುವದು.

ಬಿಲ್ಲೆಂಬ ಶೋಕಗೀತ

ಇಸ್ರಾಯೇಲ್ಯರೇ, ನಿಮ್ಮ ವೈಭವವು ನಿಮ್ಮ ಗುಡ್ಡಗಳಲ್ಲಿ
ಮಣ್ಣುಪಾಲಾಗಿ ಹೋಯಿತು.
ಅಯ್ಯೋ, ಪರಾಕ್ರಮಶಾಲಿಗಳೇ, ಹೇಗೆ ಹತರಾದಿರಿ!
ಈ ಸಂಗತಿಯನ್ನು ಗತ್ ಊರಿನಲ್ಲಿ ತಿಳಿಸಬೇಡಿರಿ;
ಅಷ್ಕೆಲೋನಿನ ಬೀದಿಗಳಲ್ಲಿ ಸಾರಬೇಡಿರಿ.
ಫಿಲಿಷ್ಟಿಯರ ಹೆಂಗಸರು ಸಂತೋಷಿಸಾರು;
ಸುನ್ನತಿಯಿಲ್ಲದವರ ಸ್ತ್ರೀಯರು ಉಲ್ಲಾಸಿಸಾರು.
ಗಿಲ್ಬೋವ ಗುಡ್ಡಗಳೇ, ನಿಮ್ಮ ಮೇಲೆ ಮಂಜೂ ಮಳೆಯೂ
ನೈವೇದ್ಯಕ್ಕಾಗಿ ಫಲಿಸುವ ಹೊಲಗಳೂ ಇಲ್ಲದೆ ಹೋಗಲಿ;
ಅಲ್ಲಿ ಪರಾಕ್ರಮಶಾಲಿಗಳ ಗುರಾಣಿಗಳು ಬಿದ್ದಿರುತ್ತವೆ.
ಸೌಲನ ಗುರಾಣಿಯೂ ಅಭಿಷಕ್ತನಲ್ಲದವನ
ಗುರಾಣಿಯಂತೆ ಬಿದ್ದಿದೆ.
ಯೋನಾತಾನನ ಬಿಲ್ಲು ಹತರಾದವರ ರಕ್ತವನ್ನು ಹೀರದೆಯೂ
ಪರಾಕ್ರಮಶಾಲಿಗಳ ಕೊಬ್ಬನ್ನು ಭುಜಿಸದೆಯೂ ಬರುತ್ತಿರಲಿಲ್ಲ.
ಸೌಲನ ಕತ್ತಿಯು ವ್ಯರ್ಥವಾಗಿ ಹಿಂದಿರುಗುತ್ತಿರಲಿಲ್ಲ.
ಸೌಲಯೋನಾತಾನರು ಪ್ರಿಯರೂ ಮನೋಹರರೂ ಆಗಿದ್ದರು;
ಅವರು ಜೀವಿಸುವಾಗಲೂ ಸಾಯುವಾಗಲೂ ಅಗಲಿದವರಲ್ಲ.
ಅವರು ಹದ್ದುಗಳಿಗಿಂತಲೂ ವೇಗವುಳ್ಳವರು;
ಸಿಂಹಗಳಿಗಿಂತಲೂ ಬಲವುಳ್ಳವರು.
ಇಸ್ರಾಯೇಲ್ ಸ್ತ್ರೀಯರೇ, ಸೌಲನಿಗಾಗಿ ಗೋಳಾಡಿರಿ;
ನಿಮಗೆ ಉಲ್ಲಾಸಕರವಾದ ರಕ್ತಾಂಬರಗಳನ್ನು ಉಡಿಸಿ;
ಅವುಗಳ ಮೇಲೆ ಸುವರ್ಣಾಭರಣಗಳನ್ನು ತೊಡಿಸಿದವನು
ಆತನೇ ಅಲ್ಲವೋ?
ಅಯ್ಯೋ, ಪರಾಕ್ರಮಶಾಲಿಗಳೇ, ಯುದ್ಧದಲ್ಲಿ ಹೇಗೆ
ಮಡಿದು ಹೋದಿರಿ!
ಯೋನಾತಾನನು ನಿಮ್ಮ ಬೆಟ್ಟಗಳಲ್ಲಿ ಹತನಾಗಿ ಬಿದ್ದಿದ್ದಾನಲ್ಲಾ.
ಯೋನಾತಾನನೇ, ನನ್ನ ಸಹೋದರನೇ, ನಿನಗೋಸ್ಕರ
ನನ್ನಲ್ಲಿ ಬಹು ಸಂಕಟವುಂಟಾಗಿದೆ;
ನೀನು ನನಗೆ ಬಹು ಮನೋಹರನಾಗಿದ್ದೀ.
ನನ್ನ ಮೇಲಿನ ನಿನ್ನ ಪ್ರೀತಿಯು ಆಶ್ಚರ್ಯಕರವಾದದ್ದೇ ಸರಿ;
ಅದು ಸತೀಪ್ರೇಮಕ್ಕಿಂತ ಶ್ರೇಷ್ಠವಾದದ್ದು.
ಅಯ್ಯೋ, ಪರಾಕ್ರಮಶಾಲಿಗಳು ಹೇಗೆ ಹತರಾದರು!
ಯುದ್ಧಾಯುಧಗಳು ಹೇಗೆ ಹಾಳಾದವು!

– 2 ಸಮುವೇಲ 1:17–27

*****

ಯೆಹೂದದ ಅರಸನಾದ ದಾವೀದನು

ರೀಪ್ರಿಂಟ್ಸ್ ಪುಟ 1996

2 ಸಮುವೇಲ 2:1–11

"ಯೆಹೋವನು ರಾಜ್ಯಾಧಿಕಾರ ವಹಿಸಿದ್ದಾನೆ; ಭೂಲೋಕವು ಸಂತೋಷಿಸಲಿ;" – ಕೀರ್ತನೆ 97:1

ದಾವೀದನು ಉನ್ನತವಾದ ಹಾಗೂ ಬಹುಮುಖ ಪ್ರತಿಭೆಯ ಸಹಜ ಸಾಮರ್ಥ್ಯವುಳ್ಳ ಒಬ್ಬ ಮನುಷ್ಯನಾಗಿದ್ದು, ಇದು ಅವನನ್ನು ಅಪರೂಪದ ಗುಣಲಕ್ಷಣಗಳ ಸಂಯೋಜನೆಯ ಯಶಸ್ವೀ ರಾಜತಾಂತ್ರಿಕನು, ರಣಶೂರನು, ಸಂಗೀತಗಾರನು ಹಾಗು ಕವಿಯನ್ನಾಗಿ ಮಾಡಿತ್ತು. ಪ್ರಮುಖವಾಗಿ ಆತನ ಮನೋಪ್ರವೃತ್ತಿಯು ಘನತೆ ಔದಾರ್ಯ ದೀನತೆ ಕರುಣೆ ಉತ್ಸಾಹ ಮತ್ತು ಪರಾಕ್ರಮವುಳ್ಳದ್ದಾಗಿತ್ತು. ಆತನು ದೇವರಿಗೆ ಭಯಭಕ್ತಿಯುಳ್ಳವನಾಗಿದ್ದು ತನ್ನ ಯೌವನದಿಂದಲೂ ದೇವರ ವಾಗ್ದಾನ ಮತ್ತು ಅನುಗ್ರಹಗಳಲ್ಲಿ ಅಚಲವಾದ ವಿಶ್ವಾಸವಿದ್ದಂತೆ ತೋರುತ್ತದೆ. ಆದರೂ ದಾವೀದನು ಒಬ್ಬ ಮಾದರೀ ಭಕ್ತನಾಗಿರಲಿಲ್ಲ; ಅತನ ಗುಣನಡತೆಗಳಲ್ಲಿ ಕೆಲವು ಸಾಮರಸ್ಯವಿಲ್ಲದ ಅನುಚಿತ ಸ್ವಭಾವಗಳಿದ್ದು ಅವು ನಾವು ಪ್ರಸಂಶಿಸುವಂಥ ಘನವಂತಿಕೆಯ ಸೊಗಸಾದ ವಿಶೇಷ ಗುಣಗಳಿಗೆ ಅತಿ ತದ್ವಿರುದ್ಧ ರೀತಿಯಲ್ಲಿ ಪ್ರಮುಖವಾಗಿ ಎದ್ದು ಕಾಣುತ್ತವೆ. ಆದರೆ ಆತನು ಇವುಗಳನ್ನು ಕಂಡುಕೊಂಡಂತೆಲ್ಲಾ ಬಹು ಪ್ರಾಮಾಣಿಕನಾಗಿ ಪಶ್ಚಾತಾಪಪಟ್ಟಿದ್ದು, ಇವುಗಳ ದೆಸೆಯಿಂದ ಮಾನಸಾಂತರಕ್ಕೆ ನಡೆಸಿದ್ದ ಆತನ ದೈನ್ಯತೆಯನ್ನು ನಾವು ಪ್ರಸಂಶಿಸುವಂತೆ ಮಾಡುವದು; ಅಲ್ಲದೆ ದೇವರು ಬಿದ್ದುಹೋದ ತನ್ನ ಬಲಹೀನರಾದ ಹಿಂಬಾಲಕರು ಅನುವಂಶೀಯವಾಗಿ ಬಂದ ನೀತಿಭ್ರಷ್ಟತೆಯ ವಿರುದ್ಧವಾಗಿ ಹೋರಾಡುತ್ತಾ, ದೀನತೆಯಿಂದ ತಮ್ಮ ಬಲಹೀನತೆಯನ್ನು ಒಪ್ಪಿಕೊಂಡವರಾಗಿ, ತನ್ನ ನಯವುಳ್ಳ ಅನುಕಂಪದ ಮೇಲೆ ಆತುಕೊಂಡಿರುವವರನ್ನು ದೇವರು ತನ್ನ ಪ್ರೀತಿಪೂರ್ಣವಾದ ಕರುಣೆ ಅನುಕಂಪಗಳಿಂದ ದೃಷ್ಟಿಸುವಂಥ ರೀತಿಯಲ್ಲಿ ದಾವೀದನನ್ನು ಪರಿಗಣಿಸುವಂತೆ ಮಾಡುವದು. ದಾವೀದನು ತನ್ನ ಯೌವ್ವನಾವಸ್ಥೆಯಲ್ಲಿರಲು ದೇವರು ಅವನನ್ನು ಇಸ್ರಾಯೇಲಿನ ಅರಸನನ್ನಾಗಿ ಅಭಿಷೇಕಿಸುವದಕ್ಕಿದ್ದಾಗ ಆತನ ವಿಷಯದಲ್ಲಿ ಹೀಗೆ ಹೇಳಲಾಗಿತ್ತು: **"ಆತನು ತನಗೆ ಒಪ್ಪುವ [ತನ್ನ ಹೃದಯದಂತೆಯೇ ಇರುವ] ಬೇರೊಬ್ಬ ಪುರುಷನನ್ನು ತನ್ನ ಪ್ರಜೆಯ ಮೇಲೆ ಪ್ರಭುವಾಗಿ ನೇಮಿಸಿದ್ದಾನೆ."** (1 ಸಮುವೇಲ 13:14) ದಾವೀದನಿಗೆ

ಬಲಹೀನತೆಗಳಿದ್ದಾಗ್ಯೂ ಆತನಿಗಿದ್ದ ಗಾಢವಾಗಿ ಪರಿತಪಿಸುವ ಮನೋಭಾವದ ದೆಸೆಯಿಂದ ಅನೇಕ ವಿಧದಲ್ಲಿ ಇದೇ ಸಂಗತಿಯನ್ನು ನಂತರದಲ್ಲಿಯೂ ಆತನ ವಿಷಯದಲ್ಲಿ ಹೇಳಬಹುದು. ಹೇಗೂ ಈ ಹೇಳಿಕೆಯನ್ನು ದಾವೀದನ ಯವ್ವನಾವಸ್ಥೆಯ ಇಲ್ಲವೇ ಪುರುಷಾವಸ್ಥೆಯ ಪರಿಪೂರ್ಣತೆಗೆ ಒಂದು ಸಾಕ್ಷಿಯಾಗಿ ತೆಗೆದುಕೊಳ್ಳದೆ ವಾಸ್ತವದಲ್ಲಿ ದೇವರು ಆತನನ್ನು ನೇಮಿಸಿದ ಕಾರ್ಯಸ್ಥಾನಕ್ಕೆ ಆತನಿಗಿದ್ದ ಅರ್ಹತೆಯನ್ನಾಗಿ ಪರಿಗಣಿಸಬಹುದು; ಅಲ್ಲದೆ ಆ ಕಾರ್ಯಸ್ಥಾನವು ಒಂದು ದೊಡ್ಡ ಗೌರವವನ್ನು ವಿಶ್ವಾಸವನ್ನು ಹೊಂದಿದ್ದರಿಂದ ದೇವರು ಆತನನ್ನು ನೇಮಿಸಿದ ಸ್ಥಾನಕ್ಕೆ ಆತನಿಗಿರುವ ಮನಃಸ್ಥಿತಿಯನ್ನು ವಿಶೇಷವಾಗಿ ಆತನು ಆಯ್ಕೆಯಾದ ಸಮಯದಲ್ಲಿನ ಆತನ ಉನ್ನತ ಮಟ್ಟದ ಗುಣನಡತೆ ಹಾಗು ಸಾಮರ್ಥ್ಯಗಳನ್ನು ಒಳಗೊಂಡಿರುವುದು ಅನ್ವಯಿಸುತ್ತದೆ. ಹೀಗೆಯೇ ಸೌಲನ ವಿಷಯದಲ್ಲಿಯೂ ಸಹ ಆತನ ಅಭಿಷೇಕದ ಸಮಯದಲ್ಲಿ ಇದೇ ರೀತಿಯದ್ದಾಗಿದ್ದು ಪ್ರವಾದಿಯಾದ ಸಮುವೇಲನು ಹೀಗೆ ಹೇಳಿದ್ದನು: "ನೋಡಿದಿರಾ, ಯೆಹೋವನಿಂದ ಆರಿಸಲ್ಪಟ್ಟವನು ಇವನೇ; ಸರ್ವಜನರಲ್ಲಿ ಇವನಿಗೆ ಸಮಾನನು ಇಲ್ಲವೇ ಇಲ್ಲ [ಅಥವಾ ಇವನಿಗೆ ಸಮಾನನು ಯಾವನಿದ್ದಾನೆ?]."

ದಾವೀನನ ಮೊದಲಿನ ಜೀವಿತದ ವಿಶಿಷ್ಟ ಅನುಭವಗಳು ಆತನನ್ನು ಹಾಗು ಆತನ ಜೀವಿತದ ಸಾಧನೆಯಾದ ಇಸ್ರಾಯೇಲ್ಯರ ಅರಸನನ್ನಾಗಿಸುವದಕ್ಕೆ ಸಿದ್ಧಮಾಡಲು ಬಹುವಾಗಿ ಕಾರ್ಯವೆಸಗಿದ್ದವು. ದಾವೀದನು ಒಬ್ಬ ಕುರುಬ ಹುಡುಗನಾಗಿದ್ದಾಗ ಆತನು ಸಿಂಹವನ್ನು ಹಾಗು ಕರಡಿಯನ್ನು ಎದುರಿಸಿದಂಥದ್ದು ಹಾಗು ನಂತರದಲ್ಲಿ ದೈತ್ಯನಾದ ಗೊಲ್ಯಾತನೊಡನೆ ಆತನ ಹೋರಾಟ, ಆಸ್ಥಾನದಲ್ಲಿ ಸೌಲನೊಡನೆ ಆಗಿದ್ದ ಅನುಭವ, ಯೋನಾತಾನನು ಮತ್ತು ಇತರರೊಡನೆ ಆತನ ಒಡನಾಟ ಹಾಗು ಸ್ನೇಹ, ಸೌಲನ ಹಿಂದಟ್ಟುವಿಕೆಯ ದೆಸೆಯಿಂದ ಆತನು ಮಾಡಿದ ಪಲಾಯನ, ಇವೆಲ್ಲವೂ ಸೌಲನ ಮರಣದ ನಂತರ ಆತನ ಕಾರ್ಯಸ್ಥಾನಕ್ಕೆ ಆಯಲ್ಪಟ್ಟವನಾಗಿ ಸಿದ್ಧತೆಹೊಂದಿ ಅಭಿವೃದ್ಧಿಯಾಗಲು ಪ್ರಯೋಜನಕಾರಿಯಾಗಿದ್ದವು. ಈ ಅನುಭವಶಾಲೆಯಲ್ಲಿ ಆತನು ಧೈರ್ಯ, ಸದ್ಗುಣ, ದೇವರಲ್ಲಿನ ಆತನ ಭರವಸೆ, ವಿಶಿಷ್ಟ ರೀತಿಯ ಸಂಕಷ್ಟಗಳು ಹಾಗು ತೀವ್ರವಾದ ಪರೀಕ್ಷೆ ಪರಿಶೋಧನೆಗಳ ಸಮಯದಲ್ಲಿ ಹೇಗೆ ಬುದ್ಧಿವಂತಿಕೆ–ಯಿಂದ ನಡೆದುಕೊಳ್ಳಬೇಕು, ಎಂಬಿವುಗಳ ಸಂಬಂಧವಾಗಿ ಅಮೂಲ್ಯವಾದ ಪಾಠಗಳನ್ನು ಕಲಿತುಕೊಂಡಿದ್ದನು. ಆತನು ರಾಜನ ಆಸ್ಥಾನದಲ್ಲಿನ ಪರಿಸ್ಥಿತಿ ಹಾಗು ಸನ್ನಿವೇಶಗಳ ಪರಿಚಯವನ್ನು ಸಹ ಹೊಂದಿದ್ದನು; ಅಲ್ಲದೆ ಆತನ ಮುಂದಿನ ಏಳುವರೆ ವರುಷಗಳು ದೇಶಭ್ರಷ್ಟನಾಗಿ ಇತರ ದೇಶಗಳಲ್ಲಿದ್ದುದು ಆ ಜನಾಂಗದವರ ಗುಣಸ್ವಭಾವಗಳನ್ನು ತಿಳಿದುಕೊಳ್ಳುವಂತೆ ಮಾಡಿದ್ದು ಇವು ಮುಂದೆ ನಿಸ್ಸಂದೇಹವಾಗಿ ಆತನು ಅವರೊಡನೆ ಹೇಗೆ ವ್ಯವಹರಿಸಬೇಕೆಂಬುದನ್ನು ತಿಳಿದುಕೊಳ್ಳಲು ಸಹಾಯಮಾಡಿದ್ದವು. ಆತನು ಅಲ್ಲಿ ದೇಶಭ್ರಷ್ಟನಾಗಿ ಅಲೆದಾಡಿದ್ದಾಗ ಅತೃಪ್ತ ಜನರು ಆತನ ಬಳಿಗೆ ಕೂಡಿಕೊಂಡಿದ್ದು ಅವರೆಲ್ಲರೂ ಬಹು ಪಾಲು ಸೌಲನ ದಬ್ಬಾಳಿಕೆಗೆ ಗುರಿಯಾಗಿದ್ದರು. ಅವರಲ್ಲಿ ಅನೇಕರು ಆ ದೇಶದ ಪ್ರಖ್ಯಾತ ಮನುಷ್ಯರಾಗಿದ್ದು ಇವರು ಮುಂದೆ ಅವನಿಗೆ ಉಪಯುಕ್ತರಾಗಿದ್ದರು.

ಹೀಗೆ ದೇವರು ತನ್ನ ಸೇವಕನನ್ನು ಆದುಕೊಳ್ಳುವದು ಮಾತ್ರವಲ್ಲದೆ ತಾನು ಕರೆಯಲ್ಪಟ್ಟ ಸ್ಥಾನದ ಕರ್ತವ್ಯಗಳಿಗೆ ಅವನಿಗೆ ತರಬೇತಿ ನೀಡಿದ್ದನು. ಅಲ್ಲದೆ ದಾವಿದನ ಸಂಗತಿಯಲ್ಲಿ ಈ ದೇವಾನುಗ್ರಹವು ನಮಗೆ ಸಾಧಾರಣ ರೀತಿಯ ದೇವಾನುಗ್ರಹದ ಬಗ್ಗೆ ಅಂದರೆ ಆತನು ತನ್ನ ಚಿತ್ತವನ್ನು ನೆರವೇರಿಸ ಸಲುವಾಗಿ ತನ್ನ ಗುರಿಮುಟ್ಟಲು ತಾನು ಬಳಸುವ ಸಾಧನಗಳನ್ನು ಎಷ್ಟು ಬುದ್ಧಿವಂತಿಕೆಯಿಂದ ಸನ್ನಿವೇಶಕ್ಕೆ ತಕ್ಕಂತೆ ಸರಿಹೊಂದಿಸಿ ಮಾರ್ಗದರ್ಶನ ಮಾಡುವನೆಂಬುದನ್ನು ನಮ್ಮ ನೆನಪಿಗೆ ತರುತ್ತದೆ. ದಾವೀದನ ಅತಿ ಆಧರಣೆದಾಯಕವಾದ ಅನೇಕ ಕೀರ್ತನೆಗಳು ತನ್ನ ದೇಶಭ್ರಷ್ಟ ಜೀವಿತದ ಕಾಲದಲ್ಲಿ ಉಂಟಾಗಿದ್ದ ಆನೇಕ ಕಠಿನ ಅನುಭವಗಳ ಫಲವಾಗಿದ್ದವು. ವಾಸ್ತವದಲ್ಲಿ ಮನುಷ್ಯನಿಗಾಗುವ ವಿಶಿಷ್ಟ ಹಾಗು ವಿವಿಧ ಅನುಭವಗಳು ಹಾಗು ಈ ಅನುಭವಗಳಿಂದ ದೊರೆಯುವ ಪಾಠಗಳು, ದಾವೀದನ ಕೀರ್ತನೆಗಳಲ್ಲಿ ವ್ಯಕ್ತವಾಗಿರುವಂತೆ, ದೇವಜನರಿಗೆ ಅಂದಿನಿಂದ ಎಲ್ಲಾ ಕಾಲಗಳಲ್ಲಿ ಸಂತೈಸುವದಾಗಿಯೂ ಆಶೀರ್ವಾದ ಕರವಾಗಿಯೂ ಇರುವವು. ದಾವೀದನ ಅನುಭವಗಳು, ಸಾಮಾನ್ಯವಾದ ಒಂದು ರೀತಿಯಲ್ಲಿ, ದೇವರು ಇದೇ ರೀತಿಯಾಗಿ ಸಿದ್ಧವಾಡುತ್ತಿರುವ ಸುವಾರ್ತಾಯುಗದ ಸಭೆಯು ಅನುಭವಗಳನ್ನು ಹೋಲುವದು. ನಿಸ್ಸಂಶಯವಾಗಿಯೂ ಈ ಕಾರಣಕ್ಕಾಗಿಯೇ ದಾವೀದನ ಅನುಭವದಲ್ಲಿನ ಪಾಠಗಳು ನಮ್ಮಲ್ಲಿನ ಅನೇಕರ ಹೃದಯಗಳಲ್ಲಿ ಪ್ರತಿಧ್ವನಿತವಾಗಿರುವುದನ್ನು ಕಂಡುಕೊಳ್ಳಲಾಗಿರುವದು.

ತಾನು ಅಭಿಷೇಕವಾದ ಕಾಲದಿಂದ ರಾಜ್ಯಕ್ಕೆ ಅರಸನಾಗಿ ಪ್ರತಿಷ್ಠಾಪಿತನಾಗುವವರೆಗೂ ದಾವೀದನು ಅನುಸರಿಸಿದ ಮಾರ್ಗದ ವಿವರಣೆಗಳು ದೇವರ ಮೇಲಿನ ಆತನ ಒಂದು ದೃಢವಾದ ಭರವಸೆಯನ್ನು ತೋರಿಸುತ್ತವೆ. ಹೇಗಂದರೆ ಯಾವಾತನು ದಾವೀದನನ್ನು ಕರೆದು ಅಭಿಷೇಕಿಸಿದನೋ ಆತನು ತನ್ನದೇ ಆದ ಒಂದು ಒಳ್ಳೆಯ ಕಾಲದಲ್ಲಿ ಆತನನ್ನು ಸಿಂಹಾಸನಕ್ಕೆ ಕರತಂದು ಆತನ ರಾಜ್ಯವನ್ನು ಸ್ಥಾಪಿಸಿ ಅದನ್ನು ಸ್ಥಿರಪಡಿಸಲು ಸಮರ್ಥನಾಗಿದ್ದನೆಂಬದೇ. ಸೌಲನು ತನ್ನ ಪ್ರಾಣತೆಗೆಯಲು ಹಿಂದಟ್ಟಿ ಬರುವಾಗಲೂ ಸಹ ದಾವೀದನು ಸೌಲನನ್ನು ಸ್ಥಾನಪಲ್ಲಟಗೊಳಿಸಲು ಇಲ್ಲವೇ ಆತನ ಅಧಿಕಾರವನ್ನು ದುರ್ಬಲ ಗೊಳಿಸಲು ಯಾವುದೇ ಕ್ರಮಗಳನ್ನು ತೆಗೆದು ಕೊಂಡಿರಲಿಲ್ಲ. ಅಲ್ಲದೆ ದಾವೀದನು ಸೌಲನನ್ನು ಕೊಲ್ಲಲು ಸಾಧ್ಯವಾಗುವಂತೆ ಸೌಲನು ಅಧಿಕಾರದ [ಅವಧಿಯಲ್ಲಿ] ಪ್ರಜ್ಞಾಹೀನನಾಗಿರು – ವಾಗಲೂ ಆತನು ದೇವರ ಅಭಿಷಕ್ತನ್ನು ಮುಟ್ಟಲು ಕೈಹಾಕಿರಲಿಲ್ಲ. ದೇವರು ಯಾವುದನ್ನು ವಾಗ್ದಾನಮಾಡಿರುವನೋ ಅದನ್ನು ಈಡೇರಿಸಲು ಸಮರ್ಥನೆಂಬುದನ್ನ ತಿಳಿದವನಾಗಿ ದೇವರ ನೇಮಿತ ಕಾಲದವರೆಗೂ ತಾನು ತಾಳ್ಮೆಯಿಂದ ಕಾದುಕೊಂಡಿರಲು ಇಚ್ಛಿಸಿದ್ದನು; ಸೌಲನ ಮರಣದ ನಂತರವೂ ಸಹ ಆತನು ತೆರವಾದ ಕಾರ್ಯಸ್ಥಾನವನ್ನು ಪಡೆಯಲು ಆತುರಪಡದೇ ಮೊದಲು ತನ್ನ ಸಮಯವು ಬಂದಿರುವದೋ ಎಂಬುದನ್ನು ತಿಳಿದುಕೊಳ್ಳಲು ದೇವರನ್ನು ವಿಚಾರಿಸಿದ್ದನು.

ದೇವರ ಸಮಯವು ಒದಗಿ ಬಂದಿರಲು, ದಾವೀದನು ತನ್ನ ಕುಟುಂಬ ಹಾಗು ತನ್ನೊಡನೆ ಇದ್ದ ಜನರು ಮತ್ತು ಅವರ ಕುಟುಂಬದೊಡನೆ ಹೆಬ್ರೋನಿಗೆ ತೆರಳಲು ನಿರ್ದೇಶನವಾಗಿತ್ತು. ಮತ್ತು ಅಲ್ಲಿ ಆಡಂಬರವಿಲ್ಲದೆ ಅಥವಾ ತನ್ನ ಹಕ್ಕನ್ನು ಪ್ರತಿಪಾಧಿಸದೆ ಆತನು ಪ್ರಶಾಂತನಾಗಿ ದೇವಾನುಗ್ರಹವು ಮುಂದಿನದನ್ನು ಸೂಚಿಸುವದಕ್ಕಾಗಿ ಕಾದುಕೊಂಡಿದ್ದನು. "ತರುವಾಯ ಯೆಹೂದ್ಯರು ಅಲ್ಲಿಗೆ ಬಂದು ದಾವೀದನನ್ನು ಅಭಿಷೇಕಿಸಿ ತಮ್ಮ ಕುಲಕ್ಕೆ ಅರಸನನ್ನಾಗಿ ಮಾಡಿಕೊಂಡರು." ಹೀಗೆ ಕೇವಲ ದೈವೀಕ ಅಭಿಷೇಕದೊಡನೆ ಸರಿಹೊಂದಿಸಿಕೊಳ್ಳುವದು ಮಾತ್ರವಲ್ಲದೆ ಅವರ [ಯೆಹೂದ್ಯರ] ಸ್ವಂತ ಇಷ್ಟಕ್ಕೂ ಸಹ ಸರಿಹೊಂದಿಸಿಕೊಂಡಿದ್ದನು. ಹೀಗೆ ದೇವರ ಏರ್ಪಾಟಿನ ಮೇರೆಗೆ ಮಾತ್ರವಲ್ಲದೆ ಜನರ ಆಯ್ಕೆಯ ಮೂಲಕವೂ ರಾಜ್ಯವು ದಾವೀದನಿಗೆ ಲಭಿಸಿತ್ತು.

ಈ ಎಲ್ಲಾ ವಿಷಯಗಳಲ್ಲಿ ದಾವೀದನು ಅನುಸರಿಸಿದ ವಿಧಾನವು ಅಲ್ಲದೆ ದೈವೀಕ ಮುನ್ನೇರ್ಪಾಟಿನ ವಿಧಾನದಲ್ಲಿಯೂ ಈ ಕಾಲದ ಅಂದರೆ ಸುವಾರ್ತಾಯುಗದ ದೇವರ ಅಭಿಷಕ್ತ ಜನರಿಗೆ ಒಂದು ಹಿತಕರವಾದ ಪಾಠವಿರುವದು. ದೇವರ ಪರವಾಗಿ ಅರಸರೂ ಯಾಜಕರೂ, ದೇವರಿಗೆ ಬಾಧ್ಯರೂ, ಕ್ರಿಸ್ತನ ರಾಜ್ಯ ಪ್ರಭಾವಗಳಲ್ಲಿ ಆತನಿಗೆ ಸಹ ಬಾಧ್ಯರೂ ಆಗುವದಕ್ಕಾಗಿ ದೇವರಿಂದ ಕರೆಯಲ್ಪಟ್ಟು ಅಭಿಷೇಕಿಷಲ್ಪಟ್ಟ ನಾವು ಉನ್ನತಸ್ಥಾನಕ್ಕೆ ಏರಿಸಲ್ಪಡಲು ದೇವರ ಸಮಯಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿರುವದು ನಮ್ಮ ಪಾಲಾಗಿರುವದು; ಹಾಗು ಈ ಮಧ್ಯೆ ದಾವೀದನಂತೆ ಮುಂದೆ ನಾವು ಹೊಂದಲಿರುವ ಬಲಾಧಿಕಾರದ ಸ್ಥಾನಕ್ಕೆ ಅರ್ಹರಾಗಲು ದೇವರು ತನ್ನ ಏರ್ಪಾಡಿನಲ್ಲಿ ನಮಗೆ ಅಗತ್ಯವೆಂದು ತೋರುವ ಶಿಸ್ತುಶಿಕ್ಷಾ ಕ್ರಮಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕಿರುವದು. ಹಾಗು ಭೂಲೋಕದ ಎಲ್ಲಾ ಕುಲಗಳವರನ್ನು ಆಶೀರ್ವದಿಸ ಸಲುವಾಗಿ ಆ ಬಲಾಧಿಕಾರವನ್ನು ಪ್ರೀತಿಪೂರ್ವಕವಾಗಿ ಪರಿಗಣಿಸಬೇಕು.

ಸಿಂಹಾಸನಕ್ಕೆ ಬರಲು ದಾವೀದನು ಅನುಸರಿಸಿದ್ದ ವಿಧಾನವು ಆತನಲ್ಲಿ ಹಿಂದೆ ಇದ್ದ ಅದೇ ಜ್ಞಾನ ಔದಾರ್ಯದ ವಿಧಾನಗಳೇ ಆಗಿದ್ದವು. ದಾವೀದನು ತೆಗೆದುಕೊಂಡ ಇತರ ಜ್ಞಾನೋಚಿತವಾದ ಕ್ರಮಗಳಲ್ಲಿ ಮೃತನಾದ ತನ್ನ ಪ್ರತಿಸ್ಪರ್ಧಿ ಹಾಗು ವೈರಿಯ ನೆನಪುಗಳಿಗೆ ತಾನು ನೀಡಿದ ಗೌರವವು ಬಹು ಗಮನಾರ್ಹವಾಗಿದ್ದು, ಅದಕ್ಕೆ ಚರಿತ್ರೆಯ ಪುಟಗಳಲ್ಲಿ ಯಾವುದೇ ಪೂರ್ವ ನಿದರ್ಶನವೂ ಇರುವದಿಲ್ಲ. ದಾವೀದನು ಯಾಬೇಷ್-ಗಿಲ್ಯಾದಿನ ಜನರ ಬಳಿಗೆ ದೂತರನ್ನು ಕಳುಹಿಸಿ ಸೌಲನು ಮತ್ತು ಅವರ ಮಕ್ಕಳ ದೇಹಗಳಿಗೆ ಫಿಲಿಷ್ಟಿಯರು ತೋರಿದ ಅವಮಾನವನ್ನು ಅವರು ತಪ್ಪಿಸಿ ಅವುಗಳಿಗೆ ಸೌಜನ್ಯದಿಂದ ಒಂದು ಶವಸಂಸ್ಕಾರವನ್ನು ಮಾಡಿದ್ದಕ್ಕಾಗಿ ತನ್ನ ಪ್ರಸಂಶೆಯನ್ನು ತಿಳಿಸಿದ್ದನು. ಯಾಬೇಷಿನ ಈ ಪುರುಷರು ಸೌಲನು ಒಂದು ಸಾರಿ ತಮಗಾಗಿ ಮಾಡಿದ ಒಂದು ದಯಾಪೂರ್ವಕವಾದ ಸೇವೆಯ ಜ್ಞಾಪಕಾರ್ಥವಾಗಿ ಇದನ್ನು ನೆರವೇರಿಸಿದ್ದರು. (1 ಸಮುವೇಲ 11:1–11) ಮತ್ತು ದಾವೀದನು ಹೀಗೆ ಹೇಳಿದ್ದನು: "ನೀವು ಕರುಣೆಯಿಂದ ನಿಮ್ಮ ಒಡೆಯನಾದ ಸೌಲನ ಶವವನ್ನು ಸಮಾಧಿ ಮಾಡಿದ್ದಕ್ಕಾಗಿ ನಿಮಗೆ ಯೆಹೋವನ ಆಶೀರ್ವಾದವುಂಟಾಗಲಿ; ಆತನ ಕೃಪಾಸತ್ಯತೆಗಳು ನಿಮ್ಮೊಂದಿಗಿರಲಿ; ಈ ಕಾರ್ಯಕ್ಕಾಗಿ ನಾನೂ ನಿಮಗೆ ಉಪಕಾರಮಾಡುವೆನು." [2 ಸಮುವೇಲ 2:5–6]

ಒಬ್ಬ ಪ್ರಬಲನಾದ ಪ್ರತಿಸ್ಪರ್ಧಿ ಹಾಗು ನಿಷ್ಕಾರುಣಾ ವೈರಿಯು ಮರಣಕ್ಕಾಗಿ ದುರಾತ್ಮವು ಮಾಡುವ ವಿಜಯೋತ್ಸವಕ್ಕಿಂತಲೂ ಇದು ಎಷ್ಟೋ ವಿಭಿನ್ನವಾಗಿರುವದು. ಹೀಗೆ ಮಾಡುವದಕ್ಕೆ ಬದಲಾಗಿ ದಾವೀದನು ಸೌಲನ ಒಳ್ಳೆಯ ಗುಣವಿಶೇಷಗಳನ್ನು ನೆನಪು ಮಾಡಿಕೊಂಡು ಆತನ ನಂತರದ ವರುಷಗಳಲ್ಲಿ ಆತನ ಮೇಲೆ ಬಂದಿದ್ದ ದುರಾತ್ಮದ ಹಾಗು ಅದು ಆತನನ್ನು ಇಂಥಾ ಒಂದು ದುಷ್ಟತನದ ಮಾರ್ಗಕ್ಕೆ ನಡೆಸಿದ್ದ ವಿಷಯದಲ್ಲಿ ಅವನು ಗೋಳಾಡಿದ್ದನು. ಅಲ್ಲದೆ ಯೋನಾತಾನನ ಪ್ರೀತಿಯ ನೆನಪು ಅವನಿಗೆ ಯಾವಾಗಲೂ ಅಮೂಲ್ಯವಾಗಿದ್ದವು. ಇದರಲ್ಲಿ ಎಲ್ಲಕ್ಕಿಂತಲೂ ಹೆಚ್ಚಾಗಿ ದಾವೀದನು ತನ್ನ ವೈರಿಯ ಮೇಲೆ ಜಯಗಳಿಸಿದ್ದನು.

ದಾವೀದನು ಹೀಗೆ ಯೆಹೂದದ ಅರಸನಾಗಿ ಅಂಗೀಕರಿಸಲ್ಪಟ್ಟಿರುವಲ್ಲಿ, ಇತರ ಇಸ್ರಾಯೇಲ್ ಕುಲಗಳು, ದಾವೀದನಿಗಾದ ದೇವರ ಅಭಿಷೇಕವನ್ನು ಉಪೇಕ್ಷಿಸಿ, ಉಳಿದಿದ್ದ ಸೌಲನ ಮಗನಾದ ಈಷ್ಬೋಶೇತನನ್ನು ತಮ್ಮ ಅರಸನನ್ನಾಗಿ ಮಾಡಿಕೊಂಡಿದ್ದರು. ಇದಕ್ಕೆ ದಾವೀದನು ಯಾವುದೇ ವಿರೋಧವನ್ನು ವ್ಯಕ್ತಪಡಿಸಿರಲಿಲ್ಲ. ಅಲ್ಲದೆ ಪ್ರತಿಸ್ಪರ್ಧಿ ರಾಜ್ಯದ ವಿಷಯವಾಗಿ ಆತನು ಅನುಸರಿಸಿದ ವಿಧಾನವು ಕೇವಲ ಕಾಪಾಡುವ ಸಲುವಾಗಿತ್ತು, ಆಕ್ರಮಣಕಾರಿಯಾಗಿರಲಿಲ್ಲ. ಹೇಗೂ ಅನೇಕ ಯುದ್ಧಗಳು ಹಾಗು ಹೊಡೆದಾಟಗಳಲ್ಲಿ ಆತನ ಸೇನಾಬಲಗಳು ಯಶಸ್ವಾಗಿದ್ದವು; ಅಲ್ಲದೆ ಆತನ ಬಲಪ್ರಭಾವಗಳು ಹೆಚ್ಚುತ್ತಿರಲು ಆತನ ವಿರೋಧಿಯ ಬಲಪ್ರಭಾವಗಳು ಕ್ಷೀಣಿಸುತ್ತಾ ಬಂದಿತ್ತು. ಇದೇ ಸಹಿಷ್ಣತೆಯ ಹಾಗು ಅಧಿಕಾರಾಗ್ರಹಣದ ಮನೋಭಾವಗಳು ರಾಜಕೀಯ ಹಾಗು ಧಾರ್ಮಿಕ ಮುಖಂಡರಲ್ಲಿ ಸಾಮಾನ್ಯವಾಗಿ ಅಪೇಕ್ಷಿಸಲಾಗುವದು. ಸಾಧಾರಣವಾಗಿ ಮುಖಂಡರು ಅನುಸರಿಸುವ ವಿಧಾನವೆಂದರೆ ನಿಜವಾಗಿಯೂ ಅದು ಪದವಿಯು ಮನುಷ್ಯನನ್ನು ಹುಡುಕಿಕೊಂಡು ಬರುವದಕ್ಕೆ ಬದಲಾಗಿ ಪದವಿಯನ್ನು ಪಡಕೊಳ್ಳಲು ತಾವು ಜನರ ಮೇಲೆ ಬಲಪ್ರಯೋಗಿಸು-ವಂಥದ್ದಾಗಿರುವದು.

"ಯೆಹೋವನು ರಾಜ್ಯಾಧಿಕಾರ ವಹಿಸಿದ್ದಾನೆ; ಭೂಲೋಕವು ಸಂತೋಷಿಸಲಿ;" ಎಂಬ ಪಠ್ಯಭಾಗವು ಪ್ರವಾದನೆಯಾಗಿದ್ದು, ಅದು ನಿಜರೂಪದ ದಾವೀದನ ಸಿಂಹಾಸನವು ಅಂದರೆ ಯೆಹೋವನ ಅಭಿಷಕ್ತನಾದ ಕರ್ತನಾದ ಯೇಸುವಿನ ರಾಜ್ಯವು ಭೂಲೋಕದಲ್ಲೆಲ್ಲಾ ಸ್ಥಾಪನೆಗೊಳ್ಳುವಂಥ ಆಶೀರ್ವಾದಕರವಾದ ಕಾಲವನ್ನು ಸೂಚಿಸುತ್ತದೆ. ಆಗ ನಿಜವಾಗಿಯೂ ಭೂಲೋಕವು ಸಂತೋಷಿಸಬಹುದು; ಯಾಕಂದರೆ ಆ ಅರಸನು ನೀತಿಯಿಂದ ಆಳ್ವಿಕೆಮಾಡುವನು, ಅಲ್ಲದೆ ನೀತಿ ನ್ಯಾಯಗಳು ಆತನ ಸಿಂಹಾಸನದ ಅಸ್ತಿವಾರವಾಗುವವು.

*****

ದಾವೀದನು ಅರಸುತನವನ್ನು ಗಳಿಸಿಕೊಂಡದ್ದು

ರೀಪ್ರಿಂಟ್ಸ್ ಪುಟ 4235

2 ಸಮುವೇಲ 2:1–7; 5:1–5

"ಸೇನಾಧೀಶ್ವರನಾದ ಯೆಹೋವ ದೇವರು ಅವನ ಸಂಗಡ ಇದ್ದದರಿಂದ ಅವನು ಅಭಿವೃದ್ಧಿಹೊಂದುತ್ತಾ ಬಂದನು" – 2 ಸಮುವೇಲ 5:10

ಅರಸನಾದ ಸೌಲನ ಮರಣದ ಸಮಯದಲ್ಲಿ ದಾವೀದನು ತನ್ನ 30ನೇ ವರುಷದಲ್ಲಿದ್ದನು. ಹಿಂದಿನ ಹತ್ತು ವರುಷಗಳಲ್ಲಿ ಆತನು ಒಂದು ವೈವಿಧ್ಯಮಯ ಜೀವನವನ್ನು ನಡೆಸಿದ್ದನು. ಅಸೂಯೆಯ ದೆಸೆಯಿಂದ ಸೌಲನ ಆಸ್ಥಾನದಿಂದ ಬಹಿಷ್ಕೃತನಾಗಿ ಅರಸನಿಂದ ಒಂದು ವನ್ಯ ಮೃಗದಂತೆ ಹುಡುಕಾಡಲ್ಪಟ್ಟಿದ್ದಂಥ ದಾವೀದನ ಅನುಭವಗಳು ಮಾದರಿ–ಯೆಂದು ಪರಿಗಣಿಸಲ್ಪಡುವದಕ್ಕೆ ಬಹು ದೂರವಾಗಿತ್ತು., ಅರಸನ ಸೇನಾಧಿಪತಿಯಾಗಿ ಒಂದು ಕಾಲದಲ್ಲಿ ಅರಸನ ಕೃಪಾಕಟಾಕ್ಷದಲ್ಲಿ ಉನ್ನತನಾಗಿ ಎಣಿಸಲ್ಪಟ್ಟಿದ್ದರ ಹೊರತಾಗಿ ಏನೂ ತಿಳಿಯದ ಬಹು ಪಾಲು ಜನರಿಂದ ಸಂಶಯ ದೃಷ್ಟಿಯಿಂದ ಕಂಡವನಾಗಿ, ಒಬ್ಬ ಸುಲಿಗೆಗಾರನಂತೆ ಹಿಂದಟ್ಟಲ್ಪಟ್ಟು ಅನುಗ್ರಹದಿಂದ ದೂರವಾಗಿದ್ದ ದಾವೀದನನ್ನು ಕೇವಲ ಅಸೂಯೆಯಿಂದಲ್ಲದೆ ಬೇರೆ ಯಾವ ಭಾವದಿಂದಲೂ ಪರಿಗಣಿಸುವದು ಕೆಲವರಿಗೆ ಕಷ್ಟಕರವಾಗಿತ್ತು. ಮತ್ತೆ ಇತರರು, ದೇವರು ಇಸ್ರಾಯೇಲಿನ ಅರಸನನ್ನಾಗಿ ನೇಮಿಸಿದವನೆಂಬುದನ್ನು ಎಣಿಸಲು ವಿಫಲರಾಗಿ, ದಾವೀದನನ್ನು ಒಬ್ಬ ದುರಾಕ್ರಮಣಕಾರಿಯಾಗಿ ತನ್ನ ಒಡೆಯನ ನಷ್ಟದಿಂದ ತಾನು ಲಾಭಗಳಿಸುವವನೆಂತಲೂ ಅಲೋಚಿಸಿರಬಹುದು. ವಾಸ್ತವದಲ್ಲಿ ನಮ್ಮ ಹಿಂದಿನ ಪಾಠದಲ್ಲಿ ತಿಳಿಸಿದ ವಿನಾಶಕಾರೀ ಯುದ್ಧದಲ್ಲಿ ಸೌಲನು ಹಾಗು ಆತನ ಮೂವರು ಮಕ್ಕಳ ಮರಣವಾದ ನಂತರ ಉಂಟಾದ ಅಸ್ಥಿರ ಸನ್ನಿವೇಶದಲ್ಲೂ [ಇಸ್ರಾಯೇಲಿನ] ಹನ್ನೊಂದು ಕುಲಗಳು ಪ್ರಾಮಾಣಿಕವಾಗಿ ಸೌಲನ ನಾಲ್ಕನೇ ಮಗನಾದ ಈಷ್ಬೊಶೇತನಿಗೆ ಬೆಂಬಲವನ್ನು ಪ್ರದರ್ಶಿಸಿದವರಾಗಿದ್ದು, ಒಂದು ಕ್ಷಣವಾದರೂ ದಾವೀದನನ್ನು ನೆನಸಿಕೊಂಡಂತೆ ತೋರುವದಿಲ್ಲ.

ದಾವೀದನು ಆರುನೂರು ಜನರ ದಂಡಿಗೆ ನಾಯಕನಾಗಿ ಯೂದಾಯದ ನೈರುತ್ಯ ದಿಕ್ಕಿನಲ್ಲಿರುವ ಚಿಗ್ಲಕ್ಕಿನಲ್ಲಿ ತಾನು ಬೀಡು ಬಿಟ್ಟಿದ್ದನು. ದಾವೀದನು ಸೌಲನ ಮರಣದ ಬಗ್ಗೆ ಕೇಳಿದಾಗ ತನ್ನ ಸ್ವಂತ ತೀರ್ಮಾನದಂತೆ ತಾನು ಮಾಡಬೇಕಾದುದನ್ನು ನಿರ್ಧರಿಸುವದಕ್ಕೆ ಬದಲಾಗಿ ಆತನು ದೇವರನ್ನು ವಿಚಾರಿಸಿದ್ದನು. ನಮಗೆ ಗಮನಾರ್ಹವಾಗಿ ಕಾಣುವದೇನಂದರೆ ಒಬ್ಬ ಯೌವನಸ್ಥನು ಮನೆಯಿಂದ ಹೊರಹಾಕಲ್ಪಟ್ಟು ದೇಶಭ್ರಷ್ಟನಾಗಿ ಸುಲಿಗೆಗಾರನಂತೆ ಹುಡುಕಾಡಲ್ಪಟ್ಟು ಜೀವನದ ಸುಸಂಸ್ಕರಿತ ಪ್ರಭಾವಗಳೆಲ್ಲವುಗಳಿಂದ ಹೊರತಾದವನು ಇಂಥಾ ಒಂದು ಮಟ್ಟದಲ್ಲಿ ದೇವರ ಮೇಲಿನ ಭಯಭಕ್ತಿಯನ್ನು ಉಳಿಸಿಕೊಂಡಂಥದ್ದೇ. ಅಯ್ಯೋ, ಎಲ್ಲಾ ಅನುಕೂಲಕರವಾದ ಪರಿಸ್ಥಿತಿಯಲ್ಲಿರುವ ಅದೆಷ್ಟು ಮಂದಿ ಕ್ರೈಸ್ತರು ತಮ್ಮ ಕೈಯಲ್ಲಿ ಸತ್ಯವೇದ ಹಾಗು ಅದರ ಸಹಾಯಕ ಗ್ರಂಥಗಳು ಮುಂತಾದವುಗಳನ್ನು ಹೊಂದಿದವರಾಗಿ ಸತ್ಯವೇದದ ಅಧ್ಯಯನಗಳನ್ನು ಮಾಡುವವರಾಗಿದ್ದಾಗ್ಯೂ ಅವರು ಬಹು ಕೀಳು ನಿಷ್ಠೆಯ ಒಂದು ಮನೋಪ್ರವೃತ್ತಿಯನ್ನು ತೋರ್ಪಡಿಸುತ್ತಿರುವರು! ಆಗಾಗ್ಗೆ ಅದೆಷ್ಟು ಸಾರಿ ದೇವರು ಹಾಗು ಆತನ ಚಿತ್ತವು ಮರೆಯಲ್ಪಟ್ಟು ಸ್ವಾರ್ಥಭಾವವು ನಿರ್ಣಾಯಕವಾಗಿ ಅವರನ್ನು ನಿರ್ದೇಶಿಸುತ್ತಿರುವದು. ತನ್ನ ಜೀವನದ ಎಲ್ಲಾ ಪ್ರಮುಖ ಹಾಗುಹೋಗುಗಳಲ್ಲಿ ದೇವರ ಚಿತ್ತವನ್ನು ತಿಳಿದುಕೊಳ್ಳಲು ಪ್ರಾಮಾಣಿಕವಾಗಿ ಯತ್ನಿಸುವ ಒಬ್ಬ ಕ್ರೈಸ್ತನನ್ನು ನಿಜವಾಗಿಯೂ ದೇವರ ಚಿತ್ತಕ್ಕೆ ತನ್ನನ್ನು ಸಂಪೂರ್ಣವಾಗಿ ಅಧೀನಮಾಡಿಕೊಂಡು ಕೃಪೆಯಲ್ಲಿ ಅಭಿವೃದ್ಧಿಹೊಂದುತ್ತಿರುವದಕ್ಕೆ ಒಂದು ಪ್ರಮಾಣವೆಂದು ಪರಿಗಣಿಸಬಹುದು. "ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು; ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು." [ಜ್ಞಾನೋಕ್ತಿ 3:6]

ದಾವೀದನು ತರಬೇತಿಪಡೆದ ಅನುಭವಶಾಲೆಯು ಒಂದು ನಯವಿನಯವಿಲ್ಲದ್ದೆಂದು ಪರಿಗಣಿಸಬಹುದಾದರೂ ಆತನು ಹೇಗೂ ಅದರಲ್ಲಿ ಅನೇಕ ಪಾಠಗಳನ್ನು ಸ್ಪಷ್ಟವಾಗಿ ಕಲಿತಿದ್ದನು. ಆತನ ಮೊದಲನೇ ವಿಚಾರಣೆಯು "ನಾನು ಯೆಹೂದದೇಶದ ಯಾವುದೇ ಒಂದು ಪಟ್ಟಣಕ್ಕೆ ಹೋಗಬಹುದೋ?" ಎಂದಾಗಿತ್ತು. ಉತ್ತರವು ಅನುಕೂಲಕರವಾಗಿತ್ತು. ನಂತರದ ಪ್ರಶ್ನೆಯು: "ಯಾವ ಪಟ್ಟಣಕ್ಕೆ?" ಅಂದರೆ ಯಾವ ಪಟ್ಟಣವು ನನ್ನ ಪ್ರಧಾನ ಕಾರ್ಯಸ್ಥಳ ಅಥವಾ ರಾಜಧಾನಿಯಾಗುವದು? ಎಂದಾಗ ದೇವರು ಹೆಬ್ರೋನಿಗೆ ಹೋಗಲು ಆದೇಶಿಸಿದ್ದನು. ತನ್ನ ಸ್ವಕುಲದ ಜನರು ತನ್ನನ್ನು ಚೆನ್ನಾಗಿ ತಿಳಿದಿದ್ದು ತಾನು ಏಕೆ ಅರಸನಾದ ಸೌಲನಿಂದ ಹಿಂಸಿಸಲ್ಪಟ್ಟಿದ್ದೆನೆಂದು ಅರ್ಥಮಾಡಿಕೊಂಡಿದ್ದರೆಂಬುದನ್ನು ದಾವೀದನು ಬುದ್ಧಿವಂತಿಕೆಯಿಂದ ಅಂದಾಜುಮಾಡಿದ್ದನು. ದಾವೀದನಿಗೆ ತನ್ನ ಸ್ವದೇಶದಲ್ಲಿ ಗೌರವವಿಲ್ಲದೆ ಇರಲಿಲ್ಲ ಅಲ್ಲದೆ ತನ್ನ ಸ್ವಕುಲದವರಲ್ಲಿ ವಿಶ್ವಾಶವಿಲ್ಲದೆ ಇರಲಿಲ್ಲ. ಆದರೆ ಇವೆಲ್ಲವುಗಳೊಡನೆ ಆತನು ದೈವ ಜ್ಞಾನ ಹಾಗು ದೈವಬಲದಲ್ಲಿ ವಿಶೇಷವಾದ ವಿಶ್ವಾಸವುಳ್ಳವನಾಗಿದ್ದನು. ದೇವರು ತನ್ನನ್ನು ನಡೆಸುತ್ತಿರುವನೆಂದೂ ಹಾಗೂ ತನ್ನ ಮೇಲೆ ಈಗಾಗಲೇ ಅಭಿಷೇಕ ತೈಲವು ಸುರಿಯಲಾಗಿರುವದೆಂದೂ ಅಲ್ಲದೆ ದೇವರು ಮುಂದಿನ ಹೆಜ್ಜೆಯನ್ನು ತೋರಿಸುವವರೆಗೂ ಅದು ಕೇವಲ ಒಂದು ಸಮಯದ ಪ್ರಶ್ನೆಯೆಂಬುದನ್ನು ಗುರುತಿಸಿಕೊಂಡಿದ್ದನು. ಹೀಗಿದ್ದರೂ ದೇವರಿಗಾಗಿ ಕಾದುಕೊಂಡಿರುವದು ತನ್ನ ಕರ್ತವ್ಯವೆಂದು ಹಾಗು ತನಗೆ ವಾಗ್ದಾನಮಾಡಲ್ಪಟ್ಟ ಸಂಗತಿಗಳನ್ನು ಹಿಡಿದುಕೊಳ್ಳಲು ಆತುರದಿಂದ ಪ್ರಯತ್ನಿಸಬಾರದೆಂಬುದನ್ನು ಗುರುತಿಸಿ–ಕೊಂಡಿದ್ದನು. ಆತನು ಹತ್ತು ವರುಷಗಳಿಗಿಂತಲು ಹೆಚ್ಚು ಸಮಯದಿಂದ ಕಾದುಕೊಂಡಿದ್ದನು. ದೇವರಿಗಾಗಿ ತಾಳ್ಮೆಯಿಂದ ಕಾದುಕೊಂಡಿರಲು ಆತನಿಗೆ ಇನ್ನೂ ಸಾಮರ್ಥ್ಯವಿತ್ತು.

ಎಷ್ಟು ಮುಖ್ಯವಾದ ಒಂದು ಪಾಠವಿರುವದು ನಿಜರೂಪದ ದಾವೀದನಿಗೆ ಅಂದರೆ [ಶಿರಸ್ಸು ದೇಹವನ್ನು ಹೊಂದಿರುವ] ಪ್ರಿಯನಾದ ಕ್ರಿಸ್ತನಿಗೆ! ಅಪೋಸ್ತಲನು ನಮ್ಮ ಕರ್ತನಾದ ಯೇಸುವಿನ ಬಗ್ಗೆ ಸಾಕ್ಷಿಕೊಟ್ಟು–ರಾಜ್ಯವೆಂಬದು ಆತುರದಿಂದ ಹಿಡಿದುಕೊಳ್ಳುವ ಅಥವಾ ಕಸಿದುಕೊಳ್ಳುವ ಸಂಗತಿಯಲ್ಲವೆಂದು ಹೇಳಿದ್ದನು. ಆತನು ತಂದೆಯ [ನೇಮಕದ] ಸಮಯಕ್ಕಾಗಿ ಕಾದುಕೊಂಡಿದ್ದನು. ಈ ಮಧ್ಯೆ ಆತನು ತಂದೆಯ ಚಿತ್ತಾನುಸಾರವಾಗಿ ತನ್ನನ್ನು ತಗ್ಗಿಸಿಕೊಂಡವನಾಗಿ ಏನೇ ಆಗಲೀ ತಂದೆಯ ಚಿತ್ತವನ್ನು ನೆರವೇರಿಸಲು ಸಂತೋಷವುಳ್ಳವನೆಂಬುದಕ್ಕೆ ಸಾಕ್ಷ್ಯಾಧಾರವನ್ನು ನೀಡಿದ್ದನು. ಸಮಸ್ತಕ್ಕೂ ಬಾಧ್ಯನಾಗಿದ್ದು ಉನ್ನತ ಸ್ಥಾನಕ್ಕೆ ಏರಿಸಲಾಗಿದ್ದ ಆ ಒಬ್ಬನಲ್ಲಿ ಇದ್ದ ಈ ನಂಬಿಗಸ್ತಿಕೆ ಹಾಗು ತಾಳ್ಮೆಯಿಂದ ಕಾದುಕೊಂಡಿರುವಿಕೆಯು ದೇವರಿಗೆ ಮೆಚ್ಚಿಗೆಯಾಗಿತ್ತು. ಹೀಗೆಯೇ ಆತನ ಹಿಂಬಾಲಕರು ಹಾಗು [ಆತನ ದೇಹದ] ಅಂಗಗಳಾದ ನಾವು ಪ್ರವಾದಿಯಾದ ದಾವೀದನ ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಿರುವದು **"ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು."** [ಕೀರ್ತನೆ 27:14] ನಮ್ಮಲ್ಲಿ ಕೆಲವರು ಅನುಭವದ ಮೂಲಕವಾಗಿ ಕಲಿತುಕೊಂಡಿರುವದೇನಂದರೆ ಯಾವುದೇ ಸಂಗತಿಯಲ್ಲಿ ದೇವರಿಗಿಂತ ಮುಂದಾಗಿ ಹೋಗಲು ಪ್ರಯತ್ನಿಸುವದು ಅಪಾಯಕಾರಿಯೆಂಬುದು. ನಮ್ಮ ವಿಷಯದಲ್ಲಿ ನಾವೇ ಮಾರ್ಗದರ್ಶಿಸಿಕೊಳ್ಳುವಷ್ಟು ನಾವು ಬುದ್ಧಿವಂತರೇನಲ್ಲ. ನಿಜವಾಗಿಯೂ ಕವಿಯು ಅದನ್ನು ಹೀಗೆ ವ್ಯಕ್ತಪಡಿಸಿರುವನು"

"ಬಹಳಷ್ಟು ಒಳಗೊಂಡಿರುವ ಸಂಗತಿಗಳನ್ನು
ಮುಟ್ಟಲು ನಮಗೆ ಅಂಜಿಕೆಯಾಗುವದು."

ಕೆಲವು ಸಮಯಗಳಲ್ಲಿ ನಮ್ಮ ಪರಿಸ್ಥಿತಿಯು ಸೂಕ್ಷ್ಮವಾಗಿರುವದೆಂಬುದನ್ನು ನಾವು ಗ್ರಹಿಸಿಕೊಳ್ಳಲು ಸಾಧ್ಯವಾದರೆ, ಇದು ನಮ್ಮನ್ನು ಅತಿ ನಮ್ರತೆಯುಳ್ಳವರನ್ನಾಗಿ ಹಾಗು ಎಚ್ಚರಿಕೆಯುಳ್ಳವರನ್ನಾಗಿ ಮಾಡುತ್ತದೆ. ಅದು ಕೇವಲ ನಮ್ಮ ಸ್ವಂತ ಹಿತಾಸಕ್ತಿ ಹಾಗು ನಿರಂತರ ಮಹಿಮೆಯು ಅಪಾಯದ ಸ್ಥಿತಿಗೆ ತರುವದು ಮಾತ್ರವಲ್ಲದೆ ಕ್ರಿಸ್ತನ ದೇಹದ ಅಂಗಗಳಾದ ಇತರ ಜೊತೆ ಸದಸ್ಯರ ಹಿತಾಸಕ್ತಿಯು ಸಹ ಅಪಾಯಕ್ಕೆ ತರುತ್ತದೆ. ನಾವು ವಾಗ್ದಾನದ ಫಲವನ್ನು ಹೊಂದಿದಾಗ್ಯೂ ಒಂದು ದುಡುಕಿನ ಮಾತು, ಒಂದು ವಿವೇಚನಾರಹಿತ ಕಾರ್ಯ, ಯಾವುದೇ ಅರ್ಥದಲ್ಲಿ ಪರಿಗಣಿಸದೆ ಇರುವಂಥದ್ದು ಹೃದಯವನ್ನು ಅನಾನುಕೂಲಕರ ಸನ್ನಿವೇಶಕ್ಕೆ ನಡೆಸಬಹುದು. ಕರ್ತನು ನಮ್ಮನ್ನು ನಡೆಸುವ ವಿಧಾನಕ್ಕೆ ಬದಲಾಗಿ ವಾಸ್ತವದಲ್ಲಿ ಅದು ಶ್ರಮಸಂಕಟಗಳ ಮೂಲಕ–ವಾಗಿರಬಹುದು.

ನಿಮ್ಮ ಸೈರಣೆಯು ಎಲ್ಲರಿಗೂ ಗೊತ್ತಾಗಲಿ

ಕೆಲವರು ಸೌಲನ ಕಡೆಗಿರುವ ದಾವೀದನ ಮನಃಸ್ಥಿತಿ ಹಾಗು ಪ್ರವೃತ್ತಿಗಳನ್ನು ತಪ್ಪಾಗಿ ಎಣಿಸಿಕೊಂಡವರಾಗಿ ತಾವು ಹೇಗೆ ಸೌಲನ ಉಚ್ಚಾಟನೆಗೆ ಸಹಕರಿಸಿದೆವೆಂಬ ಸಂಗತಿಗಳನ್ನು ಹೇಳಿಕೊಳ್ಳುವದರ ಮೂಲಕವಾಗಿ ದಾವೀದನ ಅನುಗ್ರಹ ಪಡಕೊಳ್ಳುವೆವೆಂದು ಭಾವಿಸಿದ್ದರು. ಆದರೆ ಅಂಥವರು ದಾವೀದನಿಂದ ಪ್ರಾಮಾಣಿಕವಾಗಿ ಗದರಿಸಲ್ಪಟ್ಟಿದ್ದರು. ದಾವೀದನು ಪ್ರತಿಯೊಂದು ಸನ್ನಿವೇಶದಲ್ಲಿಯೂ ಅರಸನಾದ ಸೌಲನ ಬಗ್ಗೆ ದಾಕ್ಷಿಣ್ಯಭಾವದಿಂದ ನುಡಿದಿದ್ದು, ಅದು ಕೇವಲ ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡುವದು ತಪ್ಪಾಗುವದು ಮಾತ್ರವಲ್ಲದೆ ಸೌಲನು ಅರಸನಾಗಿ ದೇವರ ಪ್ರತಿನಿಧಿಯೆಂಬ ಕಾರಣಕ್ಕಾಗಿ ಸಹ ಆಗಿತ್ತು. [ಸೌಲನು] **"ದೇವರ ಅಭಿಷಕ್ತನು"** ಎಂಬ ಶೈಲಿಯಲ್ಲಿ ದಾವೀದನು ತಾನೇ ನುಡಿದಿದ್ದನು. ತನ್ನ ಶತ್ರುವಿನ ಸಾವಿನಿಂದ ತನ್ನನು ಹೆಚ್ಚಿಸಿಕೊಳ್ಳುವದಕ್ಕೆ ಬದಲಾಗಿ ದಾವೀದನು ಯಾಬೇಷಿನ ಜನರಿಗೆ ಅವರು ಸೌಲನು ಹಾಗು ಅವನ ಮಕ್ಕಳಿಗೆ ಒಂದು ಗೌರವಯುತವಾಗಿ ಶವಸಂಸ್ಕಾರವನ್ನು ಮಾಡಿದ್ದರಿಂದ ಅವರಿಗೆ ಒಂದು ವಿಶೇಷ ಪ್ರಸಂಶನಾ ಪತ್ರವನ್ನು ಕಳುಹಿಸಿದ್ದನು. ಅವರು ತನಗೆ ಶತ್ರುತ್ವದ ಕಾರ್ಯವೆಸಗಿದ್ದರೆಂದು ತಾನು ಎಣಿಸುವದಿಲ್ಲವೆಂದು ತಿಳುಕೊಳ್ಳಬೇಕೆಂದು ಬಯಸಿದ್ದುದು ಮಾತ್ರವಲ್ಲದೆ ವಾಸ್ತವದಲ್ಲಿ ಅದು ಒಂದು ಸೌಜನ್ಯಪೂರ್ಣವಾದ ನಿಷ್ಠೆಯುಳ್ಳ ಕಾರ್ಯವೆಂದೂ ಅದರಲ್ಲಿ ತಾನೂ ಒಂದು ಪಾಲು ತೆಗೆದುಕೊಳ್ಳಲು ಸಂತೋಷಿಸುತ್ತಿದ್ದೆನೆಂದು ತಿಳಿಸಿದ್ದನು. ಈ ಕರುಣೆಯನ್ನು ತೋರಿಸಿದ್ದುದಕ್ಕಾಗಿ ಅವರು ದೇವರಿಂದ ಆಶೀರ್ವದಿಸಲ್ಪಟ್ಟವರೆಂದು ಹೇಳಿದ್ದನು. ಅಲ್ಲದೆ ಈಗ ದೇವರು ನಿಮಗೆ ಕರುಣೆ ತೋರಿಸುವನೆಂದು ಮತ್ತು ಈ ಕರುಣೆಗಾಗಿ ನಾನೂ ಸೂಕ್ತವಾದ ಪ್ರತಿಫಲವನ್ನು ಕೊಡುವದಾಗಿ ಹೇಳಿದ್ದನು. ಆದುದರಿಂದ ನಿಮ್ಮ ಕೈಗಳು ಬಲವುಳ್ಳದ್ದಾಗಿರಲಿ, ಶೂರರಾಗಿರಿ, ಯಾಕಂದರೆ ನಿಮ್ಮ ಒಡೆಯನು ಸತ್ತಿರುವದಲ್ಲದೆ ಯೆಹೂದ ಮನೆತನದವರು ನನ್ನನ್ನು ತಮ್ಮ ಮೇಲೆ ಅರಸನನ್ನಾಗಿ ಅಭಿಷೇಕಿಸಿರುವರೆಂದು ತಿಳಿಸಿದ್ದನು.

ದಾವೀದನು ಅನುಸರಿಸಿದ ವಿಧಾನವು ಪ್ರಕರಣ ಸಂಬಧದ ಒಂದು ನೀತಿಯಾಗಿದ್ದು ಆತನು ಸೌಲನು ಹಾಗು ಅವನ ಮಕ್ಕಳಿಗೆ ಗೌರವಯುತವಾಗಿ ಹೂಣಿಟ್ಟದ್ದಕ್ಕಾಗಿ ಯಾಬೇಷಿನ ಜನರನ್ನು ವಿರೋಧಿಸದಷ್ಟು ಬುದ್ಧಿಚಾತುರ್ಯದವನಾಗಿದ್ದನೆಂದು ಕೆಲವರು ವಿವಾದಿಸಬಹುದು. ಸಂಗತಿಯು ಹೀಗಿದ್ದಲ್ಲಿಯೂ ಸಹ ಇದು ದಾವೀದನ ಹೆಸರಿಗೆ ಅಪಮಾನಕರವಾಗುವದಕ್ಕೆ ಬದಲಾಗಿ ಒಳ್ಳೆಯ ಹೆಸರನ್ನು ತರುವದಾಗಿತ್ತು. ಅದು ದಾವೀದನು ಸ್ವಸ್ಥಚಿತ್ತದ ಆತ್ಮವನ್ನು ಅಂದರೆ ದೇವರ ಆತ್ಮವನ್ನು, ಹೊಂದಿರುವ–ನೆಂಬುದನ್ನು ತೋರಿಸುತ್ತಿತ್ತು. ಆದರೆ ಯಾವನಾದರೂ ಕರುಣೆಯುಳ್ಳ ಕಾರ್ಯವನ್ನು ಮಾಡುವ ಬಯಕೆ–ಯುಳ್ಳವನಾಗಿದ್ದಲ್ಲಿ ಅವನ ಕಾರ್ಯೋದ್ದೇಶವನ್ನು ವಿರೋಧಿಸುವದು ಅನವಶ್ಯಕವೆಂದು ನಾವು ನೆನಸುವೆವು. ಉದ್ದೇಶವು ಕೆಟ್ಟದ್ದೆಂದು ಅರೋಪಿಸುವದಕ್ಕೆ ಬದಲಾಗಿ ನಾವು **"ಕೆಟ್ಟದ್ದದ್ದರ ಬಗ್ಗೆ ಯೋಚಿಸಬಾರದು."** ಇದೇ ತತ್ವವು ದೇವಜನರಿಗೆ ಅನ್ವಯವಾಗುವದು. ವ್ಯಾಪಾರಸ್ಥರು ದಾನಧರ್ಮ ಮುಂತಾದವುಗಳಿಗೆ ಧನಸಹಾಯ ಮಾಡಿದ್ದಲ್ಲಿ ಅದರ ಉದ್ದೇಶವು ತಪ್ಪಾದುದೆಂದು ಅರೋಪಿಸಬಾರದು. ವಾಸ್ತವದಲ್ಲಿ ಮರುಪ್ರಯೋಜನ ಹೊಂದುವಂಥ ಆಲೋಚನೆಯು ಕೆಲವರ ವಿಷಯದಲ್ಲಿ (ಬಹುಶಃ ಅನೇಕರಲ್ಲಿ) ಸತ್ಯಸಂಗತಿ–ಯಾಗಿರಬಹುದು; ಆದರೆ ಯಾವ ವಿಧದಲ್ಲಿಯೂ ಆ ಕಾರ್ಯವು

ಔದಾರ್ಯ ರಹಿತ ಉದ್ದೇಶವುಳ್ಳದ್ದಾಗಿದ್ದು ಪೂರ್ಣವಾಗಿ ನೀಚತನದ್ದಾಗಿರುವಂಥದ್ದಲ್ಲ. ಜೀವನದಲ್ಲಿ ನಡೆಯುವ ಕಾರ್ಯವೆಲ್ಲವುಗಳ ಬಗ್ಗೆ ಕರುಣೆಯಿಂದ ಆಲೋಚಿಸಲು ನಾವು ಪ್ರಯತ್ನಿಸಿದ್ದಲ್ಲಿ ನಾವು ಬಹು ಧನ್ಯರೇ. ಅಂಧನಾದ ಒಬ್ಬ ಸಹೋದರನು ಠೀಕಿಸಿ ಹೇಳಿದ್ದೇನಂದರೆ "ನನ್ನ ಕುರುಡುತನವು ಅನೇಕ ಅಹಿತಕರ ಪರಿಸ್ಥಿತಿಯಿಂದ ನನ್ನನ್ನು ಪಾರುಮಾಡಿ–ರುವದರಲ್ಲಿ ನನಗೆ ಸಂದೇಹವಿಲ್ಲ. ನಾನು ಜನರನ್ನು ಸಂಧಿಸುವಾಗ ಅವರ ಸಂತೋಷವುಳ್ಳವರೂ ಉದಾರಿಗಳೂ ಹಾಗು ಒಳ್ಳೆಯವರಾಗಿರುವರೆಂದು ಭಾವಿಸಲು ನಾನು ಪರಿಶ್ರಮಿಸುತ್ತೇನೆ; ನಾನೇನಾದರೂ ನನ್ನ ದೃಷ್ಟಿಯನ್ನು ಹೊಂದಿದ್ದಲ್ಲಿ ನಾನು ಬಯಸಿದಂತೆ ಅವರ ಬಗ್ಗೆ ಸೌಹಾರ್ದತೆ ಹಾಗು ಉದಾರಭಾವದಿಂದ ಆಲೋಚಿಸಲು ಅಸಾಧ್ಯವೆಂದು ನಾನು ಪರಿಗಣಿಸಬಹುದು."

ದಾವೀದನು ಯೆಹೂದದ ಅರಸನಾಗಿಲ್ಲವೆಂಬ ಅಂಶವು ಯಾಬೇಷಿನ ಜನರಿಗೆ ಒಂದು [ತಿಳುವಳಿಕೆಯ] ಸೂಚನೆಯಾಗಿದ್ದಲ್ಲಿ ಅವರು ಬಹುಶಃ ಆತನನ್ನು ತಮ್ಮ ಮೇಲೆ ಅರಸನನ್ನಾಗಿ ಮಾಡಿಕೊಳ್ಳಲು ಬಯಸಬಹುದಿತ್ತು; ಯಾಕಂದರೆ ದಾವೀದನು ಆಗ ಸೌಲನ ಸ್ಥಾನದಲ್ಲಿ ಅರಸನಾಗಿದ್ದನು; ದಾವೀದನು ಹತ್ತು ವರುಷಗಳು ಸೌಲನಿಂದ ಹಿಂದಟ್ಟುವವನಾಗಿದ್ದನು. ಈ ಒಂದು ಸಂಗತಿಯು ಯಾಬೇಷಿನವರು ಮುಂದುವರೆದು ಕೆಟ್ಟದ್ದಾಗಿ ನಡೆದುಕೊಳ್ಳುವಂತೆಯೂ ಮಾಡಬಹುದಿತ್ತು. ನಾವು ತಿಳಿದಿರುವಂತೆ ಇವೆಲ್ಲವೂ ವಾಸ್ತವದ ಸಂಗತಿಗಳಾಗಿದ್ದವು.

ನಾವು ನಂಬುವವರಾಗಿ ನಡೆಯುವೆವು

ತಾನು ಯೆಹೂದ ಕುಲದವರಿಂದ ಮಾನ್ಯತೆ ಪಡೆದ ನಂತರ ಇತರ ಕುಲಗಳು ಬಹು ತ್ವರಿತವಾಗಿ ತನ್ನ ಜಯ ಧ್ವಜದ ಅಡಿಗೆ ಬುರುವರೆಂಬುದನ್ನು ದಾವೀದನು ನಿರೀಕ್ಷಿಸಿರುವ ಸಾದ್ಯತೆಯು ಬಹುವಾಗಿತ್ತು. ಹೇಗೂ ಇದು ನೆರವೇರು–ವಂತಾಗಲು ಆತನು ಯಾವ ನಡೆಯನ್ನಾದರೂ ತೆಗೆದುಕೊಂಡಿರುವ ಬಗ್ಗೆ ನಮಗೆ ತಿಳಿಸಲಾಗಿಲ್ಲ. ಆತನು ದೇವರಿಗಾಗಿ ಕಾದುಕೊಂಡಿದ್ದನು. ಖಂಡಿತವಾಗಿಯೂ ಇದು ಒಂದು ಬಹು ಧೀರ್ಘವಾದ ಕಾಯುವಿಕೆಯಾಗಿತ್ತೂ ಸಹ. ಅಬ್ನೇರನು ಇಸ್ರಾಯೇಲ್ಯರ ಹನ್ನೊಂದು ಕುಲಗಳ ಅರಸನಾದ ಈಷ್ಬೊಶೇತನ ಸೇನಾಧಿಪತಿಯಾಗಿ ಇಸ್ರಾಯೇಲ್ಯರ ಶತ್ರುಗಳ ಮೇಲೆ ಯುದ್ಧವನ್ನು ಮಾಡಿ ಕೆಲವು ಮಟ್ಟಿನ ಗೆಲವು ಸಾಧಿಸಿದ್ದನು. ಅರಸನಾದ ದಾವೀದನಿಗೆ ತನ್ನ ಕಿರೀಟಧಾರಣೆಯ ಸಮಯದಲ್ಲಿ ನಿಶ್ಚಿತವಾದ ಕಾರ್ಯಕ್ರಮಗಳನ್ನು ಈಡೇರಿಸಲು ದೇವರು ಉದ್ದೇಶಿಸಿರುವನೋ ಇಲ್ಲವೋ ಎಂದು ಆಶ್ಚರ್ಯಪಡುವ ಅವಕಾಶಗಳು ಹೇರಳವಾಗಿತ್ತು. ಹೊರಗಿನ ವೈರಿಗಳ ಮೇಲೆ ವಿಜಯ ಸಾಧಿಸಿದ ಪ್ರತಿಷ್ಠೆಯ ದೆಸೆಯಿಂದ ಈಷ್ಬೊಶೇತನು ತನ್ನ ಗಮನವನ್ನು ಯೆಹೂದ ಕುಲದ ಕಡೆಗೆ ತಿರುಗಿಸಿದ್ದು, ದಾವೀದನ ನಡೆಯು ಕಾನೂನಿನ ಅನುಸಾರವಾಗಿರುವ ಮುಖ್ಯಸ್ಥನಿಗೆ ವಿರುದ್ಧವಾಗಿರುವ ದಂಗೆಯೆಂದು ಹೇಳಿಕೊಂಡಿದ್ದನು. ಇದರ ಪರಿಣಾಮವು ಅಭ್ಯುದಯವುಳ್ಳ ಆಳ್ವಿಕೆಯಲ್ಲಿ ಸೇರುವದಕ್ಕೆ ಬದಲಾಗಿ ಅಲ್ಲಿ ಒಂದು ಅಂತರ್ಯುದ್ಧ ಉಂಟಾಗಿತ್ತು. ಸಹೋದರರು ಸಹೋದರರಿಗೆ ವಿರುದ್ಧವಾಗಿ ಹೋರಾಡಿಕೊಂಡಿದ್ದರು; ಅಂದರೆ ದೇವಾನುಗ್ರಹಿತವಾದ ಒಂದು ಪಕ್ಷವು ಮತ್ತೊಂದರ ವಿರುದ್ಧವಾಗಿತ್ತು. ಅಲ್ಲದೆ ಇದು ಎರಡು ವರುಷಗಳವರೆಗೆ ಮುಂದುವರೆದಿದ್ದು, ಹೇಗೂ ಕ್ರಮೇಣ ದಾವೀದನಿಗೂ ಮತ್ತು ಆತನ ಸೇನೆಗೂ ಯಶಸ್ಸನ್ನು ತಂದುಕೊಟ್ಟಿತ್ತು. ಹೀಗೆ ನಾವು ಓದುವದು–"ದಾವೀದನು ಬಲಗೊಳ್ಳುತ್ತಾ ಬಂದನು, ಸೌಲನ ವಂಶವು ದುರ್ಬಲವಾಗುತ್ತಾ ಬಂದಿತು." [2 ಸಮುವೇಲ 3:1]

ಅಂತರಿಕ ಯುದ್ಧದ ಅವಧಿಯನ್ನು ಹಾಗು ದೇವಜನರ ಒಂದು ಗುಂಪು ಮತ್ತೊಂದು ಗುಂಪನ್ನು ಹೇಗೆ ಹಾನಿಗೊಳಿಸುತ್ತಿದ್ದರೆಂಬುದನ್ನು ಪರಿಗಣಿಸುವಾಗ ನಾವು ಆತ್ಮಿಕ ಇಸ್ರಾಯೇಲ್ಯರ ಬಗ್ಗೆ ನೆನಪಿಸಿಕೊಂಡು ಅವರಲ್ಲಿನ ಸಹೋದರರು ಕೆಲವು ಸಮಯದಲ್ಲಿ ಎಷ್ಟು ಬೇರ್ಪಟ್ಟವರಾಗಿದ್ದುದ್ದಲ್ಲದೆ ದೇವಾನುಗ್ರಹದ ಮುನ್ನಡೆಸುವಿಕೆಯಿಂದ ಎಷ್ಟು ಹೊರಬಂದಿ–ರುವರೆಂದರೆ ಪರಸ್ಪರ ಅವರು ವೈಷಮ್ಯವನ್ನು ಬೆಳೆಸಿಕೊಂಡು ಬರುವಂತಾಗಿರುವದು. ಅಯ್ಯೋ, ಅದು ಹೀಗಿರುವದೇ! ದೇವರ ಪ್ರೀತಿಯು ನಮ್ಮನ್ನು ಯಾವ ಸಮಯದಲ್ಲಾದರೂ ಒತ್ತಾಯ ಮಾಡದಿದ್ದಲ್ಲಿ ನಾವು ದೇವರ ಪ್ರೀತಿ ಮತ್ತು ಅನ್ಯೋನ್ಯತೆ ಯಿಂದ ತಿರಿಗಿಕೊಳ್ಳುವದು ಮಾತ್ರವಲ್ಲದೆ ಸಹೋದರರನ್ನು ಹೊಡೆದುರುಳಿಸಲು ಖಡ್ಗವನ್ನೂ ಬಳಸುವಂತಾಗುವದು. ಮುಂಬರುವ ದಿನಗಳಲ್ಲಿ ಆತ್ಮಿಕ ಇಸ್ರಾಯೇಲ್ಯರಲ್ಲಿ ಸಹೋದರನು ಸಹೋದರನಿಗೆ ವಿರುದ್ಧವಾಗಿರುವನು ಎಂಬ ಚಿತ್ರಣವನ್ನು ನಮ್ಮ ಮನಸ್ಸುಗಳಲ್ಲಿ ಮೂಡಿಸಿಕೊಂಡವರಾಗಿ ಹೃದಯಗಳಲ್ಲಿ ಅದನ್ನು ಮುದ್ರಿಸಿಟ್ಟುಕೊಳ್ಳೋಣ. ದೇವರ ರಾಜ್ಯವು ಸ್ಥಾಪಿತವಾಗುವದಕ್ಕೆ ಕೆಲವು ಸಮಯಗಳಿಗೆ ಮೊದಲು ದೇವರು ಇದನ್ನು ಬರಮಾಡುವನು. ಇತರರು ಎಷ್ಟೇ ಹೋರಾಡಿಕೊಂಡಿದ್ದರೂ ನಮ್ಮ ಆಯುಧಗಳು ಲೋಕಸಂಬಂಧವಾದವುಗಳು ಆಗದೇ ಇರಲಿ ಎಂಬುದನ್ನೂ, ನಮ್ಮ ಹೋರಾಡುವಿಕೆಯು ಒಡಂಬಡಿಕೆಯ ಮೂಲಕವಾಗಿ ದೇವರೊಡನೆ ಇರುವವರಿಗೆ ವಿರೋಧವಾಗಿ ಆಗದೇ ಇರಲೆಂದೂ, ಆದರೆ ಅದು ಆ ಮಹಾ ವಿರೋಧಿಯಾದ ಸೈತಾನನಿಗೆ ವಿರುದ್ಧವಾಗಿರಲೆಂಬುದನ್ನು ನಿರ್ಣಯಿಸಿಕೊಳ್ಳೋಣ. ಲೋಕಸಂಬಂಧವಾದ ಆಯುಧಗಳು ಕೇವಲ ಖಡ್ಗ ಬಂಧೂಕುಗಳು ಮಾತ್ರವಾಗಿರದಿದ್ದರೂ ಇತರರಿಗೆ ದೂಷಿಸಲು ಮತ್ತು ಗಾಯವನ್ನು ಉಂಟುಮಾಡಲು ನಾಲಿಗೆಯನ್ನು ಬಳಸಿದ್ದಲ್ಲಿ ಅದು ಬಹು ಹಾನಿಕರ ಹಾಗು ಮಾರಣಾಂತಿಕವಾಗುವದು. ನಾವು ದೇವರನ್ನು ಸ್ತುತಿಸುವ ನಾಲಿಯು ಯಾರಿಗಾದರೂ ಅದರಲ್ಲಿಯೂ ನಂಬಿಗಸ್ತ ಮನೆತನದವರಲ್ಲಿನ ಯಾರಿಗೂ ಹಾನಿಮಾಡಂತೆ ದೇವರು ಅದನ್ನು [ನಾಲಿಗೆಯನ್ನು] ಪ್ರತಿಬಂಧಿಸಲಿ.

ಎಲ್ಲಾ ಇಸ್ರಾಯೇಲ್ಯರ ಮೇಲಿನ ಅರಸನು

ಅಂತಿಮವಾಗಿ ಅರಸನಾದ ಈಷ್ಬೊಶೇತನು ಹಾಗು ಆತನ ಸೇನಾಧಿಪತಿಯಾದ ಅಬ್ನೇರನು ಅಮಾನವೀಯವಾಗಿ ಕೊಲೆ–ಯಾಗಿದ್ದು, ಈ ವಿಷಯದಲ್ಲಿ ದಾವೀದನು ಶಾಮೀಲಾಗಿರಲಿಲ್ಲ ವೆಂಬುದನ್ನು ನಾವು ಜಾಗರೂಕತೆಯಿಂದ ಗಮನಿಸುವವರಾಗಿ ದ್ದೇವೆ. ಅಲ್ಲದೆ ಸೌಲನ ಮಕ್ಕಳ ವಿಷಯವಾಗಿ ಹೇಳುವದಾದರೆ, ಯೋನಾತಾನನೊಡನೆ ದಾವೀದನು ಮಾಡಿಕೊಂಡ ಸ್ನೇಹದ

ಒಡಂಬಡಿಕೆಯು ಅವರಿಗೆ ಸಾಕಾದ ರಕ್ಷಣೆಯಾಗಿತ್ತು. ಹೇಗೂ ಈ ಜನರ ಮರಣವು ಇಸ್ರಾಯೆಲ್ ಜನರಿಗೆ ಸಂಗತಿಯನ್ನು ಮುಂದುವರೆಸಲು ಮಾರ್ಗತೆರೆದಂತಾಗಿದ್ದು ದೇವರ ಅನುಗ್ರಹವು ದಾವೀದನೊಂದಿಗೆ ಇದ್ದುದ್ದನ್ನೂ, ದಾವೀದನು ದೇವರು ಒಪ್ಪುವ ಮನುಷ್ಯನೆಂದೂ [ಅಂದರೆ, ದೇವರಲ್ಲಿದ್ದ ಮನಸ್ಸನ್ನೇ ಹೊಂದಿದ್ದವನೆಂದೂ], ಒಬ್ಬ ಆಡಳಿತಗಾರನಾಗಿ ಅವನು ತನ್ನನ್ನು ಅರಸನನ್ನಾಗಿ ಒಪ್ಪಿಕೊಂಡ ಜನರಿಗೆ ಶೌರ್ಯದಿಂದ ಸೇವೆಮಾಡುತ್ತಿರುವನೆಂಬುದನ್ನು ಅವರು ಗ್ರಹಿಸಿಕೊಂಡಿದ್ದರು; ಇಸ್ರಾಯೇಲ್ಯರಲ್ಲಿ ಸ್ವಸ್ಥತೆಯಿಂದ ಅಲೋಚಿಸುವವರನ್ನು ಇದು ಈ ಪಾಠದಲ್ಲಿ ಹೇಳಿರುವ ಮುಂದಿನ ನಿರ್ಣಯಕ್ಕೆ ಬರುವಂತೆ ನಡೆಸಿತ್ತು – "ಅನಂತರ ಇಸ್ರಾಯೇಲ್ಯರ ಎಲ್ಲಾ ಕುಲಗಳವರು ಹೆಬ್ರೋನಿನಲ್ಲಿದ್ದ ದಾವೀದನ ಬಳಿಗೆ ಬಂದು ಅವನಿಗೆ–ನಾವು ನಿನ್ನ ರಕ್ತಸಂಬಂಧಿಗಳಾಗಿದ್ದೇವೆ; ಹಿಂದಿನ ದಿವಸಗಳಲ್ಲಿ ಅಂದರೆ ಸೌಲನ ಆಳಿಕೆಯಲ್ಲಿ ಇಸ್ರಾಯೇಲ್ಯರ ದಳಪತಿಯಾಗಿ ಹೋಗುತ್ತಾ ಬರುತ್ತಾ ಇದ್ದವನು ನೀನೇ. ನಿನ್ನನ್ನು ಕುರಿತು ಯೇಹೋವನು–ನೀನು ನನ್ನ ಪ್ರಜೆಗಳಾದ ಇಸ್ರಾಯೇಲ್ಯರ ನಾಯಕನೂ ಪಾಲಕನೂ ಆಗಿರುವಿಯೆಂದು ಹೇಳಿದ್ದಾನಷ್ಟೆ ಅಂದರು." ಕಡೆಯಲ್ಲಿ ಅವರು ದೇವರ ಸ್ವರಕ್ಕೆ ಕಿವಿಗೊಡುವವರಾಗಿದ್ದರು. ದೇವರು ಈ ಹಿಂದೆಯೇ ಸಂಗತಿಗಳನ್ನು ಇಂಥಾ ಒಂದು ಸ್ಥಿತಿಗೆ ತರಲು ಸಾಧ್ಯವಿತ್ತೆಂಬುದು ನಿಸ್ಸಂದೇಹವಾಗಿತ್ತು. ಈ ವಿಧಾನದಲ್ಲಿ ದೇವರ ಯಾವ ಉದ್ದೇಶವೂ ಇರುತ್ತಿರಲಿಲ್ಲ. ನಮ್ಮೆಲ್ಲರ ಸಂಗತಿಗಳೂ ಹೀಗೆಯೇ ಇದ್ದವೆಂಬುದನ್ನು ನಾವು ಅರಿತು–ಕೊಂಡಲ್ಲಿ ಮಾತ್ರ ಇದು ನಮಗೆ ತಿಳಿದುಬರುವದು. ಆದಿಯಲ್ಲೇ ಅಂತ್ಯವನ್ನು ಬಲ್ಲವನಾದ ದೇವರು ಬುದ್ಧಿವಿವೇಕಗಳಿಂದ ತಮ್ಮ ಜನರ, ಅದರಲ್ಲಿಯೂ ವಿಶೇಷವಾಗಿ, ತನ್ನ ಅಭಿಷಕ್ತ ವರ್ಗದ ವ್ಯಕ್ತಿಗಳಾಗಿರುವವರ ಒಳಿತಿಗಾಗಿ ಮಾರ್ಗದರ್ಶನ ಮಾಡುತ್ತಿರುವನು.

ಅರಸನಾದ ದಾವೀದನು ಇಸ್ರಾಯೇಲ್ ಜನರೊಡನೆ ಒಂದು ಒಪ್ಪಂದವನ್ನು ಅಥವಾ ಒಕ್ಕೂಟವನ್ನು ಮಾಡಿಕೊಂಡನೆಂದು ನಮ್ಮ ಪಾಠವು ತಿಳಿಸುತ್ತದೆ. ಈ ಮೂಲಕವಾಗಿ ಆತನು ಅರಸನಾಗಿ ಒಂದು ಸೀಮಿತವಾದ ರೀತಿಯಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ರಾಜ್ಯಭಾರಮಾಡಲು ಒಪ್ಪಿಕೊಂಡಿದ್ದನೆಂಬುದನ್ನು ಇದು ಸೂಚಿಸುತ್ತದೆ. ಆತನು ಒಂದು ಒಡಂಬಡಿಕೆಯನ್ನು ಅಂದರೆ ಜನರ ಹಕ್ಕುಗಳು ಯಾವುದರಿಂದ ರೂಪುಗೊಂಡಿರುತ್ತದೆಂಬ ಹಾಗು ಅರಸನ ಪಾರಂಪರ್ಯವಾದ ಹಕ್ಕುಗಳು ಯಾವುದೆಂಬುದನ್ನು ಸೂಚಿಸುವ ಒಂದು ಸಂವಿಧಾನವನ್ನು ಮಾಡಿದ್ದನು. ಇಸ್ರಾಯೇಲ್ಯರಲ್ಲಿನ ಈ ಸಂಘಟನೆಯು ಅವರು ಲೋಕದಲ್ಲಿ ಅತಿ ಮುಂದುವರೆದ ಜನರೆಂಬುದನ್ನು ಸೂಚಿಸುತ್ತದೆ; ಯಾಕಂದರೆ ಇದುವರೆಗೂ ಚರಿತ್ರೆಯಿಂದ ನಾವು ಕಲಿತುಕೊಳ್ಳಲು ಸಾಧ್ಯವಾಗಿರುವದೇನಂದರೆ ಆ ಕಾಲದಲ್ಲಿನ ಅರಸರು ತಮ್ಮದೇ ಆದ ಅಭಿಪ್ರಾಯದ ಮೇರೆಗೆ ಆಳ್ವಿಕೆಮಾಡುವಂಥ ನಿರಂಕುಶ ಪ್ರಭುಗಳಾಗಿದ್ದು ಜನರ ಹಕ್ಕು ಸ್ವಾತಂತ್ರ್ಯಗಳನ್ನು ಧಮನಮಾಡಿದ್ದರೆಂಬದೇ. ದಾವೀದನು ಇಸ್ರಾಯೇಲ್ಯರೆಲ್ಲರ ಮೇಲೆ ಅರಸನಾಗಿ ಉನ್ನತ ಪದವಿಯ ಏರುವಿಕೆಗೆ ಸಂಬಂಧಿಸಿದ ಕುತೂಲಕಾರಿಯಾದ ಆಚರಣೆಯ ಹಾಗು ದಾವೀದನ ವಿಷಯದಲ್ಲಿ ಜನರು ಸಂತೋಷಪಟ್ಟದ್ದರ ಬಗ್ಗೆ 1 ಪೂರ್ವಕಾಲ ವೃತ್ತಾಂತ 12:23–40ರಲ್ಲಿ ವಿಪುಲವಾಗಿ ದಾಖಲಾಗಿರುವದು.

ರಾಜ್ಯವನ್ನು ಪಡೆಯಲು ಕಾದುಕೊಂಡಿರುವದರಲ್ಲಿ ದಾವೀದನಿಗಾದ ಅನುಭವಗಳು ಮತ್ತು ಆತನು ಕಲಿತುಕೊಂಡ ಪಾಠಗಳು ಅಲ್ಲದೆ ಅಭಿವೃದ್ಧಿಪಡಿಸಿಕೊಂಡ ಗುಣಗಳು ಹಾಗು ಸಿದ್ಧತೆಗಳು ಇವೆಲ್ಲವು ಆತನು ಬುದ್ಧಿವಂತಿಕೆ ಹಾಗು ಔದಾರ್ಯ–ವುಳ್ಳವನಾಗುವಂತೆ ಮಾಡಿದ್ದವು. ಇದು ಸುವಾರ್ತಾಯುಗದ ಸಭೆಗೆ ದೃಷ್ಟಾಂತ ಮೂಲಕವಾದ ಒಂದು ದೊಡ್ಡ ಪಾಠವಾಗಿರುತ್ತದೆ. ನಾವು ಸಹ ದೇವರ ಸಿಂಹಾಸನದಲ್ಲಿ ಕುಳಿತುಕೊಂಡು ಆತನ ಹೆಸರಿನಲ್ಲಿ ಆಳ್ವಿಕೆಮಾಡಲು ಕರೆಯಲ್ಪಟ್ಟವರಾಗಿದ್ದೇವೆ. ನಾವು ಸಹ ಆ ಸ್ಥಾನಕ್ಕೆ ಪವಿತ್ರಾತ್ಮನ ಮೂಲಕವಾಗಿ ಅಭಿಷೇಕಿಸಲ್ಪಟ್ಟವರಾಗಿದ್ದು, ಇದನ್ನು ನಮ್ಮ ಕಿರೀಟಧಾರಣೆಯ ದಿನಗಳು ಬಂದಾಗ ನಾವು ಹೊಂದಲಿರುವ ಪ್ರಭಾವ ಸಂತೋಷಗಳ ಒಂದು ಪೂರ್ವಾನುಭವವೆಂದು ಅಪೋಸ್ತಲನು ಪ್ರಕಟಮಾಡಿ ಹೇಳಿರುವನು. ಶಿಸ್ತು ಆತ್ಮಸಂಯಮ ವಿಶ್ವಾಸ ಮೃದುಸ್ವಭಾವ ಮತ್ತು ನಿರೀಕ್ಷೆ ಇವೆಲ್ಲವು ದಾವೀದನನ್ನು ದೇವಜನರ ಮೇಲೆ ಅರಸನನ್ನಾಗಿಸಿ ಆತನನ್ನು ರಾಜ್ಯಭಾರದಲ್ಲಿ ಸೂಕ್ತವಾಗಿ ಪ್ರತಿನಿಧಿಸಲು ಅವಶ್ಯವಾಗಿದ್ದಂಥವು ಎಂದಾದಲ್ಲಿ ಬಹು ಉನ್ನತವಾದ ಸ್ಥಾನಕ್ಕೆ ಅಂದರೆ ದೇವರ ಪ್ರತಿನಿಧಿಗಳಾಗಿ ಭೂಲೋಕದ ಸಿಂಹಾಸನಕ್ಕೆ [ಏರಲು] ರಾಜವಂಶದ ಯಾಜಕರಾಗಿ ಮನುಕುಲವನ್ನು ಆಳ್ವಿಕೆಮಾಡಿ ನ್ಯಾಯವಿಚಾರಿಸಿ ಪರೀಕ್ಷಿಸಲು ಕರೆಯಲ್ಪಟ್ಟವರಾದ ನಮಗೆ ಎಷ್ಟೋ ಕಠಿಣವಾದ ಪಾಠಗಳು ಬೇಕಾಗಿರುವದು. ಇದರ ಉದ್ದೇಶವು ಎಷ್ಟು ಸಾಧ್ಯವೋ ಅಷ್ಟು ಜನರನ್ನು ಅವರ ಹೀನ ಸ್ಥಿತಿಯಿಂದ ಪಾರುಮಾಡಿ ದೇವರೊಂದಿಗೆ ಪೂರ್ಣವಾಗಿ ಹೊಂದಾಣಿಕೆಮಾಡಿಕೊಳ್ಳುವಂತೆ ಮಾಡುವದೇ. ದಾವೀದನಿಗೆ ಅನ್ನಿಸಿದಂತೆ ನಮ್ಮ ಪರೀಕ್ಷೆ ಪರಿಶೋಧನೆಗಳು ನಾವು ನಿರೀಕ್ಷಿಸಿದ್ದಕ್ಕಿಂತಲೂ ಬಹು ಕಡಿಮೆ ಆಗಿರುವದೆಂದು ನಾವು ಖಂಡಿತವಾಗಿ ಹೇಳಬಹುದು.

ದಾವೀದನ ಗುಣವನ್ನು ಜಾಗರೂಕತೆಯಿಂದ ಪರಿಶೀಲಿಸಿ, ಯಾವುದು ಆತನಲ್ಲಿ ರೂಪುಗೊಂಡಿದ್ದ ದೃಢವಾದ ಅಂಶಗಳು ಹೀಗಾಗಿ ನಾವು ಇದಕ್ಕೆ ಸರಿಯಾದುದನ್ನು ಬೆಳಸಿಕೊಳ್ಳಲು ಪ್ರಯತ್ನಿಸಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕಾದಲ್ಲಿ, ದಾವೀದನಲ್ಲಿದ್ದ ಅತಿ ದೃಢವಾದ ಅಂಶವು ಆತನ ಮನೋಸಂಕಲ್ಪವಾಗಿದ್ದು ಅದನ್ನು ಆತನು ಸರಿಯಾಗಿ ನಿರ್ದೇಶನ ಮಾಡಿಕೊಂಡಿದ್ದನು. ಮಾನವನ ಮನೋಸಂಕಲ್ಪದ ಬಲವನ್ನು ಅಂದಾಜು ಮಾಡುವದು ಕಷ್ಟಕರ. ಈಗಿನ ಜೀವಿತದ ಹಿತಾಸಕ್ತಿಗಳೆಲ್ಲವನ್ನು ದೇವರು ನಮ್ಮ ಮನೋಸಂಕಲ್ಪದ ನಿಯಂತ್ರಣದಲ್ಲಿ ಇರಿಸಿರುವದು ಸ್ಪಷ್ಟವಾಗಿದ್ದು, ವಾಸ್ತವದಲ್ಲಿ ನಮ್ಮ ಮುಂದಿನ ಜೀವಿತದ ಯಶಸ್ಸುಗಳಲ್ಲಿ ಹೆಚ್ಚು ಪಾಲು ಹೀಗೆಯೇ ಮನೋಸಂಕಲ್ಪದ ನಿಯಂತ್ರಣದಲ್ಲಿರುವದು. ಮನೋ–ಸಂಕಲ್ಪವನ್ನು ಪಾಪಕ್ಕೆ ವಿರುದ್ಧವಾಗಿ ಸರಿಯಾಗಿ ಪ್ರಯೋಗಿಸಿದ್ದಲ್ಲಿ ಅದು ದುರ್ಬಲಗೊಳ್ಳುವದಿಲ್ಲ. ನಾವು ಓದುವ ಹಾಗೆ, "ಸೈತಾನನನ್ನು ಎದುರಿಸಿರಿ ಆಗ ಅವನು ನಿಮ್ಮನ್ನು ಬಿಟ್ಟು

ಓಡಿಹೋಗುವನು." [ಯಾಕೋಬ 4:7] ಮನಸ್ಸಿನ ಯಾವ ವಿಧವಾದ ಚೈತನ್ಯಯುತ ಬಲವು ಅಂದರೆ ಮನೋಸಂಕಲ್ಪವು ದೇವವಿರೋಧಿಗೆ ವಿರುದ್ಧವಾಗಿ, ಪಾಪಕ್ಕೆ ವಿರುದ್ಧವಾಗಿ, ರೋಗ ಅಸ್ವಸ್ಥತೆಯ ವಿರುದ್ಧವಾಗಿ, ಪ್ರಯೋಸಲು ಸಾಧ್ಯವೆಂಬುದು ನಮಗೆ ಗ್ರಹಿಸಲು ಕಷ್ಟಕರವಾದ್ದು; ಆದರೂ ಇಂಥಾ ಒಂದು ಮನೋಸಂಕಲ್ಪವು ಇರುವದೆಂಬ ಭರವಸವನ್ನು ಶಾಸ್ತ್ರವಚನದಲ್ಲಿ ನಾವು ಹೊಂದಿರುವದಲ್ಲದೆ ನಮ್ಮದೇ ಆದ ಅನುಭವಗಳು ನಮ್ಮ ಪ್ರಸ್ತಾವನೆಯಲ್ಲಿನ ಸತ್ಯತೆಯನ್ನು ರುಜುವಾತುಗೊಳಿಸುವದು. ದೃಢವಾದ ಮನೋಸಂಕಲ್ಪವು ದೇವಜನರ ಪರಿಮಿತಿಯೊಳಗೇ ಇರುವಂಥದಲ್ಲ. ಸೈತಾನನು ಹಾಗು ನೀತಿಭ್ರಷ್ಟರಾದ ಆತನವರೂ ದೃಢ ಮನೋಸಂಕಲ್ಪ ಉಳ್ಳವರಾಗಿರುವರು. ನಿಜವಾಗಿಯೂ ಈ ಅಂಶದಲ್ಲಿ ಕೆಡುಕಿನ ಆತ್ಮವು ನೀಡುವ ಅನೇಕ ಸಲಹೆಯು ನೆಲೆಗೊಂಡಿರುವದು. ದೇವರ ಪಕ್ಷದಲ್ಲಿರುವವರು ನಿರ್ಧಾರ ತೆಗೆದುಕೊಳ್ಳುವದರ ಮೌಲ್ಯದ ಬಗ್ಗೆ ಹಾಗು ಅನಿಶ್ಚಿತತೆಯಿಂದ ಉಂಟಾಗುವ ಅತೃಪ್ತ ಸ್ಥಿತಿಯ ಬಗ್ಗೆ ಗುರುತಿಸಿಟ್ಟುಕೊಳ್ಳಬೇಕು.

ಅಪೋಸ್ತಲನು ಪ್ರಕಟವಾಡಿ ಹೇಳಿರುವಂತೆ ನಿಜವಾಗಿಯೂ "ಎರಡು ಮಸ್ಸುಳ್ಳವನು ತನ್ನ ನಡತೆಯಲ್ಲೆಲ್ಲಾ ಚಂಚಲನಾಗಿರುವನು." [ಯಾಕೋಬ 1:8] ಇಂಥಾ ಒಬ್ಬ ವ್ಯಕ್ತಿಯು ಯಾವ ಒಂದು ಯಶಸ್ಸನ್ನೂ ಗಳಿಸುವದಿಲ್ಲ. ಸಾಧಾರಣವಾಗಿರುವ ಮನೋಸಂಕಲ್ಪಕ್ಕೆ ಮಿಗಿಲಾದ ಯಾವುದಾದರೂ ಬಂದಿದ್ದಲ್ಲಿ ಅದು ಖಂಡಿತವಾಗಿಯೂ ಆಕಸ್ಮಿಕದ ಮೂಲಕವಾಗಿರುವದು. ಇಲ್ಲಿಯೇ ನಾವು ಈ ಸುವಾರ್ತಾ ಯುಗದಲ್ಲಿನ ಸಭೆಯೊಡನೆ ದೇವರು ನಡೆದುಕೊಳ್ಳುವ ವಿಧಾನ ಏನೆಂಬುದನ್ನು ನೋಡುತ್ತೇವೆ. "ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ." [ಯೋಹಾನ 4:23] ಅವರಿಗೆ ತನ್ನ ಒಳ್ಳೆಯತನದ ಬಗ್ಗೆ ತಿಳಿಸಿ ಹಾಗು ಸರಿಯಾದ ಮನೋಸಂಕಲ್ಪವನ್ನು ಮಾಡುವಂತೆ ವ್ಯಕ್ತಿಗಳನ್ನು ಉತ್ತೇಜಿಸಲು ಸಾಕಷ್ಟು ಸಹಾಯವನ್ನು ನೀಡುವನು. ಜೊತೆಗೆ ದೇವರ ಚಿತ್ತವನ್ನು ಮಾಡುವದೇ ಆದರೆ ಅವರಿಗೆ ದೇವರೇ ಅಗತ್ಯವಾದ ಸಹಾಯವನ್ನು ಹಾಗು ಪ್ರತಿಯೊಂದು ಕಷ್ಟದ ಸಮಯದಲ್ಲಿಯೂ ಸಹಾನುಭೂತಿ ಸಂತೈಸುವಿಕೆಗಳನ್ನು ನೀಡುವನು. ದೇವವಿರೋಧಿಯಾದ ಸೈತಾನನು ನಮಗಿಂತಲೂ ಬಲವುಳ್ಳವನೂ ಬುದ್ಧಿವಂತನೂ ಆದರೂ ಅವನು ನಮಗೆ ಯಾವ ಹಾನಿಯನ್ನು ಮಾಡಲು ಶಕ್ತನಾಗಿರುವದಿಲ್ಲ, ಯಾಕಂದರೆ ನಮ್ಮ ಪಕ್ಷದಲ್ಲಿರುವಾತನು ನಮಗೆ ವಿರೋಧವಾಗಿರುವ ಎಲ್ಲರಿಗಿಂತಲೂ ಹೆಚ್ಚಿನವನಾಗಿರುವನು. ಈ ಉದ್ದೇಶಕ್ಕಾಗಿಯೇ ದೇವರು ನಮಗೆ ಯಜ್ಞದ ಮೂಲಕವಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅಂದರೆ ಆತನ ಮಾರ್ಗದರ್ಶನವನ್ನು ಪಡೆಯುವಸಲುವಾಗಿ ನಮ್ಮ ಸರ್ವಸ್ವವನ್ನು ಅಂದರೆ ನಮ್ಮ ಚಿತ್ತವನ್ನು ತ್ಯಾಗಮಾಡಲು ಪ್ರೋತ್ಸಾಹಿಸುವನು. ಇದನ್ನು ಮಾಡುವಂಥವರು ಧನ್ಯರು. ಅಲ್ಲದೆ ಹೋಲಿಸಿ ನೋಡಿದಲ್ಲಿ ಇವರು ಸ್ವಲ್ಪ ಮಂದಿಯಾಗಿರುವರು. ಬಹು ಪಾಲು ಜನರು ತಮ್ಮ ಸ್ವಾರ್ಥಭಾವದಲ್ಲಿ ಮುಂದುವರೆಯುತಿದ್ದು ದೇವರ ವಿಷಯದಲ್ಲಿ ಅಂದರೆ ಆತನ ಚಿತ್ತದ ಬಗ್ಗೆ ಬಹುವಾಗಿ ವಿವಾದಿಸುವಂಥವರಾಗಿರುವರು. ಚಿತ್ತದ ಭದ್ರಗೊಳಿಸುವಿಕೆ ಹಾಗು ಗುಣದ ದೃಢಪಡಿಸುವಿಕೆಯು ಅನುಸಾರವಾಗಿ ಪರಿಶ್ರಮಿಸುವ ಸಲುವಾಗಿಯೇ ನಾವು ಇಂಥವುಗಳಿಗೆ ಸಹಾಯಕವಾದ ಪ್ರತಿಜ್ಞೆಗಳನ್ನು ತೆಗೆದುಕೊಳ್ಳಲು ಗುರುತಿಸಿಟ್ಟುಕೊಳ್ಳುವಂಥದ್ದು. ಹಲ್ಲೆಮಾಡಲು ಅತಿಯಾಗಿ ಗುರಿಯಾಗುವ ಸ್ಥಳಗಳನ್ನು ತಾಕಲು ದೇವವಿರೋಧಿಯು ಎಡೆಬಿಡದೆ ಎಚ್ಚರಿಕೆಯಿಂದ ಗಮನಿಸುತ್ತಿರುವನು. ಮತ್ತು ನಾವು ರಕ್ಷಣಾವ್ಯವಸ್ಥೆಯನ್ನು ಬಲಪಡಿಸಿಕೊಂಡವರಾಗಿ ನಮ್ಮ ಯಜ್ಞಾರ್ಪಣೆಯನ್ನು ದೇವರಿಗೆ ಸಲ್ಲಿಸಲು ಪರಿಶ್ರಮಿಸುವವರಾಗಿ ದೇವವಿರೋಧಿಯನ್ನು ಪ್ರತಿರೋಧಿಸಲು ನಮ್ಮ ಚಿತ್ತವನ್ನು ದೃಢವಾಗಿಟ್ಟುಕೊಳ್ಳಲು ಪ್ರಯತ್ನಿಸುತ್ತಿರಬೇಕು. ಅಂದರೆ ಸತ್ಯದ ವಿಷಯವಾಗಿ ಹಾಗು ನಂಬಿಗಸ್ತ ಮನತನದವರೆಲ್ಲರ ಸೇವೆಗಾಗಿ ಹಾಗು ನಮ್ಮ ಸ್ವಂತ ನಡೆ ನುಡಿ ಆಲೋಚನೆಗಳನ್ನು ಸಂರಕ್ಷಿಸಿಕೊಳ್ಳಲು ಶ್ರಮಿಸುವವರಾಗಬೇಕು.

ಮೋಶೆಯ ಹಾಗು ಯಜ್ಞದ ಕುರಿಯಾದಾತನ ಹಾಡು

ಅರಸನಾದ ದಾವೀದನ ಪ್ರತಿಷ್ಠಾಪನೆಯ ಜೊತೆಗೆ ಬಂದಿತ್ತು ಎಂದಿನ ಹರ್ಷೋಲ್ಲಾಸ ಹಾಗು ಗೀತೆಗಳು ಅಲ್ಲದೆ ಸಂತೋಷದ ತೋರ್ಪಡುವಿಕೆಗಳು. ನಿಜವಾಗಿಯೂ ಪ್ರತಿಯೊಂದು ಜನಾಂಗವು ತನ್ನ ರಾಷ್ಟ್ರಗೀತೆಯನ್ನು ಹೊಂದಿದ್ದು ಅದರಲ್ಲಿ ಅವು ರಾಜನ ಮತ್ತು ರಾಜ್ಯದ ಬಗ್ಗೆ ನೆನಪುಗಳನ್ನು ಉಂಟುಮಾಡುವವು. ಅಲ್ಲದೆ ಸನಿಹದಲ್ಲೇ ಸಂಭವಿಸಲಿರುವ ಅತಿ ಅದ್ಭುತವಾದ ತೋರ್ಪಡಿಕೆಗಳುಳ್ಳ ನಮ್ಮ ದೇವರ ರಾಜ್ಯದ ಉದ್ಘಾಟನೆಯೂ ಹೀಗೆಯೇ ಇರುವದಲ್ಲವೇ? ದೇವರ ಆಲಯವಾಗಿರುವ ಸಭೆಯ ಸಜೀವವುಳ್ಳ ಕಲ್ಲುಗಳು ಈಗ ರೂಪುಗೊಳ್ಳುತ್ತಿದ್ದು ಅಂದರೆ ಕೆತ್ತಲ್ಪಟ್ಟು ನಯಗೊಳ್ಳಲ್ಪಡುತ್ತಿದ್ದು ಮಹಾ ಕಳಸದ ಕಲ್ಲಾಗಿರುವಾತನಿಗೆ ಜಯಘೋಷ–ವಾಗುತ್ತಿರುವದಲ್ಲವೇ? ಸಭೆಗೆ ಶಿರಸ್ಸು ಕ್ರಿಸ್ತನಾಗಿರುವನು. ನಾವು ಈಗಾಗಲೇ ಸರ್ವರಿಗೂ ಒಡೆಯನಾಗಿರುವನಿಗೆ ಜಯಘೋಷ ಮಾಡಿ ನಮ್ಮ ಹೃದಯಗಳಲ್ಲಿ ಕಿರೀಟವನ್ನಿಟ್ಟು ಕರ್ತನಿಗೆ "ಎಲ್ಲರೂ ಅಡ್ಡಬೀಳುವ" ಸಮಯವನ್ನು ಸಂತೋಷಭರಿತವಾದ ನಿರೀಕ್ಷೆಯಿಂದ ಎದುರು ನೋಡುತ್ತಿರುವೆವು.

ಈ ಮಧ್ಯೆ ಮದಲಗಿತ್ತಿಯ ವರ್ಗದ ಸದಸ್ಯರೂ "ಆತನೊಡನೆ ಸಹಬಾಧ್ಯರೂ" ಆಗುವದನ್ನು ನಿರೀಕ್ಷಿಸುತ್ತಿರುವ ನಾವು ದೇವರ ಸೇವಕನಾದ ಮೋಶೆಯ ಹಾಡನ್ನು ಹಾಗು ಯಜ್ಞದ ಕುರಿಯಾದಾತನ ಹಾಡನ್ನು ಹಾಡಲು ಕಲಿಯುವದನ್ನು ಅಪೇಕ್ಷಿಸುತ್ತಿರುವೆವು: ಯಾಕಂದರೆ "ವಧಿತನಾದ ಯಜ್ಞದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು." [ಪ್ರಕಟನೆ 5:12] "ಅವರು ಸಿಂಹಾಸನದ ಮುಂದೆಯೂ...ಹೊಸ ಹಾಡನ್ನು ಹಾಡುವರು. ಭೂಲೋಕದಿಂದ ಕೊಂಡುಕೊಳ್ಳಲ್ಪಟ್ಟ ಆ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಜನರೇ ಹೊರತು ಬೇರೆ ಯಾರೂ ಆ

ಹಾಡನ್ನು ಕಲಿಯಲಾರರು." [ಪ್ರಕಟನೆ 14:3] ಮತ್ತು ದೇವರು ಚಿಯೋನ್ ಪರ್ವತದಲ್ಲಿ ಅಂದರೆ ಆ ರಾಜ್ಯದಲ್ಲಿ ಅವರೊಂದಿಗೆ ಇರುವನು. ಈ ಹಾಡು ಎಲ್ಲಾ ಜನರಿಗೆ ಮಹಾ ಸಂತೋಷವನ್ನು ಉಂಟುಮಾಡುವ [ಶುಭ] ಸಂದೇಶವಾಗಿರುವದೆಂದು ಅರಿತುಕೊಂಡು ಇದನ್ನು ಹೋಲಿಸಿಕೊಂಡವರಾಗಿ ಎಷ್ಟರ ಮಟ್ಟಿಗೆ ನಾವು ಕಲಿತುಕೊಂಡಿದ್ದೇವೆಂಬುದನ್ನು, ಅಂದರೆ ಈಗ ಅದನ್ನು ಎಷ್ಟರ ಮಟ್ಟಿಗೆ ನಮಗೆ ಹಾಡಲು ಸಾಧ್ಯವೆಂಬುದನ್ನು, ತಿಳಿದುಕೊಳ್ಳಲು ಕುತೂಹಲವುಳ್ಳವರಾಗಿದ್ದೇವೆ. ನಿಜವಾಗಿಯೂ ಈ ಪಾಠವನ್ನು ಕಲಿತುಕೊಳ್ಳಲು ನಾವು ಜೀವನ ಪರ್ಯಂತರವಾಗಿ ಮಾಡಬೇಕಾದ ಒಂದು ಅಧ್ಯಯನ–ವೆಂಬುದನ್ನು ಕಂಡುಕೊಂಡಿದ್ದೇವೆ. ಹೀಗೆ ಮಾಡುವದರಿಂದ ನಮಗೆ ದೂಷಣೆಗಳು ಹುಬ್ಬೇರಿಸುವಿಕೆಗಳು ವಿರೋಧಗಳು ಉಂಟು ಮಾಡುವವೆಂದು ತಿಳಿದಾಗ್ಯೂ ಕೇಳುವ ಕಿವಿಯುಳ್ಳವರೆಲ್ಲರಿಗೆ ನಮ್ಮ ದೇವರ ಬಗ್ಗೆ ಸಾಕ್ಷಿಯಾಗಿರುವ ಸೌಭಾಗ್ಯದಲ್ಲಿ ನಾವು ಉಲ್ಲಾಸಿಸುವವರಾಗಿದ್ದೇವೆ. ನಮ್ಮ ತಾಳ್ಮೆ ಹಾಗು ನಮ್ಮ ನಂಬಿಕೆಗಳು ಮುಂದುವರೆಯಬೇಕಿರುವದು, ಅಲ್ಲದೆ ಇತರರಿಗೆ ಆಶೀರ್ವಾದವನ್ನು ಉಂಟುಮಾಡುವ ಶುಭ – ಸಂದೇಶವನ್ನು ಹಿಂದೆಂದಿಗಿಂತಲೂ ಬಹು ಪರಿಣಾಮ–ಕಾರಿಯಾಗಿ ತಿಳಿಸುವಂತಾಗಲು ಆ ರಾಜ್ಯದ ಮತ್ತು ಅದರ ಸೊಬಗಿಗಾಗಿ ಹಾಗು ನಾವು ಮಹಿಮೆಯೊಂದಿಗೆ "ಮಾರ್ಪಡುವದಕ್ಕಾಗಿ" ಕಾದುಕೊಂಡಿರಬೇಕು.

*****

ಇಸ್ರಾಯೇಲ್ಯರೆಲ್ಲರ ಮೇಲಿನ ಅರಸನಾದ ದಾವೀದನು

ರೀಪ್ರಿಂಟ್ಸ್ ಪುಟ 2001

2 ಸಮುವೇಲ 5:1–12

"ಸೇನಾಧೀಶ್ವರನಾದ ಯೆಹೋವನು ಅವನ [ದಾವಿದನ] ಸಂಗಡ ಇದ್ದದರಿಂದ ಅವನು ಅಭಿವೃದ್ಧಿಹೊಂದುತ್ತಾ ಹೋದನು" – 2 ಸಮುವೇಲ 5:10

ಈ ಪಾಠವು ಒಂದು ಸರಳವಾದ ವಿಷಯದ್ದಾಗಿದ್ದು, ಇದಕ್ಕೆ ಯಾವ ವ್ಯಾಖ್ಯಾನವೂ ಬೇಕಿರುವದಿಲ್ಲ. ದೇವರು ತನ್ನದೇ ಆದ ಸುಸಮಯದಲ್ಲಿ ಹಾಗು ತನ್ನದೇ ಆದ ವಿಧಾನದಲ್ಲಿ ಹೇಗೆ ದಾವೀದನನ್ನು ಇಸ್ರಾಯೇಲ್ಯರೆಲ್ಲರ ಮೇಲೆ ಅರಸನನ್ನಾಗಿ ಸ್ಥಾಪಿಸುವ ತನ್ನ ಉದ್ದೇಶವನ್ನು ನೆರವೇರಿಸಿದ್ದನೆಂಬುದನ್ನು ಇದು ತೋರಿಸುತ್ತದೆ. ಅದು ದಾವೀದನ ಸಾಮರ್ಥ್ಯ ಇಲ್ಲವೇ ಬಲದಿಂದಾಗಿರಲಿಲ್ಲ ಆದರೆ ದೇವರ ಅನುಗ್ರಹದ ಮೂಲಕವಾಗಿತ್ತು; ಈ ಮಧ್ಯೆ ದಾವೀದನು ಎಲ್ಲಾ ಸಂಗತಿಗಳನ್ನು ಸುಸೂತ್ರವಾಗಿ ನಿರ್ವಹಿಸುವಂಥವನಾದ ದೇವರಿಗಾಗಿ ಕಾದುಕೊಂಡಿರುವದು ಎಷ್ಟು ಭಾಗ್ಯಕರವಾದ ಸಂಗತಿಯೆಂಬು – ದನ್ನು ಕಲಿತುಕೊಂಡಿದ್ದನು; ಅಲ್ಲದೆ ಆತನ ನಂಬಿಕೆಯು ಬಲಗೊಳ್ಳುತ್ತಾ ಬಂದಿತ್ತು.

ಆಗ ದಾವೀದನ ಸಿಂಹಾಸನವನ್ನು ಸ್ಥಾಪಿಸಲು ದೇವರ ಸಮಯವು ಒದಗಿಬಂದಿತ್ತು; ಅದು ಯೆಹೂದಾ ಕುಲದ ಮೇಲೆ ಮಾತ್ರವಲ್ಲದೆ ಸಮಸ್ತ ಇಸ್ರಾಯೇಲ್ಯರ ಮೇಲೆ ಆಗಿತ್ತು. ದಾವೀದನು ದೇವರ ಆಯ್ಕೆ ಮಾತ್ರವಲ್ಲದೆ ಆತನು ಜನರ ಆಯ್ಕೆಯೂ ಸಹ ಆಗಿದ್ದನು; ಹಾಗು ಅವರು ತಮ್ಮ ಪ್ರತಿನಿಧಿಗಳ ಮೂಲಕವಾಗಿ ಆತನ ಬಳಿಗೆ ಬಂದು ಇಡೀ ಜನಾಂಗದ ಮೇಲೆ ತನ್ನ [ಅರಸನ] ಕಾರ್ಯಸ್ಥಾನವನ್ನು ಕೂಡಲೇ ಅಂಗೀಕರಿಸಿಕೊಳ್ಳಲು ಅನುಕೂಲಕರವಾದ ಪ್ರಸ್ತಾವನಾವಾದ–ಗಳನ್ನು ಮಂಡಿಸಿದ್ದರು. ಏಳು ವರುಷಗಳ ಹೆಬ್ರೋನಿನಲ್ಲಿನ ಆತನ ಆಳ್ವಿಕೆಯು ಆತನ ಬುದ್ಧಿಸಾಮರ್ಥ್ಯಗಳನ್ನು ತೋರ್ಪಡಿಸಿದ್ದವು; ಸಮಸ್ತ ಜನಾಂಗದ ಸಂಗತಿಗಳನ್ನು ಕ್ರಮಪಡಿಸಲು ಸೂಕ್ತ ಮನುಷ್ಯನಾಗಿದ್ದುದಲ್ಲದೆ ಆತನು ಅವರ ರಕ್ತಸಂಬಂಧಿಯೂ ಸಹ ಆಗಿದ್ದು ಅತನ ಧೈರ್ಯಶೌರ್ಯ, ಸ್ವಾಮೀಭಕ್ತಿ, ಮತ್ತು ಮಹಾ ಸಾಮರ್ಥ್ಯಗಳು ಸೌಲನ ದಿನಗಳಲ್ಲಿಯೂ ಸಹ ಪ್ರಮಾಣೀಕರಿ–ಸಲ್ಪಟ್ಟಿದ್ದವು. ಹೀಗೆ ದಾವೀದನು ಅವರೊಂದಿಗೆ ಒಂದು ಒಕ್ಕೂಟವನ್ನು ಮಾಡಿಕೊಂಡಿದ್ದನು. ಈ ಒಕ್ಕೂಟವು ಒಂದು ವಿಧದಲ್ಲಿ ಅರಸನ ಹಕ್ಕುಬಾಧ್ಯತೆ ಹಾಗು ಇತಿಮಿತಿಗಳನ್ನು ವ್ಯಾಖ್ಯಾನಿಸುವ ಪ್ರಣಾಳಿಕೆಯಾಗಿದ್ದ ಸಂಭವವಿತ್ತು. ಜನರು ತಮ್ಮ ಪರವಾಗಿ ಅವರ ಮೈತ್ರಿ ಹಾಗು ಬೆಂಬಲವನ್ನು ಪ್ರಮಾಣ ಪೂರ್ವಕವಾಗಿ ಪ್ರಕಟಿಸಿದ್ದರು. ಇಸ್ರಾಯೇಲ್ಯರ ಆಡಳಿತ ವ್ಯವಸ್ಥೆಯು ಅಪರಿಮಿತವಾದ ನಿರಂಕುಶ ಪ್ರಭುತ್ವದ್ದಾಗಿರದೆ ಅದು ಒಂದು ಸೀಮಿತ ಅಧಿಕಾರವುಳ್ಳದ್ದಾಗಿತ್ತು.

ದಾವೀದನು ಈಗ ಒಂದಾದ ರಾಜ್ಯಕ್ಕೆ ಯೆರೂಸಲೇಮನ್ನು ತನ್ನ ಹೊಸ ರಾಜಧಾನಿಯನ್ನಾಗಿ ಆರಿಸಿಕೊಂಡನು; ಯಾಕಂದರೆ ಇದು ತನ್ನ ಸ್ವಕುಲವಾದ ಯೆಹೂದದ ಮೇರೆಯೊಳಗೆ ಇದ್ದುದು ಮಾತ್ರವಲ್ಲದೆ ಸಮಸ್ತ ಇಸ್ರಾಯೇಲಿಗೆ ಒಂದು ರಾಜಧಾನಿಯಾಗಿ ಕೇಂದ್ರ ಸ್ಥಾನದಲ್ಲಿತ್ತು. ಅದು ಒಂದು ಕೋಟೆಯೂ ಸಹ ಆಗಿದ್ದು ಯೆಹೋಶುವನ ದಿನದಿಂದಲೂ ಇಸ್ರಾಯೇಲ್ಯರ ಆಕ್ರಮಣವನ್ನು ಎದುರಿಸಿ ನಿಂತಿದ್ದು ಅದರ ಮಾಲಿಕತ್ವವನ್ನು ಹೊಂದಿದ್ದವರಿಂದ ಅದು ಅಜೇಯವಾದುದೆಂದು ಪರಿಗಣಿಸಲ್ಪಟ್ಟಿತ್ತು. ಹೇಗೂ ಯೆರೂಸಲೇಮು ಆಗಲೂ ಕಾನಾನ್ಯರಲ್ಲಿ ಉಳಿದವರಾದ ಯೆಬೂಸಿಯರಿಂದ ವಾಸಮಾಡಲ್ಪಟ್ಟಿದ್ದು, ಅವರನ್ನು ಕಾನಾನಿನೊಳಗಿಂದ ನಾಶಮಾಡಬೇಕೆಂಬ ಕಾರ್ಯಭಾರವನ್ನು ಇಸ್ರಾಯೇಲ್ಯರು ಹೊಂದಿದ್ದರು. ಈ ಜನರು ತಮ್ಮ ಸ್ಥಾನದ ಬಲವನ್ನು ಭಾವಿಸಿಕೊಂಡಿದ್ದು ದಾವೀದನಿಗೆ ಶರಣಾಗಲು ನಿರಾಕರಿಸಿದವರಾಗಿ, ನಾವು ಹಾಗೆ ಮಾಡುವದಿಲ್ಲವೆಂದು ತಿರಸ್ಕಾರದಿಂದ ಉತ್ತರಿಸಿ, ತಮ್ಮಲ್ಲಿನ ಕುರುಡರು ಕುಂಟರು ಪಟ್ಟಣವನ್ನು ಕಾಪಾಡಲು ಸಮರ್ಥರೆಂದು ಹೇಳಿದ್ದರು.

ದಾವೀದನು ಆ ಸನ್ನಿವೇಶವನ್ನು ಎಚ್ಚರಿಕೆಯಿಂದ ಪರಿಶೀಲಿಸಿದವನಾಗಿ ಆ ಕೋಟೆಯು ಕಡಿದಾದ ಬೆಟ್ಟದ ಮೇಲೆ ನೆಲೆಗೊಂಡಿದ್ದು ಅದನ್ನು ಆಕ್ರಮಣಮಾಡಲು ಅತ್ಯುತ್ತಮ ವಿಧಾನವೆಂದರೆ ಅದು ನೀರು ಹರಿಯುವ ಮಾರ್ಗದ ಮೂಲಕವಾಗಿಯೇ (ಅದನ್ನು ಇಲ್ಲಿ ಚರಂಡಿಯೆಂದು ಭಾಷಾಂತರಿಸಲಾಗಿರುವದು) ಎಂಬುದನ್ನು ಅರಿತುಕೊಂಡಿದ್ದನು; ಅಲ್ಲದೆ ಯಾರು ಆ ಎತ್ತರಕ್ಕೆ ಏರಿ ತಮ್ಮನ್ನು ಕುರುಡರು ಕುಂಟರು ಎಂದು ಪ್ರತಿಬಿಂಬಿಸಿಕೊಂಡಿರುವರೋ ಅಂಥವರನ್ನು ಹೊಡೆದುರುಳಿಸಿದವರಿಗೆ ಬಹುಮಾನವನ್ನು ಕೊಡುವದಾಗಿ ವಾಗ್ದಾನಮಾಡಿದ್ದನು. ಈ ಎಲ್ಲಾದರಲ್ಲಿಯೂ ಕ್ರೈಸ್ತರಾದವರಿಗೆ ಇರುವ ಒಂದು ಸೂಕ್ತ ಮಾರ್ಗವೆಂದರೆ–ಅದು ತಮ್ಮ ಬಿದ್ದುಹೋದ ಸ್ವಭಾವವಾದ ಪಾಪಬಲಹೀನತೆಗಳ ಮೇಲೆ ಧೈರ್ಯದಿಂದ ಆಕ್ರಮಣಮಾಡಿ ಅವುಗಳನ್ನು ಜಯಿಸಬೇಕೆಂಬ ಛಾಯಾರೂಪದಲ್ಲಿನ ಒಂದು ಸಲಹೆಯನ್ನು ನಾವು ಹೊಂದಿರುವೆವು.

ಈ ಪಾಠವು ದೇಶಭಕ್ತಿಯ ವಿಷಯದ ಒಂದು ಪಾಠವಾಗಿರುವದೆಂದು ಪ್ರತಿಪಾದಿಸಲಾಗಿರುವದು. ಈ ಪ್ರಪಂಚದ ರಾಜ್ಯಗಳ ಬಗ್ಗೆ ಲೋಕದವರಿಗಿರುವಂಥ ದೇಶಭಕ್ತಿಭಾವದ ವಿರುದ್ಧವಾಗಿ ಹೇಳುವಂಥದ್ದು ನಮಗೇನೂ ಇರುವದಿಲ್ಲ. ಈಗಿರುವ ಸ್ಥಿತಿಗತಿಗಳಲ್ಲಿ ಇದು ಒಂದು ಪ್ರಮಾಣದ ಶಾಂತಿನೆಮ್ಮದಿ ಹಾಗು ವ್ಯವಸ್ಥಾಕ್ರಮದ ಬಗ್ಗೆ ಆಶ್ವಾಸನೆಯನ್ನು ನೀಡುತ್ತದೆ; ಇಲ್ಲವಾದಲ್ಲಿ ಇವುಗಳು ಬಹುವಾಗಿ ತೊಂದರೆ–ಪಡಿಸುತ್ತವೆ; ಅಲ್ಲದೆ ಮನುಷ್ಯರ ಹೃದಯಮನಸ್ಸುಗಳು ನಮ್ಮ ಸಾಮಾನ್ಯ ಮನುಕುಲದ ಹಿತಾಸಕ್ತಿಗಳನ್ನು ಅಂಗೀಕರಿಸಿ–ಕೊಳ್ಳುವಷ್ಟು ವಿಶಾಲತೆ ಔದಾರ್ಯಗಳನ್ನು ಹೊಂದದೇ ಇರುವದರಿಂದಲೂ, ದೇಶದ ವ್ಯಕ್ತಿಗಳನ್ನು ಏಕರೂಪದ ಸಮಾಜ ಅಥವಾ ಜನಾಂಗವಾಗಿ ಒಟ್ಟುಗೂಡಿಸುವ ಒಂದು ಪ್ರಮಾಣದ ಸಾಮಾನ್ಯವಾದ ಹಿತಾಸಕ್ತಿಗಳನ್ನು ಹೊಂದಿರುವದು ಉತ್ತಮವಾದದ್ದು. ಮಾನವರು ಬಹುಮುಖ ಅಭ್ಯುದವನ್ನು ಹೊಂದುವ ಸಲುವಾಗಿ ಅವರು ಅನ್ಯೋನ್ಯವಾಗಿ ಮುಂದುವರೆ–ಯುವದನ್ನು ಇದು ಖಚಿತಪಡಿಸುತ್ತದೆ. ಆದರೆ, ಅಯ್ಯೋ, ಜನಾಂಗೀಯ ಸ್ವಾರ್ಥತೆ, ದುರಾಸೆ, ಹೆಮ್ಮೆ, ಅಪರಿಶುದ್ಧ ಆಕಾಂಕ್ಷೆ ಇವೆಲ್ಲವುಗಳು ದುಃಖಕರವಾಗಿ ಇದೆಲ್ಲಾದ್ದರಲ್ಲಿನ ಒಳ್ಳೆಯದನ್ನು ನಿಷ್ಫ್ರೀಯಗೊಳಿಸಿದ್ದು, ಹೀಗಾಗಿ ಪ್ರತಿಯೊಂದು ಜನಾಂಗದಲ್ಲಿನ ದೇಶಭಕ್ತಿ ಪ್ರವೃತ್ತಿಯು ಸಾಮಾನ್ಯವಾಗಿ ತಮ್ಮ ನೆರೆ ರಾಷ್ಟ್ರಗಳ ಬಗ್ಗೆ ಮತ್ಸರ ಬದ್ಧವೈರತ್ವ ಹಗೆತನ ದ್ವೇಷ ಇವುಗಳನ್ನು ಸೂಚಿಸುವಂತಾಗಿದೆ. ಸಾಧಾರಣವಾಗಿ ಅವರ ದೇಶಭಕ್ತಿಯ ಉತ್ಸಾಹವು ಕೇವಲ ಜನಾಂಗದ ಹಿತಾಸಕ್ತಿಗಳ ಮಟ್ಟಿಗೆ ಮಾತ್ರ–ವಿದ್ದು, ಆದರೆ ವ್ಯಕ್ತಿಗತವಾದ ಹಿತಾಸಕ್ತಿಗಳಿಗೆ ಅದು ಮಾರಕವಾಗಿ ಪರಿಣಮಿಸುತ್ತಿರುವದೆಂದು ನಂಬಲಾಗಿರುವದು. ಜನಾಂಗಗಳ ರಾಜಕೀಯ ಸಂಗತಿಗಳಲ್ಲಿ ಪರಿಪೂರ್ಣವಾಗಿ ಸ್ವಾರ್ಥರಹಿತ–ವಾದಂಥದ್ದು ನಿಜವಾಗಿಯೂ ಯಾವದೂ ಇರುವದಿಲ್ಲ.

ಲೌಕೀಕವಾದ ಈ ಸ್ವಾರ್ಥ ದೇಶಭಕ್ತಿಯು ಕೇವಲ ದೇಶದ ಸ್ವಹಿತಾಸಕ್ತಿಗಳನ್ನು ಮಾತ್ರ ಸಂರಕ್ಷಿಸುತ್ತಿದ್ದು ಉಳಿದ ಮಾನವರ ಹಿತಾಸಕ್ತಿಯನ್ನು ಅಲಕ್ಷಿಸಿರುವದಲ್ಲದೆ ಅದನ್ನು ಸರ್ವನಾಶಗೊಳಿಸಲು ಯತ್ನಿಸುತ್ತಿರುವದು; ಇದು ಕ್ರೈಸ್ತನನ್ನು ಕಾರ್ಯಪ್ರವೃತ್ತನನ್ನಾಗಿಸುವ ದೇಶಭಕ್ತಿಯಲ್ಲ. ಕ್ರಿಸ್ತೀಯ ದೇಶಭಕ್ತಿಯು ಮನುಕುಲದವರೆಲ್ಲ ಹಿತಾಸಕ್ತಿಗಳನ್ನು ಒಳಗೊಂಡಿರಬೇಕು. ಅಲ್ಲದೆ ಈ ಲೋಕದ ಯಾವ ರಾಜ್ಯಗಳೂ ಪರಿಪೂರ್ಣವಾದ ನೀತಿಯ ಮೇಲೆ ಸ್ಥಾಪಿತಗೊಳ್ಳದೇ ಇರುವದರಿಂದಲೂ, ಇಲ್ಲವೇ ತಮ್ಮ ಶಕ್ತಿಗಳೆಲ್ಲವನ್ನು ಸಾಮಾನ್ಯ–ವಾಗಿ ಮನುಕುಲವೆಲ್ಲವನ್ನು ಆಶೀರ್ವದಿಸಲುವಾಗಿ ಮೀಸಲಾಗಿಡಲು ಸಮರ್ಥವಲ್ಲದೇ ಅಥವಾ ಇಚ್ಛಿಸದೇ ಇರುವದರಿಂದಲೂ, ಹಾಗು ಅವರೆಲ್ಲರೂ ಗಣನೀಯ ಪ್ರಮಾಣದಲ್ಲಿ ಈ ಇಹಲೋಕಾಧಿಕಾರಿಯ ಪ್ರಭುತ್ವದ ಅಧೀನದಲ್ಲಿರುವದರಿಂದಲೂ, ನಮ್ಮ ದೇಶಭಕ್ತಿಯ ಮನೋ–ಪ್ರವೃತ್ತಿಗಳೆಲ್ಲವನ್ನೂ ಕೇವಲ ಆ ಒಂದೇ ಒಂದು ನೀತಿಯ ರಾಜ್ಯಾಡಳಿತಕ್ಕಾಗಿ ಮೀಸಲಾಗಿಡಬೇಕಿರುವದು; ಇದು ನಮ್ಮ ದೇಶಭಕ್ತಿಗೆ ಯೋಗ್ಯವಾಗಿರುವದು; ಅದು ಯಾವುದೆಂದರೆ ನಿಗದಿತ ಸಮಯದಲ್ಲಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವಧಿಸುವಂಥ ದೇವರ ರಾಜ್ಯವು.

ದೇವ ಜನರ ಹೃದಯದಲ್ಲಿ ಹೊರತು ಪಡಿಸಿ, ಆ ರಾಜ್ಯವು ಇನ್ನೂ ಸ್ಥಾಪಿತವಾಗಿರುದಿಲ್ಲವೆಂಬದು ನಿಜವೇ. ಅದರ ಮೇಲೆ ಯೆಹೋವನ ಅಭಿಷಕ್ತನು ಈಗ ಆಳ್ವಿಕೆ ಮಾಡುತ್ತಿರುವ ಅರಸನು; ಕ್ರಮೇಣ ಆತನ ಪ್ರಭುತ್ವವು ಭೂಲೋಕದ ಮೇಲೆಲ್ಲಾ ವಿಸ್ತರಿಸ್ಪಡುವದು. ಈ ಯೋಗ್ಯನಾದ ಅರಸನಿಗೆ ಅವರು ತಮ್ಮ ರಾಜನಿಷ್ಠೆಯನ್ನು ತೋರಿಸುವ ಹಂಗಿನಲ್ಲಿರುವರು; ಆತನ ಆಡಳಿತದ ಅತ್ಯುನ್ನತವಾದ ತತ್ವಗಳಿಗೆ ಹಾಗು ಆತನ ರಾಜ್ಯದ ಹಿತಾಸಕ್ತಿಗಳೆಲ್ಲವುಗಳಿಗೆ ಅವರು ಒಂದು ಪರಿಶುದ್ಧವಾದ ಉತ್ಸಾಹ ಮತ್ತು ದೇಶಭಕ್ತಿಯನ್ನು ಸಮರ್ಪಿಸಬೇಕು; ಇವುಗಳನ್ನು ಸೇವಿಸಲು ತಮ್ಮ ಸಾಮರ್ಥ್ಯವನ್ನು ಹೊರತು ಪಡಿಸಿದರೆ ಅದಕ್ಕೆ ಯಾವ ಮಿತಿಯಿರುವದು ಅವರಿಗೆ ತಿಳಿದಿಲ್ಲ.

ದೇವಜನರು ಲೋಕದಿಂದ ಸಂಪೂರ್ಣವಾಗಿ ಬೇರ್ಪಡಿಸಿಕೊಳ್ಳುವದನ್ನು ಕರ್ತನೂ ಹಾಗು ಅಪೋಸ್ತಲರಿಂದ ಪದೇಪದೆ ಒತ್ತುಕೊಟ್ಟು ಹೇಳಲಾಗಿದ್ದರೂ ಇದನ್ನು ಹೆಸರಿನ ಕ್ರೈಸ್ತರು ಬಹು ಸಾಧಾರಣವಾಗಿ ನಿರ್ಲಕ್ಷಿಸುವವರಾಗಿದ್ದು, ಅವರು ತಾವು ಈಗಲೂ ಲೋಕದಲ್ಲಿನ ಅವಶ್ಯಕವಾದ ಭಾಗವಾಗಬೇಕೆಂದು ಭಾವಿಸಿಕೊಂಡವರಾಗಿ, ಅದರ ಗುರಿ ಆಕಾಂಕ್ಷೆ ಹಾಗು ಸ್ವಯಂಕೃತವಾದ ಜವಾಬ್ದಾರಿಯಲ್ಲಿ ಅಂದರೆ ರಾಜಕೀಯ ಸಾಮಾಜಿಕ ಹಾಗು ಸೇನೆಯ ಹೊಣೆಗಾರಿಕೆಯಲ್ಲಿ ಪಾಲನ್ನು ತೆಗೆದುಕೊಳ್ಳುವವರಾಗಿರುವರು. ತನ್ನ ಜನರ ಬಗ್ಗೆ ಯೇಸು ಹೇಳಿದ್ದು–"ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ." (ಯೋಹಾನ 17:16) ನಾವು ಇದರಲ್ಲಿರಬೇಕು ಆದರೆ ಪ್ರಜೆಗಳಂತಲ್ಲ, ಪರದೇಶಿಗಳಂತೆ ಇರಬೇಕು; ಆದರೆ ಕಾನೂನು ಪರಿಪಾಲನೆ ಮಾಡುವ ಪರದೇಶದವರಂತಿದ್ದು, ಕೈಸರನಿಗೆ ಕೊಡತಕ್ಕದ್ದನ್ನು ಕೈಸರನಿಗೆ ಹಾಗು ದೇವರಿಗೆ ಕೊಡತಕ್ಕದ್ದನ್ನು ದೇವರಿಗೆ ಕೊಡುವವ–ರಂತಿರಬೇಕು; ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ

ಹೊರತು ಬೇರೆ ಯಾವ ಸಾಲವೂ ನಿಮಗಿರಬಾರದು; ಅವರಿಗೆ ಸಲ್ಲತಕ್ಕದ್ದನ್ನು ಅವರಿಗೆ ಸಲ್ಲಿಸಬೇಕು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು ಸಲ್ಲಿಸಬೇಕು, ಪ್ರತಿ ಮನುಷ್ಯನು ತನ್ನ ಮೇಲಿರುವ ಅಧಿಕಾರಿಗೆ ಯಾವಾಗಲೂ ಅಧೀನನಾಗಿರಲಿ. – ರೋಮಾ 13:1,7,8

ನಾವೇನಾದರೂ ಈಗ ಇಸ್ರಾಯೇಲ್ಯರಲ್ಲಿ ಪ್ರತಿಸ್ಥಾಪಿತಗೊಂಡಿದ್ದ ದೇವಾಡಳಿತವುಳ್ಳ ದೇವರ ರಾಜ್ಯದ ಅಧೀನದಲ್ಲಿದ್ದು ಅದರಲ್ಲಿ ದಾವೀದನು ನೇಮಿತನಾದ ರಾಜನಾಗಿದ್ದಲ್ಲಿ, ಆಗ ಕ್ರೈಸ್ತರಾದ ನಮಗೆ ಅದರ ಕಡೆಗೆ ಅತಿ ದೇಶಭಕ್ತಿಯ ಭಾವವನ್ನು ಹೊಂದಿರಬೇಕಾಗುತ್ತಿತ್ತು. ಆದರೆ ದೇವರು ಈ ಛಾಯಾರೂಪದ ಭೂಸಂಬಂಧದ ಸಿಂಹಾಸನವನ್ನು ರದ್ದುಪಡಿಸಿದ್ದು ಹಾಗು ಕ್ರಿಸ್ತನು ಬಂದು ತನ್ನ ರಾಜ್ಯವನ್ನು ಅಂದರೆ ನಿಜರೂಪದ ದಾವೀದನ ಸಿಂಹಾಸನ ಹಾಗು ರಾಜ್ಯವನ್ನು ಸ್ಥಾಪನೆಮಾಡುವವರೆಗೂ ಇದು ಅಸ್ಥಿತ್ವದಲ್ಲಿ ಇರಬೇಕಿಲ್ಲವೆಂದು ಪ್ರಕಟಿಸಿ ಹೇಳಿದ್ದನೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಸಾಕ್ಷಿಯನ್ನು ಎಷ್ಟು ಮಂದಿ ನಂಬಿದವರಾಗಿ ತಮ್ಮನ್ನು ಹೊಸ ಅರಸನ ಕಾರ್ಯೋದ್ದೇಶಗಳಿಗೆ ಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವರೋ ಅವರಿಗೆ ಕ್ಲುಪ್ತಕಾಲದಲ್ಲಿ ಆತನ ರಾಜ್ಯವು ಸ್ಥಾಪಿತಗೊಳ್ಳುವಾಗ ಅವರು ತನ್ನೊಂದಿಗೆ ಸಹಬಾಧ್ಯರಾಗುವ ಸೌಭಾಗ್ಯವನ್ನು ಅನುಗ್ರಹಿಸುವನು. ಆತನ ಪ್ರಭುತ್ವವು ಭೂಲೋಕದಲ್ಲಿ ಸ್ಥಾಪಿತವಾಗುವದಕ್ಕೆ ಬಹು ಮೊದಲೇ ಅದು ಅವರ ಹೃದಯಗಳಲ್ಲಿ ಆರಂಭವಾಗಿರುವದು.

ಆದರೆ ಈ ರಾಜ್ಯದ ಬಗ್ಗೆ ಲೋಕಕ್ಕೆ ತಿಳಿದಿಲ್ಲ ಅಥವಾ ಗ್ರಹಿಸಿಕೊಂಡಿರುವದಿಲ್ಲ. ಇಲ್ಲವೇ ಪ್ರಾಕೃತವಾದ ನೀತಿಭ್ರಷ್ಟ ಹೃದಯರು ಅದರ ನೀತಿತತ್ವಗಳು ಹಾಗು ಲೋಕದ ರಾಜ್ಯಗಳಿಗೂ ಮತ್ತು ದೇವರ ರಾಜ್ಯಕ್ಕೂ ಇರುವ ಬಹು ವಿಶಾಲವಾದ ಅಂತರದ ಬಗ್ಗೆ ಗ್ರಹಿಸಲು ಅಸಮರ್ಥರಾಗಿರುವರು ಅಥವಾ ಅರಿತುಕೊಳ್ಳಲಾರರು. ಮತ್ತು ಈ ಕಾರಣದಿಂದ ಅವರಿಗೆ ದೇವಜನರ ಯಾವುದೇ ಮಾರ್ಗವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದು. ಹೀಗೆ ದೇವಜನರು ಭೂಲೋಕರಾಜ್ಯವನ್ನು ಅಂದರೆ ಕ್ರೈಸ್ತಸಾಮ್ರಾಜ್ಯವನ್ನು ದೇವರ ರಾಜ್ಯವೆಂದು ಕರೆದುಕೊಂಡು ಹಾಗು ಅದಕ್ಕೆ ದೇವರದೆಂದು ಸೇವೆಮಾಡುತ್ತಿರುವ ಲೋಕದವರೊಡನೆ ಸೇರಿಕೊಳ್ಳಲಾರರು.

ನಾವು ಇದರಲ್ಲಿ ದೇವರನ್ನು ಸಂಪೂರ್ಣವಾಗಿ ಹಿಂಬಾಲಿಸುವವರಾಗಿದ್ದು, ಹೀಗೆ ಎಲ್ಲಾ ಸಂಗತಿಗಳಲ್ಲಿ ಇದ್ದಂತೆ ಎಲ್ಲಾ ವಿಷಯಗಳಲ್ಲಿಯೂ ಲೋಕದಿಂದ ಬೇರ್ಪಟ್ಟು ನಡೆಯುವವರಾಗಿದ್ದಲ್ಲಿ, ಅದರಲ್ಲಿದ್ದರೂ ಅದರ ಭಾಗವಾಗಿರದ ನಮ್ಮನ್ನು ಅವರು [ಲೋಕದವರು] ಕೇವಲ ಅಪಾರ್ಥ–ಮಾಡಿಕೊಳ್ಳುವದು ಹಾಗು ಇಷ್ಟಪಡದಿರುವದನ್ನೇ ಹೊರತು ಬೇರೆ ಯಾವುದನ್ನೂ ಅವರಿಂದ ನಿರೀಕ್ಷಿಸಲು ಸಾಧ್ಯವಾಗದು. ಆದರೂ ನಾವು ಕರ್ತನ ಈ ಮಾತನ್ನು ನೆನಸಿಕೊಳ್ಳಬೇಕು; ಅದೇನಂದರೆ, "ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದ ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳುಕೊಳ್ಳಿರಿ. ನೀವು ಲೋಕದ ಕಡೆಯವರಾಗಿರುತ್ತಿದ್ದರೆ (ಅದರ ಮನೋಭಾವ, ತತ್ವ, ವಿಧಾನ, ಮೊದಲಾದವುಗಳಲ್ಲಿ ಪಾಲುಗಾರರಾಗಿದ್ದರೆ) ಲೋಕವು ನಿಮ್ಮ ಮೇಲೆ ತನ್ನವರೆಂದು ಮಮತೆ ಇಡುತ್ತಿತ್ತು. ಆದರೆ ನೀವು ಲೋಕದ ಕಡೆಯವರಲ್ಲದೆ ಇರುವದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದು ಕೊಂಡಿರುವದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷಮಾಡುತ್ತದೆ. ದಣಿಗಿಂತ ಆಳು ದೊಡ್ಡವನಲ್ಲವೆಂಬದಾಗಿ ನಾನು ನಿಮಗೆ ಹೇಳಿದ ಮಾತನ್ನು ಜ್ಞಾಪಕಮಾಡಿಕೊಳ್ಳಿರಿ. ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆ ಪಡಿಸುವರು. ಅವರು ನನ್ನ ಮಾತನ್ನು ಕೈಕೊಂಡು ನಡೆದರೆ ನಿಮ್ಮ ಮಾತನ್ನು ಸಹ ಕೈಕೊಂಡು ನಡೆಯುವರು." (ಯೋಹಾನ 15:18–20) ನಾವು ನಿಜವಾಗಿಯೂ [ದೇವರ] ಸ್ವಕೀಯ ಪ್ರಜೆಯೂ (ವಿಶಿಷ್ಟ ಜನವೂ), ಸತ್ಕ್ರೀಯೆಗಳಲ್ಲಿ ಆಸಕ್ತರೂ ಆಗಿದ್ದೇವೆಂಬುದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳೋಣ.

*****

ಸೌಲ–ದಾವೀದರ ಬಗ್ಗೆ ಪುನರಾವಲೋಕನ

ರೀಪ್ರಿಂಟ್ಸ್ ಪುಟ 4255

2 ಸಮುವೇಲ 5:12

"ಇದರಿಂದ ದಾವೀದನು–ಯೆಹೋವನು ನನ್ನನ್ನು ಇಸ್ರಾಯೇಲ್ ರಾಜನನ್ನಾಗಿ ಸ್ಥಿರಪಡಿಸಿ ತನ್ನ ಪ್ರಜೆಗಳಾದ ಇಸ್ರಾಯೇಲ್ಯರ ನಿಮಿತ್ತವಾಗಿ ನನ್ನ ರಾಜ್ಯವನ್ನು ವೃದ್ಧಿಪಡಿಸಿದನೆಂದು ತಿಳುಕೊಂಡನು." – 2 ಸಮುವೇಲ 5:12

ಪುನರಾವಲೋಕನದಲ್ಲಿರುವ ಈ ಇಬ್ಬರು ಪುರುಷರಲ್ಲಿ ಸೌಲನು ತನ್ನ ಜೀವಿತದ ಆರಂಭದಲ್ಲಿ ನಿಶ್ಚಯವಾಗಿ ಹೆಚ್ಚು ಅನುಕೂಲಕರವಾದ ಅವಕಾಶಗಳನ್ನು ಹೊಂದಿದ್ದನು. ಆತನನ್ನು ಜನರ ಗಮನಕ್ಕೆ ತರಲ್ಪಟ್ಟಾಗ ಆತನ ಸ್ವರೂಪವು ಬಹು ವಿಶೇಷವಾಗಿ ಆತನನ್ನು ಅರಸನ ಕಾರ್ಯಸ್ಥಾನಕ್ಕೆ ಹೊಂದಿಕೊಳ್ಳುವಂತೆ ಮಾಡಿದ್ದವೆಂದು ಕಾಣುತ್ತದೆ. ಅವರು ಈ ವಿಶಿಷ್ಟವಾದ ಲಕ್ಷಣಗಳನ್ನು ಗುರುತಿಸಿಕೊಂಡವರಾಗಿ ಆತನನ್ನು ಹಿಂಜರಿಯದೆ ಸ್ವೀಕರಿಸಿಕೊಂಡಿದ್ದರು. ಸ್ವಲ್ಪಕಾಲ ಅವನು ದೀನನಾಗಿ ನಡೆದುಕೊಂಡಿದ್ದು, ದೇವರ ಚಿತ್ತವನ್ನು ಮಾಡಲು ಎಚ್ಚರಿಕೆಯಿಂದ ಪರಿಶ್ರಮಿಸಿದ್ದನು; ಆದರೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳದಿದ್ದು, ದೇವರ ಚಿತ್ತದೊಂದಿಗೆ ತನ್ನ ಚಿತ್ತವನ್ನು ಮಿಶ್ರಣಮಾಡಿ ಸೇರಿಸಿಕೊಳ್ಳುವಂತಾಗಲು

ಆತನಿಗೆ ಬಹು ಕಾಲ ಹಿಡಿಯಲಿಲ್ಲ. ಪರಿಣಾಮವಾಗಿ ಅವಿಧೇಯತೆ ವೈಫಲ್ಯ ಸಂಕಷ್ಟಕ್ಕೊಳಗಾಗಿದ್ದ ಮನಸ್ಸು ಚಿತ್ತಭ್ರಮಣೆಯ ಮಟ್ಟಿಗೆ ಬೆಳೆದುಬಂದು ಕಡೆಯಲ್ಲಿ ಒಂದು ಅವಮಾನಕರ ಮರಣವು ಸಂಭವಿಸಿತ್ತು. ಸೌಲನ ಗುಣದಲ್ಲಿನ ದೋಷವೆಂದರೆ ಅದು ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಆತನಲ್ಲಿದ್ದ ಕೊರತೆ, ಹಾಗು ಕೆಲವು ಮಟ್ಟಿಗೆ ಸ್ವಂತ ಚಿತ್ತವನ್ನು ಆತನು ಇರಿಸಿಕೊಂಡಂಥದ್ದೇ. ಆತನಲ್ಲಿದ್ದ ತೊಂದರೆಯು ಇದೇ ಎಂದು ತೋರುತ್ತದೆ. ಇದೇ ವಿಧವಾದ ಒಂದು ಸಂಕಷ್ಟವು ತಾವು ಕರೆಯಲ್ಪಟ್ಟು ಆಯಲ್ಪಟ್ಟದ್ದನ್ನು ದೃಢಪಡಿಸಿಕೊಳ್ಳುವದರಲ್ಲಿ ವಿಫಲರಾದವರನ್ನು ಬಾಧಿಸುತ್ತದೆ. ಅವರು ಎರಡನೇ ಮರಣಕ್ಕೆ ಹೋಗುವರೋ ಇಲ್ಲವೇ ಮಹಾ ಸಮೂಹದಲ್ಲಿ ಸೇರುವರೋ, ಅವರ ವೈಫಲ್ಯದಲ್ಲಿರುವ ದೋಷವೆಂದರೆ ಅದು ತಮ್ಮ ಜೀವನದ ಅನುದಿನದ ಹಿತಾಸಕ್ತಿಗಳೆಲ್ಲವನ್ನು ದೇವರ ಚಿತ್ತಕ್ಕೆ ಪೂರ್ಣವಾಗಿ ಸಮರ್ಪಿಸಿಕೊಂಡವರಾಗಿ ಆತನ [ದೇವರ] ನಡಿಸುವಿಕೆಯನ್ನು ಅಂಗೀಕರಿಕೊಂಡು ತಮ್ಮ ಸ್ವಾರ್ಥವನ್ನು ನಿರಾಕರಿಸಿಕೊಳ್ಳಲು ಅಂದರೆ ನಿಗ್ರಹಿಸಿಕೊಳ್ಳಲು ಅವರಲ್ಲಿರುವಂಥ ನಿರ್ಲಕ್ಷ್ಯವೇ.

ದಾವೀದನ ಗುಣವು ಸೌಲನದಕ್ಕೆ ತೀವ್ರ ರೀತಿಯಲ್ಲಿ ತದ್ವಿರುದ್ಧವಾಗಿತ್ತು. ತನ್ನ ವೃತ್ತಿಯ ಆರಂಭದಲ್ಲಿ ಅಲ್ಪ ಅನುಗ್ರಹದ ಸನ್ನಿವೇಶವುಳ್ಳವನಾಗಿದ್ದು, ಬಹು ಎತ್ತರವಿಲ್ಲದವನಾಗಿ ನೋಡಲು ಪ್ರಭಾವವಿಲ್ಲದ ಸ್ಥಿತಿಯವನಂತಿದ್ದು ಅಲ್ಪ ಸ್ಥಿತಿವಂತಿಕೆಯ ಕುಟುಂಬದವನಾಗಿದ್ದ ಸಂಭವವಿದ್ದು, ಅಲ್ಲದೆ ಹುಟ್ಟಿನಿಂದ ಯಾವ ಉತ್ತಮವಾದ ಸಹಜ ಸಾಮರ್ಥ್ಯವಿಲ್ಲದೇ ಇದ್ದಂಥ ದಾವೀದನ ಜೀವನದ ಫಲಿತಾಂಶವು ಸೌಲನದಕ್ಕೆ ತೀವ್ರವಾಗಿ ಭಿನ್ನವಾಗಿತ್ತು. ಸಂಕಷ್ಟದಲ್ಲಿನ ಆತನ ವೃತ್ತಿ ಜೀವನವನ್ನು ಹೇಗೆ ನೋಡಿದರೂ, ಅದು ಸರಿಯಾದ ರೀತಿಯಲ್ಲಿ ಹಾಗು ಸೂಕ್ತವಾದ ಮಾರ್ಗದಲ್ಲಿ ಪ್ರಯೋಗಿಸಲ್ಪಟ್ಟ ಧೈರ್ಯ ದೃಢ ನಿರ್ಧಾರ ಉಳ್ಳದ್ದಾಗಿತ್ತು. ಆತನು ಒಬ್ಬ ಕಾಡು ಮೃಗದ ಬೇಟೆಗಾರನಲ್ಲದಿದ್ದರೂ, ಕುರಿ ಹಿಂಡನ್ನು ಕಾಪಾಡುವ ಸಲುವಾಗಿ ಸಿಂಹ ಮತ್ತು ಕರಡಿಯನ್ನು ಸಿಗಿದುಹಾಕಿದ್ದನು. ಆತನು ಮುಷ್ಠಿಕಾಳಗದವನಾಗಲೀ ಇಲ್ಲವೇ ರಂಗಸ್ಥಳದ ಹೋರಾಟಗಾರನಾಗಲೀ ಆಗಿರಲಿಲ್ಲವಾದರೂ ಸೂಕ್ತ ಸಮಯದಲ್ಲಿ ತನ್ನ ಜನರ ರಕ್ಷಣೆಗಾಗಿ ತನ್ನ ಪ್ರಾಣವನ್ನು ಮುಡುಪಾಗಿಡುತ್ತಿದ್ದನು. ಅರಸನ ಸ್ಥಾನಕ್ಕೆ ಅಭಿಷೇಕಮಾಡಲ್ಪಟ್ಟಾಗ ತನಗೆ ಅನುಗ್ರಹಿಸಲಾದ ಗೌರವವನ್ನು ಉತ್ತಮವೆಂದು ಪರಿಗಣಿಸಿದ್ದನು. ಆದರೂ ಇದನ್ನು ಸೌಜನ್ಯದಿಂದ ಸ್ವೀಕರಿಸಿದವನಾಗಿ ಇದರ ಬಗ್ಗೆ ಎಂದೂ ಕೊಚ್ಚಿಕೊಳ್ಳದೆ ದೇವರ ಕಾರ್ಯವಿಧಿಯನ್ನು ತ್ವರಿತಗೊಳಿಸಲು ಎಂದೂ ದುಡುಕಿನಿಂದ ಯತ್ನಿಸಿರಲಿಲ್ಲ. ಆತನು ಅರಸನ ವಿರೋಧವನ್ನು ತಾಳ್ಮೆಯಿಂದ ಸಹಿಸಿಕೊಂಡಿದ್ದನು; ಆದರೂ ರಾಜಮನೆತನದವರನ್ನು ಅತಿ ಗೌರವದಿಂದ ಗಾಢವಾಗಿ ಸತ್ಕರಿಸಿದ್ದನು; ಹಾಗು ಕಡೆಯಲ್ಲಿ ಆ ಜನಾಂಗದ ಮೇಲೆ ತನ್ನನ್ನು ರಾಜನನ್ನಾಗಿ ವಿಧಿಸಿಕೊಂಡು ತನ್ನನ್ನು ಅಂಗೀಕರಿಸಬೇಕೆಂದು ಆಗ್ರಹಮಾಡುವದಕ್ಕೆ ಬದಲಾಗಿ ದೇವರ ನೇಮಿತ ಸಮಯಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿದ್ದನು. ಒಳ್ಳೆಯ ಹಾಗು ಮಹಾ ಪುರುಷರ ಜೀವನವನ್ನು ಅಧ್ಯಯನಮಾಡುವರಿಂದ ಲಭಿಸುವ ಫಲಿತಾಂಶಗಳಲ್ಲಿ ಒಂದು ಎಂದರೆ ಅದು ಅವರು ಲೋಕವನ್ನು ಉತ್ತಮಗೊಳಿಸಲು ಸಮರ್ಥರಾಗಲು ಬಳಸಿದ್ದ ಮಾರ್ಗವು ಯಾವದಿತ್ತೆಂಬುದನ್ನು ನೋಡುವದರಲ್ಲಿರುತ್ತದೆ.

"ಮಹಾ ಪುರುಷರ ಜೀವನಗಳೆಲ್ಲವು ನಮಗೆ ನೆನಪಿಸುವದು:
ನಾವು ನಮ್ಮ ಜೀವಿತಗಳನ್ನು ಆದರ್ಶಗೊಳಿಸಲು ಸಾಧ್ಯವೆಂಬುದನ್ನು,
ಹಾಗು ಹಿಂದೆ ಸರಿಯುವದನ್ನು ನಮ್ಮ ಹಿಂದೆ ಹಾಕಿದವರಾಗಿ,
ಹೆಜ್ಜೆಯ ಜಾಡನ್ನು ಸಮಯವೆಂಬ ಮರಳಿನ ಮೇಲೆ ಬಿಡುವದು."

ಲೋಕದಲ್ಲಿ ಪ್ರಖ್ಯಾತಿಗೆ ಏರಿದವರಲ್ಲಿ ಅನೇಕರು ನಾವು ನೋಡಲು ಸಾಧ್ಯವಾದಂಥ ಯಾವ ಹೆಜ್ಜೆಯ ಜಾಡನ್ನೂ ಬಿಟ್ಟಿರುವದಿಲ್ಲ; ಆದರೆ ದೇವರು ನಮ್ಮ ಮುಂದೆ ದೊಡ್ಡ ಉದಾಹರಣೆಗಳನ್ನು ಏರ್ಪಡಿಸುವಾಗ ಆತನು ನಮಗೆ ಕೆಲವರು ಹೇಗೆ ಕೆಳಗೆ ಬಿದ್ದರೆಂಬುದರ ಹಾಗು ಇತರರು ಮೇಲೆ ಎದ್ದರೆಂಬುದರ ಹೆಜ್ಜೆಯ ಜಾಡನ್ನು ತೋರಿಸಿಕೊಡುವನು. ಸೌಲನು ಮೊದಲಿನ ಗುಂಪಿನವರಲ್ಲಿ ಒಬ್ಬನಾಗಿದ್ದನು, ದಾವೀದನು ಎರಡನೆಯ ಗುಂಪಿನವನಾಗಿದ್ದನು. ನಮ್ಮೆಲ್ಲರಿಂದ ಗಮನಿಸಬೇಕದಾದ ಮುಖ್ಯವಾದ ಅಂಶವೆಂದರೆ ಈ ಹೆಜ್ಜೆಯ ಜಾಡುಗಳು ಹೇಗೆ ವೈವಿಧ್ಯವಾಗಿರುತ್ತದೆಂಬದು; ಹಾಗು ನಾವು ಒಂದನ್ನು ದೂರಮಾಡಿ ಮತ್ತೊಂದರಿಂದ ಪ್ರಯೋಜನ–ಹೊಂದಬೇಕೆಂಬದೆ. ದಾವೀದನ ಯಶಸ್ಸಿನ ಗುಟ್ಟು ಕೇವಲ ತನ್ನ ಉದ್ದೇಶವನ್ನು ಸ್ಥಿರವಾಗಿರಿಸಿಕೊಂಡದ್ದು ಮಾತ್ರವಲ್ಲದೆ, ಜೊತೆಯಲ್ಲಿ ತನ್ನ ಉದ್ದೇಶವನ್ನು ಪೂರ್ಣವಾಗಿ ದೇವರ ಚಿತ್ತಕ್ಕೆ ಹೊಂದಾಣಿಸಿಕೊಂಡಂಥದ್ದೇ. ಸೌಲನಿಗೆ ತಾನು ಸಿಂಹ ಹಾಗು ಕರಡಿಯೊಂದಿಗೆ ಮಾಡಿದ ತನ್ನ ಹೋರಾಟದ ಕಥೆಯನ್ನು ಹೇಳುವಾಗಲೂ ಆತನು ದೇವರು ಅವುಗಳನ್ನು ಹೇಗೆ ತನ್ನ ಕೈಗೆ ಒಪ್ಪಿಸಿದನೆಂದು ಹೇಳಿ ದೇವರಿಗೆ ಮಹಿಮೆಯನ್ನು ಸಲ್ಲಿಸಿದ್ದನು. ಆತನ ವೃತ್ತಿಯ ಜೀವನದ ಪರ್ಯಂತರವಾಗಿಯೂ ಹೀಗೆಯೇ ಇತ್ತು. ತನ್ನ ಯಶಸ್ಸಿನ ಬಗ್ಗೆ ದೇವರಿಗೆ ಮಹಿಮೆ ಸಲ್ಲಿಸುವಂಥ ಹಾಗು ತನ್ನ ಜೀವನದಲ್ಲಿ ಯಾವುದೇ ವೈಫಲ್ಯತೆಗಳು ಇದ್ದಲ್ಲಿ ಅದು ತನ್ನ ಬಲಹೀನತೆ ಅಥವಾ ದೇವರ ರಹಸ್ಯವಾದ ಆಶೀರ್ವಾದವೆನ್ನುವಂಥ ಬಯಕೆಯು ಆತನಲ್ಲಿದ್ದಂಥದನ್ನು ನಾವು ಗಮನಿಸುತ್ತೇವೆ. ಹೀಗೆ ನಾವು ನೋಡುವದೇನಂದರೆ ದಾವೀದನ ಸಂಪೂರ್ಣವಾದ ಅಸ್ಥಿತ್ವವು ಪವಿತ್ರ ಶಾಸ್ತ್ರವಚನದ ಮಾತುಗಳನ್ನು ನಿದರ್ಶಿಸುತ್ತದೆ. ಅದೇನಂದರೆ–"ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು, (ಅಥವಾ ಆತನ ಚಿತ್ತವನ್ನು ಅಂಗೀಕರಿಸಿಕೋ)" [ಜ್ಞಾನೋಕ್ತಿ 3:6] "ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು." [ಕೀರ್ತನೆ 37:4]

ಉತೃಷ್ಟ ಆದರ್ಶಗಳಲ್ಲಿನ ಮೌಲ್ಯ

ನಮ್ಮ ಸುತ್ತಲೂ ಇರುವ ಲೋಕದಲ್ಲಿರುವವರನ್ನು, ಮತ್ತು ಹೆಸರಿನ ಕ್ರೈಸ್ತಸಭೆಯಲ್ಲಿರುವವರನ್ನು ನಾವು ದೃಷ್ಟಿಸುವಾಗ ಮಾನವಕುಲದಲ್ಲಿರುವ ಬಹು ಸಂಖ್ಯೆಯಲ್ಲಿನ ಜನರಲ್ಲಿ ಯಾವುದೇ ಆದರ್ಶ–ಆಕಾಂಕ್ಷೆಗಳು ಇಲ್ಲದಿರುವದನ್ನು ನಾವು ಕಾಣುತ್ತೇವೆ. ಅಯ್ಯೋ, ನತದೃಷ್ಟ ಸಂಗತಿಗಳು! ಅವರು ಯಾವುದನ್ನೂ ಕಾಣದಿರುವಾಗ ಅವರಿಗೆ ಎಂದಾದರೂ

ಸಂತೋಷವಿರುವದಾಗಲೀ ಅಥವಾ ಘನವಂತಿಕೆಯು ಗುರಿಯನ್ನು ತಲುಪುವುದಾಗಲೀ ಹೇಗೆ ಸಾಧ್ಯ? ಇನ್ನೊಮ್ಮೆ ನೋಡುವಾಗ, ಎಲ್ಲಾದಕ್ಕಿಂತಲೂ ನಿಕೃಷ್ಟವಾದ ಸಂಗತಿಯೆಂದರೆ ಅದು ಕೆಲವರಿಗೆ ಸಂಪನ್ಮೂಲವು ಒಂದೇ ಇದ್ದರೂ ವಿವಿಧ ಆಕಾಂಕ್ಷೆಗಳಿರುವನ್ನು ನಾವು ಗ್ರಹಿಸಿಕೊಂಡಿದ್ದೇವೆ. ಬಡ ಸೃಷ್ಟಿಗಳು! ಪಾಪದಲ್ಲಿ ಹುಟ್ಟಿ ಅನೀತಿಯಲ್ಲಿ ರೂಪುಗೊಂಡು ಬಹುಶಃ ಅಹಿತಕರವಾದ ಸನ್ನಿವೇಶದಲ್ಲಿ ಬೆಳೆದು ಬಂದವರಿಗೆ [ಪರಿಪೂರ್ಣತೆಯಿಂದ] ಬಿದ್ದುಹೋದ ಮನುಕುಲದಲ್ಲಿರುವ ಅಲ್ಪ ನೀತಿಭ್ರಷ್ಟತೆಯುಳ್ಳವರೂ ಹಾಗು ಹೆಚ್ಚು ಅನುಗ್ರಹಿತರೂ ಆಗಿರುವ ಇತರ ಕೆಲವರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವದರಲ್ಲಿ ಅವರು ತೀವ್ರವಾಗಿ ನ್ಯೂನ್ಯತೆಯುಳ್ಳವರಾಗಿದ್ದಾರೆ. ಪುನಃ ದೃಷ್ಟಿಸಿದಲ್ಲಿ, ಘನವಾದ ಪ್ರಾಪಂಚಿಕ ಆಕಾಂಕ್ಷೆಯುಳ್ಳ ಮೂರನೆಯ ಒಂದು ವರ್ಗವಿದ್ದು ಅದು ಐಶ್ವರ್ಯ ಪ್ರಭಾವ ಅಧಿಕಾರವನ್ನು ಆಶಿಸುವವರಾಗಿದ್ದು ಇವುಗಳನ್ನು ತಾವು ಘನತೆಗೌರವಯುತವಾಗಿ ಬಳಸಿಕೊಳ್ಳುವದು ಮಾತ್ರವಲ್ಲದೆ ತಮ್ಮ ಸಹಜೀವಿಗಳಿಗೆ ಹಾನಿಮಾಡಲು ಬಳಸದೇ ಇರುವ ಬಯಕೆಯನ್ನು ಹೊಂದಿದಾಗ್ಯೂ, ಕೆಲವು ಮಟ್ಟಿಗೆ ಇವುಗಳಿಗೆ ತದ್ವಿರುದ್ಧವಾಗಿರುವದನ್ನು ಹೊಂದಿರುವರು. ಮೊದಲಿನ ಎರಡು ವರ್ಗದವರಿಗಿಂತಲೂ ಜೀವನದಲ್ಲಿನ ಉತ್ತಮವಾದ ಧ್ಯೇಯೋದ್ದೇಶವುಳ್ಳಂಥ ಇವರಿಗೆ ಅಭಿನಂದಿಸಬೇಕಿರುವದು. ಅವರು ಒಳ್ಳೆಯ ಪರಿಸರದಲ್ಲಿ ಹುಟ್ಟಿದವರಾಗಿದ್ದು ಉತ್ತಮವಾದ ಅವಕಾಶಗಳನ್ನು ಹೊಂದಿರುವಂಥ ಸಾಧ್ಯತೆಯಿರುವದು.

ನಾವು ಮತ್ತೆ ದೃಷ್ಟಿಸಿದವರಾಗಿದ್ದು, ದೇವರ ಕೃಪೆಯಿಂದ ತಮ್ಮ ಕಣ್ಣುಗಳು ಭೂಸಂಬಂಧವಾದ ಸಂಗತಿಗಳಿಂದ ಪರಲೋಕದ ಸಂಗತಿಗಳ ಕಡೆಗೆ ಎತ್ತಲ್ಪಟ್ಟಿರುವ ನಾಲ್ಕನೇ ಒಂದು ವರ್ಗವಿರುವದನ್ನು ನೋಡುತ್ತೇವೆ. ಇಂಥವರಿಗೆ–"ಪೂರ್ವದ ಸ್ಥಿತಿ ಹೋಗಿ ಎಲ್ಲಾ ನೂತನವಾಗಿರುವದು." [2 ಕೊರಿಂಥ 5:17] ಪರಲೋಕದಲ್ಲಿನ ಸಂತೋಷ, ಪರಲೋಕದಲ್ಲಿರುವ ಅನ್ಯೋನ್ಯತೆ, ಪರಲೋಕದಲ್ಲಿ ನಡೆಯುವ ದೇವಾರಾಧನೆ ಇವುಗಳ ದರ್ಶನಗಳು ಎಷ್ಟು ಮಾರ್ಪಡಿಸಿರುವದೆಂದರೆ ಅವರ ಶಾರೀರಭಾವವು ಇನ್ನೂ ಬಲಹೀನವಾಗಿರುವಾಗಲೂ ಅವರ ಪ್ರಾಕೃತಭಾವಗಳು (ಮಾನಸಿಕ ಸ್ವಭಾವಗಳು) ನೂತನ ಮನಸ್ಸಿನ ಮೂಲಕವಾಗಿ ಜಯಿಸಲ್ಪಟ್ಟಿರುವದು. ಈ ವರ್ಗಕ್ಕೆ ಭೂಲೋಕವು ತೃಪ್ತಿಪಡಿಸಲು ಸಾಧ್ಯವಿಲ್ಲ. ಒಂದು ನೂತನ ಗುಣಮಟ್ಟದ ಮೌಲ್ಯವು ಅವರಿಗೆ ಲಭಿಸಿರುವದು; ಈ ಜೀವಿತದ ಸಂಗತಿಗಳನ್ನು "...ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯೊಡನೆ ಹೋಲಿಸಿಕೊಳ್ಳುವದು ಯೋಗ್ಯವಲ್ಲವೆಂದು ಭಾಸವಾಗುವದು." [ರೋಮಾ 8:18 ಇಂಗ್ಲೀಷ್ ಮೂಲದ ನೇರ ಅನುವಾದ] ಹೋಲಿಸಿ ನೋಡಿದ್ದಲ್ಲಿ ಅವರಿಗೆ ಈ [ಭೂಸಂಬಂಧದ] ಸಂಗತಿಗಳು ಕೇವಲ ಕಸವೆಂಬುದನ್ನು ಕಂಡುಕೊಳ್ಳುವರು. ಈ ವರ್ಗವನ್ನೇ ಕರ್ತನು ತನ್ನ ವಿಶೇಷವಾದ ಪರಿಪಾಲನೆ–ಯಲ್ಲಿಟ್ಟುಕೊಂಡು ಅವರಿಗೆ ಬೋಧಿಸುತ್ತಿರುವನು. ಯಾಕಂದರೆ ಅವರು ಆತನಿಗೆ ಪ್ರತಿಷ್ಠಿಸಿಕೊಂಡಿರುವರು, ಅವರಿಗೆ ಕರ್ತನು "ದೇವರ ಆಳವಾದ ವಿಷಯದ" ಎತ್ತರ ಆಳ ಉದ್ದ ಅಗಲದ ಬಗ್ಗೆ ಕೆಲವನ್ನು ತೋರಿಸಿಕೊಟ್ಟಿರುವನು. ಹೀಗೆ ಆತನು ಅವರಿಗೆ ತನ್ನ ಜ್ಞಾನ ಹಾಗು ಕೃಪೆಯ ಮೂಲಕವಾಗಿ ದೈವೀಕ ಶಕ್ತಿಯನ್ನು ನೀಡಿದ್ದು ಇವು ಅವರಲ್ಲಿ ಆತನ ಸುಚಿತ್ತವನ್ನು ನೆರವೇರಿಸುವ ಉದ್ದೇಶವನ್ನು ಪ್ರಯತ್ನವನ್ನು ಉಂಟುಮಾಡಿರುವದು. [ಫಿಲಿಪ್ಪ 2:13] ಅವರು ಈ ಅನುಗ್ರಹಿತ ಸ್ಥಾನವನ್ನು ಪಡಕೊಳ್ಳುವದರಲ್ಲಿನ ಗುಟ್ಟುಯೆಂದರೆ ಅದು ಅವರು ದೇವರ ಕೃಪೆಯ ಬಗ್ಗೆ ಕೇಳಿದವರಾಗಿ ತಮ್ಮ ಹೃದಯಗಳಲ್ಲಿ ಪ್ರತಿಸ್ಪಂದಿಸಿರುವದೇ. ಅವರು ತಮ್ಮನ್ನು ದೇವರಿಗೆ ಸಮರ್ಪಿಸಿಕೊಂಡವರಾಗಿದ್ದು ಅವರಲ್ಲಿ ಕೃಪಾಕಾರ್ಯವು ಅಭಿವೃದ್ಧಿಯಾಗುತ್ತಿರುವದು. ಅದು ಆತನ [ದೇವರ] ಕಾರ್ಯವಾಗಿರುವದು. "ನಾವು ಆತನ ನಿರ್ಮಾಣ, ಸತ್ಕಾರ್ಯಗಳನ್ನು ಮಾಡುವದಕ್ಕಾಗಿಯೇ ಕ್ರಿಸ್ತಯೇಸುವಿನಲ್ಲಿ ಸೃಷ್ಟಿಸಲ್ಪಟ್ಟಿರುವೆವು. – ಎಫೆಸ್ಸ 2:10; ಯಾಕೋಬ 1:8

ಎರಡು ಮನಸ್ಸುಳ್ಳವನು ಚಂಚಲನು

ಆದರೆ ನಾವು ಪುನಃ ಒಂದು ವಿಭಜನೆಯನ್ನು ಗುರುತಿಸಿಕೊಳ್ಳಬೇಕು; ಯಾಕಂದರೆ "ಇಸ್ರಾಯೇಲ್ ವಂಶದಲ್ಲಿ ಹುಟ್ಟಿದವರೆಲ್ಲರೂ ಇಸ್ರಾಯೇಲ್ಯರಲ್ಲ." [ರೋಮಾ 9:6] ದೇವರು ತನ್ನ ಗುಣಾತಿಶಯ ಹಾಗು ಯೋಜನೆಯನ್ನು ತೋರಿಸಿರುವ ನಾಲ್ಕನೇ ವರ್ಗದವರಲ್ಲಿ ಕೆಲವರು ಹೆಚ್ಚು ಹೊಣೆಗಾರರು ಹಾಗು ಕೆಲವರು ಕಡಿಮೆ ಹೊಣೆಗಾರರು. ಕೆಲವರು ಅಲ್ಪ ದೃಢವಾದ ನಿಲುವನ್ನು ತೆಗೆದುಕೊಂಡವರಾಗಿದ್ದು ಈ ಲೋಕದ ಸಂಗತಿಗಳು ಅದರ ಗೌರವ ಸಹಿತವಾಗಿ ದೇವರಿಂದ ಬರುವ ಗೌರವವನ್ನು ಹಾಗು ಮುಂದೆ ಬರಲಿರುವ ಲೋಕವನ್ನು ಪಡೆಯಲು ಪ್ರಯತ್ನಿಸುತ್ತಿರುವರು. ಹೀಗೆ ಮಾಡುವದರಲ್ಲಿ, ಅವರು ಒಡೆಯನ ಮಾತಿಗೆ ಗಮನಹರಿಸುತ್ತಿಲ್ಲ; ಒಡೆಯನು ತನ್ನ ಶಿಷ್ಯರಿಗೆ ಭರವಸೆಯಾಗಿ ಹೇಳಿರುವದೇನಂದರೆ ಇಂಥಾ ಒಂದು ಮಾರ್ಗವು ವಿಫಲವೆಂಬ ಅರ್ಥವನ್ನು ಕೊಡುವದು; ಇವರು ಲೋಕವನ್ನು ಮೆಚ್ಚಿಸುವವರಲ್ಲಿಯಾಗಲೀ ಇಲ್ಲವೇ ಕರ್ತನನ್ನು ಮೆಚ್ಚಿಸುವವರಲ್ಲಿಯಾಗಲೀ ಯಶಸ್ಸನ್ನು ಹೊಂದಲಾರರೆಂಬುದೇ. ಇಂಥವರು ಅಂತಿಮವಾಗಿ ನಿತ್ಯ ಜೀವಕ್ಕೆ ಕರತರಲ್ಪಡಬಹು–ದಾದರೂ, ಅವರು ಬುದ್ಧಿವಂತ ಕನ್ಯೆಯರಾಗುವದಿಲ್ಲ. ಅವರು [ಕ್ರಿಸ್ತನ] ಸಾವಿರ ವರುಷದಲ್ಲಿ ಆಳ್ವಿಕೆಮಾಡುವದಿಲ್ಲ. ಕರ್ತನು ತನ್ನನ್ನು ತಮ್ಮ ಪೂರ್ಣ ಹೃದಯ, ಪೂರ್ಣ ಪ್ರಾಣ, ಪೂರ್ಣ ಶಕ್ತಿ ಹಾಗು ಪೂರ್ಣ ಮನಸ್ಸಿನಿಂದ ಆರಾಧಿಸುವವಂಥವರನ್ನು ಹುಡುಕುತ್ತಿರುವನು. ಸಾವಿರ ವರುಷದ [ಆಳ್ವಿಕೆಯ] ರಾಜ್ಯದಲ್ಲಿ ರಾಣಿಯಾಗಿ ಅಂದರೆ ಮುದಲಗಿತ್ತಿಯಾಗಿ, ಯಜ್ಞದ ಕುರಿಯಾದಾತನ ಹೆಂಡತಿಯೂ ಹಾಗು ಆತನೊಡನೆ ಸಹ–ಬಾಧ್ಯರಾಗಿಯೂ ಆಗಿರುವ ತಮ್ಮ ಪೂರ್ಣ ಪ್ರಾಣದಿಂದ ಆರಾಧಿಸುವಂಥ ಈ ವರ್ಗವನ್ನೇ ಕರ್ತನು ವಿಶೇಷವಾಗಿ ಹುಡುಕುತ್ತಿರುವದು. ರಾಜವಂಶದವರೂ ದೈವ ಸ್ವಭಾವದಲ್ಲಿ ಪಾಲುಹೊಂದುವಂಥ ಕೇವಲ ಇಂಥವರನ್ನು ಕರ್ತನು ಈಗಾಗಲೇ ಮುಂದಾಗಿ ನೇಮಕ ಮಾಡಿದ್ದು ಅವರ ಬಗ್ಗೆ ಹೀಗೆ ಹೇಳಲಾಗಿರುವದು: "ತಾನು ಯಾರನ್ನು ತನ್ನವರೆಂದು ಮೊದಲೇ ತಿಳುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವಾಗುವದಕ್ಕೆ

ಮೊದಲೇ ನೇಮಿಸಿದನು." [ರೋಮಾ 8:29] ಇವರಿಗೇ ಆತನು ಕೃಪೆ ಹಾಗು ಮಹಿಮೆಯನ್ನು ನೀಡುವವನಾಗಿದ್ದು ಅವರಿಗೆ ಯಾವ ಶುಭವನ್ನು ಅನುಗ್ರಹಿಸದೇ ಇರುವದಿಲ್ಲ, ಯಾಕಂದರೆ ಅವರು ನೀತಿವಂತರಾಗಿ ನಡೆಯುವರು. ಅವರ ಹೃದಯವು ನೀತಿಯುಳ್ಳದ್ದಾಗಿದ್ದು, ಅವರ ಉದ್ದೇಶವು ದೇವರಿಗೂ ಆತನ ನ್ಯಾಯವಿಧಿ ಹಾಗು ಪ್ರೀತಿಗೂ ನಿಷ್ಠೆಯುಳ್ಳದ್ದಾಗಿರುವದು. ಜಯಶಾಲಿಗಳಾದ ಈ ವರ್ಗದವರಲ್ಲಿನ ವಿಶಿಷ್ಟವಾದ ಗುಣಲಕ್ಷಣವನ್ನು ನಾವು ನಮ್ಮ ಮನಸ್ಸುಗಳಲ್ಲಿ ಸ್ಥಿರವಾಗಿ ಇಟ್ಟುಕೊಳ್ಳುವವರಾಗೋಣ; ರಾಜ್ಯವಾಗಿ ರೂಪುಗೊಳ್ಳಲಿದ್ದು ಕ್ರಿಸ್ತನಿಗೆ ಸಹ–ಬಾಧ್ಯರಾಗಲಿರುವ ಇಂಥವರು ದೇವರಿಗೆ ನಿಷ್ಠಾವಂತರೂ ಪ್ರತಿಷ್ಠಿತರೂ ನಿಶ್ಚಿತಪಡಿಸಿಕೊಂಡವರೂ ಅಲ್ಲದೆ ಪೂರ್ಣ ವಿಶ್ವಾಸ ಭರವಸೆಯುಳ್ಳವರೂ ಆಗಿರಬೇಕು.

ಈ ಗುಣಲಕ್ಷಣಗಳು ನಮಗೆ ಕ್ಷಣಮಾತ್ರದಲ್ಲಿ ಬರತಕ್ಕದ್ದೆಂಬುದನ್ನು ನಾವು ಅಪೇಕ್ಷಿಸಲು ಸಾಧ್ಯವಾಗುವುದಿಲ್ಲ. ವಾಸ್ತವದಲ್ಲಿ ಅವುಗಳು ನಮ್ಮ ನೂತನ ಮನಸ್ಸಿನಲ್ಲಿ ಹಂತಹಂತವಾಗಿ ವೃದ್ಧಿಯಾಗುವಂಥ ಬೆಳವಣಿಗೆ. ಆದರೆ ಈ ಮಾರ್ಗದಲ್ಲಿ ಅಭಿವೃದ್ಧಿಯಾಗುವದನ್ನು ಸಾಧ್ಯವಾಗಿಸುವ ಮೊದಲ ತತ್ವವು ಅಂದರೆ ನಿಷ್ಠೆ ಹಾಗು ದೃಡ ನಿರ್ಧಾರದ ತತ್ವವು ನಮ್ಮ ಹೃದಯಗಳಲ್ಲಿ ಇರಬೇಕು. ಹೀಗಾಗಿ "ಚಿತ್ತ" ಎಂಬ ಸಣ್ಣ ಶಬ್ದವು ಕ್ರಿಸ್ತೀಯ ಗುಣದಲ್ಲಿ ತನ್ನದೇ ಆದ ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಆತನು ಇಚ್ಛೆಯುಳ್ಳವನಾಗಿರಬೇಕಿದ್ದು ಆ ಚಿತ್ತವು ದೇವರೊಂದಿಗೆ ಪೂರ್ಣವಾಗಿ ಹೊಂದಾಣಿಕೆ ಮಾಡಿಕೊಳ್ಳಲು ಸರಿಯಾದ ಮಾರ್ಗದರ್ಶನ ಹೊಂದಬೇಕು.

ಆದರ್ಶವನ್ನು ರೂಪಿಸಿಕೊಳ್ಳುವಿಕೆ

ಪ್ರತಿಯೊಂದು ಸಫಲತೆಯ ಜೀವಿತದಲ್ಲಿ ಒಂದು ಉನ್ನತವೂ ಹಾಗು ಒಳ್ಳೆಯದೂ ಆದ ಆದರ್ಶವು ಸೂಕ್ತವಾದುದೂ, ಅಗತ್ಯವಾದುದೂ ಎಂದು ನಾವು ಸ್ವಲ್ಪಕಾಲದ ಹಿಂದೆ ಹೇಳಿದ್ದೆವು. ಆದರೆ ಆದರ್ಶವು ಅಭಿವೃದ್ಧಿಯಾಗುವುದರಲ್ಲಿ ನಾವು ತಾಳ್ಮೆಯಿಂದ ಇಲ್ಲದಿದ್ದಲ್ಲಿ ಅದನ್ನು ಹೊಂದಿರುವದಕ್ಕೆ ಯಾವ ಬೆಲೆಯೂ ಇರುವದಿಲ್ಲ. ಕೊಳೆಯಾದ ಒಂದು ಅಮೃತಶಿಲೆಯ ಬಂಡೆಯನ್ನು ಕಂಡು ಮಹಾ ಶಿಲ್ಪಿಯಾದ ಮೈಖೇಲ್ ಏಂಜೆಲೋ ಎಂಬುವರು ಉಳಿ ಮತ್ತು ಸುತ್ತಿಗೆಯಿಂದ ಆ ಬಂಡೆಯನ್ನು ಸ್ಪಷ್ಟವಾಗಿ ಇಲ್ಲಿ ಅಲ್ಲಿ ಲಕ್ಷ್ಯವಿಲ್ಲದೆ ತುಂಡುಮಾಡಿ ಒಡೆದುಹಾಕಿದ್ದನು. ತಾನು ಏನು ಮಾಡುತ್ತಿರುವದಾಗಿ ಕೇಳಿದಾಗ ಆತನು ಹೇಳಿದ್ದು: "ನಾನು ಇಲ್ಲಿ ಒಬ್ಬ ದೇವದೂತನನ್ನು ಕಂಡೆನು, ಅಲ್ಲದೆ ಆತನನ್ನು ಹೊರಗೆ ತರಬೇಕಿತ್ತು." ಎಂದು. ಆತನು ತನ್ನ ಮನಸ್ಸಿನಲ್ಲಿ ಒಂದು ಆದರ್ಶವನ್ನು ಹೊಂದಿದ್ದನು ಆನಂತರ ಅದನ್ನು ಸಾಧಿಸ ಸಲುವಾಗಿ ಕಠಿಣವಾಗಿ ಶ್ರಮಪಟ್ಟಿದ್ದನು; ಅಂದರೆ ಆ ಅಮೃತಶಿಲೆಯಿಂದ ಕೆತ್ತನೆಮಾಡಿ ಆ ದೇವದೂತನನ್ನು ರೂಪಿಸಿದ್ದನು. ಪ್ರತಿಯೊಂದು ಸಫಲತೆಯುಳ್ಳ ಜೀವಿತದದಲ್ಲೂ ಹೀಗೆಯೇ ಇರಬೇಕು. ನಾವು ಆದರ್ಶವನ್ನು ಹೊಂದಿರಬೇಕು. ನಾವು ಆ ದೇವದೂತನನ್ನು ಕಾಣಬೇಕು. ಆನಂತರ ಅದರ ಸಾಧನೆಗಾಗಿ ನಾವು ಜಾಗರೂಕರಾಗಿ ತಾಳ್ಮೆಯಿಂದ ಮತ್ತು ಪ್ರಾರ್ಥನಾಪೂರ್ವಕವಾಗಿ ಪರಿಶ್ರಮಿಸಬೇಕು. ಕ್ರೈಸ್ತನ ಎದುರಿನಲ್ಲಿ ಇಟ್ಟಿರುವ ಆದರ್ಶವು ಕೇವಲ ದೇವದೂತನದಲ್ಲ, ಅದು ಹೆಚ್ಚಿನದು; ಅದು ದೈವಿಕವಾದುದು. ಅಪೋಸ್ತಲನ ಮಾತು–ಗಳಿಗಿಂತ ಕಡಿಮೆಯಾದುದೇನೂ ಮಾಡಲು ಸಾಧ್ಯವಾಗದು; ಅದೇನಂದರೆ "ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗ–ಬೇಕೆಂದು ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನ–ಗಳನ್ನು ದೇವರು ನಮಗೆ ದಯಪಾಲಿಸಿದ್ದಾನೆ". [2 ಪೇತ್ರ 1:4]

ಇದೇ ಅಭಿಪ್ರಾಯವನ್ನು ಭಕ್ತನಾದ ಯೋಹಾನನು ಬೇರೊಂದು ಸ್ಥಳದಲ್ಲಿ ಪ್ರಸ್ತುತಪಡಿಸಿದ್ದಾನೆ. ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಎಷ್ಟು ದೊಡ್ಡವರಾಗುವೆವೋ ಅಂದರೆ ಯಾವ ಪ್ರಭಾವ ಮಾನಗಳು ನಮ್ಮದಾಗುವವೋ, ಅದು ಇನ್ನೂ ಪ್ರತ್ಯಕ್ಷವಾಗಿಲ್ಲ, ಆದರೆ ಅಪೋಸ್ತಲನು ಭರವಸೆಯಾಗಿ ಹೇಳಿರುವದೇನಂದರೆ: "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು." [1 ಯೋಹಾನ 3:2] ಹಾಗಾದರೆ ನಾವು "ಮೊದಲನೇ ಪುನರುತ್ಥಾನದ" ಮೂಲಕವಾಗಿ "ಮಾರ್ಪಾಟು" ಹೊಂದಿದವರಾಗಿ ಆತನು ಇರುವಂತೆ ನಾವು ಮಾರ್ಪಟ್ಟು, ಆತನಿರುವ ಹಾಗೆಯೇ ನಾವು ಆತನನ್ನು ನೋಡಬೇಕಾದಲ್ಲಿ, ನಾವು ಆಗ ಕರ್ತನ ಮಹಿಮೆಯುಳ್ಳ ಸಂಗತಿಗಳನ್ನು ಹಾಗು ಆತನ ಉತ್ಕೃಷ್ಠತೆಯನ್ನು ನಮಗೆ ಅನ್ವಯಮಾಡಿಕೊಳ್ಳಬಹುದು. ಇದರ ವಿಷಯವಾಗಿ ಅಪೋಸ್ತಲನು ಹೇಳಿರುವದು: "...ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗಮರ್ತ್ಯ–ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು." [ಫಿಲಿಪ್ಪ 2:9–10] ಅಲ್ಲದೆ ಪುನಃ "ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾಧಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿಯೂ ಹೆಸರುಗೊಂಡವರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು. [ಎಫೆಸ್ಸ 1:21] ನಾವು ಆತನಂತಾಗಿ ಆತನ ಮಹಿಮೆಯಲ್ಲಿ ಪಾಲು ತೆಗೆದು–ಕೊಳ್ಳಬೇಕಾದಲ್ಲಿ, ಆಗ ಈ ಎಲ್ಲಾ ಪ್ರಭಾವಗಳು ಮಹಿಮೆಯುಳ್ಳ ಆದರ್ಶಕ್ಕೆ ಸೇರಿದ್ದು, ನಾವು ಅದನ್ನು ದಿಟ್ಟಿಸಿ ನೋಡುವ ಸಲುವಾಗಿ ದೇವರು ತಾನೇ ಅದನ್ನು ಪ್ರಸ್ತುತಪಡಿಸಿದ್ದಾನೆ. ತಮ್ಮೆದುರಿಗೆ ಇಂಥಾ ದೃಶ್ಯವು ಇರುವಾಗ ದೇವರು ಕೊಡುವ ಪೆಟ್ಟಿಗೆ ಯಾರು ತಾನೇ ತಮ್ಮನ್ನು ನಿಜವಾಗಿಯೂ ಸಮರ್ಪಿಸಿ ಕೊಳ್ಳದೆ ಇದ್ದಾರು! "ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ, ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು" [ರೋಮಾ 5:4] ಎಂಬುದನ್ನು ತಿಳಿದುಕೊಂಡಾಗ ಯಾರು ತಾನೇ ನಿಜವಾಗಿಯೂ ಅಗತ್ಯವಾದ [ಉಳಿಯ] ಕೆತ್ತನೆಯನ್ನು ನಯಗೊಳಿಸುವಿಕೆಯನ್ನು ಸಹಿಸಿಕೊಳ್ಳಲು ಇಚ್ಛಿಸದೇ ಇದ್ದಾರು! ಈ ಸಂಗತಿಗಳು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿಸಲ್ಪಟ್ಟಿರಲು ದೇವರ ಪರಿಜ್ಞಾನವನ್ನು ಹೊಂದುವದರಲ್ಲಿ ಇವು ನಮ್ಮನ್ನು

ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡಿ, ನಮ್ಮನ್ನು ಪ್ರೀತಿಸಿ ತನ್ನ ಅಮೂಲ್ಯವಾದ ರಕ್ತದಿಂದ ಕೊಂಡುಕೊಂಡಾತನ ನಿತ್ಯರಾಜ್ಯದಲ್ಲಿ ಧಾರಾಳವಾಗಿ ಪ್ರವೇಶಿಸುವಂತೆ ಮಾಡುತ್ತದೆ.

ದೇವರೇ ಆತನನ್ನು ಪ್ರತಿಷ್ಠಾಪಿಸಿದ್ದನು

ನಮ್ಮ ಸ್ವರ್ಣಮಯ ಪಠ್ಯಭಾಗವು ನಾವು ಈಗ ತಾನೇ ಸ್ವೀಕರಿಸಿಕೊಂಡಿರುವ ವಿಷಯಕ್ಕೆ ಸರಿಹೊಂದುವದಾಗಿದ್ದು, ಇದು ದಾವೀದನ ಯಶಸ್ಸಿನ ಗುಟ್ಟನ್ನು ಅಲ್ಲದೆ ದೇವರಿಗೆ ಮೆಚ್ಚಿಗೆಯಾಗುವಂಥ ರೀತಿಯಲ್ಲಿ ನಾವು ಗುಣಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಅಭ್ಯಾಸಿಸಬೇಕೆಂಬುದನ್ನು ನಮಗೆ ಹೊಸದಾಗಿ ತೋರಿಸಿಕೊಡುತ್ತದೆ. ದಾವೀದನ ಸ್ಥಾನದಲ್ಲಿರುವ ಕೆಲವರಿಗೆ "ದೇವರು ಬಹು ಪಕ್ಷಪಾತಿಯಾಗಿದ್ದು ನನ್ನನ್ನು ಕೇವಲ ತನ್ನ ಅನುಗ್ರಹಗಳನ್ನು ಸ್ವೀಕರಿಸಿಕೊಳ್ಳಲು ಆಯ್ಕೆಮಾಡಿರುವನು. ಆತನು ನನ್ನ ಬಗ್ಗೆ ಜನಾಂಗದಲ್ಲಿರುವ ಯಾವುದೇ ವ್ಯಕ್ತಿಗಿಂತಲೂ ಹೆಚ್ಚಾಗಿ ಕಾಳಜಿವಹಿಸಿರುವನು." ಎಂಬ ಆಲೋಚನೆ ಉಂಟಾಗ-ಬಹುದು. ಈ ಆಲೋಚನೆಯೊಂದಿಗೆ ಒಂದು ಪ್ರಮಾಣದ ಗರ್ವ ಅಹಂಕಾರಗಳು ಬರಬಹುದಾಗಿದ್ದು ಅದು ದಾವೀದನಿಗೂ (ಅಲ್ಲದೆ ಇತರ ಎಲ್ಲರಿಗೂ) ಬಹು ಹಾನಿಕರವಾಗುತ್ತಿತ್ತು. ಇವರು ಹೀಗೆ ಸಹ ಹೇಳಬಹುದಿತ್ತು: "ದೇವರು ನನ್ನನ್ನು ಆಳ್ವಿಕೆಮಾಡಲು ಈ ಜನಾಂಗದಲ್ಲಿನ ಎಲ್ಲಾ ವ್ಯಕ್ತಿಗಳಿಗಿಂತ ಅತಿ ಅರ್ಹನೆಂದು ಕಂಡಿರುವನು; ಅಲ್ಲದೆ ಯಾವುದೇ ವ್ಯಕ್ತಿಯು ಈ ಮನೋಭಾವವನ್ನು ಪೂರ್ಣವಾಗಿ ಒಪ್ಪಿಕೊಳ್ಳುವದಿಲ್ಲವೋ ಅವನು ದೇವರೊಂದಿಗೆ ಹೊಂದಿಕೆಯಿಲ್ಲದವನಾಗಿದ್ದು ಅವನು ಆತನ ಕೋಪ ಅಸಮ್ಮತಿಗಳಿಗೆ ಒಳಗಾಗುವನು." ದಾವೀದನು ಏನಾದರೂ ಇಂಥಾ ಒಂದು ನಿಲುವನ್ನು ತೆಗೆದುಕೊಂಡದ್ದೇ-ಯಾದಲ್ಲಿ ಅದು ಆತನಲ್ಲಿ ಒಂದು ಕೆಟ್ಟ ಗುಣಗಳನ್ನು ಉಂಟುಮಾಡುತ್ತಿದ್ದು, ಇಂಥಾ ಒಂದು ನಿಲುವನ್ನು ಇತರರು ತೆಗೆದುಕೊಂಡಿದ್ದಲ್ಲಿ ಅದು ಅವರಲ್ಲಿ ಹೀಗೆಯೇ ಹಾನಿಕರವಾಗಿ ಕಾರ್ಯವೆಸಗುತ್ತಿತ್ತು. ಅದು ಅವರನ್ನು ಬಡಾಯಿಕೊಚ್ಚುವವರೂ ಅಹಂಕಾರಿಗಳೂ ಪ್ರೀತಿಯಿಲ್ಲದವರೂ ಆಗುವಂತೆ ಮಾಡಿ ಅವರನ್ನು ದೇವರಿಗೆ ಸೂಕ್ತವಾದ ಸೇವೆಮಾಡಲು ಅನರ್ಹರನ್ನಾಗಿಸುವದು.

ದಾವೀದನ ಆಲೋಚನೆಯು ಈ ವಿಷಯದಲ್ಲಿ ಸೂಕ್ತವಾದುದಾಗಿತ್ತು. ದೇವರು ನನ್ನನ್ನು ಇಸ್ರಾಯೇಲ್ಯರ ಮೇಲೆ ಅರಸನನ್ನಾಗಿ ಸ್ಥಾಪಿಸಿರುವನೆಂದೂ ಅಲ್ಲದೆ ತನ್ನ ಜನರಾದ ಇಸ್ರಾಯೇಲ್ಯರ ಸಲುವಾಗಿ ಅರಸನನ್ನಾಗಿ ಮಾಡಿ ಉನ್ನತ ಸ್ಥಾನಕ್ಕೆ ಏರಿಸಿದ್ದಾನೆಂಬುದನ್ನು ಅರಿತುಕೊಂಡಿದ್ದನು. ಹೀಗೆಯೇ ಸಹ ದೇವರು ಸಭೆಯನ್ನು ಆರಿಸಿಕೊಳ್ಳುವಲ್ಲಿ ಅಥವಾ ಆಯ್ಕೆ-ಮಾಡುವಲ್ಲಿ ಒಂದು ಉದ್ದೇಶವನ್ನು ಹೊಂದಿದ್ದಾನೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. "ನಾವು ಒಂದು ಉದ್ದೇಶಕ್ಕಾಗಿ ಆಯಲ್ಪಟ್ಟಿರುವೆವು" ಎಂದು ಅಪೋಸ್ತಲನು ಹೇಳಿರುವನು. ಲೋಕವನ್ನು ಆಶೀರ್ವದಿಸುವಂಥ ಒಂದು ರಾಜ್ಯವು ದೇವರ ಉದ್ದೇಶವಾಗಿರುವದು. ಅಲ್ಲದೆ ಆತನಿಗೆ ಬೇರೆ ಇತರರು ಅಂದರೆ ದೇವದೂತರು ಹಾಗು ಮನುಷ್ಯರು ಅನೇಕರಿದ್ದು, ಇವರನ್ನು ಈ ಮಹಾ ಉದ್ದೇಶಕ್ಕಾಗಿ ಆದುಕೊಳ್ಳಲು ಸಾಧ್ಯವಿರಲು ಅವರನ್ನು ತಾನು ಮುಂದಾಗಿ ಮಾಡಿದ ಏರ್ಪಾಡಿನ ಮೂಲಕವಾಗಿ ಆಕಾರಕೊಟ್ಟು ಅವರನ್ನು ತನ್ನ ಚಿತ್ತವನ್ನು ನೆರವೇರಿಸುವಂತಾಗಲು ರೂಪಿಸಲು ಸಾಧ್ಯವಿತ್ತು. ಆದರೆ ತನ್ನ ಕರುಣೆಯ ಮೂಲಕವಾಗಿ ಆತನು "ಜ್ಞಾನಿಗಳಲ್ಲಿ ಅನೇಕರಿಲ್ಲದ, ಕುಲೀನರು ಅನೇಕರಿಲ್ಲದ, ಅಧಿಕಾರಿಗಳು ಅನೇಕರಿಲ್ಲದ, ಆದರೆ ಲೋಕದ ಬಲಹೀನರು" ಇಂಥವರನ್ನು ತನ್ನ ಯೋಜನೆಯನ್ನು ಕಾರ್ಯಗತಮಾಡಲು ಆದುಕೊಂಡಿರುವನು. ಈ ಆಲೋಚನೆಯು ನಮ್ಮನ್ನು ಬಹು ದೀನರನ್ನಾಗಿಮಾಡಿ ಕರ್ತನಿಗೆ ಬಹು ಸಮೀಪಸ್ಥರಾಗುವಂತೆ ಮಾಡಲಿ. ನಾವು ಭೂಮಿಯ ಎಲ್ಲಾ ಕುಲಗಳನ್ನು ಆಳ್ವಿಕೆಮಾಡಿ ನ್ಯಾಯತೀರಿಸಿ ಉನ್ನತ ಸ್ಥಾನಕ್ಕೆ ತರಲು ಅವಶ್ಯಕವಾದ ಪಾಠಗಳನ್ನು ಕಲಿತುಕೊಳ್ಳಲು ಪರಿಶ್ರಮಿಸುವಂಥವರಾಗೋಣ.

*****

ಮಂಜೂಷವು ಯೆರೂಸಲೇಮಿಗೆ ತರಲಾದುದು

ರೀಪ್ರಿಂಟ್ಸ್ ಪುಟ 2002

2 ಸಮುವೇಲ 6:1-12

"ಸೇನಾಧೀಶ್ವರನಾದ ಯೆಹೋವನೇ, ನಿನ್ನಲ್ಲಿ ಭರವಸವಿಡುವ ಮನುಷ್ಯನು ಧನ್ಯನು" – ಕೀರ್ತನೆ 84:12

ಈ ಪಾಠದಲ್ಲಿನ ಘಟನೆಯ ಸಂಬಂಧವಾದ ವಿಶೇಷ ಬೋಧನೆಯು ದೇವರಲ್ಲಿ ಭಯಭಕ್ತಿಯ ವಿಷಯವಾಗಿರುವದು. "ಆತನ ನಾಮವು ಪರಿಶುದ್ಧವೂ ಭಯಂಕರವೂ ಆಗಿದೆ." [ಕೀರ್ತನೆ 111:9] "ಯೆಹೋವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುವವನನ್ನು ಶಿಕ್ಷಿಸಿದೆ ಬಿಡುವದಿಲ್ಲ." [ವಿಮೋ. 20:7] "ಆತನು ಪರಿಶುದ್ಧರ ಸಭೆಯಲ್ಲಿ ಭಯಂಕರನಾದ ದೇವರು; ತನ್ನ ಎಲ್ಲಾ ಪರಿವಾರದವರಿಗಿಂತ ಭೀಕರನು. [ಕೀರ್ತನೆ 89:7] ದೇವರು ಮೋಶೆಯೊಡನೆ ಮಾತನಾಡಲು ಉರಿಯುವ ಪೊದೆಯಲ್ಲಿ ಕಾಣಿಸಿಕೊಂಡಿದ್ದಾಗ ಆತನಿಗೆ ಆಜ್ಞಾಪಿಸಿದ್ದೇನಂದರೆ: "ನಿನ್ನ ಕಾಲಿನ ಕೆರಗಳನ್ನು ತೆಗೆದುಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧಭೂಮಿ.." [ವಿಮೋ. 3:5] ಹೀಗೆಯೇ ಆತನು ಎಲ್ಲಾ ಜನರ ಎದುರಿನಲ್ಲಿ ಸೀನಾಯಿ ಬೆಟ್ಟದ ಮೇಲೆ ಕಾಣಿಸಿಕೊಂಡಿದ್ದಾಗ ಆತನು ಕಾರ್ಮುಗಿಲಿನಿಂದ ಸುತ್ತುವರೆಯಲ್ಪಟ್ಟಿದ್ದು ಅಲ್ಲಿ ಭಯಭಕ್ತಿ ಹುಟ್ಟಿಸುವಂತ ಘನತೆ ಗಾಂಭೀರ್ಯದ ದೊಡ್ಡ ಪ್ರದರ್ಶನವಾಗಿತ್ತು; ಅಲ್ಲದೆ ಭಕ್ತಿಹೀನವಾದ ಯಾವುದೇ ಸಲಿಗೆ ವರ್ತನೆಯ ವಿರುದ್ಧವಾಗಿ

ಅಲ್ಲಿ ವಿಶೇಷ ನಿರ್ಬಂಧವನ್ನು ವಿಧಿಸಲಾಗಿತ್ತು. [ವಿಮೋ 19:11–13] ಆತನ ಆಜ್ಞಾವಿಧಿಗಳ ಹಾಗು ಆತನ ದೇವಸ್ಥಾನದ ಬಗ್ಗೆ ಭಯಭಕ್ತಿಯುಳ್ಳವರಾಗಿರಬೇಕೆಂದು ಇಸ್ರಾಯೇಲ್ಯರಿಗೆ ವಿಶೇಷವಾಗಿ ಆಜ್ಞಾಪಿಸಲಾಗಿತ್ತು. [ಯಾಜಕ 19:30]

ಭಯಭಕ್ತಿಯನ್ನು ಹಲವು ವೇಳೆ ಭಯಮಿಶ್ರಿತ ಪ್ರೀತಿಯಿಂದ ಕೂಡಿದ ಗಾಢವಾದ ಗೌರವ ಭಾವವೆಂದೂ; ದೈವೀಕ ಹಾಗು ಪರಿಶುದ್ಧವಾದವುಗಳ ಕಡೆಗೆ ನಡೆಸಲ್ಪಟ್ಟಾಗ ಅದು ಒಂದು ಆರಾಧನೆಯ ಭಾವವೆಂದೂ: ಅಲ್ಲದೆ ಇಂಥಾ ಭಾವನೆಯಿಂದ ಪ್ರೇರಿತವಾದ ಅಥವಾ ಇಂಥಾ ಭಾವನೆಗೆ ಸರಿಹೊಂದಿಸಲ್ಪಟ್ಟ ನಡವಳಿಕೆಯೆಂದೂ ಸಹ ವ್ಯಾಖ್ಯಾನಿಸಲಾಗಿರುವದು. "ಯೆಹೋವನ ಭಯವೇ ಜ್ಞಾನಕ್ಕೆ ಮೂಲವು." [ಕೀರ್ತನೆ 111:10] ಸಮಸ್ತ ವಿಶ್ವದ ಒಡೆಯನೂ ಹಾಗು ಅದರ ಪರಿಪಾಲಕನೂ, ನಮ್ಮ ಅಸ್ಥಿತ್ವದ ರಚನಾಕರ್ತನೂ, ನಮ್ಮನ್ನು ಸೃಷ್ಟಿಸಿದವನೂ ಆಗಿರುವಾತನ ಕಡೆಗೆ ಸೃಷ್ಟಿಗಳೆಲ್ಲವುಗಳಿಗೆ ಇರಬೇಕಾದ ಸೂಕ್ತವಾದ ಮನೋಭಾವವು ಇದೇ. ಆದುದರಿಂದ ಆತನು ನುಡಿಯುವಾಗ ನಮ್ಮ ಕಿವಿಗಳು ಆತನ ಸ್ವರಕ್ಕೆ ಭಯಭಕ್ತಿಯಿಂದ ಲಕ್ಷ್ಯಕೊಡಬೇಕು; ಆತನು ಅಪ್ಪಣೆಮಾಡಿದ್ದನ್ನು ಕೈಗೊಳ್ಳಲು ನಮ್ಮ ಸಮಸ್ತ ಬಲವನ್ನು ಜಾಗೃತಗೊಳಿಸಬೇಕು. ನಮ್ಮ ಸುರಕ್ಷತೆ, ನಮ್ಮ ಸಂತೋಷ, ಹಾಗು ಘನತೆಯುಳ್ಳ ಗುಣಸ್ವಭಾವ, ಹಾಗು ಪ್ರಾಮಾಣಿಕವಾಗಿಯೂ ಬುದ್ಧಿವಿವೇಕದಿಂದಲೂ ಆದೇಶಗಳಿಗೆ ಕಿವಿಗೊಟ್ಟು ತಿಳುವಳಿಕೆಯಲ್ಲಿಯೂ ಜ್ಞಾನದಲ್ಲಿಯೂ ಅಭಿವುದ್ಧಿಹೊಂದುವದು ಇವೆಲ್ಲವೂ ಪ್ರಥಮವಾಗಿ ಕರ್ತನ ಕಡೆಗಿರುವ ನಮ್ಮ ಉತ್ಕೃಷ್ಟ ಭಯಭಕ್ತಿಯ ಮೇಲೆ ಅವಲಂಭಿತವಾಗಿರುತ್ತದೆ. ಮತ್ತು ಹೀಗಾಗಿ ಕರ್ತನು ನಮ್ಮಲ್ಲಿ ತನ್ನ ನಾಮಕ್ಕೆ ಸಲ್ಲತಕ್ಕ ಪುತ್ರಧರ್ಮ ಸಂಬಂಧವಾದ ಭಯಭಕ್ತಿಯು ನಮ್ಮಲ್ಲಿ ಬೆಳೆದು ಬರುವಂತೆ ಪೋಷಣೆ ಮಾಡುತ್ತಾನೆ.

ಯೆಹೋವನ ಮಂಜೂಷವು ಇಸ್ರಾಯೇಲ್ಯರಲ್ಲಿ ದೇವರ ಪ್ರತ್ಯಕ್ಷತೆಯ ಸಂಕೇತವಾಗಿತ್ತು, ಹೀಗಾಗಿ ಅದು ಛಾಯಾರೂಪದ ದೇವದರ್ಶನ ಗುಡಾರದ ಸಂಬಂಧದಲ್ಲಿ ಅತಿ ಪವಿತ್ರವಾದ ವಸ್ತುವಾಗಿತ್ತು. ದೇವದರ್ಶನ ಗುಡಾರಕ್ಕೆ ಸಂಬಂಧಿಸಿದ ಎಲ್ಲವುಗಳ ವಿಷಯದಲ್ಲಿದ್ದಂತೆ, ಇದು ದೈವೀಕ ನಿರ್ದೇಶನದ ಮೂಲಕವಾಗಿ ಮಾಡಲ್ಪಟ್ಟು, ಅದರ ಸ್ಥಾನವು ಅತಿ ಪರಿಶುದ್ಧ ಸ್ಥಳದಲ್ಲಿದ್ದು (ಶ್ರೇಷ್ಠ ಮಹಾಯಾಜಕನಾದ ಯೇಸುವನ್ನು ಪ್ರತಿನಿಧಿಸುವ) ಮಹಾ ಯಾಜಕನು ಮಾತ್ರ ಅದರಲ್ಲಿ ಪ್ರವೇಶಿಸಲು ಅನುಮತಿ ನೀಡಲಾಗಿತ್ತು; ಅದು ಕೇವಲ ವರುಷಕ್ಕೆ ಒಂದಾವರ್ತಿ ಮಾತ್ರ, ಅಂದರೆ ಅದು ದೋಷಪರಿಹಾರಕ ಮಹಾ ದಿನದಲ್ಲಾಗಿತ್ತು. ದೈವ ಪ್ರತ್ಯಕ್ಷತೆಯ ಸಂಕೇತವಾಗಿ, ಅಂದರ ಅದೇ ಸ್ವತಃ ದೇವರ ಪ್ರತ್ಯಕ್ಷತೆಯಾಗಿರಲು, ಇದನ್ನು ಭಕ್ತಿಹೀನವಾಗಿ ಬಳಸದಂತೆ ಕಾಪಾಡಲ್ಪಟ್ಟಿದ್ದಲ್ಲದೆ ಸಾಮಾನ್ಯರ ದೃಷ್ಟಿಯಿಂದಲೂ ಸಹ ಸಂರಕ್ಷಿಸಲ್ಪಟ್ಟಿತ್ತು. ಕೇವಲ ಕ್ರಿಸ್ತನ ದೇಹವಾಗಿರುವ ಈ ಸುವಾರ್ತಾಯುಗದ ಭಕ್ತರನ್ನು ಪ್ರತಿನಿಧಿಸುವ ಯಾಜಕರು ಮಾತ್ರ ಇದನ್ನು ನೋಡಲು ಅಥವಾ ಮುಟ್ಟಲು ಅಪ್ಪಣೆಯಾಗಿತ್ತು. ದೇವದರ್ಶನ ಗುಡಾರವು ಕೀಳಲ್ಪಟ್ಟು ಸ್ಥಳದಿಂದ ಸ್ಥಳಕ್ಕೆ ಸಾಗಿಸುವಾಗ ಈ ಸುವಾರ್ತಾಯುಗದಲ್ಲಿ ನಂಬಿಕೆಯ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟವರೆಲ್ಲರನ್ನು ಪ್ರತಿನಿಧಿಸುವ ಲೇವಿಯರು ವಿಧಿವತ್ತಾಗಿಯೂ ಭಯಭಕ್ತಿಯಿಂದಲೂ ಅದನ್ನು ಹೊರುವಂತೆ ಆದೇಶಿಸಲಾಗಿತ್ತು. ಆದರೆ ಮೊದಲು ಯಾಜಕರು ಅದನ್ನು ಎಚ್ಚರಿಕೆಯಿಂದ ಮುಚ್ಚಬೇಕಿತ್ತು; ಯಾಕಂದರೆ ಲೇವಿಯರು ಅದನ್ನು ನೋಡುವದಾಗಲೀ ಇಲ್ಲವೇ ಮುಟ್ಟುವದಾಗಲೀ ಮಾಡುವಂತಿರಲಿಲ್ಲ. – ಯಾಜಕಕಾಂಡ 4:15–20

ಈ ಪಾಠದಲ್ಲಿನ ಘಟನೆಗೆ ಮೊದಲು ಇಸ್ರಾಯೇಲ್ಯರಲ್ಲಿ ಧರ್ಮವು ಬಹು ಕೆಳ ಮಟ್ಟಕ್ಕೆ ಇಳಿದಿದ್ದು, ಅನೇಕ ವರುಷಗಳ ವರೆಗೆ ಮಂಜೂಷವು ದೇವದರ್ಶನ ಗುಡಾರದಲ್ಲಿನ ತನ್ನ ಸ್ಥಾನದಿಂದ ಬೇರ್ಪಡಲಾಗಿತ್ತು. ದೇವರ ಪ್ರತ್ಯಕ್ಷತೆಯ ಸಾದೃಷ್ಯ ಸಂಕೇತವಾಗಿ ಮಂಜೂಷವು ಎಲ್ಲೆಲ್ಲಿ ಹೋಗಲಾಗಿತ್ತೋ ದೇವರ ಶಕ್ತಿ ಹಾಗು ಅನುಗ್ರಹವು ಅದರೊಡನೆ ಹೋಗಿತ್ತು; ದೃಷ್ಟಾಂತವಾಗಿ ಹೇಳುವದಾದರೆ ಇಸ್ರಾಯೇಲ್ಯರು ಯೋರ್ದಾನ್ ನದಿಯನ್ನು ಒಣನೆಲವೆಂಬಂತೆ ದಾಟಿಹೋದಾಗ ಮಂಜೂಷವನ್ನು ಹೊತ್ತಿದ್ದವರು ಆ ನದಿಯ ಅಂಚನ್ನು ತಲುಪಿದ ಕೂಡಲೇ ಅವರ ಮುಂದೆ ನೀರು ಇಬ್ಭಾಗವಾಗಿತ್ತು; ಅಲ್ಲದೆ ಪುನಃ ಮಂಜೂಷದ ಎದುರಿನಲ್ಲಿ ಯೆರಿಕೋವಿನ ಗೋಡೆಗಳು ಬಿದ್ದುಹೋದಾಗ ಇಸ್ರಾಯೇಲ್ಯರು ಒಂದು ದೊಡ್ಡ ವಿಜಯವನ್ನು ಪಡೆದಿದ್ದರು. ಆದರೆ ಇಸ್ರಾಯೇಲ್ಯರು ದೇವರಿಗೆ ವಿರೋಧವಾಗಿ ಪಾಪವಾಡಿದಾಗ ಇಂಥಾ ಯಾವ ಶಕ್ತಿಯೂ ಆ ಸಂಕೇತದೊಡನೆ ಹೋಗಿರಲಿಲ್ಲ. ಅದು ಅವರ ಶತ್ರುಗಳ ಕೈವಶವಾಗುವಂತೆ ಬಿಡಲಾಗಿದ್ದು, ಇಸ್ರಾಯೇಲ್ಯರು ದೊಡ್ಡ ಸೋಲನ್ನು ಅನುಭವಿಸಿದಾಗ ಫಿಲಿಷ್ಟಿಯರು ಅದನ್ನು ಸ್ವಾಧೀನಪಡಿಸಿಕೊಳ್ಳುವಂತೆ ಬಿಡಲಾಗಿತ್ತು. ಆದರೆ ಇಸ್ರಾಯೇಲ್ಯರನ್ನು ಹೀಗೆ ಶಿಕ್ಷಿಸಿದ್ದಾಗ್ಯೂ ದೇವರು ಆ ಪವಿತ್ರ ಸಂಕೇತವು ಬಹು ಕಾಲ ಅನ್ಯರ ಕೈಯಲ್ಲಿ ಇರುವಂತೆ ಬಿಟ್ಟಿರಲಿಲ್ಲ; ಅಲ್ಲದೆ ಫಿಲಿಷ್ಟಿಯರು ಅದನ್ನು ಸಂತೋಷದಿಂದ ಮತ್ತೆ ಹಿಂದಿರುಗಿಸುವಷ್ಟು ಸಮಯ ಅದನ್ನು ಇಟ್ಟುಕೊಂಡಿದ್ದುದಕ್ಕಾಗಿ ಅವರನ್ನು ಶಿಕ್ಷಿಸಿದ್ದನು. ಅದು ಹಿಂದಿರುಗಿಸಲ್ಪಟ್ಟಾಗ ಅದನ್ನು ಮುಚ್ಚಿಡುವದಕ್ಕಾಗಿ ಅಲ್ಲಿ ಅಭಿಷಕ್ತರಾದ ಯಾಜಕರಾಗಲೀ ಇಲ್ಲವೇ ಅದನ್ನು ಹೊರುವದಕ್ಕಾಗಿ ಲೇವಿಯರಾಗಲೀ ಇರಲಿಲ್ಲ; ಹೀಗಾಗಿ ಫಿಲಿಷ್ಟಿಯರು ಅದನ್ನು ಒಂದು ಹೊಸ ಎತ್ತಿನ ಗಾಡಿಯಲ್ಲಿಟ್ಟು ಗಾಡಿಯನ್ನು ನಡೆಸುವವರಿಲ್ಲದೆಯೇ ಎತ್ತುಗಳು ತಮ್ಮ ದಾರಿಯನ್ನು ಹಿಡಿಯುವಂತೆ ಮಾಡಿದ್ದರು, ಅಲ್ಲದೆ ದೇವರು ಅವುಗಳನ್ನು ಇಸ್ರಾಯೇಲ್ಯರ ದೇಶಕ್ಕೆ ಅಂದರೆ ಬೇತ್‌ಷೆಮೆಷಿಗೆ ಮರಳಿ ನಡೆಸಿದ್ದನು. ಹೀಗೆ ಮಂಜೂಷ ತನ್ನ ಜನರಿಗೆ ಹಿಂದಿರುಗಿಸಲಾಗಿತ್ತು. ಆದರೆ ಬೇತ್‌ಷೆಮೆಷಿನ ಜನರು ಮಂಜೂಷ ಸಂಬಂಧದಲ್ಲಿನ ದೇವರ ಪ್ರತಿಬಂಧಕಾಜ್ಞೆಗಳನ್ನು ಅಲಕ್ಷಿಸಿ, ಅದನ್ನು ಇಣಕಿನೋಡಲು ಭಾವಿಸಿಕೊಂಡಿದ್ದು, ಹೀಗೆ ಮಾಡಿದ್ದಕ್ಕಾಗಿ ದೇವರು ಅವರನ್ನು ಮಹಾ ಸಂಹಾರದ ಮೂಲಕವಾಗಿ ಶಿಕ್ಷಿಸಿದ್ದರ ಫಲವಾಗಿ ಐವತ್ತು ಸಾವಿರದ ಎಪ್ಪತ್ತು ಮಂದಿ ಜನರು ನಶಿಸಿಹೋಗಿದ್ದರು. ಹೀಗೆ ಅವರು ದೇವರಿಗೆ ಭಯಪಟ್ಟು ಆತನ ಆಜ್ಞೆಗಳಿಗೆ ಭಯಭಕ್ತಿತೋರಿಸುವದನ್ನು

ಕಲಿತುಕೊಳ್ಳುವಂತೆ ಮಾಡಲಾಗಿತ್ತು; ಅಲ್ಲದೆ ಅವರು ಹೇಳಿದ್ದು: "ಅಗಮ್ಯದೇವರಾದ ಯೆಹೋವನ ಮುಂದೆ ಯಾರು ನಿಂತಾರು? ಇನ್ನು ಮೇಲೆ ಈತನು ಹೋಗತಕ್ಕ ಸ್ಥಳವಾವದು ಎಂದು ಮಾತಾಡಿಕೊಂಡು ಕಿರ್ಯತ್ಯಾರೀಮಿನವರ ಬಳಿಗೆ ದೂತರನ್ನು ಕಳುಹಿಸಿ ಅವರಿಗೆ–ಫಿಲಿಷ್ಟಿಯರು ಯೆಹೋವನ ಮಂಜೂಷವನ್ನು ಕಳುಹಿಸಿದ್ದಾರೆ; ನೀವು ಬಂದು ಅದನ್ನು ತೆಗೆದುಕೊಂಡು ಹೋಗಿರಿ ಎಂದು ಹೇಳಿಸಿದರು." 1 ಸಮುವೇಲ 6:20–21 "ಕಿರ್ಯತ್ಯಾರೀಮಿನವರು ಬಂದು ಯೆಹೋವನ ಮಂಜೂಷವನ್ನು ತೆಗೆದುಕೊಂಡು ಹೋಗಿ ಗುಡ್ಡದ ಮೇಲೆ ವಾಸವಾಗಿದ್ದ ಅಬೀನಾದಾಬನ ಮನೆಯಲ್ಲಿಟ್ಟು, ಅವನ ಮಗನಾದ ಎಲ್ಲಾಜಾರನನ್ನು ಅದರ ಸೇವೆಗೋಸ್ಕರ ಪ್ರತಿಷ್ಠಿಸಿದರು." 1 ಸಮುವೇಲ 7:1–2 ಇಸ್ರಾಯೇಲ್ಯರೊಡನೆ ಯೆಹೋವನು ನಡಕೊಂಡ ರೀತಿಯು ಹೋರೇಬ್ ಪರ್ವತದ ಬಳಿಯಲ್ಲಿ ಅವರೊಡನೆ ಮಾಡಿಕೊಂಡ ಒಡಂಬಡಿಕೆಯ ಅನುಸಾರವಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಬಂದವರಾದ ನಮಗಿರುವ ಪಾಠವೆಂದರೆ ದೇವರ ಒಡಂಬಡಿಕೆಯ ಭಾಗವಾಗಿ [ಅಂದರೆ ಮೂಲಕವಾಗಿ] ಅನುಗ್ರಹಿತರಾದವರು [ತಾವು ನಡೆಸಿದ ದುಷ್ಕೃತ್ಯದ] ಪ್ರಮಾಣದಲ್ಲಿ ಹೊಣೆಗಾರರಾಗುವರೆಂಬದು. ಹೇಗೂ ಆ ಐವತ್ತು ಸಾವಿರ ಮಂದಿಯು ಎರಡನೇ ಮರಣದಲ್ಲಿ ನಾಶವಾದರೆಂದು ಆಲೋಚಿಸಬಾರದು; ಯಾಕಂದರೆ ಧರ್ಮೋಪದೇಶ ಸಂಬಂಧವಾದ ಇಸ್ರಾಯೇಲ್ಯರ ಒಡಂಬಡಿಕೆಯ ಮೂಲಕವಾದ ನ್ಯಾಯವಿಚಾರಣೆಯು ಕೇವಲ ಛಾಯಾರೂಪವಾಗಿದ್ದು ಅದರಲ್ಲಿ ಬರುವ ಎಲ್ಲರ ಅಂತ್ಯ ಸ್ಥಿತಿಯನ್ನು ಇದು ನಿರ್ಧರಿಸುವದಿಲ್ಲ.

ಆದರೆ ಕಡೆಯದಾಗಿ ದಾವೀದನು ಸಿಂಹಾಸನದಲ್ಲಿ ಪ್ರತಿಷ್ಠಾಪಿಸಲ್ಪಟ್ಟಾಗ ಆತನು ಮಂಜೂಷವನ್ನು ಯೆರೂಸಲೇಮಿಗೆ ತೆಗೆದುಕೊಂಡು ಬರಲು ಹಾಗು ಜನರನ್ನು ಒಂದು ಜನಾಂಗವಾಗಿ ಮತ್ತೆ ಹೃದಯಪೂರ್ವಕವಾಗಿಯೂ ಭಯಭಕ್ತಿಯಿಂದಲೂ ದೇವರನ್ನು ಆರಾಧಿಸುವಂತೆ ನಡೆಸಲು ಅಲ್ಲದೆ ಈ ಗುರಿಯನ್ನು ತಲುಪುವ ಸಲುವಾದ ಮೊದಲ ಹೆಜ್ಜೆಯಾಗಿ ಒಡಂಬಡಿಕೆಯ ಪರಿಶುದ್ಧ ಮಂಜೂಷವು ಅಗತ್ಯವಾಗಿ ಪುನಃಸ್ಥಾಪನೆ–ಗೊಳ್ಳುವಂತಾಗಲು ಉದ್ದೇಶಿಸಿದ್ದನು. ಹೀಗೆ ಆ ಜನಾಂಗವು ಪುನಃಸ್ಥಾಪನೆಯಾಗುವ ಸಲುವಾದ ಒಂದು ಜನಾಂಗೀಯ ಕಾರ್ಯಕ್ರಮವಾಗಿ ಮೂವತ್ತು ಸಾವಿರ ಮಂದಿಯನ್ನು ಒಟ್ಟುಗೂಡಿಸಿದ್ದನು, ಅಲ್ಲದೆ ಹೀಗೆ ಮಾಡುವದರ ಮೂಲಕವಾಗಿ ಸಮಸ್ತ ಜನರಲ್ಲಿ ದೇವಾರಾಧನೆಯು ಪುನರುದ್ಧಾರ–ಗೊಳ್ಳುವಂತಾಗಲು ಕರೆ ನೀಡುವದಾಗಿತ್ತು.

ಮಂಜೂಷವನ್ನು ಯೆರೂಸಲೇಮಿಗೆ ಸಾಗಿಸಲು ಆದುಕೊಂಡ ವಿಧಾನವು ಹೇಗೂ ಧರ್ಮಶಾಸ್ತ್ರದ ಅನುಸಾರವಾಗಿರಲಿಲ್ಲ; ಧರ್ಮಶಾಸ್ತ್ರವು ವಿಧಿಸಿರುವದೇನಂದರೆ ಮಂಜೂಷವನ್ನು ಲೇವಿಯರು ಭಯಭಕ್ತಿಯಿಂದ ಹೊತ್ತು–ಕೊಳ್ಳಬೇಕಿತ್ತು. ಆದರೆ ಮಂಜೂಷವನ್ನು ಕಿರ್ಯತ್ಯಾರೀಮಿಗೆ ಹಿಂದಿರುಗಿಸುವಲ್ಲಿ ಫಿಲಿಷ್ಟಿಯರು ಪಟಪಟನೆ ಅನುಸರಿಸಿದ ಉದಾಹರಣೆಯ ಪ್ರಕಾರ ಇಸ್ರಾಯೇಲ್ಯರು ಅದನ್ನು ಒಂದು ಹೊಸ ಎತ್ತಿನ ಬಂಡಿಯ ಮೇಲಿಟ್ಟು ಕಳುಹಿಸಿದ್ದ ಸಂಭವವಿತ್ತು. ದೇವರು ತನ್ನ ಜನರಲ್ಲದ ಫಿಲಿಷ್ಟಿಯರು ಈ ವಿಷಯದಲ್ಲಿ ಧರ್ಮಶಾಸ್ತ್ರವು ವಿಧಿಸಿದ ನಿಯಮದ ಪ್ರಕಾರ ನಡೆಯಲು ಅವರಲ್ಲಿದ್ದ ಅಜ್ಞಾನ ಅಸಮರ್ಥತೆಗಳನ್ನು ಸಹಿಸಿಕೊಂಡಿರಲು, ಇಸ್ರಾಯೇಲ್ಯರು ಈ ವಿಷಯದಲ್ಲಿ ಆಜ್ಞಾಪಾಲನೆ ಮಾಡುವುದನ್ನು ಮರೆತುಹೋದದ್ದು ಹಾಗು ಅವರು ತೋರಿದ ಅಜಾಗರೂಕತೆ–ಗಳನ್ನು ಹೀಗೆ ಪರಿಗಣಿಸಿರಲಿಲ್ಲ. ಆದರೆ ಅವರಿಗೆ ತನ್ನ ಅಸಂತೋಷದ ಬಗ್ಗೆ ತೀವ್ರ ರೀತಿಯಲ್ಲಿ ನೆನಪುಮಾಡಿಕೊಟ್ಟಿದ್ದನು. ಎಲ್ಲರ ಸಂತೋಷ ಉಲ್ಲಾಸಗಳು ಹಾಗು ಹಲವು ಬಗೆಯ ಸಂಗೀತ ವಾದ್ಯಗಳ ಸ್ವರಗಳ ನಡುವೆ [ಎತ್ತಿನ] ಬಂಡಿಯ ಅನಿರೀಕ್ಷಿತ ತಳ್ಳಾಟವುಂಟಾಗಿ [ಎತ್ತುಗಳು ಎಡವಿದಾಗ] ಮಂಜೂಷದ ಸ್ಥಾನಕ್ಕೆ ಅಪಾಯವನ್ನು ತಂದೊಡ್ಡಿದಂತೆ ಕಂಡು–ಬಂದಿದ್ದು, ಹೀಗಾಗಿ ಉಜ್ಜನು ಅದನ್ನು ಸರಿಪಡಿಸ ಸಲುವಾಗಿ ಕೈಚಾಚಿ ಹಿಡಿಯಲು, ಕೂಡಲೇ ಅವನು ಸತ್ತು ಬಿದ್ದನು.

ಇದು ಒಂದು ತೀಕ್ಷಣವೂ ಬಹು ಅಗತ್ಯವೂ ಆದ ಗದರಿಸುವಿಕೆಯಾಗಿತ್ತು. ಅದು ಮೆರವಣಿಗೆಯನ್ನು ನಿಲ್ಲುವಂತೆ ಮಾಡಿದ್ದು, ಇದನ್ನು ಅರಸನೂ ಹಾಗೂ ಸಮಸ್ತ ಜನಾಂಗವೂ ತಾವು ದೇವರ ಆಜ್ಞೆಯನ್ನು ಅಲಕ್ಷಿಸಿ ಆತನ ಪ್ರತ್ಯಕ್ಷತೆಯ ಸಂಕೇತಕ್ಕೆ ಸೂಕ್ತವಾದ ಭಯಭಕ್ತಿ ತೋರಿಸುವದರಲ್ಲಿ ವಿಫಲರಾಗಿದ್ದೇವೆಂಬುದನ್ನು ಗ್ರಹಿಸಿಕೊಂಡಿದ್ದರು. ದೇವರ ಭಯವು ಅರಸನ ಹಾಗು ಜನರೆಲ್ಲರ ಮೇಲೆ ಬಿದ್ದಿತ್ತು. ಸಂಗೀತ ಸಂಭ್ರಮಗಳು ಅಳಿದುಹೋಗಿದ್ದವು; ಅಲ್ಲದೆ ಜನಸಮೂಹವು ಚದರಿಹೋಗಿ ಜನರು ಅಲೋಚನಾ ಮಗ್ನರಾಗಿ ತಮ್ಮತಮ್ಮ ಮನೆಗಳಿಗೆ ಹಿಂದಿರುಗಿದ್ದರು. ಅಲ್ಲದೆ ಅರಸನು ಮಂಜೂಷವನ್ನು ಯೆರೂಸಲೇಮಿಗೆ ತರುವ ತನ್ನ ಉದ್ದೇಶವನ್ನು ಮುಂದುವರೆಸುವದಕ್ಕೆ ಭಯಪಟ್ಟು ಅದನ್ನು ತಿರುಗಿಸಿ ಒಬ್ಬ ಲೇವಿಯನಾದ ಓಬೇದೆದೋಮನ ಮನೆಯಲ್ಲಿ ಇರಿಸಲು ಕಳುಹಿಸಿದ್ದು ಅದನ್ನು ಅವನು ನಿಸ್ಸಂದೇಹವಾಗಿಯೂ ಭಯಭಕ್ತಿಯಿಂದ ಸ್ವೀಕರಿಸಿದ್ದನು; ಯಾಕಂದರೆ ನಾವು ಓದುವದು–ಇದರ ಪರಿಣಾಮವಾಗಿ "ಆ ಕಾಲದಲ್ಲಿ ಯೆಹೋವನು ಓಬೇದೆದೋಮನ ಮನೆಯನ್ನು ಅವನಿಗಿದ್ದದ್ದೆಲ್ಲವನ್ನು ಆಶೀರ್ವದಿಸಿದನು." 1 ಪೂರ್ವಕಾಲ ವೃತ್ತಾಂತ 13:13–14.

ಅಲ್ಲಿ ಮಂಜೂಷವು ಮೂರು ತಿಂಗಳು ಉಳಿದು–ಕೊಂಡಿರುವಲ್ಲಿ ಅರಸನು ದೇವರಲ್ಲಿ ಆಸಕ್ತನಾಗಿ ಜನರು ದೇವರ ಆರಾಧನೆಯನ್ನು ನಿಕಟವಾಗಿ ಆಚರಿಸಲುವಾದ ಈ ಅಸಾಧಾರಣ ದೇವಾನುಗ್ರಹ ಸಂಬಂಧದ ಪಾಠವನ್ನು ಸಮಗ್ರವಾಗಿ ಅಧ್ಯಯನಮಾಡುತ್ತಿದ್ದನು. "ಯೆಹೋವನು ಓಬೇದೆದೋಮನ ಮನೆಯನ್ನು ಅವನಿಗಿದ್ದದ್ದೆಲ್ಲವನ್ನು ಆಶೀರ್ವದಿಸಿದನು." ಎಂಬುದನ್ನು ದಾವಿದನಿಗೆ ತಿಳಿಸಲಾಗಿತ್ತು. ಆನಂತರ ದಾವೀದನು ಈ ಪಾಠವನ್ನು ಸ್ಪಷ್ಟವಾಗಿ ಓದಿದವನಾಗಿ ಮಂಜೂಷವನ್ನು ಪ್ರಮುಖ ಪಟ್ಟಣವಾದ ರಾಜಧಾನಿಗೆ ತರುವ ಹಾಗು ಅದನ್ನು ರಾಷ್ಟ್ರದಲ್ಲೆಲ್ಲಾ ಪ್ರಮುಖವಾದ ಗೌರವ ಸ್ಥಾನವನ್ನು ನೀಡುವವನಾಗಿ ತನ್ನ ಮೂಲ ಉದ್ದೇಶವನ್ನು ಕೂಡಲೇ

ನೆರವೇರಿಸಲು ನಿರ್ಧರಿಸಿದ್ದನು. ತಾನು ಮೊದಲೇ ಉದ್ದೇಶಿಸಿದ್ದಂತೆ ಇದು ಒಂದು ದೇಶಾದ್ಯಂತ ನಡೆಸಲ್ಪಡುವ ಕಾರ್ಯವಾಗಿ ಮತ್ತೆ ಜನರೆಲ್ಲರ ಪ್ರತಿನಿಧಿಗಳನ್ನು ಒಟ್ಟಿಗೆ ಕರೆಸಿ ಜನರನ್ನು ಒಂದು ದೊಡ್ಡ ಧಾರ್ಮಿಕ ಪುನರುದ್ಧಾರಕ್ಕೆ ನಡೆಸುವದಾಗಿತ್ತು. ಆದರೆ ಈ ಸಮಯದಲ್ಲಿ ದೈವೀಕ ಪ್ರತ್ಯಕ್ಷತೆಯ ಸಂಕೇತವನ್ನು ಭಯಭಕ್ತಿಯಿಂದ ದೇವರ ಮಾರ್ಗದರ್ಶನದ ಅನುಸಾರವಾಗಿ ಹೊತ್ತುಕೊಂಡು ಸಾಗಿಸುವಂತೆ ನೋಡಿಕೊಂಡಿದ್ದನು.

"ಮತ್ತು ದಾವೀದನು ತನ್ನ ನಗರದಲ್ಲಿ ತನಗೋಸ್ಕರ ಮನೆಗಳನ್ನು ಕಟ್ಟಿಸಿದ್ದಲ್ಲದೆ ದೇವ ಮಂಜೂಷಕ್ಕೋಸ್ಕರವೂ ಸ್ಥಳವನ್ನು ಸಿದ್ಧಮಾಡಿ ಗುಡಾರವನ್ನು ಹಾಕಿಸಿದ್ದನು. ಆ ಕಾಲದಲ್ಲಿ ದಾವೀದನು–ಲೇವೀಯರು ಹೊರತಾಗಿ ಯಾರೂ ದೇವಮಂಜೂಷವನ್ನು ಹೊರಬಾರದು; ಅದನ್ನು ಹೊರುವದಕ್ಕೂ ಸದಾಕಾಲ ತನ್ನ ಸೇವೆ ಮಾಡುವದಕ್ಕೂ ಯೆಹೋವನು ಅವರನ್ನೇ ಆರಿಸಿಕೊಂಡಿದ್ದಾನೆ... ನೀವು ಮೊದಲನೇಯ ಸಾರಿ ಇರಲಿಲ್ಲವಾದದರಿಂದ ನಮ್ಮ ದೇವರಾದ ಯೆಹೋವನು ತನ್ನ ಸನ್ನಿಧಿಗೆ ಧರ್ಮವಿರೋಧವಾಗಿ ಬಂದ ನಮ್ಮಲ್ಲಿ ಒಬ್ಬನನ್ನು ಸಂಹರಿಸಿದನಷ್ಟೆ ಎಂದು ಹೇಳಲು ಯಾಜಕರೂ ಲೇವಿಯರೂ ಇಸ್ರಾಯೇಲ್ ದೇವರಾದ ಯೆಹೋವನ ಮಂಜೂಷವನ್ನು ಹೊರಲು ತಮ್ಮನ್ನು ಶುದ್ಧಪಡಿಸಿಕೊಂಡರು. ಮೋಶೆಯ ಮುಖಾಂತರವಾಗಿ ಕೊಡಲ್ಪಟ್ಟ ಯೆಹೋವನ ಆಜ್ಞಾನುಸಾರವಾಗಿ ಲೇವಿಯರು ದೇವಮಂಜೂಷಕ್ಕೆ ಕೋಲುಗಳನ್ನು ಸಿಕ್ಕಿಸಿ ಅದನ್ನು ಹೆಗಲಿನ ಮೇಲೆ ಹೊತ್ತುಕೊಂಡರು. ಹೀಗೆ ಎಲ್ಲಾ ಇಸ್ರಾಯೇಲ್ಯರು ಆರ್ಭಟಿಸುತ್ತಾ ಕೊಂಬು ತುತ್ತೂರಿಗಳನ್ನು ಗಟ್ಟಿಯಾಗಿ ಊದುತ್ತಾ ತಾಳಹೊಡೆಯುತ್ತಾ ಕಿನ್ನರಿ ಸ್ವರಮಂಡಲಗಳನ್ನು ಭಾರಿಸುತ್ತಾ ಯೆಹೋವನ ನಿಬಂಧನಾಮಂಜೂಷವನ್ನು ತಂದರು. – 1 ಪೂ. ವೃ. 15:1–2, 13–15, 28.

"ಯೆಹೋವನ ಮಂಜೂಷವನ್ನು ಹೊತ್ತವರು ಆರು ಹೆಜ್ಜೆ ನಡೆದ ನಂತರ ದಾವೀದನು ಒಂದು ಎತ್ತನ್ನೂ ಕೊಬ್ಬಿದ ಕರುವನ್ನು ಯಜ್ಞಮಾಡಿದನು. ದಾವೀದನು ನಾರಿನ ಏಫೋದನ್ನು ಧರಿಸಿಕೊಂಡವನಾಗಿ ಯೆಹೋವನ ಸನ್ನಿಧಾನದಲ್ಲಿ ಪೂರ್ಣಾಸಕ್ತಿಯಿಂದ ಕುಣಿದಾಡಿದನು. ಹೀಗೆ ದಾವೀದನೂ ಎಲ್ಲಾ ಇಸ್ರಾಯೇಲ್ಯರೂ ಆರ್ಭಟಿಸುತ್ತಾ ತುತ್ತೂರಿ ಊದುತ್ತಾ ಯೆಹೋವನ ಮಂಜೂಷವನ್ನು ತಂದರು. – 2 ಸಮುವೇಲ 6;13–15.

ಇಸ್ರಾಯೇಲ್ಯರು ಹೀಗೆ ದೇವರ ಭಯಭಕ್ತಿಯ ಬಗ್ಗೆ ಕಲಿತುಕೊಂಡಿರುವಲ್ಲಿ, ಈ ಪಾಠವು ಅಷ್ಟೇ ಪ್ರಬಲವಾಗಿ ಸುವಾರ್ತಾಯುಗದ ಸಭೆಗೂ ಅನ್ವಯವಾಗುತ್ತದೆ. ದೇವರ ಆಜ್ಞಾವಿಧಿಗಳ ಒಂದು ಗುಡುಸನ್ನಾದರೂ ಬದಲಾಯಿಸುವದು ನಮ್ಮ ಕೆಲಸವಲ್ಲ. ನಾವು ನಂಬಿಕೆಯುಳ್ಳವರ ಸ್ನಾನದೀಕ್ಷೆಯ ಸಂಬಂಧವಾದ ವಿಧಿನಿಯಮವನ್ನು ತಿರುಚಿ ಶಿಶುಗಳಿಗೆ ಪ್ರೋಕ್ಷಿಸುವದಾಗಿಲೀ, ಇಲ್ಲವೇ ಕರ್ತನ ಭೋಜನದ ಸರಳತೆಯನ್ನು ಮಾರ್ಪಡಿಸುವದಾಗಲೀ, ಅಥವಾ ಛಾಯಾ–ರೂಪದ ಪಸ್ಕ ಹಬ್ಬವನ್ನು ಆಚರಿಸುವ ಸಮಯವನ್ನು ತಳ್ಳಿಹಾಕುವದಾಗಲೀ ಮಾಡುವಂತಿಲ್ಲ. ಆತನ ಪರಿಶುದ್ಧ ಆಜ್ಞೆಯು ನ್ಯಾಯವಾಗಿ ಅಪೇಕ್ಷಿಸುವಂಥವುಗಳನ್ನು ರದ್ದುಗೊಳಿ–ಸುವ ಹಕ್ಕು ನಮಗಿರುವದಿಲ್ಲ, ಲೌಕೀಕ ಮನಸ್ಸುಳ್ಳವರನ್ನು ಮೆಚ್ಚಿಸುವ ಸಲುವಾಗಿ ಆತನ ನಿಯಮವಿಧಿಗಳ ಅಧಿಕಾರವನ್ನು ಅನೂರ್ಜಿತಗೊಳಿಸಿ ಅದನ್ನು ರದ್ದಾಗುವಂತೆ ಮಾಡುವಂತಿಲ್ಲ. ಮನುಷ್ಯರ ತತ್ವಜ್ಞಾನ ನಿಷ್ಪ್ರಯೋಜಕವಾದ ಕಲ್ಪಿತಾಚಾರಗಳಿಗೆ ಮನ್ನಣೆ ನೀಡದೆ ದೇವರ ಕಟ್ಟಳೆ ಸಾಕ್ಷಿಪ್ರಮಾಣಗಳನ್ನು ಪ್ರಾಮಾಣಿಕವಾದ ಒಳ್ಳೆಯ ಹೃದಯಗಳಲ್ಲಿ ಸ್ವೀಕರಿಸಿಕೊಳ್ಳಬೇಕು. ಯೆಹೋವನ ಭಯವೇ ಜ್ಞಾನಕ್ಕೆ ಮೂಲವು ಮತ್ತು ಆತನಲ್ಲಿ ಭರವಸವಿಡುವ ಮನುಷ್ಯನು ಧನ್ಯನು. ಅಲ್ಲದೆ ಯಾರಿಗೆ "ಯೆಹೋವನು ಹೀಗನ್ನುತ್ತಾನೆ" ಎಂಬದು ಪ್ರತಿಯೊಂದು ವಿಷಯಗಳ ಮೇಲಿನ ವಿವಾದವನ್ನು ಮುಕ್ತಾಯಗೊಳಿಸುವದೋ ಅವರು ಧನ್ಯರು.

"ನಮ್ಮ ಜೀವಿತಗಳು ಹೆಚ್ಚು ಸರಳವಾಗಿದ್ದಲ್ಲಿ,
ಆತನ ಮಾತಿನಂತೆ ಆತನನ್ನು ಅಂಗೀಕರಿಸಿಕೊಂಡಲ್ಲಿ;
ನಮ್ಮ ಜೀವಿತಗಳೆಲ್ಲವೂ ಪ್ರಜ್ವಲಿಸುವವು,
ನಮ್ಮ ದೇವರ ಮಧುರತೆಯಲ್ಲಿ."

*****

ದೇವಾನುಗ್ರಹವನ್ನು ಸೂಕ್ತವಾಗಿ ಬಯಸುವದು

ರೀಪ್ರಿಂಟ್ಸ್ ಪುಟ 3252

2 ಸಮುವೇಲ 6:1–12

"ನಿನ್ನ ಮನೆಯಲ್ಲಿ ವಾಸಿಸುವರು ಧನ್ಯರು" – ಕೀರ್ತನೆ 84:4

ದಾವೀದನು ಇಸ್ರಾಯೇಲ್ಯರೆಲ್ಲರ ಮೇಲಿನ ಅರಸನಾಗಿ ಸ್ವಯಂ ಪ್ರೇರಿತವಾಗಿ ಆಯ್ಕೆಯಾದ ನಂತರ ಆತನು ಯೆರೂಸಲೇಮನ್ನು ವಶಪಡಿಸಿಕೊಂಡು ಅದನ್ನು ತನ್ನ ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡನು. ಇದು ತನ್ನ ಗೆಲುವಿನ ಪರಿಣಾಮವಾಗಿರದೆ ತನ್ನನ್ನು ಅರಸನ ಸ್ಥಾನದಲ್ಲಿ ಇರಿಸಲು ದೇವರು ನೇಮಿಸಿದ ಸಮಯಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿದ್ದುದರ ಫಲವಾಗಿತ್ತು. ಆನಂತರ ಇಸ್ರಾಯೇಲ್ಯರ ಪ್ರದೇಶವನ್ನು ಮತ್ತೆ ಆಕ್ರಮಣಮಾಡಿದ್ದ ಫಿಲಿಷ್ಟಿಯರೊಡನೆ ಯುದ್ಧಗಳು ಹಿಂಬಾಲಿಸಿ ಬಂದಿದ್ದವು. ಈ ಯುದ್ಧಗಳಲ್ಲಿ ಇಸ್ರಾಯೇಲ್ಯರು ದೇವಾಶೀರ್ವಾದದ ಮೂಲಕವಾಗಿ

ಯಶಸ್ಸುಳ್ಳವರಾಗಿದ್ದರು. ಇಂಥಾ ಸ್ಥಿತಿಯಲ್ಲಿ ಏಳು ವರುಷಗಳು ಕಳೆದ ನಂತರ ಅಂದರೆ ಇಸ್ರಾಯೇಲ್ ರಾಜ್ಯವು ಬಹುವಾಗಿ ಸ್ಥಿರಗೊಂಡು ಶತ್ರುಗಳ ಪೀಡನೆಗಳು ಇಲ್ಲದಂತಿರುವಾಗ ಈ ಪಾಠದ ದೃಶ್ಯವು ಆರಂಭವಾಗುತ್ತದೆ. ದಾವೀದನು ಈ ಸಮಯಕ್ಕೆ ನಾಲ್ವತ್ತ–ನಾಲ್ಕು ವರುಷ ವಯಸ್ಸಿನವನಾಗಿದ್ದು ಧಾರ್ಮಿಕ ಸಂಗತಿಗಳು ದೇಶದಲ್ಲಿ ಅನೇಕ ವರುಷಗಳಿಂದ ಬಹು ಕ್ಷೀಣಸ್ಥಿತಿಯಲ್ಲಿರುವದೆಂದೂ ಹಾಗು ದೇವರು ಈಗ ಅವರನ್ನು ಮತ್ತೆ ಜೊತೆಗೂಡಿಸುವದರ ಮೂಲಕವಾಗಿ ಆಶೀರ್ವದಿಸಿ ಅವರಿಗೆ ಶಾಂತಿಯನ್ನು ದಯಪಾಲಿಸಿದ್ದಾನೆಂದೂ, ಜನರಲ್ಲಿನ ಧಾರ್ಮಿಕ ಪ್ರವೃತ್ತಿಗಳನ್ನು ಪುನಶ್ಚೇತನಗೊಳಿಸಲು ತನಗೆ ಸಾಧ್ಯವಾದುದನ್ನು ಮಾಡುವ ಒಂದು ಸೂಕ್ತ ಸಮಯವು ಒದಗಿರುವದೆಂಬುದನ್ನು ಗುರುತಿಸಿಕೊಂಡಿದ್ದನು. ತನ್ನ ಸ್ವಂತ ಹೃದಯವು ಯಾವಾಗಲೂ ದೇವರಿಗೆ ನಿಷ್ಠೆಯುಳ್ಳದ್ದಾಗಿದ್ದು, ಇತರರೂ ದೇವರನ್ನು ತಮ್ಮ ಬೆಳಕೂ ಹಾಗು ತಮ್ಮ ರಕ್ಷಣೆಯೂ ಆಗಿರುವನೆಂಬುದನ್ನು ಪೂರ್ಣವಾಗಿ ಅರಿತುಕೊಳ್ಳಬೇಕೆಂದು ಬಯಸಿದ್ದನು. ಹೀಗಾಗಿ ಇದು ನಿಜವಾಗಿಯೂ ದೇವರಲ್ಲಿ ಭಯಭಕ್ತಿಯುಳ್ಳವರಾಗಿ ಆತನಲ್ಲಿ ಭರವಸವಿಟ್ಟಂಥವರೆಲ್ಲರ ಸಂಗತಿಯಾಗಿರುವದು; ಅವರು ತಮ್ಮಲ್ಲಿನ ಸಂತೋಷವನ್ನು ಎಲ್ಲಾ ಕಡೆಗೂ ತಿಳಿಸುವಂಥವರಾಗಿದ್ದು, ಇತರರೂ ಇದೇ ಸಮಾಧಾನದ ಸ್ಥಿತಿಹೊಂದಿದವರಾಗಿ ದೇವರಲ್ಲಿ ವಿಶ್ರಮಿಸುವಂತೆ ಸಹಾಯ ಮಾಡ ಆಕಾಂಕ್ಷೆಯುಳ್ಳವರಾಗಿರುವರು.

ಒಡಂಬಡಿಕೆಯ ಮಂಜೂಷವು ಅರಣ್ಯದಲ್ಲಿ ದೇವರು ಮೋಶೆಯ ಕೈಯಿಂದ ಪ್ರತಿಷ್ಠಾಪಿಸಿದ್ದ ದೇವದರ್ಶನ ಗುಡಾರದ ಸೇವೆಯಲ್ಲಿನ ಮುಖ್ಯ ಪೀಠೋಪಕರಣದ ವಸ್ತುವಾಗಿತ್ತೆಂಬುದನ್ನು ನೆನಪಿಸಿಕೊಳ್ಳಲಾಗುವದು. ಯೆಹೋಶುವನ ಕಾಲದಿಂದ ಈ ದಿನದ ವರೆಗೂ ದೇವದರ್ಶನ ಗುಡಾರದಲ್ಲಿ ಕ್ರಮಬದ್ಧವಾಗಿ ಆರಾಧನೆ ನಡೆಯುತ್ತಿತ್ತೆಂಬುದು ನಮಗೆ ಖಚಿತವಾಗಿ ತಿಳಿದುಬಂದಿರುವದಿಲ್ಲ. ಸೇವಗಳು ಹೆಚ್ಚು ಕಡಿಮೆ ಕ್ರಮಬದ್ಧವಾಗಿ ನಡೆಯುತ್ತಿದ್ದ ಸಂಭವವು ಹೆಚ್ಚಾಗಿರುವದು. ಮಂಜೂಷವು ಸೇವೆಯ ಸಂಬಂಧವಾದ ಆಸಕ್ತಿಯ ಮುಖ್ಯ ಕೇಂದ್ರ–ವಸ್ತುವಾದ್ದರಿಂದ [ಸ್ಥಳದಿಂದ ಸ್ಥಳಕ್ಕೆ] ಅದನ್ನು ಸಾಗಿಸುವದು ಮುಂತಾದವುಗಳು ದೇವದರ್ಶನ ಗುಡಾರದ ಇತರ ಪೀಠೋಪಕರಣಗಳ ಅಂದರೆ ಹಲಿಗೆಗಳು ತೆರೆಗಳು ದೀಪಸ್ತಂಭ ಮೇಜು ಯಜ್ಞವೇದಿ ಇವುಗಳ ಸಾಗಿಸುವಿಕೆಯನ್ನೂ ಒಳಗೊಂಡಿರಬಹುದಾದ ಸಾಧ್ಯತೆಯುಂಟು.

ಇಸ್ರಾಯೇಲ್ಯರು ಕಾನಾನಿನಲ್ಲಿ ಪ್ರವೇಶಿಸಿದ ಸ್ವಲ್ಪ ಕಾಲದಲ್ಲೇ ಯೆಹೋಶುವನು ಯೆರೂಸಲೇಮಿನ ಉತ್ತರಕ್ಕೆ ಇಪ್ಪತ್ತು ಮೈಲಿ ದೂರದಲ್ಲಿರುವ ಶೀಲೋವಿನಲ್ಲಿ ಮಂಜೂಷವನ್ನು ನೆಲೆಗೊಳಿಸಿದ್ದನು. (ಯೆಹೋಶುವ 18:1) ಅದು ನ್ಯಾಯಸ್ಥಾಪಕರ ಕಾಲದ ಅಂತ್ಯದ ವರೆಗೂ ಅಲ್ಲದೆ ಸಮುವೇಲನು ಏಲಿಯೊಡನೆ ಜೀವಿಸುತ್ತಿದ್ದ ಕಾಲದಲ್ಲಿಯೂ ಇತ್ತೆಂಬುದನ್ನು 1 ಸಮುವೇಲ 1:3ರಲ್ಲಿ ತೋರಿಸಿಕೊಡಲಾಗಿರುವದು. ಏಲಿಯ ಮಕ್ಕಳು ಫಿಲಿಷ್ಟಿಯರೊಡನೆ ಯುದ್ಧಮಾಡುವಾಗ ಮಂಜೂಷವನ್ನು ತಮ್ಮೊಡನೆ ತೆಗೆದುಕೊಂಡು ಹೋಗಿದ್ದರು. ತಮ್ಮ ಜೀವನವು ಭ್ರಷ್ಟತೆಯುಳ್ಳದ್ದಾದರೂ ದೇವರ ನೇಮಕಗಳ ಮೇಲಿನ ತಮ್ಮ ನಂಬಿಕೆಯನ್ನು ಹೀಗೆ ರುಜುವಾತುಪಡಿಸಿದ್ದರು. ಆದರೆ ಮಂಜೂಷದ ಈ ದುರ್ಬಳಕೆಯ ಪರಿಣಾಮವಾಗಿ ದೇವರು ಫಿಲಿಷ್ಟಿಯರು ಅದನ್ನು ಸ್ವಾಧೀನಮಾಡಿಕೊಳ್ಳುವದಕ್ಕೆ ಬಿಟ್ಟಿದ್ದನು. ಹೇಗೂ ಅವರು ಅದನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾಗ ಒಂದು ಶಾಪವು ಇದರ ಜೊತೆಗೂಡಿ ಹೋದಂತೆ ತೋರುತ್ತದೆ. ತಮ್ಮ ದೇವರಾದ ದಾಗೋನನ ಗುಡಿಯಲ್ಲಿ ಆತನ ಮೂರ್ತಿಯು ಮಂಜೂಷದ ಮುಂದೆ ಬಿದ್ದುಕೊಂಡಿದ್ದು, ಆ ಪಟ್ಟಣದ ಜನರನ್ನು ದೇವರು ಗಡ್ಡೆರೋಗದಿಂದ ಬಾಧಿಸಿದ್ದನು. ಫಿಲಿಷ್ಟಿಯರು ಆ ಮಂಜೂಷದಿಂದ ತಪ್ಪಿಸಿಕೊಳ್ಳಲು ಹರ್ಷವುಳ್ಳವರಾಗಿದ್ದು ಅದನ್ನು ಒಂದು ಎತ್ತಿನ ಗಾಡಿಯ ಮೇಲಿಟ್ಟು ಇಸ್ರಾಯೇಲ್ಯರ ಕಡೆಗೆ ಕಳುಹಿಸಿದ್ದರು. ಮಂಜೂಷವು ಹಿಂದಿರುಗಿಸಲ್ಪಟ್ಟ ಸಮಯದಿಂದ ಅದು ಯಾಜಕನಾದ ಅಬೀನಾದಾಬನು ಮತ್ತು ಅವರ ಮಕ್ಕಳ ಅಧೀನದಲ್ಲಿದ್ದು, ಉಜ್ಜನು ಅವನ ಮಕ್ಕಳಲ್ಲಿ ಒಬ್ಬನಾಗಿದ್ದನು. ಹೀಗೆ ಮಂಜೂಷವು ಎಪ್ಪತ್ತು ವರುಷಗಳ ಕಾಲ ಗಿಬೆಯ ಬೆಟ್ಟದ ಮೇಲಿನ ಬಾಲೆಯೆಂದು ಕರೆಯಲ್ಪಡುವ ಕಿರ್ಯಾತ್ಯಾರೀಮಿ–ನಲ್ಲಿದ್ದ ಅಬೀನಾದಾಬನ ಮನೆಯಲ್ಲಿತ್ತು.

ಇಸ್ರಾಯೇಲ್ಯರಲ್ಲಿನ ಯಾವುದೇ ಧಾರ್ಮಿಕ ಸಂಘಟನೆಗಳು ಅಗತ್ಯವಾಗಿ ಒಡಂಬಡಿಕೆಯ ಮಂಜೂಷದ ಸುತ್ತಲೂ ಕೇಂದ್ರೀಕೃತವಾಗಿರಬೇಕು; ಯಾಕಂದರೆ ಅದು ದೇವರ ಪ್ರಸನ್ನತೆಯ ಹಾಗು ತನ್ನ ಜನರ ಕಡೆಗಿನ ಆತನ ಕೃಪಾನುಗ್ರಹದ ಸಂಕೇತವಾಗಿರುವದು. ಅದು ತನ್ನ ಸ್ಥಳವಾದ ದೇವದರ್ಶನ ಗುಡಾರದ ಅತಿಪರಿಶುದ್ಧ ಸ್ಥಳದಲ್ಲಿರುವಾಗ ಶೆಕೀನ ಪ್ರಭಾವವೆಂದು ಕರೆಯಲ್ಪಡುವ ಒಂದು ಕಾಂತಿಯುತ ಬೆಳಕು ಚಿನ್ನದ ಮುಚ್ಚಳದ ಮೇಲಿನ ಕೆರೂಬಿಗಳ ನಡುವೆ ದೇವರ ಪ್ರತ್ಯಕ್ಷತೆಯನ್ನು ಸೂಚಿಸುತ್ತಿತ್ತೆಂಬುದನ್ನು ನಾವು ನೆನಪಿಸಿ–ಕೊಳ್ಳುವೆವು. ಆ ಮುಚ್ಚಳವು ಕೃಪಾಸನವೆಂದು ಕರೆಯಲ್ಪಡುವದು, ಯಾಕಂದರೆ ಅದರ ಮೇಲೆ ಪ್ರತಿ ವರುಷವೂ ದೋಷಪರಿಹಾರಕ ರಕ್ತವು ಚಿಮುಕಿಸಲ್ಪಟ್ಟು ಆ ಮೂಲಕವಾಗಿ ಜನರ ಪಾಪವು ಒಂದು ವರುಷದ ವರೆಗೆ ಮುಚ್ಚಲ್ಪಡುತ್ತಿತ್ತು. ಅದು ವರುಷ ವರುಷವೂ ಸತತವಾಗಿ ಮುಂದುವರೆಸಲಾಗುತ್ತಿದ್ದು, ಇದು ನಿಜರೂಪದಲ್ಲಿ ದೋಷಪರಿಹಾರ ಮಾಡುವಂಥ ಕ್ರಿಸ್ತನ ರಕ್ತವನ್ನು ಮುನ್ನೂಚಿಸಲ್ಪಟ್ಟಿತ್ತು. ಈ ಮುಚ್ಚಳದ ಅಥವಾ ಕೃಪಾಸನದ ಕೆಳಗಿರುವ ಪೆಟ್ಟಿಗೆಯಲ್ಲಿ ಮನ್ನವಿಟ್ಟಿದ್ದ ಚಿನ್ನದ ಬಟ್ಟಲು, ಆರೋನನ ಚಿಗುರಿದ ಕೋಲು ಹಾಗು ಆಜ್ಞಾವಿಧಿಗಳುಳ್ಳ ಎರಡು ಕಲ್ಲಿನ ಹಲಗೆಗಳಿದ್ದು, ಇವು ಸರ್ವಶಕ್ತನು ತನ್ನ ಜನರಿಗಾಗಿ ಮಾಡಿದ ಕೃಪಾಪೂರ್ಣವಾದ ಏರ್ಪಾಡುಗಳೂ ಹಾಗು ವಾಗ್ದಾನಗಳ ಸಂಕೇತವಾಗಿದ್ದವು. ಆತ್ಮಿಕ ಇಸ್ರಾಯೇಲ್ಯರು ಹೀಗೆ ಛಾಯಾರೂಪಲ್ಲಿ ಸೂಚಿತವಾದ ನಿಜರೂಪದ ಸಂಗತಿಗಳನ್ನು ಬಾಧ್ಯವಾಗಿ ಹೊಂದಿರುವರೆಂಬುದಕ್ಕೆ ದೇವರಿಗೆ ಸ್ತೋತ್ರ. ಕ್ರಿಸ್ತನು ಒಡಂಬಡಿಕೆಯ ಮಂಜೂಷವಾಗಿರುವನು. ಆತನಲ್ಲಿಯೇ ಆಜ್ಞಾವಿಧಿಗಳ ಬೇಡಿಕೆಗಳು ಪೂರ್ಣವಾಗಿ ತೃಪ್ತಿಹೊಂದಿರುವವು. ಆರೋನನ ಚಿಗುರಿದ ಕೋಲಿನಲ್ಲಿ ಸೂಚಿತವಾದ ಯಾಜಕತ್ವದ ಕಾರ್ಯಸ್ಥಾನವನ್ನು ಆತನಿಗೆ ವಹಿಸಲ್ಪಟ್ಟಿರುವದು. ಅಲ್ಲದೆ ಆತನಲ್ಲಿ ಪರಲೋಕದ ಮನ್ನವು ಒದಗಿಸಲಾಗಿರುವದು. ಈ ಎಲ್ಲಾ

ಸಂಗತಿಗಳು ಕೃಪಾಸನದ ಮೂಲಕವಾಗಿ ನಮ್ಮದಾಗಿಸಿದ್ದು, ಈ ಕೃಪಾಸನದ ಮುಂದೆ ನಾವು ಮಹಾ ಯಾಜಕನ ದೇಹದ ಅಂಗಗಳಾಗಿ ಅಂಗೀಕರಿಸಲ್ಪಟ್ಟವರಾಗಿ ನಮ್ಮ ಪಾಪ ಪರಿಹಾರಕ್ಕಾಗಿ ನಮ್ಮ ವಿಮೋಚಕನು ಸುರಿಸಿದ ದೋಷ-ಪರಿಹಾರಕ ರಕ್ತದ ಮೂಲಕವಾಗಿ ದೊರೆತ ಅರ್ಹತೆಯ ದೆಸೆಯಿಂದ [ಪರಿಶುದ್ಧ ಸ್ಥಳಕ್ಕೆ] ಪ್ರವೇಶವನ್ನು ಪಡೆದಿರುವೆವು. ಈ ವಿಮೋಚಕನು ನಮ್ಮ ಪಾಪಗಳ ಪರಿಹಾರಕ ಯಜ್ಞವು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳ ಪರಿಹಾರಕ ಯಜ್ಞವೂ ಸಹ ಆಗಿರುವನು.

ಅರಸನಾದ ದಾವೀದನು ದೇವಮಂಜೂಷವು ಆತನ [ದೇವರ] ಸನ್ನಿದಾನವನ್ನು ಪ್ರತಿನಿಧಿಸುವದೆಂಬುದನ್ನು ಅರಿತುಕೊಂಡವನಾಗಿ ಇದು ದೇಶದ ರಾಜಧಾನಿಯ ಪಟ್ಟಣದಲ್ಲಿ ಇರತಕ್ಕದೆಂದು ತಿಳಿದು ಅದನ್ನು ಆ ದೊಡ್ಡ ಅರಸನ ಪಟ್ಟಣವನ್ನಾಗಿ ಮಾಡಿ ಇಸ್ರಾಯೇಲ್ಯರ ಮನಸ್ಸುಗಳು ತಮ್ಮ ಭೂಲೋಕದ ಅರಸನ ಮತ್ತು ಆತನ ಆಜ್ಞಾವಿಧಿಗಳ ಕಡೆಗೆ ಮಾತ್ರವಲ್ಲದೆ ತನ್ನ ಮೂಲಕವಾಗಿ ತಾನು ಪ್ರತಿನಿಧಿಸುವ ಪರಲೋಕದ ಅರಸನ ಕಡೆಗೂ ತಿರುಗಬೇಕೆಂದು ನಿರ್ದೇಶಿಸಿ-ದ್ದನು. ಈ ಘಟನೆಯನ್ನು ಗಮನಾರ್ಹವನ್ನಾಗಿಸುವ ಸಲುವಾಗಿ ಅಂದರೆ ಜನರೆಲ್ಲರ ಧಾರ್ಮಿಕ ಮನೋಭಾವಗಳನ್ನು ಹುಟ್ಟುಹಾಕುವ ಸಲುವಾಗಿ ಎಲ್ಲರೂ ಕೆಲವು ಮಟ್ಟಿಗೆ ಈ ಸಂಘಟನೆಯಲ್ಲಿ ಭಾಗವಹಿಸಬೇಕೆಂಬುದನ್ನು ಅರಿತುಕೊಂಡವ-ನಾಗಿದ್ದನು. ಈ ಕಾರಣದಿಂದ ಎಲ್ಲಾ ದಿಕ್ಕುಗಳಿಂದ ಮೂವತ್ತು ಸಾವಿರ ಮಂದಿ ಜನಾಂಗದ ಮುಖ್ಯಸ್ಥರನ್ನು ಅಂದರೆ ಕೇವಲ ಸೇನಾ ಪ್ರತಿನಿಧಿಗಳು ಮಾತ್ರವಲ್ಲದೆ ಎಲ್ಲಾ ಕುಲಾಧಿಪತಿಗಳನ್ನೂ ಒಟ್ಟುಗೂಡಿಸಿದ್ದನು. ಧಾರ್ಮಿಕ ಕಾರ್ಯಭಾರವನ್ನು ನಿರ್ವಹಿಸುವಲ್ಲಿ ಯಾವುದೇ ಪ್ರಾಮುಖ್ಯತೆಯನ್ನು ಹೊಂದಿರುವ ಆತ್ಮಿಕ ಇಸ್ರಾಯೇಲ್ಯರೆಲ್ಲರಿಗೂ ಇಲ್ಲಿ ಒಂದು ಒಳ್ಳೆಯ ಪಾಠವಿರುವದು. ಒಬ್ಬ ನಾಯಕನು ಇಲ್ಲವೇ ಒಬ್ಬ ಪ್ರತಿನಿಧಿಯು ದೇವರ ಹಾಗು ಸತ್ಯದ ಪರವಾಗಿ ಕೆಲವು ಪ್ರಮುಖವಾದ ಸೇವೆಮಾಡಲು ಯತ್ನಿಸುವದಷ್ಟೇ ಸಾಕಾಗದು. ದೇವರ ಸೇವಾ ಸಂಬಂಧದ ಯಾವುದೇ ಪ್ರಮುಖ ಸಂಗತಿಗಳ ವಿಷಯದಲ್ಲಿ ದೇವಜನರೆಲ್ಲರೂ ನೇರವಾಗಿ ಅಥವಾ ಪ್ರತಿನಿಧಿತವಾಗಿ ಕೂಡಿಕೊಳ್ಳಲು ಆಹ್ವಾನಿಸುವಂಥದ್ದು ವಿವೇಕಯುಕ್ತವೂ ಅಲ್ಲದೆ ಪ್ರತಿಯೊಂದು ವಿಧದಲ್ಲಿಯೂ ಉತ್ತಮವೂ ಆಗಿರುವದು. ಒಂದು ಸಣ್ಣ ಸಭೆಯ ಸಂಗತಿಗಳಲ್ಲಿಯೂ ಸಹ ಒಬ್ಬ ವ್ಯಕ್ತಿಯು ಎಲ್ಲವನ್ನೂ ಮಾತನಾಡುವದು, ಎಲ್ಲವನ್ನೂ ಮುನ್ನಡೆಸುವದು, ಎಲ್ಲಾ ಸೇವೆಯನ್ನು ಮಾಡುವದು ಪ್ರತಿಕೂಲಕರವಾಗುವದೆಂದು ಕಂಡುಬಂದಿರುವದು. ದೇವರ ಸೇವೆಯಲ್ಲಿ ಪ್ರತಿಯೊಬ್ಬನೂ ಭಾಗವಹಿಸುವಂತೆ ಪರಿಶ್ರಮಿಸುವದೂ, ಹಾಗು ತನ್ನ ಸಹಜ ಪ್ರತಿಭೆಯಾನುಸಾರ ಅಲ್ಲದೆ ಆತನು ದೀನನೂ ನಂಬಿಗಸ್ತನೂ ಮತ್ತು ಉಪಕಾರಿಯೂ ಆಗಿ ಕಂಡುಬರುವಷ್ಟರ ಮಟ್ಟಿಗೆ ಪ್ರೋತ್ಸಾಹಿಸುವಂಥದ್ದು ಬಹು ಉತ್ತಮವೂ ಬಹು ವಿವೇಕವೂ ಶಾಸ್ತ್ರವಚನಗಳ ನಿರ್ದೇಶನಕ್ಕೆ ಅತಿ ಹೆಚ್ಚು ಹೊಂದಿಕೊಳ್ಳು-ವಂಥದ್ದೂ ಆಗಿರುವದು.

ಪರಿಶುದ್ಧವಾದ ಸಂತೋಷವೂ ಹಾಗು ಕಿರ್ಯತ್ಯಾರೀಮಿನಿಂದ ಯೆರೂಸಲೇಮಿನ ಕಡೆಗೆ ಮಂಜೂಷದ ಪ್ರಯಾಣದ ದೆಸೆಯಿಂದಾದ ಆನಂದವೂ ಇದ್ದಕ್ಕಿದ್ದಂತೆ ಉಜ್ಜನ ಅಧೀನದಲ್ಲಿದ್ದ ಬಂಡಿಯು ಕುಲುಕಿದಂತಾಗಿ ತಡೆಯುಂಟಾಗಲು ಗಾಡಿಯನ್ನು ಎತ್ತೆಸೆಯಬಹುದೆಂದು ಅವನು ಅಂಜಿದವನಾದನು. ಆಗ ಅವನು ಮಂಜೂಷವನ್ನು ಸರಿಯಾಗಿ ಕೂರಿಸಲು ತನ್ನ ಕೈಯನ್ನು ಚಾಚಿ ಅದನ್ನು ಹಿಡಿದಾಗ ಈ ತಪ್ಪಿಗಾಗಿ [ದೇವರಿಂದ] ಹೊಡೆಯಲ್ಪಟ್ಟು ಸತ್ತುಬಿದ್ದನು. ದಿಗ್ಭ್ರಾಂತಿಯು ಸಂತೋಷವನ್ನು ಆವರಿಸಿಕೊಂಡಿತ್ತು. ದೇವರನ್ನು ಗೌರವಿಸಲು ಕೂಡಿಬಂದಿದ್ದ ಮೂವತ್ತು ಸಾವಿರ ಜನರು ಹಾಗು ಸ್ವತಃ ದಾವೀದನು ಸಹ ಭೀತರಾಗಿದ್ದರು. ಭಯವು ಎಲ್ಲರನ್ನು ಆವರಿಸಿಕೊಂಡಿದ್ದು, ಇದು ಮಂಜೂಷವು ಯೆರೂಸಲೇಮಿಗೆ ತರಲ್ಪಡುವದರ ಬಗ್ಗೆ ದೇವರ ಅಸಮ್ಮತಿಯ ಗುರುತೆಂದೂ ಅಥವಾ ಮಂಜೂಷದ ಉಪಸ್ಥಿತಿಯ ದೆಸೆಯಿಂದ ಇನ್ನೂ ಹೆಚ್ಚು ವಿನಾಶಕರ ಅನುಭವವು ತನಗೆ ಹಾಗು ಪಟ್ಟಣಕ್ಕೆ ಉಂಟಾಗಬಹುದೆಂದು ದಾವೀದನು ಕೂಡಲೇ ನಿರ್ಧರಿಸಿದ್ದನು. ಎಲ್ಲರೂ ಭಯಭೀತರಾಗಿದ್ದರು ಮತ್ತು ಪರಿಶುದ್ಧ ದೇವಾದೇಶದ ಬಗ್ಗೆ ಏನು ಮಾಡಬೇಕೆಂಬದು ಆಗ ಒಂದು ಪ್ರಶ್ನೆಯಾಗಿತ್ತು. ಲೇವಿ ಕುಲದ ಒಬ್ಬ ಧೀರಮನುಷ್ಯನಾಗಿದ್ದ ಓಬೇದೆದೋಮನು ಕರ್ತನಾದ ಯೆಹೋವನ ಪ್ರಸನ್ನತೆಯ ಸಂಕೇತವನ್ನು ತನ್ನ ನಿವೇಶನದೊಳಗೆ ಸ್ವೀಕರಿಕೊಳ್ಳುವ ಇಚ್ಛೆಯುಳ್ಳವನಾಗಿದ್ದನು; ತನ್ನ ಮನೆಯ ನಿವೇಶನದಲ್ಲಿ ಅಥವಾ ಅಂಗಳದಲ್ಲಿ ಇಲ್ಲವೇ ಒಂದು ಸೂಕ್ತ ಸ್ಥಳದಲ್ಲಿ ಮಂಜೂಷವು ಗುಡಾರ ಮುಂತಾದವುಗಳೊಡನೆ ಪ್ರತಿಷ್ಠಾಪಿತಗೊಂಡಿರುವ ಸಂಭವವಿರುವದು.

"ಯೆಹೋವನು ಉಜ್ಜನನ್ನು ಮುರಿದುಬಿಟ್ಟದ್ದರಿಂದ ದಾವೀದನು ಉರಿಗೊಂಡನು." ಆದರೆ ದೇವರೊಂದಿಗೆ ಅಸಂತೋಷಗೊಂಡಿರಲ್ಲಿಲ್ಲ, ಈ ಮನುಷ್ಯನ ಬಗ್ಗೆ ನಾವು ಏನು ತಿಳಿದಿರುವೆವೋ ಆ ಮೂಲಕವಾಗಿ ನಾವು ಖಚಿತಪಡಿಸಿ-ಕೊಳ್ಳಬಹುದೇನಂದರೆ ದೇವರಲ್ಲಿರುವ ದಾವೀದನ ಭಯಭಕ್ತಿ ಹಾಗು ಆತನ ನೀತಿಯುಳ್ಳ ನಡವಳಿಕೆಗಳ ಮೇಲಿರುವ ಆತನ ಭರವಸವು ಆತನ ಎಲ್ಲಾ ಲೇಖನಗಳಲ್ಲಿ ಸ್ಪಷ್ಟವಾಗಿ ತೋರ್ಪಡ-ಲಾಗಿರುವದೆಂಬದೇ. ಹೀಗೆ ನಾವು ಇದರ ಅರ್ಥವನ್ನು ಸೂಕ್ತವಾಗಿ ಗ್ರಹಿಸಿಕೊಳ್ಳಬಹುದೇನಂದರೆ ದಾವೀದನು ತನ್ನ ಹಿಂದಿನ ನಿರ್ಧಾರದ ವಿಷಯದಲ್ಲಿ ಅಸಂತೋಷ-ಗೊಂಡಿದ್ದನೆಂಬದು. ಆ ನಿರ್ಧಾರವೇನಂದರೆ ಮಂಜೂಷವನ್ನು ಯೆರೂಸಲೇಮಿಗೆ ತೆಗೆದುಕೊಂಡು ಹೋಗುವಂಥದೇ; ಧರ್ಮವನ್ನು ಪುನಶ್ಚೇತನಗೊಳಿಸುವ ಹಾಗು ದೇವರನ್ನು ಘನಪಡಿಸುವ ಸಲುವಾದ ತನ್ನ ಒಳ್ಳೆಯ ಉದ್ದೇಶಗಳು ಹೀಗೆ [ಮಂಜೂಷವನನ್ನು ಹೊತ್ತುತರುವ] ವಿಧಾನದ ಬಗ್ಗೆ ತನಗಿದ್ದ ತಿಳುವಳಿಕೆಯ ಕೊರತೆ ಹಾಗು ಅದನ್ನು ಸಾಗಿಸುವಲ್ಲಿ ಹೊಣೆಯನ್ನು ಹೊತ್ತಿದ್ದ ಯಾಜಕರಲ್ಲಿದ್ದ ತಿಳುವಳಿಕೆಯ ಕೊರತೆ ಇವುಗಳ ಮೂಲಕವಾಗಿ ದಾರಿತಪ್ಪಿದ್ದವು; ಇದರಲ್ಲಿ ದೇವರ ಪ್ರಸನ್ನತೆಯನ್ನು ಸೂಚಿಸುವ ಆ ಪವಿತ್ರ ಸಂಕೇತವನ್ನು ಹೇಗೆ ಸಾಗಿಸಬೇಕೆನ್ನುವ ಬಗ್ಗೆ ದೇವರ ನೇರವಾದ ಹಾಗು ಸ್ಪಷ್ಟವಾದ

ಆಜ್ಞಾವಿಧಿಗಳಿಗೆ ವಿಧೇಯರಾಗಿರಲಿಲ್ಲ. ಅರಣ್ಯಕಾಂಡ 4:15;7:9 ಇವುಗಳನ್ನು ನೋಡಿರಿ. ಇದರಲ್ಲಿ ನಿರ್ದಿಷ್ಟವಾಗಿ ಹೇಳಿರುವ–ದೇನಂದರೆ ಲೇವಿಯರು ಮಂಜೂಷವನ್ನು ಅದಕ್ಕೆ ಹಚ್ಚಿರುವ ಕೆಲವು ಉಂಗುರಗಳಲ್ಲಿ ಈ ಉದ್ದೇಶಕ್ಕಾಗಿ ತೂರಿಸಿಟ್ಟಿರುವ ಕೋಲುಗಳ ಮೂಲಕವಾಗಿ ತಮ್ಮ ಹೆಗಲ ಮೇಲೆ ಅದನ್ನು ಹೊತ್ತುಕೊಂಡು ಸಾಗಬೇಕೆಂಬದೇ. ಇದು ದಾವೀದನ ಮನಸ್ಸಿನಲ್ಲಿದ್ದ ಭಾವನೆಯೆಂಬುದು ಒಂಭತ್ತನೇ ವಚನವನ್ನು ಓದುವದರ ಮೂಲಕವಾಗಿ ತಿಳಿದು ಬರುತ್ತದೆ: "ಆ ದಿವಸ ದಾವೀದನು ಯೆಹೋವನಿಗೆ ಭಯಪಟ್ಟು–ಯೆಹೋವನ ಮಂಜೂಷವನ್ನು ನಾನಿರುವಲ್ಲಿಗೆ ತೆಗೆದುಕೊಂಡು ಹೋಗುವದು ಹೇಗೆ..." ದಾವೀದನಿಗೆ ಮಾತ್ರವಲ್ಲದೆ ಮೂವತ್ತು ಸಾವಿರ ಮಂದಿಗೆ ಇಸ್ರಾಯೇಲ್ಯರ ಪ್ರತಿನಿಧಿಗಳಿಗೆ ಸಹ ಉಂಟಾದ ನಿರಾಶೆ ಹಾಗು ಆಶಾಭಂಗಗಳ ಬಗ್ಗೆ ನಾವು ಊಹಿಸಿಕೊಳ್ಳಬಹುದು. ದೇವರು ಪೂರ್ಣವಾಗಿಯೂ ಸ್ಪಷ್ಟವಾಗಿಯೂ ಅನುಮೋದಿಸದಿದ್ದ ತಮ್ಮ ಸದುದ್ದೇಶಗಳ ಬಗ್ಗೆ ನಿರಾಶೆಗೊಂಡು ಇವರು ತಮ್ಮ ತಮ್ಮ ಮನೆಗಳಿಗೆ ದಿಕ್ಕಾಪಾಲಾಗಿ ಓಡಿಹೋಗಿದ್ದರು.

"ಆಗ ಯೆಹೋವನು ಉಜ್ಜನ ಮೇಲೆ ಕೋಪಗೊಂಡು..." ಎಂಬ ಹೇಳಿಕೆಯು ದೇವರ ಪರವಾದ ಉಗ್ರ ಕೋಪೋದ್ರೇಕವನ್ನು ಸೂಚಿಸುತ್ತದೆಂದು ಅರ್ಥಮಾಡಿ–ಕೊಳ್ಳತಕ್ಕದ್ದಲ್ಲ, ಆದರೆ ಇದು ಉಜ್ಜನ ಕೃತ್ಯವು ದೇವರಿಗೆ ಅಸಂತೋಷವನ್ನು ಉಂಟುಮಾಡಿತ್ತೆಂದೂ ಹಾಗು ದೇವರು ಆತನ ಈ ಅಲಕ್ಷ್ಯಕ್ಕೆ ಸೂಕ್ತವಾದ ಶಿಕ್ಷೆನೀಡಲು ಯೋಚಿಸಿದ್ದನೆಂಬ ಅಂಶವನ್ನು ಮಾನವರ ಗ್ರಹಿಕೆಯ ಮಟ್ಟಕ್ಕೆ ಇಳಿಸಿದಂಥ ಸ್ಪಷ್ಟವಾದ ಒಂದು ಸಂದರ್ಭಾನುಸಾರವಾದ ವ್ಯಕ್ತಪಡಿಸುವಿಕೆಯಾಗಿರುವದು. ಮಂಜೂಷದೊಡನೆಯ ತನ್ನ ದೀರ್ಘವಾದ ಒಡನಾಟವು ಉಜ್ಜನಲ್ಲಿ ಉದಾಸೀನತೆ ಹಾಗು ದೇವರ ಪ್ರತಿನಿಧಿಯಾಗಿ ಅದರ ಬಗ್ಗೆ ಇದ್ದ ಗೌರವವು ನಷ್ಟವಾಗುವದಕ್ಕೆ ಕಾರಣವಾಗಿದ್ದುದು ಕೆಲಮಟ್ಟಿನ ಸಂಭವವಿರುವದು. ರಾಜಮಾರ್ಗದಲ್ಲಿ ಆತನು ಮಾಡಿದ ದೇವರ ನಿಯಮದ ಹಾಗು ಅಪಾಯದ ಬೆದರಿಕೆ ವಿಧಿಗಳ ಸ್ಪಷ್ಟ ಉಲ್ಲಂಘನೆ ಅಲ್ಲದೆ ಇಸ್ರಾಯೇಲ್ಯರೆಲ್ಲರ ಪ್ರತಿನಿಧಿಗಳ ಎದುರಿನಲ್ಲಿ ದೇವಾಜ್ಞೆ ಹಾಗು ಮಂಜೂಷ ಮತ್ತು ದೇವದರ್ಶನ ಗುಡಾರದಲ್ಲಿನ ಹಲವಾರು ಪವಿತ್ರ ವಸ್ತುಗಳ ಸಂಬಂಧವಾಗಿ ಅಗೌರವವನ್ನು ತಂದಿತ್ತು. ತನ್ನ ಜನರ ಹಿತಾಸಕ್ತಿಯ ದೃಷ್ಟಿಯಿಂದ ದೇವರು ಈ ಬಗ್ಗೆ ಸಿಟ್ಟಾಗಿದ್ದನು, ಹಾಗು ಈ ಸಂದರ್ಭಕ್ಕನುಸಾರವಾಗಿ ಇಸ್ರಾಯೆಲ್ಯರೆಲ್ಲರಿಗೆ ಅಲ್ಲಿ ಕೂಡಿಬಂದಿದ್ದ ತಮ್ಮ ಪ್ರತಿನಿಧಿಗಳ ಮೂಲಕವಾಗಿ ಪಾಠವನ್ನು ಕಲಿಸುವ ಅವಕಾಶವನ್ನು ಬಳಸಿಕೊಂಡಿದ್ದನು. ಅದು ದೇವರ ಕಡೆಗಿನ ಭಯಭಕ್ತಿಯ ಔಚಿತ್ಯದ ಬಗ್ಗೆ ಹಾಗು ಆತನ ಆಜ್ಞಾವಿಧಿಗಳ ವಿಶಿಷ್ಟತೆಯ ಬಗ್ಗೆ ಒಂದು ದೊಡ್ಡ ಪಾಠದ ಕಲಿಯುವಿಕೆಯಾಗಿತ್ತು.

ಯೆಹೋವನ ಭಯವೇ ಜ್ಞಾನಕ್ಕೆ ಮೂಲವು. ಯಾರಾರು ಭಯಭಕ್ತಿಯ ಬಗ್ಗೆ ಈ ಪ್ರಾಥಮಿಕ ಪಾಠವನ್ನು ಕಲಿತಿರುವದಿಲ್ಲವೋ ಅವರು ಆತನ [ದೇವರ] ಆರಾಧನೆ ಹಾಗು ಸೇವೆಯಲ್ಲಿ ಒಂದು ಸೂಕ್ತ ಕಾರ್ಯಾರಂಭವನ್ನು ಮಾಡಿರುವದಿಲ್ಲ. ಅವನು ಈ ಪಾಠವನ್ನು ಕಲಿಯದಿದ್ದಲ್ಲಿ ಬಹುಶಃ ಅವನಿಗೆ ದೇವರಿಗೆ ಮೆಚ್ಚಿಗೆಯಾಗುವಂಥ ಯಾವುದನ್ನೂ ಸಾಧಿಸುವ ಸಂಭವವಿಲ್ಲದಿದ್ದು, ಅವನು ದೇವರ ಸೇವೆಯಲ್ಲಿ ಒಬ್ಬ ಸಹಾಯಕನಾಗುವದಕ್ಕೆ ಬದಲಾಗಿ ಅವನು ಒಂದು ಮುಗ್ಗರಿಸುವ ಬಂಡೆಯಾಗತಕ್ಕವನಾಗುವನು. ನಿಜವಾಗಿಯೂ ಯಾರು ದೇವರ ಪ್ರತಿಷ್ಠಿತ ಜನರಾಗಿ ಪರಿಶುದ್ಧ ವಸ್ತುಗಳ ಸಂಬಂಧದ ಕಾರ್ಯನಿರ್ವಹಣೆಯ ಸೌಭಾಗ್ಯವನ್ನು ಹೊಂದಿದ್ದು ಯೇಸುವಿನ ರಕ್ತದ ಮೂಲಕವಾಗಿ ಅತಿ ಪರಿಶುದ್ಧಸ್ಥಳವನ್ನು ಪ್ರವೇಶಿಸಿದವರಾಗಿ, ಪ್ರಾರ್ಥನೆಯ ಮೂಲಕ ಪರಲೋಕದಲ್ಲಿನ ಕೃಪಾಸನವನ್ನು ಸಮೀಪಿಸುವರೋ, ಅಂಥವರು ದೇವರನ್ನು ಸಮೀಪಿಸುವಾಗ ಇಲ್ಲವೇ ಆತನಿಗಾಗಿ ಯಾವುದೇ ಸೇವೆಯಲ್ಲಿ ತೊಡಗಿಸಿಕೊಳ್ಳುವಾಗ ತಮಗೆ ಭಯಭಕ್ತಿಯ ಔಚಿತ್ಯದ ಬಗ್ಗೆ ಜ್ಞಾಪಿಸಿಕೊಳ್ಳುವ ಆಗತ್ಯತೆಯು ನಿರಂತರವಾಗಿರುವದು. ಅಂಥವರೆಲ್ಲರೂ ಈ ಪಾಠದ ಮೂಲಕವಾಗಿ ಪರಿಶುದ್ಧ ವಸ್ತುಗಳನ್ನು ಹೇಗೆ ಮುಟ್ಟಬೇಕೆಂಬು–ವದನ್ನು ಮತ್ತು ದೈವಾದೇಶದ ಮೇರೆಗೆ ಮಾಡಬೇಕೆಂಬುದರ ಹೊರತು ಬೇರೆ ಯಾವುದೇ ವಿಧವಾಗಿಯೂ ಅಲ್ಲವೆಂಬುವದ್ದನ್ನು ಕಲಿತುಕೊಳ್ಳಬೇಕು. ಕವಿಯು ಈ ಮನೋಪ್ರವೃತ್ತಿಯನ್ನು ಗಮನಿಸಿದವನಾಗಿ– "ದೇವದೂತರೂ ಹೆಜ್ಜೆಯಿಡಲು ಅಂಜುವ ಸ್ಥಳಕ್ಕೆ ಕೆಲವರು ಮುನ್ನುಗ್ಗಲು ಆತುರಪಡುವರು" ಎಂದು ಹೇಳಿರುವನು. ಕೆಲವು ಸಮಯಗಳಲ್ಲಿ ಇಂಥಾ ಭಕ್ತಿಹೀನತೆಯು ತಾನಾಗಿಯೇ ಪ್ರಾರ್ಥನೆಯಲ್ಲಿ ಎದ್ದುಕಾಣುವಂತೆ ತೋರಿಬರುವದು; ಹೇಗಂದರೆ ಎಲ್ಲಿ ಒಬ್ಬನು ದಯೆಯನ್ನು ಸ್ವೀಕರಿಸಿದ್ದಕ್ಕಾಗಿ ಕೃತಜ್ಞತೆಯಿಂದ ತುಂಬಿತುಳುಕಿದವನಾಗಿ ಆರಾಧಕನಾಗಿರಬೇಕಿರುವನೋ ಅವನು ದೂರ ಹಾಗು ಸಮೀಪದಲ್ಲಿನ ತನ್ನ ಕಾರ್ಯವನ್ನು ನಿರ್ವಹಿಸುವದರ ಬಗ್ಗೆ ಶ್ರೇಷ್ಠ ರಾಜಾಧಿರಾಜನಿಗೆ [ತನ್ನ ಪ್ರಾರ್ಥನೆಯಲ್ಲಿ] ಸವಿವರವಾದ ನಿರ್ದೇಶನವನ್ನು ನೀಡ ತೊಡಗುವನು. ಈ ದಿನಗಳಲ್ಲಿ ಕರ್ತನು ಅಂಥವರನ್ನು ಹತಿಸಿ, ಅವರ ಭಕ್ತಿಹೀನತೆಯ ಬಗ್ಗೆ ಬಹಿರಂಗ ಉದಾಹರಣೆಗಳನ್ನಾಗಿ ಮಾಡುವದಿಲ್ಲ, ಆದರೆ ಅಪೋಸ್ತಲನು ಹೇಳಿರುವಂತೆ ಇಂಥಾ ವಿಜ್ಞಾಪನೆಗಳು ಕರ್ತನಿಂದ ಪರಿಗಣಿಸಲ್ಪಡುವದಿಲ್ಲ ಎಂಬುದನ್ನು ನಾವು ಖಚಿತ–ಪಡಿಸಿಕೊಳ್ಳಬಹುದು. (ಯಾಕೋಬ 1:7) ಈ ವಿಷಯದಲ್ಲಿ ನಮಗಿರುವ ಪಾಠವೇನಂದರೆ ಯಜ್ಞಕ್ಕಿಂತಲೂ ಮಾತು ಕೇಳುವದು ಉತ್ತಮವಾಗಿದೆಯೆಂಬದೇ. ನಾಲ್ಕು ಮಂದಿ ಲೇವಿಯರ ಹೆಗಲಿನ ಮೇಲೆ ಮಂಜೂಷವನ್ನು ಹೊತ್ತುಕೊಂಡು ಹೋಗುವಂಥದ್ದು ಒಬ್ಬನು ಎತ್ತಿನ ಬಂಡಿಯಲ್ಲಿ ಇದನ್ನು ಪ್ರಯತ್ನಿಸಿದ್ದಂಥದ್ದಕ್ಕಿಂತಲೂ ಒಂದು ಘನಗಾಂಭೀರ್ಯವುಳ್ಳ ಕಾರ್ಯವಿಧಾನ ಆಗುತ್ತಿರಲಿಲ್ಲ. ಹೇಗೂ ಯಾಜಕರು ಹೆಗಲಿನ ಮೇಲೆ ಅದನ್ನು ಹೊರುವುದು ದೇವರಿಗೆ ಬಹು ಸಂತೋಷವನ್ನು ಉಂಟು ಮಾಡುತ್ತಿತ್ತು, ಯಾಕಂದರೆ ಅದು ಆತನ ಆದೇಶದ ಅನುಸಾರವಾಗಿತ್ತು. ನಾವು ಈ ಪಾಠವನ್ನು ಎಚ್ಚರಿಕೆಯಿಂದ ಅನ್ವಯಮಾಡಿಕೊಳ್ಳೋಣ, ಅಲ್ಲದೆ ನಾವು ದೇವರ ಚಿತ್ತ ನೆರವೇರಿಸುವಂಥದ್ದನ್ನು ಬಯಸುವದು ಮಾತ್ರವಲ್ಲದೆ ನಾವು ಅದನ್ನು ಆತನು ಹೇಳಿದ ವಿಧಾನದಲ್ಲಿ ನಿರ್ವಹಿಸುವದನ್ನು ಸಹ ಅಪೇಕ್ಷಿಸುವವರಾಗಿ ಆತನ ವಚನಗಳಲ್ಲಿ ತಿಳಿಸಿರುವದಕ್ಕೆ

ತೀವ್ರವಾಗಿ ಲಕ್ಷ್ಯಕೊಟ್ಟು, ಇಲ್ಲವೇ ಪ್ರವಾದಿಯು ವ್ಯಕ್ತಪಡಿಸಿರುವಂತೆ, ನಾವು ಆತನ ನುಡಿಗೆ [ಭಯದಿಂದ] ನಡುಗುವವರಾಗಿದ್ದು ಅವುಗಳನ್ನು ಗಮನಿಸುವದರಲ್ಲಿ ತೀವ್ರ ಜಾಗರೂಕತೆಯುಳ್ಳವರಾಗಿ ಎಲ್ಲಾ ವಿಷಯದಲ್ಲಿಯೂ ಕರ್ತನ ಮಾತನ್ನು ನಿರ್ದಿಷ್ಟವಾಗಿ ಅನುಸರಿಸುತ್ತಿರುವವರ ನಡುವೆ ಇರುವಂತೆ ನೋಡಿಕೊಳ್ಳೋಣ. "ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ–ನಾನು ಕಾರ್ಯಸಾಧಿಸುವ [ಅಥವಾ ನನ್ನ ರತ್ನಾಭರಣಗಳಂತೆ ಇರುವವರನ್ನು ಶೃಂಗರಿಸಲು ಬರುವ] ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು." [ಮಲಾಕಿ 3:17]

ಮರಣವೆಂಬುದು ಜೀವಚೈತನ್ಯದ ನಿಲುಗಡೆಯೆಂಬ ಹಾಗು ಅದು ಹೆಚ್ಚು ಸಮೃದ್ಧ ಜೀವಚೈತನ್ಯದೊಳಗೆ ಪ್ರವೇಶಿಸುವಂಥದ್ದಲ್ಲವೆಂಬ ಶಾಸ್ತ್ರವಚನಗಳ ಬೋಧನೆಯನ್ನು ಸೂಕ್ಷ್ಮವಾಗಿ ಗಮನಿಸುವಂಥವರಿಗೆ ಉಜ್ಜನ ನಡವಳಿಕೆಯು ದೇವರು ಅವನನ್ನು ಆ ಜನಾಂಗದ ಎದುರಿನಲ್ಲಿ ಒಂದು ನಿದರ್ಶನವನ್ನಾಗಿ ಮಾಡಿ ಸಮಸ್ತ ಜನರಿಗೆ ಭಯಭಕ್ತಿಯ ವಿಷಯವಾಗಿ ತಿಳುವಳಿಕೆ ನೀಡಿದದ್ದನ್ನು ಸಮರ್ಥಿಸುವದು ಮಾತ್ರವಲ್ಲದೆ ಉಜ್ಜನಿಗೆ ಭವಿಷ್ಯತ್ತಿನಲ್ಲಿ ಇರುವ ನಿತ್ಯತ್ವದ [ನಿತ್ಯಜೀವದ] ಅವಕಾಶಕ್ಕೆ ಯಾವ ಹಾನಿಯೂ ಸಹ ಉಂಟಾಗಿರಲ್ಲಿಲ್ಲವೆಂಬದಕ್ಕೆ ವಿವರಣೆ ನೀಡುವ ಅಗತ್ಯವಿರುವದಿಲ್ಲ. ಆತನು [ಕ್ರಿಸ್ತನ] ವಿಮೋಚನಾ ಬೆಲೆಯು ತೆರುವದಕ್ಕೆ ಮುನ್ನ ಹಾಗು ನಿತ್ಯಜೀವದ ಯಾವುದೇ ಬಾಗಿಲು ತೆರೆಯುವದಕ್ಕೆ ಮೊದಲು ಜೀವಿಸಿದ್ದನು. ಆತನು ನಮ್ಮ ಕರ್ತನಾದ ಕ್ರಿಸ್ತ ಯೇಸುವು ತನ್ನ ಜೀವವನ್ನು ಈಡಾಗಿ ಕೊಟ್ಟಂಥ ಮಾನವ ಕುಲದ ಸದಸ್ಯರಲ್ಲಿ ಒಬ್ಬನಾಗಿದ್ದನು. ಪರಿಣಾಮವಾಗಿ ಆತನು ಕಡೆಯಲ್ಲಿ ಮನುಷ್ಯಕುಮಾರನ ಧ್ವನಿಯನ್ನು ಕೇಳಿ ಮರಣನಿದ್ರೆಯಿಂದ ಹೊರಬರುವಂಥ ಅಂದರೆ ದೇವರು ತನ್ನ "ಕ್ಲುಪ್ತ ಕಾಲದಲ್ಲಿ" ನಮ್ಮ ಸಮಸ್ತ ಮಾನವ ಸಂತತಿಗೆ ಕೃಪಾಪೂರ್ಣನಾಗಿ ಆ ಅಮೂಲ್ಯ ರಕ್ತದಿಂದ ನಮ್ಮನ್ನು ವಿಮೋಚಿಸಿದ್ದರ ಬಗ್ಗೆ ಸಾಕ್ಷಿಹೊಂದಲಿರುವ ಸಮಸ್ತ ಮಾನವ ಸಂತತಿಯವರಲ್ಲಿ ಒಬ್ಬನಾಗಿರುವನು. (1 ತಿಮೋಥೆ 2:4–6) ಪುನರುತ್ಥಾನವನ್ನು ನಿರ್ಲಕ್ಷಿಸುವಂಥ ತಪ್ಪು ಕಲ್ಪನೆಯನ್ನು ಹೊಂದಿದವರಾಗಿ ಸತ್ತವರಲ್ಲಿ ಪುನರುತ್ಥಾನ ಹೊಂದತಕ್ಕವರು ಯಾರೂ ಇರುವದಿಲ್ಲವೆಂದು ಹೇಳಿಕೊಳ್ಳುವವರ ಸಲುವಾಗಿ ಇದು ಇರುವದು. ಆದರೆ ಸತ್ತವರು ಹಿಂದೆಂದಿಗಿಂತಲೂ ಹೆಚ್ಚು ಜೀವವುಳ್ಳವರಾಗಿರುವರೆಂದೂ ಹೀಗಾಗಿ ಉಜ್ಜನು [ಸತ್ತಾಗ] ಕೂಡಲೇ ನಿತ್ಯ ಯಾತನೆ ಹೊಂದುವದಕ್ಕಾಗಿ [ಆತನು] ದೆವ್ವಗಳ ವಶದಲ್ಲಿ ಬೀಳಲ್ಪಟ್ಟನೆಂದು ಅವರು ಆಲೋಚಿಸುವರು. ಇಂಥವರಿಗೆ ಈ ನಿರೂಪಣೆಯು ದಿಗ್ಭ್ರಮೆಗೊಳಿಸುವಂಥದ್ದಾಗಿಯೂ ತೀವ್ರವಾದ ಅನ್ಯಾಯವುಳ್ಳದ್ದಾಗಿಯೂ ಇರುವಂತೆ ತೋರುವದು. ದೇವರ ಗುಣದ ಹಾಗು ಆತನ ಯೋಜನೆಯ ಬಗ್ಗೆ ಸ್ಪಷ್ಟವಾದ ಬೆಳಕು ಈಗ ಹೊಳೆಯುತ್ತಿರುವದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ!

ಮಂಜೂಷವು ಮೂರು ತಿಂಗಳು ಓಬೇದೆದೋಮನ ಮನೆಯಲ್ಲಿರುವಾಗ ದೇವಾಶಿರ್ವಾದವು ವಿಶೇಷವಾಗಿ ಆ ಕುಟುಂಬದೊಂದಿಗಿತ್ತು; ಅದು ಎಷ್ಟರ ಪ್ರಮಾಣದಲ್ಲಿತ್ತೆಂದರೆ ಇದು ಅವರ ನೆರೆಹೊರೆಯವರ ತಿಳುವಳಿಕೆಗೆ ಬಂದಿದ್ದು, ಕಡೆಗೆ ಈ ಸಂಗತಿಯು ಅರಸನ ಗಮನಕ್ಕೆ ತಲುಪಿತ್ತು. ಓಬೇದೆದೋಮನ ಗುಣದಲ್ಲಿ ಹಾಗು ಆತನ ಮನೆಯವರ ನಡವಳಿಕೆಯಲ್ಲಿ ಕೆಲವು ಸಂಗತಿಗಳಿದ್ದು, ಇವು ಆತನಲ್ಲಿದ್ದ ದೇವರ ಮೇಲಿನ ಭಯಭಕ್ತಿ ಹಾಗು ದೇವರಲ್ಲಿದ್ದ ಆತನ ಭರವಸೆಗಳ ದೆಸೆಯಿಂದ ಆಶೀರ್ವಾದವು ಮಂಜೂಷವಿದ್ದುದನ್ನು ಅನುಸರಿಕೊಂಡು [ಆ ಮನೆಗೆ] ಬರುವಂತೆ ಮಾಡಿದ್ದವೆಂದು ನಾವು ಭಾವಿಸುವಂಥದ್ದು ಅಯುಕ್ತವೆಂದು ನಾವು ನೆನಸಲಾರೆವು; ಯಾಕಂದರೆ ಮಂಜೂಷವು ಅಬಿನಾದಾಬನ ಮನೆಯಲ್ಲಿ ಎಪ್ಪತ್ತು ವರುಷಗಳು ಉಳಿದುಕೊಂಡಿದ್ದ ಕಾಲದಲ್ಲಿ ಆ ಮನೆಗೆ ಯಾವುದೇ ವಿಶೇಷ ಆಶೀರ್ವಾದಗಳು ಬಂದಿತ್ತೆಂಬದಕ್ಕೆ ಯಾವ ದಾಖಲೆಗಳನ್ನೂ ನಾವು ಹೊಂದಿರುವದಿಲ್ಲ. ಈ ಮೂಲಕವಾಗಿ ಆತ್ಮಿಕ ಇಸ್ರಾಯೇಲ್ಯರಿಗೆ ಅನ್ವಯವಾಗುವಂಥ ಒಂದು ಪಾಠವನ್ನು ನಾವು ತೆಗೆದುಕೊಳ್ಳಬಹುದಿತ್ತು. ಮಂಜೂಷವು ಶಾರೀರಿಕ ಇಸ್ರಾಯೇಲ್ಯರಿಗೆ ದೇವರನ್ನು ಪ್ರತಿನಿಧಿಸುವ ಪ್ರಕಾರವೇ ಸತ್ಯವೇದವು ಕೆಲವು ವಿಧದಲ್ಲಿ ನಮಗೆ ದೇವರನ್ನು ಪ್ರತಿನಿಧಿಸುತ್ತದೆ. ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವದಕ್ಕಾಗಿ ನಾವು ಇದರ ಬಳಿಗೆ ಹೋಗುತ್ತೇವೆ. ಈ ಮೂಲಕವಾಗಿ ನಮ್ಮ ಆತ್ಮಗಳಿಗೆ ಪಾಪಕ್ಷಮೆ ಮುಂತಾದವುಗಳ ಬಗ್ಗೆ ದೇವರು ನುಡಿಯುವ ಸಮಾಧಾನದ ಸಂದೇಶವನ್ನು ನಾವು ಕೇಳಿಸಿಕೊಳ್ಳುತ್ತೇವೆ. ಸತ್ಯವೇದವು ಕ್ರೈಸ್ತಸಮೂಹದವರ ಅನೇಕ ಮನೆಗಳಲ್ಲಿ ಎಪ್ಪತ್ತು ವರುಷಗಳಿಗೂ ಹೆಚ್ಚು ಸಮಯದಿಂದ ಇದ್ದು ಆ ಮನೆಗಳಿಗೆ ಯಾವುದೇ ವಿಶೇಷ ಆಶೀರ್ವಾದಗಳನ್ನು ಕೊಂಡು ತಂದಿರುವದಿಲ್ಲ; ಹೀಗಿದ್ದರೂ ಕೆಲವು ತಿಂಗಳುಗಳಲ್ಲೇ ಅದು ಕೆಲವರಿಗೆ ಊಹಿಸಲಶಕ್ಯವಾದ ಕೃಪಾನುಗ್ರಹಗಳನ್ನು ತಂದಿರುತ್ತದೆ. ಇದರ ವ್ಯತ್ಯಾಸವೇನು? ನಮ್ಮ ಉತ್ತರವೆಂದರೆ ಇದು ಇಸ್ರಾಯೇಲ್ಯನ ನೈಜ ಪ್ರಾಮಾಣಿಕತೆ, ದೇವರ ಹಾಗು ಆತನ ವಾಕ್ಯಗಳ ಕಡೆಗೆ ಅವನಿಗಿರುವ ಭಯಭಕ್ತಿಯ ಮಟ್ಟ ಅಲ್ಲದೆ ತನ್ನ ಎಲ್ಲಾ ವ್ಯವಹಾರಗಳ ಮತ್ತು ತನ್ನ ಮನೆಯ ಎಲ್ಲಾ ಆಗುಹೋಗುಗಳ ಬಗ್ಗೆ ದೇವರ ವಾಕ್ಯವನ್ನು ಸಮಾಲೋಚಿಸುವದರಲ್ಲಿ ಆತನಿಗಿರುವ ಜಾಗರೂಕತೆಯ ಮೇಲೆ ಇದು ಬಹು ಮಟ್ಟಿಗೆ ಆಧಾರಗೊಂಡಿರುತ್ತದೆಂಬದು. ಯಾರು ದೇವರ ವಾಕ್ಯದಲ್ಲಿನ ಆಶೀರ್ವಾದಗಳನ್ನು ಹೊಂದಿರುವರೋ ಮತ್ತು ವಿಶೇಷವಾಗಿ ಯಾರು ಸಾವಿರ ವರುಷದ ಉದಯದ ಈ ಮುಂಜಾನೆಯ ಕಾಲದಲ್ಲಿ ಸತ್ಯವೇದದ ಪುಟಗಳ ಮೂಲಕವಾಗಿ ಯಾವುದೇ ಬೆಳಕನ್ನು ಹೊಂದಿರುವರೋ ಅವರು ಅದರಿಂದ ತಮ್ಮ ಸ್ವಂತ ಹೃದಯಗಳಲ್ಲಿ ಹಾಗು ತಮ್ಮ ಮನೆಯ ಸದಸ್ಯರಲ್ಲಿ ಒಂದು ದೊಡ್ಡ ಆಶೀರ್ವಾದದ ರೂಪದಲ್ಲಿ ಸಮಾಧಾನ ಸಂತೋಷ ಆಧರಣೆ ಧೈರ್ಯ ಬಲಗಳನ್ನು ಪಡೆದುಕೊಂಡಿರುವದಿಲ್ಲವೋ ಈ ಮೂಲಕವಾಗಿ ಹೀಗೆ ಪ್ರಯೋಜನ ಪಡೆಯಲು ಅವರಿಗೆ ಇರುವ ವೈಪಲ್ಯತೆಗೆ ತಾವು ಎಷ್ಟರ ಮಟ್ಟಿಗೆ ಹೊಣೆಗಾರರೆಂದು ವಿಚಾರಿಸಿಕೊಳ್ಳುವದಕ್ಕೆ ಕಾರಣಗಳನ್ನು ಹೊಂದಿರುವರು.

ಓಬೇದೆದೋಮನ ಮನೆಗೆ ಉಂಟಾದ ದೇವರ ಆಶೀರ್ವಾದದ ಬಗ್ಗೆ ಕೇಳಿದವನಾಗಿ ದಾವೀದನು ಹೊಸದಾಗಿ ಧೈರ್ಯವನ್ನು ತೆಗೆದುಕೊಂಡವನಾಗಿ ಉಜ್ಜನ ಹಾಗು ಓಬೆದೆದೋಮನ ವಿಷಯದಲ್ಲಾದ ವಿಭಿನ್ನ ಅನುಭವಗಳು ಪಾಠವನ್ನು ಕಲಿಸಿಕೊಡುವದೆಂಬುದನ್ನು ಮನಗೊಂಡಿದ್ದನು; ಆ ಪಾಠವು ಏನಂದರೆ ಯಾರು ಭಯಭಕ್ತಿಯಿಂದಲೂ ಜಾಗರೂಕತೆಯಿಂದಲೂ ದೇವರನ್ನು ತಿಳಿದುಕೊಳ್ಳಲು ಹಾಗು ಆತನ ಚಿತ್ತವನ್ನು ಮಾಡಲು ಪರಿಶ್ರಮಿಸುವರೋ ಅವರಿಗೆ ತಾವು ಆತನಿಗೆ ಸಮೀಪವಾಗಿರುವಷ್ಟರ ಪ್ರಮಾಣದಲ್ಲಿ ಒಂದು ಆಶೀರ್ವಾದವನ್ನು ಹೊಂದಲಿದ್ದು, ಕೇವಲ ಅಜಾರೂಕರು ಹಾಗು ಭಯಭಕ್ತಿಯಿಲ್ಲದವರು ಮಾತ್ರ ಇದರ ವಿಷಯದಲ್ಲಿ ಭಯಪಡುವ ಅಗತ್ಯವಿರುವದೆಂಬದೇ. ಅರಸನು ಮತ್ತೆ ದೇಶದ ಎಲ್ಲಾ ಮೂಲೆಗಳಿಂದಲೂ ಪ್ರತಿನಿಧಿಗಳನ್ನು ಅಂದರೆ ಕುಲಾಧಿಪತಿಗಳು ಹಾಗು ಸೇನೆಯ ಮುಖ್ಯಸ್ಥರ ಪ್ರತಿನಿಧಿಗಳು, ಮುಂತಾದವರನ್ನು, ಒಟ್ಟುಗೂಡಿಸಿದ್ದು ಮಂಜೂಷವನ್ನು ಯೆರೂಸಲೇಮಿಗೆ ತರುವ ಆ ದಿವಸವು ದಾವೀದನ ಎಲ್ಲಾ ಜೀವಿತಾನುಭವಗಳಲ್ಲಿ ಬಹು ಸಂತೋಷವೂ ಹಾಗು ಅತಿ ಗಣನೀಯವೂ ಆಗಿದ್ದುದು ಸ್ಪಷ್ಟವಾಗಿತ್ತು. ಇದರ ಬಗ್ಗೆ ಒಂದು ವಿವರಗಳಿಗಾಗಿ ಒಂದನೇ ಪೂರ್ವಕಾಲ ವೃತ್ತಾಂತದ 15 ಹಾಗು 16ನೇ ಅಧ್ಯಾಯಗಳನ್ನು ನೋಡಿರಿ. ಈ ಸಂದರ್ಭದಲ್ಲಿ ದೇವರ ಆದೇಶಗಳನ್ನು ಅನುಸರಿಸಲು ಜಾಗರೂಕತೆಯನ್ನು ತೆಗೆದುಕೊಳ್ಳಲಾಗಿದ್ದು ಮಂಜೂಷವನ್ನು ಲೇವಿಯರ ಹೆಗಲಿನ ಮೇಲೆ ಹೊರಿಸಿಕೊಂಡು ಸಾಗುತ್ತಾ ಪದೇ ಪದೆ ಅದನ್ನು ನಿಲ್ಲಿಸಿ, ಆ ಸಮಯದಲ್ಲಿ ದೇವರಿಗೆ ಯಜ್ಞಾರ್ಪಣೆಗಳನ್ನು ಸಲ್ಲಿಸಲಾಗಿತ್ತು.

ಒಟ್ಟಾರೆ ಈ ಸಂಗತಿಯಲ್ಲಿ ದೇವರ ನಡವಳಿಕೆಯು ದಾವೀದನಿಗೂ ಮತ್ತು ಇಸ್ರಾಯೇಲ್ಯರೆಲ್ಲರಿಗೂ ಒಂದು ದೊಡ್ಡ ಪಾಠವೂ ಹಾಗು ಒಟ್ಟಾರೆ ಒಂದು ಜನಾಂಗವಾಗಿ ಅದಕ್ಕೆ ಇದು ಬಹು ಪ್ರಯೋಜನಕಾರಿಯೂ ಆಗಿತ್ತೆಂಬುದನ್ನು ನಾವು ಗ್ರಹಿಸಿಕೊಂಡಿದ್ದೇವೆ. ನೀತಿಯ ವಿಷಯವಾಗಿ ದೇವರು ನಿಜವಾಗಿಯೂ ತನ್ನವರಾಗಿ ಇರುವಂಥವರಿಗೆ ಯಾವುದೇ ಸಮಯದಲ್ಲಿ ನೀಡುವ ತಿದ್ದುಪಾಟಿಗಳು ಹೀಗೆಯೇ ಇರುವವು. ಸೂಕ್ತವಾಗಿ ತೆಗೆದುಕೊಂಡಲ್ಲಿ ಅವುಗಳು ಸಮಾಧಾನಕರವಾದ ನೀತಿಫಲಗಳನ್ನು, ಭಯಭಕ್ತಿಯನ್ನು ಹಾಗು ವಿಧೇಯತೆಯನ್ನು ಕೊಂಡುತರುವವು.

*****

ಮಂಜೂಷವನ್ನು ಯೆರೂಸಲೇಮಿನಲ್ಲಿ ನೆಲೆಗೊಳಿಸಿದ್ದು

ರೀಪ್ರಿಂಟ್ಸ್ ಪುಟ 4258

2 ಸಮುವೇಲ 6:1–12

"ಕೃತಜ್ಞತಾಸ್ತುತಿಯೊಡನೆ ಆತನ ಮಂದಿರ ದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ; – ಕೀರ್ತನೆ 100:4

ಒಡಂಬಡಿಕೆಯು ಮಂಜೂಷದಲ್ಲಿ ದೇವರು ಇಸ್ರಾಯೇಲ್ಯರೊಡನೆ ಮಾಡಿಕೊಂಡ ಒಡಂಬಡಿಕೆಗೆ ಆಧಾರವಾಗಿದ್ದ ಆಜ್ಞೆಗಳನ್ನೊಳಗೊಂಡ ಕಲ್ಲಿನ ಹಲಿಗೆ ಹಾಗು ಆರೋನನ ಚಿಗುರಿದ ಕೋಲು ಅಲ್ಲದೆ ಮನ್ನಾವಿದ್ದ ಚಿನ್ನದ ಬಟ್ಟಲನ್ನು ಇಡಲಾಗಿದ್ದು, ಇವು ಛಾಯಾರೂಪದ ಇಸ್ರಾಯೇಲ್ಯರ ಧಾರ್ಮಿಕ ಸಂಕೇತಗಳಲ್ಲಿ ಅತಿ ಪವಿತ್ರವಾದ ವಸ್ತುಗಳಾಗಿದ್ದವು. ಅದರ ಮುಚ್ಚಳವು ಇಬ್ಬರು ಕೆರೂಬಿಗಳನ್ನು ಮೇಲಿರಿಸಲಾಗಿದ್ದ ಚಿನ್ನದ ತಗಡನ್ನು ಒಳಗೊಂಡಿದ್ದು ಇದು ದೇವರು ಹಾಗು ಕಾರ್ಯನಿರ್ವಾಹಕ ಯಾಜಕನ ನಡುವಿನ ಸಂಧಿಸುವ ಸ್ಥಳವಾಗಿದ್ದು ಕೃಪಾಸನವಾಗಿ ರೂಪುಗೊಂಡಿತ್ತು. ಯಾಜಕನು ದೇವರು ಹಾಗು ಇಸ್ರಾಯೇಲ್ ಜನಾಂಗದ ನಡುವಿನ ಮಧ್ಯಸ್ಥನಾಗಿ ಕಾರ್ಯನಿರ್ವಹಿಸುತ್ತಿದ್ದನು. [ಮಧ್ಯಸ್ಥನೆಂಬ ಶಬ್ಧಕ್ಕೆ ಬದಲಾಗಿ ಸಹಾಯಕನೆಂಬ ಶಬ್ಧವನ್ನು ಬಳಸಬೇಕೆಂದು ಗ್ರಂಥಕರ್ತರ ಹೇಳಿಕೆಯನ್ನೊಳಗೊಂಡ ಜನವರಿ 1909ರ ಸಂಚಿಕೆಯನ್ನು ದಯವಿಟ್ಟ ನೋಡಿ.] ದೇವದರ್ಶನ ಗುಡಾರದಲ್ಲಿ ಶೆಕೀನ ಪ್ರಭೆಯೆಂದು ಕರೆಯಲ್ಪಡುವ ದೇವ ಪ್ರಸನ್ನತೆಯು ಕೃಪಾಸನದ ಮೇಲೆ ಕೆರೂಬಿಗಳ ನಡುವಿನ ಅದ್ಭುತವಾದ ಬೆಳಕಿನ ಮೂಲಕವಾಗಿ ವ್ಯಕ್ತವಾಗುತ್ತಿತ್ತು. ನಮ್ಮ ಪಾಠದಲ್ಲಿ ತಿಳಿಸಿರುವ ಸಂಗತಿಯು ನಡೆದ ಎಪ್ಪತ್ತು ವರುಷಗಳಿಗೆ ಹಿಂದೆ ಮಂಜೂಷವು ಉಪೇಕ್ಷಿಸಲ್ಪಟ್ಟಿದ್ದು ಅದೇ ರೀತಿಯಲ್ಲಿ ಆ ಜನಾಂಗದ ಧರ್ಮವು ಬಹು ಮಟ್ಟಿಗೆ ನಿರ್ಲಕ್ಷ್ಯಕ್ಕೊಳಗಾಗಿತ್ತು. ಹೀಗಿದ್ದರೂ ವೈಯುಕ್ತಿಕವಾಗಿ ಅವರ ಶ್ರದ್ಧಾಭಕ್ತಿಗಳು ಸಂಪೂರ್ಣವಾಗಿ ಮರೆತುಹೋಗಿರಲಿಲ್ಲವೆಂಬುದು ನಮ್ಮ ಪೂರ್ವಕಲ್ಪನೆ. ದಾವೀದನ ವಿಷಯದಲ್ಲಿದ್ದಂತೆ, ದೇವರಲ್ಲಿ ಆತನ ಆತುಕೊಳ್ಳುವಿಕೆ ಹಾಗು ದೇವರಿಗೆ ಆತನ ಪ್ರಾರ್ಥನೆಯ ಸಲ್ಲಿಸುವಿಕೆಯು ನಿರಂತರವಾಗಿ ಮುಂದುವರೆಯಲಾಗುತ್ತಿದ್ದುದನ್ನು ನಾವು ಗಮನಿಸಿರುತ್ತೇವೆ.

ನೆನಪಿಸಿಕೊಳ್ಳಲ್ಪಡುವದೇನಂದರೆ ಸಮುವೇಲನು ಬಾಲಕನಾಗಿ ಹಾಗು ಏಲಿಯು ಮಹಾಯಾಜಕನಾಗಿರುವಾಗ ಮಂಜೂಷವು ಶೀಲೋವಿನಲ್ಲಿದ್ದ ದೇವದರ್ಶನದ ಗುಡಾರದಲ್ಲಿ ನೆಲೆಗೊಂಡಿತ್ತೆಂಬದು. ಆನಂತರದಲ್ಲಿ ಏಲಿಯು ಇಳಿವಯಸ್ಸಿನ–ವನಾಗಿ ಸಮುವೇಲನು ದೊಡ್ಡವನಾಗಿದ್ದಾಗ, ಏಲಿಯ ಮಕ್ಕಳು ಸ್ವಾರ್ಥಪರರೂ ಕಸಿದುಕೊಳ್ಳುವ ಗುಣವುಳ್ಳವರಾಗಿ ಅಪಕೀರ್ತಿಗೊಂಡವರಾಗಿದ್ದು ಮಂಜೂಷವನ್ನು ಒಂದು ರಕ್ಷಾಯಂತ್ರ ಅಥವಾ ಅದೃಷ್ಟದ ಸಂಕೇತವಾಗಿ ರಣರಂಗಕ್ಕೆ ತೆಗೆದುಕೊಂಡು ಹೋದವರಾಗಿ ಆ ಮೂಲಕವಾಗಿ ದೇವರು ಅದನ್ನು ರಕ್ಷಿಸುವನೆಂತಲೂ ಹೀಗಾಗಿ ಇಸ್ರಾಯೇಲ್ಯರ ಸೇನೆಯು ಇದರೊಂದಿಗೆ ಯಶಸ್ಸನ್ನು ಹೊಂದುವದೆಂದು ನಂಬಿ ಕೊಂಡಿದ್ದರು. ಆದರೆ ಏಲಿಯ ಮಕ್ಕಳ ಅಧರ್ಮವು ಪೂರ್ಣ

ಹಂತಕ್ಕೆ ತಲುಪಿರಲಾಗಿ, ಅಲ್ಲಿ ದೇವರು ಇಚ್ಛಿಸಿದ್ದೇನಂದರೆ ಅವರು ಯುದ್ಧದಲ್ಲಿ ಸೋತುಹೋದವರಾಗಿ, ಮಂಜೂಷವು ಫಿಲಿಷ್ಟಿಯ ಸ್ವಾಧೀನಕ್ಕೊಳಪಟ್ಟು, ಅಲ್ಲದೆ ಈ ವಿನಾಶಕಾರೀ ಸಂಗತಿಯನ್ನು ಕೇಳಿದವನಾದ ಏಲಿಯು ಹೃದಯಘಾತದಿಂದ ಸಾಯಬೇಕೆಂದೂ, ಮತ್ತು ಸಮುವೇಲನು ನ್ಯಾಯಾಧಿಪತಿಯ ಸ್ಥಾನವನ್ನು ಅಂದರೆ ಒಬ್ಬ ಪ್ರವಾದಿ ಹಾಗು ದೇವರಿಗೆ ಯಾಜಕನಾಗುವ ಸ್ಥಾನವನ್ನು ತೆಗೆದುಕೊಳ್ಳಬೇಕೆಂಬದೇ.

ಮಂಜೂಷವು ಫಿಲಿಷ್ಟಿಯರೊಡನೆ ಇದ್ದಾಗ ಅದು ಯಾವ ಆಶೀರ್ವಾದವನ್ನೂ ಕೊಂಡುತರಲಿಲ್ಲವೆಂದೂ ಆದರೆ ಪ್ರತಿಯಾಗಿ ಅವರಿಗೆ ಖಾಯಿಲೆ ಸಂಕಷ್ಟ ಮುಂತಾದವುಗಳನ್ನು ಇಲ್ಲವೇ ಕೆಲವರು ಹೇಳುವಂತೆ "ದುರಾದೃಷ್ಟವನ್ನು" ತಂದಿತ್ತೆಂಬುದನ್ನು ಸಹ ಜ್ಞಾಪಕದಲ್ಲಿಡಬೇಕು. ಹೀಗೆ ಅದು ಫಿಲಿಷ್ಟಿಯರ ಒಂದು ಪಟ್ಟಣದಿಂದ ಮತ್ತೊಂದಕ್ಕೆ ಕಳುಹಿಸಲ್ಪಟ್ಟು, ಪ್ರತಿಯೊಂದು ಪಟ್ಟಣದವರೂ ಅದನ್ನು ಹೊರಹಾಕಲು ಇಚ್ಛಿಸುವವರಾಗಿ ಅಂತಿಮವಾಗಿ ಅದನ್ನು ಒಂದು ಎತ್ತಿನ ಬಂಡಿಯ ಮೇಲಿರಿಸಿ ಅದನ್ನು ಪೂರ್ವದ ಕಡೆಗಿನ ಇಸ್ರಾಯೇಲ್ಯರ ನಾಡಿಗೆ ಹೊರಡಿಸಿದ್ದರು. ಅಲ್ಲಿ ಅದು ಯಾಜಕನಾದ ಅಬೀನಾದಾಬನಿಂದ ಸ್ವೀಕರಿಸಲ್ಪಟ್ಟು, ಆತನ ಸ್ವಂತ ಮನೆಯಲ್ಲಿ ಅದನ್ನು ಇರಿಸಿಕೊಳ್ಳಲಾಗಿತ್ತು. ಅಲ್ಲಿ ಅದು ಅನೇಕ ವರುಷಗಳವರೆಗೆ, ಅಂದರೆ ದಾವೀದನು ಇಸ್ರಾಯೇಲ್ಯರ ಅರಸನಾದಂಥ ಈ ಪಾಠದ ಸಮಯದ ಪರ್ಯಂತರ ಅಲ್ಲಿ ಉಳಿದುಕೊಂಡಿತ್ತು.

ಆತ್ಮದಲ್ಲಿ ಉತ್ಸಾಹಭರಿತನಾಗುವಿಕೆ

ನಾವು ಈಗಾಗಲೇ ಕಂಡಿರುವಂತೆ ಅರಸನಾದ ದಾವೀದನು ಬಹು ಗಾಢವಾದ ಒಂದು ಧಾರ್ಮಿಕ ಸ್ವಭಾವವನ್ನು ಹೊಂದಿದ್ದು, ಆತನ ಕೇಂದ್ರೀಕೃತ ಮನಸ್ಸು ಅಥವಾ ಚಿತ್ತವು ಮುಂಚಿತವಾಗಿಯೇ ದೇವರಿಗೆ ಪೂರ್ಣವಾಗಿ ಪ್ರತಿಷ್ಠೆಮಾಡಿ–ಕೊಳ್ಳುವದರ ಕಡೆಗೆ ತಿರುಗಿತ್ತು. ದೇವರು ಇಸ್ರಾಯೇಲ್ಯರ ನಿಜವಾದ ಅರಸನೆಂಬುದನ್ನು ಹಾಗು ತಾನು ಕೇವಲ ಆತನ ಆಡಳಿತಾಧಿಕಾರಿ ಅಥವಾ ಪ್ರತಿನಿಧಿಯೆಂಬುದನ್ನು ಮನಗಂಡವನಾದ ದಾವೀದನು ದೈವೀಕ ಚಿತ್ತವನ್ನು ಹಾಗು ಆತನ ವ್ಯವಸ್ಥಾಪನಾ ಕ್ರಮವನ್ನು ನಿರ್ವಹಿಸುವವನಾಗಿ ದೇವರು ಮೋಶೆಯ ಮೂಲಕ ನೇಮಿಸಿದ ಪ್ರಕಾರ ದೇವದರ್ಶನ ಗುಡಾರ ಹಾಗು ಅದರಲ್ಲಿನ ಧಾರ್ಮಿಕ ಸೇವೆಗಳನ್ನು ಪ್ರತಿಷ್ಠಾಪನೆಮಾಡಲು ಪರಿಶ್ರಮಿಸಿದ್ದನು. ಇದರ ಅನುಸಾರವಾಗಿ ಒಂದು ರಾಜಾಜ್ಞೆಯು ಹೊರಡಿಸಲ್ಪಟ್ಟು ಯಾಜಕರು ಲೇವಿಯರು ಕುಲಾಧಿಪತಿಗಳು ಮೊದಲಾಗಿ ತನ್ನ ಆಳ್ವಿಕೆಯ ಅನೇಕ ಭಾಗಗಳಲ್ಲಿರುವ ಮತಾಸಕ್ತ ಜನರನ್ನು ಯೆಹೋವ ದೇವರ ಬಹಿರಂಗವಾದ ಆರಾಧನೆಯ ಮರುಸ್ಥಾಪನೆಯ ಸಲುವಾಗಿ ಕರೇಕಳುಸಿದನು. ಆ ರಾಜಾಜ್ಞೆಯ ಕಾರ್ಯವ್ಯಾಪ್ತಿಯ ಬಗ್ಗೆ ಅಲ್ಲಿ ಕೂಡಿ ಬಂದಿದ್ದ ಮೂವತ್ತು ಸಾವಿರ ಜನಸಮೂಹದ ಮೂಲಕವಾಗಿ ನಿರ್ಣಯಿಸಬಹುದು. ಅರಸನ ಈ ಉದ್ದೇಶದ ಬಗ್ಗೆ ಕೆಲವರು ಪ್ರತಿರೋಧಿಸುವ ಪ್ರವೃತ್ತಿಯುಳ್ಳವರಾಗಿ ಇದು ಪುರಾತನವಾದ ಒಂದು ಸಂಪ್ರದಾಯವನ್ನು ಪುನಶ್ಚೇತನಗೊಳಿಸುವದರ ಮೂಲಕವಾಗಿ ಅರಸನು ತನ್ನ ಸಹಜವಾದ ಧಾರ್ಮಿಕ ಪ್ರವೃತ್ತಿಯಿಂದ ಜನರನ್ನು ತನ್ನ ಬಳಿಯಲ್ಲಿ ಕೂಡಿಟ್ಟುಕೊಳ್ಳ ಸಲುವಾದ ಕೇವಲ ಒಂದು ಧೋರಣೆಯೆಂದು ಹೇಳಿಕೊಳ್ಳುವಂಥದ್ದು ನಮಗೆ ಏನೂ ಪ್ರಾಮುಖ್ಯವಾಗದು. ಇದು ಏನಾದರೂ ದಾವೀದನ ವಿಷಯದಲ್ಲಿ ಕೇವಲ ಒಂದು ಕಾರ್ಯನೀತಿಯಾಗಿದ್ದಲ್ಲಿ ಇದು ಒಳ್ಳೆಯ ಕಾರ್ಯನೀತಿಯೂ ವಿವೇಕಯುಕ್ತವಾದ ಧೋರಣೆಯೂ ಜನರಿಗೆ ಉಪಯೋಗಕರವೂ ಆಗಿದ್ದು, ಜೊತೆಗೆ ತನ್ನ ರಾಜ್ಯದ ಒಟ್ಟುಗೂಡಿಸುವಿಕೆಯೂ ಹಾಗು ಭದ್ರಪಡಿಸುವಿಕೆಯೂ ಆಗಿರುತ್ತಿತ್ತು. ಕೆಲವರು ಇದರ ಉದ್ದೇಶವನ್ನು ಪ್ರತಿರೋಧಿಸಿದರೂ, ಧಾರ್ಮಿಕನಾಗುವದರಿಂದ ಜನರಿಗೆ ಒಳ್ಳೆಯ ಸಂಗತಿಗಳನ್ನು ತಪ್ಪಿಸುವ ಅಗತ್ಯತೆ ಬೀಳುವದಿಲ್ಲ. ಆದರೆ ಕೆಟ್ಟದ್ದನ್ನು ಆಲೋಚಿಸಲಾಗದಂಥ ಪ್ರೀತಿಯ ಅನುಭವವನ್ನು ಪಡಕೊಂಡು ಮೋಶೆಯ ಮೂಲಕವಾಗಿ ನೀಡಲಾದ ದೇವಾದೇಶವನ್ನು ನೆರವೇರಿಸುವದಕ್ಕಾಗಿ ನೀಡಲಾದ ಕರೆಯಲ್ಲಿ ತೋರಿಬಂದ ಸದುದ್ದೇಶದ ಸಲುವಾಗಿ ಅರಸನನ್ನು ಗೌರವಿಸಬೇಕು.

ನಿಜವಾಗಿಯೂ ದೇವಜನರಲ್ಲಿ ಯಾರು ತಮ್ಮ ಜೀವನದ ಎಲ್ಲಾ ಆಗುಹೋಗುಗಳಲ್ಲಿ ದೇವರ ನಡೆಸುವಿಕೆಯನ್ನು ಎದುರುನೋಡಲು ಕಲಿತುಕೊಂಡಿರುವರೋ ಅವರು ಮನದಟ್ಟುಮಾಡಿಕೊಳ್ಳಬೇಕೇನಂದರೆ ದೇವರು ತಾನೇ ಅರಸನೂ ಹಾಗು ತಾನು ಆದುಕೊಂಡು ಒಡಂಬಡಿಕೆಮಾಡಿಕೊಂಡಂಥ ಜನರ ಎಲ್ಲಾ ಹಿತಾಸಕ್ತಿಗಳನ್ನು ನಿರ್ದೇಶಿಸುವನೂ ಆಗಿರಲಾಗಿ ತನ್ನ ಜನರಾದ ಇಸ್ರಾಯೇಲ್ಯರ ಸಂಗತಿಯನ್ನು ದಾವೀದನ ಕೈಯಲ್ಲಿ ಬಿಡಲಿಲ್ಲವೆಂಬದೇ. ಆದುದರಿಂದ ನಮ್ಮ ಅಭಿಪ್ರಾಯದ ಪ್ರಕಾರ ಈ ಮಹಾಸಭೆಯನ್ನು ಕರೆಯುವಲ್ಲಿ ದಾವೀದನು ಯಾವ ಉದ್ದೇಶಹೊಂದಿದ್ದನೆಂಬದು ನಮಗೆ ಗಮನಾರ್ಹವಾಗುವದಿಲ್ಲ. ಯಾಕಂದರೆ ದೇವರು ಇದರ ಹಿಂದೆ ಇದ್ದವನಾಗಿದ್ದು ದಾವೀದನು ತಿಳಿದೋ ಅಥವಾ ತಿಳಿಯದೆಯೋ ದೈವೋದ್ದೇಶ–ಗಳನ್ನು ನೆರವೇರಿಸುವಂಥ ಸಾಧನವಾಗಿದ್ದನು. ಹೀಗೆಯೇ ಆತ್ಮಿಕ ಇಸ್ರಾಯೇಲ್ಯರಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ದೇವರು ಒಂದು ವಿಶೇಷ ಆಸಕ್ತಿ ಹೊಂದಿದವನಾಗಿದ್ದು ಆತ್ಮಿಕ ಚಿಯೋನಿಗೆ ಸಂಬಂಧಿಸಿದಂಥ ಯಾವ ಮಹತ್ವವುಳ್ಳ ಅಥವಾ ಮುಖ್ಯವಾದ ಸಂಗತಿಗಳೂ ಆತನ ಗಮನಕ್ಕೆಬಾರದೆ, ಆತನ ಅನುಮತಿಯಿಲ್ಲದೆ ಸಂಭವಿಸುವದಿಲ್ಲವೆಂಬುದನ್ನು ನಮ್ಮ ಮನಸ್ಸಿಗೆ ತಂದುಕೊಂಡಲ್ಲಿ ಅದು ಖಂಡಿತವಾಗಿ ನಮಗೆ ಒಳಿತನ್ನು ಉಂಟುಮಾಡುತ್ತದೆ. ಕೇವಲ ಯಾರು ಸಭೆಯ ಹಿತಾಸಕ್ತಿಗಳಲ್ಲಿ ದೇವರ ಮೇಲ್ವಿಚಾರಣೆಯಿರುವದನ್ನು ಗುರುತಿಸಿಕೊಳ್ಳುವರೋ ಅವರಿಗೆ ದೇವರು ತನ್ನ ಸ್ವಂತ ಚಿತ್ತದ ಸಲಹೆಯ ಪ್ರಕಾರ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವೆನೆಂಬುದರ ಮೇಲೆ ವಿಶ್ವಾಸವಿಟ್ಟು ಭರವಸವುಳ್ಳವರಾಗಿ ತಮ್ಮ ಹೃದಯಗಳನ್ನು ವಿಶ್ರಮಗೊಳಿಸಲು ಸಾಧ್ಯವಾಗುವದು.

ದೇವರ ಮೇಲ್ವಿಚಾರಣೆಯು ವಿಶೇಷವಾಗಿ ಇಸ್ರಾಯೇಲ್ಯರೊಡನೆ ಯುಗಾಂತ್ಯ ಸಮಯದ ಅವರ ಸುಗ್ಗಿಯ

ಕಾಲದಲ್ಲಿತ್ತೆಂಬುದು, ನಮ್ಮ ಕರ್ತನ ಮೊದಲನೇ ಬರುವಿಕೆಯಲ್ಲಿ ನಡೆದ ಎಲ್ಲಾ ಸಂಗತಿಗಳಲ್ಲಿ ಅಂದರೆ "ಕಾಲವು ಪರಿಪೂರ್ಣವಾದಾಗ" ಆತನ ಜನನ, "ಕ್ಲುಪ್ತಕಾಲದಲ್ಲಿನ" ಆತನ ಮರಣ, ಆತನ ಶಿಷ್ಯರ ಸಂಖ್ಯೆ, ಒಬ್ಬನು ಆತನನ್ನು ಹಿಡುಕೊಡುವದು, ಆತನನ್ನು ಒಬ್ಬ ದುಷ್ಕರ್ಮಿಯಂತೆ ಶಿಲುಬೆಗೆ ಹಾಕಲಾದುದು, ಮೆಸ್ಸೀಯನನ್ನು ನಿರಾಕರಿಸಿದ ಕಾರಣದಿಂದ ಇಸ್ರಾಯೇಲ್ಯರು ತಿರಸ್ಕರಿಸಲ್ಪಟ್ಟದ್ದು, ಪಂಚಾಶತ್ತಮ ದಿನದಂದು "ಅತಿ ಪರಿಶುದ್ಧವಾದುದನ್ನು" ಅಭಿಷೇಕಿಸಲಾದದ್ದು, ಕ್ರಿ.ಶ. 70ರಲ್ಲಿ ಅಂತಿಮವಾಗಿ [ಇಸ್ರಾಯೇಲ್] ಜನಾಂಗವನ್ನು ಉಚ್ಚಾಟಿಸಲಾದುದು, ಇವೆಲ್ಲವುಗಳಿಗೆ ಸಂಬಂಧಿಸಿದ ವಿಶೇಷ ಸಾಕ್ಷ್ಯಾಧಾರಗಳು ನಮಗೆ ವಿಶೇಷ ಪ್ರಭಾವ ಬೀರುವದೆಂಬದು ನಮ್ಮ ಅಭಿಪ್ರಾಯ. ಅಲ್ಲದೆ ನಾವು ಇಸ್ರಾಯೇಲ್ಯರ ಮೇಲಿನ ದೇವರ ಇಂಥಾ ನಿರ್ದಿಷ್ಟವಾದ ಕಾಳಜಿಯನ್ನು ಗಮನಿಸಿದ ನಾವು ಈ ಪ್ರಸ್ತುತ ಸುಗ್ಗಿಯ ಕಾಲದಲ್ಲಿ ಆತ್ಮಿಕ ಇಸ್ರಾಯೇಲ್ಯರ ವಿಷಯದಲ್ಲಿ ಆತನ ಕಾಳಜಿಯನ್ನು ನಂಬಿಕೆಯ ಮೂಲಕವಾಗಿ ನಾವು ನಮ್ಮ ಅನುಭವಕ್ಕೆ ತಂದುಕೊಳ್ಳಬಹುದಲ್ಲವೇ? ಖಂಡಿತವಾಗಿಯೂ ಶಾಸ್ತ್ರವಚನಗಳು ನೀಡಿರುವಂಥ ಯೆಹೂದ್ಯರ ಯುಗದ ಹಾಗು ಸುವಾರ್ತಾಯುಗದ, ಆ [ಯೆಹೂದ್ಯರ] ಯುಗದ ಸುಗ್ಗಿಯ ಕಾಲದ ಹಾಗು ಈ [ಸುವಾರ್ತಾ] ಯುಗದ ಸುಗ್ಗಿಯ ಕಾಲದ ನಡುವಿನ ಹೊಂದಾಣಿಕೆಯುಳ್ಳ ಸಮಾನತೆಗಳ ಮೂಲಕವಾಗಿ ನಾವು ಕಲಿತುಕೊಂಡಂಥ ಪಾಠಗಳು ಕರ್ತನು ಈ ಸುಗ್ಗಿಯ ಕಾಲದಲ್ಲಿನ ಕೇವಲ ಅತ್ಯಲ್ಪ ಸಂಗತಿಗಳನ್ನು ಸಹ ನಮ್ಮ ಹಿತಕ್ಕಾಗಿ ಮಾರ್ಪಡಿಸಲು ಇದೇ ರೀತಿಯಲ್ಲಿ ಜಾಗರೂಕನಾಗಿರುವನೆಂಬುದನ್ನು ಅಪೇಕ್ಷಿಸುವದರಲ್ಲಿ ಇವು ನಮ್ಮನ್ನು ಪೂರ್ಣವಾಗಿ ಸಮರ್ಥಿಸುವದು.

ಯಾರೇ ಆದರೂ ನಂಬಿಕೆಯ ಮೂಲಕವಾಗಿ ಈ ಸ್ಥಿತಿಗೆ ತಲುಪಿ ಅದನ್ನು ಕಾಪಾಡಿಕೊಳ್ಳುರೋ ಅವರು ಖಂಡಿತವಾಗಿ ಕರ್ತನಲ್ಲಿ ಭರವಸೆಹೊಂದುವವರಾಗಿದ್ದು, ಇದು ಅವರಿಗೆ ಬಹು ಸಹಾಯಕಾರಿಯಾಗುವದು. ಯೆಹೂದ್ಯರ ಕಾಲದಲ್ಲಿ ಸಂಭವಿಸಿದ ಕಷ್ಟಪರಿಶೋಧನೆಗಳು ಅವರಿಗೆ ಆ ಸಮಯದಲ್ಲಿ ಬರಮಾಡಲಾದ ವಿಪತ್ತಿನಂತೆ ತೋರುವದಾದರೂ ಕೇವಲ ಅದು ಪವಿತ್ರಾತ್ಮವು ಹಿಂಬದಿಯಿಂದ ನಿರ್ದೇಶಿಸುವಂಥದಾಗಿದ್ದು ಅದು ಇಲ್ಲಿ ದೇವರ ಅನುಗ್ರಹವಿರುವದನ್ನು ದೃಷ್ಟಿಸಲು ನಮ್ಮನ್ನು ಸಮರ್ಥರನ್ನಾಗಿಸುವ ಪ್ರವಾದನಾ ವಾಕ್ಯವಾಗಿರುವದು. ಹೀಗೆಯೇ ಈ ಸುಗ್ಗಿಯ ಕಾಲದಲ್ಲಿ ಇದೇ ರೀತಿಯ ಕಷ್ಟವಿಪತ್ತುಗಳು, ವಿರೋಧಗಳು, ವಿಚಿತ್ರ ಪರಿಸ್ಥಿತಿ, ಮುಂತಾದುವುಗಳು ನಿರೀಕ್ಷಿಸಲ್ಪಬೇಕಿದ್ದು, ಇವುಗಳು ಸಂಭವಿಸುವಂಥ ಸಮಯದಲ್ಲಿ ಪ್ರವಾದನೆಗಳ ಮೇಲಿನ ದೊಡ್ಡದಾದ ನಂಬಿಕೆ ಹಾಗು ಅವುಗಳೊಡನೆ ನಿಕಟವಾದ ಪರಿಚಿತಿ ಹೊಂದಿದವರ ಹೊರತು ಇದನ್ನು ಯಾರಿಂದಲೂ ಅರ್ಥಮಾಡಿಕೊಳ್ಳಲಾಗುವದಿಲ್ಲ. ಅಲ್ಲದೆ ಅವರಿಗೂ ಸಹ ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುವದು ಅನಿವಾರ್ಯವಾಗುವದು. ಇದಾದ ನಂತರವೇ ದೈವೀಕ ಮೇಲ್ವಿಚಾರಣೆಯು ಪ್ರತಿಯೊಂದು ವಿಷಯದಲ್ಲಿ ನಿಖರವಾಗಿ ಕಾಣುವಂತಾಗುವದು. ಈ ಮಧ್ಯೆ ದೇವರು ಸ್ಪಷ್ಟವಾಗಿ ಇಚ್ಛಿಸುವದೇನಂದರೆ ಆತ್ಮಿಕ ಇಸ್ರಾಯೇಲ್ಯರು ಕ್ರಿಸ್ತನ ಅನುಭವಶಾಲೆಯಲ್ಲಿ ಶಿಕ್ಷಿತರಾಗಿ ಛಾಯಾರೂಪದಲ್ಲಿನ ಇಸ್ರಾಯೇಲ್ಯರ ಸುಗ್ಗಿಕಾಲದಲ್ಲಿ ನಡೆದ ಸಂಗತಿಗಳ ಮೂಲಕವಾಗಿ ನಂಬಿಕೆ ಹಾಗು ವಿಧೇಯತೆಯ ಸಂಬಂಧವಾಗಿ ಪಾಠಗಳನ್ನು ಕಲಿತುಕೊಳ್ಳುವರೆಂಬದು.

"ಯಜ್ಞವನ್ನರ್ಪಿಸುವದಕ್ಕಿಂತಲೂ ಮಾತು ಕೇಳುವದು ಉತ್ತಮವಾಗಿದೆ"

ದೇವ ಮಂಜೂಷವನ್ನು ದೇಶದ ರಾಜಧಾನಿಯ ನಗರಕ್ಕೆ ತರುವ ಸಂದರ್ಭವು ಸಂಭ್ರಮಿಸಿ ಉಲ್ಲಾಸಿಸುವ ದಿನವಾಗಬೇಕಿದ್ದು, ಅದು ಇಸ್ರಾಯೇಲ್ ದೇಶದ ಒಂದು ಮೂಲೆಯಿಂದ ಇನ್ನೊಂದರವರೆಗೂ ದೀರ್ಘ ಸಮಯದಲ್ಲಿ ನೆನಪಿಸಿಕೊಳ್ಳುವಂಥದ್ದಾಗಿತ್ತು. ಎಲ್ಲಾ ಕಡೆಯಲ್ಲಿಯೂ ತನ್ನ ಆದೇಶವನ್ನು ಅಂಗೀಕರಿಸಿದ ಜನರು ಧಾರ್ಮಿಕ ಮನೋಭಾವದಲ್ಲಿ ಒಮ್ಮತವಾಗಿರುವದರ ಬಗ್ಗೆ ಅರಸನಾದ ದಾವೀದನು ಸಂತೋಷವುಳ್ಳವನಾಗಿದ್ದನು. ಎಲ್ಲಾ ಬಗೆಯ ಸಂಗೀತ ವಾದ್ಯಗಾರರು ಆ ಮೆರವಣಿಗೆಯ ಜೊತೆಯಲ್ಲಿ ಹೋಗುವಂತೆ ಗೊತ್ತುಮಾಡಟ್ಟಿದ್ದರು. ವಿಶೇಷವಾಗಿ ಸಿದ್ಧಮಾಡಲ್ಪಟ್ಟ ಒಂದು ಎತ್ತಿನ ಬಂಡಿಯನ್ನು ಒದಗಿಸಲಾಗಿದ್ದು ಅದರ ಮೇಲೆ ಮಂಜೂಷವು ಇಡಲ್ಪಟ್ಟು ಮಹಾಯಾಜಕನ ಇಬ್ಬರು ಮಕ್ಕಳಲ್ಲಿ ಒಬ್ಬನು ಮುಂದೆ ನಡೆಯುವವನಾಗಿ ಮತ್ತೊಬ್ಬನು ಬಂಡಿಯನ್ನು ಹೊಡೆಯುವವನಾಗಿ ಜೊತೆಯಲ್ಲಿ ಸಾಗಿದ್ದರು. ಇದಕ್ಕೆ ಸಂಬಂಧಪಟ್ಟವರೆಲ್ಲರ ಸದುದ್ದೇಶದ ಬಗ್ಗೆ ತಪ್ಪು ನಿರ್ಧಾರ ತೆಗೆದುಕೊಳ್ಳಲಾಗದು, ಆದರೂ ಒಂದು ಗಂಭೀರವಾದ ತಪ್ಪು ಮಾಡಲ್ಪಟ್ಟಿದ್ದು, ಈ ಸಂಬಂಧದ ದೈವಾದೇಶವನ್ನು ಇಲ್ಲಿ ಉಪೇಕ್ಷಿಸಲಾಗಿತ್ತು.

(1) ದಾವೀದನಿಗೂ ಹಾಗು ಮಹಾಯಾಜಕರಿಗೂ ಎಷ್ಟು ಗೌರವಯುತವಾಗಿ ಕಂಡಿದ್ದರೂ, ಒಂದು ಗಾಡಿಯ ಮೇಲೆ ಮಂಜೂಷವನ್ನು ಸಾಗಿಸುವಂಥ ಏರ್ಪಾಡನ್ನು ದೇವರು ಮಾಡಿರಲಿಲ್ಲ.

(2) ಕರ್ತನ ಸೇವೆಯಲ್ಲಿ ಉನ್ನತ ಶ್ರೇಣಿಯಲ್ಲಿ ಇರುವಂಥವರಾಗಿದ್ದರೂ, ಮಂಜೂಷವನ್ನು ಸಾಗಿಸುವಂಥದ್ದು ಯಾಜಕರಿಗೆ ಸಂಬಂಧಿಸಿದ ವಿಷಯವಾಗಿರಲಿಲ್ಲ, ಆ ಮಂಜೂಷವನ್ನು ಅದಕ್ಕೆ ಸೇರಿಸಿದ ಕೋಲುಗಳ ಮೂಲಕವಾಗಿ ತಮ್ಮ ಹೆಗಲಿನ ಮೇಲೆ ಹೊರುವಂಥದ್ದು ಲೇವಿಯರಿಗೆ ವಹಿಸಲಾದ ಕಾರ್ಯಭಾರವಾಗಿತ್ತು. ಈ ದೈವಿಕ ಏರ್ಪಾಟನ್ನು ನಿರ್ಲಕ್ಷಿಸುವುದರ ಮೂಲಕವಾಗಿ ದೇವದರ್ಶನ ಗುಡಾರದ ಸೇವೆಗಳಲ್ಲಿ ಎಲ್ಲಾ ವಿಧವಾದ ನಿಯಮ ವಿರುದ್ಧ ಕಾರ್ಯಗಳ ಮಾಡುವಿಕೆಯನ್ನು ಆರಂಭಿಸಲಾಗಿದ್ದು, ಇವುಗಳನ್ನು ಪುನಃಸ್ಥಾಪಿಸಬಾರದೆಂದು ಕರ್ತನು ನಿಯೋಜಿಸಿದ್ದನು. ದೇವದರ್ಶನ ಗುಡಾರದ ಮತ್ತು ಅದರ ಸೇವಾ ಸಂಬಂಧದಲ್ಲಿನ ದೇವನಿಯಮಗಳ ಪ್ರತಿಯೊಂದು ಸೂಕ್ಷ್ಮ ವಿವರಗಳನ್ನು ಅನುಸರಿಸುವದರ ಪ್ರಾಮುಖ್ಯತೆಯ ಬಗ್ಗೆ ಅರಸನು ಯಾಜಕರು ಸಮಸ್ತ ಕುಲಗಳ ಘನವಂತರು ಹಾಗು ಆ ಜನಾಂಗದ ಧಾರ್ಮಿಕ ಜನರು ಶೀಘ್ರವಾಗಿ ಮರೆಯಲಾಗದಂಥ ಒಂದು ಪಾಠವನ್ನು

ಪಡೆದುಕೊಳ್ಳಬೇಕೆಂಬದು ಸೂಕ್ತವಾಗಿತ್ತು. ಈ ಸಂದರ್ಭದಲ್ಲಿ ಕರ್ತನು ನೀಡಿದ ಪಾಠವು ಅರಸನಿಗೂ ಹಾಗೂ ಆ ಜನಾಂಗಕ್ಕೂ ಪ್ರಯೋಜನಕಾರಿಯಾಗಿರುವದು ಮಾತ್ರವಲ್ಲದೆ ಈ ಸುವಾರ್ತಾಯುಗದ ಆತ್ಮಿಕ ಇಸ್ರಾಯೇಲ್ಯರಿಗೂ ಒಂದು ದೊಡ್ಡ ಪ್ರಮಾಣದಲ್ಲಿ ಲಾಭಕರವಾಗಿತ್ತು.

ತನ್ನನ್ನು ಗೌರವಿಸುವಂಥವರ ಕಡೆಯಿಂದಾದ ದೇವಾಜ್ಞೆಯ ನಿರ್ಲಕ್ಷ್ಯಕ್ಕಾಗಿ ಕರ್ತನ ಅಸಮ್ಮತಿಯು ತೋರ್ಪಡುವ ಸಮಯವು ಬಂದಾಗ ಎತ್ತುಗಳು ಮುಗ್ಗರಿಸಲಾಗಿ ಉಪ–ಯಾಜಕನಾದ ಉಜ್ಜನು ಮಂಜೂಷವನ್ನು ಸರಿಪಡಿಸ ಸಲುವಾಗಿ ತನ್ನ ಕೈಯನ್ನು ಹಾಕಿದ ಕೂಡಲೇ ಆತನು ಸತ್ತು ಬೀಳುವ ಮೂಲಕವಾಗಿ ದೇವರ ಅಸಮ್ಮತಿಯು ತೋರಿಬಂದಿತ್ತು. ಆ ಮಹಾ ಸಂಭ್ರಮವದ ದಿನವೂ ಕೂಡಲೇ ಹಾಳಾಗಿ ಹೋಗಿತ್ತು. ಅರಸನು ಹಾಗು ಜನರ ಆನಂದವು ಕಣ್ಮರೆಯಾಗಿತ್ತು. ಬದಲಾಗಿ ಸಂಕಟ ಹಾಗು ಭಯವು ಉಂಟಾಗಿದ್ದು, ಒಂದು ಪ್ರಮಾದದಿಂದ ಯಾಜಕರಲ್ಲಿ ಒಬ್ಬನು ಹೀಗೆ ಕರ್ತನಿಂದ ಸಂಹೃತನಾಗಲು ಕಾರಣವಾದಲ್ಲಿ ಇತರರಿಗೆ ಉಂಟಾಗುವ ಅಪಾಯದ ಬಗ್ಗೆ ಏನಿರಬಹುದು! ಈ ಹಿಂದ ಉದ್ದೇಶಿಸಲಾಗಿದ್ದಂತೆ, ತನ್ನೊಡನೆ ಹಾಗು ಯೆರೂಸಲೇಮಿನಲ್ಲಿರುವ ತನ್ನ ಮನೆಯ ಸಮೀಪದಲ್ಲಿ ಮಂಜೂಷವು ಇರಬಾರದೆಂದು ಅರಸನಾದ ದಾವೀದನು ಪ್ರಾಮಾಣಿಕವಾಗಿ ತೀರ್ಮಾನಿಸಿದ್ದನು. ಮೆರವಣಿಗೆಯು ನಿಲ್ಲಿಸಲ್ಪಟ್ಟು ಬೇರೆಡೆಗೆ ತಿರುಗಿಸಲ್ಪಟ್ಟು ಮಂಜೂಷವನ್ನು ಓಬೆದೆದೋಮನ ಮನೆಯಲ್ಲಿ ಇರಿಸಲಾಯಿತು.

"ಯಹೋವನ ಭಯವೇ ಜ್ಞಾನದ ಮೂಲವು"

ಪ್ರತಿಯೊಬ್ಬ ಶಾರೀರಿಕ ಇಸ್ರಾಯೇಲ್ಯನಿಗೆ ಹಾಗು ಆತ್ಮಿಕ ಇಸ್ರಾಯೇಲ್ಯನಿಗೆ ಅಗತ್ಯವಿರುವ ಪಾಠಗಳಲ್ಲಿ ಒಂದು ಎಂದರೆ ಅದು ಭಯಭಕ್ತಿ. ಈ ಗುಣಸ್ವಭಾವವಿಲ್ಲದೆ ನಾವು ತಪ್ಪಿಹೋಗುವದು ಖಂಡಿತ. ಒಂದು ಹಳೆಯ ಹಾಗು ನಿಜವಾದ ಮಾತಿನ ಸೇರ್ಪಡೆಯಿರುವದು, ಅದೇನಂದರೆ "ಅತಿ ಸಲಿಗೆ ಅನಾದರಕ್ಕೆ ಕಾರಣ" ಎಂಬದು. ಅಲ್ಲದೆ ಇದು ಭೂಸಂಬಂಧ–ವಾದ ಸಂಗತಿಗಳಿಗೆ ಹಾಗು ಮನುಷ್ಯರಿಗೆ ಸಹಿತವಾಗಿ ಧಾರ್ಮಿಕ ಸಂಗತಿಗಳು ಹಾಗು ದೇವರ ಸಂಗತಿಗಳಿಗೂ ಅನ್ವಯ–ವಾಗುವದು. ಸಲೋಮೋನನು ಕಟ್ಟಿಸಿದ ಛಾಯಾರೂಪದ ದೇವಾಲಯದಲ್ಲಿ ದಾವೀದನು ಉದ್ಘಾಟಿಸಲಿದ್ದ ದೇವಾರಾಧನೆಯ ಸೂಕ್ತ ತಳಹದಿಯು ಗೌರವ ಹಾಗು ಭಯಭಕ್ತಿಯ ಮೇಲೆ ಆಧಾರಗೊಂಡಿರಬೇಕಿತ್ತು. ದೇವರಿಗೆ ಅಂಗೀಕೃತವಾಗುವ ಯಜ್ಞಾರ್ಪಣೆಗೆ ವಿಧೇಯತೆಯು ಪೂರ್ವಭಾವೀ ಷರತ್ತಾಗಿರುವದೆಂಬುದನ್ನು ಮೂಲತತ್ವವಾಗಿ ಗುರುತಿಸಲ್ಪಡಬೇಕು.

ನಿತ್ಯ ಯಾತನೆಯ ವಿಷಯವಾಗಿ ನಮಗಿರುವ ಭ್ರಾಂತಿಯ ಕಾರಣದಿಂದ ಮಾನವ ಜೀವಹರಣದ ಬಗ್ಗೆ ಬೋಧಿಸುವ ಈ ಪಾಠದಲ್ಲಿನ ಸತ್ಯಾಂಶವು ನಮಗೆ ಭೀಕರವಾದುದೆಂದು ತೋರಿಬಂದಿದ್ದು, ಇದು ನಮ್ಮನ್ನು ಬಡಪಾಯಿಯಾದ ಉಜ್ಜನಲ್ಲಿನ ಮಾನವ ಚಟುವಟಿಕೆಗಳು ಹಾಗು ಹರ್ಷಾನಂದಗಳು ರದ್ದುಮಾಡಲ್ಪಟ್ಟದ್ದು ಮಾತ್ರವಲ್ಲದೆ ಆತನು ಕೂಡಲೇ ಧಗಧಗಿಸುವ ನರಕಾಗ್ನಿಯ ಯಾತನೆಯುಳ್ಳ ಪಾತಾಳಕ್ಕೆ ಬೀಳಲ್ಪಟ್ಟನೆಂದು ಕಲ್ಪಿಸಿಕೊಳ್ಳುವಂತೆ ನಡೆಸಿರುವದು. ದೇವರ ಕೃಪೆಯಿಂದ ಈಗ ಇದು ಶಾಸ್ತ್ರವಚನಗಳ ಬೋಧನೆಯಲ್ಲವೆಂದೂ ಹಾಗು ಅದರ ಸಂಕಟಭರಿತವಾದ ಲಕ್ಷಣಗಳುಳ್ಳ ನಿರೂಪಣೆಯಿಂದ ನಮ್ಮನ್ನು ಉಪಶಮನಗೊಳಿಸುತ್ತದೆ. ಒಂದು ವರುಷದ ಅಥವಾ ಬಹು ಹಿಂದೆಯೇ ಉಜ್ಜನು ಒಂದಲ್ಲಾ ಇನ್ನೊಂದು ರೀತಿಯಲ್ಲಿ ತನ್ನ ಜೀವವನ್ನು ಕಳಕೊಳ್ಳುವಂಥ ಸಂಭವವಿತ್ತೆಂದು ನಾವು ಗ್ರಹಿಸಿಕೊಳ್ಳುವೆವು. ಅಲ್ಲದೆ ಇದು, ರೋಗದಿಂದ ಅಥವಾ ಅಪಘಾತದ ಮೂಲಕವಾಗಿರದೆ, ದೇವರ ಮಹಿಮೆಗಾಗಿ ಹಾಗು ಜನರ ಹಿತಕ್ಕಾಗಿ ಆತನು ಆ ರೀತಿಯಲ್ಲಿ ಸತ್ತದ್ದಾಗಿತ್ತು. ಆತನು ಆಗಲೇ ಉಳಿದ ಮನುಕುಲದವರಂತೆ ಮರಣ ದಂಡನೆಯ [ತೀರ್ಪಿನ] ಅಧೀನದಲ್ಲಿದ್ದನೆಂಬುದನ್ನು ಹಾಗು ದೇವರು ಯಾವುದೇ ಕ್ಷಣದಲ್ಲಿ ಆತನ ಜೀವವನ್ನು ಕೇಳಿಕೊಳ್ಳುವಂಥ ಸಂಪೂರ್ಣವಾದ ಹಕ್ಕನ್ನು ಹೊಂದಿದ್ದನೆಂಬು–ದನ್ನು ನಾವು ನೆನಪಿನಲ್ಲಿಡಬೇಕಿರುವದು. ಆತನು ಕಳಕೊಂಡಂಥದ್ದೆಲ್ಲವು ದೇವರ ಉದ್ದೇಶವಾಗಿತ್ತೆಂದೂ ಅಲ್ಲದೆ ದೇವರ ನಿಗದಿತ ಸಮಯದಲ್ಲಿ ಆ ಜೀವನಷ್ಟವನ್ನು ಭರಿಸಿಕೊಂಡುವನೆಂಬುದನ್ನು ನೆನಪಿನಲ್ಲಿಡಬೇಕಿರುವದು; ಹೇಗಂದರೆ ನ್ಯಾಯತೀರ್ಪಿಗಾಗಿ ಆಗುವಂಥ ಪುನರುತ್ಥಾನದಲ್ಲಿ ಆತನು ಸಮಾಧಿಯಿಂದ ಹೊರಬಂದು ತಾನು ಜೀವಿಸುತ್ತಿದ್ದ ಸನ್ನಿವೇಶಕ್ಕಿಂತಲೂ ಹೆಚ್ಚು ಅನುಕೂಲಕರವಾದ ಸನ್ನಿವೇಶಕ್ಕೆ ಅಂದರೆ ಕಳಕೊಂಡಂಥದ್ದೆಲ್ಲವನ್ನು ಸ್ವೀಕರಿಸಿಕೊಳ್ಳುವವರಿಗೆ ಹಿಂದಿರುಗಿಸಲಾಗುವಂಥ ನಿಜರೂಪದ ಜೂಬಿಲಿಯ ಕಾಲದಲ್ಲಿ ಅದು ನಡೆಯುವದೆಂಬುದನ್ನು ನಾವು ನೆನಪಿನಲ್ಲಿಡಬೇಕಿರುವದು.

ಆತ್ಮಿಕ ಇಸ್ರಾಯೇಲ್ಯರೆಲ್ಲರೂ ಈ ಪಾಠವನ್ನು ಕಲಿತುಕೊಳ್ಳಬೇಕಿರುವದು ಅದೇನಂದರೆ ದೇವರ ವಾಕ್ಯದಲ್ಲಿನ ಪರಿಶುದ್ಧ ಸಂಗತಿಗಳನ್ನು ಅಂದರೆ ದೇವರ ಯೋಜನೆ, ಸತ್ಯದ ವಿಷಯವಾದ ಸೇವೆಗಳು, ಕ್ರಿಸ್ತನ ಸಭೆಯ ಸಂಬಂಧದ ಸೇವೆಗಳು ಇವುಗಳನ್ನು ತಮ್ಮ ಉದ್ದೇಶಗಳು ಒಳ್ಳೆಯವುಗಳೆಂದು ಕೇವಲ ತಮ್ಮಲ್ಲಿ ಭರವಸವುಳ್ಳವರಾಗಿ ತಮ್ಮ ಇಷ್ಟದಂತೆ ಕಾರ್ಯವೆಸಗುವಂಥ ಸ್ವಾತಂತ್ರ್ಯವು ಅವರಿಗಿರುವದಿಲ್ಲವೆಂಬದೇ. ದೇವರ ಚಿತ್ತವನ್ನು ಎಚ್ಚರಿಕೆಯಿಂದ ಗಮನಿಸಿಕೊಂಡವರಾಗಿ ಅದನ್ನು ದೇವರ ವಾಕ್ಯದಲ್ಲಿ ಆದೇಶಿಸಿರುವ ಪ್ರಕಾರ ಆ ಕಾರ್ಯಭಾರವನ್ನು ನಿರ್ವಹಿಸುವಂಥದ್ದು ಅವರ ಕರ್ತವ್ಯವಾಗಿರುವದು. ಇದಕ್ಕೂ ಮಿಗಿಲಾಗಿ ನಾವು ಸಹ ಕಲಿತುಕೊಳ್ಳಲಿರುವದೆಂದರೆ ದೇವರು ತನ್ನ ಎಲ್ಲಾ ಸೇವೆಗಳು ಒಬ್ಬರಿಂದಾಗಲೀ ಅಥವಾ ಇಬ್ಬರು ವ್ಯಕ್ತಿಗಳಿಂದಾಗಲೀ ನಿರ್ವಹಿಸಲ್ಪಡಬೇಕೆಂದು ಉದ್ದೇಶಿಸಿರುವುದಿಲ್ಲವೆಂದೂ ಆದರೆ ದೇವರ ಸೇವೆಯಲ್ಲಿ ಆತನು ಸಂಕಲ್ಪಿಸಿರುವಂತೆ ಪ್ರತಿಷ್ಠಿತರೆಲ್ಲರಿಗೂ ಒಂದು ಪಾತ್ರವಿರುವದಾಗಿಯೂ ಅಲ್ಲದೆ ಪ್ರತಿಯೊಬ್ಬನಿಗೂ ಇಂಥಾ ಸೇವೆಗಳಲ್ಲಿ ಅವಕಾಶವನ್ನು ದಯಪಾಲಿಸಿರುವನೆಂಬದೇ. ಕೆಲವರು ಯಾಜಕರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು ಇದನ್ನು ಇತರರು ಅನುಭವಿಸುವಂತಿಲ್ಲ,

ಕೆಲವರು ಲೇವಿಯರ ಸೇವೆಯಲ್ಲಿ ತಮ್ಮನ್ನು ತೊಡಗಿಸಿ-ಕೊಳ್ಳಬಹುದಿದ್ದು ಅವರಿಗೆ ದೊರೆತ ಅವಕಾಶವನ್ನು ಅವರಿಂದ ತೆಗೆಯಲಾಗುವದಿಲ್ಲ. ಪುನಃ ಆತ್ಮಿಕ ಇಸ್ರಾಯೇಲ್ಯರು ಕಲಿತುಕೊಳ್ಳಲಿರುವ ಮತ್ತೊಂದು ಮುಖ್ಯವಾದ ಪಾಠವೆಂದರೆ ಅದು ದೇವರು ತನ್ನ ಸ್ವಂತ ವಿಷಯಗಳನ್ನು ತಾನೇ ಮಾರ್ಗದರ್ಶಿಸುತ್ತಿರುವನೆಂದೂ, ಆತನು ಅವುಗಳಲ್ಲಿ ನಮಗಿರುವದಕ್ಕಿಂತಲೂ ಸಹ ಹೆಚ್ಚು ಆಸಕ್ತಿಯುಳ್ಳವನಾಗಿದ್ದು ಆತನು ಅವುಗಳನ್ನು ನಿರ್ವಹಿಸಲು ಪೂರ್ಣ ಸಮರ್ಥನೆಂಬುದೇ. ಕರ್ತನ ಜನರಲ್ಲಿ ಕೆಲವರು ತಮ್ಮದಲ್ಲದಂಥ ದೊಡ್ಡ ಹೊಣೆಗಾರಿಕೆಯ ಭಾರವನ್ನು ಹೊತ್ತುಕೊಂಡಿದ್ದು ಅವುಗಳು ಅವರಿಗೆ ತಮ್ಮದೇ ಆದ ನೆಮ್ಮದಿ ಹಾಗು ಸಂತೋಷಗಳಿಗೆ ಅಡ್ಡಿಪಡಿಸಿರುತ್ತವೆ. ಇತರರು ಬಹು ಕಾರ್ಯಶೀಲರೂ ಬಹು ಆಸಕ್ತಿಯುಳ್ಳವರೂ ಆಗಿದ್ದು ತಾವು ಕಾರ್ಯನಿರ್ವಹಿಸದಿದ್ದಲ್ಲಿ ದೇವರ ಕಾರ್ಯಗಳು ಕಾರ್ಯಗತವಾಗುವದೇ ಇಲ್ಲವೆಂಬಂಥ ಭ್ರಮೆಯಲ್ಲಿರುವರು. ದೇವರು ಮುಂದಿನ ಮುಖ್ಯವಾದ ಪಾಠವನ್ನು ಕಲಿತುಕೊಳ್ಳಬೇಕೆಂದು ಇಚ್ಛಿಸುವನು: "ನಿನ್ನ ಎಲ್ಲಾ ಮಾರ್ಗಗಳಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು," "ಮತ್ತು ಆತನು ನಿನ್ನ ಇಷ್ಟಾರ್ಥವನ್ನು ನೆರವೇರಿಸುವನು." ಕೇವಲ ಪ್ರತಿಯೊಂದು ದೇವರ ಕಾರ್ಯದ ರೂಪವೈಶಿಷ್ಯ್ಗಳಲ್ಲಿ ಆತನನ್ನು ಮೊದಲನೆಯದಾಗಿ ಮನ್ನಣೆ ನೀಡುವದರಿಂದ ಹಾಗು ದೇವರಿಗೆ ಸೇವೆಮಾಡಲು ದೊರೆಯುವ ಪ್ರತಿಯೊಂದು ಅವಕಾಶವು ಆತನು ನಮಗೆ ನೀಡುವ ಗೌರವವೆಂದು ನಾವು ಗುರುತಿಸಿ-ಕೊಳ್ಳುವದರಿಂದಲೇ ನಾವು ನಮಗೆ ಮತ್ತು ಇತರರಿಗೆ ಆಶೀರ್ವಾದವನ್ನು ತಂದುಕೊಳ್ಳಲು ಸಮರ್ಥರಾಗುತ್ತೇವೆ.

ಅನುಭವದಿಂದಾಗುವ ಲಾಭ

ತಾನು ಮೊದಲು ಉದ್ದೇಶಿಸಿದಂತೆ ಮಂಜೂಷವನ್ನು ಯೆರೂಸಲೇಮಿಗೆ ತರಲು ನಿರಾಕರಿಸಿದ ದಾವೀದನ ನಡೆಯನ್ನು ನಾವು ದೇವರು ಆ ದಿನದ ಸಂಭ್ರಮವನ್ನು ಹಾಳುಮಾಡಿದಕ್ಕಾಗಿ ದಾವೀದನ ತಾಳ್ಮೆಯಿಲ್ಲದ ಮುಂಗೋಪದ ಗುರುತೆಂದು ನಾವು ಆಲೋಚಿಸಿದರೆ ನಾವು ಒಂದು ದೊಡ್ಡ ತಪ್ಪನ್ನು ಮಾಡುತ್ತೇವೆ. ದಾವೀದನ ಗುಣಸ್ವಭಾವವು ಈ ಯಾವುದೇ ವಿಧದ ಕಾರ್ಯಕ್ಕೆ ಅತಿ ಭಯಭಕ್ತಿಯುಳ್ಳದ್ದಾಗಿತ್ತು. ಆತನು ಗೊಲ್ಯಾತನೊಡನೆ ಹೋರಾಡಲು ಸಾಧ್ಯವಿದ್ದಂಥ ಮನುಷ್ಯನಾಗಿದ್ದರೂ ದೇವರಿಗೆ ವಿರೋಧವಾಗಿ ಹೋರಾಡಲು ಸಾಧ್ಯವಿಲ್ಲದಂಥ ಮನುಷ್ಯ-ನಾಗಿದ್ದನು. ಆತನ ಜೀವಿತದ ಪ್ರತಿಯೊಂದು ಕಾರ್ಯಗಳಲ್ಲಿಯೂ ಭಯಭಕ್ತಿ ಹಾಗು ದೀನತೆಗಳನ್ನು ಗುರುತಿಸಲಾಗಿತ್ತಲ್ಲದೆ, ದೇವರ ನೀತಿನ್ಯಾಯ ಬಲಸಾಮರ್ಥ್ಯ ಮತ್ತು ಪ್ರೀತಿ ಅಲ್ಲದೆ ದೇವರ ದೃಷ್ಟಿಯಲ್ಲಿ ದಾವೀದನ ಸ್ವಂತ ದೀನತೆ ಇವುಗಳಿಗೆ ಮಾನ್ಯತೆ ನೀಡಲಾಗಿತ್ತು. ಈ ಮಧ್ಯೆ ಆ ಸಂಭ್ರಮ ದಿನದ ಸಂದರ್ಭದಲ್ಲಿ ಉಂಟಾದ ದುಃಖಕರ ನಿರಾಶೆಯ ಬಗ್ಗೆ ಕೇಳಿದ ಇಡೀ ಜನಾಂಗಕ್ಕೆ ದೇವರು ಒಂದು ದೊಡ್ಡ ಪಾಠವನ್ನು ಕಲಿಸುತ್ತಿದ್ದನು; ಹೇಗಂದರೆ ದೇವರ ಅಸಂತೋಷವು ಎಂಥಾ ತೀಕ್ಷ್ಣವಾದ ವಿಧದಲ್ಲಿ ತೋರಿಬಂದಿತ್ತೆಂದರೆ ದೇವರ ಮೇಲ್ವಿಚಾರಣೆಯನ್ನು ಉಪೇಕ್ಷಿಸಿದ್ದಕ್ಕಾಗಿ ಯಾಜಕನೂ ಸಹ ಹತನಾಗಿದ್ದಲ್ಲದೆ ಮಂಜೂಷವು ಆಗ ಓಬೇದೆದೋಮನ ಮನೆಗೆ ಸೇರಿತ್ತು.

ಅರಸನಾದ ದಾವೀದನು ಎಚ್ಚರಿಕೆಯಿಂದ ಈ ಫಲಿತಾಂಶವನ್ನು ಗಮನಿಸಿದವನಾಗಿದ್ದನು ಅಲ್ಲದೆ ಮತ್ತೆ ಆತನ ಹೃದಯವು ಚಡಪಡಿಸುತಿದ್ದು ದೇವಾರಾಧನೆಯ ಮುಖ್ಯ ಸಂಕೇತವು ದೇವರ ಆಶ್ರಯದ ನೆರಳಿನಲ್ಲಿ ಅಂದರೆ ದೇವರ ಸನಿಹದಲ್ಲಿ ಹಾಗು ಶೆಕೀನ ಪ್ರಭೆಯ ಮಹಿಮೆಯಲ್ಲಿ ವಿಶ್ರಮಿಸಬೇಕೆಂದು ಇಚ್ಛಿಸುವನಾಗಿದ್ದನು. ಆತನು ಮಂಜೂಷದ ನಿರ್ವಹಣೆಯ ಬಗ್ಗೆ ವಿಚಾರಣೆ ಮಾಡಿದವನಾಗಿ ಸ್ಪಷ್ಟವಾದ ನಿರ್ಣಯಕ್ಕೆ ಬಂದದ್ದೇನಂದರೆ ತಪ್ಪು ತನ್ನದೇ ಹಾಗು ಯಾಜನಕನದಾಗಿದ್ದು ಮಂಜೂಷದೊಂದಿಗೆ ಹೋಗುವಂಥದ್ದು ಆಶೀರ್ವಾದವೇ, ಹೊರತು ಶಾಪವಲ್ಲವೆಂಬದೇ. ಹೀಗಾಗಿ ಮೂರು ತಿಂಗಳ ಕೊನೆಯಲ್ಲಿ ಮಂಜೂಷವನ್ನು ತನ್ನ ರಾಜಧಾನೀ ಪಟ್ಟಣಕ್ಕೆ ತರುವ ಸಲುವಾಗಿ ಆತನು ಮತ್ತೊಂದು ಹೊಸದಾದ ಏರ್ಪಾಡುಮಾಡಿದ್ದನು. ಮತ್ತೆ ಸಂದರ್ಶನಕ್ಕಾಗಿ ಜನರು ನೆರೆದು ಬಂದಿದ್ದರು, ಸಂಗೀತ ವಾದ್ಯಗಾರರ ಮೇಳವು ತನ್ನ ಕ್ರಮದಲ್ಲಿ ಸಾಗಿತ್ತು, ಮೆರವಣಿಗೆಯು ಯೆರೂಸಲೇಮಿನ ಕಡೆಗೆ ಮತ್ತೆ ಮಂಜೂಷವನ್ನು ಅನುಸರಿಸಿಕೊಂಡು ಹೋಗಿತ್ತು. ದಾವೀದನು ಮಂಜೂಷವನ್ನು ಓಬೇದೆದೋಮನ ಮನೆಯಿಂದ ದಾವೀದ ನಗರಕ್ಕೆ ಹರ್ಷಾನಂದದಿಂದ ತಂದಿದ್ದನೆಂದು ನಾವು ಓದುತ್ತೇವೆ.

ಉತ್ಸವದ ಮೆರವಣಿಗೆಯ ಒಂದು ವಿವರಣೆಯು 1 ಪೂರ್ವಕಾಲ ವೃತ್ತಾಂತದ 15 ಮತ್ತು 16ನೇ ಅಧ್ಯಾಯದಲ್ಲಿ ಕಂಡುಕೊಳ್ಳಬಹುದು. ದಾವೀದನ ಜೀವನಯಾತ್ರೆಯಲ್ಲಿ ಇದು ಅತ್ಯುನ್ನತವಾದ ದಿವಸವೆಂದು ನಿರ್ಣಯಿಸಲಾಗಿತ್ತು. ಆದರೆ ಈ ಸಮಯದಲ್ಲಿ ಪಾಠವು ಕಲಿಸಿದ್ದ ಅನುಸಾರವಾಗಿ ಅಲ್ಲಿ ಹೊಸತನವೇನೂ ಇರಲಿಲ್ಲ, ಅನ್ಯಜನರು ಮಾಡುವ ರೀತಿಯಲ್ಲಿ ಯಾಜಕರಿಂದ ಚಾಲನೆಮಾಡುವ ಯಾವ ಬಂಡಿಯೂ ಇರಲಿಲ್ಲ, ಬದಲಾಗಿ ದೇವಾದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿತ್ತು. ಮಂಜೂಷವನ್ನು ಲೇವೀಯರ ಹೆಗಲಿನ ಮೇಲೆ ಹೊರಿಸಲಾಗಿತ್ತು. ಅಕ್ಷರಶಃವಾದ ವಿಧೇಯತೆಯು ಯಜ್ಞಮಾಡುವದಕ್ಕಿಂತಲೂ ಉತ್ತಮವಾದುದೆಂಬದರ ಬಗ್ಗೆ ಪಾಠವು ಕಲಿತುಕೊಳ್ಳಲಾಗಿತ್ತು. ಆ ಹರ್ಷಭರಿತವಾದ ಮೆರವಣಿಗೆಯನ್ನು ಆರಸನು ಕಿನ್ನರಿಯನ್ನು ಭಾರಿಸುತ್ತಾ ನಡೆಸುತ್ತಿದ್ದುದು ಸ್ಪಷ್ಟವಾಗಿರಲು, ಆತನ ಜೊತೆಯಲ್ಲಿ ಹಾಡುಗಾರರು ಹಾಗು ಸಂಗೀತ ವಾದ್ಯಗಾರರು ಅನೇಕ ಮಂಡಲಿಗಳಾಗಿ ವಿಭಾಗಗೊಂಡು ತಮ್ಮ ಪಾತ್ರಗಳನ್ನು ಒಬ್ಬರ ನಂತರ ಒಬ್ಬರಂತೆ ಸರದಿಯ ಪ್ರಕಾರ ನಿರ್ವಹಿಸುತ್ತಿದ್ದರು. ಕೀರ್ತನೆ 105, 96 ಮತ್ತು 106 ಇವುಗಳನ್ನು ನೋಡಿ. ಮೆರವಣಿಗೆಯು ಯೆರೂಸಲೇಮನ್ನು ಪ್ರವೇಶಿಸುವಾಗ 24ನೇ ಕೀರ್ತನೆಯನ್ನು ಪಥಸಂಚಲನೆಯ ಪಕ್ಕವಾದ್ಯದ ಗೀತವಾಗಿ ಒಂದು ಗುಂಪಿನ ನಂತರ ಮತ್ತೊಂದರಂತೆ ನುಡಿಸಿ ಹಾಡಲಾಗುತ್ತಿತ್ತೆಂದು ಭಾವಿಸಲಾಗಿರುವದು. ಯೆರೂಸಲೇಮಿನಲ್ಲಿ ಮಂಜೂಷವನ್ನು ಸ್ವೀಕರಿಸಿಕೊಳ್ಳುವ ಸಲುವಾಗಿ ಒಂದು ಗುಡಾರ ಅಥವಾ ಡೇರೆಯನ್ನು ಆಗಲೇ ಸ್ಥಾಪಿಸಲಾಗಿತ್ತು. ಜೋಸೆಫಸ್ನ ಅನುಸಾರ, ಏಳು ಗಾಯಕರ ತಂಡವು ಮೆವಣಿಗೆಯ ಭಾಗವಾಗಿತ್ತು.

ಆತ್ಮಿಕ ಇಸ್ರಾಯೇಲ್ಯರಿಗಿರುವ ಇತರ ಪಾಠಗಳು

ನಿಜರೂಪದ ದಾವೀದನ [ಗುಂಪಿನ] ಸದಸ್ಯರು ಅಂದರೆ [ಶಿರಸ್ಸು ದೇಹಗಳಿಂದ ಕೂಡಿದ] ಕ್ರಿಸ್ತನೆಂಬುವನು ಜೀವಿತದ ಎಲ್ಲಾ ಅನುಭವಗಳಿಂದ ಪಾಠಗಳನ್ನು ಕಲಿತುಕೊಳ್ಳಬೇಕಿರುವದು; ಅದೇನಂದರೆ ಅವರ ಸಂಗತಿಯೂ ದಾವೀದನದಂತೆ ಸಂಭ್ರಮಿಸಲು ಉದ್ದೇಶಿಸಿರುವ ದಿನವು ಶೋಕಿಸುವ ಹಾಗು ಭಯದ ದಿವಸವಾಗಿ ತಿರುಗಿಕೊಳ್ಳಬಹುದೆಂಬುದು. ಹೀಗೆಯೇ ನಮ್ಮ ತಪ್ಪುಗಳನ್ನು ಸರಿಯಾಗಿ ಅರಿತುಕೊಂಡು ಅವುಗಳ ಕಾರಣವನ್ನು ಸರಿಯಾದ ದೃಷ್ಟಿಯಿಂದ ಸ್ವೀಕರಿಸಿಕೊಂಡಾಗ ಅವುಗಳು ಎಡಹುವ ಕಲ್ಲಾಗುವದಕ್ಕೆ ಬದಲಾಗಿ ಪ್ರಗತಿಯ ಮೆಟ್ಟಿಲಾಗಿ ಅದು ನಮ್ಮನ್ನು ದೇವರ ಸಮೀಪಕ್ಕೆ ಸೆಳೆಯುವದು: "ನಿನ್ ಹತ್ರ ದೇವರೇ, ನಿನ್ ಹತ್ರಕ್ಕೆ" ಮತ್ತೊಂದು ಪಾಠವೆಂದರೆ ನಾವು ದೇವರಿಗೆ ಹತ್ತಿರವಾಗುವದನ್ನು ಬಯಸಬೇಕೆಂಬದು.

ಮಂಜೂಷವು ದೇವದರ್ಶನ ಗುಡಾರದಲ್ಲಿ ದಾವೀದನ ನಿವಾಸದ ಹತ್ತಿರವಿದ್ದು ಅದು ತನ್ನ ಮಹಿಮಾ ಪೂರಿತವಾದ ವಿತ್ರಾಂತಿಯ ಸ್ಥಳವಾಗಿ ಪ್ರತಿನಿಧಿಸುತ್ತಿರಲಿಲ್ಲ. ಆದರೆ ಇದು ಅದರ ಪ್ರಸ್ತುತ [ಅಂದಿನ] ನಿವಾಸವಾಗಿತ್ತು. ಮಹಿಮಾ ಸ್ಥಿತಿಗೆ ಸೇರಿದ ಸಭೆಯು ಸೊಲೋಮೊನನ ದೇವಾಲಯದ ಮೂಲಕವಾಗಿ ಪ್ರತಿನಿಧಿಸಲ್ಪಡುತ್ತದೆ. ವಾಸ್ತವದಲ್ಲಿ ನಾವು ಅಲ್ಲಿ ಇರುವದಕ್ಕೆ ಹಾತೊರೆಯುವವರಾಗಿ ಮುಂದೆ ಬರುವ ಮಹಿಮೆಯುಳ್ಳ ಸಂಗತಿಗಳೆಲ್ಲವುಗಳಲ್ಲಿ ಸೇರಲು ಬಯಸುವವರಾಗಿದ್ದೇವೆ. ಆದರೆ ಅದು ದಾವೀದನಿಗೆ ದೇವಾಲಯವನ್ನು ಕಟ್ಟಲು ಅನುಮತಿ ನೀಡದೇ ಇದ್ದ ಪ್ರಕಾರವೇ, ದೇವರ ನಿಗದಿತ ಸಮಯವು ಬರುವ ವರೆಗೂ ಇದು ಅಸಾಧ್ಯವಾಗಿರುವದು. ಹೀಗೆ ಆತನ ಜೀವಿತವು ಮಹಿಮಾ ಪದವಿಗೆ ಸೇರಿದ ಪ್ರಿಯಕರನನ್ನು ಚಿತ್ರಿಸುವದಿಲ್ಲ, ಆದರೆ ಪರೀಕ್ಷಾವಸ್ಥೆಯ ಅಧೀನದಲ್ಲಿರುವ ಶರೀರಭಾವವನ್ನು ತೋರಿಸುತ್ತದೆ. ದಾವೀದನು ದೇವದರ್ಶನದ ಗುಡಾರದ ಸಮೀಪದಲ್ಲಿದ್ದವನಾಗಿ ದೇವರ ಸನಿಹವನ್ನು ಬಯಸಿದ್ದ ಹಾಗೆಯೇ ನಾವು ನಮ್ಮನ್ನು ಆ ಪ್ರಿಯಕರನ [ದೇಹದ] ಅಂಗಗಳಾಗಿ ದೇವರ ಸನಿಹಲ್ಲಿದ್ದು ನಡೆದುಕೊಳ್ಳುವಂಥವರಾಗಲು ಅಂದರೆ ತನ್ನ ಕೃಪಾಸನದ ವ್ಯವಸ್ಥೆಯನ್ನು ಹೊಂದಿರುವ ಕ್ರಿಸ್ತಯೇಸುವಿನ ಸಮೀಪದಲ್ಲಿರುವವರಾಗಿ ನಮ್ಮನ್ನು ಕಂಡುಕೊಳ್ಳಬೇಕು. ಇದು ಸಭೆಯೆಂಬ ಆತನ ದೇಹದ ಅಂಗಗಳಾದವರ ಸನಿಹದಲ್ಲಿರಲು ಅಂದರೆ ಅವರೊಡನೆ ಅನ್ಯೋನ್ಯವಾಗಿರಲು ಬಯಸುವದನ್ನು ಸೂಚಿಸುವದು, ಯಾಕಂದರೆ ಅಲ್ಲಿನ ವಿಷಯಗಳು ದೇವದರ್ಶನ ಗುಡಾರದಲ್ಲಿನ "ಪರಿಶುದ್ಧ" ಸ್ಥಳವನ್ನು ಪ್ರತಿನಿಧಿಸಿದ್ದು, ಜೊತೆಗೆ ಇದರ ನಡುವೆ ಕೇವಲ ಒಂದು ತೆರೆಯಿದ್ದು ಅದು ಇಲ್ಲಿನ ಸ್ಥಿತಿಯ ಹಾಗು ತೆರೆಯ ಆಚೆಯಲ್ಲಿರುವ ಮಹಿಮಾಸ್ಥಿತಿಯನ್ನು ಸೂಚಿಸುವದು. ಇದು ಯಾರು ನೂತನ ಸ್ವಭಾವದ ಅನುಸಾರ ದೇವರ ಸಮೀಪದಲ್ಲಿರಲು ಬಯಸುವರೋ ಮತ್ತು ಯಾರು ಆತನೊಡನೆ ಅನ್ಯೋನ್ಯತೆಯಿಂದಿರಲು ಇಚ್ಛಿಸುವರೋ ಅವರು ಸಹೋದರರಿಗಾಗಿರುವ ತಮ್ಮ ಪ್ರೀತಿಯನ್ನು ತೊರ್ಪಡಿಸುವ ಮೂಲಕವಾಗಿ ದೇವರು ಹಾಗು ಆತನ ಬೆಳಕು ಜ್ಞಾನ ಪ್ರೀತಿಗಳಲ್ಲಿ ತಮ್ಮ ನಂಬಿಕೆ ಭರವಸೆಗಳನ್ನು ಇಟ್ಟು ಆತನ ಗುಣಾತಿಶಯಗಳನ್ನು ತೋರ್ಪಡಿಸುವ ಸೌಭಾಗ್ಯಗಳಿಗೆ ಗಮನ ಹರಿಸುವರೋ ಅವರ ಸಂಗತಿಯೂ ಹೀಗೆಯೇ ಇರುವದಲ್ಲವೆ?

"ಕೃತಜ್ಞತಾ ಸ್ತುತಿಯೊಡನೆ ಆತನ ಮಂದಿರದ ದ್ವಾರಗಳಿಗೆ [ದ್ವಾರಗೊಳೊಳಗೆ]... ಬನ್ನಿರಿ"

ಕೆಲವೊಂದು ವಿಧ'ದಲ್ಲಿ ದಾವೀದ ನಗರವು ಸಭೆಯಾಗಿದ್ದು, ಅದು ಹೆಸರಿಗೆ ಮಾತ್ರವಿರುವ ವ್ಯವಸ್ಥೆಯಾಗಿರದೆ, "ಪರಲೋಕದಲ್ಲಿ ತಮ್ಮ ಹೆಸರನ್ನು ಬರೆಸಿಕೊಂಡಿರುವವರ" ನಿಜವಾದ ಸಭೆಯಾಗಿರುವದು. ಅಪೋಸ್ತಲನ ಅನುಸಾರವಾಗಿ ನೀತಿವಂತರೆಂದು ನಿರ್ಣಯ ಹೊಂದಿರುವಂಥ ನಂಬಿಗಸ್ತರು ಕೇವಲ ತಮ್ಮ ಪ್ರತಿಷ್ಠೆಯ ಮೂಲಕವಾಗಿ ಈ ಪಟ್ಟಣದೊಳಗೆ ಪ್ರವೇಶಿಸಲು ಸಾಧ್ಯ. ಅಪೋಸ್ತಲನು ಪ್ರಬೋಧಿಸುವದೆಂದರೆ "ಸಹೋದರರೇ... ನಿಮ್ಮ ನಿಮ್ಮ ದೇಹಗಳನ್ನು.... ಸಜೀವ ಯಜ್ಞವನ್ನಾಗಿ ಅರ್ಪಿಸಿರಿ." ಎಂಬುದು. ಕೆಲವರಿದ್ದಾರೆ ಅವರು ಯಜ್ಞಾರ್ಪಣೆಯ ಮೂಲಕವಾದ ಈ ದ್ವಾರದ ಮಾರ್ಗವನ್ನು ದುಃಖದಿಂದಲೂ ಕೆಲವೊಂದು ಪ್ರಮಾಣದ ವಿಷಾದನೆ–ಯಿಂದಲೂ ಅಂದರೆ ತಾವು ಅತಿಯಾಗಿ ಅರ್ಪಿಸುತ್ತಿರುವೆವು ಎಂಬ ಭಾವನೆಯೊಡನೆ ಪ್ರವೇಶಿಸುವಂತೆ ತೋರುವದು. ಅವರು ಯಜ್ಞಾರ್ಪಣೆಮಾಡಿದ ಸಂಗತಿಗಳಿಗೆ ಅತಿಯಾದ ಬೆಲೆಕಟ್ಟುವಂಥ ವರೂ ಇಲ್ಲವೇ ತಾವು ಪಡಕೊಂಡ ಸಂಗತಿಗಳಿಗೆ ಅಲ್ಪ ಬೆಲೆಕಟ್ಟುವಂಥವರೂ ಆಗಿರುವರು. ತಾವು ಪ್ರತಿಷ್ಠೆಮಾಡಿಕೊಳ್ಳುವ ಹೆಜ್ಜೆಯನ್ನು ಇಡುವದರ ಮೊದಲು ಕುಳಿತುಕೊಂಡು ಇದಕ್ಕೆ ತಮಗೆ ತಗಲುವ ಖರ್ಚು ಎಷ್ಟಾಗುವದೆಂಬುದನ್ನು ಲೆಕ್ಕ ಹಾಕುವದು ಇಂಥವರಿಗೆ ಉತ್ತಮ. ಎಲ್ಲರಿಗೆ ಇರಬೇಕಾದ ಸೂಕ್ತ ಮನೋಭಾವವೆಂದರೆ ಅವರು ಈಗಿರುವಂಥ ಹಾಗು ಮುಂದೆ ಸಂಭವಿಸುವಂಥ ಅಲ್ಲದೆ ನಾವು ಯಾಜಕರಾಗಿ ಏನನ್ನು ಮಾಡಲು ಒಡಂಬಟ್ಟಿದ್ದೇವೆಂದೂ, ಅಲ್ಲದೆ ಏನನ್ನು ಮಾಡುತ್ತಿದ್ದೇವೆಂದೂ, ಆ ನಂತರ ಸಂತೋಷದಿಂದ ಇದನ್ನು ಮಾಡುತ್ತಿದ್ದೇವೋ ಎಂಬುದರ ಬಗ್ಗೆ ಸೂಕ್ತವಾದ ದೃಷ್ಟಿಯುಳ್ಳ–ವರಾಗಿರ ಬೇಕು. ಮತ್ತು ಹೀಗೆ ಈ ಪಾಠವು ಅಂದರೆ "ಕೃತಜ್ಞತಾ ಸ್ತುತಿಯೊಡನೆ ಆತನ ಮಂದಿರದ ದ್ವಾರಗಳಿಗೂ [ಒಳಗೆ] ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ" ಎಂಬುದನ್ನು ಕಲಿತುಕೊಳ್ಳಲಾಗುವದು. ಪ್ರಸಂಶನೀಯನಾದ ದೇವರ ಮಗನು ತಾನು ಅನೇಕ ಕಷ್ಟದೊಳಗೆ ಬಿದ್ದಾಗ "ಇದೆಲ್ಲವನ್ನು ಸಂತೋಷವೆಂದೆಣಿಸಿರಿ." ಎಂಬುದನ್ನು ಮಾಡುವದಕ್ಕೆ ಸಮರ್ಥನಾಗುವನು. ಯಾಕಂದರೆ ಅದು ಆತನ ನಂಬಿಕೆಗೆ ಆಗುವ ಒಂದು ಪರಿಶೋಧನೆಯಾಗಿದ್ದು, ಆ "ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ. ಅನುಭವಸಿದ್ಧಿಯಿಂದ ನಿರೀಕ್ಷೆ ಹುಟ್ಟುತ್ತದೆ." ಇವು ನಮಗೆ ಅವಮಾನವನ್ನು ಉಂಟುಮಾಡುವಂಥದ್ದಾಗಿರದೆ, ನಮ್ಮನ್ನು ರಾಜ್ಯಪ್ರಭಾವಗಳಿಗೆ ಸಿದ್ಧರನ್ನಾಗಿಸುತ್ತವೆ.

*****

ದಾವೀದ ನಗರಿ – ದೇವ ನಗರಿ

ರೀಪ್ರಿಂಟ್ಸ್ ಪುಟ 5679

2 ಸಮುವೇಲ 6:1–19; ಕೀರ್ತನೆ 24

"ಯೆಹೋವನ ಮಂದಿರಕ್ಕೆ ಹೋಗೋಣ, ಬಾ ಎಂದು ಜನರು ನನ್ನನ್ನು ಕರೆದಾಗ ನನಗೆ ಸಂತೋಷವಾಯಿತು – ಕೀರ್ತನೆ 122:1

ದೇವಾನುಗ್ರಹದ ಮೂಲಕವಾಗಿ ನಡೆಸಲ್ಪಟ್ಟಿದ್ದ ದಾವೀದನು ತಾನು ಇಸ್ರಾಯೇಲ್ಯರೆಲ್ಲರ ಮೇಲೆ ಅರಸನಾಗಿ ಅಭಿಷೇಕಿಸಲ್ಪಟ್ಟ ನಂತರ ಒಂದು ಹೊಸ ರಾಜಧಾನಿಯನ್ನು ಮಾಡಿಕೊಳ್ಳಲು ಬಯಸಿದ್ದನು. ಯೆರೂಸಲೇಮ್ ಪಟ್ಟಣವು ಶತಮಾನಗಳಿಂದ ಗೆಲ್ಲಲಾಗದ ಕೋಟೆಯುಳ್ಳ ಪಟ್ಟಣವಾಗಿದ್ದು ಯೆಬೂಸಿಯರ ವಶದಲ್ಲಿತ್ತು. ಇದು ಎಷ್ಟು ಅನುಕೂಲಕರವಾದ ಸ್ಥಾನದಲ್ಲಿತ್ತೆಂದರೆ ಕೇವಲ ಕುರುಡರು ಹಾಗು ಕುಂಟರಿಗೆ ಇದನ್ನು ಯಾವುದೇ ವೈರಿಯಿಂದ ರಕ್ಷಿಸಲು ಸಾಧ್ಯವೆಂದು ಅವರು ಹೇಳಿಕೊಂಡಿದ್ದರು. ಆದರೆ ಸಮಯವು ಬಂದಾಗ ಅದು ದಾವೀದನ ಕೈಗೆ ಒಪ್ಪಿಸಲ್ಪಟ್ಟು ಇಸ್ರಾಯೇಲಿನ ರಾಜಧಾನಿಯಾಯಿತು. ಹೊಸ ಅರಸನಾಗಿ ಮಾಡಿದ ಕಾರ್ಯಗಳಲ್ಲಿ ಮೊದಲನೆಯದೆಂದರೆ ತನ್ನ ರಾಜ್ಯದ ಹಾಗು ಆಸ್ಥಾನದ ಘನತೆಗೌರವಗಳಿಗೆ ತಕ್ಕಂತ ಒಂದು ಅರಮನೆಯನ್ನು ತನಗಾಗಿ ಒದಗಿಸಿಕೊಂಡಂಥದ್ದೇ. ಈ ಉದ್ದೇಶಕ್ಕಾಗಿ ಆತನು ತೂರಿನ ಅರಸನಾದ ಹೀರಾಮನಿಂದ ಕೇವಲ ಸಾಮಾನುಗಳನ್ನು ತರಿಸಿಕೊಂಡದ್ದು ಮಾತ್ರವಲ್ಲದೆ ಕುಶಲಕಾರ್ಮಿಕರನ್ನು ಸಹ ಕರೆಸಿಕೊಂಡಿದ್ದನು.

ಕೂಡಲೇ ತನ್ನ ಕೀರ್ತನೆಯಲ್ಲಿ ಸೂಚಿತವಾಗಿ ಗುರುತಿಸಲಾಗಿದ್ದಂತೆ ಅರಸನಾದ ದಾವೀದನ ಆತ್ಮಿಕ ಸ್ವಭಾವವು ಇಸ್ರಾಯೇಲ್ಯರ ಆಡಳಿತದ ಅಧಿಕಾರವನ್ನು ಪ್ರತಿಪಾಧಿಸಲು ಆರಂಭಿಸಿತ್ತು. ದೇವರ ಒಡಂಬಡಿಕೆಯಲ್ಲಿನ ಜನರ ಮಧ್ಯದಲ್ಲಿ ನಡೆಯುವ ವಿಗ್ರಹಾರಾಧನೆಯನ್ನು ಸಹಿಸಿಕೊಳ್ಳದೇ ಇರುವದು ಮಾತ್ರವಷ್ಟೇ ಸಾಕಾಗಿರಲಿಲ್ಲ. ದೇವರ ಪ್ರಸನ್ನತೆಯ ಸಂಕೇತಗಳು ಮತ್ತೊಂದು ಸಾರಿ ಗೌರವಿಸಲ್ಪಡಬೇಕು. ದಾವೀದನಿಗೆ ಯಾಜಕರು ಆದರಿಸಿದ್ದದಕ್ಕಾಗಿ ಅರಸನಾದ ಸೌಲನು ಅವರನ್ನು ಸಂಹರಿಸಿದ್ದ ಕಾರಣ ನೋಬಿನಲ್ಲಿದ್ದ ದೇವದರ್ಶನದ ಗುಡಾರವು ಬಳಕೆಯಲ್ಲಿ ಇಲ್ಲದಂತಾಗಿತ್ತು. ಅಲ್ಲದೆ ಅರಸನಾದ ಸೌಲನು ದೇವದರ್ಶನದ ಗುಡಾರವನ್ನು ಗಿಬೆಯೋನಿಗೆ ತೆಗೆದುಕೊಂಡು ಹೋಗಿದ್ದನು; ಆದರೆ ಮಂಜೂಷವು ಒಂದು ದೀರ್ಘ ಕಾಲದ ವರೆಗೆ ದೇವದರ್ಶನ ಗುಡಾರದಲ್ಲಿರಲಿಲ್ಲ.

ಏಲಿಯ ದುಷ್ಟ ಮಕ್ಕಳು ಮಂಜೂಷವನ್ನು ತಮ್ಮೊಂದಿಗೆ ಫಿಲಿಷ್ಟಿಯರೊಡನೆಯ ಯುದ್ಧಕ್ಕೆ ತೆಗೆದುಕೊಂಡು ಹೋಗಿದ್ದು, ಅವರು ಸೋತುಹೋದಾಗ ಫಿಲಿಷ್ಟಿಯರು ಅದನ್ನು ಸ್ವಾಧೀನಪಡಿಸಿಕೊಂಡಿದ್ದರು; ಅದರ ಸಮ್ಮುಖದಲ್ಲಿ ಫಿಲಿಷ್ಟಿಯರ ದಾಗೋನನ ಮೂರ್ತಿಯು ಕೆಳಕ್ಕೆ ಬಿದ್ದು ಒಡೆದುಹೋಗಿತ್ತು; ಅಲ್ಲದೆ ಫಿಲಿಷ್ಟಿಯರು ಅದನ್ನು ಕಿರ್ಯತ್ಯಾರೀಮಿಗೆ ಹಿಂದಿರುಗಿಸುವವರೆಗೂ, ಯಾವ ಯಾವ ಪಟ್ಟಣದಲ್ಲಿ ಮಂಜೂಷವು ನೆಲೆಯೂರಿತ್ತೋ ಅಲ್ಲೆಲ್ಲಾ ದೇವರಿಂದ ಶಿಕ್ಷೆಯುಂಟಾಗುತ್ತಿತ್ತು ಎಂಬುದನ್ನು ನೆನಪಿಸಿಕೊಳ್ಳುವೆವು. ಅಲ್ಲಿ ಅದು ಎಪ್ಪತ್ತು ವರುಷಗಳ ವರೆಗೆ ಅಂದರೆ ಈಗ ಗಮನಿಸಲಾದ ಘಟನೆಗಳು ನಡೆಯುವವರೆಗೆ ಉಳಿದುಕೊಂಡಿತ್ತು. ಅರಸನಾದ ದಾವೀದನು ಮಂಜೂಷವನ್ನು ಅದರ ಹೊಸ ಡೇರೆಗೆ ಅಥವಾ ದೇವದರ್ಶನ ಗುಡಾರಕ್ಕೆ ವರ್ಗಾವಣೆಮಾಡಿದ್ದನು; ಇದು ಬಹು ಮುಖ್ಯವಾದ ಒಂದು ಘಟನೆಯಾಗಿದ್ದು ದೇಶದ ಹಲವಾರು ಭಾಗಗಳಿಗೆ ಸಂದೇಶವನ್ನು ಕಳುಹಿಸಲಾಗಿ ಈ ಹೊಸ ಧಾರ್ಮಿಕ ಮಹಾ ಆಂದೋಲನಕ್ಕೆ ಸಾಕ್ಷಿಗಳಾಗುವ ಸಲುವಾಗಿ ಮೂವತ್ತು ಸಾವಿರ ರಣವೀರರು ಹಾಗು ಗಾಢವಾದ ದಾರ್ಮಿಕ ಪ್ರವೃತ್ತಿಯುಳ್ಳ ಜನಸಮೂಹವು ಸೇರಿಬಂದು, ಹಿಂದಿನ ಕಾಲದಲ್ಲಿದ್ದಂತೆ ದೇವರ ಆಶೀರ್ವಾದವನ್ನು ಮತ್ತೆ ಕೊಂಡುತರುವುದು ಇದರ ಅರ್ಥವೆಂಬುದನ್ನು ಎಲ್ಲರೂ ನಿರೀಕ್ಷಿಸಿದ್ದರು.

ಭಯಭಕ್ತಿಯ ಬಗ್ಗೆ ಒಂದು ದೊಡ್ಡ ಪಾಠ

ದಾವೀದನು ದೇವರನ್ನು ಗೌರವಿಸುವ ಉದ್ದೇಶ–ವುಳ್ಳವನಾಗಿದ್ದರೂ ಮಂಜೂಷವನ್ನು ನಿರ್ವಹಿಸುವ ಹಾಗು ಅದರ ಸಾಗಿಸುವಿಕೆಯ ಸಂಬಂಧವಾದ ದೈವ ನಿಯಮವನ್ನು ನಿರ್ದಿಷ್ಟವಾಗಿ ಗಮನಿಸುವದನ್ನು ಅಂದರೆ ಯಾರು ಅದನ್ನು ಮುಟ್ಟಬೇಕು ಮುಂತಾದವುಗಳನ್ನು ನಿರ್ಲಕ್ಷಿಸಿದ್ದನು. ದೇವಾನುಗ್ರಹವು ಈಗ ಅವನಿಗೆ ಸರ್ವಶಕ್ತನ ಮೇಲಿನ ಭಯಭಕ್ತಿ ಹಾಗು ನಿಯಮವಿಧಿಗಳ ಬಗ್ಗೆ ಎಚ್ಚರಿಕೆಯಿಂದಿರುವ ಸಲುವಾಗಿ ಒಂದು ದೊಡ್ಡ ಪಾಠವನ್ನು ನೀಡಿತ್ತು. ಮಂಜೂಷವನ್ನು ಆತನು ಶ್ರೇಷ್ಠವೆಂದೆಣಿಸಿದ್ದನಾದರೂ ಅದನ್ನು ಉನ್ನತವಾಗಿ ಎಣಿಸಿರಲಿಲ್ಲ. ನಿಜವಾಗಿಯೂ ದೇವದರ್ಶನ ಗುಡಾರದ ಹಲವಾರು ಉಪಕರಣಗಳಲ್ಲಿ ಇದು ಅತಿ ಮುಖ್ಯವಾದುದಾಗಿತ್ತು.

ತಾಮ್ರದ ಯಜ್ಞವೇದಿ ಮತ್ತು ಗಂಗಾಳವು ಅಂಗಳದಲ್ಲಿದ್ದವು; ಚಿನ್ನದ ತಗಡಿನಿಂದ ಹೊದಿಸಿದ್ದ ರೊಟ್ಟಿಯ ಮೇಜು, ಚಿನ್ನದ ದೀಪ ಸ್ತಂಭ, ಮತ್ತು ಚಿನ್ನದ ಧೂಪವೇದಿ ಇವುಗಳು ಪರಿಶುದ್ಧ ಸ್ಥಳದಲ್ಲಿದ್ದವು. ಆದರೆ ಅತಿ ಪರಿಶುದ್ಧ ಸ್ಥಳದಲ್ಲಿದ್ದ ಕೇವಲ ಒಂದೇ ಉಪಕರಣವೆಂದರೆ ಅದು ಮಂಜೂಷವಾಗಿತ್ತು. ಆಕಾರದಲ್ಲಿ ಅದು ಒಂದು ಪೆಟ್ಟಿಗೆಯಂತಿದ್ದು ಅದು ಸುಮಾರು ನಾಲ್ಕು ಅಡಿ ಉದ್ದ, ಎರಡು ಅಡಿ ಎತ್ತರ, ಮತ್ತು ಎರಡು ಅಡಿ ಅಗಲವಾಗಿತ್ತು. ಅದರ ಎರಡು ಪಕ್ಕಗಳಲ್ಲಿಯೂ ಒಂದೊಂದು ಕೋಲನ್ನು ಜೋಡಿಸಿದ್ದು, ಆ ಮೂಲಕವಾಗಿ ಲೇವಿಯರು ಅದನ್ನು ತಮ್ಮ ಹೆಗಲಿನ ಮೇಲೆ ಹೊರಬೇಕಿತ್ತು. ಅದು ಚಿನ್ನದಿಂದ ಹೊದಿಸಲಾಗಿದ್ದು, ಆ ಪೆಟ್ಟಿಯ ಒಳಗೆ

ಆಜ್ಞಾಶಾಸನದ ಹಲಿಗೆಗಳು, ಅರಣ್ಯದಲ್ಲಿನ ಕಾಲದಿಂದ ಸಂರಕ್ಷಿಸಲಾಗಿದ್ದ ಮನ್ನಾ ಇಟ್ಟಿದ್ದ ಚಿನ್ನದ ಬಟ್ಟಲು, ಅದ್ಭುತಗಳನ್ನು ನಡೆಸಲಾಗಿದ್ದ ಆರೋನನ ಕೋಲು ಇದ್ದವು. ಮಂಜೂಷದ ಮೇಲಿನ ಭಾಗದಲ್ಲಿ ಅದರ ಅತಿ ವಿಶೇಷವಾದ ವೈಶಿಷ್ಟ್ಯವಿತ್ತು. ಅದು ಒಂದು ಗಟ್ಟಿಯ ಚಿನ್ನದ ತಗಡಾಗಿದ್ದು ಅದರ ಮೇಲೆ ಎರಡು ಕೆರೂಬಿಗಳ ಕೆತ್ತನೆಯ ಆಕೃತಿಗಳನ್ನು ನಿಲ್ಲಿಸಲಾಗಿದ್ದು ಅವುಗಳು ಒಳಮುಖವಾಗಿ ಕೆಳಗೆ ದೃಷ್ಟಿಸುತ್ತಿದ್ದು ಅವುಗಳ ರೆಕ್ಕೆಗಳು ಹೊರಗೆ ಚಾಚಿಕೊಂಡಿದ್ದವು.

ದೇವಾದೇಶವೇನಾಗಿತ್ತೆಂದರೆ ಯಾಜಕರು ಮಂಜೂಷ–ವನ್ನು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಮುಚ್ಚಬೇಕಿದ್ದು ಅದು ಕೆಲವು ಸಂಗತಿಗಳಿಗೆ ಸಂಕೇತವಾಗಿತ್ತು; ಕೇವಲ ಆನಂತರವೇ ಲೇವಿಯರು ಅದನ್ನು ತಮ್ಮ ಪರಾಮರಿಕೆಗೆ ಪಡಕೊಂಡು ಅದನ್ನು ತಮ್ಮ ಹೆಗಲುಗಳ ಮೇಲೆ ಹೊತ್ತುಕೊಳ್ಳಬೇಕಿತ್ತು. ಈ ಸಂಗತಿಗಳನ್ನು ನಿರ್ಲಕ್ಷಿಸಿದವನಾಗಿ ಅರಸನು ಒಂದು ಹೊಸ ಬಂಡಿಯನ್ನು ತೆಗೆದುಕೊಂಡು ಅದನ್ನು ಎತ್ತುಗಳು ಎಳೆಯುವಂತೆ ಮಾಡಿದ್ದು ಇತರರು ಕಲ್ಪಿಸಿಕೊಳ್ಳುವದಕ್ಕಿಂತಲೂ ಇದು ಹೆಚ್ಚು ಗೌರವಯುತವಾಗಿರುವಂತೆ ಕಂಡು ಬಂದಿತ್ತು. ಆದರೆ ಅದು ದೇವರ ವಿಧಾನವಾಗಿರಲಿಲ್ಲ ಅಲ್ಲದೆ ದೇವರ ಹಾಗು ಆತನ ಗುಣಲಕ್ಷಣದ ಬಗ್ಗೆ ಮತ್ತು ಕೃಪಾಸನವನ್ನು ಸೂಚಿಸುವ ಮಂಜೂಷದ ಕಡೆಗಿನ ಭಯಭಕ್ತಿಯ ಬಗ್ಗೆ ಒಂದು ಪಾಠವನ್ನು ನೀಡಬೇಕಾಗಿತ್ತು.

ನಯವಾದ ಇಳಿಜಾರಿನ ಕಲ್ಲುದಾರಿಯ ಮೇಲೆ ಎತ್ತುಗಳು ಎಳೆಯುತ್ತಿದ್ದ ಗಾಡಿಯು ಸ್ವಲ್ಪ ಅಲುಗಾಡುವಂತೆ ಮಾಡಲು ಸೂಕ್ತವಾದ ಸಮಯುವು ಬಂದಿತ್ತು. ಆಗ ಮಂಜೂಷವನ್ನು ಸರಿಯಾಗಿ ಇರಿಸಲು ಕೈಚಾಚಿದ ಉಜ್ಜನು ಕೂಡಲೇ ಸಿಡಿಲುಬಡಿದು ಸತ್ತು ಬಿದ್ದಿದ್ದನು. ಈ ಕಾರ್ಯವೈಖರಿಗೆ ಪ್ರಕಟವಾದ ದೈವಿಕ ಅಸಂತೋಷದ ಈ ಸೂಚನೆಯು ಆ ಸಂಭ್ರಮವನ್ನು ತಟ್ಟನೆ ಕೊನೆಗೊಳಿಸಿತ್ತು; ಅಲ್ಲದೆ ಇದರಿಂದ ಬೇರೇನೂ ಹಾನಿಯಾಗಬಾರದೆಂದು ದಾವೀದನು ಅದನ್ನು ತನ್ನ ಅತಿ ಸಮೀಪಕ್ಕೆ ತಂದುಕೊಳ್ಳಲು ಅಂಜಿದ್ದನು. ಮೆರವಣಿಗೆಯು ನಿಲ್ಲಲ್ಪಟ್ಟಿತ್ತು; ಮಂಜೂಷವು ಬೇರಡೆಗೆ ತಿರುಗಿಸಲ್ಪಟ್ಟು ಯಾಜಕನಾಗಿರುವ ಸಂಭವವಿದ್ದ ಲೇವಿಯನಾದ ಓಬೇದೆದೋಮನ ಮನೆಗೆ ತಲುಪಿಸಲಾಗಿತ್ತು.

ಹೀಗೆ ಸಮಸ್ತ ಜನರು ಭಯಭಕ್ತಿಯ ಸಂಬಂಧವಾದ ಪಾಠವನ್ನು ಕಲಿತ್ತಿದ್ದು, ಈ ಮೂಲಕವಾದ ಒಂದು ಪಾಠವು ಯಾವುದೇ ಸಮಯಕ್ಕೆ ಅವಶ್ಯವಿದ್ದಂತೆ, ಇಂದಿಗೂ ಅದು ಅವಶ್ಯವಾಗಿರುವಂತೆ ತೋರುವದು. ಲೋಕದಲ್ಲಿ ಭಕ್ತಿಹೀನತೆಯು ಆಗಾಗ್ಗೆ ತೋರ್ಪಡಲಾಗುತ್ತಿದ್ದು, ರಾಜವಂಶದ ಯಾಜಕ–ರಾಗಿರುವ ಕರ್ತನ ಪ್ರತಿಷ್ಠಿತ ಜನರಾಗಿ ತೋರ್ಪಡಿಸಿ ಕೊಳ್ಳುವವರಲ್ಲಿಯೂ ಇದನ್ನು ನಾವು ಕಂಡಾಗ ನಮ್ಮನ್ನು ಅದು ಅಷ್ಟಾಗಿ ಬೆರಗುಗೊಳಿಸುವದಿಲ್ಲ. ಕೆಲವೊಂದು ಸಾರಿ ಅದು ನಡವಳಿಕೆಯಲ್ಲಿ ಕಾಣುವಂಥ ಭಕ್ತಿಹೀನತೆ, ಕೆಲವು ಭಾರಿ ಭಾಷೆಯಲ್ಲಿ ತೋರುವಂಥ ಭಕ್ತಿಹೀನತೆ, ಕೆಲವು ಸಾರಿ ಧಾರ್ಮಿಕ ವಿಷಯಗಳ ಇಲ್ಲವೇ ಶಾಸ್ತ್ರವಚನದ ಭಾಗಗಳ ಬಗ್ಗೆ ಹಾಸ್ಯ ಮಾಡುವಂಥದ್ದಾಗಿರುವದು. ವ್ಯಕ್ತಿಗೆ ಹಾಗು ತಾನು ಪ್ರಭಾವ ಹೊಂದಿರುವ ಇತರರಿಗೂ ಈ ವಿಧದ ಪ್ರತಿಯೊಂದು ಸಂಗತಿಯೂ ಖಂಡಿತವಾಗಿ ಹಾನಿಕರವಾಗುವದು.

ಉಜ್ಜನು ನಿತ್ಯಯಾತನೆ ಕಳುಹಿಸಲ್ಪಡಲಿಲ್ಲವೆಂದೂ ಆದರೆ ಕೇವಲ ಅವನು ಸಾವಿನ ನಿದ್ರೆಗೆ ಇಳಿದುಹೋದನೆಂದೂ ಅಲ್ಲದೆ ತನ್ನ ಕಾಲದಲ್ಲಿ ಆತನು ಮಾಡಿದ ತಪ್ಪಿನಿಂದ ಅವನಿಗೆ ಭವಿಷ್ಯದಲ್ಲಿ ವಿಶೇಷವಾಗಿ ಅಹಿತಕರವಾಗುವದಿಲ್ಲವೆಂಬುದನ್ನು ನಾವು ಮರೆಯುವಂತಿಲ್ಲ. ಈ ಮಧ್ಯೆ ಮತ್ತೊಂದು ಪಾಠವನ್ನು ಕಲಿತುಕೊಳ್ಳಲಾಗಿತ್ತು; ಕಾರಣ ಮಂಜೂಷವು ಓಬೇದೆದೋಮನ ಮನೆಯಲ್ಲಿ ಆಶೀರ್ವಾದವನ್ನು ಉಂಟುಮಾಡಲು ಆರಂಭಿಸಿದ್ದು, ಅದು ಯಾವ ರೂಪದಲ್ಲಿತ್ತೆಂಬುದನ್ನು ನಮಗೆ ಸರಿಯಾಗಿ ತಿಳಿಸಲಾಗಿಲ್ಲ, ಆದರೆ ಈ ರೀತಿಯ ಒಂದು ಆಶೀರ್ವಾದವು ಅನೇಕರ ಗಮನವನ್ನು ಸೆಳೆದಿತ್ತು. ಆವರೊಡನೆ ದಾವೀದನು [ಇದನ್ನು] ಗಮನಿಸಿದ್ದನು. ಮತ್ತೆ ಆತನ ಮನಸ್ಸು ಯೆರೂಸಲೇಮು ಕೇವಲ ದಾವೀದ ನಗರಿಯಾಗಿರುವದು ಮಾತ್ರವಲ್ಲದೆ ತನ್ನ ಜನರಾದ ಇಸ್ರಾಯೇಲ್ಯರೊಡನೆ ದೇವರು ಇರುವಂಥದ್ದನ್ನು ಸೂಚಿಸುವ ಮಂಜೂಷ ಹಾಗು ಶೆಕೀನ ಪ್ರಭೆಯ ಮೂಲಕವಾಗಿ ದೇವನಗರಿಯೂ ಆಗಿರಬೇಕೆನ್ನುವ ತನ್ನ ಮೂಲಾಅಭಿಪ್ರಾಯದ ಕಡೆಗೆ ತಿರುಗಿತ್ತು. ಶೆಕೀನ ಪ್ರಭೆಯು ಮಂಜೂಷದ ಮೇಲಿರುವ ಕೆರೂಬಿಗಳ ನಡುವೆ ಬೆಳಗುವ ಒಂದು ಜ್ಯೋತಿಯಾಗಿದ್ದು ಇದು ದೇವರು ತನ್ನ ಪ್ರಜೆಗಳಾದ ಇಸ್ರಾಯೇಲ್ಯರ ನಡುವೆ ಉಪಸ್ಥಿತನಾಗಿರುವುದನ್ನು ಸೂಚಿಸುತ್ತಿತ್ತು.

ದೇವರ ಸ್ವಕೀಯರಾದ ಪರಿಶುದ್ಧ ಜನಾಂಗ

ದಾವೀದನು ಹಾಗು ಇಸ್ರಾಯೇಲ್ಯರು ಇದ್ದಂಥ ಪರಿಸ್ಥಿತಿಯಲ್ಲಿ ನಾವಿರುವದಿಲ್ಲ. ಈ ದಿನದ ಪ್ರಪಂಚದಲ್ಲಿ ಯಾವ ದೇಶವೂ ದೇವರ ರಾಜ್ಯವಾಗಿರುವದಿಲ್ಲ. ಕ್ರಿ.ಪೂ. 606ರಲ್ಲಿ ದೇವರು ಚಿದ್ಕೀಯನಿಂದ ಕೀರೀಟವನ್ನು ತೆಗೆದುಹಾಕಿದಾಗ ಆತನು ಪ್ರವಾದಿಯ ಮೂಲಕವಾಗಿ ಪ್ರಕಟಮಾಡಿದ್ದು–"ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು. [ರಾಜ್ಯಕ್ಕೆ] ಬಾಧ್ಯಸ್ಥನು ಬರುವದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸಿಕೊಡುವೆನು." (ಯೆಹೆಜ್ಕೇಲ 21:25–27) ರಾಜ್ಯವನ್ನು ಮೆಸ್ಸೀಯನಿಗೆ ಕೊಡುವಂಥ ಸಮಯವು ಮತ್ತು "ನಿನ್ನ ರಾಜ್ಯವು ಬರಲಿ" ಎಂಬ ನಮ್ಮ ಪ್ರಾರ್ಥನೆಯು ನೆರವೇರುವಂಥ ಕಾಲವು ಸಮೀಪಿಸಿರುವ–ದೆಂಬದು ನಮ್ಮ ನಂಬಿಕೆ. ಆದರೆ ಈ ಮದ್ಯೆ ಭಕ್ತನಾದ ಪೇತ್ರನು ಸಾರಿ ಹೇಳಿರುವಂತೆ ದೇವರ ಸ್ವಕೀಯ ಜನರೂ ಮೀಸಲಾದ ಜನಾಂಗವೂ ಆಗಿರುವ ಸಭೆಯನ್ನು ಹೊರತು ಪಡಿಸಿ ಯಾವ ಭೂರಾಜ್ಯವೂ ದೇವರ ರಾಜ್ಯವಾಗಿರುವದಿಲ್ಲ. (1 ಪೇತ್ರ 2:9) ಆದರೆ ಹೀಗಿದ್ದರೂ ಸಹ ಉಲ್ಲೇಖಿಸಲಾಗಿರುವಂಥ ರಾಜ್ಯವು ಪಂಗಡಗಳನ್ನು ಒಳಗೊಂಡ ವ್ಯವಸ್ಥೆಯಾಗಿರುವದಿಲ್ಲ ಅಂದರೆ ಬಾಪ್ಟಿಸ್ಟ್ ಸಭೆ, ಇಲ್ಲವೆ ಮೆಥೊಡಿಸ್ಟ್ ಸಭೆ ಅಥವಾ ಪ್ರೆಸ್ಬಿಟೇರಿಯನ್ ಅಥವಾ ಲೂಥರನ್ ಆಂಗ್ಲಿಕನ್ ಅಥವಾ ರೋಮನ್ [ಕೆಥೋಲಿಕ್] ಸಭೆಯಾಗಿರುವದಿಲ್ಲ. ನಿಜವಾದ

ಕ್ರೈಸ್ತಸಭೆಯು ಇತಿಮಿತಿಗಳು ಇಲ್ಲದಂಥ ಸಭೆಯಾಗಿದ್ದು ಇದಕ್ಕೆ ಸಾಧಾರಣವಾದದ್ದು ಎಂಬ ಅರ್ಥದಲ್ಲಿ ಕೆಥೋಲಿಕ್ ಎಂಬ ಹೆಸರು ಸೂಕ್ತವಾಗಿ ಸಲ್ಲುತ್ತದೆ; ಕಾರಣ ಕೆಥೊಲಿಕ್ ಎಂಬ ಶಬ್ದವು ಸಾಧಾರಣವಾದದ್ದು ಅಥವಾ ಸಾರ್ವತ್ರಿಕವಾದದ್ದು ಎಂಬ ಅರ್ಥಕೊಡುವದು.

ಕ್ರಿಸ್ತನ ಸಭೆಯು ಸಮಸ್ತ ಲೋಕ ಪರ್ಯಂತರವಾದ ಒಂದೇ ಸಭೆಯಾಗಿದ್ದು, ಅದರ ಸದಸ್ಯರು ಕ್ರಿಸ್ತನೊಡನೆ ಪ್ರತಿಷ್ಠೆಯ ಮೂಲಕವಾಗಿ ಐಕ್ಯವಾಗಿದ್ದು ಪವಿತ್ರಾತ್ಮನಿಂದ ಹುಟ್ಟುವದರ [ಗರ್ಭಾಂಕುರಿಸುವ} ಮೂಲಕವಾಗಿ ದೇವರಿಂದ ಅಂಗೀಕರಿಸಲ್ಪಟ್ಟವರಾಗಿರುವರು. ಅದರಲ್ಲಿನ ಕೆಲವು ಸದಸ್ಯರು ರೋಮನ್ ಸಭೆಯಲ್ಲಿ, ಕೆಲವರು ಆಂಗ್ಲಿಕನ್, ಕೆಲವರು ಬ್ಯಾಪ್ಟಿಸ್ಟ್, ಕೆಲವರು ಲೂಥರನ್, ಕೆಲವರು ಮೆಥೋಡಿಸ್ಟ್ ಇಂಥಾ ಸಭೆಗಳಲ್ಲಿ, ಕೆಲವರು ಇವೆಲ್ಲಾದರ ಹೊರಗೆ ಕಂಡುಬರಬಹುದು. ಆದರೆ ದೇವರು ಮಾನ್ಯಮಾಡುವ ಪರಿಶುದ್ಧ ಜನಾಂಗವು ಇದೇ ಆಗಿದ್ದು, ಪುನರುತ್ಥಾನದಲ್ಲಿ ಉಂಟಾಗುವ ಮಾರ್ಪಾಟು ತೆರೆಯ ಆಚೆಕಡೆಯಲ್ಲಿ ಕರ್ತನ ಜನರನ್ನು ಆತನೊಡನೆ ಮಹಿಮಾಸ್ಥಿತಿಗೆ ಸೇರಿಸುವವರೆಗೂ, ಇದು ಒಂದು ಪೂರ್ಣವಾದ ನೂತನ ಜನಾಂಗವಾಗಿ ವ್ಯವಸ್ಥಾಪನೆಗೊಳ್ಳಲಾರದು; ಲಿಖಿತವಾಗಿರುವ ಪ್ರಕಾರ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು ಮತ್ತು ಆತನ ಮಹಿಮೆಯಲ್ಲಿ ಪಾಲುಗಾರರಾಗುವೆವು.

ಫಿಲಿಷ್ಟಿಯರು ಒಂದೆಡೆ ಹಾಗು ಮೋವಾಬ್ಯರು ಇನ್ನೊಂದೆಡೆ ದೇವರನ್ನು ಅಂಗೀಕರಿಸುವದನ್ನು ಇಸ್ರಾಯೇಲ್ಯರು ಅಪೇಕ್ಷಿಸುವದಕ್ಕಿಂತಲೂ ಹೆಚ್ಚಾಗಿ ಲೋಕವು ದೇವರ ವಿಷಯವಾದ ಸತ್ಯವನ್ನು ಮತ್ತು ದೇವರ ಪ್ರತ್ಯಕ್ಷತೆಯನ್ನು ಮಾನ್ಯ ಮಾಡುವಂಥದನ್ನು ನಾವು ಅಪೇಕ್ಷಿಸುವಂತಾಲು ಸಾಧ್ಯವಾಗದು. ಕೇವಲ ದೇವರೊಂದಿಗೆ ಒಡಂಬಡಿಕೆ ಮಾಡಿಕೊಂಡಂಥ ಜನರಿಗೆ ಮಾತ್ರ ದೇವರ ಹಾಗು ಆತನ ವ್ಯವಸ್ಥೆಗಳ ಬಗ್ಗೆ ಅರಿತುಕೊಳ್ಳಲು ಸಾಧ್ಯ. ಆತನು ಕೇವಲ ಇವರ ಮಧ್ಯದಲ್ಲಿರುವನು.

ಇಲ್ಲವೇ, ಇದು ಒಂದು ಕೌಟುಂಬಿಕ ವಿಷಯವೆಂದು ನಾವು ಹೇಳಿಕೊಳ್ಳಲು ಸಹ ಸಾಧ್ಯವಿಲ್ಲ; ವಾಸ್ತವದಲ್ಲಿ ಶಾಸ್ತ್ರವಚನಗಳು ತೋರಿಸಿಕೊಡುವ ಪ್ರಕಾರ ಇದು ಒಂದು ವೈಯುಕ್ತಿಕ ವಿಷಯ. ಇಲ್ಲಿ ಒಬ್ಬನು, ಅಲ್ಲಿ ಮತ್ತೊಬ್ಬನಂತೆ, ಕ್ರಿಸ್ತನ ಸಭೆಯು ಪ್ರಪಂಚಾದ್ಯಂತ ಚದರಿಹೋಗಿರುವದು. ಕೇವಲ ಪ್ರತಿಷ್ಠಿತರು ಅದರಲ್ಲಿ ಸೇರಿರುವರು ಅಥವಾ ಒಡಂಬಡಿಕೆಯ ಮಂಜೂಷದ ವಿಷಯದಲ್ಲಿ ಅನ್ವಯಿಸಿ ಹೇಳಿರುವಂತೆ ತಂದೆ ಹಾಗು ಮಗನೊಡನೆ ಅನ್ಯೋನ್ಯತೆಯ ಸೌಭಾಗ್ಯವನ್ನು ಪಡೆದಿರುವರು. ಈ ನಿಯಮಕ್ಕೆ ಇರುವ ಒಂದು ವಿನಾಯಿತಿಯನ್ನು ಗಮನಿಸಬಹುದು; ಇದು, ಭಕ್ತನಾದ ಪೌಲನು ತಿಳಿಸಿರುವ ಒಂದು ಸಂಗತಿ; ಯಾರೆಂದರೆ ಅವರು ದೇವಾನುಗ್ರಹದಲ್ಲಿ ಪಾಲುಗಾರರಾಗಿರುವಂಥ ವಿಶ್ವಾಸೀ



ಜನರು ಸಭೆಯಲ್ಲಿ ಹಾಡಿದ್ದು – ಲೈಫ್ ವೇ ಸಂಗ್ರಹ

ತಂದೆತಾಯಿಗಳ ಮಕ್ಕಳು; ಇವರು ತಮ್ಮ ತಂದೆತಾಯಿಗಳೊಡನೆ ದೇವಾನುಗ್ರಹ, ಆಶೀರ್ವಾದ ಹಾಗು ಅವರು ತಮ್ಮ ಬಗ್ಗೆ ತಾವು ತೀರ್ಮಾನಗಳನ್ನು ತೆಗೆದುಕೊಳ್ಳಲು ಸಮರ್ಥರಾಗುವಂಥ ಮನಸ್ಸಿನ ಬೆಳವಣಿಗೆಯ ಹಂತಕ್ಕೆ ತಲುಪುವ ವರೆಗೆ ಇಲ್ಲವೇ ಕರ್ತನಿಗೆ ಪೂರ್ಣವಾದ ರೀತಿಯಲ್ಲಿ ಪ್ರತಿಷ್ಠಿಸಿಕೊಂಡವರಾಗಿ ವೈಯುಕ್ತಿಕವಾಗಿ ಪವಿತ್ರಾತ್ಮನಿಂದ ಹುಟ್ಟುವದರ ಮೂಲಕವಾಗಿ ಕರ್ತನಿಂದ ಅಂಗೀಕರಿಸಲ್ಪಡುವ ವರಗೆ ಅಥವಾ ಬೇರೆ ಕಡೆಗೆ ತಿರುಗಿಕೊಂಡು ಲೋಕದ ಭಾಗವಾಗುವ ವರೆಗೆ ತಮ್ಮ ತಂದೆತಾಯಿಗಳೊಂದಿಗೆ ದೇವಾನುಗ್ರಹದ ಸೌಭಾಗ್ಯಕ್ಕೆ ಎಣಿಸಲ್ಪಡುವರು.

ಅರಸನಾದ ದಾವೀದನು ಮೊದಲನೇ ಪ್ರಯತ್ನದಲ್ಲಿ ವಿಫಲನಾದ ನಂತರ ಎರಡನೆಯ ಸಾರಿ ಮಂಜೂಷವನ್ನು ಮೇಲ್ಗಡೆ ತರಲು ಸಿದ್ಧನಾಗಿದ್ದು ಬಹು ಜಾಗ್ರತೆಯಿಂದ ಆ ವಿಷಯಗಳ ಬಗ್ಗೆ ಅಧ್ಯಯನಮಾಡಿದ್ದನು; ಅಲ್ಲದೆ ಈ ಸಮಯದಲ್ಲಿ ಎತ್ತಿನ ಗಾಡಿಯು ಇರಲಿಲ್ಲ, ಆದರೆ ದೇವಾದೇಶದ ಪದ್ಧತಿಯಂತೆ ಲೇವಿಯರು ತಮ್ಮ ಹೆಗಲಿನ ಮೇಲೆ ಮಂಜೂಷವನ್ನು ಹೊತ್ತುಕೊಂಡಿದ್ದರು. ದೈವೀಕ ಪದ್ಧತಿ ಹಾಗು ಸೇವೆಗಳ ವಿಷಯದಲ್ಲಿ ಪರಿಣಿತರೂ ಅನ್ವೇಶಕರೂ ಆಗುವಂಥದ್ದು ನಮ್ಮ ವಿಷಯವಾಗಿರುವದಿಲ್ಲ, ಆದರೆ ವಾಸ್ತವದಲ್ಲಿ ದೇವರ ಚಿತ್ತದ ಬಗ್ಗೆ ಅಧ್ಯಯನ ಮಾಡುವಂಥವರೂ, ನಾವು ದೇವರ ಚಿತ್ತವನ್ನು ತಿಳುಕೊಂಡು ಅದನ್ನು ನೆರವೇರಿಸುವ ಸಲುವಾಗಿ ಶಾಸ್ತ್ರವಚನಗಳನ್ನು ಹುಡುಕುವವರೂ ಆಗಿರಬೇಕು. ಅರಸನಾದ ದಾವೀದನು ಕಲಿತುಕೊಂಡಿದ್ದ ಪಾಠವು ದೇವಜನರೆಲ್ಲರೂ ತಮ್ಮ ಮನಸ್ಸಿಗೆ ಚೆನ್ನಾಗಿ ತೆಗೆದುಕೊಳ್ಳುವಂಥ ಒಂದು ಸಂಗತಿಯಾಗಿರುವದು.

ದೇವರ ಎದುರಿನಲ್ಲಿ ನರ್ತನ

ದಾಖಲೆಗಳು ತಿಳಿಸುವದೇನಂದರೆ ಮೆರವಣಿಗೆಯ ಸಂರಕ್ಷಣಾಕಾರರಾಗಿ ಅದಕ್ಕೆ ಗೌರವವನ್ನು ತಂದುಕೊಟ್ಟಿದ್ದ ಸಾವಿರಾರು ರಣವೀರರ ಜೊತೆಗೆ ದಾರಿಯಲ್ಲಿ ಹಲವಾರು ಹಳ್ಳಿಗಳಲ್ಲಿ ಮಂಜೂಷವನ್ನು ಎದುರುಗೊಂಡಿದ್ದ ಜನಸಮೂಹ–ದವರು ಒಂದುಗೂಡಿದ್ದು ತುತ್ತೂರಿ ಊದುವವರು, ತಾಳವಾದ್ಯಗಾರರು ಹಾಗು ತಂತಿವಾದ್ಯಗಳನ್ನು ನುಡಿಸುವವರು ಅಲ್ಲಿದ್ದು ಅವರು ಮಂಜೂಷದ ಹಿಂದಿರುಗುವಿಕೆಯ ಮುಖಾಂತರ ದೇವರು ದೇಶಕ್ಕೆ ಹಿಂದಿರುಗುವಂಥದ್ದನ್ನು ಸೂಚಿಸುವ ದೊಡ್ಡ ಘಟನೆಯ ಸಂಬಂಧವಾಗಿ ಸಂತೋಷ ಸಂಭ್ರಮಗಳನ್ನು ತೋರ್ಪಡಿಸುವದರ ಮೂಲಕವಾಗಿ ತಮ್ಮ ಪ್ರಸಂಶೆಯನ್ನು ವ್ಯಕ್ತಪಡಿಸಿದ್ದರು. ಏರ್ಪಡಿಸಲಾಗಿದ್ದ ಮತ್ತೊಂದು ಸಂಗತಿಯೆಂದರೆ ಲೇವಿಯರಿಂದ ಒಬ್ಬರಾದಂತೆ ಮತ್ತೊಬ್ಬರಿಂದ ಸರಧಿಯ ಪ್ರಕಾರವಾದ ದಾವೀದನು ಆ ಸಂದರ್ಭಕ್ಕೆ ರಚಿಸಿದ ಕೆಲವು ಕೀರ್ತನೆಗಳ ವಿವಿಧ ಭಾಗಗಳ ಪಠನೆಗಳಿದ್ದವು. ಇದು 24ನೇ ಕೀರ್ತನೆಯಾಗಿದ್ದು ಈ ಪಾಠದ ಒಂದು ಭಾಗವಾಗಿರುವದು.

ಅರಸನಾದ ದಾವೀದನು ತನ್ನ ಪರಮಾನಂದವನ್ನು ತೋರ್ಪಡಿಸುವದರಲ್ಲಿ ಇತರರೊಡನೆ ಕೂಡಿಕೊಂಡಿದ್ದು, ದೇವರ ಮುಂದೆ ಕುಣಿಯುತ್ತಿದ್ದನು. ಸಂಗೀತಕ್ಕನುಸಾರ ಲಯಬದ್ಧವಾಗಿ ಗಂಭೀರವಾದ ಹೆಜ್ಜೆಯನ್ನಿಟ್ಟು ಮುಂದೆ ಸಾಗುವ ಪದ್ಧತಿಯು ಪೌರಾತ್ಯ ದೇಶಗಳಲ್ಲಿ ಈ ದಿನಗಳಲ್ಲಿಯೂ ಸಹ ನಡೆಯುವಂಥ ಒಂದು ಸಾಮಾನ್ಯವಾದ ಪದ್ಧತಿಯೆಂದು ತೋರುತ್ತದೆ. ಭಾರತ ದೇಶದಲ್ಲಿನ ಕ್ರೈಸ್ತ ಪರಿಶ್ರಮಿಗಳ ಸಮ್ಮೇಳನದ ಒಂದು ಕೂಟದಲ್ಲಿ ಇಂಥ ಒಂದು ನರ್ತನವಿದ್ದು ಅದು ಎಷ್ಟೋ ಗಂಭೀರವಾಗಿಯೂ ಸೊಗಸಾಗಿಯೂ ಕಾಣುತ್ತಿತ್ತೆಂದು ಶ್ರೀಯುತರಾದ ಕ್ಲಾರ್ಕ್‌ಯೆಂಬುವರು ನಮಗೆ ತಿಳಿಸಿರುವರು.

ಆ ಭವ್ಯವಾದ ಮೆರವಣಿಗೆಯು ಯೆರೂಸಲೇಮ್ ನಗರವನ್ನು ಸಮೀಪಿಸುತ್ತಿರುವಾಗ ಅದು ಆ ನಗರದ ಹೆಂಗಸರಿಂದ ಸಂತೋಷಸಂಭ್ರಮದೊಡನೆ ಎದುರುಗೊಂಡಿತ್ತು. ಅವರಲ್ಲಿ ಅರಸನಾದ ಸೌಲನ ಮಗಳೂ ದಾವೀದನ ಹೆಂಡತಿಯೂ ಆಗಿದ್ದ ಮೀಕಲಳು ಮುಖ್ಯಸ್ಥಾನದಲ್ಲಿದ್ದಳು. ಆದರೆ ಅದು ಹೀಗಿರದೆ, ಆಕೆಯು ತಿರಸ್ಕರಿಸುವವಳೂ ಹೆಮ್ಮೆಯ ಮನೋಭಾವದವಳೂ ಆಗಿದ್ದಳು. ಅವಳು ಅರಸನಾದ ಸೌಲನ ಮಗಳಾಗಿದ್ದಳಲ್ಲವೇ? ಆಕೆಯ ಪತಿಯಾದ ದಾವೀದನು ಬಡ ಕುರುಬನಾಗಿದ್ದನಲ್ಲವೇ, ಅವನು ಆನಂತರ ಒಬ್ಬ ಬಹಿಷ್ಕೃತನಾಗಿ –ದ್ದನಲ್ಲವೇ? ಆತನು ಮನೆಗೆ ಬಂದಾಗ ತಾನು ಮಂಜೂಷವನ್ನು ತರುವ ಸಂಬಂಧದಲ್ಲಿ ಸಂತೋಷವನ್ನು ತೋರ್ಪಡಿಸಿದ್ದಕ್ಕೆ ಆಕೆಯು ಆತನನ್ನು ಟೀಕಿಸಿದ್ದಳು. ಅದು ಅಗೌರವವಾದುದೆಂದು ಹೇಳಿ ಆತನನ್ನು ಗದರಿಸಿದ್ದಳು. ಅರಸನಾದ ದಾವೀದನು ದೇವರು ಆಕೆಯ ತಂದೆಯಿಂದ ರಾಜ್ಯವನ್ನು ತೆಗೆದುಹಾಕಿ ಅದನ್ನು ತನಗೆ ಕೊಟ್ಟಿರುವನೆಂದೂ ಮತ್ತು ಹೀಗೆ ತಾನು ದೇವಾನುಗ್ರಹವನ್ನು ಹೊಂದಿದ್ದು ಹೀಗಾಗಿ ಆತನನ್ನು ಅವಲಂಬಿಸಿಕೊಂಡಿರುವದಾಗಿ ಆಕೆಗೆ ನೆನಪು ಮಾಡಿಕೊಟ್ಟಿದ್ದನು. ಅಲ್ಲದೆ ಆ ಹೆಮ್ಮೆಯ ಹೆಂಗಸನ್ನು ಆನಂತರ ಆಕೆಯು ತಾನಿದ್ದಂತೆಯೇ ಇರುವದಕ್ಕಾಗಿ ಬಿಟ್ಟುಬಿಟ್ಟಿದ್ದನು, ಆಕೆಯು ಅಂದಿನಿಂದ ಮಕ್ಕಳಿಲ್ಲದೆ ಹೋಗಿದ್ದಳೆಂಬ ಒಂದೇ ಒಂದು ಹೇಳಿಕೆ ಇರುವುದು.

ಆ ಕೀರ್ತನೆಯು ಪ್ರವಾದನೆಯಾಗಿತ್ತು

ಆ ಮಂಜೂಷವು ಕ್ರಿಸ್ತನನ್ನು ಸೂಚಿಸುವದಾಗಿದ್ದು, ಆತನಲ್ಲಿ ಜ್ಞಾನ ದೇವಬಲಗಳು ಅಡಗಿದ್ದು, ಮನುಷ್ಯರೆಲ್ಲರಿಗೆ ಇರುವಂಥ ದೇವಾಶೀರ್ವಾದವು ಆತನಲ್ಲಿಯೇ ಕೇಂದ್ರೀಕೃತ–ವಾಗಿರುವದು; ಹೀಗಾಗಿ ಮಂಜೂಷವನ್ನು ನಗರಕ್ಕೆ ತರುವಂಥದ್ದು ಒಂದು ಪ್ರಮಾಣದಲ್ಲಿ ನಾವು ಕ್ರಿಸ್ತನನ್ನು ಸ್ವೀಕರಿಸುವದನ್ನು ಹೋಲುವದು. ಇಂಥವರೆಲ್ಲರೂ ಗ್ರಹಿಸಿಕೊಂಡಿರುವದೇನಂದರೆ "ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು;" ಅಂದರೆ ಎಲ್ಲಾ ಒಳ್ಳೆಯ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ತಂದೆಯಿಂದ ಮಗನ ಮೂಲಕವಾಗಿ ಇಳಿದು ಬರುತ್ತದೆಂಬದೇ. ಲೋಕವೂ ಅದರ ನಿವಾಸಿಗಳೆಲ್ಲರೂ ಈ ಆಶೀರ್ವಾದಕ್ಕೆ ಒಳಪಟ್ಟವರಾಗಿರುವರು.

ದೇವರು ಅತೃಪ್ತ ಜನಸಾಗರದ ಮಧ್ಯದಲ್ಲಿ ಅಂದರೆ ಅವ್ಯವಸ್ಥಿತರ ಮತ್ತು ದೇವರಲ್ಲಿ ಹೊಂದಾಣಿಕೆಯಿಲ್ಲದಂಥ ಶಾಂತಿನೆಮ್ಮದಿಗಳಿಲ್ಲದ ಜನಸ್ತೋಮದ ಮಧ್ಯದಲ್ಲಿ ತನ್ನ ನೂತನ ವ್ಯವಸ್ಥಾಪನಾ ಕ್ರಮವನ್ನು ಸ್ಥಾಪಿಸುತ್ತಲಿರುವನು. ಆತನು ನಮ್ಮನ್ನು ತನ್ನ ಪರಿಶುದ್ಧ ಪರ್ವತಕ್ಕೆ, ಅಂದರೆ ತನ್ನ ಪರಿಶುದ್ಧ ರಾಜ್ಯಕ್ಕೆ ಏರಿಬಂದು ಆತನ ಪರಿಶುದ್ಧ ಸ್ಥಳದಲ್ಲಿ ಅಂದರೆ ಆತ್ಮಿಕವಾದ ದೈವಸ್ವಭಾವದಲ್ಲಿ ಸ್ಥಾಪಿತಗೊಳ್ಳಬೇಕೆಂದು ಆಹ್ವಾನಿಸುತ್ತಿರುವನು. ಕೆಲವು ಷರತ್ತುಗಳ ಹೊರತುಪಡಿಸಿ ಯಾರು ಈ ವರ್ಗದವರಾಗದಂತೆ ಆತನು ವಿಧಿಸಿರುವನು; ಅಂದರೆ ಒಂದು ಶುದ್ಧ ಹೃದಯ, ಒಂದು ನಿಷ್ಕಾವಂತ ಹೃದಯ ಮತ್ತು ನಿರ್ಮಲ ಹಸ್ತವುಳ್ಳವರು, ತಮ್ಮ ಉತ್ತಮ ಸಾಮರ್ಥ್ಯಕ್ಕನುಸಾರವಾಗಿ ನೀತಿಯುಳ್ಳ ಜೀವಿತನಡೆಸುತ್ತಿರುವವರ ಹೊರತು ಯಾರೂ ಆ ವರ್ಗದವರಾಗ ಬಾರದೆಂಬ ಷರತನ್ನು ವಿಧಿಸಿರುವನು. ಇವರೆಲ್ಲರೂ ದೇವರಿಗೆ ನಿಷ್ಕಾವಂತರಾಗಿರಲು ಶಪತಹೊಂದಿರಬೇಕೆಂಬುದನ್ನು ಅಪೇಕ್ಷಿಸಲಾಗಿರುವದು. ಇದನ್ನು ಆತನೊಡನೆ ಮಾಡಿಕೊಂಡ ತಮ್ಮ ಒಡಂಬಡಿಕೆಯೆಂಬ ಶೈಲಿಯಲ್ಲಿ ಹೇಳಲಾಗಿರುವದು.

ಈ ಒಡಂಬಡಿಕೆಮಾಡಿಕೊಂಡವರಲ್ಲಿ ಯೇಸುವು ಮೊದಲಿಗನಾಗಿದ್ದನು; ಮತ್ತು ಕ್ರೈಸ್ತಸಭೆಯರೆಲ್ಲರೂ ಆತನ ರಾಜ್ಯದಲ್ಲಿ ಆತನೊಡನೆ ಇರಬೇಕಾದಲ್ಲಿ ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕಾಗುವದು. ಇವರು ಅಸತ್ಯದ ಕಡೆಗೆ ತಮ್ಮ ಅತ್ಮವನ್ನು ಎತ್ತದೆ [ತಿರುಗಿಸದೆ], ವೋಸಪ್ರವಾಣ ಮಾಡದಂಥವರಾಗಿರಬೇಕು. ತನ್ನೊಡನೆ ಒಡಂಬಡಿಕೆಯನ್ನು ಮಾಡಿಕೊಂಡವರೆಲ್ಲರಿಂದ ದೇವರು ಇವುಗಳನ್ನು ಬಯಸುವನು. ಕೇವಲ ಇಂಥವರೇ ದೇವರಾಶೀರ್ವಾದವನ್ನು ಪಡೆಯುವವರು. ಅಲ್ಲದೆ ಕೇವಲ ಇಂಥವರಿಗೇ ಕ್ರಿಸ್ತನ ಮೂಲಕವಾಗಿ ಆತನ ನೀತಿಯನ್ನು ಒದಗಿಸಲಾಗುವದು [ಅಥವಾ ಹೊರಿಸಲಾಗುವದು].

ಈ ಪಾಠವನ್ನು ಇಂದಿಗಿಂತಲೂ ಮಿಗಿಲಾಗಿ ಬೇರೆ ಯಾವ ಕಾಲದಲ್ಲಿಯೂ ಮನವರಿಕೆಮಾಡಿಕೊಡುವಂಥ ಅಗತ್ಯವಿದ್ದಂತೆ ತೋರುವದಿಲ್ಲ. ಈ ದಿನದಲ್ಲಿ ಅದೆಷ್ಟು ಮಂದಿ ಯಜ್ಞದ ಮೂಲಕವಾಗಿ ಒಡಂಬಡಿಕೆ ಮಾಡಿಕೊಂಡವರಾಗಿ ದೇವರೊಂದಿಗೆ ಪ್ರತಿಜ್ಞೆತೆಗೆದುಕೊಂಡಿದ್ದೇವೆಂದು ಅರಿಕೆ ಮಾಡಿದಾಗ್ಯೂ ಇದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇಲ್ಲವೇ ತಮ್ಮ ಪ್ರತಿಜ್ಞೆಯನ್ನು ಪಾಲಿಸದೇ ಇರುವರು. ಅದೆಷ್ಟು ಜನರು ತಮ್ಮ ನಂಬಿಕೆಯ ಸೂತ್ರದ ಬಗ್ಗೆ ತಪ್ಪಾಗಿ ಮಾತಾಡುತ್ತಿದ್ದೇವೆಂದು ಅರಿಕೆಮಾಡಿದವರಾಗಿ ತಾವು ಯಾವುದನ್ನು ಬಹಿರಂಗವಾಗಿ ತಮ್ಮ ನಂಬಿಕೆಯೆಂದು ಪ್ರಕಟಮಾಡಿ ಹೇಳಿರುವರೋ ಅದನ್ನು ರಹಸ್ಯವಾಗಿ ಅಲ್ಲಗಳೆಯುತ್ತಿರುವರು! ಖಂಡಿತವಾಗಿಯೂ ಇಂಥಾ ಒಂದು ನಡವಳಿಕೆಯು ದೇವರ ದೃಷ್ಟಿಯಲ್ಲಿ ನಿಂದನೀಯವಾಗಿ– ದ್ದುದಲ್ಲದೆ ಇಂಥವರು ದೇವರರಾಜ್ಯದವರಾಗಿರುವದನ್ನು ನಿರೀಕ್ಷಿಸಲು ಸಾಧ್ಯವಾಗದು.

ಆನಂತರ ಕೀರ್ತನೆಯಲ್ಲಿನ ಒಂದು ಪ್ರಕಟಣೆಯು ಇದನ್ನು ಅನುಸರಿಸಿಕೊಂಡುಹೋಗುವದು ಅದೇನಂದರೆ ಇಸ್ರಾಯೇಲ್ಯರ ಮಕ್ಕಳು ಯಾರಂದರೆ ಅವರು ದೇವರನ್ನು ಹುಡುಕುವಂಥವರೂ ಮಹಿಮೆಯುಳ್ಳ ಅರಸನು ಅಂದರೆ ಪರಾಕ್ರಮಶಾಲಿಯೂ ಅಧಿಕಾರವೂ ಉಳ್ಳವನಾಗಿದ್ದು ಪಾಪದಿಂದ ಮತ್ತು ಅದರ ಆಧಿಕಾರ ಹೊಂದಿರುವ ಮರಣದಿಂದ ಬಿಡಿಸಲು ಸಮರ್ಥನೂ ಆಗಿರುವವನಾದ ದೇವರು ಒಳಗೆ ಬರಬೇಕೆಂದು ವಿಜ್ಞಾಪಿಸುವಂಥವರೂ ಆಗಿರುವರು. ನಾವು ಈಗಲೂ ಈ ಮಹಿಮೆಯುಳ್ಳ ಅರಸನ ಪ್ರವೇಶವನ್ನು ಈ ಪದದ ಪೂರ್ಣವಾದ ಅರ್ಥದಲ್ಲಿ ಕಾದುಕೊಂಡಿರುತ್ತೇವೆ. ಲೋಕ ಸಂಬಂಧವಾಗಿ ತಾನು ಉರಿಯುವ ಅಗ್ನಿಯಲ್ಲಿ ಅಂದರೆ "ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವ" ಕಾಲದಲ್ಲಿ ತೋರ್ಪಡಿಸಿಕೊಳ್ಳುವದಾಗಿ ಸಾರಿ ಹೇಳಿರುವನು. ಅನೇಕ ಸತ್ಯವೇದ ವಿದ್ಯಾರ್ಥಿಗಳು ಈಗಾಗಲೇ ಭೀಕರವಾದ ಯುದ್ಧವು ಹಬ್ಬುತ್ತಿರುವಾಗ ಈ ಸಂಕಟವು ಈಗಾಗಲೇ ಆರಂಭಗೊಳ್ಳುತ್ತಿದ್ದು ಇದರ ಪರಿಣಾಮವಾಗಿ ಹತ್ತಿರದ ಭವಿಷ್ಯತ್ತಿನಲ್ಲಿ ತೀಕ್ಷ್ಣವಾದ ಅರಾಜಕತೆಯನ್ನು ನಿರೀಕ್ಷಿಸುತ್ತಿರುವರು. ಆಗ ಇದಕ್ಕಿಂತಲೂ ಚಿಕ್ಕದಾದ ಸ್ವರ ಅಂದರೆ ದೈವಿಕ ಪ್ರಭಾವವಾದ ರಕ್ಷಕನ ಬಲಪರಾಕ್ರಮ ಶೀಘ್ರದಲ್ಲಿ ಬರುವದು; ಅದು ಪಾಪ ಮರಣ ಹಾಗು ಒಂದು ಸಾವಿರ ವರುಷಗಳವರೆಗೆ ಬಂಧಿಸಲ್ಪಡಲಿರುವ ಸೈತಾನನಿಂದ ಬಿಡುಗಡೆ ಮಾಡುವುದು.

*****

ದಾವೀದನಿಗಾದ ದೇವರ ವಾಗ್ದಾನಗಳು

ರೀಪ್ರಿಂಟ್ಸ್ ಪುಟ 2010

2 ಸಮುವೇಲ 7:4–16

"ಯೆಹೋವನೇ, ನಿನ್ನ ಮರೆಹೊಕ್ಕಿದ್ದೇನೆ [ಅಥವಾ, ನಿನ್ನಲ್ಲಿ ಭರವಸವಿಟ್ಟಿದ್ದೇನೆ]; – ಕೀರ್ತನೆ 71:1

ದಾವೀದನು ಈಗ ತನ್ನ ರಾಜ್ಯದಲ್ಲಿ ಬಹುತೇಕ ಸ್ಥಿರಗೊಂಡವನಾಗಿ ಏಳಿಗೆಯನ್ನು ಹೊಂದಿದ್ದು ದೇಶವು ವಿಶ್ರಾಂತಿ ನೆಮ್ಮದಿಯ ಕಾಲವನ್ನು ಅನುಭವಿಸುತ್ತಿತ್ತು; ಜನರು ಐಕ್ಯ– ವಾಗಿದ್ದರು ಮತ್ತು ಮಂಜೂಷವು ಯೆರೂಸಲೇಮಿನಲ್ಲಿದ್ದು ದೇಶದಲ್ಲಿ ಧಾರ್ಮಿಕ ಉತ್ಸಾಹವು ಪುನಶ್ಚೇತನಗೊಂಡಿತ್ತು. ಈ ಎಲ್ಲಾ ಆಶೀರ್ವಾದಗಳಿಗೆ ದಾವೀದನು ಕೃತಜ್ಞತೆಯುಳ್ಳವನಾಗಿದ್ದು ಇದಕ್ಕೆ ಕೆಲವು ಪ್ರತ್ಯಕ್ಷ ಪುರಾವೆಗಳನ್ನು ನೀಡಲು ಬಯಸಿದ್ದನು. ತಾನು ದೇವದಾರಿನ ಅರಮನೆಯಲ್ಲಿ ವಾಸಿಸುತ್ತಿರುವದಾಗಿಯೂ ಆದರೆ ದೇವರ ಪ್ರಸನ್ನತೆಯ ಸೂಚಕವಾದ ದೇವಮಂಜೂಷವು ಸಂಚಾರಿತ ಡೇರೆಯಲ್ಲಿ ಅಥವಾ ಗುಡಾರದಲ್ಲಿ ಇರುವದೆಂಬದಾಗಿ ಆಲೋಚಿಸಿಕೊಂಡಿದ್ದನು. ಹೀಗಾಗಿ ಅನುಕೂಲಕವಾಗಿ ತೋರು ವಂಥ ಪ್ರಸ್ತುತ ಅವಕಾಶವನ್ನು ಬಳಸಿಕೊಂಡು ದೇವ ಪ್ರಸನ್ನತೆಯ

ಸಂಕೇತವು ನಿರಂತವಾಗಿ ನೆಲೆಗೊಳ್ಳುವಂತಾಗಲು ಒಂದು ಮಂದಿರವನ್ನು ನಿರ್ಮಿಸುವಂಥ ಯೋಚನೆಯನ್ನು ಕಲ್ಪಿಸಿಕೊಂಡಿದ್ದನು.

ಈ ಯೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡವನಾಗಿ ದಾವೀದನು ಪ್ರವಾದಿಯಾದ ನಾತಾನನೊಡನೆ ಸಮಾಲೋಚನೆ ಮಾಡಿದ್ದನು; ನಾತಾನನು ಆತನ ಘನತೆಯುಳ್ಳ ಉದ್ದೇಶವನ್ನು ಕಾರ್ಯಗತಗೊಳಿಸಲು ಪ್ರೋತ್ಸಾಹಿಸಿದ್ದನು. ಇಬ್ಬರು ಪುರುಷರು ದೇವರಿಗೆ ಉತ್ಕೃಷ್ಟವಾಗಿ ಗೌರವಿಸಿ ಭಯಭಕ್ತಿಯನ್ನು ಸಲ್ಲಿಸುವ ಬಯಕೆಯುಳ್ಳವರಾಗಿದ್ದು, ಹೀಗೆ ಮಾಡುವ ಸಮಯವು ಬಂದಿರುವದಾಗಿ ಅಲೋಚಿಸಿಕೊಂಡಿದ್ದರು. ಹೇಗೂ ಅವರು ಇದನ್ನು ತಪ್ಪಾಗಿ ಗ್ರಹಿಸಿಕೊಂಡಿದ್ದರು; ಕಾರಣ ದೇವರು ಆ ರಾತ್ರಿ ನಾತಾನನಿಗೆ –"ಹೋಗಿ ನನ್ನ ಸೇವಕನಾದ ದಾವೀದನಿಗೆ ಹೇಳು" ಮುಂತಾದವುಗಳನ್ನು ತೋರಿಸಿ ಹೇಳಿದ್ದನು.

ದೇವರು ದಾವೀದನಿಗೆ ತಾನು ಹೆಚ್ಚು ಸ್ಥಿರವಾದ ನಿವಾಸವನ್ನು ನಿರ್ಮಿಸುವ ಸಮಯವು ಇನ್ನೂ ಬಂದಿರುವದಿಲ್ಲವೆಂದೂ ಅಲ್ಲದೆ ತಾನು ಈ ಅಭಿಪ್ರಾಯದಲ್ಲಿ ಯಾವ ಅಪ್ಪಣೆಯನ್ನೂ ಇನ್ನೂ ನೀಡಿಲ್ಲವೆಂದೂ ಇಲ್ಲವೇ "ನೀನು ಯಾಕೆ ಇನ್ನೂ ನನಗಾಗಿ ದೇವದಾರಿನ ಒಂದು ಮಂದಿರವನ್ನು ಕಟ್ಟಿಲ್ಲ" (ವಚನ 7) ಎಂದು ವಿಚಾರಿಸಿಲ್ಲವೆಂದು ತೋರಿಸಿಕೊಟ್ಟಿದ್ದನು. ದೇಶವು ಆ ಸಮಯದಲ್ಲಿ ಶಾಂತಿ ನೆಮ್ಮದಿಯ ಕಾಲವನ್ನು ಅನುಭವಿಸುತ್ತಿದ್ದಾಗ್ಯೂ, ಅಲ್ಲಿ ವಶಪಡಿಸಿಕೊಳ್ಳುವ ಹಾಗು ವ್ಯವಸ್ಥಾಪನೆಯ ವಿಷಯದಲ್ಲಿ ಇನ್ನೂ ಹೆಚ್ಚು ಮಾಡುವದಿದ್ದು, ಇವುಗಳು ಪ್ರಸ್ತಾಪಿತವಾದ ಕಾರ್ಯದಲ್ಲಿ ಅಗತ್ಯವಾಗಿ ಮಧ್ಯೆ ಪ್ರವೇಶಿಸುವದಾಗಿತ್ತು; ಜೊತೆಗೆ ದೇವಾದೇಶದ ಮೇರೆಗೆ ಮೊದಲು ವಾಗ್ದತ್ತ ದೇಶವನ್ನು ಅದರ ಶತ್ರುಗಳಿಂದ ವಿಮೋಚಿಸಿ ಅದನ್ನು ಸಂಪೂರ್ಣವಾಗಿ ವಶಮಾಡಿಕೊಳ್ಳುವ ವರೆಗೂ ಆ ದೇಶವನ್ನು ಬಹು ಸ್ಥಿರವಾಗಿ ಸ್ಥಾಪನೆಗೊಂಡಿರುವದೆಂದು ಪರಿಗಣಿಸಲಾಗದು. ಅವರು ಇದನ್ನು ನಿರ್ವಹಿಸಿದಾಗ ತಾವು ತಮ್ಮನ್ನು ಸ್ಥಿರವಾಗಿ ನೆಲೆಗೊಂಡವರೆಂದು ಪರಿಗಣಿಸಿಕೊಂಡವರಾಗಿ ದೇವರಿಗೆ ಹೆಚ್ಚು ನಿತ್ಯವಾದ ಒಂದು ನಿವಾಸವನ್ನು ಕಟ್ಟಬಹುದಿತ್ತು.



ದಾವೀದನು ಕಣವನ್ನು ಕೊಂಡುಕೊಳ್ಳುತ್ತಿರುವದು

ಈ ಸಿದ್ಧತಾ ಕಾರ್ಯಕ್ಕೆ ದಾವೀದನ ಸಂಪೂರ್ಣವಾದ ಆಳ್ವಿಕೆಯ ಕಾಲದ ಅಗತ್ಯವಿರುವದೆಂಬುದನ್ನು ನಂತರದಲ್ಲಿ ತೋರಿಸಿಕೊಡಲಾಗಿತ್ತು. [ಮಂದಿರವು ಕಟ್ಟಲ್ಪಡುವ] ದೇವರ ನೇಮಿತ ಸಮಯವು ಇನ್ನೂ ಬಂದಿರಲ್ಲಿಲ್ಲವೆಂದೂ, ಇಲ್ಲವೇ ಇದು ದಾವೀದನ ಕಾಲದಲ್ಲಿ ಸಂಭವಿಸುವದಿಲ್ಲವೆಂದೂ ಆದರೆ ಉತ್ತರಾಧಿಕಾರಿಯಾದ ಆತನ ಮಗನು ತನ್ನ ಶಾಂತಿ ಸಮೃದ್ಧಿಯ ಕಾಲದಲ್ಲಿ ಅದನ್ನು ಕಟ್ಟುವನಾದರೂ ದಾವೀದನ ಉದ್ದೇಶವು ಪ್ರಸಂಶಿಸಲ್ಪಟ್ಟು ಆತನಿಗೆ ತನ್ನ ವೈರಿಗಳನ್ನು ಸ್ವಾದೀನ–ಮಾಡಿಕೊಂಡು ದೇಶಾಡಳಿತವನ್ನು ಕ್ರಮಪಡಿಸಿ ಮಂದಿರದ ನಿರ್ಮಾಣಕ್ಕಾಗಿ ಸಮಾನು ಸರಂಜಾಮುಗಳನ್ನು ಕಲೆಹಾಕುವದರ ಮೂಲಕವಾಗಿ ಮಾರ್ಗವನ್ನು ಸಿದ್ಧಮಾಡಲು ಅನುಮತಿಸ–ಲಾಗಿತ್ತು. ಈ ಕಾರ್ಯಕ್ಕಾಗಿಯೇ ದಾವೀದನು ನೇಮಕ–ಗೊಂಡಿದ್ದನು; ಆತನು ಒಬ್ಬ ಶಾಂತಿ ಪ್ರಿಯನಾಗಿದ್ದರೂ [ಸಂದರ್ಭದ] ಅಗತ್ಯತೆಯ ಕಾರಣದಿಂದ ಒಬ್ಬ ಹೋರಾಟದ ಮನುಷ್ಯನಾಗಿದ್ದನು.

ದಾವೀದನ ಸಿಂಹಾಸನಕ್ಕೆ ಬಾಧ್ಯಸ್ಥನಾದ ತನ್ನ ಮಗನ ಸಮೃದ್ಧಿಯ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಈ ವಾಗ್ದಾನದಲ್ಲಿ ಸೊಲೋಮೋನನು ನೆರವೇರಿಸುವದಕ್ಕಿಂತಲೂ ಹೆಚ್ಚು ಸಂಗತಿಗಳು ಅನ್ವಯವಾಗಿರುವದೆಂಬದು ಸ್ಪಷ್ಟವಾಗಿತ್ತು. ಸೊಲೊಮೋನನ ಆಳ್ವಿಕೆಯು ಹಿಂದೆಂದೂ ಕಂಡಿಲ್ಲದ ಸಮೃದ್ಧಿಯ ಕಾಲವಾಗಿದ್ದು ಆತನು ದೇವರಿಗೆ ಮನೆಯನ್ನು ಕಟ್ಟಿದು ನಿಜವಾದರೂ ಆತನ ರಾಜ್ಯವು ಕೊನೆಗೊಂಡು ಮಹಿಮೆಯು ನಿರ್ಗಮಿಸಿ ದೇವಾಲಯವು ನಾಶವಾಗಿತ್ತು. ಆದರೆ ದಾವೀದನಿಗೆ ಮಾಡಿದ ವಾಗ್ದಾನವು–"ನಿನ್ನ ಮನೆಯೂ ಅರಸುತನವೂ ಸದಾಕಾಲ ಸ್ಥಿರವಾಗಿರುವವು; ನಿನ್ನ ಸಂತಾನವು ಶಾಶ್ವತವಾಗಿರುವದು" ಎಂದಾಗಿತ್ತಷ್ಟೆ. – ವಚನ 16

ವಾಸ್ತವಾಂಶವೆಂದರೆ ಮಾಡಲ್ಪಟ್ಟ ವಾಗ್ದಾನವು ಅಥವಾ ಪ್ರವಾದನೆಯು ಎರಡು ರೀತಿಯಲ್ಲಿ ಅನ್ವಯಗೊಂಡಿದ್ದು ಸೊಲೊಮೋನನು ಮತ್ತು ಆತನು ನಿರ್ಮಿಸಲಿದ್ದ ದೇವಾಲಯದ ಬಗ್ಗೆ ಕೇವಲ ಭಾಗಶಃ ಪ್ರಸ್ತಾವನೆಯಾಗಿದ್ದಾದರೂ ಕಡೆಯಲ್ಲಿ ದಾವೀದನ ದಿವ್ಯ ಕುಮಾರನೂ ಒಡೆಯನೂ ಆದ ನಮ್ಮ ಕರ್ತನಾದ ಯೇಸು ಕ್ರಿಸ್ತನ ರಾಜ್ಯವು ನಿಜವಾಗಿಯೂ ನಿತ್ಯವಾದ ರಾಜ್ಯವಾಗಿದ್ದು ಆತನ ಆಳ್ವಿಕೆಗೆ ಅಂತ್ಯವಿರುವದಿಲ್ಲ. ಅಲ್ಲದೆ ಸುವಾರ್ತಾ ಯುಗದ ಸಭೆಯು ಆ ಮಹಿಮೆಯುಳ್ಳ ಆತ್ಮಿಕ ದೇವಾಲಯವಾಗಿದ್ದು, ಅದು ತನ್ನ ಶಿರಸ್ಸಾದ ಕರ್ತನೊಡನೆ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಮಹಿಮಾಪದವಿ ಹೊಂದುವದಿದ್ದು ಆ ಸಾವಿರ ವರುಷದ [ಆಳ್ವಿಕೆಯ] ಕಾಲದಲ್ಲಿ ಸಮಸ್ತ ಲೋಕವು ಆತನನ್ನು ಆರಾಧಿಸುವದು. ಯುದ್ಧ ಪುರುಷನಾದ ದಾವೀದನ ಆಳ್ವಿಕೆಯು ಈ ಸುವಾರ್ತಾ ಯುಗದ ಸಿದ್ಧತೆಯ ಕಾರ್ಯವನ್ನು ಮುನ್ಸೂಚಿಸುವದು. ಅದೇನಂದರೆ ಐಶ್ವರ್ಯ ಜ್ಞಾನ ಸಮಾಧಾನ ಮತ್ತು ಸಮೃದ್ಧಿಗಳ ಗುಣವಿಶೇಷತೆಗಳಿಂದ ಕೂಡಿದ ಸೊಲೊಮೋನನ ಆಳ್ವಿಕೆಯು ಕ್ರಿಸ್ತನ ಮಹಿಮೆಯುಳ್ಳ ಆಳ್ವಿಕೆಯನ್ನು ಸೂಚಿಸುವಲ್ಲಿ, ದಾವೀದನ ಆಳ್ವಿಕೆಯು ಪಾಪಕ್ಕೆ ವಿರುದ್ಧವಾದ ದೇವಜನರ ಹೋರಾಟಗಳು, ಆತ್ಮಿಕ

ದೇವಾಲಯಕ್ಕಾಗಿ ಜೀವವುಳ್ಳ ಕಲ್ಲುಗಳನ್ನು ಸಿದ್ಧಮಾಡುವದನ್ನು ಮುಂದಾಗಿ ಸೂಚಿಸುವದು.

ಅರಸನ ಅರಮನೆ ಹಾಗು ಇತರ ಎಲ್ಲಾ ಕಟ್ಟಡ–ಗಳಿಗಿಂತಲೂ ವೈಭವಯುತವಾಗಿರುವಂಥ, ಒಂದು ಮನೆಯನ್ನು ದೇವರಿಗಾಗಿ ಕಟ್ಟುವದು ದಾವೀದನ ಉದ್ದೇಶವಾಗಿತ್ತು, ಅದು ಹೀಗೆ ದೇವರ ಮತ್ತು ಆತನ ಪ್ರಸನ್ನತೆಯನ್ನು ಸೂಚಿಸುವ ಸಂಕೇತದ ಕಡೆಗೆ ಜನರ ಪರವಾಗಿರುವ ಉತ್ಕೃಷ್ಟವಾದ ಭಯಭಕ್ತಿಯನ್ನು ವ್ಯಕ್ತಗೊಳಿಸುವದಾಗಿದ್ದು, ಮತ್ತು ಇದಕ್ಕಾಗಿ ದೊರೆತ ದೇವರ ಅನುಮೋದನೆ ಹಾಗು ನಂತರದ ಆ ಉದಾರ ಉದ್ದೇಶದ ಕಾರ್ಯಗತಗೊಳಿಸುವಿಕೆ ಇವುಗಳು ಈ ದಿನದಲ್ಲಿ ಮನೋಹರವಾದ ದೇವಾಲಯದ ಕಟ್ಟಡದ ಮತ್ತು ಅದರ ಪೀಠೋಪಕರಣಗಳಿಗಾಗಿ ಕ್ರೈಸ್ತಸಭೆಯು ತನ್ನ ಆದಾಯದಲ್ಲಿನ ಒಂದು ಬಹು ದೊಡ್ಡ ಪಾಲು ವ್ಯಯಮಾಡುವದನ್ನು ಸಮರ್ಥಿಸಿಕೊಳ್ಳ ಸಲುವಾಗಿ ಉಲ್ಲೇಖ ಮಾಡಲಾಗುತ್ತಿರುವದು. ಆದರೆ ಈ ಸಂಗತಿಯು ಅಪೋಸ್ತಲರಿಗೂ ಹಾಗು ಆದಿ ಸಭೆಯವರಿಗೂ ಹೀಗೆ ಕಂಡಿರಲಿಲ್ಲವೆಂಬದು ಸ್ಪಷ್ಟ; ಯಾಕಂದರೆ ಅವರು ಮನೆ ಮನೆಗಳಲ್ಲಿ ಹಾಗು ಮೇಲುಪ್ಪರಿಗೆಗಳಲ್ಲಿ [ಆರಾಧನೆಗಾಗಿ] ಸಂಧಿಸುತ್ತಿದ್ದು ಯಾವ ಸಭೆಯ ಕಟ್ಟಡವನ್ನು ನಿರ್ಮಿಸಿರಲಿಲ್ಲ; ಕೇವಲ ಅವರು ಕೂಡಿಕೊಳ್ಳಲು ಸರಳವಾದ ಕೆಲವು ಅನುಕೂಲಗಳುಳ್ಳ ಸ್ಥಳವನ್ನು ಕಂಡುಕೊಳ್ಳುತ್ತಿದ್ದರು. ಇಲ್ಲವೇ ಹಲವಾರು ಸ್ಥಳಗಳಲ್ಲಿ ಎತ್ತರವಾದ ಗೋಪುರಗಳು, ನಾದಕೊಡುವ ಗಂಟೆಗಳು, ಭವ್ಯವಾದ ರಾಗಮಾಲಿಕೆ [ಆರ್ಗನ್], ಸಜ್ಜುಗೊಳಿಸಿದ ಪೀಠಗಳು, ಬಣ್ಣದ ಗಾಜಿನ ಕಿಟಕಿಗಳು, ಪ್ರಸಂಗ ಪೀಠದ ಮೂಲಕವಾದ ಸೊಗಸಿನ ಪ್ರವಚನಕಾರರು, ತರಬೇತಾದ ಗಾಯನ ಮಂಡಲಿಗಳು ಇವುಗಳಿಂದ ಕೂಡಿದ ಸೊಬಗಿನ ಕಟ್ಟಡಗಳನ್ನು ಒದಗಿಸಿಕೊಡುವಂಥದ್ದು ಸಭೆಯ ಕರ್ತವ್ಯವೆಂದು ಪವಿತ್ರ ದಾಖಲೆಗಳಲ್ಲಿ ಒಂದೇ ಒಂದು ಸೂಚನೆಯನ್ನೂ ನೀಡಲಾಗಿರುವದಿಲ್ಲ.

ಇಲ್ಲವೆ ಈ ದಿನದ ದೇವಾಲಯದ ಕಟ್ಟಗಳು ಹಾಗು ಪೀಠೋಪಕರಣಗಳನ್ನು ಸಮರ್ಥಿಸುವ ಯಾವ ಪೂರ್ವ ನಿದರ್ಶನವೂ ಇರುವದಿಲ್ಲ; ಯಹೂದ್ಯರ ಯುಗವು ಒಂದು ಛಾಯಾರೂಪದ ಕಾಲವಾಗಿತ್ತು; ಅದರ ದೇವಾಲಯ ಮತ್ತು ಅದರಲ್ಲಿನ ನೇಮಕಾತಿಗಳೆಲ್ಲವೂ ಬರಲಿರುವ ಉನ್ನತವಾದ ಆತ್ಮಿಕ ಸಂಗತಿಗಳಿಗೆ ಛಾಯಾರೂಪಗಳಾಗಿದ್ದವು; ಛಾಯಾರೂಪದ ದೇವಾಲಯದಲ್ಲಿ ಇರಿಸಲಾಗಿದ್ದ ಛಾಯರೂಪದ ಮಂಜೂಷವು ಮುಂದಿನ ಆತ್ಮಿಕ ಇಸ್ರಾಯೇಲ್ಯರ ಮಧ್ಯದಲ್ಲಿನ ದೇವ ಪ್ರಸನ್ನತೆಗೆ ಒಂದು ಸಂಕೇತವಾಗಿತ್ತು: ಅಲ್ಲದೆ ನಿಜರೂಪವು ಪ್ರತ್ಯಕ್ಷವಾದಾಗ ಛಾಯಾರೂಪಗಳು ಇಲ್ಲದಂತಾಗಿದ್ದವು.

ಮಿಗಿಲಾಗಿ, ಇಂದಿನ ಕ್ರೈಸ್ತ ದೇವಾಲಯಗಳು ದೇವರಿಗೆ ಯಾವ ವಿಧದಲ್ಲಿಯಾದರೂ ಮಹಿಮೆ ತರುವದಕ್ಕೆ ಬದಲಾಗಿ ಅಧಿಕವಾದ ಹೆಮ್ಮೆ ಮತ್ತು ತೋರ್ಪಡುವಿಕೆಗಳಾಗಿದ್ದು, ಇವು ಐಶ್ವರ್ಯವಂತರು ಹಾಗು ಪ್ರಭಾವಿಗಳನ್ನು ಆಕರ್ಷಿಸಿ ಅವರನ್ನು ಹಿಡಿದಿಟ್ಟುಕೊಳ್ಳುವ ಮತ್ತು ಬಡವರನ್ನು ಹೊರದೂಡವ ಸಲುವಾಗಿರುವದೆಂಬದು ಬಹು ಸ್ಪಷ್ಟವಾಗಿರುವದು. ಈ ಭೂಸಂಬಂಧದ ವೈಭವವನ್ನು ಪ್ರದರ್ಶಿಸುವ ತೋರಿಕೆಗಳಿಂದ ನಾವು ವಂಚಿತರಾಗದೇ ಇರೋಣ. ಆದರೆ ನಾವು ಇವುಗಳನ್ನು ದೂರವಿಟ್ಟವರಾಗಿ ಎಲ್ಲಿ ಕರ್ತನ ಹೆಸರಿನಲ್ಲಿ ಇಬ್ಬರು ಅಥವಾ ಮೂವರು ಕೂಡಿಬರುವರೋ ಅದು ದೇವ ಮಂದಿರವಾಗುವದೆಂಬುದನ್ನೂ ಹಾಗು ಅಲ್ಲಿಯೇ ಆತನ ಮಹಿಮೆಯು ಕಂಡುಬಂದು ಅದು ಅನುಭವಕ್ಕೆ ಬರುವದೆಂಬುದನ್ನು ಮರೆಯದಿರೋಣ. –ಯೋಹಾನ :23,24; ಮತ್ತಾಯ 18:20.

*****

ಕೃಪಾಪೂರ್ಣವಾದ ದೇವಕರೆ

ರೀಪ್ರಿಂಟ್ಸ್ ಪುಟ 1364ರಿಂದ ಆಯಲ್ಪಟ್ಟದ್ದು

ಯಾರು ಹೀಗೆ ದೇವಕರೆಗೆ ಕಿವಿಗೊಡುವರೊ ಅವರಿಗೆ ಜೀವವಾಗ್ದಾನ ಹಾಗು ಈಗಿನ ಸಮಾದಾನ ಸಂತುಷ್ಟಿಗಳಿಗಿಂತಲೂ ಮಿಗಿಲಾದ ಒಂದು ವಿಶೇಷ ವಾಗ್ದಾನವನ್ನು ನೀಡಲಾಗಿರುವದು–ಅದೇನಂದರೆ ನಂಬಿಕೆಯ ಮೂಲಕವಾಗಿ ಈ ವರವನ್ನು ಸ್ವೀಕರಿಸಿಕೊಳ್ಳುವಂಥದ್ದು; ಅದು ಹೀಗಿರುವದು–"ದಾವೀದನಿಗೆ ಖಂಡಿತವಾಗಿ ವಾಗ್ದಾನಮಾಡಿದ ಕೃಪಾವರಗಳನ್ನು ನಿಮಗೆ ಕೊಡುತ್ತೇನೆಂಬ ಒಡಂಬಡಿಕೆಯನ್ನು ನಿಮ್ಮೊಂದಿಗೆ ಮಾಡಿ–ಕೊಳ್ಳುವೆನು." [ಯೆಶಾಯ 55:3] {ಆತನು ಇಂಥವರೊಡನೆ ಒಂದು ಒಪ್ಪಂದವನ್ನು ಮಾಡಿಕೊಳ್ಳವನು ಅದೇನೆಂದರೆ–ತನ್ನ ಪ್ರಿಯ ಕುಮಾರನಿಗೆ ಸಂಬಂಧಿಸಿದಂಥ ನಿಶ್ಚಿತವೂ ಪರಿಶುದ್ಧವೂ ಆಗಿರುವ ಆ ವಾಗ್ದಾನಗಳಲ್ಲಿ ಪಾಲನ್ನು ಹೊಂದಬಹುದೆಂಬದೇ. ಅದೇನಂದರೆ ಆ ಪ್ರಿಯ ಕುಮಾರನ ರಾಜ್ಯಾಧಿಕಾರ, ಮುಂದೆ ಬರುವ ಲೋಕದಲ್ಲಿನ ಅಧಿಕಾರ ಮಹಿಮೆ ಇವುಗಳಲ್ಲಿ ಅವರು ಪಾಲನ್ನು ಹೊಂದಬಹುದೆಂಬ ವಿಷಯಕ್ಕೆ ಸಂಬಂಧಿಸಿದ ವಾಗ್ದಾನದಲ್ಲಿ ಅವರು ಪಾಲನ್ನು ಪಡಯುವರೆಂಬುವಂಥದ್ದೇ} ದಾವೀದನೆಂಬ ಹೆಸರು ಪ್ರಿಯನು ಎಂಬುದನ್ನು ಸೂಚಿಸುವದು; ಇದು ಇಲ್ಲಿ ದೇವರ ಪ್ರಿಯ ಕುಮಾರನಾದ ನಮ್ಮ ಕರ್ತನನ್ನು ಕುರಿತು ಉಲ್ಲೇಖಿಸುವದೆಂಬುದನ್ನು ಅಪೋಸ್ತಲನು ತೋರಿಸಿಕೊಟ್ಟಿರುವನು. (ಅಪೋಸ್ತಲರ ಕೃತ್ಯಗಳು 13:33–34) ಇಲ್ಲಿರುವಂತೆ ಕೆಲವು ಸಾರಿ ಪ್ರವಾದನೆಯಲ್ಲಿ ದಾವೀದನ ಹೆಸರನ್ನು ಆತನ ಪ್ರಿಯ ಕುಮಾರನಿಗೆ ಬಳಸಲಾಗಿರುವದಲ್ಲದೆ, ಕೀರ್ತನೆ 22:1, 17, 18ರಲ್ಲಿ ಉಲ್ಲೇಖಿಸಿರುವಂತೆ, ಇದು ಸ್ವತಃ ದಾವೀದನನ್ನೇ ನಮ್ಮ ಕರ್ತನಿಗೆ ಮಾದರಿಯಾಗಿ ಅನೇಕ ಸಾರಿ ಸೂಚಿಸಲಾಗಿರುವದು. ಮಿಗಿಲಾಗಿ ಇಲ್ಲಿ ಉಲ್ಲೇಖಿಸಲಾಗಿರುವ "ಖಂಡಿತವಾದ ಕೃಪಾವರಗಳು" ಅಥವಾ ಪರಿಶುದ್ಧ ವಾಗ್ದಾನಗಳು ನಮ್ಮ ಕರ್ತನಿಗೆ ಸಂಬಂಧಿಸಿದ್ದು, ಈ

ಸುವಾರ್ತಾಯುಗದಲ್ಲಿರುವ ನಾವು ಇದರಲ್ಲಿ ಪಾಲುಹೊಂದು–ವಂತೆ ಆಹ್ವಾನಿಸಲಾಗಿರುವ ವಾಗ್ದಾನಗಳು ಅರಸನಾದ ದಾವೀದನಿಗೆ ಮಾಡಿದಂಥವುಗಳಾಗಿದ್ದು (2 ಸಮುವೇಲ 7:8–16) ಇದು ಅಕ್ಷರಾರ್ಥದಲ್ಲಿ ಭಾಗಶಃ ನೆರವೇರಲ್ಪಟ್ಟಿರುವದು ಸ್ಪಷ್ಟವಾಗಿದ್ದಾಗ್ಯೂ ಇದರ ವಾಸ್ತವಾಂಶವು ಕ್ರಿಸ್ತನಲ್ಲಿರುವದು.

ಈ ಖಂಡಿತವಾದ ಕೃಪಾವರಗಳು ಅಥವಾ ದಾವೀದನಿಗೆ (ಕ್ರಿಸ್ತನಿಗೆ) ಸಂಬಂಧಿಸಿದ ಪರಿಶುದ್ಧವಾದ ಸಂಗತಿಗಳನ್ನು ಕೀರ್ತನೆ 89:20–37 ರಲ್ಲಿ ಸ್ಪಷ್ಟವಾಗಿ ವಿವರಿಸಲಾಗಿರುವದು. ಅದೇನಂದರೆ: (01) ಕರ್ತನು ಆತನನ್ನು ಒಬ್ಬ ದೊಡ್ಡ ಅರಸನನ್ನಾಗಿ ಅಭಿಷೇಕಿಸಿರುವನು ಹಾಗು ಆತನ ಸಿಂಹಾಸನವನ್ನು ಸೂರ್ಯ ಚಂದ್ರರು ಇರುವವರೆಗೂ ನಿರಂತರವಾಗಿ ಸ್ಥಾಪಿಸುವನೆಂಬದು; (02) ಯಾವ ಶತ್ರುವೂ ಆತನಿಂದ ಯಾವುದೇ ಪ್ರಯೋಜನವನ್ನು ಹೊಂದಬಾರದೆಂದೂ ಆದರೆ ಎಲ್ಲರೂ ಆತನಿಗೆ ಅಧೀನರಾಗಬೇಕೆಂಬದು; (03) ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವಂಥ ದೇವರ ಒಡಂಬಡಿಕೆಯು ಆತನಲ್ಲಿ ಸ್ಥಿರವಾಗಿದ್ದು ಆತನ ಆಳ್ವಿಕೆಯಲ್ಲಿ ಇದು ನೆರವೇರಲ್ಪಡುವದೆಂಬದು; (04) ಆತನ ಮಕ್ಕಳು ಆತನ ಆಳ್ವಿಕೆಯಲ್ಲಿ (ವಿಮೋಚಿತರಾಗಿ ಹೊಸದಾಗಿ ಹುಟ್ಟುವದರ ಮೂಲಕವಾಗಿ) ಎಂಥಾ ಸುಧಾರಣಾ ಶಿಸ್ತಿಗೆ ಒಳಪಡಬೇಕೆಂದರೆ ಇವುಗಳು ಅವರಿಗೆ ಅಗತ್ಯವಾದ ತಿದ್ದುಪಾಟನ್ನು ನೀಡಿ ನೀತಿಯಲ್ಲಿ ಸ್ಥಾಪಿತಗೊಳ್ಳುವಂತೆ ಮಾಡಬೇಕಿರುವದು; (05) ವಿಧೇಯ–ರಾಗಲು ಇಚ್ಛಿಸುವವರೆಲ್ಲರೂ ನೀತಿಶಿಕ್ಷೆಯಿಂದ ಪ್ರಯೋಜನ ಪಡೆದು ನಿರಂತರವಾಗಿ ನೆಲಗೊಳ್ಳುವಂತವರಾಗಬೇಕಿರುವದು; ಹೀಗೆ ಆತನು (ಕ್ರಿಸ್ತನು) ತನ್ನ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು.

*****

ದಾವೀದನೊಡನೆಯ ಒಡಂಬಡಿಕೆ

ರೀಪ್ರಿಂಟ್ಸ್ ಪುಟ 3258

2 ಸಮುವೇಲ 7:4–16

"ನಿನ್ನ ಸಿಂಹಾಸನವು ಶಾಶ್ವತವಾಗಿರುವದು" – 2 ಸಮುವೇಲ 7:16

ದಾವಿದನು ತನ್ನ ಮೊದಲ ಆರು ವರುಷಗಳ ಸಮಸ್ತ ಇಸ್ರಾಯೇಲ್ಯರ ಮೇಲಿನ ಆಳ್ವಿಕೆಯ ಕಾಲದಲ್ಲಿ ಆರಂಭಿಕ ದೇವಾನುಗ್ರಹದ ಅನುಸಾರ ಇಸ್ರಾಯೇಲ್ಯರ ಶತ್ರುಗಳನ್ನು ಎದುರಿಸು ವದರಲ್ಲಿಯೂ ಹಾಗು ದೇಶದ ಮೇರೆಗಳನ್ನು ವಿಸ್ತರಿಸುವದರಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದನು. ಈ ಸಂಗತಿಗಳನ್ನು ಒಂದು ಗಣನೀಯ ಪ್ರಮಾಣದಲ್ಲಿ ಪೂರ್ಣಗೊಳಿಸಿದವನಾಗಿ ಮತ್ತು ತನಗಾಗಿ ಯೆರೂಸಲೇಮಿನಲ್ಲಿ ಒಂದು ಅರಮನೆಯನ್ನು ಕಟ್ಟಿಸಿಕೊಂಡವನಾಗಿರಲು ಆತನ ಭಯಭಕ್ತಿಯು ಸ್ವಭಾವವು ತಾನು ಅರಮನೆಯಲ್ಲಿದ್ದು ಇಸ್ರಾಯೇಲ್ಯರ ಆ ದಿವ್ಯ ಅರಸನಾದ ಯೆಹೋವನು ಛಾಯಾರೂಪದ ನಿವಾಸವಾದ ದೇವದರ್ಶನದ ಗುಡಾರ–ದಲ್ಲಿರುವಂಥ ಅಸಂಗತದ ಬಗ್ಗೆ ಗಮನಿಸತೊಡಗಿತ್ತು. ಆತನ ಭಯಭಕ್ತ ಉತ್ಸಾಹವು ಗುಡಾರದ ಬದಲಿಗೆ ಒಂದು ದೇವಾಲಯ ಕಟ್ಟುವದನ್ನು ಪ್ರಾಮಾಣಿಕವಾಗಿ ಸಲಹೆಮಾಡಿದ್ದು ಆತನು ಸೂಕ್ತವಾಗಿ ಪ್ರವಾದಿಯಾದ ನಾತಾನನೊಡನೆ ಸಮಾಲೋಚಿಸಲಾಗಿ, ನಾತಾನನು ತೋರ್ಪಡಲಾದ ಅರಸನ ದೇವರ ಕಡೆಗಿನ ಈ ನಿಷ್ಠೆಯ ಬಗ್ಗೆ ಹರ್ಷವುಳ್ಳವನಾಗಿ ಈ ಕಾರ್ಯಕ್ರಮವನ್ನು ಅನುಮೋದಿಸಿದ್ದನು. ಅದೇ ರಾತ್ರಿಯಲ್ಲಿ ದೇವರು ಹೇಗೂ ಪ್ರವಾದಿಯಾದ ನಾತಾನನಿಗೆ ಅರಸನಿಗಾಗಿ ಒಂದು ಸಂದೇಶವನ್ನು ನೀಡಿದ್ದನು. ದೇವರು ದಾವೀದನ ಉದ್ದೇಶವನ್ನು ಪ್ರಸಂಶಿಸಿದ್ದಾಗ್ಯೂ ಅವುಗಳ ಕಾರ್ಯಗತಗೊಳಿಸುವಿಕೆಯನ್ನು ನಿಷೇಧಿಸಿದ್ದನು. ಇದಕ್ಕೆ ದೇವರು ವಿವರಿಸಿ ಹೇಳಿದ್ದೇನಂದರೆ ದೇವರ ಪ್ರಸನ್ನತೆಯು ಗುಡಾರದಲ್ಲಿ ತೋರ್ಪಡಲಾಗಿದ್ದು ಅದು ಶಾಶ್ವತ ಕಟ್ಟಡದಲ್ಲಿ ಅಲ್ಲವೆಂಬುದನ್ನು ತಾನು ಆಲೋಚಿಸಿರಲಿಲ್ಲವೆಂದಲ್ಲ ಇಲ್ಲವೇ ದಾವೀದನ ಇತರ ಸೇವಕರು ಒಂದು ಕಟ್ಟಡವನ್ನು ದಾವೀದನ ಪ್ರಯತ್ನದಿಂದ ನಿರ್ಮಿಸಲು ಸಂತೋಷಿಸುವದಿಲ್ಲವೆಂದಾಗಿರಲಿಲ್ಲ, ಆದರೆ ದೈವ ಸಂಕಲ್ಪವು ಬೇರೊಂದು ವಿಧವಾಗಿತ್ತು. ಸದ್ಯಕ್ಕೆ ವಿವರಿಸಲಾಗದ ಕೆಲವು ಕಾರಣಗಳಿಗಾಗಿ ಗುಡಾರವನ್ನು ಆರಿಸಿಕೊಳ್ಳಲಾಗಿತ್ತು. ಹೇಗೂ ದಾವೀದನ ಮೂಲಕವಾಗಿ ತನಗೆ ಒಂದು ಶಾಶ್ವತವಾದ ದೇವಾಲಯವನ್ನು ಹೊಂದಲಾಗುವದೆಂದೂ ಆದರೆ ಆತನ ಉತ್ತರಾಧಿಕಾಯಾದ ಮಗನು ಅದನ್ನು ನಿರ್ಮಿಸಬೇಕೆಂಬುದರ ಬಗ್ಗೆ ದೇವರು ಆಶ್ವಾಸನೆಯನ್ನು ನೀಡಿದ್ದನು.

ಈ ಘಟನೆಯ ಮೂಲಕವಾಗಿ ದೇವಜನರು ಒಂದು ಅಮೂಲ್ಯವಾದ ಪಾಠವನ್ನು ಕಲಿತುಕೊಳ್ಳಬಹುದು. ನಮ್ಮ ಯೋಜನೆ ಮತ್ತು ಆಯೋಜಿತ ಕಾರ್ಯವು ಭಯಭಕ್ತಿಪೂರ್ಣ–ದ್ದಾಗಿಯೂ ಮತ್ತು ದೇವರ ಮಹಿಮೆಗಾಗಿ ರಚಿತವಾದ್ದಾಗಿಯೂ ಇರುವ ಕಾರಣಕ್ಕಾಗಿ ಅವು ದೇವರ ಮನ್ನಣೆಯನ್ನು ಹೊಂದಿರಬೇಕೆಂಬ ನಿರ್ಣಯಕ್ಕೆ ಬರಬಾರದು. ದಾವೀದನ ವಿಷಯದಲ್ಲಿದ್ದಂತೆ ಆತ್ಮಿಕ ಇಸ್ರಾಯೇಲ್ಯರ ವಿಷಯದಲ್ಲಿಯೂ ಇರುವಂಥದ್ದು ನಿತ್ಯವೂ ಸತ್ಯಸಂಗತಿಯಾಗಿರುವದು; ಅದೇನಂದರೆ–"ಯೆಹೋವನು ಹೇಳುವದು–ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ." ಎಂಬುದೇ. "ದೇವರಲ್ಲಿದ್ದಂಥ ಮನಸ್ಸನ್ನು"

ಹೊಂದಿರುವ ದಾವೀದನ ಮನೋಪ್ರವೃತ್ತಿಯುಳ್ಳವರು ದಾವೀದನು ನಾತಾನನ ಬಳಿಯಲ್ಲಿ ಸಮಾಲೋಚಿಸಿದಂತೆ ಇವರೂ ತಮಗೆ ಸಹಾಯಕಾರಿಯೆಂದು ಪರಿಗಣಿಸುವ ಇತರರೊಡನೆ ಸಮಾಲೋಚಿಸುವದು ಮಾತ್ರವಲ್ಲದೆ ನಂತರದಲ್ಲಿ ತಮ್ಮ ಅತ್ಯುತ್ತಮ ನಿರ್ಣಯಗಳನ್ನು ದೇವರು ತಿರಸ್ಕರಿಸಿದಲ್ಲಿ ಇಲ್ಲವೇ ಅವರ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ದೇವರು ಸಹಕಾರ ನೀಡದಿದ್ದಲ್ಲಿ, ಈ ಸಂಗತಿಯಲ್ಲಿ ದಾವೀದನು ಮಾಡಿದಂತೆ, ಅವರು ಗುಣಗುಟ್ಟದೆ ದೇವರ ಯೋಜನೆಯನ್ನು ಮೌನವಾಗಿ ಒಪ್ಪಿಕೊಂಡವರಾಗಿ ಅದಕ್ಕೆ ಸಹಕರಿಸುವರು; ದೇವರು ಹೀಗೆ ಅವರನ್ನು ಪ್ರೀತಿಸಿ ಗೌರವಿಸಿ ಅವರನ್ನು ಪ್ರಿಯರೆಂದು ಕರೆಯಲ್ಪಡುವ ವಿಧವೆಂಬುದಕ್ಕೆ ಈ ರೀತಿಯ ಹೆಚ್ಚಿನ ಸಾಕ್ಷಿಪ್ರಮಾಣಗಳನ್ನು ನೀಡುವವರಾಗಿರುವರು. ದಾವೀದನಿಗೆ ಮಾಡಿದಂತೆ, ಇವರಿಗೂ ಸಹ ದೇವರು ಇತರ ವಿಶೇಷ ಆಶೀರ್ವಾದಾನುಗ್ರಹಗಳನ್ನು ದಯಪಾಲಿಸುವನು.

ಈ ಸಂಗತಿಯಲ್ಲಿನ ದಾವೀದನ ಮನೋಭಾವವು ಅಂದರೆ ದೇವರನ್ನು ಗೌರವಿಸಿ ಆತನಿಗಾಗಿ ಒಂದು ದೊಡ್ಡ ಮನೆ ಅಥವಾ ಆಲಯವನ್ನು ಕಟ್ಟುವ ಆತನ ಮನೋಭಿಲಾಷೆಯು ಪ್ರತಿಯೊಬ್ಬ ನಿಜವಾದ ಕ್ರೈಸ್ತನ ಮನೋಪ್ರವೃತ್ತಿಗೆ ಹೋಲಿಕೆಯಾಗಿರುವದು. ನಾವು ಕೇವಲ ಭವ್ಯವಾದ ಕಲ್ಲಿನ ಆಲಯವನ್ನು ನಿರ್ಮಿಸುವದರಲ್ಲಿ ಸಂತೋಷಿಸುವವರ ಬಗ್ಗೆ ಉಲ್ಲೇಖಿಸದೆ ಯಾರ ಆಕಾಂಕ್ಷೆಯು ವಿಶೇಷವಾಗಿ ಈಗಿನ ಕ್ರೈಸ್ತಸಭೆಯ ವ್ಯವಸ್ಥಾಪನೆಮಾಡಿ ಆ ವ್ಯವಸ್ಥಾಪನೆಯ ಭವ್ಯತೆ ಹಾಗು ಸಂಪೂರ್ಣತೆಯಲ್ಲಿ ಮತ್ತು ಅದರ ಕಾರ್ಯನಿರ್ವಹಣೆ ಹಾಗು ದೇವರ ಸೇವೆಯಲ್ಲಿ ಸಂಭ್ರಮಿಸುವರೋ ಅವರ ಬಗ್ಗೆ ಪ್ರಸ್ತಾಪಿಸುವವರಾಗಿದ್ದೇವೆ. ಸೂಕ್ತ ಮನೋಸ್ಥಿತಿಯಲ್ಲಿಲ್ಲದವರು ಸ್ವಪ್ರತಿಷ್ಠೆ ಸ್ವಯಿಚ್ಛೆಯುಳ್ಳವರಾಗಿದ್ದು ತಮ್ಮ ಒಳ್ಳೆಯ ಉದ್ದೇಶಗಳು ದೇವರಿಗೆ ಮೆಚ್ಚಿಗೆಯಾಗಬೇಕೆನ್ನುವದರಲ್ಲಿ ಭರವಸೆ–ಯುಳ್ಳವರಾಗಿದ್ದು ಅನೇಕ ಕಟ್ಟಡಗಳನ್ನು ಕಟ್ಟಲು ಮುಂದಾಗಿ ಪ್ರತಿಯೊಂದನ್ನು ದೇವರ ಆಲಯವೆಂದು ಹೇಳಿಕೊಳ್ಳುವವ–ರಾಗಿರುವರು. ಅವರು ಈ ವಿಷಯದಲ್ಲಿ ದೇವರ ಆದೇಶಗಳನ್ನು ಕಂಡುಕೊಳ್ಳದೆ ಇಲ್ಲವೆ ಪಡಕೊಳ್ಳದೆ ತಮ್ಮದೇ ಆದ ಧ್ಯೇಯೋದ್ದೇಶಗಳನ್ನು ಅನುಸರಿಸುವದರಿಂದ ಈ ಪ್ರತಿಯೊಂದು ಕಟ್ಟಡಗಳಲ್ಲಿ ಗಣನೀಯವಾದ ವೈವಿಧ್ಯತೆಗಳು ಇರುವಂಥದ್ದು ಅವಶ್ಯವಾಗಿದ್ದು, ಇವುಗಳನ್ನು ಕಟ್ಟಿದವರಿಗೆ ಇವುಗಳು ಸರಿಯಾದ ಸೂಕ್ತವಾದ ಸಮಂಜಸವಾದ ದೇವಾಲಯಗಳೆಂದು ತೋರುವದು. ಈ ಆಲಯಗಳು ಈಗ ನೂರಾರು ಸಂಖ್ಯೆ–ಯಲ್ಲಿದ್ದು ವಿಸ್ತಾರವೂ ಬಹು ಪ್ರಭಾವಶಾಲಿಯೂ ಆಗಿದ್ದು ಇದರಲ್ಲಿ ರೋಮನ್ ಕೆಥೋಲಿಕರ ದೇವಾಲಯಗಳು, ಗ್ರೀಕ್ ಕೆಥೋಲಿಕರ ದೇವಾಲಯಗಳು, ಚರ್ಚ್ ಆಫ್ ಇಂಗ್ಲೆಂಡ್ ದೇವಾಲಯಗಳು, ಮೆಥೋಡಿಸ್ಟರ ದೇವಾಲಯಗಳು ಲೂಥರನ್ನರ ದೇವಾಲಯಗಳು ಪ್ರೆಸ್ಬಿಟೇರಿಯನ್ನರ ದೇವಾಲಯಗಳು ಬ್ಯಾಪ್ಟಿಸ್ತರ ದೇವಾಲಯಗಳು ಕಾಂಗ್ರಿಗೇಷನ್ನರ ದೇವಾಲಯಗಳು ಮುಂತಾದವುಗಳು ಇರುವವು.

ಆದರೆ ಒಂದು ಸಣ್ಣ ವರ್ಗವು ದಾವೀದನ ನಿದರ್ಶನವನ್ನು ಅನುಸರಿಸಿ ದೇವರಿಂದ ಈ ಆದೇಶಗಳನ್ನು ಹೊಂದುವರು; ಅದೇನಂದರೆ ಪ್ರಸ್ತುತದಲ್ಲಿರುವದು ದೇವಾಲಯದ ಕಟ್ಟಡಗಳ [ನಿರ್ಮಾಣದ] ಕಾಲವಾಗಿರು–ವದಿಲ್ಲವೆಂದೂ; ಆದರೆ ಇಲ್ಲೇ ಆತನಿಗೆ ತನ್ನ ಆಲಯವನ್ನು ಕಟ್ಟಲು ಮತ್ತು ಈ ವಿಧವಾಗಿ ಅನೇಕರು ತನಗೆ ಸೇವೆಮಾಡಲು ಸಿದ್ಧರಾಗಿರುವರೆಂಬುದನ್ನು ಕಂಡುಕೊಳ್ಳಲು ಆತನಿಗೆ ಸಾಧ್ಯವಿತ್ತೆಂಬದೂ, ಆದರೆ ಆತನು ಇಷ್ಟಪಡುವದೆಂದರೆ ಈ ಪ್ರಸ್ತುತ ಕಾಲದಲ್ಲಿ ಲೋಕದಲ್ಲಿ ತನ್ನನ್ನು ಪ್ರತಿನಿಧಿಸುವಂಥವರು ಅತಿ ಸರಳರಾಗಿಯೂ ಹಾಗು ನಿರಾಡಂಬರವಾಗಿಯೂ ಇರಬೇಕೆನ್ನುವಂಥದ್ದೇ. ಹೇಗೂ ಇಂಥವರು ದೇವರಿಂದ ಈ ಭರವಸವನ್ನು ಹೊಂದುವರು: ಅದೇನಂದರೆ ಅದು ತನ್ನದೇ ಆದ ಆತನ ಸಮಯ ಹಾಗು ವಿಧಾನದಲ್ಲಿ ಆನಂತರ ಬರುವ ದೇವರರಾಜ್ಯವೇ, ಈ ಕಾಲದಲ್ಲಿ ನಾವು ಕಟ್ಟಲು ಸಾಧ್ಯವಾಗು–ವದಕ್ಕಿಂತಲೂ ಬಹು ಅಧಿಕವಾದ ಮಹಿಮೆಯುಳ್ಳ ಆಲಯವಾಗಿ ರೂಪುಗೊಂಡದ್ದಾಗಿ ಅದು ಒಂದು ನಿರಂತರವಾದ ಆಲಯವಾಗಿದ್ದು ದೇವರ ಪ್ರಭಾವದಿಂದ ತುಂಬಿಕೊಂಡಿರು–ವಂಥದ್ದೆಂಬದೇ. ದಾವೀದನ ಗುಣಲಕ್ಷಣಗಳನ್ನು ಹೊಂದಿರುವವರೆಲ್ಲರೂ ಅಂದರೆ, ತಂದೆಗೆ ಪ್ರಿಯರಾಗುವಂಥ ಪ್ರವೃತಿಯಳ್ಳವರಾಗಿ ಆತನ ಪ್ರಿಯ ಕುಮಾರನಿಗೆ ಅಂಗೀಕೃತರಾದ ಸದಸ್ಯರಾಗಿರುವವರೆಲ್ಲರೂ ದೈವೀಕ ಉದ್ದೇಶವನ್ನು ಕಲಿತುಕೊಂಡ ಕೂಡಲೇ ತಮ್ಮನ್ನು ಪ್ರಾಮಾಣಿಕವಾಗಿ ಅದಕ್ಕೆ ಅಧೀನಪಡಿಸಿಕೊಂಡು ಆ ದೈವೀಕ ಯೋಜನೆಗೆ ಸಹಕಾರ ನೀಡುವರು. ಛಾಯಾರೂಪದ ಈ ಯೋಜನೆಯಲ್ಲಿ ತೀವ್ರವಾಗಿ ಪರಿಶೋಧಿಸಲ್ಪಟ್ಟು ಶಿಕ್ಷಿತನಾಗಿದ್ದು ನೀತಿಗಾಗಿ ಹೋರಾಡುವಂಥವನಾಗಿದ್ದ ಯುದ್ಧಪುರುಷನಾದ ದಾವೀದನಂತಿರುವವರು ಈ ಪ್ರಸ್ತುತ ಕಾಲದ ಆಕ್ರಮಣಕಾರೀ ಸನ್ನಿವೇಶದಲ್ಲಿ ದೇವರ ಭಕ್ತರಾಗಿ ಪ್ರತಿನಿಧಿಸುತ್ತಾ ಶರೀರ ಲೋಕ ಮತ್ತು ಸೈತಾನನಿಗೆ ವಿರುದ್ಧವಾಗಿ ಹೋರಾಡುವಂಥವರಾಗಿ ತಮ್ಮ ಹೃದಯ ಹಾಗು ನಂಬಿಕೆಯ ವಿಷಯಗಳಲ್ಲಿ ದೇವರ ಅತ್ಯಧಿಕವಾದ ಶಕ್ತಿಯನ್ನು ಆಶ್ರಯಿಸಿಕೊಂಡು ಬಲಗೊಂಡವ–ರಾಗಿರಬೇಕು. ಇದೇ ಮಾದರಿಯ ಅನುಸಾರವಾಗಿ ಈಗಿನ ಸಮಯದಲ್ಲಿನ ಕಾರ್ಯಭಾರವು ಚಿನ್ನ ಬೆಳ್ಳಿ ಮತ್ತು ಅಮೂಲ್ಯವಸ್ತುಗಳನ್ನು ಕಲೆಹಾಕಿ ಮುಂದಿನ ಕಾಲದ ಆಲಯದ ಕಟ್ಟುವಿಕೆಗೆ ಸಿದ್ಧಪಡಿಸುವದಾಗಿರುವದು. ಛಾಯಾರೂಪದಲ್ಲಿ ಇವು ಅಕ್ಷರಾರ್ಥದ ಸಂಗತಿಗಳಾಗಿದ್ದು, ನಿಜರೂಪದಲ್ಲಿ ಅಪೋಸ್ತಲನು ತೋರಿಸಿಕೊಟ್ಟಿರುವಂತೆ – ದೇವಭಕ್ತರು ಚಿನ್ನ ಬೆಳ್ಳಿ ಮತ್ತು ಅಮೂಲ್ಯ ರತ್ನಗಳಾಗಿದ್ದು ಇವರು ಈಗ ಬಹು ಶೀಘ್ರದಲ್ಲೇ ಸಾವಿರ ವರುಷದ ಆಳ್ವಿಕೆಯ ಕಾಲವು ಸ್ಥಾಪನೆಯಾಗುವಾಗ ಪ್ರಭಾವ ಮಾನ ನಿರ್ಲಯತ್ವಗಳ ಮಟ್ಟದಲ್ಲಿ ಸಂಪೂರ್ಣವಾಗಿ ಸಂಘಟಿತರಾಗಿ ತಂದೆಯ ಜೀವ ಹಾಗು ಪ್ರಭಾವಗಳಿಂದ ನಿರಂತರವಾಗಿ ಭರಿತರಾಗುವರು. ದಾವೀದನು ಹಾಗು ದೇವಾಲಯ–ಕ್ಕಾಗಿರುವ ಆತನ ಸಿದ್ಧತಾಕಾರ್ಯಗಳು ಈಗಿನ ಕಾಲದಲ್ಲಿನ ಕ್ರೈಸ್ತಸಭೆಗೆ ಛಾಯಾವಾದರಿಯಾಗಿ ಸೂಚಿಸುವಂತೆಯೇ ಮತ್ತು ಮುಂಬರುವ ಮಹಿಮೆಗೆ ನಮ್ಮನ್ನು ನಾವು ಮತ್ತು ಪರಸ್ಪರ ಒಬ್ಬರನ್ನೊಬ್ಬರು ಸಿದ್ಧಪಡಿಸಿಕೊಳ್ಳುವ ರೀತಿಯಲ್ಲಿಯೇ [ದಾವೀದನ ರಾಜ್ಯವನ್ನು] ಹಿಂಬಾಲಿಸಿಕೊಂಡು ಬಂದ ಸಲೋಮೋನನ ರಾಜ್ಯವು ಮಹಿಮೆಹೊಂದಿದ ಕ್ರಿಸ್ತನ ರಾಜ್ಯವನ್ನು ಸೂಚಿಸುವದು. ಇದು ನಿಜವಾದ ರಾಜ್ಯವಾಗಿರಲು

ಇದರ ಈಗಿನ ಸ್ಥಿತಿಯು ಭ್ರೂಣಾವಸ್ಥೆಯಾಗಿದ್ದು, ಅಲ್ಲದೆ ಸೊಲೊಮೋನನ ದೇವಾಲಯದ ನಿರ್ಮಾಣವು ಸಭೆಯ ಪುನರುತ್ಥಾನಕ್ಕೆ ಛಾಯಾಮಾದರಿಯಾಗಿದ್ದು ಇದರ ಅಂಗಗಳಾಗಿರುವರೆಲ್ಲರೂ ಸಾವಿರ ವರುಷದ ಆಳ್ವಿಕೆಯ ದಿನದ ಮುಂಜಾನೆಯಲ್ಲಿ ಕೂಡಿಬಂದು ಮಹಿಮಾ ಸ್ಥಿತಿಯಲ್ಲಿ ಪೂರ್ಣಗೊಳ್ಳುವರು. "ಸಂಜೆಗೆ [ನಮ್ಮ ಒಳಗಿನ ಹಾಗು ಹೊರಗಿನ ಶತೃಗಳೊಡನೆಯ ನಮ್ಮ ಹೋರಾಟದ ಹಾಗು ನೀತಿಯ ಪರವಾಗಿ ನಾವು ಬಾಧೆಯನ್ನು ಅನುಭವಿಸುವ ಸಂಬಂಧದಲ್ಲಿ] ದುಃಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ [ಅಂದರೆ ಸಂಪೂರ್ಣವಾದದ್ದು ಬಂದು ಅಪೂರ್ಣವಾದದ್ದು ಇಲ್ಲದಂತಾದಾಗ] ಹರ್ಷಧ್ವನಿಯು ಕೇಳಿಸುವದು." (ಕೀರ್ತನೆ 30:5) "ಉದಯಕಾಲದಲ್ಲಿಯೇ ದೇವರು ಇದರ (ಕ್ರಿಸ್ತನ ಮದಲಗಿತ್ತಿಯ) ಸಹಾಯಕ್ಕೆ ಬರುವನು." (ಕೀರ್ತನೆ 46:5)

ದಾವೀದನ ಈ ಪ್ರಸ್ತಾವನೆಯನ್ನು ನಿರಾಕರಿಸಿದ ಸಂಬಂಧದಲ್ಲಿ ದೇವರು ಅವನಿಗೆ ಒಂದು ಬಹು ಕೃಪಾಪೂರ್ಣ–ವಾದ ಪ್ರೋತ್ಸಾಹವನ್ನು ನೀಡಿದವನಾಗಿ ಆತನು ನಂಬಿಗಸ್ತನಾಗಿ ದೇವರನ್ನು ತನ್ನ ಮಾರ್ಗದರ್ಶನಕ್ಕಾಗಿ ಮತ್ತು ಸಲಹೆಗಾಗಿ ಎದುರು ನೋಡುತ್ತಿದ್ದ ಕಾರಣ ಆತನ ಮುಂದಿನ ಪ್ರತಿಯೊಂದು ನಡೆಯು ಮೇಲಿನಿಂದ ಮಾರ್ಗದರ್ಶನ ಮಾಡಲ್ಪಟ್ಟು, ತಾನು ಸ್ವಾಧೀನಮಾಡಿಕೊಂಡ ರಾಜ್ಯದ ಮತ್ತು ದೇವರೊಡನೆಯ ಸಂಬಂಧದಲ್ಲಿ ಅಭಿವೃದ್ಧಿಯ ಹಂತಕ್ಕೆ ಈಗ ತಲುಪಿರುವನೆಂಬು–ದನ್ನು ನೆನಪುಮಾಡಿಕೊಟ್ಟಿದ್ದನು. ದೇವರು ಈದಿನದ ಆತ್ಮಿಕ ಇಸ್ರಾಯೇಲ್ಯರಲ್ಲಿರುವ ದಾವೀದನ ವರ್ಗದವರನ್ನು ಹೀಗೆಯೇ ಪ್ರೋತ್ಸಾಹಿಸುವನು. ಯಾರೆಲ್ಲರು ದೇವರನ್ನು ಎದುರು–ನೋಡುತ್ತಿದ್ದು ಆತನ ವಾಕ್ಯವನ್ನು ಕೇಳಿಕೊಳ್ಳುತ್ತಿರುವರೋ ಅವರಿಗೆ ದೇವರು ತನ್ನ ಕಾರ್ಯಗಳನ್ನು ತನ್ನದೇ ಆದ ಸಮಯ–ದಲ್ಲಿ ಹಾಗು ತನ್ನದೇ ಆದ ವಿಧಾನದಲ್ಲಿ ನಿರ್ವಹಿಸುತ್ತಿರುವ–ನೆಂಬುದನ್ನು, ಅವು ನಾವು ಕಲ್ಪಿಸಿಕೊಳ್ಳುವ–ದಕ್ಕಿಂತಲೂ ಬಹು ಉತ್ಕೃಷ್ಟ ವಿಧಾನದಲ್ಲಿರುವದೆಂಬುದನ್ನು ಅವರಿಗೆ ನೆನಪುಮಾಡಿ–ಕೊಡಲಾಗುವದು. ನಾವು ಹೊಂದಿರುವ ಪ್ರಾಣಿ ಸ್ತರದ ಕೀಳು ಸ್ಥಾನದ ಬಗ್ಗೆ ಹಾಗು ದೇವರು ತನ್ನ ಕೃಪೆಯ ಮೂಲಕವಾಗಿ ನಮ್ಮನ್ನು ಹೇಗೆ ಹಂತ ಹಂತವಾಗಿ ಏಳಿಗೆಗೆ ತರುವನೆಂಬುದನ್ನು ನಮಗೆ ತೋರಿಸಿಕೊಡಲಾಗುವದು. ನಾವು ಕ್ರಿಸ್ತನೊಡನೆ ಬಾಧೆಯನ್ನು ಸಹಿಸಿಕೊಳ್ಳುವದಾದರೆ ದೇವರ ಮಕ್ಕಳಾಗಿ ನಾವು ದೇವರಿಗೆ ಬಾಧ್ಯರೂ, ಕ್ರಿಸ್ತನೊಂದಿಗೆ ಸಹಬಾಧ್ಯರೂ ಆಗುವ–ವರೆಗೂ ಏಳಿಗೆಯಾಗುವೆವು ಎಂಬುದನ್ನು ದೇವರು ನಮಗೆ ತೋರಿಸಿಕೊಡುವನು. ನಮ್ಮ ಹಿಂದಿನ ಅನುಭವಗಳಿಂದ ಪಾಠ–ವನ್ನು ಕಲಿತುಕೊಂಡು ಅವುಗಳನ್ನು ಮನವರಿಕೆ ಮಾಡಿಕೊಂಡ–ವರಾಗಿ ಹಾಗು ಆತನು ನಮ್ಮನ್ನು ಘೋರವಾದ ಗುಂಡಿಯಿಂದ ಹಾಗು ಕೆಸರು ಮಣ್ಣಿನಿಂದ ಮೇಲೆ ತೆಗೆದು ನಮ್ಮ ಪಾದಗಳನ್ನು ಬಂಡೆಯ ಮೇಲೆ ಇರಿಸಿ ನಮ್ಮ ಬಾಯಲ್ಲಿ ಹೊಸ ಹಾಡನ್ನು ಇಟ್ಟಿದ್ದು ನಾವು ಶಾಸ್ತ್ರವಚನಗಳಲ್ಲಿ ಪ್ರವಾದಿಗಳ ಮೂಲಕವಾಗಿ ನುಡಿದ ಆತನ ಮಾತಿಗೆ ಕಿವಿಗೊಡುವಷ್ಟರ ಪ್ರಮಾಣದಲ್ಲಿ ನಮಗೆ ಇನ್ನೂ ಹೆಚ್ಚಾಗಿ ಆಶೀರ್ವದಿಸಲು ಸಮರ್ಥನೆಂಬುದರಲ್ಲಿ ಭರವಸವಿಡುವಂಥದ್ದು ನಮ್ಮ ಸಂಗತಿಯಾಗಿರಬೇಕು.

ಪಾಠದ ಮುಂದಿನ ವಚನಗಳು ದಾವೀದನ ಮತ್ತು ಆತನ ಅನುವಂಶಿಕ ಸಂತತಿಯವರ ಅಲ್ಲದೆ ಶಾರೀರಿಕ ಇಸ್ರಾಯೇಲ್ಯರ ಮೇಲಿನ ಸಹಜವಾದ ಆಶೀರ್ವಾದಗಳೊಡನೆ ಬೆರೆತು ಸಮ್ಮಿಶ್ರಣಗೊಂಡಿದ್ದು, ಜೊತೆಗೆ ದಾವೀದನ ನಿಜರೂಪದ ಕುಮಾರನಾದ ಅಂದರೆ ಮಹಿಮಾಪದವಿಗೆ ಸೇರಿದ ಕ್ರಿಸ್ತನ ಮತ್ತು ಆತನ ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ದೇವರೊಡನೆ ಒಡಂಬಡಿಕೆಯ ಸಂಬಂಧದಲ್ಲಿ ಬರುವಂಥವರಿಗೆ ಉದ್ದರಿಸುವಂಥ ಇನ್ನೂ ವಿಶೇಷವಾದ ಆಶೀರ್ವಾದಗಳಿರುವವು. ವಚನ 10 ನಿಸ್ಸಂದೇಹವಾಗಿ ಶಾರೀರಿಕ ಇಸ್ರಾಯೇಲ್ಯರಲ್ಲಿ ಒಂದು ಪ್ರಮಾಣದಲ್ಲಿ ನೆರವೇರಲ್ಪಟ್ಟಿದ್ದು ಅದರಲ್ಲಿ ಹಲವಾರು ಶತಮಾನಗಳವರೆಗೆ ಅವರು ತಮ್ಮ ಸ್ವಂತ ನಾಡಿನಲ್ಲಿ ತಮ್ಮದೇ ಆದ ಒಡಂಬಡಿಕೆಯ ಅಡಿಯಲ್ಲಿ ಉಳಿದುಕೊಂಡಿದ್ದು, ಆ ಒಂದು ಅನುಭವವು ನ್ಯಾಯಾಧಿಪತಿಗಳ ಆಳ್ವಿಕೆಯ ಕಾಲದ ಹಿಂದಿನದಕ್ಕಿಂತಲೂ ಬಹು ವಿಭಿನ್ನವಾಗಿತ್ತು. ಆದರೆ ದೇವರು ಅವರನ್ನು ನೆಡುವ ಸಮಯವು ಅಂದರೆ ಅವರು ಇನ್ನು ದುಷ್ಟರಿಂದ ಹೆಚ್ಚು ವಿಚಲಿತರಾಗದಂಥ ಹಾಗು ಬಾಧಿತರಾಗದಂಥ ಸಮಯದ ಸಂಗತಿಗಳು ಅವರ ಮುಂದಿನ ಭವ್ಯವಾದ ಪುನಃಸ್ಥಾಪನೆಯ ಕಾಲಕ್ಕೆ ಅನ್ವಯವಾಗುವದು. ಆ ಸಮಯವು ಆತನು ವಾಗ್ದಾನಮಾಡಿದಂತೆ ತಾನು ಅವರನ್ನು ಚದುರಿಸಲ್ಪಟ್ಟ ಎಲ್ಲಾ ಜನಾಂಗ ಮತ್ತು ಪ್ರಜೆಗಳೊಳಗಿಂದ ತಮ್ಮ ಸ್ವನಾಡಿಗೆ ಕರತರುವದನ್ನು ಒಳಗೊಂಡಿರುವದು. ಆನಂತರದ ಪ್ರವಾದನೆಯು ದಾವೀದನಿಗೆ ನಾತಾನನು ಮಾಡಿದಂಥದ್ದಕ್ಕೆ ಸಂಪೂರ್ಣವಾಗಿ ಸಮ್ಮತಿಸುವದು. ಆನಂತರದಲ್ಲಿ ಮತ್ತೊಂದು ಶಾಸ್ತ್ರವಚನಗಳು ಪ್ರಕಟಮಾಡಿ ಹೇಳಿರುವಂತೆ ದೇವರು ಇಸ್ರಾಯೇಲ್ಯರಿಗೆ ಪೂರ್ವದಲ್ಲಿದ್ದ ಮಂತ್ರಾಲೋಚಕರನ್ನು ಮತ್ತು ಅವರಿಗೆ ಆರಂಭದಲ್ಲಿದ್ದಂಥ ನ್ಯಾಯಾಧಿಪತಿಗಳನ್ನು ಪುನಃ ಒದಗಿಸಿಕೊಡುವನು. ಆನಂತರ ದಾವೀದನ ಮನೆತನವು ಸಹ ಶ್ರೇಷ್ಠನಾದ ದಾವೀದನ ವಿಶೇಷ ಕುಮಾರನಲ್ಲಿ ಅಂದರೆ ಮಹಿಮೆಯಳ್ಳ ಕ್ರಿಸ್ತನಲ್ಲಿ ಸ್ಥಿರವಾಗಿ ಸ್ಥಾಪಿತಗೊಳ್ಳುವದು. ಇಲ್ಲಿ ಅಬ್ರಹಾಮನಿಗೆ ಮಾಡಿದ ವಾಗ್ದಾನಗಳ ಪ್ರಕಾರವೇ ಶಾರೀರಿಕ ಇಸ್ರಾಯೇಲ್ಯರ ಹಾಗು ಆತ್ಮಿಕ ಇಸ್ರಾಯೇಲ್ಯರ ಸಂತತಿಗಳಿಗೆ ಮಾಡಿದಂಥ ವಾಗ್ದಾನಗಳು ಹೆಚ್ಚು ಕಡಿಮೆ ಬೆಸೆದು–ಕೊಂಡಿರುವವು. ಅಬ್ರಹಾಮನ ಸಂತತಿಯು ಭೂಲೋಕದ ಹಾಗು ಪರಲೋಕದ ಎರಡೂ ಸಂತತಿಗಳನ್ನು ಒಳಗೊಂಡಿದ್ದು, ಅವು ಸಮುದ್ರದ ಮರಳಿನಂತೆ ಮತ್ತು ಆಕಾಶದ ನಕ್ಷತ್ರಗಳಂತೆ ಅಂದರೆ ಪಾರಂಪರಿಕ ಮತ್ತು ಆತ್ಮಿಕ ಸಂತತಿಗಳಾಗಿದ್ದು ಅಲ್ಲದೆ ಅಪೋಸ್ತಲನು ಸಾರಿ ಹೇಳಿರುವಂತೆ ಆ ವಾಗ್ದಾವು ಈ ಎರಡು ಸಂತತಿಗಳಿಗೂ ಖಂಡಿತವಾಗಿದ್ದು ಪ್ರತಿಯೊಂದಕ್ಕೂ [ಸಂತತಿಗೂ] ಅದರ ಸೂಕ್ತ ಭಾಗಗಳು ಅನ್ವಯವಾಗುವದು. ರೋಮಾ. 4:16. – ರೋಮಾ 11:25–32 ಇದನ್ನು ಹೋಲಿಸಿ ನೋಡಿರಿ.

ದಾವೀದನ ಸಿಂಹಾಸನವು ಸೊಲೊಮೋನನ ಮೂಲಕವಾಗಿ ಚಿದ್ಕೀಯನವರೆಗೂ ನಿರಂತರವಾಗಿದ್ದು, ದೇವರು ಈ ರಾಜ್ಯವನ್ನು ಚಿದ್ಕೀಯನ ಕೈಯಿಂದ ತೆಗೆದುಹಾಕಿದಾಗ ಆತನು ಇದನ್ನು ಯಾರಿಗೂ ಕೊಡದೆ ಇದನ್ನು ಆತನು ಅರಸನಿಲ್ಲದ ಮಧ್ಯಂತರದ ಕಾಲವೆಂದು ಅಂದರೆ ದಾವೀದನ ರಾಜ್ಯದ ತಾತ್ಕಾಲಿಕ ತಡೆಯೆಂದು ಘೋಷಿಸಿದ್ದು ಸಿಂಹಾಸನವು ಯಾರಿಗೂ

ಹೋಗದಂತೆ ಮಾಡಿದ್ದನು. ಚಿದ್ಕೀಯನಿಗಾದ ಪ್ರವಾದನೆಯ ಭಾಷಾಶೈಲಿಯು ಹೀಗಿತ್ತು: "ಇಸ್ರಾಯೇಲಿನ ದೊರೆಯೇ, ದುಷ್ಟನೇ, ಭ್ರಷ್ಟನೇ! ನಿನಗೆ ಸಮಯವು ಹತ್ತರಿಸಿದೆ; ಇದೇ ನಿನ್ನ ಅಪರಾಧದ ಕಡೆಗಾಲ. ಕರ್ತನಾದ ಯೇಹೋವನು ಇಂತೆನ್ನುತ್ತಾನೆ–ಮುಂಡಾಸನವನ್ನು ಕಿತ್ತುಬಿಡು! ಕಿರೀಟವನ್ನು ಎತ್ತಿಹಾಕು! ಎಲ್ಲವೂ ವ್ಯತ್ಯಸ್ತವಾಗಲಿ; ಕೆಳಗಿದನ್ನು ಮೇಲೆ ಮಾಡು ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು; [ರಾಜ್ಯಕ್ಕೆ] ಬಾಧ್ಯನು ಬರುವದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು." (ಯೆಹೆಜ್ಕೇಲ 21:25–27) ಯೆಹೆಜ್ಕೇಲನ ದಿನದಿಂದ ಈಗಿನ ವರೆಗೂ ಇಸ್ರಾಯೇಲಿನಲ್ಲಿ ಅರಸನಿರಲಿಲ್ಲ; ರಾಜ್ಯದ ಬುಡಮೇಲು ಮಾಡುವಿಕೆಯು ಬಹು ಸಂಪೂರ್ಣವಾಗಿತ್ತು. [ಕ್ರಿಸ್ತನ] ಮೊದಲನೇ ಬರುವಿಕೆಯ ಕಾಲದ ಹಾಗು ಅದರ ಹಿಂದಿನ ಮತ್ತು ನಂತರದ ಕಾಲದಲ್ಲಿ ಇಸ್ರಾಯೇಲ್ಯರನ್ನು ಆಳ್ವಿಕೆಮಾಡುತ್ತಿದ್ದ ರಾಜರು ಅಂದರೆ ಚಿದ್ಕೀಯನ ದಿನದಿಂದ ಪ್ರಸ್ತುತ ಕಾಲದ ವರೆಗೂ ಇಸ್ರಾಯೇಲ್ಯರಿಗೆ ಸಂಬಂಧಿಸಿದ ರಾಜನಾಗಲೀ ಇಲ್ಲವೇ ಜನ್ಮತಃ ಇಸ್ರಾಯೇಲ್ಯನಾದ ರಾಜನಾಗಲೀ ಆಗಿರಲಿಲ್ಲ, ಆದರೆ ಅವರು ಅನ್ಯಜನಾಂಗದ ಸರ್ಕಾರದವರಿಂದ ನೇಮಕವಾದವರಾಗಿದ್ದು, ಚಿದ್ಕೀಯನ ದಿನದಿಂದ ಪ್ರಸ್ತುತ ಕಾಲದವರೆಗೂ ಪವಿತ್ರನಾಡು ಅನ್ಯಜನರಿಂದ ತುಳಿದಾಡಲ್ಪಡುತ್ತಿತ್ತು. ದಾವೀದನಿಗೆ ಮಾಡಿದ ಈ ವಾಗ್ದಾನದ ನೆರವೇರುವಿಕೆಯು ಹೇಗೂ ನಿರಾತಂಕವಾಗಿದ್ದು ಅದು ಸರ್ವಶಕ್ತನ ಮಾತು ಹಾಗು ಆತನ ಪ್ರತಿಜ್ಞೆಯಂತೆ ಖಂಡಿತವಾಗಿತ್ತು; ಜನ್ಮತಃ ಅನ್ಯಜನರಾಗಿದ್ದ ನಾವು ಅಬ್ರಹಾಮನ ದಿವ್ಯ ಕುಮಾರನೂ ದಾವೀದನ ದಿವ್ಯ ಕುಮಾರನೂ ಆದ ಕರ್ತನಿಗೆ ನಿಶ್ಚಿತಾರ್ಥಗೊಂಡವರಾಗಿ ಈಗಲೂ ಇದರ ನೆರವೇರುವಿಕೆಗಾಗಿ ಎದುರುನೋಡುತ್ತಾ ಪ್ರಾರ್ಥಿಸುವವರಾಗಿ ಅಂದರೆ ನಮ್ಮ ಕರ್ತನು [ಪ್ರಾರ್ಥನೆ] ಮಾಡಲು ಕಲಿಸಿದಂತೆ– "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂಬುದಕ್ಕೆ ತಾಳ್ಮೆಯಿಂದ ಕಾದುಕೊಂಡಿರುವೆವು. ತಂದೆ ನೇಮಿಸಿದ ಕಾಲದಲ್ಲಿ "ಪ್ರಿಯನಾದ" ನಿಜರೂಪದ ದಾವೀದನು ರಾಜ್ಯಾಡಳಿತವನ್ನು ವಹಿಸಿಕೊಂಡ ಕೂಡಲೇ ಆತನು ನಿಜರೂಪದ ಸಲೊಮೋನನಾಗಿ ಸಹ ವಂಶ ಪಾರಂಪರ್ಯವಾದ ಹಂತದಲ್ಲಿ ದೇವರ ಮನೆಯನ್ನು ಕಟ್ಟುವವನಾಗಿದ್ದು ಆತನ ಸಿಂಹಾಸನವು ನಿರಂತರವಾಗಿ ಸ್ಥಿರಗೊಳ್ಳುವದು–ಯಾಕಂದರೆ ಅದು ಯೆಹೋವನ ರಾಜ್ಯವಾಗಿರುವದು; ಅಲ್ಲದೆ ಅದು ಮಧ್ಯಂತರದ ರಾಜ್ಯವೆಂಬ ಅರ್ಥದಲ್ಲಿ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಕೊನೆಗೊಳ್ಳುವದಾಗಿದ್ದರೂ ಒಂದು ಉನ್ನತವಾದ ಅರ್ಥದಲ್ಲಿ ನಿರಂತರಕ್ಕೂ ಮುಂದುವರೆಯುವದು, ಯಾಕಂದರೆ ದಾವೀದನ ಕುಮಾರನೂ ಕರ್ತನೂ ಆಗಿರುವಾತನು ತಂದೆಯೊಡನೆ ಆತನ ಸಿಂಹಾಸನದಲ್ಲಿ ಸಹಭಾಗಿಯಾಗುವನು, ಹಾಗು ಆತನ ಮದಲಗಿತ್ತಿಯು ಆತನಿರುವಲ್ಲಿ ಇದ್ದು ತನ್ನ ವಾಗ್ದಾನದ ಅನುಸಾರ ಆತನ ಮಹಿಮೆಯಲ್ಲಿ ಪಾಲುಹೊಂದುವಳು.

ಈ ವಾಗ್ದಾನದ ಹೆಚ್ಚು ಭಾಗವು ಸೊಲೊಮೋನನಿಗೆ ಅನ್ವಯವಾಗಿತ್ತು. ದಾವೀದನ ರಾಜ್ಯವು, ಅಥವಾ ವಾಸ್ತವದಲ್ಲಿನ ದೇವರ ರಾಜ್ಯವು, ಸೊಲೊಮೋನನ ಕೈಯಿಂದ ಸ್ಥಾಪಿತಗೊಂಡಿತ್ತು. ಆತನು ಛಾಯಾರೂಪದ ಮಂದಿರ ಅಥವಾ ಆಲಯವನ್ನು ದೇವರ ಹೆಸರಿನಲ್ಲಿ ಕಟ್ಟಿದ್ದನು. ದೇವರು ಆತನೊಡನೆ ತನ್ನ ಮಗನಂತೆ ನಡಕೊಂಡವನಾಗಿ ಆತನು ನಡೆಸಿದ ಅಧರ್ಮಕ್ಕಾಗಿ ಶಿಕ್ಷಿಸಿದ್ದರೂ ಆತನೊಡನೆ ತನ್ನ ಕರುಣೆಯನ್ನು ಮುಂದುವರೆಸುವವನಾಗಿದ್ದು ರಾಜ್ಯಾಧಿಕಾರವನ್ನು ಸೌಲನಿಂದ ತೆಗೆದುಹಾಕಿದಂತೆ ದಾವೀದನ ವಂಶದ ಪಾರಂಪರಿಕ ಸಂತಿಯಿಂದ ಬಿಟ್ಟುಹೋಗದಂತೆ ಮಾಡಿದ್ದನು.

14ನೇ ವಚನವು ಪವಿತ್ರಾತ್ಮನಿಂದ ಹುಟ್ಟಿದವರಾದ ದೇವರ ಮಕ್ಕಳೂ ಬರುವ ರಾಜ್ಯದಲ್ಲಿ [ಕ್ರಿಸ್ತನೊಂದಿಗೆ] ಸಹಬಾಧ್ಯರೂ ಆಗುವಂಥವರಿಗೆ ಸೂಕ್ತವಾಗಿ ಅನ್ವಯವಾಗಬಹುದು. "ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ?" [ಸಭೆಯೆಂಬ] ದೇಹಕ್ಕೆ ಶಿರಸ್ಸಾಗಿರುವವನಲ್ಲಿ ಪಾಪವಿಲ್ಲದಿದ್ದರೂ ಮುಂಬರುವ ರಾಜ್ಯದಲ್ಲಿ ಆತನು ಹೊಂದಲಿರುವ ದೊಡ್ಡ [ಪ್ರಭಾವದ] ಸ್ಥಾನಕ್ಕಾಗಿ ಸಿದ್ಧತೆಹೊಂದುವ ಸಲುವಾಗಿ ಅನುಭವವೆಂಬ ಶಿಕ್ಷಣದ ಅಗತ್ಯವಾಗಿತ್ತು. ಪ್ರವಾದಿಯೂ ಸಾರಿ ಹೇಳಿದಂತೆ ನಿಜವಾಗಿಯೂ ಆತನು ನರಜನ್ಮದವರು ಹೊಂದಬೇಕಾಗಿದ್ದ ಪೆಟ್ಟನ್ನು ತಾನು ತೆಗೆದುಕೊಂಡಿದ್ದನು; ನಾವು ಆತನ ದೇಹದ ಅಂಗಗಳಾಗಿರಲಾಗಿ ತಂದೆಯು ನೀಡುವಂಥ ಅಗತ್ಯವಾದ ನೀತಿಶಿಕ್ಷೆಯಿಂದ ತಪ್ಪಿಸಿಕೊಳ್ಳಲಾರೆವು; ನಾವು ಇವುಗಳನ್ನು ಪುತ್ರಭಾವದಿಂದ ಸ್ವೀಕರಿಸುವ ಪರ್ಯಂತರ ಇವು ನಮ್ಮನ್ನು ಬೆಳಕಿನ ರಾಜ್ಯದಲ್ಲಿ ದೇವಜನರೊಂದಿಗೆ ಬಾಧ್ಯತೆಹೊಂದಲು ಯೋಗ್ಯರನ್ನಾಗ ಮಾಡಿ ತಂದೆಯ ಚಿತ್ತವನ್ನು ತಿಳಿದುಕೊಂಡು ಅದನ್ನು ಮಾಡಲು ಪರಿಶ್ರಮಿಸುವವರಾಗುವಂತೆ ಮಾಡುವದು.

*****

ದಾವೀದನ ಕರುಣೆ

ರೀಪ್ರಿಂಟ್ಸ್ ಪುಟ 2010

2 ಸಮುವೇಲ 9:1–13

"ಕ್ರೈಸ್ತ ಸಹೋದರರು ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ." ರೋಮಾ 12:10

ಈ ಪಾಠದಲ್ಲಿನ ಘಟನೆಯನ್ನು ಪರಿಗಣಿಸುವಾಗ ನಾವು ಅಪೋಸ್ತಲನಾದ ಯಾಕೋಬನ ಈ ಮಾತನ್ನು ನೆನಪಿಸಿ–ಕೊಳ್ಳುವವರಾಗಿದ್ದೇವೆ: "ಬಾಧೆಯನ್ನು ತಾಳ್ಮೆಯಿಂದ ಸಹಿಸಿಕೊಳ್ಳುವ ವಿಷಯದಲ್ಲಿ ಕರ್ತನ ಹೆಸರಿನಲ್ಲಿ ಮಾತಾಡಿದ ಪ್ರವಾದಿಗಳನ್ನೇ ಮಾದರಿಮಾಡಿಕೊಳ್ಳಿರಿ." ಅವು ಇಂಥಾ ನಿದರ್ಶನಗಳನ್ನು ಪ್ರಸ್ತುತಪಡಿಸುತ್ತವೆ–ಅವು ನಂಬಿಕೆ, ದೈನ್ಯತೆ,

ಸಾತ್ವಿಕತ್ವ, ವಿಧೇಯತೆ, ತಾಳ್ಮೆ, ಸಹಿಷ್ಣುತೆ, ಸಹೋದರ ಪ್ರೇಮ, ಪ್ರೀತಿ, ಎಂಬಿವುಗಳೇ. ದೇವರ ಮೇಲಿನ ಹಾಗು ಆತನ ಧ್ಯೇಯೋದ್ದೇಶದ ಮೇಲಿನ ಮೋಶೆಯ ಶ್ರದ್ಧಾಭಕ್ತಿ, ಆತನ ಬಳಲಿಹೋಗದ ಉತ್ಸಾಹ, ವರುಷಗಳ ಪರ್ಯಂತರವಾದ ತೀವ್ರವಾದ ಪರಿಶೋಧನಾ ಭರಿತವಾದ ಪ್ರೀತಿಪೂರ್ವಕ ಸೇವೆ ಇವುಗಳನ್ನು ನಾವು ನಮ್ಮ ನೆನಪಿಗೆ ತಂದಕೊಳ್ಳುವೆವು; ತಮ್ಮ ಜೀವನ ಪರ್ಯಂತರವಾದ ಕುಗ್ಗದ ಚೈತನ್ಯದಿಂದ ಕೂಡಿದ ನಂಬಿಕೆಯುಳ್ಳವರು ಮಾಡುವಂಥ ಒಳ್ಳೆಯ ಹೋರಾಟವನ್ನು ಮಾಡಿದ ಅಬ್ರಹಾಮನ ಯಾಕೋಬನ ಸಮುವೇಲನ ದಾವೀದನ ಹಾಗು ಪೂರ್ವದಲ್ಲಿ ನಂಬಿಕೆಯ ಮೂಲಕವಾಗಿ ಹೆಸರು–ಗೊಂಡವರ ಪಟ್ಟಿಯಲ್ಲಿರುವ ಘನವಂತರೆಲ್ಲರ ವಿಧೇಯ–ಪೂರ್ಣವಾದ ವಿಶ್ವಾಸ, ಇವುಗಳನ್ನು ಸಹ ಗುರುತಿಸಿಕೊಳ್ಳುವವ–ರಾಗಿದ್ದೇವೆ. ನಾವು ಈ ನಿಷ್ಠಾಪೂರ್ಣ ನಂಬಿಗಸ್ತಿಕೆಯ ಯೋಗ್ಯ ಮಾದರಿಗಳನ್ನು ಪರಿಗಣಿಸುವಲ್ಲಿ ಈ ಗುಣಸ್ವಭಾವಗಳು ಕೇವಲ ಚಂದ್ರನ ಬೆಳಕಿನಂತಿರುವ ಧರ್ಮಶಾಸ್ತ್ರ ನೇಮವಿಧಿಗಳ ವ್ಯವಸ್ಥೆಯ ಕಾಲದಲ್ಲಿ ಅಭಿವೃದ್ಧಿಗೊಂಡಂಥವುಗಳೆಂಬುದನ್ನು ನೆನಪಿಸಿಕೊಳ್ಳುವೆವು. ಈ ಸಂಗತಿಗಳನ್ನು ದೃಷ್ಟಿಸುವದರ ಮೂಲಕವಾಗಿ ಅಪೋಸ್ತಲನಾದ ಪೇತ್ರನು ನಮ್ಮ ಗಮನಕ್ಕೆ ತಂದಿರುವ ನಿರೂಪಣೆಯನ್ನು ಸಹ ನಮ್ಮ ವಿವೇಚನೆಯು ಸಲಹೆಮಾಡುವದು; ಅದೇನಂದರೆ ಈ ಸುವಾರ್ತಾ ದೈವಾನುಗ್ರಹ ವ್ಯವಸ್ಥೆಯಲ್ಲಿನ ಬಹು ಅಧಿಕವಾದ ಕೃಪಾನುಗ್ರಹವನ್ನು ಸ್ವೀಕರಿಸಿಕೊಂಡಿರುವ ನಾವು **"ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ?"** ಎಂಬದೇ. – (2 ಪೇತ್ರ 3:11)



ಒಬ್ಬ ಒಳ್ಳೆಯ ಅರಸನಾದ ದಾವೀದನು – ಲೈಫ್ ವೇ ಕಲೆಕ್ಷನ್

ಈ ಪಾಠದಲ್ಲಿ ಗಮನವನ್ನು ಹರಿಸಿರುವ ದಾವೀದನ ಕರುಣೆಯು ಮತ್ತೊಂದು ಉದಾತ್ತಗುಣದ ಗುರುತಾಗಿರುವದು. ದಾವೀದನು ಈಗ ತನ್ನ ರಾಜ್ಯದಲ್ಲಿ ಬಹುವಾಗಿ ಸ್ಥಿರಗೊಂಡು ಏಳಿಗೆಯಾದ್ದನು. ತಾನು ಅಭಿಷೇಕವಾದ ನಂತರದ ಆತನ [ದಾವೀದನ] ಮಾರ್ಗವು ಒರಟಾದ ಹಾಗು ಕೋಲಾಹಲ–ವುಳ್ಳದ್ದೂ ಆಗಿತ್ತು; ಬಹು ತೀಕ್ಷ್ಣವಾದ ಪರಿಶೋಧನೆಗಳಿಗೆ ಕಾರಣವಾದವುಗಳಲ್ಲಿ ತನ್ನ ಹಾಗು ಸೌಲನ ಮಗನಾದ ಯೋನಾತಾನನ ಗುರುತರವಾದ ಸ್ನೇಹವು ಒಂದಾಗಿದ್ದು, ಅದು ಪೂರ್ಣವಾಗಿ ಪ್ರಮಾಣೀಕರಿಸಲ್ಪಟ್ಟು ಸ್ಥಿರವಾಗಿ ಬಂಧನ–ಗೊಂಡಿತ್ತು. ಯೋನಾತಾನನು ಅನಿರ್ಬಂಧಿತನಾಗಿ ದೇವರ ಚಿತ್ತಕ್ಕೆ ಅಧೀನನಾಗಿದ್ದು ಇದು ಆತನು ಇಸ್ರಾಯೇಲ್ಯರ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಲು ಅಡ್ಡಿಯಾಗಿ ದಾವೀದನಿಗೆ ಅದನ್ನು ನೀಡುವಂತಾಗಿತ್ತು; ದಾವೀದನು ತನ್ನ ರಾಜ್ಯದಲ್ಲಿ ಹೀಗೆ ಸ್ಥಾಪನೆಗೊಂಡಾಗ ಆತನು ಯಾವಾಗಲೂ ತನ್ನ ಹಾಗು ತನ್ನ ಮುಂದಿನ ತಲೆಮಾರುಗಳಿಗೆ ದಯೆ ತೋರಿಸಬೇಕೆಂಬುದನ್ನು ಯೋನಾತಾನನು ಬಯಸಿದವನಾಗಿ ದಾವೀದನಿಂದ ಇದಕ್ಕಾಗಿ ಭರವಸೆಯನ್ನು ಪಡೆದುಕೊಂಡಿದ್ದನು. 1 ಸಮುವೇಲ 20:14–17 ನೋಡಿರಿ.

ತನ್ನ ಏಳಿಗೆಯ ಸುದೀರ್ಘ ಕಾಲದ ನಂತರ ಅಂದರೆ ಯೋನಾತಾನನು ತನ್ನ ವಿಶ್ರಾಂತಿಗೆ ಸೇರಿದ ವರುಷಗಳ ನಂತರ ಆತನ ತಲೆಮಾರಿನವರ ದಿನಗಳು ಬಂದಾಗ ದಾವೀದನು [ಯೋನಾತಾನನೊಡನೆಯ] ತನ್ನ ಒಡಂಬಡಿಕೆಯನ್ನು ನೆನಪು ಮಾಡಿಕೊಂಡವನಾಗಿ ಆತನ ತಲೆಮಾರಿನವರಿಗೆ ತಾನು ದೇವರ ದಯೆಯನ್ನು ತೋರಬಹುದೆಂಬ ಉದ್ದೇಶದಿಂದ ಸೌಲನ ಮನೆತನದವರಲ್ಲಿ ಯಾರಾದರೂ ಉಳಿದುಕೊಂಡಿದ್ದಾರೋ ಎಂಬುದನ್ನು ವಿಚಾರಿಸಿದ್ದನು. ಆತನು ಅವರಲ್ಲಿ ಒಬ್ಬನನ್ನು ಕಂಡುಕೊಂಡಿದ್ದು, ಅವನು ತನ್ನ ಸ್ನೇಹಿತನಾದ ಯೋನಾತಾನನ ಉಳಿದಿದ್ದ ಒಬ್ಬನೇ ಮಗನಾಗಿದ್ದು, ಯೋನಾತಾನನು ಉಳಿದುಕೊಂಡಿದ್ದೇಯಾದಲ್ಲಿ ಆತನಿಗೆ ಪ್ರೀತಿಕರುಣೆಗಳನ್ನು ಹೇರಳವಾಗಿ ತೋರಿಸುವಂಥದ್ದನ್ನು ಈತನಿಗೆ ತೋರಿಸಲು ಸಂತೋಷವುಳ್ಳವನಾಗಿದ್ದನು. ದಾವೀದನು ಕೃತಜ್ಞತಾ–ಪೂರ್ವಕವಾಗಿ ತನ್ನ ಸ್ನೇಹಿತನ ಪ್ರೀತಿಯನ್ನು ನೆನಪು–ಮಾಡಿಕೊಂಡು, ಪ್ರೀತಿಪೂರ್ಣನಾಗಿ ತನ್ನ ಸಾಮರ್ಥ್ಯದ ಅನುಸಾರವಾಗಿ ಅವಶ್ಯವಾದುದನ್ನು ಮಾಡಲು ಪ್ರಯತ್ನಿಸಿದ್ದನು.

ನೀತಿಯ ಒಂದು ಗುಣಕ್ಕೆ ಹೆಚ್ಚು ಅಲಂಕೃತವಾಗಲು ಕೃತಜ್ಞತಾಭಾವಕ್ಕಿಂತಲೂ ಯೋಗ್ಯವಾದ ವಿಶೇಷ ಭಾವವು ನಿಜವಾಗಿಯೂ ಮತ್ತೊಂದಿಲ್ಲ. ಸೃಷ್ಟಿಗಳಿಂದ ಸೃಷ್ಟಿಕರ್ತನಾದ ದೇವರಿಗೆ ಮರಳಿ ಸಲ್ಲಿಸಬೇಕಾದ ಪ್ರೀತಿಪೂರ್ಣಭಾವವು ಕೃತಜ್ಞತಾಭಾವವೇ. ಸ್ನೇಹಿತರ ನಡುವಿನ ನಿಷ್ಠಾಪೂರ್ಣ ಶ್ರದ್ಧಾಭಾವದ ಪಾತ್ರೆಯನ್ನು ಪ್ರೋತ್ಸಾಹಿಸಿ ಮಧುರ–ಗೊಳಿಸುವಂಥದ್ದು ಕೃತಜತಾಭಾವವೇ. ಕೃತಜ್ಞತಾಭಾವವು ಯಾವಾಗಲೂ ಸಲ್ಲತಕ್ಕ ಪ್ರತಿಫಲವಲ್ಲದಿದ್ದರೂ, ಇದು ಪ್ರೀತಿಪೂರ್ವಕವಾದ ಸೇವೆಗೆ ವಿಶೇಷವಾಗಿ ಸ್ವಾರ್ಥ ತ್ಯಾಗದಿಂದ ಕೂಡಿದ ಸೇವೆಗೆ ಸಲ್ಲತಕ್ಕ ಯೋಗ್ಯ ಪ್ರತಿಫಲವಾಗಿರುವದು. ಅಯ್ಯೋ, ಲೋಕದ ಮನೋಭಾವವು ಇದರಿಂದ ಎಷ್ಟುದೂರ ಸರಿದು ಹೋಗಿರುವದೆಂದರೆ, ಪ್ರೀತಿಪೂರ್ಣವಾದ ನಿಸ್ವಾರ್ಥ ಸೇವೆಗೆ ಪದೇ ಪದೇ ದೊರೆಯುವ ಪ್ರತಿಫಲವು ತಣ್ಣನೆಯ ಕೃತಜ್ಞತಾಹೀನವಾದ ಅನಾದರದಿಂದ ಕೂಡಿದ ದೂಷಣೆ ಇಲ್ಲವೇ ಹಿಂಸಾಪೂರ್ವಕವಾಗಿರುವಂಥದ್ದು ವಿರಳವಾದ ಸಂಗತಿಯೇನಲ್ಲ. ಅದುದರಿಂದ ಸದ್ಭಕ್ತರಾಗಿ ಜೀವಿಸುವಂಥವರು ಹಾಗು ದೇವಭಕ್ತಿಯ ಗುಣಗಳನ್ನು ಬೆಳೆಸಿಕೊಳ್ಳುವಂಥವರು ಇಲ್ಲಿ ಪ್ರತಿಫಲಹೊಂದಲು ವಿಫಲರಾದಲ್ಲಿ ಇಲ್ಲವೇ ತಮ್ಮ ಕರ್ತವ್ಯವನ್ನು

ನಿರ್ವಹಿಸುವಾಗ ಮುಖಭಂಗವಾದಲ್ಲಿ ಅವರು ನಿರಾಶರಾಗಬಾರದು; ಇವು ಕರ್ತವ್ಯವನ್ನು ನಿರ್ವಹಿಸುವಾಗ ಖಂಡಿತವಾಗಿ ಬರುವಂಥದ್ದಾಗಿರುವದು. ಅವರು ನೀತಿಯ ಹಾಗು ಸತ್ಯದ ಸಲುವಾಗಿರುವ ತಮ್ಮ ಶ್ರದ್ಧೆಯನ್ನು ಪ್ರಮಾಣೀಕರಿಸುವ ಅವಕಾಶವಾಗಿರುವದೆಂದು ಖಚಿತವಾಗಿ ಮನವರಿಕೆಮಾಡಿಕೊಳ್ಳಲಿ. ಈಗ ದೊರೆಯುವ ಪ್ರತಿಫಲವು ನಿಂದನೆ ಮತ್ತು ಕೃತಜ್ಞತಾಹೀನತೆ ಆದರೂ ಇವುಗಳನ್ನು ತಾಳ್ಮೆಯಿಂದ ತೆಗೆದುಕೊಂಡವರಾಗಿ ದೀನಭಾವದಿಂದ ಸಹಿಸಿಕೊಳ್ಳುವಂಥವರಾಗಲಿ. ನೀತಿಗೆ ದೊರೆಯುವ ಸೂಕ್ತ ಪ್ರತಿಫಲಕ್ಕಾಗಿ ದೇವರ ನಿಗದಿತ ಸಮಯಕ್ಕಾಗಿ ಹಾಗು ದೇವರ ವಿಧಾನಕ್ಕಾಗಿ ಕಾದುಕೊಂಡಿರುವಲ್ಲಿ ತೃಪ್ತರಾಗಿರಲಿ. ತಮ್ಮ ಜೀವವು ತಮಗೆ ಅತ್ಯಮೂಲ್ಯವೆಂದು ಎಣಿಸದ ಇಂಥ ಜಯಶಾಲಿಗಳು [ಪ್ರಿಯನಾದ] ದಾವೀದನ ವರ್ಗದವರಾಗಿರುವರು.

ನಮ್ಮಲ್ಲಿ ಪ್ರತಿಯೊಬ್ಬನೂ ದೇವರ ಹೋಲಿಕೆಯಲ್ಲಿನ ಈ ಗುಣವನ್ನು ಅನುಷ್ಠಾನಕ್ಕೆ ತರಲು ಹೆಚ್ಚು ಹೆಚ್ಚು ಪ್ರಯತ್ನಗಳನ್ನು ಮಾಡಿದವನಾಗಿ ವರುಷ ಕಳೆದಂತೆಲ್ಲಾ ತಾನು ಈ ಮೂಲ ಗುಣದಲ್ಲಿ ಕೆಲವು ಹಂತದ ಪ್ರಗತಿ ಹೊಂದಿರುವದನ್ನು ಗುರುತಿಸಿಕೊಳ್ಳಲು ಸಮರ್ಥರಾಗಬೇಕೆಂಬದನ್ನು ಹೊರತುಪಡಿಸಿದಲ್ಲಿ ಈ ಪಾಠದ ಸುವರ್ಣಮಯ ಪಠ್ಯಭಾಗಕ್ಕೆ [ಬೇರೆ] ವ್ಯಾಖ್ಯಾನದ ಅಗತ್ಯವಿರುವದಿಲ್ಲ. ಅವನು ಈ ವಾಕ್ಯದ ಕಡೆಯಭಾಗವನ್ನು ಅಂದರೆ "ಮಾನಮರ್ಯಾದೆಯನ್ನು ತೋರಿಸುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಲಿ" ಎಂಬುದರಲ್ಲಿ ತಿಳಿಸಲಾಗಿರುವ ಸಹೋದರ ಪ್ರೀತಿಯ ಬಗ್ಗೆ ಇರುವ ಖಚಿತ ಪ್ರಮಾಣವನ್ನು ಕಡೆಗಣಿಸದಿರಲಿ; ಇನ್ನೊಂದು ಸಂದರ್ಭದಲ್ಲಿ ಇದೇ ಅಪೋಸ್ತಲನ ಈ ಪ್ರಬೋಧನೆಯನ್ನು ಅಂದರೆ "ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತ ಶ್ರೇಷ್ಠವೆಂದೆಣಿಸಲಿ" (ಫಿಲಿಪ್ಪಿ 2:3) ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಲಿ. ನಾವು ಕೇವಲ ಒಬ್ಬರನ್ನೊಬ್ಬರು ಪ್ರೀತಿಸುತ್ತೇವೆಂದು ಹೇಳಿ ಸ್ವಾರ್ಥಭಾವದ ವಿಧಾನವನ್ನು ಸ್ಥಿರವಾಗಿ ಮುಂದುವರೆಸಿಕೊಂಡು ಹೋದಲ್ಲಿ ಪ್ರೀತಿಯು ತೋರ್ಪಡುವದೆಲ್ಲಿ? ನಾವು ಬರಿಮಾತಿನಿಂದಾಗಲೀ ಬಾಯುಪಚಾರದಿಂದಾಗಲೀ ಪ್ರೀತಿಸುವವರಾಗಿರಬಾರದು; ನಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು. – 1 ಯೋಹಾನ 3:18

*****

ದಾವೀದ ಯೋನಾತಾನರು

ರೀಪ್ರಿಂಟ್ಸ್ ಪುಟ 1907ರಿಂದ ಆಯ್ದ ಭಾಗವು

ಅಲ್ಲದೆ ಯೋನಾತಾನನ ಮನೆತನದವರಿಗೆ ತಾನು ಕರುಣೆತೋರುವದನ್ನು ನಿಲ್ಲಿಸಬಾರದೆಂಬ ತನ್ನ ಒಡಂಬಡಿಕೆಯನ್ನು ದಾವೀದನು ನೆನಪಿನಲ್ಲಿಟ್ಟುಕೊಂಡಿದ್ದಂತೆ (2 ಸಮುವೇಲ 9:1–13) ಮಹಿಮಾ ಪದವಿಗೆ ಸೇರಿದ ಕ್ರೈಸ್ತ ಸಭೆಯು ಮೊದಲು ಪೂರ್ವದಲ್ಲಿ ನಂಬಿಕೆಯ ಮೂಲಕವಾಗಿ ಹೆಸರುಗೊಂಡವರಿಗೆ ಆಶೀರ್ವದಿಸುವದನ್ನು ನಂತರ ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವಂಥ ಭೂಲೋಕದ ಎಲ್ಲಾ ಕುಲಗಳಿಗೆ ಆಶೀರ್ವಾದ ಮಾಡುವಂಥ ತಮ್ಮ ಒಡಂಬಡಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳುವರು. ಸೌಲನು ದಾವೀದನನ್ನು ಹಿಂದಟ್ಟಿದಂತೆ ಸೈತಾನನು ನಮ್ಮನ್ನು ಕ್ರೋಧದಿಂದ ("ಗರ್ಜಿಸುವ ಸಿಂಹದಂತೆ"– 1 ಪೇತ್ರ 5:8) ಹಿಂದಟ್ಟುಟ್ಟುತ್ತಿರಲು ಧರ್ಮಶಾಸ್ತ್ರ ಹಾಗು ಪ್ರವಾದನೆಗಳ ಮೂಲಕವಾದ ಹಾಗು ತಮ್ಮ ಭಯಭಕ್ತಿಯುಳ್ಳ ಜೀವಿತ ಹಾಗು ಗುಣನಡತೆಯು ನಿದರ್ಶನಗಳಿಂದ ಕೂಡಿದ ಅವರ [ನಂಬಿಕೆ ವೀರರ] ಪ್ರೀತಿಪೂರ್ಣವಾದ ಸೇವೆಯು ನಮಗೆ ಬಹು ಸಹಾಯಕವಾಗಿದ್ದು, ಇದನ್ನು "ನಿರಂತರವಾಗಿ ನೆನಪಿನಲ್ಲಿಡಲಾಗುವದು."

*****

ದಾವಿದನ ಗೆಲುವುಗಳು

ರೀಪ್ರಿಂಟ್ಸ್ ಪುಟ 2015

2 ಸಮುವೇಲ 10:8–19

"ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು?" ಕೀರ್ತನೆ 27:1

ಕೇವಲ ಒಮ್ಮೊಮ್ಮೆ ಶಾಂತಿಯುತವಾಗಿದ್ದ ದಾವೀದನ ಆಳ್ವಿಕೆಯು ಬಹುವಾಗಿ ಒಂದು ಯುದ್ಧದ ಪರಂಪರೆಯಾಗಿತ್ತೆಂಬದು ನಿಜವಾಗಿದ್ದರೂ, ಈ ಯುದ್ಧಗಳು ಆಕ್ರಮಣಕಾರಿ ಯುದ್ಧಗಳಾಗಿರದೆ ಇಲ್ಲವೇ ಗೆಲುವಿನ ಸಲುವಾದ ಯುದ್ಧಗಳಾಗಿರದೆ ಅವು ಯಾವಾಗಲೂ ರಕ್ಷಣಾತ್ಮಕವಾಗಿದ್ದವು ಎಂಬುದನ್ನು ಗಮನಿಸಬೇಕು. ತನ್ನ ಸುತ್ತಲಿನ ಜನಾಂಗದ ಬಗ್ಗೆ ದಾವೀದನ ಧೋರಣೆಯು ವಿವೇಕವೂ ಕರುಣೆಯೂ ಉಳ್ಳದ್ದಾಗಿದ್ದರೂ, ಅವರು ಇಸ್ರಾಯೇಲ್ಯರ ಕಡೆಗೆ ಅಂಥಾ ಪ್ರವೃತ್ತಿಯುಳ್ಳವರಾಗಿರಲಿಲ್ಲ. ಇಸ್ರಾಯೇಲ್ಯರು ಅಧಿಕಾರದಲ್ಲಿ ಬೆಳೆದು ಸಮೃದ್ಧರಾದುದಕ್ಕೆ ಅವರು ಅಸೂಯೆಪಟ್ಟಿದ್ದು, ಇದರಿಂದ ಪ್ರೇರಿತರಾಗಿ ಅವರು ಆಕ್ರಮಣ ಮಾಡಿದ್ದರು. ದೇವಜನರ ನಿಷ್ಠಾವಂತ ಹಾಗು ದೇಶಭಕ್ತ ಸೇವಕನಾದ, ದಾವೀದನಿಗೆ ಇವೆಲ್ಲವುಗಳನ್ನು ಹಿಮ್ಮೆಟ್ಟಿಸುವದು ಅವಶ್ಯವಾಗಿತ್ತು. ಆ ಜನಾಂಗಗಳ ಪ್ರವರ್ತನೆಯು ದೇವರು ಆದುಕೊಂಡ

ಜನರನ್ನು ನಿರ್ನಾಮ ಮಾಡುವ ಅಥವಾ ಹೊರದೂಡುವ–ದಾಗಿದ್ದು, ಹೀಗಾಗಿ ದಾವೀದನಿಗೆ ಅನುಸರಿಸಲು ಕೇವಲ ಇದ್ದ ಒಂದೇ ಮಾರ್ಗವು ಅದು ಹೋರಾಡುವದಾಗಿತ್ತು.

"ಸಮಾಧಾನಪಡಿಸುವವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು" ಎಂಬುದು ಬರೆಯಲ್ಪಟ್ಟಿರುವಲ್ಲಿ "ನನ್ನ ಶರಣನಾದ ಯೆಹೋವನಿಗೆ ಕೊಂಡಾಟವಾಗಲಿ; ಆತನು ನನ್ನ ಕೈಗಳಿಗೆ ಯುದ್ಧ ವಿದ್ಯೆಯನ್ನೂ ನನ್ನ ಬೆರಳುಗಳಿಗೆ ಕಾಳಗವನ್ನು ಕಲಿಸಿದ್ದಾನೆ." ಎಂಬುದನ್ನೂ ಬರೆಯಲಾಗಿರುವದು. ಇರುವಂಥ ಸರಳ ಸಲಹೆಯೆಂದರೆ ಕೀಳು ಮಟ್ಟದ ಶಾಂತಿಯೆಂಬ ಸಂಗತಿಯು ಒಂದಿದ್ದು, ಅದು ನೀತಿ ತತ್ವಗಳಿಗೆ ಹಾಗು ಸತ್ಯಾರ್ಥದ ಬಗ್ಗೆ ಅನಾದರ ತೋರುವಂಥಾ ಸಂಗತಿಯಿಂದ ಬರುವಂಥ ಶಾಂತಿಯಾಗಿದ್ದು, ಅದನ್ನು ಬಹು ಬೆಲೆಯನ್ನು ಕೊಟ್ಟು ಕೊಂಡುಕೊಂಡಿರುವದಲ್ಲದೆ, ಅದನ್ನು ಅಗೌರವದಿಂದ ಪಾಲಿಸಿಕೊಂಡು ಬರುವಂಥದ್ದಾಗಿರುವದು. ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ದೇವರು ನಮ್ಮನ್ನು ಬಲಪಡಿಸಿ ನಮ್ಮ ಕೈಗಳಿಗೆ ಯುದ್ಧವಿದ್ಯೆಯನ್ನು ಕಲಿಸದ ಹೊರತು ಯಾವ ಯುದ್ಧವಾದರೂ ನೀತಿಯುಳ್ಳ ಯುದ್ಧವಾಗಿರದೆಂಬುದನ್ನು ನೆನಪಿನಲ್ಲಿಡಬೇಕು; ಯುದ್ಧವು ದೇವರದಾಗಿದ್ದು ಅದು ಆತನ ಗೌರವವನ್ನು ಕಾಪಾಡುವ ಹಾಗು ಆತನ ನೀತಿ ತತ್ವಗಳನ್ನು ಸ್ಥಾಪಿಸುವ ಸಲುವಾಗಿದ್ದು ಆತನ ದ್ಯೇಯೋದ್ದೇಶಗಳನ್ನು ಹಾಗು ಆತನ ಜನರನ್ನು ರಕ್ಷಿಸುವದಾಗಿದ್ದಲ್ಲಿ ಅದು ನೀತಿಯುದ್ಧವಾಗಿರುವದು. ಛಾಯಾರೂಪದ ಇಸ್ರಾಯೇಲ್ಯರ ವ್ಯವಸ್ಥೆಯಲ್ಲಿ ಲೋಕಸಂಬಂಧ ಆಯುಧಗಳ ಮೂಲಕವಾಗಿ ಯುದ್ಧವನ್ನು ಸೂಕ್ತವಾಗಿ ನಡೆಸಲಾಗುತ್ತಿತ್ತು; ಆದರೆ ದೇವರಾತ್ಮನ ಮೂಲಕವಾದ ವ್ಯವಸ್ಥೆಯಲ್ಲಿ ನಮಗೆ ಸೂಚಿಸಿರುವದೇನಂದರೆ – "ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದವುಗಳಲ್ಲ; [ಹೀಗಿದ್ದರೂ] ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ" ಎಂಬುದು. (2 ಕೊರಿಂಥ 10:4) ತನಗೆ ದೇವರ ಬಲ ಹಾಗು ಕೌಶಲ್ಯವನ್ನು ಕೊಡಲ್ಪಡುವದು ಪರಾಕ್ರಮವುಳ್ಳ ಕ್ರಿಸ್ತೀಯ ಸದ್ಗುಣಗಳನ್ನು ಧರಿಸಿಕೊಂಡು ಒಬ್ಬ ಒಳ್ಳೆಯ ಕ್ರೂಜೆಯ ಸೈನಿಕನಾಗಿ ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡಲು ಹೋಗುವಂಥದ್ದು ಎಲ್ಲಾ ಕಡೆಯಿಂದಲೂ ತನ್ನೊಳಗೆ ದೃಡವಾಗಿ ನುಸುಳಿಕೊಂಡಿರುವ ಅಂಧಕಾರದ ಶಕ್ತಿಗಳ ವಿರುದ್ಧವಾಗಿಯೆಂಬುದನ್ನು ಯಾವಾಗಲೂ ಗ್ರಹಿಸಿಕೊಳ್ಳಲು ಸಾಧ್ಯವುಳ್ಳ ಮನುನುಷ್ಯನು ಧನ್ಯನು. ಹೀಗೆ ನಿಜವಾಗಿಯೂ ಅವನು ಜಯಶಾಲಿಯಾದ ಕ್ರೂಜೆಯ ಸೈನಿಕರಿಗೆ ವಾಗ್ದಾನಮಾಡಲಾದ ಬಹುಮಾನವನ್ನು ಗಳಿಸಿಕೊಳ್ಳಬಹುದು. (ಪ್ರಕಟನೆ 2:7,11,17,26,28: 3:5,12,21) ಅಲ್ಲದೆ ಸಮಾಧಾನ–ಪಡಿಸುವನಿಗೆ ಆಶೀರ್ವಾದ ಲಭಿಸುವಂಥದು ಖಚಿತ; ಯಾಕಂದರೆ ನಂಬಿಗಸ್ತಿಕೆಯಿಂದ ನಡೆಸಿದ ಒಂದು ಒಳ್ಳೆಯ ಹೋರಾಟದ ಮೂಲಕವಾಗಿ ಗಳಿಸಿದ ಮಹಿಮಾಪೂರ್ಣವಾದ ಶಾಂತಿಯು ಒಂದು ಆಶೀರ್ವಾದಕರವಾದ ಶಾಂತಿಯಾಗಿದ್ದು ಅದು ನೀತಿ ತತ್ವಗಳ ಮೇಲಿನ ಖಚಿತವಾದ ಅಸ್ತಿವಾರದ ಮೇಲೆ ಅವಲಂಬಿತವಾದ ಒಂದು ಶಾಂತಿಯಾಗಿರುವದು. ಆದರೆ ಓ ಕ್ರೈಸ್ತನೇ ಎಚ್ಚರಿಕೆಯಾಗಿರು, ನೀನು ಇದು ದೇವರ ಯುದ್ಧವೆಂಬ ಭರವಸೆಯನ್ನು ಹೊಂದದೆ ಎಂದೂ ಯುದ್ಧಕ್ಕೆ ಹೋಗಬಾರದು. ದಾವೀದನಂತೆ ನಿನ್ನ ವಿಚಾರಣೆಯು ಕರ್ತನೇ ನಾನು ಯುದ್ಧಕ್ಕೆ ಹೋಗಲೇ? ಎಂದಿರಲಿ. (1 ಸಮುವೇಲ 23:2,4; 30:7,8; 2 ಸಮುವೇಲ 5:18,19,22,23) ಆನಂತರ ಆತನಂತೆ [ದಾವೀದನಂತೆ] ಯುದ್ಧವು ದೇವರದೇ ಎಂಬ ಭರವಸೆಯಳ್ಳ ಉತ್ತರಕ್ಕೆ ಕಾದುಕೊಂಡಿರಲಿ.

ಹೀಗೆ ಹೋರಾಟದಲ್ಲಿರುವವರೆಲ್ಲರೂ ಘನತೆಯಳ್ಳವರಾಗಿ ತಮ್ಮ ನುಡಿಯಿಂದ, ತಮ್ಮ ಕೃತ್ಯದಿಂದ, ಹಾಗೂ ತಮ್ಮ ಸಾಧಾರಣ ನಡವಳಿಕೆಯ ಮೂಲಕವಾಗಿ ನೀತಿಸತ್ಯತೆಗಳ ಸಲುವಾಗಿ ನಮ್ಮನ್ನು ವಿರೋಧಿಸುವಂಥ ಎಲ್ಲರೊಡನೆ – ಇಸ್ರಾಯೇಲ್ಯರ ಸೈನ್ಯಕ್ಕೆ ಯೋವಾಬನು ಹೇಳಿದ ಮಾತಿನಂತೆ ಅಂದರೆ "ದೈರ್ಯ–ದಿಂದಿರು, ನಮ್ಮ ಜನರಿಗೋಸ್ಕರವೂ ನಮ್ಮ ದೇವರ ಪಟ್ಟಣಗಳಿಗೋಸ್ಕರವೂ ನಮ್ಮ ಪೌರುಷವನ್ನು ತೋರಿಸೋಣ; ಯೆಹೋವನು ತನಗೆ ಸರಿಕಾಣುವಂತದನ್ನು ಮಾಡಲಿ.." ಎಂದು (ವಚನ 12ರಲ್ಲಿ) ಹೇಳಿದಂತೆ ನಾವು ಹೇಳುವೆವು. ಯುದ್ಧವು ದೇವರದಾಗಿದ್ದಲ್ಲಿ ಅದು ಖಂಡಿತವಾಗಿಯು ಜಯವುಳ್ಳದ್ದಾ–ಗಿರುವದು. "ಯಹೋವನ ಸನ್ನಿಧಿಯಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು." [ಕೀರ್ತನೆ 37:7]

ದಾವೀದನು ನಡೆಸಿದ ಯುದ್ಧಗಳು ದೇಶಗಳನ್ನು ಆಕ್ರಮಿಸಿಕೊಳ್ಳುವ ಇಲ್ಲವೇ ಕೊಳ್ಳೆಹೊಡೆಯುವ ಸಲುವಾಗಿ ಆಗಿರದೆ ಅದು ದೇವಜನರ ರಕ್ಷಣಾರ್ಥವಾಗಿರುತ್ತಿದ್ದರೂ ಅವುಗಳ ಫಲಿತಾಂಶವು ತಮ್ಮ ದೇಶದ ಮೇರೆಯನ್ನು ವಿಶಾಲಗೊಳ್ಳುವಂತೆ ಮಾಡಿತ್ತು. ಹೀಗಾಗಿ ಆಗ ಮೊದಲನೆಯ ಸಾರಿ ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವು ನೆರವೇರುವಂತಾಗಿತ್ತು. (ಆದಿಕಾಂಡ 15:18) ಅದೇನಂದರೆ ಅತನ ಸಂತತಿಯು ಐಗುಪ್ತದ ನದಿಯಿಂದ ಯೂಫ್ರಟೀಸ್ ವರೆಗಿನ ಸೀಮೆಯನ್ನು ವಶಪಡಿಸಿ–ಕೊಳ್ಳಬೇಕೆಂಬದೇ. ತಮ್ಮ ಶತ್ರುಗಳಿಂದ ತೆಗೆದುಕೊಂಡ ಕೊಳ್ಳೆಯು ಬಹು ದೊಡ್ಡದಾಗಿತ್ತು. ಅಲ್ಲಿ ಚಿನ್ನದ ಗುರಾಣಿಗಳು, ಮತ್ತು ಚಿನ್ನ ಬೆಳ್ಳಿ ಮತ್ತು ತಾಮ್ರದ ಪಾತ್ರೆಗಳಿದ್ದವು. ಇವುಗಳು ದೇವರಿಗೆ ಪ್ರತಿಷ್ಠಿಸಲ್ಪಟ್ಟಿದ್ದು ಸೊಲೊಮೋನನು ಕಟ್ಟಿಸಿದ್ದ ದೇವಾಲಯಕ್ಕಾಗಿ ಇವುಗಳನ್ನು ಮೀಸಲಾಗಿಡಲಾಗಿತ್ತು.

ದಾವೀದನು ನಡೆಸಿದ ಯುದ್ಧಗಳಲ್ಲಿನ ನ್ಯಾಯಪರತೆ ಹಾಗು ಅದರಲ್ಲಿ ಆತನು ತೆಗೆದುಕೊಂಡಿದ್ದ ಧಾರ್ಮಿಕ ಶ್ರದ್ಧೆಯ ಭಾವವನ್ನು ಗಮನಿಸುವಲ್ಲಿ ದೇವರ ಮೇಲಿನ ಆತನ ಭಯಭಕ್ತಿ ಮತ್ತು ಆತನಲ್ಲಿದ್ದ ಉನ್ನತವಾದ ನ್ಯಾಯಪ್ರಜ್ಞೆಯು ಆತನ ಜೀವನದ ಅಲ್ಪ ವಿಷಯಗಳಲ್ಲಿಯೂ ಸಹ ಬಹು ಸಾಧಾರಣವಾಗಿ ಗುರುತುಹೊಂದಿರುತ್ತಿತ್ತು. ದೃಷ್ಟಾಂತವಾಗಿ ಹೇಳುವದಾದರೆ, ಆತನು ಅದುಲ್ಲಾಮನ ಗುಹೆಯಲ್ಲಿ ಅಡಗಿಕೊಂಡಿರುವಾಗ ಶತ್ರುಗಳಾದ ಫಿಲಿಷ್ಟಿಯರು ಹತ್ತಿರದಲ್ಲಿಯೇ ಪಾಳೆಯವನ್ನು ಮಾಡಿಕೊಂಡಿರಲು ಆತನು ನೀರಿಗಾಗಿ ಬಹುವಾಗಿ ಬಾಯಾರಿದ್ದನು, ಹೀಗಾಗಿ ಆತನ ಮೂವರು ಸೇನಾನಾಯಕರು ತಮ್ಮ ಜೀವವನ್ನು ಪಣಕ್ಕಿಟ್ಟು ಫಿಲಿಷ್ಟಿಯರ ಕಾವಲು ದಂಡಿನೊಳಗೆ

ನುಸುಳಿ ಅರಸನಿಗಾಗಿ ನೀರನ್ನು ತಂದಿದ್ದರು. ದಾವೀದನು– "ಯೆಹೋವನೇ ಈ ನೀರನ್ನು ಕುಡಿಯುವದು ನನಗೆ ದೂರವಾಗಿರಲಿ, ಇದು ಜೀವದಾಶೆ ತೊರೆದವರ ರಕ್ತ! ಇದನ್ನು ನಾನು ಕುಡಿಯುವದೇ ಇಲ್ಲ." ಎಂದು ಹೇಳಿ ಆ ನೀರನ್ನು ದೇವರಿಗೆ ಅರ್ಪಣೆಯಾಗಿ ನೆಲಕ್ಕೆ ಸುರಿದಿದ್ದನು. (2 ಸಮುವೇಲ 23:13–17; 1 ಪೂ.ವೃ. 11:15–19) ನಿಜವಾಗಿಯೂ ಭೂಲೋಕದ ರಾಜರುಗಳಲ್ಲಿ ಕೇವಲ ಕೆಲವೇ ಮಂದಿ ತಮ್ಮ ಸಹಚರರು ತಮಗೆ ಮಾಡಿದ ಯಾವುದೇ ತ್ಯಾಗವನ್ನು ಬಹು ಬೆಲೆಯುಳ್ಳದೆಂದು ಪರಿಗಣಿಸುವರು. ತಾವು ಸೃಷ್ಟಿಗೆ ಒಡೆಯರೆಂದು ಭಾವಿಸಿ–ಕೊಂಡಿದ್ದು ಅವರು ತಮ್ಮ ಸಹ–ಜೀವಿಗಳ ಹಕ್ಕುಬಾಧ್ಯತೆಗಳ ತ್ಯಾಗದ ಮೂಲಕವಾಗಿ ಭೋಗವಸ್ತುಗಳನ್ನು ತಮಗಾಗಿ ಕೊಂಡುಕೊಳ್ಳುವದು ತಮ್ಮ ಹಕ್ಕು ಹಾಗು ಅವರು [ಸಹ–ಜೀವಿಗಳು] ಕೇವಲ ತಮ್ಮ ಸೇವೆಗಾಗಿ ಉಂಟಾದ ಕೀಳು ದರ್ಜೆಯ ಜೀವಿಗಳೆಂದು ಹೆಮ್ಮೆಯಿಂದ ಹೇಳಿಕೊಳ್ಳುವರು. ಆದರೆ ದಾವೀದನ ವಿಷಯದಲ್ಲಿ ಹೀಗಿರಲಿಲ್ಲ.; ಇತರ ಪ್ರತಿಯೊಬ್ಬನೂ ಕೇವಲ ಒಬ್ಬ ಸಹೋದರನೆಂದು ಸ್ವಸ್ಥಚಿತ್ತದಿಂದ ತನ್ನನ್ನು ಎಣಿಸಿಕೊಂಡಿದ್ದನು; ಅಲ್ಲದೆ ಕೇವಲ ದೇವರಿಗೆ ಉತ್ಕೃಷ್ಟವಾದ ಭಯಭಕ್ತಿ ಹಾಗು ಸೂಕ್ತ ಗೌರವವು ಸಲ್ಲತಕ್ಕದೆಂದು ಪರಿಗಣಿಸಿಕೊಂಡಿದ್ದನು.



ದಾವೀದನು ನೀರನ್ನು ಸುರಿಯುತ್ತಿರುವದು – ಕ್ಯಾಸ್ಪರ್ ಲೂಕನ್ ರಚನೆ

ದಾವೀದನ ಜೀವಂತ ನ್ಯಾಯಪ್ರಜ್ಞೆಯ ಮತ್ತೊಂದು ನಿದರ್ಶನವು 1 ಸಮುವೇಲ 30:21–25ರಲ್ಲಿ ದಾಖಲಾಗಿರುವದು. ಅಲ್ಲಿ ದಾವೀದನು ಇಸ್ರಾಯೇಲ್ಯರಿಗಾಗಿ ಒಂದು ಕಟ್ಟಳೆಯನ್ನು ಮಾಡಿದ್ದು, ಅದರಲ್ಲಿ ಯಾರು ಯುದ್ಧದ ಸಮಯದಲ್ಲಿ ಶಾರೀರಿಕ ಬಲಹೀತೆ, ಅಥವಾ ಸಾವಾನು ಕಾಯುವ ಇಲ್ಲವೇ ಮನೆಯಲ್ಲಿರುವರೋ ಇವರಿಗೆ ಕೊಳ್ಳೆಯ ವಸ್ತುಗಳನ್ನು ಯುದ್ಧಕ್ಕೆ ಹೋದವರ ಸಂಗಡ ಸಮಾನವಾಗಿ ಹಂಚಿಕೊಡಬೇಕೆಂಬು–ದಾಗಿತ್ತು. ಈ ಅಂಶದ ಮೇಲಿನ ವಿವರಣೆಯು ಬಹು ಸ್ಪಷ್ಟವಾಗಿರುವದು. ನಾವು ಓದುವದು–"ಆಗ ದಾವೀದನ ಜೊತೆಯಲ್ಲಿ ಹೋಗಿದ್ದ ಜನರಲ್ಲಿ ದುಷ್ಟರೂ ಮೂರ್ಖರೂ ಆದ ಕೆಲವು ಮಂದಿ–ಇವರು ನಮ್ಮ ಸಂಗಡ ಬಾರದ್ದರಿಂದ ನಾವು ಬಿಡಿಸಿಕೊಂಡು ಬಂದ ಕೊಳ್ಳೆಯಲ್ಲಿ ಇವರಿಗೆ ಏನೂ ಸಿಕ್ಕುವದಿಲ್ಲ. ತಮ್ಮ ತಮ್ಮ ಹೆಂಡರುಮಕ್ಕಳನ್ನು ಕರಕೊಂಡು ಹೋಗಿಬಿಡಲಿ ಅಂದರು. ಆಗ ದಾವೀದನು ಅವರಿಗೆ–ಸಹೋದರರೇ, ಯೆಹೋವನು ನಮ್ಮನ್ನು ಕಾಪಾಡಿ ನಮಗೆ ವಿರೋಧವಾಗಿ ಬಂದಿದ್ದ ಶತ್ರುಗಳ ಗುಂಪನ್ನು ನಮ್ಮ ಕೈಗೆ ಒಪ್ಪಿಸಿ ನಮಗೆ ಇಷ್ಟನ್ನೆಲ್ಲಾ ಕೊಟ್ಟ ಮೇಲೆ ನೀವು ಹೀಗೆ ಮಾಡಬಾರದು. ಈ ವಿಷಯದಲ್ಲಿ ನಿಮ್ಮ ಮಾತನ್ನು ಯಾರು ಕೇಳುವರು? ಯುದ್ಧವಾಡಿದವನಿಗೆ ಸಿಕ್ಕುವಷ್ಟು ಪಾಲು ಸಮಾನು ಕಾಯ್ದವನಿಗೂ ಸಿಕ್ಕಬೇಕು. ಉಭಯರಿಗೂ ಸಮಭಾಗವಾಗಬೇಕು ಎಂದು ಉತ್ತರಕೊಟ್ಟನು. ದಾವೀದನು ಇಸ್ರಾಯೇಲ್ಯರಲ್ಲಿ ಇದನ್ನು ಕಟ್ಟಳೆಯನ್ನಾಗಿ ನೇಮಿಸಿದ್ದರಿಂದ ಇಂದಿನ ವರೆಗೂ ಹಾಗೆಯೇ ನಡೆಯುತ್ತಾ ಬಂದಿದೆ." [1 ಸಮುವೇಲ 30:22–25]

ಇಸ್ರಾಯೇಲ್ಯರಲ್ಲಿನ ಈ ಕಟ್ಟಳೆಯು ಒಂದು ಮೂಲತತ್ವದ ನಿರೂಪಣೆಯಾಗಿದ್ದು ಇದು ಹಲವು ವಿಧದಲ್ಲಿ ಅನ್ವಯವಾಗುತ್ತದೆ. ದೃಷ್ಟಾಂತವಾಗಿ ಹೇಳುವದಾದರೆ, ಮನೆಯನ್ನು ಪರಿಪಾಲನೆಮಾಡುವ ಪತ್ನಿಯು ಪತಿಯೊಡನೆ ಸಮಾನವಾಗಿ [ಆಸ್ತಿಯ] ಪಾಲನ್ನು ಪಡೆಯುವಳು. ಪತಿಯು ಇಂಥಾ [ಕುಟುಂಬದ] ಪರಿಪಾಲನಾ ಹೊಣೆಗಾರಿಕೆಯಿಂದ ಮುಕ್ತನಾಗಿ ಹಣ ಸಂಪಾದನೆಗಾಗಿ ಅವನಿಗೆ ಉಚಿತವಾದ ಸಮಯ–ವಿರುವದು. ಅವರು ನ್ಯಾಯಸಮ್ಮತವಾಗಿ ಜೀವನದ ಹೊಣೆಗಾರಿಕೆಯ ಸಹಿತ "ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರು"

ಈ ಪಾಠದ ಸುವರ್ಣಮಯ ಪಶ್ಚಭಾಗವು ಈಗ ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ನಡೆಸುತ್ತಿರುವ ದೇವಜನರಿಗೆ ಸೂಕ್ತ ಮನೋ–ಚೌಕಟ್ಟಿನ ಬಗ್ಗೆ ಸಲಹೆನೀಡುತ್ತದೆ. ಪರಿಸ್ಥಿತಿಯು ಕತ್ತಲಾಗಿಯೂ ಅಪಾಯಕರವಾಗಿ ಕಂಡರೂ, ಶತ್ರುಗಳು ದ್ವಿಗುಣಗೊಂಡು ಗೊಂದಲಗಳು ಹೆಚ್ಚುತ್ತಿದ್ದರೂ ಇದು ಅವರನ್ನು ಅಂಜದಿರುವಂತೆ ಮಾಡಲು ಪ್ರಯತ್ನಿಸುವವು.– "ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು; ನಾನು ಯಾರಿಗೆ ಹೆದರೇನು?" ಅಲ್ಲದೆ ದಾವೀದನು ಹೇಳಿರುವದು: "ಜೀವಲೋಕದಲ್ಲೇ ಯೆಹೋವನ ದಯೆಯನ್ನು ಅನುಭವಿಸು–ವನೆಂದು ದೃಢವಾಗಿ ನಂಬಿದ್ದೇನೆ. [ಅಥವಾ ಜೀವಿತರ ಲೋಕದಲ್ಲಿಯೇ ಯೆಹೋವನ ದಯೋಪಕಾರವನ್ನು ಕಾಣುವೆನೆಂಬ ಭರವಸವು ನನಗಿಲ್ಲದಿದ್ದರೆ ನಾನು ಸೊತುಹೋಗುತ್ತಿದ್ದೆನು] ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ [ಅಥವಾ; ಯೆಹೋವನು ನಿನ್ನ ಹೃದಯವನ್ನು ದೃಢಪಡಿಸುವನು]; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು." ಕೀರ್ತನೆ 27:1–14

*****


ದಾವೀದನ ಗೆಲವುಗಳು

ರೀಪ್ರಿಂಟ್ಸ್ ಪುಟ 2015

1 ಸಮುವೇಲ 30:21–25

ದಾವೀದನಿಗಿದ್ದ ಜೀವಂತ ನ್ಯಾಯಪ್ರಜ್ಞೆಯ ಮತ್ತೊಂದು ದೃಷ್ಟಾಂತವು 1 ಸಮುವೇಲ 30:21–25ರಲ್ಲಿ ದಾಖಲಾಗಿರುವದು. ಅಲ್ಲಿ ದಾವೀದನು ಇಸ್ರಾಯೇಲ್ಯರಿಗಾಗಿ ಒಂದು ಕಟ್ಟಳೆಯನ್ನು ಮಾಡಿದ್ದು ಆ ಪ್ರಕಾರ ಯಾರು ಯುದ್ಧದ ಸಮಯದಲ್ಲಿ ಶಾರೀರಿಕ ಬಲಹೀನತೆಯ ದೆಸೆಯಿಂದ ಹಿಂದುಳಿಯುವರೋ, ಅಥವಾ (ಸೈನಿಕರ) ಸಾಮಾನುಗಳನ್ನು ಇಲ್ಲವೇ ಮನೆಯನ್ನು ಕಾಯುವರೋ ಅಂಥವರು ಯುದ್ಧದ ಕೊಳ್ಳೆಯಲ್ಲಿ ಸಮ ಪಾಲನ್ನು ಹೊಂದಬೇಕಾಗುವದು. ಈ ವಿಷಯದಲ್ಲಿನ ವಿವರ–ಣೆಯು ಬಹು ಸ್ಪಷ್ಟವಾಗಿರುವದು. ನಾವು ಓದುವದು: "ಆನಂತರ ದಾವೀದನು ಮೊದಲು ಆಯಾಸದಿಂದ ತನ್ನ ಹಿಂದೆ ಬರಲಾರದೆ ಬೆಸೋರ್ ಹಳ್ಳದ ಹತ್ತಿರ ಇಳಿದಿದ್ದ ಇನ್ನೂರು ಜನರ ಬಳಿಗೆ ಹೋಗುತ್ತಿರುವಾಗ ಅವರು ಅವನನ್ನೂ ಅವನೊಂದಿಗಿದ್ದ ಜನರನ್ನೂ ಎದುರುಗೊಳ್ಳಬಂದರು. ದಾವೀದನು ಅವರನ್ನು ಸಂಧಿಸಿ ಅವರ ಕ್ಷೇಮ ಸಮಾಚಾರವನ್ನು ವಿಚಾರಿಸಿದನು. ಆಗ ದಾವೀದನ ಜೊತೆಯಲ್ಲಿ ಹೋಗಿದ್ದ ಜನರಲ್ಲಿ ದುಷ್ಟರೂ ಮೂರ್ಖರೂ ಆದ ಕೆಲವು ಮಂದಿ–ಇವರು ನಮ್ಮ ಸಂಗಡ ಬಾರದ್ದರಿಂದ ನಾವು ಬಿಡಿಸಿಕೊಂಡು ಬಂದ ಕೊಳ್ಳೆಯಲ್ಲಿ ಇವರಿಗೆ ಏನೂ ಸಿಕ್ಕುವದಿಲ್ಲ. ತಮ್ಮ ತಮ್ಮ ಹೆಂಡರುಮಕ್ಕಳನ್ನು ಕರಕೊಂಡು ಹೋಗಿಬಿಡಲಿ ಅಂದರು. ಆಗ ದಾವೀದನು ಅವರಿಗೆ–ಸಹೋದರರೇ, ಯೆಹೋವನು ನಮ್ಮನ್ನು ಕಾಪಾಡಿ ನಮಗೆ ವಿರೋಧವಾಗಿ ಬಂದಿದ್ದ ಶತ್ರುಗಳ ಗುಂಪನ್ನು ನಮ್ಮ ಕೈಗೆ ಒಪ್ಪಿಸಿ ನಮಗೆ ಇಷ್ಟವನ್ನೆಲ್ಲಾ ಕೊಟ್ಟ ಮೇಲೆ ನೀವು ಹೀಗೆ ಮಾಡಬಾರದು. ಈ ವಿಷಯದಲ್ಲಿ ನಿಮ್ಮ ಮಾತನ್ನು ಯಾರು ಕೇಳುವರು? ಯುದ್ಧಮಾಡಿದವನಿಗೆ ಸಿಕ್ಕುವಷ್ಟು ಪಾಲು ಸಾಮಾನು ಕಾಯ್ದವನಿಗೂ ಸಿಕ್ಕಬೇಕು. ಉಭಯರಿಗೂ ಸಮಭಾಗವಾಗಬೇಕು ಎಂದು ಉತ್ತರ ಕೊಟ್ಟನು. ದಾವೀದನು ಇಸ್ರಾಯೇಲ್ಯರಲ್ಲಿ ಇದನ್ನು ಕಟ್ಟಳೆಯನ್ನಾಗಿ ನೇಮಿಸಿದ್ದರಿಂದ ಇಂದಿನ ವರೆಗೂ ಹಾಗೆಯೇ ನಡೆಯುತ್ತಾ ಬಂದಿದೆ."

ಇಸ್ರಾಯೇಲ್ಯರಲ್ಲಿನ ಈ ಕಟ್ಟಳೆಯು ಒಂದು ಮೂಲತತ್ವ ಸಂಬಂಧದ ಹೇಳಿಕೆಯಾಗುದ್ದು, ಹಲವಾರು ರೀತಿಯಲ್ಲಿ ಇದು ಅನ್ವಯವಾಗುವದು. ಉದಾಹರಣೆಗೆ ಮನೆಯನ್ನು ಪಾಲಿಸುವ ಹೆಂಡತಿಯು ಹಣಸಂಪಾದನೆಗಾಗಿ ಇಂಥ ಗೃಹಪಾಲನೆಯ ಕರ್ತವ್ಯದಿಂದ ಬಿಡುಗಡೆಹೊಂದಿರುವ ಗಂಡನೊಂದಿಗೆ ಸಮಪಾಲನ್ನು ಹೊಂದಬೇಕೆಂಬುದು. ಅವರು ನ್ಯಾಯ–ಸಮ್ಮತವಾಗಿ ಜೀವನದ ಹೊಣೆಗಾರಿಕೆಯ ಜೊತೆಗೆ "ಜೀವವರಕ್ಕೆ ನಿಮ್ಮೊಂದಿಗೆ [ಗಂಡಂದಿರೊಂದಿಗೆ] ಬಾಧ್ಯರು" ಆಗುವರು.



ಯುದ್ಧದ ಕೊಳ್ಳೆಯ ಜೊತೆಗಿರುವ ದಾವೀದನು

ಈ ಪಾಠದಲ್ಲಿನ ಸುವರ್ಣಮಯ ಪಠ್ಯಭಾಗವು ಕ್ರಿಸ್ತ ನಂಬಿಕೆಯ ಬಗ್ಗೆ ಈಗ ಶ್ರೇಷ್ಠ ಹೋರಾಟ ಮಾಡುತ್ತಿರುವ ದೇವ ಜನರೆಲ್ಲರಿಗೆ ಇರಬೇಕಾದ ಒಂದು ಸೂಕ್ತವಾದ ಮನಃಸ್ಥಿತಿಯ ಬಗ್ಗೆ ಸಲಹೆಮಾಡುತ್ತದೆ. ಪರಿಸ್ಥಿತಿಯು ಕತ್ತಲಾಗಿ [ನಿರಾಶಾದಾಯಕವಾಗಿ] ಅಥವಾ ಅಪಾಯಕಾರಿಯಾಗಿ ಕಂಡಾಗ್ಯೂ, ಶತ್ರುಗಳು ದ್ವಿಗುಣವಾಗಿ ಗೊಂದಲಗಳು ಹೆಚ್ಚಿದರೂ, ಅವರಿಗೆ ಭಯಪಡದಂತೆ ಇದು ಆಜ್ಞಾಪಿಸುತ್ತದೆ–ದಾವೀದನು ಹೇಳಿದ್ದು:"ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು? ಯೆಹೋವನು ನನ್ನ ಪ್ರಾಣದ ಆಧಾರವು ನಾನು ಯಾರಿಗೆ ಹೆದರೇನು?" "ಜೀವಲೋಕ–ದಲ್ಲಿಯೇ ಯೆಹೋವನ ದಯೆಯನ್ನು ಹೊಂದುವೆನೆಂದು ದೃಢವಾಗಿ ನಂಬಿದ್ದೇನೆ. [ಇಲ್ಲದಿದ್ದಲ್ಲಿ ನಾನು ಕುಂದಿ–ಹೋಗುತ್ತಿದ್ದೆನು] ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ [ಅಥವಾ ಯೆಹೋವನು ನಿನ್ನ ಹೃದಯವನ್ನು ಬಲಪಡಿಸುವನು]; ಯೆಹೋವನನ್ನು ನಿರೀಕ್ಷಿಸಿಕೊಂಡೇ –ಇರು." – ಕೀರ್ತನೆ 27:1–14

ದಾವೀದನ ಪಾಪದರಿಕೆ ಹಾಗು ಕ್ಷಮಾದಾನ

ರೀಪ್ರಿಂಟ್ಸ್ ಪುಟ 2016

ಕೀರ್ತನೆ 32:1–11

"ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರ ಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು – ಕೀರ್ತನೆ 51:10

ಒಂದು ಒಳ್ಳೆಯ ಪ್ರಮಾಣದ ಸಂತೃಪ್ತ ಭಾವದಿಂದ ನಾವು ಬರೆಯುವದೇನಂದರೆ ದಾವೀದನ ಪಾಪನಿವೇದನೆ ಹಾಗು ಕ್ಷಮಾದಾನವೆಂಬ ಈ ಪಾಠದ ಶೀರ್ಷಿಕೆಯ ವಿಷಯದಲ್ಲಿ ನಾವು ಪರಿಗಣನೆ ಮಾಡುವಾಗ ಈ ಮನುಷ್ಯನಲ್ಲಿ ಒಳ್ಳೆತನವು ಮತ್ತೆ ದೃಡಪಡದಿದ್ದದ್ದು ಕಂಡುಬಂದಲ್ಲಿ ಈ ಶೀರ್ಷಿಕೆಯನ್ನು ನಾವು ಹೀಗೆ ಬರೆಯಬೇಕಾಗುತ್ತಿತ್ತು–"ಪಶ್ಚಾತಾಪರಹಿತ ದಾವೀದನ ಪತನ ಹಾಗು ಅದರ ಭೀಕರ ಪರಿಣಾಮ." ಈವರೆಗಿನ ಯೆಹೂದ್ಯರ ಚರಿತ್ರೆಯಲ್ಲಿ ಈ ಗಮನಾರ್ಹವಾದ ಗುಣಸ್ವಭಾವವನ್ನು ಪರಿಗಣಿಸುವಾಗ ನಾವು ಆ ಘನವಂತಿಕೆಯ ಗುಣವಿಶೇಷಗಳನ್ನು ಗಮನಕ್ಕೆ ತಂದುಕೊಂಡು ಆತನನ್ನು ಒಬ್ಬ ನೀತಿವಂತನೂ ನ್ಯಾಯಪರನೂ ಭಕ್ತಿಯುಳ್ಳ ಮನುಷ್ಯನೂ ಎಂದು ಅಂದರೆ ನೈತಿಕವಾಗಿ ಹಾಗು ಬೌದ್ಧಿಕವಾಗಿ ಉನ್ನತವಾದ ಸಾಧನೆಯನ್ನು ಮಾಡಿದ ಒಬ್ಬ ಪುರುಷನೆಂದು ಹಾಗೂ ದೇವರು ಆತನನ್ನು ಗೌರವಿಸಿ ಆಶೀರ್ವದಿಸಿ ಆತನನ್ನು ತನ್ನ ಸೇವೆಗೆ ಆದುಕೊಂಡ ಒಂದು ಸಾಧನವಾಗಿ ಮಾಡಿಕೊಳ್ಳಲು ಸಂತೋಷಿಸಿದ್ದನೆಂಬುದನ್ನು ಗುರುತಿಸಿಕೊಳ್ಳುವೆವು.

ಆದರೆ ಆತನ ಈ ಎಲ್ಲಾ ಸಾಧನೆಗಳಿದ್ದಾಗ್ಯೂ, ಅಂದರೆ ಆತನ ಎಲ್ಲಾ ಜ್ಞಾನವಿವೇಕ ಹಾಗು ಕೌಶಲ್ಯಗಳೊಡನೆ ಮತ್ತು ಸ್ವಸ್ಥ ಮನಸ್ಸಿನ ನ್ಯಾಯನಿರ್ಣಯಗಳು ಹಾಗು ಆತನಲ್ಲಿ ದೀನತೆ ಮತ್ತು ದೇವಭಯಗಳೆಲ್ಲವು ಇದ್ದಾಗ್ಯೂ ಸಹ ಈ ಉತ್ತಮನಾದ ಮಹಾ ಪುರುಷನಲ್ಲಿದ್ದ ಕಳಪೆ ಮಟ್ಟದ ಬಿದ್ದುಹೋದ ಸ್ವಭಾವವು ಸಮೃದ್ಧಿ ಹಾಗು ಏಳಿಗೆಗಳ ಆಮಿಷಗಳಿಗೆ ಬಲಿಯಾಗಿತ್ತು. ಹಲವಾರು ವಿಧಾನದಲ್ಲಿ ಬಹು ದೃಡವಾಗಿದ್ದ ದಾವೀದನಂಥ ಒಳ್ಳೆ ಮನುಷ್ಯನ ಅವನತಿಯನ್ನು ವಿವರಿಸಿ ಹೇಳಲು ಕಠಿಣಕರವಾಗಿರುವದು; ಆದರೆ ಒಬ್ಬ ಬರಹಗಾರನು ಇದಕ್ಕೆ ಬಹು ನಿಖರವಾಗಿ ಕಾರಣಗಳನ್ನು ನೀಡಿರುವನೆಂದು ನಾವು ನೆನಸುತ್ತೇವೆ; ಆತನು ಹೇಳಿರುವದು–"ಕೆಲವು ಗುಣಸ್ವಭಾವಗಳಲ್ಲಿರುವ, ವಿಶೇಷವಾಗಿ ದೃಡವಾದ ಗುಣಸ್ವಭಾವಗಳಲ್ಲಿರುವ ನೂತನ ಸ್ವಭಾವ ಹಾಗು ಹಳೆಯ ಸ್ವಭಾವಗಳು ಇವೆರಡೂ ಅಸಾಧಾರಣವಾದ ಭಾವಾವೇಶಗಳನ್ನು ಹೊಂದಿರುತ್ತವೆ; ದಂಗೆಕೋರತನವು ಹಳೆಯ ಸ್ವಭಾವವನ್ನು ಪುನಶ್ಚೇತನ ಗೊಳಿಸುವಲ್ಲಿ ಅದಕ್ಕಿಂತಲೂ ಹೆಚ್ಚು ದೃಡಸಂಕಲ್ಪದ ಮನೋಬಲವುಳ್ಳ ನೂತನ ಸ್ವಭಾವವು ಇವುಗಳನ್ನು ನಿಯಂತ್ರಣದಲ್ಲಿರಿಸುವದು; ಆದರೆ ಒಂದು ವೇಳೆ ನೂತನ ಸ್ವಭಾವವು ಹಳೆಯ ಸ್ವಭಾವವನ್ನು ವಿರೋಧಿಸುವದನ್ನು ಸಡಿಲಗೊಳಿಸಿದ್ದಲ್ಲಿ ಅಥವಾ ಕಡಿಮೆ ಮಾಡಿದ್ದೇಯಾದಲ್ಲಿ ಆಗ ಭ್ರಷ್ಟತೆಯು ಒಂದು ಭೀಕರ ಮಟ್ಟದಲ್ಲಿ ಸ್ಫೋಟಗೊಳ್ಳುವದು."

ದಾವೀದನು ಘೋರವಾದ ಪಾಪದಲ್ಲಿ ಬಿದ್ದು ಹೋದಂಥದ್ದು ಸಂಪೂರ್ಣವಾಗಿ ತಕ್ಷಣದಲ್ಲಿ ನಡೆದುದಲ್ಲವೆಂಬದು ಸ್ಪಷ್ಟವಾಗಿತ್ತು ; ಇದಕ್ಕೆ ನಡೆಸಿದ್ದ ತಪ್ಪು ಹೆಜ್ಜೆಗಳಿದ್ದು ಅದು ಹಂತಹಂತದಲ್ಲಿ ನಡೆದ ಕಾರ್ಯವಾಗಿ ಪ್ರತಿಯೊಂದು ತಪ್ಪಿನ ಸಂಗತಿಯು ಮನಃಸಾಕ್ಷಿಯನ್ನು ಹೆಚ್ಚುಹೆಚ್ಚಾಗಿ ನಂದಿಹೋಗುವಂತೆ ಮಾಡಿ ಬಹುಮಟ್ಟಿಗೆ ಗ್ರಹಿಕೆಗೆಬಾರದ ರೀತಿಯಲ್ಲಿ ಅದರ ಅಂತಿಮ ಘಟ್ಟವು ತಲುಪಿತ್ತು; ಹೀಗಾಗಿ ಈ ಎರಡು ಸಂಗತಿಗಳಲ್ಲಿ ಸಹ ಅಪರಾಧಗಳು ಆವರಿಸಿಕೊಂಡು ಕಡೆಗೆ ಮನಃಸಾಕ್ಷಿಯ ಅರಿವಿಲ್ಲದೆಯೇ ಅವುಗಳು ನಡೆದುಹೊದದ್ದು ಸ್ಪಷ್ಟವಾಗಿತ್ತು. ಈ ಮನುಷ್ಯನಿಗೆ ತನ್ನ ಪಾಪದ ಫಲವು ಕಟುವಾಗಿ ಪರಿತಪಿಸುವಂತೆ ಮಾಡಿದ್ದಾಗ್ಯೂ ತನ್ನ ಘೋರ ಪಾಪದ ಅರಿವು ಉಂಟಾಗಿ ಆತನು ಕೂಡಲೇ ಎಚ್ಚೆತ್ತುಕೊಂಡವನಾಗಿ, ಪಶ್ಚಾತಾಪದ ಅಗತ್ಯವುಂಟಾಗಿ ಎದ್ದು ಪಾಪದ ಅರಿಕೆಮಾಡಿ ಸುಧಾರಿಸಲ್ಪಡದಂತೆ ಪ್ರವಾದಿಯಾ ನಾತಾನನು ಕಳುಹಿಸಲ್ಪಡುವವರೆಗೂ ಈ ಪಾಪವನ್ನು ಆತನಿಂದ ಪಶ್ಚಾತಾಪರಹಿತವಾಗಿ ಮರೆಮಾಡಲಾಗಿತ್ತು. (ಕೀರ್ತನೆ 32:3,4) ದಾವೀದನು ಅಧಿಕಾರ ಜನಪ್ರಿಯತೆ ಹಾಗು ದೊಡ್ಡ ಯಶಸ್ಸು ಗಳಿಸಿಕೊಳ್ಳುವಂಥಾ ಅಮಲಿನಿಂದ ಎಷ್ಟಾಗಿ ಕೂಡಿದ್ದನೆಂದರೆ ಅವು ಸಾಧಾರಣವಾಗಿ ಆತನಿಗೆ ಹಂತಹಂತವಾಗಿ ನಡೆದ ತನ್ನ ನೈತಿಕ ಅವನತಿಯನ್ನು ಗುರುತಿಸಿಕೊಳ್ಳದಂತೆ ಮಾಡಿದ್ದು ಸ್ಪಷ್ಟವಾಗಿತ್ತು. ಒಬ್ಬ ಅರಸನಾಗಿ ಆತನ ಮಾತು ಜನರೊಳಗೆ ಬಹು ಶ್ರೇಷ್ಠವಾಗಿದ್ದು, ಇಸ್ರಾಯೇಲ್ಯರೆಲ್ಲರೂ ಆತನು ಆಜ್ಞಾಪಿಸಿದ್ದುದನ್ನು ಮಾಡಲು ಕಾದುಕೊಂಡಿದ್ದರು; ರಾಜ್ಯದಲ್ಲಿನ ಶ್ರೇಷ್ಠ ಪುರುಷರು ಆತನ ಸಹಾಯಕ್ಕೆ ನಿಂತಿದ್ದರು; ಆತನ ತ್ರಾಣವು ರಣರಂಗದಲ್ಲಿ ಎಲ್ಲೆಲ್ಲಿಯೂ ಯಶಸ್ಸನ್ನು ತಂದುಕೊಟ್ಟಿದ್ದು ಆತನ ರಾಜ್ಯವು ವಿಸ್ತೃತವಾಗಿ ಅಭಿವೃದ್ಧಿಹೊಂದಿತ್ತು. ಆದರೆ ಈ ಎಲ್ಲಾ ಯಶಸ್ಸು ಉನ್ನತಿಗಳ ನಡುವೆ ಅನಿರೀಕ್ಷಿತವೂ ಅಪಾಯವೂ ಆದ ಪರಿಶೋಧನೆಗಳು ಅಡಗಿಕೊಂಡಿದ್ದವು; ಇವುಗಳನ್ನು ಸತತವಾಗಿ ಎದುರಿಸುವಂತಾಗಲು ಸೂಕ್ಷ್ಮತೆಯಿಂದ ಮುಂಜಾಗರೂಕ–ನಾಗಿರಬೇಕಿತ್ತು.

ತನ್ನ ಸಹೋದರನಿಗೆ ಆತನ ತಪ್ಪುಗಳನ್ನು ಮತ್ತು ಅದರಿಂದಾಗುವ ಅಪಾಯಗಳನ್ನು ತೋರಿಸಿಕೊಡುವುದರಲ್ಲಿ ಆ ಜನಾಂಗದ ಮುಖ್ಯ ನ್ಯಾಯಾಧಿಪತಿಯಾದ ರಾಜನಿಗೆ ಸತ್ಯವಂತರಾಗಿರಲು ನಿಜವಾಗಿಯೂ ಕೆಲವರು ಸಾಕಷ್ಟು ಧೈರ್ಯವುಳ್ಳವರಾಗಿರುವರು; ಬದಲಾಗಿ ಅಧಿಕಾರದಲ್ಲಿರುವವರ ಕಡೆಗೆ ಆಗ ಇದ್ದದ್ದು ಮಾತ್ರವಲ್ಲದೆ ಯಾವಾಗಲೂ ಇರುವಂಥ ಪ್ರವೃತ್ತಿಯೆಂದರೆ, ಅಂಥವರು ತಮಗೆ ಅನುಗ್ರಹದೊರೆಯುವ ಅಪೇಕ್ಷೆಯಿಂದ, ಅಂಥವರ ಅತ್ಯುನ್ನತ ಹಿತಾಸಕ್ತಿಯನ್ನು ನೆನಪಿನಲ್ಲಿಟ್ಟುಕೊಂಡವರಾಗಿ ಅಂಥವರನ್ನು ಬುದ್ಧಿವಂತಿಕೆಯಿಂದ

ದಯಾಪೂರ್ವಕವಾಗಿ ಮತ್ತು ಗೌರವದಿಂದ ತಿದ್ದುವದಕ್ಕೆ ಬದಲಾಗಿ ಅಂಥವರನ್ನು ಸಮರ್ಥಿಸಿ ಅವರನ್ನು ಅನುಸರಿಸುವವರಾಗಿರುವರು; ನಾವು ದಾವೀದನ ಗುಣಸ್ವಭಾವ–ದಲ್ಲಿನ ಘನವಂತಿಕೆಯ ವಿಶೇಷತೆಗಳನ್ನು ಸಂತೋಷದಿಂದ ಗುರುತಿಸುವಲ್ಲಿ ಆತನ ಅವನತಿಯು ಹೆಚ್ಚೆಗಳ ಬಗ್ಗೆ ವ್ಯಥೆಯುಳ್ಳವರಾಗಬೇಕು. ತನ್ನ ಸುತ್ತಲಿರುವ ಅರಸರು ಹೇಳಿಕೊಳ್ಳುವದನ್ನು ನೋಡಿದವನಾಗಿ ಕನಿಷ್ಠದಲ್ಲಿ ಕೆಲವು ಪ್ರಮಾಣದಲ್ಲಿ ತನ್ನ ಸವಲತ್ತುಗಳ ವಿಷಯದಲ್ಲಿ ದೈವನಿಯಮಗಳಿಗೆ ವಿರುದ್ಧವಾಗಿ (ಯಾಜಕಕಾಂಡ 18:1–4, 18 ಇವುಗಳ ಪುಟದ ಕೆಳಗಿನ/ಅಂಚಿನ ಟಿಪ್ಪಣಿಯನ್ನು ನೋಡಿರಿ; ಧರ್ಮೋಪದೇಶಕಾಂಡ 17:14,17–20) ಆತನು ತನಗಾಗಿ ಅನೇಕ ಹೆಂಡತಿಯರನ್ನು ಮಾಡಿಕೊಂಡಿದ್ದನು. ಆನಂತರ ಅಮ್ಮೋನಿಯರೊಡನೆಯ ತನ್ನ ಯುದ್ಧದಲ್ಲಿ ಅನಗತ್ಯವಾದ ಕ್ರೌರ್ಯವಳ್ಳವನಾಗಿ ಕೇವಲ ಜಯಹೊಂದಲು ಹೋರಾಡು–ವದಕ್ಕೆ ಬದಲಾಗಿ ತನ್ನ ಶತ್ರುಗಳ ಮೇಲೆ ಹೀಗೆ ಹೀನತೆಯಿಂದ ಜಯಗಳಿಸುವಂಥ ವಿಧಾನವನ್ನು ಅವಲಂಭಿಸಿದ್ದನು. (1 ಪೂ. ವೃ. 20:1–3; 2 ಸಮುವೇಲ 11ನೇ ಅಧ್ಯಾಯಗಳನ್ನು ಹೋಲಿಸಿ ನೋಡಿರಿ) ಆ ಮೇಲೆ ದೇವರ ನಿಯಮಗಳಿಗೆ ಹಾಗು ತನ್ನ ಅತ್ಯುನ್ನತ ವಿವೇಕವುಳ್ಳ ಮನುಷ್ಯರ ಸಲಹೆಗೆ ಅಲ್ಲದೆ ದೇಶದ ಧಾರ್ಮಿಕ ಪ್ರಜ್ಞೆಗೆ ಪ್ರತಿಯಾಗಿ ಜನಗಣತಿಯನ್ನು ತಾನು ಮಾಡಿಸಿದಂಥದ್ದು (1 ಪೂ.ವೃ. 21:1 ನೋಡಿರಿ) ಆತನ ಧಾರ್ಮಿಕ ಶ್ರದ್ಧೆಯು ಕುಗ್ಗುವಿಕೆಯು ದೇವಾನುಗ್ರಹದ ಬಗ್ಗೆ ಸಂದೇಹಪಡುವಂತೆ ಮಾಡಿದ್ದು ಪರಿಣಾಮವಾಗಿ ದೇವರಲ್ಲಿ ಭರವಸೆಯಿಡುವದಕ್ಕೆ ಬದಲಾಗಿ ತನ್ನ ರಕ್ಷಣಾರ್ಥಕ್ಕಾಗಿ ಜನಸಂಖ್ಯೆ, ಯುದ್ಧೋಪಕರಣ ಮುಂತಾದವುಗಳ ಮೇಲೆ ತನ್ನ ಭರವಸೆಯಿಡಲು ಆತನನ್ನು ನಡೆಸಿತ್ತು. (ಯೆರೆಮೀಯ 17:5) ಆತನು ನೀತಿಯು ಮಾರ್ಗದಲ್ಲಿ ನಡೆಯುವದನ್ನು ಮುಂದುವೆರೆಸಿದ್ದಲ್ಲಿ ಮಾತ್ರ ದೇವರ ಹಾಗು ಆತನ ಅನುಗ್ರಹ ಸಹಾಯದ ಅನುಭವವನ್ನು ಪಡೆಯಲು ಆತನಿಗೆ ಸಾಧ್ಯವಿತ್ತು.

ಬಾಹ್ಯ ರೀತಿಯ ಸಮೃದ್ಧಿಯ ಸಮಯದ ನಡುವೆ ಆಂತರ್ಯದಲ್ಲಿನ ಅವನತಿಯು ಇದ್ದಾಗ್ಯೂ ದಾವೀದನು ಶೋಧನೆಗೆ ತುತ್ತಾಗಿ ದೇವರ ಹಾಗು ಮನುಷ್ಯನ ವಿರುದ್ಧವಾಗಿ ಘೋರ ಅಪರಾಧವನ್ನು ಎಸೆಗಿದ್ದನು. (2 ಸಮುವೇಲ 11:1–27) ಬಡಪಾಯಿಯಾದ ಬಿದ್ದುಹೋದ ಮಾನವ ಸ್ವಭಾವವು, ಅದೆಷ್ಟು ಬಲಹೀನವಾದುದು, ಅಲ್ಲದೆ ತನ್ನ ಅತ್ಯುತ್ತಮ ಸ್ಥಿತಿಯಲ್ಲಿಯೂ ಪಾಪದ ಪ್ರವೃತ್ತಿಯಲ್ಲಿರುವದು! ನಿಜವಾಗಿಯೂ ದೇವರಿಗೆ ಸಮೀಪದಲ್ಲಿದ್ದು ಆತನೊಡನೆ ದೃಢವಾಗಿ ನಡೆಯದ ಹಾಗು ಲೌಕೀಕ ಮನೋಭಾವವನ್ನು ನಿರಂತರವಾಗಿ ದೂರವಿಟ್ಟು ಅದರ ಅಮಲಿನ ಪ್ರಭಾವವನ್ನು ಪ್ರತಿರೋಧಿಸದ ಹೊರತು ಪಾಪದ ಬಲದಿಂದ ರಕ್ಷಣೆಯಿರುವದಿಲ್ಲ. ಇದರ [ಲೋಕದಲ್ಲಿನ] ಹೆಮ್ಮೆ ಇಲ್ಲವೇ ವ್ಯರ್ಥ ವೈಭವ ಅಥವಾ ಸ್ವಯಂ ತೃಪ್ತಿಯ ಬಯಕೆಗಳು ನಮ್ಮಲ್ಲಿ ಯಾವುದೇ ಒಂದು ಪ್ರಮಾಣದಲ್ಲಿ ಕಾರ್ಯಪ್ರವೃತ್ತ–ವಾದಲ್ಲಿ ಅದೇ ಪ್ರಮಾಣದಲ್ಲಿ ನಮ್ಮ ನೈತಿಕ ಪ್ರಜ್ಞೆಯನ್ನು ಮಂಕುಮಾಡುವ ಪ್ರಭಾವಕ್ಕೆ ಒಳಗಾಗಮಾಡುವದು. ಅಲ್ಲದೆ ಯಾವನಾದರೂ ಲೌಕಿಕ ಮನೋಭಾವದ ಅಮಲಿನಿಂದ ತುಂಬಿದವನಾದಲ್ಲಿ (ಇದು ದೊಡ್ಡ ಪ್ರಮಾಣದಲ್ಲಿ ಸೈತಾನನ ಮನೋಭಾವವಾಗಿರುವದು) ಅವನು ಅಂಧತೆಯಿಂದ ಕೂಡಿದವನಾಗಿ ಅನೇಕ ಸಂಗತಿಗಳನ್ನು ನಿರ್ವಹಿಸುವವನಾಗಿದ್ದು, ಆದರೆ ಆತನಿಗೆ ಸ್ವಸ್ಥ ಬುದ್ಧಿಯಿದ್ದಲ್ಲಿ ಆತನು ಅವುಗಳಿಗೆ ದೂರ–ವಿದ್ದು ಅವುಗಳನ್ನು ತಿರಸ್ಕರಿಸುವವನಾಗುತ್ತಿದ್ದನು. ಹೀಗೆ ಇದು ಒಬ್ಬ ಉತ್ತಮ ಪುರುಷನೂ ಬುದ್ಧಿಯುಳ್ಳ ಮನುಷ್ಯನೂ ಆಗಿದ್ದ ದಾವೀದನ ವಿಷಯವಾಗಿದ್ದು, ಈ ಲೌಕೀಕ ಅಮಲು ಆತನ ಮೇಲೆ ಬರುವವರೆಗೂ ಒಬ್ಬ ಒಳ್ಳೆಯ ಮನುಷ್ಯನಾಗಿದ್ದು ಇದರಿಂದ ದೇವರಿಗೆ ಪ್ರಿಯನಾಗಿ ಆತನಿಂದ ಅತ್ಯುನ್ನತವಾಗಿ ಗೌರವಿಸಲ್ಪಟ್ಟಾಗ್ಯೂ ಸಹ ಅವನು ಬಿದ್ದುಹೊಗಿದ್ದನು; ಮತ್ತು ಆತನ ಹಿಂದಿನ ಉನ್ನತ ನೈತಿಕ ಮಟ್ಟವು, ಎಲ್ಲಕ್ಕಿಂತಲೂ ಮಿಗಿಲಾಗಿ, ಆತನ ಅವನತಿ ಹಾಗು ಬೀಳುವಿಕೆಯನ್ನು ದುಃಖಕರವಾಗಿ ಮಾಡಿತ್ತು.

ದಾವೀದನು ದೇವರ ಈ ಆಜ್ಞೆಯನ್ನು ಜ್ಞಾಪಿಸಿ–ಕೊಂಡಿದ್ದಲ್ಲಿ ನಿಜವಾಗಿಯೂ ಚೆನ್ನಾಗಿರುತ್ತಿತ್ತು: "ಅವನು [ಅರಸನು] ರಾಜ್ಯಾಧಿಕಾರಕ್ಕೆ ಬಂದಾಗ ಯಾಜಕ ಸೇವೆಮಾಡುವ ಲೇವಿಯರ ವಶದಲ್ಲಿರುವ ಈ ಧರ್ಮಶಾಸ್ತ್ರಗ್ರಂಥದ ಒಂದು ಪ್ರತಿಯನ್ನು ತನಗೋಸ್ಕರ ಪುಸ್ತಕರೂಪವಾಗಿ ಬರೆಸಿಕೊಳ್ಳಬೇಕು. ಅವನು ಮದದಿಂದ ತನ್ನ ಸ್ವದೇಶದವರನ್ನು ಹಿಯ್ಯಾಳಿಸದೆ ಯೆಹೋವನ ಆಜ್ಞೆಯನ್ನು ಮೀರಿ ಎಡಬಲಕ್ಕೆ ತಿರುಗಿಕೊಳ್ಳದೆ ತನ್ನ ದೇವರಾದ ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಈ ಧರ್ಮಶಾಸ್ತ್ರದ ಎಲ್ಲಾ ವಾಕ್ಯಗಳನ್ನೂ ವಿಧಿಗಳನ್ನೂ ಅನುಸರಿಸುವದಕ್ಕೆ ಅಭ್ಯಾಸ ಮಾಡಿಕೊಳ್ಳುವಂತೆ ಈ ಗ್ರಂಥವು ಅವನ ಬಳಿಯಲ್ಲೇ ಇರಬೇಕು; ಅವನು ತನ್ನ ಜೀವಮಾನದ ದಿನಗಳೆಲ್ಲಾ ಅದರಲ್ಲಿ ಓದಿಕೊಳ್ಳುತ್ತಾ ಇರಬೇಕು. ಹೀಗಾದರೆ ಅವನೂ ಅವನ ಸಂತತಿಯವರೂ ಬಹುಕಾಲ ರಾಜ್ಯಾಧಿಕಾರ–ವನ್ನು ನಡಿಸುತ್ತಾ ಇಸ್ರಾಯೇಲ್ಯರ ನಡುವೆ ಬಾಳುವನು." (ಧರ್ಮೋಪದೇಶಕಾಂಡ 17:18–20) ದಾವೀದನಂಥಾ ಮನುಷ್ಯನೇ ಈ ವಿಷಯದಲ್ಲಿ ವಿಫಲನಾಗಿ ಶೋಧನೆಯ ಬಲದಿಂದ ಜಯಿಸಲ್ಪಟ್ಟಿರುವಲ್ಲಿ ಪ್ರತಿಯೊಬ್ಬ ದೇವರ ಮಗನು ಎಚ್ಚರಿಕೆಯಿಂದಿದ್ದು ಈತನ ಅವಿವೇಕತನದ ವಿಷಯದಲ್ಲಿನ ಪಾಠದಿಂದ ಪ್ರಯೋಜನಹೊಂದಲಿ. ನೀತಿಮಾರ್ಗವನ್ನು ಹಿಡಿದಿರುವ ಪ್ರತಿಯೊಬ್ಬನಿಗೂ ಅವನು ಚಿಕ್ಕವನೇ ಇಲ್ಲವೇ ದೊಡ್ಡವನೇ ಆಗಲಿ ದೇವರ ವಾಕ್ಯವು ಅನುದಿನವೂ ಅವನ ಸಂಗಡಿಗನೂ ಬೋಧಕನೂ ಹಾಗು ಮಾರ್ಗದರ್ಶಕನೂ ಆಗಿರಬೇಕು. ನಾವು ತಿಳುವಳಿಕೆ ಹೊಂದುವ ಅಥವಾ ವಾದ–ಮಾಡುವ ಸಲುವಾಗಿ ಅದನ್ನು ಓದುವದಷ್ಟೇ ಇಲ್ಲವೇ ಅಧ್ಯಯನ ಮಾಡುವದಷ್ಟೇ ಸಾಕಾಗುವದಿಲ್ಲ: ನಾವು ಅದನ್ನು ಪರಿಶೀಲಿಸಿ ಅದರಿಂದ ಪೋಷಣೆಹೊಂದುವ ಸಲುವಾಗಿ ಅದನ್ನು ನಮಗೆ ಕೊಡಲಾಗಿರುವದು; ಅದರ ಮೂಲತತ್ವಗಳು ನಮ್ಮೊಳಗೆ ಸೇರಿಕೊಂಡು ನಮ್ಮ ಆಲೋಚನೆಗಳಿಗೆ ಆಕಾರ ನೀಡಿ ನಮ್ಮ ಕಾರ್ಯಗಳೆಲ್ಲವನ್ನು ಮಾರ್ಗದರ್ಶಿಸುವಂತಾಗಬೇಕು. ದೇವರ ವಾಕ್ಯವು ನಮ್ಮೊಳಗೆ ಒಂದು ಚೈತನ್ಯ ಹಾಗು ಚಾಲನ ಶಕ್ತಿಯಾಗಿ ನೆಲಸುವದೆಂದರೆ ಇದೇ; ಅಲ್ಲದೆ ದೇವರೊಂದಿಗೆ ಮತ್ತು ಆತನ ವಾಕ್ಯಗಳ ಹಾಗು ಪ್ರಾರ್ಥನೆಯ ಸೌಭಾಗ್ಯದ ಮೂಲಕವಾಗಿ ಹೀಗೆ ಅನ್ಯೋನ್ಯತೆಯನ್ನು ಹೊಂದಿದ್ದಲ್ಲಿ, ನಾವು ಪಾಪದಿಂದ ವಂಚಿಸಲ್ಪಡದೇ ಇಲ್ಲವೇ ಲೌಕೀಕಭಾವದ ಅಮಲಿನಲ್ಲಿ ಪಾಲುತೆಗೆದುಕೊಳ್ಳದವರಾಗಿ ಇರುವೆವು.

ದಾವೀದನಿಗೆ ವಿನಾಯಿತಿ ನೀಡುವ ಬಗ್ಗೆ ಕೆಲವರು ಸಲಹೆಮಾಡಿರುವದೇನಂದರೆ ಒಬ್ಬ ಮನುಷ್ಯನ ಇಡೀ ಜೀವನವ ಬಗ್ಗೆ ಒಟ್ಟಾರೆಯಾಗಿ ನಿರ್ಣಯವನ್ನು ತೆಗೆದುಕೊಳ್ಳಬೇಕು, ಅದರಲ್ಲಿರುವ ವೈಫ಼ಲ್ಯತೆಗಳ ಮೂಲಕವಾಗಿ ಅಲ್ಲ, ವಿಷಯವೇನಂದರೆ ಇಂಥ ಒಂದು ದೃಷ್ಟಿಯಿಂದ ನೋಡಿದರೆ ಆತನ ಜೀವನವಲ್ಲಿ ಒಳ್ಳೆಯದು ಪ್ರಭಾವಬೀರಿದ್ದಲ್ಲಿ, ಆಗ ನಾವು ಅದನ್ನು ಒಂದು ನೀತಿಯುಳ್ಳ ಜೀವಿತವೆಂದು, ಇಲ್ಲವೇ ಅದನ್ನು ಬೇರೊಂದು ರೀತಿಯೆಂದು ಎಣಿಸಬೇಕು. ಹೀಗಾಗಿ ಸಲಹೆ ಮಾಡಿರುವದೇನಂದರೆ ನಾವು ದಾವೀದನ ಹಾಗು ಬಹು ಸಂಖ್ಯೆಯಲ್ಲಿರುವ ಇತರರ ಬಗ್ಗೆ ಹಾಗು ಅವರಲ್ಲಿನ ಹಿಂದಿನ ಕಾಲದ [ಪಾಷಾಂಡ ಬೋಧನೆ ಸಂಬಂಧದ ಕೆಥೋಲಿಕರ] ತನಿಖಾಧಿಕಾರಿಗಳು [Inquisitor] ತಮ್ಮಿಂದ ವಿಭಿನ್ನವಾದ ನಂಬಿಕೆಯುಳ್ಳವರನ್ನು ಸುಟ್ಟುಹಾಕಿ ಯಾತನೆನೀಡಿದ್ದರು. ಇವರಲ್ಲಿ ಅನೇಕರು ಒಳ್ಳೆಯವರಾಗಿದ್ದಾಗ್ಯೂ ಅವರು ತಪ್ಪು ಗ್ರಹಿಕೆಯುಳ್ಳ ಮನುಷ್ಯರಾಗಿದ್ದರೆಂದು ಸಲಹೆಯನ್ನು ಮಾಡಲಾಗಿರುವದು.

ಈ ವಿಚಾರಧಾರೆಯ ವಿಧಾನದಿಂದ ಭಿನ್ನವಾಗಿರುವದು ನಮಗೆ ಅನಿವಾರ್ಯವಾಗುವದು, ಯಾಕಂದರೆ ಪ್ರವಾದಿಯಾದ ಯೆಹೆಜ್ಕೇಲನು ಸ್ಪಷ್ಟವಾಗಿ ವ್ಯಕ್ತಪಡಿಸಿರುವಂತೆ, ಇದು ದೇವರ ನ್ಯಾಯನಿರ್ಣಯಕ್ಕೆ ವಿರುದ್ಧವಾಗಿರುವದು: ಆತನು ಹೀಗೆ ಹೇಳಿದ್ದಾನೆ–"ಆದರೆ ಒಬ್ಬ ಶಿಷ್ಟನು ತನ್ನ ಶಿಷ್ಟತನವನ್ನು ಬಿಟ್ಟು ಅಧರ್ಮಮಾಡಿ ದುಷ್ಟನು ನಡಿಸುವ ದುರಾಚಾರಗಳನ್ನೆಲ್ಲಾ ನಡಿಸಿದರೆ ಅವನು ಬಾಳುವನೋ? ಅವನು ಮಾಡಿದ ಯಾವ ಸುಕೃತ್ಯವೂ ಅವನ ಲೆಕ್ಕಕ್ಕೆ ಸೇರಿಸಲ್ಪಡದು. ಅವನು ಮಾಡುತ್ತಿರುವ ಪಾಪಾಪರಾಧಗಳಿಂದಲೇ ಸಾಯುವನು ಆದರೆ. (ಯೆಹೆ. 18:24) ದುಷ್ಟನು ತಾನು ಮಾಡುತ್ತಿದ್ದ ಪಾಪಗಳನ್ನೆಲ್ಲಾ ಬಿಟ್ಟುಬಿಟ್ಟು ನನ್ನ ಸಕಲ ವಿಧಿಗಳನ್ನು ಕೈಕೊಂಡು ನೀತಿನ್ಯಾಯಗಳನ್ನು ನಡಿಸಿದರೆ ಸಾಯನು. ಬಾಳೇ ಬಾಳುವನು. ಅವನು ಮಾಡಿದ ಯಾವ ಅಪರಾಧವೂ ಅವನ ಲೆಕ್ಕಕ್ಕೆ ಸೇರಿಲ್ಪಡದು. ಅವನು ಮಾಡುತ್ತಿರುವ ಸದ್ಧರ್ಮದಿಂದಲೇ ಅವನು ಬಾಳುವನು. (ಯೆಹೆ 18:21–22) ಶಿಷ್ಟನು ತನ್ನ ಶಿಷ್ಟತನವನ್ನು ಬಿಟ್ಟು ಅಧರ್ಮ ಮಾಡಿ ಅದರಲ್ಲಿ ಸತ್ತರೆ ತಾನು ಮಾಡಿದ ಅಧರ್ಮದಿಂದಲೇ ಸಾಯಬೇಕಾಯಿತು. ದುಷ್ಟನು ತಾನು ಮಾಡುತ್ತಿದ್ದ ದುಷ್ಟತನವನ್ನು ಬಿಟ್ಟು ನೀತಿನ್ಯಾಯಗಳನ್ನು ನಡಿಸಿದರೆ ತನ್ನ ಪ್ರಾಣವನ್ನು ಉಳಿಸಿಕೊಳ್ಳುವನು. ಅವನು ಯೋಚಿಸಿ ತಾನು ಮಾಡುತ್ತಿದ್ದ ಅಪರಾಧಗಳನ್ನೆಲ್ಲಾ ಬಿಟ್ಟುಬಿಟ್ಟದರಿಂದ ಸಾಯನು ಬಾಳೇ ಬಾಳುವನು. (ಯೆಹೆ 18:26–28) 2 ಪೇತ್ರ 2:20–22 ಇದನ್ನು ಸಹ ನೋಡಿರಿ.

**ಯೆಹೆಜ್ಕೇಲನ ಈ 18ನೇ ಅಧ್ಯಾಯವು ವಿಶೇಷವಾಗಿ ಈಡುಬಲಿಯ ಪರಿಣಾಮವಾಗಿ ಆದಾಮನ ಅಪರಾಧವು ಹೊಸ ಒಡಂಬಡಿಕೆಯ ಮೂಲಕವಾಗಿ ಸರಿದೂಗಿಸಲ್ಪಡುವ ಕಾಲಕ್ಕೆ ಸಂಬಂಧಿಸಿರುವದು; ಹೀಗಾಗಿ ನಂಬುವವರಿಗೆ ಯಾವದೂ [ಪೂರ್ವ ಅಪರಾಧಗಳು] ಉಳಿದುಕೊಳ್ಳುವದಿಲ್ಲ; ಆದರೆ ಸ್ವತಃ ಅವರು ಮಾಡಿದ ದುರ್ನಡತೆಗಳು ಉಳಿದುಕೊಳ್ಳುವವು. ಇದೇ ಮೂಲತತ್ವವು ಕೆಲವು ಪ್ರಮಾಣದಲ್ಲಿ ಸುವಾರ್ತಾಯುಗದಲ್ಲಿರುವವರಿಗೆ ಅಂದರೆ ತಮ್ಮ ನಂಬಿಕೆಯ ಮೂಲಕವಾಗಿ ನೀತಿವಂತರೆಮದು ತೀರ್ಪುಹೊಂದುವವರಿಗೆ; ಹಾಗು ಛಾಯಾರೂಪದ ಯಜ್ಞಾರ್ಪಣೆಯ ಮೂಲಕವಾಗಿ ನೀತಿನಿರ್ಣಯ ಹೊಂದಿದ ಇಸ್ರಾಯೇಲ್ಯರಿಗೆ ಅನ್ವಯವಾಗುವದು.

ಲೌಕಿಕಭಾವದ ಅಮಲಿನ ಪರಿಣಾಮದಿಂದಾದ ಆತ್ಮಿಕ ಅಂಧತೆ ಹಾಗು ಜಡತ್ವಗಳಲ್ಲಿದ್ದವರಾಗಿ, ಆ ಸ್ಥಿತಿಲ್ಲಿದ್ದು ಪಾಪ ಮಾಡುವವರಿಗೆ ಒಂದು ಸೂಕ್ತವಾದ ವಿನಾಯಿತಿಯಾಗಿ ರೂಪುಗೊಳ್ಳುತ್ತದೆಂದು ಕಲ್ಪಿಸಿಕೊಳ್ಳುವದು ಒಂದು ದೊಡ್ಡ ತಪ್ಪಾಗುವದು. ದೇವರು ದಾವೀದನ ವಿಷಯದಲ್ಲಿ ಹೀಗೆ ತೀರ್ಪುಮಾಡಲಿಲ್ಲ. ಯಾವುದೇ ಪಾಪದ ಆರಂಭವು ಮೊದಲು ಅದರ ಅಮಲಿನ ಪ್ರಭಾವಕ್ಕೆ ಶರಣಾಗುದರಲ್ಲಿರುವದು; ಆದುದರಿಂದ ಸಕಲ ವಿಧವಾದ ಕೆಟ್ಟತನಕ್ಕೆ [ಅಥವಾ, ಕೆಟ್ಟತನವಾಗಿ ತೋರುವದಕ್ಕೆ] ದೂರವಾಗಿರಿ (1 ಥೆಸಲೋನಿಕ 5:22) ಎಂದು ನಮಗೆ ವಿಶ್ವಾಸಪೂರ್ಣವಾಗಿ ಎಚ್ಚರಿಸಲಾಗಿರುವದು. ಇತರ ಪಾಪಿಗಳೆಲ್ಲರ ರೀತಿಯಲ್ಲಿಯೇ, ದಾವೀದನ ಪಾಪವು ಆತನು ಪಾಪದ ಸಲಹೆಗೆ ಕಿವಿಗೊಟ್ಟದ್ದರಲ್ಲಿ ಮೊದಲು ಆರಂಭವಾಗಿತ್ತು ಅಲ್ಲದೆ ಇದಾದದ ನಂತರ ಮುಂದಿನ ಹೆಜ್ಜೆಗಳನ್ನು ಸುಲಭವಾಗಿ ತೆಗೆದುಕೊಳ್ಳಲಾಗಿತ್ತು. –ಯಾಕೋಬ 1:14–15ಹೋಲಿಸಿ ನೋಡಿ.

ಆದರೆ ಪಶ್ಚಾತಾಪ [ಮಾನಸಾಂತರ] ಹಾಗು ಪಾಪ ನಿವಾರಣೆಗಳು ಎನ್ನುವಂಥ ಸಂಗತಿಗಳು ಇರುವದಕ್ಕಾಗಿ ದೇವರಿಗೆ ಸ್ತೋತ್ರ. ಅಲ್ಲದೆ ದಾವೀದನು ಘೋರವಾದ ಪಾಪಮಾಡಿದ್ದಾಗ್ಯೂ ಅಲ್ಲದೆ ದೇವರು ಅವನ ಮೇಲೆ ಬಹು ಸಿಟ್ಟುಗೊಂಡಿದ್ದಾಗ್ಯೂ ತನ್ನ ರೋಷದಲ್ಲಿಯೂ ತಾನು ಕರುಣೆಯನ್ನು ನೆನಸಿಕೊಂಡು ಪ್ರವಾದಿಯಾದ ನಾತಾನನನ್ನು ಆತನಿಗೆ ಗದರಿಸುವ ಸಲುವಾಗಿ ಕಳುಹಿಸಿದ್ದನು. ನಿಸ್ಸಂದೇಹವಾಗಿಯೂ ನಾತಾನನಿಗೆ ತಾನು ಈ ಸಂದೇಶವನ್ನು ಕೊಂಡೊಯ್ಯುವ ಸಲುವಾಗಿ ಅರಸನ ಬಳಿಗೆ ಹೋಗುವಂಥದ್ದು ಒಂದು ಕಠಿಣವಾದ ಕಾರ್ಯಭಾರವಾಗಿತ್ತು; ಆದರೂ ದೇವರು ಆಜ್ಞಾಪಿಸಿದಾಗ ಅವನು ಹಿಂಜರಿಯದೆ ಇಲ್ಲವೇ ತನ್ನ ಕರ್ತವ್ಯ ನಿರ್ವಹಣೆಗಾಗಿ ಬೇರೊಂದು ವಿಧಾನವನ್ನು ಅನುಸರಿಸದೆ ನೇರವಾಗಿ ಮುಂದುವರಿದು ಆ ಕಾರ್ಯವನ್ನು ಗೌರವಯುತವಾಗಿ ಸರಳತೆಯಿಂದ ನಿರ್ವಹಿಸಿದ್ದನು. ನಾತಾನನು ಮೊದಲು ದಾವೀದನ ಮನಸ್ಸನ್ನು ತಾನು ಆಗ ಅನುಸರಿಸಿದ್ದ ದುಷ್ಟ ವಿಧಾನವನ್ನು ಆತನ ಹಿಂದಿನ ಸುಕೃತ್ಯಗಳಲ್ಲಿ ತೋರಿಬಂದಿದ್ದ ಆತನ ನಂಬಿಕೆ ಶೌರ್ಯ ನ್ಯಾಯ ಹಾಗು ದೈನ್ಯತೆ ಇವುಗಳನ್ನು ಪುನರಾವರ್ತಿಸುವ ಮೂಲಕವಾಗಿ ಈ ಹಿಂದಿನವುಗಳು ಈಗಿನವುಗಳನ್ನು ಸರಿಹೊಂದಿಸುವದೆಂದು ಹೇಳಲು ಪ್ರಯತ್ನಿಸದೆ, ದೇವರ ಎಣಿಕೆಯಲ್ಲಿ ಆತನು ಆಗ ಮಾಡಿದ ಪಾಪಕ್ಕೆ ಪಶ್ಚಾತಾಪಪಡದಿದ್ದಲ್ಲಿ ಆತನ ಹಿಂದಿನ ಎಲ್ಲಾ ಒಳ್ಳೆಯ ಕಾರ್ಯಗಳು ಗಣನೆಗೆಬಾರದೆಂಬುದನ್ನು ನೆನಪಿಗೆ ತಂದುಕೊಟ್ಟು ನಾತಾನನು ನೇರವಾಗಿ ವಿಷಯಕ್ಕೆ ಬಂದವನಾಗಿ ಕೌಶಲ್ಯದಿಂದ ಒಂದು ಸಾಮ್ಯದ ಮೂಲಕವಾಗಿ ಆ ಸಂಗತಿಯನ್ನು ಪ್ರಸ್ತುತಪಡಿಸಿದ್ದನು. ದಾವೀದನು ಅದು ನಿಜವಾಗಿ ನಡೆದ ಸಂಗತಿಯೆಂದು ತಪ್ಪಾಗಿ ಗ್ರಹಿಸಿಕೊಂಡು ಆತುರದಿಂದ ತಪ್ಪಿತಸ್ಥನ ಮೇಲೆ ಮರಣದಂಡನೆಯ ತೀರ್ಪನ್ನು ನೀಡಿದ್ದನು. ದೇವರ ಮನುಷ್ಯನಿಗೆ ತಾನು ನೀತಿಯ ಬಗ್ಗೆ ಎಷ್ಟು ಆಸಕ್ತಿಯುಳ್ಳವ–ನೆಂಬುದನ್ನು ತೋರಿಸಿಕೊಂಡಿದ್ದ ಸಂಭವವಿದ್ದು, ಪ್ರವಾದಿಯು ವೀರಭಾವದ ಸದ್ಗುಣದಿಂದ ಕೂಡಿದವಾಗಿ ಬೇರೆ ಯಾವುದನ್ನೂ ಗಣನೆಗೆತೆಗೆದುಕೊಳ್ಳದೆ ದೇವರ ಚಿತ್ತವನ್ನು ಪ್ರಕಟಿಸುವವರೆಗೂ ತನ್ನ ಅನೀತಿಯ ನಡೆಯ ಬಗ್ಗೆ ಪ್ರವಾದಿಗೆ ತಿಳಿದಿರುವದಿಲ್ಲವೆಂದು ಊಹಿಸಿಕೊಂಡಿದ್ದನು. ನಾತಾನನು ಆ ಪಾಠವನ್ನು [ದಾವೀದನ]

ಮನಸ್ಸಿಗೆ ನಾಟುವಂತೆ ಮಾಡಿ ಹೀಗೆ ಹೇಳಿದ್ದನು –"ಆ ಮನುಷ್ಯನು ನೀನೇ.... ಹೀಗಿರಲು ನೀನು ಯೆಹೋವನಾದ ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವದನ್ನು ಮಾಡಿದ್ದೇನು? ನೀನು ಹಿತ್ತೀಯನಾದ ಊರಿಯನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿ. ನೀನು ಹಿತ್ತಿಯನಾದ ಊರಿಯನನ್ನು ಅಮ್ಮೋನಿಯರ ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿದ್ದರಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲ. ಯೆಹೋವನಾದ ನನ್ನ ಮಾತನ್ನು ಕೇಳು–ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು(*) ಉಂಟಾಗುವಂತೆ ಮಾಡುವೆನು." 2 ಸಮುವೇಲ 12:7–12

[(*) ಕೇಡು ಎಂಬುದು ಇಲ್ಲಿ ಪಾಪವೆಂಬ ಅರ್ಥದಲ್ಲಿ ಬಳಸಲಾಗಿಲ್ಲ, ಆದರೆ ಕಷ್ಟ ಅಥವಾ ವಿಪತ್ತನ್ನು ಸೂಚಿಸುತ್ತದೆ. ಇದು ಇಸ್ರಾಯೇಲ್ಯರೊಂದಿಗೆ ದೇವರು ಒಂದು ಜನಾಂಗವಾಗಿ ಮಾಡಿಕೊಂಡ ಒಡಂಬಡಿಕೆಯ ಒಂದು ಮುಖ್ಯ ಲಕ್ಷಣವಾಗಿತ್ತು. ಅವರ ವಿಧೇಯತೆಯು ಭೂಸಂಬಂಧವಾದ ಮನ್ನಣೆ ಹಾಗು ಪ್ರತಿಫಲವನ್ನು ಹೊಂದಬೇಕಿದ್ದು–ಅವರ ಅವಿಧೇಯತ್ವ ಮತ್ತು ಪಾಪವು ಭೂಸಂಬಂಧವಾದ ಶಿಕ್ಷೆಗಳನ್ನು ಪಡೆಯಬೇಕಿತ್ತು. ಇಂಥಾ ಒಂದು ಒಡಂಬಡಿಕೆಯನ್ನು ದೇವರು ಇತರ ಜನಾಂಗಗಳೊಡನೆ ಎಂದೂ ಮಾಡಿಕೊಂಡಿರಲಿಲ್ಲ. 1895ನೇ ಇಸವಿಯ ಮಾರ್ಚಿ 1ರ ಸಂಚಿಕೆಯನ್ನು ನೋಡಿರಿ.]

ಆದು ದಾವೀದನಿಗೆ ಒಂದು ಸಂದಿಗ್ಧ ಕ್ಷಣವಾಗಿದ್ದು ಆ ಸಮಯಕ್ಕೆ ಮೌನವು ಪ್ರಭಾವ ಬೀರಿದ್ದ ಸಂಭವವಿತ್ತು. ಅವನು ಮಾಡುವದೇನು? ಅವನು ಸತ್ಯದ ಬಲವನ್ನು ಹೆಮ್ಮೆಯಿಂದ ಎದುರಿಸುವನಾಗಿದ್ದು ಹೀಗೆ ತನ್ನ ನಿಷ್ಠಾವಂತ ಹಳೆಯ ಸ್ನೇಹಿತನಾದ ದೇವರ ಮನುಷ್ಯನ ಮೂಲಕವಾಗಿ ತಾನು ಕರುಣೆ ದೈನ್ಯತೆಗಳಿಂದ ಮೌನವಾಗಿ [ತನ್ನ ಪಾಪದ ಬಗ್ಗೆ] ಮನದಟ್ಟುಮಾಡಿಕೊಳ್ಳುವನೋ? ಆವರೆಗೂ ತನ್ನ ಯಶಸ್ಸಿನ ವೃತ್ತಿ ಜೀವನದ ಮೂಲಕವಾಗಿ ಹುಟ್ಟಿಕೊಂಡ ಹೆಮ್ಮೆಯು ಮೊದಲು ಪ್ರಚೋದನೆಗೊಂಡಿರುವ ಸಂಭವವಿದ್ದಾಗ್ಯೂ, ತನ್ನ ಎದುರಿನಲ್ಲಿ ಸತ್ಯವು ಸರಳವಾಗಿ ಸ್ಥಾಪಿತವಾಗಿರಲು ಇದನ್ನು ಆತನು ನಿರಾಕರಿಸಲು ಹೇಗೆ ಸಾಧ್ಯವಿತ್ತು? ಇದನ್ನು ಯಾವುದೇ ಅರ್ಥದಲ್ಲಿಯಾಗಲೀ ಅಥವಾ ಯಾವುದೇ ಮಟ್ಟದಲ್ಲಿಯಾಗಲಿ ಸಮರ್ಥಿಸಿಕೊಳ್ಳಲು ಆತನಿಗೆ ಹೇಗೆ ಸಾಧ್ಯವಿತ್ತು? ತನ್ನ ಸ್ವಂತ ಮನಸ್ಸಿನಲ್ಲಿಯೂ ಸಹ ಇದಕ್ಕೆ ಯಾವ ಸಮರ್ಥನೆಯೂ ಉಪಶಮನವೂ ಇಲ್ಲದಿರುವದು ಸ್ಪಷ್ಟವಾಗಿತ್ತು. ಹೆಚ್ಚು ಕಡಿಮೆ ಮನಃಸಾಕ್ಷಿಯು ತಳಮಳಗೊಂಡಿದ್ದು ಆ ಸಮಯಕ್ಕೆ ತನ್ನ ಅಪರಾಧದ ದೆಸೆಯಿಂದ ಪಶ್ಚಾತಾಪಕ್ಕೊಳಕ್ಕಾಗಿದ್ದು ಆಗ ಸಂಪೂರ್ಣವಾಗಿ ಎಚ್ಚೆತ್ತುಕೊಂಡದ್ದಾಗಿ ಒಂದು ನಿರ್ಣಾಯಕ ಹಂತವನ್ನು ತಲುಪಿತ್ತು. ಅರಸನ ಮುಂದೆ ಇದ್ದದ್ದಾದರೂ ಕೇವಲ ಎರಡು ಮಾರ್ಗಗಳಾಗಿದ್ದು–ಒಂದು ಪಶ್ಚಾತಾಪಪಟ್ಟು ತಪ್ಪನ್ನು ಒಪ್ಪಿಕೊಂಡವನಾಗಿ ಸುಧಾರಿತನಾಗುವದು; ಮತ್ತೊಂದು ಕೋಪದಿಂದ ಪ್ರವಾದಿಯನ್ನು ಅಲ್ಲಗಳೆದು ತನ್ನ ಅರಸನ ಅಧಿಕಾರವನ್ನು ದುಷ್ಟತನದಿಂದ ದುರುಪಯೋಗಿಸಿಕೊಂಡವನಾಗಿ ದೇವರ ಮನುಷ್ಯನು ತನ್ನನ್ನು ಗದರಿಸಿದನೆಂದು ಭಾವಿಕೊಂಡು ಆತನನ್ನು ಶಿಕ್ಷಿಸುವಂಥ ಇನ್ನೂ ಗಾಢವಾದ ಪಾಪದಲ್ಲಿ ಮುಳುಗಿದವನಾಗಿ, ಆನಂತರದಲ್ಲಿ ಹೆಮ್ಮೆಯಿಂದ ವಿನಾಯಿತಿ ಪಡೆದ ಒಬ್ಬ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬನಾಗಿ ತನ್ನ ಇಷ್ಟದಂತೆ ಮಾಡುವಂಥದ್ದು ಅರಸರ ಅಧಿಕಾರವೆಂದು ಘೋಷಿಸಿ–ಕೊಳ್ಳುವದು. ಇಂಥದ್ದು ಸಾಧಾರಣವಾಗಿ ಎಲ್ಲಾ ಜನಾಂಗಗಳ ಅರಸರ ಪದ್ಧತಿಯೆಂದು ಒಪ್ಪಿಕೊಳ್ಳಲಾಗಿರುವದು. ಹೀಗೆ ದಾವೀದನು ದೇವರ ನಿಯಮಕ್ಕೆ ಬದಲಾಗಿ ಲೋಕರೂಢಿಯಾದ ಪದ್ಧತಿಯು ತನ್ನಂಥ ಗುಣಮಟ್ಟವುಳ್ಳವರ ಸವಲತ್ತೆಂದು ಹೇಳಿಕೊಳ್ಳಬಹುದಾಗಿತ್ತು. "ತನ್ನ ಸ್ವಂತ ಬಯಕೆಗಳಿಗಿಂತಲೂ ಮಿಗಿಲಾಗಿ ತನ್ನ ಜೊತೆ ಮಾನವರ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂಥ ಅರಸನು ಎಂಥವನು?" ಎಂದು ಆತನು ನಿಜವಾಗಿಯೂ ಹೇಳಬಹುದಿತ್ತು.

ಆದರೆ ದಾವೀದನು ನಂತರದ ಈ [ಎರಡನೆಯ] ದುಷ್ಟ ಮಾರ್ಗವನ್ನು ಅನುಸರಿಸಿರಲಿಲ್ಲ ಎಂಬುದಕ್ಕೆ ನಮಗೆ ಸಂತೋಷವಾಗುತ್ತದೆ. ಬದಲಾಗಿ ಆತನು ಸ್ವತಃ ತನ್ನ ಉತ್ತಮ ಸ್ವಭಾವವು ಪುನಃ ಪ್ರತಿಪಾದಿಸುವದಕ್ಕೆ ಅನುವುಮಾಡಿಕೊಟ್ಟಿದ್ದನು; ಹೀಗೆ ದಾವೀದನು ನಾತಾನನಿಗೆ–"ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿದ್ದೇನೆ." ಎಂದು ಹೇಳಿದ್ದನು. ಸಾಮ್ಯದ ವಿಷಯದ ನ್ಯಾಯತೀರ್ಪಿನಲ್ಲಿ ದಾವೀದನು ತನಗೆ ಅರಿವಿಲ್ಲದೆಯೇ ತನ್ನನ್ನು ಮರಣಹೊಂದತಕ್ಕ ಅಪರಾಧಿಯೆಂದು ಹೇಳಿದ್ದಾಗ್ಯೂ, ನಾತಾನನು ದಾವೀದನಿಗೆ–"ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ;" ಎಂದು ಹೇಳಿದನು. ಅದೆಷ್ಟು ಕೃಪಾಪೂರ್ಣನು ದೇವರು, ನಿಜವಾದ ಪಶ್ಚಾತಾಪವು ತೋರ್ಪಟ್ಟಾಗ ಅದನ್ನು ಕ್ಷಮಿಸಲು ಹೇಗೆ ಸಿದ್ಧನಾಗಿರುವನು! ನಾತಾನನು ಹೇಳಿದ್ದು–"ಆದರೂ ನೀನು ಈ ಕೃತ್ಯದಿಂದ ಯೆಹೋವನ ವೈರಿಗಳು ಆತನನ್ನು ಬಹಳವಾಗಿ ನಿಂದಿಸುವದಕ್ಕೆ ಆಸ್ಪದ ಕೊಟ್ಟದ್ದರಿಂದ ನಿನ್ನಿಂದ ಹುಟ್ಟಿರುವ ಮಗುವು ಸತ್ತೇ ಹೋಗುವದು.." [2 ಸಮುವೇಲ 12:13–15] ದಾವೀದನು ಪರಿತಪಿಸುವವನಾಗಿ ದೀನತೆಯಿಂದ ತನಗೆ ವಿರುದ್ಧವಾಗಿ ಉಚ್ಚರಿಸಿದ ಖಂಡನೆ ಹಾಗು ಶಿಕ್ಷೆಗಳೆರಡನ್ನೂ ಅಂಗೀಕರಿಸಿಕೊಂಡಿದ್ದನು; ಅಲ್ಲದೆ ತನ್ನ ಪಾಪವು ಬಹು ಕೆಡುಕುಳ್ಳದೆಂದು, ದೇಶದ ಎದುರಿನಲ್ಲಿ ತನ್ನ ಉದಾಹರಣೆಯು ಜನರ ನೈತಿಕ ಹಾಗು ಧಾರ್ಮಿಕ ಹಿತಾಸಕ್ತಿಗಳಿಗೆ ಬಹುವಾಗಿ ಹಾನಿ ಉಂಟುಮಾಡುವದೆಂಬುದನ್ನು ಮನಗೊಂಡವನಾಗಿ ತನ್ನ ಪಾಪವು ಬಹು ಕೆಡುಕಾದ್ದರಿಂದ ಅದಕ್ಕಾಗಿ ತನ್ನ ಘಾಡವಾದ ಕುಗ್ಗುವಿಕೆ ಹಾಗು ಪಶ್ಚಾತಾಪಗಳು ದೀರ್ಘಕಾಲಿಕವಾದ ಒಳ್ಳೆಯ ಪರಿಣಾಮಗಳನ್ನು ಬೀರುವಂಥ ಉದಾಹರಣೆಯನ್ನಾಗಿ ಮಾಡಲು ತೀರ್ಮಾನಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತಂದಿದ್ದನು.

ಇದು ಒಂದು ಘನವಂತಿಕೆಯ ತೀರ್ಮಾನವಾಗಿದ್ದು, ಮನುಷ್ಯನ ಘನವಂತಿಕೆಯು ಆತನ ದೈನ್ಯವಾದ ಬಹಿರಂಗ ಪಾಪದ ಅರಿಕೆ, ತನ್ನ ತಪ್ಪನ್ನು ಸರಿಪಡಿಸಿಕೊಳ್ಳಲು ತನಗೆ ಸಾಧ್ಯವಾದಷ್ಟು ಮಾಡಿದ ಪರಿಶ್ರಮ, ಹಾಗು ದೇವರು ತನ್ನ ಜ್ಞಾನ ಕರುಣೆಯ ಮೂಲಕವಾಗಿ ಆತನ ಮೇಲೆ ವಿಧಿಸಲು ಯೋಗ್ಯವೆಂದು ಕಂಡಂಥ ಶಿಕ್ಷೆಗೆ ವಿನಮ್ರನಾಗಿ ಒಳಪಡುವದು; ಹೀಗೆ ತನ್ನ ಪಾಪಕ್ಕೆ ವಿರುದ್ಧವಾಗಿ ತೋರಲಾದ ಕೋಪವು

ಎಲ್ಲರಿಗೂ ತೋರ್ಪಡುವಂತೆ ಮಾಡುವದು ಹೀಗಾಗಿ ಅರಸನು ಮತ್ತು ಪ್ರಜೆಗಳು ಇವುಗಳ ಬಗ್ಗೆ ಎಚ್ಚರಿಕೆಯಾಗಿರುವಂಥದ್ದು– ಇವುಗಳಲ್ಲಿ ಕಂಡುಬಂದ ಘನವಂತಿಕೆಯು ಇನ್ನಾವ ವಿಧದಲ್ಲಿಯೂ ಹೆಚ್ಚು ಸ್ಪಷ್ಟವಾಗಿ ಶೋಭಿಸುವದಿಲ್ಲ. "ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ." [ಜ್ಞಾನೋಕ್ತಿ 16:32] ಹೀಗೆ ದಾವೀದನು ತನ್ನ ಯೌವ್ವನದಲ್ಲಿನ ಗೋಲ್ಯಾತನೊಡನೆಯ ಸೆಣಸಾಟ ಇಲ್ಲವೇ ಆತನ ನಂತರದ ಯಾವುದೇ ಒಂದು ಹೋರಾಟಕ್ಕಿಂತಲೂ ತನ್ನ ಹೃದಯಲ್ಲಿ ಆಳವಾಗಿ ಬೇರುಬಿಟ್ಟಿದ್ದ ಹೆಮ್ಮೆ ಮತ್ತು ಸ್ವಾರ್ಥವನ್ನು ಜಯಿಸುವಲ್ಲಿ ಒಬ್ಬ ಮಹಾ ವೀರನಾಗಿ ಪ್ರಮಾಣಿತನಾಗಿದ್ದನು.

ದೈವಕ್ಷಮಾದಾನಕ್ಕೆ, ಈ ಸಂಗತಿಯಲ್ಲಿ ಅಲ್ಲದೆ ಇತರರ ವಿಷಯದಲ್ಲಿನ ಸಾವಿರಾರು ಸಂಗತಿಗಳಲ್ಲಿ, ಪಾಪವು ನಂತರದಲ್ಲಿ ತೋರ್ಪಡಿಸಿದ ದಂಡನೆಯ ಪರಿಣಾಮಗಳೆಲ್ಲವನ್ನು ಮನ್ನಿಸು– ವಂಥದರ ಅವಶ್ಯಕತೆಯು ಇಲ್ಲಿ ಅನ್ವಯಿಸುವದಿಲ್ಲ. ದೇವರ ನಿಯಮದ ಅನುಸಾರ ದಾವೀದನು ಮಾಡಿದ ಪಾಪಕ್ಕೆ ಪೂರ್ಣವಾದ ಶಿಕ್ಷೆಯು ಮರಣವಾಗಿತ್ತು. ಅಲ್ಲದೆ ಈ ಪಾಪದ ತೀವ್ರತೆಯ ದೃಷ್ಟಿಯಿಂದ ನಿರ್ಣಯಿಸಿದಾಗ ಈ ತೀರ್ಪು ಎರಡು ಅಪಾದನೆಗಳಿಗೆ ಅಗತ್ಯವಾಗಿತ್ತು (ಯಾಜಕ 20:10, 25:17 ಇವುಗಳನ್ನು ನೋಡಿ); ಆದರೆ ಆತನ ಪಶ್ಚಾತಾಪದ ದೃಷ್ಟಿಯಿಂದ ದೇವರು ಮರಣ ಶಿಕ್ಷೆಯನ್ನು ತಗ್ಗಿಸಿ ಅಪರಾಧಿಯು ಪೂರ್ಣವಾಗಿ ತಿದ್ದಿಕೊಳ್ಳುವಂತಾಗಲು ಹಾಗು ದೇಶಕ್ಕೆ ಎಚ್ಚರಿಕೆ ಹಾಗು ಶಿಕ್ಷಣಗಳಿಗೆ ಅವಶ್ಯವಿರುವಂಥ ಶಿಕ್ಷೆಯನ್ನು ಮಾತ್ರ ವಿಧಿಸಿದ್ದು, (2 ಸಮುವೇಲ 12:13) ಹೀಗೆ ತಾನು [ದೇವರು] ವ್ಯಕ್ತಿಗಳನ್ನು ಅವರು ಅರಸನೇ ಆಗಿರಲಿ ಅಥವಾ ಜನರೇ ಆಗಿರಲಿ ದೇವರ ನಿಯಮದ ಎದುರಿನಲ್ಲಿ ಎಲ್ಲರೂ ಒಂದು ಸಾಮ್ಯಾನ್ಯ ಮಟ್ಟದಲ್ಲಿರುವ– ರೆಂಬುದನ್ನು ತೋರಿಸಿಕೊಟ್ಟಿದ್ದನು. ವಿಧಿಸಲಾದ ಶಿಕ್ಷೆಯು ಬಹು ಮಟ್ಟಿಗೆ ಹಿಂದಿನ ಪಾಪಗಳ ಶೀಘ್ರವಾದ ಬೆಳವಣಿಗೆಯ ಸಲುವಾಗಿತ್ತೆಂಬುದನ್ನು ಗಮನಿಸಬೇಕು. ಬಹು ತೀಕ್ಷ್ಣವಾದ ತೊಂದರೆಗಳು ಬಹು ಪತ್ನಿಯರಿಂದ ಕೂಡಿದ ತನ್ನ ಮನೆತನದಿಂದ ಬಂದಿದ್ದು, ಅತಿಯಾದ ತೊಂದರೆಗಳನ್ನು ಕೊಟ್ಟಂಥವರು ಅನ್ಯಜಾತಿಯ ಹೆಂಡತಿಯರ ಮಕ್ಕಳಾಗಿದ್ದರು; ಅಲ್ಲದೆ ಬತ್ಷೇಬಳ ಮಗು ತೀರಿಕೊಂಡಿತ್ತು.

ಕೀರ್ತನೆ 51ರಲ್ಲಿ ದಾವೀದನು ತನ್ನ ಪಾಪದ ಬಗ್ಗೆ ಹಾಗು ಪಾಪಕ್ಷಮೆಯಲ್ಲಿ ತೋರಿಬಂದ ದೇವರ ಕರುಣೆಯ ಬಗ್ಗೆ ಬಹಿರಂಗವಾಗಿ ಅರಿಕೆಮಾಡಿಕೊಂಡಿರುವನು. ಕೀರ್ತನೆ 32ರಲ್ಲಿ ಆತನು ಅಪರಾಧಗಳು ಕ್ಷಮಿಸಲ್ಪಟ್ಟಂಥ, ಪಾಪಗಳು ಮುಚ್ಚಲ್ಪಟ್ಟಂಥ, ದ್ರೋಹಗಳನ್ನು ದೇವರು ಎಣಿಸದಂಥ, ಹೃದಯದಲ್ಲಿ ವಂಚನೆಯಿಲ್ಲದಂಥ ಅಂದರೆ ಮೋಸಕಪಟವಿಲ್ಲ ದಂಥ ಆದರೆ ಆತನ ಕೃತ್ಯಗಳೆಲ್ಲವುಗಳು ಮುಚ್ಚುಮರೆಯಿಲ್ಲ – ದವುಗಳು ಹಾಗು ಪಾರದರ್ಶಕವೂ ಆಗಿದ್ದು ನೀತಿಯಿಂದ ಕೂಡಿರುವದಾಗಿ ತೋರ್ಪಡುವದೋ ಅಂಥ ಮನುಷ್ಯನ ಧನ್ಯತೆಯ ಬಗ್ಗೆ ಕೃತಜ್ಞತಾಪೂರ್ವಕವಾಗಿ ದಾಖಲಿಸಿರುವನು. ಇಲ್ಲಿ ಆತನು ಹೀಗೆ ಸಾರಿ ಹೇಳಿರುವನು–"ನನ್ನ ಪಾಪವನ್ನು ಒಪ್ಪಿಕೊಳ್ಳುವೆನು," ಮತ್ತು ದೇವರ ಕ್ಷಮಾಪಣೆಯ ಬಗ್ಗೆ ಸಾಕ್ಷಿ ನುಡಿದಿರುವನು (ವಚನ 5); ಮತ್ತು ಈ ದೇವಕ್ಷಮಾದಾನಕ್ಕಾಗಿ ಆತನು ಪಾಪಿಗಳೆಲ್ಲರನ್ನು, ಅವರ ಹೃದಯಗಳು ಗಡುಸಾಗಿ ದುಷ್ಟತನದ ಮಾರ್ಗವು ತಲೆದೂರುವದನ್ನು ತಾವು ಕೊಂಡುಕೊಳ್ಳುವದಕ್ಕೆ ಮೊದಲು, (ವಚನ 6) ಅವರು ದೇವರನ್ನು ಪ್ರಾರ್ಥಿಸಲು ಪ್ರಬೋಧಿಸಿರುವನು.

ಆನಂತರ ತನ್ನ ಪಾಪದ ಪರಿಣಾಮವು ಉಂಟುಮಾಡಿದ ತೊಂದರೆಯ ಮಧ್ಯದಲ್ಲಿಯೂ ದಾವೀದನು ಅದನ್ನು ದೀನನಾಗಿ ತಾಳ್ಮೆಯಿಂದ ಸಹಿಸಿಕೊಂಡವನಾಗಿ ನಂಬಿಕೆಯ ಮೂಲಕವಾಗಿ ದೇವರಲ್ಲಿ ಸಂತೋಷಿಸುವದನ್ನು ಕಲಿತುಕೊಂಡಿದ್ದು ಅದನ್ನು ಹೀಗೆ ಹೇಳಿರುವನು–"ನೀನೇ ನನಗೆ ಮರೆಯು; ನಿರಪಾಯವಾಗಿ ನನ್ನನ್ನು ಕಾಯುವಿ; ವಿಮೋಚನಾಧ್ವನಿಯಿಂದ ನನ್ನನ್ನು ಆವರಿಸಿಕೊಳ್ಳುವಿ;" (ವಚನ 7) ಯಾಕಂದರೆ ದೇವರ ಕ್ಷಮಾಪೂರ್ಣವಾದ ಪ್ರೀತಿಯೆಂಬ ಮುದ್ರೆಯು ಹಾಕಲ್ಪಟ್ಟವನಾಗಿ ಆತನಲ್ಲಿ ಭರವಸವಿಡುವಂಥ ಭಕ್ತನನ್ನು ಯಾವುದೇ ಸಂಕಷ್ಟವು ಅವನನ್ನು ಆವರಿಸಿಕೊಳ್ಳುವ ಹಾಗೆ ಬಿಡುವದಿಲ್ಲ.

ತನ್ನಲ್ಲಿ ಭರವಸಪೂರ್ಣವಾಗಿ ವಿಧೇಯರಾದ ಮಕ್ಕಳಿಗೆ ದೇವರು ಹೀಗೆ ಅವರ ದೀನತೆಯುಳ್ಳ ವಿಶ್ವಾಸ ಭರವಸೆಗಳಿಗೆ ಪ್ರತಿಯಾದ ಉತ್ತರವಾಗಿ ವ್ಯಕ್ತಪಡಿಸಿದಂಥ ತನ್ನ [ದೇವರ] ಮನೋಭಾವಕ್ಕೆ ದಾವೀದನು ಆಗ ಹೀಗೆ ಧ್ವನಿಗೂಡಿಸಿರುವನು: "ನಿನ್ನನ್ನು ಉಪದೇಶಿಸಿ ನಡೆಯಬೇಕಾದ ಮಾರ್ಗವನ್ನು ತಿಳಿಸುವೆನು; ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು [ಅನ್ನುತ್ತಾನಲ್ಲಾ]. [ಆದುದರಿಂದ] ನೀವು ವಿವೇಕಹೀನರಾಗಿ ಕುದುರೆಯಂತಾಗಲಿ ಹೇಸರಕತ್ತೆಯಂತಾಗಲೀ ಇರಬೇಡಿರಿ; ಅವುಗಳು ಬಾರುಕಡಿವಾಣವಿಲ್ಲದೆ ಸ್ವಾಧೀನವಾಗುವದಿಲ್ಲವಷ್ಟೆ." (ವಚನ 8–9) [ರಿವೈಸ್ಡ್ ವರ್ಶನ್: ನಿಯಂತ್ರಣಕ್ಕೆ ಅಧೀನಪಡಿಸಿ ಕೊಳ್ಳುವದಿಲ್ಲವಷ್ಟೆ.]

"ದುಷ್ಟರಿಗೆ [ಅವರು ದುಷ್ಟರಾಗಿ ಇರುವವರೆಗೂ] ಅನೇಕ ಕಷ್ಟನಷ್ಟಗಳು ಉಂಟಾಗುವವು;" [ದಾವೀದನು ದುಃಖಕರವಾದ ಅನುಭವದಿಂದ ಇದನ್ನು ಪ್ರಮಾಣೀಕರಿಸಿದ್ದನು – ವಚನ 3,4] ಆದರೆ ಆತನಲ್ಲಿ ಭರವಸವಿಟ್ಟವರನ್ನು [ಇದು ದ್ರೋಹಾಪರಾಧ– ಗಳಿಂದ ದೂರವಿರುವಂಥದ್ದರ ಅಗತ್ಯತೆಯನ್ನು ಉಂಟು ಮಾಡುವದು] ಆತನ ಕೃಪೆಯು ಆವರಿಕೊಳ್ಳುವದು." [ವಚನ– 10] ಹೀಗಾಗಿ ಪಾಪಸಾಂತರಗೊಂಡವನಾಗಿ ರಕ್ಷಣೆಯಿಂದುಂಟಾದ ಆನಂದವನ್ನು ಹಿಂದಿರುಗಿ ಪಡೆದಂಥ ಈ ಪುರುಷನ ಭರವಸಪೂರ್ಣವಾದ ನಂಬಿಕೆಯು ಹೀಗೆ ಹೇಳಿರುವದು–"ನೀತಿವಂತರೇ ಯೆಹೋವನಲ್ಲಿ ಸಂತೋಷಿಸುತ್ತಾ ಉಲ್ಲಾಸವಾಗಿರ್ರಿ; ಯಥಾರ್ಥಚಿತ್ತರೇ, ಆತನ ವಿಷಯದಲ್ಲಿ ಉತ್ಸಾಹ ಧ್ವನಿಮಾಡಿರಿ." [ವಚನ–11]

ದೇವರು ಪ್ರಾಯಶ್ಚಿತ್ತಮಾಡಿಕೊಂಡಂಥ ನಂಬಿಕೆಯುಳ್ಳ ತನ್ನ ಸೇವಕನಿಗೆ ರಕ್ಷಣಾನಂದವನ್ನು ಹೀಗೆ ಹಿಂದಿರುಗಿಸಿಕೊಟ್ಟು ಅತನ ಮುರಿಯಲ್ಪಟ್ಟ ಎಲುಬುಗಳು ಹರ್ಷಿಸುವಂತೆ ಮಾಡಿದ್ದಲ್ಲಿ (ಕೀರ್ತನೆ 51:8); ಆತನಲ್ಲಿ ದೇವರು ಶುದ್ಧ ಹೃದಯವನ್ನು ನಿರ್ಮಿಸಿ ಆತನಲ್ಲಿ ಸೂಕ್ತ ಮನೋಭಾವವನ್ನು ಪುನಶ್ಚೇತನ– ಗೊಳಿಸಿದಲ್ಲಿ (ಕೀರ್ತನೆ 51:8,10) ತನ್ನ ಪ್ರೀಯನ ಮೇಲೆ ಯಾರು

ತಾನೇ ಯಾವುದೇ ದೋಷಾರೋಪಣೆ ಮಾಡಾರು? ದೇವರು ಉಚಿತವಾಗಿ ಕ್ಷಮಿಸಿರುವಂತೆಯೇ ಆತನ ಜನರೂ ಸಹ ಇರಬೇಕು; ಹೀಗಾಗಿ ನಾವು ದಾವೀದನನ್ನು ಪೂರ್ವದಲ್ಲಿ ನಂಬಿಕೆಯ ಮೂಲಕ ಹೆಸರುಗೊಂಡಂಥವರಲ್ಲಿ ಒಬ್ಬನನ್ನಾಗಿ ಗುರುತಿಸಲು–ಅಂದರೆ ನಮ್ಮ ಪ್ರೀತಿಗೆ, ನಮ್ಮ ಭರವಸಕ್ಕೆ, ಹಾಗು ಆತನ ಗುಣಸ್ವಭಾವವನ್ನು ಅಲಂಕರಿಸಿದ್ದ ಹಲವಾರು ಕೃಪಾವರಗಳನ್ನು ಅನುಸರಿಸುವಂತಾಗಲು ಒಬ್ಬ ಘನವಂತಿಕೆಯ ನಿದರ್ಶನಕ್ಕೆ ಯೋಗ್ಯನನ್ನಾಗಿ ಮಾಡಿಕೊಳ್ಳಲು ನಾವು ಹರ್ಷಿಸುವೆವು. ಮತ್ತು ಈಗ ತಾನೇ ಗಮನಕ್ಕೆ ತರಲಾದ ತನ್ನ ಮೇಲೆ ತಾನು ಸಾಧಿಸಿದ ವಿಜಯಕ್ಕಿಂತಲೂ ಹೆಚ್ಚಿನ ನಿದರ್ಶನವನ್ನು ಅರಸನು ನಮಗೆ ಬೇರೆ ಯಾವುದರಲ್ಲಿಯೂ ನೀಡುವುದಿಲ್ಲ. ವಿಶೇಷವಾಗಿ ಆತನು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟದ್ದು, ದೇಶದ ಎದುರಿನಲ್ಲಿ ಆತನ ಪ್ರಾಮುಖ್ಯತೆ ಇವುಗಳನ್ನು ಪರಿಗಣಿಸುವಾಗ, ಗಾಢವಾಗಿ ಅಪಕೀರ್ತಿ–ಉಂಟುಮಾಡಿದ ಅಪರಾಧದಲ್ಲಿ ತಾನು ದೋಷಿಯಾಗಿ–ದ್ದಂಥದ್ದು, ಅದನ್ನು ಒಪ್ಪಿಕೊಂಡಂಥದ್ದು ಇವುಗಳು ಆತನಿಗೆ ಬಹು ಅಪಮಾನವನ್ನು ಉಂಟುಮಾಡಿದ್ದವು; ಅಲ್ಲದೆ ಇದರ ಪರಿಣಾಮವಾಗಿ ನಂತರದಲ್ಲಿ ತಾನು ದೇಶದವರಿಂದ ಅಪೇಕ್ಷಿಸಲಾಗಿದ್ದ ಹಿರಿಮೆ ಆತ್ಮವಿಶ್ವಾಸ ಮಾನಮರ್ಯಾದೆಯ ನಷ್ಟಗಳು, ಅಲ್ಲದೆ ನಿಸ್ಸಂದೇಹವಾಗಿ ಹಲವಾರು ವರುಷಗಳಿಂದ ತಾನು ಗೌರವಪೂರ್ಣವಾಗಿ ಹೊಂದಿದ್ದ ತನ್ನ ಯೋಗ್ಯತೆ, ಮತ್ತು ತನ್ನ ಸ್ವಸ್ಥಮನಸ್ಸಿಗೆ ತನ್ನ ಸೂಕ್ಷ್ಮ ಗ್ರಹಣೆಯ ಮೂಲಕವಾಗಿ ಮತ್ತೆ ತರಲಾದ ಅಪಕೀರ್ತಿ–ಈ ಎಲ್ಲಾ ಸಂಗತಿಗಳನ್ನು ನಾವು ಪರಿಗಣನೆಗೆ ತೆಗೆದುಕೊಂಡಾಗ ದಾವೀದನು ತನ್ನನ್ನು ತಗ್ಗಿಸಿಕೊಂಡವನಾಗಿ ಪಶ್ಚಾತಾಪಪಟ್ಟು ತನ್ನ ಮೇಲೆ ತಾನು ಗಳಿಸಿದ ವಿಜಯವು ಇತಿಹಾಸದ ಪುಟಗಳಲ್ಲಿನ ಅತ್ಯುತ್ತಮ ಹಾಗು ಭವ್ಯವಾದ ಸಾಧನೆಗಳಲ್ಲಿ ಒಂದಾಗಿರುವದೆಂಬದು ನಮಗೆ ಕಂಡುಬರುವದು; ಅಲ್ಲದೆ ದಾವೀದನು ಅನುಸರಿಸಿದಂಥ ವಿಧಾನವು ದೇವರ ಸೂಕ್ತವಾದ ಮಾರ್ಗಗಳಿಂದ ಯಾವುದೇ ಹಂತದಲ್ಲಿ ದೂರಹೋಗಿರುವದನ್ನು ಗುರುತಿಸಿಕೊಂಡ ಪ್ರತಿಯೊಬ್ಬ ದೇವರ ಮಗನಿಗೂ ಶಿಫಾರಸ್ಸು ಮಾಡಬೇಕಿರು–ವಂಥವುಗಳಲ್ಲಿ ಒಂದಾಗಿರುವದು.

*****


"ಆ ಮನುಷ್ಯನು ನೀನೇ!"

ರೀಪ್ರಿಂಟ್ಸ್ ಪುಟ 5681

2 ಸಮುವೇಲ 11:1–12:7

"ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು – ಕೀರ್ತನೆ 51:10

ಲೋಕದಲ್ಲಿನ ಇತರ ಯಾವುದೇ ಗ್ರಂಥಕ್ಕಿಂತಲೂ ಸತ್ಯವೇದವು ವಿಭಿನ್ನವಾಗಿರುವದು. ಅದು ಎಲ್ಲಾ ಗ್ರಂಥಗಳಿಗಿಂತಲೂ ಅತಿ ಪ್ರಾಮಾಣಿಕವಾದುದೂ, ಅತಿ ನಿಷ್ಪಕ್ಷಪಾತವುಳ್ಳದ್ದೂ ಆಗಿರುವದು. ದೇವರಲ್ಲಿದ್ದಂಥ ಮನಸ್ಸನ್ನೇ ಹೊಂದಿರುವನೆಂದು ಬಹುವಾಗಿ ಒಪ್ಪಿಕೊಳ್ಳಲ್ಪಟ್ಟಂಥವನು ಪಾಪ ಮಾಡಿದಾಗ ಬಹು ತೀಕ್ಷ್ಣವಾಗಿ ಖಂಡಿಸಲ್ಪಟ್ಟು ದೊಡ್ಡ ಪ್ರಮಾಣದಲ್ಲಿ [ಗಂಭೀರವಾಗಿ] ಶಿಕ್ಷಿಸಲ್ಪಟ್ಟಿದ್ದನು. ಹೀಗಾಗಿ ಈ ಶಾಸ್ತ್ರವಚನದ ಹೇಳಿಕೆಯಲ್ಲಿ ಒಂದು ಪಾಠವಿರುವದು. ಅದೇನಂದರೆ: "ನೀನು ಪಾಪವನ್ನು ಕ್ಷಮಿಸುವವನಾದ್ದರಿಂದ ಮನುಷ್ಯರ ಭಕ್ತಿಗೆ ನೀನೇ ಪಾತ್ರನು." (ಕೀರ್ತನೆ 130:4) ದೇವರು ನಿಷ್ಕರುಣಿಯಲ್ಲವೆಂಬ ಅಂಶವು, ಆತನು ಬಲಹೀನಾವಸ್ಥೆ ಹಾಗು ಅಪರಿಪೂರ್ಣಾವಸ್ಥೆಗಳನ್ನು ನಿರ್ಲಕ್ಷಿಸುವದಿಲ್ಲವೆಂಬ ಅಂಶವು ಅಂದರೆ ಆತನು ನಮ್ಮ ಶಾರೀರಿಕ ಬಲಹೀನತೆಗಳನ್ನು ಖಂಡಿಸಿ ನಮ್ಮನ್ನು ಶಿಕ್ಷಿಸಿದಾಗ್ಯೂ ಸಹ ನಮ್ಮ ಹೃದಯದ ಉದ್ದೇಶಗಳನ್ನು ಮಾನ್ಯಮಾಡುವನೆಂಬ ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವನು ಎನ್ನುವಂಥವುಗಳು ಸೂಚಿಸುವದೇನಂದರೆ ಕೇವಲ ದೇವರು ಕರುಣೆಯಿಲ್ಲದವನೆಂದು ನಾವು ಆತನ ಬಗ್ಗೆ ಆಲೋಚಿಸುವದಕ್ಕಿಂತಲೂ ಇವು ನಮ್ಮನ್ನು ದೇವರ ಮೇಲೆ ಅಧಿಕ ಭಯಭಕ್ತಿಯುಳ್ಳವರಾಗುವಂತೆ ಪ್ರೇರೇಪಿಸುತ್ತದೆ.



ಪ್ರವಾದಿಯಾದ ನಾತಾನನು ದಾವೀದನನ್ನು [ಮುಖಾಮುಖಿಯಾಗಿ] ಎದುರಾದದ್ದು

ಹಲವಾರು ಘನವಂತಿಕೆಯ ಗುಣವಿಶೇಷತೆಗಳನ್ನು ತೋರ್ಪಡಿಸಿದಂಥವನು ಈ ಪಾಠದಲ್ಲಿ ಖಂಡಿಸಲಾದಂಥ ಅಂದರೆ ವ್ಯಭಿಚಾರ ಹಾಗು ಕೊಲೆ ಎಂಬ ಬಲಹೀನತೆಗಳನ್ನು ಹೊಂದಿರಬೇಕೆನ್ನುವದಕ್ಕೆ ನಾವು ವಿಸ್ಮಯಪಡುವದು ನಮಗೆ ಆಶ್ಚರ್ಯವೆನಿಸದು. ಯೌವನಸ್ಥನಾದ ದಾವೀದನನ್ನು ಹಾಗು, ದೇವರ ಮೇಲಿನ ಆತನ ಭಯಭಕ್ತಿ, ಆತನ ವಿಶ್ವಾಸ, ಆತನ ರಾಜನಿಷ್ಠೆ, ಆತನಿಗಾದ ಪರಿಶೋಧನೆ, ಆತನು ಪಟ್ಟ ಕಷ್ಟಗಳು ಇವುಗಳನ್ನು ನಾವು ಆಲೋಚಿಸುವಾಗ, ಆತನು ಬಹು ಅಲ್ಪ ಸಮಯದಲ್ಲೇ ಮಾರ್ಪಡಲು ಆತನಿಗೆ ಹೇಗೆ ಸಾಧ್ಯವೆಂಬುದಕ್ಕೆ ನಮಗೆ ಆಶ್ಚರ್ಯವಾಗುವದು. ಇದರ ಗುಟ್ಟನ್ನು ಕಂಡು ಹಿಡಿಯಲು ಇದು ಬಹು ದೂರವಿರುವಂಥದ್ದಲ್ಲ. ಧನ ವಿಲಾಸಗಳು ರಾಜನ ಆಸ್ಥಾನದ ಪದ್ಧತಿ ಹಾಗು ಸ್ವಾತಂತ್ರ್ಯಗಳಿಂದ ಅವರಿಸಲ್ಪಟ್ಟಿರುವ ಜೀವನಕ್ಕಿಂತಲೂ ಬಡತನದಲ್ಲಿ ಸಂಪೂರ್ಣವಾದ ಒಂದು ಪ್ರತಿಷ್ಠಿತ ಜೀವನ ನಡೆಸುವದು ಬಹು ಸುಲಭ. ಅರಸನು ದೇವಾನುಗ್ರಹ ಪ್ರಸನ್ನತೆಗಳನ್ನು ಸೂಚಿಸುವಂಥ ಮಂಜೂಷವು ತನ್ನ ಪಟ್ಟಣದಲ್ಲಿರುವದನ್ನು ಆಗ ತತ್ಕಾಲಕ್ಕೆ ಮರೆತಿದ್ದನು. ದೇವರ ಕಣ್ಣುಗಳು ಎಲ್ಲಾ ಕಡೆಯಲ್ಲಿಯೂ ಪ್ರಸರಿಸುತ್ತಾ ಒಳ್ಳೆಯದು ಮತ್ತು ಕೆಟ್ಟದ್ದನ್ನು ದೃಷ್ಟಿಸುತ್ತಿರುವದೆಂಬುದನ್ನು ಆತನು ನಿಜವಾಗಿಯೂ ಗ್ರಹಿಸಿಕೊಂಡಿದ್ದನು: ಆದಾಗ್ಯೂ ದೇವದರ್ಶನ ಗುಡಾರವನ್ನು ನೋಡುವಾಗ – "ಎಲ್ಲವನ್ನು ನೋಡುವ ದೇವರು." ಎಂಬುವಂಥ ಆಲೋಚನೆಯನ್ನು ಆತನ ಮನಸ್ಸಿಗೆ ಹೊಸದಾಗಿ ತಂದುಕೊಟ್ಟಿರಬೇಕು.

ಹೇಗೂ ಈ ಅರಸನಾದ ದಾವೀದನು ಪಾಪಪೂರ್ಣವಾದ ಒಂದು ಮನೋಸ್ಥಿತಿ ಹಾಗು ಹೃದಯವನ್ನು ಇದ್ದಕ್ಕಿದ್ದಂತೆ ಹೊಂದಿರಲಿಲ್ಲವೆನ್ನುವಂಥದ್ದನ್ನು ನಾವು ಖಚಿತಪಡಿಸಿಕೊಳ್ಳಬಹುದು. ಸಂಗತಿಗಳು ಹೀಗೆ ತಿಂಗಳುಗಳ ಕಾಲದ ವರೆಗೆ ನಡೆಯುತ್ತಾ ನಿಧಾನವಾಗಿ ಪೂರ್ಣಹಂತಕ್ಕೆ ತಲುಪಿರ ಬೇಕೆನ್ನುವದನ್ನು ವಿವರಣೆಯು ತೋರಿಸಿಕೊಡುವದು. ಇಲ್ಲವೇ ತನ್ನ ನಡತೆಯಂತೆಯೇ ತನ್ನ ಹೃದಯವು ತಪ್ಪಿಹೊಗಿತ್ತೆಂಬದನ್ನು ಭಾವಿಸುವಂಥದ್ದು ಅರಸನ ವಿಷಯದಲ್ಲಿ ಸೂಕ್ತವೆನಿಸುವದಿಲ್ಲ. ವಾಸ್ತವದಲ್ಲಿ ನಾವು ಭಾವಿಸಿಕೊಳ್ಳ ಬೇಕಿರುವದೇನಂದರೆ– ಅನಂತರದಲ್ಲಿ ತೋರಲಾದ ಸಂಗತಿಗಳಿಂದ ಆತನ ಹೃದಯವು ಆಗಲೂ ದೇವರಿಗೆ ಹಾಗು ಆತನ ನೀತಿ ತತ್ವಗಳಿಗೆ ನಿಷ್ಠೆಯುಳ್ಳದ್ದಾಗಿತ್ತೆಂದೂ, ಆದರೆ ಯಾವುದೋ ರೀತಿಯಲ್ಲಿ ಆತನ ಹೃದಯವು ನಿದ್ರೆಗೆ ಜಾರಿದ್ದು, ಆತನ ಶರೀರಭಾವವು ಬಹುವಾಗಿ ಜೀವಂತವಾಗಿತ್ತೆಂಬದು. ಆತನು ಪಾಪದ ವಿಷಯದಲ್ಲಿ ಜಾಗೃತನಾಗಿದ್ದು, ನೀತಿಯ ಬಗ್ಗೆ ನಿದ್ರೆಗೆ ಹೋಗಿದ್ದನು. ಆತನು ಬೇರೆ ಇತರ ಅರಸರ ನಿರುಪಯೋಗಕರ ಉದಾಹರಣೆ ಹಾಗು ಅವರು ಬಳಸುತಿದ್ದ ಸ್ವಾತಂತ್ರ್ಯಗಳನ್ನು ತನ್ನ ಎದುರಿನಲ್ಲಿ ಇಟ್ಟುಕೊಂಡಿದ್ದನು. ದೇವರೊಡನೆಯ ಆತನ ಸಂಬಂಧವು ಆತನನ್ನು ಬಹು ಸೂಕ್ಷ್ಮ ಬುದ್ಧಿಯುಳ್ಳವನನ್ನಾಗಿ ಮಾಡಿತ್ತು; ಅಲ್ಲದೆ ಆಗ ಶೋಧನೆಗೆ ಒಳಗಾಗಿದ್ದು ಮನಸ್ಸಿನ ಈ ಸೂಕ್ಷ್ಮತೆಯು ಕೇಡಿನ ಮಾರ್ಗದಲ್ಲಿ ಬಹು ಹೆಚ್ಚು ಪರಿಣಾಮಕಾರಿಯಾಗಿತ್ತು.

ಧೀರನಾದ ಒಬ್ಬ ದೇವರ ಸೇವಕ

ದಾವೀದನು ಮೊದಲು ತನ್ನ ನೆರೆಯವನ ಹೆಂಡತಿಯನ್ನು ಆಶಿಸಿದ್ದನು. ಆತನು ತನ್ನ ಮನಸ್ಸಿನ ಈ ಪಾಪದ ಸ್ಥಿತಿಯನ್ನು ಖಂಡಿಸಿರಲಿಲ್ಲ, ಆದರೆ ಅದನ್ನು ತನ್ನ ನೆರೆಯವನ ಹೆಂಡತಿಯನ್ನು ಕದ್ದುಕೊಳ್ಳುವ ವರೆಗೂ ಮುಂದುವರಿಯಲು ಬಿಟ್ಟಿದ್ದನು. ಆಕೆಯ ಗಂಡನು ಒಬ್ಬ ನಂಬಿಗಸ್ತನಾದ ಸೈನಿಕನಾಗಿ ಯುದ್ಧದಲ್ಲಿದ್ದನು, ಅರಸನ ಅವಮಾನವನ್ನು ಮರೆಮಾಡುವದಕ್ಕಾಗಿ ಆತನ ಮರಣಕ್ಕಾಗಿ ತುರ್ತುಸ್ಥಿತಿಯು ಕರೆಕೊಟ್ಟಂತೆ ತೊರಿಬಂದಿತ್ತು. ದಾವೀದನು ಒಂದು ಪಟ್ಟಣವನ್ನು ಆಕ್ರಮಣಮಾಡುವಾಗ ತನ್ನ ನಂಬಿಗಸ್ತನಾದ ಸೈನಿಕನನ್ನು ಅಪಾಯಕರವಾದ ಮುನ್ನೆಲೆಯ ಸ್ಥಳದಲ್ಲಿ ಇರಿಸುವಂತೆ ಮಾಡಿ ನಂತರದಲ್ಲಿ ಹಿಂದೆ ಸರಿದು ಹೀಗೆ ಮುಂದಿನ ಅತಿ ಅಪಾಯಕರ ಸ್ಥಳದಲ್ಲಿರುವಂಥವನು ಕೊಲ್ಲಲ್ಪಡುಂತಾಗಲು ತನ್ನ ಸೇನಾಪತಿಗೆ ಆದೇಶ ನೀಡುವಾಗ ಆತನ ಮನಃಸಾಕ್ಷಿಯು ನಿದ್ರಾವಸ್ಥೆಯಲ್ಲಿದ್ದುದು ಖಚಿತವಾಗಿತ್ತು.

ಆ ಯೋಜನೆಯು ಕಾರ್ಯಗತವಾಗಿತ್ತು. ಅದು ತಪ್ಪಿತಸ್ಥನಲ್ಲದ ಗಂಡನ ಜೀವ ಮಾತ್ರವಲ್ಲದೆ ಇತರ ಅನೇಕರ ಜೀವಗಳಿಗೆ ನಷ್ಟವನ್ನುಂಟುಮಾಡಿತ್ತು. ದಾವೀದನ ಮೂಲ ತತ್ವಗಳ ಕಡೆಗಿನ ನಿಷ್ಠೆಯು ಹೇಗೆ ಇಂಥಾ ಒಂದು ಯೋಜನೆಯನ್ನು ಏರ್ಪಡಿಸುವಂತಾಯಿತೆಂದು ಅಥವಾ ಈ ಸನ್ನಿವೇಶಗಳಲ್ಲಿ ಸಮಾಧಾನ ಹೊಂದಲು ಆತನಿಗೆ ಹೇಗೆ ಸಾಧ್ಯವಿತ್ತೆಂಬುದನ್ನು ಊಹಿಸಿಕೊಳ್ಳುವದು ನಮಗೆ ದುರ್ಲಭವಾಗುತ್ತದೆ. ಈ ಒಂಭತ್ತು ಅಥವಾ ಅದಕ್ಕಿಂತಲೂ ಹೆಚ್ಚು ತಿಂಗಳಿನ ಸಮಯದಲ್ಲಿ ಆತನ ಯಾವ ಸೊಗಸಾದ ಕೀರ್ತನೆಗಳೂ ಬರೆಯಲ್ಪಡಲಿಲ್ಲವೆಂಬದು ನಿಸ್ಸಂದೇಹ. ಆದರೆ ಊರಿಯನು ಸತ್ತುಹೋಗಿದ್ದನು; ಅಲ್ಲದೆ ಕಸಿದುಕೊಳ್ಳಲಾದ ಆತನ ಹೆಂಡತಿಯು ದಾವೀದನ ಹೆಂಡತಿಯಾಗಿ ಮಾಡಲ್ಪಟ್ಟಿದ್ದಳು, ಮತ್ತು ಸ್ವಲ್ಪ ಸಮಯದಲ್ಲೇ ಅವರಿಗೆ ಮಗುವು ಜನಿಸಿತ್ತು.

ನಂತರದಲ್ಲಿ ಪ್ರವಾದಿಯಾದ ನಾತಾನನು ಅರಸನ ಮುಂದೆ ಕಾಣಿಸಿಕೊಂಡಿದ್ದನು. ಆತನು ಜಾಣತನದಿಂದ ತನ್ನ ಗದರಿಕೆಯನ್ನು ಒಂದು ಸಾಮ್ಯದ ರೂಪದಲ್ಲಿ ಪ್ರಸ್ತುತಪಡಿಸುವನಾಗಿ–ಒಬ್ಬ ಬಡ ಮನುಷ್ಯನಿಗೆ ಕೇವಲ ಒಂದೇ ಒಂದು ಹೆಣ್ಣು ಕುರಿಮರಿಯಿದ್ದು ಅದನ್ನು ಹೇಗೆ ಶ್ರೀಮಂತನಾದ ಆತನ ನೆರೆಯವನು ಮೋಸದಿಂದ ತೆಗೆದುಕೊಂಡನೆಂಬುದನ್ನು ತಿಳಿಸಿದ್ದನು. ದಾವೀದನ ನ್ಯಾಯ ಪ್ರಜ್ಞೆಯು ಕೆರಳಿ–ಆ ಕೃತ್ಯವನ್ನು ಮಾಡಿದ ಮನುಷ್ಯನು ನಾಲ್ಕರಷ್ಟು ಹಿಂದಿರುಗಿಸಿಕೊಡಬೇಕೆಂದೂ ಮತ್ತು ಆ ಮನುಷ್ಯನಿಗೆ ಮರಣವನ್ನು ಸಹ ವಿಧಿಸಬೇಕೆಂದು ತಿಳಿಸಿದನು. ನಂತರ ದೇವರ ಪ್ರವಾದಿಯಾದ ನಾತಾನನು ಅರಸನನ್ನು ಬೊಟ್ಟುಮಾಡಿ–"ಆ ಮನುಷ್ಯನು ನೀನೇ" ಎಂದು ಪ್ರಕಟಮಾಡಿ ಪಾಠವನ್ನು ಪ್ರಾಮಾಣಿಕತೆಯಿಂದ ಸ್ಪಷ್ಟವಾಗಿ ಮನದಟ್ಟುಮಾಡಿಕೊಟ್ಟಿದ್ದನು. ಇದಕ್ಕೆ ಧೈರ್ಯವು ಬೇಕಿದ್ದು; ಯಾರಿಗೇ ಆಗಲಿ ದೇವರಿಂದ ಒಂದು ಸಂದೇಶವನ್ನು ಹೊಂದಿದ್ದಲ್ಲಿ ಅದನ್ನು ಸಾಧ್ಯವಾದಷ್ಟು ಜಾಣತನದಿಂದ ಆದರೂ ವಾಸ್ತವದಲ್ಲಿ ನಂಬಿಗಸ್ತಿಕೆಯಿಂದ ತಲುಪಿಸಲು ಧೈರ್ಯದ ಅಗತ್ಯತೆಯಿರುವದು.

ತಕ್ಷಣವೇ ಅರಸನಾದ ದಾವೀದನ ಹೃದಯವು ಎಚ್ಚೆತ್ತುಕೊಂಡಿದ್ದು, ಆ ಕೂಡಲೇ ಆತನ ಮನಃಸಾಕ್ಷಿಯು ಚುರುಕುಗೊಂಡಿತ್ತು. ಆತನು ಸ್ವತಃ ತನ್ನ ನಡವಳಿಕೆಯ ಬಗ್ಗೆ, ಅಂದರೆ ಇತರ ರಾಜರ ದೃಷ್ಟಿಯಿಂದಲ್ಲ ಆದರೆ ನೀತಿ, ಸತ್ಯತೆ, ಕರುಣೆ, ಅನುಕಂಪ, ಸಂಬಂಧವಾದ ದೈವಿಕ ವಿಧಿಗಳ ದೃಷ್ಟಿಯಿಂದ ಕಂಡವನಾಗಿದ್ದನು. ತನ್ನನ್ನು ತಾನು ಒಬ್ಬ ಪಾಪಿಯಾಗಿ ಕಂಡುಕೊಂಡಿದ್ದನು. ನಿಜವಾಗಿಯೂ ಆಜ್ಞಾವಿಧಿಗಳ ಅನುಸಾರ ವ್ಯಭಿಚಾರ ಹಾಗು ಕೊಲೆಗಳಿಗೆ ಮರಣಶಿಕ್ಷೆ ವಿಧಿಸಬಹುದಾಗಿತ್ತು. ಅರಸನು ಕೂಡಲೇ ತನ್ನ ಪಾಪವನ್ನು ಒಪ್ಪಿಕೊಂಡವನಾಗಿ ಪ್ರಾರ್ಥನೆಮಾಡಿ ಉಪವಾಸವಿದ್ದು ದುಃಖಿಸಿದ್ದನು. ಈ ಮಧ್ಯೆ ಪ್ರವಾದಿಯು ದೈವಾದೇಶದ ಮೂಲಕವಾಗಿ ಇವೆಲ್ಲವುಗಳಿಗಾಗಿ ಅರಸನು ತನ್ನ ತಪ್ಪನ್ನು ಒಪ್ಪಿಕೊಂಡು ಪಶ್ಚಾತಾಪ ಪಟ್ಟದ್ದರಿಂದ ದೇವರು ಮರಣದಂಡನೆ ವಿಧಿಸುವದಿಲ್ಲವೆಂದೂ, ಇಲ್ಲವೇ ತನ್ನ ಪ್ರೀತಿಕೃಪೆಯನ್ನು ಆತನಿಂದ ತೆಗೆಯುವದಿಲ್ಲವೆಂದೂ, ಹೀಗಾದರೂ ತನ್ನ ಪಾಪದ ಮೂಲಕವಾಗಿ ಹುಟ್ಟಿದ ಮಗುವು ಬದುಕಬಾರದೆಂದೂ, ಅರಸನು ಕಾಲಾ ನಂತರದಲ್ಲಿ ಸ್ವತಃ ತನ್ನ ಅಪರಾಧಗಳಿಗೆ ತೀವ್ರವಾದ ಶಿಕ್ಷೆಯನ್ನು ಅನುಭವಿಸುವನೆಂದೂ ತಿಳಿಸಿದ್ದನು.

ಇಲ್ಲಿ ನಾವು ದೇವಜನರಾಗಿ ದೇವರೊಡನೆ ಒಡಂಬಡಿಕೆಯ ಸಂಬಂಧದಲ್ಲಿರುವವರ ಬಗ್ಗೆ ಇರುವ ದೈವಾಡಳಿತದ ಒಂದು ಮೂಲತತ್ವವನ್ನು ಗ್ರಹಿಸಿಕೊಳ್ಳುತ್ತೇವೆ. ಪಾಪಗಳ ವಿಷಯದಲ್ಲಿ ನ್ಯಾಯವಿಧಿ ಪಾಲನೆಯು ಅಗತ್ಯವಿರುವದು; ಆದಾಗ್ಯೂ ಪಶ್ಚಾತಾಪಗೊಂಡ ಜೀವಾತ್ಮಕ್ಕೆ ದೇವಾನುಗ್ರಹವು ದಯಪಾಲಿಸಲಾಗುವದು. ಅನೇಕ ಕ್ರೈಸ್ತರು ಈ ಸಂಬಂಧದಲ್ಲಿ ಅನುಭವವನ್ನು ಪಡೆದಂಥವರಾಗಿರುವರು. ದೇವರು ಅವರನ್ನು ಪಾಪಿಗಳಂತೆ ಕಾಣುವದನ್ನು ಮುಂದುವರೆಸುವದಿಲ್ಲ; ಆದರೆ ಅವರ ಹೃದಯದ ಸ್ಥಿತಿಯನ್ನು ಅಂಗೀಕರಿಸಿಕೊಂಡವನಾಗಿ ಅವರನ್ನು ಈ ಮಾತಿನ ಅರ್ಥದಲ್ಲಿ ಕ್ಷಮಿಸುವನು; ಆದರೂ ತನ್ನ ಏರ್ಪಾಟಿನ ಸತ್ಯತೆಯ ವಿಷಯದಲ್ಲಿ–"ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು" [ಗಲಾತ್ಯ 6:7] ಈ ದೈವೀಕ ಏರ್ಪಾಟಿನಲ್ಲಿ ಪಾಪವನ್ನು ಪ್ರೋತ್ಸಾಹಿಸುವಂಥದ್ದು ಯಾವದೂ ಇರುವದಿಲ್ಲ, ಆದರೆ, ಪ್ರತಿಯಾಗಿ, ಎಲ್ಲವೂ ನೀತಿಯನ್ನು ಪ್ರೋತ್ಸಾಹಿಸುವ ಸಲುವಾಗಿರುವದು; ಅಲ್ಲದೆ ಪಾಪದೊಳಗೆ ಬಿದ್ದಲ್ಲಿ, ಬಹುಶಃ ಪಾಪಿಯು ಸಮಾಧಿಗೆ ಸೇರುವವರೆಗೂ ತಾನು ಕಠಿಣವಾದ ಶಿಕ್ಷೆಯನ್ನು ಹೊಂದುವ ಅನಿವಾರ್ಯತೆಯಿದ್ದಾಗ್ಯೂ, ತಾನು ದೇವಕ್ಷಮೆಯನ್ನು ಅಂಗೀಕರಿಸಿದವನಾಗಿ ಸುಧಾರಿಸುವಂತಾಗಲು ಆತನಿಗೆ ಎಲ್ಲಾ ಪ್ರೋತ್ಸಾಹಗಳನ್ನು ನೀಡಲಾಗುವದು.

ಪಶ್ಚಾತಾಪ ಸಂಬಂಧದ ಕೀರ್ತನೆ

ಕ್ರೈಸ್ತರಲ್ಲಿ ಬಹುಪಾಲು ಹೆಚ್ಚು ಜನರಿಗೆ ಕೀರ್ತನೆ 51ರ ಮೂಲಕವಾಗಿ ಪಶ್ಚಾತಾಪಪಡಲು ಪ್ರೋತ್ಸಾಹಿಸಲಾಗಿರುವದು. ಖಂಡಿತವಾಗಿಯೂ ಆ ಮೂಲಕವಾಗಿ ಪಾಪಮಾಡಲು ಯಾರನ್ನೂ ಪ್ರೋತ್ಸಾಹಿಸಲಾಗಿರುವದಿಲ್ಲ. ನಾಸ್ತಿಕನಾದ ವಾಲ್ಟೇರ್ ಎಂಬಾತನು ಒಮ್ಮೆ ಈ ಕೀರ್ತನೆಯ ಬಗ್ಗೆ ಅತಿರಂಜನೆಯ ಪ್ರಹಸನವನ್ನು ಬರೆಯಲು ಯತ್ನಿಸಿದ್ದನೆಂದೂ, ಆದರೆ ಇದರಲ್ಲಿನ ಗಂಭೀರ ಧಾಟಿಯ ಸ್ವರದ ದೆಸೆಯಿಂದ ಭಯಮಿಶ್ರಿತ ಗೌರವದಿಂದ ಕೂಡಿದವನಾಗಿ ಲೇಖನಿಯನ್ನು ಕೆಳಗೆ ಎಸೆದು ದಿಗ್ಭ್ರಾಂತನಾಗಿ ತೀವ್ರ ಪಶ್ಚಾತಾಪದಿಂದ ತನ್ನ ಸುಪತ್ತಿಗೆಯಲ್ಲಿ ಹಿಂದಕ್ಕೆ ಒರಗಿಕೊಂಡನೆಂದೂ ಹೇಳಲಾಗಿರುವದು. ಬಿಷೋಪ್ ಹಾಲ್ ಎಂಬುವರು ಇದನ್ನು ವ್ಯಾಖ್ಯಾನಿಸುತ್ತಾ ಹೀಗೆ ಹೇಳಿರುವರು: "ಬಹು ದೊಡ್ಡವನಾದ ಒಬ್ಬ ಭಕ್ತನು ಹೀಗೆ [ಪಾಪದಿಂದ] ಬಿದ್ದವನಾಗಿ, ಹೀಗೆಯೇ [ಪಶ್ಚಾತಾಪದಿಂದ] ಎದ್ದವನಾಗಿರಲು, ನಾವು ಪಾಪಮಾಡದೆ ಇರುವದನ್ನು ಅಥವಾ ಪಾಪದಿಂದ ಹತಾಶರಾಗದೇ ಇರುವಂಥದನ್ನು ಕಲ್ಪಿಸಿಕೊಳ್ಳಲು ಹೇಗೆ ಸಾಧ್ಯ?" ಹೇಗೂ ನಾವು ನೆನಪಿನಲ್ಲಿಡಬೇಕಾದುದೇನಂದರೆ: ಅರಸನಾದ ದಾವೀದನು ಎಷ್ಟು ಘನವಂತನಾಗಿದ್ದರೂ ಹೊಸ ಒಡಂಬಡಿಕೆಯಲ್ಲಿನ ಈ ಮಾತಿನ ಅರ್ಥದ ಪ್ರಕಾರವಾಗಿ ಆತನು ಒಬ್ಬ ಭಕ್ತನಾಗಿರಲಿಲ್ಲವೆಂಬದೇ. ಆತನು ತನ್ನ ಹೃದಯದಲ್ಲಿನ ಉದ್ದೇಶಗಳ ಪ್ರಕಾರ ಭಕ್ತನಿಗೆ ಸಮಾನನಾಗ ಬಹುದಾಗಿದ್ದರೂ, ಆತನು ದೇವರಿಂದ ಅಂಗೀಕೃತನಾಗಿ ಪವಿತ್ರಾತ್ಮನಿಂದ ಹುಟ್ಟಿದವನಾಗಿರಲಿಲ್ಲ; ಯಾಕಂದರೆ ನಾವು ಯೋಹಾನ 7:39ರಲ್ಲಿ ಓದುವ ಪ್ರಕಾರ–"ಪವಿತ್ರಾತ್ಮವು ಆಗ ಇನ್ನೂ ಬಂದಿದ್ದಿಲ್ಲ."

ಪವಿತ್ರಾತ್ಮವರವು ಕೊಡಲ್ಪಟ್ಟು ನೂತನ ಸ್ವಭಾವದಲ್ಲಿ ಹುಟ್ಟುವಂಥದ್ದು [ಅಂಕುರಿಸಲ್ಪಡುವಂಥದ್ದು] ಪಂಚಾಶತ್ತಮ ದಿನದಿಂದ ಪ್ರಾರಂಭವಾಗಿದ್ದು, ಅಂದಿನಿಂದ [ಈವರೆಗೂ] ಮುಂದುವರೆಯುತ್ತಿರುವದು. ಅರಸನಾದ ದಾವೀದನನ್ನು ಇಂಥಾ ದೋಷವು ಹಿಂದೆ ಬೀಳಿಸಬೇಕೆಂಬುದಕ್ಕೆ ನಾವು ಆಶ್ಚರ್ಯಪಡಬೇಕಿದ್ದಲ್ಲಿ ದೇವರಿಂದ ಹುಟ್ಟಿದ ಯಾವುದೇ ಭಕ್ತನು ವಿರೋಧಿಯಾದ ಸೈತಾನನ ಇಂಥಾ ಒಂದು ಉರುಲಿಗೆ ಸಿಕ್ಕಿಬಿದ್ದಲ್ಲಿ ಇನ್ನೂ ಎಷ್ಟೋ ಹೆಚ್ಚಾಗಿ ಆಶ್ಚರ್ಯಪಡಬೇಕಿರುವದು. ಆತ್ಮನಿಂದ ಹುಟ್ಟಿದವರು [ಅಂದರೆ ಅಂಕುರಿಸಲ್ಪಟ್ಟವರು] ಪ್ರತಿಯೊಂದು ವಿಧದಲ್ಲಿಯೂ ಅಧಿಕವಾದ ಅನುಕೂಲಗಳನ್ನು ಹೊಂದಿರುವರು. ಅದು ಕೇವಲ ದೈವೀಕ ಗುಣ, ದೈವೀಕ ಯೋಜನೆ, ಹಾಗು ದೈವೀಕ ವಾಗ್ದಾನಗಳ ವಿಷಯದಲ್ಲಿನ ಉತ್ತಮವಾದ ತಿಳುವಳಿಕೆಯ ಮೂಲಕವಾಗಿ ಪಡೆಯುವ ಉನ್ನತವಾದ ಜ್ಞಾನಪ್ರಕಾಶದ ಮೂಲಕ ಮಾತ್ರವಾಗಿರದೆ ಕರ್ತನಾದ ಯೇಸುವನ್ನು ತಮ್ಮ ಸಹಾಯಕನನ್ನಾಗಿ ಹೊಂದಿರುವ ದೆಸೆಯಿಂದಾಗಿದ್ದು, ಈ ಮುಂದಿನ ಭರವಸೆಯ ಕಾರಣದಿಂದಾಗಿರುವದು: "ಎಲ್ಲಾ ಕಾರ್ಯಗಳು ಅವರಿಗೆ ಅನುಕೂಲವಾಗುತ್ತವೆ." (ರೋಮಾ. 8:28); ಮತ್ತು ಅವರು ಸಹಿಸಬಹುದಾದ ಶೋಧನೆಯನ್ನೇ ಹೊರತು ಅದಕ್ಕೆ ಹೆಚ್ಚಿನದನ್ನು ಕರ್ತನು ಬರಗೊಡಿಸುವದಿಲ್ಲ, ಅಲ್ಲದೆ ಪ್ರತಿಯೊಂದು ಶೋಧನೆಯಾಗುವಾಗಲೂ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಹ ಸಿದ್ಧಪಡಿಸಿರುವನು. – 1 ಕೊರಿಂಥ 10:13.

"ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ಕರುಣಾನಿಧಿಯೇ ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು. ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು; ನನ್ನ ದೋಷವನ್ನು

ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ." [ಕೀರ್ತನೆ 51:1–3] ನಿಷ್ಠೆಯುಳ್ಳ ಈ ಮಾತುಗಳು ನಮಗೆ ಭರವಸೆ ನೀಡುವದೇನಂದರೆ–ಅರಸನು ಕೆಲವು ವಿಧವಾದ ಮಸುಕಿನ ಮಬ್ಬಿನಿಂದ ಆವರಿಸಲ್ಪಟ್ಟಿದ್ದು, ಅವು ಕೆಲವು ತಿಂಗಳುಗಳ ಕಾಲ ಆತನ ಮಾನಸಿಕ ದೃಷ್ಟಿಯನ್ನು ಮಬ್ಬುಗೊಳಿಸಿತ್ತೆಂಬದು. ಭೂಮೋಡಗಳು ಮತ್ತು ಶಾರೀರಿಕ ಬಲಹೀನತೆಗಳು ಆತನ ಪ್ರಾಣಾತ್ಮ ಹಾಗು ದೇವರ ನಡುವೆ ಒಂದು ತೆರೆಯಾಗಿ ಎದ್ದುಬಂದು ದೇವರ ಮುಖಪ್ರಕಾಶವನ್ನು ಮುಚ್ಚಿಬಿಟ್ಟಿತ್ತು.

ಈ ಪಾಠವು ದೇವರೊಂದಿಗೆ ಒಡಂಬಡಿಕೆಯ ಸಂಬಂಧದಲ್ಲಿ ಎಂದಾದರೂ ಇದ್ದವರೆಲ್ಲರಿಗೆ ಅನ್ವಯವಾಗುವದು. ಪ್ರತಿಯೊಬ್ಬ ಕ್ರೈಸ್ತನ ಮನೋಪ್ರವೃತ್ತಿಯು ಏನಾಗಿರಲೇ ಬೇಕೆಂಬುದನ್ನು ಕವಿಯು, ತನ್ನ ಹಾಗು ದೇವರ ನಡುವಿನ ಅತಿ ಕಡಿಮೆ ಪ್ರಮಾಣದ ಮಬ್ಬು ಕತ್ತಲೆಯನ್ನು ಕಂಡುಕೊಂಡವನಾಗಿ ಅದನ್ನು ಹೀಗೆ ವ್ಯಕ್ತಪಡಿಸಿರುವನು:

> "ನನ್ನಾತ್ಮ ಸೂರ್ಯ ಕ್ರಿಸ್ತನೇ, ಸಜ್ಜ್ಯೋತಿ ನೀನು ನನಗೆ;
> ನಿನ್ನ ಸುಮುಖ ಕಾಣಲು ನನಗೆ ರಾತ್ರಿಯಿಲ್ಲವು.
> ಆ ಮುಖ ಮುಚ್ಚುವದಕ್ಕೆ ಭೂಮಂಜು ಏಳದಿರಲಿ.
> ಇರುಳು ಹಗಲಲ್ಲಿಯೂ ನನ್ನ ಸಮೀಪವಾಗಿರು."

ಇಲ್ಲಿರುವ ಮುಖ್ಯವಾದ ಪಾಠವೆಂದರೆ ನಾವು ದೇವರೊಂದಿಗೆ ತಪ್ಪೊಪ್ಪಿಗೆಯ ಬಗ್ಗೆ ಚುಕ್ತಿಯಾದ ಲೆಕ್ಕಗಳನ್ನು ಇಟ್ಟುಕೊಂಡಿರಬೇಕೆಂಬದು. ತನ್ನ ದಿನದ ಆಗುಹೋಗುಗಳಲ್ಲಿ ದೈವಿಕ ಮೇಲ್ವಿಚಾರಣೆಗಾಗಿ ಹಾಗು ಸರಿಯಾದ ಮಾರ್ಗದಲ್ಲಿ ನಡೆಯಲು ದೈವ ಸಹಾಯಕ್ಕಾಗಿ ಪ್ರಾವಾಣಿಕವಾಗಿ ವಿಜ್ಞಾಪಿಸಿಕೊಳ್ಳದೆ ಯಾವ ದೇವರ ಮಗನೂ ಬೆಳಿಗ್ಗೆಯಲ್ಲಿ ಹೊರಡಬಾರದು. ಆ ದಿನದಲ್ಲಿ ನಡೆದು ಬಂದ ದಾರಿಯ ಬಗ್ಗೆ ಅಂದರೆ ಇದು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿತ್ತೆಂದು ಹಾಗು ತನ್ನನ್ನು ಇದು ಪರಲೋಕ ನಿವಾಸದ ಕಡೆಗೆ ಒಂದು ಶಿಸ್ತಿನ ನಡೆಯಾಗಿತ್ತೆಂಬುದರ ಬಗ್ಗೆ ಒಂದು ಅವಲೋಕನವನ್ನು ಮಾಡದೆ ಯಾವ ದೇವಕುಮಾರನೂ ರಾತ್ರಿಯಲ್ಲಿ ಮಲಗಲು ಹೋಗಬಾರದು. ಅಥವಾ, ಒಂದು ವೇಳೆ, ಕೆಲವು ಸಂಗತಿಗಳು ಸಂಭವಿಸಿದ್ದು ಅದು ಆತನನ್ನು ತಲೆತಗ್ಗಿಸುವಂತೆ ಮಾಡಿದ್ದಲ್ಲಿ, ಆ ಕೂಡಲೇ ಪರಲೋಕದಲ್ಲಿನ ಕೃಪಾಸನದ ಬಳಿಗೆ ತೆರಳಿ ಕರುಣೆಯನ್ನು ಹೊಂದಿದವನಾಗಿ ಮುಂದಿನ ಅಗತ್ಯತೆಯ ಸಮಯಗಳಿಗೆ ಸಕಾಲಿಕ ಸಹಾಯಕ್ಕಾಗಿ ವಿನಂತಿಸುವಂಥದು ಬಹು ಸಮಯೋಚಿತವಾಗುವದು.

ಹೀಗೆ ಅನುದಿನವೂ ತನ್ನ ಪರಲೋಕದ ತಂದೆ ಹಾಗು ವಿಮೋಚಕನೊಡನೆ ದಿನದ ಆಗುಹೋಗುಗಳ ಬಗ್ಗೆ ಲೆಕ್ಕಗಳನ್ನು ನೀಡುವದನ್ನು ಇಟ್ಟುಕೊಳ್ಳುವ ದೇವರ ಮಗನು ಅವರ ಪ್ರೀತಿಯಲ್ಲಿ ನೆಲೆಗೊಂಡವನಾಗಿದ್ದು ಈ ಪಾಠದಲ್ಲಿ ಗಮನಿಸಲಾದ ಯಾವುದೇ ದೊಡ್ಡದಾದಂಥ ಪಾಪದಲ್ಲಿ ಬೀಳುವ ಅಪಾಯದಲ್ಲಿ ಇರುವದಿಲ್ಲ. ಅರಸನಾದ ದಾವೀದನೂ ಸಹ, ದೇವರ ಹಾಗು ತನ್ನ ನಡುವೆ ಶಾರೀರಿಕ ಛಾಯೆಯುಳ್ಳ ಭೂಮಂಜು [ಅಂದರೆ ದೇವರಿಂದ ಬೇರೆಡೆಗೆ ಸೆಳೆಯುವ ಲೌಕಿಕ ಸಂಗತಿಗಳು ಹಾಗು ಹಿತಾಸಕ್ತಿಗಳು] ನಿಧಾನವಾಗಿ ಹುಟ್ಟುಕೊಳ್ಳಲು ಬಿಡದೇ ಹೋದಲ್ಲಿ ಆತನು ಇಂಥಾ ಪಾಪಗಳಲ್ಲಿ ಬೀಳುತ್ತಿರಲಿಲ್ಲವೆಂಬದನ್ನು ನಾವು ಖಚಿತಪಡಿಸಿಕೊಳ್ಳಬಹುದು.

"ನನ್ನ ದೋಷಕ್ಕೆ ವಿಮುಖನಾಗು; ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು. ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರ ಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು. ನಿನ್ನ ಸನ್ನಿದಿಯಿಂದ ನನ್ನನ್ನು ತಳ್ಳಬೇಡ; ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ. ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು. ಆಗ ನಿನ್ನ ಮಾರ್ಗವನ್ನು ದ್ರೋಹಿಗಳಿಗೆ ಬೋಧಿಸುವೆನು; ಪಾಪಿಗಳು ನಿನ್ನ ಕಡೆಗೆ ತಿರುಗಿಕೊಳ್ಳುವರು." [ಕೀರ್ತನೆ 51:9–13]

ಅರಸನು ಇಲ್ಲಿ ತಿಳಿಸಿರುವಂತೆ, ಪೂರ್ವದಲ್ಲಿ [ನಂಬಿಕೆಯ ಮೂಲಕ] ಹೆಸರುಗೊಂಡವರಿಗೆ, ಕ್ರೈಸ್ತಸಭೆಗೆ ನೀಡಿರುವ ಅರ್ಥದಲ್ಲಿ, ಪವಿತ್ರಾತ್ಮವನ್ನು ನೀಡಲಾಗದಿದ್ದರೂ, ಅವರ ಜೀವನದ ಆಗುಹೋಗುಗಳಲ್ಲಿ ದೇವರ ಅನುಗ್ರಹವು ತೋರ್ಪಡಲಾಗಿತ್ತು. ಶಾಸ್ತ್ರವಚನಗಳ ಅನುಸಾರವಾಗಿ ಮೋಶೆಯಿಂದ ಸ್ನಾನಿಕನಾದ ಯೋಹಾನನ ವರೆಗೂ ಮೋಶೆಯ ಅಧೀನದಲ್ಲಿನ ಸೇವಕರ ಒಂದು ಮನೆತನವಿತ್ತು; ಆದರೆ ಸುವಾರ್ತಾಯುಗದಲ್ಲಿ ಪವಿತ್ರಾತ್ಮನಿಂದ ಹುಟ್ಟಿದವರಾಗಿ ಪ್ರಮುಖ ಕುಮಾರನಾಗಿರುವ ಕರ್ತನಾದ ಯೇಸು ಕ್ರಿಸ್ತನ ಅಧೀನದಲ್ಲಿನ ಮಕ್ಕಳ ಒಂದು ಮನೆತನವು ಇರುವದೆಂಬುದನ್ನು ನಾವು ನೆನಪಿನಲ್ಲಿಡಬೇಕು. – ಇಬ್ರೀಯ 3:5–6



ಅರಸನಾದ ದಾವೀದನ ಪಶ್ಚಾತಾಪ

ರೀಪ್ರಿಂಟ್ಸ್ ಪುಟ 3253

ಕೀತನೆ 51:1–17

"ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು"

ಸಮೃದ್ಧಿಯು ಅರಸನಾದ ದಾವೀದನಿಗೆ ವೈಯುಕ್ತಿಕವಾಗಿ ಅನುಕೂಲಕರವಾದ ಕಾರ್ಯವೆಸಗಿರಲಿಲ್ಲ. ದೇವರ ಆಶೀರ್ವಾದದಡಿಯಲ್ಲಿನ ಅಪೂರ್ವವಾದ ಯಶಸ್ಸಿನ ವರುಷಗಳ ನಂತರ, ಆತನ ರಾಜ್ಯವು ಬಹು ಶಕ್ತಿಶಾಲಿಯಾಗಿ ಆತನ ಹೆಸರು ಗೌರವಾರ್ಹವಾಗಿದ್ದದ್ದಲ್ಲದೆ ಯುದ್ಧಗಳಲ್ಲಿ ಆತನ ವೈಯುಕ್ತಿಕ ಭಾಗವಹಿಸುವಿಕೆಯು ಕಳೆದ ನಂತರ ಆತನ ಹೃದಯವು ಭೂಸಂಬಂಧದ ಸಂತೋಷಗಳಿಗೆ ಸೆಳೆಯ ತೊಡಗಿದ್ದು ಆತನು ದೇವರ ಮತ್ತು ಆತನ ನಿಯಮಗಳ ಕಡೆಗೆ ಮೊದಲು ಇದ್ದುದಕ್ಕಿಂತಲೂ ಅಲ್ಪಾಸಕ್ತಿಯುಳ್ಳವನಾಗಿ ಅರಸನು ಬಹು ಘೋರವಾದ ಪಾಪದಲ್ಲಿ ಬಿದ್ದಿದ್ದನು; ಇವು ಆತನು ತನ್ನ ಮೊದಲಿನ ಜೀವಿತದಲ್ಲಿದ್ದಂತೆ ಅಂದರೆ ದೇವರಲ್ಲಿದ್ದಂತ ಹೃದಯವುಳ್ಳವನಾಗಿದ್ದ ಕಾಲದಲ್ಲಿ ತೋರಿದಂಥ ಉನ್ನತ ಮಟ್ಟದ ನೈತಿಕ ಗುಣಕ್ಕೆ ಪ್ರತಿಯಾಗಿ ಬಹು ಕತ್ತಲಾಗಿ ಕಂಡುಬಂದಿತ್ತು. ಆತನ ಪಾಪದ ಕಥೆಯು, ಅಂದರೆ ಆತನು ಹೇಗೆ ಬತ್ಸೇಬಳ ವಿಷಯದಲ್ಲಿ ವ್ಯೋಹಗೊಂಡವನಾಗಿ ಆಕೆಯೊಡನೆ ವ್ಯಭಿಚಾರವನ್ನು ಮಾಡಿದ್ದು, ನಂತರದಲ್ಲಿ ತನ್ನನ್ನು ರಕ್ಷಿಸಿಕೊಳ್ಳಲು ಆಕೆಯ ಗಂಡನಾದ ಊರಿಯನು ವೈರಿಯಿಂದ ಕೊಲ್ಲಲ್ಪಡುವಂತೆ ಆತನನ್ನು ರಣರಂಗದಲ್ಲಿ ಮುಂದುಗಡೆ ಇರುವಂತೆ ಮಾಡಿ, ಅನೇಕ ಇತರರ ಜೀವವನ್ನು ಸಹ ನಷ್ಟವಾಗುವಂತೆ ಮಾಡಿದ್ದ ಸಂಗತಿಯನ್ನು ಶಾಸ್ತ್ರವಚನದಲ್ಲಿ ಅರಸನು ಮಾಡಿದ ತಪ್ಪನ್ನು ಮನ್ನಿಸಲು ಒಂದು ಅತ್ಯಲ್ಪ ಪ್ರಯತ್ನವನ್ನೂ ಮಾಡದೆ ಅತಿ ನೇರವಾದ ರೀತಿಯಲ್ಲಿ ಹೇಳಲಾಗಿರುವದು. ಈ ಘಟನೆಯ ಸಂಬಂಧದಲ್ಲಿ ಯಾವ ಸಮರ್ಥನೆಯನ್ನೂ ನೀಡದೆ ಈ ಭೀಕರವಾದ ಅಪರಾಧದ ಪೂರ್ಣ ಹೊಣೆಗಾರಿಕೆಯನ್ನು ಅರಸನ ತಲೆಯ ಮೇಲೆ ನೇರವಾಗಿ ಹೊರಿಸಲಾಗಿತ್ತು. ಆತನ ಪರವಾಗಿ ಯಾವುದೇ ಸಬೂಬನ್ನು ನೀಡುವದು ಇದ್ದಲ್ಲಿ ಅದನ್ನು ಈ ಘಟನೆಯ ಓದುಗರಿಂದಲೇ ಬರಬೇಕಿರುವದು. ನಾವು ಈ ಸಂಬಂಧದಲ್ಲಿ ಕೆಲವು ಅಭಿಪ್ರಾಯಗಳನ್ನು ಸಲಹೆಮಾಡಬಹುದು: ಆ ದಿನದಲ್ಲಿ ಲೋಕದಲ್ಲಿನ ಅರಸರುಗಳು ಸರ್ವಾಧಿಕಾರಿಗಳ ಒಂದು ಅಧಿಕಾರವನ್ನು ಪ್ರಯೋಗಿಸುತ್ತಿದ್ದು ಜನರೊಳಗೆ ಅರಸನು ಯಾವುದೇ ತಪ್ಪನ್ನು ಮಾಡಲು ಸಾಧ್ಯವಿಲ್ಲವೆಂಬ ಒಂದು ಸಿದ್ಧಾಂತವಿತ್ತು–ಅಂದರೆ ಆತನು ಯಾವುದನ್ನಾದರೂ ಮಾಡುವದು ಆತನಿಗೆ ಸಂತೋಷವಿದ್ದಲ್ಲಿ ಅದು ದೇಶದ ಆಡಳಿತಗಾರನಾಗಿ ಮುಖ್ಯಸ್ಥನಾದ ಆತನ ಉನ್ನತ ಸ್ಥಾನದ ಕಾರಣದಿಂದ ಅದು ಸೂಕ್ತವಾಗಿರುವದೆಂಬದೇ. ಇಂಥಾ ಒಂದು ಅಭಿಪ್ರಾಯಾಯದಿಂದ ಈ ಶಬ್ದದ ಯಾವುದೇ ಅರ್ಥವನ್ನು ಒಪ್ಪಿಕೊಳ್ಳಲು ನಮಗೆ ಸಾಧ್ಯವಿಲ್ಲ. ಹೀಗಿದ್ದರೂ ನಾವು ವಿವೇಚನೆಯಿಂದ ಕಲ್ಪಿಸಿಕೊಳ್ಳಲು ಸಾಧ್ಯವಾದುದೇನಂದರೆ ಅತಿ ಸಾಧಾರಣವಾಗಿರುವ ಈ ಒಂದು ಮನೋಪ್ರವೃತ್ತಿಯು ಹೆಚ್ಚು ಕಡಿಮೆ ಅರಸನ ಮನಸ್ಸಿನ ಮೇಲೆ ಪ್ರಭಾವ ಬೀರಿತ್ತೆಂಬದೇ. ಯಾವಾತನು ಸೌಲನು ದೇವರಿಂದ ಅಭಿಷೇಕಿತನಾದವನೆಂಬ ಕಾರಣಕ್ಕಾಗಿ ಆತನ ಜೀವವನ್ನು ಗೌರವಿಸಿದ್ದನೋ ಆತನು ದೇವರಿಂದ ಹೊಂದಿದ ತನ್ನ ಸ್ವಂತ ಅಭಿಷೇಕವೂ ಕೆಲವು ಮಟ್ಟದಲ್ಲಿ ತನ್ನ ಜನಾಂಗದ ಇತರರ ಮೇಲೆ ನೆಲೆಗೊಂಡಿರುವ ಕೆಲವು ಹಂತದಲ್ಲಿನ ಹೊಣೆಗಾರಿಕೆಯಿಂದ ತನ್ನನ್ನು ಬಿಡುಗಡೆಮಾಡಿರುವದು ಎಂಬ ತಪ್ಪಾದ ಕಲ್ಪನೆಯಲ್ಲಿ ಸಿಕ್ಕಿಹಾಕಿಕೊಂಡಿದ್ದನು.

ಈ ಅಪರಾಧಗಳನ್ನೆಸಗಿದ ಸುಮಾರು ಎರಡು ವರುಷಗಳ ನಂತರ ಅರಸನು ತನ್ನ ಮನಃಸಾಕ್ಷಿಯನ್ನು ಹತ್ತಿಕ್ಕಲು ಯತ್ನಿಸುವವನಾಗಿ ತಾನು ನಡೆಸಿದಂಥವುಗಳ ವಿಷಯದಲ್ಲಿ ತಾನು ಹೀಗೆ ಕೇವಲ ಅರಸನ ಸ್ವಾತಂತ್ರ್ಯಗಳನ್ನು ಬಳಸುತ್ತಿರುವದಾಗಿ ಪರಿಗಣಿಸಲಾರಂಭಿಸಿದ್ದನು. ಹೀಗಿದ್ದರೂ ಆತನ ಮನಃಸಾಕ್ಷಿಯು ಆತನನ್ನು ಪೀಡಿಸತೊಡಗಿದ್ದು ತಾನು ದೇವರಿಂದ ಅಗಲಿಸಲ್ಪಟ್ಟಿರುವದಾಗಿ ಭಾವಿಸಿಕೊಂಡನಲ್ಲದೆ ಆತನ ನಿಯಮವಿಧಿಗಳ ಮೂಲಕವಾಗಿ ಖಂಡನೆಗೊಳಗಾಗಿದ್ದು ತಾನು ವಿಭಿನ್ನವಾದ ಗುಣಲಕ್ಷಣಗಳಿಂದ ಮುದ್ರಿತನಾಗಿದ್ದಲ್ಲಿ ಆಗ ಈ ವಿಧವಾಗಿ ತನಗೆ ಅನ್ನಿಸುತ್ತಿರಲಿಲ್ಲವೆಂದು ಭಾವಿಸತೊಡಗಿದ್ದನು; ಜೊತೆಗೆ ದೇವರೂ ಸಹ ಆತನನ್ನು ಗದರಿಸಲು ಆತುರಪಟ್ಟಿರಲಿಲ್ಲ. ತನ್ನ ಹೃದಯದ ಕಹಿಭಾವವನ್ನು ಪೂರ್ಣವಾಗಿ ಸವಿಯಲು, ತನ್ನ ಆತ್ಮದಲ್ಲಿನ ಅಂಧಕಾರವನ್ನು ಅನುಭವಿಸಲು ಅಂದರೆ ತನ್ನ ಹಾಗು ದೇವರ ನಡುವೆ ಆವರಿಸಿರುವ ಕಾರ್ಮೋಡದ ದೆಸೆಯಿಂದ ಉಂಟಾಗಿರುವ ಸಂತೋಷ ವಿಹೀನತೆಯನ್ನು ಅನುಭವಿಸು–ವಂತಾಗಲು ಬಿಟ್ಟಿದ್ದನು. ದಾವೀದನ ಆತ್ಮದಲ್ಲಿನ ಗುಪ್ತ ಸಂತಾಪರೋಧನಗಳು ಕಳೆದ ನಂತರ ಸೂಕ್ತ ಸಮಯದಲ್ಲಿ ತನ್ನ ಮನಸ್ಸಿನ ಎದುರಿನಲ್ಲಿ ಸಂಗತಿಗಳೆಲ್ಲವನ್ನು ಸ್ಪಷ್ಟವಾಗಿ ಕಾಣಬರುವ ಸಲುವಾಗಿ ದೇವರು ಪ್ರವಾದಿಯಾದ ನಾತಾನನ ಮೂಲಕವಾಗಿ ಒಂದು ವಾಗ್ದಂಡನೆಯನ್ನು ಕಳುಹಿಸಿದ್ದನು. ನಾತಾನನು ಒಂದು ಸಾಮ್ಯರೂಪ ಚಿತ್ರಣದ ಮೂಲಕವಾಗಿ ಅರಸನ ಅನುತಾಪವು ಕೆರಳುವಂತೆ ಮಾಡಿ ಆತನು ಬಹು ಕಠಿಣವಾದ ನ್ಯಾಯತೀರ್ಪನ್ನು ನೀಡುವಂತೆ ಮಾಡಿದ್ದನು; ಅದೇನಂದರೆ ತಪ್ಪಿತಸ್ಥನಿಗೆ ಮರಣದಂಡನೆಯನ್ನು ವಿಧಿಸುವಂಥದ್ದಾಗಿದ್ದು, ಆನಂತರದಲ್ಲಿ ಪ್ರವಾದಿಯು–**"ಆ ಮನುಷ್ಯನು ನೀನೇ!"** ಎಂದು ಹೇಳಿ ಪಾಠವನ್ನು ಅರಿತುಕೊಳ್ಳುವಂತೆ ಮಾಡಿದ್ದನು.

ನಾವು ನೆನಪಿನಲ್ಲಿಡಬೇಕಾದುದೇನಂದರೆ ಅರಸನಾದ ದಾವೀದನು ಆತ್ಮಿಕವಾದ ಮಕ್ಕಳ ಮನೆತನಕ್ಕೆ ಸೇರಿದವನಲ್ಲವಾದ್ದರಿಂದ ಆತನು ಇಂಥಾ ಸಂಗತಿಗಳ ಬಗ್ಗೆ ಆತ್ಮಿಕ

ಮಕ್ಕಳ ಮನೆತನದವರಿಗಿಂತಲೂ ಬಹು ಅಲ್ಪ ಸ್ಪಷ್ಟತೆಯ ದೃಷ್ಟಿಯನ್ನು ಹೊಂದಿದವನಾಗಿದ್ದು, ಇಂಥವುಗಳು ಪವಿತ್ರಾತ್ಮನಿಂದ ಹುಟ್ಟಿದವರಾಗಿ "ತಂದೆಯಿಂದ ಕೇಳಿ ಕಲಿತವರಾದ" ಮಕ್ಕಳ ಮನೆತನದ ಪ್ರತಿಯೊಬ್ಬನಿಗೆ ಸೂಕ್ತವಾಗಿ ಸಂಬಂಧಿಸಿದ ವಿಷಯಗಳಾಗಿರುವೆಂಬದೇ. ಹೀಗಾಗಿ ನಾವು ಇದೇ ರೀತಿಯ ಒಂದು ಪಾಠವನ್ನು ನಮಗಾಗಿ ತೆಗೆದುಕೊಳ್ಳುವದನ್ನು ನಾವು ಅಪೇಕ್ಷಿಸುವಂತಿಲ್ಲ. ವಾಸ್ತವದಲ್ಲಿ ಆತ್ಮಿಕ ಮನೆತನದವರಾದ ನಾವು ದೇವರ ಚಿತ್ತದ ಬಗ್ಗೆ ಸ್ಪಷ್ಟ ಪರಿಕಲ್ಪನೆಯನ್ನು ಹೊಂದಿದವರಾಗಿದ್ದು ವ್ಯಭಿಚಾರ ಹಾಗು ಕೊಲೆಯ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಉನ್ನತವಾದ ವ್ಯಾಖ್ಯಾನವನ್ನು ಪ್ರತಿಪಾದಿಸಲಾಗಿರುವದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು; ಹೇಗಂದೆ ಯಾರಾದರೂ ವ್ಯಭಿಚಾರವನ್ನು ಬಯಸುವವನಾಗಿದ್ದು ಕೇವಲ ಹೊರಗಣ ತೋರಿಕೆ ಸನ್ನಿವೇಶದ ಪ್ರಕಾರ ಇಲ್ಲವೇ ಭಯದ ಕಾರಣದಿಂದ ತನ್ನನ್ನು ನಿರ್ಬಂಧಿಸಿಕೊಳ್ಳುವಂಥವನು ನಿಜವಾಗಿಯೂ ಹೃದಯದಲ್ಲಿ ವ್ಯಭಿಚಾರ ಮಾಡುವವನಾಗಿರುವನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು; (ಮತ್ತಾಯ 5:28) ಮತ್ತು ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ, ಮತ್ತು ತನ್ನ ಸಹೋದರ–ನನ್ನು ಹಗೆಮಾಡುವ ಪ್ರತಿ ಮನುಷ್ಯನು ಕೊಲೆಗಾರನಾಗುವನು; ಯಾಕಂದರೆ ಕ್ರೋಧಮನೋಭಾವವು ಎಂಥದ್ದೆಂದರೆ ಅದನ್ನು ತಡೆಹಿಡಿಯದಿದ್ದಲ್ಲಿ ಅದು ಕೊಲೆ ಮಾಡುವಂತಾಗಲು ನಡೆಸುವದು. (ಮತ್ತಾಯ 5:22) ಮತ್ತೊಬ್ಬನ ವಸ್ತುಗಳನ್ನು ಆಶಿಸುವ ವ್ಯಕ್ತಿಯು ಕೇವಲ ಅದನ್ನು ತೆಗೆದುಕೊಳ್ಳುವದಕ್ಕೆ ಅವಕಾಶವಿಲ್ಲದೆ ಅಥವಾ ಅದರ ಪರಿಣಾಮಕ್ಕೆ ಹೆದರುವವನಾಗಿ ಅದನ್ನು ತಡೆಹಿಡಿದವನಾಗಿದ್ದಲ್ಲಿ ಅವನು ಹೃದಯದಲ್ಲಿ ಒಬ್ಬ ಕಳ್ಳನಾಗಿರುವನು. ನೂತನ ಸೃಷ್ಟಿಗಳು ತಮ್ಮ ಹೃದಯವನ್ನು ಪರೀಕ್ಷಿಸಲು ಈ ಮೂಲತತ್ವಗಳನ್ನು ಅನ್ವಯಮಾಡಿಕೊಂಡಲ್ಲಿ, ಅದು "ಮಕ್ಕಳ ಮನೆತನದಲ್ಲಿ" ಕೆಲವರು ಈ ದಿನದಲ್ಲಿ ತಾವು ಪಾಪದ ಸಂಬಂಧದಲ್ಲಿ ಅರಸನಾದ ದಾವೀದನ ಸ್ಥಾನಕ್ಕೆ ಬಹು ಹತ್ತಿರದಲ್ಲಿರುವದನ್ನು ಕಂಡುಕೊಳ್ಳುವಂಥ ಸಂಪೂರ್ಣವಾದ ಸಂಭವವಿರುವದು; ಹೀಗಾಗಿ ಸಂಗತಿಗಳನ್ನು ಈ ದೃಷ್ಟಿಯಲ್ಲಿ ನೋಡುವಾಗ ಅವರು ರಾಜಮನೆತನದ ಅಪರಾಧಿಯ ಬಗ್ಗೆ ನ್ಯಾಯನಿರ್ಣಯಿಸುವಾಗ ಹೆಚ್ಚಿನ ಪ್ರಮಾಣದ ಅನುಕಂಪವನ್ನು ಬಳಸುವವರಾಗಿರುವರು. ಇಂಥವರು ತಮ್ಮ ಅಪರಾಧಗಳ ಬಗ್ಗೆ ದಾವೀದನು ತನ್ನ ವಿಷಯದಲ್ಲಿ ಮಾಡಿದಂತೆ ಇದನ್ನು ಅಭ್ಯಾಸಿಸಿದ್ದಲ್ಲಿ ಅವರು ದೇವರಲ್ಲಿನ ಅನುಕಂಪದ ಮೂಲಕವಾಗಿ ಹೆಚ್ಚಿನ ಸಾಂತ್ವನವನ್ನು ಸಹ ಕಂಡುಕೊಳ್ಳುವರು. "ನೀನು ಪಾಪವನ್ನು ಕ್ಷಮಿಸುವನಾದ್ದರಿಂದ [ಅಥವಾ ಪಾಪದ ಬಗ್ಗೆ ಅನುಕಂಪವುಳ್ಳವನಾದ್ದರಿಂದ] ಮನುಷ್ಯನ ಭಯಭಕ್ತಿಗೆ ನೀನೇ ಪಾತ್ರನು" [ಕೀರ್ತನೆ 130:4] ಎಂಬುದು ಪ್ರವಾದಿಯ ನಿರೂಪಣೆ. ನಮ್ಮ ಸಹ ಸೃಷ್ಟಿಜೀವಿಗಳಲ್ಲಿ ಅನೇಕರು ಇರುವಂತೆ ದೇವರು ಅನುಕಂಪ ತೋರಿಸುವದರಲ್ಲಿ ಕೊರತೆಯುಳ್ಳವನಾಗಿದ್ದಲ್ಲಿ ಇಂಥಾ ಸನ್ನಿವೇಶಗಳಲ್ಲಿ ನಿರೀಕ್ಷಿಸಲು ಏನೂ ಇರುವದಿಲ್ಲ. ಯಾರು ಹೃದಯದಲ್ಲಿ ಪಶ್ಚಾತಾಪವುಳ್ಳವರಾಗಿರುವರೋ ಅಲ್ಲದೆ ಹೀಗಾಗಿ ತಮ್ಮ ಪಾಪವು ಮನಃಪೂರ್ವಕವಾದುದಲ್ಲವೆಂದೂ ಆದರೆ ಅದು ವಾಸ್ತವದಲ್ಲಿ ಪಾರಂಪರ್ಯವಾಗಿ ಬಂದ ಬಲಹೀನತೆಯ ಹಾಗು ಮಸುಕುಮಾಡುವ ಪರಿಶೋಧನೆಯ ಒತ್ತಡ ಸನ್ನಿವೇಶದ ಕಾರಣವೆಂಬುದಕ್ಕೆ ಸಾಕ್ಷಿಪ್ರಮಾಣಗಳನ್ನು ನೀಡುವರೋ ಅಂಥವರಿಗೆ ದೇವರಲ್ಲಿ ಪಾಪಕ್ಷಮೆಯಿರುವ–ದೆಂಬುದನ್ನು ನಾವು ಅರಿತುಕೊಂಡಾಗ ನಾವು ಉತ್ತಮವಾದ ಸಂಗತಿಗಳ ವಿಷಯವಾದ ನೀರೀಕ್ಷೆಯ ಮೂಲಕವಾಗಿ ಪಶ್ಚಾತಾಪಪಡುವದಕ್ಕೆ ನಡೆಸಲ್ಪಡಲು ಪ್ರರೇಪಿಸಲ್ಪಡುವೆವು.

51ನೇ ಕೀರ್ತನೆಯಲ್ಲಿ ಸಾಧಾರಣವಾಗಿ ಗುರುತಿಸ–ಲಾಗಿರುವ ಸಂಗತಿಯೆಂದರೆ ಕೀರ್ತನೆಗಾರನು ತನ್ನ ದೇವರಿಗೆ ತನ್ನ ಪಾಪದ ವಿಷಯದಲ್ಲಿ ತನ್ನ ಕುಗ್ಗಿದ ಹೃದಯದ ಬಗ್ಗೆ ವ್ಯಕ್ತಪಡಿಸುವಲ್ಲಿ ಹಾಗು ಅದು ಪ್ರಧಾನ ಗಾಯಕನಿಗೆ ಪ್ರತಿಷ್ಠಿಸಿರುವದರಲ್ಲಿ ಅಡಕವಾದ ಸಂಗತಿಯೆಂದರೆ ಇದು ಇತರ ಕೀರ್ತನೆಗಳೊಂದಿಗೆ ಸಮನಾಗಿ ದೇವದರ್ಶನದ ಗುಡಾರದ ಸೇವೆಯಲ್ಲಿ ಹಾಡಬೇಕೆನ್ನುವದು ರಾಜನ ಉದ್ದೇಶವಾಗಿತ್ತೆಂಬದೇ; ಇದಕ್ಕಾಗಿ ಆತನು ಒಂದು ದೊಡ್ಡ ಸಂಖ್ಯೆಯಲ್ಲಿನ ಗಾಯಕರನ್ನು ನಿಯೋಜಿಸಿದ್ದನು. ಹೀಗೆ ಇಲ್ಲಿ ನಾವು ಗ್ರಹಿಸಿಕೊಳ್ಳುವದೇನಂದರೆ ಆ ಪಾಪವು ಎದ್ದು ಕಾಣುವಂಥದ್ದು ಹಾಗು ಅಸಹ್ಯಕರವೂ ಆಗಿದ್ದಲ್ಲಿ ಅರಸನು ಪ್ರಾಯಶ್ಚಿತ್ತಕ್ಕಾಗಿ ಮಾಡಿದ ಪ್ರಯತ್ನವು ಬಹುವಾಗಿ ಒಂದು ಬಹಿರಂಗ ರೀತಿಯದ್ದಾಗಿತ್ತೆಂಬದು. ಅನೇಕ ಜನಾಂಗಗಳು ಹೆಚ್ಚು ಕಡಿಮೆ ಅರಸನನ್ನು ಖಂಡಿಸಲು ಎಣಿಸಿಕೊಂಡಿದ್ದ ಸಂಭವವಿದ್ದು, ಇದರ ಪ್ರಭಾವವು ಬಹು ಹಾನಿಕರವಾಗಿದ್ದಿರಬೇಕು; ಅಲ್ಲದೆ ಈಗ ತನ್ನ ಪಾಪದ ಸಂಬಂಧದಲ್ಲಿನ ಆತನ ಈ ಬಹಿರಂಗವಾದ ದೃಷ್ಟಿ ಹಾಗು ದೇವಕ್ಷಮೆಗಾಗಿ ಆತನು ಮಾಡಿದ ಪ್ರಾರ್ಥನೆಗಳು ತನ್ನ ಹಾಗು ದೇವರ ನಡುವೆ ಒಂದು ಮೋಡದಂತೆ ತೇಲುತ್ತಿದ್ದ ತನ್ನ ಆತ್ಮಸಾಕ್ಷಿಯ ಮೇಲೆ ತಾನೇ ಬರಮಾಡಿಕೊಂಡ ಹಾನಿಯನ್ನು ಅರಸನು ಸಾಧ್ಯವಾದಷ್ಟು ಹೋಗಲಾಡಿಸಿಕೊಂಡದ್ದು ಮಾತ್ರವಲ್ಲದೆ ವ್ಯಭಿಚಾರ ಹಾಗು ಕೊಲೆಯ ಸಂಬಂಧದ ಬಗ್ಗೆ ಜನಾಂಗದ ಧರ್ಮಪ್ರಜ್ಞೆಯ ಮೇಲೆ ಇದರಿಂದಾಗಿದ್ದ ದುಷ್ಪ್ರಭಾವವನ್ನು ಸಹ ಇಲ್ಲದಂತೆ ಮಾಡಿದ್ದನು.

ಇಲ್ಲಿಯೂ ಮತ್ತೆ ದಾವೀದನನ್ನು ದೇವರಲ್ಲಿದ್ದಂಥ ಮನಸ್ಸನ್ನು ಹೊಂದಿದ್ದ ಮನುಷ್ಯನೆಂದು ವರ್ಣಿಸಲ್ಪಡುವದು ಏಕೆಂಬುದನ್ನು ನಾವು ನೋಡುತ್ತೇವೆ. ಆತನ ಪಾಪವು ದೇವರಿಗೆ ಮೆಚ್ಚಿಗೆಯಾಗಿರಲಿಲ್ಲ–ಇದಕ್ಕೆ ಬಹು ವ್ಯತಿರಿಕ್ತವಾದುದಾಗಿತ್ತು: ಆದರೆ ಪಾಪಗಳ ಅಗಾಧತೆಯ ಬಗ್ಗೆ ನಂತರದಲ್ಲಿ ಆತನಿಗಾದ ಮನವರಿಕೆ ಮತ್ತು ಅದಕ್ಕಾಗಿ ದೇವರ ಕಡೆಗೆ ಆತನು ಪಟ್ಟ ಹೃದಯಪೂರ್ವಕವಾದ ಪಶ್ಚಾತಾಪ ಮತ್ತು ಪ್ರತಿಯೊಂದು ದುಷ್ಟಮಾರ್ಗದಿಂದ ಶುದ್ಧಿಕರಿಸಲ್ಪಡಬೇಕೆಂಬ ಆತನ ಬಯಕೆ–ಇವುಗಳು ದೇವರಿಗೆ ಮೆಚ್ಚಿಕೆಯಾಗಿದ್ದವು. ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಹೇಗೆ ಅನುಕೂಲವಾಗುತ್ತದೆಂಬುದಕ್ಕೆ ಒಂದು ನಿದರ್ಶನವನ್ನು ಇಲ್ಲಿ ನಾವು ಹೊಂದಿರುವೆವು. ದೇವರ ಹಾಗು ನೀತಿ ತತ್ವಗಳ ಕಡೆಗಿನ ಆತನ ಹೃದಯದ ನಿಷ್ಠೆಯ ದೆಸೆಯಿಂದ ಈ ಘೋರ ಪಾಪಗಳು ಸಹ ಸ್ವತಃ ದಾವೀದನ ಹೃದಯಕ್ಕೆ ಒಂದು ದೊಡ್ಡ ಆಶೀರ್ವಾದವನ್ನು ತರುವಂಥದ್ದಾಗಿ ಪರಿಣಮಿಸಿದ್ದವು; ಇವು

ಆತನನ್ನು ದೀನನನ್ನಾಗಿ ಮಾಡಿ ಆತನ ಬಲಹೀನತೆ ಹಾಗು ಅಲ್ಪತನದ ಬಗ್ಗೆ ಆತನಿಗೆ ಒಂದು ಮನವರಿಕೆಯನ್ನು ಉಂಟುಮಾಡಿದ್ದಲ್ಲದೆ, ತಾನು ದೇವರ ಅನ್ಯೋನ್ಯತೆ ಸಹಾನುಭೂತಿ ಪಡಕೊಂಡವನಾಗಿ [ಪರಿಪೂರ್ಣತೆಯಿಂದ] ಬಿದ್ದುಹೋದ ತನ್ನ ಶರೀರಭಾವದ ಪರಿಶೋಧನೆಗಳಿಂದ ಸುರಕ್ಷಿತನಾಗಿರಬೇಕಿದ್ದಲ್ಲಿ, ತಾನು ದೇವರ ಸನಿಹದಲ್ಲಿ ಇರುವಂಥದ್ದರ ಅಗತ್ಯತೆಯ ಬಗ್ಗೆ ಆತನಿಗೆ ಅರಿವನ್ನುಂಟು ಮಾಡಿದ್ದವು. ಹೀಗೆಯೇ ಸಹ ನೂತನ ಸೃಷ್ಟಿಯ ಸಂಗತಿಯೂ ಇರುವದು. ಅವರಲ್ಲಿ ಎಷ್ಟು ಮಂದಿ ತಾವು ಕೆಲವು ಸಾರಿ ಎಡವಿಬಿದ್ದುದರ ದೆಸೆಯಿಂದ ದೊರೆತ ಪ್ರಯೋಜನಕರವಾದ ಪಾಠಗಳ ಹಾಗು ಅದರಿಂದಾದ ಆಶೀರ್ವಾದಗಳ ಬಗ್ಗೆ ಗ್ರಹಿಕೆಯನ್ನು ಹೊಂದಿರುವರು. ಎಡವಿ ಬೀಳುವದು ಒಳ್ಳೆಯುದೆಂದಾಗಲೀ ಅಥವಾ ಅದು ದೇವರಿಂದ ಉಂಟಾಗಿರುವದೆಂದಾಗಲೀ ಆಗಿರುವುದಿಲ್ಲ, ಆದರೆ ಇಂಥಾ ಸನ್ನಿವೇಶಗಳನ್ನು ಸೂಕ್ತ ಮನಸುಳ್ಳವರ ಅಂದರೆ ಪಶ್ಚಾತಾಪಪಟ್ಟು ಸುಧಾರಣೆಯನ್ನು ಹೊಂದುವ ಸಲುವಾಗಿ ಈ ಸಂಗತಿಗಳನ್ನು ಸರಿಯಾಗಿ ಬಳಸಿಕೊಂಡಂಥವರ ಹಿತಕ್ಕಾಗಿ ಮಾರ್ಪಡಿಸಲು ದೇವರು ಸಮರ್ಥನಾಗಿದ್ದನೆಂಬುದಕ್ಕಾಗಿರುವದು.

ಕೀರ್ತನೆಯ ಮೊದಲ ಮೂರು ವಚನಗಳು ತನ್ನ ಪಾಪದ ಬಗ್ಗೆ ದಾವೀದನಿಗಾದ ಮನವರಿಕೆ ಹಾಗು ದೇವರ ಮೇಲಿನ ಆತನ ಭರವಸೆ ಮತ್ತು ತನ್ನ ಬಲಹೀನತೆಗಳಿಗಾಗಿ ತಾನು ಯಾವುದೇ ತಪ್ಪೊಪ್ಪಿಗೆ ಪ್ರಯತ್ನಿಸದ್ದಿದ್ದನ್ನು ವ್ಯಕ್ತಪಡಿಸುತ್ತವೆ. ಆತನು ದೇವರ ಮೇಲೆ ಭರವಸವಿಟ್ಟು ಆತನಿಗೆ ಯಾವುದೇ ವಿನಾಯಿತಿಗಳನ್ನು ತನಗೆ ನೀಡಲು ಸಾಧ್ಯವೋ ಅವುಗಳನ್ನು ನೀಡಲು ಆತನು ಕೇವಲ ಆತನ ದಿವ್ಯ **"ಪ್ರೀತಿಕರುಣೆ"** ಇವುಗಳಿಗಾಗಿ ವಿನಂತಿಸಿಕೊಂಡಿದ್ದನು. ದೇವರ ಹಿಂದಿನ ಅಸಂಖ್ಯವಾದ ಪ್ರೀತಿಕೃಪೆಗಳನ್ನು ತಾನು ನೆನಪಿಗೆ ತಂದುಕೊಂಡವನಾಗಿ ದೇವರು ಕೆಲವೊಂದು ವಿಧದಲ್ಲಿ ಈ ಹಾನಿಕರವಾದ ಅಪರಾಧಗಳನ್ನು ಅಳಿಸಿಬಿಟ್ಟು ಅವುಗಳನ್ನು ಕ್ಷಮಿಸುವನೆಂಬುದರ ಬಗ್ಗೆ ಆತನು [ದೇವರಲ್ಲಿ] ವಿಶ್ವಾಸ ಹಾಗು ಭರವಸೆಗಳನ್ನು ವ್ಯಕ್ತಪಡಿಸಿದ್ದನು. ದೇವರು ನ್ಯಾಯವಂತನಾಗಿದ್ದು ಪಾಪಿಗಳನ್ನು ಹೇಗೆ ನೀತಿವಂತರೆಂದು ನಿರ್ಣಯಿಸಲು ತನಗೆ ಸಾಧ್ಯವೆಂಬುದರ ಬಗ್ಗೆ ಇನ್ನೂ ಸ್ಪಷ್ಟವಾಗಿ ನಿರೂಪಿಸಿರಲಿಲ್ಲ. ದೋಷಪರಿಹಾರ ದಿನದ ಯಜ್ಞಾರ್ಪಣೆಯ ಛಾಯೆಗಳ ಮೂಲಕವಾಗಿ ತಾನು ತನ್ನದೇ ಆದ ಕೆಲವು ವಿಧಾನದಲ್ಲಿ ಸೂಕ್ತ ಸಮಯದಲ್ಲಿ ಪಾಪಪ್ರಜ್ಞೆಯುಳ್ಳವರಾಗಿ ಪಶ್ಚಾತಾಪಪಟ್ಟವರು ಶುದ್ಧೀಕರಿಸಲ್ಪಡುವರೆಂಬುದನ್ನು ಕೇವಲ ಅಸ್ಪಷ್ಟವಾಗಿ ತಿಳಿಸಿದ್ದನು. ದಾವೀದನು ಕರುಣೆಯೆಂಬ ಭಾವನೆಯನ್ನು ಧರ್ಮಶಾಸ್ತ್ರದಲ್ಲಿನ ಛಾಯಾರೂಪಗಳ ಮೂಲಕವಾಗಿ ಅರ್ಥೈಸಿರುವದನ್ನು ಗ್ರಹಿಸಿಕೊಂಡವನಾಗಿದ್ದನು; ಮತ್ತು ಮಕ್ಕಳ ಮನೆತನದವರಾದ ನಾವು ತಂದೆಯು ನೀಡುವ ಕ್ಷಮಾಪಣೆ ಬಗ್ಗೆ–ಅದು ಕರ್ತನಾದ ಯೇಸು ಕ್ರಿಸ್ತನಿಂದ ನಮಗೆ ಪ್ರಯೋಗಿಸಿರುವದನ್ನು ಕಂಡುಕೊಂಡಾಗ, ಇದನ್ನು ಇನ್ನೂ ಹೆಚ್ಚಾಗಿ ನಾವು ಗ್ರಹಿಸಿಕೊಳ್ಳಬಹುದು; ಕರ್ತನಾದ ಯೇಸು ಕ್ರಿಸ್ತನು ಈಗಾಗಲೇ ಎಲ್ಲರಿಗೋಸ್ಕರವಾಗಿ ತನ್ನನ್ನು ಒಂದು ಈಡಾಗಿ ಅರ್ಪಿಸಿಕೊಟ್ಟಿದ್ದು, ಅದನ್ನು ಕ್ಲುಪ್ತಕಾಲದಲ್ಲಿ ಎಲ್ಲರಿಗೂ ಸಾಕ್ಷಿಗಾಗಿ ಸಾರಲಾಗಬೇಕಿರುವದು. ಈ ಈಡುಬಲಿಯನ್ನು ತಂದೆಯು ಅಂಗೀಕರಿಸಿಕೊಂಡದ್ದನ್ನು ನಮ್ಮ ಕರ್ತನನ್ನು ಮರಣದಿಂದ ಎಬ್ಬಿಸಿದ್ದರಲ್ಲಿ ಮತ್ತು ಪಂಚಾಶತ್ತಮದ ದಿನದಂದು ಪವಿತ್ರಾತ್ಮನು ಇಳಿದು ಬಂದದ್ದರಲ್ಲಿ ತೋರ್ಪಡಿಸಲಾಗಿರುವದು. ಹೀಗಿರಲಾಗಿ ದಾವೀದನು ಪಾಪಗಳ ನಿವಾರಣೆಯ ಸಲುವಾಗಿ ದೇವರ ಪ್ರೀತಿಕರುಣೆ ಮತ್ತು ಕೃಪಾನುಗ್ರಹಗಳನ್ನು ಪಡೆಯುವ ಕಾರಣಕ್ಕಾಗಿ ದೇವರಲ್ಲಿ ಭರವಸವಿಡಲು ಆತನಿಗೆ ಸಾಧ್ಯವಾಗಿರುವಲ್ಲಿ, ಮಕ್ಕಳ ಮನೆತನದ ಸದಸ್ಯರಾದ ನಾವು ದೇವ ಗುಣಸ್ವಭಾವದಲ್ಲಿ ಹಾಗು ಪಾಪವಿಮೋಚನೆಯ ಯೋಜನೆಯಲ್ಲಿ ಪೂರ್ಣವಾಗಿ ವಿಶ್ವಾಸವನ್ನಿಡಲು [ಅಭ್ಯಾಸಿಸಲು] ಸಮರ್ಥರಿರಬೇಕು.

ನಾಲ್ಕನೆಯ ವಚನವು ಜೊತೆ ಸೃಷ್ಟಿಗಳಿಗೆ ತಪ್ಪುಮಾಡಿದ್ದ ಅಂಶವನ್ನು ನಿರ್ಲಕ್ಷಿಸಿದಂತೆ ತೋರುವದು, ಆದರೆ ನಾವು ಅರ್ಥಮಾಡಿಕೊಳ್ಳಲು ಇಷ್ಟಪಡುವದೇನಂದರೆ ಜೊತೆ ಸೃಷ್ಟಿಗಳಿಗೆ ಮಾಡಿದ ಈ ತಪ್ಪನ್ನು ಅರಸನಿಂದ ಗ್ರಹಿಸಲ್ಪಟ್ಟಿದ್ದು, ಆತನು ದೇವರ ಕಡೆಗೆ ಇರುವಂಥ ಇನ್ನೂ ಒಂದು ಉನ್ನತವಾದ ಹೊಣೆಗಾರಿಕೆಯನ್ನು ಗುರುತಿಸಿಕೊಂಡವನಾಗಿದ್ದನು; ದೇವರ ಆಜ್ಞಾವಿಧಿಗಳನ್ನು ಆತನು ಭಗ್ನಪಡಿಸಿದ್ದನಲ್ಲದೆ ಕ್ರಿಸ್ತನ ಅರಸುತನಕ್ಕೆ ಛಾಯಾರೂಪವಾಗಿರುವ ತನ್ನ ಅರಸುತನದ ಕಾರ್ಯಸ್ಥಾನಕ್ಕೆ ಆತನು ಅವಮಾನಮಾಡಿದ್ದನು. ಹೀಗಾಗಿ ಮನುಷ್ಯನಿಗೆ ವಿರುದ್ಧವಾಗಿ ತಾನು ಮಾಡಿದ ಅಪರಾಧ ಬಗ್ಗೆ ಮನುಷ್ಯನು ಏನು ಅಲೋಚಿಸಬಹುದೆಂಬುದಕ್ಕೆ ಪ್ರತಿಯಾಗಿ ದೇವರಿಗೆ ವಿರುದ್ಧವಾಗಿ ತಾನು ಮಾಡಿದ ಪಾಪದ ಬಗ್ಗೆ ಇದ್ದ ಇನ್ನೂ ಉನ್ನತವಾದ ಪಾಪಪ್ರಜ್ಞೆ, ಇವುಗಳಲ್ಲಿ ಎರಡನೆಯ ಸಂಗತಿಯು ದೊಡ್ಡದಾಗಿ ಕಂಡುಬಂದಿದ್ದು ಇದು ಕಾರ್ಯತಃ ಮೊದಲ ಸಂಗತಿಯನ್ನು ಮಸುಕುಗೊಳಿಸಿದಂತೆ ತೋರುತ್ತದೆ. ಸರ್ವಶಕ್ತನಿಗೆ ವಿರುದ್ಧವಾದ ಪಾಪವು ಮಾನವ ಕುಲಕ್ಕೆ ಮಾಡಿದ ತಪ್ಪನ್ನು ಹಿಂದಕ್ಕೆ ಸರಿಸುತ್ತದೆ. ದೇವರು ಮಹಾ ನ್ಯಾಯಾಧಿಪತಿಯಾಗಿದ್ದು ಆತನ ನ್ಯಾಯತೀರ್ಪು ಯಾವುದಿದ್ದರೂ ಅದು ಸರಿಯಾಗಿಯೇ ಇರುತ್ತದೆಂಬ ಅಂಶವನ್ನು ತಾನು ಮುಂದಾಗಿ ತಿಳಿದುಕೊಂಡಿರುವದಾಗಿ ದಾವೀದನು ಪ್ರಕಟಮಾಡಿ ಹೇಳಿರುವನು.

ಐದನೇ ವಚನದಲ್ಲಿ ಆತನು [ತೀವ್ರತೆಯನ್ನು] ಹಗುರ ಗೊಳಿಸುವಂಥ ಒಂದು ಆಲೋಚನೆಯನ್ನು ಪರಿಚಯಿಸಿರುವನು; ಹೇಗಂದರೆ ಅದು ತಾನು ಪಾಪದಲ್ಲಿ ಹುಟ್ಟಿರುವದಾಗಿಯೂ ಮತ್ತು ಹೀಗಾಗಿ ತನಗೆ ಪರಿಪೂರ್ಣನಾಗಿರುವಂಥದ್ದು ಸಾಧ್ಯವಿಲ್ಲ–ವೆನ್ನುವದನ್ನು ದೇವರಿಗೆ ಜ್ಞಾಪಿಸಿರುವಂತಿರುವದು. ಆದರೆ ಆತನು ಈ ಅಂಶವನ್ನು ತನ್ನ ಸ್ವಂತ ಹೊಣೆಗಾರಿಕೆಯನ್ನು ಮರೆಮಾಡುವ ತೆರೆಯಂತೆ ಬಳಸಿಕೊಂಡಿರುವದಿಲ್ಲ. ಸ್ವಭಾವಸಿದ್ಧವಾಗಿ ಒಬ್ಬ ಪಾಪಿಯಾಗಿದ್ದರೂ ಮುಕ್ತವಾಗಿ ಇಚ್ಛಿಸಲು ಸ್ವಾತಂತ್ರ್ಯವುಳ್ಳವ–ನಾಗಿದ್ದ ಈತನು ತಾನು ಶೋಧನೆಯಲ್ಲಿ ಬಿದ್ದುಹೋದಂತೆಯೇ, ಅದಕ್ಕೆ ಹೊಣೆಗಾರನಾಗುವ ಅಗತ್ಯತೆಯೂ ಉಳ್ಳವನಾಗಿದ್ದನು; ಆದರೂ ಉಪಶಮನ ನೀಡುವಂಥ ಪ್ರತಿಯೊಂದು ಸನ್ನಿವೇಶದ ಪ್ರಯೋಜನವನ್ನು ದೇವರು ತನಗೆ ದಯಪಾಲಿಸುವನೆಂಬುದರಲ್ಲಿ ಆತ್ಮವಿಶ್ವಾಸವುಳ್ಳವನಾಗಿದ್ದನು.

ದಾವೀದನು ತನ್ನ ಪಾಪಗಳಿಗಾಗಿ ದೇವರಿಂದ ಶಿಕ್ಷೆಯನ್ನು ಹೊಂದುವ ನಿರೀಕ್ಷೆಯಲ್ಲಿದ್ದವನಾಗಿದ್ದು, ಉಚಿತವಲ್ಲದ ಯಾವ ಶಿಕ್ಷೆಯನ್ನೂ ಆತನು ಇಲ್ಲಿ ತನ್ನ ಮೇಲೆ ಬರಮಾಡುವದಿಲ್ಲವೆಂದು ಹಾಗು ಅದು ನ್ಯಾಯಬದ್ಧತೆಯ ಮಿತಿಯಲ್ಲಿ ಇರುವದು ಎನ್ನುವದರ ಬಗ್ಗೆ ತಾನು ವಿಶ್ವಾಸವುಳ್ಳವನಾಗಿರುವನೆಂಬುದನ್ನು ಆತನು ವ್ಯಕ್ತಪಡಿಸಿರುವದನ್ನು ಗಮನಿಸಲಾಗುವದು. ಆತನು ಈ ಕೀರ್ತನೆಯಲ್ಲಿ ಪ್ರಾರ್ಥಿಸಿರುವದೇನಂದರೆ ಅದು ಸೂಕ್ತವಾದ ಶಿಕ್ಷೆಯನ್ನು ಮನ್ನಮಾಡುವ ಸಲುವಾಗಿರದೆ, ಇದಕ್ಕಿಂತಲೂ ಹೆಚ್ಚಾಗಿ ಅದು ದೇವರ ದೃಷ್ಟಿಯಲ್ಲಿ ತನ್ನ ಹೃದಯವು ಶುದ್ಧೀಕರಿಸಲ್ಪಟ್ಟು ದೇವಾನುಗ್ರಹವು ಹಿಂತಿರುಗಿಸಲ್ಪಡಬೇಕಾಗಿ ಇತ್ತೆನ್ನುವಂಥದ್ದೇ. ವಾಸ್ತವದಲ್ಲಿ ದೇವರು ಅರಸನಿಗೆ ಕಠಿಣವಾದ ಶಿಕ್ಷೆಯನ್ನು ವಿಧಿಸಿರಲಿಲ್ಲ ಅಲ್ಲದೆ ಆ ಪಾಪಿಯನ್ನು ತನ್ನ ಕೃಪಾನುಗ್ರಹಕ್ಕೆ ಮತ್ತೆ ಕರತಂದು ಅವನು ರಕ್ಷಣಾನಂದವನ್ನು ತಿರಿಗಿ ಅನುಭವಿಸುವಂತೆ ಮಾಡಿದ್ದನು. ಆತನ ಕಾಲದಲ್ಲಿನ ಇತರ ಅರಸರ ಮನೋಭಾವದ ಅನುಸಾರ ಆತನು ಇಸ್ರಾಯೇಲ್ ಜನರಿಂದ ಒಪ್ಪಿಕೊಳ್ಳಲ್ಪಟ್ಟದ್ದು ಸ್ಪಷ್ಟವಾಗಿತ್ತು. ಯಾಕೆಂದರೆ ದಾವೀದನು ಪಾಪದ ಮಾರ್ಗದಲ್ಲಿ ಬಹು ಅತಿರೇಕವಲ್ಲದ ವಿಧಾನವನ್ನು ಅನುಸರಿಸಿದ್ದು ಇದರಲ್ಲಿ ಆತನು ನೇರವಾಗಿ ಊರಿಯನ ಪ್ರಾಣಹರಣಮಾಡದೆ ಯುದ್ಧದಲ್ಲಿ ಆತನಿಗೆ ಮರಣವುಂಟಾಗುವಂತೆ ಒಳಸಂಚುಮಾಡಿದ್ದನು. ಆದರೆ ದೇವರು ಇದಕ್ಕಿಂತಲೂ ಆಳವಾಗಿ ನೋಡುತ್ತಿದ್ದು ನೀತಿಸತ್ಯತೆಗಳು ಆಂತರ್ಯದಲ್ಲಿ ಅಂದರೆ ಹೃದಯದಲ್ಲಿ ಇರುವದನ್ನು ನೋಡುತ್ತಿರುವನೆಂಬ ಅಂಶವನ್ನು ಅರಸನು ಮನವರಿಕೆಮಾಡಿ–ಕೊಂಡಿದ್ದನು. ಬಾಹ್ಯವಾಗಿ ನಡೆಸುವ ಅಪರಾಧವು ಹಾಗು ಮನಸ್ಸಿನೊಳಗೆ ಎಡೆಗೊಡುವ ಒಂದು ಅಪರಾಧವು ದೇವರ ದೃಷ್ಟಿಯಲ್ಲಿ ಒಂದೇ ರೀತಿಯಲ್ಲಿ ಹೇಯವಾಗಿರುವವು; ಅರಸನಿಗಾದ ತನ್ನ ಅನುಭವವು ಜ್ಞಾನವಿವೇಕವನ್ನು ಕಲಿಸಿಕೊಟ್ಟಿತ್ತು. ಈಗ ಆತನು ಸಂಪೂರ್ಣವಾಗಿ ನಿರ್ಮಲನಾಗಿರಲು ಆಶಿಸಿದ್ದನು ಅಲ್ಲದೆ ಇದನ್ನು ಕಾವ್ಯರೂಪದಲ್ಲಿ ಹೀಗೆ ಹೇಳಿದ್ದಾನೆ: "ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮಕಿಸಿಯೋ ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದುಬಿಡು; ಆಗ ಶುದ್ಧನಾಗಿರುವೆನು; ನನ್ನನ್ನು ತೊಳೆ ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು." [ಕೀರ್ತನೆ 51:7] ಹಿಸ್ಸೋಪ್ ಗಿಡವನ್ನು ಧರ್ಮಶಾಸ್ತ್ರದ ಅನುಸಾರ ಮನಲಿನವಾದವರ ಮೇಲೆ ಚಿಮಕಿಸಲು ಉಪಯೋಗಿಸಲಾಗುತ್ತಿತ್ತು. ದಾವೀದನು ಕೆಲವು ಮಟ್ಟಿಗೆ ಈ ಸಂಕೇತದ ಮಹತ್ವವನ್ನು ಗ್ರಹಿಸಿಕೊಂಡವನಾಗಿ ನಿಜರೂಪದಲ್ಲಿನ ಹೃದಯದ ಶುಚಿಗೊಳಿಸುವಿಕೆಯನ್ನು ಬಯಸಿದ್ದನು. ಪಾಪದ ಬಗ್ಗೆ ವ್ಯವಹರಿಸುವಲ್ಲಿ ದೇವರ ಸೂಕ್ಷ್ಮತೆ ಹಾಗು ಕ್ಷಮಾಪಣೆಯಲ್ಲಿ ತೋರಿಬರುವ ಆತನ ಕರುಣೆಯ ಬಗ್ಗೆ ದಾವೀದನಿಗಾದ ಮನವರಿಕೆಯು ಇನ್ನೂ ಹೆಚ್ಚು ಅನುಗ್ರಹಿತರಾದ "ಮಕ್ಕಳ ಮನೆತನದಲ್ಲಿನ" ಕೆಲವರಿಗೆ ಒಳ್ಳೆ ಪಾಠಗಳಾಗಿರುವುದು. ಈ ಎರಡನೆಯ ಗುಂಪಿನವರಾದ ಅನೇಕರು ನಮ್ಮ ಕರ್ತನಾದ ಯೇಸುವು ಮಾಡಿದ ಆ ಮಹಾ ದೋಷಪರಿಹಾರ ಕಾರ್ಯವನ್ನು "ಮನೋ ನೇತ್ರದ [ಅಂದರೆ ವಿಶ್ವಾಸದ ಕಣ್ಣುಗಳ] ಮೂಲಕವಾಗಿ ಕಂಡವರಾಗಿದ್ದರೂ ಆತನ ಯಜ್ಞಫಲವು ತಮ್ಮನ್ನು ಸಮಸ್ತ ಪಾಪಗಳಿಂದ ಶುದ್ಧೀಕರಿಸಿ ತಮ್ಮನ್ನು ಸಂಪೂರ್ಣರನ್ನಾಗಿಸಲು ಸಮರ್ಪಕವಾಗಿದ್ದು ನಾವು ತಂದೆಯ ದೃಷ್ಟಿಯಲ್ಲಿ ಪರಿಪೂರ್ಣವಾಗಿ ಶುದ್ಧಮಾಡಲ್ಪಟ್ಟವರಂತೆ ಗುರುತಿಸಲ್ಪಟ್ಟಿದ್ದು, ಇದರ ಅನುಸಾರವಾಗಿ ಆತನು ನಮ್ಮೊಂದಿಗೆ ಪಾಪಿಗಳೊಡನೆ–ಯಂತಲ್ಲ ಆದರೆ ಮಕ್ಕಳೊಡನೆಯಂತೆ ನಡಕೊಳ್ಳುವನೆಂಬ ಅಂಶವನ್ನು ಮನವರಿಕೆ ಮಾಡಿಕೊಳ್ಳಲು ಈಗಲೂ ಅವರು ಅಸಮರ್ಥರಾಗಿರುವರು.

ವಚನ ಎಂಟರಲ್ಲಿ ಹೇಳಿರುವದರ ಮೂಲಕವಾಗಿ ನಾವು ವಿವೇಚನಾಯುಕ್ತರಾಗಿ ಊಹಿಸಬಹುದಾದುದ್ದೇನಂದರೆ ಹೀಗೆ ಪಶ್ಚಾತಾಪಪಡುವದಕ್ಕೆ ಹಿಂದಿನ ವರುಷಗಳಲ್ಲಿ ಅರಸನಾದ ದಾವೀದನು ಮಾನಸಿಕವಾಗಿ ಬಹು ಚಿಂತಾಜನಕ ಸ್ಥಿತಿಯಲ್ಲಿದ್ದು ಗಾಯಕರ ಸಂಗೀತವೂ ಹಾಗು ನುರಿತ ಸಂಗೀತಗಾರರ ಕಿನ್ನರಿ ಗಾಯನವು ಅಲ್ಲದೆ ಪ್ರಕೃತಿಯ ಬಗೆಗಿನ ಹರ್ಷಭರಿತವಾದ ಹಾಡುಗಳು ಸಹ ಆತನ ಹೃದಯಕ್ಕೆ ಬೇನೆಯಾಗಿ ಪರಿಣಮಿಸಿದ್ದು ಆತನ ಹೃದಯವು ದೇವರ ಸನ್ನಿಧಿಯಿಂದ ಮತ್ತು ಅನ್ಯೋನ್ಯತೆಯಿಂದ ಬಹಿಷ್ಕೃತವಾಗಿರಲು ಅದರಲ್ಲಿ ಸಂತೈಸಿ ಹರ್ಷಪಡಿಸುವಂಥದ್ದೇನೂ ಇರಲಿಲ್ಲ. ದೇವರ ಅನುಗ್ರಹವೆಂಬ ಜ್ಯೋತಿಯನ್ನು ಅನುಭವಿಸಿ ಹರ್ಷಿಸುವ ಸಂಬಂಧದ ನಮ್ಮ ಈ ಕಳಗಿನ ಸಂಗೀತದ ಅಭಿಪ್ರಾಯವು ಹೀಗಿರುವದು:–

'ಮಧುರತೆಯ ಭರವಸೆಗಳು, ಮಧುರ ಸ್ವರದ ಪಕ್ಷಿಗಳು ಅಲ್ಲದೆ
ಪರಿಮಳಿಸುವ ಹೂವುಗಳು
ಎಲ್ಲವೂ ನನಗೆ ಹೊಸ ಸುಮಧುರತೆಯನ್ನು
ತಂದುಕೊಟ್ಟಿರುವವು;
ಆತನ ಸನ್ನಿಧಿಯು ಸಕಲ ವ್ಯಥೆಯನ್ನು ಚದುರಿಸುತ್ತದೆ,
ಮತ್ತು ಎಲ್ಲವೂ ನನ್ನೊಳಗೆ ಸಂತೋಷಕೊಡುತ್ತವೆ;...
ನಾನು ಆತನಲ್ಲಿ ಬಹು ಸಂತೋಷದಿಂದಿರಲು,
ಡಿಸೆಂಬರ್ ತಿಂಗಳು ಮೇ ತಿಂಗಳಿನಷ್ಟು
ಆನಂದಕರವಾಗಿಸುವದು."

ಅರಸನಾದ ದಾವೀದನು ತಾನು ಗತಿಸಿದ ಕಾಲಗಳಲ್ಲಿ ಪಟ್ಟ ಹರ್ಷಾನಂದಗಳಿಗಾಗಿ ಪರಿತಪಿಸುತ್ತಿದ್ದು, ಸಾಂಕೇತಿಕವಾಗಿ ತನ್ನನ್ನು ತಾನು ಮೂಳೆಗಳು ಮುರಿಯಲ್ಪಟ್ಟಂಥವನಿಗೆ ಹೋಲಿಸಿಕೊಂಡಿರುವನು. ದೇವರ ಅನುಗ್ರಹವು ಮತ್ತೆ ಪಡಕೊಳ್ಳಲು ಸಾಧ್ಯವಾದಲ್ಲಿ ತನ್ನ ಸಂತೋಷ ಆದರಣೆಗಳು ಹಿಂದಿರುಗುವವೆಂಬುದು ಆತನಿಗೆ ತಿಳಿದಿತ್ತು. ರಿಯಾಯಿತಿ–ಗಳೊಡನೆ ಪಾಪಗಳನ್ನು ಕಾಣಲು ದೇವರಿಗೆ ಸಾಧ್ಯವಿಲ್ಲವೆಂಬುದು ಸಹ ಆತನಿಗೆ ತಿಳಿದಿತ್ತು. ಆದ್ದರಿಂದ ಆತನ ಪ್ರಾರ್ಥನೆಯು ಹೀಗಿತ್ತು–"ನನ್ನ ದೋಷಕ್ಕೆ ವಿಮುಖನಾಗು; ನನ್ನ ಪಾಪಗಳನ್ನೆಲ್ಲಾ [ಅನೀತಿಯನ್ನೆಲ್ಲಾ] ಅಳಿಸಿಬಿಡು. ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು. ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ. ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧಮನಸನ್ನು ಹುಟ್ಟಿಸಿ ನನಗೆ ಆಧಾರನಾಗು."

ಯಾವ ನಿಜ ಕ್ರೈಸ್ತನಿಗೂ ಒಂದು ಗಾಢವಾದ ಅನುಕಂಪ ಹಾಗು ವಿಭಿನ್ನ ಅಭಿವ್ಯಕ್ತಭಾವದಿಂದಲ್ಲದೆ ಈ ವಚನಗಳನ್ನು

ಓದಲು ಸಾಧ್ಯವಿರುವದಿಲ್ಲ; ಕ್ರಿಸ್ತ ಯೇಸುವಿನಲ್ಲಿ ನೂತನ ಸೃಷ್ಟಿಗಳಾದಾಗ್ಯೂ ಸಹ ನಮಗೆ ದಾವೀದನ ಹೃದಯದ ಮೇಲೆ ಹೊರಿಸಿದ ಇಂಥಾ ಭೀಕರ ಪಾಪದ ಅನುಭವವಾಗಿರುವದಿಲ್ಲ, ಹೀಗಿದ್ದರೂ "ಹೊಸ ಆಜ್ಞೆಯ" ಅಡಿಯಲ್ಲಿನ ಪಾಪದ ವಿಷಯದಲ್ಲಿನ ನಮ್ಮ ಉನ್ನತ ಹೊಣೆಗಾರಿಕೆ ಮತ್ತು ಉನ್ನತ ಪರಿಕಲ್ಪನೆ, ಹಾಗು ದೇವರ ಮಕ್ಕಳಾಗಿ ನಮಗಿರುವ ಪವಿತ್ರಾತ್ಮನ ಆದೇಶಗಳು ನಮಗೆ ಅದೇ ಸರಿ ಪ್ರಮಾಣದಲ್ಲಿ ಅಪರಾಧ–ಭಾರಗಳ ಅನುಭವವನ್ನುಂಟುಮಾಡಿದ್ದು ಅವು ಲೋಕದ ದೃಷ್ಟಿಯಲ್ಲಿ ಏನು ಅಲ್ಲದಂತೆ ತೋರುತ್ತವೆ. ದೃಷ್ಟಾಂತವಾಗಿ ಹೇಳುವದಾದರೆ ನಾವು ಈಗಷ್ಟೇ ಹೇಳಿದಂತೆ–ಲೋಭ ಹಗೆತನ ದುರ್ಭಾಷೆ ಇವೆಲ್ಲವೂ ನೂತನ ಸೃಷ್ಟಿಗೆ ಸೂಕ್ತವಾದ ಉನ್ನತ ದೈವಿಕ ದೃಷ್ಟಿಕೋನದ ಮೂಲಕವಾಗಿ ಇವು ಕದಿಯುವಿಕೆ ಹಾಗು ಕೊಲೆಗಳಾಗಿರುತ್ತವೆ.

ವಚನ ಹದಿಮೂರರಲ್ಲಿ ಪ್ರವಾದಿಯು ದೈವಾನುಗ್ರಹ ಇಲ್ಲದ್ದರಿಂದಾದ ತನ್ನ ದೊಡ್ಡ ನಿರಾಶೆಯ ಸಂಗತಿಯು ಇತರರಿಗೆ ಬೋಧನಾಂಶವಾಗಿ ಬಳಸಲಾಗುತ್ತದೆಂದು ದೇವರೊಡನೆಗೆ ಪ್ರಸ್ತಾವನೆ ಮಾಡಿರುವನು. ಅದೇನಂದರೆ ಅಪರಾಧಿಗಳಿಗೆ ದೇವರ ಮಾರ್ಗವನ್ನು ತೋರಿಸಿಕೊಟ್ಟು ಪಾಪಿಗಳನ್ನು ತಮ್ಮ ದುಷ್ಟತನದ ಮಾರ್ಗದಿಂದ ತಿರುಗಿಕೊಳ್ಳಲು ತನ್ನ ದೃಷ್ಟಾಂತವನ್ನು ಬಳಸಲಾಗುವದೆಂಬದು. ಎಷ್ಟ ಸೂಕ್ತವಾದುದು ನಮಗೆ ಈ ಆಲೋಚನೆಯು! ನಾವು ಕ್ರಿಸ್ತನ ರಕ್ತದ ಮೇಲಿನ ನಮ್ಮ ನಂಬಿಕೆಯ ಮೂಲಕವಾಗಿ ನಮ್ಮ ಪಾಪಗಳು ತಂದೆಯ ದೃಷ್ಟಿಯಿಂದ ಹೊರಹಾಕಲ್ಪಟ್ಟಿರುವದೆಂದು ಪ್ರಾಯೋಗಿಕವಾಗಿ ತಿಳಿದುಕೊಳ್ಳುವವರೆಗೂ, ನಾವು ಆತನ ರಕ್ಷಣಾನಂದ ಹಾಗು ಪಾಪಕ್ಷಮೆಯ ಅನುಭವವನ್ನು ಹೊಂದುವವರೆಗೂ, ನಾವು ಯಾವುದೇ ವಿಧದಲ್ಲಿ ಸತ್ಯಕ್ಕೆ ಸೇವಕರಾಗಲು ಅಥವಾ ಇತರರಿಗೆ ದೃಷ್ಟಾಂತವಾಗಲು ಆಗಲಾರದು. ಆದುದರಿಂದ ನಾವು ನೋಡುವದೇನಂದರೆ ಪವಿತ್ರಾತ್ಮನಿಂದ ಹುಟ್ಟಿದವರಾಗಿ ಅಭಿಷೇಕಿಸಲ್ಪಟ್ಟವರು ಮಾತ್ರವೇ ಸುವಾರ್ತೆಯನ್ನು ಸಾರಲು ಸಾಧ್ಯವೆಂಬದು. ಇತರರಿಗೆ ದೇವರು ಹೇಳುವದು–"ನನ್ನ ವಿಧಿಗಳನ್ನು ಪಠಿಸುವದಕ್ಕೆ ನಿಮಗೇನು ಬಾಧ್ಯತೆ ಉಂಟು? ನನ್ನ ನಿಬಂಧನೆಯನ್ನು ಉಚ್ಚರಿಸುವುದು ನಿಮಗೇನು ಕೆಲಸ? ನೀವೋ ಸುಶಿಕ್ಷಣವನ್ನು ಹಗೆಮಾಡುತ್ತೀರಲ್ಲಾ; ನನ್ನ ಆಜ್ಞೆಗಳನ್ನು ಉಲ್ಲಂಘಿಸುತ್ತೀರಿ." [ಕೀರ್ತನೆ 50:16–17] ಅಂದರೆ ದೇವರ ಆಜ್ಞಾವಿಧಿಗಳಿಗೆ ಒಳಗಾಗಲು ನಿರಾಕರಿಸುತ್ತೀರಿ ಎಂಬದು.

ಹದಿನಾಲ್ಕನೇ ವಚನವು ಇದೇ ಅಭಿಪ್ರಾಯವನ್ನು ಬೇರೊಂದು ವಿಧದಲ್ಲಿ ಪುನರಾವರ್ತನೆ ಮಾಡುವದು. ದೇವರು ದಾವೀದನನ್ನು ಆತನ ಪಾಪದ ಸಂಬಂಧವಾಗಿ ಆತನ ಪಾಪಪ್ರಜ್ಞೆಯಿಂದ ಬಿಡುಗಡೆಮಾಡಿದ್ದಲ್ಲಿ ಆತನ ನಾಲಿಗೆಯು ಆನಂತರದಲ್ಲಿ ದೇವರ ನೀತಿಯನ್ನು–ದಾವೀದನ ನೀತಿಯನ್ನಲ್ಲ–ದೊಡ್ಡ ಧ್ವನಿಯಿಂದ ಹಾಡುವದು. ಈ ಗೀತೆಯನ್ನು ರಕ್ತದಿಂದ ತೊಳೆಯಲ್ಪಟ್ಟವರೆಲ್ಲರೂ ಹಾಡಬಹುದು: "ಸರ್ವಶಕ್ತನಾದ ದೇವರಾದ ಯೆಹೋವನೇ, ನಿನ್ನ ಮಾರ್ಗಗಳೆಲ್ಲವೂ ಸತ್ಯವೂ ನ್ಯಾಯವೂ ಆಗಿವೆ. ಮನುಷ್ಯರೊಳಗಿಂದ ನಮ್ಮನ್ನು ಕೊಂಡುಕೊಂಡಿ." ನಮ್ಮ ಸ್ವಂತ ನೀತಿಯನ್ನು ಕೊಂಡಾಡುವದಕ್ಕೆ ನಮ್ಮಲ್ಲಿ ಯಾರಿಗೂ ಯಾವ ಅಧಿಕಾರವೂ ಇರುವದಿಲ್ಲ, ಯಾಕಂದರೆ ಅಪೊಸ್ತಲನು ಪ್ರಕಟಮಾಡಿ ಹೇಳಿರುವಂತೆ "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ." ಶುದ್ಧೀಕರಿಸಲ್ಪಟ್ಟವರ ಕಾರ್ಯಭಾರವೇನಂದರೆ ಅದು ತಮ್ಮ ಕಡೆಗಿರುವ ದೇವರ ಕರುಣೆಯನ್ನು ಅಂಗೀಕರಿಸಿಕೊಂಡು, ಆತನ ನೀತಿಯನ್ನು ಕೊಂಡಾಡಿ, ತಮ್ಮ ಅಯೋಗ್ಯತೆಯನ್ನು ಒಪ್ಪಿಕೊಂಡವರಾಗಿ ಇತರರಿಗೆ ಈ ನೀತಿ ಮತ್ತು ಕ್ಷಮೆಯುಳ್ಳ ಬುಗ್ಗೆಯ ಬಗ್ಗೆ ಗುರುತಿಸಿಕೊಳ್ಳಲು ಕರೆನೀಡುವಂಥದ್ದೇ.

"ಕರ್ತನೇ ನನ್ನ ಬಾಯಿ ನಿನ್ನನ್ನು ಸ್ತೋತ್ರಮಾಡುವಂತೆ ನನ್ನ ತುಟಿಗಳನ್ನು ತೆರೆಯಮಾಡು." ಈ ನಿರೂಪಣೆಯು ಅನ್ವಯಮಾಡಿ ಹೇಳುವದೇನಂದರೆ ಮೊದಲು ದೇವರು ತನ್ನ ಕರುಣೆ ಸತ್ಯತೆಯ ಮೂಲಕವಾಗಿ ಅವರ ತುಟಿಗಳನ್ನು ತೆರೆಯದಿದ್ದಲ್ಲಿ ಅವರು ದೇವರ ಗುಣಾತಿಶಯವನ್ನು ಪ್ರಕಟಮಾಡಿ ಇತರರನ್ನು ಕತ್ತಲೆಯಿಂದ ಆತನ ಆಶ್ಚರ್ಯಕರವಾದ ಬೆಳಕಿಗೆ ಕರತರುವಂತಾಗಲು ತಮ್ಮ ಬಾಯನ್ನು ಸೂಕ್ತವಾಗಿ ತೆರೆಯಲು ಯಾರಿಗೂ ಅಪೇಕ್ಷಿಸುವಂಥ ಅಗತ್ಯವಿರುವದಿಲ್ಲವೆಂಬುದು; ಇಲ್ಲವಾದಲ್ಲಿ ಎಲ್ಲಾ ಜನರಿಗೂ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರ ಸಾರುವದನ್ನು ಅಪೇಕ್ಷಿಸುವಂತಾಗಲು ಯಾರಿಗಾದರೂ ಹೇಗೆ ಸಾಧ್ಯ? ಇದೇ ರೀತಿಯಲ್ಲಿ ಇದನ್ನು ಅನ್ವಯಿಸಿ ಹೇಳುವದೇನಂದರೆ ಯಾರೆಲ್ಲರೂ ತಮ್ಮ ಪಾಪಗಳ ಕ್ಷಮೆಯನ್ನು ಹೊಂದಿರುವರೋ ಅವರು ತಮ್ಮದೆಲ್ಲವನ್ನೂ ದೇವರಿಗೆ ಸಂಪೂರ್ಣವಾಗಿ ಪ್ರತಿಷ್ಠೆಮಾಡುವಂಥ ಆತ್ಮಿಕ ಸ್ಥಿತಿಯುಳ್ಳವರಾಗಬೇಕಿದ್ದು ಆನಂತರದಲ್ಲಿ ಅಂಥವರು ಇತರರ ಶಿಕ್ಷಣಾರ್ಥವಾಗಿ ಹಾಗು ಆಶೀರ್ವಾದಕ್ಕಾಗಿ ದೇವರ ಸತ್ಯತೆ ಹಾಗು ಕೃಪೆಯ ಕುರಿತಾದ ಸಂದೇಶವು ತಮ್ಮಿಂದ ಹೊರಡುವಂತೆ ತಮ್ಮ ತುಟಿಗಳ ಮುದ್ರೆಯು ತೆರೆಯಲ್ಪಡುವದನ್ನು ಅಪೇಕ್ಷಿಸಬಹುದು. ಇದನ್ನು ಹೀಗೆ ಬರೆಯಲಾಗಿರುವದು: "ದೇವಾನುಗ್ರಹವು ಯಾವಾಗಲೂ ನಿನ್ನ ಮೇಲಿದೆ ಎಂಬುದು ನಿನ್ನ ಬಾಯ ಮಾತುಗಳಿಂದ ಸ್ಪಷ್ಟವಾಗುತ್ತದೆ." [ಕೀರ್ತನೆ 45:5] "ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ, ಅದು ನಮ್ಮ ದೇವರ ಸ್ತೋತ್ರವೇ [ಪ್ರೀತಿಕೃಪೆಗಳೇ]." [ಕೀರ್ತನೆ 40:3] ಇದು ವಿಷೇಶವಾಗಿ ನಮ್ಮ ಪ್ರಿಯ ವಿಮೋಚಕನಿಗೆ ಸೂಕ್ತವಾದು–ದಾದರೂ, ಅದು "ಆತನ ದೇಹವಾಗಿರುವ ಸಭೆಯ" ಪ್ರತಿಯೊಬ್ಬ ಸದಸ್ಯನಿಗೂ ಸಹ ಸೂಕ್ತವಾಗಿರುವದು, ಅಂದರೆ "[ಕ್ರಿಸ್ತನ] ದೇಹಕ್ಕೆ ಸಂಬಂಧಿಸಿದವರೆಂದು" ಹೇಳಿಕೊಂಡವರಾಗಿ ತಮಗೆ ದೊರೆಯಲಾದ ಅವಕಾಶದ ಮಟ್ಟಿಗೆ ದೇವರನ್ನು ಒಪ್ಪಿಕೊಳ್ಳುವ ಸಲುವಾಗಿ ಎಂದೂ ತೆರೆಯಲ್ಪಡದ ತುಟಿಗಳನ್ನು ಹೊಂದಿರುವಂಥವರೆಲ್ಲರೂ ತಮಗೆ ದೇವರ ಸಂಬಂಧದಲ್ಲಿ ಇರುವದೆಲ್ಲದರ ವಿಷಯವಾಗಿ ಪ್ರಶ್ನಿಸಿಕೊಳ್ಳುವದಕ್ಕೆ ಸೂಕ್ತವಾದ ಕಾರಣಗಳಿರುವವು.

ವಚನ 16ರಲ್ಲಿ ಮತ್ತೆ 17ರಲ್ಲಿ ಅರಸನು ಕೆಲವು ಛಾಯಾರೂಪದ ಯಜ್ಞಗಳ ಅರ್ಥದ ಬಗ್ಗೆ ತಾನು ಒಂದು ಆಳವಾದ ಒಳನೋಟಯನ್ನು ಪಡಕೊಂಡಿರುವದಾಗಿ ತೋರಿಸಿಕೊಟ್ಟಿರುವನು; ಆತ್ಮ ಪ್ರೇರಣೆಯ ಮೂಲಕವಾಗಿ ತಾನು

ತಿಳಿದಿರುವದಕ್ಕಿಂತಲೂ ಹೆಚ್ಚಾದ ಬುದ್ಧಿವಂತಿಕೆಯಿಂದ ಆತನು ಬರೆದಿರುವ ಸಂಭವವಿರುವದು. ನಾವು ದೇವದರ್ಶನ ಗುಡಾರದ ಉತ್ತಮ ಯಜ್ಞಗಳ ಛಾಯೆಗಳ (Tabernacle Shadows of Better Sacrifices) ವಿಷಯದಲ್ಲಿ ಮಾಡುವ ಅಧ್ಯಯನದಲ್ಲಿ ನಾವು ನೋಡುವದೇನಂದರೆ ಕೇವಲ ದೋಷಪರಿಹಾರ ಮಹಾದಿನದ ಯಜ್ಞಗಳು ಪಾಪಪರಿಹಾರಕ ಯಜ್ಞಗಳಾಗಿದ್ದು, ವರ್ಷದ ಉಳಿದ ಭಾಗದಲ್ಲಿ ಮಾಡುವ ಸರ್ವಾಂಗ ಹೋಮ, ಸಮಾಧಾನ ಯಜ್ಞಗಳು ದೇವರ ಮತ್ತು ಆತನ ಸೇವೆಗಾಗಿ ಮಾಡಿಕೊಳ್ಳುವ ಪ್ರತಿಷ್ಠೆಯನ್ನು ಸೂಚಿಸುವದೆಂಬದು. ಈ ಆಲೋಚನೆಯನ್ನು ಪ್ರವಾದನೆಯಾಗಿ ಗ್ರಹಿಸಿಕೊಂಡವನಾಗಿದ್ದು, ಎಷ್ಟರ ಮಟ್ಟಿಗೆ ಇದನ್ನು ಬುದ್ಧಿಪೂರ್ವಕವಾಗಿ ತಾನು ಗ್ರಹಿಸಿಕೊಂಡಿರುವನೆಂಬುದನ್ನು ದಾವೀದನು ದೇವರಿಗೆ ನಿಜವಾಗಿಯೂ ಛಾಯಾರೂಪದಲ್ಲಿನ ಯಜ್ಞಹೋಮ–ಗಳಿಗಿಂತಲೂ ಪಶ್ಚಾತಾಪದಿಂದ ಕುಗ್ಗಿದ ಮನಸ್ಸು ಹಾಗು ಜಜ್ಜಿಹೋದ ಹೃದಯವು ದೇವರಿಗೆ ಸಂತೋಷವೆಂಬುದನ್ನು ವ್ಯಕ್ತಪಡಿಸಿರುವನು. ಹೀಗೆಯೇ ಸಹ ನಾವು ಕ್ರಿಸ್ತನಲ್ಲಿ ಅಂಗೀಕರಿಸಲ್ಪಟ್ಟ ನಂತರ ವೊದಲು ನಾವು ನಮಗಿರುವದೆಲ್ಲವನ್ನು–ಅಂದರೆ ನಮ್ಮ ಹೃದಯಗಳನ್ನು ನಮ್ಮ ಮನೋಸಂಕಲ್ಪಗಳನ್ನು–ನಾವು ಆತನಿಗೆ ಅರ್ಪಿಸಿಕೊಡುವ ವರೆಗೂ ಆತನ ದೃಷ್ಟಿಯಲ್ಲಿ ಯಾವದೂ ಬೆಲೆಯಿಲ್ಲದ್ದಾಗಿರಲು, ಯಾವುದನ್ನಾದರೂ ದೇವರಿಗೆ ಅರ್ಪಿಸಲು ನಮಗೆ ಸಾಧ್ಯವಿಲ್ಲವೆಂಬುದನ್ನು ನಾವು ಕಲಿತುಕೊಂಡಿರುತ್ತೇವೆ.

[ಪಶ್ಚಾತಾಪದಿಂದ] ಜಜ್ಜಿಹೋಗಿ ಕುಗ್ಗಿದ ಹೃದಯವನ್ನು ದೇವರು ಎಂದಿಗೂ ತಿರಸ್ಕರಿಸುದಿಲ್ಲ ಧಿಕ್ಕರಿಸುವದೂ ಇಲ್ಲವೆಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟು–ಕೊಳ್ಳೋಣ. ಹೀಗಾಗಿ ದೇವಜನರಲ್ಲಿನ ಯಾವುದೇ ನೂತನ ಸೃಷ್ಟಿಯು ಎಂಥಾ ಸಂಕಷ್ಟದಿಂದ ಮುಗ್ಗರಿಸಿದರೂ, ಅವನು ದೇವರ ಅನ್ಯೋನ್ಯತೆ ಹಾಗು ಕ್ಷಮಾಪಣೆಗಾಗಿ ಬಾಯಾರಿದ–ವನಾಗಿ ತನ್ನ ಹೃದಯವು ಜಜ್ಜಲ್ಪಟ್ಟು ಕುಗ್ಗಿಹೋಗಿರುವದನ್ನು ಕಂಡುಕೊಂಡಲ್ಲಿ ಅವನು ಹತಾಶರಾಗದೇ ಇರಲಿ, ಆದರೆ ದೇವರು ಕ್ರಿಸ್ತನ ಯಜ್ಞಫಲದ ಮೂಲಕವಾಗಿ ಒಂದು ಏರ್ಪಾಟನ್ನು ಮಾಡಿರುವನೆಂಬುದನ್ನು ಅವನು ನೆನಪಿನಲ್ಲಿಟ್ಟುಕೊಳ್ಳಲಿ. ಇದು ಕ್ರಿಸ್ತನ ರಕ್ತದ ಮೇಲಿನ ನಂಬಿಕೆಯ ಮೂಲಕವಾಗಿ ದೇವರ ಬಳಿಗೆ ಬರುವಂಥವರೆಲ್ಲರ ಪಾಪಗಳೆಲ್ಲವೂ ಉಚಿತವಾಗಿ ಪರಿಹರಿಸಲ್ಪಟ್ಟು ಅವರು ನೀತಿವಂತರೆಂಬ ನಿರ್ಣಯವನ್ನು ಹೊಂದಿದವರಾಗಿ ಅಂಗೀಕೃತರಾಗಲು ಅವರನ್ನು ಸಮರ್ಥರನ್ನಾಗಿಸುವದು. ಮರಣಕರವಾದ ಪಾಪವೊಂದುಂಟು ಅಂದರೆ ಅದು ಎರಡನೇ ಮರಣಕ್ಕೆ ಕೊಂಡೊಯ್ಯುವಂಥ ಪಾಪ; ಇದರಿಂದ ಹಿಂದಿರುಗಿ ಬರುವದಾಗಲೀ ಪುನರುದ್ಧಾರವಾಗುವದಾಗಲೀ ಇರುವದಿಲ್ಲ; ಆದರೆ ಯಾರು ತಮ್ಮ ಪಾಪಗಳ ದೆಸೆಯಿಂದ [ಪಶ್ಚಾತಾಪಪಟ್ಟು] ಕುಗ್ಗಿಹೋಗಿ ಜಜ್ಜಿದ ಹೃದಯವನ್ನು [ಮನಸ್ಸನ್ನು] ಹೊಂದಿರುವರೋ ಅಂಥವರು ತಾವು "ಮರಣಕರವಾದ ಪಾಪವನ್ನು" ಮಾಡಿರುವದಿಲ್ಲವೆಂಬುದನ್ನು ತಿಳಿದುಕೊಳ್ಳಲಿ, ಯಾಕಂದರೆ ಅವರ ಹೃದಯದ ಸ್ಥಿತಿಯು ಇದನ್ನು ಪ್ರಮಾಣೀಕರಿಸುತ್ತದೆ, ಅಪೋಸ್ತಲನು ಸಾರಿ ಹೇಳಿರುವಂತೆ: ಯಾವನಾದರೂ ಮರಣಕರವಾದ ಪಾಪವನ್ನು ಮಾಡಿದ್ದರೆ ಅಂದರೆ ಮನಃಪೂರ್ವಕವಾಗಿ ಪೂರ್ಣವಾದ ಜ್ಞಾನದ ಬೆಳಕಿಗೆ ವಿರುದ್ಧವಾಗಿ ಪಾಪವಮಾಡಿದರೆ "ಅವನಲ್ಲಿ ತಿರಿಗಿ ಮಾನಸಾಂತರವನ್ನು ಹುಟ್ಟಿಸುವದು ಅಸಾಧ್ಯ" [ಇಬ್ರೀಯ 6:6]. ಆದುದರಿಂದ ಪಾಪ ಮತ್ತು ಅದರ ದುರಿಚ್ಛೆಗಳನ್ನು ತೆಗೆದಿಟ್ಟು ತನ್ನ ಬಳಿಗೆ ಬರುವಂಥವರನ್ನು ಕ್ರಿಸ್ತನ ಮೂಲಕವಾಗಿ ಅಂದರೆ ಆತನ ಅಂಗೀಕೃತವಾದ ಮಾರ್ಗದ ಮೂಲಕವಾಗಿ ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿರುವ ದೇವರಲ್ಲಿ ಎಲ್ಲರೂ ಆನಂದಿಸುವಂತಾಗಲಿ.

"ಯಾವನಾದರೂ (ಕ್ರೈಸ್ತ ಸಭೆಯಲ್ಲಿನ ಯಾವನಾದರೂ ತನ್ನ ಶಾರೀರಿಕ ಬಲಹೀನತೆ ಹಾಗು ಪರಿಶೋಧನೆಯ ಮೂಲಕವಾಗಿ ಉದ್ದೇಶಪೂರ್ವಕವಲ್ಲದ) ಪಾಪಮಾಡಿದ್ದರೆ ಅವನಿಗೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು [ಅಂದರೆ ಆತನ ಪರವಾಗಿ ವಾದಿಸುವವನು] ಇದ್ದಾನೆ." (1 ಯೋಹಾನ 2:1) ಹೀಗಾಗಿ ಅಂಥವನು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು... ದೊರೆಯುವಂತೆಯೂ ಆತನ ಕೃಪಾಸನದ ಬಳಿಗೆ ನಂಬಿಕೆಯಿಂದ ಬರುವಂಥವನಾಗಲಿ. (ಇಬ್ರೀಯ 4:16) ಆದರೆ ದಾವೀದನಂತೆ ಅವನ ಪ್ರಾರ್ಥನೆ ಮತ್ತು ನಿರೀಕ್ಷೆಗಳು ದೈವಾನುಗ್ರಹವು ಮರಳಿ ಪಡೆಯುವ ಸಲುವಾಗಿರಬೇಕು, ಆದರೆ ಅದು ತಮ್ಮ ತಿದ್ದುಪಾಟಿಗೆ ಅಗತ್ಯವಾಗಿರುವ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿರ–ಬಾರದು. ದೇವರು ದಾವೀದನನ್ನು ಕ್ಷಮಿಸಿದ್ದನಾದರೂ ಸಹ ಆತನನ್ನು ಶಿಕ್ಷಿಸಿದ್ದನು. – 2 ಸಮುವೇಲ 12:11–14.

ಖಂಡಿತವಾಗಿಯೂ ಅರಸನಾದ ದಾವೀದನು ಈ ದುಃಖಾನುಭವದ ಮೂಲಕವಾಗಿ ಒಂದು ಶ್ರೇಷ್ಠವಾದ ಪಾಠವನ್ನು ಕಲಿತುಕೊಂಡಿದ್ದಿರಬೇಕು. ಎಷ್ಟು ಸಮಯ ಆತನು ನಾತಾನನು ಹೇಳಿದ ಸಾಮ್ಯಕ್ಕೆ ತನ್ನ ಪ್ರತಿಕ್ರಿಯೆಯನ್ನು ಅಂದರೆ "ಆ ಮನುಷ್ಯನು ಸಾಯಲೇ ಬೇಕು ಅವನು ಕರುಣೆಯಿಲ್ಲದೆ ಹೀಗೆ ಮಾಡಿದ್ದರಿಂದ ಆ ಕುರಿಮರಿಗಾಗಿ ನಾಲ್ಕರಷ್ಟು ಹಿಂದಕ್ಕೆ ಕೊಡಬೇಕು!" ಎಂಬ ಮಾತನ್ನು ತನ್ನ ನೆನಪಿಗೆ ತಂದುಕೊಂಡಿದ್ದಿರಬೇಕು. ಅಯ್ಯೋ, ಬಡ ದಾವೀದನು! ಈ ಮಾತುಗಳು ಆತನಿಗೆ ಒಂದು ಮನಸ್ಸು ಇತ್ತೆಂದೂ, ಒಂದು ಹೃದಯವಿತ್ತೆಂದೂ, ಅಲ್ಲದೆ ಆತನು ನ್ಯಾಯನೀತಿಗಳ ವಿಷಯದಲ್ಲಿ ಅಪರಿಚಿತನಂತಿರುವದಿಲ್ಲವೆಂದೂ ಹಾಗು ಇತರ ಮನುಷ್ಯರ ಸಂಗತಿಗಳಲ್ಲಿ ಕರುಣೆ ಅನುಕಂಪಗಳನ್ನು ಹೊಂದಿರುವವನೆಂಬುದನ್ನು ತೋರಿಸಿಕೊಡುತ್ತವೆ. ಹೀಗಾಗಿ ಆತನು ನೀತಿನ್ಯಾಯ ಹಾಗು ಅನುಕಂಪಗಳ ಸಂಬಂಧದಲ್ಲಿ ಮಾಡಿದ ಬಹು ಗಂಭೀರವಾದ ಉಲ್ಲಂಘನೆಯ ಬಗ್ಗೆ ತಾನು ಹೆಚ್ಚಾದ ಪಾಪಪ್ರಜ್ಞೆಯುಳ್ಳವನಾಗಿದ್ದನು. "ತಾನು ಒಪ್ಪಿದ ಕೆಲಸದ ವಿಷಯದಲ್ಲಿ ಇದು ಸರಿಯೋ ಸರಿಯಲ್ಲವೋ ಎಂದು ಸಂಶಯ ಪಡದವನೇ ಧನ್ಯನು." – ಅಂದರೆ ಇತರರ ಸಂಗತಿಯ ವಿಷಯದಲ್ಲಿ ತಾನು ಅಪರಾಧಿಯೆಂದು ತಾನೇ ಸಾರಿಕೊಳ್ಳದವನು

ಧನ್ಯನೆಂಬದು. [ರೋಮಾ 14:22] "ನೀವು ಜನರ ತಪ್ಪುಗಳನ್ನು ಕ್ಷಮಿಸದೆ ಹೋದರೆ ನಿಮ್ಮ ತಂದೆಯೂ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ." [ಮತ್ತಾಯ 6:15] ಎಂಬ ನಮ್ಮ ವಿಮೋಚಕನ ಮಾತುಗಳನ್ನು ಓದುವಾಗ, ಓಹ್, ನಾವು ಇತರರ ವೈಫಲ್ಯತೆಗಳ ಬಗ್ಗೆ ಎಷ್ಟು ಅನುಕಂಪವುಳ್ಳವರಾಗಿರಬೇಕು. ಅಲ್ಲದೆ ನಮಗೆ ಹಾನಿಯನ್ನುಂಟುಮಾಡಿ ಮತ್ತೆ ನಮ್ಮ ಅನ್ಯೋನ್ಯತೆಯನ್ನು ಬಯಸುವಂಥವರ ತಪ್ಪುಗಳನ್ನು ನಾವು ಮನಃಪೂರ್ವಕವಾಗಿ ಕ್ಷಮಿಸದೇ ಹೋದಲ್ಲಿ ನಮ್ಮ ಪಾಪಗಳ [ತಪ್ಪುಗಳ] ಕ್ಷಮೆಗಾಗಿ ನಾವು ಪ್ರಾರ್ಥನೆಯನ್ನೂ ಸಹ ಮಾಡುವಂತಿಲ್ಲವೆಂಬುದನ್ನು ನಾವು ಮತ್ತೆ ನೆನಪಿಸಿಕೊಂಡಾಗ ಇತರರು ನಮಗೆ ಮಾಡುವ ತಪ್ಪಿನ ವಿಷಯದಲ್ಲಿ ನಾವು ಎಷ್ಟು ಅನುಕಂಪವುಳ್ಳವರಾಗಿರಬೇಕು!

*****

ದೇವರ ಕ್ಷಮಾಪೂರ್ಣ ಪ್ರೀತಿಯಲ್ಲಿನ ಆನಂದಗಳು

ರೀಪ್ರಿಂಟ್ಸ್ ಪುಟ 3260

ಕೀರ್ತನೆ 32

"ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವನೇ ಧನ್ಯನು"

ಈ ಕೀರ್ತನೆಯು ಅರಸನಾದ ದಾವೀದನು ಊರೀಯನಿಗೆ ವಿರೋಧವಾಗಿ ತಾನು ಮಾಡಿದ ಪಾಪಗಳ ಕ್ಷಮೆಹೊಂದಿದ್ದನ್ನು ಸಂಭ್ರಮೋತ್ಸಾಹದಿಂದ ಅಂಗೀಕರಿಸಿದ ವಿಷಯವಾಗಿರುವದೆಂಬುದನ್ನು ಶೀಘ್ರವಾಗಿ ಗುರುತಿಸಲ್ಪಡು-ವದು. ಮೊದಲನೇ ವಚನವೇ ಇಡೀ ಕೀರ್ತನೆಯ ಮುಖ್ಯ ವಿಷಯವಾಗಿದೆ. ವಚನ 3–5 ಅರಸನು ತಾನು ಮೊದಲು ಆನಂದಿಸುತ್ತಿದ್ದ ದೇವಾನುಗ್ರಹವೆಂಬ ಸೂರ್ಯಪ್ರಕಾಶದ ನಡುವೆ ತಾನು ಮಾಡಿದ ಪಾಪವು ಮೋಡದಂತೆ ಎದ್ದು ಬಂದಿದ್ದಂಥ ಅವಧಿಯಲ್ಲಿನ ಆತನ ಮಾನಸಿಕ ವ್ಯಥೆಯನ್ನು ದಾಖಲಿಸುತ್ತದೆ. ಆತನ ಮನೋವ್ಯಥೆಯು ಸಹಜವಾಗಿಯೇ ಆತನ ಶಾರೀರಿಕ ಆರೋಗ್ಯದ ಮೇಲೆ ಆತನ ಜೀವಿತದ ಕರ್ತವ್ಯಗಳೆಲ್ಲವೂ ಹೊರೆಯಾಗುವಷ್ಟರ ಮಟ್ಟಿಗೆ ಪರಿಣಾಮ ಬೀರಿದ್ದು ಕಾರ್ಯತಃ ಅದರ ಹರ್ಷಾನಂದಗಳೆಲ್ಲವೂ ಅಳಿದುಹೋಗಿದ್ದವು. ಈ ಸಂಗತಿಯಲ್ಲಿ ಅರಸನು ಒಬ್ಬ ಕಠಿನ ಅಪರಾಧಿಯ ಸ್ಥಿತಿಯಿಂದ ಹೊರಗಿದ್ದನೆಂಬುದನ್ನು ನಾವು ಅರಿತುಕೊಳ್ಳುತ್ತೇವೆ. ತಾನು ಪರಿಶೋಧನೆಗೆ ಒಳಗಾಗಿ ನ್ಯಾಯನೀತಿ ಹಾಗು ಸ್ನೇಹ ಸಂಬಂಧದ ಅತಿ ಸರಳವಾದ ಆಜ್ಞಾವಿಧಿಗಳನ್ನು ಉಲ್ಲಂಘಿಸಿ-ದ್ದಾಗ್ಯೂ ಆತನ ಹೃದಯವು ಆಗಲೂ ನ್ಯಾಯದ ಹಾಗು ದೇವರ ಕಡೆಗೆ ಸ್ಥಿರವಾಗಿ ನೆಲೆಗೊಂಡಿತ್ತು. ತಾನು ಮನಃಸ್ಸಾಕ್ಷಿಯ ಪೀಡನೆಗೊಳಗಾಗಿದ್ದು ತನ್ನ ಪ್ರಾಣವು ದೈವಿಕ ಅಸಮ್ಮತಿಯ ಹೊರೆಯ ಅಡಿಯಲ್ಲಿ ಅಸಮಾಧಾನ ಸ್ಥಿತಿಯಲ್ಲಿದ್ದಂಥ ಅಂಶವು ಈ ಸಂಗತಿಯಲ್ಲಿ ನಿರೀಕ್ಷಾದಾಯಕ ಸೂಚನೆಗಳಾಗಿದ್ದವು.

ದಾವೀದನು ಮನಃಪೂರ್ವಕವಾದ ಪಾಪಿಯಲ್ಲದ್ದರಿಂದ, ಆತನು ಹೃದಯಪೂರ್ವಕವಾಗಿ ಪಾಪವನ್ನು ಸಮ್ಮತಿಸಿ ಅದರಲ್ಲಿ ಆನಂದಿಸದೆ, ಆದರೆ ಅದನ್ನು ಅಸಹ್ಯಿಸಿ ಅದಕ್ಕಾಗಿ ದುಃಖಪಟ್ಟದ್ದರಿಂದ ದೇವರು ಬಹು ಕೃಪಾಪೂರ್ಣನಾಗಿ ಆತನ ಸಂಗತಿಗಳನ್ನೆಲ್ಲವನ್ನೂ ಮಾರ್ಗದರ್ಶನಮಾಡಿದ್ದು, ಹೀಗಾಗಿ ಪಾಠವು ಹೆಚ್ಚು ಹೆಚ್ಚಾಗಿ ತೀವ್ರವಾಗುತ್ತಾ ಬಂದು ಕಡೆಯಲ್ಲಿ ಅದನ್ನು ಇನ್ನೂ ದೀರ್ಘವಾಗಿ ಸಹಿಸಲು ಆತನಿಗೆ ಸಾಧ್ಯವಿಲ್ಲದಂತಾಗಿತ್ತು. ಆನಂತರ ಜಿಗುಪ್ಸೆಯೆಂಬ ಹುಣ್ಣು ಪೂರ್ಣವಾಗಿ ಮಾಗಿದಾಗ ದೇವರು ತನ್ನ ಪ್ರವಾದಿಯಾದ ನಾತಾನನ ಮೂಲಕ ಹುಣ್ಣನ್ನು ಹೊರ ಹೊಮ್ಮಿಸಲು ತನ್ನ ಸಂದೇಶವನ್ನು ಕಳುಹಿಸಿದ್ದು, ಆತನ ತೀವ್ರವಾದ ಗದರಿಕೆ ಹಾಗು ಕಠಿಣ ತೀರ್ಪು ಅರಸನ ಭೀಕರವಾದ ಮಾನಸಿಕ ಸಂಕಷ್ಟವು ತುತ್ತ ತುದಿಯನ್ನು ಮುಟ್ಟಿರುವದನ್ನು ಗುರುತುಮಾಡಿದ್ದು, ಮತ್ತು ದೇವರ ಹಾಗು ದೇಶದ ಎದುರಿನಲ್ಲಿ ಅದನ್ನು ಅರಿಕೆಮಾಡುವಂಥ ಸ್ಥಿತಿಗೆ ಆತನನ್ನು ತಂದಿತ್ತು; ಹೀಗೆ ಇದು ಆತನನ್ನು ದೈವ ಕ್ಷಮೆಗಾಗಿ ಹಾಗು ದೇವಾನುಗ್ರಹವು ಹಿಂದಿರುಗಿಸಲ್ಪಡುವದಕ್ಕಾಗಿ ಪ್ರಾರ್ಥಿಸುವಂಥಾ ಸ್ಥಿತಿಗೆ ನಡೆಸಿದ್ದು, ಇಲ್ಲದಿದ್ದಲ್ಲಿ ತನ್ನ ಮನೋವ್ಯಥೆಯು ಮುಂದುವರೆಯುವದೆಂಬುದನ್ನು ತಾನು ಮನಗಂಡವನಾಗಿದ್ದನು.

ಅರಸನ ಪ್ರಾರ್ಥನೆಗಳು ಕೇಳಲ್ಪಟ್ಟಿದ್ದು ದೇವರು ಆತನಿಗೆ ಕೃಪಾಪೂರ್ಣನಾಗಿದ್ದನು; ಆತನ ಅಪರಾಧವು ಕ್ಷಮಿಸಲ್ಪಟ್ಟು ಆತನ ಪಾಪವು ಮರೆಮಾಡಲ್ಪಟ್ಟದ್ದಾಗಿ ಆತನ ಮೇಲಿನ ದ್ರೋಹದ ಆರೋಪಣೆಯು ಇಲ್ಲದಂತಾಗಿತ್ತು; ಕಾರಣ ಆತನ ಹೃದಯವು ಪಶ್ಚಾತಾಪವುಳ್ಳದ್ದಾಗಿದ್ದು ಅದರಲ್ಲಿ ವಂಚನೆಯಿರಲಿಲ್ಲ. ಆತನ ಪಶ್ಚಾತಾಪವು ಪ್ರಾಮಾಣಿಕವಾಗಿದ್ದು ಅದು ಸಮಗ್ರತೆ ಯುಳ್ಳದ್ದಾಗಿಯೂ ಸಂಪೂರ್ಣವಾಗಿಯೂ ಇತ್ತು. ಕೀರ್ತನಾ-ಗಾರನು ತಾನು ನಿಸ್ಸಂದೇಹವಾಗಿ ದೇವ ಮಾರ್ಗದರ್ಶನದ ಮೂಲಕ ದೇವಾನುಗ್ರಹಕ್ಕೆ ಹಿಂದಿರುಗಿಸಲ್ಪಟ್ಟ ಸಂಗತಿಯನ್ನು ಸಂಭ್ರಮೋತ್ಸಾಹದಿಂದ ಹಾಡಿದ್ದು, ಯಾರು ಪಾಪದ ಬಗ್ಗೆ ಪ್ರಾಮಾಣಿಕವಾಗಿ ದುಃಖವುಳ್ಳವರಾಗಿದ್ದು ನಿಜವಾಗಿಯೂ ಪಶ್ಚಾತಾಪಪಟ್ಟವರಾಗಿ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ತಮ್ಮ ವಿಶ್ವಾಸವನ್ನು ಹೊಸದಾಗಿ ಅರಿಕೆಮಾಡುವರೋ ಅಂಥವರಿಗೆ ದೇವರು ಏನು ಮಾಡಲು ಇಚ್ಛಿಸುವನೆಂಬುದಕ್ಕೆ ದಾವೀದನ ಸಂಗತಿಯು ಒಂದು ಮಾದರಿ ಅಥವಾ ನಿದರ್ಶನ-ವಾಗಿರುವದೆಂಬುದನ್ನು ಸೂಚಿಸಲಾಗಿರುವದು. ನಾವು ನಿಸ್ಸಂದೇಹವಾಗಿ ಹೇಳಬಹುದೇನಂದರೆ ದಾವೀದನಿಗಾದ

ಅನುಭವ ಹಾಗು ಈ ಕೀರ್ತನೆಯಲ್ಲಿರುವ ಪಾಠವು, ಅಂದರೆ ದಾವೀದನು ದೇವರೊಡನೆ ಸಾಮರಸ್ಯಕ್ಕೆ ಬಂದವನಾಗಿ ದೇವಾನುಗ್ರಹವು ಆತನ ಕಡೆಗೆ ಕಾರ್ಯಾರಂಭಿಸಿದ ಸಂಗತಿಗಳು ದೇವಜನರಲ್ಲಿ ಸಾವಿರಾರು ಮಂದಿ ಸ್ವತಃ ದಾವೀದನ ರಾಜ್ಯದವರಲ್ಲಿ ಮಾತ್ರವಲ್ಲದೆ ಸಕಲ ಕುಲ ಪ್ರಜೆ ಭಾಷೆ ಜನಾಂಗದವರಲ್ಲಿ ದೇವರ ವಾಕ್ಯದ ಪರಿಚಿತಿಯಿರುವವರಲ್ಲಿಯೂ ನಂಬಿಕೆಯ ವಿಷಯವಾಗಿ ಪ್ರೇರಣೆಮಾಡಿದ್ದು, ಅಲ್ಲದೆ ಇದು ತಮ್ಮ ಶಾರೀರಿಕ ಬಲಹೀನತೆಯ ದೆಸೆಯಿಂದ ಕೀಳಾಗಿ ಕಾಣಲ್ಪಟ್ಟಂಥವರಿಗೆ–ಅಂದರೆ ಕೆಲವರು ಸಾಧ್ಯವಿದ್ದಲ್ಲಿ ದಾವೀದನಿಗಿಂತಲೂ ಹೀನವಾದ ಅಥವಾ ಅದಕ್ಕಿಂತಲೂ ಹೆಚ್ಚಾದ ಪಾಪಗಳನ್ನು ಮಾಡಿದವರಿಗೆ, ಹಾಗೂ ಕೆಲವರು ಜನರ ದೃಷ್ಟಿಯಲ್ಲಿ ದೊಡ್ಡದಲ್ಲದಂಥ ಪಾಪಗಳನ್ನು ಮಾಡಿದ್ದು, ಆದರೆ ಇದು ದೇವರ ದೃಷ್ಟಿಯಲ್ಲಿ ದೊಡ್ಡದಾಗಿದ್ದು, ದೇವರಿಂದ ಪ್ರತ್ಯೇಕಿಸಲ್ಪಡಲು ತಮ್ಮಲ್ಲಿ ಸಾಕಷ್ಟು ಸಂಗತಿಗಳಿರುವಂಥವರಿಗೆ ಇದು ನಂಬಿಕೆಯ ಬಗ್ಗೆ ಸ್ಫೂರ್ತಿನೀಡಿ ಸಮಾಧಾನನೆಮ್ಮದಿಗಳನ್ನು ಉಂಟುಮಾಡಿರುವದು.

ಇದು ಒಂದು ಚಿತ್ರಣ ಅಥವಾ ನಿದರ್ಶನವಾಗಿ ಹೊರ ಲೋಕದಿಂದ ಬಂದು ದೇವರ ಕುಟುಂಬಕ್ಕೆ ಸೇರಲು ಯತ್ನಿಸುವ ಒಬ್ಬ ಪಾಪಿಗೆ ವಿಶೇಷವಾಗಿ ಸಂಬಂಧಿಸಿರುವದಿಲ್ಲ; ವಾಸ್ತವದಲ್ಲಿ ಇದು ಈಗಾಗಲೇ ದೇವಾನುಗ್ರಹವನ್ನು ಅನುಭವಿಸಿದ್ದು ನಂತರದಲ್ಲಿ ಅದನ್ನು ಕಳಕೊಂಡಂಥವನನ್ನು ಅಂದರೆ ಬೆಳಕಿನಿಂದ ಕತ್ತಲೆಗೆ ಸೇರಿದವನನ್ನು ಸೂಚಿಸುತ್ತದೆ. ಶಾಸ್ತ್ರವಚನಗಳು ನಮಗೆ ಸ್ಪಷ್ಟವಾಗಿ ತೋರಿಸಿಕೊಡುವದೇನಂದರೆ ನಾವು ದೇವರ ಮಕ್ಕಳಾದ ನಂತರವೂ "ಬಿದ್ದು ಹೋಗಲು" ಸಾಧ್ಯವಿರುವದೆಂಬದು. ಬಿದ್ದುಹೋಗುವವರಲ್ಲಿ ಎರಡು ವರ್ಗಗಳಿರುವದನ್ನು ಇವು ನಮಗೆ ತೋರಿಸಿಕೊಡುತ್ತವೆ. ಒಂದು ವರ್ಗದ ಬಗ್ಗೆ ಇಬ್ರೀಯ 6:4–7; ರಲ್ಲಿ ವರ್ಣಿಸಲಾಗಿರುವದು. ಇಬ್ರೀಯ 10:26–31ರಲ್ಲಿ ಹೇಳಿರುವಂಥವರ ಬಗ್ಗೆ ನಮಗೆ ನಿರೀಕ್ಷಿಸಲು ಏನೂ ಇರುವದಿಲ್ಲ, ಯಾಕಂದರೆ ಇವರು ಹೃದಯದಲ್ಲಿ ಪಾಪದ ಬಗ್ಗೆ ಸಹಾನುಭೂತಿಯುಳ್ಳವರಾಗಿದ್ದು, ಅಪೋಸ್ತಲನು ಇಲ್ಲಿ ನಿರೂಪಿಸಿರುವಂತೆ ಇವರು ಮನಃಪೂರ್ವಕವಾಗಿ ಪಾಪಮಾಡಿದವರಾಗಿರುವರು. ಸತ್ಯದ ಬಗ್ಗೆ ಸ್ಪಷ್ಟವಾದ ಪರಿಜ್ಞಾನವನ್ನು ಹೊಂದಿದ ನಂತರ ಮನಃಪೂರ್ವಕವಾಗಿ ಇಷ್ಟಪಟ್ಟು ಒಪ್ಪಿಗೆಯಿಂದ ಪಾಪದಲ್ಲಿ ಆನಂದಿಸುವವರಿಗೆ ಕರುಣೆಯನ್ನು ತೋರಿಸಬೇಕೆಂಬದು ದೇವರಿಗೆ ಸೂಕ್ತವಲ್ಲ. ಅಪೋಸ್ತಲನು ಪ್ರಕಟಮಾಡಿ ಹೇಳಿರುವಂತೆ ಇವರಿಗೆ ಉಳಿದಿರುವ ಒಂದೇ ಸಂಗತಿಯೆಂದರೆ ಅದು ದೇವರ ವಿರೋಧಿಗಳನ್ನು ಮತ್ತು ನೀತಿಯ ವಿರೋಧಿಗಳನ್ನು ದಹಿಸುವಂಥ ನ್ಯಾಯತೀರ್ಪು. ಈ ವರ್ಗದವರ ವಿಷಯವಾಗಿ ಅಪೋಸ್ತಲನು ಸಾರಿ ಹೇಳಿರುವದು: "ಮರಣಕರವಾದ ಪಾಪವುಂಟು; ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವದಿಲ್ಲ." – 1 ಯೋಹಾನ 5:16

ಈ ಎರಡನೆ ವರ್ಗದವರ ವಿಷಯವಾಗಿ ಅಪೋಸ್ತಲನು ಮರಣಕರವಲ್ಲದ ಪಾಪವಿರುವದೆಂದು ಹೇಳಿರುವನು. ಇದಕ್ಕಾಗಿ ಪಶ್ಚಾತಾಪಪಡಬಹುದು, ಇದನ್ನು ಕ್ಷಮಿಸಬಹುದು, ಅಲ್ಲದೆ ಈ ಮೂಲಕವಾಗಿ ಅಪರಾಧಿಯು ಅಮೂಲ್ಯವಾದ ಪಾಠಗಳನ್ನು ಪಡಕೊಂಡವನಾಗಿ ಹೊರಬರಬಹುದು. ಈ ಪಾಠಗಳು ಕಡೆಯಲ್ಲಿ ತಿಳುವಳಿಕೆಯನ್ನು ನೀಡಿ ಅನುಭವವನ್ನುಂಟು ಮಾಡುವ ಆಶೀರ್ವಾದವಾಗಿ ಪರಿಣಮಿಸಿ ಆತನಿಗೆ ಮುಂದಿನ ಹೋರಾಟಗಳಲ್ಲಿ ಜಯಗಳಿಸಲು ಇವು ಸಹಾಯಕವಾಗುವವು. ದಾವೀದನ ಪಾಪವು ಈ ಎರಡನೆ ವರ್ಗಕ್ಕೆ ಸಂಬಂಧಿಸಿದ್ದು ಇದು ಮನಃಪೂರ್ವಕವಾಗಿಲ್ಲದೆಯೂ ಆತನಿಂದ ಸಮ್ಮತಿಸಲ್ಪಡ–ದೆಯೂ ಇದ್ದು, ಅಪೊಸ್ತಲನು ಉಲ್ಲೇಖಿಸಿ ಹೀಗೆ ಹೇಳಿದ ರೀತಿಯದಾಗಿತ್ತು: "ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು [ಅಂದರೆ ನಮ್ಮ ಪರವಾಗಿ ವಾದಿಸುವವನು] ನಮಗಿದ್ದಾನೆ." (1 ಯೋಹಾನ 2:1) ಇದೇ ಗುಂಪಿನವರ ಪಾಪಗಳ ವಿಷಯವಾಗಿ ಅಪೋಸ್ತಲನು ಹೇಳಿರುವದು: "ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು." [1 ಯೋಹಾನ 1:9] ಮತ್ತೆ ಆತನು ಹೇಳಿರುವದು: "ಅವನು ಕೆಳಗೆ ಬಿದ್ದರೂ ಏಳದೇ ಹೋಗುವದಿಲ್ಲ." [ಕೀರ್ತನೆ 36:24] ವಾಸ್ತವಾಂಶವೇನಂದರೆ ಹೃದಯದಿಂದ ಮನಃಪೂರ್ವಕವಾಗಿ ಸಮ್ಮತಿಪಟ್ಟು ಮಾಡಿದ ಅಪರಾಧವು ಈ ಶಬ್ದದ ಪ್ರತಿಯೊಂದು ಅರ್ಥದಲ್ಲಿಯೂ ದೇವಾನುಗ್ರಹದಿಂದ ಸಂಪೂರ್ಣವಾಗಿ ಬಿದ್ದುಹೋಗಿರುವದೆಂಬ ಅಭಿಪ್ರಾಯವನ್ನು ಕೊಡುತ್ತದೆ. ಹೀಗಿರುವಲ್ಲಿ ಶಾರೀರಿಕ ಬಲಹೀನತೆ ಹಾಗು ಪರಿಶೋಧನೆಯ ದೆಸೆಯಿಂದ ಮನಃಸಾಕ್ಷಿಗೆ ವಿರುದ್ಧವಾಗಿ ಎಡವಿಬೀಳುವಂಥದನ್ನು ಇದು ಹಿಂದಿರುವಿಕೆಯ ಸಲುವಾಗಿ ಎಲ್ಲಾ ನಿರೀಕ್ಷೆಯನ್ನು ಹೊಂದಿರುವ ಎಡವಿಬೀಳುವಿಕೆಯೆಂದು ಪರಿಗಣಿಸಲಾಗಿರುವದು.

ಕಾರ್ಯತಃ ಪ್ರತಿಯೊಂದು ಅಪರಾಧವೂ ಮನಃಪೂರ್ವಕವಾದುದೆಂದು ಕೆಲವರಲ್ಲಿ ಒಬ್ಬನು ವಾದಿಸುವ ಸಂಭವವಿರುವದು, ಯಾಕಂದರೆ ದೇವಜನರು ಶರೀರದಲ್ಲಿ ಎಷ್ಟೇ ಬಲಹೀನರಾಗಿದ್ದರೂ ಅವರು ಬಯಸಿದ್ದಲ್ಲಿ ಅವರಿಗೆ ಸರಿಯಾಗಿ ಇಚ್ಛಿಸುವ ಶಕ್ತಿಯಿರುವದೆಂಬುದು ಅವನ ವಾದ. ಇಂಥವರು ಕೆಲವೊಂದು ಸಾರಿ ಮನಃಪೂರ್ವಕವಾದ ಪಾಪದ ವಿಷಯದಲ್ಲಿ ತಮ್ಮನ್ನು ತಾವೇ ಆಪಾದಿಸಿಕೊಂಡು ತಾವು ನಿಷೇಧಿಸಲ್ಪಟ್ಟವರಾಗಿ ಎರಡನೇ ಮರಣದ ಅಧೀನದಲ್ಲಿ ಇರುವೆವೆಂದು ಹೆದರಿಕೊಳ್ಳುವ ಪ್ರವೃತ್ತಿಯುಳ್ಳವರಾಗಿರುವರು. ಹೇಗೂ ನಾವು ದಾವೀದನ ಸಂಗತಿಯನ್ನು ಒಂದು ನಿದರ್ಶನವಾಗಿ ತೋರಿಸಿಕೊಟ್ಟು ಇದು ಮನಃಪೂರ್ವಕವಾದ ಪಾಪವೆಂದು ದೇವರಿಂದ ಎಣಿಸಲ್ಪಡುವದಿಲ್ಲವೆಂದು ಹೇಳುವವರಾಗಿದ್ದೇವೆ. ಅರಸನಾದ ದಾವೀದನು ತನ್ನ ಅಪರಾಧದ ಸಂಬಂಧವಾಗಿ ದಿನಗಳ, ವಾರಗಳ, ತಿಂಗಳುಗಳ ಪರ್ಯಂತರ ಉದ್ದೇಶಪೂರ್ವಕವಾಗಿ ಯೋಜನೆಹಾಕಿದ್ದನು. ಇದು ಒಂದು ಪ್ರಮಾಣದಲ್ಲಿ ಮನಃಪೂರ್ವಕವಾಗಿತ್ತೆಂಬುದನ್ನು ನಿರಾಕರಿಸಲು ಸಾಧ್ಯವಿರುವದಿಲ್ಲ; ಆದರೆ ಒಂದು ಪ್ರಮಾಣದಲ್ಲಿ ಬೇರೊಂದು ಸಂಗತಿಯೂ ಇತ್ತು: ಅದೇನಂದರೆ ಪಿತೃವಾದ ಆದಾಮನ ಸಂತತಿಯ ಒಬ್ಬ ಸದಸ್ಯನಾಗಿ ಪಾರಂಪರ್ಯವಾಗಿ ಹೊಂದಿದ್ದ

ಶಾರೀರಿಕ ಬಲಹೀನತೆ. ದಾವೀದನ ಪಾಪವು ಎಷ್ಟು ಮನಃಪೂರ್ವಕ ಹಾಗು ಎಷ್ಟು ಬಲಹೀನತೆಯ ಲೆಕ್ಕಕ್ಕೆ ಸೂಕ್ತವಾಗಿ ಸೇರಿಸಬಹುದೆಂಬುದನ್ನು ಕೇವಲ ದೇವ ನಿರ್ಣಯವೇ ಸೂಕ್ಷ್ಮವಾಗಿ ನಿರ್ದಿಷ್ಟತೆಯಿಂದ ವಿವೇಚಿಸಲು ಸಾಧ್ಯ. ಇದು ಸಂಪೂರ್ಣವಾಗಿ ಬಲಹೀನತೆಯಿಂದಾಗಲಿ ಅಥವಾ ಅಜ್ಞಾನದಿಂದಾಗಲೀ ಆಗಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು; ಅಲ್ಲದೆ ಇದು ಸಂಪೂರ್ಣವಾಗಿ ಮನಃಪೂರ್ವಕವಾಗಿರಲಿಲ್ಲವೆನ್ನುವದೂ ಹೀಗೆಯೇ ಸ್ಪಷ್ಟವಾಗಿತ್ತು. ಆದುದರಿಂದ ಇದನ್ನು ನಾವು ಒಂದು ಮಿಶ್ರಿತವಾದ ಪಾಪವೆಂದು ಹೆಸರಿಸಬಹುದು. ಇದು ಸಂಪೂರ್ಣವಾಗಿ ಮನಃಪೂರ್ವಕವಾಗಿರಲಿಲ್ಲ ಎನ್ನುವದರ ಸಾಕ್ಷಿಯು ದಾವೀದನ ಅಂತಃಕರಣವು ನಂತರದಲ್ಲಿ ಅಂದರೆ ದೇವರು ನಾತಾನನ ಮೂಲಕವಾಗಿ ಆತನನ್ನು ಗದರಿಸುವದಕ್ಕೆ ಮೊದಲು ತನ್ನ ಪಾಪವನ್ನು ಗುರುತಿಸಿಕೊಂಡಿದ್ದು ಅದು ತನ್ನ ಪ್ರಾಣಾತ್ಮ ಹಾಗು ದೇವರ ನಡುವೆ ಮೋಡದಂತೆ ಅಡ್ಡಲಾಗಿ ಎದ್ದಿರುವದನ್ನು ಅರಿತುಕೊಂಡಿದ್ದನು. ಆ ಪಾಪವು ಮನಃಪೂರ್ವಕವಾಗಿಯೇ ಆಗಿದ್ದಲ್ಲಿ ಅರಸನು ದುಃಖಪಟ್ಟು ಕುಗ್ಗಿಹೋಗುವದಕ್ಕೆ ಬದಲಾಗಿ ಪಾಪದ ಮಾರ್ಗದಲ್ಲಿ ಇನ್ನೂ ಮುಂದು ಹೋಗಲು ಪ್ರವೃತ್ತನಾಗಬೇಕೆಂದು ಅವನಿಗೆ ಅನ್ನಿಸುತ್ತಿತ್ತು, ಅಲ್ಲದೆ ದೇವಕ್ಷಮೆಗಾಗಿ ಹಾಗು [ದೇನಾನುಗ್ರ-ದೊಡನೆಯ] ಮರುಸಂಧಾನಕ್ಕಾಗಿ ಪರಿತಪಿಸುತ್ತಿರಲಿಲ್ಲ. ಇವುಗಳ ಸಲುವಾಗಿದ್ದ ಆತನ ಬಯಕೆಗಳು ನಮಗೆ ಪ್ರಮಾಣೀಕರಿಸುವ-ದೇನಂದರೆ ಆತನು ಸರಿಯಾದ ಮಾರ್ಗದಿಂದ ಶೋಚನೀಯವಾಗಿ ದಾರಿತಪ್ಪಿದ್ದಾಗ್ಯೂ, ಆತನ ಹೃದಯ ಆತನ ಮನೋಸಂಕಲ್ಪ, ಇನ್ನೂ ದೇವರ ಹಾಗು ನೀತಿಯ ಪಕ್ಷದಲ್ಲಿದ್ದವೆಂಬದೇ. ಯಾರು ಪಾಪದಲ್ಲಿ ಬಿದ್ದು ದೇವಕ್ಷಮೆ ಹಾಗು ಮರುಸಂಧಾನಕ್ಕಾಗಿ ಹಾತೊರೆಯುವವರೋ ಅವರಿಗೆ ಇದು ಒಂದು ಒಳ್ಳೆಯ ಪಾಠವಾಗಿ ಹಾಗು ನಿದರ್ಶನವಾಗಿ ಪ್ರಯೋಜನಕರವಾಗಿರಲಿ. ಅಂಥವರು, ದಾವೀದನು ಮಾಡಿದಂತೆ, ನಂಬಿಕೆಯ ಮೂಲಕವಾಗಿ ದೇವರ ಕರುಣೆಯನ್ನು ಅಂಗೀಕರಿಸಿಕೊಂಡು ಅದರಲ್ಲಿ ಅನಂದಿಸುವಂಥವರಾಗಲಿ. ಯಾರು ಮರಣಕರವಾದ ಪಾಪವನ್ನು ಮಾಡಿರುವರೋ ಅಂಥವರನ್ನು ಪಶ್ಚಾತಾಪದೆಡೆಗೆ ಹೊಸದಾಗಿ ಕರತರುವದು ಅಸಾಧ್ಯವೆಂಬುದನ್ನು ಅಂದರೆ ತಮ್ಮ ಕೇಡಿನ ಮಾರ್ಗದಿಂದ ಅವರನ್ನು ನಿಜವಾಗಿಯೂ ಕುಗ್ಗಿದವರನ್ನಾಗಿಸಿ ಪಶ್ಚಾತಾಪ-ಪಡುವಂಥ ಸ್ಥಿತಿಗೆ ಮರಳಿ ಕರತರುವದು ಅಸಾಧ್ಯವೆಂಬುದನ್ನು ಅವರು ನೆನಪಿನಲ್ಲಿಟ್ಟುಕೊಳ್ಳಲಿ.

ನಿಜವಾದ ಪಶ್ಚಾತಾಪವು ಒಬ್ಬರ ಸಾಮರ್ಥ್ಯಾನುಸಾರ ತಪ್ಪನ್ನು ಸರಿಪಡಿಸಿಕೊಳ್ಳುವದನ್ನು ಅನ್ವಯಿಸುತ್ತದೆ. ದಾವೀದನ ಪಾಪವು ಒಂದು ಸಾರ್ವಜನಿಕವಾದದ್ದಾಗಿದ್ದು ದೇಶಕ್ಕೆ ತಿಳಿದು ಬಂದದ್ದಾಗಿರಲು ಆತನಿಗೆ ತನ್ನ ಪಾಪದಂತೆಯೇ ಪಶ್ಚಾತಾಪವು ಸಾರ್ವಜನಿಕವಾಗಿರಬೇಕೆಂಬದು ಸೂಕ್ತವಾಗಿದ್ದು, ದಾವೀದನ ಪಾಪದರಿಕೆಯು ಹಾಗು ತಾನು ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳುವ ಪ್ರಯತ್ನವು ಸಂಪೂರ್ಣವಾಗಿರದಿದ್ದಲ್ಲಿ ಆತನು ದೇವಾನುಗ್ರಹಕ್ಕೆ ಹಿಂದಿರುಗುತ್ತಿರಲಿಲ್ಲವೆಂದು ಭಾವಿಸಲು ನಮಗೆ ಸಕಾರಣಗಳಿರುವವು. ಆತನು ಹಿಡಿದ ಮಾರ್ಗವು ಕೆಲವರನ್ನು ದೇವದೂಷಣೆಮಾಡುವದಕ್ಕೆ ನಡೆಸಿತ್ತು. (2 ಸಮುವೇಲ 12:14) ಆತನ ಪಶ್ಚಾತಾಪವು ಸಾಧ್ಯವಾದಷ್ಟು ಇದನ್ನು ಸರಿಪಡಿಸಬೇಕೆನ್ನುವದಕ್ಕೆ ಸೂಕ್ತವಾಗಿತ್ತು. ಹೀಗೆ ದಾವೀದನ ಪಶ್ಚಾತಾಪದ ಕತೆಯು ಆತನ ಅಪರಾಧದ ಕತೆಯೊಡನೆ ಬಹು ಕಾಲಗಳ ಹಿಂದಿನಿಂದ ಇಳಿದು ಬಂದಿರುವದು; ಒಂದು [ಪಾಪವು] ದೇವರನ್ನು ದೂಷಿಸುವವರಿಗೆ ಅವಕಾಶಮಾಡಿಕೊಟ್ಟಿರುವಲ್ಲಿ ಮತ್ತೊಂದು [ಮಾನಸಾಂತರವು] ತಪ್ಪುಗಳ ಮೂಲಕವಾಗಿ ಹಿಂದೆ ಬಿದ್ದವರಾದ ಅನೇಕರಿಗೆ ಅಂದರೆ ದಾವೀದನಂತೆ ಹೃದಯದಲ್ಲಿ ದೇವರಿಗೆ ನಿಷ್ಠೆಯುಳ್ಳವರಾಗಿದ್ದ ಅನೇಕರಲ್ಲಿ ನಿರೀಕ್ಷೆಯನ್ನುಂಟುಮಾಡಿ ಅವರಿಗೆ ಪ್ರೋತ್ಸಾಹ ನೀಡಿರುವದು.

ಪಾಪಪರಿಹಾರ ಹಾಗು ಶಿಕ್ಷೆಯನ್ನು ತಗ್ಗಿಸುವಂಥದರ ನಡುವೆ ತೀವ್ರವಾದ ವ್ಯತಾಸವಿರುವದನ್ನು ನಾವು ತೋರಿಸಿ-ಕೊಡಬೇಕಿರುವದು. ಈ ಸಂಗತಿಯಲ್ಲಿ ದಾವೀದನ ಪಾಪವು ಕ್ಷಮಿಸಲ್ಪಟ್ಟಿದ್ದಾಗ್ಯೂ ಪ್ರವಾದಿಯು ಮುಂದಾಗಿ ನುಡಿದಿದ್ದ ಶಿಕ್ಷೆಯು ಸೂಕ್ತ ಸಮಯದಲ್ಲಿ ಆತನ ಮೇಲೆ ಬಂದಿದ್ದನ್ನು ನೋಡಲು ನಮಗೆ ಸಾಧ್ಯ. ಹೀಗಾಗಿ ಕ್ಷಮಾಪಣೆಯೆಂಬದು ಇಲ್ಲಿ ಕ್ಷಮಿಸಲ್ಪಟ್ಟವನನ್ನು ಶಿಕ್ಷೆಗಳೆಲ್ಲವುಗಳಿಂದ ದೋಷಮುಕ್ತನನ್ನಾಗಿ ಮಾಡುವಂಥ ನ್ಯಾಯಬದ್ಧವಾದ ಕ್ಷಮಾಪಣೆಯಾಗಿರಲಿಲ್ಲ, ಆದರೆ ಅದು ಕೇವಲ ಅರಸನಿಗೆ ತನ್ನ ಅಪರಾಧದ ಪರಿಣಾಮಗಳಲ್ಲಿ ಒಂದಾಗಿದ್ದ ದೇವಾನುಗ್ರಹದಿಂದ ತೆಗೆದುಹಾಕಲ್ಪಟ್ಟದ್ದನ್ನು ಹಿಂದೆ ಪಡೆಯುವಂಥ ನಿಲುವಾಗಿತ್ತೆಂಬುದನ್ನು ನಾವು ನೋಡುತ್ತೇವೆ. ನಾವು ಗಮನಿಸಬೇಕಿರುವದು ಸಹ ಏನಂದರೆ ದೇವರು ಮುಂದಾಗಿ ವಿವರಿಸಿ ಹೇಳಿ ವಿಧಿಸಿದ್ದ ಶಿಕ್ಷೆಯಿಂದ ತಪ್ಪಿಸಿಕೊಳ್ಳುವಂಥ ಆಲೋಚನೆಯು ಅರಸನ ಮನಸ್ಸಿನಲ್ಲಿರಲಿಲ್ಲವೆಂಬದು; ಆತನ ಸಂತೋಷವು ತಾನು ಮತ್ತು ದೇವರ ನಡುವಿನ ಅನ್ಯೋನ್ಯತೆಯನ್ನು ಮರು ಪಡೆದದ್ದರಲ್ಲಿತ್ತು-ಹೇಗಂದರೆ ಅದು ಒಂದು ಸಮಯಕ್ಕೆ ದೇವಪ್ರಸನ್ನತೆಯೆಂಬ ಬೆಳಕನ್ನು, ಅಂದರೆ ಪರಲೋಕದ ಹಸುನಗೆಯನ್ನು, ದೇವರ ಅನ್ಯೋನ್ಯತೆಯನ್ನು, ತನ್ನಿಂದ ಮರೆಯಾಗುವಂತೆ ಮಾಡಿದ ಪಾಪದಿಂದ ಹುಟ್ಟಿದ್ದ ಮೋಡವನ್ನು ತೆಗೆದುಹಾಕಲ್ಪಡಬೇಕೆಂಬದರಲ್ಲಿತ್ತು. ಹೀಗೆಯೇ ಈ ದಿನಗಳಲ್ಲಿ ಇಚ್ಛಾಪೂರ್ವಕವಾಗಿ ಪಾಪದಲ್ಲಿ ಬಿದ್ದವರಾಗಿ ಅದಕ್ಕೆ ಪಶ್ಚಾತಾಪಪಟ್ಟು ತಂದೆ ಹಾಗು ಮಗನ ಅನ್ಯೋನ್ಯತೆಯನ್ನು ಸರಿಯಾದ ದೃಷ್ಟಿಕೋನದಿಂದ ನವೀಕರಿಸಿಕೊಳ್ಳುವಂಥವರೆಲ್ಲರ ಸಂಗತಿಯೂ ಇರುವದು. ಅವರ ಹಾತೊರೆಯುವಂಥ ಬಯಕೆಯು ಕೇವಲ ಶಿಕ್ಷೆಯಿಂದ ತಪ್ಪಿಸಿಕೊಳ್ಳುವದಾಗಿರದೆ ಅದು ವಿಶೇಷವಾಗಿ ಅತಿಕ್ರಮಣದ ಮೂಲಕವಾಗಿ ಮುರಿದುಬಿದ್ದ ಆತ್ಮದ ಅನ್ಯೋನ್ಯತೆಯನ್ನು ನವೀಕರಿಸಿಕೊಳ್ಳುವದಾಗಿರುವದು. ಇದರ ಪೂರ್ಣಾನುಸಾರವಾಗಿಯೇ ನೂತನ ಸೃಷ್ಟಿಯು ಪ್ರಸ್ತುತದಲ್ಲಿ ಪಾಪಕ್ಷಮೆಯಲ್ಲಿ ಆನಂದಿಸುತ್ತಾ ಮಗನ ಮೂಲಕವಾಗಿ ತಂದೆಯೊಡನೆ ಮರುಸಂಧಾನವಾಗಿದ್ದು, ಆದರೂ ಕಾರ್ಯತಃ ಲೋಕದಲ್ಲಿನ ಸ್ಥಿತಿಯಲ್ಲಿಯೇ ಜೀವಿಸುವವರಾಗಿದ್ದು, ಮೂಲ ಪಾಪದ [ಆದಾಮನ ಪಾಪದ] ಮೂಲಕವಾಗಿ ಬಿದ್ದುಹೋದ ಸಂತತಿಗೆ ಸಾಧಾರಣವಾಗಿ ಸಂಬಂಧಿಸಿರುವ ನೋವು ಸಂಕಟ

ಪರಿಶೋಧನೆ ಕಷ್ಟ ನಿರಾಶೆ ಇವುಗಳಿಗೆ ಒಳಗಾಗಿರುವದು. ದೇವರೊಂದಿಗಿರುವ ನಮ್ಮ ನೂತನ ಸಂಬಂಧದ ಮೂಲಕವಾಗಿರುವ ಆಶೀರ್ವಾದವು ನರಳುತ್ತಿರುವ ಸೃಷ್ಟಿಗಳು ಹೊತ್ತಿರುವ ಹೊರೆ ಮತ್ತು ಪಡುತ್ತಿರುವ ಕಷ್ಟಗಳಿಂದ ಬಿಡುಗಡೆಯಾಗುವದರಲ್ಲಿ ಇರುವದಿಲ್ಲ, ಆದರೆ ನಾವು ಇನ್ನು ದೈವೀಕ ಖಂಡನೆಯಲ್ಲಿರುವದಿಲ್ಲವೆನ್ನುವ, ಇತರರಂತೆ ದೇವರ ಕೋಪಕ್ಕೆ ಗುರಿಯಾದವರಲ್ಲವೆನ್ನುವ, ಆದರೆ ಕ್ರಿಸ್ತನ ರಕ್ತದ ಅನ್ಯೋನ್ಯತೆ ಹಾಗು ಪಾಲುಗಾರಿಕೆಯ ಮೂಲಕವಾಗಿ ದೇವರ ಸಮೀಪಕ್ಕೆ ತರಲ್ಪಟ್ಟರಾಗಿರುವದನ್ನು ಮನಗೊಂಡಿರುವದರಲ್ಲಿರುವದು. ನರಳುತ್ತಿರುವ ಸಮಸ್ತ ಸೃಷ್ಟಿಯು ಹೊತ್ತಿರುವ ಹೊರೆ ಹಾಗು ಪಡುತ್ತಿರುವ ಕಷ್ಟದಿಂದ ಬಿಡುಗಡೆಯಾಗುವ ಸಂಬಂಧದ ನಮ್ಮ ನಿರೀಕ್ಷೆಯು ನಮ್ಮ ಕರ್ತನ ಎರಡನೇ ಬರುವಿಕೆಯಲ್ಲಿ ಸ್ಥಾಪಿತವಾಗುವ ವಾಗ್ದತ್ತ [ದೇವರ] ರಾಜ್ಯದಲ್ಲಿನ ಆಶೀರ್ವಾದದಲ್ಲಿ ಕೇಂದ್ರೀಕೃತವಾಗಿರುವದು. ಈ ನಿರೀಕ್ಷೆಗಳ ಹಾಗು ವಾಗ್ದಾನಗಳ ಮೂಲಕವಾಗಿ ಪ್ರೇರಿತರಾಗಿ ನಾವು ಇತರರಂತೆ ದುಃಖಿಸದೆ, ಕಷ್ಟದಲ್ಲಿ ಸಂತೋಷಿಸಲು ಸಮರ್ಥರಾಗುತ್ತೇವೆ ಅಲ್ಲದೆ [ಇವುಗಳು ನೆರವೇರಲ್ಪಡುವಂಥ] ದೇವರ ನಿಗದಿತ ಸಮಯ ಹಾಗು [ಅನುಸರಿಸಲ್ಪಡುವ] ದೇವರ ಮಾರ್ಗಗಳಿಗಾಗಿ ಅಂದರೆ ಮೊದಲನೇ ಪುನರುತ್ಥಾನದ ವರೆಗೂ ತಾಳ್ಮೆಯಿಂದ ಕಾದುಕೊಂಡಿರುವದರಲ್ಲಿ ಆನಂದಿಸಲು ನಾವು ಶಕ್ತರಾಗುತ್ತೇವೆ.

ಈಗಿನ ಕಾಲದಲ್ಲಿ ನಮ್ಮ ಪಾಪಗಳು ಕ್ರಿಸ್ತನ ಯಜ್ಞಫಲದ ಮೂಲಕವಾಗಿ ದೇವರ ದೃಷ್ಟಿಯಿಂದ ಕೇವಲ ಮರೆಮಾಡಲಾಗುವದೆಂದೂ ಅಂದರೆ ಅವುಗಳು ಕೇವಲ ಕ್ಷಮಿಸಲ್ಪಟ್ಟು ಅಥವಾ ಅವುಗಳನ್ನು ತೆಗೆದುಹಾಕಿ ಇಲ್ಲವೇ ರದ್ದುಗೊಳಿಸಿ ಮುಚ್ಚಿಡಲಾಗುತ್ತದಾದರೂ ನಿಜವಾಗಿಯೂ ಅವುಗಳು ಅಳಿಸಲ್ಪಡುವದಿಲ್ಲವೆಂದು ಅಪೋಸ್ತಲನು ಬಹು ಸ್ಪಷ್ಟವಾಗಿ ಹೇಳಿರುವನು. (ಅಪೋಸ್ತಲರ ಕೃತ್ಯಗಳು 3:19–21) ಅವನು ಪವಿತ್ರಾತ್ಮನಿಂದ ಪ್ರಭಾವಿತನಾಗಿ ಉಪದೇಶಿಸುವಾಗ ತನ್ನ ಕೇಳುಗರಿಗೆ–ಅವರು [ತಮ್ಮ ಪಾಪಗಳಿಗಾಗಿ] ಪಶ್ಚಾತಾಪಪಟ್ಟು ದೇವರ ಕಡೆಗೆ ತಿರಿಗಿಕೊಳ್ಳಬೇಕೆಂತಲೂ ಹೀಗಾಗಿ ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಕಾಲವು ಅಂದರೆ [ದೇವರ] ಆ ರಾಜ್ಯದಲ್ಲಿ ಪುನರುದ್ಧಾರದ ಕಾಲಗಳು ಅಂದರೆ ಸಮಸ್ತವನ್ನು ಸರಿಮಾಡುವ ಕಾಲಗಳು ಆರಂಭವಾದಾಗ ಅವರ ಪಾಪಗಳು ಅಳಿಸಲ್ಪಡಲಾಗುವವೆಂದು ಅವನು ಪ್ರಕಟಿಸಿ ಹೇಳಿರುವನು.

ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಆ ಮಹಿಮೆಯುಳ್ಳ ದಿನದಲ್ಲಿ ಈಗ [ದೇವರೊಡನೆ] ಹೊಂದಾಣಿಕೆಯಲ್ಲಿರುವ ಕ್ರೈಸ್ತಸಭೆಯು ಪರೀಕ್ಷೆಯಲ್ಲಿ ಮೊದಲು ತೇರ್ಗಡೆಯಾಗುವದು; ಅಲ್ಲದೆ ಯಾರು ಮೊದಲನೇ ಪುನರುತ್ಥಾನದಲ್ಲಿ ಪಾಲುಹೊಂದಲು ಯೋಗ್ಯರೆಂದು ಎಣಿಸಲ್ಪಡುವರೋ ಅವರು ಆಗ ಪಡೆಯುವ ದೇಹವು ಪರಿಪೂರ್ಣತೆಯಳ್ಳದ್ದಾಗಿದ್ದು. ಅದು ಯಾವ ಲೋಪದೋಷಗಳೂ ಇಲ್ಲದಂಥ ದೇಹವಾಗಿರುವದು; ಅಂದರೆ ಅದು ಈಗಿನ ಕಾಲದ ಮರ್ತ್ಯದೇಹಗಳಿಗಿಂತಲೂ ಬಹು ಭಿನ್ನವಾಗಿರುವದು. ಈಗಿನ ಕಾಲದ ಮರ್ತ್ಯದೇಹಗಳೆಲ್ಲವೂ ಹೆಚ್ಚು ಕಡಿಮೆ ಪಾಪದಿಂದ ಮಾನಸಿಕವಾಗಿ ಶಾರೀರಿಕವಾಗಿ ವಿರೂಪಗೊಂಡಿರುವದು. ಪಡೆಯುವಂಥ ಪರಿಪೂರ್ಣಗೊಳಿಸಿದ ಹೊಸ ದೇಹವೆಂಬದು ಈ ವರ್ಗದಲ್ಲಿನ ಶಾರೀರಿಕ ದೋಷಗಳೆಲ್ಲವೂ ಹಾಗು ಪಾಪದ ಕುರುಹುಗಳೆಲ್ಲವೂ ಸಮಾಧಿಯಲ್ಲಿ ಅಳಿಸಿಹಾಕಲ್ಪಟ್ಟಿದ್ದು, ಅವರ ಆತ್ಮಿಕ ದೇಹವು ಪರಿಪೂರ್ಣತೆಯುಳ್ಳದ್ದಾಗಿ ಮಾಡಲ್ಪಟ್ಟಿರುವದೆಂಬ ಅರ್ಥವನ್ನು ಕೊಡುವದು. ಮೊದಲನೇ ಪುನರುತ್ಥಾನ ಹೊಂದುವ ವರ್ಗದ ವಿಷಯವಾಗಿ ಹೀಗೆಯೇ ಸಹ ಹೇಳಲಾಗಿರುವದು: "ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ; ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದುಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮಿಕದೇಹವಾಗಿ ಎದ್ದುಬರುವದು." [1 ಕೊರಿಂಥ 15:42–44]

ಲೋಕವು [ದೇವರೊಂದಿಗೆ] ಹೊಂದಾಣಿಕೆಯಾಗದಿದ್ದು ಪಾಪಕ್ಷಮೆಯನ್ನು ಪಡೆಯದಿರಲು, ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಕಾಲದ ಮುಂಜಾನೆಯಲ್ಲಿ ಅವರು ಪಾಪದ ಅಳಿಸುವಿಕೆಯನ್ನು ಹೊಂದುವದಿಲ್ಲ. ಮಾನವಕುಲದ ಲೋಕಕ್ಕೆ ಬರುವಂಥ ದೊಡ್ಡ ಆಶೀರ್ವಾದವು ಈಗಿನ ಕಾಲದಲ್ಲಿ ಆಯಲ್ಪಟ್ಟ ಚಿಕ್ಕ ಹಿಂಡಾಗಿರುವ ಕ್ರಿಸ್ತನ ದೇಹವಾದ ಕ್ರೈಸ್ತಸಭೆಗಿಂತಲೂ ವಿಭಿನ್ನವಾಗಿರುವದು; ಅದು ಕ್ಷಮಾದಾನವೆಂಬ ಆಶೀರ್ವಾದವಾಗಿದ್ದು, ಸಂಪೂರ್ಣತೆಯುಳ್ಳದ್ದಾಗಿಯೂ ಉಚಿತವಾದುದಾಗಿಯೂ ಇರುವದು. ಮಹಾ ದೋಷ–ಪರಿಹಾರದ ದಿನವು (ಸುವಾರ್ತಾಯುಗವು) ಆಗ ಮುಕ್ತಾಯಗೊಂಡಿದ್ದು ಅಲ್ಲಿನ ಉತ್ತಮ ಯಜ್ಞಗಳೆಲ್ಲವೂ ಮುಗಿದುಹೋಗಿರುವದು; ಆನಂತರ ದೋಷಪರಿಹಾರಕ ರಕ್ತವು ತಂದೆಯ ಮುಂದೆ ಅರ್ಪಿಸಲಾಗುವದು, ಆಗ ಅದು ಸಮಸ್ತ ಲೋಕದ ಪರವಾಗಿ ಅಂಗೀಕರಿಸಲಾಗುವದು. ಈ ಅಂಗೀಕಾರದ ಫಲವಾಗಿ ದೈವಿಕ ಕ್ಷಮಾಪಣೆಯು ಕ್ರಿಸ್ತನ ಮೂಲಕವಾಗಿ ಸಮಸ್ತ ಲೋಕಕ್ಕೆ ತಲುಪುವದು ಅಂದರೆ ಆದಾಮನೆಂಬ ವ್ಯಕ್ತಿಯ ಮೂಲಕವಾಗಿ ಲೋಕದ ಮೇಲೆ ವಿಧಿಸಿದ ತೀರ್ಪನ್ನು ರದ್ದುಮಾಡಲಾಗುವದು. ಅಪೋಸ್ತಲನಿಂದ ಇದನ್ನು ನಿರ್ದಿಷ್ಟವಾಗಿ ಹೀಗೆ ಹೇಳಲಾಗಿರುವದು, "ಹೀಗಿರಲಾಗಿ ಒಂದೇ ಅಪರಾಧದ ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ. (ರೋಮಾ 5:18) ಆದರೆ ಹೇಗೆ ದಾವೀದನಿಗೆ ನೀಡಲಾದಂಥ ಕ್ಷಮಾಪಣೆಯೆಂಬದು ಆತನ ಪಾಪಗಳಲ್ಲಿ ಅಡಕವಾಗಿರುವ ಒಂದು ಪ್ರಮಾಣದಲ್ಲಿನ ಮನಃಪೂರ್ವಕತೆಯ ದೆಸೆಯಿಂದ ಆತನಿಗೆ ನಿಗದಿತವಾದ ಶಿಕ್ಷೆಯನ್ನು ತಗ್ಗಿಸುವಂಥದರ ಅರ್ಥವನ್ನು ಕೊಡುವದಿಲ್ಲವೋ, ಅಲ್ಲದೆ ಸುವಾರ್ತಾಯುಗದಲ್ಲಿನ ಕ್ರೈಸ್ತಸಭೆಗೆ ದೊರೆಯುವಂಥ ಕ್ಷಮಾದಾನವು ಮನುಕುಲದ ಮೇಲಿರುವ ಶಿಕ್ಷೆಯಿಂದ ತಕ್ಷಣವೇ ಬಿಡುಗಡೆಮಾಡುವದೆಂಬ ಅರ್ಥವನ್ನು ಕೊಡುವದಿಲ್ಲವೋ, ಹಾಗೆಯೇ ಕ್ರಿಸ್ತನ ಸಾವಿರ ವರುಷದ

ಆಳ್ವಿಕೆಯ ಉದಯದ ಹಾಗು ಮೆಸ್ಸೀಯನ ಆಳ್ವಿಕೆಯ ಆರಂಭ ಕಾಲದಲ್ಲಿನ ಲೋಕದ ಪಾಪದ ಕ್ಷಮಿಸುವಿಕೆಯೆಂಬದು ಲೋಕದವರು ತಮ್ಮ ಸ್ವಂತ ತಪ್ಪಿನ ಮೂಲಕವಾಗಿ ಮಾಡುವಂಥ ಭಾಗಶಃ ಪಾಪದ ಎಲ್ಲಾ ಕುರುಹುಗಳನ್ನು, ಅಸಮರ್ಥತೆಗಳನ್ನು ಮರಣಾವಸ್ಥೆಗಳನ್ನು ತೆಗೆದುಹಾಕುವದೆಂಬ ಅರ್ಥಕೊಡುವದಿಲ್ಲ. ಈಗ ಕ್ರೈಸ್ತಸಭೆಯ ವಿಷಯವಾಗಿ ಅವರ ಪಾಪಗಳ ಕ್ಷಮೆಯು ನಾವು ಪಾಪಿಗಳಾಗಿರಲಿಲ್ಲವೆಂಬಂತೆ ನಡೆಸಿಕೊಳ್ಳಲ್ಪಡುವ ಸಲುವಾಗಿ ಆ ಪಾಪಗಳನ್ನು ಮರೆಮಾಡುವದು ಎಂಬ ಅರ್ಥವನ್ನು ಕೊಡುವದು. ಹೀಗೆಯೇ ಮುಂದಿನ ಕಾಲದಲ್ಲಿ ಲೋಕದ ಸಂಗತಿಯೂ ಇರುವದು– ಅಂದರೆ ಲೋಕದ ಪಾಪಗಳ ಕ್ಷಮಿಸುವಿಕೆಯು–ಅಂದಿನಿಂದ ಕ್ರಿಸ್ತನು ತಂದೆಯ ಎದುರಿನಲ್ಲಿ ಲೋಕದ ಪರವಾಗಿ ಅವರ ಪಾಪಗಳನ್ನು ಮರೆಮಾಡುವ ಸಲುವಾಗಿ ನಿಂತುಕೊಳ್ಳುವನು ಎಂಬ ಅರ್ಥಕೊಡುವದು. ಅಲ್ಲದೆ ಕ್ರಿಸ್ತನು ಲೋಕದ ಪಾಪಗಳ ಸಂಬಂಧದಲ್ಲಿ ತನ್ನನ್ನು ಯಜ್ಞವಾಗಿ ಅರ್ಪಿಸಿಕೊಂಡದ್ದರಿಂದ ಲೋಕದವರ ಮೇಲಿದ್ದ ನಿತ್ಯಮರಣದ ತೀರ್ಪನ್ನು ರದ್ದುಪಡಿಸಲಾಗುವದು. ಕ್ರಿಸ್ತನ ಮತ್ತು ಸಾವಿರ ವರುಷದ ಆಳ್ವಿಕೆಯ ರಾಜ್ಯದ ಕಾರ್ಯಭಾರವು ಲೋಕದ ಮಾನವ–ಕುಲದವರಲ್ಲಿ ಯಾರು ಇಚ್ಛಿಸುವರೋ ಅವರನ್ನು ಮಾನವ ಸ್ವಭಾವದಲ್ಲಿನ ಪರಿಪೂರ್ಣತೆಗೆ ಎತ್ತಲ್ಪಡುವಂಥದ್ದಾಗಿದ್ದು ಹೀಗಾಗಿ ಆ ಸಾವಿರ ವರುಷದ ಮುಕ್ತಾಯದ ಸಮಯದಲ್ಲಿ ಅವರು ಮಾನವರಾಗಿ ಪೂರ್ಣ ಸಿದ್ಧಿಗೆ ಬಂದು ಯಾವ ಕೊರತೆಯೂ ಇಲ್ಲದಂಥವರಾಗುವರು. ಹೀಗಾಗಿ ಸಾವಿರ ವರುಷದ ಆಳ್ವಿಕೆಯ ಕಾರ್ಯವು ಪಾಪಗಳನ್ನು ಅಳಿಸುವಂಥ ಕಾರ್ಯವಾಗಿರುವದು. ಅಂದರೆ ಅದು ದೇಹ ಮತ್ತು ಮನಸ್ಸಿನಲ್ಲಿನ ಪಾಪದ ಲಕ್ಷಣಗಳನ್ನು ಮತ್ತು ಕುರುಹುಗಳನ್ನು ಅಳಿಸಿಹಾಕುವಂಥದ್ದಾಗಿರುವದು. ಮಾನವ ಕುಲದ ಮೇಲೆ ಪಾಪವು ಬರಮಾಡಿದ ಬಲಹೀನತೆ ನ್ಯೂನ್ಯತೆಗಳನ್ನು ಹೀಗೆ ಜಯಿಸುವಂಥದ್ದಾಗಿರುವದು ಮತ್ತು ಈ ಕಾರಣಕ್ಕಾಗಿ ಆ ಸಮಯವನ್ನು ಸಮಸ್ತವನ್ನು ಸರಿಪಡಿಸುವ ಕಾಲವೆಂದು ಕರೆಯಲಾಗಿದ್ದು, ಆ ಸಮಯದಲ್ಲಿ ಯಾರು ಆ ದಿವ್ಯ ವಿಮೋಚನೆಯ ಮೂಲಕವಾಗಿ ದೇವಾನುಗ್ರಹವನ್ನು ಅಂಗೀಕರಿಸಿಕೊಳ್ಳುವರೋ ಅಂಥವರೆಲ್ಲರನ್ನು ಹಂತ ಹಂತವಾಗಿ ಆರಂಭದಲ್ಲಿನ ದೇವರ ಹೋಲಿಕೆಗೆ ಕರತರಲಾಗುವದು.

ಆರನೇ ವಚನದಲ್ಲಿ ದಾವೀದನು–ತನ್ನ ಸ್ವಂತ ಅನುಭವವು ಹೃದಯದಲ್ಲಿ ಸದ್ಭಕ್ತರಾಗಿರುವವರಿಗೆ ಅಂದರೆ ದೇವರ ನೀತಿ ಮಾರ್ಗವನ್ನು ಬಯಸುವವರಾಗಿದ್ದು ಆ ಮಾರ್ಗದಲ್ಲಿ ಎಡವಿಬಿದ್ದಂಥವರಿಗೆ ಸಹಾಯಕಾರಿಯಾಗುವದು ಎಂಬುದನ್ನು ಸಲಹೆಮಾಡಿರುವನು. ದೇವರು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸುವಂಥವರಾಗಲು ಅವರು ದೇವರಿಗೆ ಪ್ರಮಾಣಿಕವಾಗಿ ಪ್ರಾರ್ಥಿಸಬೇಕೆಂದು ಪ್ರಬೋಧಿಸಿರುವನು. ದಾವೀದನ ಸ್ವಂತ ಅನುಭವವು ತಾನು ಪ್ರತಿದಿನವೂ ದೇವರ ಅನ್ಯೋನ್ಯತೆಯಿಂದ ದೂರ ದೂರ ಸರಿಯುವಂತೆ ಮಾಡುತ್ತಿದ್ದಂಥ ಸಂಗತಿಯ ಬಗ್ಗೆ ಆತನಿಗೆ ತಿಳಿಸಿಕೊಟ್ಟಂತೆ ತೋರುತ್ತದೆ. ಆತನ ಬುದ್ಧಿಮಾತೇನಂದರೆ ಸಂಕಷ್ಟವೆಂಬ ನೀರಿನ ಮಹಾ ಪ್ರವಾಹವು ಒಬ್ಬನನ್ನು ಮುಟ್ಟದಂತೆಮಾಡಿ ಆವನು ಅನೇಕ ವಿಧವಾದ ಶೋಧನೆಗಳಿಂದ ತಪ್ಪಿಸಿಕೊಳ್ಳುವಂತಾಗಲು ಆವನು ಪ್ರಮಾಮಾಣಿಕನಾಗಿ ಪರಲೋಕದ ಕೃಪಾಸನದ ಬಳಿಗೆ ಹೋಗಿ [ಪಾಪದ] ಅರಿಕೆಮಾಡಿ ಮುಂದಿನ ಸಮಯಗಳಿಗಾಗಿ ದೇವರಿಂದ ಕರುಣೆಯನ್ನು ಹೊಂದುವಂತೆಯೂ, ಆತನ ದಯೆಯಿಂದ ಸಮಯೋಚಿತ ಸಹಾಯವು ತನಗೆ ದೊರೆಯುವಂತೆಯೂ ಪ್ರಾರ್ಥಿಸಬೇಕೆಂಬದು.

ವಚನ ಏಳರಲ್ಲಿ ಆರಸನು ತನ್ನ ಪೂರ್ವಸ್ಥಿತಿಗೆ ಮರಳಿದವನಾಗಿ ಹೇಗೆ ದೇವರಲ್ಲಿ ಸಮಾಧಾನವನ್ನು ಕಂಡುಕೊಂಡನೆಂಬುದನ್ನು ಅಂದರೆ ವಿಶ್ರಾಂತಿ ಹೊಂದಲು ಸಾಧ್ಯವಾದ ಒಂದು ಅಡಗುದಾಣವನ್ನು ತಾನು ಕಂಡುಕೊಂಡನೆಂಬುದನ್ನು ಹೇಳಿರುವನು; ತನಗೆ ವಿಧಿಸಿದ ಶಿಕ್ಷೆಯನ್ನು ಎದುರು ನೋಡಬೇಕೆಂಬುದನ್ನು ತಿಳಿದಾಗ್ಯೂ ಆತನ ಹೃದಯವು ಈಗ ದೇವರೊಂದಿಗೆ ಅನ್ಯೋನ್ಯತೆಯಲ್ಲಿರಲು ಆ ಶಿಕ್ಷೆಗಳನ್ನು ಅನುಭವಿಸುವಾಗ ದೇವರ ಪ್ರಸನ್ನತೆಯು ತನ್ನೊಂದಿಗಿದ್ದು ಆ ಕಷ್ಟದಿಂದ ತನ್ನನ್ನು ಅದು ಸಂರಕ್ಷಿಸುವ – ದೆಂಬುದನ್ನು ಆತನು ಅರಿತುಕೊಳ್ಳಲು ಸಾಧ್ಯವಾಗಿತ್ತು. ಅಲ್ಲದೆ, ಹೇಳಬೇಕಾದಲ್ಲಿ, ಇದು ಆತನು ಸಂಕಷ್ಟದಲ್ಲಿರುವಾಗಲೂ ಪರಲೋಕದ ದೂತರು ತನ್ನ ಬಿಡುಗಡೆಯ ಸಂಬಂಧವಾದ ಗೀತೆ ಹಾಡುವದನ್ನು ಕೇಳಿಸಿಕೊಳ್ಳಲು ಸಮರ್ಥನನ್ನಾಗಿ–ಸುವದೆಂಬದೇ.

ಕೀರ್ತನೆಯ ಮುಕ್ತಾಯದ ವಚನಗಳು ದೇವರು ನುಡಿಯುವದನ್ನು ಅಂದರೆ ದಾವೀದನು ಮತ್ತು ತನ್ನ ಜನರು ತಮ್ಮ ಪ್ರಾಣಾತ್ಮ ಹಾಗು ದೇವರ ನಡುವೆ ಯಾವುದೇ ಭೂಮೋಡವು ಪ್ರವೇಶಿಸಿದಾಗ ತಾವು ನಿರ್ಭಾಗ್ಯರೂ ಸಂಕಷ್ಟದಲ್ಲಿರುವವರೂ ಆಗಿರುವಂತೆ ತಮ್ಮನ್ನು ಎಣಿಸಿಕೊಂಡ ವರಾಗಿ ದಾವೀದನಂತೆ ದೇವರ ಮಾರ್ಗದರ್ಶನವನ್ನು ಅಪೇಕ್ಷಿಸುವಂಥವರಿಗೆ ದೇವರು ಉಪದೇಶಿಸುವದರ ಬಗ್ಗೆ ಸೂಚಿಸುತ್ತದೆ. ದೇವರು ಇಂಥವರೆಲ್ಲರಿಗೆ ಬೋಧಕನಾಗಿ ತಿಳುವಳಿಕೆಯನ್ನು ನೀಡುವಂಥವನಾಗಿದ್ದು, ಅವರ ಸಂಗತಿಗಳನ್ನು ಮಾರ್ಪಡಿಸಿ ಎಲ್ಲಾ ಕಾರ್ಯಗಳು ಅನುಕೂಲಕರವಾಗುವಂತೆ ಮಾಡುವನು. ಅವರ ಎಡಹುವಿಕೆಯೂ ಅವರಿಗೆ ವಿನಾಶಕರವಾಗುವದಿಲ್ಲ, ಯಾಕಂದರೆ ಅವರು ದೇವರೊಡನೆ ಮತ್ತು ನೀತಿತತ್ವಗಳ ಕಡೆಗಿನ ತಮ್ಮ ಭಯಭಕ್ತಿಭಾವವನ್ನು ಕಾಪಾಡಿಕೊಂಡು ಬಂದಿರುವ ಕಾರಣ ಆತನು ಅವರ ತಪ್ಪು ಹೆಜ್ಜೆಗಳನ್ನು ಸಹ ಒಂದು ಅಮೂಲ್ಯ ಪಾಠವಾಗುವಂತೆ ಮಾಡುವನು, ಹೀಗಾಗಿ ಇನ್ನು ಮುಂದೆ ಅವರಿಗೆ ಎಡವಿ ಬೀಳುವಂಥ ಸಾಧ್ಯತೆಗಳು ಅಲ್ಪವಾಗಿದ್ದು ಅವರು ತಮ್ಮ ಹಾಗುಹೋಗುವಿಕೆಗಳ ವಿಷಯದಲ್ಲಿ ದೇವರು ತನ್ನ ಕೃಪಾಕಟಾಕ್ಷವಿಟ್ಟು ತಮಗೆ ಮಾರ್ಗದರ್ಶನ ನೀಡುವ ಸಲುವಾಗಿ ಆತನನ್ನು ಎದುರು ನೋಡುವುದನ್ನು ಕಲಿತುಕೊಳ್ಳುವರು.

ದೇವರು ಯಾರನ್ನು ಉಪದೇಶಿಸುವನೋ ಹಾಗು ಯಾರು ಆತನ ಉಪದೇಶವನ್ನು ಹೊಂದುವರೋ, ಅಂಥವರು

ಬಾರು ಕಡಿವಾಣಗಳಿಲ್ಲದೆ ಸ್ವಾದೀನವಾಗದಂಥ ಕುದುರೆ ಯಂತಾಗಲೀ ಹೇಸರಕತ್ತೆಯಂತಾಗಲೀ ಇರುವದಿಲ್ಲ. ಅವರ ಹೃದಯಗಳು ದೇವರೊಡನೆ ಎಷ್ಟು ಸಹಾನುಭೂತಿ–ಯುಳ್ಳದ್ದಾಗಿರುವದೆಂದರೆ ಅವರ ಆಶೀರ್ವಾದಾನಂದಗಳಿಗೆ ಹೊರತಾಗಿ ಆತನು ಅವರೊಡನೆ ಬೇರೆ ಯಾವ ವ್ಯವಹಾರವನ್ನೂ ನಡೆಸುವದಿಲ್ಲ. ದುಷ್ಟರಿಗೆ ಅವರದೇ ಆದ ದುಃಖಕಷ್ಟಗಳಿರುವವು, ಆದರೆ ದೇವಜನರು ಇವರೊಡನೆ ಎಣಿಸಲ್ಪಡುವದಿಲ್ಲ; ಯಾಕಂದರೆ ಆತನ ಕೃಪಾನುಗ್ರಹವು ಅವರೊಂದಿಗಿದ್ದು ಅವರ ಪ್ರಾಣವನ್ನು ಪುನರುದ್ಧಾರಮಾಡುವದು. ಆದುದರಿಂದ ಈ ವರ್ಗದವರು ದೇವರ ಕೃಪಾನುಗ್ರಹದ ಮೂಲಕವಾಗಿ ನೀತಿವಂತರೆಂದು ಎಣಿಸಲ್ಪಡುವರು–ಅಂದರೆ ಅವರು ಸ್ವತಃ ತಾವೇ ನೀತಿವಂತರಾಗಿರುವದಿಲ್ಲ ಆದರೆ ಕ್ರಿಸ್ತನಲ್ಲಿ ಮಾಡಿರುವ ದೈವಿಕ ಏರ್ಪಾಟಿನ ಮೂಲಕವಾಗಿ ನೀತಿವಂತರೆಂದು ಎಣಿಸಲ್ಪಡುವರು. ತಮ್ಮ ಬಗ್ಗೆ ತಾವು ಆನಂದಿಸಲು ಸಾಧ್ಯವಿಲ್ಲದಿದ್ದರೂ ಅವರು ದೇವರಲ್ಲಿ ಆನಂದಿಸಬಹುದು. ಇವರು ಪಾಪಪ್ರವೃತ್ತಿಯುಳ್ಳವರಾಗಿ ಶಾರೀರಿಕವಾಗಿ ಪೂರ್ಣ ಬಲಹೀನಾವಸ್ಥೆಯಲ್ಲಿದ್ದರೂ ಹೃದಯದಲ್ಲಿ ನೀತಿವಂತರಾದ ಕಾರಣ ನಮ್ಮನ್ನು ಪ್ರೀತಿಸಿ ನಮ್ಮನ್ನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡಾತನ ಮೂಲಕವಾಗಿ ಜಯಶಾಲಿಗಳಾಗಿ ಸಫಲರಾಗಬಹುದು; ದೈವಿಕ ಏರ್ಪಾಟಿನ ಸಮೃದ್ಧಿಯ ಬಗ್ಗೆ ಇವರು ತಿಳಿದುಕೊಂಡಾಗ ಇವರು ಆನಂದಘೋಷ ಮಾಡಬಹುದು; ಆ ಸಮೃದ್ಧತೆಯೇನಂದರೆ "ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ." 1 ಯೋಹಾನ 2:2

*****

ಪಶ್ಚಾತಾಪಿಯ ಪ್ರಾರ್ಥನೆ

ರೀಪ್ರಿಂಟ್ಸ್ ಪುಟ 1397

ಕೀರ್ತನೆ 51:1–13

"ದೇವರೇ, ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು."

ಇದು ದಾವೀದನ ಜೀವನ ಚರಿತ್ರೆಯಲ್ಲಿನ ಘಾಡವಾದ ಕಲೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ, ಅದೇನಂದರೆ ಊರಿಯನ ಕೊಲೆಯ ಹಾಗು ಆತನ ಹೆಂಡತಿಯನ್ನು ತೆಗೆದುಕೊಂಡ ಸಂಗತಿ. ಸಂದೇಹವಾದಿಗಳು ಎರಡು ದೊಡ್ಡ ಪಾಪಗಳನ್ನು ತೋರಿಸಿಕೊಡಲು ಒಪ್ಪದೆ ಅದನ್ನು ಹೀಗೆ ಅಣಕಿಸುವರು: "ಸತ್ಯವೇದದಲ್ಲಿನ ಭವ್ಯವಾದ ನೈತಿಕ ಮಟ್ಟದ ಪ್ರಕಾರ ಆತನು ಸ್ವತಃ ದೇವರಲ್ಲಿದ್ದಂಥ ಮನಸ್ಸನ್ನು ಹೊಂದಿದಂಥ ಮನುಷ್ಯನು." ಆದರೆ ವಾಸ್ತವಾಂಶವೆಂದರೆ ದಾವಿದನು ಪುರುಷಾವಸ್ಥೆಯನ್ನು ತಲುಪುವದಕ್ಕೆ ಮೊದಲು ಕೇವಲ ಯವನಸ್ಥನಾಗಿ ಒಬ್ಬ ಕುರುಬನಾಗಿದ್ದಾಗ ಅವನು ಸ್ವತಃ ದೇವರಲ್ಲಿದ್ದಂಥಾ ಮನಸ್ಸನ್ನು ಹೊಂದಿದ್ದವನಾಗಿದ್ದನೆಂಬದು. ಹೀಗಿದ್ದರೂ ಈ ಸಂಗತಿಯ ಸಂಬಂಧದಲ್ಲಿ, ಅಂದರೆ ದಾವೀದನ ಅತಿ ದೊಡ್ಡ ಪಾಪದ ಸಂಬಂಧದಲ್ಲಿ ಆತನ ಉತ್ತಮ ಗುಣವನ್ನು ಅಂದರೆ 'ದೇವರಲ್ಲಿದ್ದಂಥ ಹೃದಯದ' ಬಗ್ಗೆ ತೋರಿಸುವಂಥ ಒಂದು ಸಂಗತಿಯಿತ್ತು. ಇದನ್ನು ಈ ಪಾಠದಲ್ಲಿ ನಮ್ಮ ಮುಂದೆ ತರಲಾಗಿರುವದು. ಪ್ರಸಂಶನೀಯವಾದ ಲಕ್ಷಣಗಳೆಂದರೆ ಅದು [1] ಆತನು ತನ್ನ ಮಾರ್ಗವನ್ನು ಸಮರ್ಥಿಸಿಕೊಂಡವನಾಗಿ ನಮ್ಮ ಸುತ್ತಲಿರುವ ಅರಸರುಗಳು ಇಂಥಾ ಸಂಗತಿಗಳನ್ನು ಮತ್ತು ಇನ್ನೂ ಕೀಳಾದದನ್ನು ಮಾಡಿದ್ದು, ಸಾಧಾರಣವಾಗಿ ಇದನ್ನು ಅವರ ಪ್ರಜೆಗಳು ಅರೆಮನಸ್ಸಿನಿಂದ ಒಪ್ಪಿಕೊಂಡಿದ್ದು ಒಬ್ಬ ಅರಸನಿಗೆ ತನಗೆ ಇಷ್ಟ ಬಂದದ್ದನ್ನು ಮಾಡುವ ಅಧಿಕಾರವಿತ್ತೆಂಬುದನ್ನು ಹೇಳಲು ಪ್ರಯತ್ನಿಸಿರಲಿಲ್ಲ; [2] ಅವನು ತನ್ನ ತಪ್ಪನ್ನು ಅಲ್ಲಗಳೆಯದೇ ಇದ್ದುದು ಮಾತ್ರವಲ್ಲದೆ ತನ್ನ ಸ್ವರಕ್ಷಣೆಗಾಗಿ ಏನು ಹೇಳಬೇಕೆಂಬುದನ್ನು ಪ್ರಯತ್ನಿಸಿ ಸಹ ನೋಡಿರಲಿಲ್ಲ; ಆತನು ತನ್ನ ವಿಶಿಷ್ಟವಾದ ಪರಿಶೋದನೆಯ ಪರವಾಗಿ ವಾದಿಸಿರಲಿಲ್ಲ; ಇತರರು ಮಾಡಿದ್ದುದಕ್ಕಿಂತಲೂ ತಾನು ಮಾಡಿದಂಥದ್ದು ಮೇಲಾಗಿತ್ತೆಂದೂ ಇಲ್ಲವೇ ಅರಸನಾಗಿ ತನ್ನ ಅಧಿಕಾರವನ್ನು ಪ್ರಯೋಗಿಸಿದುದಾಗಿ ಅವನು ಹೇಳಿರಲಿಲ್ಲ; ಆದರೆ ಆತನು ಸಂಪೂರ್ಣವಾಗಿಯೂ ತನ್ನ ಹೃದಯಪೂರ್ವಕವಾಗಿಯೂ, ಇತರರಿಗೆ ಮನವರಿಕೆಯಾ–ಗುವಂತೆ, ತನ್ನ ದುಷ್ಟ ಪ್ರವರ್ತನೆಗಿಂತಲೂ ತನ್ನ ಹೃದಯವು ಉತ್ತಮ ಸ್ಥಿತಿಯಲ್ಲಿತ್ತೆಂಬುದನ್ನು ಸೂಚಿಸಿದಂತೆ ತೋರುತ್ತದೆ. ದಾವೀದನ ಅಪರಾಧಗಳನ್ನು ಕ್ಷಮಿಸಲು ನಮಗೆ ಅಧಿಕಾರವಿರುವದಿಲ್ಲ, ಅದರೆ ಆತನಲ್ಲಿರುವ ಇತರ ಗುಣ ಲಕ್ಷಣಗಳನ್ನು ಗಮನಿಸುವಂಥ ಸೌಭಾಗ್ಯವನ್ನು ನಾವು ಪಡೆದಿದ್ದು ಇವುಗಳು ಕೆಲವು ಮಟ್ಟಿಗೆ ಆತನ ಬಲಹೀನತೆಗಳನ್ನು ಸರಿದೂಗಿಸಿದ್ದಂತೆ ತೋರುವದು.

ಮತ್ತು ಸತ್ಯವೇದವು ತನ್ನ ಸತ್ಯತೆಯನ್ನು ಹೀಗೆ ನಂಬಿಗಸ್ತಿಕೆಯಿಂದ ತನ್ನ ಶ್ರೇಷ್ಠ ಗುಣವಂತರ ಪಾಪಗಳನ್ನು ಅವರ ನಂಬಿಕೆ ಹಾಗು ಸೇವೆಗಳ ಪಕ್ಕದಲ್ಲೇ ದಾಖಲಿಸಿ ಪ್ರಮಾಣೀಕರಿಸಿರುವಂಥದ್ದು ಸಹ ಒಳ್ಳೆಯದೇ. ಇತರ ಯಾವುದೇ ಒಂದು ಧರ್ಮದ ಆಧಾರ ಗ್ರಂಥದ ವಿಷಯದಲ್ಲಿ ಇದು ಸತ್ಯವಾಗಿರುವದಿಲ್ಲ. ಇತರ ಗ್ರಂಥಗಳು ಕೇವಲ ಒಳ್ಳೆಯದನ್ನು ಹೇಳಿ ಕೆಟ್ಟದ್ದನ್ನು ತಿಳಿಸದೇ ಬಿಟ್ಟಿರುವದು; ಆದರೆ ಸತ್ಯವೇದವು, ನಮ್ಮ ಕರ್ತನಾದ ಯೇಸುವನ್ನು ಹೊರತುಪಡಿಸಿ, ಪೌಲನು ಅನುಭವಿಸಿದ ಹಿಂಸೆಗಳು, ಪೇತ್ರನ ಅಲ್ಲಗಳೆಯುವಿಕೆ ಹಾಗು ದೇವದೂಷಣೆಗಳು, ದಾವೀದನ ಪಾಪಗಳು, ಅಬ್ರಹಾಮನ ತಪ್ಪುಗಳು ಮುಂತಾದವುಗಳನ್ನು ಹಾಗು ಇತರ ತನ್ನ ವೀರಪುರುಷರ ಬಲಹೀನತೆಗಳನ್ನು ತಿಳಿಸಿರುವದು.

ಇದನ್ನು ಲೌಕಿಕ ಜ್ಞಾನವು ಒಂದು ಗಂಭೀರವಾದ ನ್ಯೂನ್ಯತೆಯೆಂದು ಪರಿಗಣಿಸಿದ್ದರೂ, ದೇವರು ಇದನ್ನು ಸರಿಯಾದ ಸಂಗತಿಯೆಂದು ನೋಡಿದ್ದನು; ಅಲ್ಲದೆ ದೇವಜನರಲ್ಲಿನ ಅನೇಕರು ಈ ಮಾನವ ಬಲಹೀನತೆಗಳು ಹಾಗು ಪಾಪಗಳ ವಿಷಯದ ದಾಖಲೆಗಳ ಮೂಲಕವಾಗಿ ಬಹುವಾಗಿ ಆಶೀರ್ವದಿಸಲ್ಪಟ್ಟಿರುವರು. ಎಲ್ಲರೂ ಪಾಪಮಾಡಿದವರು, ನೀತಿವಂತನು ಒಬ್ಬನೂ ಇಲ್ಲ, ಹಿಂದಿನ ಪಾಪಗಳನ್ನು ಕ್ಷಮಿಸುವಂತಾಗಲು ಹಾಗು ಪಾಪ ಮತ್ತು ಅದರ ಪರಿಣಾಮಗಳೆಂಬ ಕೆಸರಿನ ಗುಂಡಿಯೊಳಗಿಂದ ಮೇಲಕ್ಕೆ ಎತ್ತಲ್ಪಡುವಂತಾಗಲು, ಎಲ್ಲರಿಗೂ ದೇವರ ಅನುಗ್ರಹದ ಅಗತ್ಯತೆ ಇರುವದರ ಬಗ್ಗೆ ದೇವರು ನೀಡಿರುವ ಸಾಕ್ಷಿಪ್ರಮಾಣಗಳನ್ನು ಅವರು ದೃಢೀಕರಿಸಿರುವರು. ಪಾಪಿಗಳೆಲ್ಲರಿಗೆ ಪಾಪ ಪರಿಹಾರವನ್ನು ನೀಡಲು ಹಾಗು ತನ್ನ ಕೃಪೆಯನ್ನು ಅನುಗ್ರಹಿಸಲು ಪ್ರಸ್ತಾಪಿಸಿರುವಂಥ ದೇವರು ತನ್ನ ಮಾರ್ಗದಿಂದ ಹೊರಗೆ ಹೋದಂಥವರು ನಿಜವಾದ ಪಶ್ಚಾತಾಪದಿಂದ ತನ್ನ ಕಡೆಗೆ ತಿರುಗಿಕೊಂಡಾಗ ಅಂಥವರಿಗೆ ದೇವರು ತನ್ನ ಕರುಣೆ ತೋರುವನೆಂಬುದನ್ನು ಮನವರಿಕೆ ಮಾಡಿಕೊಳ್ಳುವಂತಾಗಲು ಹೀಗೆ ತಿಳುವಳಿಕೆಯನ್ನು ನೀಡಲಾಗಿರುವದು.

ವಚನ 1–3: "ಪ್ರೀತಿಸ್ವರೂಪನಾದ ದೇವರೇ ನನ್ನನ್ನು ಕರುಣಿಸು; ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು. ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು; ನನ್ನ ದೊಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ."

ದಾವೀದನು ಹೀಗೆ ಕರುಣೆಗಾಗಿ ಬೇಡಿಕೊಂಡಿರುವನು; ತನಗೆ ದೇವಾನುಗ್ರಹವು ಹಿಂದಿರುಗಿಸಲಾಗಿರುವದನ್ನು ಆತನು ಕಡೆಯಲ್ಲಿ ಮನವರಿಕೆಮಾಡಿಕೊಂಡಿದ್ದಾಗ್ಯೂ ಆ ಸಂಗತಿಯ ನಿಜವಾದ ತತ್ವವಿಚಾರದಲ್ಲಿ ಅಂದರೆ ದೇವರು ನ್ಯಾಯಸ್ವರೂಪನಾಗಿದ್ದರೂ ಆತನು ಹೇಗೆ ತನ್ನ ಕೋಪಕ್ಕೆ ಪಾತ್ರರಾದ ಪಾಪಿಗಳನ್ನು ನೀತಿವಂತರೆಂದು ನಿರ್ಣಯಿಸಲು ಸಾಧ್ಯವೆನ್ನುವ ಬಗ್ಗೆ ಏನೂ ತಿಳಿದಿರಲಿಲ್ಲ. ಆಹ್ ಹೌದು, ಸುವಾರ್ತಾಯುಗದಲ್ಲಿನ ದೇವರ ಮಕ್ಕಳ ದೃಷ್ಟಿಕೋನವು ಬಹು ಹೆಚ್ಚು ಆಶೀರ್ವದಿಸಲ್ಪಟ್ಟಿರುವದು. ಪರಲೋಕದಲ್ಲಿರುವ ನಮ್ಮ ತಂದೆಯು ನಮ್ಮ ಪಾಪಕ್ಷಮೆಯ ಹಾಗು ತನ್ನ ಕೃಪಾನುಗ್ರಹಕ್ಕೆ ಮರುಹೊಂದಾಣಿಕೆಯಾಗಿರುವದರ ಬಗ್ಗೆ ನಮಗೆ ತಿಳಿಸಿರುವದು ಮಾತ್ರವಲ್ಲದೆ ಆತನು ನಮ್ಮ ಪಾಪಗಳಿಗೆ ಶಿಕ್ಷಿಸದೇ, ಅಥವಾ ಅವುಗಳನ್ನು ಕ್ಷಮಿಸದೇ, ಅಲ್ಲದೆ ಈ ವಿಷಯದಲ್ಲಿನ ತನ್ನ ಸ್ವಂತ ನ್ಯಾಯವಿಧಿಯನ್ನು ಉಲ್ಲಂಘಿಸದೇ ಇದನ್ನು ಹೇಗೆ ನಿರ್ವಹಿಸಿರುವನೆಂಬುದರ ವಿವರಗಳನ್ನು ನಮಗೆ ದಯಪಾಲಿಸಿರುವನು. ಆತನು ನಮಗೆ ತೋರಿಸಿಕೊಟ್ಟಿರುವದೇನಂದರೆ ನಮ್ಮ ಕರ್ತನಾದ ಕ್ರಿಸ್ತನು [ಯಜ್ಞಕ್ಕೆ ನೇಮಕವಾದ] ದೇವರ ಕುರಿಮರಿಯಾಗಿದ್ದು, ಆತನ ಮರಣವು ನಮ್ಮ ಬದಲಿಗಾಗಿದ್ದು ಹಾಗು ಲೋಕದ ಪಾಪಗಳ ಪರಿಹಾರಕ್ಕಾಗಿ ಅರ್ಪಿತವಾಗಿತ್ತೆಂಬದು; ಅಲ್ಲದೆ ಆತನ ಮೂಲಕವಾಗಿ ಕೊಡಲಾದ ಕೃಪೆಯನ್ನು ಯಾರು ಅಂಗೀಕರಿಸಿಕೊಳ್ಳುವರೋ ಅವರಿಗೆ ಆತನ ಬಾಸುಂಡೆಗಳ ಮೂಲಕವಾದ ಪಾಪಕ್ಷಮೆ ಹಾಗು ಗುಣಪಡಿಸುವಿಕೆಗಳು ಅನುಗ್ರಹಿಸೋಣವಾಗುವವು. ನಿಜವಾಗಿಯೂ, ದಾವೀದನ ಪಾಪಗಳು ಅಳಿಸಲ್ಪಟ್ಟಿರಲಿಲ್ಲ ಇಲ್ಲವೇ ಕ್ಷಮಿಸಲ್ಪಟ್ಟಿರಲಿಲ್ಲ; ಯಾಕಂದರೆ ತಾನು ಪ್ರವಾದಿಯಾದ ನಾತಾನನ ಮೂಲಕವಾಗಿ ಮುಂತಿಳಿಸಿದಂತೆ (2 ಸಮುವೇಲ 12:11,12) ದೇವರು ಆತನಿಗೆ ದೇವಾನುಗ್ರಹ ಮತ್ತು ಅನ್ಯೋನ್ಯತೆಗಳನ್ನು ಹಿಂದಿರುಗಿಸಿಕೊಟ್ಟಿದ್ದಾಗ್ಯೂ, ಆತನ ಪಾಪಗಳಿಗಾಗಿ ಆತನನ್ನು ಕಠಿಣವಾಗಿ ಶಿಕ್ಷಿಸಿದ್ದನು. ಅಬ್ಷಾಲೋಮನ ದಂಗೆಯು ದೇವರು ಬಳಸಿದ ಸಾಧನವಾಗಿತ್ತು.

ನಿಜ, ವಿಧಿಸಿದ್ದ ಶಿಕ್ಷೆಯು ಪಾಪದ ಪೂರ್ಣ ಶಿಕ್ಷೆಯಾಗಿರಲಿಲ್ಲ, ಯಾಕಂದರೆ ಅದು ನಿತ್ಯವಾದ ಮರಣ ವಾಗುತ್ತಿತ್ತು. ದೇವರು ದಾವೀದನಿಗೆ ಕರುಣೆಯನ್ನು ತೋರಿಸಿದ್ದನು (ಹಾಗೆಯೇ ಇದು ಛಾಯಾರೂಪದ ಯಜ್ಞಗಳ ಆಧಾರದ ಮೇಲೆ ಸ್ಥಾಪಿತವಾದ ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯಲ್ಲಿನ ಯೆಹೂದ್ಯರೆಲ್ಲರಿಗಾಗಿತ್ತು ಸಹ) ಇದರಲ್ಲಿ ದೇವರು ದಾವೀದನ ಬಿದ್ದುಹೋದ ಸ್ಥಿತಿಗಾಗಿ ವಿನಾಯಿತಿಯನ್ನು ಮಾಡಿಕೊಟ್ಟಿದ್ದನು ಮತ್ತು ಹೀಗಾಗಿ ಆತನ ಪಾಪವನ್ನು ಶಿಕ್ಷಿಸಿದ್ದನು, ಅದು ನಿತ್ಯವಾದ ಮರಣದ ಮೂಲಕವಾಗಿ ಅಲ್ಲ, ಆದರೆ ತೊಂದರೆ ಮುಂತಾದವುಗಳ ಮೂಲಕವಾಗಿ, ಮೇಲೆ ಹೇಳಿರುವಂತೆ, ಅದು ಅಬ್ಷಾಲೋಮನ ದಂಗೆಯ ಸಂಬಂಧವಾಗಿತ್ತು.

ಅಲ್ಲದೆ ಛಾಯಾರೂಪವಾದ ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಯ ಅಧೀನದಲ್ಲಿದ್ದ ದಾವೀದನ ಹಾಗು ಇತರರ ವಿಷಯವಾಗಿದ್ದಂತೆಯೇ ಸಹ ಕ್ರಿಸ್ತನ ಮೂಲಕವಾದ ಹೊಸ ಒಡಂಬಡಿಕೆಯ ಅಧೀನದಲ್ಲಿರುವ ದೇವರ ಮಕ್ಕಳ ವಿಷಯವೂ ಇರುವದು. ಆದಾಮನ ಮೂಲಪಾಪ, ಮತ್ತು ನಮ್ಮ ಪಾಪದಲ್ಲಿನ ಮತ್ತು ನ್ಯೂನ್ಯತೆಗಳಲ್ಲಿನ ನಮ್ಮ ನೈಜ ಪ್ರವೃತ್ತಿಗೆ ವಿರುದ್ಧವಾದ ಸ್ವಯಂ ಪ್ರೇರಿತವಲ್ಲದಂಥದ ಪಾಪದ ಪಾಲು ಅಥವಾ ಪಾಪದ ಮಟ್ಟದವುಗಳನ್ನು ನಮ್ಮ ಈಡು ಬೆಲೆಯಾಗಿರುವ ಕ್ರಿಸ್ತನ ಮರಣವು ರದ್ದುಪಡಿಸುತ್ತದೆ. ಆದರೆ ಪಾಪದ ಯಾವುದೇ ಭಾಗವು ಮನಃಪೂರ್ವಕವಾಗಿದ್ದು, ಅದು ನಮ್ಮಿಂದ ಕಲ್ಪಿತವಾಗಿ ಒಪ್ಪಿಗೆಯಾಗಿದ್ದಲ್ಲಿ ಅದಕ್ಕೆ ಶಿಕ್ಷೆಯನ್ನು ಕೂಡಿಸಲಾಗಿದ್ದು ಅದನ್ನು ಈಗಿನ ಜೀವಿತದಲ್ಲಾಗಲೀ ಇಲ್ಲವೇ ಮುಂದಿನ ಜೀವಿತದಲ್ಲಾಗಲೀ ವಿಧಿಸಬೇಕಿರುವದು. ಮತ್ತು ಅಭಿಷಕ್ತನ ದೇಹದ ಸದಸ್ಯರೆಲ್ಲರ ವಿಷಯದಲ್ಲಿ ದೇವರು ಪ್ರಕಟಮಾಡಿ ಹೇಳಿರುವದೆಂದರೆ ಅಂಥ ಪಾಪಗಳು ಈಗಿನ ಜೀವಿತದಲ್ಲಿಯೇ ಶಿಕ್ಷಿಸಲಾಗುವದೆಂಬದೇ; ಅಪೋಸ್ತಲನ ಮೂಲಕವಾಗಿ ಹೀಗೆ ಹೇಳಿರುವನು: "ಕೆಲವರ ಪಾಪಕೃತ್ಯಗಳು [ಈಗಿನ ಕಾಲದಲ್ಲಿಯೇ] ನ್ಯಾಯಪೀಠದ ಮುಂದೆ ಹೋಗುತ್ತವೆ, ಬೇರೆಯವರದು ನಂತರದಲ್ಲಿ ಮುಂದಿನ ಜೀವಿತದಲ್ಲಿ ಹಿಂಬಾಲಿಸಿ ಹೋಗುತ್ತವೆ." ಆಗ ಕೆಲವರಿಗೆ ಅನೇಕ ಪೆಟ್ಟುಗಳನ್ನು ನೀಡಲಾಗುವದು ಮತ್ತು ಕೆಲವರಿಗೆ ಸ್ವಲ್ಪ ಪೆಟ್ಟುಗಳನ್ನು ಕೊಡಲಾಗುವದು. ಅಲ್ಲದೆ ಮತ್ತೆ ನಿರ್ದಿಷ್ಟವಾಗಿ ಹೇಳಿರುವದೇನಂದರೆ ಮಹಿಮೆಯುಳ್ಳ ಸಭೆಯವರಾಗಲು ಯೋಗ್ಯರೆಂದು ಎಣಿಸಲ್ಪಡುವವರೆಲ್ಲರ ವಿಷಯದಲ್ಲಿ ಅವರು ಲೋಕದವರ ಸಂಗಡ [ಮುಂದಿನ ಕಾಲದಲ್ಲಿ] ಅಪರಾಧಿಗಳೆಂದು ನಿರ್ಣಯವಾಗಬಾರದೆಂದು ಅವರನ್ನು ಈಗಲೇ ಶಿಕ್ಷಿಸಲಾಗುವದೆಂಬದು. – 1 ತಿಮೋಥೆ 5:24; ಲೂಕ 12:48; 1 ಕೊರಿಂಥ 11:32.

ವಚನ 4 ಮತ್ತು 5: ಇಲ್ಲಿ ದಾವೀದನ ಪಾಪದರಿಕೆಯು ದೇವರ ಕಡೆಗಿರುವದು–ತಪ್ಪಾಗಿ ನಡೆಸಲ್ಪಟ್ಟ ಊರಿಯನು ಸತ್ತುಹೋಗಿದ್ದನು. ಹೇಗೂ, ಆ ದಿನದಲ್ಲಿ ತನ್ನ ಇಚ್ಛೆಯಂತೆ ತನ್ನ ಜನರ ದೇಹಗಳು ಮತ್ತು ಜೀವಿತಗಳನ್ನು ಪಡೆಯುವದು ಒಬ್ಬ ಅರಸನ ಸವಲತ್ತಾಗಿರುವದೆಂದು ಎಣಿಸಲಾಗುತ್ತಿತ್ತು; ಇದರಂತೆಯೇ ಇತರ ಅರಸರು ನಿಸ್ಸಂದೇಹವಾಗಿಯೂ ರೂಢಿಯಾಗಿ ಕೆಟ್ಟದ್ದನ್ನು ಮಾಡುವವರಾಗಿದ್ದರು. ಆದರೆ ದಾವೀದನು ಜ್ಞಾನಪ್ರಕಾಶವನ್ನು ಪಡೆದವನಾಗಿದ್ದು ಉತ್ತಮ ರೀತಿಯಲ್ಲಿ ತಿಳಿದುಕೊಂಡಿದ್ದನು, ಆತನ ಅಪರಾಧಗಳು ಇತರರಿಂದ ಅಲ್ಪವೆಂದು ನಿರ್ಲಕ್ಷಿಸಲ್ಪಟ್ಟಿದ್ದರೂ ದಾವೀದನು ದೇವರ ಎದುರಿನಲ್ಲಿ ತನ್ನ ಪಾಪಪ್ರಜ್ಞೆಯ ಬಗ್ಗೆ ಅರಿತುಕೊಂಡವನಾಗಿದ್ದು ಆತನ ಕರುಣೆಗಾಗಿ ಬೇಡಿಕೊಂಡಿದ್ದನು. ಇತರರು ತಿಳಿದುಕೊಳ್ಳಬಹುದಾದಂತೆ ಆತನು ತನ್ನ ಪಾಪದ ಅರಿಕೆಯನ್ನು ಮಾಡಿದ್ದನು, ದೇವರಿಂದ ಶಿಕ್ಷೆಯು ಬಂದಾಗ, ದೇವರ ನ್ಯಾಯತೀರ್ಪು ಮತ್ತು ಅರಸನ ಸಂಕಷ್ಟವು ಕೇವಲ ಶಿಕ್ಷೆಯಾಗಿದ್ದು ದೇವರ ಒಡಂಬಡಿಕೆ ಸಂಬಂಧವಾದ ವಾಗ್ದಾನದ ಉಲ್ಲಂಘನೆಯಾಗಿರಲಿಲ್ಲ.

ವಚನ 5–12: ವಚನ 5ರಲ್ಲಿ ತನ್ನ ಮೂಲ ಪಾಪದ ಬಗ್ಗೆ ಅರಿಕೆಮಾಡಿದ ನಂತರ ಅಂದರೆ ಬಿದ್ದುಹೋಗುವಿಕೆಯ ಮೂಲಕವಾದ ತನ್ನ ದುರ್ಬಲತೆಯ ಬಗ್ಗೆ–ಆತನು ವಚನ 6ರಲ್ಲಿ ದೈವಿಕ ಯೋಚನೆಯ ಬಗ್ಗೆ ತನಗೆ ಸ್ಪಷ್ಟವಾಗಿ ಮನವರಿಕೆಯಾಗಿರುವದನ್ನು ಅತನು ತೋರಿಸಿಕೊಟ್ಟಿರುವನು. ಶಾರೀರಿಕವಾಗಿ ಬಿದ್ದುಹೋದವನಾಗಿ ಬಲಹೀನನಾಗಿದ್ದು, ಹೀಗಾಗಿ ಪರಿಪೂರ್ಣವಾಗಿ ಕಾರ್ಯನಿರ್ವಹಿಸಲು ಅಸಮರ್ಥ–ನಾಗಿದ್ದಾಗ್ಯೂ, ದೇವರು ಹೃದಯದ ಪರಿಶುದ್ಧತೆಯನ್ನು (ಉದ್ದೇಶದಲ್ಲಿನ ಹಾಗು ಪ್ರೇರಣೆಯಲ್ಲಿನ ಪರಿಶುದ್ಧತೆ) ಎದುರುನೋಡುವವನಾಗಿ ಅದನ್ನು ಬಯಸುವವನಾಗಿದ್ದನು; ಅಲ್ಲದೆ ದಾವೀದನು ತಾನು ಇದನ್ನು ತೋರ್ಪಡಿಸಿ–ರಲಿಲ್ಲವೆಂಬುದನ್ನು ಅರಿತುಕೊಂಡಿದ್ದನು. ಹೀಗಾಗಿ ಮುಂದಿನ ವಚನದಲ್ಲಿನ ಆತನ ಪ್ರಾರ್ಥನೆಯು ಪಾಪಕ್ಕಾಗಿ ತನ್ನನ್ನು ಕ್ಷಮಿಸುವದಾಗಿರಲ್ಲಿಲ್ಲ, ಆದರೆ ಅದು ತನ್ನ ಹೃದಯವನ್ನು ನಿರ್ಮಲಗೊಳಿಸಿ ದೇವರ ಗುಣಗಳಿಗೆ ಹಾಗು ಯೋಜನೆಗಳಿಗೆ ತನ್ನನ್ನು ಹೊಂದಾಣಿಸಿಕೊಳ್ಳಬೇಕೆಂಬದಾಗಿತ್ತು. ಕೆಲವರು ಸುವಾರ್ತಾಯುಗದ ವ್ಯವಸ್ಥೆಯ ಇನ್ನೂ ಹೆಚ್ಚು ಸ್ಪಷ್ಟವಾದ ಬೆಳಕಿನಲ್ಲಿ ಜೀವಿಸುತ್ತಿದ್ದು ದಾವೀದನು ಬಹು ಸ್ಪಷ್ಟವಾಗಿ ವ್ಯಕ್ತಪಡಿಸಿದಂಥದ್ದನ್ನು ಕಾಣಲು ವಿಫಲರಾಗಿರುವರು, ಬದಲಾಗಿ ಕೆಲವರು ದೇವರು ಎಲ್ಲಾ ವಿಧವಾದ ಪಾಪಗಳಿಗೆ ಹಾಗು ಅಪರಾಧಗಳಿಗೆ ಮತ್ತು ದುಷ್ಟತನಗಳಿಗೆ ಪ್ರೇರಣೆಮಾಡಿ ಅವುಗಳು ನೆರವೇರುವಂತೆ ಮಾಡಿದ್ದಾನೆಂದು ಆರೋಪಿಸು–ವಂಥರಾಗಿರುವರು. ಅಯ್ಯೋ, ಇದು ಎಷ್ಟು ವಿಚಿತ್ರ. ಆದರೆ ದಾವೀದನು ಇದರಲ್ಲಿ ಸರಿಯಾಗಿದ್ದನು, ಅಲ್ಲದೆ ಮುಂದೆ ವಿವೇಕಿಗಳಾಗುವವರು ಎನ್ನಿಸಿಕೊಳ್ಳುವಂಥ ಇವರು ನಿರರ್ಥಕವಾಗಿ ಊಹೆಮಾಡಿಕೊಂಡು ಕತ್ತಲನ್ನು ತುಂಬಿಕೊಂಡ ಅಜ್ಞಾನಿಗಳಾಗಿರುವರು.

ವಚನ 13: ಎಂಥಾ ಭವ್ಯವಾದ ಒಂದು ಮೂಲತತ್ವವು ಇಲ್ಲಿ ಪ್ರತಿಪಾದಿಸಲಾಗಿರುವದು. ಮುಂದೆ ದೇವರಿಂದ ಬೋಧಕರಾಗಿ ಬಳಸಲ್ಪಟ್ಟವರಾಗಿ ಅತಿಕ್ರಮಣಕಾರರಿಗೆ ಉಪದೇಶಿಸುವಂಥರು, ಇಂದಿನ ಕಾಲದಲ್ಲಿಯಾಗಲೀ ಇಲ್ಲವೇ ಬರುವಂಥ ಕಾಲದಲ್ಲಿಯಾಗಲೀ, ಅವರು ಹೃದಯದಲ್ಲಿ ಸಂಪೂರ್ಣವಾಗಿ ನಿರ್ಮಲರಾಗಿ ಮತ್ತು ಪರಿಶುದ್ಧತೆಯಿಂದ ದೇವರಿಗೆ ಪ್ರತಿಷ್ಠಿಸಿಕೊಂಡಿರಬೇಕು. ಅಲ್ಲದೆ ಈ ಸ್ಥಿತಿಯನ್ನು ಪಡೆಯಲು ಇರುವಂಥ ಕೇವಲ ಒಂದೇ ಮಾರ್ಗವೆಂದರೆ ಅದು ಲೋಕದ ಪಾಪವನ್ನು ನಿವಾರಣೆ ಮಾಡುವ ದೇವರ ಯಜ್ಞದ ಕುರಿಮರಿಯ ಯಜ್ಞಫಲವನ್ನು ನಂಬಿಕೆಯ ಮೂಲಕವಾಗಿ ಭದ್ರವಾಗಿ ಹಿಡಿದುಕೊಂಡು, ತಮ್ಮ ಪಾಪವು ಆತನ [ಕ್ರಿಸ್ತನ] ಮೂಲಕವಾಗಿ ಅಳಿಸಿಕೊಳ್ಳಲ್ಪಟ್ಟ ನಂತರ ಆತ್ಮದಲ್ಲಿ ಪುನಶ್ಚೇತನಹೊಂದಿದವರಾಗಿ ಸತ್ಯದ ಮೂಲಕ ಪ್ರತಿಷ್ಠಿತ–ರಾಗಬೇಕೆಂಬದು.

ಕೀರ್ತನೆ 51

ದಾವೀದನ ಕೀರ್ತನೆಯು. ದಾವೀದನು ಬತ್ಷೇಬಳ ಬಳಿಗೆ ಹೋದ ಮೇಲೆ ಪ್ರವಾದಿಯಾದ ನಾತಾನನು ಅವನ ಹತ್ತಿರ ಬಂದಾಗ ದಾವೀದನು ರಚಿಸಿದ ಕೀರ್ತನೆ.

01) ಪ್ರೀತಿಸ್ವರೂಪನಾದ ದೇವರೇ ನನ್ನನ್ನು ಕರುಣಿಸು;
ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು.
02) ನನ್ನ ಪಾಪವನ್ನು ಪೂರ್ಣವಾಗಿ ತೊಳೆದುಬಿಡು;
ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು.
03) ನಾನು ದ್ರೋಹಿಯೆಂದು ನಾನೇ ಒಪ್ಪಿಕೊಂಡಿದ್ದೇನೆ;
ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ.
04) ನಿನಗೇ ಕೇವಲ ನಿನಗೇ ತಪ್ಪುಮಾಡಿದ್ದೇನೆ;
ನಿನ್ನ ದೃಷ್ಟಿಗೆ ಕೆಟ್ಟದ್ದಾಗಿರುವದನ್ನೇ ಮಾಡಿದ್ದೇನೆ;
ನಿನ್ನ ನಿರ್ಣಯ ನ್ಯಾಯವಾಗಿಯೂ ನಿನ್ನ ತೀರ್ಪು
ನಿಷ್ಕಳಂಕವಾಗಿಯೂ ಇರುತ್ತದಲ್ಲಾ.
05) ಹುಟ್ಟಿದಂದಿನಿಂದ ನಾನು ಪಾಪಿಯೇ;
ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ.
06)ಯಥಾರ್ಥಚಿತ್ತವೇ ನಿನಗೆ ಸಂತೋಷ;
ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು.
07)ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮಕಿಸಿಯೋ
ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದುಬಿಡು ಆಗ
ಶುದ್ಧನಾಗಿರುವೆನು.
ನನ್ನನ್ನು ತೊಳೆ, ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು.
08)ನನ್ನಲ್ಲಿ ಸಂಭ್ರಮೋತ್ಸವದ ಧ್ವನಿ ಉಂಟಾಗುವಂತೆ ಮಾಡು;
ಆಗ ನೀನು ಜಜ್ಜಿದ ಎಲುಬುಗಳು ಆನಂದ ಪಡುವವು.
09)ನನ್ನ ದೋಷಕ್ಕೆ ವಿಮುಖನಾಗು; ನನ್ನ ಪಾಪಗಳನ್ನೆಲ್ಲಾ
ಅಳಿಸಿಬಿಡು.

10) ದೇವರೇ. ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು.
11) ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ;
12) ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು; ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು.
13) ಆಗ ನಿನ್ನ ಮಾರ್ಗವನ್ನು ದ್ರೋಹಿಗಳಿಗೆ ಬೋಧಿಸುವೆನು; ಪಾಪಿಗಳು ನಿನ್ನ ಕಡೆಗೆ ತಿರಿಗಿಕೊಳ್ಳುವರು.
14) ದೇವರೇ, ನನ್ನ ರಕ್ಷಣಕರ್ತನೇ, ಪ್ರಾಣಹತ್ಯದ ಅಪರಾಧದಿಂದ ನನ್ನನ್ನು ಬಿಡಿಸು; ಆಗ ನನ್ನ ನಾಲಿಗೆಯು ಉತ್ಸಾಹದಿಂದ ನಿನ್ನ ಸತ್ಯ ಸಂಧತೆಯನ್ನು ಕೊಂಡಾಡುವದು.
15) ಕರ್ತನೇ, ನನ್ನ ಬಾಯಿ ನಿನ್ನನ್ನು ಸ್ತೋತ್ರಮಾಡುವಂತೆ ನನ್ನ ತುಟಿಗಳನ್ನು ತೆರೆಯಮಾಡು;
16) ನಿನಗೆ ಯಜ್ಞಗಳಲ್ಲಿ ಅಪೇಕ್ಷೆಯಿಲ್ಲ ಇದ್ದರೆ ಸಮರ್ಪಿಸುವೆನು. ಸರ್ವಾಂಗಹೋಮಗಳಲ್ಲಿ ನಿನಗೆ ಸಂತೋಷವಿಲ್ಲ;
17) ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ ಪಶ್ಚಾತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.
18) ಚಿಯೋನ್ ಪಟ್ಟಣವನ್ನು ಕಟಾಕ್ಷಿಸಿ ಅದಕ್ಕೆ ಶುಭವನ್ನುಂಟು ಮಾಡು; ಯೆರೂಸಲೇಮಿನ ಪೌಳಿಗೋಡೆಯನ್ನು ಕಟ್ಟಿಸು.
19) ಜನರು ನ್ಯಾಯವಾದ ಯಜ್ಞಗಳನ್ನೂ ಸರ್ವಾಂಗ ಹೋಮಗಳನ್ನೂ ಸಮರ್ಪಿಸಿ ನಿನಗೆ ಸಂತೋಷವನ್ನುಂಟುಮಾಡುವರು. ನಿನ್ನ ಯಜ್ಞವೇದಿಯ ಮೇಲೆ ಹೋರಿಗಳನ್ನು ಸಮರ್ಪಿಸುವರು.

*****

ಅಬ್ಷಾಲೋಮನ ದಂಗೆ

ರೀಪ್ರಿಂಟ್ಸ್ ಪುಟ 2024

2 ಸಮುವೇಲ 15:1–12

"ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ." – ವಿಮೋಚನಾಕಾಂಡ 20:12

ಅಬ್ಷಾಲೋಮನ ದಂಗೆಯ ಸಂಬಂಧದ ಈ ವಿವರದಲ್ಲಿ ವಿವೇಚನಾಪೂರ್ಣ ಮನಸ್ಸುಗಳಿಗೆ ಅನೇಕ ವಿಧವಾದ ಮುಖ್ಯ ಪಾಠಗಳಿರುತ್ತವೆ. (1) ಮೊಟ್ಟ ಮೊದಲನೆಯದಾಗಿ, ಅಬ್ಷಾಲೋಮನಲ್ಲಿ ತಂದೆತಾಯಿಗಳಿಗೆ ಅಗೌರವವನ್ನು ತೋರಿದಂಥ ಪಾಪವನ್ನು ನಾವೆಲ್ಲರೂ ಗಮನಿಸುತ್ತೇವೆ. ತುಂಬು ವಯಸ್ಸಿನ ಅನುಭವ ಹಾಗು ಜ್ಞಾನಕ್ಕೆ ಕಿವಿಗೊಡುವವದರಿಂದ ಯೌವನವನ್ನು ಸಂರಕ್ಷಿಸುತ್ತದೆ, ಅಲ್ಲದೆ ವಿಶೇಷವಾಗಿ ತಂದೆತಾಯಿಗಳ ಅನುಭವ ಹಾಗು ಜ್ಞಾನದ ವಿಷಯದಲ್ಲಿ ಅವರ ಪ್ರೀತಿಯು ತಾವು ಅನುಭವದಿಂದಾಗಲೀ ಅಥವಾ ಗಮನಿಸುವದರಿಂದಾಗಲೀ ಕಲಿತುಕೊಂಡ ಜೀವಿತದ ಕೆಡಕುಗಳ ಅನುಭವವನ್ನು ತಮ್ಮ ಗಂಡುಹೆಣ್ಣು ಮಕ್ಕಳನ್ನು ಕಾಪಾಡಲು ಯಾವಾಗಲೂ ಬಳಸಿಕೊಳ್ಳಲು ಬಯಸುವವರಾಗಿರುವರು. ಅಯ್ಯೋ, ಯೌವನಸ್ಥನು! ಕಹಿ ಅನುಭದ ಮೂಲಕವಾಗಿ ಕ್ರಮೇಣ ತನ್ನ ಅವಿವೇಕತನವನ್ನು ತಿಳಿದುಕೊಳ್ಳುವ ವರೆಗೂ ದೈವಿಕವಾಗಿ ಒದಗಿಸಲಾಗಿರುವಂಥ ರಕ್ಷಣೆಯನ್ನು ಆಗಾಗ್ಗೆ ಬಹುವಾಗಿ ಅಗೌರವಿಸುವನು. ಯೌವನದ ನಿರೀಕ್ಷೆಯು ಸಹಜವಾಗಿಯೇ ಭವಿಷ್ಯತ್ತನ್ನು ವೈಭವದಿಂದ ಪ್ರಜ್ವಲಿಸುವಂತೆ; ಹಾಗು ಶಿಸ್ತುಕ್ರಮವಿಲ್ಲದ, ಸಂಯಮರಹಿತವಾದ ಹಾಗು ಸಂಕೋಚಸ್ವಭಾವದ ದೃಢ ಮನೋಭಾವವು ತನ್ನ ಉಜ್ವಲ ಯಶಸ್ಸಿನ ಸಿದ್ಧಾಂತಗಳ ಹೊಸ ಯೋಜನೆಗಳನ್ನ ಅನುಷ್ಠಾನಗೊಳಿಸಲು ಭರವಸೆಯಿಂದ ಧುಮುಕುವದು, ಕ್ರಮೇಣವಾಗಿ ಇದು ಜೀವನದ ಕಠೋರ ವಾಸ್ತವತೆಯ ಮುಂದೆ ಆ ಉಜ್ವಲ ಕಲ್ಪನೆಗಳು ಬಾಡಿಹೋಗುವು.

ಅಬ್ಷಾಲೋಮನ ಸಂಗತಿಯು ಹೀಗೆಯೇ ಇತ್ತು; ಅಲ್ಲದೆ "ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು" ಎಂಬ ದೇವಾಜ್ಞೆಯನ್ನು ಅಗೌರವಿಸುವ ಪ್ರತಿಯೊಬ್ಬ ಯವನಸ್ಥನ ಸಂಗತಿಯೂ ಹೀಗೆಯೇ ಇರುವದು. ಮತ್ತೆ ಅಪೋಸ್ತಲನು ವ್ಯಕ್ತಪಡಿಸಿರುವ ದೆಂದರೆ "ಮಕ್ಕಳೇ, ...ನೀವು ತಂದೆತಾಯಿಗಳ ಮಾತನ್ನು ಕೇಳಬೇಕು." ಎಂಬದು. ತಂದೆತಾಯಿಗಳನ್ನು ಸನ್ಮಾನಿಸುವದಕ್ಕೆ ಸಂಬಂಧಿಸಿದ ಕರ್ತವ್ಯವು ಹೇಗೂ ಅವರು ಮಾತುಕೇಳಬೇಕೆಂಬ ಹಂಗಿಗಿಂತಲೂ ಹೆಚ್ಚು ವ್ಯಾಪ್ತಿ ಹೊಂದಿರುವದು; ವಿಶೇಷವಾಗಿ ಇದು ಬಾಲ್ಯಾವಸ್ಥೆಗೆ ಅನ್ವಯಿಸುವದಾಗಿದ್ದು, ಪ್ರೌಢತೆಯ ವರುಷಗಳಿಗಲ್ಲ. ತಂದೆತಾಯಿಗಳನ್ನು ಸನ್ಮಾನಿಸುವಂಥದರ ಕರ್ತವ್ಯವು ತೊಟ್ಟಿಲಿನಿಂದ ಸಮಾಧಿಯು ವರೆಗೂ ವಿಸ್ತರಿಸಿಕೊಂಡಿದ್ದು ತಂದೆತಾಯಿಗಳ ಪರವಾದ ಅಂತಿಮ ಕರ್ತವ್ಯಗಳನ್ನು ನೆರವೇರಿಸಿದ ನಂತರ ಅವರ ನಿರ್ಜೀವ ಆಕೃತಿಗಳನ್ನು ತಮ್ಮ ನೆನಪಿನ ಸಂರಕ್ಷಣಾಗಾರದ ಗೌರವಯುತ ಸ್ಥಳದಲ್ಲಿ ಆಗಲೂ ಹಿಡಿದಿಟ್ಟುಕೊಂಡಿರಬೇಕು. ಇಳಿವಯಸ್ಸಿನವರ ಕಡಗೆ ವಿಶೇಷವಾಗಿ ಮುಪ್ಪಿನ ವಯಸ್ಸಿನವರಿಗೆ ಒಲವು ತೋರುವದು ಹಾಗು ಅವರನ್ನು ಮಾನ್ಯಮಾಡುವದಕ್ಕಿಂತಲೂ ಹೆಚ್ಚು ಸೊಗಸಾದುದು ಯವ್ವನದಲ್ಲಿ ಬೇರೆ ಯಾವುದೂ ಇರುವದಿಲ್ಲ. "ತಲೆನರೆತ ವೃದ್ಧರ ಮುಂದೆ ಎದ್ದು ನಿಂತು ಅವರನ್ನು ಸನ್ಮಾನಿಸಬೇಕು." – ಯಾಜಕಕಾಂಡ. 19:32

(2) ತನ್ನ ತಂದೆಯ ದೇವರನ್ನು ಅಗೌರವಿಸುವಂಥ ಪಾಪವು ಅಬ್ಷಾಲೋಮನಲ್ಲಿದ್ದುದನ್ನು ನಾವು ಗಮನಿಸಿದ್ದೇವೆ.

ಇದು ಆತನು ತನ್ನ ತಂದೆಯ ಕಡೆಗೆ ಪ್ರೀತಿಯಿಲ್ಲದಿರುವದು ಮತ್ತು ಭರವಸೆಯಿಲ್ಲದಿರುವದರ ಸಹಜ ಪರಿಣಾಮವಾಗಿತ್ತು. ರಾಜ್ಯವು ದೇವರದಾಗಿರುವದೆಂಬದನ್ನು ಹಾಗು ಆತನು ತನಗೆ ಬೇಕಾದವರನ್ನು ಸಿಂಹಾಸನದಲ್ಲಿ ಇರಿಸುವನೆಂಬ ಅಂಶವನ್ನು ಆತನು ಸಂಪೂರ್ಣವಾಗಿ ಅಲಕ್ಷಿಸಿದ್ದನು; ಹೀಗಾಗಿ ಅತನ ಯೌವನದ ಆಕಾಂಕ್ಷೆಯು ತನ್ನ ತಂದೆಯಾದ ದಾವೀದನಿಗೆ ವಿರೋಧವಾಗಿ ಒಳಸಂಚು ಮಾಡುವದು ಮಾತ್ರವಲ್ಲದೆ ದಾವೀದನನ್ನು ರಾಜನನ್ನಾಗಿ ಅಭಿಷೇಕಿಸಿದ ದೇವರಿಗೆ ವಿರುದ್ಧವಾಗಿಯೂ ಸಹ ಆಗಿತ್ತು; ದೇವರು ದಾವೀದನ ಸಿಂಹಾಸನವನ್ನು ಸ್ಥಿರಪಡಿಸಿ, ಆತನ ವೈರಿಗಳನ್ನು ಆತನಿಗೆ ಅಧೀನರಾಗಮಾಡುವದರ ಬಗ್ಗೆ ಆತನ ಉತ್ತರಾಧಿಕಾರಿಗೂ ಸಹ ಇದನ್ನು ಸೂಚಿಸಿದ್ದನು. ತಾನು ಬಂಡಾಯವೆದ್ದುದರಲ್ಲಿ ತನ್ನ ತಂದೆಯಾದ ದಾವೀದನನ್ನು ತಾನು ಮೀರಿಸುವದು ಮಾತ್ರವಲ್ಲದೆ ಸರ್ವಶಕ್ತನಾದ ಯೆಹೋವನನ್ನು ಸಹ ಮೀರಿಸಲು ವ್ಯರ್ಥವಾಗಿ ಆಲೋಚಿಸಿದ್ದನು. ಅದೆಷ್ಟು ವ್ಯರ್ಥ ಹಾಗು ಮೂರ್ಖತನ! ಅದೆಂಥಾ ಅಜಾಗ್ರತೆ ಹಾಗೂ ದಡ್ಡತನ, ಅಲ್ಲದೆ ಇನ್ನೂ ಅದೆಷ್ಟು ಮಂದಿ ಈ ಮೂರ್ಖತನವನ್ನು ಮತ್ತೆ ಮತ್ತೆ ಮಾಡುತ್ತಿರುವರು, ಮತ್ತು ನರಪುತ್ರರಲ್ಲಿ ಕೆಲವೇ ಕೆಲವರು ನಿಂತುಕೊಂಡು ಸರ್ವಶಕ್ತನನ್ನು ಪ್ರತಿಭಟಿಸುವದಕ್ಕೆ ಎತ್ತಿದಂಥ ಮಾಂಸದ ತೋಳು ಅದೆಷ್ಟು ದುರ್ಬಲವೆಂಬುದನ್ನು ವಿವೇಚನೆ ಮಾಡಿರುವರು.

(3) ರಾಜಕೀಯ ಒಳಸಂಚು ಹೇಗೆ ಜನರ ಹೃದಯವನ್ನು ಕಸಿದುಕೊಂಡು ಅಬ್ಷಾಲೋಮನ ಉದ್ದೇಶವು ತಾತ್ಕಾಲಿಕವಾಗಿ ಬಹು ಯಶಸ್ಸಾದ್ದುದ್ದನ್ನು ನಾವು ನೋಡುತ್ತೇವೆ. ಹೀಗಾಗಿ– **"ಜನರು ಅಬ್ಷಾಲೋಮನನ್ನು ಕೂಡಿಕೊಳ್ಳುತ್ತಾ ಬಂದದ್ದರಿಂದ ಒಳಸಂಚು ಬಲವಾಗುತ್ತಾ ಹೋಯಿತು."** [1 ಸಮುವೇಲ 15:12] ಆದರೆ ಒಳಸಂಚಿನ ಪ್ರತಿಯೊಂದು ಯಶಸ್ಸಿನ ಹೆಜ್ಜೆಯು ಯುವನಸ್ಥನನ್ನು ಉತ್ತುಂಗದ ಸಮೀಪಕ್ಕೆ ಬರಮಾಡಿ ಆಮೂಲಕವಾಗಿ ಆತನು ಕಡೆಯಲ್ಲಿ ಬೀಳುವಂತೆ ಮಾಡಿತ್ತು. ಹೀಗೆಯೇ ಪ್ರತಿಯೊಂದು ದುಷ್ಟ ತಂತ್ರೋಪಾಯದ ತಾತ್ಕಾಲಿಕ ಯಶಸ್ಸಿನ ಸಂಗತಿಯೂ ಇರುವದು; ಬಹುವಾಗಿ ಆಶಿಸಲಾದ ಉನ್ನತಿಯು ಕೇವಲ ಅಂತ್ಯದಲ್ಲಿನ ವಿನಾಶಕ್ಕೆ ಬಲವನ್ನು ಕೂಡಿಸುತ್ತದೆ. ಈ ದೃಷ್ಟಿಯಿಂದ ವಕ್ರಬುದ್ಧಿಯೊಡನೆಯ ಅತಿ ನೈಜ ಸ್ನೇಹವು ದೃಢ ಸಂಕಲ್ಪದ್ದಾಗಿದ್ದು, ಬುದ್ಧಿವಂತಿಕೆಯಿಂದ ಚೆನ್ನಾಗಿ ಯೋಜಿಸಲಾದ ಪ್ರತಿಭಟನೆಯಾಗಿರಲು, ಅದನ್ನು ಯಾವ ಹೊಗಳಿಕೆಯೂ ಅಥವಾ ರಾಜಕೀಯ ಉಪಾಯವೂ ಜಯಿಸಲು ಸಾಧ್ಯವಾಗದೆಂಬುದನ್ನು ತೋರ್ಪಡಿಸುವದು. ಕೆಲವೊಮ್ಮೆ ಇದು ಒಬ್ಬ ಪಾಪಿಯನ್ನು ಆತನ ತಪ್ಪಾದ ಮಾರ್ಗದಿಂದ ತಿರುಗಿಕೊಳ್ಳುವಂತಾಗಮಾಡಿ ಒಂದು ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಕಾಪಾಡುವದಾದರೂ, ಹೃದಯವನ್ನು ತಿಳಿದುಕೊಳ್ಳುವಂಥವನನ್ನು ಹೊರತುಪಡಿಸಿದಲ್ಲಿ, ಇಂಥಾ ಸ್ನೇಹವನ್ನು ಅಪರೂಪವಾಗಿ ಪ್ರಸಂಶಿಸಲಾಗುವದು. ಇಂಥಾ ಒಂದು ಸೇವೆಗೆ ತೊಡಗಿಸಿಕೊಳ್ಳಲು ವಿಶೇಷವಾಗಿ ಭವಿಷ್ಯದಲ್ಲಿನ ಕ್ರಿಸನ ದೇಹದಲ್ಲಿ ಸದಸ್ಯರಾಗಿ ಈಗ ನಿತ್ಯ ಜೀವಕ್ಕಾಗಿ ಪರೀಕ್ಷೆಯಲ್ಲಿದ್ದು ತಮ್ಮ ಉನ್ನತ ಸ್ಥಾನದ ಕರೆಯ ಬಿರುದಿಗೆ ಸಂಬಂಧಿಸಿದ ಓಟದಲ್ಲಿರುವಂಥವರಿಗೆ ಅವರು ಒಂದು ವೇಳೆ ದಾರಿತಪ್ಪಿದವರಾಗಿ ದೇವರ ಕೃಪೆಯಿಂದ ತಪ್ಪಿಹೋಗದಂತೆ ಸಹಾಯಮಾಡುವಂತಾಗಲು ಅದೆಷ್ಟು ದೊಡ್ಡ ಸ್ವಸ್ಥಚಿತ್ತ ತಾಳ್ಮೆ ನಂಬಿಕೆ ನಿರೀಕ್ಷೆ ಮತ್ತು ಪ್ರೀತಿಯ ಅವಶ್ಯಕತೆಯಿರುವದು.

(4) ಪ್ರಗತಿಯಲ್ಲಿರುವ ದುಷ್ಟ ಹಾದಿಯು ಅಂದರೆ ತಂದೆಯ ಕಡೆಗೆ ತೋರುವ ಕೃತಜ್ಞತಾಹೀನತೆ ಹಾಗು ಅಗೌರವವೆಂಬ ಪಾಪವು ಒಂದು ಆಕಾಂಕ್ಷೆಯನ್ನು ಹಾಗು ದೇವರನ್ನು ತಿರಸ್ಕರಿಸುವಂಥದನ್ನು ತಂದಿತ್ತೆಂಬುದನ್ನು ನಾವು ಗಮನಿಸಿದ್ದೇವೆ; ಹೇಗೆ ಇದು ನೀತಿಬಾಹಿರವಾದ ರಾಜಕೀಯ ಒಳಸಂಚು, ಮುಖಸ್ತುತಿ ಮತ್ತು ಮಿಥ್ಯೆಯ ಕಡೆಗೆ ನಡೆಸಿದ್ದು, ಮತ್ತು ಕಡೆಯಲ್ಲಿ ಅರಸನಿಗೆ ಹಾಗು ದೇವರಿಗೆ ರಾಜದ್ರೋಹದಂಥ ಒಂದು ದುಷ್ಟ ಪಿತೂರಿಯ ದುಸ್ಸಾಹಸದ ಕಡೆಗೆ ಆತನನ್ನು ನಡೆಸಿತ್ತೆಂಬುದನ್ನು ನಾವು ಗಮನಿಸಿದ್ದೇವೆ. ಇದೆಲ್ಲಾದರಲ್ಲಿಯೂ ಅಬ್ಷಾಲೋಮನು ಸೊಕ್ಕಿನ ಮನೋಭಾವವನ್ನು ಬೆಳೆಸಿಕೊಂಡು ಬಂದಿದ್ದು, ಇದು ಅವನನ್ನು ಒಂದು ಪತನಕ್ಕೆ ಮುಂದೆ ಸಾಗಿಸಿಕೊಡು ಹೋಗಿತ್ತು.

ಅಬ್ಷಾಲೋಮನು ಹಿಡಿದ ಮಾರ್ಗ ಹಾಗು ಯೌವನಸ್ಥನಿಗೆ ಅದರಲ್ಲಿರುವ ಪಾಠಗಳನ್ನು ಹೀಗೆ ಗಮನಿ–ಸುವಾಗ ಇದರಲ್ಲಿ ತಂದೆತಾಯಿಗಳಿಗೆ ಇರುವ ಬುದ್ಧಿವಂತಿಕೆಯ ಒಂದು ಸುಳಿವು ಇದ್ದು ಅದನ್ನು ಅವರು ಗಮನಕ್ಕೆ ತೆಗೆದುಕೊಳ್ಳುವದು ಒಳಿತು. ದಾವೀದನ ಒಂದು ನಿದರ್ಶನವು ತನ್ನ ಮಕ್ಕಳಿಗೆ ದೊಷರಹಿತದ್ದಾಗಿರಲಿಲ್ಲ; ಆತನ ಯೌವ್ವನದಲ್ಲಿನ ಹಾಗು ನಂತರದ ವರುಷಗಳಲ್ಲಿನ ಪಾಪಗಳು ಅತಿ ಅನಪೇಕ್ಷಿತವಾದ ಒಂದು ಫಲವನ್ನು ನೀಡಿತ್ತು. ಅವನು ಬಹು ಸಂಖ್ಯೆಯ ಹೆಂಡತಿಯರನ್ನು ತನಗಾಗಿ ತೆಗೆದುಕೊಳ್ಳುವದರ ಮೂಲಕವಾಗಿ ದೇವರ ನಿಯಮವನ್ನು ಉಲ್ಲಂಘಿಸಿದ್ದು ಮಾತ್ರವಲ್ಲದೆ (ಧರ್ಮೋ. 17:14–17) ಕೆಲವು ಅನ್ಯಜಾತಿಯ ಹೆಂಡತಿಯರನ್ನು ತೆಗೆದುಕೊಳ್ಳುವದರ ಮೂಲಕವಾಗಿ ಅವನು ಹೆಚ್ಚಾಗಿ ಆಜ್ಞೆಮೀರಿದ್ದನು; ಅಬ್ಷಾಲೋಮನ ತಾಯಿಯು ಸಿರಿಯಾ ದೇಶದ ಗೆಶೂರಿನ ಅರಸನಾದ ತಲ್ಮೈಯ ಮಗಳಾಗಿದ್ದಳು; ಬಹು ಪತ್ನಿಯರಿಂದ ಕೂಡಿದ ಆತನ ಮನೆತನದ ಮಕ್ಕಳು ತಮ್ಮ ತಂದೆಯಿಂದ ಪ್ರತ್ಯೇಕವಾಗಿ ಅನೇಕರಾದ ತಮ್ಮ ತಾಯಂದಿರೊಡನೆ ಜೀವಿಸುತ್ತಿದ್ದು, ಬಹುಮಟ್ಟಿಗೆ ಅನಿವಾರ್ಯವಾಗಿ ಅವರು ಒಬ್ಬ ತಂದೆಯ ಪ್ರಭಾವ ಮತ್ತು ಪರಿಪಾಲನೆಯಿಲ್ಲ ದವರಾಗಿದ್ದರು. ಹೀಗಾಗಿ ಅಬ್ಷಾಲೋಮನು ಅನ್ಯಜಾತಿಯವಳಾದ ಒಬ್ಬ ತಾಯಿಯ ಪ್ರಭಾವದಲ್ಲಿ ಬೆಳೆದವನಾಗಿದ್ದು ಅವನಲ್ಲಿ ಸತ್ಯ ದೇವರಿಗೆ ಯಾವ ಭಯಭಕ್ತಿಯೂ ಅಥವಾ ಗೌರವವು ಇಲ್ಲದಿದ್ದುದು ಸ್ಪಷ್ಟವಾಗಿತ್ತು.

ಅಮ್ನೋನನ ಪಾಪವು ಶಿಕ್ಷೆಗೆ ಅರ್ಹವಾಗಿದ್ದು, ಅದಕ್ಕಾಗಿ ಅಬ್ಷಾಲೋಮನು ತನ್ನ ಸಹೋದರನನ್ನು ಕೊಂದಿದ್ದನು, ಆದರೂ ತಾನು ಊರಿಯನ ಹೆಂಡತಿಯೊಡನೆ ಮಾಡಿದ ತನ್ನ ಪಾಪದ ದೃಷ್ಟಿಯಿಂದ ನೋಡಿದಾಗ ದಾವೀದನು ಮುಯ್ಯಿ ತೀರಿಸಲು ಹೇಗೆ ತಾನೇ ಸಾಧ್ಯವಿತ್ತು? ಈ ಅಪರಾಧವು ನಿಸ್ಸಂದೇಹವಾಗಿ ಆತನಿಗೆ ದುಃಖ ಕಣ್ಣೀರು ಉಂಟುಮಾಡಿದ್ದಲ್ಲದೆ, ಹಿಂದೆ ನಡೆದು

ಹೋದ ಸಂಗತಿಗಳಿಂದಾದ ಕಠಿಣ ಪರಿಣಾಮ ಇವುಗಳೆಲ್ಲವನ್ನು ಆತನು ಸ್ವತಃ ತನ್ನ ಶಿಕ್ಷೆಯ ಭಾಗವೆಂದು ಗುರುತಿಸಿಕೊಂಡಿದ್ದನು. ಆದರೆ ಸ್ವತಃ ತನ್ನ ಅವಿವೇಕತನವನ್ನು ನೆನಸಿಕೊಂಡವನಾಗಿರಲು, ತಪ್ಪಿತಸ್ಥನನ್ನು ಶಿಕ್ಷಿಸಲು ಆತನಿಗೆ ಸಾಧ್ಯವಾಗಿರಲಿಲ್ಲ.

ಅಮ್ನೋನನನ್ನು ಸಂಹರಿಸಿದ್ದರಲ್ಲಿ ಯಾವುದೇ ವೈಯುಕ್ತಿಕ ಆಕಾಂಕ್ಷೆ ಅಥವಾ ವೈಯುಕ್ತಿಕವಾದ ದ್ವೇಷವು ತನ್ನ ರೋಷದೊಡನೆ ಮಿಶ್ರಿತವಾಗಿದ್ದರೂ, ಅಬ್ಷಾಲೋಮನು ತನ್ನ ಸಹೋದರಿಗೆ ವಿರುದ್ಧವಾದ ಅಪರಾಧಕ್ಕೆ ಮುಯ್ಯಿತೀರಿಸುವವನಾಗಿದ್ದು, ಅದು ಕೇವಲ ನ್ಯಾಯವುಳ್ಳ ಪ್ರತಿಕಾರವಾಗಿದ್ದು, ಅದಕ್ಕೆ ವಿಧಿಸಲಾದ ಶಿಕ್ಷೆಯು ಮರಣವಾಗಿತ್ತು. ತನ್ನ ಮಕ್ಕಳೆಲ್ಲರನ್ನು ಪ್ರೀತಿಸಿದ್ದ ದಾವೀದನಿಗೆ ಇದು ಒಂದು ಭೀಕರವಾದ ಪೆಟ್ಟಾಗಿತ್ತು. ಅಲ್ಲದೆ ಅಬ್ಷಾಲೋಮನು ದಾವೀದನ ನ್ಯಾಯವುಳ್ಳ ಕೋಪಕ್ಕೆ ಹೆದರಿದವನಾಗಿ ಅಜ್ಜನಾದ ತನ್ನ ತಾಯಿಯ ತಂದೆಯ ಬಳಿಗೆ ಓಡಿಹೋಗಿದ್ದು, ಅಲ್ಲಿ ಮೂರು ವರುಷಗಳ ವರೆಗೆ ತನ್ನ ತಂದೆಯಿಂದ ಕರೆಸಿಕೊಂಡಿರಲಿಲ್ಲ. ಅಲ್ಲಿ ಅವನು ಅನ್ಯದೇಶಸ್ಥರ ಪ್ರಭಾವದಲ್ಲಿ ಉಳಿದುಕೊಂಡಿದ್ದು, ನಿಸ್ಸಂದೇಹವಾಗಿ ಪ್ರತಿಕೂಲದ ಪರಿಸ್ಥಿತಿಯಲ್ಲಿ ಅವನು ಚಡಪಡಿಸುತ್ತಿದ್ದನು. ಆತನಿಗೆ ಅನುಕೂಲಕರವಾಗಿ ಪರಿಣಮಿಸುವ ಸಂಗತಿಗಳ ಬಗ್ಗೆ ಯಾವುದೇ ಸೂಚನೆಗಳು ಇಲ್ಲದಿದ್ದು, ಅನ್ಯಾಯಹೊಂದಿದ ಭಾವನೆಯಿಂದ ಸಿಡಿಮಿಯಾಗುತ್ತಿದ್ದನು, ಯಾಕಂದರೆ ತನ್ನ ಸಹೋದರಿಯ ಪಕ್ಷದಲ್ಲಿ ಪ್ರತಿಕಾರವಾಗಿ ಆತನು ಕೇವಲ ಧರ್ಮಶಾಸ್ತ್ರದ ದಂಡನೆಯ ತೀರ್ಪನ್ನು ಕಾರ್ಯಗತಮಾಡಿದ್ದನು. (ಧರ್ಮ. 27:22; ಯಾಜಕ 20:17) ಅಲ್ಲದೆ ತನ್ನ ದುರಾವಸ್ಥೆಯ ಬಗ್ಗೆ ವ್ಯಥೆಪಡುವವನಾಗಿದ್ದು ಹಾಗು ತನ್ನ ತಂದೆಯ ದೋಷ ಬಲಹೀನತೆಗಳನ್ನೆಲ್ಲಾ ಉತ್ತ್ರೇಕ್ಷಿಸಿಕೊಂಡವನಾಗಿರಲು, ಆತನಲ್ಲಿ ಬಂಡಾಯದ ಮನೋಭಾವವು ಬಲಗೊಂಡದ್ದರಲ್ಲಿ ಇದು ಆಶ್ಚರ್ಯದ ಸಂಗತಿಯೇನೂ ಆಗಿರಲಿಲ್ಲ; ಯಾಕಂದರೆ ತನ್ನ ತಂದೆಗೆ ತನ್ನ ಬಗ್ಗೆ ಯಾವ ಆಸಕ್ತಿಯೂ ಇಲ್ಲದಿರುವಲ್ಲಿ ತನ್ನ ಹೃದಯದ ಹಂಬಲಿಕೆಗಳನ್ನು ಆತನಿಗೆ ತಿಳಿದಿರಲು ಹೇಗೆ ಸಾಧ್ಯ? ಮೂರು ವರುಷಗಳ ನಂತರ ತನ್ನ ದೇಶಕ್ಕೆ ಹಿಂದಿರುಗಲು ಅನುಮತಿ ನೀಡಿದ್ದಾಗ್ಯೂ ತನ್ನ ತಂದೆಯ ಮುಖವನ್ನು ಕಾಣಲು ಅವಕಾಶವನ್ನು ಕೊಡಲಾಗಿರಲಿಲ್ಲ, ಇಲ್ಲವೇ ಇನ್ನೂ ಎರಡು ವರುಷಗಳ ವರೆಗೆ ತನ್ನ ಮೇಲಿನ ತನ್ನ ತಂದೆಯ ಪ್ರೀತಿಯು ಮುಂದುವರೆದುದರ ಬಗ್ಗೆ ತಿಳಿದುಕೊಳ್ಳಲಾಗಿರಲಿಲ್ಲ.

ಹೀಗಿರಲಾಗಿ ಈ ಐದು ವರುಷಗಳ ಅನುಭವವು ತನ್ನ ತಂದೆಯು ಇನ್ನು ತನ್ನನ್ನು ಪ್ರೀತಿಸುವದಿಲ್ಲವೆಂಬ ಇಲ್ಲವೇ ತನ್ನ ಹಿತಾಸಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳುವದಿಲ್ಲವೆಂಬ ದೃಢ ನಿಶ್ಚಯವು ಅಬ್ಷಾಲೋಮನ ಮನಸ್ಸನ್ನು ಭದ್ರವಾಗಿ ಹಿಡಿದುಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ಈ ಭಾವನೆಯು ಆತನ ಹೃದಯವನ್ನು ಕೊರೆಯುತ್ತಿರುವಲ್ಲಿ ಆತನು ತನ್ನ ರಾಜಾಧಿಕಾರದ ಬಗ್ಗೆ ಸವಾಲ–ನ್ನೆಸೆಯಲು ಸಿದ್ಧಮಾಡಿಕೊಂಡಿದ್ದು, ತನ್ನ ಯೌವ್ವನದ ಜ್ವಾಲೆ–ಯಲ್ಲಿ, ತನ್ನ ಆರಂಭಿಕ ಪುರುಷಾವಸ್ಥೆಯ ನಿಸ್ಸಂಕೋಚ– ಭಾವ ಮತ್ತು ಆತನ ಆಗಿನ ಆಕಾಂಕ್ಷೆಯ ಪ್ರಭಾವದ ಅಡಿಯಲ್ಲಿ ಅವನು ದೇವಾಧಿಕಾರವನ್ನು ಸಹ ಬಂಡತನದಿಂದ ನಿರ್ಲಕ್ಷಿಸಿದ್ದನು.

ತನ್ನ ಮಗನ ಪರವಾದ ಈ ಮನೋಭಾವವು ದಾವೀದನ ಕಡೆಯಿಂದಾದ ಒಂದು ದೊಡ್ಡ ತಪ್ಪಾಗಿದ್ದು, ಇದನ್ನು ತಿದ್ದಿಕೊಳ್ಳಲು ಬಹು ತಡವಾದಂಥದ್ದು ತನ್ನ ವ್ಯಥೆಯನ್ನು ಇನ್ನೂ ಗಾಢವಾಗಿಸಿದ್ದರಲ್ಲಿ ಸಂದೇಹವಿರಲಿಲ್ಲ. ಇದನ್ನು ದಾವೀದನು ಕಣ್ಣೀರಿನೊಡನೆ ಹೀಗೆ ಕಟುವಾಗಿ ರೋಧಿಸಿರುವನು: "ನನ್ನ ಮಗನೇ, ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೆಯದಾಗಿತ್ತು, ಅಬ್ಷಾಲೋಮನೇ ನನ್ನ ಮಗನೇ, ಮಗನೇ." ಐದು ವರುಷಗಳವರೆಗೆ ದಾವೀದನು ತನ್ನ ಸ್ವಭಾವದ ಕಠಿಣತೆಯ ಭಾಗದೊಳಗೆ ತನ್ನ ಮೃದು ಭಾವೋದ್ವೇಗವನ್ನು ಸಂಪೂರ್ಣವಾಗಿ ಮರೆಯಾಗಿರುವಂತೆ ಮಾಡಿದ್ದನು. ಇದು ಮಾತ್ರವಲ್ಲದೆ ಆ ಕಾಲದಲ್ಲೆಲ್ಲಾ ತನ್ನ ಮಗನ ಮೇಲೆ ತನ್ನ ದೇವಭಕ್ತಿಯ ಪ್ರಭಾವವನ್ನು ಪ್ರಯೋಗಿಸುವಂಥ ಅವಕಾಶವನ್ನು ಅಲಕ್ಷ್ಯಮಾಡಿದ್ದನು, ಅಲ್ಲದೆ ಇಂಥಾ ಒಂದು ಪ್ರಭಾವವು ಅತ್ಯಗತ್ಯವಾಗಿದ್ದಾಗ ಇದಕ್ಕೆ ಬದಲಾಗಿ ಆತನು ಅನ್ಯದೇಶದವರ ಒಂದು ಪ್ರಭಾವದಲ್ಲಿ ಸುತ್ತುವರೆಯಲ್ಪಟ್ಟಿದ್ದನು. ಈ ಸಿಟ್ಟಿಗೆ ದಾವೀದನು ಒಂದು ದೊಡ್ಡ ಬೆಲೆಯನ್ನು ತೆರಬೇಕಾಯಿತು, ತನ್ನ ಮಗನ ಅತ್ಯುತ್ತಮ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಇದು ಖಂಡಿತವಾಗಿಯೂ ಒಂದು ಕಳಪೆ ವಿುಟ್ಟದ ಕಾರ್ಯನೀತಿಯಾಗಿತ್ತು. ಆದರೂ ದಾವೀದನ ಈ ತಪ್ಪನ್ನು ತಂದೆಗಳಾಗಿರುವವರು ಪದೇಪದೇ ಅದೆಷ್ಟು ಸಾರಿ ಮಾಡುತ್ತಿರುವರು! ಅನೇಕರು ಯೌವ್ವನದಲ್ಲಿನ ಪರಿಶೋಧನೆ ಪರೀಕ್ಷೆಗಳ ಅನುಭವಗಳನ್ನು ಮರೆತಿರುವಂತೆ ತೋರುವದು. ಹೀಗಾಗಿ ಔದಾರ್ಯ, ಗಮನ ನೀಡುವಿಕೆ, ಸಹಿಷ್ಣತೆ, ತಮ್ಮ ಅತ್ಯುನ್ನತ ಹಿತಾಸಕ್ತಿಯ ಬಗ್ಗೆ ಅಧ್ಯಯನ ಮಾಡುವಿಕೆ ಇಂಥವುಗಳಿಂದ ಅವರು ವಿಫಲರಾಗುವರು. ದಯೆ ಔದಾರ್ಯ ಇತರ ಹಿತಾಸಕ್ತಿಯಲ್ಲಿ ತನ್ನನ್ನು ತಾನು ಮರೆಯುವಿಕೆ ಇವುಗಳು ಮಗನು ಪುರುಷಾವಸ್ಥೆಯಲ್ಲಿ ಸಿದ್ಧಿಗೆ ಬಂದ ಬಹು ಕಾಲದ ನಂತರವೂ ಹಿಂಬಾಲಿಸಿಕೊಂಡು ಹೋಗುವವು. ಅಲ್ಲದೆ ತಂದೆತಾಯಿಗಳ ಬುದ್ಧಿಮಾತು ಅವರ ಪೋಷಕಾಧಿಕಾರವು ಮುಗಿದ ನಂತರವೂ ಬಹು ಪ್ರಭಾವಶಾಲಿಯಾಗಿರುವದು.

ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಯುವಹಕ್ಕಿಗಳು ತಮ್ಮ ಗೂಡನ್ನು ಬಿಟ್ಟು ಬಂದು ತಮ್ಮ ಸ್ವಂತ ರೆಕ್ಕೆಗಳಿಂದ ಹಾರಲು ಯತ್ನಿಸುವಂಥ ಸಮಯವು ಜೀವನದಲ್ಲಿನ ಬಹು ಅಪಾಯ ತುಂಬಿದ ಕಾಲಕ್ಕಿಂತ ಬೇರೊಂದಿರಲು ಸಾಧ್ಯವಿರುವದಿಲ್ಲ. ಅವರು ತಮ್ಮ ತಂದೆಯ ಹಾಗು ತಾಯಿಯ ಆಶೀರ್ವಾದದೊಡನೆ ಹೊರಡುವದು ಸಾಧ್ಯವಾದಲ್ಲಿ; ಕಠಿಣತೆ ಹಾಗು ಅನಾದಾರ ತುಂಬಿದ ಲೋಕದಲ್ಲಿ ಅವರು ಎದುರಿಸುವಂಥ ಪ್ರತಿಯೊಂದು ಮುಖಭಂಗ ಹಾಗು ದೌರ್ಭಾಗ್ಯಗಳು ಅವರ ಮನೆಯವರ ಅನುಕಂಪ ಹಾಗು ಪ್ರಾರ್ಥನೆ ಹಾಗು ಪ್ರೀತಿಪೂರ್ವಕವಾದ ಪ್ರೋತ್ಸಾಹಗಳನ್ನು ಹೊರಪಡಿಸುವದಾದರೆ; ಅನಿರೀಕ್ಷಿತ ಅನಾಹುತದ ಒಂದು ಸಮಯದಲ್ಲಿ ತಂದೆಯ ಮನೆಯು ಆಶ್ರಯ ಸ್ಥಾನವಾಗುವದೆಂದು ಅನ್ನಿಸಿದಲ್ಲಿ; ಅಲ್ಲಿನ ಪ್ರೀತಿಪೂರ್ವಕವಾದ ಸಹಿಷ್ಣತೆಯು ಹೊರಗಿನ ಅನುಭವದ ಕಠಿಣ ಹೊಡೆತಗಳನ್ನು ಸರಿದೂಗಿಸುವದೆಂದು ಅನ್ನಿಸಿದಲ್ಲಿ, ಅಲ್ಲಿರುವದು

ಎಂಥಾ ಒಂದು ಒಳ್ಳೆಯತನದ ಶಕ್ತಿಯು! ತನ್ನ ಮುಂದಿನ ಪೀಳಿಗೆಯ ಆಶೀರ್ವಾದಾಭ್ಯುದಯದ ಸಲುವಾಗಿ ತನ್ನ ಘನತೆಯ ಪ್ರತಿಷ್ಠೆ ಅಥವಾ ತನ್ನ ಸ್ಥಾನದ ಸವಲತ್ತುಗಳನ್ನು ಬಿಟ್ಟುಕೊಡಲು ಬಿಗುಮಾನ ಸಂಕೋಚಗಳನ್ನು ಪಡುವವನು ಖಂಡಿತವಾಗಿಯೂ ಒಬ್ಬ ಬುದ್ಧಿಯುಳ್ಳ ತಂದೆಯಾಗಿರಲಾರನು.

ತನ್ನ ದಯೆ ಸಹಿಷ್ಣತೆ ಪ್ರೀತಿಪೂರ್ವಕವಾದ ಬುದ್ಧಿಮಾತು ಮತ್ತು ಅನುಕಂಪಗಳ ಮೂಲಕವಾಗಿ ಕಾಪಾಡಬಹುದಾಗಿದ್ದಂಥ ತನ್ನ ಮಗನಿಗಾಗಿ ಕಟುವಾಗಿ ಗೋಳಾಡಿದಂಥ ದಾವೀದನ ಸಂಗತಿಯು ತಮ್ಮದಾಗದಂತೆ ತಂದೆತಾಯಿಗಳು ಈ ಪಾಠದ ಕಡೆಗೆ ಚೆನ್ನಾಗಿ ಗಮನಕೊಡಬೇಕು. ನಮ್ಮ ಜೀವಿತದ ಪ್ರತಿಯೊಂದು ಸಂಬಂಧಗಳ ವಿಷಯದಲ್ಲಿಯೂ ಪ್ರೀತಿಯು ಉಳಿದುಕೊಂಡು ಬರುವದು ಮಾತ್ರವಲ್ಲದೆ ಅದು ಪೂರ್ಣವಾಗಿ ತೋರ್ಪಡಲಾಗುವಂತೆ ನಾವೆಲ್ಲರೂ ನೋಡಿಕೊಳ್ಳೋಣ.

ವಚನ ಏಳರಲ್ಲಿ "ನಾಲ್ವತ್ತು" ಎಂಬ ಶಬ್ಧವು "ನಾಲ್ಕು" ಎಂದಾಗಿರಬೇಕೆಂಬದು ಸ್ಪಷ್ಟ. ಇದು ಒಂದು ನಕಲುಗಾರನ ತಪ್ಪೆಂದು ಭಾವಿಸಲಾಗಿರುವದು.

*****

ಅಬ್ಷಾಲೋಮನ ಅವಮಾನಕರವಾದ ನಂಬಿಕೆದ್ರೋಹ

ರೀಪ್ರಿಂಟ್ಸ್ ಪುಟ 3261

2 ಸಮುವೇಲ 15:1–12

"ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ." ವಿಮೋಚನಾಕಾಂಡ. 20:12

ದಾವೀದನ ಜೀವಿತದ ಅಂತಿಮ ವರುಷಗಳು ಒಂದು ಸಾಲುಸಾಲಿನ ಬಹು ಪರೀಕ್ಷಾನುಭವಗಳನ್ನು ಒಳಗೊಂಡಿದ್ದು, ಹೇಗೂ ಅವು ದೇವಾನುಗ್ರಹದ ಪರಾಮರಿಕೆಯಿಂದ ಆತನಿಗೆ ಹೃದಯ ಮತ್ತು ಗುಣಗಳ ಪರಿಪಕ್ವತೆಗಳ ಸಲುವಾಗಿ ಕಾರ್ಯವೆಸಗಿದ್ದುದು ಸ್ಪಷ್ಟವಾಗಿತ್ತು; ಇವುಗಳು ಆತನ ನಂತರದ ಕೀರ್ತನೆಗಳಲ್ಲಿ ನಮಗೆ ಪ್ರದರ್ಶಿತವಾಗಿರುವವು. ಈ ವಿನಾಶಕರವಾದ ಅನುಭವಗಳು ಆತನು ಪಾಪಮಾಡಿದ ದಿನದಿಂದ ಆರಂಭವಾಗಿದ್ದು, ಒಂದು ಗಣನೀಯ ಪ್ರಮಾಣದಲ್ಲಿ ಅವು ಆ ಪಾಪದ ಶಿಕ್ಷೆಯಾಗಿ ದೇವರಿಂದ ಬಳಸಿಕೊಳ್ಳಲಾಗಿತ್ತು. ಅಬ್ಷಾಲೋಮನ ಬಂಡಾಯದ ಸಂಗತಿಯಲ್ಲಿ ಇದು ಒಂದು ಸನ್ನಿವೇಶವಾಗಿ ಪರಿಣಮಿಸಿದ್ದಾಗ್ಯೂ, ದಾವೀದನು ಪಾಪ ಮಾಡುವದಕ್ಕೆ ಬಹು ಮೊದಲಿನಿಂದಲೇ ಆ ಕಷ್ಟದ ಶಿಕ್ಷೆಯ ಸುಳಿವನ್ನು ನಾವು ಹೇಗೂ ನೋಡಬಹುದು;. ಅಬ್ಷಾಲೋಮನ ಕಪಟ ಕುತಂತ್ರಗಳು ಯಶಸ್ಸಾಗುವದರಿಂದ ಆರಸನನ್ನು ತಪ್ಪಿಸಿ ಕಾಪಾಡುವಂಥದ್ದು ಪೂರ್ಣವಾಗಿ ದೇವರ ಅಧಿಕಾರದಲ್ಲಿ–ದ್ದುದನ್ನು ಸಹ ನಾವು ನೆನಪಿಸಿಕೊಳ್ಳಬಹುದು. ಇವುಗಳ ಆರಂಭಿಕ ಪ್ರಭಾವವು ದಾವೀದನು ಅಬ್ಷಾಲೋಮನ ತಾಯಿಯೊಡನೆ ಆದ ಮದುವೆಯಲ್ಲಿರುವದೆಂದು ಹೇಳಬಹುದು; ಆಕೆಯು ಯೆಹೂದ್ಯಳಾಗಿರದೆ ಒಬ್ಬ ಅನ್ಯಜನಾಂಗದ ಅರಸನ ಮಗಳಾಗಿದ್ದಳು. ತನ್ನ ಜನರು ನಂಬಿಕೆಯಿಲ್ಲದವರೊಡನೆ ಇಜ್ಜೋಡಾಗಬಾರದೆಂಬ ದೇವರ ಬುದ್ಧಿವಾತು [ಛಾಯಾರೂಪದ] ಶಾರೀರಿಕ ಇಸ್ರಾಯೇಲ್ಯರಿಗೆ ಮಾತ್ರವಲ್ಲದೆ ಆತ್ಮಿಕ ಇಸ್ರಾಯೇಲ್ಯರಿಗೆ ಈಗಲೂ ಅನ್ವಯವಾಗುವದು. ದೈವಜ್ಞಾನದ ಈ ಅಲಕ್ಷಿಸುವಿಕೆಯು ಕೆಲವು ಸಮಯದಲ್ಲಿ ಕೆಲವೊಂದು ವಿಧವಾದ ದುಷ್ಪರಿಣಾಮವನ್ನು ಉಂಟು ಮಾಡುವದು ಖಚಿತವಾಗಿತ್ತು. ಇಂಥಾ ಸರಿಸಾಟಿಯಿಲ್ಲದ ಜೊತೆಗೂಡುವಿಕೆಯ ಮದುವೆಯಿಂದ ಹುಟ್ಟುವ ಮಕ್ಕಳು ನಿಶ್ಚಯವಾಗಿಯೂ ತಮ್ಮ ನಂಬಿಕೆಯಿಲ್ಲದಂಥ ತಂದೆತಾಯಿಗಳ ಗುಣನಡವಳಿಕೆಗಳ ಕೆಲವು ಅಂಶಗಳನ್ನು ಪಾರಂಪರ್ಯವಾಗಿ ಹೊಂದಿದವರಾಗಿದ್ದು, ಅವುಗಳು ಕಡೆಯಲ್ಲಿ ತಾವಾಗಿಯೇ ತೋರ್ಪಡುವವು. ಅಬ್ಷಾಲೋಮನ ಕಥೆಯಲ್ಲಿಯೂ ಇದರ ಒಂದು ನಿದರ್ಶನವನ್ನು ನಾವು ನೋಡುತ್ತೇವೆ. ಆತನ ದುರಹಂಕಾರ ತಿರುಗಿಬೀಳುವಿಕೆ ನಂಬಿಕೆದ್ರೋಹ ಇವುಗಳು ಒಂದು ಆಕಾಂಕ್ಷೆಯೊಡನೆ ಜೊತೆಜೊತೆಯಾಗಿ ನಡೆದುಬಂದು ಏನುಮಾಡುವದಕ್ಕೂ ಹಿಂಜರಿಯುದೇ ಇದ್ದಂತೆ ತೋರ್ಪಡಲಾಗಿತ್ತು. ಅದು ತನಗೂ ಹಾಗು ಸಿಂಹಾಸನಕ್ಕೂ ನಡುವೆಯಲ್ಲಿದ್ದ ಒಬ್ಬ ಮಲಸಹೋದರನನ್ನು ಕೊಂದಿದ್ದು ನಂತರದಲ್ಲಿ ತನ್ನ ತಂದೆಯ ಸಿಂಹಾಸನವನ್ನು ಕಸಿದುಕೊಳ್ಳಲು ಉತ್ತೇಜಿಸಿ ಕಡೆಯಲ್ಲಿ ತಂದೆಯ ಜೀವಕ್ಕಾಗಿಯೂ ಹವಣಿಸಿತ್ತು.

ಅಬ್ಷಾಲೋಮನು ಒಬ್ಬ ತಂದೆಯನ್ನು ಅಗೌರವಿಸುವ ವಿಷಯದಲ್ಲಿ ಒಂದು ವಿಶಿಷ್ಟವಾದ ಉದಾಹರಣೆಯಾಗಿದ್ದು, ಪರಿಣಾಮವಾಗಿ ಜೀವನದ ಅತ್ಯುತ್ತಮಾವಧಿಯಲ್ಲಿ ತೆಗೆದುಹಾಕಲ್ಪಟ್ಟಿದ್ದನು. ಆತನ ಮಮತೆಯಿಲ್ಲದ ನಡಾವಳಿಯ ಕಥೆಯು ಈ ಪಾಠದಲ್ಲಿ ತಿಳಿಸಲಾಗಿರುವದು. ಪ್ರಚೋದನೆಯ ದೆಸೆಯಿಂದಾದ ತನ್ನ ಮಲಸಹೋದರನ ಹತ್ಯೆಯ ಕಾರಣದಿಂದ ಆತನು ತನ್ನ ತಂದೆಯ ಆಧಿಪತ್ಯದಿಂದ ಓಡಿಹೋಗಿದ್ದನು. ಹಾಗು ಮೂರು ವರುಷಗಳ ಕಾಲ ದೇಶಭ್ರಷ್ಟನಾಗಿ ಒಬ್ಬ ರಾಜನ (ತನ್ನ ತಾತನ) ದೇಶದಲ್ಲಿದ್ದನು. ಆನಂತರ ಉದ್ಯೋಗಸ್ಥರ ವಲಯದ ಆಸಕ್ತಿಯ ಕಾರಣದಿಂದ ಆತನ ಮೇಲಿನ ತಂದೆಯ ಪ್ರೀತಿಯು ಎಷ್ಟರ ಮಟ್ಟಿಗೆ ಪ್ರಭಾವ ಬೀರಿತ್ತೆಂದರೆ ಅದು ಆತನು ತನ್ನ ತಂದೆಯ ನಾಡಿಗೆ ಹಿಂದಿರುಗಲು ಅನುಮತಿಯನ್ನು ನೀಡುವಂತಾಗಿ, ಕಡೆಯಲ್ಲಿ ಸಿಂಹಾಸನದ ಉತ್ತರಾಧಿಕಾರಿಯ ಎಲ್ಲಾ ಸವಲತ್ತುಗಳು ಪಡೆಯುವಂತೆ ಆತನನ್ನು ನಡೆಸಿತ್ತು. ಈ

ಸಮಯದಲ್ಲಿ ನಮ್ಮ ಪಾಠವು ಆರಂಭವಾಗುವದು. ತನ್ನ ಸುಂದರವಾದ ನೀಳಾಕಾರಗಳಿಗಾಗಿ ಗುರುತಿಸಲ್ಪಟ್ಟಿದ್ದ ಯೌವನಸ್ಥನಿಗೆ ತನ್ನ ತಂದೆಯ ಆಸ್ಥಾನದ ಒಂದು ಪದ್ಧತಿಯನ್ನು ಪರಿಚಯಿಸಲಾಗಿತ್ತು; ಆ ಪದ್ಧತಿಯು ಈಗಲೂ ಐಗುಪ್ತದೇಶದಲ್ಲಿ ಪ್ರಚಲಿತವಾಗಿರುವದು. ಅದೇನಂದರೆ, ಒಬ್ಬ ರಾಜಕುಮಾರನು ಒಂದು ವಿಶೇಷ ರಥ ಮತ್ತು ತರಬೇತಾದ ಐವತ್ತು ಅಂಗ–ರಕ್ಷಕರನ್ನು ಹೊಂದಿರಬೇಕೆಂಬದು. ಆರಸನಾದ ದಾವೀದನು ತನ್ನ ಮಗನಿಗಾಗಿ ಎಷ್ಟು ಪ್ರೀತಿಯನ್ನು ಹೊಂದಿದ್ದನೆಂದು ತೋರುತ್ತದೆಂದರೆ ಈ ಸಂಗತಿಗಳಲ್ಲಿ ಆತನು ಕಾರ್ಯತಃ ತನ್ನದೇ ಆದ ರೀತಿಯನ್ನು ಹೊಂದಿರಲು ಬಿಟ್ಟಿದ್ದನು. ರಾಜಕುಮಾರನ ವ್ಯಕ್ತಿತ್ವದಲ್ಲಿ ಅರಸುತನದ ಈ ಆಡಂಬರದ ಪ್ರದರ್ಶನ ಮುಂತಾದವುಗಳ ಬಗ್ಗೆ ಜನರು ಸಂತೋಷಪಟ್ಟಿದ್ದರು. ಅಲ್ಲದೆ ಹಲವು ವರುಷಗಳ ವರೆಗೆ ಒಂದು ದೊಡ್ಡ ಹಾಗು ಸ್ವಸ್ಥತೆಯ ಬದಲಾವಣೆಯು ಅರಸನಲ್ಲಿ ತೋರಿಬಂದಿತ್ತು. ಆತನು ಸಹ ತನ್ನ ಮುಪ್ಪಿನ ವಯಸ್ಸಿನಲ್ಲಿ ಮುಂದೆ ಸಾಗುತ್ತಿದ್ದು, ಹಿಂದಿನಂತೆ ತನ್ನ ಜನರ ಮಧ್ಯದಲ್ಲಿ ಕಾಣಿಸಿಕೊಳ್ಳಲು ತನಗೆ ಆಗುತ್ತಿರಲಿಲ್ಲ.

ತನ್ನ ಸಾರ್ವಜನಿಕ ಪ್ರದರ್ಶನದ ವಿಧಾನವು ಜನರಿಗೆ ಮೆಚ್ಚಿಗೆಯಾಗಿದ್ದುದನ್ನು ಸ್ವಪ್ರತಿಷ್ಠೆಯುಳ್ಳ ಯುವ ರಾಜಕುಮಾರನು ಶೀಘ್ರವಾಗಿ ಕಂಡುಕೊಂಡಿದ್ದು, ದಾವೀದನು ತನ್ನ ಕಿರಿಯ ಸಹೋದರನಾದ ಸೊಲೊಮೋನನು ರಾಜ್ಯಕ್ಕೆ ಉತ್ತರಾಧಿಕಾರಿಯಾಗುವದು ದಾವೀದನ ಆಯ್ಕೆಯೆಂಬುದನ್ನು ಆತನು ಕೇಳಿಸಿಕೊಂಡಿದ್ದ ಸಂಭವವು ಬಹುವಾಗಿದ್ದು, ಹೀಗಾಗಿ ತನ್ನ ತಂದೆಯ ರಾಜ ಮರ್ಯಾದೆಗಾಗಿ ಸವಾಲುಹಾಕಲು ನಿರ್ಣಯಿಸಿಕೊಂಡಿದ್ದನು. ಆತನ ವಿಧಾನವು ಕುತಂತ್ರವು–ಳ್ಳದ್ದಾಗಿದ್ದು; ಅದು ಜನರ ಹೃದಯವನ್ನು ತನ್ನ ತಂದೆಯ ಕಡೆಯಿಂದ ತನ್ನ ಕಡೆಗೆ ಕಸಿದುಕೊಳ್ಳುವದಾಗಿತ್ತು. ಅಲ್ಲದೆ ಆತನಿಗೆ ಕುಟುಂಬದ ಬಗ್ಗೆ ಪ್ರೀತಿಯಿರಲಿಲ್ಲ; ಆತನ ನಡವಳಿಕೆಯಲ್ಲಿ ಕೇವಲ ಸ್ವಾರ್ಥವುಳ್ಳ ಆಕಾಂಕ್ಷೆಯು ತೋರ್ಪಡಲಾಗಿತ್ತು. ತನ್ನ ಅಪರಾಧದ ಶಿಕ್ಷೆಯಿಂದ ತನ್ನನ್ನು ಪಾರುಮಾಡಿದಂಥ ತನ್ನ ತಂದೆಯ ಇಚ್ಛಾಪೂರೈಕೆಯನ್ನು ಬಳಸಿಕೊಂಡು ತನ್ನ ತಂದೆಯ ಪ್ರಭಾವವನ್ನು ದುರ್ಬಲಗೊಳಿಸಲು ಯತ್ನಿಸಿದ್ದನು. ಖಂಡಿತವಾಗಿಯೂ ಕೆಟ್ಟತನಕ್ಕೆ ಪ್ರತಿಯಾಗಿ ಕೆಟ್ಟತನವನ್ನು ತೋರಿಸುವದು ತಪ್ಪಾಗಿದ್ದಲ್ಲಿ, ಒಬ್ಬ ತಂದೆಗಾಗಲಿ, ಅಥವಾ ಒಬ್ಬ ಸ್ನೇಹಿತನಿಗಾಗಲಿ ಇಲ್ಲವೇ ಯಾರಿಗೇ ಆಗಲಿ ಒಳ್ಳೆಯದಕ್ಕೆ ಪ್ರತಿಯಾಗಿ ಕೆಟ್ಟದ್ದನ್ನು ಮಾಡುವದು ಒಂದು ಹೇಯವಾದ ಅಪರಾಧವಾಗಿರುವದು.

ಆ ದಿವಸಗಳಲ್ಲಿ ಅರಸನು ಒಂದು ಉತ್ಕೃಷ್ಟ ನ್ಯಾಯಾಲಯದ ಕಾರ್ಯವನ್ನು ನಿರ್ವಹಿಸುತ್ತಿದ್ದು, ಹೀಗಾಗಿ ಕಾರ್ಯನಿರತ ನ್ಯಾಯಾಧಿಪತಿಗಳಿಂದ ತೃಪ್ತಿಕರವಾಗಿ ನ್ಯಾಯನಿರ್ಣಯವಾಗದ ಪ್ರಕರಣಗಳ ಬಗ್ಗೆ ಅರಸನಿಗೆ ಮೇಲ್ಮನವಿ ಸಲ್ಲಿಸಲಾಗುತ್ತಿತ್ತು. ದೇಶವು ಬೆಳೆದಂತೆಲ್ಲಾ ಮೇಲ್ಮನವಿಯು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಬರುತಿದ್ದು, ಅರಸನ ಇಳಿವಯಸ್ಸು ಹಾಗು ಆತನು ಧಾರ್ಮಿಕ ಸಂಗತಿಗಳಿಗೆ ಅಂದರೆ ಕೀರ್ತನೆ ಬರೆಯುವಿಕೆ ಮುಂತಾದವುಗಳಿಗೆ ತನ್ನ ಹೆಚ್ಚು ಗಮನವನ್ನು ನೀಡುವವನಾಗಿರಲು, ಇವುಗಳು ಕೆಲವು ಮಟ್ಟಿಗೆ ಆತನ ನ್ಯಾಯಾಲಯದ ವ್ಯವಹಾರಗಳಲ್ಲಿ ಹಸ್ತಕ್ಷೇಪಮಾಡಿದ್ದವು. ಅಬ್ಷಾಲೋಮನು ಇವುಗಳೆಲ್ಲವನ್ನು ಗ್ರಹಿಸಿಕೊಂಡವನಾಗಿ ಇವೆಲ್ಲವುಗಳನ್ನು ತನ್ನ ಸ್ವಂತ ಅನುಕೂಲಕ್ಕಾಗಿ ತಿರುಗಿಸಿ–ಕೊಂಡಿದ್ದನು. ಮೇಲ್ಮನವಿಗಳನ್ನು ಸಲ್ಲಿಸಿ ಅವುಗಳ ಇತ್ಯರ್ಥವು ವಿಳಂಬವಾದ ವ್ಯಕ್ತಿಗಳನ್ನು ಸಂಧಿಸಿದವನಾಗಿ ಅವರಿಗೆ ಸಂತಾಪವನ್ನು ವ್ಯಕ್ತಪಡಿಸಿ ತಾನು ಏನಾದರೂ ನ್ಯಾಯಧೀಶ–ನಾಗಿದ್ದಲ್ಲಿ ಅವರ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸುತಿ–ದ್ದುದಾಗಿಯೂ ಆದರೆ ವಾಸ್ತವದಲ್ಲಿ ತನ್ನ ಕೇಳುಗರಿಗೆ ತಮ್ಮ ಪರವಾಗಿ ನ್ಯಾಯವುಂಟೆಂದು ಪರೋಕ್ಷವಾಗಿ ಸೂಚಿಸಿ, ಹೀಗಾಗಿ ಇವುಗಳನ್ನು ಬಗೆಹರಿಸಲು ತನಗೆ ಹರ್ಷವಾಗುವದೆಂದು ಹೇಳುತ್ತಿದ್ದನು. ರಾಜಕುಮಾರನಾಗಿ ರಾಜ್ಯದ ಜನರಿಂದ ಗೌರವವನ್ನು ಸ್ವೀಕರಿಸುವದು ಆ ದಿನಗಳ ಪದ್ಧತಿಯಾಗಿದ್ದು, ನಿಜವಾಗಿಯೂ ಪ್ರೀತಿ ಮತ್ತು ದೀನತೆಯ ಭಾವಗಳಿಲ್ಲದಿರುವದು ಸ್ಪಷ್ಟವಾಗಿದ್ದರೂ ಇವುಗಳು ಉಳ್ಳವನಂತೆ ನಟನೆಮಾಡಿ ಎದ್ದು ಈ ಜನರಿಗೆ ಮುದ್ದಿಡುತಿದ್ದನು. ಅರಸನಿಂದ ಮುದ್ದಿಡಿಸಿ–ಕೊಳ್ಳುವಂಥದ್ದು ಒಂದು ಹೊಗಳಿಕೆಯ ಸಂಗತಿಯಾಗಿತ್ತು. ರಾಜಕುಮಾರನ ಒಡನಾಟ ಇಲ್ಲವೇ ಆತನ ಪ್ರೀತಿಯನ್ನು ಪಡೆಯುವಂಥದ್ದು ಅನೇಕರಿಗೆ ಪೂರ್ಣವಾಗಿ ಅವರ ನ್ಯಾಯನಿರ್ಣಯದ ವಿಕೃತಿಯಾಗಿದ್ದು, ಇದು ಜನರನ್ನು ಆತನಿಗೆ ವಿಧೇಯ ಸೇವಕರನ್ನಾಗಿ ತಮ್ಮನ್ನು ಬಂಧಿಸಿಕೊಳ್ಳುವದೆಂಬ ಅರ್ಥಕೊಡುತ್ತಿತ್ತು.

ಈ ನಡವಳಿಕೆಯು ತನ್ನ ತಂದೆಯ ಕಡೆಗಿರುವ ಮಕ್ಕಳ ಧರ್ಮದ ನಿಂದನೆಯೂ ಅಗೌರವವೂ ಆಗಿದ್ದುದು ಮಾತ್ರವಲ್ಲದೆ, ಇದು ಯಾವುದೇ ದೇಶಾಧಿಕಾರಿಗೆ ಮಾಡಿದ ನಂಬಿಕೆದ್ರೋಹವೂ ಯಾವುದೇ ಉಪಕಾರಿಗೆ ತೋರಿದ ಅಗೌರವವೂ ಆಗುತ್ತಿತ್ತು. ನಿಜವಾಗಿಯೂ **"ಕದ್ದುಕೊಂಡದ್ದು"** ಎಂಬ ಶಬ್ದವು ಬಹು ಕಠಿಣವಾಗಿರುವದಿಲ್ಲ. ಜನರ ಹೃದಯವನ್ನು ಕದ್ದುಕೊಳ್ಳುವದು ಎಂಬ ಸಂಗತಿಯಲ್ಲಿ ಕಳ್ಳತನವೆಂಬದು ಒಂದು ಅಲ್ಪ ಸಂಗತಿಯಾಗಿರುವದಿಲ್ಲ, ಆದರೆ ಇದು ಒಬ್ಬನು ಹಣವನ್ನಾಗಲೀ ಸರಕುಸರಂಜಾಮುಗಳನ್ನಾಗಲಿ ಕದಿಯುವದಕ್ಕಿಂತಲೂ ಹೆಚ್ಚಿನದಾಗಿರುವದು. ಇಲ್ಲಿ ಒಂದು ನೈತಿಕತೆಯ ಅಂಶವಿದ್ದು ಅದನ್ನು ನಮ್ಮ ದಿವಸಗಳಲ್ಲಿ ಅನೇಕರು ಅಸ್ಪಷ್ಟವಾಗಿ ಗ್ರಹಿಸಿಕೊಂಡಿರುವರು. ಸಾಕಷ್ಟು ಸಂಖ್ಯೆಯ ಜನರು ಮತ್ತೊಬ್ಬರ ಪ್ರೀತಿಯನ್ನು ಕದ್ದುಗೊಳ್ಳುವದರಲ್ಲಿ ಹಾಗು ತಮ್ಮ ಅನುಕೂಲಕ್ಕಾಗಿ ಇತರರನ್ನು ಸುಳ್ಳಾಗಿ ಪ್ರತಿನಿಧಿಸಲು ಇಚ್ಛಿಸುವವರಾಗಿರು–ವರೆಂಬುದನ್ನು ನಾವು ಬಲವಂತದಿಂದ ನಂಬುವಂತಾಗಿದೆ ಎಂಬುದಕ್ಕೆ ನಾವು ವಿಷಾದಿಸುತ್ತೇವೆ. ಯಾವುದೇ ಇಂಥದ್ದು ತಮ್ಮ ಶಾರೀರಿಕ ಪ್ರವೃತಿಯಲ್ಲಿ ಇರುವದರ ವಿರುದ್ಧ ನೂತನ ಸೃಷ್ಟಿಗಳಾದ ದೇವಜನರು ಸತತವಾಗಿ ಎಚ್ಚರಿಕೆಯಿಂದಿರುವ ಅವಶ್ಯಕತೆ–ಯಿರುವದು. ಇವುಗಳು ಮಾರುವೇಶದಲ್ಲಿದ್ದು ಇವುಗಳ ನಿಜಗುಣವನ್ನು ನೂತನ ಮನಸ್ಸು ಸುಲಭವಾಗಿ ಗ್ರಹಿಸಿ ಕೊಳ್ಳುವದಿಲ್ಲ. ಭಕ್ತರೆಲ್ಲರೂ ಸುವರ್ಣಸೂತ್ರವನ್ನು ತಮ್ಮ ಅನುದಿನದ ಎಲ್ಲಾ ನಡಾವಳಿಯಲ್ಲಿ ಅಳವಡಿಸಿಕೊಳ್ಳ ಬೇಕಿರುವದು; ಇದು ಒಂದು ಸುರಕ್ಷಿತವಾದ ಸೂತ್ರವಾಗಿದ್ದು

ಇದನ್ನು ಮುಕ್ತವಾಗಿ ಬಳಸುವವರಾಗಿ ಇದಕ್ಕೆ ವಿಧೇಯ–ರಾಗಿರುವವರೆಲ್ಲರೂ ಖಚಿತವಾಗಿ ಪವಿತ್ರಾತ್ಮನ ಫಲದಲ್ಲಿ ಬೆಳೆಯುತ್ತಾ ಬರುವರು, ಇವುಗಳೆಲ್ಲವೂ ಪ್ರೀತಿಭಾವವೆಂಬ ಒಂದು ದೊಡ್ಡ ಮರದ ಕೊಂಬೆಗಳಾಗಿರುವವು.

ತನ್ನ ತಂದೆಗೆ ವಿರುದ್ಧವಾದ ಈ ಒಳಸಂಚು ಅಬ್ಷಾಲೋಮನು ಗಡಿಪಾರಿನಿಂದ ಹಿಂದಿರುಗಿದ ಕೂಡಲೇ ಇಲ್ಲವೇ ತನ್ನ ತಂದೆಯಿಂದ ಪೂರ್ಣವಾಗಿ ಅಂಗೀಕೃತನಾಗಿ ರಾಜಕುಮಾರನ ಸ್ಥಾನವು ದೊರೆತ ದಿನದಿಂದ ಆರಂಭವಾಗಿತ್ತೆಂದು ಪರಿಗಣಿಸಬಹುದು, ಎರಡನೇಯ ಸನ್ನಿವೇಶದಲ್ಲಿ ಇದು ನಾಲ್ಕು ವರುಷಗಳ ಕಾಲದಲ್ಲಿ ಅಭಿವೃದ್ಧಿಯಾಗುತ್ತಾ ಬಂದಿದ್ದು, ಮತ್ತು ಮೊದಲನೇ ಸಂದರ್ಭದಲ್ಲಿ ಇದು ಆರು ವರುಷಗಳಾಗಿತ್ತು. ಕಾರ್ಯವೆಸೆಗಲು ಸನ್ನಿವೇಶಗಳು ಸೂಕ್ತವಾಗಿ ಪಕ್ವವಾಗುತ್ತಿರುವದೆಂದು ಆತನು ಪರಿಗಣಿಸಿದಾಗ ಅರಸನು ಹಾಗು ಇತರರಿಗೆ ಸಂದೇಹವಾಗದಂತೆ ಆಗಲು ಆತನು ಹೆಬ್ರೋನಿಗೆ ತೆರಳಿ ಅಲ್ಲಿ ತಾನು ವರುಷಗಳ ಹಿಂದೆ ಮಾಡಿಕೊಂಡ ಹರಕೆಯ ಅನುಸಾರ ದೇವರಿಗೆ ದೊಡ್ಡ ಯಜ್ಞವನ್ನು ಅರ್ಪಿಸಲು ಅರಸನ ಅಪ್ಪಣೆಯನ್ನು ಕೇಳಿಕೊಂಡಿದ್ದನು; ಹೀಗೆ ಆ ಸಂದರ್ಭವು ಎಷ್ಟು ಪ್ರಾಮುಖ್ಯವಾಗಿ ಮಾಡಲ್ಪಟ್ಟಿತ್ತೆಂದರೆ ಸೇನೆಯ ಹಾಗು ಪಟ್ಟಣದ ಅನೇಕ ಮುಖ್ಯಸ್ಥರನ್ನು ತನ್ನೊಡನೆ ಕರೆದುಕೊಂಡು ಹೋಗುವದು ಗಮನಾರ್ಹವಲ್ಲದಿದ್ದರೂ, ವಾಸ್ತವದಲ್ಲಿ ಅದು ಅರಸನಿಗೆ ತನ್ನ ಮಗನ ಮೂಲಕವಾಗಿ ಒಂದು ಗೌರವವೆಂಬಂತೆ ತೋರಲಾಗಿತ್ತು.

ಈ ಮಧ್ಯೆ ಹನ್ನೆರಡು ಕುಲಗಳಿಗೆಲ್ಲಾ ಗೂಢಾಚಾರರನ್ನು ಕಳುಹಿಸಲಾಗಿದ್ದು ಮತ್ತು ತುತ್ತೂರಿ ಊದುವವರನ್ನು ಹಲವಾರು ಪ್ರಾಂತ್ಯಗಳಲ್ಲಿ ನೇಮಿಸಲ್ಪಟ್ಟು, ಹೀಗಾಗಿ ಸೂಕ್ತ ಸಮಯವು ಬಂದಾಗ ಹೆಬ್ರೋನಿನಲ್ಲಿ ಅಬ್ಷಾಲೋಮನು ಅರಸನೆಂದು ಘೋಷಿಸಲ್ಪಡುವಂತೆಯೂ ತುತ್ತೂರಿ ಊದುವವರ ಧ್ವನಿಯು ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಹನ್ನೆರಡು ಕುಲಗಳಲ್ಲಿ ಕೇಳಲ್ಪಟ್ಟಾಗ ಅಬ್ಷಾಲೋಮನಿಗೆ ಗೌಪ್ಯವಾಗಿ ಸೇವೆಮಾಡುವ ಗೂಢಾಚಾರರು ಸಹಿತವಾಗಿ ತುತ್ತೂರಿ ಧ್ವನಿಮಾಡುವವರು ಅಬ್ಷಾಲೋಮನು ಈಗ ಅರಸನಾಗಿದ್ದಾನೆಂಬುದು ಇದರ ಅರ್ಥವೆಂದು ವಿವರಿಸುವಂತೆ ಮಾಡಲಾಗಿತ್ತು. ಅಬ್ಷಾಲೋಮನನ್ನು ಆತನ ಹುಸಿ ದೈನ್ಯತೆಯ ಕಾರಣದಿಂದ ಆತನನ್ನು ಪ್ರೀತಿಸಲು ಕಲಿತುಕೊಂಡ ಜನರು ಹೀಗೆ ರಾಜ್ಯದಲ್ಲಿ ಕ್ರಾಂತಿಯು ಪೂರ್ಣಗೊಂಡಿರುವದೆಂಬ ಅಭಿಪ್ರಾಯವನ್ನು ಪಡಕೊಳ್ಳುವಂತೆ ಏರ್ಪಡಿಸಲಾಗಿತ್ತು; ದಾವೀದನು ಪೂರ್ಣವಾಗಿ ಪರಾಭವಗೊಂಡು, ತಮ್ಮ ವೈಯುಕ್ತಿಕ ಅಭ್ಯುದಯವು ನೂತನ ಅರಸನಿಗೆ ತಾವು ತೋರುವ ತಕ್ಷಣದ ನಿಷ್ಠೆಯ ಮೇಲೆ ಅವಲಂಭಿತವಾಗಿರುವದೆಂಬ ಅಭಿಪ್ರಾಯವು ಅವರಲ್ಲಿ ಮೂಡುವಂತೆ ಮಾಡಲಾಗಿತ್ತು. ಸಂಗತಿಯು ಗಮನಾರ್ಹವಾದ ರೀತಿಯಲ್ಲಿ ಚೆನ್ನಾಗಿ ಕಾರ್ಯವೆಸಗಿದ್ದು ಪರಿಣಾಮವಾಗಿ ಒಂದೇ ದಿನದಲ್ಲಿ ಇಡೀ ದೇಶವೇ ಬಹು ಮಟ್ಟಿಗೆ ಅಬ್ಷಾಲೋಮನ ಕಡೆಗೆ ತಿರುಗಿಕೊಂಡಿತ್ತು.

ಯೆರೂಸಲೇಮಿನಿಂದ ಹೆಬ್ರೋನಿಗೆ ಹೋಗಿದ್ದ ಕೆಲವರು ತಮ್ಮನ್ನು ಬಳಸಿಕೊಳ್ಳಲಾದ ಬಗ್ಗೆ ಸಂಪೂರ್ಣವಾಗಿ ತಿಳಿಯದೆ ಇದ್ದವರಾಗಿದ್ದರೂ, ಅವರ ಪ್ರಭಾವಿತ ಹೆಸರುಗಳು ಅಬ್ಷಾಲೋಮನ ಜೊತೆಗೂಡಿ ಜನಸಾಮಾನ್ಯರ ಮೇಲೆ ಪ್ರಭಾವ ಬೀರಿತ್ತು; ಅವರು ಪ್ರತಿಯಾಗಿ ಆತನೊಡನೆ ಇದ್ದು ಆತನ ಸ್ನೇಹಿತರಾಗಿ ಆತನಿಂದ ಅನುಗ್ರಹಿತರಾಗಿರಲು ಅಲ್ಲದೆ ಅವರ ಭವಿಷ್ಯವು ಆತನ ಕೃಪಾಕಟಾಕ್ಷದ ಮೇಲೆ ಅವಲಂಭಿತವಾಗಿದ್ದು, ಆತನ ಕಾರ್ಯೋದ್ದೇಶಗಳಿಗೆ ಬದ್ಧರಾಗಿ ಎಲ್ಲವನ್ನು ಪಡಕೊಳ್ಳುವಂತಾಗಿ ಅಥವಾ ಅವುಗಳನ್ನು ನಿರಾಕರಿಸಿ ಎಲ್ಲವನ್ನು ಕಳಕೊಳ್ಳುವಂತಾಗಬೇಕಾಗುತ್ತಿತ್ತು.

ಒಳಸಂಚು ಅವರು ನಿರೀಕ್ಷಿಸಲೂ ಸಾಧ್ಯವಾಗದ ಮಟ್ಟಿಗೆ ಯಶಸ್ಸಾಗಿ, ಬಹು ಮಟ್ಟಿಗೆ ಇಡೀ ದೇಶವೇ ಅಬ್ಷಾಲೋಮನಿಗೆ ನಿಷ್ಠೆಯನ್ನು ತೋರಿದ್ದು, ಅದು ಬಹು ಬಾಹ್ಯವಾಗಿ ಯಾವ ರೀತಿಯಲ್ಲಿ ಗುರುತಿಸಲ್ಪಟ್ಟಿತ್ತೆಂದರೆ ಅಬ್ಷಾಲೋಮನು ಸೋತುಹೋಗಿ ಮೃತಿಹೊಂದಿದಾಗ, ಅರಸನಾದ ದಾವೀದನನ್ನು ಎಲ್ಲಾ ಕುಲಗಳಿಗೆ ರಾಜ್ಯಾಧಿಕಾರದಲ್ಲಿ ನಾಯಕನಾಗಿ ಹಿಂದಿರುಗಲು ಆತನನ್ನು ಬಹಿರಂಗವಾಗಿ ವಿನಂತಿಸಿಕೊಳ್ಳುವದು ಅವರಿಗೆ ಅವಶ್ಯಕವಾಗಿ ಕಂಡುಬಂದಿತ್ತು. ಒಂದು ಜನಾಂಗವು ತಮ್ಮನ್ನು ಆ ಸಮೃದ್ಧ ಸ್ಥಿತಿಗೆ ತಂದುದಕ್ಕೆ ಬಹುವಾಗಿ ಕಾರಣನಾದ ಒಬ್ಬ ಪ್ರಸಿದ್ಧ ನಾಯಕನ ಅಮೂಲ್ಯವಾದ ಸೇವೆಯನ್ನು ಅತಿ ಶೀಘ್ರವಾಗಿ ಮರೆತುಹೋದದ್ದಕ್ಕೆ ನಾವು ಆಶ್ಚರ್ಯಪಡಬೇಕಾದಲ್ಲಿ, ಅರಸನ ಪಾಪದ ಅರಿಕೆಯನ್ನು ಈಗಿನ ಕಾಲದ ಪರಿಶುದ್ಧರಾದ ದೇವಜನರು ನೋಡುವ ಪ್ರಕಾರ ಆಗಿನ ಕಾಲದ ಜನಸಾಮಾನ್ಯರು ನೋಡುತ್ತಿರಲಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಕೆಲವರು ಒಂದು ಮಟ್ಟದಲ್ಲಿ ಅರಸನನ್ನು ಅರಿತುಕೊಂಡಂಥದ್ದು ನಿಸ್ಸಂದೇಹವಾಗಿದ್ದರೂ ಆತನು ದಂಗೆಯನ್ನು ಹಿಮ್ಮೆಟ್ಟಿಸಲು ತೋರಿದ ಹಿಂಜರಿತವನ್ನು ಹೆಚ್ಚು ಜನರು ಮಾನ್ಯಮಾಡಿರಲಿಲ್ಲ, ಅಲ್ಲದೆ ಅನೇಕರು ಆತನನ್ನು ಒಬ್ಬ ಮುದಿ ಕಪಟಾಚಾರಿಯೆಂದು ಪರಿಗಣಿಸಲು ಪ್ರವೃತ್ತರಾಗಿದ್ದರು. ಆ ಹನ್ನೊಂದು ವರುಷಗಳಲ್ಲಿ ಆತನು ಪ್ರತ್ಯೇಕವಾಗಿದ್ದುದು ಮತ್ತು ದೇವಾಲಯವನ್ನು ಕಟ್ಟಲು ಆತನು ಸಂಪತ್ತನ್ನು ಕೂಡಿಸಿಕೊಂಡಂಥದ್ದು ಬಹುಶಃ ಜನರ ಮೇಲೆ ತೆರಿಗೆ ಹೇರುವಂಥದ್ದನ್ನು ಒಳಗೊಂಡಿದ್ದು ಇವೆಲ್ಲವೂ ಒಂದು ಕೆಟ್ಟ ದೃಷ್ಟಿಯಿಂದ ಕಾಣಲಾಗಿದ್ದ ಸಾಧ್ಯತೆಯಿದ್ದು, ಇವು ಆತನ ಜನಪ್ರಿಯತೆಯು ಕಳೆದುಹೋಗುವಂತಾಗಲು ನೆರವಾಗಿದ್ದವು. ದೇವಜನರ ನಡೆ ನುಡಿ ಮತ್ತು ಧ್ಯೇಯಗಳು ಅತ್ಯುತ್ತಮವಾಗಿದ್ದಾಗ್ಯೂ ಸಹ ಅವರು ಲೌಕೀಕರಿಂದ ತಪ್ಪಾಗಿ ತಿಳುಕೊಳ್ಳಲ್ಪಡುವಂಥದ್ದು ಅವರ ಪಾಲಿಗೆ ಬಂದ ಭಾಗ್ಯವಾಗಿರುವದು. ಹೀಗಿರಲು ಸಕಲ ವಿಧವಾದ ಕೆಟ್ಟತನಕ್ಕೆ ದೂರವಿದ್ದು ಬುದ್ಧಿವಂತಿಕೆಯಿಂದ ನಡೆದುಕೊಳ್ಳಲು ನಾವು ಅದೆಷ್ಟು ಜಾಗರೂಕರಾಗಿರಬೇಕು.

ಇಲ್ಲಿಯೂ ಸಹ ದೇವರು ಯಾವ ಮುಕ್ತ ಜೀವಿಯ ಆಸಕ್ತಿಗಳಲ್ಲಿ ಹಸ್ತಕ್ಷೇಪವಾಗದಂಥ ರೀತಿಯಲ್ಲಿ ಲೋಕದ ಸಂಗತಿಗಳನ್ನು ತನ್ನ ಸಂಕಲ್ಪದ ಪ್ರಕಾರ ಮಾರ್ಪಡಿಸಲು

ಸಮರ್ಥನೆಂಬುದಕ್ಕೆ ಒಂದು ನಿದರ್ಶನವನ್ನು ನಾವು ಹೊಂದಿರುವೆವು. ದಾವೀದನ ಪಾಪ ಮತ್ತು ಅದಕ್ಕೆ ವಿಧಿಸಿದ ಶಿಕ್ಷೆಗಳು ಇಲ್ಲದಿದ್ದಲ್ಲಿ, ಅಬ್ಷಾಲೋಮನು ರಾಜ್ಯದ ವಿಷಯವಾಗಿ ಇದೇ ರೀತಿಯ ದುಷ್ಟ ಯೋಜನೆಗಳನ್ನು ಮಾಡಬಹುದಾಗಿದ್ದು, ಆ ಯೋಜನೆಗಳನ್ನು ಈಡೇರಿಸಿಕೊಳ್ಳಲು ಇದೇ ರೀತಿಯ ಪ್ರಯತ್ನಗಳನ್ನು ನಡೆಸಬಹುದಾಗಿತ್ತು; ಆದರೆ ದೇವರು ಆ ವಿಷಯದಲ್ಲಿ [ಯೋಜನೆಯಲ್ಲಿ] ಸಫಲತೆಯು ಅತಿ ಮುಖ್ಯವಾದ ಘಟ್ಟವನ್ನು ತಲುಪಲು ಅನುಮತಿ ನೀಡುತ್ತಿರಲಿಲ್ಲ. ಇದರ ಒಂದು ಉದಾಹರಣೆಯನ್ನು ಸಿಂಹಾಸನ ತೆಗೆದುಕೊಳ್ಳುವ ಸಲುವಾಗಿ ಅಬ್ಷಾಲೋಮನ ಕಿರಿಯ ಸಹೋದರನು ನಂತರದಲ್ಲಿ ಮಾಡಿದ ಪ್ರಯತ್ನದಲ್ಲಿ ಕಂಡುಕೊಳ್ಳುತ್ತೇವೆ. ಆತನು ಅಬ್ಷಾಲೋಮನು ಮಾಡಿದಂತೆಯೇ ಮಾಡಿದ್ದಲ್ಲದೆ ಇನ್ನೂ ಹೆಚ್ಚು ಅನುಕೂಲಕರವಾದ ಪರಿಸ್ಥಿತಿಯಲ್ಲಿ ಹಲವು ವಿಧದಲ್ಲಿ ಮುಂದುರೆದಿದ್ದನು. ಅದರಲ್ಲಿ ಅರಸನು ತನ್ನ ವಯಸ್ಸಿನ ಕಾರಣದಿಂದ ಬಹು ದುರ್ಬಲನಾಗಿದ್ದು ರಾಜ್ಯದ ಹಿತದೃಷ್ಟಿಯಲ್ಲಿ ವೈಯುಕ್ತಿಕವಾಗಿ ಅಧಿಕಾರ ನಡೆಸಲು ಅಥವಾ ರಣರಂಗಕ್ಕೆ ಇಳಿಯಲು ಅಸಮರ್ಥನಾಗಿದ್ದನು. ಹೇಗೂ ದೇವರು ಸೂಕ್ತ ಸಮಯದಲ್ಲಿ ಆ ವಿಷಯವನ್ನು ದಾವೀದನ ಗಮನಕ್ಕೆ ತಂದಿದ್ದು, ಹೀಗಾಗಿ ಆ ಕ್ರಾಂತಿಯು ಪರಿಣಾಮವನ್ನು ಉಂಟುಮಾಡುವ ಮೊದಲೇ ಅಂದರೆ ಅದು ಮೊಗ್ಗಿನಲ್ಲಿ ಇರುವಾಗಲೇ ಅದನ್ನು ಚಿಗುಟಿ ಹಾಕಲಾಗಿ, ಅದೋನಿಯನಿಗೆ ಬದಲಾಗಿ ಸೊಲೊಮೋನನು ಅಭಿಷಕ್ತ ಅರಸನಾಗಿದ್ದನು.

ಹೀಗೆಯೇ ದೇವಜನರ ಸಂಗತಿಯು ಈ ದಿನದಲ್ಲಿಯೂ ಇರುವದು. ಸತ್ಯದ ಹಿತಾಸಕ್ತಿಗೆ ಅಪಾಯ ತರುವ ಒಳಸಂಚುಗಳು ಉಂಟಾಗಬಹುದು, ಆದರೆ ದೇವರು ಅಧಿಕಾರದ ಚುಕ್ಕಾಣಿಯನ್ನು ಹಿಡಿದಿದ್ದು ತನ್ನ ನ್ಯಾಯನಿರ್ಣಯದ ಪ್ರಕಾರ ಯಾವುದು ವಿವೇಕವುಳ್ಳದ್ದಾಗಿರುವದೋ ಅದಕ್ಕಿಂತಲೂ ಮುಂದೆ ಹೋಗಲು ಬಿಡುವದಿಲ್ಲ, ಅಂದರೆ ಅದು ದೇವರ ಮಹಿಮೆಗಾಗಿ ಕಾರ್ಯಸಾಧಿಸುವಂತಾಗಿ ಆತನ ಯೋಜನೆಗಳು ನೆರವೇರಲ್ಪಟ್ಟು ಜನರಿಗೆ ಶಿಕ್ಷಣ ಹಾಗು ಶಿಸ್ತಿನ ರೂಪವಾಗಿಯೂ ಅಲ್ಲದೆ ದೇವರ ಕಾರ್ಯಗಳಿಗೆ ತಮ್ಮ ಹೃದಯಗಳಲ್ಲಿ ವಿರೋಧಿಸುವವರನ್ನು ಶೋಧಿಸಿ ಬೇರ್ಪಡಿಸಲು ಮಾತ್ರ ಕಾರ್ಯನಿರ್ವಹಿಸಲು ಅನುಮತಿನೀಡಲಾಗುವದು. ನಮಗಿರುವ ಸಾಮಾನ್ಯವಾದ ಪಾಠವೆಂದರೆ ರಾಜಾಧಿರಾಜನು ಕರ್ತರ ಕರ್ತನೂ ಆಗಿರುವಾತನಲ್ಲಿ ಭರವಸೆಯುಳ್ಳವರಾಗಿರಬೇಕೆಂಬದು; ಆತನ ಕಡೆಗೆ ಅಚಲವಾದ ವಿಧೇಯತೆ ಮತ್ತು ಆತನ ರಾಜ್ಯಾಧಿಕಾರದ ತತ್ವಗಳಿಗೆ ದೃಢವಾದ ನಿಷ್ಠೆಯುಳ್ಳವರಾಗಿದ್ದು ದೇವರ ನಿಜವಾದ ಇಸ್ರಾಯೇಲ್ಯರೆಲ್ಲರೂ ಲೋಕದವರೊಡನೆ ಸಾಧಾರಣವಾಗಿ ವ್ಯವಹರಿಸುವಾಗ ಪ್ರೀತಿನಿಯಮವನ್ನು ಕೈಗೊಳ್ಳುವವರಾಗಿರ – ಬೇಕೆಂಬದು. ನಮಗೆ ಹಾನಿಕರವಾಗಿ ತೋರುವ ವಿಷಯಗಳನ್ನು ನಮ್ಮ ನಿತ್ಯವಾದ ಹಿತಾಸಕ್ತಿಗಾಗಿ ಕಾರ್ಯವೆಸಗುವಂತೆ ಮಾರ್ಪಡಿಸಲು ಹಾಗು ತನ್ನ ಜನರಿಗೆ ಹಾಗು ತನ್ನ ಧ್ಯೇಯಗಳಿಗೆ ದಕ್ಕೆಯನ್ನು ಉಂಟು ಮಾಡಲು ಪ್ರಯತ್ನಿಸುವವರಿಗೆ ವಿನಾಶಕರವಾಗಿ ಕಾರ್ಯನಿರ್ವಹಿಸಲು ದೇವರು ಸಮರ್ಥನೂ ಹಾಗು ಇಚ್ಛೈಯುಳ್ಳವನೂ ಆಗಿರುವನು.

ಸುವರ್ಣಮಯ ಪಶ್ಚಭಾಗವನ್ನು ನಮ್ಮ ಪಾಠದಲ್ಲಿ ಚೆನ್ನಾಗಿ ನಿದರ್ಶಿಸಲಾಗಿರುವದು. ಅಬ್ಷಾಲೋಮನು ಗೌರವವಿಲ್ಲದವನೂ ಕೃತಜ್ಞತಾಹೀನನೂ ಅವಿಧೇಯ ಮಗನೂ ಸ್ವಾರ್ಥಿಯೂ ದುರಾಸೆಯವನೂ ಕಪಿಮುಷ್ಠಿಯುಳ್ಳವನೂ ಆಗಿದ್ದು ಜೀವನದ ಪ್ರಮುಖ ಘಟ್ಟದಲ್ಲೇ ಅವಮಾನಕರವಾದ ಅಂತ್ಯಕ್ಕೆ ಬಂದಿದ್ದು ಆತನಂತೆ ಇರುವಂಥವರಿಗೆ ಒಂದು ಪಾಠವಾಗಿ ಗುರುತು ಮಾಡಲಾಗಿರುವದು. ಬದಲಾಗಿ ಸೊಲೊಮೋನನು ಸಮಾಧಾನವುಳ್ಳವನೂ ಒಳ್ಳೆಯವನೂ ಬುದ್ಧಿವಂತನಾದ ಮಗನಾಗಿದ್ದು ರಾಜ್ಯವನ್ನು ಗಳಿಸಿಕೊಂಡಿದ್ದನು, ಅಲ್ಲದೆ ಅದನ್ನು ತನ್ನ ತಂದೆಯ ಆಶೀರ್ವಾದ ಮತ್ತು ದೇವಾನುಗ್ರಹದೊಡನೆ ಗಳಿಸಿಕೊಂಡಿದ್ದನು.

*****

ಹೆಮ್ಮೆ ಕೃತಜ್ಞತಾಹೀನತೆ ಕಪಟ ಬಂಡಾಯ

ರೀಪ್ರಿಂಟ್ಸ್ ಪುಟ 4275

2 ಸಮುವೇಲ 15:1–12

"ನಿನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಬದುಕುವಿ – ವಿಮೋಚನಾಕಾಂಡ 20:12

ಕುಲಹೀನರ ಸಹಿತವಾಗಿ ಘನವಂತರ ಜೀವಿತದಿಂದಲೂ ಪಾಠಗಳನ್ನು ತೆಗೆದುಕೊಳ್ಳಬಹುದು. ಕವಿಯು ಹೇಳಿರುವಂತೆ:–

"ಮಹಾ ಪುರುಷರ ಜೀವಿತಗಳೆಲ್ಲವು ನೆನಪಿಸುವದು,
ಆದರ್ಶಮಾಡಿಕೊಳ್ಳಬೇಕೆಂದು ನಾವು ನಮ್ಮ ಜೀವಿತಗಳನ್ನ,
ಅಲ್ಲದೆ ಹೊರನಡೆಯವದು ನಮ್ಮ ಹಿಂದೆ ಬಿಡುವದು
ಸಮಯವೆಂಬ ಮರಳಿನ ಮೇಲೆ ಹೆಜ್ಜೆಯ ಗುರುತನ್ನ."

ಇದು ಹೀಗಿರುವಲ್ಲಿ, ದುಷ್ಕರ್ಮಿಗಳ ಜೀವನ ಮಾರ್ಗದ ಮೇಲಿನ ಹಜ್ಜೆಯ ಗುರುತುಗಳು ನಮಗಾಗಿ ಪಾಠಗಳನ್ನು ಹೊಂದಿರುತ್ತವೆಂಬುದು ಸಹ ಖಂಡಿತವಾಗಿ ಸತ್ಯವಾಗಿದ್ದು, ಇವು ನಮಗೆ ಯಾವ ಮಾರ್ಗದಿಂದ ನಾವು ದೂರ ಉಳಿಯಬೇಕು, ಗುಣಸ್ವಭಾವದಲ್ಲಿನ ಯಾವ ಅಂಶಗಳನ್ನು ತಡೆಹಿಡಿಯಬೇಕು, ಯಾವ ಆಕಾಂಕ್ಷೆಯನ್ನು ನಿಗ್ರಹಿಸಬೇಕು, ಎಂಬುದನ್ನು ಸೂಚಿಸುತ್ತವೆ. ಈ ಸೂಚನಾ ವಿಧಾನಗಳನ್ನು ಅನುಸರಿಸಿಕೊಂಡು

ದೇವವಾಕ್ಯವು ಆತ್ಮಿಕ ಇಸ್ರಾಯೆಲ್ಯರ ಎದುರಿನಲ್ಲಿ ನೀತಿಸತ್ಯತೆಗಳ ಕಡೆಗೆ ತೋರುವಂಥ ಧೀರವಾದ ಭಯಭಕ್ತಿಯ ಘನವುಳ್ಳ ಮಾರ್ಗದರ್ಶನಗಳು ಬುದ್ಧಿಪಾಠಗಳು ಹಾಗು ನಿದರ್ಶನಗಳನ್ನು ಎತ್ತಿಹಿಡಿಯುವದು ಮಾತ್ರವಲ್ಲದೆ ದುಷ್ಕರ್ಮಿಗಳ ನಿದರ್ಶನಗಳನ್ನೂ ಸಹ ತೋರಿಸಿಕೊಡುವದು. ಇಂದಿನ ನಮ್ಮ ಪಾಠವು ಈ ಎರಡನೇಯ ಗುಂಪಿಗೆ ಸಂಬಂಧಿಸಿರುವದು. ಇದು ದಾವೀದನ ಮಗನಾದ ಅಬ್ಷಾಲೋಮನನ್ನು ಪರಿಗಣನೆಗೆ ತೆಗೆದುಕೊಂಡಿದ್ದು, ಇವನು ಈ ಸಮಯದಲ್ಲಿ ಮೂವತ್ತು ವರುಷಗಳ ಹತ್ತಿರದಲ್ಲಿದವನೆಂದು ಭಾವಿಸಲಾಗಿರುವದು. ಆತನ ತಂದೆಯು ದೇವರು ಅಭಿಷೇಕಿಸಿದ ಇಸ್ರಾಯೇಲ್ಯರ ಮೇಲಿನ ಅರಸನಾಗಿದ್ದು, ಆತನ ತಾಯಿಯು ನರೆಯ ರಾಜ್ಯದ ರಾಜನ ಮಗಳಾಗಿರಲು, ಅಬ್ಷಾಲೋಮನು ರಾಜಕುಮಾರನ ಗುಣಲಕ್ಷಣಗಳು ನಡತೆಗಳನ್ನು ಬಾಧ್ಯವಾಗಿ ಹೊಂದಿದ್ದು ಅಲ್ಲದೆ ಬಹು ಸುಂದರನಾಗಿದ್ದವನಾಗಿ ಇಸ್ರಾಯೇಲ್ಯರ ಹೆಮ್ಮೆಯ ಒಂದು ಕೇಂದ್ರ ಬಿಂಧುವಾಗಿದ್ದನು. "ಸೌಂದರ್ಯದಲ್ಲಿ ಅಬ್ಷಾಲೋಮನಂತೆ ಹೆಸರುಗೊಂಡ ಪುರುಷನು ಇಸ್ರಾಯೇಲ್ಯರಲ್ಲಿ ಒಬ್ಬನೂ ಇರಲಿಲ್ಲ. ಅವನಲ್ಲಿ ಅಂಗಾಲಿನಿಂದ ನಡುನೆತ್ತಿಯವರೆಗೆ ಒಂದು ದೋಷವೂ ಇರಲಿಲ್ಲ." [2 ಸಮುವೇಲ 14:22]; ಅಲ್ಲದೆ ಆತನ ತಲೆಯ ಮೇಲಿನ ಕೂದಲುಗಳ ವಿಷಯವು ಈ ದಿನದ ವರೆಗೂ ಒಂದು ಗಾದೆಯ ಮಾತಾಗಿತ್ತು.

ಪ್ರಕೃತಿದತ್ತವಾಗಿ ಉತ್ತಮ ರೀತಿಯಲ್ಲಿ ಅನುಗ್ರಹಿತರಾದವರು ನೋಡಲು ಸಮೃದ್ಧವಾದ ಚೆಲುವು ಪ್ರತಿಭೆಯುಳ್ಳವರೂ ಇಲ್ಲವೇ ಮಾನಸಿಕ ಸಾಮರ್ಥ್ಯ ಹೊಂದಿದವರೂ ಆಗಿದ್ದು, ಅಲ್ಪ ಪ್ರತಿಭೆ ಹಾಗು ಅಲ್ಪ ಚೆಲುವಿಕೆ – ಯುಳ್ಳವರಿಗಿಂತಲೂ ಇವರು ಒಂದು ದೊಡ್ಡ ಮಟ್ಟದಲ್ಲಿನ ಪರಿಶೋಧನೆಗಳಿಗೆ ಒಳಗಾಗಿರುವರೆಂಬದು ಗಮನಿಸಲು ಯೋಗ್ಯವಾಗಿರುವದು. ಅವರನ್ನು ಆವರಿಸಿರುವ ಬಲಹೀನತೆ– ಯೆಂದರೆ ಅವರು ಹೆಮ್ಮೆ ಹಾಗು ಸ್ವಪ್ರತಿಷ್ಠೆಯಂಥ ಪ್ರವೃತ್ತಿಯುಳ್ಳವರಾಗಿದ್ದು, ಮಹತ್ವಾಕಾಂಕ್ಷೆಯು ಇವುಗಳಿಗೆ ಸಹಾಯದ ಹಸ್ತವನ್ನು ನೀಡಲು ಸಮರ್ಥವಾಗಿರುವದೆಂಬದು. ಅಬ್ಷಾಲೋಮನು ಹಾಗು ಅವನ ಚೆಲುವು ಅಲ್ಲದೆ ರಾಜ್ಯದಲ್ಲಿ ಆತನಿಗಿರುವ ಉನ್ನತ ಸ್ಥಾನ ಇವುಗಳನ್ನು ಯೋಚಿಸುವಾಗ ನಮಗೆ ಲೂಸಿಫರನನ್ನು ಮತ್ತು ಶಾಸ್ತ್ರವಚನಗಳಲ್ಲಿ ಆತನ ಬಗ್ಗೆ ನೀಡಲಾಗಿರುವ ಭವ್ಯವಾದ ವರ್ಣನೆಯನ್ನು ಅಂದರೆ ಆತನ ಉನ್ನತ ಸ್ಥಾನ ಗೌರವ ಮತ್ತು ಆತನ ಅಹಂಕಾರ ಹಾಗು ಮಹತ್ವಾಕಾಂಕ್ಷೆ: ಇವುಗಳು ಆತನನ್ನು ಅವನತಿಗೆ ನಡೆಸಿದಂಥದ್ದನ್ನು ನಮ್ಮ ನೆನಪಿಗೆ ತರುತ್ತದೆ. ಈ ಎರಡು ವ್ಯಕ್ತಿಗುಣಗಳ ವಿಷಯವಾದ ಸಲಹೆಯು ಈ ದೃಷ್ಟಿಯಿಂದ ಈ ದಿನಗಳಲ್ಲಿನ ಆತ್ಮಿಕ ಇಸ್ರಾಯೇಲರ ಹೃದಯಗಳಿಗೆ ಭಯದಿಂದ ಪುಳಕಿತವಾಗುವಂತೆ ಮಾಡಬೇಕು. ಈಗ ಆತ್ಮಿಕ ಇಸ್ರಾಯೇಲ್ಯ– ರಾದ ನಾವು ಅರಿತಿರುವದೇನಂದರೆ ರಾಜಕುಮಾರರಾಗಿ ತಂದೆಯಿಂದಲೂ ಆ ದೊಡ್ಡ ಅರಸನಿಂದಲೂ ಅತ್ಯುನ್ನತವಾಗಿ ಅನುಗ್ರಹಿತರಾಗಿದ್ದು, ಸೌಂದರ್ಯ ಮತ್ತು ಪರಿಪೂರ್ಣತೆಯೆಂಬ ಬಹು ದೊಡ್ಡ ಆಶೀರ್ವಾದವನ್ನು ಹೊಂದಿರುವೆವೆಂಬದು. ಇವುಗಳು ನಮಗೆ ನೀತಿನಿರ್ಣಯವನ್ನು ಪಡೆಯುವ ಮೂಲಕವಾಗಿ ಬರುವಂಥವುಗಳಾಗಿರುವದು; ಅಲ್ಲದೆ ಪ್ರಭಾವ ವಾನ ಹಾಗು ನಿರ್ಣಯತ್ವಗಳಿಂದ ಕೂಡಿರುವ ಮಹಿಮೆಯುಳ್ಳ ಸುವಾರ್ತೆಯಲ್ಲಿ ನಮ್ಮ ಮುಂದೆ ಇಟ್ಟಿರುವ ಕೃಪಾಪೂರ್ಣವಾದ ನಿರೀಕ್ಷೆಯ ಮೂಲಕವಾಗಿ ತಂದೆಯಿಂದ ಬಹುವಾಗಿ ಗೌರವವನ್ನು ಪಡೆಯುವಂತೆ ಇವುಗಳು ಮಾಡಿರುವವು. ಅಲ್ಲದೆ ನಮಗೆ ಅನುಗ್ರಹಿಸಲಾದ ದೈವಿಕ ಪ್ರಕಟಣೆಯೆಂಬ ಬೆಳಕಿನ ಮೂಲಕವಾಗಿ ಸಹ ವಿಶೇಷವಾಗಿ ಆಶೀರ್ವದಿಸಲ್ಪಟ್ಟಿರುವೆವು. ಇವು ನಮಗೆ ಲೋಕದ ಜ್ಞಾನಕ್ಕಿಂತಲೂ ಉತ್ಕೃಷ್ಟವಾದ ಜ್ಞಾನವನ್ನು ನೀಡಿರುವವು.

ಅಬ್ಷಾಲೋಮನು ಹಾಗು ಲೂಸಿಫರನ ವಿಷಯದಲ್ಲಿದ್ದಂತೆ ಈ ಕೃಪಾಶೀರ್ವಾದಗಳು ಮತ್ತು ಅನುಗ್ರಹಗಳು ನಮ್ಮ ಮೇಲೆ ಕೆಟ್ಟ ಪರಿಣಾಮಗಳನ್ನು ಉಂಟುಮಾಡಿ ಕಡೆಯಲ್ಲಿ ವಿನಾಶವನ್ನು ತಂದುಕೊಟ್ಟಲ್ಲಿ ನಮ್ಮ ಸಂಗತಿಯು ಏನಾಗ ಬಹುದು? ಈ ಆಲೋಚನೆಗಳು ಅಪೋಸ್ತಲನ ಈ ಮುಂದಿನ ಮಾತುಗಳನ್ನು ನಮ್ಮ ನೆನಪಿಗೆ ಬರುವಂತೆ ಮಾಡಿ ಸಾಕಷ್ಟು ಭಯವನ್ನುಂಟುಮಾಡುತ್ತವೆ: "ಹೀಗಿರಲಾಗಿ (ವಿಮೋಚಕನೊಡನೆ ಸಹ–ಬಾಧ್ಯರಾಗುವದರ ಮೂಲಕವಾಗಿ) ದೇವರ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಮ್ಮೊಳಗೆ ಯಾವನಾದರೂ (ಭಕ್ತಿಯ ಕೊರತೆಯಿಂದ, ನಿಷ್ಠೆಯ ಕೊರತೆಯಿಂದ, ನಂಬಿಕೆಯ ಕೊರತೆಯಿಂದ, ದೀನತೆಯ ಕೊರತೆಯಿಂದ) ಆ ವಾಗ್ದಾನದ ಫಲವನ್ನು ಹೊಂದದೆ ತಪ್ಪುವ – ನಾದಾನೋ ಎಂದು ನಾವು ಭಯಪಡೋಣ." [ಇಬ್ರೀಯ 4:1]

ಒಬ್ಬ ಸಹೋದರರ ಕೊಲೆಗಾರ

ಆಮ್ನೋನನು ದಾವೀದನ ಹಿರೀಮಗನಾಗಿದ್ದು ತನ್ನ ಮಲತಂಗಿಯೂ ಅಬ್ಷಾಲೋಮನ ಒಡಹುಟ್ಟಿದವಳೂ ಆದ ತಾಮಾರಳನ್ನು ಕೆಡಿಸಿದ್ದನೆಂಬುದನ್ನು ನೆನಪಿಸಿಕೊಳ್ಳಲಾಗುವದು. ಅರಸನಾದ ದಾವೀದನು ಈ ವಿಷಯದಲ್ಲಿ ತೀವ್ರವಾಗಿ ಕುಪಿತಗೊಂಡಿದ್ದು ಈ ಅಪರಾಧಕ್ಕೆ ಯಾವ ವಿಧವಾದ ಶಿಕ್ಷೆಯನ್ನು ಸೂಕ್ತವಾಗಿ ನೀಡಬೇಕೆಂಬ ವಿಷಯದಲ್ಲಿ ದಿಕ್ಕುತೋರದವನಾಗಿದ್ದಂತೆ ಕಾಣುತ್ತದೆ; ಹೀಗಾಗಿ ಯಾವ ಶಿಕ್ಷೆಯೂ ನೀಡಲಾಗದೆ ವರುಷಗಳು ಕಳೆದಿದ್ದವು. ಆನಂತರ ಅಬ್ಷಾಲೋಮನು ತನ್ನ ಸಹೋದರಿಯ ವಿಷಯದಲ್ಲಿ ಮುಯ್ಯಿತೀರಿಸುವದನ್ನು ತಾನೇ ತೆಗೆದುಕೊಂಡಿದ್ದನು. ಆತನು ಒಂದು ಔತಣವನ್ನು ಮಾಡಿಸಿ, ಅದಕ್ಕೆ ತನ್ನ ತಂದೆಗೆ ಅನೇಕ ಹೆಂಡತಿಯರಿಂದ ಹುಟ್ಟಿದ್ದ ಮಕ್ಕಳೆಲ್ಲರನ್ನು ಆಹ್ವಾನಿಸಿದ್ದನು. ಈ ಔತಣದ ಔನ್ನತ್ಯದಲ್ಲಿ ಶಿಷ್ಟಾಚಾರ ನಿಯಮವನ್ನು ಹಾಗು ಸಹಜವಾದ ವಾತ್ಸಲ್ಯವನ್ನು ಬದಿಗೊತ್ತಿದವನಾಗಿ ತನ್ನ ಸಹೋದರನನ್ನು ಹತ್ಯೆಮಾಡಿ ನ್ಯಾಯವಿಚಾರಣೆಯ ಭಯದಿಂದ ಓಡಿಹೊಗಿದ್ದನು; ನಿಯಮವಿಧಿಯ ಪ್ರಕಾರ ನ್ಯಾಯತೀರಿಸುವ ಅಧಿಕಾರವು ಅರಸನಾದ ಆತನ ತಂದೆಯಲ್ಲಿ ಕೇಂದ್ರೀಕೃತವಾಗಿತ್ತು. ಈ ಘಟನಾನುಭವದಲ್ಲಿ ನಮಗಿರುವ ಪಾಠವು ಯಾವದು? ಯಾವುದನ್ನು ನಾವು ಅನುಸರಿಸಬೇಕು? ಯಾವುದನ್ನು ದೂರವಿಡಬೇಕು? ಆತ್ಮಿಕ ಇಸ್ರಾಯೇಲ್ಯರಲ್ಲಿ ನಾವೆಲ್ಲರೂ

ರಾಜಕುಮಾರಾಗಿದ್ದು ಆ ದೊಡ್ಡ ಅರಸನ ಮಕ್ಕಳಾಗಿರುವೆವು; ಆತನು ನ್ಯಾಯಾಧಿಪತಿಯೂ ಸಹ ಆಗಿರುವನು. ನಮಗೆ ಸೂಕ್ತವಾಗಿರುವ ಪಾಠವೆಂದರೆ ನ್ಯಾಯವನ್ನು ತೀರಿಸುವಂಥ ಅಧಿಕಾರ ಹಾಗು ಜವಾಬ್ದಾರಿಯು ನಮ್ಮ ಮಹತ್ವಾಕಾಂಕ್ಷೆಯಾಗಿರದೆ, ಅದು ತಂದೆಯದಾಗಿರುವದೆಂಬುದು.

ಶಾಸ್ತ್ರವಚನಗಳು ಪ್ರಕಟವಾಡಿ ಹೇಳಿರುವಂತೆ: "ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆ." [ರೋಮಾ 12:19] ನಮಗೆ ಕಾದುಕೊಳ್ಳಲು ಒಂದು ಸರಿಯಾದ ಸಮಯವೆಂದು ತೋರುವಷ್ಟರವರೆಗೂ ಕಾದುಕೊಂಡಿದ್ದು ಆನಂತರ ಯಾವ ದೈವಿಕ ಶಿಕ್ಷೆಗಾಗಿಯೂ ಇನ್ನು ಸಹಿಸಿಕೊಂಡಿರಲು ನಮಗೆ ಸಾಧ್ಯವಿಲ್ಲವೆಂದು ಪರಿಗಣಿಸಿದವರಾಗಿ ನಾವೇ ವಿಷಯವನ್ನು ನಮ್ಮ ಕೈಗೆತ್ತಿಕೊಳ್ಳುವದು ಅಂದರೆ ಮತ್ತೊಬ್ಬನನ್ನು ಕೊಲೆಮಾಡುವಂಥದ್ದು ನಮ್ಮ ಸಂಗತಿಯಾಗಿರುವದಿಲ್ಲ. ಇಲ್ಲ, ನಮ್ಮ ದಿವ್ಯ ಬೋಧಕನ ಆಜ್ಞಾಪನೆ ಏನಂದರೆ: "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ." ನಮ್ಮ ಒಡೆಯನ ಮಾತಿನ ಮೂಲಕವಾಗಿ ನಾವು ಕಲಿತುಕೊಳ್ಳಬೇಕಿರುವ ಪಾಠವೇನಂದರೆ ಅದು ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯ ಬಗ್ಗೆ ಪರಿಶೀಲಿಸುವ ಸಲುವಾಗಿ ನಿನ್ನನ್ನು ಬಹು ಸಂಕಷ್ಟಕ್ಕೆ ಗುರಿಮಾಡಿಕೊಳ್ಳುವದಕ್ಕೆ ಬದಲಾಗಿ ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ನೋಡು ಎಂಬುದು. ಒಬ್ಬನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು. [ರೋಮಾ 14:4]

ದೇವರ ಮಕ್ಕಳ ನಡುವೆ ಅಕ್ಷರಾರ್ಥದಲ್ಲಿ ಕೊಲೆಗೈಯು–ವಂಥದ್ದು ಇಲ್ಲಿ ಅನ್ವಯಿತವಾಗುವದೆಂಬದು ಇದಕ್ಕೆ ಸಮಾನಾಂತ–ರವಾಗಿರುವದಿಲ್ಲ. ಇಲ್ಲ, ದೇವರಿಗೆ ಕೃತಜ್ಞತೆಗಳು! ಇಂಥ ವಿಧಾನಗಳನ್ನು ಕಾರ್ಯಗತವಾಡಲು ಲೋಕವು ನಾಗರೀಕತೆಯಲ್ಲಿ ಬಹು ದೀರ್ಘವಾಗಿ ಮುಂದುವರೆದಿರುವದು; ಆದರೆ ಎಲ್ಲಿ ಅಬ್ಷಾಲೋಮನ ಮನೋಭಾವವಿರುವದೋ ಅಲ್ಲಿ ಕ್ರೋಧ, ಕೋಪ, ಮತ್ಸರ ತೀಕ್ಷ್ಣವಾದ ಬಿನ್ನಾಭಿಪ್ರಾಯಗಳು ಸಹ ಇರುವವು. ದೂಷಣಾವಾಕ್ಯಗಳು ವ್ಯಂಗ್ಯವಾದ ಮಾತುಗಳು, ತಿರಸ್ಕಾರದಿಂದ ಭುಜಕುಣಿಸುವದು ಮುಂತಾದವುಗಳನ್ನು ಬಳಸುವ ನೂತನ ವಧಾವಿಧಾನಗಳುಂಟು. ಅಲ್ಲದೆ ಈ ನೂತನ ವಿಧವಾಗಿ ಕೊಲೆಮಾಡುವಂಥದ್ದು ಅನೇಕ ವೇಳೆ ಪರಲೋಕದ ಭ್ರಾತೃತ್ವದಲ್ಲಿರುವ ರಾಜವಂಶದ ಸದಸ್ಯರ ಸಮಕ್ಷಮದಲ್ಲಿ ಮಾಡಲಾಗುವದು. ಅದೆಷ್ಟು ಭಯಂಕರ! ಎಂದು ನಾವು ಹೇಳೋಣವೇ? ಇಂಥಾ ರಕ್ತಾಪರಾಧಭಾವವು ಅಂದರೆ ಇಂಥಾ "ಶರೀರಭಾವದ ಕರ್ಮಗಳು ಮತ್ತು ಸೈತಾನನ ಕೃತ್ಯಗಳು" ನಮ್ಮಲ್ಲಿರದಂತೆ ನೋಡಿಕೊಳ್ಳಲು ನಾವು ಎಚ್ಚರವಾಗಿರೋಣ, ಇಲ್ಲವಾದಲ್ಲಿ ನಾವು ಆ ರಾಜ್ಯದ ಬಾಧ್ಯತೆಯನ್ನು ಎಂದೂ ಹೊಂದಲಾಗುವದಿಲ್ಲ.

ಕೃತಜ್ಞಹೀನನಾದ ಮಗನು–ವಿಶ್ವಾಸಘಾತುಕನು

ಅಬ್ಷಾಲೋಮನು ಮೂರು ವರುಷಗಳು ತನ್ನ ತಾತನೂ ಸಿರಿಯ ದೇಶದ ಗೆಷೂರಿನ ಅರಸನೂ ಆದ ತಲ್ಮೈಯ ಬಳಿಯಲ್ಲಿದ್ದನು. ತನ್ನ ಹಿರೀ ಸಹೋದರನ ಕೊಲೆಯ ಮೂಲಕವಾಗಿ ತಾನು ಇಸ್ರಾಯೇಲಿನ ಸಿಂಹಾಸನಕ್ಕೆ ಮುಂದಿನ ವಾರಸುದಾರನಾಗಿ ಮಾಡಿಕೊಂಡಿದ್ದನು; ಹೀಗೆ ಸ್ಪಷ್ಟವಾಗಿ ತೋರುವ ಬಾಧ್ಯತೆಯು ಈ ಅಪರಾಧದ ಹಿಂದೆ ಪ್ರೇರಿತವಾದ ಉದ್ದೇಶವಾಗಿರುವ ಸಾಧ್ಯತೆಯಿದ್ದು, ಹೇಗೂ ಆತನು ಈ ಅಪರಾಧವು ನ್ಯಾಯ ಮತ್ತು ನೀತಿತತ್ವಗಳ ಕಾಪಾಡುವ ಸಲುವಾಗಿತ್ತೆಂಬ ಸೋಗುಹಾಕಿದ್ದನು. ಅಯ್ಯೋ! ಮಾನವನ ಹೃದಯವು ಅದೆಷ್ಟು ವಂಚನಾದ್ರೋಹವುಳ್ಳದ್ದು! ಇದರಲ್ಲಿ ಇಬ್ಬಗೆಯ ದ್ಯೇಯೋದ್ದೇಶಗಳು ಕಾರ್ಯಪ್ರವೃತ್ತವಾಗಿರುವದನ್ನು ಅದೆಷ್ಟು ಸಾರಿ ನಾವು ಕಂಡುಕೊಳ್ಳುತ್ತಿರುವೆವು! ದೇವರ ಮಕ್ಕಳಾಗಿ ತಂದೆಯ ಮಾತುಗಳನ್ನು ಎಳ್ಳಷ್ಟೂ ಸಂಶಯವಿಲ್ಲದೆ ಅನುಸರಿಸುವವರಾಗಿ ಅದರಿಂದ ಉಂಟಾಗುವ ಫಲಿತಾಂಶಗಳೆಲ್ಲವನ್ನು ಆತನಿಗೆ ಒಪ್ಪಿಸಿಕೊಡುವದರಿಂದ ಆಗುವ ಅನುಕೂಲಗಳನ್ನು ನಾವು ಕಂಡಿದ್ದೇವೆ. ಅವರು ಹೀಗೆ ದೇವರ ನೀತಿನ್ಯಾಯಗಳನ್ನು ತೋರಿಸಿಕೊಡುವದರ ಸಹಿತವಾಗಿ ದೇವರ ಶಕ್ತಿಯ ಮೇಲಿನ ತಮ್ಮ ವಿಶ್ವಾಸವನ್ನು ತೋರ್ಪಡಿಸುವರು. ಮತ್ತು ಹೀಗೆ ಅಪೋಸ್ತಲನು ತಿಳಿಸಿರುವಂತೆ ಅವರು ಪವಿತ್ರಾತ್ಮನ ಮೂಲಕವಾದ ಜ್ಞಾನದಲ್ಲಿ ಪಾಲುಗಾರರಾಗಿರುವೆವೆಂಬುದನ್ನು ತೋರಿಸಿಕೊಡುವರು. ಅದೇನಂದರೆ "ಮೇಲಣಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾದದ್ದು, ಆ ಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದು, ಕರುಣೆ ಮುಂತಾದ ಒಳ್ಳೇ ಫಲಗಳಿಂದ ತುಂಬಿರುವಂಥದು ಆಗಿದೆ:" ಇದು ಒಂದು ಜ್ಞಾನವಿವೇಕವುಳ್ಳ ಆತ್ಮವಾಗಿದ್ದು ತನ್ನ ಸ್ವಂತ ವಿಷಯಗಳೆಲ್ಲವನ್ನು ಆತನ ಕೈಗೆ ಒಪ್ಪಿಸಿಕೊಟ್ಟವರಾಗಿ ಆತನ ಪರಿಪಾಲನೆಯಲ್ಲಿ ಪೂರ್ಣವಾಗಿ ಭರವಸೆಯುಳ್ಳದ್ದಾಗಿರುವದು. ಇದು ನಿಜವಾಗಿಯೂ ಒಂದು "ಸ್ವಸ್ಥಚಿತ್ತದ ಆತ್ಮ" ಆಗಿರುವದು. ಆದುದರಿಂದ ರಾಜವಂಶದ ಆತ್ಮಿಕ ಕುಟುಂಬದವರಾದ ಪ್ರಿಯ ಸಹೋದರರೇ ನಮ್ಮ ಎಲ್ಲಾ ವ್ಯವಹಾರಗಳಲ್ಲಿ ಈ ತತ್ವವನ್ನು ಅಳವಡಿಸಿಕೊಂಡವರಾಗಿ ಹೀಗೆ ಈ ಮೂಲಕವಾಗಿ ಹೆಚ್ಚಿನ ಆಶೀರ್ವಾದಗಳನ್ನು ಸ್ವೀಕರಿಸಿಕೊಳ್ಳೋಣ.

ಆದರೆ ಅಬ್ಷಾಲೋಮನು ತಾನು ಒಬ್ಬ ದೇಶಭ್ರಷ್ಟ ರಾಜಕುಮಾರನಾಗಿದ್ದು ತನ್ನ ತಂದೆಯ ಮರಣವಾದ ಸಂದರ್ಭದಲ್ಲಿ ಆತನಿಗೆ ಇಸ್ರಾಯೇಲ್ಯರ ಅರಸನಾಗಿ ಅಂಗೀಕೃತವಾಗುವ ಅವಕಾಶಗಳು ಹೋಲಿಸಿ ನೋಡಿದ್ದಲ್ಲಿ ಅಲ್ಪವಾಗಿದ್ದವೆಂಬುದನ್ನು ಅರಿತುಕೊಂಡಿದ್ದನು. ಹೀಗಾಗಿ ಆತನು ಒಂದು ಜಾಣತನದ ಸಂಚನ್ನು ರೂಪಿಸಿದ್ದನು; ಈ ಮೂಲಕವಾಗಿ ಆತನ ವಿಷಯವು ಅತಿ ಅನುಕೂಲಕರವಾದ ಸನ್ನಿವೇಶದಲ್ಲಿ ಅತನ ತಂದೆಯ ಗಮನಕ್ಕೆ ತರಲಾಗಿದ್ದು ಕಡೆಯಲ್ಲಿ ಒಂದು ಕಾಲಾವಕಾಶವು ಅಥವಾ ಒಂದು ಕ್ಷಮಾಪಣೆ ಇಲ್ಲವೇ ತನ್ನ

ಸ್ವನಾಡಿಗೆ ಹಿಂದಿರುಗಲು ಒಂದು ಆಹ್ವಾನವನ್ನು ಕಳುಹಿಸಲಾಗಿತ್ತು. ತನ್ನ ತಂದೆಯು ತನ್ನನ್ನು ಪ್ರೀತಿಸುವವನಾದಾಗ್ಯೂ ಅಸಮ್ಮತಿ ತೋರುವದನ್ನು ಮುಂದುವರೆಸುವವನಾಗಿ ತನ್ನ ದಾರಿಹೋಕ ಮಗನು ವೈಯುಕ್ತಿಕವಾಗಿ ಭೇಟಿಮಾಡಿ ಅನ್ಯೋನ್ಯತೆಗೆ ಸೇರಿಸಿಕೊಳ್ಳುವದನ್ನು ಎರಡು ವರುಷಗಳವರೆಗೆ ನಿರಾಕರಿಸಿದ್ದನು. ಈ ಮಧ್ಯೆ ಆಕಾಂಕ್ಷಿತನಾದ ಕೊಲೆಗಾರನು ಚಾತುರ್ಯದಿಂದ ತನ್ನ ಸಂಗತಿಯನ್ನು ನಿಭಾಯಿಸಿಕೊಂಡವನಾಗಿದ್ದು, ಹೀಗಾಗಿ ಶಾಸ್ತ್ರವಚನಗಳು ಸಾರಿಹೇಳಿರುವಂತೆ ಆತನು ಇಸ್ರಾಯೇಲ್ ಜನರ ಹೃದಯವನ್ನು ಕಸಿದುಕೊಂಡಿದ್ದನು. ಆತನು ಬಹಿರಂಗವಾಗಿ ಅರಸನಾದ ತನ್ನ ತಂದೆಗೆ ವಿರುದ್ಧವಾಗಿ ಕಿಡಿಗೇಡಿತನದ ಪಿತೂರಿಯನ್ನು ನಡೆಸಿರಲಿಲ್ಲ, ಇಲ್ಲವೇ ಆತನ ವಿಷಯವಾಗಿ ತುಚ್ಛವಾಗಿ ಮಾತನಾಡಿರಲಿಲ್ಲ, ಇಲ್ಲವೇ ಯಾವ ವೈಷಮ್ಯವನ್ನು ತೋರ್ಪಡಿಸಿರಲಿಲ್ಲ; ಇಂಥಾ ಒಂದು ಲೌಕಿಕ ಜ್ಞಾನದ ಮಾರ್ಗದಲ್ಲಿ ಆತನು ಅತಿ ಗಾಢವಾಗಿ, ಆತಿಯಾದ ಸಮಯ ಪ್ರಜ್ಞೆಯುಳ್ಳವನಾಗಿ, ಅತಿ ಬುದ್ಧಿವಂತನಾಗಿದ್ದನು. ಅತಿ ವಿನಯ ಹಾಗು ನ್ಯಾಯಪರವಾಗಿ ಅತ್ಯುತ್ಸಾಹ ತೋರುವವನಂತೆ ನಟಿಸುವವನಾಗಿ ಹಾಗು ಪ್ರಭಾವಿತ ಸ್ಥಾನವುಳ್ಳವರ ಕಡೆಗೆ ಗಮನಹರಿಸುವವನಾಗಿ ತಾನು ವೈಯುಕ್ತಿಕವಾಗಿ ಕಾಣಿಸಿಕೊಳ್ಳುವಿಕೆಯ ಬಗ್ಗೆ ಎಚ್ಚರಿಕೆಯಿಂದ ನಡಕೊಳ್ಳುವದರ ಮೂಲಕವಾಗಿ ಆತನು ಜನರ ಹೃದಯವನ್ನು ಅರಸನಿಂದ ದೂರಮಾಡಿ ಅದನ್ನು ತನ್ನ ಕಡೆಗೆ ಕಸಿದುಕೊಂಡಿದ್ದನು. ಆತನು ರಾಜಕುಮಾರರ ವಾಡಿಕೆಗೆ ವಿರುದ್ಧವಾಗಿ ಬೆಳಿಗ್ಗೆ ಬೇಗನೆ ಎದ್ದು ಅರಸನ ಬಾಗಲಿನ ಕಡೆಗೆ ಹೋಗುತ್ತಿದ್ದನು. ಅಲ್ಲಿ ಆತನಿಗೆ ಕೆಲವರು ನ್ಯಾಯವಾದ ಕಾರಣದಿಂದ ಹಾಗು ಕೆಲವರು ನಿಸ್ಸಂದೇಹವಾಗಿ ಅನ್ಯಾಯದ ಕಾರಣದಿಂದ ತಮಗೆ ಅನುಕೂಲವಾದ ರೀತಿಯಲ್ಲಿ ಒಪ್ಪಂದಗಳು, ತೀರ್ಮಾನಗಳು ಮುಂತಾದವುಗಳನ್ನು ಪಡಕೊಳ್ಳುವ ನಿರೀಕ್ಷೆಯಲ್ಲಿ ಅರಸನಿಗಾಗಿ ಕಾಯುತ್ತಿದ್ದುದನ್ನು ನೋಡಲು ಸಾಧ್ಯವಿರುತ್ತಿತ್ತು. ಸ್ಫುರದ್ರೂಪಿಯಾಗಿ ಮನೋಹರವಾದ ಉಡುಪಿನಲ್ಲಿದ್ದ ರಾಜಕುಮಾರನಿಗೆ ಪೌರಾತ್ಯದ ಪದ್ಧತಿಯ ಪ್ರಕಾರ ಇವರು ನೆಲದ ಮಟ್ಟಿಗೆ ತಲೆಬಾಗಿ ವಂದಿಸಲು, ಆಗ ಆತನು ಅವರನ್ನು ಕೈಹಿಡಿದು ಎತ್ತಿ ಅವರಿಗೆ ಮುದ್ದಿಟ್ಟು ವಿನಮ್ರತೆ ಹಾಗು ಪ್ರೀತಿಯುಳ್ಳವನಂತೆ ನಟಿಸಿ ಅವರು ತನಗೆ ಹೀಗೆ ಮಾಡಬಾರದು; ಅಲ್ಲದೆ ತನ್ನ ಜನರಿಗೆ ಸೇವಮಾಡುವದು ಅರಸನಿಗೆ ಸಂಬಂಧಿಸಿದ ವಿಷಯವಾಗಿದ್ದು, ಅವರೆಲ್ಲರ ಪರವಾಗಿ ಮತ್ತು ಅವರು ಹೇಳಿಕೊಳ್ಳುವದನ್ನು ಕೇಳುವದಕ್ಕಿಂತಲೂ ಹೆಚ್ಚಾದ ಕಾರ್ಯಮಾಡುವಂಥದು ರಾಜಕುಮಾರನ ಅಧಿಕಾರದಲ್ಲಿರು–ವದಿಲ್ಲವೆಂಬುದಕ್ಕೆ ಕೇವಲ ವಿಷಾಧಿಸುವವನಾಗಿ, ಅದಕ್ಕೆ ಬಹುವಾಗಿ ವಿಷಾಧಿಸುತ್ತಿದ್ದನು.

ಹೀಗೆ ಕಪಟಿಯೂ ಮುಖಸ್ತುತಿ ಮಾಡುವವನೂ ಆಗಿದ್ದ ಅಬ್ಷಾಲೋಮನು ಎರಡು ವರುಷಗಳ ವರೆಗೆ ತನ್ನ ತಂದೆಯಾದ ದಾವೀದನಿಗೆ ದೇವರ ಅಭಿಷಕ್ತನಾಗಿ ಸಲ್ಲಬೇಕಿದ್ದ ಜನಾಂಗದವರ ಪ್ರೀತಿ ಹಾಗು ನಿಷ್ಠೆಯನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಶ್ರಮಿಸುತ್ತಿದ್ದನು. (ಅಲ್ಲದೆ ಹೀಗೆ ಮಾಡುವದರಲ್ಲಿ ಆತನು ಗಣನೀಯವಾಗಿ ಯಶಸ್ಸನ್ನು ಪಡೆದಿದ್ದನು). ಆ ಯುವಕನು ತನ್ನ ಸ್ವಂತ ತಿಳುವಳಿಕೆಯ ಮೇಲೆ ಆತುಕೊಂಡವನಾಗಿದ್ದಲ್ಲದೆ ದೇವರಾದ ಯೆಹೋವನು ಆ ದೇಶದ ಆಳ್ವಿಕೆಯನ್ನು ಮಾಡುತ್ತಿರುವನೆಂಬುದನ್ನು ಮತ್ತು ಆತನೊಬ್ಬನೇ ಸಿಂಹಾಸನದ ಮೇಲೆ ತನ್ನ ಪ್ರತಿನಿಧಿಯಾಗಿ ಯಾರು ಇರಬೇಕೆಂಬುದನ್ನು ಮತ್ತು ಯಾರು ಇರಬಾರದೆಂಬುದನ್ನು ಹೆಸರಿಸಿ ನೇಮಕಮಾಡಲು ಅಧಿಕಾರವುಳ್ಳವನಾಗಿರುವನು ಎಂಬುದನ್ನು ಆತನು ಎಂದಾದರೂ ತಿಳಿದಿದ್ದಲ್ಲಿ ಅದನ್ನು ಮರೆತಿರುವದು ಸ್ಪಷ್ಟವಾಗಿತ್ತು.

ಅಬ್ಷಾಲೋಮನ ಬಹಿರಂಗ ಬಂಡಾಯ

ನಮ್ಮ ಪಠ್ಯಭಾಗವು ಹೇಳುವದು – "ನಾಲ್ವತ್ತು ವರುಷಗಳ ನಂತರ" ಆದರೆ ಪರಿಣಿತರು ಇದನ್ನು ನಕಲುಗಾರನಿಂದಾದ ಪ್ರಮಾದವೆಂದು ಒಪ್ಪಿಕೊಂಡಿದ್ದು, ಇದನ್ನು "ನಾಲ್ಕು ವರುಷಗಳು" ಎಂದು ಓದಿಕೊಳ್ಳಬೇಕೆಂದು ಹೇಳಿರುವರು. ಕೆಲವು ಅಧಿಕೃತ ಪುರಾತನ ಪ್ರತಿಗಳಲ್ಲಿ ಇದನ್ನು "ನಾಲ್ಕು ವರುಷಗಳು" ಎಂದು ಓದಲಾಗಿರುವದು; ಜೋಸೆಫಸ್ಸನು ಇದನ್ನು ಹೀಗೆಯೇ ಹೇಳಿರುವನು. ಆತನ ಅಣುಕು ದೀನತೆ, ಆತನ ಸೊಬಗಿನ ನೋಟ, ನಯವಿನಯದ ನಡವಳಿಕೆ, ಜನರ ಹಾಗು ನ್ಯಾಯದ ಕಡೆಗಿರುವ ತೋರಿಕೆಯ ಪ್ರೀತಿ ಇವುಗಳು ಒಟ್ಟಾಗಿ ಜನರಲ್ಲಿ ಫಲಕಾರಿಯಾಗಿ ಕಾರ್ಯವೆಸಗಿರುವದೆಂಬುದನ್ನು ಖಚಿತಪಡಿಸಿ ಕೊಂಡವನಾಗಿ ಅಬ್ಷಾಲೋಮನು ತನ್ನ ಮುಂದಿನ ಹೆಜ್ಜೆಗೆ ಅಂದರೆ ದೇವಾನುಗ್ರಹದ ಮೂಲಕವಾಗಿ ನೇಮಿತನಾದ ಆ ಜನಾಂಗದ ಅರಸನಾದ ತನ್ನ ತಂದೆಗೆ ವಿರುದ್ಧವಾಗಿ ಬಹಿರಂಗವಾಗಿ ಬಂಡಾಯವೇಳಲು ಸಿದ್ಧವಾಗಿದ್ದನು. ಖಂಡಿತವಾಗಿಯೂ ತನ್ನ ಪರಿಸ್ಥಿತಿಯು ಪ್ರತಿಕೂಲವಾಗಿದ್ದು ದೈವಾಧಿಕಾರವು ತನಗೆ ವಿರುದ್ಧವಾಗಿರುವದೆಂಬುದನ್ನು ಆತನು ಗ್ರಹಿಸಿಕೊಂಡಿರಲಿಲ್ಲ. ತನ್ನ ಕಪಟಾಚಾರವನ್ನು ಮುಂದುವರೆಸು ವವನಾಗಿ ತಾನು ನೆರೆಯ ಪಟ್ಟಣವಾದ ಹೆಬ್ರೋನಿಗೆ ಭೇಟಿ ನೀಡಲು ಅನುಗ್ರಹಮಾಡಬೇಕೆಂದು ತನ್ನ ತಂದೆಯನ್ನು ವಿನಂತಿಸಿಕೊಂಡಿದ್ದನು. ಹೆಬ್ರೋನ್ ಪಟ್ಟಣವು ಯೆರುಸಲೇಮನ್ನು ವಶಮಾಡಿಕೊಳ್ಳುವದಕ್ಕೆ ಮೊದಲು ಇಸ್ರಾಯೇಲಿನ ರಾಜಧಾನಿಯಾಗಿತ್ತು.

ತಾನು ಒಂದು ಹರಕೆಯನ್ನು ತೀರಿಸುವದಕ್ಕಾಗಿ ಯಜ್ಞಮಾಡ ಬಯಸುವೆನೆಂದು ಹೇಳಿದ್ದನು. ಆತನು ಬಹು ದೀನನಂತೆ ಹಾಗು ಬಹು ಧಾರ್ಮಿಕನಂತೆ ನಟಿಸುವವ–ನಾಗಿರುವಲ್ಲಿ, ಆತನ ಹೃದಯವು ನಿಶ್ಚಯವಾಗಿಯೂ ದೇವರಿಂದ ಬಹು ದೂರ ಸರಿದಿತ್ತು. "ಮುಳ್ಳುಗಿಡಗಳಲ್ಲಿ ದ್ರಾಕ್ಷೇಹಣ್ಣುಗಳನ್ನು ಮದ್ದುಗುಣಿಕೇಗಿಡಗಳಲ್ಲಿ ಅಂಜೂರವನ್ನು ಕೊಯ್ಯುವದುಂಟೇ?" [ಮತ್ತಾಯ 7:16] ಅರಸನು ಯಾವ ಅನುಚಿತವು ಸಂಭವಿಸುವದರ ಬಗ್ಗೆ ಆಲೋಚಿಸದೆ ಆ ಬೇಡಿಕೆಯನ್ನು ಮಂಜೂರು ಮಾಡಿದ್ದನು. ಇದು ಆತನೊಡನೆ ಕೆಲವು ಸಂಖ್ಯೆಯಲ್ಲಿನ ಜೊತೆಗಾರರನ್ನು ಮತ್ತು ಯೆರೂಸಲೇಮಿನ ಮುಖ್ಯಸ್ಥರನ್ನು ಕರೆದುಕೊಂಡು ಹೋಗುವ ಸವಲತ್ತನ್ನು ಒಳಗೊಂಡಿತ್ತು. ಈ ಯೌವನಸ್ಥನು ಪಡೆದಂಥದ್ದು ಅದೆಂಥಾ ಪ್ರಾಪಂಚಿಕ ಜ್ಞಾನ! ಅಲ್ಲದೆ ಅದೆಷ್ಟು ಅವಹೇಳನಕಾರಿಯಾಗಿ ಈತನ ಅಣಕು ದೀನತೆಯು ಈತನಿಗೆ ಅಪಖ್ಯಾತಿಯನ್ನು

ಉಂಟುಮಾಡಿತ್ತು! ಅಲ್ಲದೆ ಆತನ ತಂದೆಯ ಕಡೆಗಿರುವ ಆತನ ಕೃತಜ್ಞತಾಹೀನತೆ, ಮೂಲತತ್ವದ ಹಾಗು ನೀತಿಯ ಪ್ರತಿಯೊಂದು ಅಂಶದಲ್ಲಿ ಆತನಿಗಿರುವ ನ್ಯೂನ್ಯತೆ ಅದೆಷ್ಟು ಸುಸ್ಪಷ್ಟ! ನಮಗೆ, ಪ್ರಿಯ ಮಿತ್ರರೆ, ಯಾವುದೇ ಇಂಥ ಒಂದು ಚಿತ್ರಣವು ನಮ್ಮಲ್ಲಿ ಯಾವ ಹಂತದಲ್ಲಾಗಲೀ ಅಥವಾ ಯಾವುದೇ ಪ್ರಮಾಣದಲ್ಲಿ ಸ್ಪಷ್ಟವಾಗಿ ಸಮೀಪಿಸುತ್ತಿರುವದನ್ನು, ಅಥವಾ ನಮ್ಮ ಮಾರ್ಗದಲ್ಲಿ ಯಾವುದೇ ಒಂದು ಸಂಗತಿಯು ಯಾವುದೇ ಹಂತದಲ್ಲಿ ಇದಕ್ಕೆ ಸರಿಬೀಳುತ್ತಿರುವದನ್ನು ಕಾಣುವಲ್ಲಿ, ಇದು ನಮ್ಮನ್ನು ಭೀತರನ್ನಾಗಿ ಮಾಡಿ, ಗದರಿಸಿ, ಹೊತ್ತಿರುವ ಅಗ್ನಿಯನ್ನು ನಂದಿಸುವವರನ್ನಾಗಿ ಮಾಡಬೇಕು.

ಈ ಒಳಸಂಚಿನಲ್ಲಿ ದಾವೀದನ ಅತ್ಯಮೂಲ್ಯ ಆಪ್ತಸಲಹೆಗಾರನಾದ ಅಹಿತೊಫೇಲನು ಸೆಳೆಯಲ್ಪಟ್ಟಿದ್ದು, ಈ ಸಂದರ್ಭದಲ್ಲಿ ರಾಜಕುಮಾರನ ಸ್ನೇಹಿತರಲ್ಲಿ ಒಬ್ಬನಾಗಿ ಈತನ ಉಪಸ್ಥಿತಿಯು ರಾಜಕುಮಾರನ ಸ್ಥಾನಕ್ಕೆ ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಇದು ಒಂದು ಬಲವಾದ ಗೋಪುರವೆಂಬ ಅರ್ಥಬಂದಿತ್ತು. ಅನೇಕ ಜನರು ವರ್ಷಗಳ ಕಾಲ ಮೋಸಹೋಗಿದ್ದು, ಈ ಒಳಸಂಚಿನಲ್ಲಿ ಸೆಳೆಯಲ್ಪಟ್ಟಿದ್ದರು. ಜೊತೆಗೆ ಅಬ್ಷಾಲೋಮನು ಜಾಗರೂಕತೆಯಿಂದ ಹಲವಾರು ಕುಲಗಳಲ್ಲಿ ಹಾಗು ದೇಶದ ಹಲವಾರು ಭಾಗಗಳಲ್ಲಿ ಜನರನ್ನು ನೇಮಿಸಿದ್ದು, ಇವರು ಆತನ ಯೋಜನೆಯ ಪ್ರಕಾರ ನಿಯೋಜಿಸಲಾಗಿರಲು, ಇವನಲ್ಲಿ ಪೂರ್ಣ ಸಹಾನುಭೂತಿಯುಳ್ಳವರಾಗಿದ್ದರು. ಇವರು ಮಾಡಬೇಕಿದ್ದ ಒಂದು ಕಾರ್ಯವೆಂದರೆ ಅದು ಜನರು ಓಡಿಬಂದು ರಾಜಕುಮಾರನ ಪರವಾಗಿ ಸೇರಿಕೊಂಡು ಅರಸನಿಗೆ ವಿರೋಧ'ವಾಗಿ ಕೆಟ್ಟಸಂಗತಿಗಳನ್ನು ಪರೋಕ್ಷವಾಗಿ ಪ್ರಚಾರಮಾಡಲು ಸಹಾಯಮಾಡಿ, ಅಬ್ಷಾಲೋಮನು ಅರಸನ ಸ್ಥಾನವನ್ನು ತೆಗೆದುಕೊಂಡಲ್ಲಿ ಅದ್ಭುತವಾದ ಸಂಗತಿಗಳು ಉಂಟಾಗುವದನ್ನು ನಿರೀಕ್ಷಿಸಬಹುದೆಂಬುದನ್ನು ವ್ಯಕ್ತಪಡಿಸುವಂತೆ ಮಾಡುವದೇ. ಇಸ್ರಾಯೇಲ್ ಕುಲಗಳವರಿಗೆ ಇವರು ಒಬ್ಬ ಅತಿ ಯೋಗ್ಯನಾದ ಅರಸುತನವನ್ನು ಅಬ್ಷಾಲೋಮನಲ್ಲಿ ಪಡೆದುದಕ್ಕಾಗಿ ಅವರನ್ನು ಅಭಿನಂದಿಸುವವರಾಗಿ ಮತ್ತು ಜನರು ತುತ್ತೂರಿಯ ಶಬ್ಧವನ್ನು ಕೇಳಿದೊಡನೆ ಅದು ಅಬ್ಷಾಲೋಮನು ಅರಸುತನವನ್ನು ಅಭಿಲಾಷಿಸುವದಿಲ್ಲ, ಆದರೆ ಅದು ಆತನು ಆಗಲೇ ಅರಸನಾಗಿದ್ದನೆಂಬ ಅರ್ಥಕೊಡುವದೆಂಬುದನ್ನು ವಿವರಿಸಿ ಹೇಳಬೇಕಾಗಿತ್ತು.

ಅಯ್ಯೋ, ಇತಿಹಾಸವು ಅಬ್ಷಾಲೋಮನಂಥ ಅನೇಕ ನಂಬಿಕೆದ್ರೋಹದ ಗುಣವುಳ್ಳವರನ್ನು ತೋರಿಸಿಕೊಡುತ್ತದೆ! ಅಲ್ಲದೆ ಅಯ್ಯೋ, ಪ್ರೀಯ ಮಿತ್ರರೇ, ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರಲು, ಮತ್ತು, ಅಯ್ಯೋ, ಪ್ರಿಯ ಮಿತ್ರರೇ, ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗಿರುವ ನಾವು ಈಗಲೂ ನಮ್ಮ ಶರೀರದಲ್ಲಿರುವ ಕೀಳಾದ, ವಿನಾಶಕಾರಿ ಪ್ರವೃತ್ತಿಗಳ ವಿರುದ್ಧವಾಗಿ ಹೋರಾಡ ಬೇಕಿರುವದು. "ನಾವು ಹೋರಾಡುವದು ಮನುಷ್ಯಮಾತ್ರದವರ ಸಂಗಡವಲ್ಲ" ಆದರೆ ಜೊತೆಗೆ "ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡು–ವವರಾಗಿದ್ದೇವೆ" [ಎಫೆಸ 6:12] ಎಂಬುದನ್ನು ಸಹ ನಾವು ನೆನಪಿನಲ್ಲಿಟ್ಟು ಕೊಳ್ಳೋಣ. ಬದಲಾಗಿ "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು." ಎಂಬ ಅಪೋಸ್ತಲನ ಮಾತನ್ನು ನೆನಪಿನಲ್ಲಿಟ್ಟು ಕೊಳ್ಳೋಣ.–1 ಪೇತ್ರ 5:6

"ನನ್ನ ಜೀವವೇ ಎಚ್ಚರಗೊಂಡಿರು,
ಹತ್ತು ಸಾವಿರ ವೈರಿಗಳು ಏಳುವರು;
ನುಸುಳಿಕೊಂಡಿರುವ ಪಾಪಗಳು ಒತ್ತುತ್ತಿರುವವು ಬಲವಾಗಿ,
ಬಹುಮಾನ ಪಡೆಯುವದರಿಂದ ಹೊರಗೆಳೆಯಲು."

"ಓ ಎಚ್ಚರವಾಗು ಹೋರಾಡು ಪ್ರಾರ್ಥಿಸು,
ಯುದ್ಧವು ಎಂದೂ ನಿಲ್ಲಲಾಗದು;
ಪುನಶ್ಚೇತನಗೊಳಿಸು ಹೊರಾಟವ ದಿನದಿನವೂ
ದೈವ ಸಹಾಯಕ್ಕೆ ಮೊರೆಯಿಡು."

ಇಕ್ಕಟ್ಟಾದ ಮಾರ್ಗವನ್ನು ಪ್ರವೇಶಿಸಲಿರುವರು, ಅಥವಾ ಪ್ರವೇಶಿಸಿರುವಂಥವರು, ಜೊತೆಗೆ ಈಗಾಗಲೇ ಕೆಲವು ಸಮಯಗಳಿಂದ ಅದರಲ್ಲಿ ಇರುವರು ಇವರೆಲ್ಲರಿಗೆ ಇರುವ ಒಂದು ಸಲಹೆಯೆಂದರೆ "ನೀನು ನಡೆಯುವ ದಾರಿಯನ್ನು ಸಮಮಾಡು, [ಜ್ಞಾನೋಕ್ತಿ 4:26] ಹೀಗೆ ಮಾಡಿದರೆ ಕುಂಟಕಾಲು ಉಳುಕಿಹೋಗದೆ ವಾಸಿಯಾಗುವದು." [ಇಬ್ರೀಯ 12:13] ನಾವೆಲ್ಲರೂ ಶಾರೀರಿಕವಾಗಿ ಕುಂಟರಾಗಿದ್ದೇವೆ; ಕುಂಟುವಿಕೆ ಕೆಲವರಲ್ಲಿ ಹೆಚ್ಚು, ಕೆಲವರಲ್ಲಿ ಕಡಿಮೆ, ಆದರೆ ಹೆಮ್ಮೆ ಮತ್ತು ಮಹತ್ವಾಕಾಂಕ್ಷೆಗಳು ಮನುಕುಲ ಹಾಗು ನಂಬಿಕೆಗೆ ಇರುವ ದೊಡ್ಡ ಶತ್ರುಗಳೆಂಬುದನ್ನು ಕಂಡವರಾಗಿರಲು, ಎಲ್ಲರಿಗೂ ಪರಲೋಕದ ಮಾರ್ಗವನ್ನು ಅನುಸರಿಸುವವರಾಗಿ ಎಚ್ಚರಿಕೆಯಿಂದ ನಡೆಯುವಂಥ ಅವಶ್ಯಕತೆಯಿರುವದು. ನಮಗೆ ಇಲ್ಲಿ "ಯಾತ್ರಿಕನ ಮುನ್ನಡೆ" [Piligrim Progress] ಎಂಬ ಕಥೆಯ ಒಂದು ಪಾತ್ರಧಾರಿಯ ಬಗ್ಗೆ ನೆನಪಿಸಲಾಗಿರುವದು; ಕ್ರಿಸ್ತಯ್ಯನವರು ಹಾಗು ನಿರೀಕ್ಷಣ್ಯನವರು ನಿರಾಶೆಯ ದೈತ್ಯನೆಂಬ ನೆಲಮಾಳಿಗೆಯ ಸೆರೆಮನೆಯಿಂದ ತಪ್ಪಿಸಿಕೊಂಡವರಾಗಿ ಪರಲೋಕನಗರಿಗೆ ಸಾಗುವ ರಾಜಮಾರ್ಗಕ್ಕೆ ಹಿಂದಿರುಗಿದವರಾಗಿ ಹುಲ್ಲುಗಾವಲಿನ ಪ್ರವೇಶದ ಉಪಮಾರ್ಗದ ಹತ್ತಿರದಲ್ಲಿ ತಮ್ಮನ್ನು ದಾರಿತಪ್ಪಿಸಿದಂಥರ ಬಗ್ಗೆ ಒಂದು ಸ್ಮಾರಕಸ್ತಂಭವನ್ನು ನಿಲ್ಲಿಸಿ ಅದರಲ್ಲಿ ಮುಂದಿನ ಮಾತನ್ನು ಬರೆದಿಟ್ಟಿರುವರು: "ದಾಟುವ ಈ ಮರದ ಮೆಟ್ಟಿಲುಗಳ ನಂತರ ನಿರಾಶೆಯೆಂಬ ದೈತ್ಯನು ಕಾಪಾಡುತ್ತಿರುವ ಸಂಶಯವೆಂಬ ಕೋಟೆಯಿರುವದು. ಇವನು ಪರಲೋಕ ರಾಜ್ಯದ ಅರಸನನ್ನು ತಿರಸ್ಕಾರಮಾಡಿ ಆತನ ಪರಿಶುದ್ಧ ಯಾತ್ರಿಕರನ್ನು ನಾಶಮಾಡಲು ಯತ್ನಿಸುತ್ತಿರುವನು."

ಸೈತಾನನು ಆ ಮಹಾ ದೈತ್ಯನಾಗಿದ್ದು ಈ ಹಲವಾರು ಶತಮಾನಗಳ ಪರ್ಯಂತರ ನಮ್ಮನ್ನು ಇಕ್ಕಟ್ಟಾದ ಮಾರ್ಗದಿಂದ ಹೊರಗೆ ಎಳೆಯಲು, ದೇವರಲ್ಲಿನ ಪೂರ್ಣ ವಿಶ್ವಾಸದಿಂದ ಹೊರಬರಲು ಹಾಗು ದೇವರ ಶಕ್ತಿಯನ್ನು, ಆತನ ಜ್ಞಾನವನ್ನು ಮತ್ತು ಆತನ ಸತ್ಯವನ್ನು ಆತುಕೊಳ್ಳುವದರಿಂದ ಹೊರಹೋಗಲು

ಯತ್ನಿಸುತ್ತಿರುವನು. ಇವುಗಳ ಮೂಲಕವಾಗಿ ಮಾತ್ರವೇ ನಾವು ಎಂದಾದರೂ ಆ ರಾಜ್ಯಕ್ಕೆ ಬಾಧ್ಯರಾಗಲು ಸಾಧ್ಯ.

ನಮ್ಮ ಸುವರ್ಣಮಯ ಪಥ್ಯಭಾಗ

ಭೂಸಂಬಧವಾದ ತಂದೆತಾಯಿಗಳನ್ನು ಸನ್ಮಾನಿಸುವದರ ಯುಕ್ತತೆಯನ್ನು ಅಲ್ಲದೆ ಇದಕ್ಕೆ ವಿಧೇಯರಾಗಿರುವವರಿಗೆ ದೇವರ ಆಶೀರ್ವಾದವು ವಾಗ್ದಾನಮಾಡಲ್ಪಟ್ಟಿರುದರ ಬಗ್ಗೆ ಪ್ರಸಂಶಿಸು–ವವರಾಗಿ ಇವುಗಳನ್ನು ಪೂರ್ಣವಾಗಿ ಶಿಫಾರಸ್ಸು ಮಾಡುವವರಾಗಿದ್ದು ನಾವು ಮನಸ್ಸಿನಲ್ಲಿಟ್ಟುಕೊಂಡಿರು–ವದೇನಂದರೆ ಸೃಷ್ಟಿಕರ್ತನಾಗಿರುವ ಆ ನಿತ್ಯನಾದ ಮಹಾ ಅರಸನು ನಮ್ಮನ್ನು ತನ್ನ ಕುಟುಂಬಕ್ಕೆ ದತ್ತುತೆಗೆದುಕೊಂಡು ನಮಗೆ ಮಕ್ಕಳಭಾವವನ್ನು ಅನುಗ್ರಹಿಸಿದ್ದು ನಾವು ಆಮೂಲಕವಾಗಿ "ಅಪ್ಪಾ, ತಂದೆಯೇ" ಎಂದು ಕೂಗುವವರಾಗಿರುವರೆಂದೇ. ಆತನು ನಮಗೆ ಅತ್ಯಮೂಲ್ಯವೂ ಉತ್ಕೃಷ್ಟವೂ ಆಗಿರುವ ವಾಗ್ದಾನಗಳನ್ನು ಅನುಗ್ರಹಿಸಿರುವನು; ನಾವು ಈ ಮೂಲಕವಾಗಿ ದಿವ್ಯಸ್ವಭಾವದಲ್ಲಿ ಪಾಲನ್ನು ಹೊಂದುವಂತಾಗಿ ನಮ್ಮ ಪರಲೋಕದ ಸಹೋದರನಾದ ಯೇಸುವಿನೊಡನೆ ಆತನ ಮೆಸ್ಸಿಂಯನ ರಾಜ್ಯದಲ್ಲಿ ಪಾಲುಹೊಂದುವಂತೆ ಮಾಡಲಾಗಿರುವದು. ನಾವು ಅದೆಷ್ಟು ಗೌರವವನ್ನು ಆತನಿಗೆ ಸಲ್ಲಿಸಬೇಕು! ಪರಲೋಕದಲ್ಲಿರುವ ನಮ್ಮ ತಂದೆಯನ್ನು ಮಹಿಮೆಪಡಿಸಲು ನಮ್ಮ ಜೀವನದಲ್ಲಿ ಅದೆಷ್ಟು ಮುಖ್ಯವಾಗಿ ಪರಿಶ್ರಮಿಸುವವರಾಗಿರಬೇಕು. "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ!" ಎಂಬ ಆತನ ಈ ಮಾತಿಗೆ ನಾವು ಎಷ್ಟು ಕಿವಿಗೊಡುವವರಾಗಿ ಇದನ್ನು ನಮ್ಮ ಎದುರಿನಲ್ಲಿಟ್ಟು ಕೊಂಡಿರಬೇಕು. ಉತ್ಸಾಹವುಳ್ಳ ಶುದ್ಧ ಹೃದಯದಿಂದ ಹುಟ್ಟಿದ ಪ್ರೀತಿಯೇ ದೇವವಾಕ್ಯೋಪದೇಶದ [ಧರ್ಮಶಾಸ್ತ್ರದ] ಗುರಿಯಾಗಿದೆ ಎಂಬುದನ್ನು ನಾವು ಅದೆಷ್ಟಾಗಿ ಮನವರಿಕೆ ಮಾಡಿಕೊಂಡಿರಬೇಕು. ದೇವರ ಆಜ್ಞೆಗಳನ್ನು ಅನುಸರಿಸಿ ನಡೆಯುವದರಿಂದಲೇ ದೇವರನ್ನು ಪ್ರೀತಿಸುತ್ತೇ–ವೆಂಬುದನ್ನು ತಿಳುಕೊಳ್ಳುತ್ತೇವೆ. ಅಲ್ಲದೆ ಆತನ ಚಿತ್ತವನ್ನು ಅನುಸರಿಸಿ ನಡೆಯುವದದರಲ್ಲಿ ನಾವು ಸಂತೋಷವುಳ್ಳವರಾದಲ್ಲಿ ಆತನ ಆಜ್ಞೆಗಳು ಭಾರವಾದವುಗಳಲ್ಲವೆಂಬುದನ್ನು ಅದೆಷ್ಟಾಗಿ ಮನಗೊಂಡವರಾಗಿರಬೇಕು. ಈ ಗುಣನಡತೆಯುಳ್ಳವರು (ದೇವರ) ಮಕ್ಕಳಾಗಿದ್ದು ವಿಮೋಚಕನ ಸ್ವರೂಪದವರಾಗಿ ದೇವರಿಗೆ ಬಾಧ್ಯರೂ ನಮ್ಮ ಕರ್ತನಾದ ಕ್ರಿಸ್ತ ಯೇಸುವಿನೊಡನೆ ಆತನ ರಾಜ್ಯದಲ್ಲಿ ಸಹಬಾಧ್ಯರೂ ಆಗುವರು. "ಭಲಾ" [ಚೆನ್ನಾಗಿ ಮಾಡಿರುವೆ] ಎಂಬ ಆಶೀರ್ವಾದವು ಕೇವಲ ಇಂಥಾ ಗುಣಲಕ್ಷಣಗಳನ್ನು ಅಭಿವೃದ್ಧಿಪಡಿಸಿಕೊಂಡವರಿಗೇ ನೀಡಲಾಗುವದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವದರಲ್ಲಿ ತಪ್ಪುಮಾಡದೇ ಇರುವವರಾಗೋಣ.

*****

ಕೃತಜ್ಞತಾಹೀನನೂ ದಂಗೆಕೋರನೂ ಆದ ಅಬ್ಷಾಲೋಮನು

ರೀಪ್ರಿಂಟ್ಸ್ ಪುಟ 5700

2 ಸಮುವೇಲ 15 ಮತ್ತು 18ನೇ ಅಧ್ಯಾಯಗಳು

"ಮಕ್ಕಳೇ ನೀವು ಕರ್ತನಲ್ಲಿರುವವರಿಗೆ ತಕ್ಕ ಹಾಗೆ ತಂದೆತಾಯಿಗಳ ಮಾತನ್ನು ಕೇಳಬೇಕು; ಇದು ಧರ್ಮ." ಎಫೆಸ್ಸ 6:1

"ಕೃತಜ್ಞತಾಹೀನ ಮಗುವನ್ನು ಪಡೆಯುವಂಥದ್ದು ಹಾವಿನ ಹಲ್ಲಿಗಿಂತಲೂ ಅದೆಷ್ಟು ಹರಿತವಾಗಿರುವದು"

ನಮ್ಮ ಇಂದಿನ ಅಧ್ಯಯನವು ಅಬ್ಷಾಲೋಮನ ಮರಣದ ಬಗ್ಗೆ ವಿಚಾರ ಮಾಡುವಂಥದ್ದಾಗಿರುವದು. ಇದು ವ್ಯಾಖ್ಯಾನ–ವಿಲ್ಲದೆಯೇ ಸಾಕಷ್ಟು ಸ್ಪಷ್ಟವಾಗಿರುವದು. ಈ ಯವನಸ್ಥ ರಾಜಕುಮಾರನ ಜೀವಿತದ ಬಗ್ಗೆ ಹಿಂದಿರುಗಿ ನೋಡುವವರಾಗಿ ಅವನ ಕೆಲವು ವೈಫಲ್ಯಗಳ ಬಗ್ಗೆ ಗಮನಿಸುವಂಥದ್ದು ಹೇಗೂ ನಮಗೆ ಬೆಲೆಯುಳ್ಳದ್ದಾಗಿರುವದು. ಮೊದಲನೆಯದಾಗಿ ಈತನು ಉತ್ತಮ ವಂಶವದವನಾಗಿರಲಿಲ್ಲ. ದಾವೀದನ ಹೆಂಡತಿಯಾದ ಆತನ ತಾಯಿಯು ಸಮೀಪದಲ್ಲಿನ ಅನ್ಯಜನಾಂಗದ ರಾಜನ ಮಗಳಾಗಿದ್ದಳು. ಆತನ ತಾಯಿಯು ಸೌಂದರ್ಯವತಿ ಆಗಿರಬಹುದು, ಬಹುಶಃ ಆಗಿದ್ದಳು; ಯಾಕಂದರೆ ಅಬ್ಷಾಲೋಮನು ಒಬ್ಬ ಸುಂದರವಾದ ಹುಡುಗನಾಗಿದ್ದನೆಂದು, ಉತ್ತಮ ಸೌಜನ್ಯಶೀಲನಾದ ನಯವಿನಯದ ನಡತೆಯುಳ್ಳವಾಗಿ ಪ್ರಸಿದ್ಧ ಆರಾಧ್ಯ ವ್ಯಕ್ತಿಯಾಗಿದ್ದ ಒಬ್ಬ ಸುಂದರನಾದ ಯುವಕನೆಂದು ಶಾಸ್ತ್ರವಚನಗಳು ತಿಳಿಸುತ್ತವೆ. ಆತನಿಗಿದ್ದ ಅನಾನುಕೂಲತೆಯೆಂದರೆ ಆತನು ಒಬ್ಬ ರಾಜವಂಶಸ್ಥನಾಗಿದ್ದು, ಬೆವರಿಟ್ಟು ದುಡಿಯುವ ಅವಶ್ಯಕತೆಯು ಆತನಿಗಿರಲಿಲ್ಲವೆಂಬದೇ.

ಅಬ್ಷಾಲೋಮನು ತನ್ನ ತಂಗಿಯ ಮಾನಹಾನಿಗಾಗಿ ಮುಯ್ಯಿಗೆಮುಯ್ಯಿ ಮಾಡುವ ಸಲುವಾಗಿ ತನ್ನ ತಂದೆಯಿಂದ ಹುಟ್ಟಿದ ಸಹೋದರನಾದ ಅಮ್ನೋನನನ್ನು ಹತ್ಯೆಮಾಡಿದ್ದ ಸಂಗತಿಯಿಂದ ಮೊದಲು ಅವನನ್ನು ಮುಖ್ಯವಾಗಿ ನಮ್ಮ ಗಮನಕ್ಕೆ ತರಲಾಗಿರುವದು. ಇದಕ್ಕಾಗಿ ಆತನು ತನ್ನ ತಾತನಿಂದ ರಕ್ಷಣೆ ಪಡೆಯಲು ಓಡಿಹೋಗಿದ್ದನು. ಹೀಗೆ ಆತನು ತನ್ನ ತಂದೆಯ ಜೊತೆಗಿನ ಯಾವುದೇ ಒಳ್ಳೆಯ ಪ್ರಭಾವದಿಂದ ಮತ್ತು ನಿಜವಾದ ಧರ್ಮದಿಂದ ಇನ್ನೂ ದೂರಮಾಡಲ್ಪಟ್ಟಿದ್ದನು. ಅನೇಕ ವರುಷಗಳ ಅನುಪಸ್ಥಿತಿಯನಂತರ ಆತನನ್ನು ಪ್ರೀತಿಸುವದನ್ನು ಹಾಗು ಆತನಿಗಾಗಿ ದುಃಖಿಸುವದನ್ನು ಎಂದೂ ನಿಲ್ಲಿಸದ ಆತನ ತಂದೆಯನ್ನು ಅಬ್ಷಾಲೋಲಮನು ಮತ್ತೆ ಯೆರುಸಲೇಮಿಗೆ ಹಿಂದಿರುಗುವಂತೆ ಆಹ್ವಾನಿಸಲು ಮನವೋಲಿಸಲಾಗಿತ್ತು. ಎರಡು ವರುಷಗಳಿಗೂ ಹೆಚ್ಚಿನ ಸಮಯದ ವರೆಗೆ ಆತನು ತನ್ನ ಮಗನನ್ನು ತನ್ನ ಸಮಕ್ಷಮಕ್ಕೆ ಸ್ವೀಕರಿಸಿಕೊಳ್ಳಲು ನಿರಾಕರಿಸಿದ್ದನು. ಈ ಎಲ್ಲಾ ಪ್ರಭಾವಗಳು ಯೌವನಸ್ಥನಿಗೆ ಅನಾನುಕೂಲಕರ ವಾಗಿದ್ದವು. ಅಂದರೆ ಇವುಗಳಲ್ಲಿ ಯಾವದನ್ನೂ ಇಸ್ರಾಯೇಲಿನ

ಅರಸನಾದ ತನ್ನ ತಂದೆಗೆ ತಾನು ಮಾಡಿದ ವಿಶ್ವಾಸದ್ರೋಹವನ್ನು ಮನ್ನಿಸಲು ಸಾಧ್ಯವಾಗಿರಲಿಲ್ಲ.

ಅಬ್ಷಾಲೋಮನ ಒಳಸಂಚು

ಇಸ್ರಾಯೇಲಿನ ದೇಶಾದ್ಯಂತ ಸಾಧಾರಣವಾದ ವಾಜ್ಯಗಳನ್ನು ತೀರ್ಮಾನಿಸಲು ನ್ಯಾಯಾಧಿಪತಿಗಳಿದ್ದರು; ಆದರೆ ಅವರ ನಿರ್ಣಯಗಳು ಅತೃಪ್ತಕರವಾಗಿದ್ದಾಗ ಉಚ್ಚನ್ಯಾಯಾಲಯದಲ್ಲಿ ಅರಸನಿಗೆ ಮೇಲ್ಮನವಿಯನ್ನು ಮಾಡಲಾಗುತ್ತಿತ್ತು. ಅರಸನಾದ ದಾವೀದನು ತಾನು ಜೀವವಿರುವವರೆಗೂ ಕಟ್ಟಕೂಡದ ದೇವಾಲಯಕ್ಕಾಗಿ ಸಾಮಾನುಗಳನ್ನು ಸಿದ್ಧಮಾಡುವದರಲ್ಲಿ ಕಾರ್ಯಮಗ್ನನನ್ನಾಗಿ ತನ್ನನ್ನು ತೊಡಗಿಸಿಕೊಂಡಿದ್ದನು. ಇದು ಕೆಲವು ಮಟ್ಟಿಗೆ ಉತ್ಕೃಷ್ಟ ನ್ಯಾಯಾಧಿಪತಿಯಾಗಿ ಜನರಿಗೆ ಮಾಡುವ ತನ್ನ ಕಾರ್ಯಕ್ಕೆ ಅಡ್ಡಿಮಾಡಿರಬಹುದು; ಹೀಗಾಗಿ ಎಲ್ಲಾ ಉಚ್ಚನ್ಯಾಯಾಲಯಗಳಲ್ಲಿದ್ದಂತೆ ಜನರ ಕೆಲವು ವ್ಯಾಜ್ಯಗಳನ್ನು ಆಲಿಸಲು ವಿಳಂಬವಾಗುತ್ತಿದ್ದು, ಇದು ತಾವು ಬಯಸುವಂಥ ಫಲಿತಾಂಶಗಳ ಬಗ್ಗೆ ಕಾಯಲು ತಾಳ್ಮೆಯಿಲ್ಲದವರಿಗೆ ಬೇಸರವಾದಂತೆ ತೋರುತ್ತಿತ್ತು.

ನ್ಯಾಯ ನಿರ್ವಹಣೆಯಲ್ಲಿ ಅರಸನಾದ ದಾವೀದನ ಪಾತ್ರದಲ್ಲಿ ಯಾವುದೇ ನ್ಯೂನ್ಯತೆಗಳಿದ್ದವೆಂಬುದು ನಮಗೆ ಹೇಗೂ ಖಚಿತವಾಗಿರುವದಿಲ್ಲ. ಕೇವಲ ನಾವು ತಿಳಿದಿರುವದೇನಂದರೆ ಕುಯುಕ್ತಿಯುಳ್ಳ ಆತನ ಮಗನಾದ ಅಬ್ಷಾಲೋಮನು ತನ್ನನ್ನು ತಾನು ಬಹು ಜನಪ್ರಿಯನನ್ನಾಗಿ ಮಾಡಿಕೊಂಡಿದ್ದನೆಂಬದು. ಆತನು ಜನರಿಗೆ ಬಹು ಔದಾರ್ಯದಿಂದ ಅವರೊಡನೆ ಚಿರಪರಿಚಿತನಂತಾಗಿ ಅವರ ದೂರುಗಳನ್ನು ಆಲಿಸಲು ಯಾವಾಗಲೂ ಸಿದ್ಧನಿರುತ್ತಿದ್ದು, ಅವರಿಗೆ ವಿಳಂಬವಾಗುತ್ತಿರುವದಕ್ಕೆ ಬಹು ಕುತಂತ್ರದಿಂದ ಅವರಿಗೆ ದುಃಖವನ್ನು ವ್ಯಕ್ತಪಡಿಸುವನಾಗಿ ಹೀಗೆ ಹೇಳುತ್ತಿದ್ದನು: ನಾನೇನಾದರೂ ಅರಸನಾಗಿದ್ದರೆ! ಅದು ಬೇರೆಯೇ ಆಗುತ್ತಿತ್ತು! ಹೀಗೆ ಮೋಸಕರವಾಗಿ ಒಳಸಂಚಿನ ಮೂಲಕ ಸುಳ್ಳಾದವುಗಳಿಂದ ಆತನು ಜನರ ಮನಸ್ಸುಗಳನ್ನು ತನ್ನ ತಂದೆಯಿಂದ ಕಸಿದುಕೊಂಡಿದ್ದನೆಂದು ನಾವು ಓದುತ್ತೇವೆ. ತಮಗೆ ಇಂಥಾ ಮನುಷ್ಯನು ರಾಜನಾಗಿದ್ದಲ್ಲಿ ತಾವು ಬಹು ಉತ್ತಮವಾದ ಸ್ಥಿತಿಯಲಿರುತ್ತಿದ್ದೆವೆಂದು ಜನರು ನಿಜವಾಗಿಯೂ ಆಲೋಚಿಸಿಕೊಳ್ಳುಲು ಆರಂಭಿಸಿದ್ದರು. ದೇವರು ಇಸ್ರಾಯೇಲ್ಯರ ಮೇಲೆ ಅರಸನಾಗಿದ್ದಾನೆಂದೂ ಹಾಗು, ಸತ್ಯವೇದವು ಹೇಳುವಂತೆ, ದಾವೀದನು ಕೇವಲ ಯೆಹೋವನ ಸಿಂಹಾಸನದಲ್ಲಿ ಕೂತಿರುವನು ಎಂಬ ಅಂಶವನ್ನು ಅವರು ಸಂಪೂರ್ಣವಾಗಿ ಉಪೇಕ್ಷಿಸಿದ್ದಂತೆ ತೋರುತ್ತದೆ. –1 ಪೂರ್ವಕಾಲ ವೃತ್ತಾಂತ 29:23

ಉದ್ದನೆಯ ಗುಂಗುರು ಕೂದಲುಳ್ಳ ಅಬ್ಷಾಲೋಮನು ನಯನಮನೋಹರನೂ, ಸ್ಫುರದ್ರೂಪಿಯೂ ಆದ ಒಬ್ಬ ರಾಜಕುಮಾರನಾಗಿದ್ದನು. ಆತನು ತನ್ನ ರಥದಲ್ಲಿ ಸಂಚರಿಸುವವನಾಗಿದ್ದು ತನ್ನ ಮುಂದೆ ಐವತ್ತು ಮಂದಿ ಚುರುಕು ಓಟಗಾರರು, ಅತನ ಬರುವಿಕೆಯನ್ನು ಸಾರುವ ಮುಂದೂತರು ಇರುತ್ತಿದ್ದರು. ಆಲೋಚನಾ ರಹಿತರಾದ ಜನರು ಇದನ್ನು ಹೊಗಳುತ್ತಿದ್ದರು; ಕನಿಷ್ಠವೆಂದರೆ ಒಬ್ಬ ಬುದ್ಧಿಯುಳ್ಳ ಮನುಷ್ಯನು ಈ ಮೋಹಕ ವೈಭವದ ವ್ಯಾಪನಕ್ಕೆ ಸೆಳೆಯಲ್ಪಟ್ಟಿದ್ದನೆಂಬದು ಸ್ಪಷ್ಟವಾಗಿತ್ತು.

ಅಬ್ಷಾಲೋಮನು ತನ್ನ ತಂದೆಯ ಧಾರ್ಮಿಕ ಪ್ರವೃತ್ತಿಯ ಬಗ್ಗೆ ತಿಳಿದಿದ್ದು, ಅದರಲ್ಲಿ ತಾನು ಪಾಲುತೆಗೆದುಕೊಳ್ಳದಿದ್ದುದು ಸ್ಪಷ್ಟವಾಗಿತ್ತು. ತಾನು ಉತ್ತರಾಧಿಕಾರಿಯಾಗುವದಕ್ಕೆ ತನ್ನ ತಂದೆಯು ತನ್ನನ್ನು ಆಯ್ಕೆಮಾಡುವ ಸಂಭವವಿರುವದಿಲ್ಲವೆಂಬುದನ್ನು ಆತನು ಅರಿತುಕೊಂಡಿದ್ದನು. ದಾವೀದನಿಗೆ ವರುಷಗಳು ತುಂಬುತ್ತಿದ್ದು ಒಬ್ಬ ನೂತನ ಅರಸನ ಸಮಯವು ಬಹು ದೂರವಿರಲಿಲ್ಲ. ಸೈತಾನನ ಆಕಾಂಕ್ಷೆಯ ಹಾಗು ದೇವರಿಗೆ ಅನಿಷ್ಠಾವಂತನಾಗುವ ಮಾರ್ಗವನ್ನು ಅನುಸರಿಸಿದವನಾಗಿ ಅಬ್ಷಾಲೋಮನು ತನ್ನ ತಂದೆಗೆ ನಿಷ್ಠೆಯಿಲ್ಲದವನಾದನು. ಅವನು ಒಂದು ಸೈನ್ಯವನ್ನು ನೇಮಿಸಿಕೊಂಡವನಾಗಿ ತನ್ನನ್ನು ತಾನು ಅರಸನೆಂದು ಘೋಷಿಸಿಕೊಂಡನು; ತಾನು ಹೃದಯವನ್ನು ಕಸಿದುಕೊಂಡವರ ಸಹಾನುಭೂತಿಯಿಂದ ಈ ಸಂಗತಿಯು ಬಹು ಶೀಘ್ರವಾಗಿ ಹಾಗು ಪೂರ್ಣವಾಗಿ ನೆರವೇರಿದ್ದು, ಇದು ದಾವೀದನು ಮತ್ತು ಆತನ ಸೈನ್ಯದವರು ಹಾಗು ಆತನ ಆಸ್ಥಾನದಲ್ಲಿನ ನಿಷ್ಠಾವಂತರನ್ನು ತಮ್ಮ ಜೀವವುಳಿಸಿಕೊಳ್ಳಲು ಓಡಿಹೋಗುವಂತೆ ಮಾಡಿತ್ತು. ನಮ್ಮ ಪಾಠವು ಅಬ್ಷಾಲೋಮನ ಉತ್ಕೃಷ್ಟವಾದ ಸೇನಾಬಲ ಹಾಗು ದಾವೀದನ ಅಲ್ಪ ಸೇನಾಬಲದ ಮಧ್ಯದಲ್ಲಿ ನಡೆದ ಯುದ್ಧಗಳ ಬಗ್ಗೆ ಸ್ಮರಿಸುವದು; ಹೇಗೂ ದಾವೀದನ ಸೇನಾಬಲದಲ್ಲಿ ಉತ್ತಮವಾಗಿ ತರಬೇತುಹೊಂದಿದ ಸೈನಿಕರಿದ್ದರು. ಗೆಲುವು ದಾವೀದನಿಗೆ ಲಭಿಸಿತ್ತು. ತನ್ನ ಮಗನಾದ ಯೌವನಸ್ಥನನ್ನು ಕೊಲ್ಲಬಾರದೆಂದು ತನ್ನ ಸೈನಿಕರಿಗೆ ದಾವೀದನ ಅವಸರವಾದ ಬೇಡಿಕೆಯಿದ್ದಾಗ್ಯೂ ಸಹ ಅಬ್ಷಾಲೋಮನು ಸಂಹರಿಸಲ್ಪಟ್ಟಿದ್ದನು.

ದೇವರಲ್ಲಿದ್ದಂಥ ಹೃದಯವನ್ನೇ ಹೊಂದಿದ್ದ ಮನುಷ್ಯನ ಹಾಗು ಜನರು ಹೊಗಳಿದ್ದವನೂ ಬೆಡಗಿನವನೂ, ಆಡಂಬರವುಳ್ಳವನೂ, ಆಕಾಂಕ್ಷಿತನೂ, ವಂಚಕನೂ, ಒಳಸಂಚುಗಾರನೂ, ದಂಗೆಕೋರನೂ, ತನ್ನ ತಂದೆಯ ಜೀವವನ್ನು ತೆಗೆಯಲು ಹವಣಿಸಿದ್ದವನೂ ಆದ ಮನುಷ್ಯನ ನಡುವಿನಲ್ಲಿದ್ದ ಎಂಥಾ ಒಂದು ವಿಭಿನ್ನತೆಯನ್ನು ನಾವು ಇಲ್ಲಿ ನೋಡುತ್ತಿರುವೆವು. ದೇವರ ಮನುಷ್ಯನು ತಾನು ಬಲಹೀನನಾಗಿದ್ದಾಗ್ಯೂ ಅದನ್ನು ಒಪ್ಪಿಕೊಂಡವನಾಗಿ, ದಿಕ್ಸೂಚಿಯ ಮುಳ್ಳು ಉತ್ತರ ದಿಕ್ಕಿಗೆ ತಿರುಗುವದು ನಿಜವೆಂಬಂತೆ, ದೇವರಿಗೆ ನಿಷ್ಠೆಯುಳ್ಳ ಹೃದಯವನ್ನು ಹೊಂದಿದವನಾಗಿ, ತನ್ನ ಮಗನಿಗಾಗಿ ಒಂದು ಸಹಾನುಭೂತಿಪೂರ್ಣ ಪ್ರೀತಿಯುಳ್ಳವನಾಗಿದ್ದುದು ಈ ಮುಂದಿನ ಗಮನಾರ್ಹವಾದ ಶೋಕಗೀತೆಯಲ್ಲಿ ವ್ಯಕ್ತವಾದುದಾಗಿ ಕಂಡುಬಂದಿರುವದು: “ನನ್ನ ಮಗನೇ, ಅಬ್ಷಾಲೋಮನೇ, ನನ್ನ ಮಗನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೊ ಚೆನ್ನಾಗಿತ್ತು.”

ಬಹು ಮುಖ್ಯವಾದ ಒಂದು ಮೂಲತತ್ವವು

ಮಾನವನ ಸಂಕಲ್ಪವು ಅದ್ಭುತವಾದುದು, ಹೀಗಾಗಿ ಪ್ರತಿಯೊಬ್ಬ ಹುಡುಗನು ತನ್ನದೇ ಆದ ವೃತ್ತಿಜೀವನಕ್ಕೆ ಹೊಣೆಗಾರನೆಂದು ನಾವು ಬಹುಮಟ್ಟಿಗೆ ಹೇಳಬಹುದು. ಸ್ವಯಂ

ನಿರ್ಮಿತ ಮನುಷ್ಯನೆಂದು ನಾವು ವ್ಯಕ್ತಪಡಿಸುವದರಲ್ಲಿ ಹೇಗೂ ಬಹುತೇಕ ತಪ್ಪಾಗಿರುವದಿಲ್ಲ.

ಲೋಕದಲ್ಲಿ ಒಂದು ಸೂಕ್ತ ಮಗುವು ಅಂದರೆ ಯೋಗ್ಯವಾದ ವರಗಳುಳ್ಳ ಮಗುವು ಹುಟ್ಟಿಬರುವಂತೆ ನೋಡಿಕೊಳ್ಳುವದು ತಂದೆತಾಯಿಗಳ ಕರ್ತವ್ಯವೆಂಬುದಕ್ಕೆ ಹೇಗೂ ವಿನಾಯಿತಿ ಇರುವದಿಲ್ಲ; ಇದು ಕೇವಲ ಹೊರಗೆ ಸೊಗಸಾಗಿ ಕಾಣುವದು ಮಾತ್ರವಲ್ಲದೆ ಸಮಯಪ್ರಜ್ಞೆ ನೀತಿವಂತಿಕೆ ದೇವರಿಗೆ ಹಾಗು ನೀತಿ ತತ್ವಗಳಿಗೆ ನಿಷ್ಠಯುಳ್ಳಂಥ ಮಗುವಾಗುವಂತೆ ನೋಡಿಕೊಳ್ಳಬೇಕಿರುವದು. ಇಲ್ಲವೇ ಮಗುವಿಗೆ ಜೀವನದ ಸೂಕ್ತ ಪರಿಕಲ್ಪನೆ ಸೂಕ್ತವಾದ ಶಿಕ್ಷಣ ನೀಡುವದರಿಂದ ತಂದೆತಾಯಿಗಳಿಗೆ ಇದು ವಿನಾಯಿತಿ ನೀಡುವದಿಲ್ಲ; ಯಾಕಂದರೆ ಶಾಸ್ತ್ರವಚನಗಳು ಹೇಳುವದು: "ನಡಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು."– ಜ್ಞಾನೋಕ್ತಿ 22:6

ನಿಜವಾಗಿಯೂ ಶೋಚನೀಯವಾಗಿ ತೋರುವದೆಂದರೆ ಶತಮಾನಗಳಿಂದ ಉಪದೇಶ ಹಾಗು ಬೋಧನೆಗಳು ಎಲ್ಲವನ್ನು ನೀಡಲಾಗುತ್ತಿದ್ದರೂ ಸಹ ಬಹು ಸ್ವಲ್ಪ ಸಂಖ್ಯೆಯ ತಂದೆತಾಯಿಗಳು ತಾವು ಲೋಕಕ್ಕೆ ಕೊಂಡುತರುತ್ತಿರುವ ಮಕ್ಕಳ ವಿಷಯದಲ್ಲಿ ನಮ್ಮ ಕರ್ತವ್ಯದ ಬಗ್ಗೆ ಗ್ರಹಿಸಿರುವರೆಂಬದು. ಬಹು ಕಡಿಮೆ ಸಂಖ್ಯೆಯ ತಂದೆಗಳು ತಾವು ತಮ್ಮ ಹೆಂಡತಿಯರು ಹಾಗು ತಮ್ಮ ಸಂತಾನದ ಸಂರಕ್ಷಣೆ ಹಾಗು ಉಸ್ತುವಾರಿ ಮಾಡುವವರೆಂಬುದನ್ನು ಅರಿತುಕೊಂಡಿರುವರು; ಅಲ್ಲದೆ ಒಂದು ಘನತೆಯುಳ್ಳವಳೂ, ಜಾಗರೂಕಳೂ ಪ್ರಾಮಾಣಿಕಳೂ ಆದ ಹೆಂಡತಿಯನ್ನು ತಮ್ಮ ಕುಟುಂಬಕ್ಕೆ ತಾಯಿಯನ್ನಾಗಿ ಆಯ್ಕೆಮಾಡುವಂಥದ್ದು ಅವರ ಕರ್ತವ್ಯವೂ ಸೌಭಾಗ್ಯವೂ ಆಗಿರುವದು ಮಾತ್ರವಲ್ಲದೆ ಗರ್ಭಾವಸ್ಥೆಯ ಅವಧಿಯಲ್ಲಿ ಆಕೆಯನ್ನು ಅನುಕೂಲಕರವಾದ ಸ್ಥಿತಿಯಲ್ಲಿ ಇರಿಸುವದು ಮತ್ತು ಸಾಧಾರಣವಾಗಿ ಆಕೆಯ ಮನಸ್ಸು ಮತ್ತು ಹೃದಯವನ್ನು ಶುದ್ಧವಾಗಿರಿಲು ಪ್ರೀತಿಮಯವಾಗಿರಿಸಲು ಘನವಂತಿಕೆ–ಯಿಂದಿರಲು ದೇವರಿಗೂ ಹಾಗು ಆತನ ನೀತಿತತ್ವಗಳಿಗೂ ನಿಷ್ಠೆಯುಳ್ಳವ ಳಾಗಿರುವಂತೆ ಇಟ್ಟುಕೊಳ್ಳಲು ಸಹಾಯ ಮಾಡುವದು ಸಹ ಅವರ ಕರ್ತವ್ಯವಾಗಿರುವದು; ಇದು ಅವರ ಮಗುವು ಜನ್ಮತಃ ಉತ್ತಮ ಸ್ಥಿತಿಯಲ್ಲಿದ್ದು ಘನವಂತಿಕೆಯ ಗುಣಗಳನ್ನು ಹೊಂದುವ ಉದ್ದೇಶವುಳ್ಳದ್ದಾಗಿರುವದು. ಇಲ್ಲದಿದ್ದಲ್ಲಿ ಸಂಗತಿಯು ಬೇರೊಂದು ರೀತಿಯದಾಗಿದ್ದು, ಮಗುವು ಅಲ್ಪ ವಿಚಾರಶೀಲತೆಯುಳ್ಳದ್ದಾಗಿ ಪಾಪದಿಂದ ದೋಷಪೂರಿತ ವಾಗುವದು. ಜನರು ಜ್ಞಾನಹೀನರಾಗಿ ಹಾಳಾಗುವರೆಂದು ಶಾಸ್ತ್ರವಚನಗಳು ಚೆನ್ನಾಗಿ ಸಾರಿಹೇಳಿರುವವು. – ಹೊಶೇಯ 4:6.

ಸುಸಂತಾನಶಾಸ್ತ್ರವನ್ನು ಎಲ್ಲೆಡೆ ನಮ್ಮ ಗಮನದ ಮೇಲೆ ಹೇರಲಾಗಿರುವಂಥದ್ದು ನಿಜವೇ; ಆದರೆ ಯಾವ ಉದ್ದೇಶಕ್ಕಾಗಿ? ಆರೋಗ್ಯಳಾದ ಸೂಕ್ತ ಜೀವನ ಸಂಗಾತಿಯ ಆಯ್ಕೆಯ ವಿಷಯದಲ್ಲಿ ಈ ಬೋಧನೆಯು ಮುಖ್ಯವಾಗಿರುವಂತೆಯೇ, ನಾವು ಗುರುತಿಕೊಳ್ಳುವ ಮೂಲತತ್ವಗಳಿಗೆ ಹೋಲಿಸಿ ನೋಡಿದಲ್ಲಿ ಇವು ಪ್ರಾಮುಖ್ಯವಲ್ಲದ ಸಂಗತಿಗಳಾಗಿ ಜಾರಿಹೋಗುತ್ತವೆ. ಅದೇನಂದರೆ ಗರ್ಭಾವಸ್ಥೆಯ ಅವಧಿಯಲ್ಲಿ ತಾಯಿಯ ಮನಸ್ಸು ಆಕೆಯ ಮಗುವಿನ ಗುಣಗಳ ಮೇಲೆ ಅಚ್ಚನ್ನು ಒತ್ತುವದಾಗಿದ್ದು, ಹೀಗಾಗಿ ಆ ಮಗುವಿನ ಮೇಲೆ ಅದು ಅನುಕೂಲಕರವಾದ ಇಲ್ಲವೇ ಅನಾನುಕೂಲಕರವಾದ ಪರಿಣಾಮ ಬೀರುತ್ತದೆಂಬದು. ವಾಸ್ತವದಲ್ಲಿ ಒಬ್ಬ ತಾಯಿಗೆ ಪರಿಪೂರ್ಣವಾದ ಮಗುವನ್ನು ಹೆರಲು ಸಾಧ್ಯವಾಗುವದಿಲ್ಲ; ಆದರೆ ಆಕೆಯ ಸ್ವಂತ ಆದರ್ಶಗಳು ಉನ್ನತವೂ ಸತ್ಯವೂ ಹಾಗು ಅಚಲವೂ ಆಗಿದ್ದು, ಶುದ್ಧವೂ ಘನತೆಯೂ ಮತ್ತು ಒಳ್ಳೆಯ ವಿಷಯಗಳಲ್ಲಿ ಸ್ಥಿರವಾಗಿದ್ದಲ್ಲಿ ನಾವು ಪ್ರಶ್ನಾತೀತವಾಗಿ ತಿಳುಕೊಳ್ಳುವದೇನಂದರೆ ಮಗುವು ಹೀಗೆ ಶಾರೀರಿಕವಾಗಿ ಬೌದ್ಧಿಕವಾಗಿ ನೈತಿಕವಾಗಿ ಸಹ ಬಹುವಾಗಿ ಪ್ರಯೋಜನಹೊಂದುವದೆಂಬದು. ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ನಾವು ಫೋಟೋ ಡ್ರಾಮಾ ಆಫ್ ಕ್ರಿಯೇಷನ್ನಿನಲ್ಲಿ ತೋರಿಸಿಕೊಟ್ಟಿರುವಂತೆ, ಪರಿಪೂರ್ಣಳಾದ ತಾಯಿ ಹವ್ವಳಿಗೆ ತನ್ನ ಮಗನಾದ ಕಾಯಿನನನ್ನು ಅಸೂಯೆಯುಳ್ಳ ಅಸಂತೋಷಕರವಾದ ಒಂದು ಸ್ವಭಾವದಿಂದ ಮುದ್ರಿಸಲು ಸಾಧ್ಯವಿದ್ದುದ್ದಲ್ಲದೆ, ಆಕೆಯು ಹಾಗೆಯೇ ಮಾಡಿದ್ದು, ಕಟ್ಟಕಡೆಗೆ ಅದು ಆತನ ಸಹೋದರನ ಕೊಲೆಯಲ್ಲಿ ಪರಿವ್ಯಸನ ಗೊಂಡಿತ್ತೆಂಬದು.

ಕೀರ್ತನೆ 3

ದಾವೀದನ ಕೀರ್ತನೆ; ಅವನು ತನ್ನ ಮಗನಾದ
ಅಬ್ಷಾಲೋಮನಿಂದ ಓಡಿ ಹೋದಾಗ ರಚಿಸಿದ್ದು

ಯೆಹೋವನೇ, ನನ್ನ ವಿರೋಧಿಗಳು ಎಷ್ಟೋ ಹೆಚ್ಚಾಗಿದ್ದಾರೆ;
ನನಗೆ ವೈರಿಗಳಾಗಿ ನಿಂತವರು ಬಹಳ ಮಂದಿ.
ಅನೇಕರು ನನ್ನ ವಿಷಯದಲ್ಲಿ –
ಅವನಿಗೆ ದೇವರಿಂದ ಸಹಾಯವು ಆಗುವದೇ
ಇಲ್ಲವೆಂದು ಹೇಳಿಕೊಳ್ಳುತ್ತಾರೆ. ಸೆಲಾ
ಆದರೂ ಯೆಹೋವನೇ, ನೀನು ನನ್ನನ್ನು ಕಾಯುವ ಗುರಾಣಿ;
ನೀನು ನನ್ನ ಗೌರವಕ್ಕೆ ಆಧಾರನೂ ನನ್ನ ತಲೆಯನ್ನು
ಎತ್ತುವಂತೆ ಮಾಡುವವನೂ ಆಗಿದ್ದೀ.
ನಾನು ಯೆಹೋವನಿಗೆ ಮೊರೆಯಿಡುವಾಗ
ಆತನು ತನ್ನ ಪರಿಶುದ್ಧಪರ್ವತದಿಂದ ಸದುತ್ತರವನ್ನು
ಅನುಗ್ರಹಿಸುತ್ತಾನೆ. ಸೆಲಾ
ಯೇಹೋವನು ನನ್ನನ್ನು ಕಾಪಾಡುವವನಾದ್ದರಿಂದ
ನಾನು ಮಲಗಿಕೊಂಡು ನಿದ್ದೆಮಾಡಿ
ಸುಖವಾಗಿ ಎಚ್ಚರಗೊಂಡೆನು.
ನನ್ನ ಸುತ್ತಲು ಸನ್ನಧರಾಗಿ ನಿಂತಿರುವ ಸಾವಿರಾರು
ವೈರಿಗಳಿಗಾದರೂ ನಾನು ಹೆದರೆನು.
ಯೆಹೋವನೇ, ನನ್ನ ದೇವರೇ,
ನನ್ನ ಎಲ್ಲಾ ಶತ್ರುಗಳ ದವಡೆಯ ಮೇಲೆ ಬಡಿದು
ಅವರ ಹಲ್ಲುಗಳನ್ನು ಉದುರಿಸಿ ಬಿಟ್ಟವನೇ,
ಎದ್ದು ಬಂದು ನನ್ನನ್ನು ರಕ್ಷಿಸು.
ರಕ್ಷಣೆಯು ಯೆಹೋವನಿಂದಲೇ ಉಂಟಾಗುವದು.
[ಯೆಹೋವನೇ] ನಿನ್ನ ಆಶೀರ್ವಾದವು ನಿನ್ನ
ಪ್ರಜೆಯ ಮೇಲೆ ಇರಲಿ. ಸೆಲಾ.

*****

ಅಬ್ಷಾಲೋಮನ ಪರಾಭವ ಹಾಗು ಮರಣ

ರೀಪ್ರಿಂಟ್ಸ್ ಪುಟ 2025

2 ಸಮುವೇಲ 18:9–17,32,33

"ಯೆಹೋವನು ನೀತಿವಂತರ ಮಾರ್ಗವನ್ನು ಲಕ್ಷಿಸುವನು; ದುಷ್ಟರ ಮಾರ್ಗವೋ ನಾಶವಾಗುವದು." – ಕೀರ್ತನೆ 1:6

ಅಬ್ಷಾಲೋಮನ ಫಲಕಾರಿಯಾದ ಒಳಸಂಚು ಬಹು ಮೋಸದಿಂದ ಆಯೋಜಿಸಿದ್ದು, ಕುಶಲತೆಯಿಂದ ನಿರ್ವಹಿಸಲ್ಪಟ್ಟು ಕಡೆಯಲ್ಲಿ ದಾವೀದನನ್ನು ಯೆರೂಸಲೇಮಿನಿಂದ ಹೊರಹಾಕಿ ಅಲ್ಲಿ ಅಬ್ಷಾಲೋಮನನ್ನು ಸ್ಥಾಪಿಸುವಂತೆ ಮಾಡಿತ್ತು. ಆದರೆ ಧರ್ಮಸಮ್ಮತ ಸಾರ್ವಭೌಮನಾದ ದಾವೀದನು ಜೀವಿತ–ನಾಗಿರುವವರೆಗೂ ಒಳಸಂಚುಗಾರರ ಯಶಸ್ಸು ಫಲಿಸಿರಲಿಲ್ಲ. ಹೀಗಾಗಿ ಅಬ್ಷಾಲೋಮನು ಹಾಗು ಆತನ ಸಲಹೆಗಾರರು ಮುಂದೆ ಅರಸನ ಜೀವಕ್ಕಾಗಿ ಮತ್ತೂ ಒಳಸಂಚು ಹಾಕಿದ್ದರು.

ಆದರೆ ದೇವರು ದಾವೀದನ ಮಿತ್ರನಾದ ಹೂಷ್ಯೆಯನ್ನು ಎಬ್ಬಿಸಿ ಆತನನ್ನು ಅಬ್ಷಾಲೋಮನ ಸಲಹೆಗಾರರ ಮಧ್ಯದಲ್ಲಿ ಇರಿಸಿ ಹೀಗೆ ಆತನ ಸಲಹೆಯ ಮೂಲಕವಾಗಿ ಮೂರ್ಖತನದ ದುಷ್ಟ ಒಳಸಂಚನ್ನು ವ್ಯರ್ಥಗೊಳಿಸಿದ್ದನು. ತನ್ನ ಹೃದಯದಲ್ಲಿನ ಅಹಂಕಾರ ಹಾಗು ದುಷ್ಟತನದಿಂದ ತನ್ನ ತಂದೆಯನ್ನು ಸಂಹರಿಸ ಸಲುವಾಗಿ ದೃಢ ನಿಶ್ಚಯದೊಡನೆ ಅಬ್ಷಾಲೋಮನು ತನ್ನನ್ನು ಒಂದು ದೊಡ್ಡ ಸೈನ್ಯದ ಮುಂದೆ ಇರಿಸಿಕೊಂಡವನಾಗಿ ಹೋರಾಡಲು ಮುಂದಾಗಿದ್ದನು. ಈ ದುಷ್ಟತನಕ್ಕೆ ಪ್ರತಿಯಾಗಿ ತಂದೆಯ ಪ್ರೀತಿಯನ್ನು ಗುರುತಿಸಿಕೊಳ್ಳಿರಿ. ಬಹು ಕಠಿಣವಾದ ಈ ಪರಿಶೋಧನಾ ಸಂದರ್ಭದಲ್ಲಿಯೂ ಸಹ ತನ್ನ ಜನರಿಗೆ ಅವರು ಅಬ್ಷಾಲೋಮನನ್ನು ಎದುರಿಸಲು ಹೊರಟಾಗ, ನನಗೋಸ್ಕರ ವಾಗಿ ಯವನಸ್ಥನಾದ ಅಬ್ಷಾಲೋಮನನ್ನು ಕರುಣಿಸಿರಿ ಎಂದು ಆಜ್ಞಾಪಿಸಿ ಹೇಳಿದ್ದನು. [2 ಸಮುವೇಲ 18:5]

ಕೂಡಲೇ ದೇವರು ಈ ಕೆಟ್ಟ ಯುವಕನ ದುಷ್ಟ ಸಂಚನ್ನು ಭಂಗಪಡಿಸಿದ್ದಾದರೂ ಹೇಗೆ: ಹೇಗಂದರೆ ತನ್ನ ಯಶಸ್ಸಿನಿಂದ ಉತ್ತೇಜಿತನಾಗಿ ನಿರೀಕ್ಷಿತ ಜಯದ ಕಡೆಗೆ ಅಹಂಕಾರದಿಂದ ಸವಾರಿಮಾಡುವಾಗ ಇದ್ದಕ್ಕಿದ್ದಂತೆ ಓಕ್ ಎಂಬ ಒಂದು ದೊಡ್ಡ [ದೇವದಾರು ಜಾತಿಯ] ಮರದ ಕೊಂಬೆಗೆ ಆತನ ತಲೆಯು ಸಕ್ಕಿಕೊಂಡಿದ್ದು, ಆತನು ಸವಾರಿಮಾಡುತ್ತಿದ್ದ ಹೇಸರಕತ್ತೆಯು ಮುಂದೆ ದಾಟಿಹೋಗಿ ಆತನು ನಿಸ್ಸಹಾಯಕನಾಗಿ ನೇತಾಡಲು, ದಾವೀದನ ಸ್ನೇಹಿತರು ಕಾರ್ಯವನ್ನು ಮುಗಿಸಿದ್ದರು. ಯೋವಾಬನು ವಿಜಯದ ತುತ್ತೂರಿಯನ್ನು ಊದಲಾಗಿ ಒಳಸಂಚು ಭಗ್ನಗೊಂಡು ದುರಾಕ್ರಮಿಯು ಸಾವನ್ನಪ್ಪಿ ಕಲ್ಲಿನ ಕುಪ್ಪೆಯ ಅಡಿಯಲ್ಲಿ ಹೂಳಲ್ಪಟ್ಟಿರಲು, ಆತನೊಡನೆ ಇದ್ದವರು ಬಹು ನಾಚಿಕೆಯಿಂದ ತಮ್ಮ ಮುಖಗಳನ್ನು ಮುಚ್ಚಿಕೊಳ್ಳಲು ಹವಣಿಸುತ್ತಿದ್ದರು; ಅಲ್ಲದೆ ದೇವರ ಅಭಿಷಕ್ತ ಅರಸನಾದ ದಾವೀದನು ಮತ್ತೆ ಸಮಾಧಾನದಿಂದ ಯೆರೋಸಲೇಮಿಗೆ ಹಿಂದಿರುಗಿದ್ದನು.

ಈ ಪಾಠದಲ್ಲಿನ ಸನ್ನಿವೇಶಗಳು ದುಷ್ಕರ್ಮಿಗಳ ಯಶಸ್ಸು ಎಷ್ಟು ಅಲ್ಪವೆಂಬುದನ್ನು ಚೆನ್ನಾಗಿ ಗುರುತಿಸಿಕೊಳ್ಳಲು ನೀಡುವ ಅವಕಾಶವನ್ನು ನಾವು ಸದುಪಯೋಗ ಮಾಡಿಕೊಳ್ಳೋಣ. ಕೊಬ್ಬಿನಿಂದ ಅವರ ಕಣ್ಣುಗಳು ಮೇಲಿದ್ದಾಗ್ಯೂ; ಅವರ ದುಷ್ಕಲ್ಪನೆಗಳು ತುಂಬಿತುಳುಕುತ್ತಿದ್ದಾಗ್ಯೂ (ಕೀರ್ತನೆ 73:7); ಮತ್ತು ಅಹಂಕಾರಿಗಳನ್ನು ಧನ್ಯರೆಂದು ಕೊಂಡಾಡಬೇಕಾಗಿ ಬಂದಾಗ್ಯೂ; ಹೌದು ದುಷ್ಕರ್ಮಿಗಳು ಏಳಿಗೆಗೆ ಬಂದಾಗ್ಯೂ; ದೇವರನ್ನು ಪರೀಕ್ಷಿಸಿದರೂ ಸುರಕ್ಷಿತರಾಗಿದ್ದಾರೆಂದು [ಬಿಡುಗಡೆಯಾಗಿದ್ದಾರೆಂದು] ಅಂದುಕೊಂಡಿದ್ದಾಗ್ಯೂ (ಮಲಾಕಿ 3:15) ಅವರೆಲ್ಲರೂ ಹೊಟ್ಟಿನಂತಿದ್ದು, ಬರುತ್ತಿರುವ ಆ ದಿನವು ಅವರಿಗೆ ಅಗ್ನಿಪ್ರಳಯವಾಗಿ, ಅವರು ನೀತಿವಂತರ ಕಾಲಕೆಳಗಿನ ಹೊಟ್ಟಿನಂತಾಗುವರು. (ಮಲಾಕಿ 4:1). ಶೋಷಿತರಿಗೆ ಪೀಡನಾಕಾಲವು ನಿಜವಾಯೂ ದೀರ್ಘವೆಂದೆನ್ನಿಸಬಹುದು; ಆದರೆ ಅದು ದೇವರ ಎಣಿಕೆಯಲ್ಲಿ ದೀರ್ಘವಾಗಿರುವದಿಲ್ಲ. ಆತನು ತನ್ನ ಜ್ಞಾನೋದ್ದೇಶವು [ಪೂರ್ಣಗೊಂಡು] ಅನುವುಮಾಡಿಕೊಟ್ಟ ಕೂಡಲೇ ನ್ಯಾಯವನ್ನು ವಿಜಯಕ್ಕೆ ಕೊಂಡೊಯ್ಯುವನು. ನ್ಯಾಯವು ದೊರೆಯುವದು ವಿಳಂಬವಾಗಿದ್ದಲ್ಲಿ ಅದು ಕೇವಲ ಒಂದು ಶೀಘ್ರ ನ್ಯಾಯವಿಚಾರಣೆಯು ಸಾಧಿಸುವದಕ್ಕಿಂತಲೂ ಕೆಲವು ಅತ್ಯುತ್ತಮ ರೀತಿಯಲ್ಲಿನ ಒಳ್ಳೆಯದನ್ನು ಸಾಧಿಸುವ ಸಲುವಾಗಿರುವದು. ಆದುದರಿಂದ ಈ ಆತ್ಮವಿಶ್ವಾಸದಿಂದ ಕ್ರೈಸ್ತನು ಆತನಿಗೆ ಸಂಭವಿಸುವದೆಲ್ಲವೂ ಅಂದರೆ ವಿಳಂಬವಾಗಿ ತೋರುವ ಸಂಗತಿಗಳೂ ಸಹ ದೇವರ ಸಂಕಲ್ಪದ ಅನುಸಾರವಾಗಿ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಪರಮ ಹಿತಕ್ಕಾಗಿ ಕಾರ್ಯವೆಸಗುತ್ತವೆಂಬ ಭರವಸೆಯುಳ್ಳವರಾಗಿ ವಿಶ್ರಮಿಸಲಿ. (ರೋಮಾ 8:28) ಆದುದರಿಂದ **"**ನಿಮ್ಮ ಧೈರ್ಯವನ್ನು [ಆತ್ಮವಿಶ್ವಾಸವನ್ನು] ಬಿಟ್ಟುಬಿಡಬೇಡಿರಿ; ಅದಕ್ಕೆ ಮಹಾ ಪ್ರತಿಫಲ ಉಂಟು. ದೇವರ ಚಿತ್ತವನ್ನು ನೆರವೇರಿಸಿ ವಾಗ್ದಾನದ ಫಲವನ್ನು ಹೊಂದಬೇಕಾದರೆ ನಿಮಗೆ ತಾಳ್ಮೆ ಬೇಕು.**"** ಇಬ್ರೀಯ 10:35–36

*****

"ಅಬ್ಷಾಲೋಮನೇ, ಓ ನನ್ನ ಮಗನೇ, ನನ್ನ ಮಗನೇ"

ರೀಪ್ರಿಂಟ್ಸ್ ಪುಟ 3267

2 ಸಮುವೇಲ 18:24–33

"ಜ್ಞಾನಹೀನನಾದ ಮಗನು ತಂದೆಗೆ ಕಿರಿಕಿರಿ." – ಜ್ಞಾನೋಕ್ತಿ 17:25

ತನ್ನ ಮಗನಾದ ಅಬ್ಷಾಲೋಮನ ಬಂಡಾಯದ ಬಗ್ಗೆ ತಿಳುಕೊಂಡವನಾಗಿ ಮತ್ತು ಅದು ವ್ಯಾಪನಗೊಂಡ ಬಗ್ಗೆ ಹಾಗು ತನ್ನ ಮಗನ ವಿಶ್ವಾಸಘಾತುಕತನದ ಮೂಲಕವಾಗಿ ಜನರ ಹೃದಯವು ತನ್ನಿಂದ ಹೇಗೆ ಕಸಿಯಲ್ಪಟ್ಟಿತ್ತೆಂಬುದನ್ನು ಅರಿತುಕೊಂಡಾಗ, ಅಬ್ಷಾಲೋಮನ ಪ್ರೀತ್ಯಾದರವಿಲ್ಲದ ಈ ನಡವಳಿಕೆಗೆ ಸಂಪೂರ್ಣವಾಗಿ ಆಶ್ಚರ್ಯಪಟ್ಟು ಅದಕ್ಕೆ ಸಿದ್ಧನಿಲ್ಲವಾದವನೆಂದರೆ ಅದು ದಾವೀದನು. ತಾನು ಓಡಿಹೋಗುವದಕ್ಕಿಂತಲೂ ಬೇರೆ ಯಾವ ದಾರಿಯೂ ತನಗೆ ತೆರೆದಿರುವದಿಲ್ಲವೆಂಬುದನ್ನು ಆತನು ಕೂಡಲೇ ಅರ್ಥಮಾಡಿಕೊಂಡಿದ್ದನು. ಆದು ಒಂದು ಸಮಾಧಾನದ ಸಮಯವಾಗಿದ್ದು, ರಾಜಧಾನಿಯಲ್ಲಿ ತನ್ನ ಸೇವೆಗಾಗಿ ಒಂದು ದೊಡ್ಡ ಸೇನಾಪಡೆಯು ಆತನಿಗೆ ಇರಲಿಲ್ಲ, ಆದರೆ ಕೇವಲ ಒಂದು ಅಂಗರಕ್ಷಕರೆಂದು ಹೇಳಲ್ಪಡಬಹುದಾದವರು ಮಾತ್ರ ಅಲ್ಲಿದ್ದರು. ಇವರೊಡನೆ ಹಾಗು ನಿಷ್ಠಾವಂತರಾದ ಆಸ್ಥಾನಿಕ ಅಧಿಕಾರಿಗಳೊಡನೆ ಆತನು ಯೊರ್ದನನ್ನು ದಾಟಿ ಪಲಾಯನಮಾಡಿದ್ದು, ಅಲ್ಲಿ ಆತನಿಗೆ ಸೇನೆಯನ್ನು ಬಲಪಡಿಸಿಕೊಳ್ಳುವ ಸಲುವಾಗಿ ಕೆಲವು ಸಮಯ ಹಾಗು ಅವಕಾಶಗಳು ದೊರೆತಿದ್ದಲ್ಲದೆ ಅಲ್ಲಿ ಭದ್ರವಾದ ಕೋಟೆಯುಳ್ಳ ಮಹನಯೀಮ್ ಎಂದು ಕರೆಯಲ್ಪಡುವ ಸಣ್ಣ ಪಟ್ಟಣದಲ್ಲಿರುವದು ಹೋಲಿಸಿನೋಡಿದ್ದಲ್ಲಿ ಸುರಕ್ಷಿತವೆಂದು ಆತನಿಗೆ ಅನ್ನಿಸಿತ್ತು. ಈ ಮಧ್ಯೆ ಅಬ್ಷಾಲೋಮನು ತನ್ನ ತಂದೆ ಹಾಗು ಆತನ ಪರಿವಾರದವರಿಗೆ ತಿರಸ್ಕಾರವನ್ನು ತೋರ್ಪಡಿಸಿದವನಾಗಿ, ಹೇಳಬೇಕಾದರೆ, ಹೀಗೆ ಜನರಿಗೆ ಈ ಬಂಡಾಯದಲ್ಲಿ ಯಾವುದೇ ಪ್ರಾಣದಾನವನ್ನು ನೀಡುವದಾಗಲಿ ಅಥವಾ ಹೊಂದಾಣಿಕೆಯನ್ನು ಮಾಡಿಕೊಳ್ಳುವದಾಗಲಿ ನಿರೀಕ್ಷಿಸುವಂತಿಲ್ಲವೆಂಬುದನ್ನು ತೋರಿಸಿಕೊಟ್ಟಿದ್ದನು. ಬಂಡಾಯಗಾರನಾದ ರಾಜಕುಮಾರನೊಡನೆ ತಮ್ಮ ಭವಿಷ್ಯವನ್ನು ಮುಡುಪಾಗಿಸಿಕೊಂಡವರಾಗಿ ಆತನ ಆಶ್ರಯದಲ್ಲಿ ಪ್ರಸ್ತುತ ರಾಜ್ಯಾಧಿಕಾರಸ್ಥರಿಗೆ ಉತ್ತರಾಧಿಕಾರಿಗಳಾಗಿ ಮಾನ ಪ್ರಭಾವ ಹಾಗು ಅಧಿಕಾರಗಳ ಒಂದು ದೊಡ್ಡ ಪ್ರತಿಫಲವನ್ನು ಅಪೇಕ್ಷಿಸುತ್ತಿದ್ದ ಒಂದು ದೊಡ್ಡ ಸೇನಾಪಡೆಯೊಡನೆ ಅಬ್ಷಾಲೋಮನು ಆತುರದಿಂದ ಅರಸನಾದ ದಾವೀದನನ್ನು ಹಿಂದಟ್ಟಿಹೋಗಿದ್ದನು. ಆತನು ತನ್ನ ತಂದೆಯನ್ನು ಕೊಲೆಮಾಡುವ ತನ್ನ ಅವಹೇಳನಕಾರಿ ವಿಧಾನದ ಶಿಖರವನ್ನೇರಿ ಅವಕಾಶವನ್ನು ಹಿಡಿದುಕೊಳ್ಳುವದರಲ್ಲಿ ಯಾವ ಸಂದೇಹವೂ ಇರದಂತೆ ಕಾಣುತ್ತಿತ್ತು. ಒಂದು ದೊಡ್ಡ ಸೇನೆಯೊಡನೆ ಆತನು ಹಿಂದಟ್ಟುತ್ತಿದ್ದುದು ಇದರ ಅರ್ಥವಾಗಿತ್ತು.

ದಾವೀದನ ಸೇನೆಯು ಈ ಎರಡರಲ್ಲಿ ಬಹು ಸಣ್ಣದಾಗಿದ್ದರೂ, ಅವರ ಕಾಲದ ಪದ್ಧತಿಗಳ ಮೇರೆಗೆ ಅವರಿಗೆ ಅರಸನ ರಕ್ಷಕರಾಗಿ ವಿಶೇಷ ಸಾಮರ್ಥ್ಯದ ಹಾಗು ಯುದ್ಧವೀರರಾಗಿ ವಿಶಾಲವಾದ ಅನುಭವವುಳ್ಳವರಾಗಿದ್ದರು. ಸೇನೆಯೊಡನೆ ಹೋಗದಂತೆ ಅರಸನನ್ನು ಪ್ರೇರೆಪಿಸಲಾಗಿದ್ದು, ಹೀಗಾಗಿ ಆತನು ತನ್ನ ಮೂರು ಸಮರ್ಥ ಅನುಯಾಯಿಗಳ ಅಧೀನದಲ್ಲಿ ಸೇನೆಯನ್ನು ಮೂರು ವಿಭಾಗಗಳಾಗಿ ಮಾಡಿದ್ದನು. ಇವರು ಅಬ್ಷಾಲೋಮನ ಸೈನ್ಯವನ್ನು ಸಂಧಿಸಿ ವಿವಿಧ ದಿಕ್ಕುಗಳಿಂದ ಅವರ ಮೇಲೆ ಆಕ್ರಮಣಮಾಡಿದ್ದು, ಫಲವಾಗಿ ಅಬ್ಷಾಲೋಮನ ಸೇನಾಬಲದ 20,000 ಮಂದಿಯು ಸಂಹರಿಸಲ್ಪಟ್ಟು, ಅಬ್ಷಾಲೋಮನ ಸಹಿತವಾಗಿ ಉಳಿದವರನ್ನು ನಿರ್ಮೂಲ ಮಾಡಲಾಗಿತ್ತು. ಅಬ್ಷಾಲೋಮನ ತಲೆಯು ಒಂದು ಮರದ ಕೆಳಗಿನ ಕೊಂಬೆಯಲ್ಲಿ ಸಿಕ್ಕಿಕೊಂಡು ತಾನು ಕುಳಿತಿದ್ದ ಕುದುರೆಯು ಓಡಿಹೋಗಿರಲು ಆತನು ನಿಸ್ಸಹಾಯಕನಾಗಿ ಉಳಿದುಕೊಂಡಿರಲು ಅವನು ದಾವೀದನ ಸೇನಾಧಿಪತಿಗಳ ಮುಖ್ಯಸ್ಥನಾದ ಯೋವಾಬನಿಂದ ಸಂಹರಿಸಲ್ಪಟ್ಟಿದ್ದನು.

ಇಲ್ಲಿ ನಮ್ಮ ಈಗಿನ ಪಾಠವು ಆರಂಭವಾಗುವದು. ಮಹನಯೀಮಿನ ಕಾವಲು ಗೋಪುರದ ಗೋಡೆಯ ಹತ್ತಿರ ಅರಸನಾದ ದಾವೀದನು ಯುದ್ಧದ ಸುದ್ದಿಗಾಗಿ ಕಾಯುತ್ತಿದ್ದು, ಗೋಪುರದಲ್ಲಿನ ಕಾವಲುಗಾರನು ಒಬ್ಬ ಸಂದೇಶವಾಹಕನು ಮತ್ತು ಆನಂತರ ಮತ್ತೊಬ್ಬನು ಓಡಿಬರುತ್ತಿರುವದನ್ನು ವರದಿ ಮಾಡಿದ್ದನು. ಮೊದಲನೆಯವನನ್ನು ತನ್ನ ಯಾಜಕ ಮಿತ್ರನ ಮಗನೆಂದು ಗುರುತಿಸಲ್ಪಟ್ಟಿದ್ದು ಅವನು ಆ ಕಾಲದ ಪದ್ಧತಿಯ ಪ್ರಕಾರ ಇದು ಶುಭಸಮಾಚಾರವೆಂದು ಅರ್ಥೈಸಲಾಗಿತ್ತು; ಯಾಕಂದರೆ ಒಬ್ಬ ಒಳ್ಳೆಯ ಮನುಷ್ಯನು ಅವರೊಡನೆ ಕಳುಹಿಸಲ್ಪಟ್ಟಿದ್ದನು. ಈ ಪದ್ಧತಿಯು ಈಗಲೂ ದೇವಜನರ ಮಧ್ಯದಲ್ಲಿ ಚಾಲನೆಯಲ್ಲಿರಬೇಕು; ಅದೇನಂದರೆ ಒಬ್ಬ ಒಳ್ಳೆಯ ಮನುಷ್ಯನು ಯಾವಾಗಲೂ ಒಳ್ಳೆಯ ಸಂದೇಶವನ್ನು ಹೊತ್ತು ತರಲು ಪರಿಶ್ರಮಿಸುವನೆಂಬದು. ಕರ್ತನಿಗೆ ನಿಷ್ಠರಾದವರೆಲ್ಲರ ಬಾಯಿಮಾತುಗಳು ಮತ್ತು ಹೃದಯಾಲೋಚನೆಗಳು ಒಳ್ಳೆಯದಾಗಿರಬೇಕು; ಅದು ಕೇವಲ ಒಳ್ಳೆಯದಾಗಿರಬೇಕು, ಯಾವಾಗಲೂ ಒಳ್ಳೆಯದೇ ಆಗಿರಬೇಕು. ಹೀಗೆ ದೇವರು ಲೌಕೀಕ ಜ್ಞಾನಿಗಳನ್ನಾಗಲೀ ಇಲ್ಲವೇ ಲೌಕೀಕ ರೀತಿಯುಳ್ಳಿನ ಉತ್ತಮರನ್ನಾಗಲೀ ಆದುಕೊಳ್ಳುವದಿಲ್ಲ; ಆದರೆ ಯಾರು ಹೃದಯದಲ್ಲಿ ನಿಷ್ಠೆಯುಳ್ಳವರಾಗಿರುವರೋ ಅಂಥವರನ್ನು ತನಗೆ ಬಾಯನ್ನಾಗಿ ಆದುಕೊಳ್ಳುವನು; ಮಹಾ ದುಃಖವನ್ನುಂಟು–ಮಾಡುವ ಅಶುಭವಾರ್ತೆಯು ದೇವರ ಕಡೆಯದಲ್ಲವೆಂಬುದನ್ನು ಹಾಗು ಅದನ್ನು ಕೊಂಡುತರುವವರು ದೇವರ ಸಂದೇಶವನ್ನು ಹೊತ್ತುತರುವದಿಲ್ಲವೆಂಬುದನ್ನು ಹೆಚ್ಚು ಹೆಚ್ಚಾಗಿ ಗುರುತಿಸಲ್ಪಡಬೇಕು. ಅಲ್ಲದೆ ಅವರು ದೇವರ ಕಡೆಗೆ ಹೃದಯದಲ್ಲಿ ಸೂಕ್ತ ಮನೋಭಾವವನ್ನು ಹಾಗು ಸರಿಯಾದ ಪ್ರೀತಿಯ

ಆತ್ಮವನ್ನು ಹೊಂದಿದ್ದಲ್ಲಿ ಅವರು ಕೆಟ್ಟ ಸಂದೇಶವನ್ನು ತರುವಂಥ ಪ್ರವೃತ್ತಿಯನ್ನು ಹೊಂದಿರುವದಿಲ್ಲ; ಕೆಟ್ಟ ಸಂದೇಶಗಳು ದೈವೀಕ ಗುಣಸ್ವಭಾವಗಳಿಗೆ ಎಂಥಾ ವಿಧದಲ್ಲಿ ಅಪಪ್ರಚಾರ ಮಾಡುವದೆಂದರೆ ಅದನ್ನು ತಮ್ಮ ಮೇಲೆ ಆರೋಪಣೆ ಮಾಡಲ್ಪಟ್ಟಿದ್ದಲ್ಲಿ ಕೇವಲ ನಡತೆಗೆಟ್ಟವರೂ ಸಹ ಅವುಗಳನ್ನು ಪ್ರತಿರೋಧಿಸುವರು.

ಮೊದಲನೇ ಓಟಗಾರನು ಆಗಮಿಸಿದಾಗ ಅವನು ಅರಸನ ಸೈನ್ಯದ ಗೆಲುವನ್ನು ಒಂದು ಸಾಧಾರಣ ರೀತಿಯಲ್ಲಿ ಪ್ರಕಟಿಸಿ ಹೇಳಿದ್ದನು. ಆನಂತರ ಅರಸನು ಸೈನಿಕರು ಹೊರಡುವಾಗ ಅಬ್ಷಾಲೋಮನ ವಿಷಯವಾಗಿ ಅವರು ಅವನನ್ನು ಯಾವುದೇ ಸಂದರ್ಭದಲ್ಲಿಯೂ ಉಳಿಸಬೇಕೆಂದು ಕೇಳಿಕೊಂಡಂತೆಯೇ, "ಯೌವನಸ್ಥನಾದ ಅಬ್ಷಾಲೋಮನು ಸುರಕ್ಷಿತನಾಗಿದ್ದಾನೋ?" ಎಂದು ವಿಚಾರಿಸಿದ್ದನು. ತನ್ನ ತಂದೆಯ ಬಗ್ಗೆ ಅಬ್ಷಾಲೋಮನ ಪುತ್ರಧರ್ಮಹೀನ ನಡತೆಯ ಬಗ್ಗೆ ನಾವು ತಲ್ಲಣಗೊಂಡಂತೆಯೇ ತನ್ನ ತಪ್ಪಿತಸ್ಥ ಮಗನ ಮೇಲಿನ ದಾವೀದನ ವಾತ್ಸಲ್ಯದ ವಿಷಯವಾಗಿಯೂ ನಾವು ಗಾಢವಾಗಿ ಪ್ರಭಾವಿತರಾಗುತ್ತದೇವೆ. ಅಬ್ಷಾಲೋಮನು ಸಿಂಹಾಸನವನ್ನು ಬಯಸಿದ್ದುದು ಮಾತ್ರವಲ್ಲದೆ ಆತನ ಜೀವವನ್ನೂ ತೆಗೆಯ ಬಯಸಿದ್ದನು. ಈ ಎರಡು ಗುಣಸ್ವಭಾವಗಳ ನಡುವಿನ ವ್ಯತ್ಯಾಸವೇನಾಗಿತ್ತು? ಯಾವುದು ಹೆಚ್ಚು ಘನತೆಯುಳ್ಳದ್ದು, ಹೆಚ್ಚು ಗೌರವವಾದದ್ದು, ಹೆಚ್ಚು ಪ್ರಸಂಶನೀಯವಾಗಿತ್ತು? ಈ ವಿಷಯದಲ್ಲಿಯಾದರೋ ಯಾವುದೇ ವಿಧದಿಂದಲೂ ಕೇವಲ ಒಂದು ಉತ್ತರವಿರಲು ಸಾಧ್ಯವಿದ್ದು, ದಾವೀದನ ವೈರಿಗಳೂ ಸಹ ದಾವೀದನ ಜೀವಾತ್ಮದ ಭವ್ಯತೆಯ ಬಗ್ಗೆ ಪ್ರಸಂಶಿತರಾಗದೆ ಓದಲು ಸಾಧ್ಯವಿರುವದಿಲ್ಲ. ಆತನು ತನ್ನ ಸಿಂಹಾಸನ ಮತ್ತು ಹೌದು ತನ್ನ ಸ್ವಂತ ಜೀವಕ್ಕಿಂತಲೂ ಅಬ್ಷಾಲೋಮನ ಬಗ್ಗೆ ಹೆಚ್ಚು ಕಾಳಜಿಯುಳ್ಳವ – ನಾಗಿದ್ದದ್ದು ಸ್ಪಷ್ಟವಾಗಿತ್ತು. ಈ ಎರಡು ಗುಣಸ್ವಭಾವಗಳ ನಡುವಿನ ವ್ಯತ್ಯಾಸವನ್ನು ಕೇವಲ ಒಂದು ವಿಧದಲ್ಲಿ ವಿವರಿಸಿ ಹೇಳಬಹುದು, ಅದೇನಂದರೆ ದಾವೀದನು ದೇವರಲ್ಲಿದ್ದಂಥಾ ಮನಸ್ಸನ್ನೇ ಹೊಂದಿದವನಾಗಿದ್ದು, ಕಠಿಣ ಪರೀಕ್ಷಾನುಭವಗಳ ಮೂಲಕ ಸಾಗಿಬಂದವನಾಗಿ, ಉಪಯುಕ್ತವಾದ ಪಾಠಗಳನ್ನು ಕಲಿತುಕೊಂಡಿರಲು ಆತನಲ್ಲಿ ಪ್ರೀತಿಯ ಮನೋಭಾವವು ಗಣನೀಯವಾಗಿ ವೃದ್ಧಿಯಾಗಿತ್ತು. ಪ್ರತಿಯಾಗಿ ಅಬ್ಷಾಲೋಮನು ಸ್ವಾರ್ಥಭಾವ ಹಾಗು ಮಹತ್ವಾಕಾಂಕ್ಷೆಗಳಿಗೆ ಒಂದು ನಿದರ್ಶನವಾಗಿದ್ದು, ಇವುಗಳು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳ ಸಲುವಾಗಿ ಯಾವ ಕೀಳುಮಟ್ಟಕ್ಕಾದರೂ ಇಳಿಯುವಂತೆ ಆತನನ್ನು ನಡೆಸಿದ್ದವು. ದಾವೀದನು ಕ್ರಿಸ್ತನನ್ನು ಶಿರಸ್ಸನ್ನಾಗಿ ಹೊಂದಿರುವ ಮಕ್ಕಳ ಮನೆತನದವನಲ್ಲದಿದ್ದರೂ, ಮೋಶೆಯು ಶಿರಸ್ಸಾಗಿರುವ ಸೇವಕರ ಮನೆತನದವರಲ್ಲಿ ಒಬ್ಬ ಘನತೆಯುಳ್ಳ ಸದಸ್ಯನಾಗಿದ್ದನು. ಇಬ್ರೀಯ 3:5–6.

ಕೆಲವರು ಅಹಿಮಾಚನ ಉತ್ತರವು ನಿಜವಲ್ಲವೆಂದು ಎಣಿಸಿದವರಾಗಿ ಅದು ಅರಸನ ಭಾವನೆಗಳಿಗೆ ಹಾನಿಗೊಳಿಸ ಬಾರದೆಂಬ ಉದ್ದೇಶದಿಂದ ವಾಸ್ತವಾಂಶವನ್ನು ತಿಳಿಗೊಳಿಸುವ ಸಲುವಾಗಿತ್ತೆಂದು ಹೇಳುವರು; ಆದರೆ ನಾವು ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ದಾಖಲೆಗಳ ಅನುಸಾರ ಯವನಸ್ಥನು ನಿಜವನ್ನು ಹೇಳಿದ್ದನೆಂಬ ಅಭಿಪ್ರಾಯವುಳ್ಳವರಾಗಿದ್ದೇವೆ. ಅಲ್ಲದೆ ನಾವು ನಂಬಿರುವದೇನಂದರೆ ಮನುಕುಲದವರೆಲ್ಲರೂ ಹೀಗೆಯೇ ಮುಖ್ಯವಾದ ಪ್ರಶ್ನೆಗಳಿಗೆ ಉತ್ತರಿಸುವಾಗ "ತಿಳಿದಿರುವದು" ಎಂಬ ಶಬ್ದದ ನಿಖರವಾದ ಅರ್ಥಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಲ್ಲಿ ಇದು ಪ್ರತಿಯೊಬ್ಬನಿಗೂ ಬಹು ಉತ್ತಮವಾಗಿರುವದೆಂಬದು. ಆ ಉತ್ತರವೇನಾಗಿತ್ತೆಂದರೆ ಆತನು ಒಂದು ಗದ್ದಲವನ್ನು ಕಂಡಿದ್ದು ಯುದ್ಧವು ಮುಗಿದಿರುವದೆಂದೂ, ವಿಜಯವು ಅರಸನ ಪರವಾಗಿರುವದೆಂದೂ ತಿಳಿದುಕೊಂಡಿದ್ದು, ಅದಕ್ಕಿಂತಲೂ ಹೆಚ್ಚೇನು ಆತನಿಗೆ ತಿಳಿದಿರಲಿಲ್ಲ. ಯೋವಾಬನು ರಾಜಪುತ್ರನ ಬಗ್ಗೆ ಏನನ್ನೋ ಹೇಳುತ್ತಿದ್ದುದನ್ನು ಕೇಳಿದ್ದು ನಿಜವಾಗಿತ್ತು, ಆದರೆ ಅದು ಇತರರಿಂದ ಕೇಳಿದ ಮಾತಾಗಿದ್ದು, ತಾನು ತಿಳಿದುಕೊಂಡಿದ್ದ ಸಂಗತಿಯಾಗಿರಲಿಲ್ಲ, ಅಲ್ಲದೆ ಅಬ್ಷಾಲೋಮನ ಬಗ್ಗೆ ವಿಚಾರಿಸಲ್ಪಟ್ಟಾಗ ಅದಕ್ಕೆ ಜವಾಬು ತಿಳಿದಿಲ್ಲವೆಂದು ಆ ಯೌವನಸ್ಥನು ಅರಸನಿಗೆ ಸರಿಯಾಗಿಯೇ ಉತ್ತರಿಸಿದ್ದನು. ದೇವಜನರು ತಿಳುವಳಿಕೆ ಮತ್ತು ಅನ್ವಿಸಿಕೆ ಹಾಗು ಹೇಳಿಕೆಯ ಮಾತು ಮುಂತಾದವುಗಳ ನಡುವಿನ ವ್ಯತ್ಯಾಸವನ್ನು ಎಲ್ಲರಿಗಿಂತಲೂ ಹೆಚ್ಚು ನಿರ್ದಿಷ್ಟವಾಗಿ ಅರಿತುಕೊಂಡಿರಬೇಕು.

ಎರಡನೆಯ ಓಟಗಾರನು ಕೂಷಿ ಎಂಬ ಹೆಸರುಳ್ಳವನಾಗಿದ್ದು, ಅವನು ಅಕ್ಷರಶಃ ಕೂಷ್ ದೇಶದನು ಅಂದರೆ ಕರಿವರ್ಣದವನಾಗಿದ್ದು ಅರಸನ ಮನೆತನದ ಸೇವಕನಾಗಿ ಯುದ್ಧ ನಿರತನಾಗಿದ್ದ ಸಂಭವವಿರುವದು. ಆತನು ಶೀಘ್ರವಾಗಿ ಸಂಪೂರ್ಣ ವೃತ್ತಾಂತವನ್ನು ಹೇಳಿದ್ದು, ಅಬ್ಷಾಲೋಮನ ಮರಣವನ್ನು ಹೀಗೆ ಕೇಳಿದ ನಂತರವೇ ಅರಸನು ಬಹು ಘೋರ ವ್ಯಥೆಯುಳ್ಳವನಾಗಿ ಇತಿಹಾಸದ ಪುಟಗಳಲ್ಲಿ ಅತಿ ಚಿಂತಾಜನಕವಾದ ಈ ಮುಂದಿನ ಮಾತುಗಳನ್ನು ಉಚ್ಚರಿಸಿದ್ದನು: "ನನ್ನ ಮಗನೇ, ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ, ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೆಯದಾಗಿತ್ತು. ಅಬ್ಷಾಲೋಮನೇ ನನ್ನ ಮಗನೇ, ಮಗನೇ." (2 ಸಮುವೇಲ 18;33)

ವಿಷಾದನೀಯ ಸಂಗತಿಯೆಂದರೆ, ತನ್ನ ಮಗನಿಗಾಗಿರುವ ಅರಸನ ಪ್ರೀತಿಯು ಸೂಕ್ತ ಸಮಯದಲ್ಲಿ ಹೆಚ್ಚು ಕಾರ್ಯರೂಪದಲ್ಲಿ ವ್ಯಕ್ತವಾಗಿರಲಿಲ್ಲ. ಆತನು ವಾಸ್ತವದಲ್ಲಿ ಬುದ್ಧಿವಂತನಾದ ತಂದೆಯಾಗಿರುವದಕ್ಕೆ ಬದಲಾಗಿ ಇಚ್ಛೆ ಪೂರೈಸಿಕೊಳ್ಳುವಂಥವನಾಗಿದ್ದನು. ಯೌವನಸ್ಥನ ಸಹಜವಾದ ಪ್ರತಿಭೆಗಳ ಹೊಳಪು ಹಾಗು ಥಳಕುಗಳು ಜನರನ್ನು ರಂಜಿಸಿದ್ದುದು ಮಾತ್ರವಲ್ಲದೆ ಆತನ ತಂದೆಯನ್ನೂ ಮೋಹಗೊಳಿಸಿತ್ತು; ಹೀಗಾಗಿ ಆತನು ತನಗೆ ಬೇಕಾದುದೆಲ್ಲವನ್ನು ಕಾರ್ಯತಃ ಪಡಕೊಂಡಿದ್ದು, ಅರಸನು ತಾನು ಕಲಿತುಕೊಂಡಿದ್ದ ಅಮೂಲ್ಯವಾದ ಪಾಠಗಳನ್ನು ತನ್ನ ಮಗನಿಗೆ ಅನ್ವಯಿಸಲು ವಿಫಲನಾಗಿದ್ದನು. ಅವು ಯಾವ ಉದ್ದೇಶವುಳ್ಳದ್ದಾಗಿತ್ತೆಂದರೆ, ಕರ್ತನ ಭಯವೇ ಜ್ಞಾನಕ್ಕೆ ಮೂಲವೆಂದೂ, ಹಾಗು ನಿಜವಾದ ಸಂತೋಷವು ಮತ್ತು ನಿಜವಾದ ಏಳಿಗೆಯು ಕೇವಲ ಈ ಮಾರ್ಗದಲ್ಲಿ ಮಾತ್ರವೇ ಕಂಡುಕೊಳ್ಳತಕ್ಕದ್ದೆಂದು ಜ್ಞಾನವು ಸೂಚಿಸುವದೆನ್ನುವದೇ. ತನ್ನ ಮಗನ ಕಡೆಗಿರುವ ಆತನ ವಿವೇಕರಹಿತವಾದ ಪ್ರೀತಿಯು ತನ್ನ ಮಗನ ವಿಷಯವಾಗಿ ಆತನು ತನ್ನ ಯೌವ್ವನದ ಇಚ್ಛೆಗಳನ್ನು ಈಡೇರಿಸಿಕೊಳ್ಳಲು ಬಿಟ್ಟುಬಿಡಬೇಕೆಂದೂ ಅದಕ್ಕೆ

ಅಡ್ಡಿಪಡಿಸಬಾರದೆಂಬುದಾಗಿದ್ದು, ಈಗ ಅದರ ಫಲವನ್ನು ಕೊಯ್ಯುವಾಗ ಸಾಕ್ಷಿಯಾಗಿ ಅದನ್ನು ಕಂಡಾಗ ಆತನ ಹೃದಯವು ದುಃಖದಿಂದ ಪರಿತಪಿಸುವಂತಾಗಿತ್ತು. ಹೀಗೆಯೇ ಇದು ಅನೇಕ ತಂದೆಗಳು ಹಾಗು ತಾಯಿಗಳ ಸಂಗತಿಯಾಗಿದ್ದು ಅವರು ನಿಜವಾಗಿಯೂ ಕರ್ತನವರಾಗಿದ್ದರೂ ಕರ್ತನು ಕಷ್ಟಾನುಭವಗಳ ಮೂಲಕವಾಗಿ ತಮಗೆ ಕಲಿಸಿದ ಪಾಠವನ್ನು ತಮ್ಮ ಮಕ್ಕಳಿಗೆ ಅನ್ವಯಮಾಡಲು ವಿಫಲರಾಗಿರುವರು. ಕ್ರೈಸ್ತ ತಂದೆತಾಯಿಗಳಿಗೆ ಇಂಥಾ ವಿವೇಕಹೀನವಾದ ಪ್ರೀತಿಯ ಬಗ್ಗೆ ವ್ಯಾಖ್ಯಾನಿಸಿ ಹೇಳಿ ನೀತಿಯು ವಿಷಯವಾಗಿ ತೋರಿಸಿಕೊಂಡುವಂಥ ಅಗತ್ಯವಿರುವದಿಲ್ಲ. ಅದೇ ಸ್ವತಃ ತೋರಿಸಿಕೊಡುವದು, ಅಲ್ಲದೆ ಜ್ಞಾನವುಳ್ಳ ಮಗನಾದ ಸೊಲೊಮೋನನು ನಮ್ಮ ಪಾಠದ ಸ್ವರ್ಣಖಚಿತವಾದ ಪಠ್ಯಭಾಗವನ್ನು ಹೇಳುವಾಗ ಇದನ್ನು ಸೂಕ್ಷ್ಮವಾಗಿ ಹೀಗೆ ವ್ಯಕ್ತಪಡಿಸಿರುವನು: "ಜ್ಞಾನಹೀನನಾದ ಮಗನು ತಂದೆಗೆ ಕಿರಿಕಿರಿ" [ಜ್ಞಾನೋಕ್ತಿ 17:25] ಮತ್ತು ಹೀಗೆ ಗಮನಿಸಿ ಹೇಳಿರುವನು: "ಬೆತ್ತ ಹಿಡಿಯದ ಪಿತ ಪುತ್ರನಿಗೆ ಶತ್ರು." ಹೇಗೂ ಪ್ರಾಯೋಗಿಕ ದೃಷ್ಟಿಕೋನದಿಂದ ಮೇಲ್ನೋಟಕ್ಕೆ ಗಮನಿಸುವವನಿಗೆ ತೋರುವದೇನಂದರೆ ಜ್ಞಾನದ ಸಾರಾಂಶವು ಆತನ ಈ ಮುಂದಿನ ಮಾತುಗಳಲ್ಲಿ ಒಳಗೊಂಡಿರುತ್ತದೆಂಬದು: "ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು." [ಜ್ಞಾನೋಕ್ತಿ 22:6] ತಮ್ಮ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಅಥವಾ ತಪ್ಪಾದ ಮಾರ್ಗದಲ್ಲಿ ತರಬೇತು ಮಾಡುವ ತಂದೆತಾಯಿಗಳು ತಮಗಾಗಿ ಭವಿಷ್ಯದಲ್ಲಿ ಸಂತೋಷವನ್ನಾಗಲಿ ಇಲ್ಲವೇ ದುಃಖವನ್ನಾಗಲಿ ಅಸ್ತಿವಾರವಾಗಿ ಹಾಕುತ್ತಿರುವವೆಂಬ ಅಂಶವನ್ನು ಪೂರ್ಣವಾಗಿ ಮನವರಿಕೆಮಾಡಿಕೊಂಡಿರದಂತೆ ತೋರುತ್ತದೆ.

"ಯೌವನಸ್ಥನು ಸುರಕ್ಷಿತನಾಗಿರುವನೋ" ಎಂದು ತನ್ನ ಮಗನ ಬಗ್ಗೆ ದಾವೀದನು ಮಾಡಿದ ವಿಚಾರಣೆಯು ತಮ್ಮ ಮಗನ ಬಗ್ಗೆ ಹಾಗು ತಮ್ಮ ಮಗಳ ಬಗ್ಗೆ ಪ್ರತಿಯೊಬ್ಬ ತಂದೆಯ ಮತ್ತು ಪ್ರತಿಯೊಂದು ತಾಯಿಯ ವಿಚಾರಣೆಯೂ ಆಗಿರಬೇಕು; ಆದರೆ ಅವರು ದಾವೀದನು ಮಾಡಿದಂತೆ ಮಾಡದಿರಲಿ ಅಂದರೆ ಪಾಪವು ಚಿಗುರಿ ಮೊಗ್ಗು ಒಡೆದು ಕೆಟ್ಟ ಫಲವನ್ನು ಮಾಗಿಸುವವರೆಗೂ ಕಾದುಕೊಳ್ಳದಿರಲಿ: ಅವರು ತಮ್ಮ ಸಂತಾನದ ಬಗ್ಗೆ ಅದರ ಬಾಲ್ಯಾವಸ್ಥೆಯ ಆದಿಯಲ್ಲೇ ಇದು ತಮ್ಮ ಕರ್ತವ್ಯವೆಂದು ಗ್ರಹಿಸಿಕೊಳ್ಳಲು ಆರಂಭಿಸಲಿ. ತಮ್ಮ ಮಕ್ಕಳ ಕಡೆಗಿನ ತಮ್ಮ ಕರ್ತವ್ಯವು ದೇವರ ಕಡೆಗಿನ ತಮ್ಮ ಕರ್ತವ್ಯದ ನಂತರದಲ್ಲಿ ಬರುವದು, ನಿಜವಾಗಿಯೂ ತಂದೆತಾಯಿಗಳ ಕರ್ತವ್ಯವು ಭಕ್ತರ ಭೂಸಂಬಂಧದ ಹೊಣೆಗಾರಿಕೆಗಳಲ್ಲಿ ಮೊದಲನೇ ಸ್ಥಾನವನ್ನು ಪಡೆದಿರುವದೆಂದು ದೇವರು ಸೂಚಿಸಿರುವನು.

*****

ರಾಜದ್ರೋಹಕ್ಕೆ ಪ್ರತಿಯಾದ ಪ್ರೀತಿ

ರೀಪ್ರಿಂಟ್ಸ್ ಪುಟ 4277

2 ಸಮುವೇಲ 18:24–33

"ಜ್ಞಾನಹೀನನಾದ ಮಗನು ತಂದೆಗೆ ಕಿರಿಕಿರಿ" [ಜ್ಞಾನೋಕ್ತಿ 17:25]

ಅರಸನಾದ ದಾವೀದನು ಅಬ್ಷಾಲೋಮನ ಮೋಸಕಪಟದ ಬಗ್ಗೆ ಪೂರ್ಣವಾಗಿ ಸಂಶಯವಿಲ್ಲದವನಾಗಿದ್ದು ಅಬ್ಷಾಲೋಮನು ಇಸ್ರಾಯೇಲ್ಯರ ಅರಸನೆಂದು ಘೋಷಿಸಿ ಕೊಂಡು ಹೆಬ್ರೋನ್ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡದ್ದನ್ನು ತೀರಾ ಆಶ್ಚರ್ಯವಾಗಿ ತೆಗೆದುಕೊಂಡಿದ್ದನು. "ಶುದ್ಧರಿಗೆ ಎಲ್ಲವೂ ಶುದ್ಧವೇ" ಎಂದು ಅಪೋಸ್ತಲನು ಬರೆಯುತ್ತಾನೆ, ಮತ್ತು ದಾವೀದನ ಹೃದಯವು ತನ್ನ ಮಗನ ಕಡೆಗೆ ನಿಷ್ಕಪಟವುಳ್ಳದ್ದಾಗಿದ್ದು ತನಗೆ ವಿರೋಧವಾಗಿ ನಡೆಯುತ್ತಿದ್ದ ಇಂಥಾ ಮೋಸ ನಂಬಿಕೆದ್ರೋಹ ಬಗ್ಗೆ ಊಹಿಸಿಕೊಳ್ಳುವದು ಹಾಗು ಯುದ್ಧ ಪ್ರಾರಂಭವಾಗುವದಕ್ಕೆ ಎರಡು ವರುಷಗಳ ಹಿಂದಿನಿಂದ ಮಾಡುತ್ತಿದ್ದ ಕುಯುಕ್ತಿ ಮತ್ತು ಗುಟ್ಟಾಗಿ ಕಾರ್ಯವೆಸಗುತ್ತಿದ್ದ ಸಂಗತಿಗಳು ಅತನ ಆಲೋಚನೆಗೆ ದೂರವಾಗಿದ್ದ ವಿಷಯವಾಗಿತ್ತು.

ಅಬ್ಷಾಲೋಮನು ತನ್ನ ತಂದೆಯನ್ನು ಬಂಧಿಸಿ ಆತನ ರಾಜ್ಯವನ್ನು ಕಿತ್ತೆಸೆಯುವ ಉದ್ದೇಶವುಳ್ಳವನಾಗಿ ಯೆರೂಸಲೇಮಿನ ಕಡೆಗೆ ಇಪ್ಪತ್ತು ಮೈಲು ದೂರದ ಪ್ರಯಾಣವನ್ನು ಆರಂಭಿಸಿರುವದನ್ನು ಕೇಳಿದಾಗ ದಾವೀದನು ತ್ವರಿತವಾಗಿ ಹಿಂದೆಸರಿದವನಾಗಿದ್ದು ಆತನೊಡನೆ ತನ್ನ 600 ಮಂದಿ ಅಂಗರಕ್ಷಕರು ಹಾಗು ಹೋಲಿಸಿದ್ದಲ್ಲಿ ಆತನ ಮೇಲೆ ಅನುಕಂಪವನ್ನು ತೋರಿದ ಸ್ವಲ್ಪ ಸಂಖ್ಯೆಯ ಜನರು ಅತನ ಭವಿಷ್ಯವನ್ನು ಹಂಚಿಕೊಳ್ಳಲು ಹೋಗಿದ್ದರು. ನಿಸ್ಸಂದೇಹ ವಾಗಿಯೂ ಈ ಹಿಂದೆಸರಿಯುವ ತೀರ್ಮಾನಕ್ಕೆ ಬರುವಂತಾಗಲು ಹಲವಾದು ದ್ಯೇಯೋದ್ದೇಶಗಳು ಒಟ್ಟಾಗಿ ಆತನನ್ನು ನಡೆಸಿದ್ದವು. (1) ಆತನು ಅಂತರ್ಯುದ್ಧದ ಭೀಕರತೆಯನ್ನು ವಿಶೇಷವಾಗಿ ತನ್ನ ರಾಜಧಾನಿಯಲ್ಲಿ ಅದನ್ನು ತಪ್ಪಿಸಲು ಬಯಸಿದ್ದನು. (2) ತನಗೆ ವಿರುದ್ಧವಾಗಿರುವ ವೈರಿಯು ಸ್ವತಃ ತನ್ನ ಮಗನೇ ಆಗಿದ್ದುದಕ್ಕಾಗಿ ಆತನು ವ್ಯಥೆಯಿಂದ ತುಂಬಿದವನಾಗಿದ್ದನು. (3) ಅಬ್ಷಾಲೋಮನು ಜನರ ಹೃದಯವನ್ನು ಕಸಿದುಕೊಂಡಿದ್ದು ಮತ್ತು ತನ್ನ ಹಿಂದಿನ ಸ್ನೇಹಿತರು ತನ್ನ ಮುಜುಗರದ ಬಗ್ಗೆ ತನ್ನನ್ನು ಗೇಲಿಮಾಡಿ ತನಗೆ ಶತ್ರುಗಳಾಗಿರುವದಲ್ಲದೆ ಅಬ್ಷಾಲೋಮನು ಮುಂಬರುತ್ತಿರುವದನ್ನು ಹಾಗು ಆತನ ರಾಜ್ಯವು

ಸ್ಥಾಪಿತವಾಗುತ್ತಿರುವದನ್ನು ಸಂತೋಷದೊಡನೆ ನಿರೀಕ್ಷಿಸುತ್ತಿರುವ ಸಂಬಂಧವಾಗಿ ಆತನ ಸುತ್ತಲು ಸಾಕ್ಷ್ಯಾಧಾರಗಳು ಹೇರಳವಾಗಿದ್ದವು. "ದೇವರಿಲ್ಲವೆಂಬದಾಗಿ ಆತನು ಸದಾ ಯೋಚಿಸುತ್ತಿರುವನು." [ಅಂದರೆ ಆತನ ಆಲೋಚನೆಗಳೆಲ್ಲವುಗಳಲ್ಲಿ ದೇವರು ಇರಲಿಲ್ಲ {ಅಥವಾ ದೇವರಿಗೆ ಸ್ಥಾನವಿರಲಿಲ್ಲ}] ಎಂದು ಕೀರ್ತನೆಗಾರನು ಪ್ರೇತರಿತನಾಗಿ ನುಡಿದಿರುವನು. (ಕೀರ್ತನೆ 10:4). ಹೀಗೆ ಈ ವಿಷಯದಲ್ಲಿ ದೇವರ ಚಿತ್ತವೇನೆಂಬುದರ ಬಗ್ಗೆ ಆಲೋಚಿಸಲು ಜನರು ವಿಫಲರಾಗಿರುವದು ಬಹು ಸ್ಪಷ್ಟವಾಗಿದ್ದು, ಇದು ಅವರ ದೊಡ್ಡ ತಪ್ಪಾಗಿತ್ತು.

ಇದು ಅರಸನಾದ ದಾವೀದನ ಘಟನಾವಳಿಯ ಜೀವಿತದಲ್ಲಿ ಅತಿ ಕಾರ್ಗತ್ತಲಿನ ದಿನವಾಗಿದ್ದಿರಬೇಕು. ತನ್ನ ಅಂಗರಕ್ಷಕರ ಜೊತೆಗೂಡಿ ತನ್ನ ಕುಟುಂಬದವರಿಂದ ಹಾಗು ತಾನು ಸ್ಥಾಪಿಸಿದ್ದ ತನ್ನ ರಾಜ್ಯದ ರಾಜಧಾನಿಯಿಂದ ಮತ್ತು ತನ್ನ ಜನರ ಹಿತಾಸಕ್ತಿಯ ಸಲುವಾಗಿ ದೇವಾಭಿಷೇಕದ ಪ್ರಕಾರ ತನ್ನ ಜೀವಿತದ ಅತ್ಯುತ್ತಮ ವರುಷಗಳನ್ನು ಅರ್ಪಿಸಲಾಗಿದ್ದಂಥ ಜನರ ಕಡೆಯಿಂದ ಆತನು ಓಡಿಹೋಗಿದ್ದನು; ಆತನೊಡನೆ ಇದ್ದ ಅಂಗರಕ್ಷಕರು ಬಹುತೇಕ ಅನ್ಯದೇಶಸ್ತರಾಗಿದ್ದು, ತನ್ನ ಸ್ವಂತ ನಾಡಿನವರು ಹೋಲಿಸಿದ್ದಲ್ಲಿ ಸ್ವಲ್ಪ ಮಂದಿಯಿದ್ದರು. ಕೆಲವು ವರುಷಗಳ ಹಿಂದೆ ಫಿಲಿಷ್ಟಿಯರ ಕೈಯಿಂದ ಬಿಡಿಸಿ ಅವರಿಗೆ ವಿಮೋಚಕನಾಗಿದ್ದ ತನ್ನ ಬಗ್ಗೆ–"ಸೌಲನು ಸಾವಿರಗಟ್ಟಳೆ ಕೊಂದನು; ದಾವೀದನು ಹತ್ತುಸಾವಿರಗಟ್ಟಳೆ ಕೊಂದನು" ಎಂದು ಸ್ತುತಿಸಿ ಹಾಡಿದ್ದಂಥ ತನ್ನ ಜನರ ಸಮ್ಮುಖದಿಂದ ಓಡಿಹೋಗಿದ್ದನು. ನಿಸ್ಸಾಹಯಕನಾದ ಇಳಿ ವಯಸ್ಸಿನವನು! ದಾರಿಹೋಕರಾದ ಜನಜಂಗುಳಿಯು ಆತನನ್ನು ಶಪಿಸಿ ಆತನ ಮೇಲೆ ಕಲ್ಲುಗಳನ್ನು ಎಸೆದು ಧೂಳನ್ನು ತೂರಿದ್ದರು. ಅವನನ್ನು ಹಿಂಸಿಸಿದವರಲ್ಲಿ ಸೌಲನ ಮಕ್ಕಳಲ್ಲಿ ಒಬ್ಬನಾಗಿದ್ದು ದಾವೀದನು ಅವನನ್ನು ಉಳಿಸಿ ಅವನಿಗೆ ವಿಶೇಷ ಕರುಣೆಯನ್ನು ತೋರಿ ಆತನ ಸಂರಕ್ಷಣೆ ಹಾಗು ನೆಮ್ಮದಿಯ ಸಲುವಾಗಿ ಏರ್ಪಾಟುಮಾಡಿದ್ದನು. ಇದು ಖಚಿತವಾಗಿಯೂ ದಾವೀದನ ನಂಬಿಕೆ ತಾಳ್ಮೆ ಹಾಗು ಪ್ರೀತಿಯ ಬಗ್ಗೆ ಪರೀಕ್ಷಿಸುವ ಒಂದು ಸಂದರ್ಭವಾಗಿತ್ತು. ತನ್ನ ಹಿಂದಿನ ಜೀವಿತದಲ್ಲಿ [ಇಂಥವುಗಳ ವಿಷಯವಾಗಿ] ಆತನು ಹೇಗೆ ನಡಕೊಳ್ಳುತ್ತಿದ್ದನೆಂದು ನಮಗೆ ಹೇಳಲು ಸಾಧ್ಯವಿಲ್ಲ. ಪ್ರತಿಯೊಂದು ಸ್ಥಳದಲ್ಲಿನ ಆತನ ನಡವಳಿಕೆಯ ಸಂಬಂಧವಾದ ಚರಿತ್ರೆಯು ತೋರಿಸಿಕೊಡುವದೇನಂದರೆ ಆತನು ಒಬ್ಬ ಸ್ತಿಮಿತ ಮನಸುಳ್ಳ ಮನುಷ್ಯನಾಗಿದ್ದಲ್ಲದೆ, ಮುಖ್ಯವಾಗಿ ಆತನಿಗೆ ರಕ್ಷಣಕರವಾಗಿದ್ದ ಸಂಗತಿಯೆಂದರೆ ಅದು ಆತನು ಒಂದು ಸ್ವಸ್ಥತೆಯ ಮನೋಭಾವವನ್ನು, ದೇವರಿಗೆ ಪ್ರತಿಷ್ಠಿತವಾದ ಆತ್ಮವನ್ನು, ನಂಬಿಕೆಯ, ಬರವಸವುಳ್ಳ, ಪ್ರೀತಿಪೂರ್ವಕವಾದ ಭಕ್ತಿಯುಳ್ಳ ಆತ್ಮವನ್ನು ಪಡದವನಾಗಿದ್ದಂಥದ್ದೇ. ಜನಸಮೂಹವನ್ನು ಬೆದರಿಸುವದಕ್ಕೆ ಅಥವಾ ನಿಂದೆಗೆ ನಿಂದೆಯನ್ನು ಮಾಡುವದಕ್ಕೆ ಇಲ್ಲವೇ ಯಾವುದೇ ವಿಧದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳುವದಕ್ಕೆ ಬದಲಾಗಿ ಅರಸನಾದ ದಾವೀದನು ತನ್ನ ಅಂಗರಕ್ಷಕರಿಗೆ ತನಗೆ ವಿರುದ್ಧವಾಗಿ ಕೆಟ್ಟದ್ದನ್ನು ನುಡಿಯುತ್ತಿರುವ, ದೂಷಿಸುತ್ತಿರುವ, ಕಲ್ಲು ತೂರುತ್ತಿರುವ ಜನರಿಗೆ ಯಾವ ಹಾನಿಯನ್ನೂ ಮಾಡಬಾರದೆಂದು ಆಜ್ಞಾಪಿಸಿದ್ದನು. "ತಂದೆಯು ನನಗೆ ಕೊಟ್ಟ ಪಾತ್ರೆಯಲ್ಲಿ ನಾನು ಕುಡಿಯಬಾರದೋ?" ಎಂಬುದು ನಮ್ಮ ಒಡೆಯನ ಸಾವಿನ ಗಳಿಗೆಯ ಮಾತಾಗಿತ್ತು (ಯೋಹಾನ 18:11); ಈ ಮನೋಭಾವವು ಅರಸನಾದ ದಾವೀದನಲ್ಲಿ ನಿದರ್ಶಿತವಾಗಿದ್ದುದನ್ನು ನಮಗೆ ಕಾಣಲು ಸಾಧ್ಯ; ಈತನು ನಮ್ಮ ಒಡೆಯನಿಗೆ ಕೆಲವು ವಿಧದಲ್ಲಿ ಛಾಯಾರೂಪವಾಗಿರುವನು.

ನಾಲ್ಕನೇ ಕೀರ್ತನೆ ಹಾಗು ಮೂರನೇ ಕೀರ್ತನೆಯ ಕೆಲವು ಭಾಗಗಳು ದಾವೀದನು ದೇಶಭ್ರಷ್ಟನಾಗಿ ರಾಜಧಾನಿಯಿಂದ ಹೊರಗೆ ಅಲೆದಾಡಿದ್ದಾಗ ಆತನಿಗಾದ ಅನುಭವಗಳ ದೃಷ್ಟಿಯಿಂದ ಬರೆಯಲಾಗಿರುವದೆಂದು ಭಾವಿಸಲಾಗಿರುವದು. ಡೀನ್ ಸ್ಟ್ಯಾನ್ಲಿ ಎಂಬುವವರು ಹೀಗೆ ಹೇಳಿರುವರು: "ನಾಲ್ಕನೆಯ ಕೀರ್ತನೆಯಲ್ಲಿ ಮೊದಲನೇ ರಾತ್ರಿ ನಿದ್ರೆಗೆ ಹೋಗುವ ಸಮಯವನ್ನು ಹೀಗೆಯೇ ಮೂರನೆಯ ಕೀರ್ತನೆಯಲ್ಲಿ ಆ ಇಪ್ಪತ್ತು ನಾಲ್ಕು ಗಂಟೆಗಳು ಕಡೆಯದಾಗಿ ಮುಕ್ತಾಯವಾಗುವ ಸಮಯದಲ್ಲಿ ದಾವೀದನು ಕೃತಜ್ಞತೆಯನ್ನು ವ್ಯಕ್ತಪಡಿಸಿದ ಸಂದರ್ಭವನ್ನು ಬಹು ಔಚಿತ್ಯದಿಂದ ಭಾವಿಸಲಾಗಿರುವದು." ಅರಸನ ಗುರಿಯು ಯೊರ್ದಾನಿನ ಪೂರ್ವದಲ್ಲಿರುವ ಕೋಟೆಯುಳ್ಳ ಪಟ್ಟಣವಾದ ಮಹನಯೀಮ್ ಆಗಿತ್ತು; ಆದರೆ ಸಣ್ಣ ಸೇನೆಯು ಯೊರ್ದಾನಿನ ಪಶ್ಚಿಮ ಭಾಗದಲ್ಲಿ ಆ ರಾತ್ರಿ ಪಾಳಯ ಮಾಡಿಕೊಂಡಿತ್ತು.

ಹೃದಯಾಹೀನನಾದ ಅಬ್ಷಾಲೋಮನು

ಹೆಬ್ರೋನಿನಲ್ಲಿ ಅಬ್ಷಾಲೋಮನ ಸೈನ್ಯವು 200 ಮಂದಿಯೊಡನೆ ಆರಂಭವಾಗಿ ಶೀಘ್ರವಾಗಿ ಹೆಚ್ಚಿಗೆಯಾಗಿದ್ದು, ಜನಸಮೂಹವು ಆತನ ರಾಜದ್ರೋಹದಲ್ಲಿ ಪಾಲುತೆಗೆದುಕೊಳ್ಳಲು ಒಟ್ಟಾಗಿ ಎದ್ದದ್ದು ಸ್ಪಷ್ಟವಾಗಿತ್ತು. ಮಾನವಕುಲದ ಬಲಹೀನತೆಗೆ ಅಯ್ಯೋ. ಈ ದೃಶ್ಯವು ನಮ್ಮ ಕರ್ತನ ಅನುಭವವನ್ನು ನೆನಪಿಸುತ್ತದೆ; ಆತನು ಜಯೋತ್ಸವದೊಡನೆ ಯೆರೂಸಲೇಮನ್ನು ಪ್ರವೇಶಿಸಲು ಜನಸಮೂಹವು ದಾವೀದ ಕುಮಾರನಿಗೆ ಜಯವೆಂದು ಘೋಷಿಸಿದ್ದು, ಐದು ದಿನಗಳ ನಂತರ ಅವನು ನಮಗೆ ದೂರವಾಗಿರಲಿ, ಅವನನ್ನು ಶಿಲುಬೆಗೆ ಹಾಕಿಸು, ಬರಬ್ಬನನ್ನು ಬಿಟ್ಟುಕೊಡು ಎಂದು ಕೂಗಿದ್ದರು. ಈ ಎರಡು ಸಂಗತಿಗಳಲ್ಲಿಯೂ ಅವರು ಯೆಹೂದ್ಯರಾಗಿದ್ದರು; ಆದರೆ ಅವರು ನಮ್ಮ ಸಂತತಿಯ ಇತರರಿಗಿಂತಲೂ ಅಧಿಕ ಚಂಚಲವಾದವರೆಂದು ಭಾವಿಸಲು ನಮಗೆ ಕಾರಣಗಳಿರುವದಿಲ್ಲ.

ಅಬ್ಷಾಲೋಮನು ಯೆರೂಸಲೇಮಿನಲ್ಲಿ ವಿಜಯೋತ್ಸವದೊಡನೆ ಪ್ರವೇಶಿಸಿದ್ದು, ಯಶಸ್ಸಿನ ಅಮಲಿನಿಂದ ಕೂಡಿರುವಂಥ ಸಾಧ್ಯತೆಗಳು ಬಹುವಾಗಿದ್ದವು. ಆತನು ಮಾಡಿದ ಕಾರ್ಯಗಳ ದಾಖಲೆಗಳು, ಅಂದರೆ ಹಲವಾರು ವಿಧಾನಗಳಲ್ಲಿ ತನ್ನ ತಂದೆಯನ್ನು ಅವಮಾನಪಡಿಸಲು ಆತನು ಪರಿಶ್ರಮಿಸಿದ್ದು ಮತ್ತು ಜನರಲ್ಲಿ ಆತನಿಗೆ ವಿರುದ್ಧವಾಗಿ ಕಠಿಣ ಪೂರ್ವಾಗ್ರಹಪೀಡಿತ ಭಾವನೆಯನ್ನು ಎಬ್ಬಿಸುವದು, ವಿಶಾಲವಾದ ಎಲ್ಲಾ ಅವಕಾಶಗಳನ್ನು ಪಡೆದಿದ್ದ ಯೌವನಸ್ಥನ ಸ್ವಪ್ರತಿಷ್ಠೆ, ನಂಬಿಕೆದ್ರೋಹ, ಕೀಳುಮಟ್ಟದ ಗುಣಗಳು ಪ್ರದರ್ಶಿತ

ವಾದುದ್ದನ್ನು ನಾವು ನೋಡುತ್ತೇವೆ. ಉನ್ನತ ಸ್ಥಾನದಲ್ಲಿರುವ ಅರಸನ ಕುಮಾರನಿಗೆ ಸಂಬಂಧಿಸಿರುವಂಥ ನಾವು ನಮ್ಮ ಕರ್ತನಿಗೆ, ದೊಡ್ಡ ಅರಸನಾದ ನಮ್ಮ ದೇವರಿಗೆ, ಸಂಪೂರ್ಣವಾಗಿ ನಿಷ್ಠೆಯಳ್ಳವರಾಗಿದ್ದೇವೋ ಎಂಬುದನ್ನು ನಮ್ಮ ಹೃದಯಗಳನ್ನು ಶ್ರದ್ಧೆಯಿಂದ ಶೋಧಿಸಿ ನಮ್ಮ ಪ್ರತಿಯೊಂದು ನಡೆ ನುಡಿ ಆಲೋಚನೆಗಳನ್ನು ಗಂಭೀರವಾಗಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳಬೇಕು. ನಾವು ಸ್ವಾರ್ಥಿಗಳೂ ಇಲ್ಲವೇ ಕೇವಲ ಹೊರಗೆ ತೋರಿಕೆಯಲ್ಲಿ ದೀನರೂ ಆಗಿಲ್ಲವೆಂದೂ ಆದರೆ ದೀನ ಹೃದಯರೂ ಮತ್ತು ದೊಡ್ಡ ಅರಸನಾದ ತಂದೆಯ ಚಿತ್ತವನ್ನು ಮಾಡಲು ಪೂರ್ಣವಾಗಿ ಬಯಸುವವರೂ, ಅಲ್ಲದೆ ಆತನ ಚಿತ್ತವು ನಮಗೆ ಹಾನಿಕರವಲ್ಲವೆಂದೂ, ಆದರೆ "ನನ್ನ ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವದೇ ನನ್ನ ಸಂತೋಷವು." (ಕೀರ್ತನೆ 40:8) ಎಂದು ನಾವು ಪ್ರಾಮಾಣಿಕರಾಗಿ ಹೇಳಲು ಸಾಧ್ಯವಿರುವದು.

ನೀತಿಗೆ ಲಭಿಸಿದ ಜಯ

ಮೂರು ತಿಂಗಳಲ್ಲಿ ಬಂಡಾಯವು ಬೆಳೆದು ವೃದ್ಧಿಯಾದಂತೆ ತೋರುತ್ತದೆ. ಅಬ್ಷಾಲೋಮನು ಸುಮ್ಮನಿರುವಲ್ಲಿ ತಾನು ಇತರರ ಮೂಲಕವಾಗಿ ಎಚ್ಚರಿಕೆಯಿಂದ ಬಿತ್ತಿದಂಥ ದೂಷಣೆ ಹಾಗು ನಂಬಿಕೆದ್ರೋಹವೆಂಬ ಬೀಜವು ಅನೇಕರ ಹೃದಯಗಳಲ್ಲಿ ಆಳವಾಗಿ ಬೇರೂರಿದ್ದು, ದೇವರಿಗೆ ಹಾಗು ಆತನು ಅಭಿಷೇಕಿಸಿದವನ ವಿರುದ್ಧವಾಗಿ ಅವರು ಬಂಡಾಯವೇಳಲು ಅಬ್ಷಾಲೋಮನೊಡನೆ ತಮ್ಮ ದ್ಯೇಯೋದ್ದೇಶವನ್ನು ಜೊತೆಗೂಡಿಸಿಕೊಂಡಿದ್ದರು. ಅಬ್ಷಾಲೋಮನ ಸೈನ್ಯವು ಹಲವಾರು ವಿಭಾಗಗಳಲ್ಲಿ ಶೀಘ್ರವಾಗಿ ವೃದ್ಧಿಯಾಗುತ್ತಿರುವಲ್ಲಿ, ದಾವೀದನ ಕಡೆಗೆ ಕೆಲವರು ಬಂದಿದ್ದರು. ಅಬ್ಷಾಲೋಮನ ಸೇನೆಯ ಗಾತ್ರವನ್ನು ತಿಳಿಸಲಾಗಿಲ್ಲ; ಆದರೆ ಎಫ್ರಾಯೀಮ್ಯರ ಅರಣ್ಯದಲ್ಲಿ ನಡೆದ ಯುದ್ಧದಲ್ಲಿ ಸ್ಪಷ್ಟವಾದ ಒಂದು ದೊಡ್ಡ ಸಮೂಹವು ಅಸ್ತವ್ಯಸ್ತಗೊಂಡು ಓಡಿಹೋಗಿರುವಲ್ಲಿ, 20,000 ಜನರಿಗೂ ಹೆಚ್ಚು ಮಂದಿ ಸಂಹರಿಸಲ್ಪಟ್ಟರೆಂಬ ಅಂಶದ ಮೂಲಕವಾಗಿ ಅದನ್ನು ಊಹಿಸಲು ಸಾಧ್ಯವಿರುವದು. ಈ ಮೂರು ತಿಂಗಳಿನ ಪ್ರೀತಿನಂಬಿಕೆಯ ಪರೀಕ್ಷಾವಧಿಯಲ್ಲಿ ದಾವೀದನ ಮನೋಭಾವವು ಏನಾಗಿದ್ದಿರಬಹುದೆಂಬುದನ್ನು ನಾವು ಕೇವಲ ಊಹಿಸಲು ಸಾಧ್ಯ; ಆದರೆ ಈ ಎಲ್ಲಾ ವಿಧದಲ್ಲಿಯೂ ಆತನು ಜಯಶಾಲಿಯಾಗಿದ್ದನೆಂದು ನಂಬಲು ನಮಗೆ ಸಕಾರಣಗಳಿರುವವು. ಆತನ ತಾಳ್ಮೆ ಖಂಡಿತವಾಗಿಯೂ ಪ್ರದರ್ಶಿತವಾಗಿತ್ತು. ದೇವರು ತನಗೆ ನೀಡಿದ ಕೃಪಾವರಗಳನ್ನು ಆತನು ತನ್ನಿಂದ ತೆಗೆಯುವದಿಲ್ಲವೆಂದೂ; ಆದರೆ ತನ್ನನ್ನು ಎಲ್ಲಾ ಕೇಡಿನಿಂದ ಬಿಡಿಸುವನೆಂಬ ದೈವ ವಾಗ್ದಾನದಲ್ಲಿ ಆತನ ನಂಬಿಕೆಯು ಸುರಕ್ಷಿತವಾಗಿದ್ದಿರಬೇಕು. ದಾವೀದನ ಪ್ರೀತಿಯ ಬಗ್ಗೆ ಹೇಳುವದಾದರೆ ನಂಬಿಕೆ ದ್ರೋಹಿಯಾದ ತನ್ನ ದುಷ್ಟ ಮಗನ ಮೇಲಿನ ಪ್ರೀತಿಯೂ ಸಹ ಖಂಡಿತವಾಗಿಯೂ ಬಹು ಶ್ರೇಷ್ಠವಾಗಿತ್ತೆಂಬುದನ್ನು ನಾವು ಮುಂದೆ ನೋಡುತ್ತೇವೆ.

ದಾವೀದನ ಸೇನಾಬಲವು ಆತನ ಮೂರು ಸಮರ್ಥ ಸೇನಾನಾಯಕರ ಕೆಳಗೆ ಮೂರು ಸಣ್ಣ ವಿಭಾಗಗಳಾಗಿರುವಲ್ಲಿ, ಆಕ್ರಮಣವು ಅಬ್ಷಾಲೋಮನು ಮತ್ತು ಅವನ ಸೇನೆಯಿಂದ ನಡೆದದ್ದು ಸ್ಪಷ್ಟವಾಗಿತ್ತು. ಸ್ಪಷ್ಟವಾದ ಒಂದು ಉದ್ದೇಶದಿಂದ ಅವರು ಯುದ್ಧವನ್ನು ಅರಣ್ಯದ ಕಡೆಗೆ ಎಳೆದುಕೊಂಡು ಹೋಗಿದ್ದು, ಅಲ್ಲಿ ಆಕ್ರಮಣಕಾರೀ ತಂಡಕ್ಕಿಂತಲೂ ಸಣ್ಣ ಸೇನಾಬಲಕ್ಕೆ ಹೆಚ್ಚಿನ ಅನುಕೂಲಗಳಿದ್ದವು. ಯುದ್ಧದ ಫಲಿತಾಂಶವು ಅಬ್ಷಾಲೋಮನ ಸೇನಾಬಲದ ಪೂರ್ಣ ಸೋಲಾಗಿದ್ದಲ್ಲದೆ ಅಬ್ಷಾಲೋಮನ ಮರಣವೂ ಆಗಿತ್ತು. ಅರಣ್ಯದ ಮೂಲಕವಾಗಿ ಹೇಸರಕತ್ತೆಯ ಮೇಲೆ ಪ್ರಯಾಣಿಸುತ್ತಿರುವಾಗ ಆತನ ತಲೆಯು ಕೊಂಬೆಯ ಕವಲುಗಳ ನಡುವೆ ಸಿಕ್ಕಿಕೊಂಡಿದ್ದು ಆತನ ಹೇಸರಕತ್ತೆಯು ಮುಂದೆ ಹೋಗಿ ಆತನನ್ನು ನೇತಾಡುವಂತೆ ಬಿಟ್ಟಿರಲು, ಸೇನೆಯು ಆ ಮಾರ್ಗದಲ್ಲಿ ಸಾಗುತ್ತಿತ್ತು. ದಾವೀದನ ಸೈನಿಕರಲ್ಲಿ ಒಬ್ಬನು ಆತನನ್ನು ಕಂಡುಕೊಂಡಾಗ್ಯೂ ಆತನನ್ನು ಕೊಲ್ಲಲ್ಲಿಲ್ಲ; ಯಾಕಂದರೆ ಅರಸನು ಸೈನಿಕರೆಲ್ಲರಿಗೆ ಅವರು ಯುದ್ಧಕ್ಕೆ ಹೊರಡುವ ಮುನ್ನ ತಾವು ಅಬ್ಷಾಲೋಮನಿಗೆ ಯಾವ ಕೇಡನ್ನೂ ಮಾಡಬಾರದೆಂದು ಖಂಡಿತವಾಗಿ ಆಜ್ಞಾಪಿಸಿದ್ದನು. ಆದರೆ ಆ ಸೈನಿಕನು ಅರಸನ ಸೇನಾಪತಿಗಳ ಮುಖ್ಯಸ್ಥನಾದ ಯೋವಾಬನಿಗೆ ಇದನ್ನು ವರದಿ ಮಾಡಿದಾಗ ಅವನು ಯಾವ ಸಂಕೋಚವೂ ಇಲ್ಲದೆ ಆ ರಾಜದ್ರೋಹಿಯನ್ನು ಸಂಹಾರಮಾಡಿ, ತನ್ನ ಆದೇಶದ ಮೇರೆಗೆ ಆತನನ್ನು ಒಂದು ದೊಡ್ಡ ಕಲ್ಲುಕುಪ್ಪೆಯ ಅಡಿಯಲ್ಲಿ ಹೂಣಲಾಗಿತ್ತು.

"ಯೌವನಸ್ಥನಾದ ಅಬ್ಷಾಲೋಮನು ಸುರಕ್ಷಿತನೋ?"

ಅರಸನು ತನ್ನ ಸೇನೆಯೊಡನೆ ಹೋಗಲು ಪ್ರಸ್ತಾಪಿಸಿದ್ದನು, ಆದರೆ ವಿವೇಕಯುತ ಬುದ್ಧಿಮಾತು ಮೇಲುಗೈ ಪಡೆದಿತ್ತು; ಯಾಕಂದರೆ ಮುಂದುವರಿಯುತ್ತಿದ್ದ ದಾವೀದನ ಮುಪ್ಪಿನ ವಯಸ್ಸು (ಸುಮಾರು 62 ವರುಷಗಳು) ಹಾಗು ಆತನ ವ್ಯಥೆಯ ಕಾರಣ ಅಲ್ಲದೆ ತನ್ನ ಶತ್ರುವಿನ ಮೇಲಿನ ಪ್ರೀತಿಯ ದೆಸೆಯಿಂದ ಆತನು ಇತರರಂತೆ ಯುದ್ಧದ ನೇತೃತ್ವವನ್ನು ವಹಿಸಿಕೊಳ್ಳಲು ಬಹುವಾಗಿ ಅರ್ಹನಾಗಿರಲಿಲ್ಲ. ತನ್ನ ಸೇನಾಪತಿಗಳ ಮತ್ತು ಮಂತ್ರಾಲೋಚಕರ ಸಲಹೆಯ ಅನುಸಾರವಾಗಿ ತಾನು ಮಹನಯೀಮಿನಲ್ಲಿ ಉಳಿದುಕೊಂಡು, ರಣರಂಗದ ಸುದ್ದಿಯನ್ನು ತರುವ ವೇಗದೂತರಿಗಾಗಿ ಅಥವಾ ಓಟಗಾರರಿಗಾಗಿ ಬಾಗಲಿನ ಹತ್ತಿರ ಕಾದುಕೊಂಡಿದ್ದನು. ಒಮ್ಮೆ ನೋಡಲಾಗಿ, ಒಬ್ಬ ಕಾವಲುಗಾರನು ಒಬ್ಬ ಓಟಗಾರನನ್ನು ಕಂಡಿದ್ದು, ಆತನ ಚಲನೆಯಿಂದ ಆತನ ಗುರುತುಹಿಡಿದು, ಅವನು ಅಹಿಮಾಚನೆಂದು ಕೂಗಿಹೇಳಿದ್ದನು. ಅರಸನಾದ ದಾವೀದನು ಕೂಡಲೇ ಇದನ್ನು ಗಮನಿಸಿ, ಆತನು ಒಳ್ಳೆಯ ಮನುಷ್ಯನು ನಿಸ್ಸಂದೇಹವಾಗಿ ಅವನು ನಮಗೆ ಶುಭವಾರ್ತೆಯನ್ನು ಹೊತ್ತು ತಂದಿರುವನೆಂದು ಹೇಳಿದ್ದನು. (ವಚನ 27) ಎಂಥಾ ಒಂದು ಪಾಠವು ನಮಗಿರುವದು ಈ ಪ್ರಕಟನೆಯಲ್ಲಿ! ನಮ್ಮ ಕರ್ತನು ಹೇಳಿರುವಂತೆ, "ಒಳ್ಳೆಯನು (ಹೃದಯವೆಂಬ) ತನ್ನ ಒಳ್ಳೆಯ

ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ." (ಮತ್ತಾಯ 12:35) ಬದಲಾಗಿ, ಕೆಟ್ಟವನು ಕೆಟ್ಟ ಬೊಕ್ಕಸದಿಂದ ಕೆಟ್ಟ ವಸ್ತುಗಳನ್ನು ಅಂದರೆ ಕೆಟ್ಟಮಾತುಗಳನ್ನು ಹಾಗು ಹಾನಿಕರ ಬಾಣಗಳನ್ನು ತೆಗೆಯುತ್ತಾನೆ. ನಮ್ಮ ಜೀವಿತಗಳು ಹೇಗಿರಬೇಕಂದರೆ ನಮ್ಮ ಸ್ನೇಹಿತರು ಮತ್ತು ಪರಿಚಯಸ್ಥರೆಲ್ಲರೂ ನಮ್ಮ ಬಗ್ಗೆ ಅವನು ಒಳ್ಳೆಯ ಮನುಷ್ಯನೆಂದು ಹೇಳಲು ಸಿದ್ಧರಿರಬೇಕು; ಆತನ ಸಂದೇಶದಲ್ಲಿ ಕೆಲವೊಂದು ಸಾಂತ್ವನದ ಸಂಗತಿಗಳಿರುವು; ಆತನು ಎಂದಿಗೂ ಜಗಳ ಬಿತ್ತುವವನಲ್ಲ, ಇಲ್ಲವೇ ಒಬ್ಬನ ಹೃದಯವನ್ನು ಘಾಸಿಪಡಿಸುವವನಲ್ಲ, ಇಲ್ಲವೇ ವಿಶ್ವಾಸಘಾತುಕನಲ್ಲವೆಂದು ಹೇಳಬೇಕು.


ಓಟಗಾರನು ಅರಸನನ್ನು ತಲುಪಿದಾಗ, "ಎಲ್ಲವೂ ಒಳ್ಳೆಯದಾಗಿರುವದು" ಎಂದು ಹೇಳುತ್ತಾ ಅರಸನಿಗೆ ಅಡ್ಡ ಬಿದ್ದಿದ್ದನು. ಇದು ಅರಸನಿಗೆ ನಿಜವಾಗಿಯೂ ಶುಭವಾರ್ತೆಯಾಗಿತ್ತು, ಆದರೆ ನಾವು ಗಮನಿಸಿರುವುದೇನಂದರೆ ತನ್ನನ್ನು ಅವಮಾನಪಡಿಸಿದ, ನಂಬಿಕೆದ್ರೋಹಿಯಾದ ವೈರತ್ವವುಳ್ಳ ಮಗನಿಗಾಗಿರುವ ಆತನ ಪ್ರೀತಿಯು–"ಯೌವನಸ್ಥನಾದ ಅಬ್ಷಾಲೋಮನ ಸುರಕ್ಷಿತನಾಗಿರುವನೋ?" ಎಂಬ ಆತನ ಮೊದಲ ವಿಚಾರಣೆಯಲ್ಲಿ ನಿದರ್ಶಿತವಾಗಿರುವದೆಂಬದೇ. ಅರಸನು ತನ್ನ ಮಗನ ಮೇಲಿನ ಪ್ರೀತಿಯು ಒಂದು ಬಲಹೀನತೆಯ ಪ್ರಮಾಣದಲ್ಲಿತ್ತೆಂದು ಕೆಲವರು ಪರಿಗಣಿಸಿರುವರು. ಅದನ್ನು ನಾವು ವಿವಾದಿಸುವದಿಲ್ಲ, ಆದರೆ ನಾವು ಎತ್ತಿಹಿಡಿಯುವ ಅಂಶವೇನಂದರೆ, ಆತನು ಒಂದು ಪಕ್ಷದಲ್ಲಿ ಅಥವಾ ಇನ್ನೊಂದರಲ್ಲಿ ತಪ್ಪುಮಾಡಿದ್ದಲ್ಲಿ, ಅದು ಆತನು ತನ್ನ ವೈರಿಯನ್ನು ಬಹು ಕಡಿಮೆ ಎನ್ನುವದಕ್ಕಿಂತಲೂ ಬಹು ಹೆಚ್ಚಾಗಿ ಪ್ರೀತಿಸಿದ್ದು, ಅದು ದೇವರಿಗೆ ಮೆಚ್ಚಿಕೆಯಾಗಿತ್ತೆಂಬದು. ಈ ಪ್ರೀತಿಮಯವಾದ ವರ್ಣನೆಯು ಅರಸನು ದೈವಿಕವಾದ ಶಿಕ್ಷಣದ ಮೂಲಕವಾಗಿ "ದೇವ ಪ್ರೀತಿಯು ಎಲ್ಲಾ ವಿಧವಾದ ಪ್ರೀತಿಯನ್ನು ಮೀರಿಸುವದು" ಎಂಬುದನ್ನು ಗಣನೀಯವಾಗಿ ಕಲಿತುಕೊಂಡಿದ್ದನೆಂಬುದಕ್ಕೆ ಸಾಕ್ಷ್ಯಾಧಾರವನ್ನು ನೀಡುತ್ತದೆ. ಅಬ್ಷಾಲೋಮನು ತನ್ನ ಬಂಡಾಯದ ಸ್ಥಿತಿಯಲ್ಲಿರುವಾಗ ಅರಸನಾದ ದಾವೀದನು ಅವನನ್ನು ಪ್ರೀತಿಸಿ ಕರುಣಿಸಿದ್ದಲ್ಲಿ, ಅವನು ತನ್ನೊಡನೆ ಸಾಮರಸ್ಯದಿಂದಿರುವಾಗ ಆತನು ಅದೆಷ್ಟು ಹೆಚ್ಚು ಉದ್ದೇಶಪೂರ್ವಕವಾಗಿ ಪ್ರೀತಿಸಿದ್ದಿರಬೇಕು; ಅಲ್ಲದೆ ಹೀಗೆಯೇ, ನಾವು ಪಾಪಿಗಳಾಗಿದ್ದಾಗಲೇ ದೇವರು ನಮ್ಮನ್ನು ಬಹುವಾಗಿ ಪ್ರೀತಿಸಿ ತನ್ನ ಮಗನನ್ನು ನಮಗೋಸ್ಕರವಾಗಿ ಮರಣಕ್ಕೆ ಒಪ್ಪಿಸಿರಲು; ನಾವು ಪರದೇಶಗಳೂ ಪ್ರವಾಸಿಗಳೂ ಅಗಿರದೆ, (ಕ್ರಿಸ್ತನ) ಅಮೂಲ್ಯವಾದ ರಕ್ತದ ಮೂಲಕವಾಗಿ ಸಮೀಪಸ್ಥರಾಗಿದ್ದು, ಪವಿತ್ರಾತ್ಮನಿಂದ ಹುಟ್ಟುವದರ ಮೂಲಕವಾಗಿ ಆತನಿಗೆ ಪ್ರತಿಷ್ಠಿತರೂ ಪರಿಶುದ್ಧರೂ ಆಗಿರಲು, ಈಗ ಆತನು ಅದೆಷ್ಟು ಹೆಚ್ಚಾಗಿ ನಮ್ಮನ್ನು ಪ್ರೀತಿಸುವನು! (ರೋಮಾ 5:8) ಭೂಸಂಬಂಧವಾದ ಒಂದು ದೊಡ್ಡ ಪ್ರೀತಿಯ ನಿದರ್ಶನವನ್ನು ನೋಡುವದರಿಂದ ಅದು ನಮಗೆ ಒಳ್ಳೆಯದನ್ನು ಮಾಡುತ್ತದೆ, ಯಾಕಂದರೆ ಅದು "ತಂದೆಯು ತಾನೇ ನಿಮ್ಮನ್ನು ಪ್ರೀತಿಸುತ್ತಾನಲ್ಲವೇ" ಎಂಬ ಒಡೆಯನ ಮಾತುಗಳ ಮೂಲಕವಾಗಿ ನಮಗೆ ದೊಡ್ಡ ಪಾಠವನ್ನು ಮನದಟ್ಟಾಗಮಾಡಿ ನಮಗೆ ಅನುಕೂಲಕರವಾದ ಚಿತ್ರಣವನ್ನು ನೀಡುತ್ತದೆ.

ತನ್ನ ಮಗನಿಗಾಗಿರುವ ದಾವೀದನ ಪ್ರೀತಿಯ ಇಂಥಾ ಒಂದು ನಿದರ್ಶನವು ನಮ್ಮ ಮುಂದೆ ಇರಲು, ನಾವು ನಿರಾತಂಕದಿಂದ ಸಾರಂಶವಾಗಿ ಹೇಳಬಹುದೇನಂದರೆ, ಅಬ್ಷಾಲೋಮನನ್ನು ತನ್ನ ಪರದೇಶದ ಗಡಿಪಾರಿನಿಂದ ಹಿಂದಿರುಗಲು ಅನುಮತಿಸಿದಾಗ ಆತನು ತನ್ನ ಸ್ವಂತ ಹೃದಯದ ಮನೋಭಾವವನ್ನು ಈ ಎರಡು ವರುಷದ ಅವಧಿಯಲ್ಲಿ ಕೆಲವು ಮಟ್ಟಿಗೆ ತಪ್ಪಾಗಿ ಪ್ರತಿನಿಧಿಸಿದ್ದನೆಂಬದು. ಆ ಸಮಯದಲ್ಲಿ ಅರಸನು ಆತನನ್ನು ನೋಡಲು ನಿರಾಕರಿಸಿದ್ದು, ಹೀಗೆ ಇದು ಅಬ್ಷಾಲೋಮನ ಪ್ರತಿಭಟನೆ ಹಾಗು ಹಗೆತನಕ್ಕೆ ಪ್ರೇರೇಪಿಸಿರುವ ಸಾಧ್ಯತೆಯಿತ್ತು. ಇದನ್ನು ಇಲ್ಲಿ ತಿಳಿಸಿರುವದಕ್ಕೆ ಕಾರಣವೇನಂದರೆ ಇದರಲ್ಲಿ ಅನೇಕ ತಂದೆತಾಯಿಗಳಿಗೆ ಒಂದು ಪಾಠವಿರುವದೆಂಬದು ನಮ್ಮ ನಂಬಿಕೆ. ಅನೇಕ ಸಾರಿ ಕೆಲವು ಕಾರಣಕ್ಕಾಗಿ ತಂದೆತಾಯಿಗಳು ತಮ್ಮ ಮಕ್ಕಳನ್ನು ತಾವು ನೆನಸುವದಕ್ಕಿಂತಲೂ ಬಹು ಹೆಚ್ಚು ಕಠಿಣವಾಗಿ ನಡೆಸಿಕೊಂಡಿದ್ದು ಹೀಗೆ ಅವರು ತಮ್ಮ ಮಕ್ಕಳಿಗೆ ತಮ್ಮ ಹೃದಯದಲ್ಲಿನ ನಿಜವಾದ ಪ್ರೀತಿಮನೋಭಾವವನ್ನು ತಪ್ಪಾಗಿ ತೋರ್ಪಡಿಸುವ ಪ್ರವೃತ್ತಿಹೊಂದಿರುವರೆಂದು ನಮಗೆ ತೋರುತ್ತದೆ. ಎಂಥದ್ದೇ ಕಠಿಣತೆ ಅಥವಾ ತೀವ್ರತೆಯ ಅಗತ್ಯವಿದ್ದರೂ, ತಮ್ಮ ಮಕ್ಕಳೊಡನೆ ವ್ಯವಹರಿಸುವಲ್ಲಿ ಎಂಥದ್ದೇ ಶಿಕ್ಷೆಯು ಸೂಕ್ತವಾಗಿ ತೋರಿದ್ದರೂ, ಎಲ್ಲವನ್ನೂ ಎಂಥಾ ಒಂದು ರೀತಿಯಲ್ಲಿ ಮಾಡಬೇಕೆಂದರೆ ಅವರಿಗೆ ಯಾವಾಗಲೂ ತಮ್ಮ ಪ್ರೀತಿಯ ಬಗ್ಗೆ ಪೂರ್ಣವಾಗಿ ಭರವಸೆಯನ್ನುಂಟುಮಾಡಿ, ತಮ್ಮ ಕರ್ತವ್ಯದ ಹಾಗು ಮಕ್ಕಳ ಹಿತದೃಷ್ಟಿಯಿಂದ ಈ ಶಿಕ್ಷೆಯನ್ನು ನೀಡಲಾಗಿರುವದೆಂಬ ಭರವಸೆಯನ್ನು ನೀಡುವವರಾಗಬೇಕು. ನ್ಯಾಯವು ಉತ್ಕೃಷ್ಟವಾದದ್ದು, ಜ್ಞಾನವು ಅಮೂಲ್ಯವಾದದ್ದು, ಶಿಕ್ಷೆಯು ಅಗತ್ಯವಾದದ್ದು, ಆದರೆ ಎಲ್ಲದ್ದರ ಮೇಲೆ "ಪ್ರೀತಿಯೆಂಬದು ಪ್ರಾಮುಖವಾದ ವಿಷಯವಾಗಿರುತ್ತದೆ." ಆದುದರಿಂದ ನಾವು ನಮ್ಮ ಬಗ್ಗೆ ಅಂದರೆ ನಮ್ಮ ನಡೆ, ನಮ್ಮ ನುಡಿ, ನಮ್ಮ ಪ್ರತಿಯೊಂದು ಆಲೋಚನೆಯ ಬಗ್ಗೆ ಈ ದೈವಿಕ ಗುಣಮಟ್ಟದ ಅನುಸಾರವಾಗಿ ತೀರ್ಮಾನಿಸಿಕೊಳ್ಳೋಣ. ಅತಿ ಪರಿಶುದ್ಧವಾದ ಪ್ರೀತಿಗೆ ಪೂರ್ಣವಾಗಿ ಹೊಂದಾಣಿಕೆಯಾಗದಂಥ ಯಾವುದೇ ಕೃತ್ಯವು ನಮಗೂ ಹಾಗು ಯಾರ ಮೇಲೆ ಅದನ್ನು ಬಳಸುವೆವೋ ಅವರೆಲ್ಲರಿಗೂ ಹಾನಿಕರವಾದದ್ದು.

"ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನೇ,"

ಆ ಒಳ್ಳೆಯ ಸಂದೇಶವಾಹಕನು ಸಾಧ್ಯವಾದಷ್ಟು ನಯವಿನಯವಾಗಿ ಅರಸನಿಗೆ ಸುದ್ಧಿಯನ್ನು ಹೊರಗೆಡವಿದ್ದನು. ಆತನಿಗೆ ಶತೃವಿನ ಸಂಪೂರ್ಣ ಸೋಲಿನ ಬಗ್ಗೆ ಹಾಗು ಅಬ್ಷಾಲೋಮನು ಕೂಡುತ್ತಿದ್ದ ಹೊರಾಂಗಣದ ಬಗ್ಗೆಯೂ ತಿಳಿದಿತ್ತು; ಆದರೆ ತನಗೆ ಗೊತ್ತಿರುವದೆಲ್ಲವನ್ನೂ ತಿಳಿಸಿ ತನ್ನ ಕಲ್ಪನೆಗಳ ವಿವರಣೆಯನ್ನು ಚಿತ್ರಿಸಿಕೊಡುವದಕ್ಕೆ ಬದಲಾಗಿ ಆತನ ಹೃದಯದಲ್ಲಿದ್ದ ಒಳ್ಳೆತನವು ಆತನನ್ನು ಸ್ವಲ್ಪವನ್ನೇ ಹೇಳಲು ನಡೆಸಿದ್ದು ಅಂದರೆ ಅಲ್ಲಿ ಜಯವು ಲಭಿಸಿದ್ದು ಒಂದು ದೊಡ್ಡ ಕೋಲಾಹಲದಂತೆ ಕಾಣುತ್ತಿತ್ತೆಂದು ಆದರೆ ಅದರ ವಿವರಗಳೆಲ್ಲವೂ ತಿಳಿದಿರಲಿಲ್ಲವೆಂದು ಹೇಳಿದ್ದನು. ಪ್ರಸ್ತುತದಲ್ಲಿ ಎರಡನೆ

ಓಟಗಾರನಾದ ಕೂಷಿಯು ಬಂದಿದ್ದು, ಅವನು ಅಬ್ಷಾಲೋಮನ ಮರಣವನ್ನು ಪ್ರಕಟಮಾಡಿದ್ದನು. ಅರಸನಾದ ದಾವೀದನ ಹೃದಯವು ದುಃಖದಿಂದ ಕುಗ್ಗಿಹೋಗಿತ್ತು. ಇದಕ್ಕಾಗಿಯೇ ಆತನು ಹೆದರುತ್ತಿದ್ದುದು ಸ್ಪಷ್ಟವಾಗಿತ್ತು. ಆತನು ಗೋಪುರದ ಒಂದು ಕೊಠಡಿಗೆ ಹೋಗುತ್ತಾ ದಾರಿಯಲ್ಲಿ ಎದೆಯೊಡೆದವನಾಗಿ "ಓಹ್ ನನ್ನ ಮಗನಾದ ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನಾದ ಅಬ್ಷಾಲೋಮನೇ! ನಿನಗೆ ಬದಲಾಗಿ ನಾನು ಸತ್ತಿದ್ದರೆ ಎಷ್ಟೋ ಒಳ್ಳೆಯದಾಗುತ್ತಿತ್ತು. ಓಹ್ ಅಬ್ಷಾಲೋಮನೇ, ನನ್ನ ಮಗನೇ, ನನ್ನ ಮಗನೇ" ಎಂದು ಬಿಕ್ಕಳಿಸಿ ಅಳುತ್ತಿದ್ದನು. ಈ ಮಾತುಗಳ ಬಗ್ಗೆ ಒಬ್ಬ ಲೇಖಕನು ಹೇಳಿರುವದು. "ಹಳೆ ಒಡಂಬಡಿಕೆಯ ಭಾಗದಲ್ಲೆಲ್ಲಾ ಇದಕ್ಕಿಂತಲೂ ಹೆಚ್ಚು ಕರುಣಾಜನಕವಾದುದು ಬೇರೊಂದಿರುವದಿಲ್ಲ. ಸರಳವಾದ ಈ ವಿವರಣೆಯಲ್ಲಿನ ಸೊಗಸು ಮನೋಹರವಾದದ್ದು. ಇದು ನಮಗೆ ಯಾವ ಅಡೆತಡೆಯೂ ಇಲ್ಲದಂತೆ ಒಬ್ಬನ್ನು ನೆನಪಿಸಿಕೊಳ್ಳುವಂತೆ ಮಾಡುತ್ತದೆ; ಅವನು ಬಂಡಾಯದ ಪಟ್ಟಣವಾದ ಯೆರೂಸಲೇಮನ್ನು ನೋಡಿ ಮತ್ತು ಅದು ತನ್ನ ಮೇಲೆ ಬರಮಾಡಿಕೊಳ್ಳುತ್ತಿದ್ದ ತನ್ನ ನಾಶನದ ಬಗ್ಗೆ ಆಲೋಚಿಸಿ, ಅದರ ವಿಷಯವಾಗಿ ಕಣ್ಣೀರು ಬಿಟ್ಟಿದ್ದನು. ಲೂಕ 19:41



ಅಬ್ಷಲೋಮನ ಮರಣಕ್ಕೆ
ದಾವೀದನು ಶೋಖಿಸುತ್ತಿರುವುದು

"ನಿನಗೆ ಬದಲಾಗಿ ನಾನು ಸತ್ತಿದ್ದರೆ" ಎಂದು ವ್ಯಕ್ತವಾಗಿರುವದರಲ್ಲಿ ನಾವು ಶಾಸ್ತ್ರವಚನಗಳಲ್ಲಿ ಇದಕ್ಕೆ ಎರಡು ಸಮಾನಾದ ಸಂಗತಿಗಳನ್ನು ನೋಡುತ್ತೇವೆ. ಧರ್ಮಶಾಸ್ತ್ರದ ಪ್ರಕಾರ ಇಸ್ರಾಯೇಲ್ಯರ ಮಧ್ಯಸ್ಥನಾದ ಮೋಶೆಯು ಜನರು ಪಾಪಮಾಡಿ ದೈವಿಕ ಅಸಮಾಧಾನಕ್ಕೆ ಗುರಿಯಾಗಿ ಅವರು ಮಾಡಿದ ಪಾಪಕ್ಕಾಗಿ ದೇವರು ಅವರಿಗೆ [ಸಂಹರಿಸುವ] ಬೆದರಿಕೆಹಾಕಿದ್ದಾಗ ಆತನು ಇದೇ ರೀತಿಯ ದುಃಖವನ್ನು ಹೊರಹಾಕಿದ್ದನು. ಭಕ್ತನಾದ ಪೌಲನು ಈ ಮುಂದಿನ ಮಾತನ್ನು ಹೇಳುವಾಗ ಇದೇ ಮನೋಭಾವವನ್ನು ವ್ಯಕ್ತಪಡಿಸಿದ್ದಾನೆ: "ಶರೀರಸಂಬಂಧವಾಗಿ ಸ್ವಜನರಾಗಿರುವ ನನ್ನ ಸಹೋದರರಿಗೋಸ್ಕರ ನಾನೇ ಸಾಧ್ಯವಾದರೆ ಶಾಪಗ್ರಸ್ತನಾಗುವದಕ್ಕೆ ಒಪ್ಪಿಕೊಂಡೇನು" [ರೋಮಾ 9:3] ನನ್ನ ತ್ಯಾಗದಿಂದ ನನ್ನ ಸ್ವಜನರನ್ನು ಅವರು ತಪ್ಪಿಹೋಗಿರುವ ಸುವಾರ್ತಾಯುಗದ ಸೌಭಾಗ್ಯಗಳ ಆಶೀರ್ವಾದಕ್ಕೆ ಅವರನ್ನು ಮರಳಿ ತರಲು ನನಗೆ ಸಾಧ್ಯವಾದರೆ ಮಹಿಮೆಯುಳ್ಳ ಕ್ರಿಸ್ತನ ಸಭೆಯ ಸದಸ್ಯತ್ವದಿಂದ ಬೇರೆಯಾಗಿ ಭೂಲೋಕದ ಪುನರುದ್ಧಾರಿತ ವರ್ಗದಲ್ಲಿ ನಾನು ಪಾಲನ್ನು ತೆಗದುಕೊಳ್ಳಲು ಆಶಿಸುತ್ತೇನೆ. (ವಿಮೋ. 32:32; ರೋಮಾ 9:3) ಇಲ್ಲಿ ಇದು ನಾವು ಲಾಂಗ್ ಫೆಲೋ ಎಂಬ ಕವಿಯ ಈ ಮಾತುಗಳನ್ನು ನೆನಪುಮಾಡಿಕೊಳ್ಳುವಂತೆ ಮಾಡುತ್ತದೆ:–

"ಅಲ್ಲಿ ದೂರ ಇಲ್ಲವೇ ಹತ್ತಿರವೆಂಬುದಿಲ್ಲ,
ಅಲ್ಲಿ ಇಲ್ಲಿ ಅಥವಾ ಅಲ್ಲಿ ಎಂಬುದಿಲ್ಲ;
ಅಲ್ಲಿ ಶೀಘ್ರ ಇಲ್ಲವೇ ವಿಳಂಬ ಎಂಬುದಿಲ್ಲ,
ಆ ಬಾಗಿಲ ಮೇಲಿನ ಕೊಠಡಿಯೊಳಗೆ,
ಇಲ್ಲವೇ ಯಾವುದೇ ಹಿಂದಿನದಲ್ಲಿ,
ಮಾನವ ಸಂಕಟದ ಕೂಗಿರುವದಿಲ್ಲ,
ಓ ಅಬ್ಷಾಲೋಮನೇ, ನನ್ನ ಮಗನೇ!"

"ಅದು ಒಂದು ಸಾಧಾರಣ ವ್ಯಥೆ,
ತಂದಿತ್ತಾದರೂ ಅದು ಮಧುರ ನಮ್ಮದಿ;
ನಮ್ಮದು ಬಹು ಘೋರವಾದ ನಷ್ಟ,
ನಮ್ಮದು ಅತಿ ಬಾರವಾದ ಶಿಲುಬೆ,
ಅಲ್ಲದೆ ಕಣ್ಣೀರು ಇರುವದು ನಿರಂತರ,
ನಿನಗೆ ಬದಲಾಗಿ ನಾ ಸತ್ತಿದ್ದರೆ ಮೇಲಾಗಿತ್ತು,
ಓ ಅಬ್ಷಾಲೋಮನೇ, ನನ್ನ ಮಗನೇ!"

ಅಬ್ಷಾಲೋಮನ ವ್ಯರ್ಥವಾದ ವಿಕೃತಿಯ ಮಾರ್ಗ, ವಂಚನೆಯುಳ್ಳ ರಾಜದ್ರೋಹ, ವಿನಾಶಕಾರೀ ಅಂತ್ಯದಲ್ಲಿ ನಾವು ಅನಪೇಕ್ಷಿತವಾದ ದುಷ್ಟ, ಭಕ್ತಿಹೀನತೆಯ ವಿಧಾನದಿಂದ ಒಂದು ಪಾಠವನ್ನು ಕಂಡುಕೊಳ್ಳುವದಾದರೆ, ಅರಸನಾದ ದಾವೀದನ ಮಾರ್ಗದಿಂದಲೂ ಇದಕ್ಕೆ ವಿರುದ್ಧವಾಗಿರುವ ನಂಬಿಕೆ ಸಮರ್ಪಣೆ ಮತ್ತು ಕೃಪೆ ಪರಿಜ್ಞಾನ ಹಾಗು ಪ್ರೀತಿಯಲ್ಲಿ ಅಭಿವೃದ್ಧಿಯಾಗುವದರ ಬಗ್ಗೆ ಪಾಠವನ್ನು ಕಂಡುಕೊಳ್ಳುವೆವು. ಹಿಂದಿನ ಒಂದು ಪಾಠದಲ್ಲಿ ದಾವೀದನು ಮೂರು ದೇವಾಜ್ಞೆಗಳನ್ನು ಉಲ್ಲಂಘನೆ ಮಾಡಿ ಉದ್ದೇಶಪೂರ್ವಕ ಹಾಗು ಅಕ್ಷಮ್ಯವಾದ ಅತಿ ಭಯಾನಕ ಅಪರಾಧವನ್ನು ಮಾಡಿರುವ ಅಂಶವನ್ನು ನಾವು ಗಮನಿಸಿದ್ದೇವೆ. ಅವು ಯಾವುವೆಂದರೆ: ತನ್ನ

ನೆರೆಯವನ ಹೆಂಡತಿಯನ್ನು ಆಶಿಸಿ, ಆಕೆಯೊಡನೆ ವ್ಯಭಿಚಾರ ಮಾಡಿ, ಹಾಗು ತನ್ನ ಮಾತುಕೇಳದ ಆಕೆಯ ಗಂಡನನ್ನ ಪರೋಕ್ಷವಾಗಿ ಕೊಲೆಮಾಡುವಂಥದ್ದೇ. ಶಾಸ್ತ್ರವಚನಗಳು ಅತಿ ಗಮನಾರ್ಹವಾದ ರೀತಿಯಲ್ಲಿ ಆ ಪಾಪಗಳನ್ನು ಖಂಡಿಸಿದ್ದು, ನಾವು ಪುನರಾಮರ್ಶಿಸಿದ ಆ ಕಠಿಣ ಅನುಭವಗಳು ಆತನ ಮೇಲೆ ದೇವರಿಂದ ಬಂದ ಪ್ರತಿಕಾರಯುತವಾದ ನ್ಯಾಯದಂಡನೆ–ಯಾಗಿತ್ತು. ಆದಾಗ್ಯೂ ದಾವೀದನು ತನ್ನ ಪಾಪಗಳನ್ನು ಗುರುತಿಸಿಕೊಂಡವನಾಗಿ ಅದಕ್ಕಾಗಿ ಪಶ್ಚಾತಾಪ ಪಟ್ಟಂಥದ್ದು, ಹೃದಯದಲ್ಲಿ ಆತನು ಒಬ್ಬ ಕೊಲೆಗಡುಕನಾಗಲೀ ಅಥವಾ ವ್ಯಭಿಚಾರಿಯಾಗಲೀ ಆಗಿರಲಿಲ್ಲವೆಂಬುದಕ್ಕೆ ವಿಶಿಷ್ಟವಾದ ರೀತಿಯಲ್ಲಿ ಸಾಕ್ಷಿಯನ್ನೊದಗಿಸುವದು. ಹೃದಯವನ್ನು ನೋಡುವ ದೇವರು ಕಡೆಯಲ್ಲಿ ಆತನನ್ನು ಒಪ್ಪಿಕೊಂಡವನಾಗಿ ಆತನ ಅಕೃತ್ಯಗಳಿಗಾಗಿ ಕಷ್ಟವನ್ನು ಅನುಭವಿಸಲು ಬಿಟ್ಟಿದ್ದನು.

ಈ ಇಬ್ಬರು ಮನುಷ್ಯರ ಜೀವಿತದಿಂದ, ಇವರನ್ನು ಅನುಕರಣೆಮಾಡದೆಂಯೇ, ಒಂದು ದೊಡ್ಡ ಹಾಗು ಪ್ರಯೋಜನಕರ ಪಾಠವನ್ನು ತೆಗೆದುಕೊಳ್ಳಲು ನಮಗೆ ಸಾಧ್ಯ. ಶ್ರಮೆದಮೆಯ ವಿಷಯವಾಗಿ ಬೋಧಿಸುವ ಒಬ್ಬ ಮನುಷ್ಯನಿಂದ ಒಮ್ಮೆ ನಾನು ಮೋರಿಯಲ್ಲಿ ಬೀಳುತ್ತಿದ್ದ ಒಬ್ಬ ಕುಡುಕನಾಗಿದ್ದೆ ಎಂದು ಹೇಳಲು ಸಮರ್ಥನಿರಬೇಕೆನ್ನುವದು ಅವಶ್ಯವೆಂದು ನಮಗೆ ಅನ್ನಿಸಬಾರದು; ಇಲ್ಲವೇ ದಾವೀದನ ಅನುಭವವು ಕಲಿಸಿದಂಥ ಪಾಠಗಳಿಂದ ಪ್ರಯೋಜನವನ್ನು ಪಡೆಯಲು ಆತನ ಪಾಪಗಳ ಮಾರ್ಗವನ್ನು ಹಿಂಬಾಲಿಸಿ ಹೋಗುವ ಅಗತ್ಯವಿರುವದಿಲ್ಲ.

"ಯೆಹೋವನ ಕೃಪಾನಡಿಸುವಿಕೆಯ ಸುಳಿವು
ಹಿಡಿಯುವದನ್ನು ಕಲಿತುಕೊಳ್ಳುವವನು ಧನ್ಯನು."

*****

ಅರಸನಾದ ನನ್ನನ್ನು ತಿರಿಗಿ ಅರಮನೆಗೆ ಕರಕೊಂಡು ಹೋಗುವದರಲ್ಲಿ ನೀವು ಹಿಂದುಳಿದಿರುವದೇಕೆ?

ರೀಪ್ರಿಂಟ್ಸ್ ಪುಟ 1690

2 ಸಮುವೇಲ ಅಧ್ಯಾಯ 19

"ಇಸ್ರಾಯೇಲ್ಯರೆಲ್ಲರೂ ತಮ್ಮ ತಮ್ಮ ನಿವಾಸಗಳಿಗೆ ಹಿಂದಿರುಗಿ ಹೋಗಿದ್ದರು. ಇಸ್ರಾಯೇಲ್ ಕುಲಗಳಲ್ಲೆಲ್ಲಾ ಜನರು ತಮ್ಮ ತಮ್ಮೊಳಗೆ ಜಗಳವಾಡಿ–ಅರಸನಾದ ದಾವೀದನು ನಮ್ಮನ್ನ ಫಿಲಿಷ್ಟಿಯರ ಕೈಗೂ ಬೇರೆ ಎಲ್ಲಾ ವೈರಿಗಳ ಕೈಗೂ ಸಿಕ್ಕದಂತೆ ತಪ್ಪಿಸಿ ಕಾಪಾಡಿದನು. ಆದರೆ ಅವನು ಅಬ್ಷಾಲೋಮನ ದೆಸೆಯಿಂದ ದೇಶವನ್ನು ಬಿಟ್ಟು ಓಡಿಹೋಗಬೇಕಾಯಿತು. ನಾವು ಅಭಿಷೇಕಿಸಿದ ಅಬ್ಷಾಲೋಮನು ಯುದ್ಧದಲ್ಲಿ ಸತ್ತನು. ಹೀಗಿರುವಲ್ಲಿ ಅರಸನಾದ ದಾವೀದನನ್ನು ತಿರಿಗಿ ಕರಕೊಂಡು ಬರಬಾರದೇ? ಸುಮ್ಮನೆ ಕೂತಿರುವದೇಕೆ ಎಂದು ಮಾತಾಡಿಕೊಂಡರು. ಇಸ್ರಾಯೇಲ್ಯರು ಈ ಪ್ರಕಾರ ಮಾತಾಡಿಕೊಂಡ ವರ್ತಮಾನವು ದಾವೀದನಿಗೆ ಮುಟ್ಟಲು ಅವನು ಯಾಜಕನಾದ ಚಾದೋಕ್ ಎಬ್ಯಾತಾರರಿಗೆ–ನೀವು ನನ್ನ ಹೆಸರಿನಲ್ಲಿ ಯೆಹೋದ ಕುಲದ ಹಿರಿಯರಿಗೆ–ಅರಸನಾದ ನನ್ನನ್ನು ತಿರಿಗಿ ಅರಮನೆಗೆ ಕರಕೊಂಡು ಹೋಗುವದರಲ್ಲಿ ನೀವು ಹಿಂದುಳಿದಿರುವದೇಕೆ? ನೀವು ನನ್ನ ರಕ್ತ ಸಂಬಂಧಿಗಳಾದ ಸಹೋದರರಾಗಿರುತ್ತೀರಲ್ಲಾ."
2 ಸಮುವೇಲ 19:9–12

ಚರಿತ್ರೆಯ ತುಣುಕಿನಲ್ಲಿ ಈಗಿನ ಪ್ರಪಂಚದ ಸ್ಥಿತಿಯ ಇದೇ ರೀತಿಯ ಒಂದು ನಿದರ್ಶನವು ಬರೆಯಲ್ಪಟ್ಟದ್ದನ್ನು ನಾವು ಕಂಡುಕೊಳ್ಳುತ್ತೇವೆ. ಅಬ್ಷಾಲೋಮನ ಬಂಡಾಯ ಹಾಗು ಜನರ ಬಿನ್ನಾಭಿಪ್ರಾಯದ ಪ್ರವೃತ್ತಿಯ ಪರಿಣಾಮವಾಗಿ ಒಂದು ಸಮಯಕ್ಕೆ ಯಾವ ಅಧಿಕಾರಿ ಮುಖ್ಯಸ್ಥನು ಅಥವಾ ಅರಸನು ಇಲ್ಲದಂತಾಗಿ ಇಸ್ರಾಯೇಲ್ ರಾಜ್ಯವು ಗೊಂದಲದ ಪರಿಸ್ಥಿತಿ, ಅರಾಜಕತೆಗೆ ದೂಡುವಂಥ ಬೆದರಿಕೆಯ ಪರಿಸ್ಥಿತಿಗಳಿಗೆ ಒಗೆದಂತಾಗಿತ್ತು.

ಅಬ್ಷಾಲೋಮನು ಕುಯುಕ್ತಿಯಿಂದ ಜನರ ಮನಸ್ಸನ್ನು ತನ್ನ ತಂದೆಯಾದ ದಾವೀದನಿಂದ ದೂರಮಾಡಿದ್ದು, ಕಡೆಯಲ್ಲಿ ಅದು ಒಂದು ಪ್ರತಿಭಟನೆಗೆ ಸಾಗಿತ್ತು. ಅಲ್ಲದೆ ದಾವೀದನು ಉಂಟಾಗುವ ಪರಿಣಾಮಗಳಿಗೆ ಹೆದರಿ ಪಟ್ಟಣದಿಂದಲೂ ಮತ್ತು ದೇಶದಿಂದಲೂ ಯೋರ್ದಾನ್ ಹೊಳೆಯ ಆಚೆಕಡೆಗೆ ತನಗೆ ನಿಷ್ಠರೂ ನಂಬಿಗಸ್ತರೂ ಆದ ಕೆಲವು ಪ್ರಜೆಗಳ ಜೊತೆಯಲ್ಲಿ ಓಡಿಹೋಗಿದ್ದನು. ಒಂದು ದೊಡ್ಡ ಯುದ್ಧವು ಸಂಭವಿಸಿದ್ದು, ಪರಿಣಾಮವಾಗಿ ಬಂಡಾಯವು ಶೀಘ್ರದಲ್ಲಿ ನಿಗ್ರಹಿಸಲ್ಪಟ್ಟು, ದುರಾಕ್ರಮಿಯಾದ ಅಬ್ಷಾಲೋಮನು ಮರಣಹೊಂದಿದ್ದನು.

ಆ ನಂತರ ಅರಸನಾದ ದಾವೀದನು ತಾನು ದೇಶವನ್ನು ಪುನರ್ವಶಪಡಿಸಿಕೊಳ್ಳಲು ಪ್ರಯತ್ನಿಸದೆ, ಇಸ್ರಾಯೇಲ್ಯರು ತಾನು ಹಿಂದಿರುಗಿ ಬರುವ ಬಯಕೆಯನ್ನು ವ್ಯಕ್ತಪಡಿಸುವವರೆಗೂ ಕಾದುಕೊಂಡಿದ್ದನು.

ಈ ಮಧ್ಯೆ ದಾಖಲೆಗಳು ಹೇಳುವದೇನಂದರೆ: "ಇಸ್ರಾಯೇಲ್ ಕುಲಗಳಲ್ಲೆಲ್ಲಾ ಜನರು ತಮ್ಮ ತಮ್ಮೊಳಗೆ ಜಗಳವಾಡಿ–ಅರಸನಾದ ದಾವೀದನು ನಮ್ಮನ್ನು ಫಿಲಿಷ್ಟಿಯರ ಕೈಗೂ ಬೇರೆ ಎಲ್ಲಾ ವೈರಿಗಳ ಕೈಗೂ ಸಿಕ್ಕದಂತೆ ತಪ್ಪಿಸಿ

ಕಾಪಾಡಿದನು. ಆದರೆ ಅವನು ಅಬ್ಷಾಲೋಮನ ದೆಸೆಯಿಂದ ದೇಶವನ್ನು ಬಿಟ್ಟು ಓಡಿಹೋಗಬೇಕಾಯಿತು. ನಾವು ಅಭಿಷೇಕಿಸಿದ ಅಬ್ಷಾಲೋಮನು ಯುದ್ಧದಲ್ಲಿ ಸತ್ತನು. ಹೀಗಿರುವಲ್ಲಿ ಅರಸನಾದ ದಾವೀದನನ್ನು ತಿರಿಗಿ ಕರಕೊಂಡು ಬರಬಾರದೆ? ಸುಮ್ಮನೆ ಕೂತಿರುವದೇಕೆ ಎಂದು ಮಾತಾಡಿಕೊಂಡಿದ್ದರು. [2 ಸಮುವೇಲ 19:9–10]

ಈಗಿನ ಲೋಕದಲ್ಲಿಯೂ ಇರುವದು ಕೇವಲ ಹೀಗೆಯೇ. ಭೂಲೋಕದ ಧರ್ಮಸಮ್ಮತನಾದ ಅರಸನು ಇನ್ನೂ ಅದರ ಸಿಂಹಾಸನವನ್ನು ಏರಿಲ್ಲ, ಇಲ್ಲವೇ ಲೋಕವು ಆತನ ಹಕ್ಕನ್ನು ಮಾನ್ಯಮಾಡಿಲ್ಲ ಅಥವಾ ಆತನ ಹಿಂದಿರುಗುವಿಕೆಯನ್ನು ಬಯಸಿಲ್ಲ. ರಾಜ್ಯಾಡಳಿತದ ವಿಷಯದಲ್ಲಿ ಜನರು ತಮ್ಮದೇ ಆದ ವ್ಯವಸ್ಥೆ ಹಾಗು ಯೋಜನೆಗಳಲ್ಲಿ ಕಾರ್ಯಮಗ್ನರಾಗಿರುವರು. ಅವರು ತಾವೇ ಆಯ್ಕೆಮಾಡಿಕೊಂಡ ಹಲವಾರು ಅರಸರುಗಳನ್ನು ಅಭಿಷೇಕಿಸಿಕೊಂಡಿರುವರು; ವಾಸ್ತವದಲ್ಲಿ ಅವರು ಸ್ವತಂತ್ರವಾಗಿ ರಾಜ್ಯಭಾರಮಾಡಿಕೊಳ್ಳುವ ಸಲುವಾಗಿ ಪ್ರತಿಯೊಂದು ವಿಧದಲ್ಲಿಯೂ ಪ್ರಯೋಗಮಾಡಿಕೊಂಡಿರುವರು; ಒಂದರ ಮೇಲೆ ಒಂದಂತೆ ಎಲ್ಲವೂ ವಿಫಲತೆಯಲ್ಲಿ ಕೊನೆಗೊಂಡಿರುವವು. ಅಲ್ಲದೆ ಈಗ, ಆರು ಸಾವಿರ ವರುಷಗಳ ಮಾನವನ ಪ್ರಾಯೋಗಿಕ ಪರೀಕ್ಷೆಗಳ ನಂತರ, ಇಡೀ ಲೋಕವು ಒಂದು ಕ್ರಾಂತಿಯ ಅಂಚಿಗೆ ತಲುಪಿದ್ದು, ಇದರ ಫಲವಾಗಿ ಅವರಿಗೆ ಅರಾಜಕತೆಯನ್ನು ಬಿಟ್ಟರೆ ಬೇರೆ ಯಾವುದನ್ನೂ ನಿರೀಕ್ಷಿಸಲಾಗದಂತಾಗಿರುವದು.

ಉಪಶಮನವು ಲಭಿಸುವದು ಕೇವಲ ಆ ಅರಸನು ಅಧಿಕಾರದಿಂದಲೂ, ಮಹಾ ಮಹಿಮೆಯಿಂದಲೂ ಹಿಂದಿರುಗಿದಾಗ ಮಾತ್ರ.

ನಾವು ಕಾಯುತ್ತಿರುವ ಅರಸನು ಬೇತ್ಲೆಹೇಮಿನ ಒಂದು ಮುದ್ದಾದ ಮಗುವಲ್ಲ, ಇಲ್ಲವೇ "ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು [ಈಡಾಗಿ] ಒಪ್ಪಿಸಿಕೊಟ್ಟ ಮನುಷ್ಯನಾದ ಕ್ರಿಸ್ತ ಯೇಸುವಲ್ಲ"; ಆದರೆ ಶರೀರ ಸಂಬಂಧದಲ್ಲಿ ಕೊಲ್ಲಲ್ಪಟ್ಟು ಆತ್ಮ ಸಂಬಂಧದಲ್ಲಿ ಬದುಕುತ್ತಿರುವ" ಅಂದರೆ ಆತ್ಮಿಕ ಜೀವಿಯಾಗಿ ಎಬ್ಬಿಸಲ್ಪಟ್ಟು, ಮನುಷ್ಯನಾಗಿದ್ದುದಕ್ಕಿಂತಲೂ ಉನ್ನತವಾಗಿರುವ ಸ್ಥಿತಿಗೆ ಏರಿಸಲ್ಪಟ್ಟಂಥ, ತಾನು ಮನುಷ್ಯನಾಗಿ ತನ್ನನ್ನು ತಗ್ಗಿಸಿಕೊಳ್ಳುವದಕ್ಕಿಂತಲೂ ಮೊದಲಿದ್ದ ಆತ್ಮಿಕ ಜೀವಕ್ಕಿಂತಲೂ ಉನ್ನತವಾಗಿರುವ ಸ್ವಭಾವಕ್ಕೆ ಅಂದರೆ ದೈವಿಕ ಸ್ವಭಾವಕ್ಕೆ ಏರಿಸಲ್ಪಟ್ಟಿರುವನಿಗಾಗಿ ನಾವು ಕಾದುಕೊಂಡಿರುವೆವು. ಆತನು ಮಾನವ ಸ್ವಭಾವಕ್ಕಿಂತಲೂ, ದೇವದೂತರ ಸ್ವಭಾವಕ್ಕಿಂತಲೂ, ಇತರ ಎಲ್ಲಾ ಸ್ವಾಭಾವಕ್ಕಿಂತಲೂ ಉನ್ನತವಾಗಿರುವ ಸ್ವಭಾವವನ್ನು ಹೊಂದಿರುವನು. ಇಂಥಾ ಸ್ವಭಾವದ ಹಾಗು ಮಹಿಮೆಯುಳ್ಳ ಅರಸನಿಗಾಗಿ ನಾವು ಕಾಯುತ್ತಿದ್ದು, ಆತನ ಪ್ರತ್ಯಕ್ಷತೆ ಹಾಗು ರಾಜ್ಯವು ಭೂಲೋಕದಲ್ಲಿರುವ ಈ ಗೊಂದಲದ ಪರಿಸ್ಥಿತಿಯಿಂದ ಒಂದು ವ್ಯವಸ್ಥಾಕ್ರಮವನ್ನು ಉಂಟುಮಾಡಲು ಸಾಧ್ಯವಿರುವದೆಂಬ ಭರವಸೆಯನ್ನು ಹೊಂದಿದವರಾಗಿದ್ದು, ತಾನು ಮನುಷ್ಯನಾಗಿದ್ದಾಗ ತನ್ನ ಅಮೂಲ್ಯವಾದ ರಕ್ತವನ್ನು ಒಂದೇ ಸಾರಿ ನಿರಂತರವೂ ನಿಲ್ಲುವಂಥ ಮನುಷ್ಯನ ವಿಮೋಚನಾ ಕ್ರಯವಾಗಿ ನೀಡಿ ಲೋಕಕ್ಕೆ ಆಶೀರ್ವಾದಗಳನ್ನು ಕೊಂಡುತರುವನು.

ಅರಸನನ್ನು ಹಿಂತರುವ ಸಲುವಾಗಿ ಮಾತನಾಡುವಂಥವರ ಸಂಖ್ಯೆಯು ಹೆಚ್ಚುವದು

ಅಹ್, ಹೌದು! ಇದೊಂದೇ ಪರಿಹಾರವು, ಮತ್ತು ಸ್ವಾರ್ಥವೆಂಬ ವ್ಯಾಧಿಯನ್ನು ಗುಣಪಡಿಸಲು ಅಂದರೆ ಇದರಲ್ಲಿ ದೇಹದಿಂದ ಸಾಮಾಜಿಕ, ರಾಜಕೀಯ ಹಾಗು ಹಣಕಾಸಿನ ಸಂಬಂಧವಾದ ವ್ಯಾಧಿಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವಂತಾಗಲು [ಪರಿಹಾರವು] ಸಾಕಷ್ಟಿರುವದು.

"ಆದರೆ ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು?"

ಅರಸನ ಬರುವಿಕೆಯು ಜನಾಂಗಗಳಿಗೆ ಸಹಿತವಾಗಿ ವೈಯುಕ್ತಿಕವಾಗಿಯೂ ಇರುವದು, ಅಲ್ಲದೆ ಸಭೆಯನ್ನು ಪರಿಶೋಧಿಸುವ, ನ್ಯಾಯ ತೀರ್ಮಾನಿಸುವ ಮತ್ತು ಶುದ್ಧೀಕರಿಸುವ ಸಲುವಾಗಿರುವದೆಂಬ ಅರ್ಥಕೊಡುವದು. "ಆತನು ಬರುವಾಗ ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ, ಅಗಸನ ಚೌಳಿಗೂ ಸಮನಾಗಿದ್ದಾನೆ." (ಮಲಾಕಿ 3:2) ಈ ವರೆಗೂ ಯಾವ ಭೂಸುಧಾರಕನೂ ಪ್ರಯತ್ನಿಸದಷ್ಟರ ಪ್ರಮಾಣದಲ್ಲಿ ಇದು ದುಷ್ಟತನವನ್ನು ಕಡಿತಗೊಳಿಸುವದು ಎಂಬ ಅರ್ಥವನ್ನು ಕೊಡುವದು. ಅಲ್ಲಿ ಯಾವುದೇ ಒಂದು ವಿಧದಲ್ಲಿ ಅಥವಾ ಪ್ರಮಾಣದಲ್ಲಿ ದುಷ್ಟನಾಗಲು ಅಥವಾ ದುಷ್ಟತನವನ್ನು ನಡೆಸಲು ಯಾವ ಪರವಾನಗಿಯೂ ಇರುವದಿಲ್ಲ. ಇರುವ ಒಂದೇ ಒಂದು ಸ್ವಾತಂತ್ರ್ಯವೆಂದರೆ ಅದು ಒಳ್ಳೆಯದನ್ನು ಮಾಡಲು.

ಅಹ್! ಈ ದಿನದಲ್ಲಿ ಬಹು ಅಲ್ಪ ಮಂದಿ ಅರಸನು ಹಿಂದಿರುಗಿ ಬರುವದನ್ನು ಎದುರು ನೋಡುತ್ತಿರುವದಕ್ಕೆ ಅಥವಾ ಈ ಬಗ್ಗೆ ಮಾತನಾಡುತ್ತಿರುವರು ಎನ್ನುವದಕ್ಕೆ ಆಶ್ಚರ್ಯವಾಗ–ಬೇಕಿಲ್ಲ. ಕೆಲವರಿಗೆ ಇದು ಉಳಿದ ತಮ್ಮ ಜೊತೆಯವರಿಗಿಂತಲೂ ತಾವು ಹೊಂದಿರುವ ಹೆಚ್ಚು ಅನುಕೂಲಗಳನ್ನು ಕಡಿತಗೊಳಿಸುವದೆಂಬ ಅರ್ಥಕೊಡುತ್ತೆ. ಬೇರೆ ಕೆಲವರಿಗೆ ತಮ್ಮ ಜೊತೆಯವರಿಗಿಂತಲೂ ಹೆಚ್ಚಿನ ಅನುಕೂಲಗಳು, ಗೌರವ ಅಥವಾ ಸವಲತ್ತುಗಳನ್ನು ಹೊಂದಲು ಅಪೇಕ್ಷಿಸುವದನ್ನು ತಡೆಯುವದೆಂಬ ಅರ್ಥಕೊಡುತ್ತದೆ. ಬೇರೆಯವರಿಗೆ ಇದು ಈಗ ಪಾಪದಲ್ಲಿ ತೊಡಗಿಸಿಕೊಂಡು ಅದರಲ್ಲಿ ಆನಂದಿಸುವದನ್ನು ತೆಗೆದುಹಾಕುವದೆಂಬ ಅರ್ಥಕೊಡುತ್ತದೆ.

ಹೇಗೂ, ಆ ರಾಜನಿಗಾಗಿ ಮತ್ತು ಆ ರಾಜ್ಯಕ್ಕಾಗಿ: "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಎಂದು ಪ್ರಾರ್ಥಿಸಬೇಕೆಂದು ಆ ರಾಜನು ತನ್ನ ಸಭೆಗೆ

ಕಲಿಸಿಕೊಟ್ಟಿರುವನೋ, ಅವು ಬರುತ್ತಿರುವವು. ವಾಸ್ತವದಲ್ಲಿ, ಅವುಗಳು ಇಲ್ಲಿರುವವು; ಮತ್ತು ಸಭೆಯಲ್ಲಿ ಮತ್ತು ರಾಜ್ಯಗಳಲ್ಲಿರುವ ಈಗಿನ ಸಂಕಷ್ಟಗಳು ಆ ರಾಜನಿಂದ ಮತ್ತು ಆ ರಾಜ್ಯದಿಂದ ಹೊರಹೊಮ್ಮುತ್ತಿರುವ ಪ್ರಭಾವಗಳ ಪರಿಣಾಮ ವಾಗಿರುವದು. ಜನರು ಅದನ್ನು ತಿಳುಕೊಳ್ಳದೇ ಇದ್ದಾಗ್ಯೂ, ಅದು ಈ ದೇವರ ರಾಜ್ಯದ ಮೂಲಕವಾಗಿ ಭೂಲೋಕದ ರಾಜ್ಯಗಳೆಲ್ಲವನ್ನು ಧ್ವಂಸಮಾಡಿ ಜನರ ಹೃದಯಗಳನ್ನು ಹೀಗೆ ನಿಜವಾದ ಅರಸನ ಮತ್ತು ಆತನ ನೀತಿರಾಜ್ಯಕ್ಕಾಗಿ ಸಿದ್ಧಮಾಡುತ್ತಿದ್ದು, ಈಗಲೂ ಅವುಗಳನ್ನು ಹೊಡೆದುರುಳಿಸಲು ಸಿದ್ಧತೆ ನಡೆಯುತ್ತಿರುವದು. ಹೀಗೆ ಪ್ರವಾದಿಯ ಮೂಲಕವಾಗಿ ದೇವರಿಂದ ಇದು ಮೊದಲೇ ಹೇಳಲಾಗಿರುವದು. – ದಾನಿಯೇಲ 2:34–35.

ಆದರೆ ಮಹಿಮೆಯುಳ್ಳ ಅರಸನು ಬಂದು ಎಲ್ಲವನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸಲುವಾಗಿ ಪ್ರಾರ್ಥಿಸಲ್ಪಡುವ ವರೆಗೂ ಕಾದುಕೊಂಡಿರುವನು. ಸಮಾಜದ ಅನೇಕ ಪಂಗಡಗಳು ಮತ್ತು ಒಳಪಂಗಡಗಳು ತಮ್ಮಲ್ಲಿರುವ ನ್ಯೂನ್ಯತೆಗಳನ್ನು ಕತ್ತರಿಸಿ ಕೊಂಡು ಅವುಗಳನ್ನು ಸೀಳಿ ಅಂಗಛೇದನಮಾಡಿ ತಮ್ಮತಮ್ಮಲ್ಲಿನ ಶರೀರಗಳನ್ನು ಸರಿಪಡಿಸಿ ತಮ್ಮನ್ನು ಸಿದ್ಧಮಾಡಿಕೊಳ್ಳುವಂತಾಗಲು ಆತನು ಬಿಡುವನು. ಆದರೆ ಇವೆಲ್ಲವೂ ಅರಸನ ಕಣ್ಗಾವಲಿನ ಅಡಿಯಲ್ಲಿ ನಡೆಯಲ್ಪಟ್ಟು ಆತನ ಸರ್ವಾಧಿಕಾರದ ಅಧೀನದಲ್ಲಿರು –ವದು. ಅಲ್ಲದೆ ಎಲ್ಲರೂ ಸಂಪೂರ್ಣವಾಗಿ ಅಸ್ವಸ್ಥರಾಗಿರಲು ಮತ್ತು ಆತನು ಒಳ್ಳೆಯ ಚಿಕಿತ್ಸಕನಾಗಿ ಬಂದು "ಗಿಲ್ಯಾದಿನ [ನೋವುನಿವಾರಕ] ಔಷಧಿಯನ್ನು" ಅವರೆಲ್ಲರಿಗೆ ನೀಡುವನೋ ಆಗ ಆತನು ಮತ್ತು ಆತನ ರಾಜ್ಯವನ್ನು ಒಟ್ಟಾಗಿ "ಜನಾಂಗಳೆಲ್ಲರ ಇಷ್ಟವಸ್ತುವೆಂದು" ಅವರೆಲ್ಲರೂ ಜಯಘೋಷ ಮಾಡುವರು. (ಹಗ್ಗಾಯ 2:7) ಯಹೂದ್ಯರು ಮೊದಲು; "ಅವರು ಚೊಚ್ಚಲ ಮಗನ ವಿಯೋಗಕ್ಕಾಗಿ ಗೋಳಾಡುವಂತೆ ಅವನಿಗಾಗಿ ಗೋಳಾಡುವರು." (ಜೆಕರ್ಯ 12:10; ಯೆಶಾಯ 25:9) ಮತ್ತು ಆತನು ತನ್ನನ್ನು ಹಾಗು ತನ್ನ ರಾಜ್ಯವನ್ನು ಪ್ರಕಟ ಮಾಡಿಕೊಂಡಾಗ, "ಆಹಾ, ಈತನೇ ನಮ್ಮ ದೇವರು. ನಮ್ಮನ್ನು ರಕ್ಷಿಸಲಿ ಎಂದು ನಿರೀಕ್ಷಿಸಿಕೊಂಡಿದ್ದೇವೆ:" ಎಂದು ಹೇಳುವರು. (ಯೇಶಾಯ 25:9) ಆನಂತರ ಹೊರಟು ಬಂದ ಬಹು ಜನಾಂಗದವರು–ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು. ನಾವು ಆತನ ದಾರಿಗಳಲ್ಲಿ ನಡೆಯುವೆವು" ಎಂದು ಹೇಳುವರು. – ಯೆಶಾಯ 2:3

ಖಂಡಿತವಾಗಿಯೂ, ಮನುಷ್ಯರು ಮಾಡುವ ತಪ್ಪುಗಳಿಗೆ ಮತ್ತು ಪಡುವ ವ್ಯಥೆಸಂಕಟಗಳಿಗೆ ಕೇವಲ ಆ ರಾಜನು ಮತ್ತು ಆತನ ರಾಜ್ಯವು ಮಾತ್ರ ಒಂದೇ ಪರಿಹಾರ, ಅಲ್ಲದೆ ಇದೇ ಅತ್ಯುತ್ತಮ ಪರಿಹಾರವೆಂದು ತಿಳಿದುಕೊಂಡಿರುವರೋ ಅವರು ನರಳುತ್ತಿರುವ ಜಗತ್ತಿಗೆ ಇದನ್ನು ತೋರಿಸಿಕೊಟ್ಟು, ಅವರ ಔಷಧಿಲೇಪನಗಳು ಮತ್ತು ಯೋಜನೆ ಉಪಾಯಗಳು ನಿಜವಾಗಿಯೂ ಯಾವ ಒಳ್ಳೆಯದನ್ನೂ ಮಾಡಲು ಸಾಧ್ಯವಿಲ್ಲ– ವೆಂಬುದನ್ನು ಅವರಿಗೆ ತೋರಿಸಿಕೊಡಬೇಕು. ಅರಸನು ಹಿಂದಿರುಗಿ ಬರುವದನ್ನು ಅವರಿಗೆ ತಿಳಿಸಬೇಕು! ಆತನು ಆ ದೊಡ್ಡ ಪ್ರವಾದಿಯೆಂದೂ, ಮಹಾ ಯಾಜಕನೆಂದೂ, ಜೊತೆಗೆ ದೊಡ್ಡ ಅರಸನೆಂದು ಅವರಿಗೆ ಹೇಳಬೇಕು; ಆ ಪ್ರವಾದಿಯಾಗಿ [ಇದಕ್ಕೆ ಕ್ರಿಸ್ತನು ಶಿರಸ್ಸು ಮತ್ತು ಆತನ ಸಭೆಯು ಆತನ ದೇಹವಾಗಿದ್ದು] ಆತನು ದೇವರ ಬಗ್ಗೆ ಒಂದು ನಿರ್ದಿಷ್ಟವಾದ ಪರಿಜ್ಞಾನವು ಭೂಲೋಕವನ್ನೆಲ್ಲಾ ತುಂಬಿಕೊಳ್ಳುವಂತೆ ಮಾಡುವನೆಂದೂ; ಅಲ್ಲದೆ ಯಾರು ಆ ಪರಿಜ್ಞಾನದ ಅಡಿಯಲ್ಲಿ ಪಾಪದಿಂದ ಹಿಂದಿರುಗಿ ಬಂದು ನೀತಿಯು ಕಡೆಗೆ ತಿರುಗಿಕೊಳ್ಳುವರೋ ಅಂಥವರನ್ನು, ಒಬ್ಬ ಯಾಜಕನಾಗಿ, ಕ್ಷಮಿಸಿ ಅವರಿಗೆ ಸಾಂತ್ವನ ನೀಡಿ ಸಹಾಯಮಾಡಲು ಸಿದ್ಧನಿರುವನೆಂದು ತಿಳಿಸಬೇಕು. ಆತನ ಮರಣವು ಎಲ್ಲರಿಗೋಸ್ಕರವಾಗಿರುವ ವಿಮೋಚನಾ ಕ್ರಯವೆಂದು ಹೇಳಬೇಕು, ಹಾಗು ಆ ಅರಸನು ಹಿಂದಿರುಗಿ ಬರುವಂಥದು–ಸೈತಾನನ್ನು ಕಟ್ಟಿಹಾಕಿ, ಹೊಸ ಒಡಂಬಡಿಕೆಯ ಷರತ್ತುಗಳ ಅನುಸಾರವಾಗಿ ದೇವರ ಮಕ್ಕಳ ಸ್ವಾತಂತ್ರ್ಯವನ್ನು ಅಂಗೀಕರಿಸಿಕೊಳ್ಳುವಂಥ ಆತನ(ಸೈತಾನನ) ಸೆರೆಯಲ್ಲಿರುವವರನ್ನು ಬಿಡುಗಡೆಗೊಳಿಸುವ ಸಲುವಾಗಿರುವ– ದೆಂದು ಅವರಿಗೆ ಹೇಳಬೇಕು. – ಅ.ಕೃ. 3:22–23; ಗಲಾತ್ಯ 3:29; 1 ಕೊರಿಂಥ 6:2

*****

ದೇವರ ಕಡೆಗಿನ ದಾವೀದನ ಕೃತಜ್ಞತಾಭಾವ

ರೀಪ್ರಿಂಟ್ಸ್ ಪುಟ 2031

2 ಸಮುವೇಲ 22:40–51

"ಯೆಹೋವನು ನನ್ನ ಬಂಡೆಯೂ ನನ್ನ ಕೋಟೆಯೂ ನನ್ನ ವಿಮೋಚಕನೂ ಆಗಿದ್ದಾನೆ;" – 2 ಸಮುವೇಲ 22:2

ಈ ಅಧ್ಯಾಯವು ಪೂರ್ಣವಾಗಿ ದಾವೀದನ ಉಪಕಾರ ಸ್ತುತಿಗೀತೆಗಳಲ್ಲಿ ಒಂದಾಗಿದ್ದು ದೇವರ ಉಪಕಾರಕ್ಕಾಗಿ ಮತ್ತು ತಾನು ಪ್ರವಾದಿಯಾದ ಸಮುವೇಲನಿಂದ ಅಭಿಷೇಕ ಹೊಂದಿದಂದಿನಿಂದಲೂ, ಜೊತೆಗೆ ನಿಸ್ಸಂದೇಹವಾಗಿ ಇದರ ಹಿಂದಿನಿಂದಲೂ, ತೋರ್ಪಡಿಸಿದ ಆತನ ಪ್ರೀತಿಪೂರ್ವಕವಾದ ಏರ್ಪಾಟುಗಳ ಸಲುವಾದ ಕೃತಜ್ಞತೆಯನ್ನು ಒಳಗೊಂಡಿರುವದು. ಇದು ಆತನ ಇನ್ನೊಂದು ಕೀರ್ತನೆಗಳಲ್ಲಿ ವ್ಯಕ್ತಪಡಿಸಲಾದುದನ್ನು ನಮ್ಮ ನೆನಪಿಗೆ ತರುತ್ತದೆ, – "ನೀತಿವಂತರೇ ಯೆಹೋವನ ವಿಷಯದಲ್ಲಿ ಉಲ್ಲಾಸ ಧ್ವನಿಮಾಡಿರಿ; ಯಥಾರ್ಥಚಿತ್ತರು ಆತನನ್ನು ಸ್ತುತಿಸುವದು ಯುಕ್ತವಾಗಿದೆ." (ಕೀರ್ತನೆ 33:1)

ನಿಜವಾಗಿಯೂ ದಾವೀದನ ಲೇಖನಗಳು, ಜೊತೆಗೆ ಪ್ರವಾದಿಗಳೆಲ್ಲರ ಹಾಗು ಅಪೋಸ್ತಲರೆಲ್ಲರ ಲೇಖನಗಳು ದೇವರ ಕಡೆಗಿನ ಕೃತಜ್ಞತಾಸ್ತುತಿಗಳ ಉತ್ಸಾಹಕರವಾದ ಭಾವನೆಗಳನ್ನು ಹೇರಳವಾಗಿ ವ್ಯಕ್ತಪಡಿಸಿರುವವು. ಅವರು ಸ್ವತಃ ದೇವರಿಗೆ ಆತನ ಕರುಣೆಯೆಲ್ಲವನ್ನು ಸ್ಮರಿಸುತ್ತಾ ಪ್ರೀತಿಪೂರ್ವಕವಾಗಿ ಕೃತಜ್ಞತೆಯಿಂದ ಸ್ತುತಿಸುವದು ಮಾತ್ರವಲ್ಲದೆ ಭಾವಪೂರಿತರಾಗಿ ವಾಗ್ಮೀಯತೆಯಿಂದ ಮತ್ತು ಪವಿತ್ರವಾದ ಉತ್ಸಾಹದಿಂದ ಮನುಪುತ್ರರೆಲ್ಲರೂ, ಶ್ವಾಸವಿರುವದೆಲ್ಲವೂ ಮತ್ತು ಅಚೇತನ ಪ್ರಕೃತಿಯೂ ಸಹ ಆತನ ಪವಿತ್ರ ನಾಮವನ್ನು ಪ್ರಸಂಶಿಸಿ ಘನಪಡಿಸಬೇಕೆಂದು ಕರೆನೀಡಿರುವರು. ಆರಾಧಕರೆಲ್ಲರೂ ಸಹ ತಮ್ಮೊಡನೆ ಮಾನವ ನಿರ್ಮಿತ ಸಂಗೀತ ವಾದ್ಯಗಳೆಲ್ಲವೂ ಒಟ್ಟಾಗಿ ಸಮ್ಮೇಳಿತರಾಗಿ ಕೃತಜ್ಞತಾಪೂರ್ವಕವಾದ ಭಯಭಕ್ತಿಯಿಂದ ಸ್ತುತಿಸಲೆಂದು ಹೀಗೆ ಉದ್ಗಾರವೆತ್ತಿದ್ದಾರೆ. "ಆತನ ಪ್ರಭಾವವುಳ್ಳ ನಾಮಕ್ಕೆ ಸದಾಕಾಲವೂ ಪ್ರಣಾಮವಿರಲಿ; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿರಲಿ. ಆಮೆನ್ ಆಮೆನ್!" – ಕೀರ್ತನೆ 33:2–3; 50:1–6; 72:19. ಇದನ್ನು ಸಹ ನೋಡಿರಿ: ವಿಮೋ. 15:1–21

ನಾವು ಹೀಗೆ ಸಮಸ್ತ ಮಾನವ ಕುಲವು ಆತ್ಮಪ್ರೇರಿತ ಸ್ವರದಿಂದ [ದೇವರನ್ನು] ಸ್ತುತಿಸಿ ಆರಾಧಿಸಿ ಕೃತಜ್ಞತೆ ಸಲ್ಲಿಸುವಂತೆ ಕರೆಯಲ್ಪಟ್ಟಿರುವದನ್ನು ಪರಿಗಣಿಸುವಾಗ್ಗೆ, ಇದು–ನಾವು ಮುಂದುವರಿದು ಸ್ತುತಿಯ ಆತ್ಮವು ಕ್ರಿಸ್ತೀಯ ಅಥವಾ ದೇವಭಕ್ತಿಯುಳ್ಳ ಗುಣಗಳಿಗೆ ಇರುವ ಸಂಬಂಧದ ಬಗ್ಗೆಯೂ ಗಣನೆಗೆ ತೆಗೆದುಕೊಳ್ಳುವಂತೆ ನಮ್ಮನ್ನು ನಡೆಸಿರುವದು. "ಯಥಾರ್ಥಚಿತ್ತರು ಆತನನ್ನು ಸ್ತುತಿಸುವದು ಯುಕ್ತವಾಗಿದೆ." ಎಂದು ದಾವೀದನು ಹೇಳಿರುವನು. ಆದರೆ ಹೀಗೇಕೆ? ಕಾರಣ ಪ್ರೀತಿಪೂರ್ವಕವಾಗಿ ಕೃತಜ್ಞತೆ ಸಲ್ಲಿಸುವದು ದೇವರ ಹೋಲಿಕೆಯನ್ನು ಹೊತ್ತಿರುವ ಪ್ರಾಣಾತ್ಮಕ್ಕೆ ದೈವೀಕವಾಗಿ ಒಳಗೂಡಿಸಲಾದ ಸಹಜಪ್ರವೃತ್ತಿಯಾಗಿರುವದು; ಅದುದರಿಂದ ಇದನ್ನು ಬೆಳಸಿಕೊಳ್ಳಬೇಕಿರುವದು. ಬುದ್ಧಿಜೀವಿಯಲ್ಲಿರುವ ಈ ಮೂಲವಸ್ತುವನ್ನು ದೇವರ ದಯೋಪಕಾರಗಳಿಗೆ ಸ್ಪಂದಿಸುವಂತೆ ರಚಿಸಲಾಗಿರುವದು; ಅಲ್ಲದೆ ಈ ಮೂಲವಸ್ತುವೇ ದೇವರೊಡನೆಯ ಅನ್ಯೋನ್ಯತೆ ಹಾಗು ಒಡನಾಟಗಳನ್ನು ಸಾಧ್ಯವಾಗಿಸುವದು. ದೇವರ ಉಪಕಾರವು ನಮ್ಮಲ್ಲಿ ಕೃತಜ್ಞತಾಪೂರ್ವಕವಾದ ಯಾವುದೇ ಪ್ರಸಂಶನಾತ್ಮಕ ಪ್ರಜ್ಞೆಯನ್ನು ಜಾಗೃತಗೊಳಿಸಲು ಸಾಧ್ಯವಾಗದೇ ಇದ್ದಲ್ಲಿ; ನಾವೇನಾದರೂ ಇಂಥಾ ಮನೋಭಾವಗಳಿಗೆ ಸ್ಪಂದಿಸಲಾಗದೆ ಸಂಪೂರ್ಣವಾಗಿ ಸತ್ತಂತವರಂತೆ ಇದ್ದಲ್ಲಿ, ತನ್ನ ಉಪಕಾರವನ್ನು ಇಂಥವರ ಕಡೆಗೆ ತೋರಿಸಲು ದೇವರಿಗೆ ಸಂತೋಷವಿರಲು ಸಾಧ್ಯವಿರುವುದಿಲ್ಲ; ಅಲ್ಲದೆ ಆತನ ಪ್ರೀತಿಯನ್ನು ಬರಮಾಡಿಕೊಳ್ಳವಂತಾಗಲು ನಮ್ಮಲ್ಲಿ ಯಾವ [ಅರ್ಹವಾದ] ಸಂಗತಿಯೂ ಇರುವದಿಲ್ಲ; ಮತ್ತು ಹಾಗೆಯೇ ದೇವರ ದಯೋಪಕಾರ ಮತ್ತು ಕೃಪೆಯು ನಮ್ಮಲ್ಲಿ ಪ್ರೀತಿಯನ್ನು ಜಾಗೃತಗೊಳಿಸುವಂತಾಗಲು ಯಾವ ಸಂಗತಿಯೂ ಇರುವದಿಲ್ಲ. ನಾವು ದೈವ ಸಂತೋಷದ ಸಲುವಾಗಿ ಅಸ್ಥಿತ್ವವನ್ನು ಹೊಂದಿದ್ದು, ಅಲ್ಲದೆ ಆ ಕಾರಣದಿಂದ ಸೃಷ್ಟಿಮಾಡಲ್ಪಟ್ಟಿರಲು, (ಪ್ರಕಟನೆ 4:11) ತನ್ನ ಸೃಷ್ಟಿಗಳಾದ ಬುದ್ಧಿಜೀವಿಗಳಿಗೆ ದೇವರು ಈ ಗುಣದ ಅಂಶವನ್ನು ದತ್ತಿಯಾಗಿ ನೀಡಿರುವದರಿಂದ, ಆತನದೇ ಆದ ಉಪಕಾರಗಳಿಗೆ ಸ್ಪಂದಿಸಿ, ಆತನೊಡನೆ ಸಜೀವವೂ ಹಾಗು ಆನಂದಕರವೂ ಆದ ಅನ್ಯೋನ್ಯತೆಯನ್ನು ಉಂಟು ಮಾಡಿರುವದು. ಇದು ಸೃಷ್ಟಿ ಹಾಗು ಸೃಷ್ಟಿಕರ್ತ ಈ ಇಬ್ಬರ ಸಂಬಂಧದಲ್ಲಿಯೂ ಮಾನವನ ಅಸ್ಥಿತ್ವದ ಮುಖ್ಯ ಗುರಿಯಾಗಿ–ರುವದು.–ಕೀರ್ತನೆ 16:11; ಜ್ಞಾನೋಕ್ತಿ 11:20, 15:8.

ಸಂತೋಷಿಸುವ ಹಾಗು ಸ್ತುತಿಸುವ ಮನೋಭಾವಗಳನ್ನು ಹೀಗೆ ದೈವೀಕ ಮಿತವ್ಯಯದ ದೃಷ್ಟಿಯಿಂದ ನೋಡುವಾಗ ಇದನ್ನು ಬೇರ್ಪಡಿಸಲಾಗದಂತೆ ಬಂಧಿಸಲಾಗಿರುವದು; ಹೀಗಾಗಿ ಇದನ್ನು ಸಂಯೋಚಿಸುವವನಾಗಿ ದಾವೀದನು–"ಯೆಹೋವನಲ್ಲಿ ಸಂತೋಷಿಸಿರಿ; ಯಾಕಂದರೆ [ಆತನನ್ನು] ಸ್ತುತಿಸುವದು ಯುಕ್ತವಾಗಿದೆ" ಎಂದು ಈ ಎರಡನ್ನು ಹೆಚ್ಚುಕಡಿಮೆ ಸಮಾನಾರ್ಥವನ್ನಾಗಿ ಮಾಡಿ ಹೇಳಿರುವನು. ಈ ಮೂಲತತ್ವದ ನಿದರ್ಶನಕ್ಕಾಗಿ ನಾಯಿ ಮತ್ತು [ಮಾಂಸಕ್ಕಾಗಿ ಸಾಕುವ] ಹಂದಿಯ ಉದಾಹರಣೆಯನ್ನು ತೆಗೆದುಕೊಳ್ಳಿರಿ. ಇವೆರಡೂ ದೈವೋಪಕಾರದ ಬಗ್ಗೆ ಪ್ರಸಂಶೆಯನ್ನು ಹೊಂದಿರಲು ಸಾಧ್ಯವಿರುವದಿಲ್ಲ, ಇವೆರಡೂ ದೇವರ ಮಾನಸಿಕ ಅಥವಾ ನೈತಿಕ ಹೋಲಿಕೆ ಹಾಗು ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿರುವದಿಲ್ಲ; ಹೀಗಾಗಿ ಆತನನ್ನು ತಿಳಿದುಕೊಂಡು ಆತನ ಬಗ್ಗೆ ಅಲೋಚಿಸಲು ಸಂಪೂರ್ಣವಾಗಿ ಅಸಮರ್ಥವಾಗಿರುವವು. ಮನುಷ್ಯನು ಅತ್ಯುನ್ನತ ಜೀವಿಯಾಗಿದ್ದು, ಅವನನ್ನು ಯಾವುದೇ ಅರ್ಥದಲ್ಲಿ ಅಥವಾ ಪ್ರಮಾಣದಲ್ಲಿ ತಿಳಿದುಕೊಳ್ಳಲು [ನಾಯಿ ಮತ್ತು ಹಂದಿಗಳಿಗೆ] ಸಾಧ್ಯವಿರುವದು; ಅಲ್ಲದೆ ಇದು ಮೊದಲನೆಯದು, ಯಾಕಂದರೆ ಮನುಷ್ಯನು ಅವುಗಳಿಗೆ ಕಾಣುವಂಥವನೂ ಮತ್ತು ಮುಟ್ಟಲಾಗುವಂಥವನೂ ಆಗಿರುವನು, ಮತ್ತು ಎರಡನೆಯದಾಗಿ, ಅವುಗಳು [ನಾಯಿ ಮತ್ತು ಹಂದಿ] ಇದೇ ರೀತಿಯ [ಮನುಷ್ಯನ] ಕೆಲವು ಸಹಜ ಸಾಮರ್ಥ್ಯವನ್ನು ಹೊಂದಿರುವವು. ಆದರೂ ಇವು ಬಹು ಕೀಳು ಮಟ್ಟದ್ದಾಗಿದ್ದು ಒಂದು ಸಂಕುಚಿತವಾದ ವಲಯಗಳಲ್ಲಿ ಇವುಗಳನ್ನು ಅಭ್ಯಾಸಿಸುವವು. ನಾಯಿಗೆ ಒಂದು ಗಣನೀಯ ಪ್ರಮಾಣದ ಕೃತಜ್ಞತಾಭಾವವು ಇರುವದು; ಅದಕ್ಕೆ ಆಹಾರಕೊಟ್ಟು ಪ್ರೀತಿಯಿಂದ ಮೈಸವರಿದಲ್ಲಿ, ಇದಕ್ಕೆ ಪ್ರತಿಫಲವಾಗಿ ಅದು ಸನ್ನೆಯ ಮೂಲಕವಾಗಿ ತನ್ನ ಪ್ರೀತಿಕೃತಜ್ಞತೆಗಳನ್ನು ಒಂದು ಪ್ರಸಂಶನಾರ್ಥದಲ್ಲಿ ತೋರ್ಪಡಿಸುವಂಥ ಬಯಕೆಯನ್ನು ಪ್ರದರ್ಶಿಸುವದು. ಅದು ತನ್ನ ಬಾಲವನ್ನು ಆಡಿಸಿ, ನಿಮ್ಮ ಮುಖವನ್ನು ಕರುಣೆಯಿಂದ ನೋಡಿ, ನಿಮ್ಮ ಕೈಯನ್ನು ನಾಲಿಗೆಯಿಂದ ನೆಕ್ಕಿ, ತನ್ನ ತಲೆಯಿಂದ ಉಜ್ಜಿ ಮುದ್ದಾಡಿ ತನಗೆ ಯಾವ ಕೆಲಸವನ್ನು ಕೊಡುವನೆಂದು ಎಚ್ಚರಿಕೆಯಿಂದ ಗಮನಿಸುವದು. ಇದಕ್ಕೆ ಬದಲಾಗಿ ಹಂದಿಯು ಯಾವ ಪ್ರಸಂಶೆಯನ್ನೂ ತೋರ್ಪಡಿಸದು; ಅದು ತನಗೆ ಹೊಂದಲು ಸಾಧ್ಯವಾದುದೆಲ್ಲವನ್ನು ತೆಗೆದುಕೊಂಡು ಇದನ್ನು ಮಾನ್ಯಮಾಡುವ ಸಲುವಾಗಿ [ತಲೆಯೆತ್ತಿ] ನೋಡುವನ್ನೂ ಸಹ ಮಾಡುವದಿಲ್ಲ; ಅದರ ಕಣ್ಣುಗಳು ಯಾವಾಗಲೂ ಕೆಳಮುಖವಾಗಿರುತ್ತದೆ. ಹೆಚ್ಚಾಗಿ ಪಡಕೊಳ್ಳಲು ಯಾವಾಗಲೂ ಅದು ತನ್ನ ಮೂಗನ್ನು ಭೂಮಿಯೊಳಗೆ ತೂರಿಸುತ್ತಿರುತ್ತದೆ; ಅಲ್ಲದೆ ಕೇವಲ ಗುರುಗುಟ್ಟುವಿಕೆಯ ಒಂದೇ ಒಂದು ಶಬ್ದದ

ಮೂಲಕವಾಗಿ ಅದು ತನ್ನ ಭಾವನೆಯನ್ನು ವ್ಯಕ್ತಪಡಿಸುವದು. ಆದುದರಿಂದ ಹಂದಿಗೆ ಮನುಷ್ಯನಲ್ಲಿ ಸಂತೋಷಿಸಲು ಸಾಧ್ಯವಿರುವದಿಲ್ಲ; ಇಲ್ಲವೇ ಮನುಷ್ಯನಿಗೆ ಹಂದಿಯಲ್ಲಿ ಯಾವ ಸಂತೋಷವನ್ನು ಕಂಡುಕೊಳ್ಳಲು ಸಾಧ್ಯವಿರುವದಿಲ್ಲ. ಇಲ್ಲಿ ಅನ್ಯೋನ್ಯತೆಯ ಯಾವುದೇ ಬಂಧವಿರುವದಿಲ್ಲ, ಹಂದಿಯು ಬೆಳೆದು ಅದರ ಮಾಂಸವು ವೃದ್ಧಿಯಾಗಿ ಅದು ವಧಿಸಲ್ಪಟ್ಟು, ಅದನ್ನು ಮಾರಾಟಮಾಡುವವರೆಗೂ ಮನುಷ್ಯನು ಹಂದಿಯ ಇರುವಿಕೆಯನ್ನು ಸಹಿಸಿಕೊಂಡಿರುವಲ್ಲಿ; ನಾಯಿ ಮತ್ತು ಅದರ ಒಡೆಯನ ನಡುವೆ ಒಂದು ಘಾಡ ಸ್ನೇಹವಿದ್ದು, ಅದನ್ನು ಬೆಳಸಿಕೊಂಡು ಬಂದಾಗ, ಅದು ಇಬ್ಬರಿಗೂ ಸಂತೋಷವನ್ನು ನೀಡಿ, ಯಾವ ಹಣಕಾಸಿನ ಬೆಲೆಯೂ ಇಲ್ಲದೆಯೇ, ಅವರು ಆಜೀವ ಪರ್ಯಂತರವಾದ ಸ್ನೇಹಬಾಂಧವ್ಯವನ್ನು ಹೊಂದಿಕೊಂಡಿರುವರು.

ಹೀಗಾಗಿ, ಕೃತಜ್ಞತಾಸ್ತುತಿಯ ಮತ್ತು ದೇವರಿಂದ ತೋರ್ಪಡುವ ಎಲ್ಲಾ ಉಪಕಾರಗಳಿಗಾಗಿ ಪ್ರೀತಿಪೂರ್ವಕವಾಗಿ ಪ್ರಸಂಶಿಸುವ ಭಾವವನ್ನು ಬೆಳೆಸಿಕೊಳ್ಳುವಂಥದರಲ್ಲಿದೆ ಕ್ರೈಸ್ತರ ಆನಂದಭರಿತ ಜೀವನದ ಗುಟ್ಟು ಎಂಬದು ಸರಳವಾದ ಸಂಗತಿ. ಅಲ್ಲದೆ ಇಂಥಾ ಮನೋಭಾವವನ್ನು ಬೆಳೆಸಿಕೊಳ್ಳುವ ಸಲುವಾಗಿ ನಾವು ಆತನ ಕರುಣೆ ಮತ್ತು ಕೃಪೆಯ ಕಾರ್ಯಗಳನ್ನು ಸತತವಾಗಿ ನೆನಪುಮಾಡಿಕೊಳ್ಳುವದು ಅಗತ್ಯ; ನಮ್ಮ ಪ್ರಾರ್ಥನೆಗಳಲ್ಲಿ ನಾವು ಆತನ ಉಪಕಾರಗಳೆಲ್ಲವನ್ನು ಹೇಗೆ ಆಗಾಗ್ಗೆ ನೆನೆಸಿಕೊಳ್ಳುವೆ– ವೆಂಬುದನ್ನು, ಹೇಗೆ ಆತನ ಪ್ರೀತಿ ಮತ್ತು ಪರಿಪಾಲನೆಯ ಎಲ್ಲಾ ಹೊಸ ಸಾಕ್ಷ್ಯಾಧಾರಗಳು ನಮ್ಮ ನಂಬಿಕೆಯನ್ನು ಆಳವಾಗಿ ಬೇರೂರ ಮಾಡಿ, ಆತನ ಪ್ರಸನ್ನತೆ ಹಾಗು ಕೃಪೆಗೆ ಒಂದು ಅರ್ಥಕೊಟ್ಟು ಅದನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವಂತೆ ಮಾಡಿರುವದನ್ನು, ಮತ್ತು ಹೇಗೆ ಇಂಥಾ ಅನುಭವಗಳ ಮೂಲಕವಾಗಿ ನಮ್ಮ ಪ್ರೀತಿ ಮತ್ತು ಆನಂದಗಳು ಬಹುವಾಗಿ ಹೆಚ್ಚುತ್ತಾ ಬಂದು ಸಮೃದ್ಧಿಯಾಗುವಂತೆ ಅನುಕೂಲಿಸಿರುವದಾಗಿ ಹೇಳುವೆವು. ನಾವು ಆತನನ್ನು ಪ್ರೀತಿಸುವ ಕಾರಣ ಆತನು ನಮ್ಮನ್ನು ಮೊದಲು ಪ್ರೀತಿಸಿದ್ದರಿಂದಲೇ; ಆತನ ಪ್ರೀತಿಯ ಬಗ್ಗೆ ಹೊಸ ಗುರುತನ್ನು ಕಾಣುವ ಪ್ರತಿಯೊಂದು ಸಮಯದಲ್ಲಿಯೂ, ನಾವು ನಿಜವಾಗಿಯೂ ಪ್ರಸಂಶನಾತ್ಮಕ ಹೃದಯಗಳನ್ನು ಹೊಂದಿದ್ದಲ್ಲಿ, ಅದು ನಮ್ಮ ಪ್ರೀತಿಯನ್ನು ಹೆಚ್ಚು ಹೆಚ್ಚು ಹೊರಹೊಮ್ಮುವಂತೆ ಮಾಡುತ್ತದೆ; ಅಲ್ಲದೆ ಅದು ನಮ್ಮನ್ನು ದೇವರಲ್ಲಿ ಸಂತೋಷಿಸುವಂತೆ ಮಾಡುತ್ತದೆ; ಆತನ ಸನ್ನಿಧಿಯಲ್ಲಿ ಪರಿಪೂರ್ಣವಾದ ಸಂತೋಷವಿರುವದು. ನಮ್ಮ ಕರ್ತನು ಈ ಉದ್ದೇಶದಿಂದಲೇ ನಾವು ಪ್ರಾರ್ಥನೆಯ ಮೂಲಕವಾಗಿ ದೇವರ ಬಳಿಗೆ ಆಗಾಗ್ಗೆ ಬಂದು ಆತನ ಕೃಪಾನುಗ್ರಹಗಳಿಗಾಗಿ ಅಧಿಕವಾಗಿ ಬೇಡಿಕೊಳ್ಳಬೇಕೆಂದು ನಮ್ಮನ್ನು ಉತ್ತೇಜಿಸಿ ಹೀಗೆ ಹೇಳಿರುವನು: **"ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು."** – ಯೋಹಾನ 16:24

ನಾವು ಗಮನಿಸಿರುವದೇನಂದರೆ ಇಸ್ರಾಯೇಲ್ಯರಲ್ಲಿ ದೇವರು ಅವರಿಗೆ ಮಾಡಿರುವದೆಲ್ಲದವನ್ನು ಅವರ ನೆನಪಿಗೆ ತಂದು ಅವುಗಳನ್ನು ಅವರಿಗೆ ವರ್ಣಿಸುವದರ ಮೂಲಕವಾಗಿ ಅವರಲ್ಲಿ ಸ್ತುತಿ ಮನೋಭಾವವನ್ನು ಬೆಳಸುತ್ತಿದ್ದನೆಂಬದು. ದಾವೀದನು ಹೀಗೆ ಹೇಳಿರುವದು: **"...ನಾನು ನಿನ್ನನ್ನು ನೆನಸದಿದ್ದರೆ ... ನನ್ನ ನಾಲಿಗೆಯು ಸೇದಿಹೋಗಲಿ."** –ಕೀರ್ತನೆ 137:6 ಇವುಗಳನ್ನು ಸಹ ನೋಡಿ: ವಿಮೋ. 15:1–21; ಧರ್ಮೋ. 7:17–18; 8:2; 15:15; 32:7; 1 ಪೂರ್ವ 16:12; ಕೀರ್ತನೆ 20:7; 63:5–7; 143:5–6; 77:10–12.

ಕ್ರೈಸ್ತನೂ ಹೀಗೆಯೆ ದೇವರ ಕೃತ್ಯಗಳನ್ನು, ವಿಶೇಷವಾಗಿ ದೇವರ ನಡಿಸುವಿಕೆ ಪರಿಪಾಲನೆ ವಿರೋಧಿಯಾದ ಸೈತಾನನ ಕುತಂತ್ರ ಉರುಲು ಹಾಗು ಆತನಿಂದಾಗುವ ಅಪಾಯಗಳಿಂದ ದೇವರು ತನ್ನನ್ನು ಬಿಡಿಸಿದ ಬಗ್ಗೆ ತನಗಾದ ತನ್ನ ಸ್ವಂತ ಅನುಭವಗಳನ್ನು ನೆನಪಿಗೆ ತಂದುಕೊಳ್ಳಬೇಕು. ಇವುಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಅವುಗಳನ್ನು ಧ್ಯಾನಿಸಿದ್ದಲ್ಲಿ ದೇವರ ಹಾಗು ಆತನ ಉಪಕಾರಗಳ ವಿಷಯವಾಗಿ ನಮಗಿರುವ ಅರಿವು ಬೆಳೆಯುತ್ತಾ ಬಂದು, ಪ್ರೀತಿ ಹಾಗು ಸ್ತುತಿ ಮನೋಭಾವವು ನಮ್ಮ ಹೃದಯವನ್ನು ವಶಮಾಡಿಕೊಳ್ಳುವದು; ಹೀಗೆ ಇವು ನಾವು ಯಾವಾಗಲೂ ಕರ್ತನಲ್ಲಿ ಸಂತೋಷಿಸುವಂತಾಗಿ, ಎಲ್ಲಾ ವಿಷಯಗಳಲ್ಲಿಯೂ ದೇವರಿಗೆ ಕೃತಜ್ಞೆಯನ್ನು ಸಲ್ಲಿಸುವಂತೆ ನಮ್ಮನ್ನು ನಡೆಸುತ್ತವೆ. ಹೀಗೆಯೇ ಸಹ ನಮ್ಮ ಪ್ರಾಣವು ದೇವರಿಗಾಗಿ ಹಸಿದು ಬಾಯಾರಿ, ದೇವರು ಮಾತ್ರವೇ ಇದರ ಸಂತುಷ್ಟವಾದ ಭಾಗವೆಂದು ಅರಿತುಕೊಳ್ಳುವಂತೆ ಮಾಡಿ, ಆತನ ಪರಿಪೂರ್ಣತೆಯನ್ನು ಅಧಿಕಾಧಿಕವಾಗಿ ಬಯಸುವವರಾಗುವಂತೆ ಮಾಡುವದು. ಹೀಗೆ ಕೀರ್ತನೆಗಾರನು ಸಲಹೆಮಾಡಿರುವಂತೆ: **"ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ."** – ಕೀರ್ತನೆ 42:1 ಎಂದು ನಮ್ಮ ಪ್ರಾರ್ಥನೆಯು ಇರುವದು.

ಕೃತಜ್ಞತಾಭಾವ ಮತ್ತು ಸ್ತುತಿಯ ವಿಷಯವಾದ ಇದೇ ತತ್ವವು ಪ್ರೀತಿಪೂರ್ವಕ ಕರುಣೆ ಮತ್ತು ಔದಾರ್ಯಗಳನ್ನು ವಿನಿಮಯವಾಗುವಂತೆ ಮಾಡಿ, ಮಾನವನ ಸ್ನೇಹಭಾವ ಮತ್ತು ಅನ್ಯೋನ್ಯತೆಯನ್ನು ಸಾಧ್ಯವಾಗಿಸಿ ಅದು ಉಲ್ಲಾಸಭರಿತ ವಾಗುವಂತೆ ಮಾಡುವದು. ಒಬ್ಬರೊಡನೆ ಮತ್ತೊಬ್ಬರಿಗಿರುವ ನಮ್ಮ ಒಡನಾಟದಲ್ಲಿ ನಾವು ತೋರುವ ಕರುಣೆಯು ಪ್ರಸಂಶಾಮನೋಭಾವವನ್ನು ಜಾಗೃತಗೊಳಿಸಿ ಅದು ಸ್ವೀಕೃತವಾಗದ್ದಿದ್ದಲ್ಲಿ, ಅಲ್ಲದೆ ಅದರ ಪುನರಾವರ್ತನೆಯು ಯಾವ ವಿಧದಿಂದಲೂ ಅಪೇಕ್ಷಿಸಲ್ಪಡದಿದ್ದಲ್ಲಿ ಮೂಲತಃ ಅಲ್ಲಿ ಅನ್ಯೋನ್ಯತೆಯೆಂಬ ಸಂಗತಿಯು, ಯಾವುದೇ ಪರಿಸ್ಥಿತಿ – ಯಲ್ಲಿಯೂ, ಉಪಸ್ಥಿತವಾಗಿರಲು ಸಾಧವಿರುವದಿಲ್ಲ. ನಾವು ಕ್ರೈಸ್ತರಾಗಿ ಈ ಕಾರಣಕ್ಕಾಗಿ ಕರುಣೆ ಮತ್ತು ಔದಾರ್ಯ ತೋರಿಸುವದನ್ನು ಕಡಿಮೆಮಾಡುವಂತಿಲ್ಲವೆಂಬದು ನಿಜವೇ; ಯಾಕಂದರೆ ಪರಲೋಕದಲ್ಲಿರುವ ನಮ್ಮ ತಂದೆಯಂತೆ ನಾವು ಉಪಕಾರವನ್ನು ನೆನಸುವಂಥವರ ಜೊತೆಗೆ ಉಪಕಾರವನ್ನು ನೆನಸದಂಥವರ ವಿಷಯದಲ್ಲಿಯೂ ಕರುಣೆ ಯುಳ್ಳವರಾಗ – ಬೇಕಿರುವದು (ಮತ್ತಾಯ 5:44–48). ಆದರೆ ಈ ಉಪಕಾರವು ಯಾವ ಪ್ರಸಂಶೆಯನ್ನೂ ಯಾವ ಪ್ರೀತಿಯನ್ನೂ ಜಾಗೃತ– ಗೊಳಿಸದಿದ್ದಲ್ಲಿ, ಅನ್ಯೋನ್ಯತೆಯು ಅಲ್ಲಿ ಅಸಾಧ್ಯವಾಗುವದು.

ದಾವೀದನು ತನ್ನ ಶತ್ರುಗಳ ಮೇಲಿನ ಜಯಕ್ಕಾಗಿ ಸಲ್ಲಿಸಿದ ಕೃತಜ್ಞತೆಯಲ್ಲಿ ಆ ಶತ್ರುಗಳು ದೇವರ ಮತ್ತು ಆತನ ಜನರ ಶತ್ರುಗಳೂ ಆಗಿದ್ದರೆಂಬುದನ್ನು ನಾವು ಗಮನಿಸಿರುತ್ತೇವೆ. ಅವರನ್ನು ಜಯಿಸಲು ದೇವರು ದಾವೀದನಿಗೆ ಕಾರ್ಯಭಾರವನ್ನು ವಹಿಸಿದ್ದನು. ಈ ಯುದ್ಧಗಳನ್ನು ದಾವೀದನು ದೇವರು ಒದಗಿಸಿದ ಬಲದ ಮೂಲಕವಾಗಿ ಕೈಗೆತ್ತಿಕೊಂಡಿದ್ದು, ಯುದ್ಧದ ಜಯಕ್ಕಾಗಿ ಅತನು ತನ್ನ ರಕ್ಷಣೆಯ ಬಂಡೆಯಾಗಿರುವ ದೇವರನ್ನು ಪ್ರಾಮಾಣಿಕವಾಗಿ ಶ್ಲಾಘಿಸಿದ್ದನು. ಆ ವಚನಗಳನ್ನು, ಭವಿಷ್ಯದ ಸಂಗತಿಯ ದೃಷ್ಟಿಯಿಂದ ಪರಿಗಣಿಸಿದಾಗ, ಅವು ಕ್ರಿಸ್ತನ ವಿಜಯಗಳ ವಿಷಯದ ಪ್ರವಾದನೆಗಳೂ ಸಹ ಆಗಿರುವವು. ದಾವೀದನು ಕ್ರಿಸ್ತನಿಗೆ ಒಂದು ಛಾಯೆಯಾಗಿದ್ದು, ಈತನಿಗೆ ಯೆಹೋವನು ತನ್ನ ವೈರಿಗಳೆಲ್ಲರ ಮೇಲೆ, ಅಂದರೆ ದೇವರಿಗೆ ವೈರಿಗಳು, ನೀತಿಸತ್ಯತೆಗಳಿಗೆ ವೈರಿಗಳು, ಇವರೆಲ್ಲರ ಮೇಲೆ ಸಂಪೂರ್ಣವಾಗಿ ಪೂರ್ಣ ಗೆಲುವನ್ನು ಅನುಗ್ರಹಿಸಿದ್ದನು. ಕೃತಜ್ಞತೆ ಸಲ್ಲಿಸುವಿಕೆಯ ಇಡೀ ದಾಟಿಯನ್ನು, ಕ್ರಿಸ್ತನು ಗಳಿಸುವ ಯಶಸ್ಸಿನ ಬಗ್ಗೆ ಅನ್ವಯಿಸಿ ಅದನ್ನು ವಿಶಾಲ ದೃಷ್ಟಿಯಿಂದ ನೋಡಿದಾಗ, ಆ ಪ್ರವಾದನೆಗಳು ಕ್ರಿಸ್ತನ ವೈಭವಪೂರ್ಣ ಗೆಲುವಿನ ಜೊತೆಗೆ ಯೆಹೋವನ ಸ್ತುತಿಯ ವಿಷಯದಲ್ಲಿಯೂ ವಾಗ್ಮೇಯತೆಯುಳ್ಳ ವರ್ಣನೆಯನ್ನು ಹೊಂದಿರುತ್ತದೆ. (1 ಕೊರಿಂಥ 15:27–28) ಮುಂದಿನ ವಿಸ್ತಾರವಾದ ಪ್ರಭುತ್ವವನ್ನು ಕುರಿತ ವಚನ 44–46ರಲ್ಲಿ ಅಡಕವಾಗಿರುವ ಪ್ರವಾದನೆಯನ್ನು ಕೇವಲ ಕ್ರಿಸ್ತನ ಸವಿಸ್ತಾರವಾದ ಪ್ರಭುತ್ವಕ್ಕೆ ಪೂರ್ಣವಾಗಿ ಅನ್ವಯಮಾಡಲು ಸಾಧ್ಯವೆಂದು ಪರಿಗಣಿಸಲಾಗಿರುವದು.

ಸ್ವರ್ಣಮಯ ಪಶ್ಯಭಾಗವು ದೇವಜನರೆಲ್ಲರಿಗೆ ಅನ್ವಯವಾಗುವಂಥ ಭಾಗ್ಯಕರವಾದ ಒಂದು ಭರವಸೆಯನ್ನು ಹೊಂದಿದ್ದು, ಕರ್ತನಲ್ಲಿ ಸಂತೋಷಿಸುವವರ, ಆತನ ಉಪಕಾರಗಳ ಬಗ್ಗೆ ಧ್ಯಾನಿಸಿ ಆತನ ಪವಿತ್ರನಾಮಕ್ಕೆ ಸೂಕ್ತವಾದ ಸ್ತುತಿಫನತೆಯನ್ನು ಸಲ್ಲಿಸುವಂಥವರ ವಿಷಯದಲ್ಲಿ ಇದನ್ನು ಹೇರಳವಾಗಿ ದೃಢೀಕರಿಸಲಾಗಿರುವದು. "ಯೆಹೋವನು ನನ್ನ ಬಂಡೆಯೂ (ಇದರ ಮೇಲೆ ನನ್ನ ನಿರೀಕ್ಷೆಯನ್ನು ಸುರಕ್ಷಿತವಾಗಿ ಕಟ್ಟಿಕೊಳ್ಳಬಹುದಾಗಿದ್ದು) ನನ್ನ ಕೋಟೆಯೂ (ಇದರಲ್ಲಿ ನಾನು ಸುರಕ್ಷಿತವಾಗಿ ಅವಿತುಕೊಳ್ಳಬಹದಾಗಿದ್ದು) ನನ್ನ (ಎಲ್ಲಾ ಸಂಕಟ ಸಮಯದಲ್ಲಿನ) ವಿಮೋಚಕನೂ ಆಗಿರುವನು."

*****

ಪಾಪಗಳೆಲ್ಲವುಗಳ ಕ್ಷಮಿಸುವಿಕೆಯು

5105 ಮತ್ತು ಪ್ರಶ್ನೆ ಪುಸ್ತಕ 281

2 ಸಮುವೇಲ 24ನೇ ಅಧ್ಯಾಯ

ಪ್ರಶ್ನೆ – "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು." (1 ಯೋಹಾನ 1:9) ಇಲ್ಲಿ ಬಳಸಿರುವ "ಸಕಲ" ಎಂಬ ಶಬ್ಧವು ಅದೆಷ್ಟು ವ್ಯಾಪ್ತಿಯುಳ್ಳದ್ದು?

ಉತ್ತರ – ಪವಿತ್ರಾತ್ಮನಿಗೆ ವಿರುದ್ಧವಾದ ಪಾಪವನ್ನು ಹೊರತುಪಡಿಸಿ (ಮತ್ತಾಯ 12:31–32), ನರಪುತ್ರರ ಎಲ್ಲಾ ವಿಧವಾದ ಪಾಪಗಳು, ಅವು ಈ ಸುವಾರ್ತಾಯುಗದ್ದಾಗಲೀ ಅಥವಾ ಮುಂದೆ ಬರುವ ಲೋಕದ್ದಾಗಿರಲೀ, ಅವು ಕ್ಷಮಿಸಲ್ಪಡುವವು. ಪವಿತ್ರಾತ್ಮವು ಇಲ್ಲಿ ದೇವರ ಉದ್ದೇಶದ ವಿಷಯವಾದ ಒಂದು ಬೆಳಕನ್ನು, ಒಂದು ಬುದ್ಧಿಶಕ್ತಿಯನ್ನು, ಸೂಚಿಸುತ್ತದೆ. ಯಾವನಾದರೂ ಮನಃಪೂರ್ವಕವಾಗಿಯೂ ಬುದ್ಧಿಪೂರ್ವಕವಾಗಿಯೂ ಯೇಸುವಿಗೆ ವಿರುದ್ಧವಾಗಿ ಪಾಪಮಾಡಿದ್ದಲ್ಲಿ, ಅವನು ಪವಿತ್ರಾತ್ಮನಿಗೆ ವಿರುದ್ಧವಾಗಿ ನಿಂದನೆಮಾಡಿದಂಥ ದೋಷವುಳ್ಳವನಾಗುವನು. ಆದರೆ ಆತನು ಕೆಲವು ವಿಧದಲ್ಲಿ ವಂಚನೆಗೊಳಗಾಗಿ ಯೇಸುವಿನ ಹೆಸರನ್ನು ನಿಂದಿಸಿದರೆ ಆಗ ಆ ಪಾಪವು ಪವಿತ್ರಾತ್ಮನಿಗೆ ವಿರುದ್ಧವಾದ ನಿಂದನೆಯಾಗಿರದೆ, ಅದು ಕ್ಷಮಿಸಲ್ಪಡುವದು. ಸಭೆಯ ವಿಷಯದಲ್ಲಿ ಕ್ಷಮಿಸಬಹುದಾದ ಈ ಪಾಪಗಳು (ಯೇಸುವೆಂಬ) ಸಹಾಯಕನ (ವಕಾಲತ್ತಿನ) ಮೂಲಕವಾಗಿ ಕ್ಷಮಿಸಲ್ಪಡುವದು. ನಾವು ಪೂರ್ಣವಾದ ಬೆಳಕಿಗೂ ಮತ್ತು ಜ್ಞಾನಕ್ಕೂ ವಿರುದ್ಧವಾಗಿ ಪಾಪಮಾಡದೇ ಇದ್ದಲ್ಲಿ, ಈತನು ನಮಗಾಗಿ ಪರಲೋಕದ ನ್ಯಾಯಾಲಯದಲ್ಲಿ ಕಾಣಿಸಿಕೊಂಡಿದ್ದು ತಂದೆಯ ಅನುಗ್ರಹಕ್ಕೆ ಮತ್ತೆ ನಮ್ಮನ್ನು ಹಿಂತರುವನು. ನಾವು ಬೆಳಕಿಗೂ ಜ್ಞಾನಕ್ಕೂ ವಿರುದ್ಧವಾಗಿ ಪಾಪಮಾಡಿದ್ದಲ್ಲಿ ನಮ್ಮನ್ನು ಆತನ ಹಸ್ತದಿಂದ ಹೊರಗೆ ತೆಗೆದುಕೊಂಡಂತಾಗುವದು.

ಆದರೆ ಇಲ್ಲಿ ಬಾಗಶಃ ಮನಃಪೂರ್ವಕವಾಗಿ ಮಾಡಿದ ಪಾಪಗಳಿರಬಹುದು ಅಂದರೆ ಮೂಢನಂಬಿಕೆ ಅಥವಾ ಬಲಹೀನತೆ ಮತ್ತು ಕೆಲವು ಮಟ್ಟಿಗೆ ಬೇಕೆಂದು ಮಾಡಿದವುಗಳೆರಡೂ ಇರಬಹುದು. ಇದು ಹೇಗೆ ಸಾಧ್ಯವಾಗಬಹುದೆಂಬುದಕ್ಕೆ ನಾವು ಕೊಡುವ ಉತ್ತವೆಂದರೆ ಇಲ್ಲಿ ನೈತಿಕತೆಯಿಂದ ಜಾರಿಹೋದುದನ್ನು ಕ್ಷಮಿಸುವದಕ್ಕೂ ಹಾಗು ಪಾಪವನ್ನು ಕ್ಷಮಿಸುವದಕ್ಕೂ ಒಂದು ವ್ಯತ್ಯಾಸವಿರುವದೆಂಬುದು. ದೃಷ್ಟಾಂತವಾಗಿ ಹೇಳುವದಾದರೆ, ಒಂದು ಮಗುವು ಕೆಲವು ನಿಯಮದ ಉಲ್ಲಂಘನೆ ಮಾಡಿದಾಗ ತಂದೆತಾಯಿಗಳು–"ನೀನು ಮಾಡಿದ್ದಕ್ಕೆ ನಾನು ನಿನ್ನನ್ನು ಶಿಕ್ಷಿಸುವೆನು" ಎಂದು ಹೇಳುವರು. ಶಿಕ್ಷೆಯಲ್ಲಿ ಎರಡು ಭಾಗಗಳಿರಬಹುದು, ಒಂದು ಶಾರೀರಿಕವಾಗಿ ಶಿಕ್ಷಿಸುವಂಥದ್ದು ಮತ್ತು ಇನ್ನೊಂದು ತಂದೆತಾಯಿಗಳು ತಮ್ಮ ಅಸಂತೋಷವನ್ನು ತೋರಿಸುವಂಥದ್ದು.

ಕೆಲವು ಮಕ್ಕಳಲ್ಲಿ ಎರಡನೆಯ ಗುಂಪಿಗೆ ಸೇರಿದ ಶಿಕ್ಷೆಯಲ್ಲಿ ಮಗುವಿನ ಹಾಗು ತಂದೆತಾಯಿಗಳ ನಡುವಿನ ಅಂತರವು ತಾಳಲಾರದಾಗುವದು. ಆಗ ತಂದೆತಾಯಿಗಳು ಹೀಗೆ ಹೇಳಬಹುದು: "ನೀನು ನನಗೆ ತಪ್ಪಾಯಿತೆಂದೂ (ವಿಷಾಧಿಸಿ) ಇನ್ನೆಂದಿಗೂ ಇದನ್ನು ಮತ್ತೆ ಮಾಡುವದಿಲ್ಲವೆಂದು ಹೇಳಿದ್ದರಿಂದ ನಾನು ನಿನ್ನನ್ನು ಕ್ಷಮಿಸುವೆನು. ಆದರೆ ನಿನ್ನ ಅವಿಧೇಯತೆಗೆ ತಕ್ಕಂತೆ ಒಂದು ಶಿಕ್ಷೆಯಿರುವದೆಂದು ನಾನು ನಿನಗೆ ಹೇಳಿದ್ದೇನೆ. ನನ್ನ ಅತ್ಯುತ್ತಮ ನಿರ್ಣಯಕ್ಕೆ ಎಷ್ಟು ಲಘುವಾಗಿ ತೋರುವದೋ ಅಷ್ಟರ ಮಟ್ಟಿನ ಶಿಕ್ಷೆಯನ್ನು ನಾನು ನೀಡುತ್ತೇನೆ, ಆದರೆ ಆಗಲೂ ಶಿಕ್ಷೆಯನ್ನು ನೀನು ಅನುಭವಿಸಲೇಬೇಕು." ಅಲ್ಲದೆ ಭೂಲೋಕದ ತಂದೆತಾಯಿಗಳಿಗೆ ಯಾವುದು ಸೂಕ್ತವೋ ಅದನ್ನು ಪರಲೋಕದ ತಂದೆಯೂ ಮಾಡುವನೆಂದು ನಾವು ಪರಿಗಣಿಸಬಹುದು.

ಪ್ರವಾದಿಯಾದ ದಾವೀದನ ವಿಷಯದಲ್ಲಿ: ಆತನು ಎರಡು ಬಹು ಗಂಭೀರವಾದ, ಹಾನಿಕರವಾಗಿರುವ ಪಾಪಗಳನ್ನು ಮಾಡಿದ್ದು; ಮೊದಲನೆಯದು, ಊರಿಯನ ಮತ್ತು ಊರಿಯನ ಹೆಂಡತಿಯ ವಿಷಯವಾಗಿರಲು ಹಾಗು ಮತ್ತೊಂದು ಊರಿಯನ ಮರಣಕ್ಕೆ ಸಂಬಂಧಿಸಿದ್ದಾಗಿತ್ತು. ಆದರೆ ದಾವೀದನು ಎಂಥಾ ದೃಢ ನಿಷ್ಠೆಯಿಂದ ದಾವೀದನು ಸತತವಾಗಿ ಬೇಡಿಕೊಂಡಿದ್ದ–ನೆಂಬುದನ್ನು ನಾವು ನೆನಪಿಸಿಕೊಳ್ಳುವೆವು; ಅಲ್ಲದೆ ಕರ್ತನು ತಾನು ಕ್ಷಮಿಸುವದಾಗಿ ಸೂಚಿಸಿದ್ದರೂ ಅಲ್ಲಿ ಶಿಕ್ಷೆಯೊಂದಿರಬೇಕಿತ್ತು. ದಾವೀದನ ಮಗುವು ಮರಣಹೊಂದಿತ್ತು. 2 ಸಮು. 12:15–22.

ಮತ್ತೆ ಸೈತಾನನು ದೇವರ ಆಜ್ಞೆಗೆ ವಿರುದ್ಧವಾಗಿ ದಾವೀದನನ್ನು ಇಸ್ರಾಯೇಲ್ಯರ ಜನಗಣತಿಮಾಡುವಂತೆ ಪ್ರಚೋದಿಸಿದ್ದು: ದೇವರು ಅಸಮಾಧಾನಗೊಂಡು ಇಸ್ರಾಯೇಲ್ಯರನ್ನು ಸಂಹರಿಸಿದ್ದನು. ಪುನಃ ದಾವೀದನು ಪಶ್ಚಾತಾಪಪಟ್ಟು ಪ್ರಾಮಾಣಿಕವಾಗಿ ಕ್ಷಮೆಗಾಗಿ ಪ್ರಾರ್ಥಿಸಿದ್ದನು. ದೇವರು ಮೂರು ಸಂಗತಿಗಳನ್ನು ಅವನ ಮುಂದಿಟ್ಟಿದ್ದು, ಅವುಗಳಲ್ಲಿ ಒಂದನ್ನು ತನ್ನ ಪಾಪಕ್ಕೆ ಶಿಕ್ಷೆಯಾಗಿ ಆದುಕೊಳ್ಳಬೇಕೆಂದು ಪ್ರಸ್ತಾಪಿಸಿದ್ದನು. "ಮೂರು ವರುಷಗಳ ಕಾಲ ಬರವು ಉಂಟಾಗಬೇಕೋ, ಇಲ್ಲವೇ ಮೂರು ತಿಂಗಳುಗಳ ವರೆಗೆ ನಿನ್ನ ಶತ್ರುಗಳ ಕತ್ತಿಗೆ ಬಲಿಯಾಗುವದು ಬೇಕೋ, ಇಲ್ಲವೆ ಇಸ್ರಾಯೇಲ್ಯರ ಸಮಸ್ತ ಪ್ರಾಂತಗಳಲ್ಲಿ ಯೆಹೋವನು ಕಳುಹಿಸಿದ ಸಂಹಾರಕದೂತನಿಂದ ಮೂರು ದಿನ ಘೋರ ವ್ಯಾಧಿ ರೂಪವಾದ ಯೆಹೋವನ ಕತ್ತಿಯುಬೇಕೋ ಈ ಮೂರರಲ್ಲಿ ಆರಿಸಿಕೋ. (1 ಪೂರ್ವ 21:10–14) ತನ್ನ ಸ್ವಂತ ಬಲಹೀತನೆಗಳ ಬಗ್ಗೆ ಅರಿತುಕೊಂಡಿದ್ದ ದಾವೀದನು ಆಯ್ಕೆಮಾಡಿಕೊಳ್ಳಲು ಹಿಂದೆಗೆದಿದ್ದನು. ಮೂರು ದಿನಗಳ ವ್ಯಾಧಿಯನ್ನು ಇಸ್ರಾಯೇಲ್ಯರ ಮೇಲೆ ಕಳುಹಿಸಲಾಗಿತ್ತು. ಮತ್ತು ಎಪ್ಪತ್ತು ಸಾವಿರ ಮಂದಿಯು ಸತ್ತು ಬಿದ್ದಿದ್ದರು; ಆದರೆ ಈ ಮಧ್ಯೆ ಶಿಕ್ಷೆಯು ದಾವೀದನನ್ನು ತಲುಪುವದಕ್ಕೆ ಮೊದಲು ಆತನು ತನ್ನ ಪಾಪಗಳಿಗಾಗಿ ದೇವರಿಂದ ಕ್ಷಮೆಯನ್ನು ಪಡಕೊಂಡಿದ್ದನು.

ಹೀಗೆಯೇ ದೇವಜನರ ಪಾಪಗಳ ವಿಷಯವೂ ಇರುವದು. ಹೆಚ್ಚು ಕಡಿಮೆ ಅದು ಅಜ್ಞಾನದಿಂದ ಆದಲ್ಲಿ, ಆಗ ಶಿಕ್ಷೆಯ ಮಟ್ಟವೂ ಮನಃಪೂರ್ವಕತೆಯ ಪ್ರಮಾಣದಲ್ಲಿರುವದು. ಶೋಧನೆಗಳು ನಮಗೂ ಮತ್ತು ಮನುಕುಲದವರೆಲ್ಲರಿಗೂ ಬರುವದು. ಕ್ರಿಸ್ತನು ಮನುಷ್ಯನ ಪಾಪಗಳಿಗಾಗಿ ಸತ್ತಿದ್ದನು; ಮನುಕುಲದವರೆಲ್ಲರಿಗೆ ಆತನು ಮುಕ್ತವಾಗಿ ಪಾಪಾಪರಾಧ ಗಳನ್ನು ನಿವಾರಣೆಮಾಡುವನು–ಸಭೆಗೆ ಈಗ ಮತ್ತು ಲೋಕಕ್ಕೆ ಅವರ ನ್ಯಾಯತೀರ್ಪಿನ ದಿನದಲ್ಲಿ ಇದನ್ನು ಮಾಡುವನು.

*****

ಪಾಪ: ದಾವೀದನು ಜನಗಣತಿ ಮಾಡಿದಂಥದ್ದು

ಪ್ರಶ್ನೆ ಪುಸ್ತಕ 832

2 ಸಮುವೇಲ 24ನೇ ಅಧ್ಯಾಯ

ಪ್ರಶ್ನೆ: ಜನಗಣತಿಮಾಡಿದುದು ದಾವೀದನಿಗೆ ಒಂದು ಪಾಪವಾಗಿದ್ದೇಕೆ? (2 ಸಮುವೇಲ 24 ಮತ್ತು 1 ಪೂರ್ವ 21)

ಉತ್ತರ: ಶಾಸ್ತ್ರವಚನಗಳ ವಿವರಣೆಯಲ್ಲಿ ಇಸ್ರಾಯೇಲ್ಯರ ಸಂಖ್ಯೆಯನ್ನು ಎಣಿಸುವಂಥದ್ದನ್ನು ದೇವರು ಆಶಿಸಿರಲಿಲ್ಲವೆಂದು ಹೇಳಿಲ್ಲವಾದರೂ, ನಾವು ವಿಶೇಷವಾಗಿ 1 ಪೂರ್ವ. 21ನೇ ಅಧ್ಯಾಯದ ವಚನ ಒಂದು ಮತ್ತು ಎಂಟನ್ನು ಓದುವ ಮೂಲಕವಾಗಿ ಸಂಗತಿಯು ಇಂಥದ್ದಾಗಿತ್ತೆಂದೂ, ಈ ನಿಟ್ಟಿನಲ್ಲಿ ದೇವರು ಸೂಚನೆ ನೀಡಿದ್ದನೆಂಬದು ನಾವು ಅರಿತುಕೊಳ್ಳುತ್ತೇವೆ. ಇದೇ ಅಧ್ಯಾಯದ ಮೂರನೇ ವಚನದಲ್ಲಿ ದಾವೀದನ ಮುಖ್ಯಾಧಿಕಾರಿಯಾದ ಯೋವಾಬನು ಅರಸನ ಈ ಕೃತ್ಯದ ವಿರುದ್ಧವಾಗಿ ಪ್ರತಿರೋಧಿಸಿ–"ಇಸ್ರಾಯೇಲ್ಯರನ್ನು ಅಪರಾಧಕ್ಕೆ ಗುರಿಮಾಡುವದೇಕೆ?" ಎಂದು ಹೇಳಿದ್ದನೆಂಬುದನ್ನು ನಾವು ಕಂಡುಕೊಳ್ಳುತ್ತೇವೆ: ದಾವೀದನು ಯೆಹೋವನ ಪ್ರತಿನಿಧಿಯಾಗಿ ಆತನ ಸಿಂಹಾಸನದಲ್ಲಿ ಕುಳಿತ್ತಿದ್ದನೆಂದು (1 ಪೂರ್ವ 29:23) ನಾವು ಸಹ ವಾದಿಸಬಹುದು. ಜನಗಣತಿಯನ್ನು ಆತನು ತನಗೆ ಯಾವುದೇ ಆದೇಶ ಮತ್ತು ಸೂಕ್ತವಾದ ಅಧಿಕಾರವಿಲ್ಲದೆ ಮಾಡಿದ್ದು, ಹೀಗಾಗಿ ಆ ಸಂಗತಿಯು ಮನಃಪೂರ್ವಕವಾಗಿರಲು, ಇದರಲ್ಲಿ ದಾವೀದನು ಮೊದಲು ಇಸ್ರಾಯೇಲ್ಯರ ನಿಜವಾದ ಅರಸನಾದ ದೇವರ ಚಿತ್ತವನ್ನು ವಿಚಾರಿಸಿರಲಿಲ್ಲ, ಇದಕ್ಕಾಗಿ ಒಂದು ಗದರಿಕೆಯ ಶಿಕ್ಷೆಗೆ ಆತನು ಅರ್ಹನಾಗಿದ್ದನು. ದೇವಜನರಾಗಿ ತೋರ್ಪಡಿಸಿಕೊಳ್ಳುವವರೆಲ್ಲರಿಗೆ ಇಲ್ಲಿ ಒಂದು ಅಮೂಲ್ಯವಾದ ಪಾಠವಿರುವದು, ಅದೇನಂದರೆ, ಜೀವನದ ಆಗುಹೋಗುಗಳಲ್ಲಿ ಮೊದಲು ದೇವರ ಆದೇಶ ಹಾಗೂ ಮಾರ್ಗದರ್ಶನಗಳು ಏನೆಂಬುದನ್ನು ಕಂಡುಕೊಳ್ಳುವವ–ರಾಗಬೇಕು ಅಲ್ಲದೆ ತಮ್ಮ ಸ್ವಂತ ಗ್ರಹಿಕೆಯಾನುಸಾರ ಹಾಗು ತಮ್ಮ ಸಹಜ ಇಷ್ಟಾಭಿಪ್ರಾಯಗಳನ್ನು ಆತುಕೊಳ್ಳಬಾರದೆಂಬದೇ. ಎಲ್ಲರ ವಿವೇಚನಾ ಸಾಮರ್ಥ್ಯವು ಹೆಚ್ಚುಕಡಿಮೆ ಸಮತೋಲನ ಕಳೆದುಕೊಂಡಿದ್ದು, ಯಾರೂ ಪರಿಪೂರ್ಣವಾದ ಸಮತೋಲನವುಳ್ಳ ಮನಸ್ಸನ್ನು ಹೊಂದದೇ ಇರುವ ಕಾರಣ ದೇವರ ಆದೇಶಗಳನ್ನು ಅನುಸರಿಸುವಂಥದ್ದು ನಿಜವಾದ ಜ್ಞಾನದ ಒಂದು ಭಾಗವಾಗಿರುತ್ತದೆ.

*****



ಪ್ರಾರ್ಥನೆಯಲ್ಲಿ ದಾವೀದನು: ಚಿತ್ರರಚನೆ ಪೀಟರ್ ಡೀ ಗ್ರೆಬ್ಬರ್

ದೇವರ ಮಂದಿರದ ಮೇಲಿನ ದಾವೀದನ ಪ್ರೀತಿ

ರೀಪ್ರಿಂಟ್ಸ್ ಪುಟ 2030

1 ಪೂರ್ವ 22:6–16, 1 ಅರಸುಗಳು 1ನೇ ಅಧ್ಯಾಯ; ಕೀರ್ತನೆ 84 ಹೋಲಿಸಿ ನೋಡಿ

"ನಿನ್ನ ಮಂದಿರದಲ್ಲಿ ವಾಸಿಸುವರು ಧನ್ಯರು; ಅವರು ನಿತ್ಯವೂ ನಿನ್ನನ್ನು ಕೀರ್ತಿಸುತ್ತಾ ಇರುತ್ತಾರೆ." – ಕೀರ್ತನೆ 84:4

ನಮ್ಮ ಹಿಂದಿನ ಪಾಠದಲ್ಲಿ ಪರಿಗಣಿಸಿದ ಮನಕಲಕು–ವಂಥ ಘಟನೆಗಳ ನಂತರ, ದಾವೀದನು ಜನರಿಂದ ನೆನಪಿಸಿಕೊಳ್ಳಲ್ಪಟ್ಟವನಾಗಿ, ಯೆರೂಸಲೇಮಿಗೆ ಹಿಂದಿರುಗಿ ಅಬ್ಷಾಲೋಮನು ಸಾಧಾರಣವಾಗಿ ಮುಳುಗಿಸಿದ ಗೊಂದಲದಿಂದ ದೇಶವನ್ನು ಒಂದು ಕ್ರಮಕ್ಕೆ ತರಲು ಕಾರ್ಯಪ್ರವೃತ್ತನಾಗಿದ್ದನು. ತನ್ನ ದುರಾಕ್ರಮಣಕಾರನು ಕೆಲವು ತೋರಿಕೆಯ ಯಶಸ್ಸಿನ ಸಹಿತವಾಗಿ ಹಿಂದಿರುಗಿದಂಥ ಸಮಯದಲ್ಲಿ ದಾವೀದನಿಗೆ ತಡೆಯೊಡ್ಡಿ ಆತನ ಸಿಂಹಾಸನವನ್ನು ತನಗೆ ದೊರಕಿಸಿಕೊಳ್ಳಲು ಪರಿಶ್ರಮಿಸಿದ್ದನು; ಆದರೆ ಕೂಡಲೇ ಈತನ ವಿರುದ್ಧ ಕ್ರಮಜರುಗಿಸಲ್ಪಟ್ಟು ದಾವೀದನು ತನ್ನ ರಾಜ್ಯದಲ್ಲಿ ಮತ್ತೆ ಸ್ಥಾಪಿಸಲ್ಪಟ್ಟಿದ್ದು, ಹಲವಾರು ವರುಷಗಳ ಕಾಲ ಶಾಂತಿ ಮತ್ತು ಪ್ರಗತಿಗಳು ಹಿಂಬಾಲಿಸಿಕೊಂಡು ಬಂದಿದ್ದವು. – 2ಸಮು 20:21.

ಆದರೆ ಅರಸನ ಸಂಕಷ್ಟಗಳು ಇನ್ನೂ ಮುಗಿದಿರಲಿಲ್ಲ: ಮತ್ತೆ ತನ್ನ ಸ್ವಂತ ಮನೆತನದಲ್ಲಿಯೇ ವಿರೋಧಾಭಿಪ್ರಾಯವು ಹುಟ್ಟಿಕೊಂಡಿದ್ದು, ಅಬ್ಷಾಲೋಮನೊಡನೆ ಸಂಭವಿಸಿದಂಥ ಅನುಭವಗಳು ಅಂದರೆ ಮತ್ತೊಬ್ಬ ಮಗನಾದ ಅಬ್ಷಾಲೋಮನ ತಮ್ಮನಾದ ಅದೋನಿಯನ ಬಂಡಾಯದಲ್ಲಿ ಮರುಕಳಿಸಿದ್ದು, ಆತನು ತನಗಾಗಿ ಯೋಜನೆಗಳನ್ನು ಹಾಕಿದವನಾಗಿ ಕುಶಲತೆಯಿಂದ ಸಿಂಹಾಸನವನ್ನು ಕಸಿದುಕೊಂಡು ಹೀಗೆ ತಾನು ದಾವೀದನಿಗೆ ಉತ್ತರಾಧಿಕಾರಿಯಾಗಲು ಸಿದ್ಧತೆಗಳನ್ನು ನಡೆಸಿದ್ದನು. (1ಅರಸು. 1:1–53)ಈ ದುರಾಕ್ರಮಣದ ಯತ್ನವು ಮತ್ತು ಸ್ವಯಂ ನೇಮಕಾತಿಯು ಸೊಲೋಮೋನನನ್ನು ಕೂಡಲೇ ಅಭಿಷೇಕಿಸಿ ಅವನನ್ನು ಅರಸನನ್ನಾಗಿ ಘೋಷಿಸುವಂತಾಗಲು ನಡೆಸಿದ್ದವು. ದಾವೀದನ ಮಕ್ಕಳಲ್ಲಿ ಸೊಲೊಮೋನನನ್ನು ತನ್ನ

ರಾಜ್ಯದ ಸಿಂಹಾಸನದಲ್ಲಿ ಕುಳಿತುಕೊಳ್ಳುವದು ತನ್ನ ಆಯ್ಕೆಯೆಂಬುದನ್ನು ದೇವರು ಸೂಚಿಸಿದ್ದನು. (1 ಪೂರ್ವ 22:9–10; 28:5–7) ಹೀಗಾಗಿ ಸೊಲೊಮೋನನು ತನ್ನ ತಂದೆಯಾದ ದಾವೀದನ ಸ್ಥಾನದಲ್ಲಿ ಅರಸನೆಂದು ಮಾನ್ಯ ಮಾಡಲ್ಪಟ್ಟಿದ್ದನು. –1 ಅರಸುಗಳು 1:34,39–40; 1 ಪೂರ್ವ 29:22–25.

ದಾವೀದನು ಈಗಾಗಲೇ ತನ್ನ ಭೂಸಂಬಂಧದ ಕಾರ್ಯಭಾರಗಳನ್ನೆಲ್ಲಾ ಹೆಚ್ಚುಕಡಿಮೆ ನೆರವೇರಿಸಿದ್ದನು. ಆತನು ತನ್ನ ಪ್ರಭುತ್ವವನ್ನು ಸಣ್ಣದಾಗಿ ಸ್ಥಾಪನೆಮಾಡಿದ್ದು, ಅದು ಈಗ ಬಹು ವಿಸ್ತಾರಗೊಂಡಿತ್ತು. ಆತನು ಇದನ್ನು ಅವ್ಯವಸ್ಥೆಯಲ್ಲಿ ಪ್ರತಿಷ್ಠಾಪನೆಮಾಡಿದ್ದು, ಸಂಪೂರ್ಣವಾಗಿ ವ್ಯವಸ್ಥಿತವನ್ನಾಗಿ ಮಾಡಿ ಅದನ್ನು ಬಿಟ್ಟುಹೋಗಿದ್ದನು. ಆತನು ಧರ್ಮವನ್ನು ಒಂದು ಕುಗ್ಗಿಹೋದಂಥ ಸ್ಥಿತಿಯಲ್ಲಿ ಕಂಡುಕೊಂಡು ಅದನ್ನು ದೊಡ್ಡದಾಗಿ ಪುನಃಸ್ಥಾಪಿಸಿ ದಾರ್ಮಿಕ ಶ್ರದ್ಧೆಭಕ್ತಿ ಹಾಗು ಉತ್ಸಾಹಗಳನ್ನು ಪುನಃಚೈತನಗೊಳಿಸುವಲ್ಲಿ ಯಶಸ್ವಿಯಾಗಿದ್ದನು. ಆತನು ಬಲಿಷ್ಠರಾದ ಶತ್ರುಗಳು ಸುತ್ತಲೂ ಇದ್ದು ಜನಾಂಗವನ್ನು ನಾಶಮಾಡಲು ಬೆದರಿಕೆಹಾಕುತ್ತಿದ್ದುದನ್ನು ಕಂಡುಕೊಂಡಿದ್ದು, ಆದರೆ ಎಲ್ಲಾ ಶತ್ರುಗಳನ್ನು ಸ್ವಾಧೀನಮಾಡಿಕೊಂಡು ದೇಶವನ್ನು ಒಂದು ಸಮಾಧಾನದ ಸ್ಥಿತಿಗೆ ತಂದು ಜನಾಂಗವನ್ನು ಒಂದು ಸಮಸಾಟಿಯಿಲ್ಲದ ಏಳಿಗೆಯ ಕಡೆಗೆ ನಡೆಸಿದ್ದನು. ಇದು ಮಾತ್ರವಲ್ಲದೆ, ದೇವಾಲಯವನ್ನು ಕಟ್ಟಿ ಅದರಲ್ಲಿನ ಸೇವೆಗಾಗಿ ತಾನು ಸಿದ್ಧಗೊಳಿಸುವದರ ಮೂಲಕವಾಗಿ ಆತನು ದೇವಾರಾಧನೆ ಮತ್ತು ಜನಾಂಗದ ಧಾರ್ಮಿಕ ಸ್ವಸ್ಥತೆಯು ನಿರಂತರವಾಗಿ ಸ್ಥಾಪಿತವಾಗುವಂತೆ ಬಹು ಸ್ಥಿರವಾದ ಅಸ್ತಿವಾರವನ್ನು ಹಾಕಿದ್ದನು. ದೇವಾಲಯವನ್ನು ಆತನ ಉತ್ತರಾಧಿಕಾರಿಯಾದ ಮಗನು ಕಟ್ಟಬೇಕೆಂದು ದೇವರು ವಾಗ್ದಾನಮಾಡಿರಲಾಗಿ, ಆತನು ಸಮಸ್ತ ಜನರಲ್ಲಿ ಧಾರ್ಮಿಕ ಹುರುಪು ಉತ್ಸಾಹಗಳು ಉಂಟಾಗುವಂತೆ ಮಾಡಿದ್ದು, ಹೀಗಾಗಿ ಸೊಲೊಮೋನನ ಮಹಾ ಕಾರ್ಯದಲ್ಲಿ ಒಕ್ಕೊರಲಿನಿಂದ ಸೇವೆಸಲ್ಲಿಸಲು ಅವರು ಸಿದ್ಧರಾಗಿದ್ದರು. ಆತನ ಒಂದು ಜೀವಿತವು ವಿಶೇಷ ಘಟನೆಗಳು ಹಾಗು ಸಂಕಷ್ಟಗಳಿಂದ ಕೂಡಿದ್ದು, ಅದರಲ್ಲಿ ಗಂಭೀರವಾದ ತಪ್ಪುಗಳಿಲ್ಲದೆ ಇರಲಿಲ್ಲ. ಆದರೆ ಆತನು ಅವ್ಯವಸ್ಥೆಯಿಂದ ಒಂದು ಸುವ್ಯವಸ್ಥೆಯನ್ನು ತರಲು ಮತ್ತು ಶಾಂತಿ ಸಮೃದ್ಧಿಯು ನಿರಂತರವಾಗಿ ನೆಲೆಗೊಳ್ಳುವಂತಾಗಲು ಬಹು ವಿಶೇಷವಾದ ಕಾರ್ಯಗಳನ್ನು ನಿರ್ವಹಿಸಿದ್ದನು. ಸೊಲೊಮೋನನ ವೈಭವವುಳ್ಳ ರಾಜ್ಯಾ–ಡಳಿತವು ದಾವೀದನ ಪರಿಶ್ರಮ ಹಾಗು ಸಂಕಷ್ಟಗಳ ಫಲವಾಗಿ ಬೆಳೆದುಬಂದಿತ್ತು. ದಾವೀದನು ಒಬ್ಬ ರಣವೀರನಾಗಿದ್ದ ಕಾರಣ ಅವನಿಗೆ ತಾನು ಆಲಯವನ್ನು ಕಟ್ಟಲು ಅನುಮತಿ ನೀಡಲಾಗಿ–ರಲಿಲ್ಲ. ಆದರೆ ಈ ಯುದ್ಧಗಳಲ್ಲಿ ಭಾಗಿಯಾಗಿದ್ದುದು ದಾವೀದನ ವಿರುದ್ಧವಾದ ದೂಷಣೆಯಾಗಿರಲಿಲ್ಲ, ಯಾಕಂದರೆ ಅವನು ಲೋಕದಲ್ಲಿನ ರಣವೀರರಂತೆ ಕೊಳ್ಳೆ ಹಾಗು ಪ್ರತಿಷ್ಠೆಯೆಂಬ ಅಪವಿತ್ರವಾದ ಆಕಾಂಕ್ಷೆಯಿಂದ ಇದನ್ನು ನಡೆಸಿರಲಿಲ್ಲ, ಆದರೆ ಇದನ್ನು ದೇವರ ಹೆಸರಿನಲ್ಲಿ ಮತ್ತು ಆತನ ಜನರ ಪರವಾಗಿ ನಿರ್ವಹಿಸಿದ್ದನು.

ಯೆಹೂದ್ಯರ ಆಲಯವನ್ನು ಕಟ್ಟುವದು ಅನ್ಯಧರ್ಮದವರ ಅಥವಾ ಕ್ರೈಸ್ತರ ಆಲಯವನ್ನು ಕಟ್ಟುವಂಥ ರೀತಿಯಲ್ಲಿನ ಕೇವಲ ಒಂದು ಯಾಂತ್ರಿಕವಾದ ಸೇವೆಯ ಸಲುವಾಗಿತ್ತೆಂದು ಅಲೋಚಿಸುವಂಥ ಕೆಲವರಿಗೆ ಇದರ ವಿಷಯವಾಗಿ ಅದು ಅನಗತ್ಯ ಸಂಭ್ರಮ ಸಡಗರವಾಗಿತ್ತೆಂದು ತೋರಬಹುದು. ದೇವಾಲದ ಕಟ್ಟುವಿಕೆಯನ್ನು ತೆಗೆದುಕೊಳ್ಳುವ ಮೊದಲು ಇಡೀ ಜನಾಂಗವು ಸಮಾಧಾನದ ಸ್ಥಿಯಲ್ಲಿರಬೇಕೆಂದು ಮನಸ್ಸಿನಲ್ಲಿ ಹೇಳಿಕೊಳ್ಳುವಂಥವರ ಸಂಗತಿಯು ಅದೆಷ್ಟು ವಿಚಿತ್ರ! ಕೆಲವರು ಆಲಯವನ್ನು ಕಟ್ಟುವಲ್ಲಿ ಇತರರು ಯುದ್ಧಗಳಲ್ಲಿ ನಿರತರಾಗಿರಲು ಯಾಕೆ ಸಾಧ್ಯವಿಲ್ಲ? ಈ ಕಾರ್ಯವನ್ನು ಅರಸನಿಗೆ ಏಕೆ ವಹಿಸಬೇಕು? ಅರಸನಿಗೆ ಈ ಜವಾಬ್ದಾರಿಯನ್ನು ಹೊರಿಸದಂತೆ ನೋಡಿಕೊಳ್ಳಲು ಇಸ್ರಾಯೇಲ್ಯರೆಲ್ಲರಲ್ಲಿ ಶಿಲ್ಪಿಗಳು ಮತ್ತು ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ಸೂಕ್ತವಾದ ಜನರು ಹೇರಳವಾಗಿಲ್ಲವೇ?

ಯೆಹೂದ್ಯರ ದೇವಾಲಯವನ್ನು ಕಟ್ಟುವದು ಅಂದರೆ ಅಷ್ಟು ಕಲ್ಲುಗಳು ಗಾರೆ ಮತ್ತು ಮರಗಳು ಮುಂತಾದವನ್ನು ಒಟ್ಟಿಗೆ ಕೂಡಿಸುವಂಥ ಕೇವಲ ಯಾಂತ್ರಿಕವಾದ ಸೇವಯಲ್ಲವೆಂಬುದನ್ನೂ, ಆದರೆ ನಾವು ಅದನ್ನು ದಾವೀದನ ದೃಷ್ಟಿಕೋನದಿಂದ ನೋಡುವಂತವರಾಗಲು ಮರೆಯದಿರೋಣ. ದಾವೀದನು ಇಸ್ರಾಯೇಲ್ ಸಮೂಹದವರು ಆಲಯವನ್ನು ಕಟ್ಟುವ ಕೆಲಸದಲ್ಲಿ ಸೊಲೊಮೋನನಿಗೆ ಶ್ರದ್ಧಾಸಕ್ತಿಯಿಂದ ಸಹಕರಿಸಬೇಕೆಂದು ಆತನು ಹೇಳಿದ್ದು "ದೇವರು ನನ್ನ ಮಗನಾದ ಸೊಲೊಮೋನನನ್ನೇ ಆರಿಸಿಕೊಂಡಿದ್ದಾನೆ; ಆದರೆ ಅವನು ಇನ್ನೂ ಎಳೇಪ್ರಾಯದವನು. ಮಾಡತಕ್ಕ ಕೆಲಸವೋ ವಿಶೇಷವಾದದ್ದು. ಕಟ್ಟತಕ್ಕ ಮಂದಿರವು ದೇವರಾದ ಯೆಹೋವನಿಗಾಗಿಯೇ ಅಲ್ಲದೆ ಮನುಷ್ಯನಿಗಾಗಿಯಲ್ಲ;" (1 ಪೂರ್ವ 29:1) ಅಲ್ಲದೆ ಆ ಪವಿತ್ರವಾದ ಮಂದಿರವು ಮಾನುಷರಚಿತವಾದುದಲ್ಲ; ಅದರ ಯೋಜನೆಗಳನ್ನು ಮತ್ತು ವಿಶೇಷತೆಗಳನ್ನು ದೇವರಾತ್ಮನ ಮೂಲಕವಾಗಿ ದಾವೀದನಿಗೆ ನೀಡಲಾಗಿತ್ತು. ಇದರ ಬಗ್ಗೆ ದಾವೀದನು ಹೀಗೆ ಹೇಳಿದ್ದನು: "ಎಲ್ಲಾ ಕೆಲಸಗಳ ವಿಷಯವಾದ ಜ್ಞಾನವು ನನಗೆ ಯೆಹೋವನ ಲೇಖನದಿಂದಲೇ ಪ್ರಾಪ್ತವಾಯಿತು." [1 ಪೂರ್ವ 28:19]

"ಆ ಮೇಲೆ ದಾವೀದನು ತನ್ನ ಮಗನಾದ ಸೊಲೊಮೋನನಿಗೆ–ಸ್ಥಿರಚಿತ್ತನಾಗಿರು, ಧೈರ್ಯದಿಂದಿರು, ಕಲಸಕ್ಕೆ ಕೈಹಾಕು; ಅಂಜಬೇಡ, ಕಳವಳಗೊಳ್ಳಬೇಡ. ನನ್ನ ದೇವರಾಗಿರುವ ಯೆಹೋವ ದೇವರು ನಿನ್ನ ಸಂಗಡ ಇರುತ್ತಾನೆ; ಆತನು ತನ್ನ ಆಲಯದ ಎಲ್ಲಾ ಕೆಲಸವು ತೀರುವವರೆಗೂ ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ. .... ಅಧಿಪತಿಗಳೂ ಎಲ್ಲಾ ಪ್ರಜೆಗಳೂ ನಿನ್ನ ಆಜ್ಞೆಗೆ ಒಳಗಾಗುವರು." 1 ಪೂರ್ವ 28:12–13, 19–21.

ಹೀಗೆ ಇದು ಒಂದು ಕಟ್ಟಡವಾಗಿದ್ದು ಅದರ ಪ್ರತಿಯೊಂದು ತಂತುವೂ ಸಮಸ್ತ ದೇಶದ ಧಾರ್ಮಿಕ ಶ್ರದ್ಧಾಭಕ್ತಿ ಮತ್ತು ಆಸಕ್ತಿಗಳನ್ನು ಹುಟ್ಟಿಸಬೇಕಾಗಿದ್ದಲ್ಲದೆ ಇದು ಇಂಥಾ ಒಂದು ಶ್ರದ್ಧಾಭಕ್ತಿ ಮತ್ತು ಆಸಕ್ತಿಗಳಿಗೆ ಸ್ಮಾರಕವಾಗಿ ಮುಂದೆ ಬರುವ ಪೀಳಿಗೆಯನ್ನು ಎಚ್ಚೆತ್ತುಕೊಳ್ಳುವಂತೆಮಾಡಿ ಅವರಲ್ಲಿ

ಇದನ್ನು ಕಾಪಾಡಿಕೊಂಡು ಬರುವಂತೆಯೂ ಮಾಡಬೇಕಿತ್ತು. ಹೀಗೆ ನೋಡಿದ್ದಲ್ಲಿ, ಇದು ನಿಜವಾಗಿಯೂ ಒಂದು ದೊಡ್ಡ ಕಾರ್ಯವಾಗಿತ್ತು; ಅಲ್ಲದೆ ಎಲ್ಲಾ ಜನರು ಇದರಲ್ಲಿ ಆಸಕ್ತರಾಗಿ ಇದರ ಬಗ್ಗೆ ಕಾರ್ಯಪ್ರವೃತ್ತರಾಗುವ ಸಲುವಾಗಿ ಈ ಕಾರ್ಯವನ್ನು ಕೇವಲ ಜನರ ಗಮನವು ಯುದ್ಧ ಮತ್ತು ಅದರ ಜೊತೆಬರುವ ಕಂಗೆಟ್ಟ ಪರಿಸ್ಥಿತಿ ಹಾಗು ವಿಪತ್ತುಗಳಲ್ಲಿ ಮುಳುಗಿಹೋಗಲಾಗದಂಥ ಒಂದು ಸಮಾಧಾನದ ಸಮಯದಲ್ಲಿ ಇದನ್ನು ಕೈಗೆತ್ತಿಕೊಳ್ಳುವದು ಅಗತ್ಯವಾಗಿತ್ತು. ಇದು ಒಂದು ಜನಾಂಗದ ಪರಿಶ್ರಮದ ಕಾರ್ಯವಾದ್ದರಿಂದಲೂ ಅಲ್ಲದೆ ಅರಸನು ಆ ಒಂದು ಜನಾಂಗದ ಪ್ರತಿನಿಧಿಯೂ ಮತ್ತು ಮುಖ್ಯಸ್ಥನಾಗಿರುವದರಿಂದಲೂ ಇದನ್ನು ಇತರ ಯಾರಿಗೂ ನಿರ್ವಹಿಸಲು ಬಿಡದೆ, ಬದಲಾಗಿ ದೇವಾಭಿಷಕ್ತನಾದ ಅರಸನನ್ನು ಈ ಮುಖ್ಯವಾದ ಕಾರ್ಯಭಾರ ನಿರ್ವಹಿಸಲು ನೇಮಕ ಮಾಡುವದು ನಿಜವಾಗಿಯೂ ಸಹ ಸೂಕ್ತವೆಂದು ತೋರುವದು.

ಈ ದೃಷ್ಟಿಯಿಂದ ಅಲ್ಲದೆ ಇದು ದೈವನೇಮಿತವಾಗಿದ್ದು ಛಾಯಾರೂಪದ ಮಹತ್ವವನ್ನು ಹೊಂದಿರುವ ದೃಷ್ಟಿಯಿಂದಲೂ ಇದರ ಸೊಗಸು ಅಮೂಲ್ಯತೆ ಹಾಗು ಅದರಲ್ಲಿನ ಅಲಂಕಾರಗಳೆಲ್ಲವೂ ದೇವರಿಗೆ ಸಮರ್ಪಿಸಿಕೊಂಡು ಇದನ್ನು ಕಟ್ಟಿದಂಥವರ ಹೃದಯ ಹಾಗು ಕ್ರೀಯಾಶೀಲ ಕೈಗಳ ಪರಿಶ್ರಮ ಕಾಳಜಿ ತ್ಯಾಗಗಳನ್ನು ಇದು ಪ್ರತಿನಿಧಿಸುವಂತಾಗಬೇಕಿತ್ತು. ಹೀಗಾಗಿ ದಾವೀದನು ಇದನ್ನು ವ್ಯಕ್ತಪಡಿಸುವವನಾಗಿ ಹೀಗೆ ಹೇಳಿರುವದು: **"ಯೆಹೋವನಿಗೋಸ್ಕರ ಕಟ್ಟಿಸತಕ್ಕ ಆಲಯವು ಎಲ್ಲಾ ದೇಶಗಳಲ್ಲಿ ಕೀರ್ತಿ ಘನತೆಗಳನ್ನು ಹೊಂದಬೇಕಾದರೆ ಅದು ಅಧಿಕ ಶೋಭಾಯಮಾನವುಳ್ಳದ್ದಾಗಿರಬೇಕು."** –1 ಪೂರ್ವ 22:5

ನಮ್ಮ ಗಮನವನ್ನು ಸೆಳೆಯಲಾದ ದೇವಾಲಯ ಕಟ್ಟುವಂಥ ವಿಷಯದಲ್ಲಿ ದಾವೀದನು ತನ್ನ ಮಗನಾದ ಸೊಲೊಮೋನನಿಗೆ ವಹಿಸಿದ ಕಾರ್ಯಭಾರದಲ್ಲಿ ನಾವು ಸುದೀರ್ಘ ಅನುಭವವನ್ನು ಹೊಂದಿ ಶಿಕ್ಷಿತನಾದ ನಂತರ ಪರಿಪಕ್ವವಾಗಿ ಸಮೃದ್ಧ ಗುಣಸ್ವಭಾವ ಹೊಂದಿದ ಮನುಷ್ಯನ ಬಗ್ಗೆ ಒಂದು ತುಣುಕನ್ನು ನಾವು ಪಡೆದುಕೊಳ್ಳುತ್ತೇವೆ. ಈಗ ಬೇರೆ ಎಲ್ಲಾ ಆಕಾಂಕ್ಷೆಗಳಿಗಿಂತಲೂ ಮಿಗಿಲಾಗಿ ದೇವರಿಗಾಗಿರುವ ಆತನ ಉತ್ಸಾಹವು ಮೇಲುಗೈ ಪಡೆದಿದ್ದು, ಸೊಲೊಮೋನನ ವಿಷಯದಲ್ಲಿ ಆತನ ಮುಖ್ಯ ಬಯಕೆಯು ಏನಾಗಿತ್ತೆಂದರೆ ಈತನು ದೇವರಿಗೆ ಸತ್ಯವಂತನೂ ನಂಬಿಗಸ್ತನೂ ಆಗಿ ತನ್ನನ್ನು ಪ್ರಮಾಣೀಕರಿಸಿಕೊಂಡು ತನ್ನ ಸೇವಾಕಾರ್ಯದಲ್ಲಿ ಉತ್ಸಾಹವುಳ್ಳವನಾಗಿದ್ದು, ಹೀಗೆ ಅತನು ದೇವಾನುಗ್ರಹದಲ್ಲಿ ನೆಲೆಗೊಂಡಿರಬೇಕೆಂಬದೇ. ಆನಂತರ ದಾವೀದನು ಸೊಲೊಮೋನಿಗೆ ತನ್ನ ಮುಂದಿದ್ದ ದೊಡ್ಡ ಕಾರ್ಯದ ವಿಷಯವಾಗಿ ದೃಢಚಿತ್ತನಾಗಿದ್ದು ಧೈರ್ಯದಿಂದಿರಲು ಸೂಚಿಸಿ, ಆತನು ಮೋಶೆಗೆ ದೇವರು ಇಸ್ರಾಯೇಲ್ಯರ ವಿಷಯವಾಗಿ ಹೇಳಿದ್ದಂತೆ ತಾನು ಕೇವಲ ದೇವರ ನ್ಯಾಯವಿಧಿಗಳಿಗೆ ಕಿವಿಗೊಟ್ಟು ಅವುಗಳನ್ನು ಕೈಗೊಂಡು ನಡೆಯುವದನ್ನು ಮುಂದುವರೆಸಿದ್ದಲ್ಲಿ ಆತನು ಸಮೃದ್ಧಿಯಾಗಿ ಅಭಿವೃದ್ಧಿಹೊಂದಿ ದೇವಾನುಗ್ರಹದಲ್ಲಿ ನೆಲೆಗೊಳ್ಳುವವನೆಂಬ ಭರವಸೆನೀಡಿ ಆತನಿಗೆ ವಿದಾಯ ಹೇಳಿದ್ದನು.

ಸೊಲೊಮೋನನಿಗೆ ಹೇಳಿದ ಈ ಬುದ್ಧಿವಾದವನ್ನು ಇದೇ ಸಮನಾದ ಔಚಿತ್ಯದಿಂದ ದೇವರ ಸೇವೆಯಲ್ಲಿರುವ ಪ್ರತಿಯೊಬ್ಬ ಕ್ರೈಸ್ತನಿಂದ ಅಂಗೀಕರಿಸಬಹುದು, – **"ದೃಢಚಿತ್ತನಾಗಿರು, ಧೈರ್ಯದಿಂದಿರು".** ದೃಢಚಿತ್ತ ಮತ್ತು ಧೈರ್ಯ ಇವೆರಡೂ ನಂಬಿಗಸ್ತಿಕೆಯಿಂದ ಸೇವೆಮಾಡಲು ಮತ್ತು ನಂಬಿಗಸ್ತರು ಮಾಡತಕ್ಕ ಶ್ರೇಷ್ಠ ಹೋರಾಟದಲ್ಲಿ ಜಯಶಾಲಿಗಳಾಗಲು ಅವಶ್ಯ; ಇವೆರಡೂ–ತಾಳ್ಮೆಯಿಂದ ಸಹಿಸಿಕೊಳ್ಳುವದರ ಮೂಲಕವಾಗಿ ಹಾಗು ಕ್ರೈಸ್ತನಿಗೆ ಎದುರಾಗುವ ಹಲವಾರು ಪರಿಶೋಧನೆಗಳಲ್ಲಿ ದೇವರಲ್ಲಿ ನಂಬಿಕೆಯಿಡುವದರ ಮೂಲಕವಾಗಿ ಅಭಿವೃದ್ಧಿಯಾಗುತ್ತವೆ. ಅಪೋಸ್ತಲನಾದ ಪೌಲನು ಸಭೆಗೆ ನೀಡಿದ ಬುದ್ಧಿವಾದವೂ ದಾವೀದನು ಸೊಲೊಮೋನಿನಗೆ ಹೇಳಿರುವದಕ್ಕೆ ಸರಿಬೀಳುತ್ತದೆ, **"ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ."** ಮತ್ತೆ **"ಎಚ್ಚರವಾಗಿರಿ ಕ್ರಿಸ್ತನಂಬಿಕೆಯಲ್ಲಿ ದೃಢವಾಗಿ ನಿಲ್ಲಿರಿ. ಶೂರರಾಗಿರಿ, ಬಲಗೊಳ್ಳಿರಿ."** –ಎಫೆಸ್ಸ 6:10; 1 ಕೊರಿಂಥ 16:13.

ದಾವೀದನು ದೇವರಿಗೆ ಮಾಡಿದಂಥ ಪ್ರಾರ್ಥನೆ ಮತ್ತು ಕೃತಜ್ಞಾರ್ಪಣೆಗಳು 1 ಪೂರ್ವ 29:10–19 ಇದರಲ್ಲಿ ದಾಖಲಾಗಿರುತ್ತವೆ. ತನ್ನ ಆಲಯಕ್ಕಾಗಿ ಸಾಮಾಗ್ರಿಗಳನ್ನು ಸಂಗ್ರಹಿಸುವಂಥ ಸೌಭಾಗ್ಯಕ್ಕಾಗಿ ದೇವರನ್ನು ಕೊಂಡಾಡುವವನಾಗಿ, ಮತ್ತು ತಮ್ಮ ಎಲ್ಲಾ ವರಗಳನ್ನು ಕೇವಲ ಅವು ದೇವರದಾಗಿರುವದರಿಂದ ಅವುಗಳನ್ನು ದೇವರಿಗೆ ಹಿಂದಿರುಗಿಸುತ್ತಿರುವದಾಗಿ ದೀನತೆಯಿಂದ ಒಪ್ಪಿಕೊಂಡವನಾಗಿ, ಜನರು ಸ್ವೇಚ್ಛೆಯಿಂದ ಅರ್ಪಣೆಮಾಡಿದುದಕ್ಕಾಗಿ ತನ್ನ ಸಂತೋಷವನ್ನು ವ್ಯಕ್ತಪಡಿಸಿ, ಅವರ ಹೃದಯಗಳು ಯಾವಾಗಲೂ ಆತನಿಗೆ ಒಲವು ತೋರುವಂತಾಗಬೇಕೆಂದೂ, ಅಲ್ಲದೆ ಸೊಲೊಮೋನನಿಗೆ ಒಂದು ಪರಿಪೂರ್ಣವಾದ ಹೃದಯವನ್ನು ನೀಡಬೇಕೆಂತಲೂ ಅದು ಮನಮುಟ್ಟುವಂಥ ಕರುಣೆ ಭಯಭಕ್ತಿ ಸಾತ್ವಿಕತೆ ಹಾಗು ಪರಿಶುದ್ಧವಾದ ಉತ್ಸಾಹಗಳಿಂದ ಪೂರ್ಣವಾಗಿರಬೇಕೆಂದು ಪ್ರಾರ್ಥಿಸಿದ್ದನು. ಅದನ್ನು ಓದಿ ಅದರಲ್ಲಿನ ಹೃದಯ ಸ್ಪರ್ಷಿಯಾದ ನುಡಿಗಟ್ಟುಗಳಿಗೆ ಒತ್ತುನೀಡಿ ಅದರಿಂದ ಮತ್ತೆ ಮತ್ತೆ ಪುನಃಶ್ಚೇತಿತರಾಗಿ ಆ ಮೂಲಕವಾಗಿ ಬುದ್ಧಿಪಾಠವನ್ನು ಕಲಿಯಿರಿ. ಆನಂತರ (ವಚನ 20) ಹೇಗೆ ಆತನು ಎಲ್ಲಾ ಜನರನ್ನು ಅವರು ಆಸಕ್ತಿಯಿಂದ ದೇವರನ್ನು ಆಶೀರ್ವದಿಸುವಂತಾಗಲು ನಡೆಸಿದ್ದನೆಂಬುದನ್ನೂ, ಮತ್ತು ಹೇಗೆ ಉತ್ಸಾಹವು ಅಭಿಷಕ್ತನಾದ ಸೊಲೊಮೋನನನ್ನು ಯೆಹೋವನ ರಾಜ್ಯದ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಎರಡನೆಯ ಸಾರಿ ಪ್ರೇರೇಪಿಸಿತ್ತೆಂಬುದನ್ನು ಗುರುತುಮಾಡಿಕೊಳ್ಳಿ. (ವಚನ 22,23) ಈ ಎರಡನೆಯ ಅಭಿಷೇಕವು ಸಮಸ್ತ ಜನಾಂಗವು ಮೊದಲನೇ ಅಭಿಷೇಕಕ್ಕೆ (1ಅರಸುಗಳು 1:38–40) ಅನುಮೋದನೆ ನೀಡಿದಂತಿದ್ದು, ಹೋಲಿಕೆಮಾಡಿ ಹೇಳಿದ್ದಲ್ಲಿ, ಅದನ್ನು ಯಾರ ಗಮನಕ್ಕೂ ಬಾರದಂಥ ರೀತಿಯಲ್ಲಿ ಮಾಡಲಾಗಿತ್ತು.

84ನೇ ಕೀರ್ತನೆಯಿಂದ ಈ ಸುವರ್ಣಮಯವಾದ ಪಠ್ಯಭಾಗವನ್ನು ತೆಗೆದುಕೊಂಡಿದ್ದು, ಇದು ದೇವರ ಸೇವೆಯ ಸಲುವಾದ ದಾವೀದನ ಭಕ್ತಿ ಮತ್ತು ಉತ್ಸಾಹಗಳ ಮತ್ತೊಂದು ವರ್ಣನೆಯಾಗಿರುವದು. ನಾವು ಹೀಗೆ ಯೆಹೂದ್ಯರ ಯುಗದಲ್ಲಿನ

ಯೋಗ್ಯರಾದ ಭಕ್ತರನ್ನು ಇಂಥಾ ಒಂದು ಉತ್ಸಾಹಕ್ಕೆ ಪ್ರೇರೇಪಿಸಿದ ಛಾಯಾರೂಪದ ದೇವಾಲಯದ ಬಗ್ಗೆ ನಾವು ಆಲೋಚಿಸುವಾಗ ಜೀವಸ್ವರೂಪ ದೇವರ ಸಭೆಯಾಗಿರುವ ನಿಜರೂಪದ ದೇವಾಲಯದ ಬಗ್ಗೆ ನಾವು ಎಂಥಾ ಗಾಢವಾದ ಉತ್ಸಾಹ ಮತ್ತು ತೀವ್ರವಾದ ಹುರುಪಿನಿಂದ ಇದನ್ನು ಗೌರವಿಸಿ ಭಾವಿಸಬೇಕಿರುವದು! ಆ ಜೀವವುಳ್ಳ ಕಲ್ಲುಗಳು ನಿರಂತರಕ್ಕೂ ತಮ್ಮನ್ನು ಕಲ್ಲುಗಣಿಯಿಂದ ತೆಗೆದು ಕೆತ್ತಲ್ಪಟ್ಟು ನಯಗೊಳಿಸಿ ತಮ್ಮನ್ನು ದೇವರಿಗೆ ಪರಿಶುದ್ಧ ಆಲಯವಾಗಿ ಬೆಳೆದು ಬರುವಂತೆ ಮಾಡಿದಾತನ ಗುಣಾತಿಶಯಗಳನ್ನು ಪ್ರಚಾರಪಡಿಸುವವು. ದೇವರು ಇದರಲ್ಲಿ ವಾಸಿಸಲು ಸಂತೋಷವುಳ್ಳವನಾಗಿದ್ದು, ಈ ಆಲಯಕ್ಕೆ ಕ್ರಿಸ್ತ ಯೇಸುವು ಮುಖ್ಯವಾದ ಮೂಲೆಗಲ್ಲಾಗಿರುವನು. ಎಫೆಸ್ಸ 2:19–20

*****

ಇಸ್ರಾಯೇಲ್ಯರ ಅರಸನಾದ ಸೊಲೊಮೋನನು

ರೀಪ್ರಿಂಟ್ಸ್ ಪುಟ 5701

1 ಅರಸುಗಳು 1:1–2:12

"ನೀನಂತೂ ನಿನ್ನ ತಂದೆಯ ದೇವರನ್ನು ಅರಿತುಕೊಂಡು ಸಂಪೂರ್ಣ ಹೃದಯದಿಂದಲೂ ಮನಸ್ಸಂತೋಷದಿಂದಲೂ ಅತನನ್ನೇ ಸೇವಿಸು; – 1 ಪೂರ್ವ 28:9

ದಾವೀದನು ಎಪ್ಪತ್ತು ವರುಷ ವಯಸ್ಸಿನನಾಗಿದ್ದನು; ಆತನ ಹಿರಿಯ ಮಗನಾದ ಅಬ್ಷಾಲೋಮನು ಈ ಪಾಠವು ಆರಂಭವಾಗುವದಕ್ಕೆ ಹಿಂದೆ ಸಮೀಪದಲ್ಲಿ ನಡೆದ ದಂಗೆಯಲ್ಲಿ ಸಾವನ್ನಪ್ಪಿದ್ದನು. ದಾವೀದನ ಆನಂತರದ ಹಿರಿಯ ಮಗನು ಅದೋನೀಯನಾಗಿದ್ದು, ಅಬ್ಷಾಲೋಮನ ಮರಣವು ಈತನನ್ನು ಸಿಂಹಾಸನಕ್ಕೆ ಸ್ಪಷ್ಟ ಬಾಧ್ಯಸ್ಥನನ್ನಾಗಿ ಮಾಡಿದ್ದು, ಆತನು ಈ ಸಮಯದಲ್ಲಿ ಮೂವತ್ತು ಮತ್ತು ನಾಲ್ವತ್ತು ವರುಷಗಳ ನಡುವಿನವನಾಗಿದ್ದನೆಂದು ಭಾವಿಸಲಾಗಿರುವದು. ಯೋವಾಬನು ಒಂದು ದೀರ್ಘ ಕಾಲದಿಂದ ದಾವೀದನ ಸೇನೆಯ ಮುಖ್ಯಸ್ಥ–ನಾಗಿದ್ದು ಬಹು ವಯಸ್ಸಿನವನಾಗಿದ್ದನೂ ಸಹ. ಆತನು ನಿವೃತ್ತಿ ಹೊಂದುವವರ ಪಟ್ಟಿಯಲ್ಲಿ ಇರುವ ಸಾಧ್ಯತೆಯಿತ್ತು. ಇದು ಕೇವಲ ವಯಸ್ಸಿನ ಕಾರಣಕ್ಕಾಗಿರದೆ ಈತನು ಅಬ್ಷಾಲೋಮನ ಪ್ರಾಣವನ್ನು ತೆಗೆಯಬಾರದೆಂಬ ದಾವೀದನ ಆದೇಶಗಳನ್ನು ಅಲಕ್ಷಿಸುವದರ ಮೂಲಕವಾಗಿ ಆತನ ಭಾವನೆಗಳಿಗೆ ಆಳವಾಗಿ ಧಕ್ಕೆಯನ್ನು ಉಂಟು ಮಾಡಿದ್ದರಿಂದಾಗಿತ್ತು.

ಅದೋನಿಯನು ತನಗೆ ಇದು ಅರಸನನ್ನಾಗಿ ಘೋಷಿಸಿಕೊಳ್ಳಲು ಪಕ್ವವಾದ ಕಾಲವೆಂದು ಆಲೋಚಿಸಿ–ಕೊಂಡವನಾಗಿದ್ದು, ಅಲ್ಲದೆ ದೀರ್ಘ ಕಾಲದಿಂದ ಸೇನೆಯ ನಾಯಕನಾಗಿದ್ದ ಯೋವಾಬನ ಸ್ನೇಹವನ್ನು ಸಂಪಾದಿಸಿ–ಕೊಳ್ಳುವದರಲ್ಲಿ ಯಶಸ್ವಿಯಾಗಿದ್ದನು; ಮತ್ತು ಪ್ರಮುಖ ಯಾಜಕರಲ್ಲಿ ಒಬ್ಬನ ಸ್ನೇಹವನ್ನೂ ಸಹ ಸಂಪಾದಿಸಿಕೊಂಡಿದ್ದನು. ಆತನು ಒಂದು ಔತಣವನ್ನು ಮಾಡಿಸಿ ಅದಕ್ಕೆ ಸೊಲೊಮೋನನನ್ನು ಹೊರತು ಪಡಿಸಿ ಅರಸನಾದ ದಾವೀದನ ಮಕ್ಕಳೆಲ್ಲರನ್ನು ಸ್ಪಷ್ಟವಾಗಿ ಅಹ್ವಾನಿಸಿದ್ದನು. ಸೊಲೊಮೋನನು ಹೆಚ್ಚುಕಡಿಮೆ ತನ್ನ ತಂದೆಗೆ ಅತ್ಯಂತ ಪ್ರಿಯನಾಗಿದ್ದನೆಂದು ಮೇಲ್ನೋಟಕ್ಕೆ ತಿಳಿದುಕೊಳ್ಳಲಾಗಿತ್ತು. ಔತಣವು ನಡೆದದ್ದು ಯೆರೂಸಲೇಮಿಗೆ ಬಹು ದೂರದಲ್ಲೇನೂ ಇರಲಿಲ್ಲ; ಔತಣದ ಮಧ್ಯದಲ್ಲಿ ಆ ಗುಂಪಿನವರಲ್ಲಿ ಒಬ್ಬನು ಅದೋನೀಯನನ್ನು ರಾಜನಂತೆ ವಂದಿಸಬೇಕೆಂಬದಾಗಿ ಏರ್ಪಾಡುಮಾಡಲಾಗಿತ್ತು. ಆ ಗುಂಪಿನ ಇತರರು ಈ ಭಾವನೆಯನ್ನು ಪ್ರತಿಧ್ವನಿಸುವಂತೆ ಅಪೇಕ್ಷಿಸಲಾಗಿತ್ತು; ಹೀಗೆ ಈ ಘಟನಾವಳಿಯು ಒಂದು ಜನಪ್ರಿಯವಾದಂತ್ತಿದ್ದು, ಅದು ಒಂದು ದಂಗೆಯಾಗಿರಲಿಲ್ಲ ಎಂಬಂತೆ ತೋರಿಬಂದಿತ್ತು. ಆ ವರೆಗೆ ಇದು ಯೋಜನೆಮಾಡಿದ್ದ ಪ್ರಕಾರವೇ ಕಾರ್ಯಗತವಾಗಿತ್ತು.

ಹೇಗೂ, ದೇವರ ಅನುಗ್ರಹದ ಪ್ರಕಾರ, ಆ ಸಂಗತಿಯನ್ನು ಅರಸನಾದ ದಾವೀದನ ಗಮನಕ್ಕೆ ತರಲಾಗಿದ್ದು, ದಾವೀದನು ಕೂಡಲೇ ಪ್ರಾಮಾಣಿಕನಾಗಿ ಸೊಲೋಮೋನನನ್ನು ಅರಸನ ಬಿಳೀ ಕತ್ತೆಯ ಮೇಲಿರಿಸಿ ಇದು ಅರಸನು ಅವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಅನುಮೋಧಿಸಿ ಸೂಚಿಸಿರುವನೆಂದು ಮಾಡುವಂತೆ ತನ್ನ ನೂತನ ಸೇನಾಧಿಪತಿಯಾದ ಬೆನಾಯ, ಪ್ರವಾದಿಯಾದ ನಾತಾನ ಮತ್ತು ಯಾಜಕನಾದ ಚಾದೋಕ ಇವರೊಡನೆ ಏರ್ಪಾಡುಮಾಡಿದನು. ಆನಂತರ ಅವನು ದೇವರ ಹೆಸರಿನಲ್ಲಿ ಅಭಿಷೇಕಮಾಡಲ್ಪಟ್ಟು, ಆತನೆದುರಿನಲ್ಲಿ ಸೇನಾ ವಂದನೆಯನ್ನು ನೀಡಲಾಗಿ ಸಂಪೂರ್ಣವಾಗಿ ಯೆರೂಸಲೇಮ್ ಪಟ್ಟಣದ ಜನರೆಲ್ಲರೂ ಸಂತೋಷವನ್ನು ವ್ಯಕ್ತಪಡಿಸುವವರಾಗಿ, **"ಅರಸನಾದ ಸೊಲೊಮೋನನು ಚಿರಂಜೀವಿಯಾಗಿರಲಿ"** ಎಂದು ಆರ್ಭಟಿಸಿದ್ದರು. ಆನಂತರ ಕ್ರಮವಾಗಿ, ಅರಸನಾದ ದಾವೀದನು ಆಜ್ಞಾಪಿಸಿದಂತೆ ಅರಸನಾದ ಸೊಲೊಮೋನನನ್ನು ಸಿಂಹಾಸನಕ್ಕೆ ಕರತಂದು ಅಲ್ಲಿ ಅವನಿಗೆ ಸಾರ್ವಜನಿಕವಾಗಿ ಕಿರೀಟಧಾರಣೆ ಮಾಡಲಾಗಿತ್ತು.

ತನ್ನ ಯೋಜನೆಗಳು ಸಂಪೂರ್ಣವಾಗಿ ಕಾರ್ಯಗತ ವಾಗಿದ್ದವೆಂದು ತಿಳಿದುಕೊಂಡಿದ್ದ ಅದೋನಿಯನು ಆಶ್ಚರ್ಯಚಕಿತನಾಗಿದ್ದು, ಆತನೊಡನೆ ಇದ್ದವರಿಗೂ ಹೀಗೆಯೇ ಆಗಿತ್ತು. ಜನರ ಕೂಗಾಟ, ಕೊಂಬೂದುವದು ಮುಂತಾದುವನ್ನು ಅವರು ಕೇಳಿದ್ದಾಗ ಇದು ಸೊಲೊಮೋನನಿಗೆ ಕಿರೀಟಧಾರಣೆಯಾಗಿ ಆತನು ಸಿಂಹಾಸನವನ್ನೇರಿದನೆಂಬ ಅರ್ಥಕೊಡುವದೆಂದು ಅದೋನೀಯನ ಜೊತೆಯವರು ತಿಳಿದುಕೊಂಡರು. ಅದೋನೀಯನು ತನ್ನ ಜೀವಕ್ಕಾಗಿ ಹೆದರಿ ಓಡಿಹೋಗಿದ್ದನು; ಮತ್ತು ಆತನ ಜೊತೆಯಲ್ಲಿದ್ದವರು

ಕರಗಿಹೋಗಿದ್ದರು. ಹೇಗೂ ನಂತರದಲ್ಲಿ ಸೊಲೊಮೋನನು ತನ್ನ ಸಹೋದರನಾದ ಅದೋನೀಯನಿಗೆ ಸಮಾಧಾನದ ಭರವಸೆನೀಡಿ ಹೇಳಿಕಳುಹಿಸಿದ್ದನು.

ಹೀಗೆ ದಾವೀದನ ಸಾರ್ವಜನಿಕ ವೃತ್ತಿಯು ಸೊಗಸಾಗಿ ಕೊನೆಗೊಂಡಿತ್ತು. ಇದು ಒಂದು ಗ್ರಹಣದಂತಿರದೆ ಆತನು ಉತ್ತುಂಗದಲ್ಲಿರುವಾಗ ತನ್ನ ಇಳಿ ವಯಸ್ಸಿನ ಪೂರ್ಣ ಪ್ರೌಢಾವಸ್ಥೆಯಲ್ಲಿ ಮುಕ್ತಾಯವಾಗಿತ್ತು. ಅಲ್ಲದೆ ತಾನು ಆದುಕೊಂಡ ಮಗನ ವ್ಯಕ್ತಿತ್ವದ ಮೂಲಕವಾಗಿ ಸಿಂಹಾಸನದ ಮೇಲೆ ಅವಿಸ್ಮರಣೀಯವಾಗಿ ಮುಂದುವರೆದಿದ್ದನು. ಕವಿಯ ಈ ಮುಂದಿನ ಮಾತುಗಳು ಈತನಿಗೆ ಚೆನ್ನಾಗಿ ಅನ್ವಯವಾಗುವದು:

"ಆತನು ಮುಳುಗಿಹೋಗಿದ್ದು ಒಂದು ಮುಂಜಾನೆಯ
ನಕ್ಷತ್ರವು ಮುಳುಗಿದಂತೆ,
ಅದು ಕೆಳಗೆ ಇಳಿದು ಹೋಗದೆ ಕಾರ್ಗತ್ತಲಿನ ಪಶ್ಚಿಮದೆಡೆಗೆ
ಹೋಗುವದು,
ಇಲ್ಲವೇ ಇದು ಅವಿತು ಕ್ಷೀಣಿಸುವದು ಆಕಾಶದ ಬಿರುಗಾಳಿಯ
ಮಧ್ಯದಲ್ಲಿಯಲ್ಲ,
ಆದರೆ ಆಕಾಶದ ಬೆಳಕಿನಲ್ಲಿ ಕರಗಿಹೋಗುವದು."

ಸೊಲೊಮೋನನು, ಸಮಾಧಾನದ ಕುಮಾರನು

ಸೊಲೊಮೋನನ ಹೆಸರು ಜ್ಞಾನವನ್ನು ಸೂಚಿಸಲಾಗ ಬಂದಿದ್ದು; ಆದರೆ ಮೂಲದಲ್ಲಿ, ಪ್ರಥಮವಾಗಿ, ಅದು ಸಮಾಧಾನಪೂರ್ಣನೆಂಬ ಅರ್ಥಕೊಡುವದು. ಇದು ಖಂಡಿತವಾಗಿಯೂ ಆತನ ಅದ್ಭುತವಾದ ಜೀವಿತವನ್ನು ಕುರಿತ ಒಂದು ಪ್ರವಾದನೆಯಾಗಿದ್ದು, ಅಲ್ಲಿ ಯುದ್ಧಗಳಿರಲಿಲ್ಲ.

ಬತ್ಷೆಬಳು ಕಾನೂನಾತ್ಮಕವಾಗಿ ದಾವೀದನ ಹೆಂಡತಿ–ಯಾಗಿದ್ದಾಗ ಸೊಲೊಮೋನನು ಆಕೆಯಲ್ಲಿ ಹುಟ್ಟಿದ ಮಗನಾಗಿದ್ದನು. ಸೊಲೊಮೋನನು ದಾವೀದನಿಗೆ ಉತ್ತರಾಧಿಕಾರಿ ಆಗಿರಬೇಕೆಂದು, ಕೆಲವೊಂದು ವಿವರಿಸಲಾಗ–ದಂಥ ರೀತಿಯಲ್ಲಿ, ದೇವರು ದಾವೀದನಿಗೆ ಪ್ರಕಟಮಾಡಿದ್ದನು; ಅಲ್ಲದೆ ದಾವೀದನು ಈ ನಿಟ್ಟಿನಲ್ಲಿ ಬತ್ಷೆಬಳಿಗೆ ವಾಗ್ದಾನವನ್ನು ಮಾಡಿದ್ದನು. ಅರಸನಾದ ದಾವೀದನು ಒಬ್ಬ ರಣವೀರನಾಗಿ ಕಾರ್ಯೋನ್ಮುಖನಾಗಿದ್ದ ಅವಧಿಯು ಮುಕ್ತಾಯಗೊಳ್ಳುವ ಬಹು ಸಮೀಪದ ಸಮಯದಲ್ಲಿ ಸೊಲೊಮೋನನು ಜನಿಸಿದ್ದನು. ಆ ಸಮಯಕ್ಕೆ ದಾವೀದನ ಜೀವಿತದ ದೊಡ್ಡ ಇಮ್ಮಡಿ ಪಾಪಗಳು ಆ ನಂತರದಲ್ಲಿ ಅದಕ್ಕಾದ ಆತನ ಪಶ್ಚಾತಾಪವು ಆಶ್ಚರ್ಯಕರವಾಗಿ ಆತನನ್ನು ಮೃದುಗೊಳಿಸಿ ಶಿಕ್ಷಿತನನ್ನಾಗಿಸಿತ್ತೆಂಬದು ನಮ್ಮ ನಂಬಿಕೆ. ಈ ಗಂಭೀರವಾದ ವಿಷಯದಲ್ಲಿ ತೋರಿಬಂದ ಆತನ ನಿಷ್ಠೆ, ಕ್ಷಮೆಗಾಗಿ ಆತನು ಮಾಡಿದ ಪ್ರಾಮಾಣಿಕವಾದ ಪ್ರಾರ್ಥನೆ, ಮತ್ತು ದೇವರಿಂದಾದ ಸಮಾಧಾನದ ವಿಷಯವಾಗಿ ಆತನಿಗುಂಟಾದ ಅರಿವು, ಇವೆಲ್ಲವೂ ಆಗ ಅರಸನಾದ ದಾವೀದನನ್ನು ಒಬ್ಬ ನೂತನ ಪುರುಷನನ್ನಾಗಿ ಮಾಡಿದ್ದವು. ಇದಕ್ಕೆ ಹಿಂದಿನಿಂದಲೂ ದಾವೀದನು ದೇವರಿಗೆ ನಿಷ್ಠೆಯುಳ್ಳವನಾಗಿದ್ದಾಗ್ಯೂ ಈಗ ಆತನು ಇನ್ನೂ ಹೆಚ್ಚು ಭಕ್ತಿಯುಳ್ಳವನಾಗಿದ್ದುದು ಸ್ಪಷ್ಟವಾಗಿತ್ತು. ತಾನು ಹಾತೊರೆಯುತ್ತಿದ್ದ ಶಾಂತಿಯು ದೈವ ಕ್ಷಮಾಪಣೆಯ ಗುರುತು ಸಹ ಆಗಿದ್ದು, ಇವು ಅರಸನಾದ ಸೊಲೊಮೋನನ ಸೌಮ್ಯ ಹಾಗು ಆಲೋಚನಾಪೂರ್ಣವಾದ ಗುಣದ ವಿಷಯದಲ್ಲಿ ಕೆಲವೊಂದು ಕಾರ್ಯವೆಸಗಿರುವ ಸಂಭವವು ಇರಬಹುದಲ್ಲದೆ ಬಹುಶಃ ಆತನ ಹೆಸರಿನ ಸಂಬಂಧದಲ್ಲಿಯೂ ಕೆಲವೊಂದು ಸಂಗತಿಯೂ ಕಾರ್ಯಪ್ರವೃತ್ತವಾಗಿದ್ದವು. ತನ್ನ ಜನನವು ತನ್ನ ತಂದೆತಾಯಿಗಳ ಸಂಬಂಧದಲ್ಲಿ ಅವರು ದೇವರೊಂದಿಗೆ ಸಮಾಧಾನದಿಂದಿ – ರುವದನ್ನು ಸೂಚಿಸಿದ ಪ್ರಕಾರವೇ, ಆತನಿಗೆ ಇದೂ ಸಹಾಯಕವಾಗಿರಬಹುದು.

ಹೇಗಾದರೂ, ಸೊಲೊಮೋನನಲ್ಲಿ ತನ್ನ ಯಾವುದೇ ಒಬ್ಬ ಸಹೋದರಿಗಿಂತಲೂ ಒಂದು ವಿಭಿನ್ನವಾದ ಗುಣವನ್ನು ತೋರ್ಪಡಲಾಗಿರುವದೆಂದು ನಾವು ಗ್ರಹಿಸಿಕೊಂಡಿರುತ್ತೇವೆ. ಆ ಸಹೋದರರ ಬಗ್ಗೆ ಚರಿತ್ರೆಯಲ್ಲಿ ದಾಖಲಾಗಿರುವದು. ಆತನು, ತನ್ನ ತಂದೆಯಾದ ದಾವೀದನ ಧಾರ್ಮಿಕ ಪ್ರವೃತ್ತಿಯಲ್ಲಿ, ಇತರ ಎಲ್ಲರಿಗಿಂತಲೂ, ಹೆಚ್ಚು ಪಾಲನ್ನು ತೆಗೆದುಕೊಂಡಿದ್ದನು. ಆತನು ಹೀಗೆ ವಿಶೇಷವಾಗಿ ಅನುಗ್ರಹಿತನಾಗಿದ್ದು, ವಾಸ್ತವದಲ್ಲಿ ಹೆಚ್ಚು ವರಗಳನ್ನು ಹೊಂದಿರುವ ಸಂಭವವಿತ್ತು. ನಿಜವಾಗಿಯೂ ಎಷ್ಟರ ಮಟ್ಟಿಗೆ ನಾವೂ ಮತ್ತು ಇತರರೂ ಬಾಧ್ಯವಾಗಿ ಹೊಂದಿರುವ ಈ ಪ್ರವೃತ್ತಿಯಲ್ಲಿ ಮತ್ತು ವಿಶಿಷ್ಟ ಗುಣಲಕ್ಷಣಗಳಲ್ಲಿ ನ್ಯೂನ್ಯತೆ ಯುಳ್ಳವರೋ ಅಥವಾ ಆಶೀರ್ವದಿತರೋ ಆಗಿದ್ದೇವೆಂಬುದನ್ನು ನಾವು ಗಣನೆ ಮಾಡುವಂಥ ಸಮಯವಾಗಿರುವದು.

ಸೊಲೊಮೋನನಿಗೆ ಅನುಕೂಲಕರವಾದ ಮತ್ತೊಂದು ಆಂಶವೆಂದರೆ ಅದು ಆತನ ತಾಯಿಯು ಅನ್ಯಜನಾಂಗದವಳಾಗಿ–ರದೆ ಒಬ್ಬ ಇಸ್ರಾಯೇಲ್ಯಳಾಗಿದ್ದುದೇ, ಹೀಗಾಗಿ ದೈವಿಕ ಏರ್ಪಾಟು ಗಳು, ಆಜ್ಞಾವಿಧಿಗಳು, ದೇವಾರಾಧನೆಗಳು, ಮುಂತಾದ ವಿಷಯಗಳಲ್ಲಿ ಈಕೆಯು ದಾವೀದನ ಇತರ ಹೆಂಡತಿಯರಿ – ಗಿಂತಲೂ ಹೆಚ್ಚು ಸಹಮತ ಸಹಾನುಭೂತಿಯುಳ್ಳವನಾಗಿದ್ದಂತೆ ಕಾಣುತ್ತದೆ.

ಜೊತೆಗೆ, ದಾಖಲೆಗಳು ತೋರಿಸಿಕೊಟ್ಟಿರುವಂತೆ, ಅರಸನಾದ ದಾವೀದನು ತನ್ನ ಮನಸ್ಸಿನಲ್ಲಿ ತನ್ನ ಸಿಂಹಾಸನಕ್ಕೆ ಒಬ್ಬ ಉತ್ತರಾಧಿಕಾರಿಯನ್ನು ಇಟ್ಟುಕೊಂಡಿದ್ದು, ಬಹುಶಃ ಆ ಸಮಯಕ್ಕೆ ತಾನು ಇತರ ಮಕ್ಕಳ ಬಗ್ಗೆ ಅವರು ರಾಜಾಸ್ಥಾನದಲ್ಲಿನ ಪ್ರತಿಕೂಲ ಪ್ರಭಾವಗಳ ಮೂಲಕವಾಗಿ ಬೆಳೆಯಲು ಬಿಟ್ಟದ್ದು, ಈ ವಿಷಯದಲ್ಲಿ ತನ್ನ ಕರ್ತವ್ಯವನ್ನು ಪೂರ್ಣವಾಗಿ ನೆರವೇರಿಸಿರಲಿಲ್ಲ –ವೆಂಬುದನ್ನು ಅರಿತುಕೊಂಡಿದ್ದಂತೆ ಕಾಣುತ್ತದೆ. ಆದರೆ ಸೊಲೊಮೋನನ ವಿಷಯದಲ್ಲಿ ಇದನ್ನು ತಾನು ಸರಿಪಡಿಸಿಕೊಂಡಿದ್ದು, ಅವನು ಇನ್ನೂ ಎಳೆಯನವಾಗಿರು ವಾಗಲೇ ಆತನನ್ನು ಅವನ ತಾಯಿಯ ಪಾಲನೆಗೆ ಬಾಗಶಃ ಬಿಟ್ಟವನಾಗಿ, ಮತ್ತು ಆತನನ್ನು ಮೇಲ್ವಿಚಾರಣೆಮಾಡುವ ಸಲುವಾಗಿ ಪ್ರವಾದಿಯಾದ ನಾತಾನನನ್ನು ನೇಮಿಸಿ, ಸೊಲೊಮೋನನ್ನು ಆತನ ಶಿಷ್ಯನನ್ನಾಗಿ ಮಾಡಿದ್ದನು. ಆತನ ಈ ಉನ್ನತವಾದ ಗೌರವಯುತ ಜೀವನದ ಆರಂಭವು ನಿಸ್ಸಂದೇಹವಾಗಿ ಸೊಲೊಮೋನನ ವೃತ್ತಿಯಜೀವನದಲ್ಲಿ ಬಹುವಾಗಿ ಕಾರ್ಯವೆಸಗಿದ್ದು, ಇದನ್ನು ನಾವು ಮುಂದಿನ ಅಧ್ಯಯನದಲ್ಲಿ ಪರಿಶೀಲಿಸುವಂಥವರಾಗಿರುವೆವು.

*****

ಸಮಾಧಾನದ ಪ್ರಭುವಿನ ಪ್ರತಿಷ್ಠಾಪನೆ

ರೀಪ್ರಿಂಟ್ಸ್ ಪುಟ 4286

1 ಅರಸುಗಳು 1:32-40,50-53

"ನೀನಂತೂ ನಿನ್ನ ತಂದೆಯ ದೇವರನ್ನು ಅರಿತುಕೊಂಡು ಸಂಪೂರ್ಣ ಹೃದಯದಿಂದಲೂ ಮನಸ್ಸಂತೋಷದಿಂದಲೂ ಆತನನ್ನೇ ಸೇವಿಸು" – 1 ಪೂರ್ವ 28:9

ಸೊಲೊಮೋನನ ಹೆಸರು ಸಮಾಧಾನಪೂರ್ಣತೆಯನ್ನು ಸೂಚಿಸುತ್ತದೆ. ಆತನ ವೈಯುಕ್ತಿಕ ಶಿಕ್ಷಕನಾಗಿದ್ದ ನಾತಾನನು ಆತನನ್ನು ಯೆದಿದ್ಯನೆಂದು ಕರೆದಿದ್ದು ಇದು "ಯೆಹೋವನ ಪ್ರಿಯನು" ಎಂಬುದನ್ನು ಸೂಚಿಸುತ್ತದೆ. ಅವನು ಕೆಲವು ಸಹಜ ಗುಣವಿಶೇಷತೆಗಳನ್ನು ಬಾಧ್ಯವಾಗಿ ಹೊಂದಿದಂಥದ್ದು ಸ್ಪಷ್ಟವಾಗಿದ್ದು, ಅವುಗಳು ಆತನಿಗೆ ಅನುಕೂಲಕರವಾಗಿರಲು, ವಿಶೇಷವಾದ ದೈವಿಕ ಆಶೀರ್ವಾದದ ಅನುಸಾರ ಅವನಿಗೆ "ಜ್ಞಾನಿ" ಎಂಬ ಸೂಕ್ತ ಬಿರುದನ್ನು ನೀಡಿತ್ತು. ಒಬ್ಬ ಲೇಖಕನು ಆತನ ವಿಷಯವಾಗಿ ಹೀಗೆ ಹೇಳಿರುವನು:–

"ಆತನ ತಂದೆತಾಯಿಗಳಿಂದ ಪಾರಂಪರ್ಯವಾಗಿ ಹೊಂದಿದಂಥದ್ದು ಹಲವಾರು ವಿಧಗಳಿಂದ ಗಮನಾರ್ಹವಾಗಿ ಶಕ್ತಿಯುತವಾಗಿದ್ದವು. ಆತನ ತಂದೆಯಾದ ದಾವೀದನು ತನ್ನ ಪರಿಪಕ್ವತೆಯ ವಯಸ್ಸಿನವನಾಗಿದ್ದು, ಆತನ ತಾಯಿಯು ರಾಜನ ಆಸ್ಥಾನಿಕನಾದ ಅಹಿತೋಫೆಲನ ಮೊಮ್ಮಗಳಾಗಿದ್ದಳು; ಅಹಿತೋಫೆಲನ ಆಲೋಚನೆಗಳಿಗೆ "ದೈವೋತ್ತರಗಳಿರುವಷ್ಟು ಬೆಲೆಯಿತ್ತು." [2 ಸಮು. 16:23] ಹೀಗೆ ಆತನು ತನ್ನ ತಾಯಿಯ ಚುರುಕುಬುದ್ಧಿ, ಶೀಘ್ರ ನ್ಯಾಯನಿರ್ಣಯ, ನ್ಯಾಯ ಅನ್ಯಾಯಗಳ ಸೂಕ್ಷ್ಮದೃಷ್ಟಿ, ಬಹುಶಃ ಲೈಂಗೀಕ ದೌರ್ಬಲ್ಯ ಇವುಗಳನ್ನು ಪಾರಂಪರ್ಯವಾಗಿ ಪಡೆದಿದ್ದು, ತಂದೆಯಿಂದ ವೈಚಾರಿಕತೆ, ಸಾಹಿತ್ಯಾಭಿರುಚಿ, ರಾಜನೀತಿಕೌಶಲ್ಯ, ಧಾರ್ಮಿಕಾಸಕ್ತಿ ಈ ಗುಣಗಳನ್ನು ಪಡೆದಿದ್ದನು. ದಾವೀದನ ಇತರ ಮಕ್ಕಳೆಲ್ಲರಿ–ಗಿಂತಲೂ ಈತನ ದೇಹಾಕೃತಿಯು ಮತ್ತು ಮುಖಚರ್ಯೆಗಳು ಕೃಪಾಪೂರಿತ ಗುಣಲಕ್ಷಣಗಳನ್ನು ಹೊಂದಿದ್ದೀರಬೇಕು; ಅಲ್ಲದೆ ನಾವು ಪರಮಗೀತದಲ್ಲಿನ ವರ್ಣನೆಯನ್ನು ಅನುಸರಿಸಿ–ಹೋಗಬಹು ದಾದಲ್ಲಿ: ಗುಂಗುರುಗುಂಗುರಾದ ಆತನ ಕೂದಲು ಕಾಗೆಯಂತೆ ಕಪ್ಪಾಗಿದ್ದಾಗ್ಯೂ ಚಿನ್ನದ ಹೊಳಪುಳ್ಳದೆ ಇರಲಿಲ್ಲ. ಆತನು ನೀಳಕಾಯನೂ ಗಾಭೀರ್ಯವುಳ್ಳವನೂ ಆಗಿದ್ದನು." ಎಂದು ಅಲ್ಲಿ ಹೇಳಲಾಗಿರುವದು.

ತನ್ನ ಆಳಿಕೆಯು ಆರಂಭವಾದಾಗ ಆತನು ಸುಮಾರು ಇಪ್ಪತ್ತು ವರುಷ ವಯಸ್ಸಿನವನಾಗಿದ್ದನು. ಆತನ ತಂದೆಯಾದ ದಾವೀದನು ಸುಮಾರು ಎಪ್ಪತ್ತು ವರುಷ ವಯಸ್ಸುಳ್ಳವನಾಗಿ ಬಹು ದುರ್ಬಲಗೊಂಡಿದ್ದು, ಸಿಂಹಾಸನಕ್ಕೆ ಒಬ್ಬ ಉತ್ತರಾಧಿಕಾರಿಯನ್ನು ಶೀಘ್ರವಾಗಿ ಕಂಡುಕೊಳ್ಳಬೇಕೆಂದು ಎಲ್ಲರಿಗೂ ತೋರಿಬಂದಿತ್ತು. ದಾವೀದನ ಹಿರಿಯ ಮಗನಾದ ಅಮ್ನೋನನು ಅಬ್ಷಾಲೋಮ – ನಿಂದ ಕೊಲೆಮಾಡಲ್ಪಟ್ಟಿದ್ದು, ಈತನು ವಯಸ್ಸಿನಲ್ಲಿ ಇವನ [ಅಮ್ನೋನನ] ನಂತರದವನಾಗಿರಲು, ಅಬ್ಷಾಲೋಮನೂ ತನ್ನ ಬಂಡಾಯದ ನಿಮಿತ್ತದ ಯುದ್ಧದಲ್ಲಿ ಮಡಿದಿದ್ದನು. ವಯಸ್ಸಿನಲ್ಲಿ ನಂತರದವನಾಗಿ ಸ್ಪಷ್ಟವಾದ ಬಾಧ್ಯತೆಯುಳ್ಳವನಾಗಿದ್ದುದು ಅದೋನೀಯನು. ಈತನು ಅರಸನಾದ ತನ್ನ ತಂದೆಯು ಸೊಲೊಮೋನನು ತನಗೆ ಉತ್ತರಾಧಿಕಾರಿಯಾಗಬೇಕೆಂದು ಮೊದಲೇ ಆಲೋಚಿಸಿಕೊಂಡಿರುವದನ್ನು ಅರಿತುಕೊಂಡಿದ್ದು, ಈ ಉದ್ದೇಶವನ್ನು ಭಂಗಪಡಿಸ ಸಲುವಾಗಿ ತನ್ನ ತಂದೆಯು ರಾಜ್ಯಾಡಳಿತವನ್ನು ನಿರ್ವಹಿಸಲು ಅತಿ ಮುಪ್ಪಿನವನಾಗಿರುವನೆಂಬ ನೆಪವೊಡ್ಡಿ ರಾಜ್ಯವನ್ನು ತಾನು ಸ್ವಾಧೀನಮಾಡಿಕೊಳ್ಳಲು ಯತ್ನಿಸಿದ್ದನು.

ಅದೋನೀಯನು ತನ್ನ ಯೋಜನೆಯು ಸಿದ್ಧವಿರುವದಾಗಿ ಆಲೋಚಿಸಿಕೊಂಡಾಗ ಆತನು ತನ್ನ ಜೊತೆಗಾರರನ್ನು ಮತ್ತು ತನ್ನ ಅಸೂಯೆಗೆ ಗುರಿಯಾಗಿದ್ದವನಂತೆ ತೋರುತ್ತಿದ್ದ ಸೊಲೊಮೋನ ನನ್ನು ಹೊರತುಪಡಿಸಿ ಇತರ ಎಲ್ಲಾ ರಾಜಕುಮಾರನ್ನು "ಅರಮನೆಯ ಉದ್ಯಾನವನದಲ್ಲಿ" ಮಾಡಿಸಿದ್ದ ಒಂದು ದೊಡ್ಡ ಔತಣಕ್ಕೆ ಆಹ್ವಾನಿಸಿದ್ದನು. ಇಲ್ಲಿ ಔತಣ ಕೂಟದ ನಗೆಉಲ್ಲಾಸದ ಮಧ್ಯೆ–"ಅರಸನಾದ ಅದೋನೀಯನು ಜಿರಂಜೀವಿಯಾಗಿರಲಿ!" ಎಂಬ ಪೂರ್ವಯೋಚಿತವಾದ ಕೂಗೆದ್ದಿತ್ತು. ದಾವೀದನ ಸಮರ್ಥ ಸೇನಾಧಿಪತಿಯಾದ ಯೋವಾಬನು ಆಗ ಬಹು ವಯಸ್ಸಿನವನಾಗಿದ್ದು, ಹಾಗು ಮಹಾಯಾಜಕನಾದ ಅಬಿಯೇತರನು ಅವನ ದುಷ್ಪ್ರೇರಕರಲ್ಲಿ ಸೇರಿಕೊಂಡಿದ್ದನು. ಹೀಗೆ ದಾವೀದನ ಕುಟುಂಬದಲ್ಲಿ ಎರಡನೇ ಒಳಸಂಚು ಮರಿಯೊಡೆದಿತ್ತು.

"ಯೆಹೋವನ ರಾಜ್ಯವು"

"ದೇವರಿಲ್ಲವಲ್ಲಾ ಎಂದು (ದುಷ್ಟನು) ಸದಾ ಯೋಚಿಸುತ್ತಾನೆ." (ಅಥವಾ : ಅವರ ಆಲೋಚನೆಗಳಲ್ಲಿ ದೇವರಿರುವದಿಲ್ಲ) [ಕೀರ್ತನೆ 10:4] ಎಂದು ಪ್ರವಾದಿಯು ಬರೆಯುತ್ತಾನೆ. ಇದು ಅಬ್ಷಾಲೋಮನ ಬಂಡಾಯದ ವಿಷಯದಲ್ಲಿಯೂ ಮತ್ತೆ ಅದೋನೀಯನ ವಿಷಯದಲ್ಲಿಯೂ ನಿಜವಾಗಿತ್ತು. ಇಸ್ರಾಯೇಲಿನ ರಾಜ್ಯವು ದೇವರ ವಿಶೇಷವಾದ ಸಂಸ್ಥಾಪನೆಯಾಗಿದ್ದು ಇತರ ರಾಜ್ಯಗಳಿಗಿಂದ ಭಿನ್ನವಾಗಿರು–ವದೆಂದೂ ಹೀಗಾಗಿ ಶಾಸ್ತ್ರವಚನಗಳು ಪ್ರಕಟಮಾಡಿರುವಂತೆ ಅದು "ದೇವರ ರಾಜ್ಯ" ಆಗಿತ್ತೆಂಬುದನ್ನು ಅವರು ಪರಿಗಣನೆಗೆ ತೆಗೆದುಕೊಂಡಿರಲಿಲ್ಲ. ಹೀಗೆ ನಾವು ಓದುವದು, "ಸೊಲೊಮೋನನು ತನ್ನ ತಂದೆಯಾದ ದಾವೀದನಿಗೆ ಬದಲಾಗಿ ಯೆಹೋವನ ಸಿಂಹಾಸನದಲ್ಲಿ ಕೂತುಕೊಂಡು ವೃದ್ಧಿಯಾಗುತ್ತಾ ಬಂದನು." [1 ಪೂರ್ವ 29:23] ಒಳಸಂಚುಗಾರರು ತಾವು ನಿಜವಾಗಿಯೂ ದೈವೀಕ ಏರ್ಪಾಟಿನಲ್ಲಿ ಮಧ್ಯೆಪ್ರವೇಶಿಸುತ್ತಿದ್ದೇ–ವೆಂಬುದನ್ನು ಅರಿತುಕೊಂಡಿದ್ದಲ್ಲಿ ಖಂಡಿತವಾಗಿಯೂ ಅವರು ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ದೇವಜನರು ತಮ್ಮ

ಜೀವನದ ಎಲ್ಲಾ ಆಗುಹೋಗುಗಳಲ್ಲಿ ದೇವರ ಚಿತ್ತದ ಬಗ್ಗೆ ಸೂಕ್ಷ್ಮವಾಗಿ ವಿಚಾರಿಸಲು ಜಾಗರೂಕರಾಗಿರಬೇಕು. ದೇವರ ಜ್ಞಾನ ಮತ್ತು ಶಕ್ತಿಯು ಆತ್ಮಿಕ ಇಸ್ರಾಯೇಲ್ಯರ ಹಿತಾಕ್ತಿಗಳಲ್ಲಿ ಇರುವದೆಂಬುದನ್ನೂ, ಅದು ಎಂಥಾ ವಿಧದಲ್ಲಿ ಮತ್ತು ಎಂಥಾ ಮಟ್ಟದಲ್ಲಿರುವದೆಂದರೆ ಮಾನವ ಒಳಸಂಚುಗಳು ಮತ್ತು ವಿರೋಧಗಳು ಕೇವಲ ಅವುಗಳನ್ನು ಉತ್ತೇಜಿಸುವವರಿಗೆ ಹಾನಿಯನ್ನುಂಟುಮಾಡುವದು ಎನ್ನುವದನ್ನು ನಾವು ಖಂಡಿತವಾಗಿಯೂ ತಿಳಿದುಕೊಂಡಿರಬೇಕು. ನಮ್ಮ ಕರ್ತನಿಗೆ ವಿರುದ್ಧವಾಗಿ ಮಹಾಯಾಜಕರು ಶಾಸ್ತ್ರಿಗಳು ಮತ್ತು ಯೂದನು ಇಲ್ಲವೇ ಅಬ್ಷಾಲೋಮನು ಮತ್ತು ಅವನ ಸಹಾಯಕರು ದಾವೀದನಿಗೆ ವಿರೋಧವಾಗಿ ಮಾಡಿದ ಪಿತೂರಿಗಳ ವಿಷಯದಲ್ಲಿ –ದ್ದಂತೆ, ದೇವರು ಇವುಗಳನ್ನು ಬಹು ದೀರ್ಘ ಕಾಲದವರೆಗೆ ನಡೆಯಲು ಹಾಗೂ ಸ್ಪಷ್ಟವಾಗಿ ಗೆಲುವನ್ನು ಹೊಂದಲು ಬಿಟ್ಟಾಗ್ಯೂ, ಇದನ್ನು ಸ್ವೀಕರಿಸುವಂಥ ನಂಬಿಕೆಯನ್ನು ಹೊಂದಿದವರೆಲ್ಲರಿಗೆ ಭರವಸೆನೀಡಿ ಹೇಳಿರುವದೇನಂದರೆ: **"ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲ–ವಾಗುತ್ತವೆ."** [ರೋಮಾ 8:28] ಎಂಬದೇ, ಅಲ್ಲದೆ **"ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ."** [ಯೋಹಾನ 19:11] ಎಂದು ಯೇಸುವು ಪಿಲಾತನಿಗೆ ಹೇಳಿದ ರೀತಿಯಲ್ಲಿ ಇದು ಕರ್ತನ ಜನರೆಲ್ಲರ ವಿಷಯದಲ್ಲಿ ಯಾವಾಗಲೂ ನಿಜವಾಗಿರಬೇಕು; ತಂದೆಯು ತನ್ನ ಮಹಿಮೆಯುಳ್ಳ ಯೋಜನೆಗಳಲ್ಲಿ ಹಸ್ತಕ್ಷೇಪಮಾಡುವಂಥ ಯಾವ ಸಂಗತಿಯನ್ನೂ ಬರಗೊಡಿಸುವದಿಲ್ಲ. ಇದನ್ನು ಆತನು ತನ್ನ ಮಾತುಗಳಲ್ಲಿ ಹೀಗೆ ಭರವಸೆ ನೀಡಿ ಹೇಳಿರುವನು: **"ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ."** [ಯೆಶಾಯ 55:11]

ಸೊಲೊಮೋನನು ಆಯ್ಕೆಯಾಗಿ, ಅಭಿಷೇಕಿಸಲ್ಪಟ್ಟು, ಘೋಷಿತನಾದದ್ದು

ನಿಗದಿತ ಸಮಯದಲ್ಲಿ ದೈವಿಕ ಮುನ್ನೇರ್ಪಾಡು ಅದೋನೀಯನ ಒಳಸಂಚಿನ ಕಡೆಗೆ ಅರಸನಾದ ದಾವೀದನ ಗಮನವನ್ನು ಸೆಳೆದಿದ್ದು, ಅವನು ಸೂಕ್ತ ಕಾಲದಲ್ಲಿ ದೇವರ ಚಿತ್ತವನ್ನು ನೆರವೇರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಾಡಲಾಗಿತ್ತು. ನಮ್ಮ ಪಾಠವು ದಾವೀದನು ಹೇಗೆ ಮತ್ತೊಬ್ಬ ಯಾಜಕ, ಪ್ರವಾದಿಯಾದ ನಾತಾನ, ಮತ್ತು ಮತ್ತೊಬ್ಬ ಸೇನಾ ನಾಯಕನಾದ ಬೆನಾಯ, ಇವರನ್ನು ಕರೆಸಿ ತನ್ನ ಮಗನಾದ ಸೊಲೊಮೋನನೊಡನೆ ಪಟ್ಟಣದ ಬಾಗಲಿಗೆ ಕೇವಲ ಹತ್ತಿರದಲ್ಲಿರುವ ತಗ್ಗಿನ ಅಂದರೆ ಕಾಲಾನಂತರದಲ್ಲಿ ಯೇಸುವು ಕತ್ತೆಯ ಮೇಲೆ ಹೋಗಿದ್ದ ಸ್ಥಳಕ್ಕೆ ಕಳುಹಿಸಿದ್ದನೆಂದು ಹೇಳುತ್ತದೆ. ಸೊಲೊಮೋನನನ್ನು ದಾವೀದನ ಸ್ವಂತ ಬಿಳಿ ಕತ್ತೆಯ ಮೇಲೆ ಕುಳ್ಳರಿಸಿ ಕರಕೊಂಡು ಹೋಗುವಂತೆ ಆದೇಶಿಸಲಾಗಿದ್ದು, ಸ್ವತಃ ಈ ಕಾರ್ಯವು ಸೊಲೊಮೋನನನ್ನು ದಾವೀದನ ಉತ್ತರಾಧಿಕಾರಿಯನ್ನಾಗಿ ಘೋಷಿಸಿದ್ದಂತಾಗಿತ್ತು. ಈ ವಿಶೇಷ ನಿಯೋಗದೊಂದಿಗೆ ಕೆಲೆತ್ಯ ಮತ್ತು ಪೆಲೆತ್ಯ ಎಂಬ ಎರಡು ಅರಸನ ವಿಶೇಷ ಅಂಗರಕ್ಷಕ ಪಡೆಗಳು ಹೋಗಿದ್ದವು. ಇವರ ಸಮ್ಮುಖದಲ್ಲಿ ಅಭಿಷೇಕವನ್ನು ಮಾಡಲಾಗಿದ್ದು, ತುತ್ತೂರಿ ಊದಲ್ಪಟ್ಟು ಸೊಲೊಮೋನನು ಅರಸನನ್ನಾಗಿ ಪ್ರಕಟಮಾಡಲಾಗಿ ಜನರು ಒಕ್ಕೊರಲಿನಿಂದ ದೊಡ್ಡ ಆರ್ಭಟಗಳು ಮತ್ತು ಹರ್ಷೋಲ್ಲಾಸದೊಡನೆ ಇದನ್ನು ಸಮರ್ಥಿಸಿದ್ದರು. ಹೀಗೆ ಸೊಲೊಮೋನನ್ನು ರಾಜಮರ್ಯಾದೆಯೊಡನೆ ಅರಮನೆಗೆ ಕರತರಲಾಗಿದ್ದು, ಅಲ್ಲಿ ಅವನು ತನ್ನ ತಂದೆಯಾದ ದಾವೀದನ ಜೊತೆಗೆ ಅವನು ಗತಿಸುವವರೆಗೂ ಸುಮಾರು ಆರು ತಿಂಗಳಕಾಲ ಆಳ್ವಿಕೆಮಾಡಿದ್ದನು.

ಸೊಲೋಮೋನನ ಜ್ಞಾನ ಮತ್ತು ಸೌಮ್ಯಭಾವ

ಅರಸನು ತನಗೆ ವರ್ಗಾಯಿಸಲಾದ ದೊಡ್ಡ ಜವಾಬ್ದಾರಿಗಳನ್ನು ನಿಭಾಯಿಸಲು ಸೊಲೋಮೋನನು ಬಹು ಎಳೆಪ್ರಾಯದವನಾಗಿದ್ದು, ಅಲ್ಲದೆ ತಾನು ತೋರ್ಪಡಿಸಿದ್ದ ಸೌಮ್ಯಭಾವು ತಾನು ಕೇವಲ ಒಳ್ಳೆಯ ಸಮತೋಲನ ಗುಣವುಳ್ಳವನು ಮಾತ್ರವಲ್ಲದೆ ಒಳ್ಳೆಯ ತರಬೇತನ್ನು ಪಡೆದಿದ್ದನೆಂಬುದನ್ನು ತೋರಿಸಿಕೊಡುತ್ತದೆ. ಸೊಲೊಮೋನನು ಜನಿಸಿದ್ದುದು ತನ್ನ ತಂದೆಯಾದ ದಾವೀದನು ತನ್ನ 53ನೇ ವಯಸ್ಸಿನಲ್ಲಿದ್ದಾಗ, ಹಾಗು ಆ ಸಮಯವು ನಿಸ್ಸಂದೇಹವಾಗಿ ಆತನು ತನ್ನ ಕುಟುಂಬದಲ್ಲಿನ ಉಳಿದವರನ್ನು ಅತಿಯಾಗಿ ತೃಪ್ತಿಪಡಿಸಲು ಬಿಟ್ಟಿರುವಂಥದನ್ನು ತನ್ನ ಅನುಭವದ ಮೂಲಕವಾಗಿ ಕಲಿತುಕೊಂಡಿದ್ದನು. ದಾವೀದನು ಅವರನ್ನು ಸಾಕಷ್ಟು ಕಟ್ಟುನಿಟ್ಟಿನಿಂದ ಬೆಳೆಸಿರಲಿಲ್ಲ. ಅವರನ್ನು ದೇವರ ಆಜ್ಞಾವಿಧಿಗಳ ವಿಷಯದಲ್ಲಿ ತರಬೇತುಗೊಳಿಸಿ ಬೆಳೆಸುವದರ ಅಗತ್ಯತೆಯ ಬಗ್ಗೆ ಸಾಕಷ್ಟು ಅರಿತುಕೊಂಡಿರಲಿಲ್ಲ. ರಾಜ್ಯದ ವಿಶೇಷ ಸಂಗತಿಗಳು ಆತನ ಗಮನವನ್ನು ಸೆಳೆದಿದ್ದು ಮತ್ತು ಮಕ್ಕಳನ್ನು ತನ್ನಂತೆ ಭಯಭಕ್ತಿಯಿಲ್ಲದಂಥವರ ಅತಿಯಾದ ಪರಾಮರಿಕೆಗೆ ಬಿಟ್ಟಿದ್ದನು. ಅವರು ಅರಸನಾದ ದಾವೀದನಂತೆ ಭಯಭಕ್ತಿಯುಳ್ಳವರಾಗಿರಲಿಲ್ಲ. ತನ್ನ ಯೌವನಕಾಲದಿಂದಲೇ ಧಾರ್ಮಿಕನಾಗಿದ್ದಂಥವನು ತನ್ನ ಮಕ್ಕಳು ಹೃದಯ ಮತ್ತು ಮನಸ್ಸಿನಲ್ಲಿ ಇಂಥದ್ದೇ ಗುಣಲಕ್ಷಣಗಳನ್ನು ಪಡಕೊಳ್ಳುವರೆಂದು ಕಲ್ಪಿಸಿಕೊಂಡಿದ್ದಂತೆ ತೋರುತ್ತದೆ. ಐಶ್ವರ್ಯ ಮತ್ತು ಭೂಸಂಬಂಧದ ಗೌರವಗಳ ನೀತಿಭ್ರಷ್ಟ ಪ್ರಭಾವಗಳ ಬಗ್ಗೆ ತಾನು ಸಾಕಷ್ಟು ಗ್ರಹಿಸಿಕೊಂಡಿರದಿದ್ದುದು ಸ್ಪಷ್ಟವಾಗಿತ್ತು. ಅಂದರೆ ಇವು ಅವರನ್ನು ಭಯಭಕ್ತಿಯುಳ್ಳವರನ್ನಾಗಿ ಮಾಡುವುದಕ್ಕೆ ಬದಲಾಗಿ ಇವು ಅವರನ್ನು ಹೆಮ್ಮೆಯುಳ್ಳವರಾಗಿ ಲೌಕೀಕಭಾವಹೊಂದಿ ಭಯಭಕ್ತಿಯಿಲ್ಲದವರನ್ನಾಗಿ ಮಾಡಿತ್ತು.

ಇದು ನಿಸ್ಸಂದೇಹವಾಗಿ ದೇವರ ಕಡೆಗೆ ಹೆಚ್ಚುತ್ತಿದ್ದ ದಾವೀದನ ಭಯಭಕ್ತಿಯ ದೆಸೆಯಿಂದಾಗಿದ್ದು, ಅಲ್ಲದೆ ಇತರ ತನ್ನ ಮಕ್ಕಳಿಗೆ ತರಬೇತಿ ನೀಡುವದರಲ್ಲಿ ಮಾಡಿದ ತನ್ನ ತಪ್ಪು ಬಗ್ಗೆ ಗ್ರಹಿಸಿಕೊಂಡವನಾಗಿ, ಅಲ್ಲದೆ ತನ್ನ ಸಿಂಹಾಸನದ ಉತ್ತರಾಧಿಕಾರಿಯು ದೇವರನ್ನು ಗೌರವಿಸಿ ಧಾರ್ಮಿಕ ಹಿತಾಸಕ್ತಿಗಳನ್ನು ಮುಂದುವರೆಸುವಂಥವನಾಗಿರಬೇಕೆಂಬ ಬಯಕೆಯ ಕಾರಣಗಳಿಂದಾಗಿತ್ತು. ಈ ವಿಷಯಗಳು ನಿಸ್ಸಂಶಯವಾಗಿ ಸೊಲೊಮೋನನನ್ನು ಆತನು ದೇವರು ಮತ್ತು

ಆತನ ರಾಜ್ಯವನ್ನು ನೀತಿಯಿಂದ ಸೇವೆಮಾಡಿ ಮತ್ತು ದಾವೀದನು ಕಟ್ಟಲು ಉದ್ದೇಶಿಸಿ ಅದನ್ನು ಆತನು ಕಟ್ಟಲು ಬಿಡದಿದ್ದಂಥ ದೇವಾಲಯವನ್ನು ಕಟ್ಟಿಸ ಸಲುವಾಗಿ ಸಿದ್ಧಪಡಿಸಲು ಪ್ರವಾದಿಯಾದ ನಾತಾನನ ವಿಶೇಷ ಪರಿಪಾಲನೆಗೆ ಹಾಕುವಂತಾಗಲು ನಡೆಸಿತ್ತು. ಪ್ರವಾದಿಯಾದ ನಾತಾನನು ದೇವಾಲಯವನ್ನು ಕಟ್ಟುವ ಯೋಜನೆಯ ಬಗ್ಗೆ ಮತ್ತು ಅದನ್ನು ದಾವೀದನ ಬಾಧ್ಯಸ್ಥನು ಕಟ್ಟಿಸಬೇಕೆಂಬ ದೇವರ ವಾಗ್ದಾನದ ಬಗ್ಗೆ ಅಲ್ಲದೆ ಸೊಲೊಮೋನನು ದೇವರಿಂದ ಮತ್ತು ಅರಸನಿಂದ ಆಯ್ಕೆಮಾಡಲ್ಪಟ್ಟವನೆಂಬುದನ್ನು ತಿಳಿದುಕೊಂಡಿದ್ದನು. ರಾಜಕುಮಾರನಾದ ಸೊಲೊಮೋನನನ್ನು ಆತನು ತುಂಬಲು ಉದ್ದೇಶಿಸಿದ್ದ ಸ್ಥಾನದ ಹೊಣೆಗಾರಿಕೆಯನ್ನು ನಿಭಾಯಿಸಲು ತರಬೇತುಗೊಳಿಸುವಲ್ಲಿ ತೋರಿದ ಪ್ರವಾದಿಯಾದ ನಾತಾನನ ನಂಬಿಗಸ್ತಿಕೆಯ ಬಗ್ಗೆ ಊಹಿಸಲು ನಮಗೆ ಸಾಧ್ಯವಿರುವದು.

ಅದೋನೀಯನ ವಿಷಯವಾಗಿ ಬರೆದಿರುವದೇನಂದರೆ, "ಅವನ ತಂದೆಯು–ನೀನು ಹಾಗೆ ಹೀಗೆ ಮಾಡಿದ್ದೇಕೆ ಎಂದು ಅವನನ್ನು ಒಂದು ಸಾರಿಯಾದರೂ ಗದರಿಸಿದ್ದು ಇರಲಿಲ್ಲ." (1 ಅರಸುಗಳು 1:6) ಆತನು ಅತಿಯಾಗಿ ಮುದ್ದುಮಾಡಲ್ಪಟ್ಟ ಮಗುವಾಗಿದ್ದು, ತನ್ನ ತಂದೆಯು ತನ್ನನ್ನು ಬಹು ಧಾರ್ಮಿಕ ಶ್ರದ್ಧೆಯುಳ್ಳ ಶಿಕ್ಷಕನಾದ ಪ್ರವಾದಿಯಾದ ನಾತಾನನ ಮಾರ್ಗದರ್ಶನಕ್ಕೆ ಎಂದೂ ಬಿಟ್ಟಿರಲಿಲ್ಲವೆಂಬದಕ್ಕೆ ತಾನು ಸಂತೋಷವುಳ್ಳವನಾಗಿದ್ದ ಸಂಭವವಿತ್ತು. ಸೊಲೊಮೋನನು ಕೆಲವು ವಿಲಾಸವಿನೋದಗಳಿಗೆ ವಿಶೇಷವಾಗಿ ತಡೆಯೊಡ್ಡಿ ಅಡ್ಡಿಮಾಡಲ್ಪಟ್ಟಿರುವನೆಂದೂ, ಸಾಧಾರಣವಾಗಿ ಅತಿಯಾದ ನಿರ್ಭಂಧಗಳಿಗೆ ಒಳಪಟ್ಟಿರುವನೆಂದು ಆತನು ಪರಿಗಣಿಸಿದ್ದರಲ್ಲಿ ಸಂದೇಹವಿರಲಿಲ್ಲ. ಹೇಗೂ ಸೊಲೊಮೋನನು ಈ ಅನುಭವಗಳ ಮೂಲಕವಾಗಿ ವಿಶೇಷವಾಗಿ ಸಂತುಷ್ಟನಾಗಿದ್ದಂತೆ ತೋರುತ್ತದೆ; ಇದು ರೆಂಬೆಯು ಎಳೆಯದಿರುವಾಗಲೇ ಅದನ್ನು ಬಗ್ಗಿಸಬೇಕೆಂಬುದರ ಅವಶ್ಯಕತೆಯಿರುವದೆಂಬ ಅಂಶವನ್ನು ಚೆನ್ನಾಗಿ ನಿದರ್ಶಿಸುತ್ತದೆ. ಈ ಪಾಠವನ್ನು ಎಲ್ಲಾ ತಂದೆತಾಯಿಗಳಿಗೆ ಮತ್ತು ಪೋಷಕರಿಗೆ ಮನವರಿಕೆಮಾಡಲು ಇಷ್ಟಪಡುತ್ತೇವೆ. ಅದೇನಂದರೆ, ತಮ್ಮ ಪಾಲನೆಯಲ್ಲಿರುವರ ಬಗ್ಗೆ ಮೇಲ್ವಿಚಾರಣೆ ಹಾಗು ಪ್ರೀತಿಪೂರ್ಣವಾದ ಧಾರ್ಮಿಕ ನಿಯಂತ್ರಣಗಳ ಅಗತ್ಯವಿರುವದಾಗಿಯೂ ಅವರ ಜೀವನದ ಆರಂಭದ ವರುಷಗಳಲ್ಲಿ ಅವರ ಕಡೆಗೆ ಗಮನಹರಿಸದೆ ಮತ್ತು ಅವರಿಗೆ ತರಬೇತು ನೀಡದೆ ನಂತರದಲ್ಲಿ ಅವರಿಂದ ಒಳ್ಳೆಯ ಫಲಿತಾಂಶಗಳನ್ನು ಅಪೇಕ್ಷಿಸುವದು ಒಂದು ದೊಡ್ಡ ತಪ್ಪೆಂಬದು.

ನಾವು ಒಂದು ಸಿಂಹಾಸನದ ಸಲುವಾಗಿ ತರಬೇತಿಯಲ್ಲಿರುವೆವು.

ನಮ್ಮ ತಂದೆಯು ದೊಡ್ಡ ಅರಸನಾಗಿದ್ದು, ಕ್ರಿಸ್ತನು ತನ್ನ ಸಿಂಹಾಸನದಲ್ಲಿ ಕುಳಿತುಕೊಳ್ಳುವನೆಂದು ವಾಗ್ದಾನ ಮಾಡಿರುವನು. ನಾವು ಅಭಿಷಕ್ತನಾದ ಮೆಸ್ಸೀಯನಾಗಿರುವ ಕ್ರಿಸ್ತನ ಭಾಗಗಳಾಗಲು [ಅಂಗಗಳಾಗಲು] ಆಹ್ವಾನಿಸಲ್ಪಟ್ಟಿರುವೆವು. ಈ ಮುಖ್ಯವಾದ ಸ್ಥಾನಕ್ಕೆ ನಮಗೆ ತರಬೇತಿನ ಅವಶ್ಯಕತೆಯಿರುವ–ದೆಂಬದಕ್ಕೆ ನಾವು ಆಶ್ಚರ್ಯಪಡಬೇಕೆ; ಮತ್ತು ಈ ಉನ್ನತ ಪದವಿಯನ್ನು ಹೊಂದಲು ಉದ್ದೇಶಿತರಲ್ಲದವರಿಗಿಂತಲೂ ಹೆಚ್ಚು ಶಿಸ್ತುಗಳು ಹೇರಲಾಗಿರುವದಕ್ಕೆ ಮತ್ತು ಇವರಿಂದ ಅಧಿಕವಾಗಿ ಬಯಸಲಾಗುತ್ತದೆಂಬುದಕ್ಕೆ ನಾವು ವಿಸ್ಮಯವಾಗಬೇಕೆ! ಖಂಡಿತವಾಗಿಯೂ ದೊಡ್ಡ ಅರಸನಾಗಿರುವ ನಮ್ಮ ತಂದೆಯ ಏರ್ಪಾಟುಗಳು ಒಟ್ಟಾರೆ ಜ್ಞಾನವುಳ್ಳವುಗಳೂ ನೀತಿಯುಳ್ಳವುಗಳೂ ಆಗಿರುವವು. ಆದುದರಿಂದ ಆತನೊಡನೆ ಪೂರ್ಣವಾಗಿ ಸಹಾನುಭೂತಿಯುಳ್ಳವರಾಗಿ ಹೊಂದಾಣಿಕೆಯಲ್ಲಿರುವವರು ಆ ರಾಜ್ಯಪ್ರಭಾವಗಳಿಗಾಗಿ ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳುವ ಸಲುವಾದ ಪಾಠವನ್ನು ಕಲಿತುಕೊಳ್ಳಲು ಕುತೂಹಲವುಳ್ಳವರಾಗಿರುವರು. ಇವರು ಅಬ್ಷಾಲೋಮನ ಹಾಗು ಅದೋನೀಯನ ಮಾದರಿಯ ಅನ್ಯೋನ್ಯತೆಯ ಕೂಟಗಳು ಹಾಗು ಔತಣಗಳಿಗೆ ಸೇರಿಸಿಕೊಳ್ಳದಿದ್ದರೆ ಆಶ್ಚರ್ಯವಾಗಬೇಕಿಲ್ಲ. ತಮ್ಮಲ್ಲಿನ ಆಕಾಂಕ್ಷಿತರಾದ ಸಹೋದರರಿಂದ ಇವರು ಕಡೆಗಣಿಸಲ್ಪಟ್ಟು, ಶಿರಸ್ಸಾಗಿರುವಂಥ [ಕ್ರಿಸ್ತನ] ಆ ದೇಹದ ಕಡೆಯ ಸದಸ್ಯರ ವಿಷಯವಾಗಿ ಕೆಟ್ಟದ್ದನ್ನು ನುಡಿಯಲ್ಪಡಬಹುದು, ಆದರೆ ಅವರು ದೈವಾನುಗ್ರಹವನ್ನು ಹೊಂದಿದ್ದಲ್ಲಿ ಅವರು ಅಭಿಷೇಕಿಸಲ್ಪಡುವದು ಮಾತ್ರವಲ್ಲದೆ ಸಿಂಹಾಸನಕ್ಕೂ ಸಹ ಅಂಗೀಕರಿಸಲ್ಪಡುವರು. "ತಾಳ್ಮೆಯುಳ್ಳವರಾಗಿರಿ ಸಹೋದರರೇ ನಿಮ್ಮ ಬಿಡುಗಡೆಯ ಸಮಯವು ಸಮೀಪಿಸಿದೆ." "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು."

ನಮ್ಮ ಸುವರ್ಣಮಯ ಪಠ್ಯಭಾಗವು

"ನೀನಂತೂ ನಿನ್ನ ತಂದೆಯ ದೇವರನ್ನ ಅರಿತುಕೊಂಡು ಸಂಪೂರ್ಣಹೃದಯದಿಂದಲೂ ಮನಸ್ಸಂತೋಷದಿಂದಲೂ ಅತನನ್ನೇ ಸೇವಿಸು;" [1 ಪೂರ್ವ 28:9] ಇಲ್ಲಿ ಒಂದು ಸ್ವರ್ಣಖಚಿತವಾದ ಮನೋಭಾವವು ಈ ಮಾತುಗಳಲ್ಲಿ ವ್ಯಕ್ತವಾಗಿರುವದು. ದೇವರೊಂದಿಗೆ ವ್ಯವಹರಿಸವಾಗ ಬಾಹ್ಯವಾದ ಸೇವೆಯು ಸಾಕಾಗದು. "ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೆ... ತನ್ನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು." [ಯೋಹಾನ 4:23] ಸೊಲೊಮೋನನ ಉನ್ನತವಾದ ಕಾರ್ಯಸ್ಥಾನದ ಆರಂಭವು ಉತ್ಕೃಷ್ಟವಾಗಿದ್ದು, ಆನಂತರ ಬಂದ ದೇವರ ಅನುಗ್ರಹವು ಅನೇಕ ವರುಷಗಳ ಅಧ್ಯಯನದ ತರುವಾಯ ಆತನ ಮೇಲೆ ಬಂದದ್ದಾಗಿತ್ತು. ಪ್ರವಾದಿಯ ನಿರ್ದೇಶನದಲ್ಲಿ ಮತ್ತು ಆತನ ತಂದೆಯ ಸಲಹೆಗಳ ಮೂಲಕವಾಗಿ ಆತನು ಯೆರೂಸಲೇಮಿನಲ್ಲಿನ ದೇವಾಲಯದ ನಿರ್ಮಾಣ ಮತ್ತು ನಿಜವಾದ ದೇವಾರಾಧನೆಯ ಯೋಜನೆಯ ವಿಷಯವಾದ ತನ್ನ ತಂದೆಯ ಮನೋಭಾವದಲ್ಲಿ ಪ್ರವೇಶಿಸಲು ಆತನು ಸಮರ್ಥನಾಗಿ ಮಾಡಲ್ಪಟ್ಟಿದ್ದನು. ಅದೇನಂದರೆ ಯೆರೂಸಲೇಮಿನ ದೇವಾಲಯವು ಧರ್ಮವನ್ನು ಅಂದರೆ ನಿಜವಾದ ಧರ್ಮ ಹಾಗೂ ದೇವಾರಾಧನೆಯನ್ನು ಇಸ್ರಾಯೇಲ್ಯರ ಜನಾಂಗದ ಎದುರಿನಲ್ಲಿ ಒಂದು ಪ್ರಮುಖ ಸ್ಥಾನದಲ್ಲಿ ಇರಿಸುವದೆಂದು. ಆತನು ಸಹಾನುಭೂತಿಪೂರ್ಣವಾಗಿ ತನ್ನ ತಂದೆಯ ಮನೋಭಾವವನ್ನು ಪಡಕೊಂಡಿದ್ದು, ಇದು ದೇವರು ಮತ್ತು ಆತನ ಆರಾಧನೆಯು ಇತರ ಎಲ್ಲಾ ವಿಷಯಗಳು ಮತ್ತು ಹಿತಾಸಕ್ತಿಗಳಿಗೆ ಮೊದಲು ಇರಿಸುವದರಿಂದ ಸಮಸ್ತ ಇಸ್ರಾಯೇಲ್ ಜನಾಂಗಕ್ಕೆ ವಿಶೇಷವಾದ ಆಶೀರ್ವಾದವಾಗುವದೆಂಬುದನ್ನು ಅರಿತುಕೊಳ್ಳುವಂತೆಮಾಡಿತ್ತು. ದೇವಾಲಯವನ್ನು ಕಟ್ಟುವ

ಉದ್ದೇಶಕ್ಕಾಗಿ ಕಟ್ಟಡಸಾಮಾಗ್ರಿಗಳ ದಾಸ್ತಾನುಗಳು ಮತ್ತು ಸಂಪತ್ತುಗಳು ತನ್ನ ತಂದೆಯಿಂದ ಶೇಖರಿಸಲ್ಪಟ್ಟಿದ್ದು ಅವುಗಳನ್ನು ಆ ಸೇವೆಗಾಗಿ ಪ್ರತಿಷ್ಠಿಸಲಾಗಿರುವದೆಂದು ಆತನಿಗೆ ತಿಳಿಸಲಾಗಿತ್ತು. ಈ ಸಂಗತಿಗಳ ಮೂಲಕವಾಗಿ ಸೊಲೊಮೋನನು ತನ್ನ ಬುದ್ಧಿಚಾತುರ್ಯ ಹಾಗು ಆಕಾಂಕ್ಷೆ ಗಳನ್ನು ಸರಿಯಾದ ಮತ್ತು ಉಪಯೋಗಕರವಾದ ಮಾರ್ಗಗಳಲ್ಲಿ ಬಳಸುವಂಥ ಹೇರಳವಾದ ಅವಕಾಶಗಳನ್ನು ಕಂಡುಕೊಂಡಿದ್ದು, ಇವು ಆತನನ್ನು ದೇವರ ಸನಿಹಕ್ಕೆ ಎಳೆದಿದ್ದು, ಹೀಗೆ ತನ್ನ ತಂದೆಯ ಉತ್ತರಾಧಿಕಾರಿಯಾಗಿ ದೇವರಿಗೆ ಮತ್ತು ಆತನ ಜನರಿಗೆ ಎಷ್ಟು ಉತ್ತಮವಾಗಿ ಸೇವೆಸಲ್ಲಿಸಬಹುದೆಂಬದನ್ನು ಆತನಿಗೆ ಕಲಿಸಿಕೊಟ್ಟಿದ್ದವು.

ಹೀಗೆ ನಾವು ದೇವರನ್ನು, ಆತನ "ಪ್ರಿಯ ಮಕ್ಕಳಾಗಿ", ನಮ್ಮ ಪೂರ್ಣ ಹೃದಯದಿಂದ ಮತ್ತು ಮನೋಯಿಚ್ಛೆಯಿಂದ ಹುಡುಕುವರಾದಲ್ಲಿ ಆತನು ಭವಿಷ್ಯದ ಬಗ್ಗೆ ತನ್ನ ವಿಶೇಷ ಯೋಜನೆ ಮತ್ತು ಉದ್ದೇಶಗಳನ್ನು ನಮಗೆ ತಿಳಿಯಪಡಿಸುವ – ನೆಂಬುದನ್ನು ನೋಡುತ್ತೇವೆ. ದೇವಾಲಯವನ್ನು ಹೊಂದ ಸಲುವಾದ ತನ್ನ ಒಂದು ಉದ್ದೇಶದ ಬಗ್ಗೆ ಹಾಗು ಇದಕ್ಕಾಗಿ ಸಿದ್ಧತೆಗಳು ಈಗಾಗಲೇ ನಡೆದಿರುವದೆಂದೂ, ಮತ್ತು ಹೇಗೆ ಮತ್ತು ಯಾವಾಗ ಅದು ಕಟ್ಟಲ್ಪಡುವದೆಂದೂ, ಅಲ್ಲದೆ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವ ಅದರ ಗುರಿಯ ಬಗ್ಗೆ ನಮಗೆ ತಿಳಿಯಲಾಗ ಮಾಡುವನು. ಈ ಮಾರ್ಗದಲ್ಲಿನ ಪ್ರತಿಯೊಂದು ಹಂತವನ್ನು ನಾವು ದೇವರ ಯುಗಯುಗಾಂತ– ರಗಳ ಮಹಾ ಯೋಜನೆಯ ವಿಷಯದಲ್ಲಿ ಪೂರ್ಣ ಸಹಾನುಭೂತಿಯಿಂದ ಹೆಚ್ಚು ಪೂರ್ಣವಾಗಿ ಪ್ರವೇಶಿಸಿದ್ದಲ್ಲಿ, ಇದು ನಮ್ಮನ್ನು ಹೆಚ್ಚು ಅಭಿವೃದ್ಧಿಹೊಂದಲು ಮತ್ತು ಆ ದೇವಾಲಯ

ಸೊಲೊಮೋನನ ಬುದ್ಧಿಯ ಸೌಮ್ಯತೆ

ನಮ್ಮ ಪಾಠವು ತನ್ನ ಸಹೋದರನಾದ ಅದೋನೀಯನ ಕಡೆಗಿರುವ ಸೊಲೊಮೋನನ ಔದಾರ್ಯದ ವಿವರಣೆಯೊಂದಿಗೆ ಮುಕ್ತಾಯವಾಗುತ್ತದೆ. ಅರಸನು ತನ್ನ ಕಾರ್ಯಸ್ಥಾನದಲ್ಲಿ ನಿಯೋಜಿತನಾದ ಕೂಡಲೇ ತನಗೆ ಪ್ರತಿಸ್ಪರ್ಧಿಗಳು ಮತ್ತು ವಿರೋಧಿಗಳು ಆಗಬಹುದಾದಂಥ ಎಲ್ಲರಿಗೆ ಮರಣ ವಿಧಿಸುವದು ಆ ದಿನಗಳಲ್ಲಿನ ಪದ್ಧತಿಯಾಗಿದ್ದಂತೆ ಕಾಣುತ್ತದೆ. ಅದೋನೀಯನು ಸೊಲೊವೋನನ ಬಗ್ಗೆ ತಾನು ತೀರ್ಮಾನಿಸಿಕೊಂಡದವನಾಗಿ ತನ್ನ ಪ್ರಾಣವು ಅಪಾಯದಲ್ಲಿರು– ವದೆಂದು ನಿರ್ಣಯಿಸಿ, ತಾನು ದೇವದರ್ಶನ ಗುಡಾರದ ಅಂಗಳದಲ್ಲಿನ ಯಜ್ಞವೇದಿಯ ಕೊಂಬನ್ನು ಹಿಡಿದುಕೊಂಡಿದ್ದ ಸಂಭವವಿತ್ತು. ತಾನು ಇನ್ನೇನು ಆರಂಭಮಾಡಲಿದ್ದ ದಂಗೆಯ ಸಲುವಾಗಿ ತನಗೆ ಯಾವ ಕೇಡೂ ಸಂಭವಿಸದೆಂಬ ರಾಜನ ಭರವಸೆಯ ಒಂದು ಸಂದೇಶವು ಬರುವವರೆಗೂ ಇದು ಒಂದು ಸುರಕ್ಷಿತ ಸ್ಥಳವಾಗಿತ್ತು. ಈತನ ಬಗ್ಗೆ ನೀಡಲಾದ ಸೊಲೊಮೋನನ ಉತ್ತರ ಹಾಗು ಈತನ ಬಗ್ಗೆ ನಡಕೊಂಡ ರೀತಿಯು ಬುದ್ಧಿಯುಳ್ಳದ್ದಾಗಿಯೂ ಮತ್ತು ಕರುಣೆಯುಳ್ಳ – ದ್ದಾಗಿಯೂ ಇತ್ತು. ಅದೇನಂದರೆ: "ಅದೋನೀಯನು ಸತ್ಪುರುಷನಾಗಿ ನಡೆಯುವದಾದರೆ ಅವನ ಕೂದಲುಗಳಲ್ಲಿ ಒಂದನ್ನೂ ನೆಲಕ್ಕೆ ಬೀಳಗೊಡುವದಿಲ್ಲ; ಅವನಲ್ಲಿ ಕೆಟ್ಟತನವು ಕಂಡುಬರುವದಾದರೆ ಅವನು ಸಾಯುವನು;" [1 ಅರಸು 1:52] ಮತ್ತು ಸೊಲೊಮೋನನ ಮುಂದೆ ತಾನು ಕಾಣಿಸಿಕೊಂಡಿದ್ದಾಗ ಸೊಲೊಮೋನನು ಅವನಿಗೆ ತನ್ನ ಮನೆಗೆ ಹೋಗಲು ಹೇಳಿದ್ದನು. ಬೇರೊಂದು ಮಾತಿನಲ್ಲಿ ಹೇಳುವದಾದರೆ, ಅವನಿಗೆ ತನ್ನ ಹಿಂದಿನ ನಡತೆಗೆ ಯಾವ ವಿಧವಾದ ಶಿಕ್ಷೆಯು ಜಾರಿಮಾಡಿರಲಿಲ್ಲ; ಅಲ್ಲದೆ ಮುಂದೆ ಅವನು ಒಳ್ಳೆಯ ನಡತೆಯುಳ್ಳವನಾಗಿದ್ದನು. ಔದಾರ್ಯವು, ಅದು ಎಲ್ಲಿ ಪ್ರದರ್ಶಿತವಾದರೂ, ಯಾವಾಗಲೂ ಅದು ಒಂದು ಒಳ್ಳೆಯ ಸಂಕೇತದ ಸೂಚನೆಯಾಗುವದು, ಅಲ್ಲದೆ ಪರಲೋಕ ರಾಜ್ಯದ ಮಕ್ಕಳಿಗೆ ಇದು ಒಂದು ಅನಿವಾರ್ಯ ಗುಣಲಕ್ಷಣವಾಗಿರುವದು; ನಮ್ಮ ಒಡೆಯನು ಹೇಳಿರುವಂತೆ: "ಆತನಂತೂ ಉಪಕಾರ ನೆನಸದವರಿಗೂ ಕೆಟ್ಟವರಿಗೂ ಉಪಕಾರಿಯಾಗಿದ್ದಾನೆ. ನಿಮ್ಮ ತಂದೆ ಕರುಣೆಯುಳ್ಳವನಾಗಿರುವ ಪ್ರಕಾರವೇ ನೀವೂ ಕರುಣೆಯುಳ್ಳವರಾಗಿರಿ." [ಲೂಕ 6:35–36] "ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ." [ಮತ್ತಾಯ 5:45]

ದೇವರು ಉದ್ದೇಶಿಸಿರುವದೇನಂದರೆ ಕಡೆಯಲ್ಲಿ ಕೆಡುಕರೆಲ್ಲರನ್ನು ಆತನು ನಾಶಮಾಡುವನೆಂದೂ, ಮತ್ತು ಆತನು ತನ್ನ ಪ್ರಸ್ತುತ ಕರುಣೆ ಮತ್ತು ಅನುಕಂಪಗಳನ್ನು ತನ್ನ ಶತ್ರುಗಳಿಗೂ ಮತ್ತು ನೀತಿಗೆ ಶತ್ರುಗಳಾದವರೆಲ್ಲರಿಗೂ ವಿಸ್ತರಿಸಿಕೊಳ್ಳುವಂತೆ ಮಾಡುವನೆಂಬದು. ಇದು ಅಜ್ಞಾನ ಮತ್ತು ನಿರ್ಬಲಾವಸ್ಥೆಗಳು ಮಾನವ ಕುಲದ ಮೇಲೆ ಎಂಥಾ ಹಿಡಿತವನ್ನು ಸಾಧಿಸಿರುವವೆಂದರೆ ಅವರು ಪೂರ್ವಾದ ಬೆಳಕು ಮತ್ತು ಸಾಮರ್ಥ್ಯಗಳನ್ನು ಹೊಂದಿದ್ದ ಪಕ್ಷದಲ್ಲಿ ಹೊಣೆಯಾಗುತ್ತಿದ್ದ ಮಟ್ಟಕ್ಕೆ ಅವರು ಈಗ ಹೊಣೆಯಾಗಲಾರರೆಂಬ ಅಂಶದ ಕಾರಣದಿಂದಲೇ ಎನ್ನುವದೇ. ದೇವರ ವಾಕ್ಯವು ಒತ್ತಿಹೇಳಿರು ವಂತೆ, ನಾವು ಈ ವಿಶಾಲ ದೃಷ್ಟಿಯನ್ನು ಪಡಕೊಂಡಾಗ ಮಾತ್ರವೇ ನಮಗೆ ಮನುಷ್ಯರೆಲ್ಲರ ಕಡೆಗೆ, ಪ್ರೀತಿಪೂರ್ಣವಾದ ಔದಾರ್ಯವನ್ನು ಅಭ್ಯಾಸಿಸಲು ಸಾಧ್ಯವಿರುವದು. ಅಲ್ಲದೆ, ಹೌದು, ನಮ್ಮ ಶತ್ರುಗಳ ಪರವಾಗಿಯೂ ಸಹ, ಅವರೂ ನಮ್ಮಂತೆಯೇ ಬಲಹೀನತೆ ಚಂಚಲತೆ ಮತ್ತು ಅಜ್ಞಾನಗಳಿಂದ ಆವೃತರಾಗಿರುವರೆಂಬುದನ್ನು ಅರಿತುಕೊಂಡಾಗ ಮಾತ್ರವೇ ಅವರ ಕಡೆಗೆ ಔದಾರ್ಯವುಳ್ಳವರಾಗಿರಲು ನಮಗೆ ಸಾಧ್ಯವಾಗುವದು. ಇವುಗಳ ಮೂಲಕವಾಗಿ [ಅಂದರೆ ಬಲಹೀನತೆ, ಚಂಚಲತೆ ಮತ್ತು ಅಜ್ಞಾನಗಳ ಮೂಲಕವಾಗಿ] ಜವಾಬ್ದಾರಿಯೆಂಬದು ಪ್ರತಿಯೊಂದು ವಿಧದಲ್ಲಿಯೂ ಅವರ ಮೇಲೆ ಬಹು ದೀರ್ಘವಾದ ನಿಯಂತ್ರಣವನ್ನು ಸಾಧಿಸಿದ್ದು, ದೇವರು ಇವುಗಳನ್ನು ನಮ್ಮ ವಿಮೋಚಕನ ಯಜ್ಞಫಲದ ಮೂಲಕವಾಗಿ ಮುಚ್ಚಿ ಮರೆಮಾಡಿದ್ದು, ಕಡೆಯಲ್ಲಿ ಇವುಗಳನ್ನು [ಪೂರ್ಣವಾಗಿ] ರದ್ದುಗೊಳಿಸಲ್ಪಡುವಂಥ ಏರ್ಪಾಡನ್ನು ಮಾಡಿರುವನು. ಆತನು ಪಾರಂಪರ್ಯವಾಗಿ ಬಂದ ಈ ದೋಷಗಳನ್ನು ಉದಾರವಾಗಿ ನಿರ್ಲಕ್ಷಿಸಿರುವಂತೆಯೇ ಆತನ ಮನೋಭಾವವನ್ನು ಪಡೆದು ಆತನ ವಾಕ್ಯಗಳ ಮೂಲಕವಾಗಿ ಮಾರ್ಗದರ್ಶಿತರಾದ ನಾವೂ ಸಹ ಹೀಗೆ ನಡೆದುಕೊಳ್ಳುವೆವು.

*****

ಅಭಿಷಕ್ತ ದೊರೆಯಾದ ಸೊಲೊಮೋನನು

ರೀಪ್ರಿಂಟ್ಸ್ ಪುಟ 2045

1 ಅರಸರುಗಳು 1:28–39

ಸೊಲೊಮೋನನು ದಾವೀದನ ಮಕ್ಕಳಲ್ಲಿ ಇಸ್ರಾಯೇಲ್ಯರ ಸಿಂಹಾಸನಕ್ಕೆ ತನಗೆ ಉತ್ತರಾಧಿಕಾರಿ ಆಗಬೇಕೆಂದಿದ್ದುದು ದೇವರ ಆಯ್ಕೆಯಾಗಿತ್ತೆಂಬದು 1 ಪೂರ್ವ 22:8–9ರಲ್ಲಿ ಸ್ಪಷ್ಟವಾಗುತ್ತದೆ. ಯೆಹೋವನು ನನಗೆ: "ನಿನಗೆ ಒಬ್ಬ ಮಗನು ಹುಟ್ಟುವನು; ಅವನು ಸಮಾಧಾನಪುರುಷನಾಗಿರುವನು. ನಾನು ಅವನ ಸುತ್ತಣ ಎಲ್ಲಾ ವಿರೋಧಿಗಳನ್ನು ಅಡಗಿಸಿ ಅವನಿಗೆ ಸಮಾಧಾನವನ್ನು ಅನುಗ್ರಹಿಸುವೆನು. ಅವನಿಗೆ ಸೊಲೊಮೋನ ನೆಂಬ ಹೆಸರಿರುವದು. ಅವನ ಕಾಲದಲ್ಲಿ ಇಸ್ರಾಯೇಲ್ಯರಿಗೆ ಸಮಾಧಾನಸೌಭಾಗ್ಯಗಳನ್ನು ದಯಪಾಲಿಸುವೆನು." ಎಂದು ಹೇಳಿರುವನು (2 ಸಮುವೇಲ 12:24,25; 1 ಪೂರ್ವ 17:11–15; 2 ಸಮುವೇಲ 7:12–27). ಸೊಲೊಮೋನನು ದೇವರ ಆಯ್ಕೆಯಾಗಿದ್ದನೆಂಬ ಅಂಶದ ಮೇಲಿನ ಈ ದೃಷ್ಟಿಯಿಂದಲೇ ಸೊಲೊಮೋನನ ತಾಯಿಯಾದ ಬತ್ಷೇಬಳಿಗೆ ದಾವೀದನು ಅಕೆಯು ಮಗನು ಖಂಡಿತವಾಗಿಯೂ ರಾಜ್ಯಕ್ಕೆ ಬಾಧ್ಯಸ್ಥನಾಗಬೇಕೆಂದು ಆಕೆಗೆ ಭರವಸೆ ನೀಡಿ ಹೇಳಿದ್ದನು. 1 ಅರಸುಗಳು 1:13,30.

ಸೊಲೊಮೋನನು ದಾವೀದನಿಗೆ ಬತ್ಷೇಬಳ ಮೂಲಕವಾದ ಎರಡನೇ ಮಗನಾಗಿದ್ದನು. ಆತನ ಹೆಸರು "ಸಮಾಧಾನಪೂರ್ಣನು" ಎಂಬುದನ್ನು ಸೂಚಿಸುತ್ತದೆ. ಅದು ಹೀಗೆ ಅತನ ವಿಷಯವಾದ ದೇವರ ವಾಗ್ದಾನಕ್ಕೆ ಸ್ಮಾರಕವಾಗಿರುವದು. ಯೆದೆದೀಯ (ಅಂದರೆ ಯೆಹೋವನ ಪ್ರಿಯನು) ಎಂಬ ಹೆಚ್ಚುವರಿ ಹೆಸರು ಪ್ರವಾದಿಯಾದ ನಾತಾನನು ದಾವೀದನಿಗಾದ ಪಾಪಕ್ಷಮೆ ಮತ್ತು ದೇವಾನುಗ್ರಹಕ್ಕೆ ಹಿಂದಿರುಗಲ್ಪಟ್ಟದ್ದರ ಒಂದು ಸೂಚನೆಯಾಗಿ ನೀಡದ್ದನೆಂದು ತೋರುತ್ತದೆ. (2 ಸಮುವೇಲ 12:25) ಆ ಮಗುವು ತನ್ನ ಹಿತಕ್ಕಾಗಿ ಒಳ್ಳೆಯದನ್ನಾಗಲೀ ಕೆಟ್ಟದ್ದನಾಗಲಿ ತಿಳಿದುಕೊಂಡು ಅದನ್ನು ಆದುಕೊಳ್ಳುವ ಮೊದಲೇ ಇದು ಆತನ ಅರ್ಹತೆ–ಯಾಗಿತ್ತು. ಇದು ದೇವರು ಪ್ರೀತಿಸಿ ಆದುಕೊಂಡಿದ್ದ ಆತನ ತಂದೆಯಾದ ದಾವೀದನ ಸಲುವಾಗಿದ್ದದ್ದು ಮಾತ್ರವಲ್ಲದೆ ಆತನ ಮುಂದಿನ ತಲೆಮಾರಿನ ಮೂಲಕವಾಗಿ ಬಹು ಹಿಂದೆಯೇ ವಾಗ್ದಾನಮಾಡಲ್ಪಟ್ಟವನಾದ ಮೆಸ್ಸೀಯನು ಅಂದರೆ ದೇವರ ನಿಜರೂಪ ರಾಜ್ಯದ ಅರಸನು ಬರಬೇಕಾದುದರಿಂದಲೂ, ಇದು ಒಂದು ವಿಶೇಷವಾದ ಪ್ರೀತಿಯಾಗಿ ಹೀಗೆ ವ್ಯಕ್ತಮಾಡಲ್ಪಟ್ಟಿತ್ತು. ಹೀಗಾಗಿ ಸೊಲೊಮೋನನು (ಸಮಾಧಾನಪೂರ್ಣನು) ಮತ್ತು ಯೆದೀದ್ಯನು ಎಂಬ ಹೆಸರುಗಳು ದಾವೀದನು ಆಗಲೂ [ದೇವರಿಗೆ] ಪ್ರಿಯನಾಗಿದ್ದವನೆಂದು ಮತ್ತು ದೇವಾನುಗ್ರಹಕ್ಕೆ ಪೂರ್ಣವಾಗಿ ಹಿಂದಿರುಗಿಸಲ್ಪಟ್ಟಿದ್ದನೆಂಬುದನ್ನು ಹಾಗು ಆತನಿಗೆ ಮತ್ತು ಆತನ ಸಂತತಿಗೆ ಮಾಡಿದ್ದ ವಾಗ್ದಾನಗಳು ಆಗಲೂ ಅನ್ವಯವಾಗಿತ್ತೆಂಬುದನ್ನು ತೋರಿಸಿಕೊಡುತ್ತದೆ.

ಸೊಲೊಮೋನನು ಬಹು ಎಳೆವಯಸ್ಸಿನಲ್ಲಿಯೇ ಸಿಂಹಾಸನವನ್ನೇರಿದ್ದು, ಅದು ಸುಮಾರು ಹತ್ತೊಂಬತ್ತು ಅಥವಾ ಇಪ್ಪತ್ತಾಗಿರುವ ಸಂಭವವಿತ್ತು. ಆ ಸಮಯಕ್ಕೆ, ಆತನ ವೈಯುಕ್ತಿಕ ಅರ್ಹತೆಗಳ ಬಗ್ಗೆ 1 ಅರಸುಗಳು 3:3 ಹೊರತುಪಡಿಸಿದಲ್ಲಿ ನಮಗೆ ತಿಳಿದಿರುವದು ಸ್ವಲ್ಪವೇ. ಶಾಸ್ತ್ರವಚನವು ಹೀಗಿರುವದು: "ಸೊಲೊಮೋನನು ಯೆಹೋವನನ್ನು ಪ್ರೀತಿಸಿ ತನ್ನ ತಂದೆಯಾದ ದಾವೀದನ ವಿಧಿಗಳನ್ನು ಕೈಕೊಳ್ಳುವವನಾಗಿದ್ದರೂ ಆ ಪೂಜಾಸ್ಥಳಗಳಲ್ಲಿಯೇ (ದೇವರಿಗೆ) ಯಜ್ಞವರ್ಪಿಸುತ್ತಿದ್ದನು; ಅಲ್ಲಿಯೇ ಧೂಪಸುಡುತ್ತಿದ್ದನು." ಇದನ್ನು ಮೋಶೆಯ ಧರ್ಮಶಾಸ್ತ್ರವು ಬಹಿಷ್ಕರಿಸಿದ್ದು, (ಧರ್ಮೋ 12:13–14) ಆದರೂ ದೇವಾಲಯವು ಕಟ್ಟಲ್ಪಡುವವರೆಗೂ ಇದು ದೇವರಿಂದ ಅಂಗೀಕರಿಸಲ್ಪಡುತ್ತಿತ್ತು. 1 ಸಮುವೇಲ 9:12; 1 ಅರಸುಗಳು 3:2 ಇವುಗಳನ್ನು ನೋಡಿರಿ.

ಹೇಗೂ ಅಧಿಕಾರಸ್ಥಾನ, ಸಂಪತ್ತು, ಮತ್ತು ಸಾಮಾನ್ಯ ಅಭಿವೃದ್ಧಿಗಳ ಸಂಬಂಧವಾದ ದುರ್ಮಾಗದ ಪ್ರಭಾವಗಳು, ತನ್ನ ಭವಿಷ್ಯವು ವಾಗ್ದಾನಗಳಿಂದ ಪ್ರಜ್ವಲಿತನಾಗಿದ್ದ ಈ ಅನುಗ್ರಹಿತ ಯುವಕನ ಗುಣಲಕ್ಷಣದ ಮೇಲೆ ಪರಿಣಾಮ ಬೀರುವಂತಾಗಲು ಬಹಳ ಸಮಯಬೇಕಿರಲಿಲ್ಲ. ಆತನ ಗುಣಸ್ವಭಾವಗಳು ಅನುಭವಶಾಲೆಯಲ್ಲಿ ಎಂದೂ ಅಭಿವೃದ್ಧಿಯಾಗಿರಲಿಲ್ಲ, ಯಾಕಂದರೆ ಆತನನ್ನು ತನ್ನ ಯೌವನಾರಭ್ಯದಿಂದಲೂ ಸುಖಭೋಗಗಳಲ್ಲಿ ಬೆಳೆಸಲಾಗಿತ್ತು; ಇಲ್ಲವೇ ಆತನ ಜೀವನದ ತತ್ವಗಳು ಪರೀಕ್ಷೆಗೆ ಒಳಗಾಗಿರಲಿಲ್ಲ. ಆತನ ಜೀವನದ ತತ್ವಗಳಲ್ಲಿ ಸ್ಥಿರತೆ ಹಾಗು ದೃಢತೆಗಳು ಇರಲಿಲ್ಲ. ಆತನು ತನ್ನ ಜನರಿಗೆ ಹಾಗು ದಾವೀದನಿಗೆ ದೇವರು ತೋರಿಸಿದ್ದ ಒಳ್ಳೆಯತನಗಳ ಬಗ್ಗೆ ನೋಡಿದ್ದ ಮತ್ತು ತಿಳಿದಿದ್ದ ಕಾರಣ ಹಾಗು ದೇವರು ತನ್ನನ್ನು ಪ್ರೀತಿಸಿ ತನ್ನನ್ನು ಅರಸನಾಗುವದಕ್ಕೆ ಆದುಕೊಂಡಿದ್ದ ಕಾರಣ ತಾನು ದೇವರನ್ನು ಪ್ರೀತಿಸಿದ್ದಾಗ್ಯೂ, ಆತನ ಹೃದಯವು ದೇವರಲ್ಲಿ ನೆಲೆಗೊಂಡಿರಲಿಲ್ಲ. ಆತನು ದೇವರಲ್ಲಿ ಅಂತರ್ಗತವಾಗಿರುವ ಆತನ ಒಳ್ಳೇತನದ ಕಾರಣಗಳಿಗಾಗಿ ಅಂದರೆ ಆತನು (ದೇವರು) ನೀತಿಸತ್ಯತೆಗಳ ಮಹಿಮಾ ಸಾದೃಶ್ಯ ರೂಪವೂ ಮತ್ತು ಆದರ್ಶಪ್ರಾಯನೂ ಆಗಿರುವ ಕಾರಣ ತಾನು ದೇವರನ್ನು ಪ್ರೀತಿಸಲು ಕಲಿತಿರಲಿಲ್ಲ. ಯಾರು ಕೇವಲ ನೀತಿಯನ್ನು ಪ್ರೀತಿಸುವವರೂ, ಹೀಗಾಗಿ ದೇವರು ನೀತಿವಂತನಾಗಿರುವ ಕಾರಣದಿಂದ ಆತನನ್ನು ಪ್ರೀತಿಸುವವರೂ ಆಗಿರುವರೋ, ಅವರು ನಿಜವಾಗಿಯೂ ದೇವರಲ್ಲಿ ನೆಲಗೊಂಡವರಾಗಿದ್ದು, ಪರಿಣಾಮವಾಗಿ ಅವರು ಗುಣದಲ್ಲಿ ಸ್ಥಿರತೆಯುಳ್ಳವರಾಗಿರುವರು. ಸೊಲೊಮೋನನು ದೇವರಿಗಾಗಿರುವ ಇಂಥಾ ಪ್ರೀತಿಯಲ್ಲಿ ಮತ್ತು ಇದರ ಪರಿಣಾಮವಾದ ಗುಣದ ಸ್ಥಿರತೆಯಲ್ಲಿ ಶೋಚನೀಯವಾಗಿ ಕೊರತೆಯುಳ್ಳವನಾಗಿದ್ದು, ಇವುಗಳು ಆತನ ನಂತರದ ನಡವಳಿಕೆಗಳಲ್ಲಿ ತ್ವರಿತವಾಗಿ ಕಾಣುವಂತಾಗಲು ಆರಂಭಗೊಂಡಿದ್ದವು.

ಹೀಗಿದ್ದಾಗ್ಯೂ, ದೇವರು ಆತನ ವೃತ್ತಿಜೀವನದ ಅಂತ್ಯವನ್ನು ಮತ್ತು ಅದರ ನಡುವಿನ ಹಂತಗಳೆಲ್ಲವನ್ನು ಆರಂಭದಿದಲೇ ಕಂಡಿದ್ದಾಗ್ಯೂ, ಆತನ ನೈತಿಕ ಅವನತಿ ಮತ್ತು ಅದು ಜನಾಂಗದ ಮೇಲೆ ಬೀರಿದ ತನ್ನ ವಿನಾಶಕಾರೀ ಪ್ರಭಾವದ ಬಗ್ಗೆ ದೇವರು ಪೂರ್ವಭಾವಿಯಾಗಿ ತಿಳಿದುಕೊಂಡಿದ್ದರೂ, ತನ್ನ ಬುದ್ಧಿವಿವೇಕಯುಕ್ತವಾದ ಸಂಕಲ್ಪದ ಪ್ರಕಾರ ಸೊಲೊಮೋನನ್ನೇ ಇಸ್ರಾಯೇಲಿನ ಮೇಲೆ ಅರಸನಾಗುವದಕ್ಕೆ ಆದುಕೊಂಡಿದ್ದನು. ಸೊಲೊಮೋನನ ಸ್ವಂತ ಅವನತಿಗಳು ಮತ್ತು ಜನಾಂಗವನ್ನು ನಡೆಸಿದಂಥ ಆತನ ಪಾಪಕೃತ್ಯಗಳ ನಡುವೆಯೂ ಈತನನ್ನು ಆದುಕೊಂಡಿದ್ದರಲ್ಲಿ ದೇವರ ಉದ್ದೇಶವು ಪ್ರಸಂಶನೀಯವಾಗಿ ನೆರವೇರಲಾಗಿತ್ತು. ಈ ಉದ್ದೇಶಗಳು ಮತ್ತು ಅದರ ನೆರವೇರಿಕೆಗಳ ಬಗ್ಗೆ ಮುಂದಿನ ಪಾಠಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಅರಿತುಕೊಳ್ಳಲಾಗುವದು. ಆದರೆ ನಾವು ಇಲ್ಲಿ ದೇವರು ಇಸ್ರಾಯೇಲಿಗೆ ಯಾವಾಗಲೂ ದೊಡ್ಡ ಮಟ್ಟದಲ್ಲಿನ ಲೌಕಿಕವಾದ ಏಳಿಗೆಯನ್ನು ತರುವಂಥ ಅರಸನನ್ನು ಏರ್ಪಡಿಸುವದರ ಬಗ್ಗೆ ಪ್ರಸ್ತಾಪಿಸಿರಲಿಲ್ಲವೆಂಬುದನ್ನು ಗಮನಿಸೋಣ. ವಾಸ್ತವದಲ್ಲಿ ಅವರು ಒಬ್ಬ ಅರಸನಿಗಾಗಿ ಬೇಡಿಕೊಂಡಾಗ ದೇವರು ಅವರು ಬಯಸಿದ್ದನ್ನು ಅನುಗ್ರಹಮಾಡಿದ್ದು, ಅವರಿಗೆ ಜನರ ಹಕ್ಕು ಸ್ವಾತಂತ್ರ್ಯಗಳನ್ನು ಅತಿಕ್ರಮಿಸುವಂಥ ಅರಸನ ಅಧಿಕಾರದ ಬಗ್ಗೆ ನಿಷ್ಕಾಪೂರ್ಣವಾಗಿ ಮುನ್ನೆಚ್ಚರಿಕೆ ನೀಡಿದ್ದನು. (1 ಸಮುವೇಲ 8:9–18 ಓದಿರಿ) ಇದೆಲ್ಲವುಗಳನ್ನು ಆ ಜನಾಂಗವು ತನ್ನ ನಂತರದ ವರುಷಗಳ ಚರಿತ್ರೆಯಲ್ಲಿ ಅನುಭವಿಸಿತ್ತು.

ಇದು ಸರ್ಕಾರದ ವಿಷಯವಾದ ದೇವರ ಕಲ್ಪನೆಯಾಗಿರದೆ, ಇದು ಅಪರಿಪೂರ್ಣ ಹಾಗು ಸ್ವಾರ್ಥವುಳ್ಳ ಮನುಷ್ಯನ ಹೃದಯವು ಅಧಿಕಾರಕ್ಕೆ ಏರಿದಾಗ ಅದು ಮಾಡುವಂಥದ್ದನ್ನು ಮುಂದಾಗಿ ಕಂಡು ತಾನು ಅದರ ಬಗ್ಗೆ ಮುನ್ಸೂಚನೆ ನೀಡಿದ್ದನು, ಯಾಕಂದರೆ ಆತನು ಮನುಷ್ಯನು ಎಂಥವನೆಂಬುದನ್ನು ತಿಳಿದುಕೊಂಡದ್ದನು. ಇಸ್ರಾಯೇಲ್ಯರ ಸಂಗತಿಯೂ ಹೀಗೆಯೆ ಆಗಿದ್ದುದಲ್ಲದೆ ಲೋಕದ ಸಂಗತಿಯೂ ಇದರಂತೆಯೇ ಇರುವದು: ಅಧಿಕಾರಕ್ಕೆ ಏರಿಸಲ್ಪಟ್ಟ ಸ್ವಾರ್ಥಭಾವವು ಯಾವಾಗಲೂ ಆ ಅಧಿಕಾರವನ್ನು, ಕನಿಷ್ಠಪಕ್ಷದಲ್ಲಿ, ಸ್ವಪ್ರತಿಷ್ಠೆಗಾಗಿ ಬಹುಮಟ್ಟಿಗೆ ಬಳಸಿಕೊಳ್ಳುವದು.

ಹೇಗೂ, ಇಸ್ರಾಯೇಲ್ಯರ ಅರಸರಿಗೆ ದೇವರ ಆದೇಶವು ಇದಕ್ಕೆಲ್ಲಾ ವಿರುದ್ಧವಾಗಿದ್ದವು; ಹೇಗಂದರೆ, ಅರಸನು ದೇವರ ನಿಯಮಗಳನ್ನು ಅಧ್ಯಯನಮಾಡಿ ಅವುಗಳ ತತ್ವವನ್ನು ಬಳಕೆಗೆ ತರಬೇಕೆಂಬದು–"ಅವನು ಮದದಿಂದ ತನ್ನ ಸ್ವದೇಶದವರನ್ನು ಹೀಯ್ಯಾಳಿಸದೆ ಯೆಹೋವನ ಆಜ್ಞೆಯನ್ನು ಮೀರಿ ಎಡಬಲಕ್ಕೆ ತಿರುಗದೆ..." (ಧರ್ಮೋ 17:18–20) ಆದರೆ ಇಸ್ರಾಯೇಲ್ಯರಲ್ಲಿಯೂ ಇಲ್ಲವೇ ಯಾವುದೇ ಇತರ ಜನಾಂಗದಲ್ಲಿಯೂ ಯಾವ ಅರಸನೂ, ಅವನು ಎಷ್ಟೇ ಬುದ್ಧಿವಂತನೂ ಒಳ್ಳೆಯವನೂ ಆಗಿದ್ದಾಗ್ಯೂ, ಇದನ್ನು ಎಂದೂ ಮಾಡಿದ್ದಿಲ್ಲ. ಹೆಚ್ಚುಕಡಿಮೆ ಎಲ್ಲರೂ ಅಧಿಕಾರದ ದರ್ಪದಿಂದ ಉಬ್ಬಿಕೊಂಡವರಾಗಿ ತಮ್ಮ ಹೃದಯವನ್ನು ಸ್ವಜನರಿಗಿಂತಲೂ ಹೆಚ್ಚಿಸಿಕೊಂಡಿದ್ದರು. ದೇವರಿಗೆ ಪ್ರಿಯನಾಗಿದ್ದ ದಾವೀದನೂ ಸಹ ಈ ಹಾನಿಕರವಾದ ದುಷ್ಪ್ರಭಾವಗಳಲ್ಲಿ ಸಿಕ್ಕಿಕೊಂಡಿದ್ದು ಅದರ ದೊಡ್ಡ ಅಮಲಿನಿಂದ ಕೂಡಿದವನಾಗಿ ಘೋರ ಪಾಪದಲ್ಲಿ ಬಿದ್ದುಹೋಗಿದ್ದನು. ಯಾವುದೇ ಸ್ಥಾನದಲ್ಲಿನ ಅಧಿಕಾರ ಸಂಬಂಧದ ಪರಿಶೋಧನೆಗಳು ನಮ್ಮ ಮಾನವಕುಲವನ್ನು ಕುಂಠಿತಗೊಳಿಸಿರುವದು ಯಾವಾಗಲೂ ಹೆಮ್ಮೆ ಮಹತ್ವಾಕಾಂಕ್ಷೆ ಮತ್ತು ಸ್ವಪ್ರತಿಷ್ಠೆಗಳನ್ನು ತೃಪ್ತಿಪಡಿಸುವ ಸಲುವಾಗಿರುವದು. ದೈವನಿಯಮಗಳನ್ನು ಮನಃಪೂರ್ವಕವಾಗಿ ಕೈಗೊಂಡು ನಡೆದು ಅದರ ಎಡಬಲಕ್ಕಾದರೂ ತಿರುಗಂಥ ಏಕೈಕ ಲೋಕಾಧಿಕಾರಿಯು ಯಾರಂದರೆ ಅದು ಯೋಹೋವನ ಅಭಿಷಕ್ತ ಮಗನಾಗಿರುವ ಆಶೀರ್ವದಿತನಾದ ನಮ್ಮ ಕರ್ತನಾದ ಯೇಸುವಾಗಿದ್ದು, ಆತನು ತನ್ನ (ಮುಂದಿನ) ಪ್ರಜೆಗಳನ್ನು ಪ್ರೀತಿಸಿ ಅವರಿಗಾಗಿ ತನ್ನ ಪ್ರಾಣವನ್ನು ಕೊಟ್ಟಿರುವನು. ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂದ ಮೇಲಾದ ಹೆಸರನ್ನು ಕೊಟ್ಟು, ಭೂಪರಲೋಕಗಳಲ್ಲಿರುವವೆಲ್ಲವೂ ಆತನಿಗೆ ಅಡ್ಡಬೀಳಲಿರುವದಾಗ್ಯೂ, ಆತನ ಹೃದಯವು ಗರ್ವದಿಂದ ಎಂದೂ ಉಬ್ಬಿಕೊಂಡಿರಲಿಲ್ಲ. – ಫಿಲಿಪ್ಪ 2:9–11.

ಆತನಲ್ಲಿ ಅಧಿಕಾರದ ದುರಾಕ್ರಮಣ ಮಾಡುವಂಥ ಯಾವುದೇ ಒಳಸಂಚುಗಳಿರುವದಿಲ್ಲ, ತನ್ನ ಪ್ರಜೆಗಳಿಗೆ ಪ್ರೀತಿಯಿಂದ ಮನಃಪೂರ್ವಕವಾಗಿ ಸೇವೆಮಾಡಿ ಅವರನ್ನು ಆಶೀರ್ವದಿಸುವದನ್ನು ಹೊರತುಪಡಿಸಿ ಬೇರೆ ಯಾವ ಮಹತ್ವಾಕಾಂಕ್ಷೆಗಳೂ ಆತನಲ್ಲಿ ಇರುವದಿಲ್ಲ. ಆದರೆ ಇವುಗಳು ಸೈದ್ಧಾಂತಿಕವಾಗಿ ಮಾತ್ರವಲ್ಲದೆ ತನ್ನ ಪ್ರಜೆಗಳ ಪರವಾದ ತನ್ನ ಮಹಾ ಯಜ್ಞಾರ್ಪಣೆಯ ಮೂಲಕವಾಗಿ ಪ್ರಮಾಣೀಕರಿಸಲಾದ ವಾಸ್ತವತೆಯ ಒಂದು ಆಶೀರ್ವಾದದಿಂದ ಕೂಡಿರುವದು. ಆತನು ಐಶ್ವರ್ಯವಂತನಾಗಿದ್ದಾಗ್ಯೂ ಅವರ ನಿಮಿತ್ತ ತಾನು ಬಡವನಾಗಿದ್ದನು; ತಾನು ನಿತ್ಯಜೀವವನ್ನು ಹೊಂದಿದಾಗ್ಯೂ, ಅವರಿಗೋಸ್ಕರವಾಗಿ ತನ್ನ ಪ್ರಾಣವನ್ನು ಒಂದು ಉಚಿತವಾದ ಈಡುಬೆಲೆಯಾಗಿ ನೀಡಿದ್ದನು. ಅವನ ವಿಷಯವಾಗಿ ಹೀಗೆ ಬರೆಯಲ್ಪಟ್ಟಿರುವದು, "ಇಗೋ, ಒಬ್ಬ ಅರಸನು ನೀತಿಯಿಂದ ಆಳ್ವಿಕೆಮಾಡುವನು;" ಅಲ್ಲದೆ ಅವನು "ಸಮಾಧಾನದ ಪ್ರಭು" ಎಂದು ಕರೆಯಲ್ಪಡುವನು. ಆತನ ನೀತಿಯುಳ್ಳ ಆಳ್ವಿಕೆಯು ಭೂಮಿಯಲ್ಲಿ ಸ್ಥಾಪಿತವಾಗುವ ವರೆಗೂ ಸಮಸ್ತ ಸೃಷ್ಟಿಯೆಲ್ಲವೂ ಪ್ರಸವ ವೇದನೆಯಿಂದ ನರಳುತ್ತಿರುವದು; ಅಲ್ಲದೆ ದೇವರು ಕ್ರಿಸ್ತನ ಮೂಲಕವಾಗಿ ನೀಡಲು ಸಂಕಲ್ಪಿಸಿರುವ ಈ ಸಮಾಧಾನ ಮತ್ತು ಸಮೃದ್ಧಿಯ ಆಶೀರ್ವಾದಗಳನ್ನು ಇಸ್ರಾಯೇಲ್ಯರಾಗಲೀ ಅಥವಾ ಲೋಕದವರಾಗಲೀ ಇನ್ನೂ ಅನುಭವಿಸಲು ಸಾಧ್ಯವಾಗಿರುವದಿಲ್ಲ. ಸೊಲೊಮೋನನ ಆಳ್ವಿಕೆಯು ಕೇವಲ ಇದರ ಪೂರ್ವಭಾವೀ ಚಿತ್ರಣವಾಗಿರುವದು; ನಾವು ಮುಂದೆ ನೋಡುವ ಹಾಗೆ, ಛಾಯಾರೂಪದಲ್ಲಿನ ಆತನ ಆಳ್ವಿಕೆಯಲ್ಲಿನ ಸಮಾಧಾನ ಸಮೃದ್ಧಿಗಳು ಬಹು ಟೊಳ್ಳಾದವುಗಳು ಅಸಂತೃಪ್ತಿಯುಳ್ಳವುಗಳೂ ಆಗಿದ್ದಾಗ್ಯೂ, ಈ ಉಜ್ವಲವಾದ ಗುಳ್ಳೆಯು ಮುಂದಿನ ಭೌವ್ಯವಾದ ವಾಸ್ತವಾಂಶದ ಬಗ್ಗೆ ನುಡಿಯುವಂಥ ಒಂದು ಮಾದರಿಯಾಗಿರುವದು. ಅಲ್ಲದೆ ಇದು ಕ್ರಿಸ್ತನಲ್ಲಿ ಪ್ರಕಟವಾಗುವಂಥ ಮಹಿಮೆಯನ್ನು ಛಾಯಾರೂಪದಲ್ಲಿ ತೋರ್ಪಡಿಸುವ ಈ ಕಾರ್ಯಭಾರವನ್ನು ಇದು ಪೂರ್ಣಗೊಳಿಸಿದಾಗ, ಈ ಗುಳ್ಳೆಯು ಒಡೆಯಲ್ಪಟ್ಟು ಬಾಧ್ಯಸ್ಥನು ರಾಜ್ಯವನ್ನು ವಶಪಡಿಸಿಕೊಳ್ಳುವವರೆಗೂ ನರಳುತ್ತಿರುವ ಸೃಷ್ಟಿಯು ಹಿಂಸಕನ ಪಾದದ ಕೆಳಗೆ ನರಳಾಟವನ್ನು ಮುಂದುವರೆಸುವದು.



ಸೊಲೊಮೋನನು ಅರಸನಾಗಿ ಅಭಿಷೇಕಿಸಲ್ಪಡುತ್ತಿರುವದು

– ರಚನಾಕಾರರು ಜೂಲಿಯಸ್ ವೋನ್ ಕ್ಯಾರೊಲ್ಸ್ ಫೀಲ್ಡ್

"ನನ್ನ ಮಗನಾದ ಲೊಲೋಮೋನನೇ,
ನೀನಂತೂ ನಿನ್ನ ತಂದೆಯ
ದೇವರನ್ನು ಅರಿತುಕೊಂಡು ಸಂಪೂರ್ಣಹೃದಯದಿಂದಲ್ಲೂ
ಮನಸ್ಸಂತೋಷದಿಂದಲೂ ಆತನನ್ನೇ ಸೇವಿಸು.
ಯೆಹೋವನು ಎಲ್ಲಾ ಹೃದಯಗಳನ್ನು ವಿಚಾರಿಸುವವನೂ
ಎಲ್ಲಾ ಮನಸಂಕಲ್ಪಗಳನ್ನು ಬಲ್ಲವನೂ ಆಗಿರುತ್ತಾನಲ್ಲಾ.
ನೀನು ಆತನನ್ನು ಹುಡುಕುವದಾದರೆ ಆತನು ನಿನಗೆ ಸಿಕ್ಕುವನು.
ಆತನನ್ನು ಬಿಟ್ಟರೆ ನಿನ್ನನ್ನು ಶಾಶ್ವತವಾಗಿ ತಳ್ಳಿಬಿಡುವನು."

"ದಾವೀದನು ತನ್ನ ಮಗನಾದ ಸೊಲೋಮೋನನಿಗೆ–
ಸ್ಥಿರಚಿತ್ತನಾಗಿರು,
ದೈರ್ಯದಿಂದಿರು, ಕೆಲಸಕ್ಕೆ ಕೈಹಾಕು; ಅಂಜಬೇಡ
ಕಳವಳಗೊಳ್ಳಬೇಡ.
ನನ್ನ ದೇವರಾದ ಯೆಹೋವದೇವರು ನಿನ್ನ ಸಂಗಡ ಇರುತ್ತಾನೆ;
ಆತನು ತನ್ನ ಆಲಯದ ಎಲ್ಲಾ ಕೆಲಸವು ತೀರುವವರೆಗೂ
ನಿನ್ನನ್ನು ಕೈ ಬಿಡುವದಿಲ್ಲ. – 1 ಪೂರ್ವ 28:9,20

*****

ದಾವೀದನ ಮಗನೂ ಮತ್ತು ದಾವೀದನ ಒಡೆಯನೂ

ಸತ್ಯವೇದಾಧ್ಯಯನ ಗ್ರಂಥ 6 [ನೂತನ ಸೃಷ್ಟಿ] ಪುಟ 129

1 ಅರಸುಗಳು 2ನೇ ಅಧ್ಯಾಯ

ಮೊಟ್ಟ ಮೊದಲನೆಯದಾಗಿ ಗಮನಿಸಬೇಕಾದು–ದೇನಂದರೆ, ಈ ಪ್ರಶ್ನೆಯ ವಿಷಯವಾದ ಚರ್ಚೆಯು ನಮ್ಮ ಕರ್ತನ ಪೂರ್ವಾಸ್ಥಿತ್ವಕ್ಕೆ ಸಂಬಂಧಿಸಿದ್ದಾಗಿರದೆ ಅದು ಕೇವಲ ಮಾನವ ಕುಲಕ್ಕೆ ಆತನ ಸಂಬಂಧದ ಬಗ್ಗೆ ಸಂಬಂಧಿಸಿದ್ದಾಗಿ–ರುವದು. ನಾವು ಕಂಡಿರುವಂತೆ ಆತನು ಮಾನವ ಕುಲಕ್ಕೆ ಸಂಬಂಧಿಸಿರುವದು ತನ್ನ ತಾಯಿಯಾದ ಮರಿಯಳ ಮೂಲಕವಾಗಿ ನಮ್ಮ ಸ್ವಭಾವವನ್ನು ತೆಗೆದುಕೊಂಡದ್ದರ ಕಾರಣದಿಂದ. ಲೂಕನು ಗುರುತಿಸಿರುವಂತೆ ಮರಿಯಳ ವಂಶಾವಳಿಯು ದಾವೀದನ ಸಂತಾನಕ್ಕೆ ಆತನ ಮಗನಾದ ನಾತಾನನ ಮೂಲಕವಾಗಿ ಹಿಂದೆ ಕೊಂಡೊಯ್ಯುತ್ತದೆ. (ಲೂಕ 3:31 – ಇಲ್ಲಿ ಯೋಸೇಫನು ಹೇಲಿಯ ಮಗನೆಂಬ ಶೈಲಿಯಲ್ಲಿ ಹೇಳಲಾಗಿರುವದು. ಅಂದರೆ ವಿವಾಹದ ಮೂಲಕವಾಗಿರುವ ಅಥವಾ ಕಾನೂನಿನ ಅನುಸಾರವಾಗಿ ಮರಿಯಳ ತಂದೆಯಾದ ಏಲಿಯ ಮಗನೆಂಬದು; ಆದರೆ ನಾವು ಹೇಳುವಂತೆ ಏಲಿಯ ಅಳಿಯನು. ಮತ್ತಾಯ 1:16ರಲ್ಲಿ ಹೇಳಿರುವಂತೆ, ಯೋಸೇಫನು ಹುಟ್ಟಿನಿಂದ ಯಾಕೋಬನ ಮಗನಾಗಿದ್ದನು.) ಮತ್ತಾಯನು ನೀಡಿರುವಂತೆ ಯೋಸೇಫನ ವಂಶಾವಳಿಯು ಸಹ ದಾವೀದನಿಗೆ ಆತನ ಮಗನಾದ ಸೊಲೊಮೋನನ ಮೂಲಕವಾಗಿ ಗುರುತಿಸಲ್ಪಡುತ್ತದೆ. (ಮತ್ತಾಯ 1:6,16) ಯೋಸೇಫನು ಮರಿಯಳನ್ನು ತನ್ನ ಹೆಂಡತಿಯಾಗಿ ಅಂಗೀಕರಿಸಿಕೊಂಡವನಾಗಿ ಯೇಸುವನ್ನು ತನ್ನ ಮಗನನ್ನಾಗಿ ದತ್ತುತೆಗೆದುಕೊಳ್ಳುವ ಮೂಲಕವಾಗಿ ಆತನನ್ನು ತನ್ನ ಸ್ವಂತ ಮಗನನ್ನಾಗಿ ಮಾಡಿ–ಕೊಂಡಿದ್ದನು; ಈ ದತ್ತುಸ್ವೀಕಾರವು ಯೇಸುವನ್ನು ಯೋಸೇಫನ ವಂಶಾವಳಿಯಲ್ಲಿ ಹೆಸರಿಸಿ ಎಣಿಸಲ್ಪಡುವಂತೆ ಮಾಡುವದು; ಆದರೆ ನಾವು ನೋಡಿರುವಂತೆ ಆತನ ತಾಯಿಯಾದ ಮರಿಯಳು ಸಹ ಮತ್ತೊಂದು ವಂಶಾವಳಿಯ ಮೂಲಕವಾಗಿ ದಾವೀದನ ಸಂತಾನಕ್ಕೆ ಸೇರಿರುವ ಕಾರಣ ದಾವೀದನ ಸಂತಾನದ ಮೂಲಕವಾಗಿ ಹೀಗೆ ಗುರುತಿಸುವಂಥ ಅಗತ್ಯವಿರುವದಿಲ್ಲ.

ಆದರೆ ಕೆಲವರು ಊಹಿಸಿರುವಂತೆ ದಾವೀದನ ಸಿಂಹಾನಕ್ಕಾಗಿರುವ ನಮ್ಮ ಕರ್ತನ ಹಕ್ಕುದಾರಿಕೆಯು ಯೋಸೇಫನಿಗಿರುವ ತನ್ನ ತಾಯಿಯ ಸಂಬಂಧದಿಂದ ಆಗಿರುವಂಥದ್ದಲ್ಲ. ಪ್ರತಿಯಾಗಿ, ಆತನು ಯೋಸೇಫನ ಮಗನಾಗಿದ್ದಲ್ಲಿ, ತಾನು ದಾವೀದನ ಸಿಂಹಾಸನಕ್ಕೆ ವಂಶಪಾರಂಪರ್ಯದ ಯಾವುದೇ ಹಕ್ಕುದಾರಿಕೆಯಿಂದ ಬಹಿಷ್ಕೃತನಾಗುತ್ತಿದ್ದನು; ಯಾಕಂದರೆ ಆಗಲೇ ರಾಜ್ಯದಲ್ಲಿ ದಾವೀದನ ಸಿಂಹಾಸನಕ್ಕೆ ಉತ್ತರಾಧಿಕಾರಿಯು ಆತನ ಮಗನಾದ ಸೊಲೊಮೋನನ ಸಂತತಿಯ ಮೂಲಕವಾಗಿ ಬಂದಿದ್ದು, ಆದರೆ ಅದು ಆತನ ಮಗನಾದ ನಾತಾನನ ಮೂಲಕವಾಗಿರಲಿಲ್ಲ. ಆದಾಗ್ಯೂ ಕೆಲವು ಶಾಸ್ತ್ರವಚನಗಳು ವಿಶಿಷ್ಯವಾಗಿ ತೋರಿಸಿಕೊಂಡುವಂತೆ ದಾವೀನದ ಸಿಂಹಾಸನದ ಮಹಾ ಬಾಧ್ಯಸ್ಥನು ಸೊಲೊಮೋನನ ರಾಜವಂಶಾವಳಿಯ ಮೂಲಕವಾಗಿರುವದಿಲ್ಲ. ಇದನ್ನು ನಾವು ರುಜುವಾತುಪಡಿಸಿದ್ದಲ್ಲಿ ಕೆಲವರು ನಮ್ಮ ಕರ್ತನು ಯೋಸೇಫನ ಜೊತೆಗೆ ಮರಿಯಳ ಮಗನೂ ಸಹ ಆಗಿರಬೇಕೆಂದು ಅವರು ಹೇಳಿಕೊಳ್ಳುವದಕ್ಕೆ ಇದು ಪರಿಣಾಮಕಾರಿಯಾಗಿ ತಡೆಯೊಡ್ಡುತ್ತದೆ. ಆದುದರಿಂದ ನಾವು ಈ ಸಂಗತಿಯನ್ನು ಜಾಗರೂಕತೆಯಿಂದ ಪರಿಶೀಲಿಸೋಣ.

ದೈವೀಕ ಪ್ರಸ್ತಾವನೆಯಲ್ಲಿ ಸ್ಪಷ್ಟವಾಗಿ ಹೇಳಿರುವ–ದೇನಂದರೆ: ಮೊದಲನೆಯದಾಗಿ, ಲೋಕದ ಸಿಂಹಾಸನದ ಮಹಾ ಬಾಧ್ಯಸ್ಥನು ಅಂದರೆ ಇಸ್ರಾಯೇಲಿನ ದೊಡ್ಡ ಅರಸನು ನಿಶ್ಚಿತವಾಗಿಯೂ ಪ್ರಶ್ನಾತೀತವಾಗಿ ದಾವೀದನ ಸಂತತಿಯಲ್ಲಿ ಬರಬೇಕೆಂಬದು. ಎರಡನೆಯದಾಗಿ, ಕೆಲವು ಷರತ್ತಿನ ಮೇಲೆ ಆತನು ರಾಜವಂಶಸ್ಥನಾದ ಸೊಲೊಮೋನನ ವಂಶಾವಳಿಯಲ್ಲಿ ಬರಬೇಕೆಂಬುದನ್ನು ಸಹ ಪ್ರಕಟಮಾಡಿ ಹೇಳಲಾಗಿತ್ತು. ಆ ಷರತ್ತುಗಳನ್ನು ಅನುಸರಿಸಿದ್ದಲ್ಲಿ ಆತನು ಆ ವಂಶಾವಳಿಯಲ್ಲಿ ಬರುವಂಥವನಾಗಿರುವನು; ಆ ಷರತ್ತುಗಳು ಅನುಸರಿಸದೇ ಹೋದಲ್ಲಿ ಆವನು ಬೇರೊಂದು ವಂಶಾವಳಿಯಲ್ಲಿ ಬರುವವನಾಗಿದ್ದು, ಯಾವುದೇ ಸಂದರ್ಭದಲ್ಲಿಯೂ ಆತನು ದಾವೀನದ ವಂಶದ ಮೂಲಕವಾಗಿ ದಾವೀದಕುಮಾರ–ನಾಗಿಯೂ ಮತ್ತು ದಾವೀದನಿಗೆ ಒಡೆಯನಾಗಿಯೂ ಬರಬೇಕೆಂಬದು.

ಶಾಸ್ತ್ರವಚನಗಳ ಹೇಳಿಕೆಯನ್ನು ಗಮನಿಸಿ:

"ಯೆಹೋವನು ದಾವೀದನಿಗೆ ಮಾಡಿದ ಪ್ರಮಾಣವು ಸ್ಥಿರವಾಗಿದೆ; ಆತನು ಅದನ್ನು ಬದಲಿಸುವದಿಲ್ಲ–ನಿನ್ನ ಸಂತಾನದವರನ್ನು ನಿನ್ನ ಸಿಂಹಾಸನದ ಮೇಲೆ ಕುಳ್ಳಿರಿಸುವೆನು; ನಿನ್ನ ಮಕ್ಕಳು ನನ್ನ ನಿಬಂಧನೆಯನ್ನು ನಾನು ಆಜ್ಞಾಪಿಸಿದ ಕಟ್ಟಳೆಗಳನ್ನು ಕೈಗೊಂಡು ನಡೆಯುವದಾದರೆ ಅವರ ಮಕ್ಕಳು ನಿನ್ನ ಸಿಂಹಾಸನದಲ್ಲಿ ಸದಾಕಾಲ ಕೂತುಕೊಳ್ಳುವರು." ಕೀರ್ತನೆ 132:11–12.

"ನನಗೆ ದಯಪಾಲಿಸಿದ ಅನೇಕ ಮಂದಿ ಮಕ್ಕಳಲ್ಲಿ ನನ್ನ ಮಗನಾದ ಸೊಲೊಮೋನನನ್ನು ಯೆಹೋವನ ರಾಜ್ಯಸಿಂಹಾಸನವಾಗಿರುವ ಇಸ್ರಾಯೇಲ್ ಸಿಂಹಾಸನದ ಮೇಲೆ ಕುಳ್ಳಿರಿಸುವದಕ್ಕೋಸ್ಕರ ಆರಿಸಿಕೊಂಡನು. ಆತನು ನನಗೆ–ನಿನ್ನ ಮಗನಾದ ಸೊಲೊಮೋನನೇ ನನ್ನ ಆಲಯವನ್ನೂ ಅದರ ಪ್ರಾಕಾರಗಳನ್ನೂ ಕಟ್ಟಿಸುವನು. ಅವನು ನನಗೆ ಮಗನಾಗಿರ–ಬೇಕೆಂದು ಅವನನ್ನು ಆರಿಸಿಕೊಂಡಿದ್ದೇನೆ; ನಾನು ಅವನಿಗೆ ತಂದೆಯಾಗಿರುವೆನು. ಅವನು ಈಗಿನಂತೆ ಯಾವಾಗಲೂ ನನ್ನ

ಆಜ್ಞಾವಿಧಿಗಳನ್ನು ಕೈಕೊಂಡು ನಡೆಯುವದಾದರೆ ಅವನ ರಾಜ್ಯವನ್ನು ಸದಾಕಾಲವೂ ಸ್ಥಿರಪಡಿಸುವೆನೆಂದು ಹೇಳಿದ್ದಾನೆ." 1 ಪೂರ್ವ 28:5–7.

"ಮತ್ತು ಯೆಹೋವನು–ನಿನ್ನ ಸಂತಾನದವರು ನಂಬಿಗಸ್ತರಾಗಿ ಪೂರ್ಣ ಮನಸ್ಸಿನಿಂದಲೂ ಪೂರ್ಣಪ್ರಾಣ ದಿಂದಲೂ ನನಗೆ ನಡೆದುಕೊಳ್ಳುವದರಲ್ಲಿ ಜಾಗರೂಕರಾಗಿ ರುವದಾದರೆ ಅವರು ತಪ್ಪದೆ ಇಸ್ರಾಯೇಲ್ ಸಿಂಹಾಸನದ ಮೇಲೆ ಕೂತುಕೊಳ್ಳುವರು ಎಂಬದಾಗಿ ತಾನು ನನಗೆ ಮಾಡಿದ ವಾಗ್ದಾನವನ್ನು ಸ್ಥಿರಪಡಿಸುವನು." 1 ಅರಸು 2:4

ಸೊಲೊಮೋನನ ವಂಶದಲ್ಲಿ ಮತ್ತು ಶಾರೀರಿಕವಾಗಿ ಆತನ ಸಂತತಿಯಲ್ಲಿ ಮೆಸ್ಸೀಯನ ರಾಜ್ಯದ ವಾಗ್ದಾನವು ಸ್ಪಷ್ಟವಾಗಿ ಮಾಡಲಾಗಿದ್ದು, ಅದು ಹೀಗೆ ವಿಶೇಷವಾಗಿ ಷರತ್ತಿನ ಮೇಲೆ ಅಂದರೆ ದೇವರಿಗೆ ಕೆಲವು ವಿಷಯದಲ್ಲಿ ನಂಬಿಗಸ್ತನಾಗಿರುವದರ ಮೇಲೆ ಅವಲಂಬಿತವಾಗಿರುವದು; ಮತ್ತು ಭಾಷೆಯ ಎಲ್ಲಾ ಅರ್ಥವಿವರಣೆಯ ನಿಯಮಗಳ ಪ್ರಕಾರ ಅನ್ವಯವಾಗುವಂಥ ಸಂಗತಿಯೆಂದರೆ ಮೆಸ್ಸೀಯನ ರಾಜ್ಯಕ್ಕೆ ಸಂಬಂಧಿಸಿದಂತೆ ದೇವರಿಗೆ ಅಪನಂಬಿಗಸ್ತನಾಗಿರುವಂಥದ್ದು ಸೊಲೊಮೋನನ ಶಾರೀರಾನುಸಾರವಾದ ಸಂತತಿಗೆ ಇಸ್ರಾಯೇಲಿನ ಸಿಂಹಾಸನಕ್ಕೆ ಬಾಧ್ಯತೆಯು ಖಂಡಿತವಾಗಿಯೂ ರದ್ದಾಗಿಹೋಗುವದೆಂಬದು. ಹೀಗಿರಲು ಉದ್ಭವಿಸುವ ಪ್ರಶ್ನೆಯೇನಂದರೆ ಸೊಲೊಮೋನನು ಮತ್ತು ಇಸ್ರಾಯೇಲ್ ಸಿಂಹಾಸನದ ಆತನ ಉತ್ತರಾಧಿಕಾರಿಗಳು "ಪೂರ್ಣ ಮನಸ್ಸಿನಿಂದಲೂ ಪೂರ್ಣಪ್ರಾಣದಿಂದಲೂ ನನಗೆ (ದೇವರಿಗೆ) ನಡೆದುಕೊಳ್ಳುವದರಲ್ಲಿ ಜಾಗರೂಕರಾಗಿದ್ದರೇ?" ಎಂಬದೇ. ಅವರು ಹೀಗೆ ಮಾಡದಿದ್ದಲ್ಲಿ ಅವರು ಪಾರಂಪರ್ಯ ವಾಗಿ ತಮ್ಮ ಶಾರೀರಿಕವಾದ ಇಸ್ರಾಯೇಲ್ ಸಿಂಹಾಸನಕ್ಕೆ ಮೆಸ್ಸೀಯನ ಪೂರ್ವಜರ ವಂಶಾನುಕ್ರಮದಿಂದ ಹೊರಹಾಕಲ್ಪಡುವರು.

ನಾವು ಈ ಪ್ರಶ್ನೆಗೆ ಉತ್ತರವನ್ನು ಖಚಿತಪಡಿಸಿಕೊಳ್ಳಲು ಶಾಸ್ತ್ರವಚನಗಳಿಗೆ ಹೋಗಬೇಕು. ಅಲ್ಲಿ ನಾವು ಬಹು ನಿಶ್ಚಿತವಾಗಿ ಕಂಡುಕೊಳ್ಳುವದೆಂದರೆ ಸೊಲೊಮೋನನು ಮತ್ತು ಆತನ ರಾಜವಂಶಸ್ಥರು ದೈವೀಕ ಉಪದೇಶಸೂತ್ರಗಳ ಅನುಸಾರ ನಡೆದುಕೊಳ್ಳುವದರಲ್ಲಿ ವಿಫಲವಾಗಿದ್ದರೆಂಬದು. ಹೀಗಾಗಿ ನಾವು ಒಂದು ಖಚಿತತೆಯಿಂದ ತಿಳಿದುಕೊಳ್ಳುವದೆಂದರೆ ಆ ಸಂತತಿಯನ್ನು ಮೆಸ್ಸೀಯನ ವಂಶಾವಳಿಯಿಂದ ತೆಗೆದು ಹಾಕಲ್ಪಟ್ಟು ಬಹಿಷ್ಕರಿಸಲಾಗಿದ್ದು ಮತ್ತು ಅದನ್ನು ದಾವೀದನ ಮತ್ತೊಂದು ವಂಶಾನುಕ್ರಮದಲ್ಲಿ ಬರಬೇಕಾಗಿ ಮಾಡಲಾಗಿತ್ತು. ದೇವರ ವಾಕ್ಯವನ್ನು ಕೇಳಿರಿ:

"ನನ್ನ ಮಗನಾದ ಸೊಲೊಮೋನನೇ, ನೀನಂತೂ ನಿನ್ನ ತಂದೆಯ ದೇವರನ್ನು ಅರಿತುಕೊಂಡು ಸಂಪೂರ್ಣಹೃದಯ ದಿಂದಲೂ ಮನಸ್ಸಂತೋಷದಿಂದಲೂ ಆತನನ್ನೇ ಸೇವಿಸು; ಯೆಹೋವನು ಎಲ್ಲಾ ಹೃದಯಗಳನ್ನು ವಿಚಾರಿಸುವವನೂ ಎಲ್ಲಾ ಮನಸ್ಸಂಕಲ್ಪಗಳನ್ನು ಬಲ್ಲವನೂ ಆಗಿರುತ್ತಾನಲ್ಲಾ. ನೀನು ಆತನನ್ನು ಹುಡುಕುವದಾದರೆ ಆತನು ನಿನಗೆ ಸಿಕ್ಕುವನು. ಆತನನ್ನು ಬಿಟ್ಟರೆ ನಿನ್ನನ್ನು ಶಾಶ್ವತವಾಗಿ ತಳ್ಳಿಬಿಡುವನು." 1 ಪೂರ್ವ 28:9.

"ಇಸ್ರಾಯೇಲ್ ದೇವರಾದ ಯೆಹೋವನು ಸೊಲೊಮೋನನಿಗೆ ಎರಡು ಸಾರಿ ಕಾಣಿಸಿಕೊಂಡು ಅನ್ಯ ದೇವತೆಗಳನ್ನು ಸೇವಿಸಲೇಬಾರದೆಂದು ಅಜ್ಞಾಪಿಸಿದ್ದರೂ ಅವನು ಆತನ ಆಜ್ಞೆಗಳನ್ನು ಮೀರಿದ್ದರಿಂದ ಆತನು ಅವನ ಮೇಲೆ ಕೋಪಗೊಂಡು ಅವನಿಗೆ–ನೀನು ಈ ಪ್ರಕಾರ ಮಾಡಿ ನನ್ನ ವಿಧಿನಿಬಂಧನೆಗಳನ್ನು ಮೀರಿದ್ದರಿಂದ ನಿನ್ನ ರಾಜ್ಯವನ್ನು ನಿನ್ನಿಂದ ಕಿತ್ತುಕೊಂಡು ನಿನ್ನ ಸೇವಕನಿಗೆ ಕೊಡುವೆನು. ಆದರೂ ನಾನು ನಿನ್ನ ತಂದೆಯಾದ ದಾವೀದನನ್ನು ನೆನಸಿ ನಿನ್ನ ಕಾಲದಲ್ಲಿ ಇದನ್ನು ಮಾಡುವದಿಲ್ಲ. ನಿನ್ನ ಮಗನ ಕೈಯಿಂದ ಅದನ್ನು ಕಿತ್ತುಕೊಳ್ಳುವೆನು, ಆದರೆ ರಾಜ್ಯವೆಲ್ಲಾ ಕಿತ್ತುಕೊಳ್ಳುವದಿಲ್ಲ; ನನ್ನ ಸೇವಕನಾದ ದಾವೀದನಿಗೋಸ್ಕರವೂ ನಾನು ಆರಿಸಿಕೊಂಡ ಯೆರೂಸಲೇಮ್ ಪಟ್ಟಣಕ್ಕೋಸ್ಕರವೂ ನಿನ್ನ ಮಗನಿಗೆ ಒಂದು ಕುಲವನ್ನು ಉಳಿಸುವೆನು ಎಂದು ಹೇಳೀದನು." 1 ಅರಸುಗಳು 11:9–13

ಇದಕ್ಕೆ ಅನುಸಾರವಾಗಿ ದಾಖಲೆಯಲ್ಲಿರುವದೇನಂದರೆ ಹತ್ತು ಕುಲಗಳು ಸೊಲೊಮೋನನ ವಂಶಾನುಕ್ರಮದಿಂದ ಆತನ ಮರಣದ ನಂತರ ನೇರವಾಗಿ ತೆಗೆದುಹಾಕಲ್ಪಟ್ಟಿದ್ದು–ಹತ್ತು ಕುಲಗಳು ಎಂದೂ ಸೊಲೊಮೋನನ ಮಗನೂ ಹಾಗು ಉತ್ತರಾಧಿಕಾರಿಯೂ ಆದ ರೆಹೋಬಾಮನನಿಗೆ ತಮ್ಮ ರಾಜನಿಷ್ಠೆ ತೋರಲು ಒಪ್ಪಿಕೊಂಡಿರಲಿಲ್ಲ. ಆದರೆ ನಾವು ಯೆಹೂದ ಮತ್ತು ಅದರ ಜೊತೆಗೂಡಿರುವ ಬೆನ್ಯಾಮೀನನ ಕುಲಗಳ ಸಂಬಂಧವಾಗಿರುವ ದೇವರ ಮಾತುಗಳನ್ನು ಕೇಳೋಣ. ಬೆನ್ಯಾಮೀನ್ ಕುಲವು ಕೆಲವು ಕಾಲ ಸೊಲೊಮೋನನ ಸಂತತಿಗೆ ನಿಷ್ಠೆಯುಳ್ಳವರಾಗಿ ಉಳಿದುಕೊಂಡಿದ್ದು, ಹೀಗೆ ಅವರು ಸ್ಪಷ್ಟವಾಗಿ ನಿಜರೂಪದ ವಾಗ್ದತ್ತ ರಾಜ್ಯಕ್ಕೆ ಮತ್ತು ದೊಡ್ಡ ಅರಸನಾದ ಮೆಸ್ಸೀಯನಿಗೆ ಸಹಕಾರಿಗಳಾಗಿದ್ದರು. ಸಿಂಹಾಸನದ ಮೇಲೆ ಕುಳಿತುಕೊಂಡಿದ್ದ ಸೊಲೊಮೋನನ ವಂಶದ ಕಡೆಯ ಮೂರು ಅರಸರುಗಳು ಯಾರಂದರೆ, ಯೆಹೋಯಾಕೀಮನು, ಮತ್ತು ಆತನ ಮಗನಾದ ಯೆಹೋಯಾಕೀನನು (ಇವನು ಯೆಕೋನೀಯ ಮತ್ತು ಕೋನಾನ್ಯನೆಂದೂ ಕರೆಯಲ್ಪಟ್ಟಿದ್ದನು) ಮತ್ತು ಯಹೋಯಾಕೀಮನ ಸಹೋದರನಾದ ಚಿದ್ಕೀಯನು. ಈ ಮೂವರಿಗೆ ವಿರುದ್ಧವಾಗಿರುವ ದೇವರ ಮಾತುಗಳನ್ನು ಮತ್ತು ಅವರ ವಂಶದವರಾದ ಯಾರೂ ಎಂದೂ ನಿಜವಾದ ಅಥವಾ ಛಾಯಾರೂಪದ ದೇವರ ರಾಜ್ಯ ಸಿಂಹಾಸನದಲ್ಲಿ ಕುಳಿತುಕೊಳ್ಳಬಾರದೆನ್ನುವ ದೇವರ ವಾಕ್ಯದಲ್ಲಿನ ಸಾಕ್ಷಿಪ್ರಮಾಣ ಗಳನ್ನು ಗುರುತುಮಾಡಿಕೊಳ್ಳೋಣ. ನಾವು ಓದುವದು:

"ಯೆಹೋವನು ಹೀಗನ್ನುತ್ತಾನೆ–ನನ್ನ ಜೀವದಾಣೆ, ಯೆಹೋಯಾಕೀಮನ ಮಗನೂ ಯೆಹೂದದ ಅರಸನೂ ಆದ ಕೋನ್ಯನೆಂಬ ನೀನು ನನ್ನ ಬಲಗೈಯ ಮುದ್ರೆಯುಂಗುರ ವಾಗಿದ್ದರೂ ನಾನು ನಿನ್ನನ್ನು ಅಲ್ಲಿಂದ ಕಿತ್ತುಹಾಕುತ್ತಿದ್ದೆನು! ನಿನ್ನ ಪ್ರಾಣವನ್ನು ಹುಡುಕಿ ನಿನ್ನಲ್ಲಿ ಭಯವನ್ನು ಹುಟ್ಟಿಸುವವರ ಕೈಗೆ

ಅಂದರೆ ಬಾಬೇಲಿನ ಅರಸನಾದ ನೆಬುಕದ್ನೆಚ್ಚರನ ಮತ್ತು ಕಸ್ದಿಯರ ಕೈಗೆ ಕೊಟ್ಟುಬಿಡುವೆನು. ನಿನ್ನನ್ನೂ ನಿನ್ನ ಹೆತ್ತ ತಾಯಿಯನ್ನೂ ಜನ್ಮಭೂಮಿಯಲ್ಲದ ಅನ್ಯದೇಶಕ್ಕೆ ಎಸೆದುಬಿಡುವೆನು; ಅಲ್ಲೇ ಸಾಯುವಿರಿ, ಹಿಂದಿರುಗಬೇಕೆಂದು ಹಂಬಲಿಸುವ ದೇಶಕ್ಕೆ ಅವರು ಹಿಂದಿರುಗುವದೇ ಇಲ್ಲ. ಕೋನ್ಯನೆಂಬ ಈ ಮನುಷ್ಯನು ಅಸಡ್ಡೆಗೀಡಾದ ಒಡಕು ಗಡಿಗೆಯೋ? ಯಾರಿಗೂ ಇಷ್ಟವಲ್ಲದ ಮಡಿಕೆಯೋ? ಅವನೂ ಅವನ ಸಂತತಿಯವರೂ ಏಕೆ ಬಿಸಾಡಲ್ಪಟ್ಟಿದ್ದಾರೆ? ನೋಡದ ದೇಶಕ್ಕೆ ಏಕೆ ಎಸೆಯಲ್ಪಟ್ಟಿದ್ದಾರೆ? ದೇಶವೇ, ದೇಶವೇ, ದೇಶವೇ, ಯೆಹೋವನ ಮಾತನ್ನು ಕೇಳು! ಯೆಹೋವನು ಇಂತೆನ್ನುತಾನೆ–ಇವನನ್ನು ಮಕ್ಕಳಿಲ್ಲದವನು, ವ್ಯರ್ಥ ಜನ್ಮದವನು ಎಂದು ಪಟ್ಟಿಯಲ್ಲಿ ಬರೆಯಿರಿ; ಇವನ ಸಂತಾನದಲ್ಲಿ ಇನ್ನು ಮೇಲೆ ಯಾವನೂ ದಾವೀದನ ಸಿಂಹಾಸದಲ್ಲಿ ಕೂತು ಯೆಹೂದವನ್ನು ಆಳಿ ಬಾಳನು. ಯೆರೆಮೀಯ 22:24–30

"ಆದ್ಕಾರ್ಣ ಯೆಹೂದ್ದ ಅರ್ಸನಾದ ಯೆಹೋಯಾಕೀಮನ ವಿಷಯದಲ್ಲಿ ಯೆಹೋವನು ಇಂತೆನ್ನುತ್ತಾನೆ–ಇವನ ಸಂತಾನದಲ್ಲಿ ಯಾವನೂ ದಾವೀದನ ಸಿಂಹಾಸನಾರೂಢನಾಗನು; ಇವನ ಹೆಣವು ಬಿಸಾಡಲ್ಪಟ್ಟು, ಹಗಲಿನ ತಾಪಕ್ಕೂ ರಾತ್ರಿಯ ಚಳಿಗೂ ಈಡಾಗುವದು." – ಯೆರಮೀಯ 36:30

ಚಿದ್ಕೀಯನ ವಿಷಯದಲ್ಲಿ ನಾವು ಓದುವದು:

"ಇಸ್ರಾಯೇಲಿನ ದೊರೆಯೇ, ದುಷ್ಟನೇ, ಭ್ರಷ್ಟನೇ! ನಿನಗೆ ಸಮಯವು ಹತ್ತರಿಸಿದೆ; ಇದೇ ನಿನ್ನ ಅಪರಾಧದ ಕಡೇಗಾಲ. ಕರ್ತನಾದ ಯೆಹೋವನು ಇಂತೆನ್ನುತ್ತಾನೆ–ಮುಂಡಾಸನವನ್ನು ಕಿತ್ತುಬಿಡು! ಕಿರೀಟವನ್ನು ಎತ್ತಿಹಾಕು! ಎಲ್ಲವೂ ವ್ಯತ್ಯಸ್ತವಾಗಲಿ; ಕೆಳಗಿನದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು; [ರಾಜ್ಯಕ್ಕೆ] ಬಾಧ್ಯನು ಬರುವದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು. ಯೆಹೆಜ್ಕೇಲ 21:25–27

ಇಲ್ಲಿ ಸೊಲೊಮೋನನ ಸಂತಾನದ ಪೂರ್ಣ ಪದಚ್ಯುತಿಯ ವಿಷಯವಾಗಿ ಘೋಷಿಸಲಾಗಿರುವದು; ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿತ್ತು ಈ ಸಂತತಿ, ಇನ್ನು ಮುಂದೆ ಈ ಸಂತತಿಯು ಕೆಳಗೆ ತಳ್ಳಲ್ಪಡಬೇಕಿರುವಲ್ಲಿ, ಕೀಳುಮಟ್ಟದ ಅಥವಾ ಸಿಂಹಾಸನಕ್ಕಾಗಿ ಎಂದೂ ಹಕ್ಕು ಸಾಧಿಸದಿದ್ದ ಅಪ್ರಸಿದ್ಧವಾದ ನಾತಾನನ ಸಂತತಿಯು ನಿಗಧಿತ ಕಾಲದಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಡಬೇಕಿದ್ದು, ಅದು ಶಾರೀರಿಕ ರೀತಿಯಲ್ಲಿ ಮರಿಯಳಿಂದ ಹುಟ್ಟಿದ ಮೆಸ್ಸೀಯನ ಮೂಲಕವಾಗಿ ಪ್ರತಿನಿಧಿತವಾಗಿತ್ತು.

ಈ ಸಾಕ್ಷಿಪ್ರಮಾಣಕ್ಕಿಂತಲೂ ಅಂದರೆ ಮೆಸ್ಸೀಯನು ಸೊಲೊಮೋನನ ವಂಶಾವಳಿಯಲ್ಲಿ ನಿರೀಕ್ಷಿಸಲು ಸಾಧ್ಯವಾಗದು–ಈ ಸಂತತಿಯ ಎಲ್ಲಾ ಹಕ್ಕು ಮಂಡನೆಗಳು ದೇವ ವಾಗ್ದಾನದ ಮತ್ತು ಷರತ್ತಿನ ಅನುಸಾರ ದುಷ್ಟತನದ ಮೂಲಕವಾಗಿ ದೇವರಿಗೆ ವಿರುದ್ಧ ಬಂಡಾಯವೆದ್ದ ಕಾರಣದಿಂದ ರದ್ದುಗೊಳಿಸಲ್ಪಟ್ಟಿತ್ತು ಎನ್ನುವದಕ್ಕಿಂತಲೂ ಹೆಚ್ಚು ಖಚಿತವಾದದ್ದನ್ನು ಕೇಳಿಕೊಳ್ಳಲು ಯಾರಿಗೆ ತಾನೇ ಸಾಧ್ಯ? ಹೀಗೆ ನಮ್ಮ ಕರ್ತನು ಯೋಸೇಫನ ಮಗನಾಗಿದ್ದು ಈತನ ಮೂಲಕವಾಗಿ ತನ್ನ ಹಕ್ಕು ಮಂಡನೆಯ ಬಾಧ್ಯತೆಯನ್ನು ಹೊಂದಿರುವನೆಂಬದು ಸಂಪೂರ್ಣವಾಗಿ ಸುಳ್ಳಾಗಿರುವದೆಂದು ಪ್ರಮಾಣೀಕರಿಸಲ್ಪಟ್ಟಿರುದು, ಯಾಕಂದರೆ ಆ ಸಂತತಿಯ ಯಾವ ಮನುಷ್ಯನಿಗೂ ಎಂದೂ ಯೆಹೋವನ ಸಿಂಹಾಸನದಲ್ಲಿ ಕುಳಿತುಕೊಳ್ಳಲಾಗದು.

ಸೊಲೊಮೋನನೆಂಬ [ಮರದ] ಚಿಗುರಿನಿಂದ ದಾವೀದ ಮನೆತನದ ಮತ್ತೊಂದು ವಂಶಕುಡಿಗೆ ರಾಜ್ಯವು ಬದಲಾವಣೆಯಾಗುವದನ್ನು ಮತ್ತೊಂದು ಶಾಸ್ತ್ರವಚನದಲ್ಲಿ ಸ್ಪಷ್ಟವಾಗಿ ಮುಂದಾಗಿ ಹೇಳಲಾಗಿರುವದು. ನಾವು ಓದುವದು: "ಯೆಹೋವನು ಹೀಗನ್ನುತ್ತಾನೆ–ಇಗೋ, ನಾನು ಮುಂದಿನ ಕಾಲದಲ್ಲಿ ದಾವೀದನೆಂಬ ಮೂಲದಿಂದ ಸದ್ಧರ್ಮಿಯಾದ ಮೊಳಿಕೆಯನ್ನು ಚಿಗುರಿಸುವೆನು; ಅವನು ರಾಜನಾಗಿ ಆಳುತ್ತಾ ವಿವೇಕದಿಂದ ಕಾರ್ಯಸಾಧಿಸುತ್ತಾ ದೇಶದಲ್ಲಿ ನೀತಿನ್ಯಾಯಗಳನ್ನು ನಿರ್ವಹಿಸುವನು. ಅವನ ಕಾಲದಲ್ಲಿ ಯೆಹೂದ್ಯರು ಸುರಕ್ಷಿತರಾಗಿರುವರು, ಇಸ್ರಾಯೇಲ್ಯರು ನೆಮ್ಮದಿಯಾಗಿ ವಾಸಿಸುವರು; ಯೆಹೋವ ಚಿದ್ಕೇನು [ಅಂದರೆ ಯೆಹೋವನೇ ನಮ್ಮ ಸದ್ಧರ್ಮ] ಎಂಬ ಹೆಸರು ಅವನಿಗಾಗುವದು." ಯೆರೆಮೀಯ 23:5–6 ಯಂಗ್‌ರವರ ಭಾಷಾಂತರವನ್ನು ನೋಡಿರಿ.

ಲೂಕನು (1:46–55ರಲ್ಲಿ) ಉಲ್ಲೇಖಿಸಿರುವಂತೆ ಯೇಸುವಿನ ತಾಯಿಯಾದ ಮರಿಯಳು ಅಪೂರ್ವವಾದ ಕೃತಜ್ಞಾರ್ಪಣೆಯ ಈ ಹಾಡಿಗೆ ಸ್ವರಗೂಡಿಸುವಾಗ ಈ ಸೂಕ್ತವಾದ ಅಲೋಚನೆಯನ್ನು ಪಡೆದುಕೊಂಡಿದ್ದಂತೆ ಇಲ್ಲವೇ ಪವಿತ್ರಾತ್ಮನಿಂದ ಪ್ರವಾದನೆಯ ರೂಪದಲ್ಲಿ ನುಡಿಯಲು ನಡೆಸಲ್ಪಟ್ಟಿದ್ದಳೆಂದು ತೋರುವದು: "ಆತನು ತನ್ನ ಭುಜಪರಾಕ್ರಮವನ್ನು ತೋರಿಸಿ ಸೊಕ್ಕಿದ ಮನಸ್ಸುಳ್ಳವರನ್ನು ಚದರಿಸಿಬಿಟ್ಟಿದ್ದಾನೆ. ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿ ದೀನಸ್ಥಿತಿಯವರನ್ನು ಉನ್ನತಸ್ಥಿತಿಗೆ ತಂದಿದ್ದಾನೆ. ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸಿಬಿಟ್ಟಿದ್ದಾನೆ." (1:51–53) ಇಲ್ಲಿ ಅನುಗ್ರಹಿತವಾದ ಸೊಲೊಮೋನನ ಸಂತತಿಯ ಮತ್ತು ನಾತಾನನ ದೀನ ಸಂತತಿಯ ನಡುವಿನ ವಿಭಿನ್ನತೆಯನ್ನು ತೋರ್ಪಡಿಸ ಲಾಗಿರುವದು. ರಾಜಮುದ್ರೆ ಮತ್ತು ಕಿರೀಟಗಳನ್ನು ಚಿದ್ಕೀಯನಿಂದ ಮತ್ತು ಸೊಲೊಮೋನನ ಸಂತತಿಯಿಂದ ತೆಗೆದುಹಾಕಲ್ಪಟ್ಟಿದ್ದು, ಇದರ ಹಕ್ಕನ್ನು ಹೊಂದಿರುವ ದಾವೀದವಂಶವೆಂಬ ಬುಡದಿಂದ ಹೊರಡುವ ಸದ್ಧರ್ಮಿಯೆಂಬ ಚಿಗುರಿಗೆ ನೀಡಬೇಕಾಗಿರುವದು.

ನಮ್ಮ ಕರ್ತನು ಹೇಗೆ ದಾವೀದನ ಮಗನೂ ಅಥವಾ ಚಿಗುರು ಇಲ್ಲವೇ ಸಂತತಿಯೆಂಬುದನ್ನು ಅಲ್ಲದೆ ಆತನ ವಂಶಾವಳಿಯು ಈ ಸಂತತಿಯ ಮೂಲಕ ಸೂಕ್ತವಾಗಿ

ಗುರುತಿಸಲಾಗಿರುವದನ್ನು ಮತ್ತು ಇದಕ್ಕೆ ಸಂಬಂಧಿಸಿದ ಶಾಸ್ತ್ರೋಕ್ತಿಗಳ ಅನುಸಾರವಾಗಿರುವದೆಂಬುದನ್ನು ನಾವು ನೋಡಿದ್ದೇವೆ. ಈಗ ನಾವು ಯಾವ ವಿಧದಲ್ಲಿ ಈತನು ದಾವೀದನ ಒಡೆಯನೆಂಬುದನ್ನು ನೋಡೋಣ. ಯೇಸುವು ದಾವೀದನ ಕುಮಾರನೂ ಹಾಗು ಒಡೆಯನೂ ಈ ಎರಡೂ ಆಗಿರುವದಕ್ಕೆ ಹೇಗೆ ಸಾಧ್ಯ?

ನಮ್ಮ ಉತ್ತರವೇನೆಂದರೆ: ಆತನು "ಶರೀರಧಾರಿಯಾಗಿ" ನಮ್ಮ ಮಧ್ಯದಲ್ಲಿ ಜೀವಿಸಿದ್ದಕ್ಕೆ ಮೊದಲು ಒಬ್ಬ ಆತ್ಮಿಕ ಜೀವಿಯಾಗಿದ್ದನೆಂಬ ಯಾವುದೇ ಕಾರಣದಿಂದ ದಾವೀದನ ಒಡೆಯನಾಗಿರುವದಿಲ್ಲವೆಂಬದು. ಆತನು ತನ್ನ ಪೂರ್ವಾಸ್ಥಿತ್ವದಲ್ಲಿ ದಾವೀದನ ಚಿಗುರು ಇಲ್ಲವೇ ಕುಮಾರನಿಗಿಂತ ಹೆಚ್ಚೇನು ಆಗಿರಲಿಲ್ಲ. ನಮ್ಮ ಕರ್ತನಾದ ಯೇಸುವು ಮಧ್ಯಸ್ಥನಾಗಿ ನಿರ್ವಹಿಸಿದ ಮಹಾ ಸಂಧಾನ ಕಾರ್ಯದ ನಿಮಿತ್ತ ಆತನು ದಾವೀದನಿಗೆ ಒಡೆಯನು ಅಥವಾ ಶ್ರೇಷ್ಠನು ಜೊತೆಗೆ "ಎಲ್ಲಾ ಜನಗಳಿಗೂ ಕರ್ತನೂ (ಅಂದರೆ ಒಡೆಯನೂ)" ಆಗಿರುವನು. [ಅ. ಕೃ 10:36] "ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರ ಬೇಕೆಂತಲೇ ಯೇಸುವು ಸತ್ತು ಜೀವಿತನಾದನು." ರೋಮಾ 14:9

ನಿಜ, ಲೋಗಾಸ್ ಎಂಬಾತನು ಒಬ್ಬ ದೇವರೂ ಅಂದರೆ ಪರಾಕ್ರಮಿಯೂ ಪ್ರಭಾವಿಯೂ ಆಗಿರುವದರಿಂದ ಈತನನ್ನು ಒಬ್ಬ ಕರ್ತನು [ಒಡೆಯನು], ಅಂದರೆ ಅಧಿಕಾರದಲ್ಲಿ ಉನ್ನತನು, ಎಂಭ ಶೈಲಿಯಲ್ಲಿ ಸೂಕ್ತವಾಗಿ ಹೇಳಬಹುದು. ಇದರಂತೆಯೇ ಮನುಷ್ಯನಾಗಿರುವ ಯೇಸು ಕ್ರಿಸ್ತನು ತನ್ನ ಮರಣಕ್ಕೆ ಮೊದಲು ಒಬ್ಬ ಒಡೆಯನೆಂಬ ಶೈಲಿಯಲ್ಲಿ ಸೂಕ್ತವಾಗಿ ಹೇಳಬಹುದಾಗಿದ್ದು, ಆತನು ತನ್ನ ಶಿಷ್ಯರಿಂದ ಹಾಗೆಯೇ ಸಂಬೋಧಿಸಲ್ಪಟ್ಟಿದ್ದನು. ನಾವು ಓದುವದು: "ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುವದು ಸರಿ; ನಾನು ಅಂಥವನೇ ಹೌದು." (ಯೋಹಾನ 13:13) ಒಡಂಬಡಿಕೆಯ ವಿಶೇಷ ದೂತನಾಗಿ ಲೋಕವನ್ನು ವಿಮೋಚಿಸ ಸಲುವಾಗಿ ಆತನನ್ನು ತಂದೆಯು ಪ್ರತಿಷ್ಠಿಸಿ ಲೋಕಕ್ಕೆ ಕಳುಹಿಸಿದ್ದು, ಅತನನ್ನು ತಂದೆಯು ಎಲ್ಲಾ ವಿಧದಲ್ಲಿಯೂ ಮಹಿಮೆಪಡಿಸಿ ಹೀಗೆ ಸಾಕ್ಷಿ ನುಡಿದಿದ್ದಾನೆ: "ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮಚ್ಚಿದ್ದೇನೆ." [ಮತ್ತಾಯ 3:17] ಯಾರು ಆತನ ಮಹಿಮೆಯನ್ನು ಅಂದರೆ ತಂದೆಯ ಒಬ್ಬನೇ ಕುಮಾರನಿಗೆ ಇರತಕ್ಕ ಮಹಿಮೆಯನ್ನು ಹೊಂದಿದವನಾಗಿ ಕೃಪೆಯಿಂದಲೂ ಸತ್ಯದಿಂದಲೂ ತುಂಬಿರುವದನ್ನು ಕಂಡಿದ್ದರೋ, ಅವರು ಆತನಿಗೆ ಭಯಭಕ್ತಿ ತೋರಿಸುವದು, ಆತನ ಮಾತನ್ನು ಕೇಳುವದು, ಆತನಿಗೆ ವಿಧೇಯರಾಗುವದೂ, ಮತ್ತು ಆತನನ್ನು ಆರಾಧಿಸುವದು ಅಂದರೆ ಆತನನ್ನು ತಂದೆಯ ಪ್ರತಿನಿಧಿಯೆಂದು ಗೌರವ ಸಲ್ಲಿಸುವದೂ ಅತ್ಯುತ್ತಮವಾಗಿ ಸೂಕ್ತವೇ. ಆದರೆ ಅಪೋಸ್ತಲನಿಂದ ಮೇಲೆ ಉಲ್ಲೇಖಿಸಲಾದ ಪಠ್ಯಭಾಗದಲ್ಲಿ ಒಂದು ನಿರ್ದಿಷ್ಟವಾದ ಹಾಗು ವಿಭಿನ್ನವಾದ ಅರ್ಥದಲ್ಲಿ ನಮ್ಮ ಕರ್ತನಾದ ಯೇಸುವು, ತನ್ನ ಮರಣಪುನರುತ್ಥಾನದ ದೆಸೆಯಿಂದ, ಒಬ್ಬ ಕರ್ತನೂ ಅಥವಾ ಗುರುವೂ ಆಗಿದ್ದನು.

ಮರಣದಿಂದ ಎದ್ದುಬಂದ ಕ್ರಿಸ್ತನು "ಎಲ್ಲಾ ಜನಗಳಿಗೂ ಕರ್ತನು" ಎಂಬ ಈ ನಿರ್ದಿಷ್ಟವಾದ ಅರ್ಥದ ಮೂಲಕವಾಗಿ ಅಂದರೆ "ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿ ರಬೇಕು." ಎನ್ನುವದರ ಮೂಲಕವಾಗಿ ಆತನು ಸಂಧಾನಕ್ರಿಯೆಗೆ ಮಧ್ಯಸ್ಥನಾಗಿರುವ ತನ್ನ ಮಹಾ ಕಾರ್ಯಕ್ಕೆ ಬಹು ಮುಖ್ಯವಾಗಿ ಸಂಬಂಧಿಸಿರುವನು. ಈ ಒಂದು ಮುಖ್ಯ ಉದ್ದೇಶಕ್ಕಾಗಿಯೇ ಆತನು ಒಬ್ಬ ಮನುಷ್ಯನಾಗಿ ಬಂದಿದ್ದನು. ತನ್ನ ಅವನತಿಯ ಸ್ಥಿತಿಯಲ್ಲಿದ್ದ ಮಾನವ ಕುಲವು ಆದಾಮನ ಅವಿಧೇಯತೆಯ ಮೂಲಕವಾಗಿ "ಪಾಪಕ್ಕೆ ಮಾರಲ್ಪಟ್ಟಿದ್ದು" ಪಾಪದ ಮತ್ತು ಮರಣದಂಡನೆಯ ದೊರೆತನದಲ್ಲಿ ನಿಸ್ಸಹಾಯಕ ಸ್ಥಿತಿಯಲ್ಲಿತ್ತು; ದೈವೀಕ ನಿಯಮದ ಅನುಸಾರವಾಗಿ, ಈ ದುಃಸ್ಥಿತಿಯಿಂದ ಬಿಡುಗಡೆಯಾಗುವ ಸಲುವಾಗಿ ಆದಾಮನಿಗೂ ಮತ್ತು ಆತನ ಸಂತತಿಗೂ ಉಂಟಾದ ಶಿಕ್ಷೆಯನ್ನು [ಒಬ್ಬರು] ಪೂರ್ಣವಾಗಿ ಭರಿಸಬೇಕಾದ ಅಗತ್ಯವಿತ್ತು. ಮಾನವ ಕುಲವನ್ನು ಪಾಪದಿಂದ ಹಿಂದಕ್ಕೆ ಕೊಂಡುಕೊಳ್ಳಬೇಕಾದುದು ಅವಶ್ಯವಾಗಿದ್ದು, ಕ್ರಿಸ್ತನು ಅದನ್ನು ಕೊಂಡುಕೊಂಡು ಅದರ ಯಜಮಾನನಾದನು ಅಂದರೆ "ಎಲ್ಲಾ ಜನಗಳಿಗೂ ಕರ್ತನಾದನು." ಈ ಒಂದು ಮುಖ್ಯ ಉದ್ದೇಶಕ್ಕಾಗಿಯೇ ಆತನು ಮನುಷ್ಯನಾಗಿ ಬರುವದಕ್ಕೆ ಮೊದಲಿದ್ದ ತನ್ನ ಮಹಿಮಾಸ್ಥಿತಿಯನ್ನು ತೊರೆದು ಮನುಷ್ಯನಾದ ಕ್ರಿಸ್ತ ಯೇಸುವು ಆದನು. ಅಲ್ಲದೆ ಶಾಸ್ತ್ರವಚನಗಳ ಪ್ರಕಟನೆಯು ಹೀಗಿರುವದು: ಆದಾಮನಲ್ಲಿ ಖಂಡನೆಗೆ ಒಳಗಾದ ಸಂತತಿಯನ್ನು "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು [ಈಡಾಗಿ], ಅಂದರೆ ಕೊಂಡುಕೊಳ್ಳುವ ಸಲುವಾದ ಒಂದು ಕ್ರಯವಾಗಿ, ಒಪ್ಪಿಸಿಕೊಟ್ಟಿದ್ದನು. ಈ ಸಮಸ್ತ ಲೋಕವು "ಒಂದು ಕ್ರಯಕ್ಕೆ ಅಂದರೆ ಕ್ರಿಸ್ತನ ಅಮೂಲ್ಯವಾದ ರಕ್ತದ [ಜೀವದ] ಮೂಲಕವಾಗಿ ಕೊಂಡುಕೊಳ್ಳಲ್ಪಟ್ಟಿತ್ತು."

ಆದರೆ ತಾನು ಮಾನವಕುಲವನ್ನು ಕೊಂಡುಕೊಂಡದ್ದರ ಫಲವಾಗಿ ಆತನು ನ್ಯಾಯದ ದೃಷ್ಟಿಯಲ್ಲಿ ಅದರ ಯಜಮಾನ, ಅದರ ಗುರುವು, "ಎಲ್ಲಾ ಜನಗಳಿಗೂ ಕರ್ತನು" ಆಗಿದ್ದಾಗ್ಯೂ ಆತನು ಮಾನವ ಸಂತತಿಯನ್ನು ದಾಸತ್ವಕ್ಕೆ ಒಳಪಡಿಸುವ ಉದ್ದೇಶದಿಂದ ಅದನ್ನು ಕೊಂಡುಕೊಳ್ಳಲಿಲ್ಲ, ಆದರೆ ಇದಕ್ಕೆ ಬಹು ತದ್ವಿರುದ್ಧವಾದ ಉದ್ದೇಶದಿಂದ ಅಂದರೆ ಅದು ತನ್ನ ಮೂಲಕವಾಗಿ ದೇವರ ಕೃಪಾವರವನ್ನು ಅಂಗೀಕರಿಸಿಕೊಳ್ಳುವ – ವರೆಲ್ಲರನ್ನೂ ಪಾಪ ಮರಣಗಳಿಂದ ಬಿಡುಗಡೆಮಾಡುವ ಸಲುವಾಗಿತ್ತು. ಮೆಸ್ಸೀಯನ ರಾಜ್ಯವನ್ನು ಸ್ಥಾಪಿಸುವ ಮುಖ್ಯ ಉದ್ದೇಶವೇ ದೇವರ ಮಕ್ಕಳಾಗಿ ಏದೇನಿನಲ್ಲಿ ಕಳೆದು ಹೋದ ಹಕ್ಕು ಮತ್ತು ಬಾಧ್ಯತೆಗಳನ್ನು ಕಲ್ವಾರಿಯಲ್ಲಿ ಕ್ರಯಕೊಟ್ಟು ಕೊಂಡುಕೊಂಡು ಅದನ್ನು ಮಾನವಕುಲಕ್ಕೆ ದಯಪಾಲಿಸುವದಾಗಿತ್ತು. ಮನುಷ್ಯನನ್ನು ಬಿಡುಗಡೆ ಮಾಡುವ ಸಲುವಾದ ಈ ಹಕ್ಕನ್ನು ಪಡೆದುಕೊಳ್ಳುವ ಉದ್ದೇಶದಿಂದಲೇ ನಮ್ಮ ವಿಮೋಚಕನು ಕೊಂಡುಕೊಳ್ಳುವಾತನೂ ಒಡೆಯನೂ "ಎಲ್ಲ ಜನಗಳಿಗೂ ಕರ್ತನೂ" ಆದನು. ಹೀಗೆ ತನ್ನ ಮರಣದ ಮೂಲಕವಾಗಿ ಮೆಸ್ಸೀಯನು ದಾವೀದನಿಗೆ ಒಡೆಯನಾದನು, ಯಾಕಂದರೆ ದಾವೀದನು ಆತನು [ಕ್ರಿಸ್ತನು] ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಳ್ಳಲ್ಪಟ್ಟ ಮಾನವಕುಲದ ಒಬ್ಬ ಸದಸ್ಯನಾಗಿದ್ದನು.

*****

ದಾವೀದನು ಮತ್ತು ಗೊಲ್ಯಾತನು (ಆರಿಸಲ್ಪಟ್ಟದ್ದು)

– ಮಾರ್ಟಿನ್ ಮಿಷೆಲ್

ಖಡ್ಗಾಯುಧಗಳಿಲ್ಲದೆ ಬದಲಾಗಿ ದೇವರ ಬಲದಿಂದ
ದೇವರ ಮತ್ತು ಸೌಲನ ಆಶೀರ್ವಾದದೊಂದಿಗೆ,
ತಾನಿರುವಂತೆ, ದೊಣ್ಣೆ ಮತ್ತು ಕವಣೆ ಹಿಡುಕೊಂಡು
ತನ್ನ ಕೈಯಲ್ಲಿ ತೆಗೆದನು ಹಳ್ಳದ ಐದು ನುಣುಪು ಕಲ್ಲುಗಳ.

ಯೌವನಸ್ಥ ದಾವೀದನು ಮುಂದುವರಿದಿದ್ದನು
ಈ ನಾಲ್ವತ್ತ ಒಂದನೇ ದಿವಸದಲ್ಲಿ
ಸವಾಲು ಎಸೆದದ್ದು ಸಾರ್ವಜನಿಕ ಬೆದರಿಕೆಯಾಗಿರಲು
ಗೊಲ್ಯಾತನು ಆತನನ್ನು ನೋಡಿ, ಹೀಗೆ ಹೇಳಿದ್ದನು ಆತನಿಗೆ:

ಕವಣೆಯು ಕಾಣದಿರಲು, ನೋಡಿ ದೊಣ್ಣೆಯ ಆತನು
ಹೇಳಿದ್ದು: "ಒಂದು ದೊಣ್ಣೆಯ ಹಿಡಿದು ನೀನು ಬರುವದು
ಹೋರಾಡಲು ನನ್ನೊಡನೆ ಹೇಗೆ –
ಒಂದು ನಾಯಿ ಎಂಬಂತೆಯೋ?
ಓ ಕೆಂಬಣ್ಣದ ಚೆಲುವ ನಾಮಾಂಕಿತನೇ

ಆಗ ದಾವೀದನು ಹೇಳಿದ್ದು, "ನೀನು ನನ್ನನ್ನು ಅಧೀನಮಾಡ
ಬಯಸುವದು ನಿನ್ನ ಖಡ್ಗ ಮತ್ತು ನಿನ್ನ ಈಟಿ ಮತ್ತು ನಿನ್ನ
ಗುರಾಣಿಯ ಬಲಕ್ಕೋ?
ಆದರೆ ಆತುಕೊಳ್ಳಲಾರೆ ನಾನು ಇವುಗಳ ಮೇಲೆ;
ನಾನು ಬರುವದು ನೀನು ಕೆಣಕಿದವನ ಹೆಸರಿನಿಂದಲೇ
ಅದು ನಮ್ಮ ಸೇನೆಗಳ ದೇವರು,
ಅತ್ಯುನ್ನತನಾದ ಯೆಹೋವನು."

ಎದ್ದು ಬಂದನು ಗೊಲ್ಯಾತನು ರೋಷದಿಂದ;
ಓಡಿ ಬಂದ್ದಿದ್ದನು ದಾವೀದನು ಆತನ ಬಳಿಗೆ,
ಅಳೆದು ದೂರವ ಮಹಾ ಕೌಶಲ್ಯದಿಂದ
ಆತನು ಸುತ್ತುತ್ತಿರಲು ಕವಣೆಯ,
ಹೊರಟಿತು ನುಣುಪು ಕಲ್ಲು ರಭಸದಿಂದ
ಗುರಿ ಹಿಡಿದು ಕೊಲ್ಲಲು ಗತ್ ಊರಿನ ಗೊಲ್ಯಾತನ
ಹಣೆಗೆ. ಎಂಥಾ ಒಂದು ರೋಮಾಂಚನ!

ತೆಗೆದನು ದಾವೀದನು ಒರೆಯಿಂದ ಗೊಲ್ಯಾತನ ಸ್ವಂತ ಖಡ್ಗವ
ತುಂಡರಿಸಿದನು ತಲೆಯ ಈ ಫಿಲಿಷ್ಟಿಯ ಒಡೆಯನ
ಬಿದ್ದಾಗ ತಮ್ಮ ವೀರನು ಚದರಿದವು ತರಗಲೆಯಂತೆ
'ಹಿಮಕಾಲದ ಮೊದಲ ಗಾಳಿಗೆ' ಫಿಲಿಷ್ಟಿಯರ ಗುಂಪು.
ದೇವರಲ್ಲಿನ ನಂಬಿಕೆಯ ಮೂಲಕ ಮತ್ತು ತನ್ನ ಕವಣೆಯ
ಒಂದು ಕಲ್ಲಿನಿಂದ ತಂದಿದ್ದನು ದಾವೀದನು
ಹೀಗೆ ಇಸ್ರಾಯೇಲ್ಯರ ಒಂದು ವಿಜಯವ



ದಾವೀದನು ಗೊಲ್ಯಾತನನ್ನು ಸಂಹರಿಸಿದ್ದುದು

ನಮ್ಮ ಗೊಲ್ಯಾತ ವೈರಿ ಸೈತಾನನು ಎಂಬದು ಗೊತ್ತು ನಮಗೆ,
ನಿಂದಿಸಿದ್ದನು ಅವನು ದೇವರ ಮತ್ತು ಹೇಳಿದ್ದನು ಮೊದಲ
ಸುಳ್ಳನು

ತನ್ನ ತಂತ್ರ ಮಾರ್ಗದಲ್ಲಿ ಆಟವಾಡುವನು ನಮ್ಮ ಜೀವಿತದಲ್ಲಿ;
ಮಾರ್ಪಡುವನು ಸಹ ದೇವದೂತನ ವೇಷದಲ್ಲಿ
ಹೊರ ನಡೆಸಲು ನಮ್ಮನ್ನ ನಿಜ "ಇಕ್ಕಟ್ಟಿನ ಮಾರ್ಗದಿಂದ".
ಅವನು ನಡೆಸಿದ್ದನ್ನು ಇಲ್ಲದಂತೆ ಮಾಡಿ, ಜಯಿಸಲು ಸಾಧ್ಯ
ಆತನನ್ನು ನಮಗೆ.

ಹಳ್ಳದ ಒಂದು ಕಲ್ಲಿನಿಂದಲೋ ಎಂಬಂತೆ, ಹೊಡೆದು
ಹಾಕುವೆವು ನಾವು ಆತನನ್ನು "ಹೀಗೆ ಬರೆದದೆ" ಎಂಬ
(ಸತ್ಯವೇದ) ಗ್ರಂಥದ ಒಂದು ಉಲ್ಲೇಖದಿಂದ.


*****

ಅನುಬಂಧ

ಸೌಲನ ರಾಜ್ಯ



THE KINGDOM OF SAUL
c. 1020-1000 B. C.
Copyright by C. S. HAMMOND & CO., N.Y.
Scale of Miles
0 5 10 20 30 40
Perennial Rivers
Seasonal Rivers & Streams
Capitals
Israelite Forces
Enemies of the Israelites
Kingdom of Saul at its greatest extent
Phoenicians
MOUNT LEBANON
TOBAH
MT. HERMON
SYRIAN
MAACHAH
STATES
Aramaeans
GESHUR
Bashan
TOB
Plain of Jezreel
The Philistines invaded Israel through the Plain of Jezreel. The Israelites were defeated and Saul slain at Mt. Gilboa.
Canaanite
Plain of Sharon
The Great Sea
(Mediterranean Sea)
GILEAD
Saul defeated the Ammonites besieging Jabesh-gilead, for his triumph Saul was proclaimed King of all Israel.
AMMON
Rabbath-ammon
PHILISTIA
Ashdod
Ashkelon
Gaza
Gath
Ekron
Gezer
Cherethites
Valley of Elah
Scene of David and Goliath
David, driven into exile by Saul, finally took refuge among the Philistines and settled in Ziklag.
JUDAH
Wilderness of Judah
Dead Sea
MOAB
Saul secured the southern border of Israel by defeating the Amalekites.
Amalekites
EDOM

ದಾವೀದ ಮತ್ತು ಸೊಲೋಮೋನರ ಸಾಮ್ರಾಜ್ಯ



ಬೆನ್ಯಾಮೀನ್ ಕುಲದವನಾದ

ಸೌಲನ ಮನೆತನ




*ಸೌಲನ ಅಕೃತ್ಯಗಳ ಪ್ರಾಯಶ್ಚಿತ್ತವಾಗಿ ಗಿಬ್ಯೋನರಿಗೆ ಮರಣ ದಂಡನೆಗೆ ಒಪ್ಪಿಸಿಕೊಟ್ಟದ್ದು (2 ಸಮುವೇಲ 21)

ಸೌಲನ ವಂಶಾವಳಿ ಮತ್ತು ಮಕ್ಕಳು : 1 ಪೂರ್ವಕಾಲ ವೃತ್ತಾಂತ 9:39–40
ಸೌಲನ ಪತ್ನಿಯರು, ಮಕ್ಕಳು ಹಾಗೂ ಮೊಮ್ಮಕ್ಕಳು : 1 ಸಮುವೇಲ 14:50–51; 31:2
: 2 ಸಮುವೇಲ 6:23; 21:8


ಯಹೂದ ಕುಲದವನಾದ

ದಾವೀದನ ಮನೆತನ



ದಾವೀದನ ಒಡಹುಟ್ಟಿದವರು : 1 ಪೂರ್ವಕಾಲ ವೃತ್ತಾಂತ 2:11–17
ದಾವೀದನ ಪತ್ನಿಯರು ಮತ್ತು ಮಕ್ಕಳು : 2 ಸಮುವೇಲ 3:2–5; ಮತ್ತು
: 1 ಪೂರ್ವಕಾಲ ವೃತ್ತಾಂತ 3:1–9; 14:4–7

ಯಾಜಕತ್ವದ ವಂಶಾವಳಿ



1. ವಿಮೋ. 6:16–20
2. 1 ಪೂರ್ವ. 6:1–8
3. 1 ಪೂರ್ವ. 24:1–6
4. 1 ಸಮು. 1:3
5. 1 ಸಮು. 4:17
6. 1 ಸಮು. 4:19–21
7. 1 ಸಮು. 14:3
8. 1 ಸಮು. 22:11–23
9. 1 ಸಮು. 22:20–23; 23:6
   1 ಅರಸು. 2:26. 27*
10. 2 ಸಮು. 15:27, 36;
    2 ಸಮು. 17:17, 20
    1 ಅರಸು. 1:42–45

*ದಾವೀದನು ಮರಣಶಯ್ಯೆಯಲ್ಲಿದ್ದಾಗ, ಅಬ್ಯಾತಾರನು ಸೊಲೊಮೋನನ ಸಹೋದರನಾದ ಅದೋನೀಯನಿಗೆ ರಾಜತ್ವಕ್ಕಾಗಿ ಬೆಂಬಲ ನೀಡಿದಾಗ ಅವನನ್ನು ಪದಚ್ಯುತಗೊಳಿಸಲಾಯಿತು. ಚಾದೋಕನು ಸೊಲೊಮೋನನಿಗೆ ಬೆಂಬಲ ನೀಡಿದನು. ಅಬ್ಯಾತಾರನು ಪದಚ್ಯುತಗೊಂಡಾಗ, ಯಾಜಕತ್ವವು ಎಲೀಯೇಜರನ ಮನೆಗೆ (ಚಾದೋಕನಿಗೆ) ಹಿಂತಿರುಗಿತು.

ದಾವೀದನ ಬಗ್ಗೆ ಉಲ್ಲೇಖಗಳು

"ದಾವೀದ" ಎಂಬ ಹೆಸರು ಸತ್ಯವೇದದಲ್ಲಿ **1000** ಕ್ಕೂ ಹೆಚ್ಚು ಬಾರಿ ಕಂಡುಬರುತ್ತದೆ:
ಹಳೆಯ ಒಡಂಬಡಿಕೆಯಲ್ಲಿ **1080** ಬಾರಿ ಕಂಡುಬರುತ್ತದೆ;
ಹೊಸ ಒಡಂಬಡಿಕೆಯಲ್ಲಿ **59** ಬಾರಿ ಕಂಡುಬರುತ್ತದೆ

ದಾವೀದನನ್ನು ಉಲ್ಲೇಖಿಸುವ ನುಡಿಗಟ್ಟುಗಳು

ದಾವೀದನ ನಗರ

ದಾವೀದನ ಮಗ ಮತ್ತು ದಾವೀದನ ಒಡೆಯ

ದಾವೀದನ ಮನೆತನ

ದಾವೀದನಲ್ಲಿ

ದಾವೀದನ (ಮನೆತನದ) ಬೀಗದ ಕೈ

ದಾವೀದನ ರಾಜ್ಯ ಅಥವಾ ಸಿಂಹಾಸನ

ದಾವೀದನ ಬೇರು ಮತ್ತು ಸಂತತಿ

ದಾವೀದನ ಸಂತತಿ

ಸೇವಕನಾದ ದಾವೀದ

ದಾವೀದನ ಕುಮಾರ

ದಾವೀದನ ನಕ್ಷತ್ರ*

ದಾವೀದನಿಗೆ ಖಂಡಿತವಾಗಿ ಮಾಡಿದ ಕೃಪಾವರಗಳು

ದಾವೀದನ ಗುಡಾರ

*ಸತ್ಯವೇದದಲ್ಲಿ ಕಂಡು ಬರುವುದಿಲ್ಲ

Discourses on David

(available on Bible Resources App)

A=Overview
B=Early Life (youth, shepherd, Goliath)

	Title	Speaker
A	**A Glimpse of David**	D. Destro
A	**A Man After God's Own Heart**	T. Marten
A	**A Man After God's Own Heart** (1976)	B. Kirkham
A	**A Man After God's Own Heart** (1997)	W. Cramer
A	**David, A Man After God's Own Heart** (2015)	N. Austin
A	**David, A Man After God's Own Heart** (2013)	R. Cunningham
A	**David, A Type of Christ**	F. Shallieu
A	**David, Man after Jehovah's Own Heart** (2017)	J. Parkinson
A	**David, the Beloved of God** (1967)	R. Alexander
A	**David, Type of the Church**	L. Jacobs
A	**David's Courage and Service** (2013)	E. Bushlus
A	**David's Attitude** (1997)	W. Blicharz
A	**The Golden Ode of David** (2015)	E. Bushlus
A	**The Key of David**	Todd Alexander
A	**The Sure Mercies of David**	17 speakers
A	**Three Kings: King David**	J. Leslie
B	**A Little David** (2007)	J. Black
B	**Shepherd Boy** (1999 Symposium)	T. Armstrong
B	**The Valley of Elah**	Andy Oystryk
B	**Lessons from the Life of David**	T. Ruggirello
B	**Of Stones and Giants** (2013)	R. Cunningham
C	**Vigorous Youth** (1999 Symposium)	D. Monette
C	**A Brother is Born for Adversity** (2015)	J. Baker
C	**A Friend Loves At All Times** (2014)	J. Baker
C	**David and Jonathan**	W. Schroeder
C	**David and Jonathan**	H. Wildblood
C	**Jonathan and David**	R. Gaunt
C	**Relationship Between David/Jonathan** (2002)	T. Ruggirello
C	**Three Covenants of Friendship**	T. Ruggirello
C	**David as a Fugitive and His Mighty Men** (2010)	R. Cunningham

C=Youth (Jonathan, fugitive)
D=Kingship (Bathseba)
E=Closing years

	Title	Speaker
C	**Lessons From David's Life** (2004)	D. Hrechuk
C	**Abigail** (2010)	L. Griehs
C	**David and Abigail** (1995)	G. Eldridge
C	**Cave of Adullam** (1989)	L. Greihs
D	**The Three Anointings of David** (2007)	G. Tabac
D	**The Anointings of David**	R. Shallieu
D	**The Valleys of the Shadow of Death**	C. Hagensick
D	**The Throne of David** (1973)	R. Pollack
D	**Trials of Middle Years** (1999 Symposium)	F. Boychuk
D	**Young King** (1999 Symposium)	D. Hrechuk
D	**Bringing up the Ark** (2014 & 2017)	O.B. Elbert
D	**Journey of the Ark of the Covenant** (2017)	M. Ensley
D	**Travels with the Ark of the Covenant** (2007)	D. Stein
D	**The Ark of the Covenant**	A. Frey
D	**The Ark of the Covenant** (1972)	L. Post
D	**Bringing Home the Ark**	J. Bednarz
D	**Covenants Not Often Discussed** (2006)	D. Rice
D	**Mephibosheth** (2000)	D. Rice
D	**Nine Men in the life of Bathsheba**	C. Hagensick
D	**Question Meeting - Psalm 51**	Greihs, Rawson Montague, Gray
D	**Blessed is the Man to Whom the Lord Imputeth Not Iniquity**	K. Rawson
D	**Five Friends of David**	D. Bruce
D	**The Battle Against Bitterness**	R. Suraci
D	**A Look at Shimei**	H. Montague
D	**O Absalom**	R. Alexander
E	**Closing Days** (1999 Symposium)	W. Cramer
E	**David's Sin of Numbering the People**	R. Luke
E	**David and Solomon** (2011)	M. Ensley
F	**Son of David** (2009)	B. Gorecki
F	**The Last Psalm of David** (2009)	B. Hislop

Additional Reference Sources

A=Overview
B=Early Life (youth, shepherd, Goliath)
C=Youth (Jonathan, fugitive)
D=Kingship (Bathsheba)
E=Closing years

Herald Magazine Articles

	Title	Author	Link
A	**Saul**	Daniel Kaleta	http://www.heraldmag.org/2010/10nd_5.htm
A	**The Sins of King Saul**	Wade Austin	http://www.heraldmag.org/2010/10ja_5.htm
A	**King Saul's Woes**	David Christiansen	http://www.heraldmag.org/2007/07ja_7.htm
A	**David**	Robert Brand	http://www.heraldmag.org/2010/10nd_6.htm
A	**David**	Wade Austin	http://www.heraldmag.org/2007/07ma_9.htm
A	**A Genuine Christian Life**		https://herald-magazine.com/2014/11/16/a-genuine-christian-life/
B	**David and Goliath**		http://www.heraldmag.org/2003/03jf_2.htm
B	**Five Smooth Stones**	Jerry Leslie	http://www.beautiesofthetruth.org/Archive/Library/Doctrine/Mags/Bot/90s/BOTNOV95.PDF
C	**David at Gath**		http://www.heraldmag.org/2007/07ja_4.htm
C	**Saul, Jonathan & David**	Donald Holliday	http://www.heraldmag.org/2003/03jf_4.htm
D	**Nine Men in the Life of Bathsheba**	Carl Hagensick	http://www.heraldmag.org/literature/bio_1.htm
D	**Nathan the Prophet**	Michael Nekora	http://www.heraldmag.org/2003/03jf_8.htm
D	**David's Sorrowing Heart**	David Stein	http://www.heraldmag.org/2003/03so_5.htm
D	**David's Prayer for Forgiveness**	Carl Hagensick	http://www.beautiesofthetruth.org/Archive/Library/Doctrine/Mags/Bot/90s/BOTMAY03.PDF
D	**A Man After God**		https://herald-magazine.com/2014/11/16/a-genuine-christian-life/
D	**The Valley of the Shadow of Death**	Carl Hagensick	http://www.heraldmag.org/literature/chliv_32.htm
D	**The Revolt of Absalom**	David Rice	http://www.heraldmag.org/2003/03jf_7.htm
D	**The Judgment of Shimei**		http://www.heraldmag.org/literature/bio_10.htm
E	**Numbering Israel**	John Trzyna	http://www.beautiesofthetruth.org/Archive/Library/Doctrine/Mags/Bot/90s/BOTMAY03.PDF
	Star of David & Star of Bethlehem	Carl Hagensick	http://www.heraldmag.org/2003/03jf_3.htm
	Solomon's Early Years	Michael Nekora	https://herald-magazine.com/2010-issues/2010-mayjune-table-of-contents/solomons-early-years/

Books:

***Discourses of Robert S. Seklemian*:** https://chicagobible.org/images/stories/pdf/SEKLEM.PDF

Page

3 **After God's Own Heart** (Goliath)
463 **Thou Art the Man** (Bathsheba)
419 **The Shepherd Psalm** (Psalm 23)
411 **The Secret Place of the Most High** (Psalm 91)

King David of Israel by Albert O. Hudson: http://www.biblestudentarchives.com/documents/KINGDAVID.pdf

David: Shepherd, Psalmist, King by F. B. Meyer (E-Sword)

ಯೆಹೋವನು ನನಗೆ ಕುರುಬನು; ಕೊರತೆಪಡೆನು.
ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ;
ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ.
ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ
ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ.
ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ
ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು;
ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ.
ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು
ಸಿದ್ಧಪಡಿಸುತ್ತೀ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ.
ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ.
ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ
ಶುಭವೂ ಕೃಪೆಯೂ
ನನ್ನನ್ನು ಹಿಂಬಾಲಿಸುವವು.
ನಾನು ಸದಾಕಾಲವೂ
ಯೆಹೋವನ ಮಂದಿರದಲ್ಲಿ
ವಾಸಿಸುವೆನು.

